JJ50
(B) 025245

ಸುವರ್ಣ ಕರ್ನಾಟಕ-2006

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ಹನ್ನೆರಡನೇ ವಿಧಾನಸಭೆಯ ಎರಡನೆಯ ಅಧಿವೇಶನ

SECOND SESSION OF THE TWELFTH LEGISLATIVE ASSEMBLY

ಸಂಪುಟ - 2 (ಕ್ರಮಾಂಕ 1-3)

Volume - 2 (No. 1-3)

(27ನೇ ಜನವರಿ 2005, 28ನೇ ಜನವರಿ 2005 ಹಾಗೂ
31ನೇ ಜನವರಿ 2005)

**(27th January 2005, 28th January 2005 and
31st January 2005)**



ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

(B) 025245

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ಹನ್ನೆರಡನೇ ವಿಧಾನಸಭೆಯ ಎರಡನೆಯ ಅಧಿವೇಶನ

SECOND SESSION OF THE TWELFTH LEGISLATIVE ASSEMBLY

ಸಂಪುಟ – 2 (ಕ್ರಮಾಂಕ 1-3) **Volume - 2 (No. 1-3)**

(27ನೇ ಜನವರಿ 2005, 28ನೇ ಜನವರಿ 2005 ಹಾಗೂ
31ನೇ ಜನವರಿ 2005)

(27th January 2005, 28th January 2005 and
31st January 2005)

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆ

ಹನ್ನೆರಡನೇ ವಿಧಾನಸಭೆ

ಎರಡನೆಯ ಅಧಿವೇಶನ

ಅಧ್ಯಕ್ಷರು

ಶ್ರೀ ಕೃಷ್ಣ

ಕಾರ್ಯದರ್ಶಿ

ಶ್ರೀ ಟಿ. ರಾಜಣ್ಣ

ಕರ್ನಾಟಕ ವಿಧಾನಸಭೆ

ವಿಷಯಾನುಕ್ರಮಣಿಕೆ

ಸಂಪುಟ – 2 (ಕ್ರಮಾಂಕ 1 ರಿಂದ 3)

(27ನೇ ಜನವರಿ 2005, 28ನೇ ಜನವರಿ 2005 ಹಾಗೂ 31ನೇ ಜನವರಿ 2005)

ಗುರುವಾರ, ದಿನಾಂಕ 27ನೇ ಜನವರಿ 2005

ಪುಟ ಸಂಖ್ಯೆ

1) ಅಧ್ಯಕ್ಷರ ಅಪ್ಪಣೆ ಮೇರೆಗೆ : 1–12

ವಿಷಯ : ಮಾನ್ಯ ಶಾಸಕರುಗಳಿಗೆ ಗಣರಾಜ್ಯೋತ್ಸವ ಸಮಾರಂಭದಲ್ಲಿ ಅಧಿಕಾರಿಗಳು ಅಗೌರವ ತೋರಿಸಿರುವುದು.

– ಶ್ರೀ ಬಿ.ಎಸ್. ಯಡಿಯೂರಪ್ಪ
– (ವಿರೋಧ ಪಕ್ಷದ ನಾಯಕರು)
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕಾ ಸಚಿವರು)
– ಶ್ರೀ ಜೆ.ಸಿ. ಮಾಧುಸ್ವಾಮಿ
– ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

2) ಪ್ರಶ್ನೋತ್ತರಗಳು : 12–62

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

– ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಳೂರು (ಶ್ರೀ ಶಿವರಾಜ್ ಸಜ್ಜನರ್‌ರವರ ಪರವಾಗಿ)
– ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ
– ಶ್ರೀ ಗಂಗಾಧರ್ ನಾಗೇಶ್‌ಭಟ್
– ಶ್ರೀ ಹೆಚ್.ಡಿ. ಬಸವರಾಜು
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಕೆ.ಜಿ. ಬೋಪಯ್ಯ (ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ ಪರವಾಗಿ)
– ಶ್ರೀ ಎಂ.ವೈ. ಪಾಟೀಲ್
– ಶ್ರೀ ಎ.ವಿ. ಉಮಾಪತಿ
– ಶ್ರೀ ಹೆಚ್.ಕೆ. ಕುಮಾರಸ್ವಾಮಿ
– ಶ್ರೀ ಜಿ.ವಿ. ಶ್ರೀರಾಮರೆಡ್ಡಿ

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ ಮತ್ತು ಉತ್ತರಗಳ ಪಟ್ಟಿ – ಪುಟ ಸಂಖ್ಯೆ (ಮಂಡಿಸಲಾಯಿತು) (ಅನುಬಂಧ–I)

3. **ಅಧ್ಯಕ್ಷರ ಅಪ್ಪಣೆ ಮೇರೆಗೆ :** **62–80**

ಅ) ಗ್ರಾಮ ಪಂಚಾಯಿತಿಗಳ ಚುನಾವಣೆಯ ಬಗ್ಗೆ.

– ಶ್ರೀ ಬಿ.ಎಸ್. ಯಡಿಯೂರಪ್ಪ
(ವಿರೋಧ ಪಕ್ಷದ ನಾಯಕರು)

– ಶ್ರೀ ಜೆ.ಸಿ. ಮಾಧುಸ್ವಾಮಿ

– ಶ್ರೀ ಹೆಚ್.ಕೆ. ಪಾಟೀಲ್
(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

– ಶ್ರೀ ಕೆ.ಆರ್. ರಮೇಶ್‌ಕುಮಾರ್

– ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ

ಆ) ಹಕ್ಕು ಭಾದ್ಯತಾ ಸಮಿತಿಯ ಶಿಫಾರಸ್ಸನ್ನು ಅನುಷ್ಠಾನಗೊಳಿಸುವ ಬಗ್ಗೆ.

– ಶ್ರೀ ಜೆ.ಸಿ. ಮಾಧುಸ್ವಾಮಿ ಬಗ್ಗೆ.

ಇ) ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೇಳೆ ಖರೀದಿಯನ್ನು ಬಂದ್ ಮಾಡಿರುವ ಬಗ್ಗೆ.

– ಶ್ರೀ ವೈಜನಾಥ್ ಪಾಟೀಲ್

– ಶ್ರೀ ಎನ್. ಧರ್ಮಸಿಂಗ್
(ಮುಖ್ಯಮಂತ್ರಿಗಳು)

ಈ) ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ನೀರಾವರಿ ಯೋಜನೆಗಳು ಆಗದೇ ಇರುವುದರಿಂದ ರೈತರ ಧರಣಿ ಸತ್ಯಾಗ್ರಹ ಪ್ರಾರಂಭಿಸುವ ಬಗ್ಗೆ.

– ಶ್ರೀ ಗೋವಿಂದ ಎಂ. ಕಾರಜೋಳ

– ಶ್ರೀ ಹೆಚ್.ಕೆ. ಪಾಟೀಲ್
(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಉ) ಹೊಸನಗರದಲ್ಲಿ ಉಂಟಾಗಿರುವ ಪ್ರಕ್ಷುಬ್ಧ ವಾತಾವರಣದ ಬಗ್ಗೆ.

– ಶ್ರೀ ಹೆಚ್. ಹಾಲಪ್ಪ

– ಶ್ರೀ ಹೆಚ್.ಕೆ. ಪಾಟೀಲ್

– (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಊ) ರಾಣಿಬೆನ್ನೂರು ತಾಲ್ಲೂಕಿನಲ್ಲಿ ಆಶ್ರಮ ಯೋಜನೆಯ ನಿವೇಶನಗಳ ಹಕ್ಕು ಪತ್ರಗಳಲ್ಲಿ ಮಾಜಿ ಶಾಸಕರ ಭಾವಚಿತ್ರ ಮುದ್ರಿಸಿರುವ ಬಗ್ಗೆ.

– ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ

– ಶ್ರೀ ಬಿ.ಎಸ್. ಯಡಿಯೂರಪ್ಪ
(ವಿರೋಧ ಪಕ್ಷದ ನಾಯಕರು)

– ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಋ) ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಮಳೆ ಬಿರುಗಾಳಿ ಆಲಿಕಲ್ಲು ಪುಟ ಸಂಖ್ಯೆ
ಮಳೆಯಿಂದ ಬೆಳೆ ಹಾನಿಯಾಗಿರುವ ಬಗ್ಗೆ.

– ಶ್ರೀ ಹಂಪನಗೌಡ ಬಾದರ್ಲಿ

– ಶ್ರೀ ಹೆಚ್.ಕೆ. ಪಾಟೀಲ್

(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ೠ) ನೀರಾವರಿ ಪಂಪ್‌ಸೆಟ್‌ಗಳ ಅಕ್ರಮ ಸಕ್ರಮಗೊಳಿಸುವ ಅವಧಿ ವಿಸ್ತರಿಸುವ ಬಗ್ಗೆ.

– ಶ್ರೀ ಸಿ.ಎಂ. ಉದಾಸಿ

– ಶ್ರೀ ಹೆಚ್.ಡಿ. ರೇವಣ್ಣ

(ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಎ) ಚಿತ್ರದುರ್ಗದಲ್ಲಿ ಪತ್ರಕರ್ತರಿಗೆ ರಕ್ಷಣೆ ನೀಡುವ ಬಗ್ಗೆ.

– ಶ್ರೀ ಜಗದೀಶ್ ಶೆಟ್ಟರ್

– ಶ್ರೀ ಎನ್. ಧರ್ಮಸಿಂಗ್

(ಮುಖ್ಯಮಂತ್ರಿಗಳು)

ಏ) ಉತ್ತರ ಕನ್ನಡ ಜಿಲ್ಲೆಯಲ್ಲಿ ರಾಜ್ಯದ ಹೆದ್ದಾರಿ ಅಭಿವೃದ್ಧಿ ಯೋಜನೆ ಬಗ್ಗೆ.

– ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ

– ಶ್ರೀ ಹೆಚ್.ಡಿ. ರೇವಣ್ಣ

(ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಐ) ಹಲಸೂರು ಲೇಕ್‌ನಲ್ಲಿ ಮೀನುಗಳ ಸಾವಿನ ಬಗ್ಗೆ.

– ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ

– ಶ್ರೀ ಹೆಚ್.ಕೆ. ಪಾಟೀಲ್

(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಒ) ಸಿರುಗುಪ್ಪದಲ್ಲಿ ನಡೆದ ಪೊಲೀಸ್ ಲಾಠಿ ಚಾರ್ಜ್ ಬಗ್ಗೆ.

– ಶ್ರೀ ಎಂ.ಎಸ್. ಸೋಮಲಿಂಗಪ್ಪ

ಓ) ಕರ್ನಾಟಕ ರಾಜ್ಯಪತ್ರದಲ್ಲಿ ಸರ್ಕಾರಿ ಆದೇಶಗಳು ಆಂಗ್ಲಭಾಷೆಯಲ್ಲಿ ಪ್ರಕಟವಾಗುತ್ತಿರುವ ಬಗ್ಗೆ.

– ಶ್ರೀ ವಾಟಾಳ್ ನಾಗರಾಜ್

– ಶ್ರೀ ಹೆಚ್.ಕೆ. ಪಾಟೀಲ್

(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

4. ಶಾಸನ ರಚನೆ :

ಅ) ವಿಧೇಯಕದ ಮಂಡನೆ. **81**

ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2005.
(ಮಂಡಿಸಲಾಯಿತು ಅನುಬಂಧ- II)

ಪುಟ ಸಂಖ್ಯೆ

5. ಸಭೆಯ ಮುಂದಿಡಲಾದ ಕಾಗದ ಪತ್ರಗಳು : 81-89
ಮಂಡಿಸಲಾಯಿತು.

6. ಅರ್ಜಿಗಳನ್ನೊಪ್ಪಿಸುವುದು : 89
ಒಪ್ಪಿಸಲಾಯಿತು.

7. ಗಮನ ಸೆಳೆಯುವ ಸೂಚನೆಗಳು : 89-99

ಅ) ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ಕುಡಿಯುವ ನೀರಿನ ತೊಂದರೆಯಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ.
- ಶ್ರೀ ಜಗದೀಶ್ ಶೆಟ್ಟರ್
- ಶ್ರೀ ಎಸ್.ಆರ್. ಮೋರೆ
(ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು)

ಆ) ಜಮಖಂಡಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ತೊಂದರೆಯಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ.
- ಶ್ರೀ ಸಿದ್ದು ಸವದಿ
- ಶ್ರೀ ಬಿ. ಸತ್ಯನಾರಾಯಣ
(ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

8. ನಿಯಮ 69ರ ಮೇರೆಗೆ : 100-148

ರಾಜ್ಯದ ಹಲವಾರು ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬೋರ್‌ವೆಲ್‌ಗಳನ್ನು ದುರಸ್ತಿಗೊಳಿಸದಿರುವುದು ಹಾಗೂ ಸತತವಾಗಿ ವಿದ್ಯುತ್ ಸರಬರಾಜು ಮಾಡದಿರುವುದರಿಂದ ಉಂಟಾಗುವ ತೊಂದರೆಗಳ ವಿಚಾರ.
- ಶ್ರೀ ಜಿ.ವಿ. ಶ್ರೀರಾಮರೆಡ್ಡಿ
- ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ
- ಶ್ರೀ ಎನ್. ಯೋಗೀಶ್ ಭಟ್
- ಶ್ರೀ ಅರಗ ಜ್ಞಾನೇಂದ್ರ
- ಶ್ರೀ ಬಿ. ನಾಗರಾಜ ಶೆಟ್ಟಿ
- ಶ್ರೀ ಆರ್. ಧ್ರುವನಾರಾಯಣ
- ಡಾ|| ಎಂ.ಸಿ. ಸುಧಾಕರ್
- ಶ್ರೀ ಎ. ಪಾಪರೆಡ್ಡಿ
- ಶ್ರೀ ಹೆಚ್. ಆಂಜನೇಯ
- ಶ್ರೀ ಮಹದೇವ್
- ಶ್ರೀ ಜಗದೀಶ್ ಸಿ. ಮೆಟಗುಡ್
- ಶ್ರೀ ಮಹಿಮಾ ಜೆ. ಪಟೇಲ್
- ಶ್ರೀ ಕಳಕಪ್ಪ ಜಿ. ಬಂಡಿ
- ಶ್ರೀ ಡಿ.ಆರ್. ಪಾಟೀಲ್

ಅನುಬಂಧ - I & II 148-306

ಶುಕ್ರವಾರ, ದಿನಾಂಕ 28ನೇ ಜನವರಿ 2005 ಪುಟ ಸಂಖ್ಯೆ

1) ಪ್ರಶ್ನೋತ್ತರಗಳು : 307-386

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

– ಶ್ರೀ ಎನ್. ಯೋಗೀಶ್ ಭಟ್
– ಶ್ರೀ ಬಿ.ಪಿ. ವೆಂಕಟಮುನಿಯಪ್ಪ
– ಶ್ರೀ ಎಸ್.ಎಸ್. ಪಾಟೀಲ್
– ಶ್ರೀ ಆರ್. ಅಶೋಕ್
– ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ
– ಶ್ರೀ ಕೆ.ಜಿ. ಬೋಪಯ್ಯ
– ಶ್ರೀ ಶಶಿಕಾಂತ್ ಅಕ್ಕಪ್ಪನಾಯಕ್
– ಶ್ರೀ ಜೆ.ಸಿ. ಮಾಧುಸ್ವಾಮಿ
(ಶ್ರೀ ಹೆಚ್. ಆಂಜನೇಯರವರ ಪರವಾಗಿ)
– ಶ್ರೀ ಸಿ.ಟಿ. ರವಿ
– ಶ್ರೀ ಶಿವಾನಂದ ನಾಯಕ್
– ಶ್ರೀಮತಿ ಶಕುಂತಲಾ ಟಿ. ಶೆಟ್ಟಿ

ಆ) ತಡೆಹಿಡಿಯಲಾದ ಪ್ರಶ್ನೋತ್ತರಗಳು.

– ಶ್ರೀ ಕೆ. ರಘುಪತಿ ಭಟ್
– ಶ್ರೀ ಗೋವಿಂದ ಎಂ. ಕಾರಜೋಳ

ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. (ಅನುಬಂಧ–I)

2. ಹಕ್ಕುಚ್ಯುತಿ ಪ್ರಸ್ತಾವ : 387-416

ವಿಷಯ:– ಶೃಂಗೇರಿ ಶಾಸಕರಾದ ಶ್ರೀ ಡಿ.ಎನ್. ಜೀವರಾಜ್ ಅವರನ್ನು ಡಿವೈಎಸ್‌ಪಿಯವರು ಬಂಧನ ಮಾಡಿರುವ ಬಗ್ಗೆ.

– ಶ್ರೀ ಬಿ.ಎಸ್. ಯಡಿಯೂರಪ್ಪ
(ವಿರೋಧ ಪಕ್ಷದ ನಾಯಕರು)
– ಶ್ರೀ ಜೆ.ಸಿ. ಮಾಧುಸ್ವಾಮಿ
– ಶ್ರೀ ಕೆ.ಆರ್. ರಮೇಶ್‌ಕುಮಾರ್
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಜಿ.ವಿ. ಶ್ರೀರಾಮರೆಡ್ಡಿ
– ಶ್ರೀ ಎಸ್. ರಾಜೇಂದ್ರನ್
– ಶ್ರೀ ಅರಗ ಜ್ಞಾನೇಂದ್ರ
– ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)
(ಹಕ್ಕುಚ್ಯುತಿ ಸಮಿತಿಗೆ ಒಪ್ಪಿಸಲಾಯಿತು)

ಪುಟ ಸಂಖ್ಯೆ

3. ಅಧ್ಯಕ್ಷರ ಅಪ್ಪಣೆ ಮೇರೆಗೆ : 416-424

ಅ) ಭಟ್ಕಳದಲ್ಲಿ ತಿಮ್ಮಪ್ಪನಾಯ್ಕರ ಕೊಲೆಗೆ ಸಂಬಂಧಪಟ್ಟಂತೆ ಕೊಲೆಗಾರರನ್ನು ಪತ್ತೆ ಹಚ್ಚಿಲ್ಲದಿರುವ ಬಗ್ಗೆ.
- ಶ್ರೀ ಶಿವಾನಂದ ನಾಯಕ್
- ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಆ) ಶೂನ್ಯ ವೇಳೆಯಲ್ಲಿ ತಮ್ಮ ಕ್ಷೇತ್ರದ ವಿಷಯ ಪ್ರಸ್ತಾಪಿಸಲು ಅವಕಾಶ ಸಿಗಲಿಲ್ಲವೆಂದು ಮಾನ್ಯ ಸದಸ್ಯರಾದ ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡರಿಂದ ಧರಣಿ.
- ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ
- ಶ್ರೀ ಎಸ್.ಆರ್. ಮೋರೆ
(ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು)

ಇ) ಕನಕಪುರ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಶಾಸಕರು ತಮ್ಮ ಅನುದಾನವನ್ನು ಸಮರ್ಪಕವಾಗಿ ಬಳಸದಿದ್ದರೆ ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಸಂಸತ್ ಸದಸ್ಯರು ಪತ್ರಿಕಾ ಹೇಳಿಕೆ ನೀಡಿರುವ ಬಗ್ಗೆ.
- ಶ್ರೀ ಕೆ. ಅನ್ನದಾನಿ
- ಶ್ರೀ ಹೆಚ್.ಕೆ. ಪಾಟೀಲ್
(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಈ) ಹೊಸದಾಗಿ ಆಯ್ಕೆಯಾದ ಶಾಸಕರಿಗೆ ಒರಿಯೆಂಟೇಷನ್ ಟ್ರೈನಿಂಗ್ ಕೊಡುವ ಬಗ್ಗೆ.
- ಶ್ರೀ ಕೆ.ಆರ್ ರಮೇಶ್ ಕುಮಾರ್
- ಶ್ರೀ ಹೆಚ್.ಕೆ. ಪಾಟೀಲ್
(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

4. ಗಮನ ಸೆಳೆಯುವ ಸೂಚನೆಗಳು : 424-492

ಅ) ಶ್ರೀನಿವಾಸಪುರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಪದವಿ ಕೋರ್ಸ್‌ಗಳ ಕೆಲವು ವಿಭಾಗಗಳನ್ನು ತೆರೆಯುವ ಬಗ್ಗೆ.
- ಶ್ರೀ ಕೆ.ಆರ್. ರಮೇಶ್‌ಕುಮಾರ್
- ಶ್ರೀ ಡಿ. ಮಂಜುನಾಥ್
(ಉನ್ನತ ಶಿಕ್ಷಣ ಸಚಿವರು)

ಆ) ಕೆ.ಜಿ.ಎಫ್. ನಲ್ಲಿರುವ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸ್ಟಾಂಪ್‌ಪೇಪರ್ ಮಾರಾಟ ಮಾಡುವ ವಿಚಾರ, ಕುರಿತು.
- ಶ್ರೀ ಎಸ್. ರಾಜೇಂದ್ರನ್
- ಶ್ರೀ ಎಂ.ಪಿ. ಪ್ರಕಾಶ್
(ಕಂದಾಯ ಸಚಿವರು)

ಇ) ಗಂಗಾಕಲ್ಯಾಣ ಮತ್ತು ವೈಯಕ್ತಿಕ ಕೊಳವೆಬಾವಿ ಯೋಜನೆಗಳ ಅನುಷ್ಠಾನದ ಬಗ್ಗೆ. **ಪುಟ ಸಂಖ್ಯೆ**
– ಶ್ರೀ ಎ.ಎಸ್. ಬಸವರಾಜು
– ಶ್ರೀ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು)

5. ಛೇರ್ಮನ್‌ರ ಅಪ್ಪಣೆ ಮೇರೆಗೆ : **492–504**

ಅ) ಬಿಜಾಪುರ–ಬಾಗಲಕೋಟೆ ಜಿಲ್ಲೆಯ 11 ತಾಲ್ಲೂಕುಗಳ ರೈತರು ದಿನಾಂಕ 30–1–2005ರಂದು ಆಲಮಟ್ಟಿ ಡ್ಯಾಮನ ಗೇಟನ್ನು ಬಂದ್ ಮಾಡಲು ಹೊರಟಿರುವ ಬಗ್ಗೆ.
– ಶ್ರೀ ಗೋವಿಂದ ಎಂ. ಕಾರಜೋಳ

ಆ) ಗ್ರಾಮ ಪಂಚಾಯಿತಿಗಳ ಚುನಾವಣೆ ನಡೆಸುವ ಬಗ್ಗೆ.
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)
– ಶ್ರೀ ಜಿ.ವಿ. ಶ್ರೀರಾಮರೆಡ್ಡಿ
– ಡಾ: ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
– ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

6. ಖಾಸಗಿ ಸದಸ್ಯರ ನಿರ್ಣಯ : **504**

ವಿಷಯ:– ಇಡೀ ರಾಜ್ಯಾದ್ಯಂತ ಯಾವುದೇ ವರ್ಗದ, ಮತದ, ಧರ್ಮದ ಜನವಿವಾಹ ಕಾರ್ಯಕ್ರಮವನ್ನು ಕುಟುಂಬಗಳಿಗೆ ಸೀಮಿತಗೊಳಿಸುವ ಮೂಲಕ ವ್ಯಾಪಾರೀಕರಣವನ್ನು, ವೈಭವೀಕರಣವನ್ನು ನಿಲ್ಲಿಸುವ ದೃಷ್ಟಿಯಿಂದ ಈ ಸದನವು ಒಂದು ಹೊಸ ಶಾಸನವನ್ನು ರಚಿಸಲು ನಿರ್ಣಯಿಸುತ್ತದೆ.

7. ಅನುಬಂಧ–I **505–784**

ಸೋಮವಾರ, ದಿನಾಂಕ 31ನೇ ಜನವರಿ 2005

1) **ಸಂತಾಪ ಸೂಚನೆ :**

ಡಾ: ಹೆಚ್. ನರಸಿಂಹಯ್ಯ ಶಿಕ್ಷಣ ತಜ್ಞರು ಹಾಗೂ ಕ್ರಿಕೆಟ್ ಸಂಸ್ಥೆಯ ಮಾಜಿ ಕಾರ್ಯದರ್ಶಿಗಳಾದ ಶ್ರೀ ಸಿ. ನಾಗರಾಜ್‌ರವರ ನಿಧನ.
– ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)
– ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)
– ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)

ಪುಟ ಸಂಖ್ಯೆ

– ಶ್ರೀ ಜೆ.ಸಿ. ಮಾಧುಸ್ವಾಮಿ
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಜಿ.ವಿ. ಶ್ರೀರಾಮರೆಡ್ಡಿ
– ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕಾ ಸಚಿವರು)
– ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)
– ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)
– ಶ್ರೀ ಜಗದೀಶ್ ಶೆಟ್ಟರ್
– ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)
– ಶ್ರೀ ಕೆ.ಆರ್. ರಮೇಶ್‌ಕುಮಾರ್
– ಶ್ರೀ ಡಿ.ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು)

ಕರ್ನಾಟಕ ವಿಧಾನಸಭೆ

ಗುರುವಾರ 27ನೇ ಜನವರಿ 2005ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 8 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ವಿಷಯ : ಮಾನ್ಯ ಶಾಸಕರುಗಳಿಗೆ ಅಧಿಕಾರಿಗಳು ಗಣರಾಜ್ಯೋತ್ಸವ ಸಮಾರಂಭದಲ್ಲಿ ಅಗೌರವ ತೋರಿಸುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಸಭಾಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ ಜನವರಿ 26 ಮತ್ತು ಆಗಸ್ಟ್ 15ರಂದು ಜರುಗುವ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆ ಸಮಾರಂಭಗಳು ಆಯಾ ಕ್ಷೇತ್ರದ ಶಾಸಕರುಗಳ ಅಧ್ಯಕ್ಷತೆಯಲ್ಲೇ ಜರುಗಿಸಬೇಕೆಂದು ಇತ್ತೀಚೆಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಭರವಸೆ ನೀಡಿದ್ದರು. ಅದರಂತೆ ರಾಜ್ಯದ ಶೇಕಡ 90 ಭಾಗದಷ್ಟು ಕಡೆಗಳಲ್ಲಿ ಮಾನ್ಯ ಶಾಸಕರುಗಳ ಅಧ್ಯಕ್ಷತೆಯಲ್ಲಿ ಸದರಿ ಸಮಾರಂಭಗಳು ಜರುಗಿದರೆ ಕೆಲವು ಕಡೆ ಜರಗುವುದಿಲ್ಲ. ಆದಕಾರಣ, ಈ ಬಗ್ಗೆ ಒಂದು ಸುತ್ತೋಲೆ ಹೊರಡಿಸಿ ಕಳುಹಿಸಿಕೊಡಬೇಕೆಂದು ನಾನು ಅವರಲ್ಲಿ ಕೇಳಿದಾಗ, ಅವರು ಕೂಡಲೇ ಎದ್ದು ನಿಂತು, ಮಾನ್ಯ ಶಾಸಕರುಗಳ ಅಧ್ಯಕ್ಷತೆಯಲ್ಲಿಯೇ ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯ ದಿನಾಚರಣೆ ಸಮಾರಂಭಗಳನ್ನು ಜರುಗಿಸುವ ಕುರಿತು ನಾನು ತಕ್ಷಣವೇ ಆದೇಶಿಸುತ್ತೇನೆ ' ಎಂದರು. ಆದರೆ, ನರಗುಂದ ಕ್ಷೇತ್ರದ ಶಾಸಕರಾದ ಮಾನ್ಯ ಸಿ. ಸಿ. ಪಾಟೀಲರ ಮತಕ್ಷೇತ್ರದಲ್ಲಿ ಅಲ್ಲಿನ ಮುನಿಸಿಪಾಲ್ ಕಾರ್ಪೋರೇಷನ್‌ನ ಅಧ್ಯಕ್ಷರನ್ನು ಗಣರಾಜ್ಯೋತ್ಸವ ಸಮಾರಂಭದ ಅಧ್ಯಕ್ಷರನ್ನಾಗಿಸುವ ಮೂಲಕ ತಮಗೆ ಸಮಾರಂಭದ ಅಧ್ಯಕ್ಷತೆ ವಹಿಸಲು ಅವಕಾಶ ನೀಡುವುದಲ್ಲವೆಂದು ಹೇಳುವ ಶಾಸಕರಿಗೆ ಅಪಮಾನವೆಸಗಿದ್ದಾರೆ. 'ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲೇ ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯ ದಿನಾಚರಣೆ ಸಮಾರಂಭ ಜರುಗಿಸಬೇಕೆಂದು ಸರ್ಕಾರಿ ಆಜ್ಞೆ ಇದೆ' ಎಂದಾಗ, ಸದರಿ ಆದೇಶ ನಮಗೆ ತಲುಪಿಲ್ಲವೆಂದು ತಿಳಿಸಿದ್ದಾರೆ. ಮಾನ್ಯ ಅಧ್ಯಕ್ಷರೆ, ತಾವು ಶಾಸಕರಾಗಿರುವ ನಮ್ಮ ಮರ್ಯಾದೆಯನ್ನು ಕಾಪಾಡಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು 'ಸರ್ಕಾರದ ಪರವಾಗಿ ನಾವು ಸೂಚನೆ ಕಳುಹಿಸುತ್ತಿದ್ದೇವೆ' ಎಂದು ಒಂದು ಸಲ ಹೇಳಿದರೆ ಸಾಕು. ಹೊಸದಾಗಿ ಸೂಚನೆ ಕಳುಹಿಸುವ ಅಗತ್ಯವಿಲ್ಲ. ಮಾನ್ಯ ಶಾಸಕರುಗಳ ಅಧ್ಯಕ್ಷತೆಯಲ್ಲೇ ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯ ದಿನಾಚರಣೆ ಸಮಾರಂಭಗಳು ಜರುಗುವಂಥಾದ್ದು ಸದರಿ ಸಮಾರಂಭಗಳಲ್ಲಿ ಶಾಸಕರಾದ ನಾವು ಧ್ವಜಾರೋಹಣ ಮಾಡುತ್ತೇವೆಂದು ಕೇಳಲಿಲ್ಲ. ಈ ಬಗ್ಗೆ ಫ್ಲಾಗ್‌ಕೋಡ್‌ನ ಸಂಬಂಧಿತ ನಿಯಮಾವಳಿಗೆ ತಿದ್ದುಪಡಿಯಾಗಬೇಕು. ಇದರ ಬಗ್ಗೆಯೂ ನಾವು ಒತ್ತಾಯಿಸುತ್ತಿಲ್ಲ. ಈ ಬಗ್ಗೆ ಸೂಚನೆ ನೀಡಿದ ನಂತರವೂ ಸಹ 'ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಸದರಿ ಸಮಾರಂಭಗಳನ್ನು ಜರುಗಿಸಬೇಕು' ಎಂಬ ಬಗ್ಗೆ ತಮಗೆ ಸರ್ಕಾರದಿಂದ ಯಾವುದೇ ಸೂಚನೆ ಬಂದಿಲ್ಲವೆಂದು ಆ ಕ್ಷೇತ್ರದ ತಹಶೀಲ್ದಾರ್‌ರವರು ಹೇಳುತ್ತಾರೆ, ಸದರಿ ಸಮಾರಂಭಗಳಿಗೆ ಬೇರೆಯವರನ್ನು ಅಧ್ಯಕ್ಷರನ್ನಾಗಿಸುವುದಕ್ಕೆ ಅವರಿಗೆ ಯಾವ ಸೂಚನೆ ಇತ್ತು? ಅಲ್ಲಿನ

ತಹಶೀಲ್ದಾರ್‌ರವರು ಮಾನ್ಯ ಶಾಸಕರಿಗೆ ಅಗೌರವವೆನಿಸುವ ರೀತಿಯಲ್ಲಿ ನಡೆದುಕೊಳ್ಳುತ್ತಾರೆ. ಇದರ ಬಗ್ಗೆ ಈ ಸದನದ ಮೂಲಕ ನೀವು ಅವರುಗಳಿಗೆ ಸೂಚನೆ ಕೊಡದಿದ್ದರೆ, ಶಾಸಕರುಗಳಾದ ನಮ್ಮ ಮರ್ಯಾದೆಯನ್ನು ನೀವು ಉಳಿಸಲು ಬಾರದಿದ್ದರೆ ಹೊಸದಾಗಿ ನಾವು ಏನೂ ಅಧಿಕಾರ ಕೇಳುತ್ತಿಲ್ಲ.

ಶ್ರೀ ಸಿ.ಸಿ. **ಪಾಟೀಲ್** : ಈ ಕುರಿತಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಮುಖಾಂತರ ಆದೇಶ ಕೊಡಿಸುತ್ತೇವೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳುತ್ತಾರೆ.

ಅಧ್ಯಕ್ಷರು : ಇದು ಬಹಳ ಗಂಭೀರವಾದ ವಿಚಾರ.

ಶ್ರೀ **ಬಿ.ಎಸ್. ಯಡಿಯೂರಪ್ಪ** : ಜನವರಿ 26 ಮತ್ತು ಆಗಸ್ಟ್ 15 ರಂದು ಕ್ರಮವಾಗಿ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆ ಸಮಾರಂಭಗಳನ್ನು ಎಂ.ಎಲ್.ಎ.ಗಳ ಅಧ್ಯಕ್ಷತೆಯಲ್ಲಿಯೇ ನಡೆಯುತ್ತಿದ್ದರೂ ಶಾಸಕರಾದ ಮಾನ್ಯ ಸಿ.ಸಿ. ಪಾಟೀಲರ ಮತಕ್ಷೇತ್ರವಾದ ನರಗುಂದದಲ್ಲಿ ನಿನ್ನೆ ನಡೆದ ಗಣರಾಜ್ಯೋತ್ಸವ ಸಮಾರಂಭದಲ್ಲಿ 'ತಮಗೆ ಸೂಚನೆ ಬಂದಿಲ್ಲ'ವೆಂದು ತಿಳಿಸುವ ಮೂಲಕ ಮುನಿಸಿಪಲ್ ಕಾರ್ಪೊರೇಷನ್ ಅಧ್ಯಕ್ಷರನ್ನು ಗಣರಾಜ್ಯೋತ್ಸವ ಸಮಾರಂಭದ ಅಧ್ಯಕ್ಷರನ್ನಾಗಿರಿಸಿ, ಮಾನ್ಯ ಶಾಸಕರಿಗೆ ಅವಕಾಶ ಕಲ್ಪಿಸಿಕೊಟ್ಟಿರುವುದಿಲ್ಲ. ಸದರಿ ಸಮಾರಂಭಗಳನ್ನು ಮಾನ್ಯ ಶಾಸಕರುಗಳ ಅಧ್ಯಕ್ಷತೆಯಲ್ಲಿ ಜರುಗಿಸಬೇಕೆಂಬ ಸೂಚನೆ ಸರ್ಕಾರದಿಂದ ಹೋಗಿದೆಯೇ, ಇಲ್ಲವೇ ಎಂಬ ವಿಷಯವನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತಿದ್ದೇನೆ.

ಶ್ರೀ **ವಾಟಾಳ್ ನಾಗರಾಜ್(ಚಾಮರಾಜನಗರ)** : ಮಾನ್ಯ ಅಧ್ಯಕ್ಷರೆ, ಗಣರಾಜ್ಯೋತ್ಸವ ಸಮಾರಂಭದಂದು ತಹಶೀಲ್ದಾರ್‌ರವರು ಧ್ವಜಾರೋಹಣ ನೆರವೇರಿಸಿದರೆ, ಮಾನ್ಯ ಶಾಸಕರು ಸದರಿ ಸಮಾರಂಭದ ಅಧ್ಯಕ್ಷತೆ ವಹಿಸಬೇಕೆಂದು ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಸದನದಲ್ಲಿಯೇ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ, ನಿನ್ನೆ ನಡೆದ ಗಣರಾಜ್ಯೋತ್ಸವದ ಸಮಾರಂಭದಲ್ಲಿ ಮಾನ್ಯ ಶಾಸಕರುಗಳಿಗೆ ಅಧ್ಯಕ್ಷತೆವಹಿಸುವ ಅವಕಾಶ ಕಲ್ಪಿಸಿಕೊಟ್ಟಿಲ್ಲ.

ಶ್ರೀ **ಸಿ.ಸಿ.ಪಾಟೀಲ್**: ಕೆಲವು ಕಡೆಗಳಲ್ಲಿ ಮಾನ್ಯ ಶಾಸಕರುಗಳಿಗೆ ಸದರಿ ಸಮಾರಂಭದ ಅಧ್ಯಕ್ಷತೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ.

ಶ್ರೀ **ವಾಟಾಳ್ ನಾಗರಾಜ್**: ಇದು ಅತ್ಯಂತ ಅಗೌರವವಾಗಿದ್ದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ದಂಡಿನ ಆಳ್ವಿಕೆ ರೀತಿಯಲ್ಲಿ ಗಣರಾಜ್ಯೋತ್ಸವ ಸಮಾರಂಭ ನೆರವೇರಿಸಿದ್ದಾರೆ. ತಮಗೆ ನಾನು ಒಂದು ಆಹ್ವಾನ ಪತ್ರಿಕೆಯನ್ನು ಕಳುಹಿಸಿಕೊಡುತ್ತಿದ್ದೇನೆ. ಜಿಲ್ಲಾಮಂತ್ರಿಗಳು ನಮ್ಮ ಜಿಲ್ಲೆಯಲ್ಲಿ ಸದರಿ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿದರೆ, ಮಾನ್ಯ ಶಾಸಕರುಗಳಾದ ನಾವು ಮಾತನಾಡುವಂತಿಲ್ಲ, ಭಾಷಣ ಮಾಡುವಂತಿಲ್ಲ, ಸಮಾರಂಭದ ಅಧ್ಯಕ್ಷತೆಯನ್ನೂ ವಹಿಸುವಂತಿಲ್ಲ ಶಾಸಕರುಗಳು ಸಮಾರಂಭಕ್ಕೆ ಬಂದು ಕುಳಿತುಕೊಳ್ಳಬೇಕು, ಹೋಗಬೇಕು! ಇದನ್ನು ಅಧಿಕಾರಿಗಳು ನನಗೆ ಹೇಳಿದ್ದಾರೆ. ನಾನು ಇದನ್ನು ಬಹಿರಂಗವಾಗಿ ಹೇಳಲಿಲ್ಲ. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವ ಮೂಲಕ ವಿಷಯವನ್ನು ತಮ್ಮ ಗಮನಕ್ಕೆ ತರುವುದಾದರೆ, ನಿನ್ನೆ ದಿನ ಜರುಗಿದ ಗಣರಾಜ್ಯೋತ್ಸವ ಸಮಾರಂಭಕ್ಕೆ ನಾನು ಹೋಗಲಿಲ್ಲ. ನನಗೆ ನೋವಾಗುತ್ತದೆ. ಇದು ಯಾವ ರೀತಿಯ ವ್ಯವಸ್ಥೆ? ಸಮಾರಂಭದ ನೀತಿ-ನಿಯಮಗಳನ್ನು ರಚಿಸಿದವರು ಯಾರು? ಧ್ವಜಾರೋಹಣದ ನೀತಿಯೇನು? ಇದನ್ನು ಅವರು ಮಂಡಿಸಬೇಕು. ರಾಷ್ಟ್ರಧ್ವಜಾರೋಹಣವನ್ನು ತಾಲ್ಲೂಕುಗಳಲ್ಲಿ ನೆರವೇರಿಸುವವರು ಯಾರು? ಜಿಲ್ಲೆಗಳಲ್ಲಿ ನೆರವೇರಿಸುವವರು ಯಾರು? ಜಿಲ್ಲೆಗಳಲ್ಲಿ ಆಯಾ ಜಿಲ್ಲಾ ಮಂತ್ರಿಗಳು ರಾಷ್ಟ್ರಧ್ವಜಾರೋಹಣ ನೆರವೇರಿಸಿದರೆ, ಆ ಕ್ಷೇತ್ರದ ಶಾಸಕರು ಕನಿಷ್ಠ ಸಮಾರಂಭದ ಅಧ್ಯಕ್ಷತೆವಹಿಸಬೇಕು. ಆದರೆ, ಈಗ ಸದರಿ ಸಮಾರಂಭದಲ್ಲಿ ಶಾಸಕರು ಅಧ್ಯಕ್ಷತೆ ವಹಿಸುವಂತಿಲ್ಲ, ಮಾತನಾಡುವಂತಿಲ್ಲ! ಗಣರಾಜ್ಯೋತ್ಸವ ಸಮಾರಂಭದಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಸಮಾರಂಭ ಕುರಿತು ನಾಲ್ಕು

ಮಾತುಗಳನ್ನಾಡಿ ದೇಶಕ್ಕೆ ಶುಭ ಸಂದೇಶ ನೀಡಬೇಕೆಂದರೆ ಶಾಸಕರುಗಳಿಗೆ ಅವಕಾಶವಿಲ್ಲ! ಲೋಕಸಭಾ ಸದಸ್ಯರಿಗೂ ಅವಕಾಶವಿಲ್ಲ! ರಾಜ್ಯಸಭಾ ಸದಸ್ಯರುಗಳಿಗೂ ಅವಕಾಶವಿಲ್ಲ! ವಿಧಾನ ಪರಿಷತ್ತಿನ ಶಾಸಕರುಗಳಿಗೂ ಅವಕಾಶವಿಲ್ಲ! ಜಿಲ್ಲಾ ಮಂತ್ರಿ ಇಲ್ಲವೆಂದರೆ, ಅಲ್ಲಿನ ಜಿಲ್ಲಾಧಿಕಾರಿ ಅಥವಾ ತಹಶೀಲ್ದಾರ್ ಎಲ್ಲಾದರೂ ಉಂಟೇ ? ರಾಷ್ಟ್ರಧ್ವಜಾರೋಹಣ ಮಾಡುವುದೆಂದರೆ, ಇದು ಎಲ್ಲಿಯಾದರೂ ಉಂಟೇ? ಇದು ಪ್ರಜಾತಂತ್ರ ವ್ಯವಸ್ಥೆಗೆ ಅಪಾಯ, ಅನ್ಯಾಯ. ಇಡೀ ಸದನಕ್ಕೆ ಎಸಗಿರುವ ಅನ್ಯಾಯವಾಗಿರುವುದಲ್ಲದೆ, ಮಾನ್ಯ ಶಾಸಕರುಗಳಿಗೆ ಮಾಡಿರುವಂಥ ಅನ್ಯಾಯವಾಗಿರುವುದರಿಂದ ಈ ದಿಸೆಯಲ್ಲಿ ಸರ್ಕಾರ ಕ್ರಮ ಕೈಗೊಂಡು ಆ ಕುರಿತು ಹೇಳಲೇಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇನ್ನೊಂದು ಬೆಳವಣಿಗೆಯಾಗಿದೆ. ಬಾಗಲಕೋಟೆ ಜಿಲ್ಲಾಧಿಕಾರಿಯವರು ಶಾಲಾ ಮುಖ್ಯೋಪಾಧ್ಯಾಯರು flag hoist ಮಾಡಬೇಕು ಎಸ್‌ಡಿಎಂಸಿ ಅಧ್ಯಕ್ಷರು ಮಾಡಬಾರದು ಎಂದು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಆ ರೀತಿ ಎಲ್ಲರಿಗೂ ಸೂಚನೆ ಕೊಟ್ಟಿದ್ದಾರೆ. ನಾನು ಹಿರಿಯ ಸಚಿವರಾದ ಮಾನ್ಯ ಸಿಂಧ್ಯಾರವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ಇದರಲ್ಲಿ ನಿಮ್ಮ ಜವಾಬ್ದಾರಿ ಇದೆ, ನಾನು ಕಾನೂನುಬಾಹಿರವಾಗಿ ಅಥವಾ ಇನ್ಯಾವುದೇ ಹೊಸ ಅಧಿಕಾರವನ್ನು ಕೊಡಿ ಎಂದು ಕೇಳುತ್ತಿಲ್ಲ. flag code ಗೆ ಅಮೆಂಡ್‌ಮೆಂಟ್ ತರುವವರೆಗೆ flag hoisting ಮಾಡಲು ಶಾಸಕರಿಗೆ ಅವಕಾಶ ಕೊಡಿ ಎಂದು ನಾನು ಕೇಳುವುದಿಲ್ಲ. ಅದಕ್ಕೆ ಒತ್ತಾಯ ಮಾಡುತ್ತೇವಷ್ಟೆ. ಸದನದಲ್ಲಿ ಉಪಮುಖ್ಯಮಂತ್ರಿಯವರು ಹೇಳಿದ ಮೇಲೆ ನನಗೆ ಅದಕ್ಕಿಂತ ಹೆಚ್ಚಾಗಿ ಉಪಮುಖ್ಯಮಂತ್ರಿಯವರು ಹೇಳಿದಂಥ ಆಜ್ಞೆ, ಸೂಚನೆ ಸಂಬಂಧಪಟ್ಟಂಥ ಜಿಲ್ಲಾಧಿಕಾರಿಯವರಿಗೆ ಹೋಗಿದೆಯೆ? ಹೋಗದಿದ್ದರೆ ಇಲ್ಲಿರುವ ಅಧಿಕಾರಿಗಳು ಏನು ಮಾಡಲು ಕುಳಿತಿದ್ದಾರೆ? ಅವರು ಇಲ್ಲಿನ ಸೂಚನೆಯನ್ನು ಪಾಲನೆ ಮಾಡಲು ಕುಳಿತುಕೊಂಡಿದ್ದಾರೆಂದು ತಿಳಿದುಕೊಂಡಿದ್ದೇನೆ. ಅದು ಹೋಯಿತೋ ಇಲ್ಲವೋ? ಎಸ್‌ಡಿಎಂಸಿ ಯವರು ಇಡೀ ರಾಜ್ಯದಲ್ಲಿ flag hoisting ಮಾಡುತ್ತಿದ್ದಾರೆ. ಆದರೆ ಇವತ್ತು ಅಲ್ಲಿ ಯಾರೋ ಡೆಪ್ಯೂಟಿ ಕಮಿಷನರ್ ಬಾಗಲಕೋಟೆಯಲ್ಲಿ ಇನ್ನೊಂದು ಸುತ್ತೋಲೆ ಹೊರಡಿಸಿದ್ದಾನಂತೆ. ಇದೇನು ನಡೆಯುತ್ತಿದೆ ಎಂಬುದು ನಮಗೆ ಅರ್ಥವಾಗುವುದಿಲ್ಲ. ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡದಿದ್ದರೆ ಇದೊಂದು ಅಪಮಾನವೆಂದು ನಾನು ವಾಕ್‌ಔಟ್ ಮಾಡುತ್ತೇವೆ. ನಾವು ಇಲ್ಲಿ ವಾಕ್‌ಔಟ್ ಮಾಡಬಾರದು, ಧರಣಿ ಮಾಡಬಾರದು ಎಂದು ತೀರ್ಮಾನ ಮಾಡಿದ್ದೇವೆ, ಆದರೆ ಶಾಸಕರಿಗೆ ಈ ರೀತಿ ಅಪಮಾನ ಮಾಡುವುದಾದರೆ ಅದನ್ನು ಸಹಿಸಿಕೊಂಡು ಇಲ್ಲಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ನೀವು ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು : ಇದರ ಬಗ್ಗೆ ಸರ್ಕಾರದವರು ಏನು ಹೇಳುತ್ತಾರೊ ಕೇಳೋಣ.

(ಗೊಂದಲ)

ಅಧ್ಯಕ್ಷರು : ಈ ರೀತಿ ಎಲ್ಲರೂ ನಿಂತುಕೊಂಡು ಮಾತನಾಡಿದರೆ ಹೇಗೆ? ಸರ್ಕಾರ ಏನೂ ಹೇಳುತ್ತದೋ ನೋಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧಿಕಾರಿಗಳ ಉದ್ಧಟತನದ ಪರಮಾವಧಿ ಇದಾಗಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇವರಿಗೆ ಮಾನಮರ್ಯಾದೆ ಇದೆಯೆ? ಇವರಿಗೆ ಹೇಳುವವರು ಕೇಳುವವರು ಯಾರೂ ಇಲ್ಲವೆ?

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಸರ್ಕಾರದ ರಿಯಾಕ್ಷನ್ ಕೇಳದೆ ಹೀಗೆ ಮಾಡಿದರೆ ಹೇಗೆ? ಎಲ್ಲಾ ವಿಚಾರಗಳನ್ನು ಅವರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅದಕ್ಕೆ ಸರ್ಕಾರ ಏನು ಹೇಳುತ್ತದೋ ಕೇಳೋಣ. ದಯಮಾಡಿ ಎಲ್ಲರೂ ಮಾತನಾಡಿದರೆ ಹೇಗೆ? ಅವರು ಸೂಕ್ಷ್ಮವಾಗಿ ಹೇಳಿದ್ದಾರೆ, ಎಲ್ಲರೂ ಮಾತನಾಡುವ ಅಗತ್ಯವಿಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿ : ಆಡಳಿತಶಾಹಿ ವ್ಯವಸ್ಥೆ ದೂರವಾಗಬೇಕು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳಿಗೆ ಗೌರವ ಸಿಗಬೇಕು.

ಅಧ್ಯಕ್ಷರು : ಆಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ಚುನಾಯಿತ ಪ್ರತಿನಿಧಿಗಳಿಗೆ ಅದರಲ್ಲೂ ಅವರವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರದ ವತಿಯಿಂದ ಆಗತಕ್ಕ ಎಲ್ಲಾ ಕಾರ್ಯಕ್ರಮಗಳಿಗೂ ಸನ್ಮಾನ್ಯ ವಿಧಾನಸಭೆಯ ಸದಸ್ಯರುಗಳೇ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಬೇಕು ಎಂಬ ನೀತಿಯನ್ನು ಅನುಸರಿಸಿಕೊಂಡು ಬಂದಿದ್ದೇವೆ. ಈ ನೀತಿ ಮುಂದುವರೆಯುತ್ತದೆ. ಯಾವುದೇ ಕಾರಣಕ್ಕೂ ಮುಖ್ಯಮಂತ್ರಿಗಳಿಗಿರಲಿ, ಮಂತ್ರಿಗಳಿಗಿರಲಿ ಸ್ವಾತಂತ್ರ್ಯ ದಿನಾಚರಣೆಯಾಗಿರಲಿ ಅಥವಾ ಗಣರಾಜ್ಯೋತ್ಸ ದಿನಾಚರಣೆ ಇರಲಿ, ಸರ್ಕಾರದ ಯಾವುದೇ ಕಾರ್ಯಕ್ರಮವಾಗಿದ್ದರೂ ಆಯಾಯ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಶಾಸಕರುಗಳು ಅಧ್ಯಕ್ಷತೆಯನ್ನು ವಹಿಸಬೇಕು, ವಿಧಾನ ಪರಿಷತ್ತಿನ ಸದಸ್ಯರುಗಳು ಮತ್ತು ಲೋಕಸಭಾ ಸದಸ್ಯರುಗಳು ಮುಖ್ಯ ಅತಿಥಿಗಳಾಗಿ, ಗಣ್ಯ ವ್ಯಕ್ತಿಗಳಾಗಿ ಭಾಗವಹಿಸಬೇಕು ಎನ್ನತಕ್ಕ ವಾಡಿಕೆ ಮತ್ತು ಸಂಪ್ರದಾಯವಾಗಿದೆ. ಗಣರಾಜ್ಯೋತ್ಸವಕ್ಕೆ ಸಂಬಂಧಪಟ್ಟಂತೆ ಮಾನ್ಯ ಯಡಿಯೂರಪ್ಪನವರು ಪ್ರಶ್ನೆ ಎತ್ತಿದಾಗ ಮಾನ್ಯ ಉಪಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಎಲ್ಲರಿಗೂ ಸೂಚನೆ ಕೊಟ್ಟಿದ್ದೇನೆ, ಅಧ್ಯಕ್ಷತೆಯನ್ನು ವಿಧಾನಸಭಾ ಸದಸ್ಯರುಗಳೇ ವಹಿಸಬೇಕು ಎಂದು ಹೇಳಿದ್ದಾರೆ. ಅದು ಆಗಿಲ್ಲ ಎನ್ನತಕ್ಕ ಮಾತು ಖೇದನೀಯ. ಏಕೆ ಆ ಸೂಚನೆ ಹೋಗಿಲ್ಲ, ಏನು ಲೋಪವಾಗಿದೆ ಎಂಬ ವಿಚಾರಣೆ ಮಾಡಿ ಆ ರೀತಿ ಸೂಚನೆ ಸರ್ಕಾರದಿಂದ ಹೋಗಿದ್ದರೆ, ಅದನ್ನು ಅವರು ಕಾರ್ಯಪಾಲನೆ ಮಾಡದಿದ್ದರೆ ಖಂಡಿತವಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ. ಹಿರಿಯ ಸದಸ್ಯರಾಗಿರುವ ಮಾನ್ಯ ವಾಟಾಳ್‌ನಾಗರಾಜ್‌ರವರು ಮತ್ತು ಬಾಗಲಕೋಟೆಯಲ್ಲಿ ನಡೆದಂಥ ಸಮಾರಂಭದಲ್ಲಿ ಸ್ಥಳೀಯ ಶಾಸಕರಿಗೆ ಅಧ್ಯಕ್ಷತೆಯನ್ನು ವಹಿಸಲು ಏಕೆ ಕೊಟ್ಟಿಲ್ಲ, ಸಂಪ್ರದಾಯ ಏನು ಎನ್ನುವುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಆಗಿರತಕ್ಕ ಲೋಪದ ಬಗ್ಗೆ ಸರ್ಕಾರದ ಪರವಾಗಿ..

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಕೇಳಿಸಿಕೊಳ್ಳಲಿಲ್ಲ, ಬಾಗಲಕೋಟೆಯಲ್ಲಿ ಕೊಟ್ಟಿದ್ದಾರೆ ಎಂದು ನಾನು ಹೇಳಿದ್ದು. ತಾವು ಅದನ್ನು ಗಮನಿಸಲಿಲ್ಲ.

ಶ್ರೀ ಗೋವಿಂದಪ್ಪ ಮಕಟಪ್ಪ ಕಾರಜೋಳ : ತಾವು ಆ ರೀತಿ ಉತ್ತರ ಕೊಟ್ಟರೆ ತಪ್ಪಾಗುತ್ತದೆ. ಎಸ್‌ಡಿಎಂಸಿ ಅಧ್ಯಕ್ಷರಿಗೆ ಶಾಲೆಗಳಲ್ಲಿ flag hoisting ಮಾಡಲು ಅವಕಾಶ ಕೊಡಬಾರದು ಎಂದು ಬಾಗಲಕೋಟೆಯಲ್ಲಿ ಜಿಲ್ಲಾಧಿಕಾರಿಗಳು ಸುತ್ತೋಲೆ ಹೊರಡಿಸಿದ್ದಾರೆ. ಅದರ

ಪ್ರಕಾರ ಶಾಲೆಯ ಮುಖ್ಯೋಪಾಧ್ಯಾಯರೇನಿದ್ದಾರೆ ಅವರೇ flag hoisting ಮಾಡಬೇಕೆಂದು ಇದೆ. ಇಡೀ ರಾಜ್ಯದಲ್ಲಿ ಎಸ್‌ಡಿಎಂಸಿ ರಚನೆ ಮಾಡಿದಾಗಿನಿಂದ ಇಲ್ಲಿಯವರೆಗೆ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರೇ flag hoisting ಮಾಡುವುದು. ಆದರೆ ಈ ವರ್ಷದ ಜನವರಿ 26ಕ್ಕೆ ಬಾಗಲಕೋಟೆಯ ಜಿಲ್ಲಾಧಿಕಾರಿಯವರು ಸುತ್ತೋಲೆ ಹೊರಡಿಸಿ ಅವರನ್ನು ಕರೆಯುವುದೂ ಸಹಿತ ಬೇಡ ಎಂದು ಹೇಳಿದ್ದಾರೆ.

ಶ್ರೀ ಅರಗಜ್ಞಾನೇಂದ್ರ : ಅದು ಸರಿ ಇದೆ ಸ್ವಾಮಿ! ಈ ದೇಶಕ್ಕೆ ಸ್ವಾತಂತ್ರ್ಯ ಬಂದಿದ್ದು ಗಣರಾಜ್ಯೋತ್ಸವ ಎಲ್ಲವೂ ಅಫಿಶಿಯಲ್ಸ್‌ಗೆ, ಸರ್ಕಾರಿನೌಕರರಿಗೆ, ಸಾಮಾನ್ಯ ಜನರಿಗೆ ಬರಲಿಲ್ಲ. ಹಾಗಾಗಿ ಅವರು ಸುತ್ತೋಲೆ ಹೊರಡಿಸಿದ್ದು ಸರಿ ಇದ್ದರೆ! ಈ ದೇಶಕ್ಕೆ ಸ್ವಾತಂತ್ರ್ಯ ಬಂದದ್ದು ಗಣರಾಜ್ಯೋತ್ಸವ ಎರಡೂ ಕೂಡ ಸರ್ಕಾರಿ ನೌಕರರಿಗೆ ಬಂದು ಬಿಟ್ಟಿದೆ. ಉಳಿದವರಿಗೆ, ಸಾಮಾನ್ಯ ರೈತರಿಗೆ, ಕೃಷಿ ಕಾರ್ಮಿಕರಿಗೆ ಬರಲಿಲ್ಲ, ಒಂದು ತರಹ ಅವರು ಹೊರಡಿಸಿರುವ ಸುತ್ತೋಲೆ ಸರಿ ಇದೆ!

ಶ್ರೀ ಗೋವಿಂದಪ್ಪ ಮಕಟಪ್ಪ ಕಾರಜೋಳ : ಉಳಿದ ಜಿಲ್ಲೆಗಳಿಗೆ ಒಂದು ಕಾನೂನು, ಬಾಗಲಕೋಟೆ ಜಿಲ್ಲೆಗೆ ಒಂದು ಕಾನೂನು ಏನು? ಆ ರೀತಿ ಸುತ್ತೋಲೆ ಹೊರಡಿಸಲು ಅವರಿಗೆ ಯಾರು ಅಧಿಕಾರವನ್ನು ಕೊಟ್ಟವರು?

ಅಧ್ಯಕ್ಷರು: ಹೀಗೆಲ್ಲಾ ಪ್ರಶ್ನೆ ಮಾಡಿಕೊಂಡು ಕುಳಿತರೆ ಇದಕ್ಕೆ ಕೊನೆಯೆಲ್ಲಿದೆ?
ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಮಾತನಾಡಿದರೆ ಇದಕ್ಕೆ ಕೊನೆ ಎಲ್ಲಿದೆ? ನಿಮಗೆ ಸ್ಪಷ್ಟವಾದ ಉತ್ತರ ಬೇಕೋ? ಅಥವಾ ಸುಮ್ಮನೆ ಇದ್ದುಕೊಂಡು ಕಾಲ ಕಳೆಯುವುದು ಬೇಕೋ?

ಶ್ರೀ ಗೋವಿಂದಪ್ಪ ಮಕಟಪ್ಪ ಕಾರಗೋಳ : ನರಗುಂದ ಶಾಸಕರಿಗೆ ಯಾವ ಅಧಿಕಾರ ಅಪಮಾನ ಮಾಡಿದ್ದಾರೋ ಅವರ ಸಸ್‌ಪೆನ್‌ಷನ್ ಇವತ್ತು ಐದು ಗಂಟೆಯ ಒಳಗೆ ಸರ್ಕಾರದಿಂದ ಇಶ್ಯೂ ಆಗಬೇಕು.ಇಲ್ಲದಿದ್ದರೆ ನಾವು ಈ ಸದನ ನಡೆಯುವುದಕ್ಕೆ ಬಿಡುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೆ, ವಾಟಾಳ್‌ನಾಗರಾಜ್‌ರವರ ಕ್ಷೇತ್ರವನ್ನು ನೋಡಿದರೆ ಬೇಕೆಂದೇ ಅಧ್ಯಕ್ಷರನ್ನು ಹಾಕಲೇ ಬಾರದು ಎಂದು ಅವರು ನಿರ್ಧಾರ ತೆಗೆದುಕೊಂಡಿದ್ದಾರೆ. ಬೇರೆಯವರನ್ನೂ ಅಧ್ಯಕ್ಷರನ್ನಾಗಿ ಹಾಕಿಲ್ಲ. ಒಂದು ಸಮಾರಂಭ ನಡೆಯುತ್ತದೆ ಅಲ್ಲಿ ಯಾರಾದರೂ ಅಧ್ಯಕ್ಷರು ಇರಬೇಕು ಎಂಬ ಸಾಮಾನ್ಯ ಜ್ಞಾನವೂ ಇಲ್ಲ, ಬೇರೆ ಯಾರನ್ನಾದರೂ ಅಧ್ಯಕ್ಷರನ್ನಾಗಿ ಹಾಕಿದ್ದರೆ ಒಪ್ಪಿಕೊಂಡು ಅಕಸ್ಮಾತ್ ಆಗಿದೆ ಎಂದು ಹೇಳಬಹುದಿತ್ತು. ಆದರೆ ಅಧ್ಯಕ್ಷರು ಇಲ್ಲವೇ ಇಲ್ಲ, ಎಲ್ಲಾ ಶಾಸಕರೂ ಆಹ್ವಾನಿತರೇ. ಆ ಕ್ಷೇತ್ರದ ಶಾಸಕರನ್ನು ಅಲ್ಲಿ ಆಹ್ವಾನಿತರಾಗಿ ಬಂದವರನ್ನು ಅಧ್ಯಕ್ಷತೆಯಲ್ಲಿ ಹಾಕುವುದರಿಂದ ಕಳೆದುಕೊಳ್ಳುವುದೇನು? ಜಿಲ್ಲಾಧಿಕಾರಿಗಳಿಗೆ ಶಾಸಕರನ್ನು ಏನಾದರೂ ಅಧ್ಯಕ್ಷರನ್ನಾಗಿ ಮಾಡಿ ಸಂಭೋದನೆ ಮಾಡಿ ಮಾತನಾಡಲು ಅಪಮಾನವೆಂದು ಅನ್ನಿಸಿದಂತೆ ಕಾಣುತ್ತದೆ. ನಮ್ಮನ್ನು ಯಾರು ಆಳುತ್ತಿದ್ದಾರೆ? ಇದು ಇತ್ಯರ್ಥವಾಗಬೇಕು, ದಯಮಾಡಿ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು. ಅದೇ ಕ್ಷೇತ್ರದಲ್ಲಿ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರ ಅಧ್ಯಕ್ಷತೆಯಲ್ಲಿ ಎಂದು ಆಗುತ್ತದೆ, ಆದರೆ ಗಣರಾಜ್ಯೋತ್ಸವದ ಬಗ್ಗೆ ಇಲ್ಲಿ ಉಪಮುಖ್ಯಮಂತ್ರಿಯವರು ಉತ್ತರ ಹೇಳಿದಮೇಲೂ, ಸುತ್ತೋಲೆ ಹೋಗದಿದ್ದರೆ ಬೇಡ, ಪತ್ರಿಕೆಗಳಲ್ಲಿ ಬರಲಿಲ್ಲವೆ? ದೂರದರ್ಶನದಲ್ಲಿ ಬರಲಿಲ್ಲವೆ? ಏಕೆ ಹಾಕಲಿಲ್ಲ ಎಂಬ ಬಗ್ಗೆ ಅವರು ಉತ್ತರವನ್ನು ಹೇಳಬೇಕು.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಒಟ್ಟಿಗೆ ಎದ್ದು ನಿಂತು ಮಾತನಾಡಿದರೆ ಹೇಗೆ?

ಶ್ರೀ ಓಲೇಕಾರ್ ನೆಹರೂ ಚನ್ನಬಸಪ್ಪ : ಯಾವ್ಯಾವ ಜಿಲ್ಲೆಗಳಲ್ಲಿ ಇಂತಹ ಅಪಚಾರವನ್ನು ಮಾಡಿದ್ದಾರೋ, ಆ ರೀತಿಯ ಅಪಚಾರ ಮಾಡಿದಂತಹ ಜಿಲ್ಲಾಧಿಕಾರಿಗಳನ್ನು ಮತ್ತು ತಹಸೀಲ್ದಾರ್‌ಗಳನ್ನು ಕೂಡಲೇ Suspend ಮಾಡಬೇಕು. Suspend ಮಾಡಿ ಕೂಡಲೇ ಆದೇಶವನ್ನು ಹೊರಡಿಸಬೇಕು. ಇಲ್ಲದಿದ್ದರೆ ಕೆಲವೊಂದು ಜಿಲ್ಲೆಗಳಲ್ಲಿ ತಮಗೆ ತಿಳಿದ ಹಾಗೆಯೇ ಅಧಿಕಾರಿಗಳು ವರ್ತನೆಯನ್ನು ಮಾಡುತ್ತಿರುತ್ತಾರೆ.....

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ತಾವು ಸರ್ಕಾರದ ಜೊತೆಗೆ ಮಾತನಾಡಿ ತೀರ್ಮಾನ ಮಾಡಿ. ಆನಂತರವೇ ಸದನವನ್ನು ಪ್ರಾರಂಭ ಮಾಡಿ....

(ಗೊಂದಲ)

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ಮೊದಲು ಆ ಬಗ್ಗೆ ಸರ್ಕಾರ ಉತ್ತರ ಹೇಳಲಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ...... ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಸ್ಪಂದಿಸುವುದಕ್ಕಾಗುವುದಿಲ್ಲ. ಸರ್ಕಾರದಿಂದ ನಮಗೆ ಕೊಡುವಂತಹ ಗೌರವವನ್ನೂ ಸಹ ಅವರು ಕೊಡಲಿಲ್ಲವೆಂದರೆ ನಾವೇನು ಮಾಡುವುದು?......

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಸರ್ಕಾರದವರು ಇದರ ಬಗ್ಗೆ ಏನು ಉತ್ತರ ಕೊಡುತ್ತಾರೆ ಎಂದು ಕೇಳುವುದಕ್ಕೂ ತಾಳ್ಮೆ ಇಲ್ಲವೆಂದರೆ ನಾನೇನು ಮಾಡುವುದು?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ತಾವು ಸರ್ಕಾರದ ಜೊತೆಗೆ ಮಾತನಾಡಿ ತೀರ್ಮಾನ ಮಾಡಿ. ಆನಂತರವೇ ಸದನವನ್ನು ಪ್ರಾರಂಭ ಮಾಡಿ.....

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನೀಗ ಸರ್ಕಾರದ ಪರವಾಗಿ ಉತ್ತರ ಕೊಡುತ್ತಿದ್ದೇನೆ. ಮಾನ್ಯ ಸದಸ್ಯರೆಲ್ಲರೂ ಕೂಡ ಈ ತರಹದ ಲೋಪಗಳ ಬಗ್ಗೆ ಮತ್ತು ತಪ್ಪು ಸುತ್ತೋಲೆಗಳ ಬಗ್ಗೆ ಅಥವಾ ಹೊರಡಿಸಿರತಕ್ಕಂಥ ಕೆಲವು ಆಮಂತ್ರಣ ಪತ್ರಿಕೆಗಳ .ವಿಚಾರದ ಬಗ್ಗೆ ಸದನದ ಗಮನವನ್ನು ಸೆಳೆದಿದ್ದಾರೆ. ಸರ್ಕಾರದ ಉದ್ದೇಶ ಮಾನ್ಯ ಜನಪ್ರತಿನಿಧಿಗಳನ್ನು ಅತ್ಯಂತ ಗೌರವದಿಂದ ಕಾಣಬೇಕಾಗಿರುವುದೇ ಆಗಿದೆ. ಈ ಬಗ್ಗೆ ಕಾಲಕಾಲಕ್ಕೆ ಸುತ್ತೋಲೆಗಳನ್ನು ಹೊರಡಿಸಲಾಗಿದೆ. ಇಷ್ಟಾಗಿದ್ದರೂ ಕೂಡ ಆಡಳಿತ ಕೆಲವು ಕಡೆ ಲೋಪದೋಷ ಮಾಡಿದೆ. ಅದಕ್ಕೆ ನಾನು ಸರ್ಕಾರದ ಪರವಾಗಿ ಕ್ಷಮೆ ಕೇಳುತ್ತೇನೆ. ಇದನ್ನು ದೀರ್ಘವಾಗಿ ಬೆಳೆಸದೆ, ತಮ್ಮ ಮೂಲಕ ನಾನು ಕೇಳಿಕೊಳ್ಳುವುದೇನೆಂದರೆ,.......

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧಿಕಾರಿಗಳು ತಪ್ಪು ಮಾಡಿರುವುದಕ್ಕೆ ನೀವೇಕೆ ಕ್ಷಮೆ ಕೇಳುತ್ತೀರಿ? ಈ ತರಹ ಇರುವುದರಿಂದಲೇ ಅಧಿಕಾರಿಗಳು ಅಲ್ಲಿ ಅಷ್ಟೊಂದು ಮೆರೆಯುತ್ತಿರುವುದು.

ಶ್ರೀ ಎಂ.ಪಿ. ಪ್ರಕಾಶ್ : ಎಲ್ಲಿಯಾದರೂ ಒಂದು ಕಡೆಗೆ ಅದಕ್ಕೆ ಉತ್ತರ ಸಿಗಬೇಕಲ್ಲವೇ?

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ತಪ್ಪು ಮಾಡಿದ್ದೀರಿ ಎಂದು ನೀವು ಹೇಳುತ್ತಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಕ್ಷಮೆ ಕೇಳಲು ನೀವು ತಪ್ಪು ಮಾಡಿಲ್ಲವಲ್ಲಾ.

ಶ್ರೀ ಎಂ.ಪಿ.ಪ್ರಕಾಶ್ : ಈಗ ನೀವು ಇದನ್ನು ಇಲ್ಲಿ ಪ್ರಸ್ತಾಪಿಸಿರತಕ್ಕಂಥ ಉದ್ದೇಶ ಏನು? ನಿಮಗೆ ಈ ಬಗ್ಗೆ ಸರ್ಕಾರದಿಂದ ಪ್ರತಿಕ್ರಿಯೆ ಬೇಕೋ ಬೇಡವೋ? ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ್ದನ್ನು ಸರ್ಕಾರದ ಉತ್ತರ ಎನ್ನುತ್ತಾರೆಯೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಹೇಳುವುದು ಉತ್ತರವಾಗುವುದಿಲ್ಲ. ಅಧಿಕಾರ ಯಾರು ತಪ್ಪು ಮಾಡಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ.ಪಿ.ಪ್ರಕಾಶ್ : ಅಧಿಕಾರವನ್ನು ಸದನಕ್ಕೆ ಕರೆದುಕೊಂಡು ಬರಲಿಕ್ಕೆ ಆಗುತ್ತದೆಯೇ?ತಾವೇನು ಮಾತನಾಡುತ್ತೀರಿ? ಅಧಿಕಾರಿಯನ್ನು ಇಲ್ಲಿಗೆ ಕರೆದುಕೊಂಡು ಬರಲಿಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್ : ......ಹಾಗೆಂದು ನಾವು ಕೇಳುತ್ತಿಲ್ಲ. ನೀವು ಕೊಟ್ಟ ಸೂಚನೆಯನ್ನು ಅವರು ಪಾಲನೆ ಮಾಡುತ್ತಿಲ್ಲ. ಅದನ್ನು ಗಂಭೀರವಾಗಿ ಗಮನಿಸಬೇಕು....

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಮಾನ್ಯ ಸಚಿವರು ಉತ್ತರ ಹೇಳಲಿಕ್ಕೆ ತಾವು ಅವಕಾಶ ಮಾಡಿಕೊಡದಿದ್ದರೆ ಹೇಗೆ?

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಬಸವರಾಜ್‌ರವರೆ, ಸದನದಲ್ಲಿ ಹಾವಭಾವ, ಮುಖದಲ್ಲಿ ತರಹದ ಕೋಪವನ್ನು ತೋರಿಸಿಕೊಳ್ಳಬೇಕಾದಂತಹ ಅಗತ್ಯವಿಲ್ಲ. ಆ ತರಹ ಮಾಡಬೇಡಿ. ಅಂತಹ ಹಾವಭಾವ, ಮುಖದಲ್ಲಿ ಕೋಪ ......

ಶ್ರೀ ಹೆಚ್. ಡಿ. ಬಸವರಾಜ್ : ... ನಮ್ಮ ದುಃಖವನ್ನು ಇಲ್ಲಿ ತೋಡಿಕೊಳ್ಳುತ್ತಿದ್ದೇವೆ. ನಮಗೆ ಯಾರ ಮೇಲೂ ಕೋಪ ಇಲ್ಲ. ನಾನ್ಯಾಕೆ ಕೋಪ ಮಾಡಿಕೊಳ್ಳಲಿ?....

ಶ್ರೀ ಎಂ.ಪಿ.ಪ್ರಕಾಶ್ : .... ನಾನು ಇಲ್ಲಿಗೆ ಯಾರಿಗೂ ಪಾಠ ಹೇಳಿಕೊಡುವುದಕ್ಕೆ ಬಂದಿಲ್ಲ.ಆದರೂ ಕೂಡ ಸದನದಲ್ಲಿ ನಡೆದುಕೊಳ್ಳಬೇಕಾಗಿರತಕ್ಕಂಥ ರೀತಿ ಇದಲ್ಲ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ .

ಶ್ರೀ ವಿ.ಸೋಮಣ್ಣ : ಮಾನ್ಯ ಸಚಿವರು ಸರ್ಕಾರದ ಪರವಾಗಿ ಉತ್ತರ ಹೇಳುತ್ತಾರೆ. ನಂತರ ಬೇಕಿದ್ದರೆ ಅವರುಗಳು ಮಾತನಾಡಲಿ.

(ಗೊಂದಲ)

ಅಧ್ಯಕ್ಷರು : ದಯೆಮಾಡಿ ಕುಳಿತುಕೊಳ್ಳಿ, ಈ ರೀತಿ ಎಲ್ಲಾ ಉಲ್ಲಂಘನೆ ಮಾಡುವುದಾದರೆ, ನಾನು name ಮಾಡಬೇಕಾಗುತ್ತದೆ, ಅಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಏಕೆ ನೇಮ್ ಮಾಡುತ್ತೀರಿ?

ಅಧ್ಯಕ್ಷರು : ಉಲ್ಲಂಘನೆ ಮಾಡಿದರೆ ಏನು ಮಾಡುವುದಕ್ಕಾಗುತ್ತದೆ?

ಶ್ರೀ ಬಿ.ಎಸ್.ಯಡಿಯೂರಪ್ಪ : ಉಲ್ಲಂಘನೆ ಮಾಡುತ್ತಿಲ್ಲ. ಈ ವಿಷಯದ ಪ್ರಸ್ತಾಪದಲ್ಲಿ ಏನು ತಪ್ಪಿದೆ?

ಅಧ್ಯಕ್ಷರು : ಹಾಗಲ್ಲ ಸ್ವಾಮಿ. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನನ್ನದೊಂದು ಮನವಿ.....

- **ಶ್ರೀ ಬಿ.ಎಸ್. ಯಡಿಯೂರಪ್ಪ** : ನಿಮಗೆ ಹೇಗೆ ಬೇಕೋ ಹಾಗೆ ಸದನ ನಡೆಸಿಕೊಳ್ಳಿ ......

(ಗೊಂದಲ)

ಅಧ್ಯಕ್ಷರು : ನಿಮಗೆ ಇಷ್ಟ ಬಂದ ರೀತಿಯಲ್ಲಿ ಸದನ ನಡೆಸುವುದಕ್ಕಾಗುವುದಿಲ್ಲ. ಸದನವನ್ನು ನಡೆಯುವ ರೀತಿಯಲ್ಲಿ ನಡೆಸಬೇಕಾಗುತ್ತದೆ. ನಾವೇನೂ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲವೆಂದರೆ ಏನರ್ಥ? ಎಲ್ಲಾ ನೀವೇ ಮಾತನಾಡಿದರೆ ಹೇಗೆ?

(ಗೊಂದಲ)

Mr. Speaker : It is up to you.

(ಗೊಂದಲ)

Mr. Speaker : No,No, This is not the way

Mr. Speaker : Do whatever you like.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಯಡಿಯೂರಪ್ಪನವರೇ, ದಯಮಾಡಿ ತಮ್ಮ ಸೀಟ್‌ನಲ್ಲಿ ಬಂದು ಕುಳಿತುಕೊಳ್ಳಿ. ನಿಮಗೆ ನಾನೊಂದು ಸಲಹೆ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ನೀವು ವಿರೋಧ ಪಕ್ಷದ ನಾಯಕರು, senior- most member. ದಯಮಾಡಿ ಮೊದಲು ತಾವು ತಮ್ಮ ಆಸನವನ್ನು ಅಲಂಕರಿಸಿ. ಆಮೇಲೆ ಮಾತನಾಡಿ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಸಭಾಧ್ಯಕ್ಷರ ಪೀಠದ ಬಳಿ ತೆರಳಿ ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು : ಹತ್ತಾರು ಜನ ಒಮ್ಮೆಲೆ ಎದ್ದು ನಿಂತುಕೊಂಡು ಮಾತನಾಡುತ್ತಿದ್ದರೆ ಸದನ ನಡೆಯುವುದು ಹೇಗೆ ? ದಯಮಾಡಿ ಎಲ್ಲಾ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ : ಅದಕ್ಕೆ ಸರ್ಕಾರದಿಂದ ಉತ್ತರ ಕೊಡುತ್ತಿದ್ದೇವೆ, ದಯಮಾಡಿ ಕೇಳಿ.

(ಗೊಂದಲ)

ಅಧ್ಯಕ್ಷರು : ತಾವು ಹೌಸ್‌ನಲ್ಲಿ ಕ್ಷಮೆಯೇ ಕೇಳಬೇಡಿ ಎಂದು ಹೇಳಿದರೆ ಹೇಗೆ?

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ...... ಮಿನಿಸ್ಟರ್‌ಗಳು ಇಲ್ಲಿ ಕ್ಷಮೆ ಕೇಳಿಕೊಂಡು ಇರಲಿ,ಅಲ್ಲಿ ಅವರುಗಳು ಮೆರೆಯಲಿ.

ಶ್ರೀ ಎಂ.ಪಿ.ಪ್ರಕಾಶ್ : ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು : ಮೊದಲು ನೀವುಗಳು ಕುಳಿತುಕೊಳ್ಳಿ. ಕುಳಿತುಕೊಂಡು ಅವರು ಹೇಳುವುದನ್ನು ಕೇಳಿ.

ಶ್ರೀ ಎಂ.ಪಿ.ಪ್ರಕಾಶ್ : ದಯವಿಟ್ಟು ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಿ. ನೀವು ಸರ್ಕಾರದ ಗಮನಕ್ಕೆ ತಂದಿದ್ದೀರಿ. ಇದಕ್ಕೆ ಉತ್ತರ ಕೊಡಲು ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? ನಿಮ್ಮ ಉದ್ದೇಶವೇನು?

(ಗೊಂದಲ)

ಅಧ್ಯಕ್ಷರು : ..... ತಾವುಗಳು ಇಲ್ಲಿ ಕುಳಿತುಕೊಳ್ಳಬೇಕು. ಕುಳಿತುಕೊಂಡು ಚರ್ಚೆ ಮಾಡಬೇಕು.ಅವರೇನು ಹೇಳುತ್ತಾರೋ ಅದನ್ನು ಕೇಳಬೇಕು. ಅದಕ್ಕೇನು ಉತ್ತರ ಹೇಳಬೇಕು. ಈ ತರಹ ಆದರೆ ಹೇಗೆ? ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಅದರ ಬಗ್ಗೆ ನಾನು ಕಾಮೆಂಟ್ ಮಾಡಲಾರೆ. ಆದರೆ ತಾವೆಲ್ಲಾ ದಯಮಾಡಿ ಸಹಕರಿಸಬೇಕು.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ನಿಮ್ಮ ಆಸನಕ್ಕೆ ಹೋಗಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ದಯಮಾಡಿ ತಾವು ಈ ಆಹ್ವಾನ ಪತ್ರಿಕೆಯನ್ನು ನೋಡಬೇಕು.

(ಗೊಂದಲ)

ಅಧ್ಯಕ್ಷರು : ನಾನು ಹೇಳುವುದೇನೆಂದರೆ, ಇದು ಬಹಳ ಗಂಭೀರವಾದಂತಹ ವಿಚಾರ. ಆಯಾ ಕ್ಷೇತ್ರದಲ್ಲಿ ಆ ಕ್ಷೇತ್ರದ ಶಾಸಕರು ಅಧ್ಯಕ್ಷತೆ ವಹಿಸುವಂತಾದ್ದು ಮೊದಲಿನಿಂದಲೂ ನಡೆದುಕೊಂಡು ಬಂದಿರತಕ್ಕಂಥ ಒಂದು ಪರಂಪರೆ ಮತ್ತು ಸಂಪ್ರದಾಯವಾಗಿದೆ. ಅದು ಉಲ್ಲಂಘನೆಯಾಗಿದ್ದರೆ, ಅಧಿಕಾರಿಗಳು ತಮಗೆ ಇಷ್ಟ ಬಂದ ರೀತಿಯಲ್ಲಿ ವರ್ತನೆ ಮಾಡುತ್ತಿದ್ದರೆ, ಅವರ ಬಗ್ಗೆ ಕಠಿಣವಾದ ನಿಲುವನ್ನು ತೆಗೆದುಕೊಳ್ಳಬೇಕಾದುದು ಸರ್ಕಾರದ ಕರ್ತವ್ಯ.

ಶ್ರೀ ಎಂ.ಪಿ.ಪ್ರಕಾಶ್ : ಸರ್ಕಾರದಿಂದ ಉತ್ತರ ಕೊಡುತ್ತೇವೆ.

ಅಧ್ಯಕ್ಷರು : ದಯಮಾಡಿ ನನ್ನ ವೈಯಕ್ತಿಕ ಅಭಿಪ್ರಾಯ ಹೇಳುತ್ತೇನೆ. ನಂತರ ಸರ್ಕಾರದಿಂದ ಹೇಳಿ.

ಶ್ರೀ ಎಂ.ಪಿ.ಪ್ರಕಾಶ್ : ನಿಮ್ಮ ಅಭಿಪ್ರಾಯವನ್ನು ನಾವು ಗೌರವಿಸುತ್ತೇವೆ. ತಮ್ಮ ಅಭಿಪ್ರಾಯಕ್ಕೆ ಸರ್ಕಾರದ ಸಹಮತ ಕೂಡ ಇದೆ. ಮಾನ್ಯ ಸದಸ್ಯರು ಪ್ರಸ್ತಾಪಿಸಿರತಕ್ಕಂಥದ್ದು ಬಹಳ ಪ್ರಮುಖವಾದ ಪ್ರಶ್ನೆ. ಜನಪ್ರತಿನಿಧಿಗಳು ಯಾರೇ ಆಗಿರಲಿ, ಅವರಿಗೆ ಗೌರವ ತೋರಿಸತಕ್ಕಂಥದ್ದು, ಅದು ಸಂಪ್ರದಾಯ, ಕರ್ತವ್ಯ ಕೂಡ. ಈ ಬಗ್ಗೆ ಸುತ್ತೋಲೆಗಳು ಕಾಲಕಾಲಕ್ಕೆ ಹೋಗಿವೆ. ಯಾರು ಇಂತಹ ಸುತ್ತೋಲೆಗಳನ್ನು ಕಡೆಗಣಿಸಿ ನಿರ್ಧಾರ ಮಾಡಿರುತ್ತಾರೋ, ಅವರ ಬಗ್ಗೆ ಕ್ರಮಗಳನ್ನು ಕೈಗೊಳ್ಳುತ್ತೇವೆ. ಮುಂದೆ ಈ ಲೋಪ ಆಗಲಾರದಂತೆ ಎಚ್ಚರಿಕೆವಹಿಸುತ್ತೇವೆ. ಕರ್ತವ್ಯ ನಿರ್ವಹಿಸುವಲ್ಲಿ ಆಗಿರತಕ್ಕಂಥ ಲೋಪಕ್ಕೆ ಸರ್ಕಾರ ಕ್ಷಮೆ ಕೂಡ ಕೇಳುತ್ತದೆ. ಕ್ಷಮೆ ಕೇಳುವಂತಾದ್ದರಲ್ಲಿ ತಪ್ಪೇನಿಲ್ಲ. ಸರ್ಕಾರದ ಅಧಿಕಾರಿ ಎಂದರೆ ಅದು ಸರ್ಕಾರವೇ. ಆ ಕಾರಣಕ್ಕಾಗಿಯೇ, ಇಂತಹ ಲೋಪ ಏನಾದರು ಆಗಿರುವಂತಾದ್ದಕ್ಕೆ, ಯಾರ್‍ಯಾರು ಇದಕ್ಕೆ ಕಾರಣರಿದ್ದಾರೋ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತೊಮ್ಮೆ ಈ ಬಗ್ಗೆ ಸುತ್ತೋಲೆಯನ್ನು ಕಳುಹಿಸಿಕೊಡುತ್ತೇವೆ. ಇಂತಹ ವಿಚಾರಗಳು ಪದೇ ಪದೇ ಚರ್ಚೆಯಾಗದಂತೆ ನೋಡಿಕೊಳ್ಳತಕ್ಕಂತಹ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತೇವೆ.

ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ.......

ಅಧ್ಯಕ್ಷರು : ಮಾನ್ಯ ಸಚಿವರು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರಲ್ಲಾ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಮ್ಮ ಮಂತ್ರಿಗಳ ಸೌಜನ್ಯವನ್ನು, ಈ ಸರ್ಕಾರದ ಸೌಜನ್ಯವನ್ನು ಅಧಿಕಾರಿಗಳು ಬಹಳ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಮಾನ್ಯ ಕಂದಾಯ ಸಚಿವರ ಬಗ್ಗೆ ನಮಗೆ ಅತ್ಯಂತ ಹೆಚ್ಚು ಗೌರವ ಇರುವುದರಿಂದ, ತಾವು ಕ್ಷಮೆ ಕೇಳುವುದು ಬೇಡ. ಕ್ರಮ ಜರುಗಿಸುತ್ತೇವೆ ಎನ್ನುವಂತಹ ಒಂದು ಮಾತನ್ನು ಅವರು ಹೇಳಿದ್ದರೆ ಸಾಕಾಗಿತ್ತು...........

ಅಧ್ಯಕ್ಷರು : ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಅವರು ಹೇಳಿದ್ದಾರಲ್ಲಾ.

ಶ್ರೀ ಜೆ.ಸಿ: ಮಾಧುಸ್ವಾಮಿ : ಯಾರೋ ಮಾಡಿದ ಪಾಪವನ್ನು ತಾವು ಹೊತ್ತುಕೊಂಡರೆ ಅವರು ತಮ್ಮ ಹತೋಟಿಗೆ ಬರುವುದಿಲ್ಲ ಸ್ವಾಮಿ. ಅವರಿಗೇನೂ ಜವಾಬ್ದಾರಿಯೇ ಇಲ್ಲದಂತಾಗುತ್ತದೆ. ತಾವು ಸಭ್ಯರು, ಒಳ್ಳೆಯವರು ಎಲ್ಲಾ ಮಾತಿಗೂ ನೀವೇ ಕ್ಷಮೆ ಕೇಳುವುದಾದರೆ, ನೀವು ಅವರಿಗೇನು ಮಾಡುತ್ತೀರಿ ಎಂಬುದು ನಮಗೆ ಗೊತ್ತಾಗಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾವು ಹೇಳಿದ್ದು ಇಷ್ಟೇ. ಮಾನ್ಯ ಸಚಿವರು ಕ್ಷಮೆ ಕೇಳತಕ್ಕಂಥ ಅವಶ್ಯಕತೆ ಇಲ್ಲ. ತಪ್ಪು ಮಾಡಿರತಕ್ಕಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಯಾರೋ ಅಧಿಕಾರಿ ಮಾಡಿದ ತಪ್ಪಿಗೆ ಸರ್ಕಾರ ಜವಾಬ್ದಾರಿ ಹೊರುವುದಕ್ಕಾಗುತ್ತದೆಯೇ ?

ಅಧ್ಯಕ್ಷರು : ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನತಕ್ಕಂಥ ಸ್ಪಷ್ಟವಾದ ವಿಚಾರವನ್ನು ಅವರು ಹೇಳಿದ್ದಾರೆ. ಇಲ್ಲಿಗೆ ನಾವು ಇದನ್ನು ಮುಗಿಸೋಣ.

ಶ್ರೀ ವಾಟಾಳ್ ನಾಗರಾಜ್ : ನಾನು ತಮಗೆ ಕಳುಹಿಸಿದ ಆಮಂತ್ರಣ ಪತ್ರಿಕೆಯನ್ನು ನೋಡಿದಿರಾ? ದಯಮಾಡಿ ಅದನ್ನು ನೋಡಿ. ಅದನ್ನು ನೋಡಲೆಂದೇ ನಾನು ನಿಮಗೆ ಅದನ್ನು ಕಳುಹಿಸಿದೆ. ನಾವು ಅಲ್ಲಿಗೆ ಹೋಗಿ ಮಾತನಾಡುವಂತಿಲ್ಲ. ನಾವು ಅಲ್ಲಿ ಕೇವಲ ಆಹ್ವಾನಿತರು ಮಾತ್ರ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಶ್ರೀರಾಮರೆಡ್ಡಿಯವರು ತಮ್ಮ ದೃಷ್ಟಿಕೋನದಲ್ಲಿ ಆ ಮಾತನ್ನು ಹೇಳುತ್ತಿರಬಹುದು. ಆದರೆ ನಾನು ಹೇಳಿರತಕ್ಕಂಥದ್ದು ಏನೆಂದರೆ, ಸರ್ಕಾರದಲ್ಲಿ ಯಾರೇ ಕರ್ತವ್ಯದಲ್ಲಿ ಲೋಪ ಮಾಡಿದ್ದರೆ, ಸದಸ್ಯರಿಗೆ ಮನನೋಯಿಸುವಂತಹ ರೀತಿಯಲ್ಲಿ ವರ್ತನೆ ಮಾಡಿದ್ದರೆ, ಅದಕ್ಕೆ ಸರ್ಕಾರ ಕ್ಷಮೆ ಕೇಳತಕ್ಕಂಥದ್ದು ತಪ್ಪಲ್ಲ. ಮಾನ್ಯ ಶ್ರೀರಾಮರೆಡ್ಡಿಯವರು ಅಧಿಕಾರಕ್ಕೆ ಬಂದಾಗ ಹೇಗೆ ನಿರ್ಣಯ ತೆಗೆದುಕೊಳ್ಳುತ್ತಾರೋ, ಆ ರೀತಿ ತೆಗೆದುಕೊಳ್ಳಲಿ. ಆದರೆ ವೈಯಕ್ತಿಕವಾಗಿ ನಾನು ಹೇಳುವುದೇನೆಂದರೆ, ಸರ್ಕಾರದ ಯಾವುದೇ ಅಧಿಕಾರಿ ತಪ್ಪು ಮಾಡಿದ್ದರೂ ಕೂಡ ಸರ್ಕಾರ ಅದರ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಆ ದೃಷ್ಟಿಯಿಂದ ಅವರು ಮಾಡಿರತಕ್ಕಂಥದ್ದು ತಪ್ಪು, ಅದಕ್ಕಾಗಿ ಕ್ಷಮೆ ಕೇಳುತ್ತೇವೆ ಎಂದು ಹೇಳಿದ್ದೇವೆ. ಅದನ್ನೇ ಒಂದು ದೊಡ್ಡ ಲೋಪವೆಂದು ಎತ್ತಿ ತೋರಿಸತಕ್ಕಂಥ ಅಗತ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಕ್ಷಮೆ ಕೇಳತಕ್ಕಂಥದ್ದು ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಕ್ಷಮೆ ಕೇಳಿದ್ದೀರಿ, ಸಂತೋಷ. ಕೇವಲ ಕ್ಷಮೆ ಕೇಳುವುದರಿಂದೇನೂ ನಮಗೆ ಸಮಾಧಾನವಾಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತೇವೆ.

ಶ್ರೀ ವಾಟಾಳ್ ನಾಗರಾಜ್ : ನಾನು ಆಹ್ವಾನ ಪತ್ರಿಕೆಯನ್ನು ಮಾನ್ಯ ಅಧ್ಯಕ್ಷರ ಮೂಲಕ ತಮಗೆ ಕಳುಹಿಸಿಕೊಟ್ಟಿದ್ದೇನೆ. ತಾವು ದಯಮಾಡಿ ಅದನ್ನು ಸ್ವಲ್ಪ ನೋಡಿ. ಈ ಶಾಸನಸಭೆಗೆ ಶಾಸಕರಿಗೆ ಆಗಿರತಕ್ಕಂಥ ಅಗೌರವವು ಬರೀ ಕ್ಷಮಾಪಣೆಯಲ್ಲಿ ಮುಗಿಯುವುದು ಅಲ್ಲ. ತಕ್ಷಣದಿಂದ ಇದರ ಬಗ್ಗೆ ಒಂದು ತನಿಖೆ ಆರಂಭವಾಗಲಿ. ಯಾವ ಯಾವ ಕ್ಷೇತ್ರದಲ್ಲಿ ಏನೇನು ಆಗಿದೆ, ಯಾವ ಯಾವ ಅಧಿಕಾರಿ ಈ ರೀತಿ ಅಕ್ರಮವಾಗಿ ನಡೆದುಕೊಂಡಿದ್ದಾರೆ, ಅವರ ಬಗ್ಗೆ ಕ್ರಮ ತೆಗೆದುಕೊಳ್ಳಿ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಏನಾಗಿದೆ ಎಂದು ನಾನು ತಮಗೆ ಹೇಳುತ್ತೇನೆ. ಆಗಸ್ಟ್ 15ರ ಕಾರ್ಯಕ್ರಮಕ್ಕೆ ನನಗೆ ಅಧ್ಯಕ್ಷತೆ ಎಂದು ಹಾಕುತ್ತಾರೆ. ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ನನ್ನ ಅಧ್ಯಕ್ಷತೆ ಇಲ್ಲ. ಇದು ಹುಡುಗಾಟವಾ ? ಇದು ಎಲ್ಲಿಗೆ ತಲುಪಬೇಕು ? ಈ ವ್ಯವಸ್ಥೆಯನ್ನು ನಾವು ಸುಮಾರು ವರ್ಷಗಳಿಂದ ನೋಡಿದ್ದೇವೆ, ಆ ಕ್ಷೇತ್ರದ ಯಾವುದೇ ಶಾಸಕರು ಇರಲಿ ಅವರೇ ಅಧ್ಯಕ್ಷತೆ ವಹಿಸಬೇಕೆಂದು ಸುಮಾರು 30 ವರ್ಷಗಳ ಇತಿಹಾಸದಿಂದ ನಡೆದುಕೊಂಡು ಬಂದಿದೆ. ಇದು ಹೊಸದೇನೂ ಅಲ್ಲ. ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಇದೇ ಸದನದಲ್ಲಿ ತೀರ್ಮಾನವಾಗಿ, ಯಾವುದೇ ಶಾಸಕರು ಆ ಕ್ಷೇತ್ರದಲ್ಲಿ ಇರತಕ್ಕಂತಹವರು ಅದರ ಅಧ್ಯಕ್ಷತೆ ವಹಿಸಬೇಕು. ಮುಖ್ಯಮಂತ್ರಿಗಳು ಬಂದರೆ ಮಾತ್ರ ಉದ್ಘಾಟನೆ ಮಾಡುವುದು, ಅದು ಇಲ್ಲವೆಂದರೆ, ಅಧ್ಯಕ್ಷತೆ ವಹಿಸಿದವರ ಕೆಳಗಡೆ ಉಳಿದವರು ಎಲ್ಲಾ ಬರುವುದು. ಆದರೆ ಚಾಮರಾಜ ನಗರದಲ್ಲಿ ಗಣರಾಜ್ಯೋತ್ಸವ ಕಾರ್ಯಕ್ರಮ ನಡೆಯುವಾಗ ನಾವು ಯಾರೂ ಅಲ್ಲಿ ಇಲ್ಲ. ಪಾರ್ಲಿಮೆಂಟ್ ಮೆಂಬರ್ ಮಾತನಾಡುವ ಹಾಗೆ ಇಲ್ಲ, ವಿಧಾನಸಭಾ ಸದಸ್ಯರು ಮಾತನಾಡುವ ಹಾಗೆ ಇಲ್ಲ, ವಿಧಾನ ಪರಿಷತ್ತಿನ ಸದಸ್ಯರು ಒಬ್ಬರೂ ಮಾತನಾಡುವ ಹಾಗೆ ಇಲ್ಲ. ಈ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ತಾವು ಕೂಡಲೇ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಇಂತಹ ಅನೇಕ ಪ್ರಕರಣಗಳು ಈ ಸದನದಲ್ಲಿ ಹಾಗೂ ಮೇಲ್ಮನೆಯಲ್ಲಿ ನಡೆದಿರತಕ್ಕಂಥದ್ದು ಇದೆ. ಆ ಕಾರಣಕ್ಕಾಗಿ ಅನೇಕ ಬಾರಿ ಸುತ್ತೋಲೆಗಳನ್ನು ಕೊಟ್ಟಿದ್ದೇವೆ. ಮತ್ತು ಇಂತಹ ವಿಚಾರಗಳಲ್ಲಿ ಲೋಪದೋಷಗಳು ಎತ್ತಿದಂತಹ ಸಂದರ್ಭದಲ್ಲಿ ಪ್ರಿವಿಲೇಜ್ ಕಮಿಟಿಗೆ ಸುವೋಮೋಟೋ ರೆಫರ್ ಮಾಡಿರುವುದು ಇದೆ. ನಾನೇ ಈ

ವಿಚಾರವನ್ನು ಮೇಲ್ಮನೆಯಲ್ಲಿ ಎತ್ತಿದಂತಹ ಸಂದರ್ಭದಲ್ಲಿ ಪ್ರಿವಿಲೇಜ್ ಕಮಿಟಿಯ ಮಾನ್ಯ ನಾಣಯ್ಯನವರು ಈ ಬಗ್ಗೆ ಚರ್ಚೆ ಮಾಡಿರತಕ್ಕಂತಹ ಉದಾಹರಣೆ ಇದೆ. ತಾವು ಸದಸ್ಯರುಗಳು ಏನಾದರೂ ಪ್ರಿವಿಲೇಜ್ ಕಮಿಟಿಗೆ ನೋಟೀಸ್ ಕೊಡಬಹುದು. ಇಲ್ಲದಿದ್ದರೆ ಮಾನ್ಯ ಅಧ್ಯಕ್ಷರೇ, ಇದನ್ನು ಸುವೋಮೋಟೋ ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಆಯಿತು ರೆಫರ್ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್ : ಇಷ್ಟನ್ನು ಮಾತ್ರ ಅರಿಕೆ ಮಾಡುತ್ತಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಈ ಲೋಪದೋಷಗಳಿಗೆ ಯಾರು ಕಾರಣ, ಆ ಕಾರಣಗಳು ಏನು ಈ ವಿಚಾರದಲ್ಲಿ ತನಿಖೆ ನಡೆಸುತ್ತೇವೆ. ಆ ವಿಚಾರದಲ್ಲಿ ಅವರ ಬಗ್ಗೆ ವರದಿಯನ್ನೂ ಕೂಡ ತರಿಸಿಕೊಡುತ್ತೇವೆ. ಮಾನ್ಯ ಸದಸ್ಯರು ಈ ವಿಚಾರದಲ್ಲಿ ತೃಪ್ತರಾಗಿದ್ದಾರೆಂದು ನಾನು ನಂಬಿದ್ದೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ.

2. ಪ್ರಶ್ನೋತ್ತರ

(ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಸಾಗರದ ಪ್ರಸಿದ್ಧ ಗಂಧದ ಕೆತ್ತನೆಯ ಕುಶಲಕರ್ಮಿಗಳಿಗೆ ಶ್ರೀಗಂಧದ ಸರಬರಾಜು

31(920) ಶ್ರೀ ಗೋಪಾಲ ಕೃಷ್ಣ ಬೇಳೂರು (ಸಾಗರ) : ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಶ್ರೀಗಂಧದಿಂದ ಕೆತ್ತನೆ ಮಾಡುವ ಕರಕುಶಲಕರ್ಮಿ ಕುಟುಂಬಗಳ ಸಂಖ್ಯೆ ಎಷ್ಟಿವೆ ;

ಆ) ಇವರುಗಳಿಗೆ ರಾಜ್ಯ ಸರ್ಕಾರವು ನೀಡುತ್ತಿರುವ ಶ್ರೀಗಂಧದ ಮರದ ಪ್ರಮಾಣ ಎಷ್ಟು ?

ಇ) ಶ್ರೀಗಂಧದ ಸರಬರಾಜಿಗೆ ಎಷ್ಟು ಮೌಲ್ಯದ ದರ ನಿರ್ಧಾರ ಮಾಡಲಾಗಿದೆ;

ಈ) ಇದು ಈ ಬಡ ಕರಕುಶಲಕರ್ಮಿಗಳಿಗೆ ದುಬಾರಿಯಾಗುವುದಿಲ್ಲವೇ ;

ಉ) ಇದನ್ನು ಇನ್ನೂ ಹೆಚ್ಚಿನ ರಿಯಾಯ್ತಿ ನೀಡಲು ಸರ್ಕಾರಕ್ಕಿರುವ ತೊಂದರೆಗಳೇನು ;

ಊ) ಶಿವಮೊಗ್ಗ ಜಿಲ್ಲೆ, ಸಾಗರದಲ್ಲಿ ಗಂಧದ ಸಂಕೀರ್ಣ ಸ್ಥಾಪಿಸುವ ವಿಚಾರ ಸರ್ಕಾರದ ಮುಂದಿದೆಯೇ ;

ಋ) ಇದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

ೠ) ಗಂಧ ಸಂಕೀರ್ಣ ಸ್ಥಾಪನೆಯ ಉದ್ದೇಶಗಳೇನು ಹಾಗೂ ಇದರಿಂದ ಆಗುವ ಪ್ರಯೋಜನಗಳೇನು ;

ಎ) ಎಷ್ಟು ಜನರಿಗೆ ಇದರಿಂದ ಉದ್ಯೋಗ ನೀಡಿದಂತಾಗುತ್ತದೆ ;

ಏ) ಇದರಿಂದ ಸರ್ಕಾರಕ್ಕೆ ಬರುವ ಲಾಭವೆಷ್ಟು ;

ಐ) ಸದರಿ ಸಂಕೀರ್ಣವನ್ನು ಯಾವಾಗ ಸ್ಥಾಪಿಸಲಾಗುತ್ತದೆ (ಯೋಜನೆಯ ವಿವರಗಳನ್ನು ಒದಗಿಸುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು):

ಅ) ರಾಜ್ಯದಲ್ಲಿ ಸುಮಾರು 3000 ಕುಶಲಕರ್ಮಿಗಳು ಶ್ರೀಗಂಧ ಕಲೆಯಲ್ಲಿ ತೊಡಗಿರುತ್ತಾರೆ. ಅವರ ಪೈಕಿ 938 ಕುಶಲಕರ್ಮಿಗಳು ನಿಗಮದಲ್ಲಿ ನೋಂದಾಯಿತರಾಗಿರುತ್ತಾರೆ.

ಆ) 2002–03 : 10.00 ಮೆ.ಟನ್
2003–04 : 10.00 ಮೆ.ಟನ್
2004–05 : 7.48 ಮೆ.ಟನ್
(ಡಿಸೆಂಬರ್ 2004 ರವರೆಗೂ)

ಇ) ಅರಣ್ಯ ಇಲಾಖೆಯು ನಿಗಮಕ್ಕೆ ಶ್ರೀಗಂಧವನ್ನು ಪ್ರತಿ ಮೆ.ಟನ್‌ಗೆ 4.40 ಲಕ್ಷ ರೂ. (ತೆರಿಗೆ ಮತ್ತು ಇತರೆ ವೆಚ್ಚಗಳು) ಗಳಂತೆ ನೀಡುತ್ತದೆ. ನಿಗಮವು ಕುಶಲಕರ್ಮಿಗಳಿಗೆ ಶ್ರೀಗಂಧವನ್ನು ಪ್ರತಿ ಕೆ.ಜಿ.ಗೆ ರೂ. 640.00 ರಂತೆ ಹಂಚಲಾಗುತ್ತಿದೆ.

ಈ) ಇಲ್ಲ. ಅರಣ್ಯ ಇಲಾಖೆಯು ಶ್ರೀಗಂಧವನ್ನು ರಿಯಾಯಿತಿ ದರದಲ್ಲಿ ನಿಗಮಕ್ಕೆ ಸರಬರಾಜು ಮಾಡುತ್ತಿದೆ.

ಉ) ಉದ್ಭವಿಸುವುದಿಲ್ಲ.

ಊ) ನಿಗಮವು 1976ರಲ್ಲಿ ಸಾಗರ ಕೆಳದಿ ರಸ್ತೆಯಲ್ಲಿ ಶ್ರೀಗಂಧ ಕಲಾ ಸಂಕೀರ್ಣವನ್ನು ಸ್ಥಾಪಿಸಿರುತ್ತದೆ.

ಋ) ಉದ್ಭವಿಸುವುದಿಲ್ಲ.

ೠ) ಕುಶಲಕರ್ಮಿಗಳ ಕಚ್ಚಾವಸ್ತುಗಳ ಸರಬರಾಜು, ತರಬೇತಿ ಕಾರ್ಯಕ್ರಮ ವಿನ್ಯಾಸ ಅಭಿವೃದ್ಧಿ ಹಾಗೂ ಅವರುಗಳು ತಯಾರಿಸಿದ ವಸ್ತುಗಳ ಖರೀದಿ, ವಸತಿ ಇತರ ಸೌಲಭ್ಯಗಳನ್ನೂ ಸಂಕೀರ್ಣದಲ್ಲಿ ಒದಗಿಸಲಾಗಿದೆ. ಇದರಿಂದ ಕುಶಲಕರ್ಮಿಗಳಿಗೆ ಆದಾಯಪೂರ್ವಕ ಉದ್ಯೋಗ ಒದಗಿಸಿದಂತಾಗುತ್ತದೆ.

ಎ) ಸಾಗರದಲ್ಲಿ ನಿಗಮದ ಶ್ರೀಗಂಧ ಕಲಾ ಸಂಕೀರ್ಣದಲ್ಲಿರುವ ವಿವಿಧ ಸೌಲಭ್ಯಗಳನ್ನು ಉಪಯೋಗಿಸಿಕೊಂಡಿ 248 ಕುಶಲಕರ್ಮಿಗಳು ಆದಾಯಪೂರಕ ಉದ್ಯೋಗ ಪಡೆದಿರುತ್ತಾರೆ.

ಏ) ನಿಗಮದ ಮಾರಾಟ ಮಳಿಗೆಗಳಲ್ಲಿ ಮಾರಾಟವಾಗುವ ಕರಕುಶಲ ವಸ್ತುಗಳ ಮೇಲೆ ವಿಧಿಸಿರುವ ಮಾರಾಟ ತೆರಿಗೆಯನ್ನು ಸರ್ಕಾರಕ್ಕೆ ಪಾವತಿಸಲಾಗುತ್ತಿದೆ. ಸಾಗರದ ಶ್ರೀಗಂಧದ ಸಂಕೀರ್ಣದಲ್ಲಿ ಉತ್ಪಾದಿಸುವ ವಸ್ತುಗಳನ್ನು ಖರೀದಿಸಿ ಮಾರಾಟ ಮಾಡಲು 2003–04ರವರೆಗೂ ಮಾರಾಟ ತೆರಿಗೆ ವಿನಾಯಿತಿ ಜಾರಿಯಲ್ಲಿದ್ದು, ಇದನ್ನು ದಿನಾಂಕ : 1–8–2004 ರಿಂದ ರದ್ದುಪಡಿಸಿರುವುದರಿಂದ ಡಿಸೆಂಬರ್ 2004ರ ಅಂತ್ಯಕ್ಕೆ ಸರ್ಕಾರಕ್ಕೆ ಒಟ್ಟು ರೂ. 3.31 ಲಕ್ಷ ಮಾರಾಟ ತೆರಿಗೆ ಸಂದಾಯವಾಗಿದೆ.

ಐ) ಉದ್ಭವಿಸುವುದಿಲ್ಲ.

ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಲೂರು : ಮಾನ್ಯ ಅಧ್ಯಕ್ಷರೆ, ಸಚಿವರು ಉತ್ತರ ಒದಗಿಸಿದ್ದಾರೆ, ಆದರೆ ಸಾಗರ ಕ್ಷೇತ್ರದಲ್ಲಿ ಗಂಧದ ಸಂಕೀರ್ಣ ಈಗಾಗಲೇ ಮುಚ್ಚುವ ಪರಿಸ್ಥಿತಿಯಲ್ಲಿ ಇದೆ. ಕಾರಣ ಒಬ್ಬ ವ್ಯಕ್ತಿಗೆ ವರ್ಷಕ್ಕೆ 50 ರಿಂದ 60 ಕೇಜಿ ಗಂಧವನ್ನು ಕೊಡುತ್ತಿದ್ದಾರೆ. ಅದನ್ನು ನಂಬಿಕೊಂಡು ಅವರು ಜೀವನ ಮಾಡುವುದಕ್ಕಾಗುತ್ತಿಲ್ಲ. ಆದರೆ ಇಲ್ಲಿ ಇವರ ಪ್ರಕಾರ ನಾವು ಗಂಧ ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ವಿವರಣೆ ಕೊಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಮ್ಮ ಪ್ರಶ್ನೆ ಎಂಬುದು ನನಗೆ ಗೊತ್ತಾಗಲಿಲ್ಲ.

ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಲೂರು : ಒಂದು ಕುಟುಂಬಕ್ಕೆ ಒಂದು ವರ್ಷಕ್ಕೆ 60 ರಿಂದ 80 ಕೇಜಿ ಗಂಧ ಕೊಡುತ್ತಿದ್ದಾರೆ. ಅದು ಅವರಿಗೆ ಸಾಕಾಗುತ್ತಿಲ್ಲ. ತಾವು ಮೊನ್ನೆ ಸಾಗರ ಕ್ಷೇತ್ರಕ್ಕೆ

ಬಂದಾಗ ಅಲ್ಲಿಗೆ ಭೇಟಿ ಕೊಟ್ಟಿದ್ದೀರಿ. ಅಲ್ಲಿಯ ಪರಿಸ್ಥಿತಿ ನೀವು ನೋಡಿದ್ದೀರಿ. ಅದು ಮುಚ್ಚುವ ಪರಿಸ್ಥಿತಿಯಲ್ಲಿ ಇದೆ. ಇದರ ಬಗ್ಗೆ ತಾವು ಉತ್ತರ ಕೊಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕರ್ನಾಟಕ ರಾಜ್ಯದಲ್ಲಿ ಗಂಧದ ಮರಕ್ಕೆ ಸಂಬಂಧಪಟ್ಟಂತೆ ಸುಮಾರು 3000 ಜನ ಕುಶಲ ಕರ್ಮಿಗಳು ಇದ್ದಾರೆ. ಇದರಲ್ಲಿ ಸುಮಾರು 938 ಜನರಿಗೆ ನಮ್ಮ ಸರ್ಕಾರದಿಂದ ಗಂಧವನ್ನು ಕೊಟ್ಟು ನೀವು ಕೆಲಸ ಮಾಡಿ ಎಂದು ಐಡೆಂಟಿಫಿಕೇಷನ್ ಮಾಡಿ ಕಾರ್ಡ್ ಕೊಟ್ಟಿದ್ದೇವೆ. ಮಾನ್ಯ ಗೋಪಾಲಕೃಷ್ಣರವರು ಕೇಳಿದ ಹಾಗೆ ಸಾಗರದಲ್ಲಿ ಇರತಕ್ಕಂತಹ ನಮ್ಮ ಯೂನಿಟ್‌ಗೆ ನಾನು ಇತ್ತೀಚೆಗೆ ಸಾಗರಕ್ಕೆ ಭೇಟಿ ಕೊಟ್ಟಾಗ ಭೇಟಿ ಕೊಟ್ಟಿದ್ದೇನೆ. ಅಲ್ಲಿ ಶ್ರೀಗಂಧದ ಕುಶಲಕರ್ಮಿಗಳು ಕೆಲಸ ಮಾಡಲಿಕ್ಕೆ ಗಂಧದ ಕೊರತೆ ಇರತಕ್ಕಂಥದ್ದು ನನ್ನ ಗಮನಕ್ಕೆ ಬಂದಿದೆ. ಕಳೆದ ನಾಲ್ಕೈದು ವರ್ಷಗಳಿಂದ ಸಹಿತ ಶ್ರೀಗಂಧದ ಉತ್ಪನ್ನ ಕರ್ನಾಟಕದಲ್ಲಿ ಕಡಿಮೆಯಾಗಿರುವುದರಿಂದ ಮತ್ತು ಅರಣ್ಯ ಇಲಾಖೆಯಿಂದ ಕೈಗಾರಿಕಾ ಇಲಾಖೆಗೆ ಕೊಡತಕ್ಕಂತಹ ಗಂಧ ಸಹಿತ ಕಡಿಮೆ ಆಗಿರುವುದರಿಂದ ಕುಶಲಕರ್ಮಿಗಳಿಗೆ ಕೊಡತಕ್ಕಂತಹ ಗಂಧ ಸಹಿತ ಕಡಿಮೆ ಆಗಿರುವುದರಿಂದ ಕುಶಲಕರ್ಮಿಗಳಿಗೆ ಕೊಡತಕ್ಕಂತಹ ಗಂಧದ ಅನುಪಾತದಲ್ಲಿ ಕೂಡ ಕಡಿಮೆಯಾಗಿದೆ. ಕಳೆದ ವರ್ಷ 10 ಟನ್ ಗಂಧವನ್ನು ಅರಣ್ಯ ಇಲಾಖೆಯವರು ಕೊಟ್ಟಿದ್ದರು. ಅದರ ಹಿಂದೆ 10 ಟನ್ ಕೊಟ್ಟಿದ್ದರು. ಈ ವರ್ಷ ಡಿಸೆಂಬರ್‌ಗೆ ಏಳೂವರೆ ಟನ್ ಕೊಟ್ಟಿದ್ದಾರೆ. ನಾನು ಪ್ರಯತ್ನ ಮಾಡುತ್ತಿದ್ದೇನೆ. ನಮ್ಮ ರಾಜ್ಯದ ಅರಣ್ಯ ಇಲಾಖೆಯಿಂದ ಹೆಚ್ಚಿನ ಗಂಧವನ್ನು ತಂದು ಕುಶಲಕರ್ಮಿಗಳಿಗೆ ಕೊಡಬೇಕು. ಏಕೆಂದರೆ, ಬೇಡಿಕೆ ಇದೆ. ಆದರೆ ಗಂಧದ ಉತ್ಪನ್ನ ಕಡಿಮೆಯಾಗಿರುವುದರಿಂದ ಗಂಧವನ್ನು ಕೊಡುವುದು ಕಷ್ಟವಾಗುತ್ತದೆ. ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ ಸ್ವಲ್ಪ ಮಟ್ಟಿಗೆ ಗಂಧ ಸಿಗುತ್ತದೆ. ಆ ಗಂಧಕ್ಕೆ ನಾವು ಕೊಡತಕ್ಕಂತಹ ಗಂಧಕ್ಕೆ ಸುಮಾರು 25 ರಿಂದ 30 ಲಕ್ಷ ರೂಪಾಯಿ ಕಾಸ್ಟ್ ವೇರಿಯೇಷನ್ ಆಗುತ್ತದೆ. ಅದನ್ನು ತೆಗೆದುಕೊಂಡು ಬಂದು ಇವರಿಗೆ ಅದೇ ರೇಟ್‌ನಲ್ಲಿ ನಾವು ಸಪ್ಲೆ ಮಾಡುತ್ತೇವೆ ಎಂದರೆ ಅದು ವರ್ಕ್ ಔಟ್ ಆಗುವುದಿಲ್ಲ. ಆದ್ದರಿಂದ ಒಂದಕ್ಕೆ ಬದಲಾಗಿ ಆಲ್ಟರ್ನೇಟಿವ್ ವುಡ್‌ನಲ್ಲಿ ಆರ್ಟಿಸಾನ್ ಡೆವಲಪ್‌ಮೆಂಟ್ ಮಾಡುವುದಕ್ಕೆ ನಾವು ಶೂನ್ಯ ಮರ ಎಂದು ಹೇಳುತ್ತೇವೆ. ಈ ರೀತಿ ಮರಗಳು ಕೊಟ್ಟು ಗಂಧದ ಬದಲಾಗಿ ಬೇರೆ ಮರಗಳಲ್ಲಿ ಈ ರೀತಿಯ ಕಲಾಕೃತಿಗಳು ಮಾಡಲಿಕ್ಕೆ ಅನುಕೂಲ ಮಾಡಲಿಕ್ಕೆ ಸಾಗರದಲ್ಲಿ ಇರತಕ್ಕಂತಹ ಯೂನಿಟ್‌ಗೆ ರಿವೈವ್ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಇವತ್ತಲ್ಲ ನಾಳೆ ಈ ತೊಂದರೆ ಇದ್ದೇ ಇರುತ್ತದೆ. ಗಂಧಕ್ಕೆ ಇವರು ಅವಲಂಬಿಸಿಕೊಂಡಿದ್ದಾರೆ ಈ ವರ್ಷದ ಮಟ್ಟಿಗೆ ಸ್ವಲ್ಪ ಸಮಸ್ಯೆ ಇರುವುದಿಲ್ಲ. ತಾತ್ಕಾಲಿಕವಾಗಿ ಮಾನ್ಯ ಗೌರವಾನ್ವಿತ ಸದಸ್ಯರು ಈ ಸಮಸ್ಯೆ ಗಮನಕ್ಕೆ ತಂದಿದ್ದಾರೆ. ಖಾಸಗಿಯಾಗಿ ಅನೇಕ ಜನ ಸದಸ್ಯರು ಮತ್ತು ಕುಶಲಕರ್ಮಿಗಳ ಸಂಘಟನೆ ಪ್ರತಿನಿಧಿಗಳು ಬಂದು ನನಗೆ ಭೇಟಿ ಮಾಡಿದ್ದಾರೆ. ನಾನು ಹೆಚ್ಚಿಗೆ ಗಂಧವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ ಭರವಸೆ ಕೊಡುವುದಕ್ಕಾಗುವುದಿಲ್ಲ, ಪ್ರಯತ್ನ ಮಾಡುತ್ತೇನೆ. ದೂರದೃಷ್ಟಿಯಿಂದಾಗಿ ಆಲ್ಟರ್ನೇಟಿವ್ ವುಡ್ ಮೇಲೆ ಇವರು ಅವಲಂಬಿಸಿಕೊಳ್ಳುವುದು ಒಳ್ಳೆಯದು.

ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಲೂರು : ವರ್ಷಕ್ಕೆ ನಾಲ್ಕು ಸಾರಿ ಆದರೂ ಅವರಿಗೆ ಗಂಧ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಾ, ಮಾರಾಟಕ್ಕಾಗಿ ಬೆಂಗಳೂರು ಮತ್ತು ಸಾಗರದಲ್ಲಿ ಒಂದು ಮಾರಾಟ ಮಳಿಗೆಯನ್ನೂ ಸಹ ತಾವು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಗಂಧದ ಸಂಕೀರ್ಣ ಇರುವುದು ಸಾಗರದಲ್ಲಿ ಮತ್ತು ಸಿರ್ಸಿಯಲ್ಲಿ. ನಾನು ಈ ವಿಷಯವನ್ನು ಹಿಂದಿನ ಸದನದಲ್ಲಿಯೂ ಸಾಕಷ್ಟು ಸಾರಿ ಪ್ರಸ್ತಾಪ ಮಾಡಿದ್ದೇನೆ, ಹಿಂದಿನ ಮುಖ್ಯ ಮಂತ್ರಿಗಳ ಬಳಿ ನಿಯೋಗ ತೆಗೆದುಕೊಂಡು ಹೋಗಿ ಭೇಟಿ ಮಾಡಿ ನಾವೆಲ್ಲಾ ಪ್ರಯತ್ನ ಮಾಡಿದ್ದೇವೆ. ಗಂಧದ ಕುಶಲ ಕರ್ಮಿಗಳ ಗೋಳು ಹೇಳ ತೀರವಾಗಿದೆ. ಗಂಧ ಕೊಡದೇ ಇರುವುದರಿಂದ ವಂಶಪಾರಂಪರ್ಯವಾಗಿ ಬೆಳೆಸಿಕೊಂಡು ಬಂದ ವೃತ್ತಿಗೆ ಕಷ್ಟವಾಗಿದೆ. ಎಷ್ಟು ಸುಂದರವಾಗಿ ಕೆತ್ತನೆ ಮಾಡುತ್ತಾರೆ, ನಮ್ಮ ವಿಧಾನ ಸಭೆಯನ್ನೇ ನೋಡುತ್ತೇವೆ, ಇದೆಲ್ಲಾ ಕುಶಲ ಕರ್ಮಿಗಳ ಒಂದು ಪ್ರಾವೀಣ್ಯತೆ. ಇದನ್ನು ರಕ್ಷಿಸಬೇಕು. ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿಸುವುದೇನೆಂದರೆ, ಅರಣ್ಯ ಇಲಾಖೆಯವರು ಹಿಡಿದು ಇಟ್ಟಿರುವ, ಸೀಜ್ ಮಾಡಿರುವ ಗಂಧದ ಕಟ್ಟಿಗೆಯ ಪ್ರಮಾಣ ಬಹಳ ದೊಡ್ಡದಾಗಿದೆ. ಇದು ಲಡ್ ಆಗುತ್ತಿದೆ. ಹೊರಳೆ ಹಿಡಿಯುತ್ತದೆ. ಅದಕ್ಕೆ ಯಾರೂ ಹೇಳುವವರು ಕೇಳುವವರು ಇಲ್ಲ. ಕೋರ್ಟ್ ಕೇಸ್‌ಗೆ ಏನು ಬೇಕು ಅದಕ್ಕೆ ಸ್ಯಾಂಪಲ್ ಇಟ್ಟುಕೊಂಡು ಉಳಿದ ಗಂಧವನ್ನು ರಿಲೀಸ್ ಮಾಡಿಕೊಟ್ಟರೆ ತಮಿಳುನಾಡಿನಿಂದ ತರಬೇಕಾಗಿಲ್ಲ. ಇನ್ನು ಎಲ್ಲಿಂದಲೋ ತರಬೇಕಾಗಿಲ್ಲ. ಕೋರ್ಟ್ ಕೇಸ್‌ನಲ್ಲಿರುವ ಗಂಧ ಏನಿದೆ ಅದನ್ನು ಕೇಸ್ ಮುಗಿಯುವವರೆಗೆ ಅಲ್ಲಿಯೇ ಬಿಟ್ಟರೆ ಹಾಳಾಗಿ ಹೋಗುತ್ತದೆ. ನಾನು ಹಿಂದಿನ ಮುಖ್ಯ ಮಂತ್ರಿಗಳಿಗೆ ಇದೇ ಸಲಹೆ ಕೊಟ್ಟಿದ್ದೇನೆ. ಕಾರಣ ಕೇಸ್ ಇರುವವರೆಗೆ ಅದನ್ನು ರಿಲೀಸ್ ಮಾಡುವುದಿಲ್ಲ. ರಿಲೀಸ್ ಮಾಡಿಸಿ ಕೊಡಿಸಿ ಆ ಕೇಸ್ ಮುಂದುವರೆಯಲ್ಲಿ ಅದರೆ ಇದನ್ನು ರಿಲೀಸ್ ಮಾಡಿಸಿ ಕೊಡಿ ಎಂದು ಹೇಳಿದ್ದೇವೆ. ಎರಡನೆಯದು ಅರಣ್ಯ ಇಲಾಖೆಯವರು ಗಂಧ ಬೆಳೆಯುವುದಕ್ಕೆ ಕೊಡುತ್ತಿರುವ ಪ್ರೋತ್ಸಾಹ ಸಾಲುವುದಿಲ್ಲ. ಅದಕ್ಕೆ ಕೂಡ ಪ್ರೋತ್ಸಾಹ ಸಿಗಬೇಕಾದ ಅಗತ್ಯ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕೋರ್ಟ್ ಮುಂದೆ ಸೀಜ್ ಆಗಿರುವ ಗಂಧ ನಾವು ಬಿಡುಗಡೆ ಮಾಡಿಸುವುದು ಕಷ್ಟವಾಗಬಹುದು. ಆದರೆ ನಾನು ಮತ್ತು ಅರಣ್ಯ ಸಚಿವರು ಕೂತು ಕುಶಲ ಕರ್ಮಿಗಳ ಬಗ್ಗೆ ಚರ್ಚೆ ಮಾಡುತ್ತೇವೆ. ನಮಗೂ ಅವರ ಬಗ್ಗೆ ಸಹಾನುಭೂತಿ ಇದೆ. ಆರ್ಟಿಸಾನ್‌ಗಳಿಗೆ ಮನೆಗಳು ಕಟ್ಟಿದ್ದಾರೆ. ಕೇಂದ್ರ ಸರ್ಕಾರದ ಸಹಕಾರ ತೆಗೆದುಕೊಂಡಿದ್ದಾರೆ. ಹೊಸ ಮನೆಗಳು ಕಟ್ಟುತ್ತಿದ್ದಾರೆ, ಕರ್ನಾಟಕದ ಹೆಮ್ಮೆ ಎಂದರೆ ಗಂಧ. ಈಗಲೂ ನಮ್ಮ ಕಾವೇರಿ ಎಂಪೋರಿಯಾಮ್‌ನಲ್ಲಿ ಗಂಧದ ಪ್ರಾಡಕ್ಟ್‌ಗಳಿಗೆ ಹೆಚ್ಚಿನ ಡಿಮ್ಯಾಂಡ್ ಇರುವುದು ನೋಡಿದ್ದೇನೆ. ಡೆಲ್ಲಿಯಲ್ಲಿ ಸಹಿತ ನಮ್ಮ ಕಾವೇರಿ ಎಂಪೋರಿಯಂಗೆ ಭೇಟಿ ಮಾಡತಕ್ಕಂತಹವರೆಲ್ಲಾ ಗಂಧದ ಸಾಮಾನುಗಳನ್ನೇ ಕೇಳುತ್ತಾರೆ. ಆದರೆ ಗಂಧದ ಮರದ ಕೊರತೆ ಇರುವುದರಿಂದ ಅದನ್ನು ನೀಗಿಸಲಿಕ್ಕೆ ನಮ್ಮ ಕೈಯಲ್ಲಿ ಆಗುತ್ತಿಲ್ಲ. ನಾನು ಎರಡು ಪಾಯಿಂಟ್ ನಿಮಗೆ ಹೇಳುತ್ತೇನೆ, ಟೆಂಪರರಿಯಾಗಿ ಅರಣ್ಯ ಇಲಾಖೆಯಿಂದ ಸ್ವಲ್ಪ ಪ್ರಮಾಣದಲ್ಲಿ ಗಂಧ ಕೊಡಿಸುವುದಕ್ಕೆ ನಾನು ಒಂದು ಸಭೆ ಮಾಡಿ ಪ್ರಯತ್ನ ಪ್ರಮಾಣದಲ್ಲಿ ಗಂಧ ಕೊಡಿಸುವುದಕ್ಕೆ ನಾನು ಒಂದು ಸಭೆ ಮಾಡಿ ಪ್ರಯತ್ನ ಮಾಡುತ್ತೇನೆ. ಒಂದು ನಿಜ, ಗಂಧದ ಕರಕುಶಲಕರ್ಮಿಗಳು ಅಲ್ಟರ್ನೇಟಿವ್ ವುಡ್ ಮೇಲೆ ಮುಂದಿನ ಭವಿಷ್ಯವನ್ನು (ಅರಣ್ಯ ಮತ್ತು ಪರಿಸರ ಕಾತೆ ಸಚಿವರು) ರೂಪಿಸಿಕೊಳ್ಳುವುದು ಒಳ್ಳೆಯದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಹೇಳುವವರು ಕೇಳುವವರು ಇಲ್ಲವೆಂದು ಹೇಳುವುದು ತಪ್ಪು. ಹೇಳುವವರು ಕೇಳುವವರು ಇದ್ದಾರೆ. ಅದು ಕೋರ್ಟಿನಲ್ಲಿರುವುದರಿಂದ ಏನೂ ಮಾಡುವುದಕ್ಕಾಗುವುದಿಲ್ಲ. ಹೇಳುವವರು ಕೇಳುವವರು ಇಲ್ಲವೆಂದು ಹೇಳಬಾರದು. ಹೇಳುವವರು ಕೇಳುವವರು ಇದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಸಚಿವರು ಗಮನಿಸಬೇಕು. ನಾನು ಪಿಎಸಿ ಛೇರ್ಮನ್ ಆಗಿದ್ದೆ, ತಾವು ಸಿಎಜಿ ರಿಪೋರ್ಟ್ ತೆಗೆದು ನೋಡಿ, ಮಂತ್ರಿಗಳು ಪರಿಶೀಲನೆ ಮಾಡಿ, ನೂರಾರು ಟನ್ ಗಂಧ ಶಾರ್ಟೇಜ್ ಆಗಿದೆ. ಏಕೆಂದರೆ, ಅವರಿಗೂ ಕೊಡುವುದಿಲ್ಲ ಅದು ಬಳಕೆಯೂ ಆಗುವುದಿಲ್ಲ. ಯಾರೋ ಕೆಲವರು ನಿಮ್ಮ ಅಧಿಕಾರಿಗಳು ಶಾಮಿಲಾಗಿ ಇಲ್ಲಿ ಮಾರಾಟ ಮಾಡಿರತಕ್ಕಂಥದ್ದು ಇದೆ. ನೀವಿಬ್ಬರೂ ಮಂತ್ರಿಗಳು ಮತ್ತು ಅಧಿಕಾರಿಗಳು ಕೂತು ಮಾತನಾಡಿದರೆ ಅವರಿಗೆ ಸ್ವಲ್ಪ ಗಂಧ ಕೊಡಬಹುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾವು ಮಾತನಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಸದನದಿಂದ ಹೊರಗಡೆ ಇರತಕ್ಕಂತಹ ಆರ್ಟಿಸಾನ್ಸ್‌ಗೆ ಸರಿಯಾದ ವಿಚಾರ ತಿಳಿಸಬೇಕಾಗುತ್ತದೆ. ಇದನ್ನು ಅರಣ್ಯ ಇಲಾಖೆಯವರಾಗಲಿ, ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನವರಾಗಲಿ ಮುಚ್ಚಿಟ್ಟು ಮಾಡುವುದು ಏನೂ ಇಲ್ಲ. ನಾವು ಸಭೆ ಕರೆಯುವಾಗ ನಿಮಗೆಲ್ಲಾ ಕರೆಸುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅರಣ್ಯ ಮಂತ್ರಿಗಳೆ, ಯಾರಾದರೂ ಅಧಿಕಾರಿಗಳು ಕೋರ್ಟಿನಲ್ಲಿ ಇತ್ಯರ್ಥವಾಗಬೇಕಿರುವ ಗಂಧದ ಮರಗಳ ಬಗ್ಗೆ ಅವುಗಳ ಕಂಡೀಶನ್ ಹಾಳಾಗುತ್ತಿವೆ ಎಂದೂ, ಅದರ ಬಳಕೆಗೆ ಅವಕಾಶ ಮಾಡಿಕೊಡಬೇಕೆಂದು ಅರ್ಜಿಯನ್ನು ಹಾಕಿದ್ದಾರೆಯೇ? ಈ ಬಗ್ಗೆ ಅರಣ್ಯ ಸಚಿವರು ಪರಿಶೀಲನೆ ಮಾಡಬೇಕು. ಈ ರೀತಿ ಗಂಧದ ಮರಗಳ ಕಂಡೀಷನ್ ಹಾಳಾಗುತ್ತವೆ ಎಂದು ಅರ್ಜಿಯನ್ನು ಕೋರ್ಟಿನಲ್ಲಿ ಹಾಕಿಕೊಂಡರೆ ಖಂಡಿತ ಗಂಧದ ಮರ ರಿಲೀಸ್ ಮಾಡಲು ಹೇಳುತ್ತಾರೆ. ಆದಕಾರಣ ನೀವು ಮೊದಲು ಅರ್ಜಿಯನ್ನು ಹಾಕಿನೋಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನೀವು ಅದಕ್ಕೇ ಪ್ರತ್ಯೇಕವಾದ ಪ್ರಶ್ನೆಯನ್ನು ಕಳುಹಿಸಿಕೊಡಿ. ಅದಕ್ಕೆ ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವರು ಹೇಳಿದ್ದಕ್ಕೆ ನಾನು ಸಲಹೆಯನ್ನು ಕೊಟ್ಟೆ. ಪ್ರತಿಯೊಂದಕ್ಕೂ ಪ್ರಶ್ನೆ ಹಾಕಬೇಕೆಂದೇನಿಲ್ಲ. ನಾನು ಈಗ ಸಲಹೆಯನ್ನು ಕೊಟ್ಟೆ ಅದನ್ನು ತಾವು ಪರಿಗಣಿಸಿ. ಸಪ್ಲಿಮೆಂಟರಿ ಪ್ರಶ್ನೆ ಕೇಳುವ ಉದ್ದೇಶವೇ ಈ ರೀತಿ ಸಲಹೆ ಕೊಡಲು ಅಲ್ಲವೆ ?

(ಗೊಂದಲ)

ಅಧ್ಯಕ್ಷರು : ಈಗಾಗಲೇ ಸಾಕಷ್ಟು ಜನರು ಮಾನತಾಡಿದ್ದಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಒಂದೊಂದು ಪ್ರಶ್ನೆಗೆ ಹೀಗೆ ಎಲ್ಲರೂ ಎದ್ದುನಿಂತು ಹತ್ತು, ಹದಿನೈದು ಪ್ರಶ್ನೆ ಕೇಳುವುದಾದರೆ ಪ್ರಶ್ನೋತ್ತರ ಯಾವಾಗ ಮುಗಿಯುವುದು ಹೇಳಿ. ಬೇರೆ ಕಾರ್ಯ ಕಲಾಪಗಳನ್ನು ಯಾವಾಗ ತೆಗೆದುಕೊಳ್ಳುವುದು ?

(ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಲೇ ಇದ್ದರು)

ಅಧ್ಯಕ್ಷರು : ಇದು ತೀರಾ ಅತಿಯಾಯ್ತು.

ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಳೂರು : ಗಂಧದ ಮರ ಉಪಯೋಗಿಸಿ ಆರ್ಟಿಸಾನ್ಸ್ ಮಾಡುವಕುಶಲಕರ್ಮಿಗಳು ಜೀವನಕ್ಕೆ ಇಂದು ತೊಂದರೆಯಾಗಿರುವುದರಿಂದ ಇಂಥವರ ಜೀವನಕ್ಕೆ ಏನಾದರೂ ದಾರಿ ಮಾಡಬೇಕಾಗಿದೆ. ಬೆಂಗಳೂರು ಮತ್ತು ಶಿವಮೊಗ್ಗದಲ್ಲಿ ಒಂದು ಸಮುಕೀರ್ಣವನ್ನು ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ನಾನೇ ಸ್ವತಃ ಕುಶಲಕರ್ಮಿಗಳ ಪರಿಸ್ಥಿತಿ ಬಗ್ಗೆ ನೋಡಿಕೊಂಡು ಬಂದಿದ್ದೇನೆ. ನಿಮಗೂ ಕೂಡ ನಾವು ಕರೆಯುವ ಸಭೆಗೆ ಕರೆಸುತ್ತೇನೆ. ಕೇವಲ ಗಂಧ ಕೊಡತಕ್ಕಂಥದ್ದು ಅಷ್ಟೆ ಅಲ್ಲ. ಬೇರೆ ರೀತಿಯಲ್ಲೂ ಅವರಿಗೆ ಯಾವ ರೀತಿಯಲ್ಲಿ ಸಹಕಾರ ಮಾಡಬೇಕು ಎಂಬ ಬಗ್ಗೆ ಕೂಡ ಸರ್ಕಾರ ಮುಕ್ತವಾಗಿ ಯೋಚನೆ ಮಾಡುತ್ತದೆ. ಮಾನ್ಯ ಜಗದೀಶ್ ಶೆಟ್ಟರ್‌ರವರೂ ವಿರೋಧ ಪಕ್ಷದ ನಾಯಕರಾಗಿದ್ದಾಗಲೂ ಈ ಬಗ್ಗೆ ಹಿಂದೆ ಪ್ರಸ್ತಾಪ ಮಾಡಿದ್ದಾರೆ. ನಾನು ಆಗ ಅವರ ಪಕ್ಕದಲ್ಲಿಯೇ ಕುಳಿತಿದ್ದೆ. ಮಾನ್ಯ ಯಡಿಯೂರಪ್ಪನವರೂ ಕೂಡ ಒಂದಲ್ಲ ಮೂರು ಬಾರಿ ದೂರವಾಣಿಯಲ್ಲಿ ನನ್ನ ಜೊತೆ ಮಾತನಾಡಿದ್ದಾರೆ. ಅರಣ್ಯ ಸಚಿವರ ಜೊತೆ ನಾನು ಒಂದು ಸಭೆಯನ್ನು ಕರೆಸುತ್ತೇನೆ. ಅಲ್ಲಿ ಗಂಧ ಕೊಡುವುದರ ಬಗ್ಗೆ ಕುಳಿತುಕೊಂಡು ಮಾತನಾಡೋಣ. ಇನ್ನು ಬೇರೆ ರೀತಿಯ ಸೌಲಭ್ಯಗಳನ್ನು ಅಂದರೆ ಮೂಲಭೂತ ಸೌಕರ್ಯಗಳನ್ನು ಕೊಡುವಂಥ ವಿಚಾರದಲ್ಲಿ ಇನ್ನೂ ಹೆಚ್ಚಿನ ಅವಶ್ಯಕತೆ ಇದ್ದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಾಯವನ್ನು ಪಡೆದು ಖಂಡಿತವಾಗಿ ಅವರಿಗೆ ಸಹಾಯ ಮಾಡುವುದಕ್ಕೆ ಖಂಡಿತವಾಗಿಯೂ ಸರ್ಕಾರ ಮುಕ್ತ. ಮನಸ್ಸನ್ನು ಇಟ್ಟುಕೊಂಡಿರಿ.

ಅಧ್ಯಕ್ಷರು : ಈಗ ಮಾನ್ಯ ಶಿವರಾಜ್ ಸಜ್ಜನರ್ ಪರವಾಗಿ ಓಲೀಕಾರ್ ನೆಹರೂ ಚೆನ್ನಬಸಪ್ಪನವರು ಪ್ರಶ್ನೆ ಕೇಳಬೇಕು.

ಪಶುಗಳಿಗೆ ಉಚಿತವಾಗಿ ಲಸಿಕೆ ಪೂರೈಸುವುದು

32(746) ಶ್ರೀ ಶಿವರಾಜ ಸಜ್ಜನರ್(ಹಾವೇರಿ) : ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಶುಗಳಿಗೆ ಉಚಿತವಾಗಿ ಹಾಗೂ ರಿಯಾಯಿತಿ ದರದಲ್ಲಿ ಪೂರೈಕೆ ಮಾಡುವ ಲಸಿಕೆಗಳು ಇಲ್ಲಿಯವರೆಗೂ ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಲಸಿಕೆಗಳನ್ನು ಎಂದು ಪೂರೈಕೆ ಮಾಡಲಾಗುತ್ತದೆ ?

ಶ್ರೀ ಮಿರಾಜುದ್ದೀನ್ ಪಾಟೀಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) –ಬಂದಿರುವುದಿಲ್ಲ–

ಆ) –ಉದ್ಭವಿಸುವುದಿಲ್ಲ–

ಶ್ರೀ ಓಲೀಕಾರ್ ನೆಹರು ಚೆನ್ನಬಸಪ್ಪ (ಬ್ಯಾಡಗಿ) : ಮಾನ್ಯ ಅಧ್ಯಕ್ಷರೆ, ಪಶುಗಳಿಗೆ ಉಚಿತವಾಗಿ ಹಾಗೂ ರಿಯಾಯಿತಿ ಪೂರೈಕೆ ಮಾಡುವ ಲಸಿಕೆಗಳು ಇಲ್ಲಿಯುವರೆಗೂ ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು 'ಬಂದಿರುವುದಿಲ್ಲ' ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಈಗಾಗಲೇ ನಮ್ಮ ಹಾವೇರಿ ಜಿಲ್ಲೆಯಲ್ಲಿ ಹಾಗೂ ಬ್ಯಾಡಗಿ ತಾಲ್ಲೂಕಿನಲ್ಲಿ ಅನೇಕ ಪಶು ಆಸ್ಪತ್ರೆಗಳಿಗೆ ರೈತರು ತಮ್ಮ ದನಗಳನ್ನು ಹಾಗೂ ಆಡು ಕುರಿಗಳನ್ನು.....

ಶ್ರೀ ಕೆ.ಆರ್. ರಮೇಶ್‌ಕುಮಾರ್ ಶ್ರೀನಿವಾಸಪುರ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಸರ್ಕಾರದ ಕಡೆಯಿಂದ ಏನು ಉತ್ತರವನ್ನು ಕಳುಹಿಸಿದ್ದಾರೆ ಅದನ್ನು ತಾವು ದಯಮಾಡಿ ಸ್ವಲ್ಪ ಗಮನಿಸಬೇಕೆಂದು ಹೇಳಬಯಸುತ್ತೇನೆ. ಪ್ರಶ್ನೋತ್ತರವನ್ನು ನಾವು ಏಕೆ ಇಟ್ಟುಕೊಳ್ಳುತ್ತೇನೆ ಹೇಳಿ, ಈ ಅಧಿವೇಶನ ನಡೆಯುವಾಗ ಸದಸ್ಯರಿಗೆ ತಮ್ಮ ಕ್ಷೇತ್ರಗಳಿಗೆ ಸಂಬಂಧಪಟ್ಟಂಥವುಗಳ ಬಗ್ಗೆ,

ಸಾರ್ವಜನಿಕ ಜೀವನಕ್ಕೆ ಸಂಬಂಧಪಟ್ಟಂಥವುಗಳ ಬಗ್ಗೆ, ಆಡಳಿತಕ್ಕೆ ಸಂಬಂಧಪಟ್ಟಂಥವುಗಳಲ್ಲಿ ಏನಾದರೂ ನ್ಯೂನತೆಗಳಿದ್ದರೆ ಅವರಿಗೆ ಚುಚ್ಚಿ ಪ್ರಶ್ನೆ ಕೇಳಿ ಉತ್ತರ ತೆಗೆದುಕೊಳ್ಳಬೇಕು ಎಂದು ಇರುತ್ತದೆ. ಸನ್ಮಾನ್ಯ ಸದಸ್ಯರು ಪಾಪ ಹೊಸಬರು ಇದ್ದಾರೆ. ಎಲ್ಲೋ ಒಂದು ಕಡೆಗೆ ಅವರಿಗೆ ದಿನನಿತ್ಯ ಜೀವನದಲ್ಲಿ ಅನುಭವ ಆಗಿರುತ್ತದೆ, ಅದಕ್ಕಾಗಿ ಆ ಬಗ್ಗೆ ಪ್ರಶ್ನೆಯನ್ನು ಕೇಳಿರುತ್ತಾರೆ. ಆದರೆ ಉತ್ತರ ಕೊಟ್ಟಿರುವ ರೀತಿಯು ದುರಹಂಕಾರದ ಪರಮಾವಧಿಯನ್ನು ತೋರಿಸುತ್ತದೆ ಎನಿಸುತ್ತದೆ. 'ಬಂದಿಲ್ಲ' 'ಉದ್ಭವಿಸುವುದಿಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. ಈ ರೀತಿಯ ಉತ್ತರ ಕೊಡುವುದಕ್ಕೆ ಇವರಿಗೆ ಲಕ್ಷಾಂತರ ರೂಪಾಯಿ ಸಂಬಳ ಕೊಟ್ಟು ನೌಕರಿಯಲ್ಲಿ ಇಟ್ಟುಕೊಳ್ಳಬೇಕೆ ? ಇದಕ್ಕೆ ನಾವು ಅಧಿವೇಶನ ಕರೆಯಬೇಕೆ? ಪ್ರಶ್ನೋತ್ತರ ಇಟ್ಟುಕೊಳ್ಳಬೇಕೆ ? ಏನು ಆ ರೀತಿಯ ಸಮಸ್ಯೆಗಳೂ ಇಲ್ಲದಿದ್ದರೆ ಅಂಥ ಪ್ರಶ್ನೆ ಕೇಳಲು ಸದಸ್ಯರಿಗೆ ಹುಚ್ಚು ಹಿಡಿದಿದೆಯೇ ಹುಚ್ಚು ಹಿಡಿದಿದೆಯೇ ಹುಚ್ಚರಾಗಿರುವವರು ಈ ಸದನದಲ್ಲಿ ಇರುವುದಕ್ಕಾಗುವುದಿಲ್ಲ. Let us send him to hospital and check up. This is too much. ನಾವು ಈ ಸದನದ ಸದಸ್ಯರಾಗಿ ಈ ರೀತಿಯ ವರ್ತನೆಗಳನ್ನು ತಡೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ದಯಮಾಡಿ ತಕ್ಷಣ ಈ ಉತ್ತರದ ಕಡೆಗೆ ಗಮನ ಹರಿಸಬೇಕು. ಯಾವ ಅಧಿಕಾರಿ ಜವಾಬ್ದಾರಿ ಬಿಟ್ಟು ಈ ರೀತಿಯ ಉತ್ತರ ಕೊಟ್ಟು ಕಳುಹಿಸಿದ್ದಾರೆ ಆ ಬಗ್ಗೆ ತಕ್ಷಣ ತಾವು ಗಮನಿಸಬೇಕು. This Minister should also give attention. I have all my affection and regard for sri Mirajuddin. But, this is not the way to carry on the administration. ಏಕೆ ನಾವು ಇಲ್ಲಿ ಇದ್ದೇವೆ? ನಮಗೆ ಮಾಡುವುದಕ್ಕೆ ಬೇರೆ ಉದ್ಯೋಗವೇನೂ ಇಲ್ಲವೇ? ನಾವು 11.00 ಗಂಟೆಗೆ ತಾವು ಬರುವುದಕ್ಕೆ ಮೊದಲೇ ವಿದ್ಯಾರ್ಥಿಗಳ ಹಾಗೆ ಇಲ್ಲಿಗೆ ಬಂದು ಕುಳಿತಿರುತ್ತೇವೆ. Is if for this we are holding the Assembly?

ಅಧ್ಯಕ್ಷರು : ಆಯಿತು ರಮೇಶ್‌ಕುಮಾರ್‌ರವರೆ, ವಾಟಾಳ್‌ರವರು ಏನೋ ಹೇಳುತ್ತಾರಂತೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಸದಸ್ಯರಾದ ನಾವು ಪ್ರಶ್ನೆಗಳನ್ನು ಕಳುಹಿಸಿಕೊಟ್ಟಿರುತ್ತೇವೆ. ಬ್ಯಾಲಿಟ್‌ನಲ್ಲಿ ಯಾವತ್ತು ಪ್ರಶ್ನೆಗಳನ್ನು ಆಯ್ಕೆ ಮಾಡಲು ಎತ್ತುತ್ತೀರಿ ಎಂಬ ಬಗ್ಗೆ ಕೂಡ ಹೇಳಿರುತ್ತೀರಿ. ನಾವೂ ಕೂಡ ಆಗ ನಿಯಮ ಪಾಲಿಸಿ ಕುಳಿತಿರುತ್ತೇವೆ. ಇನ್ನು ಸದನಕ್ಕೆ 11.00 ಗಂಟೆಗೆ ಸರಿಯಾಗಿ ಬಂದು ಕುಳಿತಿರುತ್ತೇವೆ. ಆದರೆ ಅಧಿಕಾರಿಗಳು ಬೇಜವಾಬ್ದಾರಿಯಿಂದ 'ಇದು ಉದ್ಭವಿಸುವುದಿಲ್ಲ' 'ಇದು ಬರುವುದಿಲ್ಲ' ಎಂದು ಉತ್ತರ ಕೊಡುವುದಾದರೆ ಹೇಗೆ? ಆದುದರಿಂದ ತಾವು ಈ ಸದನದ ಗೌರವವನ್ನು ಎತ್ತಿ ಹಿಡಿಯಬೇಕಾಗುತ್ತದೆ. ದಯಮಾಡಿ ಅಧಿಕಾರಿಗಳಿಗೆ ಈ ವಿಚಾರದಲ್ಲಿ ಛೀಮಾರಿ ಹಾಕಬೇಕಾಗುತ್ತದೆ.

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಅಧ್ಯಕ್ಷರೆ, ಹಿಂದೆ ಪಶುಸಂಗೋಪನಾ ಇಲಾಖೆಗೆ ಸಂಬಂಧಪಟ್ಟಂತೆ ಪ್ರಶ್ನೆ ಬಂದಿದ್ದಾಗ ನನ್ನ ಆ ಪ್ರಶ್ನೆಗೆ ಇದೇ ರೀತಿಯ ಉತ್ತರ ಬಂದಿದ್ದಾಗ ತಾವು ಈ ರೀತಿಯ ಉತ್ತರಗಳನ್ನು ಕೊಡುವುದು ಸೂಕ್ತವಾಗುವುದಿಲ್ಲವೆಂದು ಹೇಳಿ ಸಚಿವರು ಕೊಡುವಂಥ ಉತ್ತರ ಸಮರ್ಪಕವಾಗಿರಬೇಕು ಎಂಬ ಸಲಹೆಯನ್ನೂ ಸಹ ಪಶುಸಂಗೋಪನಾ ಇಲಾಖೆಯವರಿಗೆ ಕೊಟ್ಟಿದ್ದೀರಿ. ಆದರೆ ಈ ಅಧಿವೇಶನದಲ್ಲಿಯೂ ಅದೇ ರೀತಿಯ ಉತ್ತರ ಕೊಟ್ಟಿರುವುದು ನಡೆದಿದೆಯಾದ ಕಾರಣ ಮಾನ್ಯ ಸಚಿವರು ಈ ಬಗ್ಗೆ ಗಮನಹರಿಸಿ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಹೆಚ್. ಆಂಜನೇಯ : ಅದು ಪಶು ಇಲಾಖೆ ಆಗಿರುವುದರಿಂದ ಅಧಿಕಾರಿಗಳು ಪಶು ತರಹ ನಡೆದುಕೊಳ್ಳುತ್ತಿದ್ದಾರೇನೋ ಎಂದೆನಿಸುತ್ತದೆ.

ಅಧ್ಯಕ್ಷರು : ನೀವು ಕುಳಿತುಕೊಳ್ಳಿ. ಮಾನ್ಯ ಸಚಿವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ : ಮಾನ್ಯ ಸಚಿವರು ಉತ್ತರ ಕೊಡುವ ಮುಂಚೆ ನನ್ನದೊಂದು ಪ್ರಶ್ನೆ. ನಕ್ಸಲೈಟ್ ಎಫ್‌ಕ್ಟೆಡ್ ಏರಿಯಾದ ಕೆರೆ ಕಟ್ಟೆಯಲ್ಲಿ ಆಸ್ಪತ್ರೆ ಇದೆ. ಖಾಲಿ ಇದೆ ಎನ್ನುವಂಥದ್ದನ್ನು ಹೋದ ಸಾರಿ ನಾನು ಶೀಘ್ರಗತಿಯಲ್ಲಿ ತುಂಬುತ್ತೇನೆ ಎಂದು ಮಾನ್ಯ ಸಚಿವರು ಹೇಳಿದ್ದರು.

ಅಧ್ಯಕ್ಷರು : ನೋಡಿ, ಹೀಗೆ ವಿಷಯಾಂತರ ಮಾಡಿದರೆ ಹೇಗೆ ? ಈಗೇನು ಸಚಿವರು ಈ ಪ್ರಶ್ನೆಗೆ ಉತ್ತರ ಕೇಳುತ್ತಾರೆ ಮೊದಲು ಕೇಳೋಣ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪಶು ಸಂಗೋಪನೆ ಮತ್ತು ವಕ್ಫ್ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಕೊಟ್ಟಿರುವ ಉತ್ತರ ಸರಿಯಲ್ಲವಾಗಿರುವುದರಿಂದ ಉತ್ತರ ಕೊಟ್ಟ ಅಧಿಕಾರಿಗಳೂ ಸರಿಯಾಗಿ ತಿಳಿದುಕೊಂಡು ಮಾಹಿತಿಯನ್ನು ಸದನಕ್ಕೆ ಕೊಡಬೇಕು ಎಂದು ಹಿರಿಯ ಸದಸ್ಯರಾದ ಶ್ರೀ ರಮೇಶ್‌ಕುಮಾರ್‌ರವರು ಹೇಳಿದ್ದಾರೆ. ಆದರೆ ಈ ಪ್ರಶ್ನೆಯಲ್ಲಿ ಸ್ವಲ್ಪ ಕನ್‌ಫ್ಯೂಶನ್ ಆಗಿರಬಹುದು. ಮಾನ್ಯ ಸದಸ್ಯರು ಏನು ಕೇಳುತ್ತಾರೆಂದರೆ ನಿಮ್ಮ ಕಡೆ ಮೆಡಿಸನ್ಸ್ ಅವೈಲಬಲ್ ಇದೆಯೋ ಅಥವಾ ಇಲ್ಲವೋ ಎಂದು ಕೇಳಿದ್ದಾರೆ. ನಮ್ಮ ಪ್ರಕಾರ ಎಷ್ಟೆಷ್ಟು ಮೆಡಿಸನ್ಸ್ ರಿಕ್ವೈರ್‌ಮೆಂಟ್ ಯಾವ ಯಾವ ಆಸ್ಪತ್ರೆಯದು ಇದೆಯೋ ಅವೆಲ್ಲವನ್ನೂ ಪೂರ್ತಿ ಸಪ್ಲೈ ಮಾಡಿದ್ದೇವೆ. ದಿನಾಂಕ 1ನೇ ಜನವರಿಯಿಂದ ಎಲ್ಲಾ ವ್ಯಾಕ್ಸಿನ್‌ಗಳು ಎಕ್ಸೆಪ್ಟ್ ಫುಟ್ ಅಂಡ್ ಮೌತ್ ಮತ್ತು ಹುಚ್ಚು ನಾಯಿ ಔಷಧ ಬಿಟ್ಟು ಬೇರೆ ಎಲ್ಲಾ ವ್ಯಾಕ್ಸಿನ್‌ಗಳನ್ನು ಫ್ರೀ ಆಫ್ ಕಾಸ್ಟ್‌ನಲ್ಲಿ ಕೊಡುವಂತೆ ಮಾಡಿದ್ದೇವೆ. ಯಾವ ಯಾವ ವ್ಯಾಕ್ಸಿನ್‌ಗಳು ಯಾವ ಯಾವ ಆಸ್ಪತ್ರೆಯಲ್ಲಿ ಎಷ್ಟು ಸ್ಟಾಕ್ ಇದೆ ಎಂಬ ಬಗ್ಗೆ ನಮ್ಮ ಹತ್ತಿರ ರೆಕಾರ್ಡ್ಸ್ ಇದೆ. ಯಾವ ಆಸ್ಪತ್ರೆಯಲ್ಲೂ ಮೆಡಿಸನ್‌ಗಳ ಕೊರತೆ ಇಲ್ಲ. ಅವರ ರಿಕ್ವೈರ್‌ಮೆಂಟ್‌ಗಿಂತ ಸರ್‌ಪ್ಲೆಸ್ ನವು ಸಪ್ಲೈ ಮಾಡಿದ್ದೇವೆ. ಎಲ್ಲಾ ಕಡೆಯೂ ಮೆಡಿಸನ್ಸ್ ಇದೆ. ಯಾವ ಆಸ್ಪತ್ರೆಯಲ್ಲಾದರೂ ಸರಿಯಾಗಿ ನಮಗೆ ಔಷಧಿಗಳು ಸಪ್ಲೈ ಆಗುತ್ತಿಲ್ಲ ಮತ್ತು ಇದರಿಂದಾಗಿ ಔಷಧಿಗಳನ್ನು ಕೊಡುತ್ತಿಲ್ಲ ಎನ್ನುವ ವಿಚಾರ ನಮ್ಮ ಗಮನಕ್ಕೆ ಬಂದರೆ ಅದರ ಮೇಲೆ ನಾವು ಏನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಪ್ರಶ್ನೆಯನ್ನು ಕನ್‌ಫ್ಯೂಸ್ ಮಾಡಿಕೊಂಡಿಲ್ಲ. ದಯವಿಟ್ಟು ಅವರು ಓದಬೇಕು. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಏನೆಂದರೆ, ಪಶುಗಳಿಗೆ ಉಚಿತವಾಗಿ ಹಾಗೂ ರಿಯಾಯಿತಿ ದರದಲ್ಲಿ ಪೂರೈಕೆ ಮಾಡುವ ಲಸಿಕೆಗಳು ಇಲ್ಲಿಯವರೆಗೂ ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದಾರೆ. 'ಬಂದಿರುವುದಿಲ್ಲ' ವೆಂದರೆ ಸರ್ಕಾರ ಏಕೆ ಇರಬೇಕು? ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲವೆಂದರೆ ಸರ್ಕಾರ ಏಕೆ ಇರಬೇಕು? ಸರ್ಕಾರದ ಗಮನಕ್ಕೆ ಬರದೇ ಮತ್ತೆ ಇನ್ಯಾರ ಗಮನಕ್ಕೆ ಬರಬೇಕು ಹೇಳಿ. ನಿಮ್ಮ ಗಮನಕ್ಕೆ ಬಂದಿರಲೇಬೇಕಲ್ಲಾ ಬಂದಿರುವುದಿಲ್ಲ ಎಂದು ಒಬ್ಬ ಅಧಿಕಾರಿ ಉತ್ತರ ಕೊಟ್ಟಿದ್ದನ್ನು ನೀವು ಇಲ್ಲಿ ಬಂದು ಹೇಳಿಬಿಟ್ಟರೆ ಹೇಗೆ? ಆ ಅಧಿಕಾರಿಯನ್ನು ಏನು ಮಾಡುವುದು? 'ಬಂದಿರುವುದಿಲ್ಲ' ಎಂದು ತಪ್ಪು ಮಾಹಿತಿಯನ್ನು ಆ ಅಧಿಕಾರಿ ಈ ಸದನಕ್ಕೆ ಕೊಡಿಸಿದ್ದಾನೆ.

The Government should know whether all medicines are supplied or not. Then, what for government is there? ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲವೆಂದರೆ ಸರ್ಕಾರ ಏಕೆ ಇರಬೇಕು ? what for the government will be there?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಸರ್ಕಾರದ ಗಮನಕ್ಕೆ ಬರಬೇಕು ಎಂದರೆ ಶಾಸಕರಾದವರು ಏನು ಮಾಡಬೇಕು ಎಂಬುದನ್ನು ಹೇಳಲಿ. ಸಚಿವರು ಯಾವತ್ತಾದರೂ ತಾಲ್ಲೂಕುಗಳಲ್ಲಿ ತಾಲ್ಲೂಕು ಲಿವಲ್‌ನಲ್ಲಿ ಕೆ.ಡಿ.ಪಿ. ಮೀಟಿಂಗ್‌ಗಳಲ್ಲಿ ರಿವ್ಯೂ ಮಾಡಿರುವುದನ್ನು ತರಿಸಿ ಓದಿದ್ದಾರೆಯೇ ?

ಅಧ್ಯಕ್ಷರು : ಶ್ರೀ ರಾಮರೆಡ್ಡಿಯವರೆ, ಮಾನ್ಯ ಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ ನಾವು ಎಲ್ಲಾ ಆಸ್ಪತ್ರೆಗಳಿಗೆ ಔಷಧಿಗಳನ್ನು ಸಪ್ಲೈ ಮಾಡಿದ್ದೇವೆ ಎಂದು ಹೇಳಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಸ್ಟಾಕ್ ಎಂದು ಹೇಳಿದ್ದಾರೆ. ನಾನು ಅದರ ಬಗ್ಗೆಯೇ ಪ್ರಶ್ನೆ ಕೇಳುತ್ತಿದ್ದೇನೆ. ಪ್ರತಿ ಮೂರು ತಿಂಗಳಿಗೊಮ್ಮೆ ಕೆ.ಡಿ.ಪಿ. ಮೀಟಿಂಗ್‌ನ್ನು ಮಾನ್ಯ ಮಂತ್ರಿಗಳು ರಿವ್ಯೂ ಮಾಡುವುದನ್ನು ಕಲಿತುಕೊಳ್ಳಬೇಕು. ನಾನು ಚಿಕ್ಕನಾಯಕನಹಳ್ಳಿಯಲ್ಲಿ ಯಾವ ಯಾವ ವ್ಯಾಕ್ಸಿನ್ ಮತ್ತು ಔಷಧಿಗಳು ಇಲ್ಲ ಎನ್ನುವ ಬಗ್ಗೆ ಮಾಹಿತಿ ತರಿಸಿದ್ದೇನೆ. ಹೀಗೆ ನಾವು ಈ ಬಗ್ಗೆ ಸರ್ಕಾರದ ಗಮನಕ್ಕೆ ಹೇಳಬೇಕು ಹೇಳಿ? ಚಿಕ್ಕನಾಯಕನಹಳ್ಳಿಯಲ್ಲಿ ಔಷಧಿ ಇಲ್ಲವೆಂದು ಹುಳಿಯಾರ್‌ನಿಂದ ಇಂಡೆಂಟ್ ಮಾಡಿ ನಾನು ತರಿಸಿದ್ದೇನೆ. ಪ್ರತಿ ಮೀಟಿಂಗ್‌ನಲ್ಲಿ ನಾನು ಈ ಬಗ್ಗೆ ಬರೆಸಿದ್ದೇನೆ. ನಾನು ಡೆಪ್ಯುಟಿ ಡೈರೆಕ್ಟರ್‌ರವರಿಗೆ ಪೋನ್ ಮಾಡಿ ಕೂಡ ನಾನು ಹೇಳಿದ್ದೇನೆ. ನಿಮ್ಮ ಆಫೀಸಿನಲ್ಲಿ ಇರೋ ಅಸಿಸ್ಟೆಂಟ್‌ಗಳು ಹೊರಗಡೆಯಿಂದ ತಂದುಬಿಟ್ಟು ಸ್ಟಾಕ್ ಇಟ್ಟುಕೊಂಡು ಮಾರುತ್ತಿದ್ದಾರೆ. ಇಷ್ಟಾದರೂ ನಿಮ್ಮ ಗಮನಕ್ಕೆ ಇನ್ನೂ ಬರಬೇಕೆ ? ತರಿಸಿಕೊಡಿ ಬೇಕಾದರೆ ಕೆ.ಡಿ.ಪಿ. ರಿವ್ಯೂಗಳನ್ನು ಶಾಸಕರಾದ ನಾವು ಕೆಲಸ ಮಾಡುವುದಿಲ್ಲವೆಂದು ನೀವು ತಿಳಿದುಕೊಂಡಿದ್ದೀರಾ? ಔಷಧಿಗಳು ಇಲ್ಲವೇ ಇಲ್ಲ. ಇವರು ಎಫ್.ಎಂ.ಡಿ. ಒಂದು ಬಿಟ್ಟು ಮಿಕ್ಕೆಲ್ಲಾ ಔಷಧಿಗಳನ್ನು ಫ್ರೀ ಕೊಡುತ್ತೇವೆ ಎಂದು ಇವರು ಘೋಷಣೆಯನ್ನು ಮಾಡಿದ್ದಾರೆ. ಯಾವ ವ್ಯಾಕ್ಸಿನ್ ಅಲ್ಲಿ ಇದೆ ಎಂದು ಸ್ವಲ್ಪ ತರಿಸಿ ಕೇಳಿ. ಮಾನ್ಯ ಮಂತ್ರಿಗಳೇ ನೀವು ಕೆ.ಡಿ.ಪಿ. ಮೀಟಿಂಗ್ ರಿವ್ಯೂಗಳನ್ನು ಓದಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ದಯವಿಟ್ಟು ಪ್ರಶ್ನೆ ಏನು ಎಂಬುದನ್ನು ಸರ್ಕಾರದವರು ಅರ್ಥ ಮಾಡಿಕೊಳ್ಳಬೇಕು. ಸರ್ಕಾರದ ಗಮನಕ್ಕೆ ಬಂದಿಲ್ಲವೆಂದರೆ ಇನ್ನು ಯಾರ ಗಮನಕ್ಕೆ ಬಂದಿರಬೇಕು ಮತ್ತು ಇದನ್ನು ಯಾರು ಗಮನಕ್ಕೆ ತೆಗೆದುಕೊಳ್ಳಬೇಕು ಹೇಳಿ. ಹೇಗೆ ಗಮನಕ್ಕೆ ಔಷಧಿಗಳು ಸಪ್ಲೈ ಆಗುತ್ತಿಲ್ಲವೆಂದು ಡಾಕ್ಟರ್‌ಗಳು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಸಚಿವರು ಇಲ್ಲಿ ಔಷಧಿಗಳನ್ನು ಪೂರೈಕೆ ಮಾಡಿದ್ದೇವೆ ಎಂದು ಇಲ್ಲಿ ಹೇಳುತ್ತಾರೆ. ಇರಲಿ, ಪೂರೈಕೆ ಮಾಡಿದ್ದೀರೋ, ಇಲ್ಲವೋ ಎನ್ನುವುದು ಬೇರೆ ಪ್ರಶ್ನೆಯಾಗುತ್ತದೆ. ಮಾಡಿರುವುದು, ಮಾಡಿಲ್ಲದಿರುವುದು, ಇವು ಎರಡೂ ಸರ್ಕಾರದ ಗಮನಕ್ಕೆ ಬಂದಿರಲೇಬೇಕಲ್ಲವೆ? ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಒಬ್ಬ ಅಧಿಕಾರಿ ಉತ್ತರ ಕೊಟ್ಟಿರುವುದಕ್ಕೆ ನೀವು ಏಕೆ ಸಹಿ ಮಾಡಿದಿರಿ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದರೆ ಸರ್ಕಾರ ಏಕ ಇರಬೇಕು ಹೇಳಿ.

ಶ್ರೀ ಆರ್. ಧ್ರುವನಾರಾಯಣ : ಮಾನ್ಯ ಅಧ್ಯಕ್ಷರೆ, ನಮ್ಮ ಚಾಮರಾಜನಗರ ಜಿಲ್ಲೆಯಲ್ಲಿಯೂ ಕೂಡ ಯಾವುದೇ ಆಸ್ಪತ್ರೆಗಳಲ್ಲಿ ಮೆಡಿಸನ್ ಸಪ್ಲೈ ಇಲ್ಲದೆ ಬಹಳಷ್ಟು ತೊಂದರೆಗಳು ಆಗುತ್ತಿವೆ.

ಶ್ರೀ ಕೃಷ್ಣ ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯಲ್ಲಿ ನಮ್ಮ ಭಾಗದಲ್ಲಿ ಸಹ ಪರಿಸ್ಥಿತಿಯಲ್ಲಿ ಯಾವುದೇ ವಿಭಿನ್ನ ಇಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ನಮಗೆ ಡೈರಿ, ಕುರಿ ಸಾಕಾಣಿಕೆ ಇದ ಮೇಜರ್ ಆ್ಯಕ್ಟಿವಿಟ್. ನಮ್ಮ ಇಡೀ ಬದುಕು ಅದರ ಮೇಲೆ ಅವಲಂಬಿಸಿದೆ. ನಾವು ಪ್ರಶ್ನೆಯನು ಕೇಳಬೇಕಾದರೆ ಸಿಗುತ್ತಿಲ್ಲವೆ? ಅದರ ಬಗ್ಗೆ ನಿಮ್ಮ ಗಮನಕ್ಕೆ ಬಂದಿಲ್ಲವೆ ಎಂದು ಕೇಳುವಂತಹ ಉದ್ದೇಶ ಏನು? ಏಕೆ ಹಾಗೆ ಪ್ರಶ್ನೆ ಕೇಳುತ್ತೇವೆ? ಈ ಕ್ವೈಶ್ಚನ್ ಪವರ್ ನಮ್ಮ ಸಂಸದೀಯ ವ್ಯವಹಾರ ನಡವಳಿಕೆಗಳಲ್ಲಿ ಏಕೆ ಇಟ್ಟುಕೊಂಡಿದ್ದೇವೆ? ಇಲ್ಲಿ ಮಾನ್ಯ ಪ್ರಕಾಶ್ ಹಾಗೂ ಸಿಂಧ್ಯರವರು ಇದ್ದಾರೆ. ಅವರು ಹೇಳಲಿ: These are indirect ways of extracting answers. ಅಷ್ಟು ಸುಲಭದಲ್ಲಿ ನಮಗೆ ಎಲ್ಲೂ ರಿಪೋರ್ಟ್ ಬಂದಿಲ್ಲವೆಂದು ಹೇಳಿದಿರಿ. ಪೊಲೀಸ್ ಸ್ಟೇಷನ್‌ನಲ್ಲಿ ಕೊಟ್ಟಹಾಗೆ ಫೀರ್ಯಾದು ಕೊಡಬೇಕಾ ? ಈಗ ಸಮ್ಮರ್ ಬರುತ್ತಿದೆ. ಫೂಟ್ ಅಂಡ್ ಮೌತ್ ರೋಗ ಪ್ರಾರಂಭವಾಗುತ್ತದೆ. ಕೆಡಿಪಿ ಮೀಟಿಂಗ್‌ನಲ್ಲಿ ಬಾಯಿ ಬಡಿದುಕೊಳ್ಳುತ್ತಾರೆ ಇವರ ಆಫೀಸರ್ಸ್. ಎಲ್ಲಿ ಹೋದರೂ ಕೂಡ ಚೀಟಿ ಬರೆದು ಕೊಡುತ್ತಾರೆ. ಮಾನ್ಯ ಕೃಷ್ಣ ಬೈರೇಗೌಡರನ್ನು ಕೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು ತಡೆಹಿಡಿಯಿರಿ. ಇದು ನಮ್ಮ ಗಮನಕ್ಕೆ ಅಂದರೆ ಸರ್ಕಾರದ ಗಮನಕ್ಕೆ ಎಂದು ಹೇಳಿದರೆ, ಒಬ್ಬ ತಾಲ್ಲೂಕು ಮಟ್ಟದ ಅಧಿಕಾರಿ, ಜಿಲ್ಲಾ ಮಟ್ಟದ ಅಧಿಕಾರಿ, ಜಾಯಿಂಟ್ ಡೈರೆಕ್ಟರ್, ಡೈರೆಕ್ಟರ್, ಅಂಡರ್ ಸ್ಕ್ರೆಟರಿ ಅಥವಾ ಮಂತ್ರಿಗಳು ಯಾರ ಗಮನಕ್ಕೆ ಬಂದಿದ್ದರೂ ಕೂಡ ಬಂದಿದೆ ಎಂದು ಅರ್ಥ. ಇದು ಗೊತ್ತಿರತಕ್ಕಂಥ ವಿಷಯ. ವೆಟರಿನರಿ ಹಾಸ್ಪಿಟಲ್‌ಗಳಲ್ಲಿ ವ್ಯಾಕ್ಸಿನ್‌ಗಳು ಸಾಕಷ್ಟು ಸಮರ್ಪಕವಾಗಿ ಸಿಗದೆ ಇರತಕ್ಕಂಥ ವಿಚಾರ ನಮ್ಮ ಗಮನಕ್ಕೆ ಬಂದಿದೆ. ಈ ಪ್ರಶ್ನೆಯನ್ನು ತಡೆಹಿಡಿಯಿರಿ. ನಾವು ಇದನ್ನು ಇನ್ನೊಂದು ದಿನ ತೆಗೆದುಕೊಳ್ಳೋಣ. ಇದನ್ನು ಫಿಕ್ಸ್ ಮಾಡಿ ಅಷ್ಟರಲ್ಲಿ ಡಿಪಾರ್ಟ್‌ಮೆಂಟ್‌ನಲ್ಲಿ ರಿವ್ಯೂ ಮಾಡಿ ಏನೇನು ವ್ಯಾಕ್ಸಿನ್‌ಗಳು ಸಿಗುತ್ತಿಲ್ಲವೆನ್ನುವುದನ್ನು ಗಮನಕ್ಕೆ ತೆಗೆದುಕೊಂಡು ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಪ್ರಶ್ನೆಯನ್ನು ಮುಂದೂಡತಕ್ಕಂಥಾದ್ದು ಸುಲಭ ಕ್ರಮ. ಇದನ್ನು ನಾವು ಬ್ಯಾಲಿಟ್ ಎತ್ತುವಾಗಿ ಎತ್ತಿದ್ದೀರಿ. ಆಗ ಈ ಪ್ರಶ್ನೆ ಬಂದಿದೆ. ಪ್ರಶ್ನೆ ಬಂದರೆ ಅದಕ್ಕೆ ಉತ್ತರ ಬಂದಿರುವುದಿಲ್ಲ. ಉದ್ಭವಿಸುವುದಿಲ್ಲ. ಬಂದಿರುವುದಿಲ್ಲ, ಉದ್ಭವಿಸುವುದಿಲ್ಲ. ಇಲ್ಲಿ ಹೇಗೆ ಎಂದರೆ ದನಕರುಗಳಿಗೆ ಔಷಧ ಸಿಕ್ಕಿತ್ತು. ಇದೇನಿದು? ಈ ವಿಚಾರದಲ್ಲಿ ಅವರು ರಾಜೀನಾಮೆ ಕೊಡಬೇಕು. ಅವರ ಬಗ್ಗೆ ವೈಯಕ್ತಿಕವಾಗಿ ನಾನು ಗೌರವವನ್ನು ಇಟ್ಟುಕೊಂಡಿದ್ದೇನೆ. ನಿಮ್ಮ ಅಧಿಕಾರಿಗಳು ನಿಮ್ಮನ್ನು ತಪ್ಪು ದಾರಿಗೆ ಎಳೆದಿದ್ದಾರೆ. ಅಧಿಕಾರಿಗಳ ಹತ್ತಿರ ಉತ್ತರವನ್ನು ತರಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಆದರೆ ನಿಜವಾಗಿ ಪ್ರಜಾತಂತ್ರವನ್ನು ಎತ್ತಿ ಹಿಡಿಯಬೇಕಾದರೆ ಈ ಕೂಡಲೇ ಈ ಕ್ಷಣದಲ್ಲೇ ರಾಜೀನಾಮೆ ಕೊಡಿ.

ಅಧ್ಯಕ್ಷರು : ಈಗ ನಾನು ಮಾನ್ಯ ರಮೇಶ್‌ಕುಮಾರ್ ರವರನ್ನು ಕರೆದಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಮಂತ್ರಿಗಳಾಗಿರತಕ್ಕಂಥ ಸಿಂಧ್ಯರವರು ಸೂಚಿಸಿರತಕ್ಕಂಥ ಸಲಹೆ ಯೋಗ್ಯವಾದುದು. ಆದರೆ ಈ ರೀತಿಯ ಬೇಜಾವಾಬ್ದಾರಿತನದಿಂದ ಸದನಕ್ಕೆ ಉತ್ತರ ಕೊಡಿಸತಕ್ಕಂಥ ಪ್ರವೃತ್ತಿ ಇರತಕ್ಕಂಥವು ಯಾರಿದ್ದಾರೆ. ಅವರನ್ನು ಸಭಾ ನಿಂದನೆಗೆ ನಾವು ಚಾರ್ಜ್ ಮಾಡುವುದಕ್ಕೆ ಇಷ್ಟಪಡುತ್ತೇನೆ. We

will have to treat him for the contempt of the House. ನಮಗೆ ಅವರು ಮಾಹಿತಿ ಕೊಡಬೇಕು. ಯಾರು ಆಫೀಸರ್ ಇದನ್ನು ಒದಗಿಸಿಕೊಟ್ಟವರು ಅವರಿಗೆ ರೂಲ್ಸ್ ಪ್ರಕಾರ ಪುನಃ ನೋಟೀಸ್ ಕೊಡುತ್ತೇವೆ. ಈ ಸಭೆಯ ಗೌರವದ ನಿಂದನೆಯಾಗಿದೆ ಅಂತ ಚಾರ್ಜ ಮಡುತ್ತೇವೆ. ತಾವು ಆಮೇಲೆ ಕಾನೂನಿನ ಪ್ರಕಾರ ನಿಯಮಾವಳಿ ಪ್ರಕಾರ ಏನು ಅವಕಾಶ ಇದೆ ಅದರ ಪ್ರಕಾರ ಕ್ರಮ ಜರುಗಿಸಿ. ಶಾಸಕರಿಗೆ ಈ ರೀತಿಯಾದರೆ ಈ ಸದನದ ಬೆಲೆ ಏನು? ನಾವು ಇಲ್ಲಿಗೆ ಏಕೆ ಬಂದಿದ್ದೇವೆ? ಜನಶಕ್ತಿ ಗೌರವ ಏನು ಎಂದು ಅಧಿಕಾರಿಗಳ ಗ್ಯಾಲರಿಯಲ್ಲಿ ಕುಳಿತುಕೊಳ್ಳುವವರಿಗೆ ಅರ್ಥವಾಗುತ್ತದೆ. ಇಲ್ಲದೆ ಹೋದರೆ ಅವರು ನಮ್ಮನ್ನು ಮೂರ್ಖರು, ಮಾಡುವುದಕ್ಕೆ ಕೆಲಸ ಇಲ್ಲದೆ ಇರುವವರು, ಹೊತ್ತು ಹೋಗುವುದಕ್ಕೆ ಇಲ್ಲಿ ಬಂದು ಪ್ರಕಾರ ತೆಗೆದುಕೊಳ್ಳುವುದಕ್ಕೆ ಕುಳಿತುಕೊಳ್ಳುತ್ತಾರೆ ಎಂದು ತಿಳಿದುಕೊಳ್ಳುತ್ತಾರೆ. That cannot happen ದಯಮಾಡಿ ಮಾನ್ಯ ಸಿಂಧ್ಯರವರು ಏನು ಸಜೆಷನ್ ಕೊಟ್ಟಿದ್ದಾರೆ ಅದನ್ನು ನಾವು ಗೌರವಿಸಿದ್ದೇವೆ. ಆದರೆ ನಮಗೆ ಮುಂದಿನ ವರ್ತಮಾನ ಬೇಕಾಗುತ್ತದೆ. ಯಾರು ಬೇಜಾವಾಬ್ದಾರಿತನದಿಂದ ಈ ಕೆಲಸ ಮಾಡಿದ್ದಾರೆ ಈ ಸದನದ ಗೌರವವನ್ನು ಕುಗ್ಗಿಸತಕ್ಕಂಥ ಪ್ರಯತ್ನವನ್ನು ದುರಂಕಾರದಿಂದ ಮಾಡಿದ್ದಾರೆ ಅವರಿಗೆ ಶಿಕ್ಷೆ ಆಗಲೇಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಚಿಕ್ಕನಾಯಕನ ಹಳ್ಳಿಯಲ್ಲಿ ನೋ ಸ್ಟಾಕ್ ಎಂದು ಬೋರ್ಡ್ ಹಾಕಿ ಹೊರಗಡೆ ಕರೆದುಕೊಂಡು ಅದೇ ವ್ಯಾಕ್ಸಿನ್‌ಗೆ ಚಾರ್ಜ ಮಾಡಿದ್ದು, ನಾನು ಕರೆಸಿ ಟಿಬಿಯಲ್ಲಿ ಜನರ ಸಮಕ್ಷಮದಲ್ಲಿ ಆ ರೈತನಿಗೆ ದುಡ್ಡು ಕೊಡಿಸಿ ನಿಮ್ಮ ಡೆಪ್ಯುಟಿ ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್ ಕರೆಸಿ ಪೋನ್ ಮಾಡಿ ಹೇಳಿದ್ದೇನೆ. ಹಾಗಾದರೆ ಅದರ ಗಮನಕ್ಕೆ ಬರಲಿಲ್ಲವೆ? ತಾವು ಎನ್‌ಕ್ವೈರಿ ಮಾಡಬೇಕು ಶಾಸಕರು ನಿಮಗೆ ಪೋನ್ ಮಾಡಿದ್ದಾರೆ ಎಂದು. ಯಾವ ರೈತನ ಹತ್ತಿರ ಹಣ ತೆಗೆದುಕೊಂಡಿದ್ದರು ಆ ರೈತನಿಗೆ ಹಣವನ್ನು ವಾಪಸ್ಸು ಆಫೀಸರ್‌ನಿಂದ ಕೊಡಿಸಿದ್ದರಾ ಬನ್ನಿ ನೀವು ವೆಟನರಿ ಆಸ್ಪತ್ರೆಗೆ, ಸ್ಟಾಕ್ ಇಲ್ಲವೆಂದು ಹೇಳುತ್ತಾರೆ. ಹೊರಗಡೆಯಿಂದ ತಂದೆ ಎನ್ನುವುದು, ಚಾರ್ಜ್ ಮಾಡುತ್ತಿರುವುದು. ಇದು ನಡೆಯುತ್ತಿದೆ, ಸರ್ಕಾರದ ಆಡಳಿತ. ಇದನ್ನು ಸರ್ಕಾರದ ಗಮನಕ್ಕೆ ಎಂದರೆ ನಿಮ್ಮ ಗಮನಕ್ಕೆ ಹೇಗೆ ತರಬೇಕು? ಡೆಪ್ಯುಟಿ ಡೈರೆಕ್ಟರ್ ಸರ್ಕಾರ ಅಲ್ಲವೆ? ನಾನು ಪೋನ್ ಮಾಡಿ ಹೇಳಿಲಿಲ್ಲವಾ? ನೀವು ತುಮಕೂರು ಡೆಪ್ಯುಟಿ ಡೈರೆಕ್ಟರ್ ಅನ್ನು ಕರೆಸಿ ಕೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಒಂದು ಸಮಿತಿಯವರು ಒಂದು ವರದಿ ಕೊಟ್ಟಿದ್ದಾರೆ, ಅದನ್ನು ನಿಮ್ಮ ಗಮನಕ್ಕೆ ತಂದುಬಿಡುತ್ತೇನೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯುವರು ಒಂದು ವರದಿ ಕೊಟ್ಟಿದ್ದಾರೆ. ಅದು ಕಳಪೆ ಔಷಧಗಳನ್ನು ಸರಬರಾಜು ಮಾಡಿರುವುದರ ಬಗ್ಗೆ ವರದಿ ಬಂದಿದೆ. ಆ ಸಂದರ್ಭದಲ್ಲೆ ಇದೇ ಸದನ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದೆ. ಆದರೆ ಇದುವರೆಗೆ ಕ್ರಮ ತೆಗೆದುಕೊಂಡಿಲ್ಲ. ಕಳಪೆ ಔಷಧ ಬಂದಿರತಕ್ಕಂಥಾದ್ದರ ಬಗ್ಗೆ ಸಾರ್ವಜನಿಕ ಲೆಕ್ಕ ಪತ್ರ ಸಮಿತಿ ತನಿಖೆ ಮಾಡಿ ವರದಿಯನ್ನು ಕೊಟ್ಟಿದೆ. ಈ ವೆಟ್ಟನರಿ ಡಿಪಾರ್ಟ್‌ಮೆಂಟಿನಲ್ಲಿ ನಡೆಯುತ್ತಿರತಕ್ಕಂಥ ಅವ್ಯವಹಾರ ಇದೆಯಲ್ಲಾ ಇದಕ್ಕೆ ಕೊನೆ ಇಲ್ಲದ ಹಾಗಾಗಿದೆ ಇದು ಎಲ್ಲಾದರೂ ಒಂದು ಕಡೆ ಕೊನೆಯಾಗಬೇಕಾದರೆ ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ ಸಲಹೆ ಪ್ರಕಾರ ಇವತ್ತು ಅವರನ್ನು ಕರೆದು ಸದನದಲ್ಲಿ ಛೀಮಾರಿ ಹಾಕಬೇಕು, ಹಾಗು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟರು. ಮಾನ್ಯ ರಮೇಶ್‌ಕುಮಾರ್‌ರವರೂ ಕೂಡ ಇಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡಿದವರು.

ಅವರ ಕಾಲದಲ್ಲಿ ಬಹಳಷ್ಟು ವಿಷಯಗಳಲ್ಲಿ ಚರ್ಚೆ ಮಾಡಿ ಅನೇಕ ವಿಷಯಗಳಿಗೆ ಪರಿಹಾರವನ್ನು ಕಂಡುಕೊಂಡಿದ್ದೇವೆ. ಪ್ರಶ್ನೆ ಏನೆಂದರೆ ಕಳೆದ ಐದಾರು ತಿಂಗಳುಗಳ ನಂತರ ಅಧಿವೇಶನ ಸೇರಿದೆ. ಶ್ರೀಸಾಮಾನ್ಯನ ಸಮಸ್ಯೆ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇವೆ. ತಾವು ಸಹಕಾರ ಕೊಡುತ್ತಿದ್ದೀರಿ. ಇಲ್ಲಿ ಸಿಗುವಂತಹ ಉತ್ತರದಿಂದ ಲಕ್ಷಾಂತರ ಜನ ನಮ್ಮ ಕಡುಬಡವರಿಗೆ ರೈತರಿಗೆ ಮತದಾರರಿಗೆ ನ್ಯಾಯ ಸಿಗಬೇಕು. ಪ್ರಶ್ನೋತ್ತರ ವೇಳೆ ಅತ್ಯಂತ ಅಮೂಲ್ಯವಾದುದು. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ ನನಗೆ ಗೊತ್ತಿದ್ದ ಪ್ರಕಾರ ಮಾನ್ಯ ಸಿಂಧ್ಯರವರು, ಮಾನ್ಯ ಪ್ರಕಾಶ್‌ರವರು ಹಾಗೂ ಮಾನ್ಯ ದೇಶಪಾಂಡೆಯವರು ಹಿರಿಯರು, ಕ್ವೆಶ್ಚನ್ ಹವರ್ ಬಂದಾಗ ಹಿಂದಿನ ದಿವಸ ಸಾಯಂಕಾಲ ಕುಳಿತ ಸಮಾಲೋಚನೆ ಮಾಡಿ, ಅದರ ಬಗ್ಗೆ ಸ್ಪಷ್ಟವಾಗಿ ಇಲ್ಲಿ ಉತ್ತರ ಬರುತ್ತಿತ್ತು. ಲೋಕಸಭೆಯಲ್ಲಿ ಇಷ್ಟೇ ಸೀರಿಯಸ್ ಆಗಿ ಕ್ವೆಶ್ಚನ್ ಹವರ್ ತೆಗೆದುಕೊಳ್ಳುತ್ತಿದ್ದಾರೆ. ನಾನು ಮಾನ್ಯ ಮಿರಾಜುದ್ದೀನ್ ಪಟೇಲ್ ರವರ ಹತ್ತಿರ ಒಂದೇ ಒಂದು ವಿನಂತಿಯನ್ನು ಮಾಡುತ್ತೇನೆ. ನಾವು ಪ್ರಿವಿಲೇಜ್ ಮೂವ್ ಮಾಡುವುದು ನಿಮ್ಮ ಅಧಿಕಾರಿಯ ವರ್ತನೆ ವಿರುದ್ಧ.

ಆದುದರಿಂದ ಇನ್ನು ಮುಂದೆ ತಾವು ಉತ್ತರ ಕೊಡುವ ಕಾಲದಲ್ಲಿ ಹತ್ತಾರು ಆಸ್ಪತ್ರೆಗಳ ಉದಾಹರಣೆಯನ್ನು ನಾನು ಕೊಡುತ್ತೇನೆ, ಪತ್ರ ಬರೆದರೂ ಉತ್ತರವನ್ನು ಕೊಡುವುದಿಲ್ಲ. ಆದುದರಿಂದ ಪ್ರಿವಿಲೇಜ್ ಮೂವ್ ಮಾಡಿದಾಗ ಯಾವುದೇ ಒಬ್ಬ ಅಧಿಕಾರಿ ಮೇಲೆ ಕ್ರಮ ತೆಗೆದುಕೊಂಡರೆ ನಿಮಗೆ ಅದು ಸಹಕಾರಿಯಾಗುತ್ತದೆ. ಅದರಿಂದ ಪರಸ್ಪರ ನಾವು ಕುಳಿತು ಕೆಲಸ ಮಾಡಬಹುದು. ಕೊನೆಯದಾಗಿ ನೀವು ಯಾರೇ ಸರ್ಕಾರ ನಡೆಸಿದರೂ ಅಲ್ಲಿ ಕುಳಿತಿರುವಂತಹ ಅಧಿಕಾರಿಗಳಿಂದ ಒಳ್ಳೆಯ ಹೆಸರು ಬರಬೇಕು. ಅವರು ಸರಿಯಾಗಿ ನಡೆದುಕೊಳ್ಳದೆ ಇದ್ದರೆ ನಾವು ತಲೆತಗ್ಗಿಸಬೇಕಾಗುತ್ತದೆ. ಇದು ಪುನರಾವರ್ತನೆಯಾಗದ ರೀತಿಯಲ್ಲಿ ಮಾಡುವುದಕ್ಕೆ ದಿಟ್ಟ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾವು ಪ್ರಿವಿಲೇಜ್ ಮೂವ್ ಮಾಡುತ್ತೇವೆ. ಆ ಸಮಯದಲ್ಲಿ ಏನು ಬರುತ್ತದೆ ನೋಡೋಣ. ಈ ಪ್ರಶ್ನೆಯನ್ನು ಈಗ ತಡೆಹಿಡಿಯಬೇಕು. ಇದಕ್ಕೆ ನಂತರ ಉತ್ತರ ಕೊಡಲಿ.

ಶ್ರೀ ಎಸ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸರ್‌ಪ್ಲಸ್ ಆ ಔಷಧವನ್ನು ವಿತರಣೆ ಮಾಡಿದ್ದೇವೆ ಎನ್ನುವ ಅಂಶವನ್ನು ಹೇಳಿದ್ದಾರೆ. ಪಶು ವೈದ್ಯಾಲಯಗಳಿಂದ ಯಾವುದಕ್ಕೆ ಆರ್ಡರ್ ಬಂದಿದೆ ? ತಾವು ಸಪ್ಲೈ ಮಾಡಿರುವುದು ಯಾವುದು? ಅದು ಜಿಲ್ಲಾ ಮಟ್ಟದಲ್ಲಿ ಇರಬಹುದು, ತಾಲ್ಲೂಕು ಮಟ್ಟದಲ್ಲಿ ಇರಬಹುದು. ಆದುದರಿಂದ ಯಾವುದು ಆರ್ಡರ್ ಮಾಡಿದ್ದು, ಯಾವುದು ಸಪ್ಲೈ ಮಾಡಿರುವುದು ಎನ್ನುವ ವಿವರಣೆಯನ್ನು ತಾವು ಕೊಟ್ಟಲ್ಲಿ ಸರ್‌ಪ್ಲಸ್ ಆಗಿ ತಾವು ಸಪ್ಲೈ ಮಾಡಿರುವುದು ಯಾವುದು ಎನ್ನುವ ಸತ್ಯಾಸಂಗತಿ ಗೊತ್ತಾಗುತ್ತದೆ. ಇದನ್ನು ತಾವು ಹೇಳಬೇಕು.

ಅಧ್ಯಕ್ಷರು : ಈ ಪ್ರಶ್ನೆಯನ್ನು ತಡೆ ಹಿಡಿಯುತ್ತೇನೆ.

ಶ್ರೀ ಓಲೀಕಾರ್ ನೆಹರು ಚೆನ್ನಬಸಪ್ಪ : ಮಾನ್ಯ ಅಧ್ಯಕ್ಷರೆ, ಒಂದು ಸಣ್ಣ ವಿಚಾರ ಇದೆ. ಅದನ್ನು ಸರ್ಕಾರದ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : ಆಯಿತು ನಾನು ಹೇಳುತ್ತೇನೆ, ಈ ಪ್ರಶ್ನೆ ಬಗ್ಗೆ ಸಮಗ್ರವಾಗಿ ಎಲ್ಲಾ ವರದಿ ತರಿಸಿ, ನಿಮ್ಮ ಅಧಿಕಾರಿಗಳ ಹತ್ತಿರ ಚರ್ಚೆಮಾಡಿ ಉತ್ತರವನ್ನು ಈ ಅಧಿವೇಶನದಲ್ಲಿ ಕೊಡಬೇಕು. ಆಮೇಲೆ ಈ ರೀತಿ ಪ್ರವೃತ್ತಿಯಾಗಿ ಯಾವುದೋ ಒಂದು ರೀತಿಯಲ್ಲಿ ಕಾಟಾಚಾರಕ್ಕೆ ಉತ್ತರ ಹೇಳುತ್ತಾರಲ್ಲ ಅವರ ಮೇಲೆ ತೆಗೆದುಕೊಂಡು ನಾಲ್ಕನೇ ತಾರೀಖಿನೊಳಗೆ ಈ ಸದನಕ್ಕೆ ತಾವು ರಿಪೋರ್ಟ್ ಕೊಡಬೇಕು.

ವಿದ್ಯಾರ್ಥಿನಿಯರಿಗೆ ವಸತಿ ನಿಲಯದ ಅವಶ್ಯಕತೆ.

33(206) ಶ್ರೀ ಗಂಗಾಧರ ನಾಗೇಶ ಭಟ್(ಕಾರವಾರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜೊಯಿಡಾ ತಾಲ್ಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಿ.ಸಿ.ಎಂ. ಹಾಸ್ಟೆಲ್‌ಗಳು ಯಾವುವು;

ಆ) ಇವುಗಳಲ್ಲಿ ವಿದ್ಯಾರ್ಥಿನಿಯರಿಗಾಗಿ ಇರುವ ವಸತಿ ನಿಲಯಗಳು ಯಾವುವು;

ಇ) ಜೊಯಿಡಾದಲ್ಲಿ ವಿದ್ಯಾರ್ಥಿನಿಯರಿಗಾಗಿ ವಸತಿ ನಿಲಯಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಗಂಗಾಧರ್ ನಾಗೇಶ ಭಟ್(ಸಮಾಜ ಕಲ್ಯಾಣ ಸಚಿವರು):

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿನ ಜೊಯಿಡಾ ತಾಲ್ಲೂಕಿನಲ್ಲಿನ ಹಿಂದುಳಿದ ವರ್ಗಗಳ 6 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿವೆ, ಇವುಗಳ ಪೈಕಿ ಜೊಯಿಡಾದಲ್ಲಿ ಒಂದು ಬಾಲಕಿಯರ ವಿದ್ಯಾರ್ಥಿ ನಿಲಯವಿದೆ ವಿವರಗಳು ಕೆಳಗೆ ನಮೂದಿಸಿದೆ.

ಕ್ರಮ ಸಂಖ್ಯೆ	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದ ಹೆಸರು	ಬಾಲಕ ಬಾಲಕಿ	ಮಂಜೂರಾತಿ
1.	ಜೊಯಿಡಾ ಟೌನ್	ಬಾಲಕಿ	50
2.	ಜೊಯಿಡಾ	ಬಾಲಕ	50
3.	ಉಳವಿ	ಬಾಲಕ	50
4.	ಕುಂಬಾರವಾಡ	ಬಾಲಕ	50
5.	ಕ್ಯಾನಲ್‌ವಾಕ್	ಬಾಲಕ	50
6.	ಜಗಲಬೇಟೆ	ಬಾಲಕ	50

ಅ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಗಂಗಾಧರ್ ನಾಗೇಶ್ ಭಟ್ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವಂತಹ ಪ್ರಶ್ನೆಗೆ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಉತ್ತರ ಹೇಳುತ್ತಿದ್ದಾರೆ. ನಾನು ಹೋದಬಾರಿ ಇದೇ ಪ್ರಶ್ನೆಯನ್ನು ಸದನದಲ್ಲಿ ಕೇಳಿದ್ದೆನು. ನನಗೆ ಬರುವುದು ಕಾರವಾರ ಮತ್ತು ಜೋಯಿಡಾ ಕ್ಷೇತ್ರಗಳು. ಅದರಲ್ಲಿ ಅತೀ ದೊಡ್ಡದಾದ ಕ್ಷೇತ್ರವೆಂದರೆ ಜೋಯಿಡಾ. ಅದು ಕಾರವಾರಕ್ಕಿಂತ ಮೂರು ಪಟ್ಟು ದೊಡ್ಡದಿದೆ. ಅದರಲ್ಲಿ 15 ಪಂಚಾಯತಿಗಳು ಇವೆ. ಅದರಲ್ಲಿ ಕೇವಲ ಎಂಟು ಪಂಚಾಯಿತಿ ಕ್ಷೇತ್ರದಲ್ಲಿ ಸ್ಕೂಲ್‌ಗಳು ಇದೆ. ಬಾಕಿ ಪಂಚಾಯಿತಿ ವ್ಯಾಪ್ತಿಯಲ್ಲಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು ಮಾತ್ರ ಇದೆ. ಅದರಲ್ಲಿ ಸುಮಾರು 15 ರಿಂದ 20 ಕಿಲೋಮೀಟರ್ ಅಂತರದಲ್ಲಿ ಒಂದು ಪಂಚಾಯಿತಿಯಿಂದ ಇನ್ನೊಂದು ಹಳ್ಳಿಗೆ ನಡೆದುಕೊಂಡು ಹೋಗಬೇಕಾಗುತ್ತದೆ. ಅದೂ ಕೂಡ ದಟ್ಟವಾದ ಅಡವಿ. ಈ ಕ್ಷೇತ್ರದಲ್ಲಿ ಒಂದೆ ಒಂದು ಬಾಲಕಿಯರ ಹಾಸ್ಟೆಲ್ ಇದೆ. ಅದು ಸಾಕಾಗುವುದಿಲ್ಲವೆಂದು ಜನ ಸಂಪರ್ಕ

ಸಭೆಯಲ್ಲಿ ಚರ್ಚೆಯಾಗಿದೆ. ಅದಕ್ಕಾಗಿ ಅಲ್ಲಿ ಒಂದು ಬಾಲಕಿಯರ ಹಾಸ್ಟೆಲ್ ಅವಶ್ಯಕತೆ ಇದೆ. ಅಲ್ಲಿ ವಾಹನ ಸೌಕರ್ಯ ಯಾವುದೂ ಇಲ್ಲ. ಅಲ್ಲಿ ರಸ್ತೆಗಳೂ ಕೂಡ ಸರಿಯಾಗಿ ಇಲ್ಲ. ಸುಮಾರು 10–20 ಕಿಲೋಮೀಟರ್ ನಡೆದುಕೊಂಡು ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಹುಡುಗಿಯರು ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಯ ನಂತರ ಮನೆಯಲ್ಲೇ ಕುಳಿತುಕೊಳ್ಳುತ್ತಾರೆ. ಅದಕ್ಕಾಗಿ ಆ ಹಾಸ್ಟೆಲ್‌ಗಳ ಅವಶ್ಯಕತೆ ಇದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ.

ಡಾ: ವೈ. ನಾಗಪ್ಪ(ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳುತ್ತಿರುವಂತಹ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಲಾಗಿದೆ. ಮಾನ್ಯ ಸದಸ್ಯರು ಕೇಳಿರುವಂತೆ ಜೊಯಿಡಾ ಟೌನ್‌ನಲ್ಲಿ ಒಂದು ಬಾಲಕಿಯರ ವಿದ್ಯಾರ್ಥಿ ನಿಲಯ ಇದೆ. ಮತ್ತು ಜೊಯಿಡಾದಲ್ಲಿ ಬಾಲಕರ ವಿದ್ಯಾರ್ಥಿ ನಿಲಯ ಇದೆ, ಅದೇ ರೀತಿಯಲ್ಲಿ ಉಳವಿ, ಕುಂಬಾರವಾಡ, ಕ್ಯಾನಲ್‌ರಾಕ್, ಜಗಲಪೇಟೆ, ಎಲ್ಲಾ ಕಡೆಗಳಲ್ಲೂ ಬಾಲಕರ ವಿದ್ಯಾರ್ಥಿ ನಿಲಯಗಳು ಇವೆ. ಈಗ ಮಾನ್ಯ ಸದಸ್ಯರು, ಬಾಲಕಿಯರ ಹಾಸ್ಟೆಲ್ ಅನ್ನು ಕೇಳಿದ್ದಾರೆ, ಆದರೆ ನಮ್ಮ ಇಲಾಖೆಗೆ ಯಾವ ಪ್ರಸ್ತಾವನೆ ಬಂದಿಲ್ಲ. ಅದು ಬಂದನಂತರ ಪರಿಶೀಲನೆ ಮಾಡುತ್ತೇನೆ, ಇದರ ಅವಶ್ಯಕತೆ ಇದೆಯೆಂದು ನನಗೂ ಅನ್ನಿಸುತ್ತದೆ. ಖಂಡಿತವಾಗಿ ಇದನ್ನು ಒದಗಿಸಿಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಕುಣಬಿ ಸಮಾಜ ಎಂದು ಇದೆ, ಇವರು ಬುಡಕಟ್ಟು ಸಮಾಜಕ್ಕೆ ಸೇರಿದ್ದು, ಇವರಲ್ಲಿ ಅನೇಕ ಸಮಸ್ಯೆಗಳು ಇವೆ. ಅವರು ಶಾಲೆಗೆ ಹೋಗುವುದೆಂದರೆ ನಮಗೆ ಬಹಳ ಸಂತೋಷ ತರುವಂಥಾದ್ದು ನಾವು ಅವರಿಗೆ ಈ ಸೌಲಭ್ಯವನ್ನು ಕೊಡುವಂಥಾದ್ದು, ಇದು ಸರ್ಕಾರ ಕೊಡಬೇಕಾದಂತಹ ಪ್ರಾಥಮಿಕ ಅಗತ್ಯತೆ ಇದೆ. ಆದುದರಿಂದ ಈ ಕುಣಬಿ ಸಮಾಜದ ಅಭಿವೃದ್ಧಿ ದೃಷ್ಟಿಯಿಂದ ಮತ್ತು ಅವರು ಶೈಕ್ಷಣಿಕವಾಗಿ ಮುಂದೆ ಬರುವ ದೃಷ್ಟಿಯಿಂದ ಇವರಿಗೆ ಬಾಲಕಿಯರ ಹಾಸ್ಟೆಲ್ ಬೇಕೇ ಬೇಕು.

ಅಧ್ಯಕ್ಷರು : ಈಗ ಮಾನ್ಯ ಮಂತ್ರಿಯವರು ಅದನ್ನು ಪರಿಶೀಲನೆ ಮಾಡುತ್ತೇನೆ. ಅದನ್ನು ನಾವು ಕೊಡುತ್ತೇವೆಂದು ಮಾತನ್ನು ಹೇಳಿದ್ದಾರಲ್ಲಾ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಮಗೆ ಉತ್ತರದಲ್ಲಿ ಅಗತ್ಯವಿದೆಯೆಂದು ಕೇಳಿದ್ದೇವೆ.

ಅಧ್ಯಕ್ಷರು : ಅವರು ಸದನದಲ್ಲಿ ಏನು ಉತ್ತರವನ್ನು ಹೇಳಿದ್ದಾರೆ, ಅದನ್ನು ತೆಗೆದುಕೊಳ್ಳಬೇಕು ಅವರು ಹೇಳಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಆದರೆ ಅದನ್ನು ವಿಶೇಷವಾಗಿ ಗಮನಿಸಬೇಕು. ಇಲ್ಲಿ ಮಾನ್ಯ ಉಸ್ತುವಾರಿ ಸಚಿವರು ಇದ್ದಾರೆ. ಅಲ್ಲಿಯ ಸಮಸ್ಯೆಗಳು ಅವರಿಗೂ ಗೊತ್ತಿದೆ. ಮಾನ್ಯ ಆರ್.ವಿ. ದೇಶಪಾಂಡೆಯವರಿಗೂ ಗೊತ್ತಿದೆ. ಈ ಜೊಯಿಡಾ ತಾಲ್ಲೂಕಿನಲ್ಲಿ ಕುಣಬಿಯವರು ಹೆಚ್ಚಿಗೆ ಇರುವುದಿರಂದ, ಅಲ್ಲಿ ಬಾಲಕಿಯರ ವಸತಿ ನಿಲಯ ಬೇಕೆಂದು ಶ್ರೀ ಗಂಗಾಧರ್ ಭಟ್‌ರವರು ಪ್ರಶ್ನೆಯನ್ನು ಕೇಳಿದ್ದಾರೆ, ಇದಕ್ಕೆ ಸರ್ಕಾರ ನಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ, ಇದರ ಅಗತ್ಯವಿದೆಯೆಂದು ನನಗನ್ನಿಸಿದೆ, ಅದನ್ನು ಕೊಡುತ್ತೇವೆಂದು ಹೇಳಿದ್ದಾರೆ, ತಾವು ಸಚಿವರು ಇದ್ದೀರಿ, ತಮಗೂ ಆ ಸಮಾಜದ ಶೈಕ್ಷಣಿಕ ಪರಿಸ್ಥಿತಿ ಇದೆಯೆಂಬುದು ಗೊತ್ತಿದೆ. ಆದುದರಿಂದ ತಾವೂ ಸಹ ಹಾಸ್ಟೆಲ್ ಅನು ಮಂಜೂರು ಕೊಡಬೇಕೆಂದು ನಾನು ತಮ್ಮ ಮುಖಾಂತರ ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು, ಇನ್ನು ತಾವು ಕುಳಿತುಕೊಳ್ಳಿ, ಈಗ ಪ್ರಶ್ನೋತ್ತರ ನಡೆಯುತ್ತಿದೆ, ಮಾನ್ಯ ಮಂತ್ರಿಯವರು ಉತ್ತರವನ್ನು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಈ ಸದನದ ಮೂಲಕ ರಾಜೀನಾಮೆಯನ್ನು ಕೇಳಿದ್ದೆ. ಇನ್ನು ಕೇಳುವುದಕ್ಕೆ ಹೋಗುವುದಿಲ್ಲ. ನಾನು ಕೇಳಿದ್ದನ್ನು ಹಿಂತೆಗೆದುಕೊಂಡಿದ್ದೇನೆ. ಮಾನ್ಯ ಮಂತ್ರಿಯವರಿಗೆ ಹುಷಾರಿಲ್ಲ, ನನ್ನ ಮೇಲೆ ತಪ್ಪು ತಿಳಿದುಕೊಂಡು, ನೀವು ಖಾಯಿಲೆ ಗೀಯಲೆ ಬಿದ್ದುಬಿಡುತ್ತೀರಿ ಎಂದು ನಾನು ಕೇಳಿರುವಂತಹ ರಾಜೀನಾಮೆಯನ್ನು ಹಿಂದಕ್ಕೆ ಪಡೆದಿದ್ದೇನೆ.

ಡಾ.ವೈ. ನಾಗಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಕೇಳಿರುವ ವಿಷಯದ ಬಗ್ಗೆ, ಇದು ನಿಜವಾಗಿ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವಂತಹ ವಿಚಾರವಾಗಿದೆ. ಇದರ ಬಗ್ಗೆ ಗಮನಹರಿಸಿ, ತೀವ್ರಗತಿಯಾಗಿ ಪರಿಶೀಲನೆ ಮಾಡಿ, ಮತ್ತೆ ನಮ್ಮ ಉಸ್ತುವಾರಿ ಮಂತ್ರಿಗಳಾದ ಶ್ರೀ ಆರ್.ವಿ. ದೇಶಪಾಂಡೆಯವರು ಇದ್ದಾರೆ, ಅವರೂ ಕೇಳಿದ್ದಾರೆ, ಇದರ ಬಗ್ಗೆ ನಿಜವಾಗಿ ಚಿಂತನೆ ಮಾಡಿ, ಈ ವಿದ್ಯಾರ್ಥಿ ನಿಲಯವನ್ನು ಒದಗಿಸುತ್ತೇವೆಂದು ಈ ಸದನದ ಮೂಲಕ ಹೇಳಲಿಚ್ಛಿಸುತ್ತೇನೆ.

ವಿರಾಜ ಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಗಿರಿಜನ ಬಾಲಕರ ವಸತಿ ಶಾಲೆ ನಿರ್ಮಾಣದಲ್ಲಿ ಹಣ ದುರ್ಬಳಕೆ

34(1148) ಶ್ರೀ ಬಸವರಾಜ್ ಹೆಚ್.ಡಿ. (ವಿರಾಜ ಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಾಳುಗೋಡು ಗಿರಿಜನ ಬಾಲಕರ ವಸತಿ ಶಾಲೆ ನಿರ್ಮಾಣಕ್ಕೆ ಸರ್ಕಾರದ (ಕೇಂದ್ರ) ಹಣ ಬಳಕೆ ಮಾಡಿಕೊಂಡಿದೆಯೇ ;

ಆ) ಬಳಕೆ ಮಾಡಿದಲ್ಲಿ ಇದರಲ್ಲಿ ಬಹಳಷ್ಟು ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ದುರ್ಬಳಕೆ ಸ್ವರೂಪಗಳೇನು, ಇದರಲ್ಲಿ ಅವ್ಯವಹಾರವಾಗಿರುವ ಹಣವೆಷ್ಟು;

ಇ) ಕಳಪೆ ಕಾಮಗಾರಿ ಕೈಗೊಂಡಿದ್ದಲ್ಲಿ ಯಾವ ಕ್ರಮವನ್ನ ಸರ್ಕಾರ ಕೈಗೊಂಡಿದೆ;

ಈ) ಈ ವಸತಿ ಶಾಲೆ ಪ್ರಾರಂಭಕ್ಕೆ ಸರ್ಕಾರ ಯಾವ ಅಗತ್ಯ ಕ್ರಮವನ್ನು ಕೈಗೊಳ್ಳಲಿದೆ ;

ಉ) ಜಿಲ್ಲೆಯಲ್ಲಿರುವ ವಸತಿ (ಆಶ್ರಮ) ಶಾಲೆಗಳುಎಷ್ಟು ? ಹೊಸದಾಗಿ ಮಂಜೂರು ಮಾಡಲು ಉದ್ದೇಶಿಸಿರುವ ಸ್ಥಳಗಳಾವುವು ?

ಶ್ರೀ ಬಸವರಾಜ್ ಹೆಚ್.ಡಿ. (ಸಮಾಜ ಕಲ್ಯಾಣ ಸಚಿವರು):

ಅ) ಹೌದು,

ಆ) ಯಾವುದೇ ರೀತಿಯ ಅವ್ಯವಹಾರಗಳು ನಡೆದಿರುವುದು ಗಮನಕ್ಕೆ ಬಂದಿರುವುದಿಲ್ಲ

ಇ) ಕಾರ್ಯನಿರ್ವಾಹಕ ನಿರ್ದೇಶಕರು ಕಾಮಗಾರಿಯು ತೃಪ್ತಿಕರವಾಗಿದೆ ಎಂದು ವಂದಿಸಿದ್ದಾರೆ.

ಈ) ಪ್ರಸಕ್ತ ಖಾಸಗಿ ಕಟ್ಟಡದಲ್ಲಿ ನಡೆಯುತ್ತಿರುವ ವಸತಿ ಶಾಲೆಯನ್ನು ನೂತನ ಕಟ್ಟಡಕ್ಕೆ ಸ್ಥಳಾಂತರಿಸಲು ಕಾರ್ಯನಿರ್ವಾಹಕ ನಿರ್ದೇಶಕರು ದಿ : 5–11–2004ರಂದು ನಿರ್ದೇಶನ ನೀಡಿರುತ್ತಾರೆ.

ಉ) ಜಿಲ್ಲೆಯಲ್ಲಿ ಒಟ್ಟು 12 ಪರಿಶಿಷ್ಟ ವರ್ಗದ ಆಶ್ರಮಶಾಲೆಗಳು ಇರುತ್ತವೆ, ಹೊಸದಾಗಿ ಪರಿಶಿಷ್ಟ ವರ್ಗದ ಆಶ್ರಮ ಶಾಲೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ವೀರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಾಳುಗೋಡು ಗಿರಿಜನ ಬಾಲಕರ ವಸತಿ ಶಾಲೆಗೋಸ್ಕರ ಇವತ್ತು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ, ಹಲವಾರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ಇದರಲ್ಲಿ ಕೇಂದ್ರ ಸರ್ಕಾರ ಎಷ್ಟು ಹಣವನ್ನು ಮಂಜೂರು ಮಾಡಿದೆ. ಮತ್ತು ಇದರ ಜೊತೆಗೆ ರಾಜ್ಯ ಸರ್ಕಾರ ಎಷ್ಟು ಮ್ಯಾಚಿಂಗ್ ಗ್ರಾಂಟ್ ಕೊಟ್ಟಿದೆ? ಇದರಲ್ಲಿ ಎಷ್ಟು ಹಣ ಖರ್ಚಾಗಿದೆ, ಇದು ನನ್ನ ಮೊದಲನೆಯ ಪ್ರಶ್ನೆ. ಎರಡನೆಯದಾಗಿ ಇನ್ನು ಯಾವ್ಯಾವ ಕಾಮಗಾರಿಗಳು ಈ ವಸತಿ ಶಾಲೆಯಲ್ಲಿ ಆಗಬೇಕಾಗಿದೆ? ಅವು ಯಾವ್ಯಾವು ? ಈ ಕಾಮಗಾರಿಗಳಿಗೆ, ಎಷ್ಟು ಹಣ ವೆಚ್ಚವಾಗಬೇಕಾಗಿದೆ ? ಮತ್ತೆ ಈ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸುತ್ತಾರೆ ?

ಡಾ: ವೈ. ನಾಗಪ್ಪ(ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಲಾಗಿದೆ. ಈಗ ಇವರ ಉಪ ಪ್ರಶ್ನೆಗಳಿಗೆ ಸಧ್ಯದಲ್ಲಿ ನಮ್ಮಲ್ಲಿ ಮಾಹಿತಿಗಳು ಇಲ್ಲ. ಮಾನ್ಯ ಸದಸ್ಯರು ಬೇರೆ ಪ್ರಶ್ನೆಗಳ ಮೂಲಕ ಕೇಳಿದರೆ, ನಾನು ಅದಕ್ಕೆ ಉತ್ತರವನ್ನು ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಬಸವರಾಜುರವರೆ, ಮಾನ್ಯ ಮಂತ್ರಿಗಳು ಹೊಸಬರಾಗಿದ್ದಾರೆ. ನೀವು ಅವರ ಕಚೇರಿಗೆ ಹೋಗಿ, ಮಾತನಾಡಿದರೆ ನಿಮ್ಮ ಸಮಸ್ಯೆ ಬಗೆಹರಿಯುತ್ತದೆ. ಆದುದರಿಂದ ತಾವು ದಯಮಾಡಿ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ನಾನು ಅದನ್ನು ಒಪ್ಪುತ್ತೇನೆ. ಈಗ ಪ್ರಶ್ನೆಗೆ ಪೂರಕವಾದ ಪ್ರಶ್ನೆಯನ್ನು ಕೇಳುತ್ತೇನೆ, ಅದಕ್ಕೆ ಅವರು ಉತ್ತರವನ್ನು ಒದಗಿಸಲಿ. ಇಲ್ಲಿ ಕಳಪೆ ಕಾಮಗಾರಿಯಾಗಿಲ್ಲವೆಂದು ಹೇಳಿದ್ದೀರಿ ಕಾರ್ಯನಿರ್ವಾಹಕ ನಿರ್ದೇಶಕರು ಕಾಮಗಾರಿಯು ತೃಪ್ತಿಕರವಾಗಿದೆಯೆಂದು ವರದಿ ನೀಡಿದ್ದಾರೆಂದು ಹೇಳಿದ್ದೀರಿ. ಅದನ್ನು ತಾವು ಇಲ್ಲಿ ನನಗೆ ಒದಗಿಸಿದ್ದೀರಿ. ಅಲ್ಲಿ ಖಂಡಿತವಾಗಿಯೂ ಕಳಪೆ ಕಾಮಗಾರಿಯಾಗಿದೆ. ಈಗ ತಾವು ಅಲ್ಲಿಗೆ ಭೇಟಿ ನೀಡಿದರೆ, ಇಲ್ಲಿ ಉತ್ತರದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು ಏನು ಸತ್ಯಾಂಶವೆಂದು ಕೊಟ್ಟಿದ್ದಾರೋ, ಅವರು ಮನೆಗೆ ಹೋಗಬೇಕಾಗುತ್ತದೆ. ನಾನು ಅದನ್ನೇ ನಿದರ್ಶನದ ಸಮೇತ, ಆ ಕಟ್ಟಡ ಹೇಗಿದೆಯೆಂಬುದನ್ನು ಆ ಕಟ್ಟಡ ಹೇಗಿದೆಯೆಂಬುದನ್ನು ತಮಗೆ ತೋರಿಸುತ್ತೇನೆ. ಈಗಾಗಲೇ ಕಾರ್ಯನಿರ್ವಾಹಕ ನಿರ್ದೇಶಕರು ಕಾಮಗಾರಿಯೂ ತೃಪ್ತಿಕರವಾಗಿದೆಯೆಂದು ವರದಿಯನ್ನು ಸಲ್ಲಿಸಿದ್ದಾರಲ್ಲಾ, ಅದನ್ನು ತಾವೇ ಪರಿಶೀಲನೆ ಮಾಡಿ, ಈಗ ಅವರು ದಿನಾಂಕ : 5-10-2004ರಂದು ವಸತಿ ಶಾಲೆಯನ್ನು ವರ್ಗಾವಣೆ ಮಾಡಲು ಆದೇಶವನ್ನು ಕೊಟ್ಟಿದ್ದಾರೆ. ಅದನ್ನು ತಡೆಹಿಡಿಯಿರಿ. ತಾವು ಮತ್ತು ನಾವು ಒಂದು ಸಾರಿ ಹೋಗಿ ತಪಾಸಣೆ ಮಾಡಿದ ಮೇಲೆ ಅದು ಸರಿಯಾಗಿದೆ, ಕಳಪೆ ಕಾಮಗಾರಿಯಾಗಿಲ್ಲವೆಂದರೆ ಮಾತ್ರ, ಆ ಶಾಲೆಯ ವರ್ಗಾವಣೆಗೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಈ ಸದನದ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ಇವತ್ತು ರಾಜ್ಯದಲ್ಲಿ ಪ್ರತಿಷ್ಠಿತವಾದಂತಹ ವಸತಿ ಶಾಲೆ ಇದು ಆಗಿದೆ. ರಾಜ್ಯದಲ್ಲಿ ಎರಡೇ ಎರಡು ವಸತಿ ಶಾಲೆಗಳು ಇದೆ, ಈ ಒಂದು ವಸತಿ ಶಾಲೆಗೆ ತಾವು ಆದ್ಯತೆಯನ್ನು ಕೊಡಬೇಕು. ಇದು ಗಿರಿ ಜನರಿಗೋಸ್ಕರ ಆಗಿರುವಂಥಾದ್ದು. ತಾವು ಇದಕ್ಕೆ ಅದ್ಯತೆಯನ್ನು ಕೊಡಬೇಕೆಂಬ ದೃಷ್ಟಿಯಿಂದ, ಇದನ್ನು ತಾವು ಖುದ್ದಾಗಿ ಪರಿಶೀಲನೆ ಮಾಡಬೇಕೆಂದು ಕೋರುತ್ತಿದ್ದೇನೆ.

ಡಾ: ವೈ. ನಾಗಪ್ಪ : ಮಾನ್ಯ ಅಧ್ಯಕ್ಷರೆ, ದಿನಾಂಕ : 25–11–2004ರಂದು ಅಧ್ಯಕ್ಷರನ್ನು, ಆ ಅಧಿಕಾರವನ್ನು, ಕಂಟ್ರಾಕ್ಟರ್‌ದಾರರನ್ನು ಕರೆಸಿ, ಒಂದು ಸಭೆಯನ್ನು ನಡೆಸಿದೆ. ಆ ಸಭೆಯಲ್ಲಿ ಮಾನ್ಯ ಶಾಸಕರು, 13 ಪಾಯಿಂಟ್ಸ್‌ಗಳನ್ನು ಹೇಳಿದ್ದಾರೆ. ಆದಷ್ಟು ಅವುಗಳ ಬಗ್ಗೆ ಗಮನಹರಿಸಿದ್ದೇವೆ. ಪುನಃ ಅದನ್ನು ನೋಡಬೇಕು. At present, I feel. it is fit for occupation. ಇನ್ನೂ ಅದರ ಬಗ್ಗೆ ನಿಮಗೆ ಅನುಮಾನವಿದ್ದರೆ, ಸ್ವತಃ ನಾನು ಅಧಿಕಾರಿಗಳ ಜೊತೆಗೆ ಬಂದು ನೋಡಿ, ಅದು ಸರಿಯಾಗಿ ಇದ್ದರೆ, ಅದನ್ನು ವರ್ಗಾವಣೆ ಮಾಡುವ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರೆ ಸದನದಲ್ಲಿ ಇರುವುದರಿಂದ ನಾನು ಹೇಳುತ್ತಿದ್ದೇನೆ. ನಮ್ಮ ಶಿಕಾರಿಪುರದಲ್ಲಿ ಈಸೂರು ಒಂದು ಐತಿಹಾಸಿಕ ಸ್ಥಳವಾಗಿದೆ. ನಾನು ಒಂದು ವಾರದ ಹಿಂದ ಇನ್‌ಸ್ಪೆಕ್ಷನ್‌ಗೆ ಹೋಗಿದ್ದೆ. ಅಲ್ಲಿ ಎಸ್.ಸಿ. ಹೆಣ್ಣುಮಕ್ಕಳ ಹಾಸ್ಟೆಲ್ ಇದೆ. ಇದು 7–8 ವರ್ಷಗಳಾಗಿದೆ. ಇದಕ್ಕೆ 10–12 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಆ ಹಾಸ್ಟೆಲ್ ಒಳಗಡೆ ಒಬ್ಬರೂ ಹೋಗಿಲ್ಲ. ಅದು ಸೋರುತ್ತಿದೆ. ಹೇಳುವವರು ಕೇಳುವವರು ಯಾರೂ ಇಲ್ಲ. ಅಲ್ಲಿನ ಅಧಿಕಾರಿಗಳ ಜೊತೆಯಲ್ಲೂ ಮಾತನಾಡಿದೆ. ನಾನು ಇದು ಸಂದರ್ಭವಲ್ಲದಿದ್ದರೂ ತಮ್ಮ ಗಮನಕ್ಕೆ ಈ ವಿಚಾರವನ್ನು ತಂದಿದ್ದೇನೆ. ಅದನ್ನು ಸರಿಪಡಿಸಿ. ಇದು 8 ವರ್ಷಗಳಾಗಿದೆ, ಎಸ್.ಸಿ. ಹೆಣ್ಣುಮಕ್ಕಳ ಹಾಸ್ಟೆಲ್, ದುಡ್ಡು ಖರ್ಚು ಆಗಿವೆ. ಬಾಗಿಲು ತೆಗೆದಿಲ್ಲ, ಸೋರುತ್ತಿದೆ. ಹೇಳುವವರು, ಕೇಳುವವರು ಯಾರು ಇಲ್ಲ. ಇದುವರೆಗೂ ಒಬ್ಬರೂ ಅದನ್ನು ಉಪಯೋಗ ಮಾಡಿಲ್ಲ. ತಾವು ಇದನ್ನು ದಯವಿಟ್ಟು ನೋಡಬೇಕೆಂದು ಹೇಳುತ್ತೇನೆ.

ಡಾ: ವೈ. ನಾಗಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ವಿಷಯದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಡನೆ ಕೂಡಲೇ ಚರ್ಚೆ ಮಾಡಿ, ಅದರ ಬಗ್ಗೆ ಗಮನಹರಿಸುತ್ತೇನೆ.

ದೇವನಹಳ್ಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣದ ಬಗ್ಗೆ.

35(1137) ಶ್ರೀವಾಟಾಳ್ ನಾಗರಾಜ್ () : ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದೇವನಹಳ್ಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸಲು ಎಷ್ಟು ಎಕರೆ ಪ್ರದೇಶ ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ ;

ಆ) ಪ್ರಸ್ತುತ ವಿಮಾನ ನಿಲ್ದಾಣ ನಿರ್ಮಿಸಲು ಎಷ್ಟು ಎಕರೆ ಪ್ರದೇಶವನ್ನು ಗುರುತಿಸಲಾಗಿದೆ; ಗುರುತಿಸಿರುವ ಪ್ರದೇಶವನ್ನು ಸರ್ಕಾರವು ಸ್ವಾಧೀನಪಡಿಸಿಕೊಂಡಿದೆಯೇ ;

ಇ) ಸದರಿ ವಿಮಾನ ನಿಲ್ದಾಣ ಯೋಜನೆ ಕಾಮಗಾರಿ ಕೆಲಸಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು. ಅದರ ಅಂದಾಜು ವೆಚ್ಚವೆಷ್ಟು ಹಾಗೂ ಯೋಜನೆಯನ್ನು ಪೂರ್ಣಗೊಳಿಸಲು ಹಾಕಿಕೊಂಡಿರುವ ಕಾಲಮಿತಿ ಯಾವುದು ?

ಶ್ರೀಪಿ.ಜಿ.ಆರ್. ಸಿಂಧ್ಯ (ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು):

ಅ) ದೇವನಹಳ್ಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸಲು ಅಂದಾಜು 4100 ಎಕರೆ ಪ್ರದೇಶ ಬೇಕಾಗಬಹುದು.

ಆ) ಪ್ರಸ್ತುತ ವಿಮಾನ ನಿಲ್ದಾಣ ನಿರ್ಮಿಸಲು 4266 ಎಕರೆ 27.5 ಗುಂಟೆಗಳ ಪ್ರದೇಶವನ್ನು ಗುರುತಿಸಲಾಗಿದೆ. ಸರ್ಕಾರ ಸದರಿಪ್ರದೇಶವನ್ನು ಸ್ವಾಧೀನಪಡಿಸಿಕೊಂಡಿದೆ.

ಇ) ಮಾರ್ಚ್ 2005ರಲ್ಲಿ ಸದರಿ ವಿಮಾನ ನಿಲ್ದಾಣ ಕಾಮಗಾರಿ ಕೆಲಸಗಳನ್ನು ಪ್ರಾರಂಭಿಸಲಾಗುವುದು. ಯೋಜನೆಯ ಅಂದಾಜು ವೆಚ್ಚವನ್ನು ಹಣಕಾಸು ಸಮಾಪ್ತಿ ಆದ ನಂತರ ನಿಗಧಿಗೊಳಿಸಲಾಗುವುದು. ಇದನ್ನು ಮಾರ್ಚ್ 2005 ರಲ್ಲಿ ನಿರೀಕ್ಷಿಸಲಾಗಿದೆ. ಆಗಸ್ಟ್/ಸೆಪ್ಟೆಂಬರ್ 2004ರಲ್ಲಿ ವೆಚ್ಚವನ್ನು ರೂ. 1334 ಕೋಟಿಗಳೆಂದು ಅಂದಾಜಿಸಲಾಗಿತ್ತು. ಯೋಜನೆ ಪೂರ್ಣಗೊಳಿಸಲು ಹಾಕಿಕೊಂಡಿರುವ ಕಾಲಮಿತಿ ಹಣಕಾಸಿನ ಸಮಾಪ್ತಿ ಆದನಂತರ 33 ತಿಂಗಳುಗಳು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಯೋಜನೆಯನ್ನು ಕೈಗೆತ್ತಿಕೊಂಡಿರುವ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ ಮತ್ತು ಕೇಂದ್ರ ಸರ್ಕಾರ ಮಾಡಿಕೊಂಡಿರುವ ಒಪ್ಪಂದ ಮುಗಿದಿದೆಯೇ ? ಕರ್ನಾಟಕ ಸರ್ಕಾರದಿಂದ ಈ ಯೋಜನೆಗೆ ಯಾವುದಾದರೂ ವಿಳಂಬ ಇದೆಯೆ ? ಈ ಯೋಜನೆಗೆ ರಾಜ್ಯದ ಮತ್ತು ಕೇಂದ್ರದ ಬಂಡವಾಳ ಎಷ್ಟು ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಕೈಗಾರಿಕೆ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಯೋಜನೆಗೆ ರಾಜ್ಯ ಸರ್ಕಾರದಿಂದ, ಬೆಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ ಏನು ಇದೆ, ಇದು ಬಿ.ಓ.ಓ.ಟಿ. ಆಧಾರದ ಮೇಲೆ ಕಟ್ಟತಕ್ಕಂಥ ಈ ಯೋಜನೆಗೆ ರಾಜ್ಯ ಸರ್ಕಾರದಿಂದ ಆಗಬೇಕಾದಂತಹ ಅಗ್ರಿಮೆಂಟ್ ಯಾವುದೂ ಇಲ್ಲ. ಆದರೆ ಇನ್ನೂ ಮೂರು ಅಗ್ರಿಮೆಂಟ್ ಆಗಬೇಕಾದಂಥದ್ದು ಇದೆ. (1) ಸಿ.ಎನ್.ಎಸ್. ಅಗ್ರಿಮೆಂಟ್, ಈ ಸಿ.ಎನ್.ಎಸ್. ಅಗ್ರಿಮೆಂಟ್ ಬಿ.ಐ.ಇ.ಎಲ್. ಕಂಪೆನಿ. ಬೆಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್, ಮತ್ತು ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ ಕೇಂದ್ರ ಸರ್ಕಾರ ಇವರ ಮಧ್ಯೆ ಒಂದು ಒಪ್ಪಂದವಾಗುವಂಥದ್ದು ಇದೆ. ಅದು ಒಂದು ಫಾರ್ಮಿಲಿಟಿ. ಅಷ್ಟೆ ಇದು ಸಧ್ಯದಲ್ಲೇ ಆಗುತ್ತದೆ. 2. ಇ.ಪಿ.ಪಿ. ಕಂಟ್ರಾಕ್ಟ್, ಅಂದರೆ ಕಂಟ್ರಾಕ್ಟ್ ಪಾರ್ಟ್‌ನರ್ಸ್ ಒಳಗೆ ಬಿ.ಐ.ಎ.ಎಲ್. ಕಂಪೆನಿ ಮತ್ತು ಕಂಟ್ರಾಕ್ಟ್, ಅವರ ಮಧ್ಯೆ ಒಂದು ಒಪ್ಪಂದ ಆಗಬೇಕಾಗಿದೆ. ಅದರಲ್ಲೂ ರಾಜ್ಯ ಸರ್ಕಾರದಿಂದ ಆಗಬೇಕಾದಂತಹ ಒಪ್ಪಂದ ಯಾವುದೂ ಇಲ್ಲ. (3.) ಓ.ಎಂ.ಎಸ್.ಎ. ಅಗ್ರಿಮೆಂಟ್ ಇದೆ. ಇದೂ ಸಹಿತ ಬಿ.ಐ.ಎ.ಎಲ್. ಕಂಪೆನಿ ಮತ್ತು ಜ್ಯೂರಿಕ್ ಕಂಪೆನಿಯವರ ಜೊತೆ ಆಗಿರುವಂಥಾದ್ದು. ಬಿ.ಎ.ಐ.ಎಲ್. ಕಂಪೆನಿ ಮಾಡಿಕೊಳ್ಳಬೇಕಾದಂತಹ ಒಂದು ಅಗ್ರಿಮೆಂಟ್ ಬಿಟ್ಟರೆ ಇನ್ನು ಯಾವ ಅಗ್ರಿಮೆಂಟ್ ಉಳಿದಿಲ್ಲವೆನ್ನುವ ವಿಚಾರ ತಿಳಿದುಕೊಂಡಿದ್ದೇನೆ. ಕೇಂದ್ರ ಸರ್ಕಾರದಿಂದಲೂ ಬಾಕಿ ಉಳಿದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಈ ಮೂರು ಅಗ್ರಿಮೆಂಟ್‌ಗಳೂ ಇಂಟರ್ನಲ್ ಅಗ್ರೀಮೆಂಟ್‌ಗಳಾಗಿವೆ. ರಾಜ್ಯ ಸರ್ಕಾರದಿಂದ ಇನ್ನಾವುದೂ ಬಾಕಿ ಉಳಿದಿಲ್ಲ. ಫೈನ್ಯಾನ್ಷಿಯಲ್ ಕ್ಲೋಷರ್ ಆಗುತ್ತದೆ. ಫೈನ್ಯಾನ್ಷಿಯಲ್ ಕ್ಲೋಷರ ಬಹುಶಃ ಫೆಬ್ರವರಿ, ಮಾರ್ಚಿನಲ್ಲಿ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗಾಗಿ, ಮಾರ್ಚ್, ಏಪ್ರಿಲ್‌ನಲ್ಲಿ ಕೆಲಸ ಪ್ರಾರಂಭವಾಗಬಹುದು ಎಂದು ನಾನು ನಿರೀಕ್ಷೆ ಮಾಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮೊದಲು 4,500 ಎಕರೆ ಪ್ರದೇಶವನ್ನು ಈ ಯೋಜನೆಗೋಸ್ಕರ ಎಂದು ನಿಗಧಿಪಡಿಸಿ ತಾವು ವಶಪಡಿಸಿಕೊಂಡಿದ್ದೀರಿ. ಆದರೆ ಈಗ ನೀವು ನೀಡಿರುವ ಉತ್ತರದಲ್ಲಿ 4,100 ಎಕರೆ ಎಂದು ಇದೆ. ಉಳಿದ 400 ಎಕರೆಯನ್ನು ಯಾರ ಒತ್ತಡಕ್ಕಾಗಿ ಬಿಟ್ಟಿದ್ದೀರಿ, ಯಾವುದಕ್ಕೋಸ್ಕರ ಬಿಟ್ಟಿದ್ದೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದುವರೆಗೂ ನಾವು ವಿಮಾನ ನಿಲ್ದಾಣದ ಯೋಜನೆಗೆ ಅಕ್ವೈರ್ ಮಾಡಿಕೊಂಡಿರತಕ್ಕಂಥ ಜಮೀನು 4,266 ಎಕರೆ, ಆ ಯೋಜನೆಯನ್ನು ಫೈನಲ್ ಮಾಡುವಾಗ ಅಲೈನ್‌ಮೆಂಟ್ ಸ್ವಲ್ಪ ಚೇಂಜ್ ಆಗಿದೆ. ಅದಕ್ಕೋಸ್ಕರವಾಗಿ, ಇನ್ನೂ 263 ಎಕರೆ ಜಮೀನು ಬೇಕಾಗಿದ್ದು, it is under acquisition ಒಟ್ಟು 4,529 ಎಕರೆ ಭೂಮಿಯನ್ನು ನಾವು ಅಕ್ವೈರ್ ಮಾಡುತ್ತಿದ್ದೇನೆ ಅಕ್ವೈರ್ ಮಾಡತಕ್ಕಂಥ ಪ್ರೋಸಸ್‌ನಲ್ಲಿ 263 ಎಕರೆ ಇದೆ It is in the final stages. ಸರ್ಕಾರದ ವಶದಲ್ಲಿ ಈಗಾಗಲೇ 4,266 ಎಕರೆ ಇದೆ. ಈ 4,529 ಎಕರೆಯಲ್ಲಿ 3,284 ಎಕರೆಯನ್ನು ನಾವು ಲ್ಯಾಂಡ್ ಲೀಸ್ ಅಗ್ರೀಮೆಂಟ್ ಆಧಾರದಲ್ಲಿ ಮೊನ್ನೆ ಅವರಿಗೆ ಕೊಟ್ಟಿದ್ದೇವೆ. ಇನ್ನೂ 210 ಎಕರೆ ಜಮೀನನ್ನು ನಾವು ಅವರಿಗೆ ಕೊಡಬೇಕಾಗಿದೆ. That will be handed over, once the work starts. ಅವರಿಗೆ ಒಟ್ಟಾರೆ 4,010 ಎಕರೆ ಪ್ರದೇಶವನ್ನು ನಾವು ಬಿಟ್ಟು ಕೊಡುತ್ತಿದ್ದೇವೆ. ಉಳಿದಂಥ ಸುಮಾರು 400 ಚಿಲ್ಲರೆ ಎಕರೆ ಪ್ರದೇಶವು ರಾಜ್ಯ ಸರ್ಕಾರದ ವಶದಲ್ಲಿರುತ್ತದೆ. ಈ ಬಿ.ಐ.ಎ.ಎಲ್ ಕಂಪನಿಯನ್ನು ರಾಜ್ಯ ಸರ್ಕಾರ ಪ್ರೋಮೋಟ್ ಮಾಡಿರತಕ್ಕಂಥಾದ್ದು ಕೆ.ಎಸ್.ಐ.ಐ.ಡಿ.ಸಿ. ಮೂಲಕ ಕೆ.ಎಸ್.ಐ.ಐ.ಡಿ.ಸಿ. ವಶದಲ್ಲಿ ಈ 400 ಚಿಲ್ಲರೆ ಎಕರೆ ಉಳಿಯುತ್ತದೆ. ಇದರಿಂದ ರಾಜ್ಯ ಸರ್ಕಾರಕ್ಕೆ ದೊಡ್ಡ ಸೇವಿಂಗ್ ಆಗಿದೆ ಎನ್ನತಕ್ಕಂಥಾದ್ದನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈ ಯೋಜನೆಗೆ ಮತ್ತೆ ಶಂಕು ಸ್ಥಾಪನೆ ಮಾಡಲು ಹೊರಟಿದ್ದೀರಾ ? ಏಕೆಂದರೆ, ಮತ್ತೆ ಶಂಕು ಸ್ಥಾಪನೆ ಮಾಡಬೇಕು, ಪ್ರಧಾನ ಮಂತ್ರಿಗಳೂ ಬರುತ್ತಿದ್ದಾರೆ, ಅವರ ಕೈಯ್ಯಲ್ಲಿ ಶಂಕು ಸ್ಥಾಪನೆ ಮಾಡಿಸಬೇಕು ಎನ್ನತಕ್ಕಂಥ ಸುದ್ದಿ ಇದೆ. ಹಾಗಾಗಿ, ಮತ್ತೆ ಇದಕ್ಕೆ ಶಂಕು ಸ್ಥಾಪನೆಯನ್ನು ಮಾಡಿಸಲು ತಾವು ಹೊರಟಿದ್ದೀರಾ ಎನ್ನುವ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇದು ಮೊದಲನೆಯದು, ಎರಡನೆಯದಾಗಿ ತಾವು ಪಡೆದಿರುವ ಸುಮಾರು 4,500 ಎಕರೆ ಪ್ರದೇಶವನ್ನು ಮಾಲೀಕರಿಗೆ ಯಾವ ಯಾವ ಅಂದಾಜಿನಲ್ಲಿ ಯಾವ ಯಾವ ದರದಲ್ಲಿ ಪಡೆದಿದ್ದೀರಿ. ಅಲ್ಲದೆ, ಇನ್ನೂ ಅನೇಕ ಜನಗಳಿಗೆ ಹಣ ಬಂದಿಲ್ಲ ಎನ್ನುವ ಕೂಗು ಇದೆ. ಅದನ್ನು ಯಾವ ರೀತಿ ಮಾಡಿದ್ದೀರಿ ಎನ್ನುವುದನ್ನೂ ದಯವಿಟ್ಟು ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಒಂದು ಎಕರೆಗೆ ಐದು ಲಕ್ಷ ರೂಪಾಯಿಗಳಂತೆ ನಾವು ಎಲ್ಲರಿಗೂ ಪರಿಹಾರವನ್ನು ಕೊಟ್ಟಿದ್ದೇವೆ. ಇನ್ನೂ ಕೆಲವರಿಗೆ, ಉದಾಹರಣೆಗಾಗಿ ಹೇಳಬೇಕೆಂದರೆ, ಅಕ್ವಿಸಿಷನ್ ಪ್ರೋಸೆಸ್‌ನಲ್ಲಿರುವಂಥ 263 ಎಕರೆ ಪ್ರದೇಶಕ್ಕೆ ನಾವು ಇನ್ನೂ ಸಹ ಪರಿಹಾರದ ಹಣವನ್ನು ಕೊಡದೇ ಇರತಕ್ಕಂಥಾದ್ದು ನಿಜ. ಪ್ರತಿಯೊಬ್ಬರಿಗೂ ಸಹ ಪರಿಹಾರ ಸಿಗುವ ಹಾಗೆ ನಾವು ಮಾಡುತ್ತೇವೆ. ಪರಿಹಾರ ಕೊಟ್ಟಮೇಲೆ ಈ 263 ಎಕರೆ ಜಮೀನನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಇನ್ನು ಶಂಕು ಸ್ಥಾಪನೆ ಬಗ್ಗೆ ಹೇಳಿದರು. ಹಿಂದೆ, ಮೇಲೆ ಹೇಳಿದಂಥ ಯಾವುದೇ ಅಗ್ರಿಮೆಂಟ್‌ಗಳು ಆಗಿರಲಿಲ್ಲ. ಕನ್ಸೆಷನ್ ಅಗ್ರಿಮೆಂಟ್ ಸಹಾ ಆಗಿರಲಿಲ್ಲ. ಬಿ.ಓ.ಓ.ಟಿ. (ಬೂಟ್) ಅಂದರೆ ಬಿಲ್ಡ್, ಓನ್, ಆಪರೇಟ್ ಎನ್ನುವ ಸಿಸ್ಟಂನಲ್ಲಿ ಈ ಏರ್‌ಪೋರ್ಟ್‌ನ್ನು ಕಟ್ಟಲಿಕ್ಕೆ ಹೊರಟಿದ್ದೇವೆ, ಇದಕ್ಕೆ ಹಿಂದೆ ಕೇಂದ್ರ ಸರ್ಕಾರ ಬಿ.ಐ.ಎ.ಎಲ್. ಕಂಪನಿಗೆ ಪರ್ಮಿಷನ್ ಸಹಾ ಕೊಟ್ಟಿರಲಿಲ್ಲ. ಈ ಸಮ್ಮಿಶ್ರ ಸರ್ಕಾರ ಬಂದ ಮೇಲೆಯೇ ಕನ್ಸೆಷನ್ ಅಗ್ರಿಮೆಂಟ್‌ಗೆ ಸೈನ್ ಆಗಿರತಕ್ಕಂಥಾದ್ದು. ಹಿಂದೆ ಏನೂ ಸರ್ಕಾರ ಬಿ.ಐ.ಎ.ಎಲ್.

ಕಂಪನಿಗೆ ಪರ್ಮಿಷನ್ ಸಹಾ ಕೊಟ್ಟಿರಲಿಲ್ಲ. ಈ ಸಮ್ಮಿಶ್ರ ಸರ್ಕಾರ ಬಂದ ಮೇಲೆಯೇ ಕನ್ಸೆಷನ್ ಅಗ್ರೀಮೆಂಟಿಗೆ ಸೈನ್ ಆಗಿರತಕ್ಕಂಥಾದ್ದು. ಹಿಂದೆ ಏನೂ ಕೆಲಸ ಆಗಿರಲಿಲ್ಲ ಎನ್ನತಕ್ಕಂಥಾದ್ದು ರೆಕಾರ್ಡ್ಸ್‌ನಲ್ಲಿದೆ. ಇನ್ನು ಮುಂದೆ ಇದು ಆಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಯೋಜನೆಗೆ ಬೇಕಾದ ಜಮೀನು 4,529 ಎಕರೆ, 4,266 ಎಕರೆ ಇತ್ಯಾದಿ ವಿವರಗಳನ್ನು ಹೇಳಿದಿರಿ. ಈ ಜಮೀನಿನಲ್ಲಿ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವಂಥ ಜಮೀನೆಷ್ಟು ? ಅಂದರೆ ನಿಮ್ಮದೇ ಜಮೀನು ಎಷ್ಟಿತ್ತು, ಎಷ್ಟು ಜಮೀನನ್ನು ಅಕ್ವೈರ್ ಮಾಡಿಕೊಂಡಿದಿರಿ ? ಎರಡನೆಯದಾಗಿ, ನಾನು ಸರ್ಕಾರಕ್ಕೆ ಒಂದು ಕಿವಿ ಮಾತನ್ನು ಹೇಳಲು ಇಚ್ಛೆ ಪಡುತ್ತೇನೆ. ರಾಜ್ಯದಲ್ಲಿ ಹಿಂದೆ ಬೇರೆ ಯಾವುದೇ ಸರ್ಕಾರ ಹೇಳಲು ಇರಲಿಲ್ಲ. ಆಗ ಇದ್ದದ್ದು ಕಾಂಗ್ರೆಸ್ ಸರ್ಕಾರವೇ, ಕೇಂದ್ರದಲ್ಲಿ ಬೇರೆ ಸರ್ಕಾರ ಇತ್ತು. ಈ ಏರ್‌ಪೋರ್ಟಿಗಾಗಿ ಅಫಿಷಿಯಲ್ಲಾಗಿ ಎಲ್ಲಾ ಕರೆದು, ಕೇಂದ್ರದಲ್ಲಿ ಅಲ್ಮೋಸ್ಟ್ ಎಲ್ಲಾ ಕ್ಲಿಯರ್ ಆಗಿದೆ ಎಂದು ಈ ಸದನದಲ್ಲೇ ಅಭಿನಂದನೆಗಳನ್ನು ಸಲ್ಲಿಸಿ, ಅದಕ್ಕೆ ಶಂಕು ಸ್ಥಾಪನೆಯನ್ನೂ ಮಾಡಿದರು. ಅವತ್ತು, ಬೇರೆ ಯಾರೋ ಪ್ರಧಾನಿ ಇದ್ದರು, ಈಗಿರುವ ಪ್ರಧಾನಿಯೇ ಬೇರೆ. ಈಗಿರುವವರನ್ನು ಕರೆಸಿಕೊಂಡು ಮಾಡಬೇಕು ಎನ್ನುವ ಒಂದೇ ಒಂದು ಕಾರಣಕ್ಕಾಗಿ ಪುನಃ ಶಂಕು ಸ್ಥಾಪನೆ ಮಾಡುವಂಥಾದ್ದು ಈ ಸರ್ಕಾರಕ್ಕೆ ಶೋಭೆ ತರತಕ್ಕಂಥಾದ್ದೇ ? ಅದನ್ನು ಮಾಡಬೇಡಿ ಎಂದು ಮಾತ್ರ ಹೇಳಲು ಇಚ್ಛೆಪಡುತ್ತೇನೆ. ಉಳಿದದ್ದು ನಿಮಗೆ ಬಿಟ್ಟದ್ದು. ಈ ಜಮೀನು ಯಾರದ್ದು, ಎಷ್ಟೆಷ್ಟು, ಎನ್ನುವುದನ್ನು ದಯಮಾಡಿ ತಿಳಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದರ ಬಗ್ಗೆ ನನಗೆ ಎಗ್ಸಾಕ್ಟ್ ಮಾಹಿತಿ ಇಲ್ಲ. ನನಗೆ ತಿಳಿದಿರುವ ಹಾಗೆ 4000 ಎಕರೆಯಲ್ಲಿ ಸುಮಾರು ಒಂದು ಸಾವಿರ ಎಕರೆ ಸರ್ಕಾರದ ಜಮೀನು ಇತ್ತು. ಉಳಿದಿರತಕ್ಕಂಥಾದ್ದನ್ನು ನಾವು ರೈತರಿಗೆ ಪರಿಹಾರ ಕೊಟ್ಟು ಕೆ.ಐ.ಎ.ಡಿ.ಬಿ. ಮೂಲಕವಾಗಿ ತೆಗೆದುಕೊಂಡು ಕೆ.ಎಸ್.ಐ.ಐ.ಡಿ.ಸಿ. ಅವರಿಗೆ ಕೊಟ್ಟಿದ್ದೇವೆ. ಈ ಯೋಜನೆಗೆ ಸಂಬಂಧಿಸಿದಂತೆ, ಹಿಂದೆ ಯಾವುಧೇ ಅಗ್ರೀಮೆಂಟ್ ಆಗಿರಲಿಲ್ಲ ಸರ್ಕಾರ ಇದನ್ನೊಂದು ಪ್ರತಿಷ್ಠೆಯನ್ನಾಗಿ ಮಾಡಿಕೊಂಡು, ಇದರಿಂದ ಪ್ರಚಾರ ಪಡೆಯಬೇಕು ಎನ್ನತಕ್ಕಂಥ ಉದ್ದೇಶ ಸರ್ಕಾರಕ್ಕೆ ಇಲ್ಲ. ಈಗ ಇದಕ್ಕೆ ಅಗ್ರೀಮೆಂಟ್ ಆಗಿರುವುದರಿಂದಾಗಿ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಈ ಸದನದ ಎಲ್ಲಾ ಸದಸ್ಯರುಗಳು ಈ ಕಾರ್ಯಕ್ರಮವನ್ನು ಸ್ವಾಗತ ಮಾಡುತ್ತಾರೆ ಎಂದು ನಾನು ತಿಳಿದು ಕೊಂಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಳೆದ ವರ್ಷ, ಮಿನಿ ವಿಧಾನಸೌಧ (ವಿಕಾಸ ಸೌಧ)ವನ್ನು ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ತರಾತುರಿಯಲ್ಲಿ ಉದ್ಘಾಟನೆ ಮಾಡಿದರು. ಮತ್ತೆ ಯಾವಾಗ ಅದರ ಉದ್ಘಾಟನೆ ಇಟ್ಟುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದು ಪ್ರತ್ಯೇಕ ಪ್ರಶ್ನೆಯಾಗುತ್ತದೆ. ಅದಕ್ಕೆ ನಾನು ಹೇಗೆ ಉತ್ತರ ಕೊಡಲಿ. ಮಾನ್ಯ ವಿರೋಧ ಪಕ್ಷದ ನಾಯಕರು ಆ ಬಗ್ಗೆ ಪ್ರತ್ಯೇಕ ಕೇಳಿದರೆ ಖಂಡಿತವಾಗಿ ನಾವು ಅದಕ್ಕೆ ಉತ್ತರ ಒದಗಿಸಿ ಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರ ಎಂದರೆ ನೀವೆಲ್ಲಾ ಸೇರಿಯೇ ಆಗಿರುವುದು. ಅದಕ್ಕೆ ಬೇರೆಯೇ ಪ್ರಶ್ನೆ ಕೇಳಬೇಕು ಎಂದರ ಬೇರೆಯೇ ಕೇಳೋಣ, ಅದರಲ್ಲಿ ತೊಂದರೆಯೇನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಈ ಯೋಜನೆಗೆ ಸಂಬಂಧಿಸಿದಂತೆ ಈಗ ಎಲ್ಲಾ ವ್ಯವಸ್ಥೆ ಆಗಿದೆ, ಪ್ರತಿಯೊಂದು ಆಗಿದೆ ಎನ್ನುವ ತಮ್ಮ ಪೀಠಿಕೆ ನೋಡಿದರೆ ತಾವು ಮತ್ತೊಂದು ಸಾರಿ ಅದನ್ನು ಶಂಕು ಸ್ಥಾಪನೆ ಮಾಡತಕ್ಕಂಥ ಉದ್ದೇಶ ಕಾಣುತ್ತಿದೆ. ಆಗ ಆಗಿರಲಿಲ್ಲ. ಈಗ ಎಲ್ಲಾ ಮಾಡಿದ್ದೇವೆ ಎನ್ನುವುದು ತಮ್ಮ ಪೀಠಿಕೆ. ಹಾಗಾದರೆ, ಈ ಮೊದಲು, ಮಾಜಿ ಮುಖ್ಯಮಂತ್ರಿಗಳಾಗದಂಥ, ಶ್ರೀ ಎಸ್.ಎಂ. ಕೃಷ್ಣಾರವರು ಹಾಕಿರತಕ್ಕಂಥ ಶಂಕು ಸ್ಥಾಪನೆಯ ಶಿಲೆಯನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತೀರಿ, ಅದನ್ನು ಎಲ್ಲಿ ಇಡುತ್ತೀರಿ ? ಏಕೆಂದರೆ, ಈಗಾಗಲೇ ಅದಕ್ಕೆ ಒಂದು ದಿನಾಂಕದಲ್ಲಿ, ಶಂಕು ಸ್ಥಾಪನೆಯಾಗಿದೆ. ತರಾತುರಿಯಲ್ಲಿ ನೀವೆಲ್ಲಾ ಒಟ್ಟಿಗೆ ಹೋಗಿ ಕುಳಿತು ನಡೆಸಿದಿರಲ್ಲಾ. ಆ ಒಂದು ಶಿಲೆಯನ್ನು ಎಲ್ಲಿ ಇಡುತ್ತೀರಿ? ಅದನ್ನೂ ಸಹ ಹೇಳಬೇಕು, ಏಕೆಂದರೆ, ಅದರಲ್ಲಿ ಉದ್ಘಾಟನೆ, ಶಂಕು ಸ್ಥಾಪನೆ ಎಂದು ಬರೆದಿದ್ದೀರಿ. ಈಗ ಮತ್ತೆ ನೀವು ನಾಲ್ಕು ದಿವಸಗಳಲ್ಲಿ ಶಂಕು ಸ್ಥಾಪನೆಗೆ ಅಣಿಯಾಗುತ್ತಿದ್ದೀರಿ, ಇದು ಅತ್ಯಂತ ಅಗೌರವವಾದುದು ಮತ್ತು ಮಾಜಿ ಮುಖ್ಯಮಂತ್ರಿಗಳು ಮಾಡಿದಂಥ ಕ್ರಮಕ್ಕೆ ಅಗೌರವವಾಗುತ್ತದೆ. ನೀವು ಪ್ರಚಾರದ ದೃಷ್ಟಿಯಿಂದ, ಈಗ ಹೊಸ ಪ್ರಧಾನ ಮಂತ್ರಿಗಳು ಬಂದಿದ್ದಾರೆ, ಹಿಂದೆ ಇದ್ದಂಥ ಪ್ರಧಾನ ಮಂತ್ರಿಗಳು ಬೇರೆ, ಅವತ್ತಿನ ಸರ್ಕಾರ ಬೇರೆ. ಈಗ ನೀವು ಬಂದಿದ್ದೀರಿ, ನೀವು ಮಂತ್ರಿಯಾಗಿದ್ದೀರಿ, ನಿಮ್ಮಗಳದ್ದೆಲ್ಲಾ ಪ್ರಚಾರ ಸಿಗಲಿ ಎನ್ನುವ ಉದ್ದೇಶವನ್ನಿಟ್ಟುಕೊಂಡು, ತಾವು ಇದಕ್ಕೆ ಮತ್ತೆ ಶಂಕು ಸ್ಥಾಪನೆ ಮಾಡಿಸುತ್ತೀರಾ ಎನ್ನುವುದನ್ನು ಸ್ಪಷ್ಟಪಡಿಸಬೇಕು. ಎರಡನೆಯದಾಗಿ, ಯಾವುದೇ ವಿಮಾನ ನಿಲ್ದಾಣಗಳಲ್ಲಿ ಕನ್ನಡಿಗರಿಗೆ ಉದ್ಯೋಗವಿಲ್ಲ. ಅದು ಬೆಂಗಳೂರು ವಿಮಾನ ನಿಲ್ದಾಣವಿರಬಹುದು ಅಥವಾ ಬೇರೆ ವಿಮಾನ ನಿಲ್ದಾಣವಿರಬಹುದು. ಅದಕ್ಕಾಗಿ, ಮುಂದೆ ಆಗತಕ್ಕಂಥ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಲಸ ಮಾಡತಕ್ಕಂಥವರು 100ಕ್ಕೆ 99 ಭಾಗ ಕನ್ನಡಿಗರೇ ಆಗಿರಬೇಕು ಎನ್ನುವ ಶರತ್ತನ್ನು ತಾವು ವಿಧಿಸುವಿರಾ ? ಇವೆರಡನ್ನೂ ತಾವು ಸ್ಪಷ್ಟಪಡಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗ ದೇಶದಲ್ಲಿರತಕ್ಕಂಥ ಎಲ್ಲಾ ವಿಮಾನ ನಿಲ್ದಾಣಗಳು ಕೇಂದ್ರ ಸರ್ಕಾರದ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾದ ವಶದಲ್ಲಿ ಇರತಕ್ಕಂಥವುಗಳಾಗಿವೆ. ಯಾವುದೇ ವಿಮಾನ ನಿಲ್ದಾಣ ರಾಜ್ಯ ಸರ್ಕಾರದ ವಶದಲ್ಲಿ ಇಲ್ಲ. ಈಗ ನಾವು ಮಾಡುತ್ತಿರತಕ್ಕಂಥ ಬಿ.ಐ.ಎ.ಎಲ್. ಯೋಜನೆ ರಾಷ್ಟ್ರದಲ್ಲೇ ಒಂದು ಹೊಸ ಮಾದರಿಯಾಗತಕ್ಕಂಥಾದ್ದಾಗಿದೆ. ಅಂದರೆ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು 2–3 ಕಂಪನಿಗಳು ಸೇರಿ ಒಂದು ಹೊಸ ಕನ್‌ಸಾರ್ಷಿಯಂನ್ನು ಪ್ರಾರಂಭ ಮಾಡಿ, ಒಂದು ಕಂಪನಿಯನ್ನು ಶುರು ಮಾಡಿ, ಆ ಕಂಪನಿಯವರು ಮಾಡುತ್ತಿರತಕ್ಕಂಥ ಯೋಜನೆಯಾಗಿದೆ. ಇಲ್ಲಿ ಸ್ಥಳೀಯರಿಗೆ ಉದ್ಯೋಗವನ್ನು ಕೊಡಬೇಕು ಎನ್ನುವಂಥಾದ್ದನ್ನು ನಾನು ಖಂಡಿತವಾಗಿ ಇಂಪ್ಲಿಮೆಂಟ್ ಮಾಡುತ್ತೇನೆ ಎನ್ನುವ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ಕೊಡುತ್ತೇನೆ. ಇದೊಂದೇ ಅಲ್ಲ, ತಮಗೆ ಗೊತ್ತಿದೆ, ನಾನು ಪತ್ರಿಕೆಗಳ ಮೂಲಕ ಸಾರ್ವಜನಿಕರಿಗೂ ಸಹ ತಿಳಿಸಿದ್ದೇನೆ, ಡಾ: ಸರೋಜಿನಿ ಮಹಿಷಿಯ ವರದಿಯ ಮುಖ್ಯಾಂಶದಂತೆ ಕನ್ನಡಿಗರಿಗೆ ಉದ್ಯೋಗ ಕೊಡತಕ್ಕಂಥ ವಿಚಾರದಲ್ಲಿ ನಾನು ಅತ್ಯಂತ ಪ್ರಾಮಾಣಿಕವಾಗಿ ಅದನ್ನು ಅನುಷ್ಠಾನಕ್ಕೆ ತರಲು ಪ್ರಯತ್ನವನ್ನು ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದ್ದೇನೆ. ಅದೇ ರೀತಿ ಈಗ ಹೊಸದಾಗಿ ಮಾಡತಕ್ಕಂಥ ಬಿ.ಐ.ಎ.ಎಲ್. ನಲ್ಲೂ ಸಹಿತ ಅಂದರೆ ಹೊಸದಾಗಿ ನಿರ್ಮಿಸುವ ಏರ್‌ಪೋರ್ಟಿನಲ್ಲೂ ಸಹ ಇದನ್ನು ಅನುಷ್ಠಾನಗೊಳಿಸಲು ಪ್ರಯತ್ನವನ್ನು ಮಾಡುತ್ತೇನೆ. ಇನ್ನು, ಶಂಕು ಸ್ಥಾಪನೆ ವಿಚಾರವಾಗಿ ಕೇಳಿದ್ದಾರೆ. ಹಿಂದಿನ ಮುಖ್ಯಮಂತ್ರಿಗಳಿಗೆ ಬಗ್ಗೆ

ನಮಗೆ ಖಂಡಿತವಾಗಿ ಗೌರವವಿದೆ, ಅವತ್ತಿನ ಪ್ರಧಾನಿಗಳ ಬಗ್ಗೆಯೂ ನಮಗೆ ಗೌರವವಿದೆ. ಅವರು ಯಾವುದಕ್ಕೆ ಶಂಕು ಸ್ಥಾಪನೆ ಮಾಡಿದ್ದಾರೆ ಎನ್ನತಕ್ಕಂಥಾದ್ದು ನನಗೆ ಗೊತ್ತಿಲ್ಲ. ಅದನ್ನು ತಿಳಿದುಕೊಂಡು ನಾನು ....

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಮಾತನಾಡಲು ಪ್ರಯತ್ನಪಟ್ಟರು)

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಇನ್ನೂ ಏನನ್ನೂ ಹೇಳಿಯೇ ಇಲ್ಲ. ನಾನು ಹೇಳುವುದನ್ನು ಕೇಳುವುದಕ್ಕೇ ಇವರು ತಯಾರಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇಲ್ಲೇ ಸಿಕ್ಕಿಬಿದ್ದರು ಇವರು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸಿಕ್ಕಿಬೀಳುವುದಕ್ಕೆ ನಾನು ಕಳ್ಳತನವನ್ನೇನೂ ಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವತ್ತು ಇವರೂ ಸಹ ಈ ಸದನದ ಶಾಸಕರಾಗಿದ್ದರು, ವಿರೋಧ ಪಕ್ಷದಲ್ಲಿ ಕುಳಿತಿದ್ದರು, ಮುಂದೆ ಯಾವ ಸರ್ಕಾರ ಬರುತ್ತದೋ ಎಂದು ತರಾತುರಿಯಲ್ಲಿ ಶಂಕು ಸ್ಥಾಪನೆ ಮಾಡಿದ್ದು ಅವರಿಗೆ ಗೊತ್ತಿದೆ. ಹಿಂದೆ ಇದ್ದಂಥ ಮುಖ್ಯಮಂತ್ರಿಗಳು, ಈ ಒಂದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶಂಕು ಸ್ಥಾಪನೆ ಮಾಡಿದ ಮೇಲೆ, ಈಗ ಅವರು ಯಾವ ಮೂಲೆಯಲ್ಲಿ ಮಾಡಿದ್ದಾರೋ ನಮಗೆ ಗೊತ್ತಿಲ್ಲ. ಮತ್ತೆ ಮಾಡುತ್ತೇವೆ ಎನ್ನತಕ್ಕಂಥ........

ಶ್ರೀ ಪಿ.ಜಿ.ಆರ್ ಸಿಂಧ್ಯ : ನಾವು ಮತ್ತೆ ಮಾಡುತ್ತೇವೆ ಎಂದು ನಾನು ಎಲ್ಲೂ ಹೇಳಿಯೇ ಇಲ್ಲ. ಅವರು ಏನು ಮಾಡಿದ್ದಾರೆ ಎಂದು ತಿಳಿದುಕೊಂಡು ನಿಮಗೆ ಮಾಹಿತಿ ಕೊಡುತ್ತೇವೆ ಎಂದು ಹೇಳಿದ್ದೇನೆ ನಾನು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಹಾಗಲ್ಲ ಹೇಳಿದ್ದು, ಯಾವುದಕ್ಕೆ ಶಂಕು ಸ್ಥಾಪನೆ ಮಾಡಿದ್ದಾರೆ ಎನ್ನುವುದು ಗೊತ್ತಿಲ್ಲ ಎಂದು ಹೇಳಿದಿರಿ ನೀವು.

ಅಧ್ಯಕ್ಷರು : ಆಯಿತು, ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮುಂದಕ್ಕೆ ಹೋಗೋಣ. ಮುಂದಿನ ಪ್ರಶ್ನೆ ಮಾನ್ಯ ರಘುಪತಿ ಭಟ್‌ರವರು.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೆ, ಒಂದೇ ಒಂದು ಉಪ ಪ್ರಶ್ನೆ.

ಅಧ್ಯಕ್ಷರು : ದಯಮಾಡಿ ಮುಂದೆ ಹೋಗೋಣ ಮಾಧುಸ್ವಾಮಿಯವರೇ, ಈಗಾಗಲೇ ಈ ಪ್ರಶ್ನೆ ಬಹಳ ಕಾಲ ತೆಗೆದುಕೊಂಡು ಬಿಟ್ಟಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದೇ ಒಂದು ಮುಖ್ಯವಾದಂಥ ಪ್ರಶ್ನೆ. ಅಲೈನ್‌ಮೆಂಟ್ ಚೇಂಜ್ ಆಗಿ 250 ಎಕರೆ ಎಕ್ಸ್‌ಟ್ರಾ ಜಮೀನನ್ನು ಅಕ್ವೈರ್ ಮಾಡಬೇಕು ಎಂದು ಒಂದು ಕಡೆ ಹೇಳುತ್ತೀರಿ. ಇನ್ನೊಂದು ಕಡೆ 400 ಚಿಲ್ಲರೆ ಎಕರೆ ಸೇವ್ ಆಗಿ ಗವರ್ನ್‌ಮೆಂಟ್‌ಗೆ ಉಳಿಯುತ್ತದೆ ಎಂದು ಹೇಳುತ್ತೀರಿ, ತಾವು ಉತ್ತರ ಕೊಡುವಾಗ, ಅಲೈನ್‌ಮೆಂಟ್ ಚೇಂಜ್ ಆಗಿದ್ದರಿಂದ 266 ಎಕರೆ ಎಕ್ಸ್‌ಟ್ರಾ ಜಮೀನಿನ ಅಕ್ವಿಷಿಷನ್‌ಗೆ ಪ್ರಪೋಜಲ್ ಮಾಡಿದ್ದೇವೆ ಎಂದು ಹೇಳಿದ್ದೀರಿ. ಮತ್ತೆ ಹೇಳಬೇಕಾದ್ದರೆ 400 ಚಿಲ್ಲರೆ ಎಕರೆ ನಮಗೆ ಉಳಿದು ಕರ್ನಾಟಕ ಸರ್ಕಾರದ ಸ್ವಾಧಿನದಲ್ಲಿರುತ್ತದೆಂದು ಹೇಳುತ್ತೀರಿ. ಇದರ ಅಗತ್ಯ ಇತ್ತೇ ? ಹಾಗೆಯೇ alignment change ಆಗಿದ್ದರಿಂದ Cost save ಆಯಿತೇ ಎಂಬುದನ್ನು ತಾವು ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, acquire ಮಾಡಬೇಕೆಂದು ಇದ್ದದ್ದು ಒಟ್ಟು 4529 ಎಕರೆ. ಅದರಲ್ಲಿ 4266 ಎಕರೆ ಜಾಗವನ್ನು acquire ಮಾಡಿದ್ದಾರೆ. ಈ ಸರ್ಕಾರ ಬಂದ

ಮೇಲೆ fresh acquire ಒಂದು ಎಕರೆಯನ್ನು ಸಹಿತ ನಾವು ಮಾಡಿಲ್ಲ ಈ 263 ಎಕರೆ ಜಮೀನು ಏನಿದೆ. it is under the process the acquisition. Totally the acquisition comes to 4529 acres of land. ಅದರಲ್ಲಿ 3884 ಎಕರೆ ಜಾಗವನ್ನು ನಾವು ಕೊಟ್ಟಿದ್ದೇವೆ. ಇನ್ನೂ 210 ಎಕರೆ ಜಾಗವನ್ನು ನಾವು ಕೊಡಬೇಕಾಗುತ್ತದೆ. ಅಂದರೆ 510 ಎಕರೆಯನ್ನು ನಾವು ಕೊಡಬೇಕಾಗುತ್ತದೆ. ಇನ್ನ 410 ಎಕರೆ ಜಾಗವನ್ನು ಯಾರು ಈ ಸಂಸ್ಥೆಯನ್ನು ಸರ್ಕಾರದ ಪರವಾಗಿ ಅಲ್ಲಿ equity shareholder ಆಗಿದ್ದಾರೆ, KSSIDC ಏನಿದೆ, ಅದರ ವಶದಲ್ಲಿರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾದಂಥ ಅಂಶವನ್ನು ಕೇಳುತ್ತಿದ್ದೇನೆ. ಎಕರೆಗೆ ರೂ.5 ಲಕ್ಷ ಕೊಟ್ಟು ಬಡ ರೈತರಿಂದ ಜಾಗವನ್ನು ಮಾಡಿಕೊಂಡಿದ್ದಾರೆ. ಈ ಜಾಗದಲ್ಲಿ Airport ಬರುತ್ತದೆ. ಅಗತ್ಯವಿರುವ ಜಾಗವನ್ನು acquire ರೈತರಿಂದ ತೆಗೆದುಕೊಂಡರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ ಈಗ acquire ಮಾಡಿಕೊಂಡಿರುವುದಿಲ್ಲ ಏನು ಜಾಗ ಉಳಿಯುತ್ತದೆ ಅದು ಒಂದು ಎಕರೆಗೆ ರೂ. 50 ಲಕ್ಷದಷ್ಟು ಬೆಲೆ ಬಾಳುತ್ತದೆ. ಅದರ ಲಾಭವನ್ನು ಆ ರೈತರು ಪಡೆದುಕೊಳ್ಳಲಿ. ದಯಮಾಡಿ Airport ಗೆಂದು ಎಷ್ಟು ಜಾಗದ ಅಗತ್ಯವಿದೆಯೋ ಅದನ್ನು acquire ಮಾಡುವುದರಲ್ಲಿ ನಮ್ಮದೇನೂ ಅಭ್ಯಂತರವಿಲ್ಲ. ಉಳಿಯುವ 300–350 ಎಕರೆ ಜಾಗವನ್ನು ಆ ರೈತರಿಗೆ ಇವತ್ತಿನ ಮಾರ್ಕೆಟ್ ಬೆಲೆ ಏನಿದೆ ಅದರಂತೆ ಅವರಿಗೆ compensation ಕೊಡಿ. ಇಲ್ಲದಿದ್ದರೆ ಆ ಜಾಗವನ್ನು ಸಂಬಂಧಪಟ್ಟ ರೈತರಿಗೆ ವಾಪಸ್ಸು ಕೊಟ್ಟುಬಿಡಿ. ಅವರು ಬದುಕಿಕೊಳ್ಳಲಿ. ನೂರಾರು ವರ್ಷಗಳಿಂದ ಉಳಿಸಿಕೊಂಡು ಬಂದಂಥ ಪಿತ್ರಾರ್ಜಿತ ಆಸ್ತಿಯನ್ನು ಈ ರೀತಿ ನಿಮಗೆ ಖುಷಿ ಬಂದಂತೆ ಅಗತ್ಯವಿಲ್ಲದಿರುವಷ್ಟು ಮಾಡಿಕೊಂಡು ನಾವು ಸರ್ಕಾರದ ಆಸ್ತಿ ಮಾಡಿಕೊಳ್ಳುತ್ತೇನೆಂದು ಯಾರದೋ ತಲೆ ಬೋಳಿಸಿ ನೀವು ಸರ್ಕಾರದ ಆಸ್ತಿ ಎಂದು ಹೇಗೆ ಮಾಡಿಕೊಳ್ಳುವುದಕ್ಕೆ ಬರುತ್ತದೆ ? ನೀವೂ ಕೂಡ ರೈತರ ಮಕ್ಕಳಾಗಿದ್ದೀರಿ, ಕಳಕಳಿ ಇದೆ. ಆದ್ದರಿಂದ ಆ ರೈತರಿಗೆ ಇವತ್ತಿನ ಮಾರ್ಕೆಟ್ ರೇಟ್ ಕೊಡಿ ಇಲ್ಲದಿದ್ದರೆ ವಾಪಸ್ಸು ಆ ಜಾಗವನ್ನು ರೈತರಿಗೆ ಕೊಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಕೈಗಾರಿಕಾ ಸಚಿವರಲ್ಲಿ ಕೇಳಬಯಸುವುದೇನೆಂದರೆ, ಹಿಂದಿನ ಸಚಿವರು ಯಾವುದೇ ಒಂದಕ್ಕೆ acquistion ಮಾಡುವಾಗ land auditing ಎಲ್ಲಾ ಮಾಡಿಸುತ್ತೇನೆಂದು ಹೇಳಿದ್ದರು. ಆ ಸಂದರ್ಭದಲ್ಲಿ ಈಗಿನ ಸಚಿವರಾದ ತಾವು ವಿರೋಧ ಪಕ್ಷದಲ್ಲಿ ಕುಳಿತಿದ್ದೀರಿ, ಇವತ್ತು ಮಾಡುವುದು ಆ ಮೇಲೆ de-notification ಮಾಡುವುದು. ಇವರಿಗೆ ಒಂದು project ಮಾಡುವುದಿಲ್ಲವೇ ? ಇದೊಂದು ದಂಧೆಯಾಗುತ್ತಿದೆ ಎನ್ನುವ ಅಭಿಪ್ರಾಯ ಬರುತ್ತಿದೆ. ಅದಕ್ಕೋಸ್ಕರ ಮಾನ್ಯ ಸಚಿವರಲ್ಲಿ ಹೇಳಬಯುಸುವುದೇನೆಂದರೆ, ಇನ್ನು ಮುಂದೆಯಾದರೂ ಯಾವುದೇ purpose ಗೆ ಯಾವುದಾದರೊಂದು acquisition ಮಾಡುವಾಗ ನೀವು Land Audit ಮಾಡಿಸಿ ಇಂತಿಷ್ಟು ಬೇಕೆಂದಿದಾಗ ಅಷ್ಟನ್ನು ಮಾತ್ರ acquire ಮಾಡಿಸಿ. ಮಾಡಿರುವಂಥದ್ದನ್ನು ಮಾಡುತ್ತಿರುವಾಗ, ಈ ಲ್ಯಾಂಡ್ ಅನ್ನು ವಾಪಸ್ಸು ಕೊಡಿ. ಆದರೆ ಮಾಡುವಾಗಲೇ ನಿಮಗೆ ಇಂತಿಷ್ಟು ಬೇಕೆಂದು ಮಾಡಿಸಿ acquire ಮಾಡುವಂಥದ್ದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಬೆಂಗಳೂರು ಮೈಸೂರು ಕಾರಿಡಾರ್ ಯೋಜನೆ ......

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸನ್ಮಾನ್ಯ ಸಭಾಧ್ಯಕ್ಷರೆ, No. that is a separate question. Bangalore-Mysore corridor project ಗೂ International Airport ಸಂಬಂಧವಿಲ್ಲ

ಶ್ರೀ ಜಗದೀಶ್ ಶೆಟ್ಟರ್ : ಸಂಬಂಧ ಇಲ್ಲಂತಲ್ಲ. ಸಂಬಂಧವಿದೆ. ಏಕೆಂದರೆ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಕಾರಿಡಾರ್ ಯೋಜನೆಯಲ್ಲಿ ಏನು ಮಾಡಿದ್ದೀರೆಂದರೆ, ನೀವು ಒಂದು ಸಮಿತಿ ಮಾಡಿ ಅವರಿಂದ ಒಂದು ರಿಪೋರ್ಟ್ ತೆಗೆದುಕೊಂಡು ಈಗಾಗಲೇ ಹೆಚ್ಚಿನ ಜಮೀನು ಏನಿದೆ ಅದನ್ನು ವಾಪಸ್ಸು ರೈತರಿಗೆ ಕೊಡಬೇಕೆಂದು ನಿಮ್ಮ ಕ್ಯಾಬಿನೆಟ್‌ನವರು ನಿರ್ಣಯ ತೆಗೆದುಕೊಂಡಿದ್ದೀರಲ್ಲಾ ಹಾಗಾದರೆ ಅದೇ ರೀತಿ ಇಲ್ಲಿ ಕೂಡ ರೈತರಿಗೆ ಏಕೆ ವಾಪಸ್ಸು ಮಾಡಬಾರದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಶ್ರೀ ಜಯಪ್ರಕಾಶ್ ಹೆಗ್ಡೆಯವರ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. Bangalore International Airport Limited ಗೆ ಸಂಬಂಧಪಟ್ಟ ಹಾಗೆ ಯಾವುದೇ ಜಮೀನನ್ನು ಸಹಿತ ಮಾಡಿಲ್ಲ. ನಾವು ಮಾಡುವುದು ಇಲ್ಲ. ಇದು ಒಂದನೆಯ ವಿಚಾರ. ಇನ್ನು ಮಾನ್ಯ ಯಡಿಯೂರಪ್ಪನವರು 400 ಎಕರೆ ಜಾಗ ಏನು ಉಳಿಯುತ್ತದೆ ಅದನ್ನು ರೈತರಿಗೆ ಏಕೆ ವಾಪಸ್ಸು ಕೊಡಬಾರದೆಂದು ಕೇಳಿದ್ದಾರೆ. ಇಲ್ಲಿ ಪ್ರಶ್ನೆ ಏನೆಂದರೆ, acquire ಮಾಡಿದಂಥ ಜಮೀನು ಏನು ಉಳಿಯುತ್ತದೆ. ಅದು ಯಾರ ಏರಿಯಾದಲ್ಲಿ ಯಾವ postition ನಲ್ಲಿ ಬರುತ್ತದೆ ಎನ್ನುವುದನ್ನು ನೋಡಬೇಕಾಗುತ್ತದೆ. ಉದಾಹರಣೆಗೆ Air India ದವರು 10 ಎಕರೆ ಜಮೀನು ಬೇಕೆಂದು ಕೇಳಿದ್ದಾರೆ. MSL ನವರೂ ಸಹ 20 ಎಕರೆ ಜಮೀನು ಬೇಕು, ನಮ್ಮ ರೈತರಿಗೆ ಅನುಕೂಲವಾಗುವಂಥ storage ಕಟ್ಟಬೇಕೆಂದು ಕೇಳಿದ್ದಾರೆ. ಇಂಥ ಚಟುವಟಿಕೆಗಳಿಗೆಲ್ಲಾ ಆ ಜಮೀನನ್ನು ನಾವು ಇಟ್ಟುಕೊಂಡಿದ್ದೇವೆ.

ಶ್ರೀ ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಬಂಧಪಟ್ಟಂತೆ ನಾನು ಕೇಳಿದ ಎಲ್ಲಾ ಪ್ರಶ್ನೆ un-starred ಆಗಿರುವುದರಿಂದ ನಾನು ಇಲ್ಲಿ ಒಂದೇ ಒಂದು ಮಾಹಿತಿಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಆಗುವ ಹಂತದಲ್ಲಿದೆ. ಮಾನ್ಯ ಸಚಿವರಾದ ತಮಗೆ ಇದು ಗೊತ್ತಿದ್ದು ತಾವು ಅಲ್ಲಿಗೆ ಭೇಟಿ ಕೊಟ್ಟಿದ್ದೀರಿ. ಈ second runway ಇದನ್ನು ಅಭಿವೃದ್ಧಿಗೊಳಿಸುವುದಕ್ಕೆ ಬೇಕಾಗಿರುವಂಥ ಜಾಗ ವಶಪಡಿಸಲಿಕ್ಕೆ ಹಾಗು ಅದಕ್ಕೆ ಸಂಬಂಧಪಟ್ಟಂತೆ rehabilition ವ್ಯವಸ್ಥೆಗೋಸ್ಕರ ರೂ.10 ಕೋಟಿಯನ್ನು ತಕ್ಷಣ ಬಿಡುಗಡೆ ಮಾಡುತ್ತೀರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಇದು ಮಂಗಳೂರು Airport ಗೆ ಸಂಬಂದಿಸಿದ ಪ್ರತ್ಯೇಕ ಪ್ರಶ್ನೆಯಾಗಿದ್ದು, ಇದಕ್ಕೆ ನಾನು prepare ಆಗಿ ಬಂದಿಲ್ಲ. ಅವರು separate ಆಗಿ ಪ್ರಶ್ನೆ ಕೇಳಲಿ. ಆಗ ನಾನು ಉತ್ತರ ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಕೆ. ರಘುಪತಿ ಭಟ್ ರವರ ಪ್ರಶ್ನೆ ಸಹಕಾರ ಇಲಾಖೆಗೆ ವರ್ಗಾವಣೆಯಾಗಿದೆ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಅಧ್ಯಕ್ಷರೆ, ಇದು ಸಕ್ಕರೆ ಸಚಿವರಿಗೆ ಕೇಳಿದಂಥ ಪ್ರಶ್ನೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇದು ಸಕ್ಕರೆ ಸಚಿವರಿಗೆ ಸಂಬಂಧಪಟ್ಟ ಪ್ರಶ್ನೆ ಎನ್ನುವುದು ಬಹಳ ಸ್ಪಷ್ಟವಾಗಿದೆ. ಮಾನ್ಯ ಸದಸ್ಯರು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತಾರೆ. ಈ ಪ್ರಶ್ನೆಯನ್ನು ಏಕೆ ಮುಂದೂಡುತ್ತಿದ್ದೀರಿ? 6–8 ತಿಂಗಳ ನಂತರ ನಾವು ಸದನದಲ್ಲಿ ಸೇರಿದ್ದೇವೆ. ಬಹಳ ಹಿಂದೆಯೇ ಪ್ರಶ್ನೆಯನ್ನು ಕೊಡಲಾಗಿತ್ತು ಮತ್ತು ಅದು ಪಟ್ಟಿಯಲ್ಲಿ ಸಹ ಬಂದಾಗಿದೆ. ಶ್ರೀ ರಮೇಶ್ ಕುಮಾರ್‌ರವರೇ, ಇಲ್ಲಿ ನೋಡಿ ಇನ್ನೊಂದು ತಮಾಷೆ, ಈ ಪಟ್ಟಿಯಲ್ಲಿ ಪ್ರಶ್ನೆ ಬಂದಾಗಿದೆ. ಉತ್ತರ ಏಕೆ ಕೊಟ್ಟಿಲ್ಲ ?

ಅಧ್ಯಕ್ಷರು : ಸಹಕಾರ ಇಲಾಖೆಗೆ ವರ್ಗಾವಣೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ ಸರ್, ಸಕ್ಕರೆ ಸಚಿವರಿಗೆ ಏನು ಕೇಳಿದ್ದೇವೆಂದರೆ, ಆ ಕಾರ್ಖಾನೆಯ ಸ್ಥಿತಿ ಏನು? ರೈತರಿಗೆ ಏತಕ್ಕೋಸ್ಕರ ಹಣ ಕೊಟ್ಟಿಲ್ಲ? ಕಾರ್ಮಿಕರು ಅಲ್ಲಿ ಬೀದಿಪಾಲಾಗಿದ್ದಾರೆ. co-operative institutions ಗಳಿಂದ ತೆಗೆದುಕೊಂಡಿರತಕ್ಕಂಥ 6 ಕೋಟಿ ರೂಪಾಯಿ ಕೊಟ್ಟಿಲ್ಲ, ರೈತರಿಗೆ 3 ಕೋಟಿ ರೂಪಾಯಿ ಬಾಕಿ ಬರಬೇಕಿದ್ದು ಅದನ್ನು ಕೊಟ್ಟಿಲ್ಲ. ಸಕ್ಕರೆ ಸಚಿವರು ಏನು ಉತ್ತರ ಕೊಡಬಹುದೋ ಅದನ್ನು ಕೊಡಲಿ ಸರ್ಕಾರ ನಡೆಸುತ್ತೀರೋ ಇಲ್ಲವೋ? ಅಲ್ಲಿ 3–4 ಜಿಲ್ಲೆಯವರು ಆ ಕಾರ್ಖಾನೆ ಮೇಲೆ ಡಿಪೆಂಡ್ ಆಗಿದ್ದಾರೆಂದು ಕೇಳಿದರೆ, ಈ ಪ್ರಶ್ನೆಯನ್ನು ಮುಂದೂಡುವಂಥದ್ದು ಏನಿದೆ ?

ಅಧ್ಯಕ್ಷರು : ಈ ಪ್ರಶ್ನೆ ಸಹಕಾರ ಸಚಿವರಿಗೆ ವರ್ಗಾವಣೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗೆ ಮಾಡುವುದಕ್ಕೆ ಬರುವುದಿಲ್ಲ ಸರ್. ಹಾಗೆ ಮಾಡಬಾರದೆಂದು ಹೇಳುತ್ತಿದ್ದೇನೆ. ಇದಕ್ಕೆ ಸಕ್ಕರೆ ಸಚಿವರೇ ಉತ್ತರ ಕೊಡಬೇಕಾಗಿರುವಂಥದ್ದೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಹಾಗಾದರೆ ಸಕ್ಕರೆ ಸಚಿವರು ಏತಕ್ಕೆ ಎಂದು ಸರ್ಕಾರದವರು ಉತ್ತರ ಹೇಳಬೇಕಾಗುತ್ತದೆ. ಒಬ್ಬ ಸಕ್ಕರೆ ಸಚಿವರನ್ನು ಮಾಡಿ ಸಕ್ಕರೆ ಕಾರ್ಖಾನೆ ಬಗ್ಗೆ ಪ್ರಶ್ನೆಯನ್ನು ಕೇಳಿದಾಗ ಅದನ್ನು ಸಹಕಾರಿ ಇಲಾಖೆಗೆ ವರ್ಗಾವಣೆ ಮಾಡುವುದಾದರೆ ಸಕ್ಕರೆ ಸಚಿವರು ಏತಕ್ಕೆ ಬೇಕು ?

ಶ್ರೀ ಕೆ. ರಘುಪತಿ ಭಟ್ : ಸಕ್ಕರೆ ಸಚಿವರಿಗ ಸಂಬಂಧಪಟ್ಟಂಥ ಪ್ರಶ್ನೆಯನ್ನೇ ನಾವು ಕೇಳಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಹಾಗಾದರೆ ಸಕ್ಕರೆಯನ್ನು ಸಹಕಾರಿ ಇಲಾಖೆಯೊಂದಿಗೆ ಮರ್ಜ್ ಮಾಡಿ. ಈ ಪ್ರಶ್ನೆಗೆ ಸಕ್ಕರೆ ಸಚಿವರೇ ಉತ್ತರವನ್ನು ಕೊಡಬೇಕಾಗಿತ್ತು.

ಶ್ರೀ ಕೆ. ರಘುಪತಿ ಭಟ್ : ಸಕ್ಕರೆ ಸಚಿವರೇ ಇದಕ್ಕೆ ಉತ್ತರಿಸುವ ಅವಶ್ಯಕತೆ ಇದೆ. ಇಲ್ಲದಿದ್ದರೆ ಸಹಕಾರಿ ಸಚಿವರು ಉತ್ತರಿಸುವುದಕ್ಕೆ ಈ ಪ್ರಶ್ನೆಯನ್ನು starred ಆಗಿ ಇಟ್ಟುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಕ್ಕರೆ ಸಚಿವರಿಗೆ ಸಂಬಂಧಿಸಿದಂಥ ಪ್ರಶ್ನೆಗ ಮಾತ್ರ ಉತ್ತರ ಕೊಡಲಿ. ಬೇರೆ ಪ್ರಶ್ನೆಗೆ ಬೇಡ. ನೇರವಾಗಿ ಉತ್ತರ ಕೊಡಿ. ಅದೇನೆಂದರೆ, ರೈತರಿಗೆ ಕೊಡಬೇಕಾದ 3 ಕೋಟಿ ರೂ ಬಾಕಿಯನ್ನು ಯಾವಾಗ ಕೊಡುತ್ತೀರಿ ? ಸಹಕಾರಿ ಸಂಸ್ಥೆಯವರು ತೆಗೆದುಕೊಂಡಿರುವಂಥ 6 ಕೋಟಿ ರೂ ಬಗ್ಗೆ ನೀವು ಉತ್ತರ ಕೊಡುವುದು ಬೇಡ. ಕಾರ್ಖಾನೆ ನಡೆಸುತ್ತೀರೋ ಇಲ್ಲವೋ? ಕಾರ್ಮಿಕರಿಗೆ 24 ತಿಂಗಳಿನಿಂದ ಏಕೆ ಸಂಬಳ ಕೊಟ್ಟಿಲ್ಲ ? ಆ ದೃಷ್ಟಿಯಿಂದ ನಮಗೆ ನೇರವಾಗಿ ಉತ್ತರ ಕೊಡಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಒಂದು ವೇಳೆ ಸಕ್ಕರೆ ಸಚಿವರಿಗೆ ಸಹಕಾರಿ ಇಲಾಖೆಯಿಂದ ಮಾಹಿತಿ ಬೇಕಾದರೆ ಅವರು ಅದನ್ನು ಪಡೆದುಕೊಳ್ಳಲಿ. ಎರಡೂ ಅಲ್ಲಿಗೆ ಬರುತ್ತದೆ. ಸಹಕಾರಿ ಇಲಾಖೆಯಿಂದ ಮಾಹಿತಿ ಪಡೆದುಕೊಂಡು ಉತ್ತರ ಕೊಡಬೇಕಾಗುತ್ತದೆ.

ಅಧ್ಯಕ್ಷರು : ಮಾನ್ಯ ಸಕ್ಕರ ಸಚಿವರು ಇಲ್ಲಿ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್, ಅಲ್ಲಿ ಕುಳಿತಿದ್ದಾರೆ.

ಅಧ್ಯಕ್ಷರು : ಇದಕ್ಕೆ ಉತ್ತರ ಕೊಡುವುದಕ್ಕೆ ತಯಾರಾಗಿ ಬಂದಿದ್ದೀರಾ ?

ಶ್ರೀ ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ತಯಾರಿ ಮಾಡುವುದಿಲ್ಲ. ಅವರು ಇಲ್ಲಿ ಬರುವಾಗ ಆಗಿ ಬರಬೇಕು ಸರ್.

(ಗೊಂದಲ)

ಶ್ರೀ ಅಧ್ಯಕ್ಷರು : ಕೋ-ಅಪರೇಟಿವ್ ಶುಗರ್ ಫ್ಯಾಕ್ಟರಿಗೆ ಸಂಬಂಧಿಸಿದ ಪ್ರಶ್ನೆ ಕೋ-ಅಪರೇಟಿವ್ ಮಿನಿಸ್ಟರ್‌ರವರಿಗೆ ಹೋಗಿದೆ. ಆದ್ದರಿಂದ ಈ ಪ್ರಶ್ನೆಯನ್ನು ಇನ್ನೊಂದು ದಿವಸ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮಗೆ ಕೋ-ಅಪರೇಟಿವ್‌ಗೆ ಸಂಬಂಧಿಸಿದ ಉತ್ತರ ಬೇಕಾಗಿಲ್ಲ.

ಶ್ರೀ ಅಮರೇಗೌಡ ಲಿಂಗನಗೌಡ ಬೈಯ್ಯಾಪುರ್ (ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ co-operative sector ಗೆ ಬರುವುದರಿಂದ ಹಾಗೂ ಅವರ ಖಾತೆಗೆ ಸಂಬಂಧಪಟ್ಟಿರುವುದರಿಂದ ಅವರಿಗೆ ವರ್ಗಾವಣೆಯಾಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಹಾಗಾದರೆ ಸಕ್ಕರೆ ಸಚಿವರಿಗೆ ಯಾವ್ಯಾವುದು ಬರುತ್ತದೆ ಎನ್ನುವುದನ್ನು ತಿಳಿಸಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನೀವೇ ನಮ್ಮ ರಕ್ಷಣೆಗೆ ಬರಬೇಕು. ತಮ್ಮ ಒಪ್ಪಿಗೆ ಮೇರೆಗೆ ಇಲ್ಲಿ ಈ ಪ್ರಶ್ನೆ ಬಂದಿದೆ ನೇರವಾಗಿ ಯಾವ ಸಚಿವರನ್ನು ಪ್ರಶ್ನೆ ಕೇಳಬೇಕೋ ಅದರಂತೆ ಕೇಳಿದ್ದಾರೆ.

ಅಧ್ಯಕ್ಷರು : ಅದನ್ನು ನಾನು ಒಪ್ಪುತ್ತೇನೆ. ದಯಮಾಡಿ ಕೇಳಿ. ಈಗ ಸಕ್ಕರೆ ಸಚಿವರು ಇದ್ದಾರೆ. ಅವರು ಏನು ಹೇಳುತ್ತಾರೆನ್ನುವುದನ್ನು ಕೇಳೋಣ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಅಧ್ಯಕ್ಷರೆ, ಅಲ್ಲಿ 5 ಸಾವಿರ ರೈತ ಕುಟುಂಬಗಳ ತೊಂದರೆ ಇದೆ.

ಅಧ್ಯಕ್ಷರು : ಸಕ್ಕರೆ ಸಚಿವರು ಏನು ಹೇಳುತ್ತಾರೆನ್ನುವುದನ್ನು ಕೇಳಿ.

ಶ್ರೀ ಅಮರೇಗೌಡ ಲಿಂಗನಗೌಡ ಬೈಯ್ಯಾಪುರ್ : ಮಾನ್ಯ ಅಧ್ಯಕ್ಷರೆ, ನನಗೆ ಕೇವಲ ಖಾಸಗಿ ಸಕ್ಕರೆ ಕಾರ್ಖಾನೆಗಳು ಮತ್ತು ಸರ್ಕಾರಕ್ಕೆ ಸಂಬಂಧಪಟ್ಟಂಥ ಮೂರು ಕಾರ್ಖಾನೆಗಳೂ ಮಾತ್ರ ನನ್ನ ವ್ಯಾಪ್ತಿಗೆ ಬರುವುದರಿಂದ, ಸಹಕಾರಿ ಸಕ್ಕರೆ ಕಾರ್ಖಾನೆಗಳು ಸಹಕಾರ ಮಂತ್ರಿಗಳ ವ್ಯಾಪ್ತಿಗೆ ಬರುವುದರಿಂದ ಈ ಪ್ರಶ್ನೆ ಅವರಿಗೆ ವರ್ಗಾವಣೆಯಾಗಿದೆ. ಅದು ನನಗೆ ಬಂದಿರುವುದಿಲ್ಲ. ಆದಕಾರಣ ಈ ಪ್ರಶ್ನೆ ಅವರಿಗೆ ಹೋಗಿದೆ. ಅವರು ಸದನದಲ್ಲಿ ಇಲ್ಲದಿರುವುದರಿಂದ ಸಮಯ ಕೊಡಿ. ಅವರು ಬಂದ ನಂತರ ಉತ್ತರನವನ್ನು ಕೊಡುತ್ತಾರೆ. ಒಂದು ವೇಳೆ ಅವರು ನನಗೆ ಉತ್ತರ ಕೊಡಲಿಕ್ಕೆ ಆದೇಶ ಕೊಟ್ಟರೆ ನಾನು ಅವರಿಗೆ ಉತ್ತರವನ್ನು ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಖಾಸಗಿ ಸಕ್ಕರೆ ಕಾರ್ಖಾನೆಗಳು ಸಕ್ಕರೆ ಸಚಿವರಿಗೆ ಬರುವುದಿಲ್ಲ. ಅದು industries minister ರವರಿಗೆ ಬರುತ್ತದೆ. ಸಹಕಾರಿ ಸಕ್ಕರೆ ಕಾರ್ಖಾನೆಗಳೆಲ್ಲಾ ಸಹಕಾರ ಸಚಿವರಿಗೆ ಬರುತ್ತದೆ. ಉಳಿಕೆ ಇರುವಂಥದ್ದರಲ್ಲಿ ಇವರಿಗೇನು ಬರುತ್ತದೆ ಎನ್ನುವುದನ್ನು ಇಲ್ಲಿ ಹೇಳಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ ಮೇಲೆ ನಮಗೆ ಬರುವುದಿಲ್ಲ. ಕೋಆಪರೇಟಿವ್ ಮಿನಿಸ್ಟರ್‌ಗೆ ಬರುತ್ತದೆಂದು ಇಲ್ಲಿ ಫೈಲ್‌ನಲ್ಲಿದೆ ರೆಫರ್ ಮಾಡಿದಿರಿ ಎಂದು ಇಟ್ಟುಕೊಳ್ಳೋಣ. ಹಾಗಾದರೆ ಅವರು ಬಂದು ಉತ್ತರ ಕೊಡಬೇಕಲ್ಲವೇ? ಅವರು ಏನು ಮಾಡುತ್ತಿದ್ದಾರೆ ?

ಅಧ್ಯಕ್ಷರು : ಸಹಕಾರ ಸಚಿವರಿಗೆ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಬೇರೆ ದಿವಸ ಅಲಾಟ್ ಆಗಿದೆ. ಅವಾಗ ಉತ್ತರ ಕೊಡಿಸುತ್ತೇನೆ. ಏನು ಹೇಳುತ್ತಾರೋ ನೋಡೋಣ. ಈಗ ಮಾನ್ಯ ಸಕ್ಕರೆ ಸಚಿವರು – ಇದು ವ್ಯಾಪ್ತಿಗೆ ಬರುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ನನ್ನ ವಿನಂತಿ ಏನೆಂದರೆ, Suppose ಅದಕ್ಕೆ Co-operative minister ಉತ್ತರ ಕೊಡಬೇಕೆಂದಾದರೆ, ಫೈಲು ಅವರಿಗೆ ರೆಫರ್ ಆದಮೇಲೆ, ಇವತ್ತು ಆ ಪ್ರಶ್ನೆ ಬರುವುದಕ್ಕೆ ಅವಕಾಶ ಕೊಡದೆಯೇ ಸಹಕಾರಿ ಇಲಾಖೆಗೆ ಸಂಬಂಧಿಸಿದ ಪ್ರಶ್ನೆ ಬರುವ ದಿವಸ ಆ ಪ್ರಶ್ನೆಗೆ ಉತ್ತರ ಬರಬೇಕಲ್ಲವೇ? ಹೋಗಲಿ, ಅವರಿಗೆ ಟ್ರಾನ್ಸ್‌ಫರ್ ಆಗಿದ್ದರೆ ಅವರಾದರೂ ಉತ್ತರ ಕೊಡುವ ಹಾಗೆ ಮಾಡಿ, ಈ ಸದಸ್ಯರಿಗೆ ಸಂಬಂಧಪಟ್ಟ ಸಚಿವರಿಂದ ಯಾವತ್ತು ಉತ್ತರ ಕೊಡಿಸುತ್ತೀರಿ?

(ಗೊಂದಲ)

ಅಧ್ಯಕ್ಷರು : ಶುಕ್ರವಾರ ಸಹಕಾರ ಸಚಿವರ ಕಡೆಯಿಂದ ಉತ್ತರ ಕೊಡಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಶುಕ್ರವಾರ ಉತ್ತರ ಕೊಡಿಸುತ್ತೀರಿ, ಆಗಬಹುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸನ್ಮಾನ್ಯ ಅಧ್ಯಕ್ಷರೇ, Co-operative Minister ರವರು ಕೌನ್ಸಿಲ್‌ನಲ್ಲಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಿ. ನಾವು ಕೋ–ಅಪರೇಟಿವ್ ಬಗ್ಗೆ ಚರ್ಚೆ ಮಾಡುತ್ತಿದ್ದರೆ ಅರಣ್ಯ ಸಚಿವರು ಏಕೆ ರೋಧಿಸುತ್ತಿದ್ದಾರೆ ?

ಅಧ್ಯಕ್ಷರು : ಶ್ರೀ ಡಿ.ಎನ್. ಜೀವರಾಜ್‌ರವರ ಪ್ರಶ್ನೆಗೆ ಸಂಬಂಧಿಸಿದಂತೆ ಮಾನ್ಯ ಸಕ್ಕರೆ ಸಚಿವರು 15 ದಿನಗಳ ಕಾಲಾವಕಾಶವನ್ನು ಕೇಳಿದ್ದಾರೆ.

ಅಧ್ಯಕ್ಷರು : ಈಗ ಜೀವರಾಜ್‌ರವರದ್ದು ಅವರು 15 ದಿನಗಳ ಕಾಲಾವಕಾಶ ಕೇಳಿದ್ದಾರೆ, ಇದು ಸಕ್ಕರೆ ಸಚಿವರದು.. ಮಾನ್ಯ ಯಡಿಯೂರಪ್ಪನವರೇ, ಇಲ್ಲಿ ಕೇಳಿ, ಇದು ಜೀವರಾಜ್‌ರವರ ಪ್ರಶ್ನೆ 1130 ಪ್ರಶ್ನೆಗೆ 15 ದಿನಗಳ ಕಾಲ ಅವಕಾಶ ಕೇಳಿದ್ದಾರೆ. ಸಕ್ಕರೆ ಸಚಿವರು ಏನು ಹೇಳುತ್ತೀರಿ ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಏಕೆ ಇದರಲ್ಲಿ ಏನು ಕಷ್ಟ ಇದೆ?

ಅಧ್ಯಕ್ಷರು : ಸ್ವಲ್ಪ ತಡೀರಿ ಸಕ್ಕರೆ ಸಚಿವರನ್ನು ಕೇಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರಿಗೆ ಖುಷಿ ಬಂದಾಗ ಮಾಡುವುದಕ್ಕೆ ಆಗುವುದಿಲ್ಲ ಬೇಗನೇ ಕೊಡುತ್ತೇವೆಂದು ಹೇಳಬೇಕು. 15 ದಿವಸಗಳ ನಂತರ ಅಧಿವೇಶನ ಎಲ್ಲಿರುತ್ತದೆ ?

ಅಧ್ಯಕ್ಷರು : ಸಕ್ಕರೆ ಸಚಿವರು ಸದನದಲ್ಲಿ ಇದ್ದಾರೆ, ಯಾವ ಕಾರಣಕ್ಕಾಗಿ ಕಾಲಾವಕಾಶ ಕೇಳಿದ್ದಾರೆಂದು ಕೇಳೋಣ. ಮಾನ್ಯ ಸಕ್ಕರೆ ಸಚಿವರು ಹೇಳಿ.

ಶ್ರೀ ಅಮರೇಗೌಡ ಎಲ್. ಬಯ್ಯಾಪೂರ್ : ಇಲಾಖೆಯಿಂದ ಬಹಳಷ್ಟು ಮಾಹಿತಿ ಬರಬೇಕಾಗಿರುವುದರಿಂದ ನಾನು 15 ದಿನಗಳ ಕಾಲಕಾವಕಾಶ ಕೇಳಿದ್ದೇನೆ. ಅದು ಬಂದ ನಂತರ ಉತ್ತರ ಕೊಡುತ್ತೇನೆ. ಇದಕ್ಕೆ ಪೂರ್ಣಪ್ರಮಾಣದಲ್ಲಿ ಉತ್ತರ ಕೊಡಬೇಕಾಗಿರುವುದರಿಂದ ಸಂಪೂರ್ಣವಾದ ಮಾಹಿತಿಯನ್ನು ತರಿಸಿಕೊಳ್ಳಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮಗೆ ಈ ಅಧಿವೇಶನದಲ್ಲಿಯೇ ಉತ್ತರ ಬೇಕು. ಅಷ್ಟು ದಿವಸ ಏಕೆ ಬೇಕು ಅಲ್ಲಿ ರೈತರು ಸಾಯುತ್ತಾರೆ.

ಅಧ್ಯಕ್ಷರು : ನೋಡಿ ಸಕ್ಕರೆ ಸಚಿವರೇ ದಯಮಾಡಿ ನೀವು ಈ ಅಧಿವೇಶನ ಮುಕ್ತಾಯವಾಗುವುದರೊಳಗೆ ಏನೇನು ಮಾಹಿತಿ ಬೇಕೋ ಅವುಗಳನ್ನು ತರಿಸಿ ಉತ್ತರ ಹೇಳತಕ್ಕಂಥದ್ದು ನಿಮ್ಮ ಜವಾಬ್ದಾರಿ ನೀವು ಹೇಳಬೇಕು.

ಶ್ರೀ ಅಮರೇಗೌಡ ಎಲ್. ಬಯ್ಯಾಪೂರ್ : ಆಯಿತು.

ಶ್ರೀ ಡಿ.ಎನ್. ಜೀವರಾಜ್ : ನನಗೆ ಲಿಖಿತ ಉತ್ತರ ಬೇಕಿಲ್ಲ. ಅವತ್ತೇ ಸದನದಲ್ಲಿ ಉತ್ತರ ಕೊಡಬೇಕು.

ಅಧ್ಯಕ್ಷರು : ಸದನದಲ್ಲಿ ಆ ದಿನ ಉತ್ತರ ಕೊಡುತ್ತಾರೆ ನೀವು ಕುಳಿತುಕೊಳ್ಳಿ. ಮುಂದಿನ ಪ್ರಶ್ನೆಗೆ ಹೋಗೋಣ. ಶ್ರೀ ಕೆ.ಬಿ. ಬೋಪಯ್ಯನವರು ಹೇಳಿ.

ಶ್ರೀ ಕೆ. ರಘುಪತಿ ಭಟ್ : ನನ್ನ ಪ್ರಶ್ನೆಗೆ ಯಾವಾಗ ಉತ್ತರ ಕೊಡುತ್ತಾರೆ ಎನ್ನುವ ಉತ್ತರಬೇಕು. ನನ್ನ ಪ್ರಶ್ನೆಗೆ ಯಾವಾಗ ಉತ್ತರ ಕೊಡುತ್ತಾರೆ ?

ಅಧ್ಯಕ್ಷರು : ಶುಕ್ರವಾರ ಕೊಡಿಸಲಾಗುವುದು.

ಮಡಿಕೇರಿ ವಿಧಾನ ಸಭಾ ವ್ಯಾಪ್ತಿಯಲ್ಲಿ ಪರಿಶಿಷ್ಟ ವರ್ಗಗಳ ಕಾಲೋನಿಗಳ ಅಭಿವೃದ್ಧಿ

38(1149) : ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆ, ಮಡಿಕೇರಿ ವಿಧಾನಸಭಾ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ವರ್ಗಗಳ ಕಾಲೋನಗಳು ಎಷ್ಟು ;

ಆ) ಈ ಎಲ್ಲಾ ಪರಿಶಿಷ್ಟ ವರ್ಗಗಳ ಕಾಲೋನಿಗಳಿಗೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಗುರುತಿಸಲಾಗಿದೆಯೆ, ಎಷ್ಟು ಕಾಲೋನಿಗಳನ್ನು ಗುರುತಿಸಲಾಗಿದೆ ;

ಇ) ಸದರಿ ಕಾಲೋನಿಗಳಿಗೆ ಕುಡಿಯುವ ನೀರು ಹಾಗೂ ರಸ್ತೆ ಮಾರ್ಗ ಕಲ್ಪಿಸುವುದು, ಮನೆಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆಯೇ, ಯಾವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ, ಇದಕ್ಕಾಗಿ ನಿಗದಿ ಪಡಿಸಿರುವ ಹಣ ಎಷ್ಟು ;

ಈ) ಇದೇ ತಾಲ್ಲೂಕಿನ ಚೊಂಬು ಹಾಗೂ ಕುದುರೆಪಾಯ ಗ್ರಾಮಗಳಲ್ಲಿರುವ ಆಶ್ರಮ ಶಾಲೆಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರಿಸುವುದು);

ಉ) ಈ ಆಶ್ರಮ ಶಾಲೆಗಳ ವಸತಿ ನಿಲಯ ಸುಧಾರಣೆಗೆ, ಸಂಪರ್ಕ ರಸ್ತೆಗಳನ್ನು ಅಭಿವೃದ್ಧಿಗೊಳಿಸುವುದು ಹಾಗೂ ಅಧ್ಯಾಪಕರ ಕೊರತೆ ನಿವಾರಿಸುವಲ್ಲಿ ಸರ್ಕಾರ ಕ್ರಮಗಳನ್ನು ಕೈಗೊಂಡಿದಯೇ (ವಿವರಗಳನ್ನು ಒದಗಿಸುವುದು) ?

ಡಾ॥ ವೈ ನಾಗಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಮಡಿಕೇರಿ ವಿಧಾನ ಸಭಾ ವ್ಯಾಪ್ತಿಯಲ್ಲಿ ಒಟ್ಟು 576 ಪರಿಶಿಷ್ಟ ವರ್ಗಗಳ ಕಾಲೋನಿಗಳಿವೆ.

ಆ) 2004–05 ನೇ ಸಾಲಿನಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಮಡಿಕೇರಿ ತಾಲ್ಲೂಕಿನಲ್ಲಿ 11 ಪರಿಶಿಷ್ಟ ವರ್ಗದ ಕಾಲೋನಿಗಳನ್ನು ಗುರುತಿಸಲಾಗಿದ್ದು ; ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಎಲ್ಲಾ ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಅಭಿವೃದ್ಧಿ ಕಾಮಗಾರಿಗಳನ್ನು ಹಣದ ಲಭ್ಯತೆಯನುಸಾರ ಹಂತ ಹಂತವಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಇ) 2004–05 ನೇ ಸಾಲಿನಲ್ಲಿ ಯವಕಪಾಡಿ ಗಿರಿಜನ ಕಾಲೋನಿ ಮತ್ತು ಮಡಿಕೇರಿ ತಾಲ್ಲೂಕಿನ ಇತರೆ 10 ಪರಿಶಿಷ್ಟ ವರ್ಗದ ಕಾಲೋನಿಗಳಲ್ಲಿ ಕುಡಿಯುವ ನೀರು, ರಸ್ತೆ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ನಿಗದಿ ಪಡಿಸಿದ ಅನುದಾನದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಈ) ಚೊಂಬು ಕಾಲೋನಿಯಲ್ಲಿ ಪರಿಶಿಷ್ಟ ವರ್ಗದ ಆಶ್ರಮಶಾಲೆಯು ಇರುವುದಿಲ್ಲ. ಕುದುರೆಪಾಯದ ಆಶ್ರಮಶಾಲೆಯ ಅಭಿವೃದ್ಧಿಗೆ ಹೆಚ್ಚುವರಿ ಕೊಠಡಿಗಾಗಿ ರೂ. 3.80 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಉ) ರಸ್ತೆಗಳ ಅಭಿವೃದ್ಧಿಗೆ ಸರ್ಕಾರದ ಮುಂದೆ ಪ್ರಸ್ತಾವನೆ ಇರುವುದಿಲ್ಲ. ಕುದುರೆಪಾಯ ಆಶ್ರಮಶಾಲೆಯಲ್ಲಿ 2 ಶಿಕ್ಷಕರ ಕೊರತೆಯಿದ್ದು, ಶಿಕ್ಷಕರನ್ನು ಗೌರವಧನ ಆಧಾರದ ಮೇಲೆ ನೆಹರು ಯುವ ಕೇಂದ್ರದ ಮೂಲಕ ತೆಗೆದುಕೊಳ್ಳಲಾಗಿದೆ.

ಅನುಬಂಧ

2004–05ನೇ ಯವಕಪಾಡಿ ಪರಿಶಿಷ್ಟ ವರ್ಗದ ಕಾಲೋನಿ ಮತ್ತು ಮಡಿಕೇರಿ ತಾಲ್ಲೂಕಿನ ಇತರೆ ಪರಿಶಿಷ್ಟ ವರ್ಗದ ಕಾಲೋನಿಗಳಲ್ಲಿ ರಾಜ್ಯ ಹಾಗೂ ಜಿಲ್ಲಾ ವಲಯದಡಿ ಕೈಗೊಳ್ಳಲಾಗುವ ಅಭಿವೃದ್ಧಿ ಕಾಮಗಾರಿಗಳ ವಿವರಗಳು :

ಕ್ರ.ಸಂ	ಕಾಲೋನಿಗಳ ವಿವರ	ಕಾಮಗಾರಿಗಳ ವಿವರ ವಲಯ	ಭಾರತ ಸಂವಿಧಾನ ವಿಶೇಷ	ಗಿರಿಜನ ಉಪಯೋಜನೆಗೆ ಕೇಂದ್ರೀಯ ಸಹಾಯಧನ	ಜಿಲ್ಲಾ
	ಯವಕಪಾಡಿ	ಮನೆಗಳ ನಿರ್ಮಾಣ	10.00	–	–
		ವಿದ್ಯುತ್ ಸೌಲಭ್ಯ	1.00	–	–
		ಕುಡಿಯುವ ನೀರಿನ ಸೌಲಭ್ಯ	3.00	–	–
		ರಸ್ತೆ ಅಭಿವೃದ್ಧಿ	8.50	–	–
		ಸಮುದಾಯ ಭವನ	5.00		
		ಭೂರಹಿತ ಪರಿಶಿಷ್ಟ ವರ್ಗದ ಕುಟುಂಬಗಳಿಗೆ			

		ಜಮೀನು ಖರೀದಿ	12.00		
		ಏತ ನೀರಾವರಿ ಯೋಜನೆ	10.00		
		ಸೋಲಾರ್ ತಂತಿ ಬೇಲಿ ಅಳವಡಿಸುವುದು	12.00		
		ಭೂಮಿ ಸಮತಟ್ಟು ಯೋಜನೆ	3.00		
		ಕೃಷಿ		1.75	
		ತೋಟಗಾರಿಗೆ		0.70	
		ಪಶುಸಂಗೋಪನೆ		2.01	
		ಗ್ರಾಮೋದ್ಯೋಗ (ಬೆತ್ತ ಬಿದಿರು ವಸ್ತುಗಳ ತಯಾರಿಕೆ)		1.00	
		ವೃತ್ತಿ ತರಬೇತಿ		2.10	
2	ಗಾಳಿಬೀಡು ಗಿರಿಜನಕಾಲೋನಿ	ರಸ್ತೆ ನಿರ್ಮಾಣ			1.00
3	ಕೊಳಗದಾಳು ಗಿರಿ ಜನ ಕಾಲೋನಿ	ಕಾಲು ಸೇತುವೆ ನಿರ್ಮಾಣ			0.50
4	ಐವತ್ತೊಕ್ಲು ಈಚಲು ಪರಂಬು ಗಿರಿಜನ ಕಾಲೋನಿ	ರಸ್ತೆ ಡಾಂಬರೀಕರಣ			0.50
5	ಚಿಟ್ಟಗೇಪನ್ನೆ ಗಿರಿಜನ ಕಾಲೋನಿ	ರಸ್ತೆ ಅಭಿವೃದ್ಧಿ			0.70
6	ಅಕತ್ತೂರು ಬಿಳಿಗೇರಿ ಗಿರಿಜನ ಕಾಲೋನಿ	ರಸ್ತೆ ಅಭಿವೃದ್ಧಿ			0.30
7	ಮಕ್ಕಂದೂರು ಗಿರಿಜನ ಕಾಲೋನಿ	ರಸ್ತೆ ಅಭಿವೃದ್ಧಿ			0.80
8	ಚೆತ್ತುಕಾಯ ಪಚ್ಚೆ ಪಿಲಾವು ಗಿರಿಜನ ಕಾಲೋನಿ	ರಸ್ತೆ ಅಭಿವೃದ್ಧಿ	0.70		
9	ಆಕತ್ತೂರು ಗಿರಿಜನ ಕಾಲೋನಿ	ತೆರೆದ ಬಾವಿ			0.30

10.	ಕುಂದಚೇರಿ ಪದಕಲ್ಲು ಗಿರಿಜನ ಕಾಲೋನಿ	ತೆರೆದ ಬಾವಿ			0.45
11	ಕುಂದಚೇರಿ ಗಿರಿಜನ ಕಾಲೋನಿ	ತೆರೆದ ಬಾವಿ			0.35
12	ಕೊಳಗದಾಳು ಗಿರಿಜನ ಕಾಲೋನಿ	ನೈಸರ್ಗಿಕ ನೀರು ಸರಬರಾಜು			0.35
13	ಮಡಿಕೇರಿ ತಾಲ್ಲೂಕಿನ ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ಮನೆಗಳ ನಿರ್ಮಾಣ				0.80
	ಒಟ್ಟು		**50.50**	**32.66**	**6.75**

ಅಧ್ಯಕ್ಷರು : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ, ನಾನು ಸ್ಪಷ್ಟವಾಗಿ ನನ್ನ ಪ್ರಶ್ನೆಯನ್ನು ಕೇಳಿದ್ದೆ. ಮಡಿಕೇರಿ ವಿಧಾನ ಸಭಾ ಕ್ಷೇತ್ರಕ್ಕೆ ಮಡಿಕೇರಿ ತಾಲ್ಲೂಕು ಮಾತ್ರವಲ್ಲ ವಿರಾಜಪೇಟೆಯ 6 ಗ್ರಾಮ ಪಂಚಾಯಿತಿಗಳು ಸೇರುತ್ತವೆ. ಆದರೆ ತಾವು ಕೊಟ್ಟಂಥ ಉತ್ತರದಲ್ಲಿ ವಿರಾಜಪೇಟೆ ತಾಲ್ಲೂಕಿನಲ್ಲಿ ಬರುವಂಥ ಗಿರಿಜನ ಕಾಲೋನಿಯ ಅಭಿವೃದ್ಧಿಯ ಬಗ್ಗೆ ಯಾವುದೇ ಸ್ಪಷ್ಟ ಮಾಹಿತಿ ಇಲ್ಲ. ಉದ್ದೇಶಪೂರ್ವಕವಾಗಿ ಅದನ್ನು ತಡೆಹಿಡಿದಿದ್ದಾರೆ. ಏಕೆಂದರೆ, ಚೆನ್ನನಕೋಟೆ ಪಂಚಾಯಿತಿ, ಚೆನ್ನಂಗಿ ಗ್ರಾಮದ ತಟ್ಟಳ್ಳಿ ಅಂಥ. ಗಿರಿಜನ ಕಾಲೋನಿಯಲ್ಲಿ ಸಾಕಷ್ಟು ಅವ್ಯವಹಾರ ಆಗಿದೆ. ಅಲ್ಲಿ ಫಲಾನುಭವಿಗಳನ್ನು ಗುರುತುಮಾಡಿ ಸುಮಾರು 19 ಜನ ಫಲಾನುಭವಿಗಳಿಗೆ ಸ್ವಯಂ ಉದ್ಯೋಗ ಮಾಡುವುದಕ್ಕೆ ಹಸು ತೆಗೆದುಕೊಡುವಂಥ ಯೋಜನೆಯೊಂದನ್ನು ಮಾಡಿ, ಆ ಪಕ್ಕದ ಒಂದು ಸಹಕಾರ ಬ್ಯಾಂಕಿನಲ್ಲಿ ಅದರ ವ್ಯಾಪ್ತಿಗೆ ಅದು ಬರುವುದಿಲ್ಲ, ಬೇರೆ ಪಂಚಾಯಿತಿ ಬರುತ್ತದೆ, ಅಲ್ಲಿ ಅವರಿಗೆ 13 ಸಾವಿರ ರೂ. ಸಾಲವನ್ನು ಕೊಡುತ್ತೇವೆಂದು ಮಾಡಿ ಅವರಿಗೆ ಯಾವುದೇ ಹಸುವವನ್ನೂ ಕೊಡಲಿಲ್ಲ. ಸಾಲವನ್ನು ಕೊಡಲಿಲ್ಲ. ಅದರ ಜೊತೆಗೆ ಅದೇ ಕಾಲೋನಿಗೆ ಸಂಬಂಧಪಟ್ಟ ಹಾಗೆ 60 ಜನ ಸಫಾಯಿ ಕರ್ಮಚಾರಿಗಳನ್ನು ಗುರುತು ಮಾಡಿದ್ದಾರೆ. ಅಲ್ಲಿ ಒಂದೇ ಒಂದು ಸಫಾಯಿ ಕರ್ಮಚಾರಿಗಳು ಇಲ್ಲ. ಇದು ಎಲ್ಲವನ್ನೂ ಈ ಸಹಕಾರಿ, ಮಲ್ದಾರ್ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್ ಇದರ ಮೂಲಕ ಅವ್ಯವಹಾರ ಆಗಿದೆ, ಇದು ಜಿಲ್ಲಾ ಪಂಚಾಯತ್‌ನಲ್ಲಿ ಬಂದಿದೆ, ಹಿಂದೆ ಇದ್ದಂಥ ಮಾನ್ಯ ಉಸ್ತುವಾರಿ ಸಚಿವರ ಗಮನಕ್ಕೆ ತಂದಿದ್ದರು, ಈಗ ಅವರ ಉಸ್ತುವಾರಿಯನ್ನೇ ತೆಗೆದು ಹಾಕಿದ್ದರು. ಅವರು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದರೂ ಅವರಿಂದಲೂ ಕ್ರಮ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಇಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ, ಯಾರು ಎಲ್ಲ ಅವ್ಯವಹಾರವನ್ನು ಮಾಡಿದರು, ಜಿಲ್ಲಾ ಎಸ್‌ಪಿ, ಕಾರ್ಪೋರೇಷನ್ನಿನ ಡೈರೆಕ್ಟರ್‌ರವರನ್ನು ವರ್ಗಾವಣೆ ಮಾಡಿದ್ದಾರೆ,

ಅಲ್ಲಿಗೆ ಇನ್ನೊಬ್ಬರು ಬಂದರು, ಅವರು ಬಂದು ಇದು ಎಲ್ಲಾವನ್ನೂ ನೋಡಿ ಅವರೊಂದು 70 ಸಾವಿರ ರೂಪಾಯಿಗಳನ್ನು ಹೊಡೆದುಕೊಂಡು ಹೋಗಿದ್ದಾರೆ. ಉದ್ದೇಶಪೂರ್ವಕವಾಗಿ ಈ ಮಾಹಿತಿ ಏಕೆ ಕೊಡಲಿಲ್ಲವೆಂದು ನಾನು ಸ್ಪಷ್ಟೀಕರಣವನ್ನು ತಮ್ಮ ಮೂಲಕ ಕೇಳುತ್ತೇನೆ.

ಡಾ:ವೈ. ನಾಗಪ್ಪ : ಮಾನ್ಯ ಸದಸ್ಯರು ಅವ್ಯವಹಾರದ ಬಗೆ ಒಂದೇ ಒಂದು ಪ್ರಶ್ನೆ ಇಲ್ಲಿ ಹಾಕಿಲ್ಲ, ಅವರು ಹಾಕಿರುವ ಪ್ರಶ್ನೆಗಳಿಗೆ ನಾವು ಉತ್ತರವನ್ನು ಕೊಟ್ಟಿದ್ದೇವೆ. ಕೊಡಗು ಜಿಲ್ಲೆಯ ಮಡಿಕೇರಿ ವಿಧಾನ ಸಭಾ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟವರ್ಗಗಳ ಕಾಲೋನಿಗಳು 576 ಇವೆ, ಅದರಲ್ಲಿ 11 ಅನ್ನು ನಾವು ಗುರುತಿಸಿದ್ದೇವೆ. 10 ಇದರಲ್ಲಿ ನಾವು ಕೆಲಸವನ್ನು ತೆಗೆದುಕೊಂಡಿದ್ದೇವೆ, ಮತ್ತು ಅದೇ ತಾಲ್ಲೂಕಿನ ಚೊಂಬು ಹಾಗೂ ಕುದುರೆಪಾಯದ ಆಶ್ರಮಶಾಲೆಯ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಚೊಂಬು ಕಾಲೋನಿಯಲ್ಲಿ ಪರಿಶಿಷ್ಟ ವರ್ಗದ ಆಶ್ರಮ ಶಾಲೆಯು ಇರುವುದಿಲ್ಲ. ಕುದುರೆಪಾಯದ ಆಶ್ರಮ ಶಾಲೆಯ ಅಭಿವೃದ್ಧಿಗೆ ಹೆಚ್ಚುವರಿ ಕೊಠಡಿಗಾಗಿ ರೂ. 3.80 ಲಕ್ಷಗಳನ್ನು ಬಿಡುಗಡೆ ಮಾಡಿದ್ದೇವೆ. ಅವ್ಯವಹಾರದ ಬಗ್ಗೆ ಅವರು ಯಾರೂ ಪ್ರಸ್ತಾಪ ಮಾಡಿಲ್ಲ.

ಶ್ರೀ ಕೆ.ಜಿ. ಬೋಪಯ್ಯ : ಹಾಗಾದರೆ ವಿರಾಜಪೇಟೆ ತಾಲ್ಲೂಕಿನ ಚೆನ್ನಂಗಿ ಚೆನ್ನನಕೋಟೆ, ಚೆನ್ನಂಗಿ ಗ್ರಾಮದ ತಟ್ಟಳ್ಳಿ ಗಿರಿಜನ ಕಾಲೋನಿಗೆ ತಾವು ಯಾವುದೇ ಅಭಿವೃದ್ಧಿ ಕಾರ್ಯವನ್ನು ಮಾಡಲಿಲ್ಲವೆ ? ಅಲ್ಲಿ ಇನ್ನೊಂದು ಅವ್ಯವಹಾರ ನಡೆದಿದೆ. ಶಿವಣ್ಣ ಎಂದು ಹೇಳುವ ಒಬ್ಬ ಯುವಕನಿಗೆ ಟ್ರಾಕ್ಟರ್ ಕೊಡಿಸುತ್ತೇವೆಂದು ಹೇಳಿ ಬೆಂಗಳೂರು ಎಲ್ಲಾ ಸುತ್ತಿಸಿದರೂ ಅವನಿಗೆ ಇವತ್ತಿನವರೆವಿಗೂ ಟ್ರಾಕ್ಟರ್ ಕೊಡಲಿಲ್ಲ. ಹಾಗಾದರೆ ಇದು ಅಭಿವೃದ್ಧಿ ಯೋಜನೆಗಳು ಹೌದೋ ಅಲ್ಲವೋ ಎಂಬ ಬಗ್ಗೆ ತಾವು ಸ್ಪಷ್ಟೀಕರಣ ಕೊಡಿ. ಕೇವಲ ಮಡಿಕೇರಿ ತಾಲ್ಲೂಕಿನ ಮಾತ್ರ ಮಾಹಿತಿ ಕೊಟ್ಟಿದ್ದೀರಿ, ಅದರ ಜೊತೆಗೆ ನೀವು ನಾಲಾಡಿ ಗಿರಿಜನ ಕಾಲೋನಿಗೆ ನೀವು ಎಲ್ಲಾ ಅಭಿವೃದ್ಧಿಯನ್ನು ಹಾಕಿದಿರಿ. ಅಲ್ಲಿ ಒಂದು ಶಾಲೆ ನಡೆಯುತ್ತಿದೆಯೇ? ಅಲ್ಲಿ ಆ ಶಾಲೆ ಇವತ್ತು ನಡೆಯುತ್ತಿಲ್ಲ. ಸುಮ್ಮನೆ ಒಂದು ಹಾಸ್ಟೇಲ್ ಎಂದು ಮಾಡಿ ಆ ಮಕ್ಕಳೆಲ್ಲರೂ ಸರ್ಕಾರಿ ಶಾಲೆಗೆ ಹೋಗುತ್ತಿದ್ದಾರೆ. ಮಾಹಿತಿಗಳು ತಮಗೆ ತಪ್ಪಾಗಿ ಒದಗಿಸಿಕೊಟ್ಟಿದ್ದಾರೆ. ತಟ್ಟಳ್ಳಿ ಬಗ್ಗ ಏನು ಅಭಿವೃದ್ಧಿ ಎಂಬುದರ ಬಗ್ಗೆ ಮಾಹಿತಿ ಕೊಡಿ.

ಡಾ:ವೈ. ನಾಗಪ್ಪ : ಯುವಕಪಾಡಿ ಇದರಲ್ಲಿ ಸುಮಾರು ಕಾಮಗಾರಿಗಳನ್ನು ನಾವು ಮಾಡಿದ್ದೇವೆ. ಅವರು ಹೇಳಿದ ಹಾಗೆ, ಗಾಳಿಬೀಡು ಗಿರಿಜನ ಕಾಲೋನಿ, ಕೊಳಗದಾಳು ಗಿರಿಜನ ಕಾಲೋನಿ, ಐವತ್ತೊಕ್ಲು ಈಚಲು ಪರಂಬು ಗಿರಿಜನ ಕಾಲೋನಿ, ಚೆಟ್ಟೇಪನ್ನೆ ಗಿರಿಜನ ಕಾಲೋನಿ, ಅಕತ್ತೂರು ಬಿಳಿಗೇರಿ ಗಿರಿಜನ ಕಾಲೋನಿ, ಮಕ್ಕಂದೂರು ಗಿರಿಜನ ಕಾಲೋನಿ, ಬೆತ್ತುಕಾಯ ಪಚ್ಚೆಪಿಲಾವು ಗಿರಿಜನ ಕಾಲೋನಿ, ಈ ಎಲ್ಲಾ ಕಾಲೋನಿಗಳಲ್ಲಿ ನಾವು ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು : ಬೋಪಯ್ಯನವರೇ, ಬಹಳ ಹೊತ್ತು ಆಯಿತು, ಈಗ ನೀವು ಮಾನ್ಯ ಸಚಿವರ ಹತ್ತಿರ ಕುಳಿತುಕೊಂಡು ಮಾತನಾಡಿ.

ಶ್ರೀ ಕೆ.ಜಿ. ಬೋಪಯ್ಯ : ನಾನು ಒಂದು ಕಾಲೋನಿಯ ಬಗ್ಗೆ ಕೇಳುತ್ತಿದ್ದೇನೆ. ಅಲ್ಲಿ ಏನು ಅಭಿವೃದ್ಧಿ ಕಾಮಗಾರಿ ಕೈಗೊಂಡಿದ್ದೀರಿ ? ಚೆನ್ನನಕೋಟೆ ಚೆನ್ನಂಗಿ ಗ್ರಾಮದ ತಟ್ಟಳ್ಳಿ ಗಿರಿಜನ

ಕಾಲೋನಿಗೆ ಏನೇನು ಅಭಿವೃದ್ಧಿ ಮಾಡಿದಿರಿ ? ಅಲ್ಲಿಯ ಗಿರಿಜನ ಪರಿಸ್ಥಿತಿ ಏನಿದೆ ? ನೀವು ಬರೀ ಯುಮಕಪಾಡಿ ಮತ್ತೆ ಕೆಲವು-ರಸ್ತೆಗಳ ಬಗ್ಗೆ ಮಾತ್ರ ಕೊಟ್ಟಿರುತ್ತೀರಿ. ನೀವು ಒಂದು ಸಲ ಪ್ರವಾಸ ಮಾಡಿ, ನಮ್ಮ ತಾಲ್ಲೂಕಿನಲ್ಲಿ ಗಿರಿಜನರ ಪರಿಸ್ಥಿತಿ ಹೇಗೆ ಇದೆ ಎಂಬುದು ಗೊತ್ತಾಗುತ್ತದೆ. ಇಲ್ಲಿ ಬಾಲಿಶವಾಗಿ ಉತ್ತರ ಕೊಡುವಂಥದ್ದು. ನಾನು ಸ್ಪಷ್ಟವಾಗಿ ಚೆನ್ನನ ಕೋಟೆಯ ಚೆನ್ನಂಗಿ ಗ್ರಾಮದ ತಟ್ಟಳ್ಳಿ ಗ್ರಾಮದ ಜನರಿಗೆ ನಿಮ್ಮ ಅಭಿವೃದ್ಧಿ ಯೋಜನೆಗಳು ಏನು ಎಂದು ಕೇಳಬಯಸುತ್ತೇನೆ ಇಲ್ಲಿ ಅವ್ಯವಹಾರ ಮಾಡಿದ್ದು ಇದೆ.

ಡಾ: ವೈ. ನಾಗಪ್ಪ : ಅವ್ಯವಹಾರ ಮಾಡಿರುವ ಬಗ್ಗೆ ಇಲ್ಲಿ ಒಂದೂ ಪ್ರಶ್ನೆನೂ ಇಲ್ಲ. ಅನುದಾನದ ಹಣವನ್ನು ನಾವು ಒಂದು ಜಿಲ್ಲೆಗೆ ಅಥವಾ ಒಂದು ತಾಲ್ಲೂಕಿಗೆ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ. ಅನುದಾನ ಬಂದ ಬಂದ ಹಾಗೆ ನಾವು ಇಂಪ್ರೂವ್‌ಮೆಂಟ್ಸ್ ತೆಗೆದುಕೊಳ್ಳುತ್ತಿದ್ದೇವೆ. ನೀವು ಎಲ್ಲಿ ಹೇಳಿದಿರಿ ಅಲ್ಲಿ ಏನು ಕೆಲಸಗಳು ಆಗಿಲ್ಲವೆಂದು ಅದಕ್ಕೆ ಮುಂದಿನ ಅನುದಾನ ಲಭ್ಯವಾದಲ್ಲಿ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಜಿ. ಬೋಪಯ್ಯ : ಅವ್ಯವಹಾರದ ಬಗ್ಗೆ ತನಿಖೆ ಮಾಡಿಸಿ.

ಡಾ.ವೈ. ನಾಗಪ್ಪ : ತನಿಖೆ ಮಾಡಿಸುತ್ತೇವೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ಬಿ.ಆರ್. ಪಾಟೀಲ್. ಅವರು ಇಲ್ಲವಾ ? ಮಾನ್ಯ ವಿಶ್ವನಾಥ ಪಾಟೀಲ್ ಹೆಬ್ಬಾಳ್.

ಚಿತ್ತಾಪುರ ನಗರಕ್ಕೆ ಹೊಂದಿಕೊಂಡಿರುವ ರೈಲ್ವೆಯ ಮೇಲು ಸೇತುವೆ ನಿರ್ಮಾಣ

40(756) : ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ್ : ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ನಗರಕ್ಕೆ ಹೊಂದಿಕೊಂಡಿರುವ ರೈಲ್ವೆಯ ಮೇಲುಸೇತುವೆ ನಿರ್ಮಾಣದ ಕಾಮಗಾರಿಗಾಗಿ ಬಹಳ ಹಿಂದೆಯೆ ಶಂಕುಸ್ಥಾಪನೆ ನೆರವೇರಿಸಿದ್ದರೂ ಸಹ ಇಲ್ಲಿವರೆಗೆ ರೈಲ್ವೆ ಮೇಲು ಸೇತುವೆ ಕೆಲಸ ಪ್ರಾರಂಭವಾಗದಿರಲು ಕಾರಣಗಳೇನು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

ಆ) ಸುಮಾರು 35 ರಿಂದ 40 ಹಳ್ಳಿಗಳ ಜನರಿಗೆ ಸಂಪರ್ಕ ವ್ಯವಸ್ಥೆ ಮಾಡಿಕೊಡಲು ಸರ್ಕರ ತಕ್ಷಣ ರೈಲ್ವೆ ಮೇಲುಸೇತುವೆ ಕಟ್ಟಿ ಲೆವೆಲ್ ಕ್ರಾಸಿಂಗ್ ವ್ಯವಸ್ಥೆ ಮಾಡಲು ಕ್ರಮಕೈಗೊಳ್ಳಲಾಗುವುದೇ?

ಶ್ರೀ ಪಿ.ಜಿ.ಆರ್ ಸಿಂಧ್ಯಾ (ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಮೇಲಿನ ವಿಷಯದಲ್ಲಿ ಮಾನ್ಯ ಸದಸ್ಯರು ಸರ್ಕಾರಕೆ ಮನವಿ ಪತ್ರ ನೀಡಿರುತ್ತಾರೆ. ಈ ವಿಷಯದಲ್ಲಿ ಹಿಂದಿನ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಪ್ರಧಾನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರು ಜನರಲ್ ಮ್ಯಾನೇಜರ್ ದಕ್ಷಿಣ ಕೇಂದ್ರ ರೈಲ್ವೆ, ಸಿಕಂದರಬಾದ್ ಅವರಿಗೆ ಪತ್ರ ಬರೆದಿದ್ದು ಈ ವಿಷಯದಲ್ಲಿ ರೈಲ್ವೆ ಇಲಾಖೆಯಿಂದ ವರದಿ ಬಂದಿದೆ. ವರದಿಯ ಪ್ರಕಾರ ಚಿತ್ತಾಪಮರ ಲೆವೆಲ್ ಕ್ರಾಸಿಂಗ್ ನಂ 4ರಲ್ಲಿ 5694 ಸಂಚಾರಿ ವಾಹನ ದಟ್ಟಣೆ (TVUS) ಇರುತ್ತದೆ. ವೆಚ್ಚ ಪಾಲುದಾರಿಕೆ ಮೇಲೆ ಈ ಕಾಮಗಾರಿಯನ್ನು ರೈಲ್ವೆ ಇಲಾಖೆಯೊಂದಿಗೆ ಕೈಕೊಳ್ಳಲು ಒಂದು ಲಕ್ಷಕ್ಕೂ ಹೆಚ್ಚು ಸಂಚಾರಿ ವಾಹನ ದಟ್ಟಣೆ (TVUS) ಇರುವುದು ಅವಶ್ಯವಿರುತ್ತದೆ.

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯು ರಸ್ತೆ ಮೇಲು ಸೇತುವೆ/ರಸ್ತೆ ಕೆಳ ಸೇತುವೆ ಚಾಲನಾ ಸಮಿತಿಯಲ್ಲಿ ಈ ವಿಷಯ ಪರಿಗಣಿಸಿ ಮುಂದಿನ ಅಗತ್ಯ ಕ್ರಮಕೈಕೊಳ್ಳಲಾಗುವುದು.

ಶ್ರೀ ಎಂ.ವೈ. ಪಾಟೀಲ್ (ಮಾನ್ಯ ವಿಶ್ವನಾಥ್ ಪಾಟೀಲ್ ಹೆಬ್ಬಾಳ್‌ರವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರದ ನಗರವು ಕೆಳ ರೈಲು ಬ್ರಿಡ್ಜ್‌ಗೆ ಹೊಂದಿಕೊಂಡಂತಹ ದೊಡ್ಡ ಪಟ್ಟಣವಾಗಿದೆ. ತಾಲ್ಲೂಕು ಹೆಚ್ ಕ್ವಾಟರ್ ಆಗಿದೆ. ಆ ಸೇತುವೆ ಬಹಳ ಚಿಕ್ಕ ಸೇತುವೆ ಇದೆ. ಅಲ್ಲಿ ಸಿಮೆಂಟ್ ಕಾರ್ಖಾನೆಗಳು ಇವೆ, ದೊಡ್ಡ ದೊಡ್ಡ ಲಾರಿಗಳು. ವಾಹನಗಳು ಸಂಚಾರ ಮಾಡುತ್ತವೆ. ಅದು ಬಹಳ ಚಿಕ್ಕದಾಗಿರುವುದರಿಂದ, ಬಹಳಷ್ಟು ವಾಹನಗಳಿಗೆ ತೊಂದರೆಯಾಗಿದೆ. ಅದಕ್ಕಾಗಿ ಒಂದು ಮೇಲ್ಮಟ್ಟದ ಸೇತುವೆ ಕಟ್ಟಬೇಕೆಂದು ಕೇಳಿಕೊಂಡಾಗ ಅದು ಮಂಜೂರು ಕೂಡ ಆಗಿ ಹಿಂದಿನ ಸಚಿವರು ಶಿಲನ್ಯಾಸ ಮಾಡಿದ್ದಾರೆ. ಈಗ ಉತ್ತರದಲ್ಲಿ ಮಾನ್ಯ ಸಚಿವರು ಇದು ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಪಾಲುಗಾರಿಕೆಯ ಮೇಲೆ ಈ ಯೋಜನೆ ಆಗಬೇಕಾಗಿದೆ ಎಂದು ಹೇಳುತ್ತಿದ್ದಾರೆ. ಮತ್ತು ಒಂದು ಲಕ್ಷಕ್ಕೂ ಹೆಚ್ಚಿನ ಈ ವಾಹನಗಳ ಸಂಚಾರ ಆಗಬೇಕೆಂದು ಹೇಳುತ್ತಿದ್ದಾರೆ. ಮತ್ತೆ ಶಿಲಾನ್ಯಾಸ ಮಾಡುವಾಗ ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೋ ಎಂಬುದು ಒಂದು ಪ್ರಶ್ನೆಯಾಗಿದೆ. ಹಾಗೆಯೇ, ಹಿಂದಿನ ಸರ್ಕಾರದ ಅವಧಿಯಲ್ಲಿ ಇದಕ್ಕೆ ಮಂಜೂರಾತಿ ಆದಮೇಲೆಯೋ ಶಿಲಾನ್ಯಾಸನ ಮಾಡಿರಬಹುದೆಂದು ನನ್ನ ವಿಚಾರವಾಗಿದೆ. ಇದಕ್ಕೆ ಮಾನ್ಯ ಮಂತ್ರಿಯವರು ಸಮಗ್ರವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಚಿತ್ತಾಪುರ ನಗರದಲ್ಲಿ ಟ್ರಾಫಿಕ್ ಜಾಸ್ತಿಯಿರುವುದರಿಂದ ಈ ರೀತಿಯಾದ ಒಂದು ಸೇತುವೆ ಮಾಡಬೇಕು ಎನ್ನತಕ್ಕಂಥ ಅವಶ್ಯಕತೆಯನ್ನು ನಾವು ಮನಗಂಡಿದ್ದೇವೆ. 1991–1992ರಲ್ಲಿ ಇದಕ್ಕೆ ಶಂಕುಸ್ಥಾಪನೆ ಮಾಡಿರತಕ್ಕಂಥದರ ಬಗ್ಗೆ ಸರ್ಕಾರದ ಹತ್ತಿರ ಯಾವುದೇ ರೀತಿಯ ಮಾಹಿತಿ ಇಲ್ಲ. ಸದರಿ ಸೇತುವೆಯ ಅವಶ್ಯಕತೆ ಇದೆ ಎಂಬುದು ತಿಳಿದು ಜನರಲ್ ಮ್ಯಾನೇಜರ್, ದಕ್ಷಿಣ ಕೇಂದ್ರ ರೈಲ್ವೆ, ಸಿಕಂದರಬಾದ್, ಇವರಿಗೆ ಪತ್ರ ಬರೆದಿದ್ದೇವೆ. ಇದನ್ನು ಮಾಡಬೇಕಾದರೆ, ರಾಜ್ಯ ಸರ್ಕಾರ ಹಣ ಕೊಡಬೇಕಾಗುತ್ತದೆ. ಮತ್ತೆ ಇದರ ಜೊತೆಗೆ ಕೇಂದ್ರ ಸರ್ಕಾರ ಕೂಡ ಹಣ ಬಿಡುಗಡೆ ಮಾಡಬೇಕಾಗಿರುತ್ತದೆ. ಅಲ್ಲಿ ಹೆಚ್ಚು ಟ್ರಾಫಿಕ್ ಆಗುವುದರಿಂದ ಸದರಿ ಸೇತುವೆಯನ್ನು ನಿರ್ಮಾಣ ಮಾಡಬೇಕೆಂಬುದನ್ನು ಈಗಾಗಲೇ ಒಪ್ಪಿಕೊಂಡಿದ್ದು, ಈ ಅಧಿವೇಶನ ಮುಗಿದ ನಂತರ ಮಾನ್ಯ ವಿಶ್ವನಾಥ್ ಪಾಟೀಲ್ ಹೆಬ್ಬಾಳ್‌ರವರ ಜೊತೆ ಚರ್ಚೆ ಮಾಡುತ್ತೇನೆ. ಮಾನ್ಯ ಎಂ.ವೈ. ಪಾಟೀಲ್‌ರವರು ಆ ಭಾಗದ ಮುಖಂಡರಾಗಿದ್ದಾರೆ. ಅವರ ಭಾವನೆಗಳನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ರೈಲ್ವೆ ಇಲಾಖೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯವರನ್ನು ಕರೆದು ಈ ಪ್ರಾಬ್ಲಮ್‌ನ್ನು ಯಾವ ರೀತಿಯಾಗಿ ನಿವಾರಣೆ ಮಾಡಬಹುದೆಂಬುದರ ಬಗ್ಗೆ ನಾನು ಪ್ರಯತ್ನ ಮಾಡುತ್ತೇನೆ. ಮತ್ತೆ ಇದು ಹಣಕಾಸಿನ ಇತಿಮಿತಿಗೆ ಅವಲಂಬಿತವಾಗಿರುತ್ತದೆ.

ಶ್ರೀ ಎಂ.ವೈ. ಪಾಟೀಲ್ : ಮಾನ್ಯ ಸಚಿವರು ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ನಾವು ಅಪೇಕ್ಷೆ ಮಾಡುತ್ತೇವೆ. ಮತ್ತೆ ಮಂಜೂರಾತಿ ಆಗದೆ ಶಿಲಾನ್ಯಾಸಗಳನ್ನು ಇನ್ನು ಮುಂದೆ ಮಾಡಬಾರದೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾನು 22 ವರ್ಷಗಳಿಂದ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಹಣಕಾಸಿನ ಮಂಜೂರಾತಿ

ಅದನಂತರ ಹಣಕಾಸು ಬಿಡುಗಡೆಯಾದರೆ ಮಾತ್ರ ಪ್ರಾರಂಭ ಮಾಡತಕ್ಕಂಥ ಕೆಲಸಗಳಿಗೆ ಶಿಲಾನ್ಯಾಸ ಮಾಡಲಾಗುತ್ತದೆ. ನಾನು ಈಗ ಯಾವ ಶಿಲಾನ್ಯಾಸವನ್ನು ಮಾಡಿಲ್ಲ. ನನ್ನ ಇಲಾಖೆಯಲ್ಲಿ ಅನೇಕ ಕೆಲಸಗಳು ಶಿಲಾನ್ಯಾಸ ಮಾಡದೆ ಕೆಲಸ ಪ್ರಾರಂಭವಾಗಿ ಆ ಕೆಲಸ ಮುಗಿದ ನಂತರ ಶಿಲಾನ್ಯಾಸನ ಮತ್ತು ಉದ್ಘಾಟನಾ ಕಾರ್ಯಕ್ರಮಗಳೆರಡೂ ಒಂದೇ ಸಾರಿ ಆಗಿರತಕ್ಕಂಥ ಉದಾಹರಣೆಗಳು ಇವೆ. ಇದಕ್ಕೆ ಸಂಬಂಧಪಟ್ಟಂತೆ ನಾನು ಈಗಾಗಲೇ ಖಚಿತವಾದ ಮಾಹಿತಿಯನ್ನು ಅವರಿಗೆ ಕೊಟ್ಟಿದ್ದೇನೆ. ಇದಕ್ಕೆ ಪ್ರೋಸಲ್ಸ್ ಇಲ್ಲ. ಮತ್ತೆ ಇದು ಹಣಕಾಸಿನ ಮೇಲೆ ಡಿಪೆಂಡ್ ಆಗಿರುತ್ತದೆ. ಅಧಿವೇಶನ ಮುಗಿದ ಮೇಲೆ ಸಂಬಂಧಪಟ್ಟಂಥ ಶಾಸಕರನ್ನು ಕರೆಸಿ ಇದರ ಬಗ್ಗೆ ಒಂದು ಸಭೆ ಮಾಡುತ್ತೇನೆ. ನಾನು ಈಗಾಗಲೇ ಹೇಳಿದ ಪ್ರಕಾರ ಇದು ಹಣಕಾಸಿನ ಇತಿಮಿತಿಯ ಆಧಾರದ ಮೇಲೆ ಡಿಪೆಂಡ್ ಆಗಿರುತ್ತದೆಂದು ಖಚಿತವಾಗಿ ಹೇಳುತ್ತಿದ್ದೇನೆ. ಇದನ್ನು ಯಾವುದೇ ಕಾರಣಕ್ಕೂ ಅವಾಯ್ಡ್ ಮಾಡತಕ್ಕಂಥ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ.

ಸಿ.ಇ.ಟಿ. ಮುಖಾಂತರ ಆಯ್ಕೆಗೊಂಡ ಪರಿಶಿಷ್ಟ ಜಾತಿ ;. ಪರಿಶಿಷ್ಟ ಪಂಗಡದ ವಿಧ್ಯಾರ್ಥಿಗಳಿಗೆ ಶುಲ್ಕ ಸಹಾಯಧನ (ಸಬ್ಸಿಡೈಸ್‌ದಿ ಫೀ) ನೀಡುವ ಬಗ್ಗೆ.

41(1142) : ಶ್ರೀ ಉಮಾಪತಿ ಎ.ವಿ. (ಹೊಳಲ್ಕೆರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2004–05ನೇ ಸಾಲಿನಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿ.ಇ.ಟಿ) ಮುಖಾಂತ ಅನುದಾನರಹಿತ ಖಾಸಗಿ ಕಾಲೇಜುಗಳಲ್ಲಿ ವೈದ್ಯಕೀಯ, ದಂತವೈದ್ಯಕೀಯ ಹಾಗೂ ತಾಂತ್ರಿಕ ಪದವಿ ಮತ್ತು ಸ್ನಾತಕ್ಕೋತ್ತರ ಪದವಿ;ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪಡೆದಿರುವ ಪರಿಶಿಷ್ಟ ಜಾತಿ ;ಪರಿಶಿಷ್ಟ ಪಂಗಡ, ಪ್ರವರ್ಗ–1 ಮತ್ತು ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಪಾವತಿಸಬೇಕಾದ ಶುಲ್ಕವನ್ನು ಸದರಿ ಕಾಲೇಜುಗಳಿಗೆ ಸರ್ಕಾರ ಸಹಾಯಧನ ರೂಪದಲ್ಲಿ (ಸಬ್ಸಿಡೈಸ್ ಧಿ ಫೀ) ನೀಡುವ ತೀರ್ಮಾನ ತೆಗೆದು ಕೊಳ್ಳಲಾಗಿದೆಯೇ ;

ಆ) ಇಲ್ಲಿಯವರೆಗೆ ತೀರ್ಮಾನ ತೆಗೆದುಕೊಳ್ಳದೇ ಇರಲು ಕಾರಣಗಳೇನು? ಮತ್ತು ಯಾವ ದಿನಾಂಕದೊಳಗೆ ತೀರ್ಮಾನ ತೆಗೆದುಕೊಳ್ಳಲಾಗುವುದು ;

ಇ) 2004–05ನೇ ಆರ್ಥಿಕ ವರ್ಷ ಮುಕ್ತಾಯದ ಹಂತದಲ್ಲಿರುವುದರಿಂದ ಮೇಲ್ಕಂಡ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆ ಆಗದಂತೆ ನಿಗಧಿಪಡಿಸುವ ದಿನಾಂಕದೊಳಗೆ ಸಹಾಯಧನ ಮಂಜೂರು ಮಾಡಲಾಗುವುದೇ?

ಶ್ರೀ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು)

ಅ+ಆ+ಇ) 2004–05ನೇ ಸಾಲಿನಲ್ಲಿ ಸಾಮಾನ್ಯ ಪರೀಕ್ಷಾ ಘಟಕದ ಮುಖಾಂತರ ಆಯ್ಕೆಗೊಂಡ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗ ಪ್ರವರ್ಗ–1ರ ವಿದ್ಯಾರ್ಥಿಗಳು ವೈದ್ಯಕೀಯ ದಂತ, ಐ.ಎಸ್.ಎಂ. ಇಂಜಿನಿಯರಿಂಗ್, ಇಂಜಿನಿಯರಿಂಗ್ ಡಿಪ್ಲೋಮಾ ಮತ್ತು ಇಂಜಿನಿಯರಿಂಗ್ (ಇವಿನಿಂಗ್) ಕೋರ್ಸ್‌ಗಳಿಗೆ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪಡೆದಿದ್ದು ಸರ್ಕಾರವು ನಿಗದಿಪಡಿಸಿರುವ ಶುಲ್ಕವನ್ನು ಮರುಪಾವತಿಸುವ ಸಂಬಂಧ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ) ಮತ್ತು ಶಿಕ್ಷಣ (ಉನ್ನತ ಶಿಕ್ಷಣ) ಇಲಾಖೆಗಳಿಂದ ಶುಲ್ಕ ಮರು ಪಾವತಿಸುವ ಸಂಬಂಧ ಬೇಡಿಕೆ ತಃಖ್ತೆಯನ್ನು ಸಮಾಜ ಕಲ್ಯಾಣ ಇಲಾಖೆ ಪಡೆದಿದ್ದು,

ಅದರಂತೆ, 17.20.04,550ರೂ.ಗಳ ತಗಲುವ ಹೆಚ್ಚುವರಿ ವೆಚ್ಚವನ್ನು ಪೂರಕ ಅನುದಾನದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಒದಗಿಸುವಂತ ಮತ್ತು 2003-04ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಬಾಕಿ ಪಾವತಿಸುವ ಮೊತ್ತ (ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ) 2.07.38,700ಗಳನ್ನು ಸಹಾ ಹೆಚ್ಚುವರಿಯಾಗಿ ಪಾವತಿಸುವಂತೆ ಕರಡು ಸಚಿವ ಸಂಪುಟ ಟಿಪ್ಪಣಿಯನ್ನು ತಯಾರಿಸಿ, ಆರ್ಥಿಕ ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿದೆ.

ಶ್ರೀ ಎ.ವಿ. ಉಮಾಪತಿ : ಮಾನ್ಯ ಅಧ್ಯಕ್ಷರೆ, 2004-05ನೇ ಸಾಲಿನಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಮುಖಾಂತರ ಅನುದಾನರಹಿತ ಖಾಸಗಿ ಕಾಲೇಜುಗಳಲ್ಲಿ ವೈದ್ಯಕೀಯ, ದಂತವೈದ್ಯಕೀಯ ಹಾಗೂ ತಾಂತ್ರಿಕ ಪದವಿ ಮತ್ತು ಸ್ನಾತಕೋತ್ತರ ಪದವಿ : ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪಡೆದಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ, ಪ್ರವರ್ಗ-1 ಮತ್ತು ಇತರ ಹಿಂದುಳಿದ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಪಾವತಿಸಬೇಕಾದ ಶುಲ್ಕವನ್ನು ಸದರಿ ಕಾಲೇಜುಗಳಿಗೆ ಸರ್ಕಾರ ಸಹಾಯಧನ ರೂಪದಲ್ಲಿ ನೀಡುವ ತೀರ್ಮಾನ ತೆಗೆದುಕೊಳ್ಳಲಾಗಿದೆಯೇ ಎಂಬ ಪ್ರಶ್ನೆಯನ್ನು ನಾನು ಕೇಳಿದ್ದೆ. ಇದಕ್ಕೆ ಇಲಾಖೆಯವರು ಏನು ಉತ್ತರ ಕೊಟ್ಟಿದ್ದಾರೆಂದರೆ, 2004-05ನೇ ಸಾಲಿನಲ್ಲಿ ಸಾಮಾನ್ಯ ಪರೀಕ್ಷಾ ಘಟಕದ ಮುಖಾಂತರ ಆಯ್ಕೆಗೊಂಡ ಪರಿಶಿಷ್ಟ ಜಾತಿ, ಪರಿಶೀಷ್ಟ ವರ್ಗ ಮತ್ತು ಹಿಂದುಳಿದ ವರ್ಗ ಪ್ರವರ್ಗ-1ರ ವಿದ್ಯಾರ್ಥಿಗಳು ವೈದ್ಯಕೀಯ, ದಂತ, ಐ.ಎಸ್.ಎಂ. ಇಂಜಿನಿಯರಿಂಗ್, ಇಂಜಿನಿಯರಿಂಗ್ ಡಿಪ್ಲೋಮಾ ಮತ್ತು ಐ.ಎಸ್.ಎಂ. ಇಂಜಿನಿಯರಿಂಗ್, ಇಂಜಿನಿಯರಿಂಗ್ ಡಿಪ್ಲೋಮಾ ಮತ್ತು ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪಡೆದಿದ್ದು ಸರ್ಕಾರವು ನಿಗಧಿಪಡಿಸಿರುವ ಶುಲ್ಕವನ್ನು ಮರುಪಾವತಿಸುವ ಸಂಬಂಧ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಮತ್ತು ಶಿಕ್ಷಣ ಇಲಾಖೆಗಳಿಂದ ಶುಲ್ಕ ಮರುಪಾವತಿಸುವ ಸಂಬಂಧ ಬೇಡಿಕೆ ತಃಖ್ತೆಯನ್ನು ಸಮಾಜ ಕಲ್ಯಾಣ ಇಲಾಖೆ ಪಡೆದಿದ್ದು, ಅದರಂತೆ, 17,2004,550 ರೂ.ಗಳ ತಗಲುವ ಹೆಚ್ಚುವರಿ ಪೂರಕ ಅನುದಾನದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಒದಗಿಸುವಂತೆ ಮತ್ತು 2003-04ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಬಾಕಿ ಪಾವತಿಸುವ ಮೊತ್ತ 2,02,38,700 ರೂ.ಗಳನ್ನು ಸಹ ಹೆಚ್ಚುವರಿಯಾಗಿ ಪಾವತಿಸುವಂತೆ ಕರಡು ಸಚಿವ ಸಂಪುಟ ಟಿಪ್ಪಣಿಯನ್ನು ತಯಾರಿಸಿ, ಆರ್ಥಿಕ ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ, ಈಗಾಗಲೇ, ಸಿ.ಇ.ಟಿ. ಮುಖಾಂತರ ಖಾಸಗಿ ಕಾಲೇಜುಗಳಲ್ಲಿ ಪ್ರವೇಶ ಪಡೆದುಕೊಂಡಿರತಕ್ಕಂಥ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ಪದವಿಗೆ ಸೇರತಕ್ಕಂಥ ವಿದ್ಯಾರ್ಥಿಗಳು ಈಗಾಗಲೇ ಖಾಸಗಿ ಕಾಲೇಜುಗಳಲ್ಲಿ ಪ್ರವೇಶ ಪಡೆದುಕೊಂಡಿದ್ದಾರೆ. ಆದರೆ, ಸಬ್ಸಿಡಿ ರೂಪದಲ್ಲಿ ಕೊಡಬೇಕಾಗಿರತಕ್ಕಂಥ ಶುಲ್ಕವನ್ನು ಮೊದಲು ಪಾವತಿ ಮಾಡಿ, ಅನಂತರ ಈ ಹಣ ಸರ್ಕಾರದಿಂದ ಬಂದ ಮೇಲೆ ಇದನ್ನು ಮರುಪಾವತಿ ಮಾಡಿಕೊಳ್ಳಿ ಎಂದು ಖಾಸಗಿ ಕಾಲೇಜಿನವರು ವಿದ್ಯಾರ್ಥಿಗಳಿಗೆ ಒತ್ತಾಯ ಮಾಡುತ್ತಿದ್ದಾರೆ. ಆದರೆ, 17 ಕೋಟಿ ರೂಪಾಯಿಗಳನ್ನು ನಾವು ಈಗಾಗಲೇ ಸಮಾಜ ಕಲ್ಯಾಣ ಇಲಾಖೆಗೆ ಒದಗಿಸಿದ್ದೇವೆಂದು ತಮ್ಮ ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ, ಇವತ್ತಿನ ದಿವಸ ಹಣ ಸರಿಯಾಗಿ ತಲುಪಿಲ್ಲವೆಂದು ಅವರು ವಿದ್ಯಾರ್ಥಿಗಳಿಗೆ ಒತ್ತಾಯ ಮಾಡುತ್ತಿದ್ದಾರೆ. ಈಗ ಅವರೇನಾದರೂ ಹಣ ಕಟ್ಟದಿದ್ದರೆ.....

ಅಧ್ಯಕ್ಷರು : ಮಾನ್ಯ ಉಮಾಪತಿಯವರೆ, ತಾವು ಭಾಷಣ ಮಾಡುತ್ತಾ ಹೋಗುತ್ತಿದ್ದೀರಿ. ಕೇವಲ ಪ್ರಶ್ನೆ ಮಾತ್ರ ಕೇಳಿ

ಶ್ರೀ ಎ.ವಿ. ಉಮಾಪತಿ : ನಾನು ಪ್ರಶ್ನೆಯನ್ನೇ ಕೇಳುತ್ತಿದ್ದೇನೆ.

ಅಧ್ಯಕ್ಷರು : ಒಂದು ಸಾರಿ ಓದುತ್ತೀರಿ ಮತ್ತೆ ಒಂದು ಸಾರಿ ಪ್ರಶ್ನೆ ಕೇಳುತ್ತೀರಿ. ಈ ರೀತಿ ಆದರೆ ಹೇಗೆ ? ನಿಮಗೆ ಏನು ಬೇಕೋ ಅದನ್ನು ಮಾತ್ರ ಕೇಳಬೇಕು.

ಶ್ರೀ ಎ.ವಿ. ಉಮಾಪತಿ : ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಡಾ॥ ವೈ. ನಾಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಸರಿಯಾದ ಉತ್ತರವನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ನಾವು ಈಗಾಗಲೇ ಆರ್ಥಿಕ ಇಲಾಖೆಯವರ ಜೊತೆ ಚರ್ಚೆ ಮಾಡಿದ್ದೇವೆ. ಆದಷ್ಟು ಬೇಗ ಈ ಒಂದು ಅನುದಾನವನ್ನು ಒದಗಿಸಿ ಕೊಡುತ್ತೇವೆಂದು ಅವರು ಹೇಳಿದ್ದಾರೆ. ಆದ್ದರಿಂದ, ಇದರ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎನ್. ರಾಜಣ್ಣ : ಸನ್ಮಾನ್ಯ ಅಧ್ಯಕ್ಷರೆ, ಇದೊಂದು ಪ್ರಮುಖವಾದಂಥ ವಿಚಾರವಾಗಿದೆ. ಆದ್ದರಿಂದ, ಇದಕ್ಕೆ ಇಷ್ಟೊಂದು ಲಘುವಾಗಿ ಉತ್ತರ ಹೇಳತಕ್ಕಂಥದ್ದು ಸರಿಯಲ್ಲ. 2001–2002ನೇ ಸಾಲಿನ ಶುಲ್ಕದ ಸಬ್ಸಿಡಿ ಹಣ ಆಯಾಯ ಶಾಲಾ ಕಾಲೇಜುಗಳಿಗೆ ಪಾವತಿ ಮಾಡಬೇಕಾಗಿರುವುದರಿಂದ ಮುಂದಿನ ವರ್ಷದಲ್ಲಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಿಕೊಳ್ಳುತ್ತಿಲ್ಲ. ಒಂದು ವೇಳೆ ಸೇರಿಸಿಕೊಂಡಿದ್ದರೂ ಕೂಡ ಶುಲ್ಕದ ಹಣವನ್ನು ಮೊದಲು ಕಟ್ಟಿ, ಅನಂತರ, ಸರ್ಕಾರದಿಂದ ಈ ಹಣ ಬಂದ ಮೇಲೆ ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ಶುಲ್ಕದ ಹಣವನ್ನು ಕಟ್ಟುವುದಕ್ಕೆ ಆಗದೆ ಎಷ್ಟೋ ಜನ ಮಕ್ಕಳು ಶಾಲೆಯಿಂದ ಹೊರಗೆ ಹೋಗಿರತಕ್ಕಂಥದ್ದು ನಮ್ಮ ಗಮನಕ್ಕೆ ಬಂದಿದೆ. ಇದಕ್ಕೆ ಒಟ್ಟು ಎಷ್ಟು ಹಣ ಬೇಕೆಂಬುದರ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯವರು ಆರ್ಥಿಕ ಇಲಾಖೆಯವರಿಗೆ ಸರಿಯಾಗಿ ತಿಳಿಸಿಲ್ಲ. 2003–04ನೇ ಸಾಲಿನ ಶುಲ್ಕದ ಸಬ್ಸಿಡಿ ಹಣ ಕೊಟ್ಟಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ, 2001–2002ನೇ ಸಾಲಿನಿಂದಲೂ ಈ ಹಣವನ್ನು ಕೊಟ್ಟಿಲ್ಲ 2003–04ನೇ ಸಾಲಿಗೆ ಸುಮಾರು 2 ಕೋಟಿ ರೂಪಾಯಿ ಕೊಡಬೇಕಾಗಿದೆ. ಹಾಗೆಯೇ 2002ನೇ ಸಾಲಿನಲ್ಲಿಯೂ ಕೂಡ ಸುಮಾರು 2 ಕೋಟಿ ರೂಪಾಯಿ ಕೊಡಬೇಕಾಗಿದೆ. 2003–04ನೇ ಸಾಲಿನಲ್ಲಿ ಆಯಾಯ ಶಾಲಾ ಕಾಲೇಜುಗಳಿಗೆ ಅಂದರೆ, ಅನುದಾನ ರಹಿತ ಕಾಲೇಜುಗಳಿಗೆ ಹಣ ತುಂಬಿ ಕೊಡತಕ್ಕಂಥದರಲ್ಲಿ ಇವರು ವಿಫಲವಾಗಿರುವ ಹಿನ್ನೆಲೆಯಲ್ಲಿ ಮಕ್ಕಳ ವಿದ್ಯಾಭ್ಯಾಸ ಕುಂಠಿತವಾಗುವಂಥ ಪರಿಸ್ಥಿತಿ ಬಂದಿದೆ. ಮತ್ತೆ ಇದರ ಜೊತೆಗೆ ಪ್ರೈಮರಿ ಶಾಲೆಗಳಿಗೂ ಕೂಡ ಸ್ಕಾಲರ್‌ಶಿಪ್ ಹಣವನ್ನು 2001 ರಿಂದ ಕೊಟ್ಟಿರುವುದಿಲ್ಲ. ಇವತ್ತಿನ ದಿವಸ ಬೆಳಿಗ್ಗೆ ಹಣಕಾಸಿನ ಸಚಿವರನ್ನು ಭೇಟಿ ಮಾಡಿ ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಇದಕ್ಕೆ ಎಷ್ಟು ಹಣ ಬೇಕೆಂಬುದರ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಸ್ತಾವನೆಯೇ ಬಂದಿಲ್ಲವೆಂದು ಅವರು ತಿಳಿಸಿದರು. ಆದ್ದರಿಂದ, ಸಮಾಜ ಕಲ್ಯಾಣ ಇಲಾಖೆಯ ಹೆಸರು,

ಅಧ್ಯಕ್ಷರು : ಈ ರೀತಿ ಹೇಳುತ್ತಾ ಹೋದರೆ ಹೇಗೆ? ಅಂದರೆ, ಇಲಾಖೆ ಬಗ್ಗೆ ಪೂರ್ಣವಾಗಿ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ಹೇಗೆ? ಇದು ಪ್ರಶ್ನೋತ್ತರ ವೇಳೆ. ದಯಮಾಡಿ, ತಾವು ಏನು ಹೇಳಬೇಕೆಂದು ಇದ್ದೀರಿ, ಅದನ್ನು ನೇರವಾಗಿ ಹೇಳಿ?

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಏನಾಗಬೇಕೆಂಬುದರ ಬಗ್ಗೆ ನಾನು ಸಲಹೆ ಕೊಡುತ್ತಿದ್ದೇನೆ. ಎಷ್ಟು ಬಾಕಿ ಕೊಡಬೇಕಾಗಿದೆ ಎಂಬುದರ ಬಗ್ಗೆ ಚರ್ಚೆ ಮಾಡಲು ಸಂಬಂಧಪಟ್ಟಂಥ ಶಾಸಕರು ಮತ್ತು ಮಾನ್ಯ ಸಚಿವರು ಹಾಗೂ ಮಾನ್ಯ ಹಣಕಾಸಿನ ಸಚಿವರನ್ನು

ಒಟ್ಟಿಗೆ ಸೇರಿಸಿ ಒಂದು ಸಭೆ ಮಾಡಿ, ಎಷ್ಟು ಹಣ ಎಲ್ಲೆಲ್ಲಿಂದ ಬರಬೇಕಾಗಿದೆ ಎಂಬುದನ್ನು ಮತ್ತು ಯಾವ ರೀತಿಯಾಗಿ ತಲುಪಿಸಬೇಕಾಗುತ್ತದೆ. ಎಂಬುದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಈ ರೀತಿಯಾದ ತಪ್ಪು ಉತ್ತರಗಳನ್ನು ಅಧಿಕಾರಿಗಳು ಬರೆದುಕೊಡತಕ್ಕಂಥದ್ದನ್ನು ಇಲ್ಲಿ ಓದಿದರೆ ಮಕ್ಕಳಿಗೆ ಬಹಳ ಅನ್ಯಾಯ ಆಗುತ್ತದೆ. ಆದ್ದರಿಂದ ಇದರ ಬಗ್ಗೆ ಚರ್ಚೆ ಮಾಡಲು ಒಂದು ಸಭೆ ಕರೆಯಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ವಿದ್ಯಾರ್ಥಿಗಳಿಗೆ ಶುಲ್ಕದ ಹಣವನ್ನು ಮರುಪಾವತಿ ಮಾಡತಕ್ಕಂಥದ್ದರ ಬಗ್ಗೆ....

ಅಧ್ಯಕ್ಷರು : ಕೆಲವು ಮಹತ್ವವಾದ ಪ್ರಶ್ನೆಗಳಿರುತ್ತವೆ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಎಲ್ಲರೂ ಒಂದೇ ಸಾರಿ ಎದ್ದು ನಿಂತುಕೊಳ್ಳುವುದಲ್ಲದೆ, ಒಬ್ಬೊಬ್ಬರು 5 ನಿಮಿಷ ಒಂದೊಂದು ಪ್ರಶ್ನೆಯನ್ನು ಕೇಳುತ್ತಾ ಹೋದರೆ ಪ್ರಶ್ನೋತ್ತರ ಯಾವಾಗ ಮುಗಿಸುವುದು ? ಬೇರೆ ವಿಷಯಗಳನ್ನು ಚರ್ಚೆ ಯಾವಾಗ ತೆಗೆದುಕೊಳ್ಳಬೇಕೆಂಬುದನ್ನು ತಾವೇ ಹೇಳಿ? ಇದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ಪ್ರಶ್ನೋತತರ ವೇಳೆಗೆ ಒಂದು ಘಂಟೆ ನಿಗದಿ ಮಾಡಿದ್ದು, ಒಂದು ಘಂಟೆ ಅವಧಿಯಲ್ಲಿ ಇದು ಮುಗಿಯಬೇಕಾಗುತ್ತದೆ. ಪ್ರಶ್ನೋತ್ತರ ವೇಳೆಯನ್ನು ಎರಡು ಗಂಟೆ ಮಾಡುವುದಕ್ಕೆ ಇಡೀ ಸಭೆ ಒಪ್ಪಿಕೊಂಡರೆ ನಾನು ಎರಡು ಗಂಟೆಗಳ ಕಾಲಾವಕಾಶ ಕೊಡುತ್ತೇನೆ. ಆದರೆ, ಸುಮ್ಮನೆ ಈ ರೀತಿಯಾಗಿ ಎಳೆದುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ರಾಜ್ಯದ ಜನರ ಪರವಾಗಿ ನಾವು ನಿಮಗೆ ಅಭಿನಂದನೆ ಸಲ್ಲಿಸುತ್ತೇವೆ. ನೀವು ಅವಕಾಶ ಮಾಡಿಕೊಡುವುದರಿಂದ ಇವತ್ತಿನ ದಿವಸ ಅನೇಕ ಜ್ವಲಂತ ಸಮಸ್ಯೆಗಳಿಗೆ ಉತ್ತರ ಸಿಕ್ಕಿವೆ.

ಅಧ್ಯಕ್ಷರು : ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಪ್ರಶ್ನೆ ಕೇಳುವುದಕ್ಕೆ ಮಿತಿ ಇರಬೇಕಲ್ಲವೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಶಾರ್ಟ್ ಮಾಡಬೇಕು. ಇದನ್ನು ನಾವೂ ಕೂಡ ಒಪ್ಪಿಕೊಳ್ಳುತ್ತೇವೆ.

ಅಧ್ಯಕ್ಷರು : ಆದರೆ, ಈ ರೀತಿ ಮಾಡಿದರೆ ಹೇಗೆ?

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಉತ್ತರವನ್ನು ಒದಗಿಸುವಾಗ ಬಹಳ ತಪ್ಪಾಗಿ ಒದಗಿಸಿದ್ದಾರೆ. ನಮ್ಮ ಎಫ್‌ಡಿ ಡಿಪಾರ್ಟ್‌ಮೆಂಟ್ ಯಾವ ರಾಜ್ಯದಲ್ಲಿದೆ, ಇದೇ ರಾಜ್ಯದಲ್ಲಿರುವ ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಇವರು ಕರುಡು ಪ್ರತಿಯನ್ನು ಕಳುಹಿಸಿದ್ದೇವೆಂದು ಉತ್ತರವನ್ನು ಕೊಡುತ್ತಾರೆ. ಆ ಕರುಡು ಪ್ರತಿಯನ್ನು ಕಳುಹಿಸಿದ ಮೇಲೆ ಅವರು ಒಪ್ಪಿಗೆಯನ್ನು ಕೊಡುವುದು ಯಾವಾಗ? ಇವರು ವಿತರಣೆ ಮಾಡುವುದು ಯಾವಾಗ? ಸರ್ಕಾರದ ಪಾಲಿಸಿ ಏನಾದರೂ ಇದೆಯಾ? ಫೀ ರೀ–ಇಂಬರ್ಸ್‌ಮೆಂಟ್ ಕೊಡಬಾರದೆಂದು ಅಥವಾ ಮಾಡಬಾರದೆಂದು ಇದೆಯಾ? ದಯವಿಟ್ಟು ಹೇಳಬೇಕು, ಏಕೆಂದರೆ ವಿದ್ಯಾರ್ಥಿಗಳು ಕಾಲೇಜನ್ನು ಬಿಡುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಸಚಿವರೆ, ನಿಮ್ಮ ಹತ್ತಿರ ಎಲ್ಲಾ ಮಾಹಿತಿಗಳು ಇದ್ದರೆ ಉತ್ತರವನ್ನು ಕೊಡಿ, ಇಲ್ಲದಿದ್ದರೆ ಇದನ್ನು ನಾನು ಅರ್ಧಗಂಟೆ ಕಾಲಾವಕಾಶಕ್ಕೆ ಚರ್ಚೆ ಮಾಡಲು ಅವಕಾಶವನ್ನು ಮಾಡಿಕೊಡುತ್ತೇನೆ. ಇದಕ್ಕೆ ನೀವು ಏನು ಅನ್ನುತ್ತೀರಿ, ಏಕೆಂದರೆ ಇದರ ಬಗ್ಗೆ ಬಹಳ ಜನ ಉತ್ತರವನ್ನು ಕೇಳುತ್ತಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಅರ್ಧಗಂಟೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಿ, ಇದು ವಿದ್ಯಾರ್ಥಿಗಳ ಬದುಕಿನ ಪ್ರಶ್ನೆ.

ಅಧ್ಯಕ್ಷರು : ದಯವಿಟ್ಟು ಉತ್ತರವನ್ನು ಕೊಡುವುದಕ್ಕೆ ಅವರಿಗೆ ಅವಕಾಶವನ್ನು ಮಾಡಿಕೊಡಿ.

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ತಾವೇ ಸೂಚಿಸಿದ ಹಾಗೆ ಅರ್ಧಗಂಟೆ ಕಾಲಾವಕಾಶವನ್ನು ಚರ್ಚೆಗೆ ಮಾಡಿಕೊಟ್ಟರೆ ಇದು ಬಹಳ ಉಪಯುಕ್ತವಾಗುತ್ತದೆ. ತಾವು ಅನುಮತಿಯನ್ನು ಮಾಡಿಕೊಡಬೇಕು.

ಅಧ್ಯಕ್ಷರು : ಈಗಾಗಲೇ ಇದರ ಬಗ್ಗೆ ಬಹಳ ಜನ ಕೇಳಿದ್ದೀರಿ, ಇವರೆಲ್ಲರೂ ಕೇಳಿದ್ದರ ಬಗ್ಗೆ ತಮ್ಮ ಹತ್ತಿರ ಮಾಹಿತಿ ಇದ್ದರೆ ಮಾನ್ಯ ಸಚಿವರು ಉತ್ತರವನ್ನು ಕೊಡಲಿ. ಇಲ್ಲದಿದ್ದರೆ ನಾನು ಅರ್ಧಗಂಟೆ ಚರ್ಚೆಗೆ ಕಾಲಾವಕಾಶವನ್ನು ಮಾಡಿಕೊಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಖಾಸಗಿ ಕಾಲೇಜಿನಲ್ಲಿರುವ ವಿದ್ಯಾರ್ಥಿಗಳು ಇವತ್ತು ಎಲ್ಲರೂ ಹೊರಗೆ ಬರುತ್ತಿದ್ದಾರೆ.

ಅಧ್ಯಕ್ಷರು : ದಯಮಾಡಿ ಮಾನ್ಯ ಸಚಿವರು ಏನು ಹೇಳುತ್ತಾರೆ ಕೇಳಿ, ತಮಗೆ ಅದಕ್ಕೂ ಸಮಾಧಾನವಿಲ್ಲವೆಂದರೆ ಹೇಗೆ?

ಡಾ: ವೈ. ನಾಗಪ್ಪ : ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದ ವಿಷಯ, ತೊಂದರೆಯಾಗಿದೆ. ಈಗ ನನಗೆ ನಮ್ಮ ಅಧಿಕಾರಿಗಳು ಒದಗಿಸಿರುವ ಉತ್ತರವನ್ನು ನಾನು ಒದಗಿಸಿದ್ದೇನೆ. ಇನ್ನು ಇದರ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲಬೇಕೆಂದರೆ ಅರ್ಧಗಂಟೆ ಚರ್ಚೆ ಅವಕಾಶವನ್ನು ಕೊಡಿ.

ಅಧ್ಯಕ್ಷರು : ಹಾಗಾದರೆ ಅರ್ಧ ಗಂಟೆ ಚರ್ಚೆಗೆ ಕನ್‌ವರ್ಟ್ ಮಾಡಿ ಬಿಡೋಣ ಬಿಡಿ. ಆಯಿತು.

ಅಧ್ಯಕ್ಷರು : ಮಾನ್ಯ ಕಾರಿಜೋಳರವರೇ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ನಿಮ್ಮ ಪ್ರಶ್ನೆ ವರ್ಗಾವಣೆಯಾಗಿದೆ. ಅವರು ಉತ್ತರ ಹೇಳುವಾಗ ಉತ್ತರವನ್ನು ಕೊಡಿಸುತ್ತೇನೆ. ಶ್ರೀ ಎ.ಎಸ್. ಬಸವರಾಜುರವರೇ ನಿಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ. 4ನೇ ತಾರೀಖಿನೊಳಗಾಗಿ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಎ.ಎಸ್. ಬಸವರಾಜು : ಮಾನ್ಯ ಅಧ್ಯಕ್ಷರೆ, 15 ದಿವಸ ಮುಂಚಿತವಾಗಿ ನಾನು ಪ್ರಶ್ನೆಯನ್ನು ಹಾಕಿದ್ದೇನೆ. ಆದರೆ ಇವತ್ತಿನ ದಿವಸ ಉತ್ತರ ಬಂದಿಲ್ಲವೆಂದರೆ, ಅಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರಿಗೆ ಗಂಗಾ ಕಲ್ಯಾಣ ಯೋಜನೆಯಲ್ಲಿ ಹಾಕಬೇಕಾದ ಬೋರ್‌ವೆಲ್‌ಗಳು ನೀರು ಇಲ್ಲವೆಂದು ಸಾಕಷ್ಟು ಜನ ಸಾಯುತ್ತಿದ್ದಾರೆ. ಎಷ್ಟು ಬೋರ್‌ವೆಲ್‌ಗಳನ್ನು ಕೊರೆದಿದ್ದೀರಿ, ಎಷ್ಟು ಬೋರ್‌ವೆಲ್‌ಗಳಿಗೆ ವಿದ್ಯುತ್‌ನ್ನು ಕೊಟ್ಟಿದ್ದೀರಿ, ಎಷ್ಟಕ್ಕೆ ಮೋಟರ್ ಕೊಟ್ಟಿದ್ದೀರಿ? ನನ್ನ ಪ್ರಶ್ನೆ ಸತ್ತು ಹೋಯಿತಾ?

ಅಧ್ಯಕ್ಷರು : ಆಯಿತು, ತಮಗೆ ಉತ್ತರವನ್ನು ಕೊಡಿಸುತ್ತೇನೆ.

(ಗೊಂದಲ)

ಶ್ರೀ ರೇವು ನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಪರಿಶಿಷ್ಟ ಜಾತಿ' ಪರಿಶಿಷ್ಟ ಪಂಗಡದವರ ಗಂಗಾ ಕಲ್ಯಾಣ ಯೋಜನೆಯ ಕೊಳವೆ ಬಾವಿಗಳ ಮಹತ್ವದ ಪ್ರಶ್ನೆ ಇದೆ. ಇದಕ್ಕೆ ಅರ್ಧಗಂಟೆ ಚರ್ಚೆ ಮಾಡಲು ಅವಕಾಶವನ್ನು ಮಾಡಿಕೊಡಿ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು : ನಿಯಮಾವಳಿಗಳನ್ನು ನಾವು ಪಾಲನೆ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಕಟ್ಟುನಿಟ್ಟಿನ ಎಚ್ಚರಿಕೆಯನ್ನು ಕೊಡಿ.

ಅಧ್ಯಕ್ಷರು : ಆಯಿತು, ಮಾನ್ಯ ಸಚಿವರು ಸಮಯವನ್ನು ಕೇಳಿದ್ದಾರೆ, ನಾನು ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಯಾವ ಪ್ರಶ್ನೆಗೆ ಉತ್ತರ ಬರುತ್ತಿಲ್ಲವೆನ್ನುವ ಬಗ್ಗೆ ತಾವು ಗಮನಿಸಿ. ಏಳೂವರೆ ಸಾವಿರ ಎಸ್‌ಸಿ:ಎಸ್‌ಟಿ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಸಂಬಂಧಪಟ್ಟಂತೆ ಈ ಗಂಗಾ ಕಲ್ಯಾಣ ಯೋಜನೆಗೆ ವಿದ್ಯುತ್ ಸಂಪರ್ಕ ಕೊಡದೆ ನೂರಾರು ಕೋಟಿ ರೂ.ಗಳನ್ನು ಖರ್ಚು ಮಾಡಿದ್ದು ಕಳೆದ ಎರಡು–ಮೂರು ವರ್ಷಗಳಿಂದ ಪೆಂಡಿಂಗ್ ಬಿದ್ದಿದೆ. ಒಂದು ಬೋರ್‌ವೆಲ್‌ಗೂ ವಿದ್ಯುತ್ ಕನ್‌ಕ್ಷನ್ ಕೊಟ್ಟಿಲ್ಲ, ಉತ್ತರವನ್ನು ಕೊಟ್ಟರೆ ಇಕ್ಕಟ್ಟಿಗೆ ಸಿಕ್ಕಿಹಾಕಿಕೊಳ್ಳುತ್ತೇವೆಂದು ಇದನ್ನು ಮುಂದಕ್ಕೆ ಹಾಕಿಬಿಟ್ಟರೆ ಹೇಗೆ ? ಇಷ್ಟು ದಿವಸ ಅವರು ಇಂತಹ ಪ್ರಮುಖವಾದ ಪ್ರಶ್ನೆಗೆ ಉತ್ತರ ತೆಗೆದುಕೊಳ್ಳುವುದಕ್ಕೆ ಏನು ಮಾಡುತ್ತಿದ್ದರು? ಸಮಸ್ಯೆಯನ್ನು ಬಗೆಹರಿಸುವುದಕ್ಕೆ ತಾನೇ ನಾವು ಪ್ರತಿಪಕ್ಷದಲ್ಲಿ ಕುಳಿತಿರುವುದು? ಅದನ್ನು ಮುಚ್ಚಿಹಾಕುವುದಕ್ಕೆ ಉತ್ತರವನ್ನು ಕೊಡುವುದಕ್ಕಾಗಿವುದಿಲ್ಲವೆಂದರೆ, ಮತ್ತೇನು ಸರ್? ಅವರು ಏಕೆ ಉತ್ತರವನ್ನು ಕೊಡುತ್ತಿಲ್ಲವೆಂದು ಕೇಳಿ. ಕಳೆದ 6 ತಿಂಗಳುಗಳಿಂದ ಹಳ್ಳಿಗಳಿಗೆ ಹೋಗಲಿಲ್ಲ. ಕಷ್ಟಸುಖವನ್ನು ವಿಚಾರಿಸಲಿಲ್ಲ. ಇಂತಹ ಪ್ರಮುಖವಾದ ವಿಷಯಗಳ ಬಗ್ಗೆ ಜನ ಸಾಯುತ್ತಿದ್ದಾರೆ. ಮಾನ್ಯ ಮಂತ್ರಿಗಳಿಂದ ಉತ್ತರವನ್ನು ಕೊಡಿಸಿ ಎಂದು ಹೇಳಿ. ಇಲ್ಲದಿದ್ದರೆ ಮಂತ್ರಿಗಳಿಗೆ ರಾಜೀನಾಮೆ ಕೊಟ್ಟು ಹೋಗಿ ಎಂದು ಹೇಳಿ ಸರ್. ಯಾರಿಗೆ ಕೆಲಸ ಮಾಡುವುದಕ್ಕಾಗುತ್ತಿಲ್ಲ ಅವರು ರಾಜೀನಾಮೆ ಕೊಟ್ಟು ಹೋಗಲಿ. ಯಾರಿಗೆ ಬಿಡುವು ಇಲ್ಲ, ಇಂತಹ ಸಮಸ್ಯೆಗಳ ಬಗ್ಗೆ ಅಧಿಕಾರಿಗಳ ಜೊತೆಯಲ್ಲಿ ಕುಳಿತುಕೊಂಡು ಉತ್ತರವನ್ನು ತರಿಸಿಕೊಳ್ಳುವುದಕ್ಕಾಗುವುದಿಲ್ಲ ಅವರು ಮಂತ್ರಿಗಳಾಗಿ ಮುಂದುವರೆಯುವುದು ಬೇಡ ಸರ್. ಎಸ್‌ಸಿ: ಎಸ್‌ಟಿ ಯವರ ಸಮಸ್ಯೆಗೆ ಅವರಿಂದ ಉತ್ತರ ಬೇಕು.

ಅಧ್ಯಕ್ಷರು : ಆಯಿತು, ನಾನು ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ನಿಮಗೆ ಇದೇ ವಿಷಯದ ಬಗ್ಗೆ ಒಂದು ಕಾಲಿಂಗ್ ಅಟೇನ್‌ಷನ್ ಕಳುಹಿಸಿಕೊಟ್ಟಿದ್ದೇನೆ. ಅದನ್ನಾದರೂ ನೀವು ಚರ್ಚೆಗೆ ತೆಗೆದುಕೊಳ್ಳಿ.

ಅಧ್ಯಕ್ಷರು : ಆಯಿತು ತೆಗೆದುಕೊಳ್ಳೋಣ ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಡದೇ ಇರುವುದಕ್ಕೆ ಸಮಸ್ಯೆ ಏನು ಎಂದು ಕೇಳಿ ಏಳೂವರೆ ಸಾವಿರ ಎಸ್‌ಸಿ:ಎಸ್‌ಟಿ ಬ್ಯಾಕ್‌ವರ್ಡ್ ಜನಾಂಗದವರು ಬೋರ್‌ವೆಲ್‌ಗಳನ್ನು ತೆಗೆದಿದ್ದರೆ ನೀರು ಬಂದಿದೆ. ಅವರಿಗೆ ವಿದ್ಯುಚ್ಛಕ್ತಿ ಕನೆಕ್ಷನ್ ಕೊಡಬೇಕು. ಕೊಟ್ಟಿಲ್ಲ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಸುಮಾರು 40–50 ಸಾವಿರ ರೂ.ಗಳನ್ನು ಕಟ್ಟಬೇಕೆಂದು ಹೇಳುತ್ತಿದ್ದಾರೆ. ಎಸ್‌ಸಿ:ಎಸ್‌ಟಿ ಬಡವರು ತಲೆಯ ಮೇಲೆ ಕೈಹೊತ್ತುಕೊಂಡು ಕುಳಿತಿದ್ದಾರೆ. ವಿದ್ಯುತ್ ಕನೆಕ್ಷನ್ ಕೊಡುವುದಕ್ಕೆ ಏನು ತೊಂದರೆ ಎಂದು ನಾವು ಕೇಳುತ್ತಿದ್ದೇವೆ, ಏಕೆ ಮುಂದೂಡಬೇಕು ಎಂದು ನೀವಾದರೂ ಕೇಳಿ.

ಅಧ್ಯಕ್ಷರು : ಮಾನ್ಯ ಸಮಾಜ ಕಲ್ಯಾಣ ಸಚಿವರು ಇಲ್ಲಿ ಇದ್ದಾರೆ, ಅವರಿಗೆ ಉತ್ತರ ಬಂದಿಲ್ಲ.

ಶ್ರೀ ಎ.ಎಸ್. ಬಸವರಾಜು : ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿಲ್ಲವೆಂದು ಕೊಡಬೇಕಾದರೆ ನಾನು 15 ದಿವಸ ಮುಂದೆ ಪ್ರಶ್ನೆಯನ್ನು ಕೇಳಿದ್ದೇನೆ.

ಅಧ್ಯಕ್ಷರು : ಆಯಿತು, ಕೇಳೋಣ ತಡೆಯಿರಿ ಸ್ವಾಮಿ. ಮಾನ್ಯ ಸಚಿವರು ಹೇಳಿ.

ಡಾ: ವೈ. ನಾಗಪ್ಪ : ಮಾನ್ಯ ಅಧ್ಯಕ್ಷರೆ, ಸ್ಟೆನ್ಸಿಲ್ ಕಾಪಿಗಳನ್ನು ಕಳುಹಿಸುವುದರಲ್ಲಿ ಸ್ವಲ್ಪ ತಡವಾಗಿದೆ, ಈಗ ಉತ್ತರ ರೆಡಿಯಾಗಿದೆ. ಬೇಕಾದರೆ ವಿವರವನ್ನು ಕೊಡುತ್ತೇನೆ.

ಅಧ್ಯಕ್ಷರು : ಉತ್ತರವನ್ನು ಬಹಳ ತಡವಾಗಿ ತಯಾರು ಮಾಡಿದ್ದಾರೆ, ನಮ್ಮ ಆಫೀಸಿಗೆ ಬಂದಿಲ್ಲ ಅದಕ್ಕಾಗಿ ಬಹುಶಃ ತಡವಾಗಿದೆ ಬಂದಾಗ ಅವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಕಾಲಿಂಗ್ ಅಟೆನ್‌ಷನ್ ಕೊಟ್ಟಿದ್ದೇನೆ ಆಗ ಉತ್ತರವನ್ನು ಕೊಡಿಸಿ ಸರ್.

ಅಧ್ಯಕ್ಷರು : ಆಯಿತು.

ಶ್ರೀ ವಿ.ಎಂ. ಕಾರಜೋಳ : ಇದರ ಬಗ್ಗೆ ನಾನೇನೂ ವಿಶೇಷವಾದ ಪ್ರಶ್ನೆಯನ್ನು ಕೇಳಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವೇ ಅಲೊ ಮಾಡಿರುವ ಪ್ರಶ್ನೆಗಳಿಗೆ ಎಷ್ಟಕ್ಕೆ ಇವರು ಉತ್ತರವನ್ನು ಕೊಡುತ್ತಿದ್ದಾರೆ, ಅದಕ್ಕೆ ಕಾರಣ ಏನು ?

ಅಧ್ಯಕ್ಷರು : ಇದು ಸಮಾಜ ಕಲ್ಯಾಣ ಸಚಿವರಿಗೆ ಹೋಗಿದೆ, ಅದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಿಗೆ ಪ್ರಶ್ನೆ ಹೋಗಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮಂತ್ರಿಗಳಾದವರು ತಮ್ಮ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕೆಂದು ನೀವು ಹೇಳಬೇಕಾಗುತ್ತದೆ. ಮಾನ್ಯ ಹಿರಿಯ ಸಚಿವರಾದ ಹೆಚ್.ಕೆ. ಪಾಟೀಲರವರು ಇಲ್ಲೆ ಇದ್ದಾರೆ ಅವರನ್ನು ಕೇಳಿ ಇವತ್ತು ಬಂದಿರುವ ಪ್ರಶ್ನೆಗಳಲ್ಲಿ 4–5 ಪ್ರಶ್ನೆಗಳಿಗೆ ಉತ್ತರವಿಲ್ಲ. ಈ ಪರಿಸ್ಥಿತಿಯಲ್ಲಿ ನಾವು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತು ಹೇಗೆ ಕೆಲಸ ಮಾಡುವುದಕ್ಕಾಗುತ್ತದೆ ?

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ಹೊಸಬರು ಸಚಿವರಿದ್ದಾರೆ, ಆಯಿತು ತಮಗೆ ಉತ್ತರವನ್ನು ಕೊಡಿಸುತ್ತೇನೆ ಬಿಡಿ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಜನಾಂಗದ ಬಗ್ಗೆ ಈ ಸರ್ಕಾರಕ್ಕೆ ಕಳಕಳಿಯಿಲ್ಲ. ಇದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇವತ್ತು ನಾವು ಮೂರು ಪ್ರಮುಖವಾದ ಪ್ರಶ್ನೆಯನ್ನು ಕೇಳಿರುತ್ತೇವೆ. ಎಸ್‌ಸಿ:ಎಸ್‌ಟಿ ಯವರಿಗೆ ಇವರಿಗೆ ಕೊಡುವುದಕ್ಕೆ ಹಣ ಇಲ್ಲ. ಮೈಮಾರಿಕೊಂಡು ಜೀವನವನ್ನು ಸಾಗಿಸುತ್ತಿರುವ ದೇವದಾಸಿಯರಿಗೆ ಅವರ ವಿಶೇಷವಾದ ಯೋಜನೆಯನ್ನು ಕೈಬಿಡುವ ಅಗತ್ಯ ಏನಿತ್ತು? ಗಂಗಾ ಕಲ್ಯಾಣ ಯೋಜನೆಯಿಂದ ಕೊರೆದ ಬೋರ್‌ವೆಲ್‌ಗಳನ್ನು ಹಾಗೆಯೇ ಬಿಟ್ಟರೆ ಅಲ್ಲಿ ನೀರು ಉಳಿಯುವುದಿಲ್ಲ.

ಅಧ್ಯಕ್ಷರು : ಕಾರಜೋಳರವರೆ, ಇದು ನನಗೆ ಅರ್ಥವಾಗುತ್ತಿಲ್ಲ. ನಿಮ್ಮ ಪ್ರಶ್ನೆ ಸಮಾಜ ಕಲ್ಯಾಣ ಇಲಾಖೆಯಿಂದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ವರ್ಗಾವಣೆಯಾಗಿದೆ ಎಂದರೆ

ನೀವು ಕೇಳುತ್ತಿಲ್ಲ. ಗಂಗಾ ಕಲ್ಯಾಣದ ಬಗ್ಗೆ ಕಾಲಿಂಗ್ ಅಟೆನ್ಷನ್‌ದಲ್ಲಿ ಅರ್ಧಗಂಟೆಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನೆ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇಬ್ಬರು ಹಿರಿಯರು ಈ ರೀತಿ ನಿಂತುಕೊಂಡು ಮಾತನಾಡಿದರೆ ಹೇಗೆ ?

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ತಾವು ಈಗ ಬಂದಿದ್ದೀರಿ, ನಾವು ಏನು ಪ್ರಶ್ನೆಯನ್ನು ಕೇಳಿದ್ದೇವೆ ತಮಗೆ ಅದು ಗೊತ್ತಿದೆಯಾ?

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ತಾವೇ ಹೇಳಿ, ತಾವು ಕೇಳಿ ನಂತರ, ಅವರು ಪ್ರಶ್ನೆಯನ್ನು ಕೇಳಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾವು ಏನು ಕೇಳುತ್ತಿದ್ದೇವೆ ಅದನ್ನು ತಾವು ಗಮನಿಸಿರುತ್ತೀರಾ? ಇವತ್ತು ಕೇಳಿರುವ ಪ್ರಶ್ನೆಗಳಲ್ಲಿ 4–5 ಪ್ರಶ್ನೆಗಳಿಗೆ ಉತ್ತರವೇ ಬಂದಿಲ್ಲ. ಅದರಲ್ಲಿಯೂ ಎಸ್‌ಸಿ:ಎಸ್‌ಟಿ ಯವರಿಗೆ ಸಂಬಂಧಪಟ್ಟಂತೆ ಕೇಳಿರುವ ಪ್ರಶ್ನೆಗೆ ಇವರು ಉತ್ತರ ಕೊಡುವುದಕ್ಕೆ ರೆಡಿ ಇಲ್ಲ. ಅವರು ಮುಜುಗರಕ್ಕೆ ಸಿಕ್ಕಿಹಾಕಿಕೊಳ್ಳುತ್ತೇವೆಂದು ಮುಚ್ಚಿಹಾಕಿ ಅವರು ಉತ್ತರವನ್ನು ತರದೆ ಅವರು ಕೈಕಟ್ಟಿಕೊಂಡು ಕುಳಿತಿದ್ದಾರೆ. ಅಧಿಕಾರಿಗಳು ಉತ್ತರವನ್ನು ರೆಡಿ ಮಾಡಿದ್ದಾರೆ. ಇವರ ಬಣ್ಣ ಬಯಲಾಗುತ್ತದೆಂದು ಎಸ್‌ಸಿ:ಎಸ್‌ಟಿಯವರ ಬಗ್ಗೆ ಉತ್ತರವನ್ನು ಕೊಡುತ್ತಿಲ್ಲ. ನಾವೇನು ಸ್ಪಷ್ಟವಾಗಿ ಉತ್ತರವನ್ನು ಕೊಡದಿರುವ ಪ್ರಶ್ನೆಯನ್ನು ಕೇಳಿದ್ದೇವಾ? ನನ್ನ ಹತ್ತಿರ ಉತ್ತರವಿದೆ, ಗಂಗಾ ಕಲ್ಯಾಣದಲ್ಲಿ ಬೋರ್‌ವೆಲ್‌ಗಳನ್ನು ಎಷ್ಟು ಕೊರೆದಿದ್ದಾರೆ, ಓಬಿಸಿ ಮತ್ತು ಎಸ್‌ಸಿ:ಎಸ್‌ಟಿ ಎಷ್ಟು?

ಅಧ್ಯಕ್ಷರು : ಅದರಲ್ಲಿ ಏನಾಗಿದೆ ಎಂದರೆ, ಬಹಳ ತಡವಾಗಿ ನಮ್ಮ ಕಛೇರಿಗೆ ಉತ್ತರವನ್ನು ಕಳುಹಿಸಿದ್ದಾರೆ, ಅದನ್ನು ಸರ್ಕ್ಯುಲೇಟ್ ಮಾಡುವುದಕ್ಕಾಗಿಲ್ಲ, ನಿನ್ನೆಯೊಳಗಾಗಿ ಬಂದಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಅವರ ಪ್ರಶ್ನೆ ಬೇರೆ ಕಡೆಗೆ ವರ್ಗಾವಣೆಯಾಗಿದೆ. ಅದಕ್ಕಾಗಿ ಸಂಬಂಧಪಟ್ಟವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಾವು ಮಾತನ್ನು ಕಡಿಮೆ ಮಾಡಬೇಕು ಸರ್. ನಾವು ನೀವು ಚರ್ಚೆ ಮಾಡಬಾರದು. ಸರ್ಕಾರ ಉತ್ತರ ಕೊಡಬೇಕು.

ಶ್ರೀ ಅರಗ ಜ್ಞಾನೇಂದ್ರ : ಸಮಾಜ ಕಲ್ಯಾಣ ಇಲಾಖೆಯಾಗಿಲ್ಲ ಅದು, ಸಮಾಧಿ ಕಲ್ಯಾಣವಾಗಿದೆ; ಈ ಇಲಾಖೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಸ್‌ಸಿ:ಎಸ್‌ಟಿ ಮತ್ತು ಓಬಿಸಿ ಯವರಿಗಾಗಿ ಏಳೂವರೆ ಸಾವಿರ ಬೋರ್‌ವೆಲ್‌ಗಳನ್ನು ಕೊರೆದಿದ್ದಾರೆ. ಇವರು ಒಂದು ಡೈರೆಕ್ಷನ್ ಕೊಡಲಿ, ಇವರು ಬಂದು 8–9 ತಿಂಗಳಾಯಿತು ಅಧಿಕಾರಕ್ಕೆ, ನಾವು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಹೇಗೆ ಕೆಲಸವನ್ನು ಮಾಡಬೇಕು ನೀವೇ ಹೇಳಿ. ಶಾಸಕರಾಗಿ ಎಸ್‌ಸಿ:ಎಸ್‌ಟಿ ಜನಾಂಗಕ್ಕೆ ಮತ್ತು ಓಬಿಸಿಯವರಿಗೆ ಏನು ಉತ್ತರವನ್ನು ಕೊಡಬೇಕು? ಮಾನ್ಯ ಸಿಂಧ್ಯರವರು ಮತ್ತು ಮಾನ್ಯ ಹೆಚ್.ಕೆ. ಪಾಟೀಲ್‌ರವರು ಹೇಳಲಿ ಉತ್ತರವನ್ನು ಕೊಡುವುದಕ್ಕೆ ಮಾನ್ಯ ಸಚಿವರಿಗೆ ಕಷ್ಟವೇನೆಂದು ಹೇಳಲಿ.

ಅಧ್ಯಕ್ಷರು : ನಾಳೆ ಇದನ್ನು ಕಾಲಿಂಗ್ ಅಟೇನ್‌ಷನ್‌ದಲ್ಲಿ ಚರ್ಚೆಗೆ ಕೊಡುತ್ತೇನೆಂದು ಹೇಳಿರುತೇನೆ. ಆದರೂ ಮತ್ತೆ ಮತ್ತೆ ಚರ್ಚೆ ಏಕೆ? ಆಗಲೇ ಬಹಳ ಸಮಯವಾಗಿದೆ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಒಬ್ಬ ಎಸ್‌ಸಿ:ಎಸ್‌ಟಿ ಪ್ರತಿನಿಧಿಯಾಗಿ ಈ ಸದನಕ್ಕೆ ಬಂದಿರುತ್ತೇನೆ.

ಅಧ್ಯಕ್ಷರು : ಕಾರ್‌ಜೋಳ್‌ರವರೆ, ನಿಮ್ಮ ಪ್ರಶ್ನೆ ಕೇಳಿರುವುದು ಅದು ಬೇರೆ ಇಲಾಖೆಗೆ ಹೋಗಿದೆ. ಅದಕ್ಕೆ ಉತ್ತರವನ್ನು ಕೊಡಿಸುತ್ತೇನೆಂದು ಹೇಳಿದ್ದೇನಲ್ಲಾ.

ಶ್ರೀ ಕಾರಜೋಳ ಗೋವಿಂದ ವೆಂಕಟಪ್ಪ : ಮಾನ್ಯ ಅಧ್ಯಕ್ಷರೆ, ಅವರು ಓಟು ತೆಗೆದುಕೊಂಡು ಅಧಿಕಾರಕ್ಕೆ ಬರುವ ಬಗ್ಗೆ ಮಾತ್ರ ಕಾಳಜಿ ಇದೆ. ಇವತ್ತು ನಾನು ಕೇಳುತ್ತಿದ್ದೇನೆ. ಪರಿಶಿಷ್ಟ ಜಾತಿ ಜನಾಂಗದ ಮಕ್ಕಳ ಬಗ್ಗೆ ಅವರ ಹತ್ತಿರ ಉತ್ತರ ಇಲ್ಲ ಉತ್ತರ ನನ್ನ ಅತ್ತಿರ ಇದೆ. 2004–05ನೇ ಸಾಲನ ಬಜೆಟ್‌ನಲ್ಲಿ ತಾಂತ್ರಿಕ ಶಿಕ್ಷಣ ವಿದ್ಯಾರ್ಥಿಗಳಿಗೆ ಎಷ್ಟು ಶಿಷ್ಯವೇತನವನ್ನು ಕೊಟ್ಟಿದ್ದಾರೆ. ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳಿಗೆ ಎಷ್ಟು ಕೊಟ್ಟಿದ್ದಾರೆ.

ಅಧ್ಯಕ್ಷರು : ಆಯಿತು, ಮತ್ತೆ ಏನು ಹೇಳುತ್ತಿದ್ದೀರಿ ?

ಶ್ರೀ ಕಾರಜೋಳ ಗೋವಿಂಧ ವೆಂಕಟಪ್ಪ : ಇಲ್ಲಿ ನನ್ನ ಹತ್ತಿರ ಅದರ ಬಗ್ಗೆ ಉತ್ತರವಿದೆ. ಇದರ ಬಗ್ಗೆ ಸಮಗ್ರವಾಗಿ ಚರ್ಚೆ ನಡೆಸುವ ಬಗ್ಗೆ ಒಂದು ದಿನವಾದರು ಆಗಲಿ. ಈ ರಾಜ್ಯದಲ್ಲಿ ಏನಾಗಿದೆ ಎಂದರೆ ಪ್ರತಿ ವರ್ಷ ಎಸ್‌ಸಿ:ಎಸ್‌ಟಿಗೆ ಕೊಡತಕ್ಕಂತಹ ಅನುದಾನ ಕಡಿಮೆಯಾಗುತ್ತಾ ಬಂದಿದೆ. ಈ ರಾಜ್ಯದಲ್ಲಿ 24 ಪರ್ಸೆಂಟ್ ಇರತಕ್ಕಂತಹ ಪರಿಶಿಷ್ಟ ಜಾತಿ ಮತ್ತು ಜನಾಂಗದವರ ಬಗ್ಗೆ ಈ ರೀತಿಯಾದರೆ ಹೇಗೆ?

ಅಧ್ಯಕ್ಷರು : ಕಾರಜೋಳರವರೆ, ಈಗ ರಾಜ್ಯಪಾಲರ ಭಾಷಣ ಮೇಲೆ ವಂದನಾ ನಿರ್ಣಯವಿದೆ. ಆಗ ತಾವು ಏನು ಹೇಳಬೇಕೋ ಅದನ್ನು ಹೇಳಿ. ಈ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಸೀಮಿತವಾಗಿ ಹೇಳುವುದಾದರೆ ಅದು ಬೇರೆ ಇಲಾಖೆಗೆ ಟ್ರಾನ್ಸ್‌ಫರ್ ಆಗಿದೆ. ಆದರೆ ತಾವು ಏತಕ್ಕಾಗಿ ಈ ರೀತಿಯಾಗಿ ಮಾತನಾಡುತ್ತಿದ್ದೀರಿ ಈ ಸದನ ನಡೆಸಬೇಕೋ ಬೇಡವೋ? It is not the way of Co-operating with the chair.

ಶ್ರೀ ಎ.ಎಸ್. ಬಸವರಾಜು : ಅಲ್ಲಾ ಸಾರ್ ಇದರ ಬಗ್ಗೆ ಜನರು ಕೇಳುತ್ತಾರಲ್ಲಾ.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್ : ಸರ್ಕಾರದ ಬಣ್ಣ ಹೊರಗೆ ಬರುತ್ತದೆ. ಮಾಹಿತಿಗಳನ್ನು ಇವರು ಮುಚ್ಚಿಹಾಕುತ್ತಿದ್ದಾರೆ. ಆ ಮಾಹಿತಿಗಳು ಸರ್ಕಾರದಿಂದ ಹೊರಗೆ ಬಂದರೆ ಸರ್ಕಾರದ ಬಣ್ಣ ಬಯಲಾಗುತ್ತದೆಂದು ಈ ರೀತಿಯಾಗಿ ಮುಚ್ಚಿಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇವರು ಯಾವ ರೀತಿಯಾಗಿ ಪ್ರಶ್ನೆಗಳಿಗೆ ಉತ್ತರ ಕೊಡುವ ಬಗ್ಗೆ ಮುಂದಕ್ಕೆ ಹಾಕುತ್ತಿದ್ದಾರಲ್ಲಾ ಇವುಗಳನ್ನೆಲ್ಲಾ ತಾವು ಪರಿಶೀಲನೆ ಮಾಡಿ ನೋಡಿ. ಇದನ್ನು ಮುದ್ದಾಂ ಈ ಮಾಹಿತಿಯನ್ನು ಸದನಕ್ಕೆ ಒದಗಿಸಬಾರದು ಇದು ಸಾರ್ವಜನಿಕವಾಗಿ ಬಹಿರಂಗವಾಗಬಾರದೆಂಬ ಉದ್ದೇಶದಿಂದ ಇದನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು : ಜಗದೀಶ್‌ಶೆಟ್ಟರ್‌ರವರೆ, ತಾವು ವಿರೋಧಪಕ್ಷದ ನಾಯಕರಾಗಿದ್ದೀರಿ ದಯಮಾಡಿ ಕೇಳಬೇಕು. ಏನು ಕಾರಜೋಳವರವ ಪ್ರಶ್ನೆ ಎಂದರೆ, ಬೇರೆ ಇಲಾಖೆಗೆ ಟ್ರಾನ್ಸ್‌ಫರ್ ಆಗಿದೆ ಅದರಲ್ಲಿ ಮುಚ್ಚಿಡತಕ್ಕಂತಹ ಪ್ರಶ್ನೆ ಏನು ಬಂತು? ಇನ್ನೊಬ್ಬ ಸದಸ್ಯರು ಏನು ಹೇಳಿದ್ದಾರೆಂದರೆ

ಗಂಗಾಕಲ್ಯಾಣದ್ದು... ಏನೂ ಎಲ್ಲರೂ 4–5 ಜನರು ಒಟ್ಟಿಗೆ ಮಾತನಾಡಿದರೆ ಹೇಗೆ ನಾವು ಪ್ರಶ್ನೋತ್ತರವನ್ನು ಹೇಗೆ ನಡೆಸುವುದು? ಎಷ್ಟು ಹೊತ್ತಿನ ತನಕ ನಡೆಸುವುದು?

ಶ್ರೀ ಜಗದೀಶ ಶೆಟ್ಟರ್ : ಅವರು ನಾಲ್ಕೈದು ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿರುವುದಿಲ್ಲ. ಇವರು ಯಾವ ರೀತಿಯಾಗಿ ನಡೆಸುತ್ತಿದ್ದಾರೆ?

ಶ್ರೀ ಅರಗ ಜ್ಞಾನೇಂದ್ರ : ಬ್ಯಾಲೇಟ್ ಆದಮೇಲೆ ಟ್ರಾನ್ಸ್‌ಫರ್ ಮಾಡುವಂಥದ್ದು ಏನಿದೆ ಸಾರ್? ಟ್ರಾನ್ಸ್‌ಫರ್ ಮಾಡುವಂಥದ್ದು ಅದು ಎಷ್ಟು ಹೊತ್ತಿನ ಕೆಲಸ ಸಾರ್?

ಶ್ರೀ ಹೆಚ್.ಕೆ. ಪಾಟೀಲ್ : ಇವತ್ತು ತಾವು ತಡೆದುಕೊಳ್ಳಿ. ನಾಳೆ ಅಥವಾ ನಾಡಿದ್ದು ಆ ಪ್ರಶ್ನೆಗೆ ಉತ್ತರ ಸಿಗುತ್ತದೆ. ಅದನ್ನು ಏತಕ್ಕಾಗಿ ಮುಚ್ಚಿಡಬೇಕಾಗುತ್ತದೆ? ಮಾಹಿತಿ ಇದ್ದುದರ ಬಗ್ಗೆ ಒದಗಿಸಿದ್ದೇವೆ. ಇಲ್ಲದಿರುವ ಬಗ್ಗೆ ತರಿಸಿಕೊಡುತ್ತೇವೆ. ಉತ್ತರ ಬಂದ ನಂತರ ಚರ್ಚೆಯನ್ನು ಮಾಡಬಹುದು.

ಅಧ್ಯಕ್ಷರು : ಈಗ ಮುಂದಕ್ಕೆ ಹೋಗೋಣ. ಮಾನ್ಯ ಕುಮಾರ ಸ್ವಾಮಿಯವರೆ, ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಎ.ಎಸ್. ಬಸವರಾಜು : ಮಾನ್ಯ ಅಧ್ಯಕ್ಷರೆ......

ಅಧ್ಯಕ್ಷರು : ನಾನು ಮಾನ್ಯ ಹೆಚ್.ಕೆ. ಕುಮಾರಸ್ವಾಮಿಯವರ ಹೆಸರನ್ನು ಕರೆದಿದ್ದೇನೆ. ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಸರ್ಕಾರ (ಇ) ಗೌರ್ನನೆನ್ಸ್ ಎಂದು ಹೇಳಿದರು. ನಮ್ಮ ಹತ್ತಿರ ಇಂಟರ್‌ನೆಟ್ ಇದೆ. ಬಟನ್ ಒತ್ತಿದರೆ ಸಾಕು ಎಲ್ಲಾ ವಿವರಗಳು ಬರುತ್ತದೆ. ಇದಕ್ಕಾಗಿ 15 ದಿನಗಳು ಕಾಯಬೇಕಾಗಿಲ್ಲ ಸಾರ್. ಕೆಲವು ಸೆಕೆಂಡುಗಳಲ್ಲಿ ಅಂದರೆ ನಾವು ಮಾತನಾಡಿದ ತಕ್ಷಣ ಉತ್ತರವನ್ನು ತರಿಸಿಕೊಡಬಹುದು. ಅವರ ಹತ್ತಿರ ಉತ್ತ ಇದೆ ಸಾರ್, ಅವರ ಬಣ್ಣ ಬಯಲಾಗುತ್ತದೆ. ಎಸ್‌ಸಿ:ಎಸ್‌ಟಿ ಬೇಕಾದಂತಹ ಯಾವುದೇ ಕಾರ್ಯಕ್ರಮಗಳನ್ನು ಮಾಡಿಲ್ಲ.

ಅಧ್ಯಕ್ಷರು : ಗೊತ್ತಾಗುತ್ತದೆ ಬಿಡಿ. ಸದನವು 4ನೇ ತಾರೀಖಿನವರೆಗೆ ನಡೆಯುತ್ತದೆ. ಅಷ್ಟರೊಳಗಾಗಿ ನಾನು ಉತ್ತರವನ್ನು ಕೊಡಿಸಿಕೊಡುತ್ತೇನೆ. ಅವರು ಬೇಕು ಅಂತ ಮುಚ್ಚಿಡುತ್ತಾರೆಯೇ ನೋಡೋಣ. ನಾಳೆ ದಿವಸ ಕಾಲಿಂಗ್ ಅಟೆನ್ಷನ್‌ನಲ್ಲಿ ಕೊಡುತ್ತೇನೆಂದು ಹೇಳಿದ್ದೇನಲ್ಲಾ. ಆಗ ಗೊತ್ತಾಗುತ್ತದೆಯಲ್ಲಾ.

ಡಾ.ವೈ. ನಾಗಪ್ಪ : ನಿಮಗೆ ಎಷ್ಟು ಕಳಕಳಿ ಇದೆಯೋ ಆಡಳಿತ ಪಕ್ಷಕ್ಕೂ ಅಷ್ಟೇ ಕಳಕಳಿ ಇದೆ. ಉತ್ತರ ರೆಡಿ ಇದೆ. ಸ್ಟೆನಸಿಲ್ ಕಾಪಿ ತರಿಸುವುದಕ್ಕೆ ಲೇಟಾಯಿತು ಅದಕ್ಕೋಸ್ಕರ ಮಾನ್ಯ ಸದಸ್ಯರುಗಳಿಗೆ ಕೊಡುವುದಕ್ಕಾಗಲಿಲ್ಲ. ಅದಕ್ಕಾಗಿ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಮಾನ್ಯ ಅಧ್ಯಕ್ಷರು ಅರ್ಧ ಗಂಟೆಯ ಚರ್ಚೆಯ ಮೂಲಕ ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದಾರೆ. ಆಗ ಚರ್ಚೆ ಮಾಡೋಣ. ಇದರಲ್ಲಿ ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದಾರೆ. ಆಗ ಚರ್ಚೆ ಮಾಡೋಣ. ಇದರಲ್ಲಿ ಮುಚ್ಚಿಡುವಂತಹ ಪ್ರಸಂಗ ಏನಿದೆ? ಇದರಲ್ಲಿ ಯಾರಾದರೂ ಕಳ್ಳತನವನ್ನು ಮಾಡಿದ್ದಾರೆಯೇ? ಇಲ್ಲಿ ಮೋಸವನ್ನು ಮಾಡಿದ್ದೇವೆಯೇ? ಏನು ಇಲ್ಲವಲ್ಲಾ.

ಅಧ್ಯಕ್ಷರು : ಮಾನ್ಯ ಕುಮಾರಸ್ವಾಮಿಯವರೇ, ತಾವು ಪ್ರಶ್ನೆಯನ್ನು ಕೇಳಿ.

ಬೇಲೂರು ವಿಧಾನ ಸಭಾ ಕ್ಷೇತ್ರದಲ್ಲಿ ಮುರಾರ್ಜಿನ ಶಾಲೆ ಮಂಜುರಾತಿ.

44(745) : ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಈ ವರ್ಷ ಸರ್ಕಾರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮಂಜೂರು ಮಾಡುವುದೇ;

ಆ) ಹಾಸನ ಜಿಲ್ಲೆ ಬೇಲೂರು ಕ್ಷೇತ್ರ ಮೀಸಲು ಕ್ಷೇತ್ರವಾಗಿದ್ದು, ಇಲ್ಲಿಗೆ ಶಾಲೆಯೊಂದನ್ನು ಮಂಜೂರು ಮಾಡಲಾಗುವುದೇ;

ಡಾ: ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಹೌದು.

ಆ) ರಾಜ್ಯದಲ್ಲಿ ಸರ್ಕಾರ 30 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ತೆರೆಯಲು ಈ ವರ್ಷದಲ್ಲಿ ಪ್ರಸ್ತಾಪಿಸಿದೆ. ಇದರಲ್ಲಿ 10 ಪರಿಶಿಷ್ಟ ಜಾತಿಗಳಿಗೆ, 5 ಪರಿಶಿಷ್ಟ ವರ್ಗಗಳಿಗೆ, 10 ಹಿಂದುಳಿದ ವರ್ಗಗಳಿಗೆ ಹಾಗೂ 5 ಅಲ್ಪ ಸಂಖ್ಯಾತರುಗಳಿಗೆಂದು ವರ್ಗೀಕರಿಸಲಾಗಿದೆ. ಈ ವಸತಿ ಶಾಲೆಗಳನ್ನು ಎಲ್ಲೆಲ್ಲಿ ತೆರೆಯಬೇಕೆಂಬುದರ ಬಗ್ಗೆ ಸ್ಥಳ ಗುರುತಿಸಲಾಗುತ್ತಿದೆ. ಸ್ಥಳ ಗುರುತಿಸಿದ ಕೂಡಲೇ ಈ ಬಗ್ಗೆ ಆದೇಶ ಹೊರಡಿಸಲಾಗುವುದು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಕೆಲವು ಕ್ಷೇತ್ರಗಳಿಗೆ ಸಮಾಜಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಇಲಾಖೆ ಎರಡರಿಂದ ಕೂಡ ಮೊರಾರ್ಜಿ ಶಾಲೆಗಳನ್ನು ಮಂಜೂರು ಮಾಡಿರುವ ಉದಾಹರಣೆ ಇವೆ. ದಯಮಾಡಿ ಬೇಲೂರು ಕ್ಷೇತ್ರ ಮೀಸಲು ಕ್ಷೇತ್ರವಾಗಿದ್ದು. ಶೇಕಡ 40ರಷ್ಟು ಪರಿಶಿಷ್ಟ ಜಾತಿ ಮತ್ತು ಜನಾಂಗದವರು ಇದ್ದಾರೆ ದಯಮಾಡಿ ಈ ವರ್ಷ ಮಂಜೂರು ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಕಡ್ಡಾಯವಾಗಿ ಮಂಜೂರು ಮಾಡಿಕೊಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಡಾ. ವೈ. ನಾಗಪ್ಪ : ಮಾನ್ಯ ಅಧ್ಯಕ್ಷರೆ, ಒಟ್ಟು 30 ಮೊರಾರ್ಜಿ ವಸತಿ ಶಾಲೆಗಳನ್ನು ಮಾಡಬೇಕೆಂಬ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ 10 ಪರಿಶಿಷ್ಟ ಜಾತಿಗಳಿಗೆ, 5 ಪರಿಶಿಷ್ಟ ವರ್ಗದವರಿಗೆ, 10 ಹಿಂದುಳಿದ ವರ್ಗದವರಿಗೆ, 5 ಅಲ್ಪಸಂಖ್ಯಾತ ವರ್ಗದವರಿಗೆ ಕೊಟ್ಟಿದ್ದೇವೆ. ಮಾನ್ಯ ಗೌರವಾನ್ವಿತ ಶಾಸಕರಾದ ಶ್ರೀ ಕುಮಾರಸ್ವಾಮಿಯವರು ಅವರೂ ಕೂಡ ಒಂದು ಶಾಲೆಯನ್ನು ಕೇಳಿದ್ದಾರೆ. ಅದರ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡಿ ಅದನ್ನು ಒದಗಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ರಾಜ್ಯದಲ್ಲಿರುವ ಕೈಗಾರಿಕೆಗಳ ಕಾರ್ಮಿಕರಿಗೆ ಸೇವಾ ಭದ್ರತೆ

45(914) : ಜಿ.ವಿ. ಶ್ರೀರಾಮರೆಡ್ಡಿ. (ಬಾಗೇಪಲ್ಲಿ) : ಮಾನ್ಯ ಬೃಹತ್, ಮಧ್ಯಮ ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು;

ಆ) ಈ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಒಟ್ಟು ಕಾರ್ಮಿಕರ ಸಂಖ್ಯೆ ಎಷ್ಟು;

ಇ) ಈ ಕಾರ್ಮಿಕರೆಲ್ಲರಿಗೂ ಸೇವಾ ಭದ್ರತೆ ಒದಗಿಸಲಾಗಿದೆಯೇ ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಬೃಹತ್, ಮಧ್ಯಮ ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು)

ಅ) ಪ್ರಸಕ್ತ ರಾಜ್ಯದಲ್ಲಿ 1044 ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ 3,15,604 ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ.

ಆ) ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ 3,95,817 ಕಾರ್ಮಿಕರು ದುಡಿಯುತ್ತಿದ್ದಾರೆ ಹಾಗು ಸಣ್ಣ ಕೈಗಾರಿಕೆಗಳಲ್ಲಿ 18,04,002 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

ಇ) ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಸೇವಾ ಭದ್ರತೆ, ಸುರಕ್ಷತೆ ಮುಂತಾದ ಅಂಶಗಳಿಗೆ ಸಂಬಂಧಿಸಿದಂತೆ ವಿವಿಧ ಕಾರ್ಮಿಕ ಕಾಯಿದೆ/ನಿಯಮಗಳು ಇಲಾಖೆಯ ಮುಖಾಂತರ ಜಾರಿಗೊಳಿಸಲಾಗುತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅದರಲ್ಲಿ ಬಹಳ ಮುಖ್ಯವಾಗಿ ಪ್ರಶ್ನೆ-(ಇ) ಗೆ ಸಂಬದಿಸಿ-ದಂತೆ ಕಾರ್ಮಿಕರಿಗೆಲ್ಲರಿಗೂ ಸೇವಾ ಭದ್ರತೆ ನಿಯಮಗಳ ಪ್ರಕಾರ ಒದಗಿಸಲಾಗಿದೆ. ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈ ಕಾರ್ಮಿಕ ಇಲಾಖೆ ಎನಿದೆ, ಇದು ಕಾರ್ಮಿಕರಿಗೆ ಸಂಬಂಧಪಟ್ಟಂತಹ ಎಲ್ಲಾ ಕಾನೂನುಗಳನ್ನು ಸಂಪೂರ್ಣವಾಗಿ ಕರ್ನಾಟಕ ರಾಜ್ಯದಲ್ಲಿ ಮುರಿದುಬಿಟ್ಟಿದ್ದಾರೆ ಅದರ ಬಗ್ಗೆ ಹಲವಾರು ಉದಾಹರಣೆಗಳಿರುವ ಪಟ್ಟಿ ಇದೆ, ಎಲ್ಲಾವನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಎರಡೇ ಎರಡು ಉದಾಹರಣೆಯನ್ನು ಕೊಡುತ್ತೇನೆ. ಈ ಸದನ ಬಹಳ ಗಂಭೀರವಾಗಿ ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ. ಈ ಸರ್ಕಾರ ಯಾರ ಪರವಾಗಿ ಕೆಲಸವನ್ನು ಮಾಡುತ್ತದೆ. ಎಂದು ಮೆಟಲ್ ಕ್ಲೋಸರ್ ಎಂಬ ಕಾರ್ಖಾನೆ ಇದೆ. ಅದು ಸುಮಾರು 15-20 ವರ್ಷಗಳಿಂದ ನಡೆಯುತ್ತದೆ. ಇವತ್ತು ಕೂಡ ಹೋರಾಟ ಮಾಡಿದಕ್ಕಾಗಿ 200 ಜನ ಕಾರ್ಮಿಕರನ್ನು ಹೊರಗಡೆಗೆ ಹಾಕಿದ್ದಾರೆ. ಇದುವರೆಗೂ ಕೂಡ ಅಲ್ಲಿ ಕನಿಷ್ಠ ಕಾಯಿದೆಯನ್ನು ಕೂಡ ಜಾರಿ ಮಾಡಿಲ್ಲ. 20 ವರ್ಷಗಳಿಂದ ಕಾರ್ಮಿಕರಿಗೆ ಕನಿಷ್ಠ ಕೂಲಿ ಎನು ಕೊಡಬೇಕೋ ಏನು ಕಾಯಿದೆ ಇದೆ ಅದನ್ನು ಜಾರಿ ಮಾಡುವ ಬಗ್ಗೆ ಇವತ್ತೂ ಕೂಡ ಮಾಡಿಲ್ಲ. ಕನಿಷ್ಠ ಕೂಲಿಯನ್ನು ಜಾರಿಮಾಡಿ ಎಂದು ಹೋರಾಟ ಮಾಡಿದ್ದೇ ಅದು ಅಪರಾದ ಎಂದು ಹೇಳಿ ಅರ್ಧ ಜನರನ್ನು ಕುಣಿಗಲ್ ಕಡೆಗೆ ಕಳುಹಿಸಿ 200 ಜನನು ಆಚೆಗೆಹಾಕಿದ್ದಾರೆ. ಇದರ ಬಗ್ಗೆ ಹೋರಾಟ ಮಾಡಿದ್ದಾ ಮಾನ್ಯ ಕಾರ್ಮಿಕ ಮಂತ್ರಿಗಳು ನೇರವಾಗಿ ಹೇಳುತ್ತಾರೆ. ನಾನು ಹೇಳಿದಹಾಗೆ ತಾವು ಕೇಳದಿದ್ದರೆ ನಾನೇ ಬಂದು ಫ್ಯಾಕ್ಟರಿಯನ್ನು ತೆಗೆಸುತ್ತೇನೆ. ಅದಕ್ಕೆ ಯಾರು ಅಡ್ಡ ಬರುತ್ತಾರೆ ನೋಡುತ್ತನೆ. ಎಂದು ಮಾತನಾಡುತ್ತಾರೆ. ಇದು ಒಬ್ಬ ಸಚಿವರು ಮಾತನಾಡತಕ್ಕಂತಹ ಮಾತಾಗಿದೆ. ಹೌದು ನೀವಲ್ಲ ಕಾರ್ಮಿಕ ಸಚಿವರು. ಫರಪೆಕ್ಟ ಲುಕಿಂಗ್ ಗಾರ್ಮೆಂಟ್ಸ್ ಎಂದು ಇದೆ.ಅ ಎಲ್ಲರೂ ಮಹಿಳೆಯರೇ ಕೆಲಸವನ್ನು ಮಾಡುತ್ತಿದ್ದಾರೆ. ಅದು ಬನ್ನೇರುಘಟ್ಟದ ರಸ್ತೆಯಲ್ಲಿದೆ. ಅವರಿಗೆ ಕನಿಷ್ಠ ಕೂಲಿ ಇಲ್ಲ. ಅವರು ಹೋರಾಟ ಮಾಡಿದಾಗ ಮಾತುಕತೆ ಎಂದು ಕರೆದು ಗೂಂಡಾಗಳನ್ನು ಬಿಟ್ಟು ಬಟ್ಟೆ ಬಿಚ್ಚಿಸಿ ಅವರನ್ನು ಹೊಡೆಸಿದ್ದಾರೆ ಮಹಿಳೆಯರಿಗೆ ಬಟ್ಟೆಯನ್ನು ಬಿಚ್ಚಿಸಿ ಹೊಡಿಸಿದ್ದಾರೆ ಮಾನ್ಯ ಅಧ್ಯಕ್ಷರು ಅನುಮತಿಯನ್ನು ಕೊಟ್ಟರೆ ಅವರನ್ನು ಕರೆದುಕೊಂಡು ಬಂದು ಅಧ್ಯಕ್ಷರ ಕೊಠಡಿಯಲ್ಲಿ ತ್ತೋರಿಸುತ್ತೇನೆ. ಇದಕ್ಕಿಂತ ನಾಚಿಕೆಗೇಡಿನ ಸಂಗತಿ ಬೇರೆ ಯಾವುದೇ ಸರ್ಕಾರದ ಅಡಿಯಲ್ಲಿ ನಡೆಯುವುದಕ್ಕೆ ಸಾಧ್ಯವಿಲ್ಲ. ಮಹಿಳಾ ಕಾರ್ಮಿಕರ ಮೇಲೆ ಈ ರೀತಿಯಾಗಿ ದೌರ್ಜನ್ಯ

ನಡೆಯತಕ್ಕಹದ್ದು ನಡೆದಿದೆ, ಕಾರ್ಮಿಕ ಸಚಿವರು, ಕಾರ್ಮಿಕ ಇಲಾಖೆ ಇರತಕ್ಕಂತಹದ್ದು. ಕೈಗಾರಿಕಾ ಇಲಾಖೆಯು ಇರುವುದು ಕೈಗಾರಿಕಾ ಇಲಾಖೆಯಲ್ಲಿ ಕಾರ್ಖಾನೆಗಳು ನಡೆಯಬೇಕು ಎಂದು ಹೇಳುವುದು ಎಷ್ಟು ಕಾಳಜಿ ಮುಖ್ಯವೋ, ಅ ಕಾರ್ಖಾನೆಗಳು ನಡೆಯಬೇಕಾದರೆ ಕಾರ್ಮಿಕರು ಇರಬೇಕಾಗಿರುವುದು ಅಷ್ಟೇ ಮುಖ್ಯವಾಗಿದೆ. ಕಾರ್ಮಿಕರಿಲ್ಲದೆ ಯಾವುದೇ ಕಾರ್ಖಾನೆಗಳು ನಡೆಯುವುದೇ ಇಲ್ಲ. ಕಾರ್ಮಿಕರು ಮತ್ತು ಫ್ಯಾಕ್ಟರಿ ಎರಡೂ ಸಮನ್ವಯದಿಂದ ಹೊಂದಿಕೊಂಡು ಕಾರ್ಮಿಕರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಕಾರ್ಖಾನೆಗಳನ್ನು ನಡೆಸಿಕೊಂಡು ಹೋಗಭೇಕು. ಆದರೆ ಇವತ್ತು ಈ ರೀತಿಯಾಗಿ ದೌರ್ಜನ್ಯ ನಡೆಯುತ್ತಿದೆ. ಇದರ ಬಗ್ಗೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎಂಬುದರ ಬಗ್ಗೆ ಉತ್ತರವನ್ನು ಕೊಡಬೇಕು.

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರು ಸದನದ ಗಮನವನ್ನು ಸೆಳೆದು ಬೆಂಗಳೂರು ಕನಕಪುರ ರಸ್ತೆಯಲ್ಲಿರುವಂತಹ ಮೆಟಲ್ ಕ್ಲೋಸರ್ಸ್ ವಿಚಾರದಲ್ಲಿ ಆರೋಪಗಳನ್ನು ಮಾಡಿದ್ದಾರೆ. ಇವತ್ತು 207 ಜನರು ಕಾರ್ಮಿಕರು ಕಳೆದ 8 ತಿಂಗಳಿಂದ ಪ್ರತಿಬಟನೆ ನಡೆಸುತ್ತಿದ್ದರು. ಜುಲೈ ತಿಂಗಳಲ್ಲಿ ಕೈಗಾರಿಕೆಗಳಲ್ಲಿ ಇದ್ದಂತಹ ವಿವಾದವನ್ನು ಇತ್ಯರ್ಥಗೊಳೀಸಲು ನನ್ನ ಇಲಾಖಾಧಿಕಾರಿಗಳು ವಿಫಲರಾದ ನಂತರ ಕಾರ್ಮಿಕರು ಮತ್ತು ಮಾಲೀಕರ ಮಧ್ಯ ಒಂದು ಒಪ್ಪಂದ ಮಾಡಿ ಕೈಗಾರಿಕಾ ಘಟಕಗಳನ್ನು ಪುನರ್ ಪ್ರಾರಂಬ ಮಾಡಲು ಅವಕಾಶವನ್ನು ಮಾಡಿಕೊಟ್ಟಿದ್ದೆವು. ಕನಿಷ್ಠ ವೇತನ ಜಾರಿಯಾಗದೆ ಇರುವಂತಹ ವಿಚಾರ ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ಇವತ್ತು ಕನಿಷ್ಠ ವೇತನ ಕಾಯಿದೆಯಡಿಯಲ್ಲಿ ನನ್ನ ಇಲಾಖೆಯ ಮುಂದೆ ವಿಚಾರಣೆಗೆ ಬಂದಿದೆ. ಆ ವಿಚಾರಣೆಯು ನಡೆಯುತ್ತಿದೆ. ಇದರ ಜೊತೆಗೆ 207ಜನ ಕಾರ್ಮಿಕರನ್ನು ಇದೇ ಕೈಗಾರಿಕಾ ಘಟಕದ ಇನ್ನೊಂದು ಘಟಕ ಕುಣಿಗಲ್‌ನಲ್ಲಿದೆ ಅಲ್ಲಿಗೆ ಕೆಲವು ಕಾರ್ಮಿಕರನ್ನು ಸ್ಥಳಾಂತರಿಸಿ ಅವರಿಗೆ ವಾಹನದ ಸೌಕರ್ಯ ಕೊಟ್ಟಂತಹ ಸಂದರ್ಬದಲ್ಲಿ ಆ ರಸ್ತೆಯಲ್ಲಿ ಸಾರ್ವಜನಿಕರಿಗೂ ತೊಂದರೆಯಾಗಿರುವ ಬಗ್ಗೆ ನಮ್ಮ ಗಮನಕ್ಕೆ ಬಂದಿದೆ.ಇವತ್ತು ನಾನು ಕಾರ್ಮಿಕ ಸಚಿವನಾಗಿ ಸರ್ಕಾರದ ಸ್ಪಷ್ಟ ನಿಲುವು ಹೇಳಬೇಕಾದದ್ದು ಕರ್ನಾಟಕದ ನೆಲೆಯ ಮೇಲೆ ಯಾವುದೇ ಕಾರ್ಖಾನೆ ಸ್ಥಾಪನೆಯಾದಂತಹ ಸಂದರ್ಭದಲ್ಲಿ ಅದಕ್ಕೆ ಮಾಲೀಕರು ಯಾರೇ ಇರಬಹುದು, ಕಾರ್ಮಿಕರು ಯಾರೇ ಇರಬಹುದು ಆ ಕಾರ್ಖಾನೆ ಇವತ್ತು ಅಭಿವೃದ್ಧಿ, ಆಗಬೇಕಾಗಿರುವಂತಹದ್ದು ಅದನ್ನು ನೋಡಿಕೊಳ್ಳಬೇಕಾಗಿರುವಂತಹ ನಮ್ಮ ಜವಾಬ್ದಾರಿ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಭಾಷಣ ನಮಗೆ ಬೇಡ. ಮಹಿಳೆಯರ ಮೇಲೆ ದೌರ್ಜನ್ಯ ನಡೆದಿದೆ. ಅದರ ಬಗ್ಗೆ ತಾವು ಹೇಳಬೇಕು. ತಾವು ಯಾರಿಗೆ ಬೆಂಬಲವನ್ನು ಕೊಡುತ್ತಿದ್ದೀರಿ? ಕರ್ನಾಟಕದಲ್ಲಿ ಕಾರ್ಖಾನೆಗಳು ಉಳಿಯಬೇಕು ಬೆಳೆಯಬೇಕೆಂದು ಇದ್ದರೆ ಮಹಿಳೆಯರ ಮೇಲೆ ಆಗಿರುವಂತಹ ದೌರ್ಜನ್ಯದ ಬಗ್ಗೆ ಉತ್ತರವನ್ನು ಕೊಡಬೇಕು.

ಶ್ರೀ ತನ್ವೀರ್ ಸೇಠ್ : ತಾವು ನಾನು ಉತ್ತರ ಕೊಡುವ ತನಕ ಸ್ವಲ್ಪ ಕಾಯಬೇಕು. ಸಚಿವರ ಮೇಲೆ ನೇರವಾದಂತಹ ಆಪಾದನೆಯನ್ನು ಮಾಡಿದ್ದಾರೆ. ಕಾರ್ಖಾನೆಯನ್ನು ನಾನೇ ಬಿಡಿಸುತ್ತೇನೆಂದು ಹೇಳಿರುವಂತಹದ್ದು, ಅದು ನಿಜ. ಕಾರ್ಮಿಕರ ಮತ್ತು ಮಾಲೀಕರ ನಡುವೆ ಇರುವಂತಹ ವಿವಾದ, ಅದು ಕೈಗಾರಿಕಾ ವಿವಾದದ ಅಡಿಯಲ್ಲಿ ಇತ್ಯರ್ಥಗೊಳಿಸುವುದಕ್ಕೆ ನಮ್ಮ ಇಲಾಖೆ ಮುಂದೆ ವಿಚಾರಣೆಯಲ್ಲಿ ಇದೆ. ಕನಿಷ್ಟ ವೇತನ ಕಾಯಿದೆ 1948ರ ಪ್ರಕಾರ ಆ ವಿಚಾರ ಕೂಡ ಇಲಾಖಾ ಮಟ್ಟದಲ್ಲಿ ನಡೆಯುತ್ತಿದೆ. ಈ ಕಾಯಿದೆ ಪ್ರಕಾರ ಕಾರ್ಮಿಕರ ಸಂಘಟನೆಗೆ ಮಾನ್ಯತೆ

ಕೊಡಬೇಕಾದುದು ಮಾಲೀಕರು ಅದರ ಬಗ್ಗೆ ಒಪ್ಪಂದ ಮಾಡುವ ಮೂಲಕ ಸೆಕ್ಷನ್ 12(3)ರ ಪ್ರಕಾರ ನಾವು ಈಗಾಗಲೇ ಒಂದು ಒಪ್ಪಂದಕ್ಕೆ ಬರುತ್ತಿದ್ದೇವೆ. ಕಾರ್ಮಿಕರ ಮುಖಂಡರುಗಳಿಗೆ ಮಾನ್ಯತೆ ಕೊಡುವಂತಹ ವಿಚಾರವನ್ನು ನಾನು ಮಾಡಿದ್ದೇನೆ. ಈ ಕರ್ನಾಟಕದಲ್ಲಿ ಇರುವಂತಹ ಮೆಟಲ್ ಕ್ಲೋಸರ್ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದ್ದಾರೆ.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕನಿಷ್ಟ ವೇತನವನ್ನು ಜಾರಿ ಮಾಡಿದೆ ಕಾರ್ಮಿಕರು ಹೋರಾಟಕ್ಕೆ ಇಳಿದಾಗ ಆ ಹೋರಾಟವನ್ನು ಮುರಿಯಲಿಕ್ಕೆ ಅನೇಕ ಜನರನ್ನು ಕುಣಿಗಲ್‌ಗೆ ಟ್ರಾನ್ಸ್‌ಫರ್ ಮಾಡಿದರು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಸಭಾಧ್ಯಕ್ಷರೆ, ಎಷ್ಟು ಗಾರ್ಮೆಂಟ್ ಫ್ಯಾಕ್ಟರಿಗಳಲ್ಲಿ ಇವತ್ತು ತಾವ ಕನಿಷ್ಟವೇತನ ಜಾರಿಮಾಡಿಸಿದ್ದೀರಿ? ಎಷ್ಟು ಮೈನ್ಸ್‌ನಲ್ಲಿ ಮತ್ತು ಬ್ರಿಕ್ಸ್ ಮತ್ತು ಟೈಲ್ಸ್ ಫ್ಯಾಕ್ಟರಿಗಳಲ್ಲಿ ತಾವು ಕನಿಷ್ಟವೇತನವನ್ನು ಜಾರಿಮಾಡಿಸಿದ್ದೀರಿ ಎಂಬ ಬಗ್ಗೆ ಉತ್ತರ ಕೊಡಬೇಕು.

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, ಮೆಟಲ್ ಕ್ಲೋಸರ್ ವಿಚಾರದಲ್ಲಿ ನಾನೇ ನೇರವಾಗಿ ಸಂಧಾನಕ್ಕೆ ಕುಳಿತರಥ ಸಂದರ್ಭದಲ್ಲಿ ಇರುವಂಥ ಮಾಹಿತಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ. ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಕೇಳುವಂಥ ಮರುಪ್ರಶ್ನೆಗೆ ಬಹುಶಃ ನನಗೆ ನೇರವಾಗಿ ಪ್ರಶ್ನೆಯನ್ನು ಕಳುಹಿಸಿದ್ದಲ್ಲಿ ನಾನು ಮಾಹಿತಿಯನ್ನು ಸದನದ ಮುಂದೆ ಒದಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನನ್ನ ಪ್ರಶ್ನೆ ಸ್ಪಷ್ಟವಾಗಿದೆ. ಮಾಲೀಕರ ಮತ್ತು ಕಾರ್ಮಿಕರು ಎರಡರ ಬಗ್ಗೆಯೂ ನಾನು ಕೇಳಿದ್ದೇನೆ.

ಶ್ರೀ ತನ್ವೀರ್ ಸೇಠ್ : ನನಗೆ ಇದು ಬಂದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೋಡಿ, ನನ್ನ ಪ್ರಶ್ನೆ ಸ್ಪಷ್ಟವಾಗಿದೆ, ಕೈಗಾರಿಕೆಗಳು ಮತ್ತು ಕಾರ್ಮಿಕರು ಅಂತ ಹೇಳಿ ಅದು ಸ್ಪಷ್ಟವಾಗಿದೆ.

ಶ್ರೀ ತನ್ವೀರ್ ಸೇಠ್ : ನನಗೆ ಬಂದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಿಮಗೆ ಬಂದಿಲ್ಲದೇ ಇದ್ದರೆ ಅದು ನನ್ನ ತಪ್ಪಾಲ್ಲಾರೀ.

ಶ್ರೀ ತನ್ವೀರ್ ಸೇಠ್ : ನಾನು ಸಭಾಧ್ಯಕ್ಷರಿಗೆ ಹೇಳುತ್ತಿದ್ದೇನೆ. ದಯವಿಟ್ಟು ನೇರವಾಗಿ ನನಗೆ ಮಾತನಾಡಬೇಡಿ. ನೀವು ಸಭಾಧ್ಯಕ್ಷರ ಮೂಲಕ ಮಾತನಾಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಸಭಾಧ್ಯಕ್ಷರಿಗೆ ಹೇಳುತ್ತಿದ್ದೇನೆ. ನಾನು ನೇರವಾಗಿ ಪ್ರಶ್ನೆಯನ್ನು ಕಳುಹಿಸಿದ್ದೇನೆ. ಅದು ನಿಮಗೆ ಬರದೆ ಇದ್ದರೆ ಅದು ನನ್ನ ತಪ್ಪಲ್ಲ. ಅದು ನಿಮ್ಮ ಸರ್ಕಾರ ಮತ್ತು ನಿಮ್ಮ ಇಲಾಖೆಯ ಬೇಜವಾಬ್ದಾರಿ. ನಾನು ಪ್ರಶ್ನೆಯನ್ನು ನೇರವಾಗಿ ಕೇಳಿದ್ದೇನೆ. ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಕಾನೂನು ಇಲಾಖೆಯ ಕಾರ್ಮಿಕ ಇಲಾಖೆಯ ಕಾಯಿದೆಗಳ ಪ್ರಕಾರ ಜಾರಿ ಮಾಡುತ್ತಿದ್ದೇವೆ ಎಂದು ಇಲ್ಲಿ ಸಚಿವರು ಕಾರ್ಮಿಕ ಇಲಾಖೆಯ ಕಾಯಿದೆಗಳ ಪ್ರಕಾರ ಜಾರಿ ಮಾಡುತ್ತಿದ್ದೇವೆ ಎಂದು ಇಲ್ಲಿ ಸಚಿವರು ಉತ್ತರ ಕೊಟ್ಟಿದ್ದಾರೆ. ನಾನು ನೇರವಾಗಿ ಕೇಳತಕ್ಕಂಥಾದ್ದು ಏನೆಂದರೆ ಒಬ್ಬ ಕಾರ್ಮಿಕ ಮಂತ್ರಿಯಾಗಿ 'ನಾನೇ ಬಂದು ತೆಗೆಸ್ತೀನೇ, ಅದು ಅಲ್ಲಿ ಯಾರು ಅಡ್ಡ ಬರ್ತಾರೆ ನೋಡೋಣ ಅಂತ ಹೇಳಿದರೆ ಇವರು ಕಾರ್ಮಿಕ ಮಂತ್ರಿಗಳಾಗಿ ಇರಲಿಕ್ಕೆ ಲಾಯಕ್ಕಿದ್ದಾರಾ? ಇವರು ಯಾರ ಪರವಾಗಿ ಮಂತ್ರಿಗಿರಿ ಮಾಡುತ್ತಿದ್ದಾರೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನೀವು ಕಾರ್ಮಿಕರ ಪರವಾಗಿರುವ ಮಂತ್ರಿಗಳೋ ಅಥವಾ ಮಾಲೀಕರ ಪರವಾಗಿರುವ ಮಂತ್ರಿಗಳೋ ಎಂಬುದು ಮೊದಲು ಸ್ಪಷ್ಟವಾಗಲಿ. ನೀವು ಮಾಲೀಕರ ಪರ ಮಂತ್ರಿಗಳಾಗಿ ವರ್ತನೆ ಮಾಡುತ್ತಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರ ಪರವಾಗಿ ವರ್ತಿಸಲಿಕ್ಕೆ ಕಾರಣವೇನು, ಅದನ್ನೂ ಹೇಳಿಬಿಡಿ.

ಶ್ರೀ ತನ್ವೀರ್ ಸೇಠ್ : ಮಾನ್ಯ ಸಭಾಧ್ಯಕ್ಷರೆ, ಇವತ್ತು ಏನು ಮಾನ್ಯ ಸದಸ್ಯರು ಕಾರ್ಮಿಕ ಸಚಿವರು ಕಾರ್ಮಿಕರ ಪರವಾಗಿ ಇದ್ದಾರೆಯೇ, ಇಲ್ಲ ಕಾರ್ಮಿಕರಿಗೆ ವಿರುದ್ಧವಾಗಿ ಮಾಲೀಕರ ಪರ ಇದ್ದಾರೆಯೇ ಎನ್ನುವಂತಹ ಸಂಶಯವನ್ನು ಏನು ವ್ಯಕ್ತಪಡಿಸುತ್ತಿದ್ದಾರೆ. ದುಡಿಮೆ ಮಾಡುವವರಿಗೆ ದುಡಿಮೆ ಕೊಡಿಸುವಂಥಾದ್ದೇ ನನ್ನ ಜವಾಬ್ದಾರಿ. ಕಾರ್ಖಾನೆಯನ್ನು ಬಿಡಿಸಿದರೇನೇ ಕಾರ್ಮಿಕರಿಗೆ ಕೆಲಸ ಸಿಗುವುದು. ಇವತ್ತು ಈ ನಿಲುವನ್ನು ನಾನು ತೆಗೆದುಕೊಂಡು ಇರುವಂತಹ ಕಾನೂನು ಅಡಿಯಲ್ಲಿ ನನ್ನ ಇಲಾಖೆ ತನಿಖೆಯನ್ನು ನಡೆಸುತ್ತಿದೆ. ಇವತ್ತು ಒಂದಲ್ಲ ನಾಲ್ಕು ಸಲ ನಾವು ಸಂಧಾನಕ್ಕೆ ಕರೆದಿದ್ದೇವೆ. ಕನಿಷ್ಟವೇತನ ಜಾರಿ ಮಾಡಬೇಕಾದರೆ ಅದಕ್ಕೆ ಇರುವಂಥ ವಿಧವಿಧಾನಗಳ ಅಡಿಯಲ್ಲಿ ನಾನು ಕಾರ್ಮಿಕರಿಗೆ ಕನಿಷ್ಟವೇತನ ಕೊಡುವ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ವಿಚಾರಣೆ ಮಾಡುವುದಕ್ಕೆ ಶಾಸನದಲ್ಲಿ ಅವಕಾಶ ಇಲ್ಲ. You have to recouncile. ತಮಗೆ ರಿಕನ್ಸೈಲ್ ಮಾಡುವುದಕ್ಕೆ ಅಷ್ಟೇ ಅಧಿಕಾರ ಇರುವುದು. You have no investigation power, with the Labour Union. ನಿಮಗೆ ವಿಚಾರಣೆ ಮಾಡುವ ಅಧಿಕಾರವನ್ನು ಯಾರು ಕೊಟ್ಟರು? ನೀವು ರಿಕನ್ಸೈಲ್ ಮಾಡಿದ್ದೀರಾ? ಕಾರ್ಮಿಕ ಮುಖಂಡರನ್ನು ಕರೆದಿದ್ದೀರಾ? ಅವರ ಟರ್ಮ್ಸ್ ಅಂಡ್ ಕಂಡೀಶನ್ಸ್‌ಗೆ ಮ್ಯಾನೇಜ್‌ಮೆಂಟ್‌ನವರು ಒಪ್ಪುತ್ತಾರೆಯೇ ಇಲ್ಲವೇ ಎಂದು ಅವರನ್ನು ಕೇಳಿದ್ದೀರಾ? ರಿಕನ್ಸೈಲ್ ಮಾಡಿರಿ ಎಂದರೆ ತನಿಖೆ ಮಾಡಿಸುತ್ತಿದ್ದೇನೆ ಎಂದು ನೀವು ಹೇಳುತ್ತಿದ್ದೀರಿ.

ಶ್ರೀ ತನ್ವೀರ್ ಸೇಠ್ : ನಾನು ವಿಚಾರಣೆ ಅಂತ ಹೇಳಿದರೆ ಇವತ್ತು 1948ನೇ ಇಸವಿಯ ಕನಿಷ್ಟ ವೇತನ ಕಾಯದೆ ಅಡಿಯಲ್ಲಿ ನನ್ನ ಇಲಾಖೆಯ ಮುಂದೆ ಅವರ ವಿವಾದ.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲಿ ವಿಚಾರ ಮಾಡತಕ್ಕಂಥ ಪ್ರಶ್ನೆ ಇಲ್ಲ. ಜಾರಿ ಮಾಡಬೇಕು ಅಷ್ಟೆ. ಜಾರಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಅದನ್ನು ಏಕೆ ತೆಗೆದುಕೊಂಡಿಲ್ಲ? ಕನಿಷ್ಟವೇತನ ಬಗ್ಗೆ ನೀವು ವಿಚಾರಣೆ ಮಾಡತಕ್ಕಂಥ ಪ್ರಶ್ನೆಯೇ ಬರುವುದಿಲ್ಲ. ಅದು ಈಗ ಕಾನೂನು ಆಗಿಬಿಟ್ಟಿದೆ. ಕಾನೂನನ್ನು ಕೇಂದ್ರಸರ್ಕಾರ ಮಾಡಿದೆ, ರಾಜ್ಯ ಸರ್ಕಾರ ಮಾಡಿದೆ. ಅದನ್ನು ಮತ್ತೆ ವಿಚಾರಣೆ ಮಾಡತಕ್ಕಂಥ ಅಧಿಕಾರವನ್ನು ಇವರಿಗೆ ಯಾರು ಕೊಟ್ಟರು? ಅದು ಸಾಧ್ಯವಿಲ್ಲ. ಇಲ್ಲಿ ವಿಚಾರಣೆ ಮಾಡತಕ್ಕಂಥ ಪ್ರಶ್ನೆಯೇ ಇಲ್ಲ. ಇಲ್ಲಿ ಜಾರಿ ಮಾಡತಕ್ಕಂಥ ಪ್ರಶ್ನೆ ಅಷ್ಟೇ ಇರತಕ್ಕಂಥಾದ್ದು. It is a Law ನೀವು ಜವಾಬ್ದಾರಿಯಿಂದ ಅದನ್ನು ಜಾರಿಮಾಡಬೇಕು, ಅಷ್ಟೆ.

ಶ್ರೀ ತನ್ವೀರ್ ಸೇಠ್ : ನಾನು ಹೇಳುತ್ತೇನೆ. ಇವತ್ತು ವಿವಾದ ನನ್ನ ಇಲಾಖೆಯ ಮುಂದೆ ಬಂದಿದೆ. 1948ನೇ ಕನಿಷ್ಟವೇತನ ಕಾಯದೆ ಅಡಿಯಲ್ಲಿ ಇರುವಂಥ ನಿಯಮಾವಳಿಗಳನ್ನು ನಾನು ಮುಂದಿಟ್ಟುಕೊಂಡು ಇವತ್ತು ಮಾಲೀಕರು ಮತ್ತು ಕಾರ್ಮಿಕರ ಸಂಘಟನೆಗಳನ್ನು ಕರೆದು ವಿಚಾರಣೆ ಮಾಡಿ ಜಾರಿ ಮಾಡುವಂತಹ ಹಂತದಲ್ಲಿ ಅದು ನನ್ನ ಇಲಾಖೆಯ ಮುಂದೆ ಇದೆ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, ನಿಮಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ಈ ಪ್ರಶ್ನೆಗೆ ಹತ್ತು–ಹದಿನೈದು ನಿಮಿಷ ಆಗಿಹೋಯಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು : ಮಂತ್ರಿಗಳು ಅವರಲ್ಲಿ ಇರತಕ್ಕಂಥ ಮಾಹಿತಿ ಪ್ರಕಾರ ಉತ್ತರ ಕೊಟ್ಟಿದ್ದಾರೆ. ಈಗ ಮುಂದಕ್ಕೆ ಹೋಗೋಣ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಹಿಳೆಯರಿಗೆ ಅನ್ಯಾಯವಾಗಿದೆ. ಮಹಿಳೆಯರ ಮೇಲೆ ಮಾಡಿ ದಾಂದಲೆ ಅವರನ್ನು ಹೊರಡಿಸಿದ್ದಾರೆ, ಇದಕ್ಕೆ ರಕ್ಷಣ ಸಚಿವರು ಅವರು ರಾಜೀನಾಮೆ ಕೊಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ರಾಜೀನಾಮೆಯನ್ನು ಕೊಡಬೇಕು. ಇಲ್ಲದಿದ್ದರೆ ನಾವು ಪ್ರತಿಭಟನೆ ಮಾಡುತ್ತೇವೆ, ಬಿಡುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಎಲ್ಲಾ ಗಾರ್ಮೆಂಟ್ ಫ್ಯಾಕ್ಟರಿಗಳಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿದೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲಿ ಮಂತ್ರಿಗಳು ಯಾರ ಪರವಾಗಿ ಮಾತನಾಡುತ್ತಿದ್ದಾರೆ?

(ಗೊಂದಲ. ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಶ್ರೀ ತನ್ವೀರ್ ಸೇಠ್ : ಮಾನ್ಯ ಸಭಾಧ್ಯಕ್ಷರೆ, ಮಾಹಿತಿ ನನ್ನ ಮುಂದೆ ಬಂದಿಲ್ಲ. ಅದನ್ನು ನಾನು ತರಿಸಿ ಕೊಡುತ್ತೇನೆ.

ಶ್ರೀ ವಾಟಾಳ್‌ನಾಗರಾಜ್ : ಮಾಲೀಕರ ಏಜೆಂಟರಾಗಿ ವರ್ತಿಸುತ್ತಿದ್ದಾರೆ.......

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದನ್ನು ಟಿ.ವಿ.ಯಲ್ಲಿ ತೋರಿಸಿದ್ದಾರೆ......

ಶ್ರೀ ತನ್ವೀರ್ ಸೇಠ್ : ನಿಮ್ಮ ಆರೋಪ ಏನಿದೆ ಅದನ್ನು ನೀವು ಸಾಬೀತು ಮಾಡಬೇಕಾಗುತ್ತದೆ.

ಶ್ರೀ ವಾಟಾಳ್‌ನಾಗರಾಜ್ : ಸಾಬೀತು ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಅಧ್ಯಕ್ಷರ ಕೊಠಡಿ ಮುಂದೆ ಅವರನ್ನು ಕರೆದುಕೊಂಡು ಬರುತ್ತೇನೆ ಎಂದು ಹೇಳಿದ್ದೇನೆ.

(ಗೊಂದಲ)

ಅಧ್ಯಕ್ಷರು : ಈಗ ಮುಖ್ಯಮಂತ್ರಿಗಳು ಹೇಳುತ್ತಾರೆ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಈಗ ಅವರಿಗೆ ನಾನು ಕಾರ್ಮಿಕ ಇಲಾಖೆಯನ್ನು ಕೊಟ್ಟಿದ್ದೇನೆ. ಕಾರ್ಮಿಕ ಇಲಾಖೆಯಲ್ಲಿ ಇರತಕ್ಕಂಥ ಸಮಸ್ಯೆಗಳ ಬಗ್ಗೆ ಇಲ್ಲಿಯವರೆಗೆ ನಾನು ತಿಳಿದಮಟ್ಟಿಗೆ ಅವರು ಮಾಡುತ್ತಿದ್ದಾರೆ. ಅಲ್ಲಿ ಇಲ್ಲಿ ಲೋಪದೋಷಗಳು ಆಗಿರಬಹುದು. ಮಾನ್ಯ ಶ್ರೀರಾಮರೆಡ್ಡಿಯವರು ಗಾರ್ಮೆಂಟ್ಸ್ ಮತ್ತು ಬೇರೆ ಬೇರೆ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡತಕ್ಕಂಥ

ಜನರಿಗೆ ಸರ್ಕಾರದ ಪರವಾಗಿ ರಕ್ಷಣೆ ಇಲ್ಲ ಅಂತ ಹೇಳಿದ್ದಾಯಿತು. ನಮ್ಮ ಸರ್ಕಾರ ಕಾರ್ಮಿಕರ ಪರವಾಗಿ ಇದೆ. ಅದಕ್ಕೇ ನೀವು ನಮಗೆ ಸಪೋರ್ಟ್ ಮಾಡುತ್ತಿದ್ದೀರಿ. ನಿಮಗೆ ಏನೇನು ಸಮಸ್ಯೆಗಳು ಇವೆ, ಆ ಸಮಸ್ಯೆಗಳ ಬಗ್ಗೆ ನಾನು ಸಭೆಯನ್ನು ಕರೆಸುತ್ತೇನೆ. ಅವರಿವರ ಗಮನಕ್ಕೆ ತಂದಿಲ್ಲ ಎನ್ನತಕ್ಕಂಥಾದ್ದು ಇಲ್ಲ. ಇವತ್ತು ಕಾರ್ಮಿಕ ಮಂತ್ರಿಗಳಾಗಿ, ಪ್ರತಿಯೊಬ್ಬ ಅಲ್ಲಿರತಕ್ಕಂಥ ಅಧಿಕಾರಿಗಳೂ ಕೂಡ ಆಗತಕ್ಕಂಥ ಕೆಲಸ ಕಾರ್ಯಗಳ ಬಗ್ಗೆ ಗಮನಕ್ಕೆ ತರಬೇಕು. ಎಲ್ಲಿ ಸ್ವಲ್ಪ ಲೋಪದೋಷವಾಗಿದೆ, ಅದನ್ನು ಸರಿಪಡಿಸಿ ನಿಮಗೆ ಪೂರ್ಣವಾಗಿ, ಕಾರ್ಮಿಕರಿಗೆ ನ್ಯಾಯ ಕೊಡತಕ್ಕಂಥ ರೀತಿಯಲ್ಲಿ ಸರ್ಕಾರ ಕೆಲಸ ಮಾಡುತ್ತದೆ. ನಾನು ಅವರ ಜೊತೆಯಲ್ಲಿ ಮಾತನಾಡುತ್ತೇನೆ. ಬೇಕಾದರೆ ನಿಮ್ಮ ಜತೆಯಲ್ಲಿ ಕೂಡ ಸಭೆ ನಡೆಸಿ ಇದರ ಬಗ್ಗೆ ಇತ್ಯರ್ಥ ಮಾಡುತ್ತೇನೆ.

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಹೆಚ್.ಕೆ ಪಾಟೀಲ್ : ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) : ಮಾನ್ಯ ಅಧ್ಯಕ್ಷರೆ, ದಿನಾಂಕ 27.01.2005ರ 3ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 109 ಪ್ರಶ್ನೆಗಳ ಪೈಕಿ 60 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

3) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ವಿಷಯ : ಗ್ರಾಮಪಂಚಾಯಿತಿಗಳ ಚುನಾವಣೆ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಸ್ವಲ್ಪ ಗಮನ ಕೊಡಬೇಕು. ಇದು ಶೂನ್ಯವೇಳೆ. ನನಗೆ ಐದು ನಿಮಿಷ ಸಾಕು.'ಇವತ್ತು ಮುಖ್ಯಮಂತ್ರಿಗಳು ತಾವು ಸಹ ಈ ರಾಜ್ಯದ ಜನತೆಗೆ ಭರವಸೆಯನ್ನು ಕೊಟ್ಟಿದ್ದೀರಿ. ಗ್ರಾಮ ಪಂಚಾಯಿತಿ ಚುನಾವಣೆಯನ್ನು ಅವಧಿ ಸಂದರ್ಭದಲ್ಲಿ ಈಗಾಗಲೇ ಮಾಡುತ್ತೇವೆ ಎನ್ನುವಂಥ ಮಾತನ್ನು ತಾವು ಹೇಳಿದ್ದೀರಿ. ಇವತ್ತು ಒಂದೆರಡು ದಿವಸಗಳಲ್ಲಿ ಇದರ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಈಗ ಏನಾಗಿದೆ? ರಾಜ್ಯದಲ್ಲಿ ಗ್ರಾಮಪಂಚಾಯತಿಗಳ ನಿಗದಿತ ಅವದಿ ಮಾರ್ಚ್ 2005ರೊಳಗೆ ಮುಗಿಯಬೇಕು. ರಾಜ್ಯ ಚುನಾವಣಾ ಆಯೋಗ ಈ ಸ್ಥಳೀಯ ಸಂಸ್ಥೆಗಳಿಗೆ ಫೆಬ್ರವರಿ 2005ರಲ್ಲಿ ಚುನಾವಣೆ ನಡೆಸುವ ಬಗ್ಗೆ ರಾಜ್ಯ ಸರ್ಕಾರಕ್ಕೆ ಈಗಾಗಲೇ ತಿಳಿಸಿದ್ದಾರೆ. ಈ ಚುನಾವಣೆ ನಿಗಧಿತ ವೇಳೆಯಲ್ಲಿ ನಡೆಯಬೇಕಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ಬಗ್ಗೆ ಮಾನ್ಯ ರಮೇಶ್ ಕುಮಾರ್ ಅವರೂ ನೋಟೀಸ್ ಕೊಟ್ಟಿದ್ದಾರೆ. ಈ ವಿಷಯ ಇಂದಿನ ಅಜೆಂಡಾದಲ್ಲಿ ಅಚ್ಚಾಗಿದೆ ಮತ್ತು ಅದು ಟೇಬಲ್ ಮುಂದೆ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗಬಹುದು. ನಾನು ಅವಾಗಲೇ ಮಾತನಾಡುತ್ತೇನೆ.

ಆ) ವಿಷಯ : ಹಕ್ಕು ಭಾದ್ಯತೆ ಸಮಿತಿಯ ಶಿಫಾರಸ್ಸನ್ನು ಅನುಷ್ಠಾನಗೊಳಿಸುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೆ, ನನಗೆ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ನಿಯಮ 274ರ ಕೆಳಗೆ ಹಕ್ಕು ಬಾಧ್ಯತಾ ಸಮಿತಿ ಸಭೆ ಒಂದು ವರದಿಯನ್ನು ಕೊಟ್ಟಿದೆ. ಸನ್ಮಾನ್ಯ ಜಯಪ್ರಕಾಶ್ ಹೆಗ್ಡೆಯವರ ಮೇಲೆ ಒಂದು ಪತ್ರಿಕೆ ರಾಜ್ಯಸಭೆ ಚುನಾವಣೆಯಲ್ಲಿ ಅವರು ನಲ್ವತ್ತು ಲಕ್ಷ ರೂಪಾಯಿ ಹಣ ತೆಗೆದುಕೊಂಡು ಕಾಂಗ್ರೆಸ್‌ನವರಿಗೆ

ಓಟು ಹಾಕಿದ್ದರೆ ಅಂತ ಹೇಳಿ, ಅದು ಹಕ್ಕುಚ್ಯುತಿ ಸಮಿತಿಯ ಮುಂದೆ ಹೋಗಿ ಸಮಿತಿ ಇವತ್ತು ಒಂದು ಶಿಫಾರಸ್ಸನ್ನು ಕೊಟ್ಟಿದೆ.

ಇದು ಟೇಬಲ್ ಆದ ತಕ್ಷಣ ನಾವು ಇಲ್ಲಿ ಎತ್ತಬೇಕಾಗಿತ್ತು. ಆ ಕರ್ತವ್ಯವನ್ನು ನಾವು ಮಾಡಲಿಲ್ಲವೆಂದು ವಿಷಾದಿಸಿ. ಈಗ ತಾವು ಅವಕಾಶ ಕೊಟ್ಟಿದ್ದೀರಿ ಎಂದು ತಿಳಿದುಕೊಂಡು.....

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಹಿರಿಯ ಸದಸ್ಯರಾದ ಮಾಧುಸ್ವಾಮಿಯವರು ಈ ವಿಷಯವನ್ನು ಸದನದಲ್ಲಿ ಮೂವ್ ಮಾಡಿದರೆ, ಇದು ಚರ್ಚೆ ಆಗಬೇಕಾಗುತ್ತೆ ಮತ್ತು ಒಂದು ಅಂತಿಮ ಘಟಕ್ಕೆ ಈ ಸದನದಲ್ಲಿ ಹೋಗಬೇಕಾಗುತ್ತೆ ನಾವು ಕೆಲವು ಸಂದರ್ಭದಲ್ಲಿ ಚರ್ಚೆ ಮಾಡಿದಹಾಗೆ, ಇದನ್ನು ಬೇರೆ ಕಡೆ ಇತ್ಯರ್ಥಗೊಳಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ, ನಾನು ಆ ಮಾಹಿತಿಯನ್ನು ತಮ್ಮ ಜೊತೆಗೆ ಹಂಚಿಕೆ ಮಾಡಿಕೊಳ್ಳುತ್ತೇನೆ. ಬೇಕಾದರೆ, ಅಧ್ಯಕ್ಷರ ಕೊಠಡಿಯಲ್ಲಿ ಇದರ ಬಗ್ಗೆ ಚರ್ಚೆ ಮಾಡೋಣ. ನೀವು ಇಲ್ಲಿ ಮೂವ್ ಮಾಡಿದರೆ, ಇದರ ಅಂತಿಮ ಘಟ್ಟಕ್ಕೆ ಇದೇ ಸದನದಲ್ಲಿ ಹೋಗಬೇಕಾಗುತ್ತದೆ. ಪ್ರಿವಿಲೇಜ್ ಕಮಿಟಿಯವರು ವರದಿ ಕೊಟ್ಟಮೇಲೆ, ಅದನ್ನು ಇಲ್ಲಿ ಚರ್ಚೆ ಮಾಡಿದ ಮೇಲೆ ನಾವು ಯಾರ ಮೇಲೆ ಶಿಕ್ಷೆ ಮಾಡಬೇಕಾಗುತ್ತದೋ ಆ ಅಂತಿಮ ಘಟ್ಟ ಸದನದಲ್ಲೇ ಮುಟ್ಟಬೇಕಾಗುತ್ತದೆ. ಆದ್ದರಿಂದ, ಈ ವಿಷಯದ ಬಗ್ಗೆ ಏನು ಮಾಡಬೇಕೆಂಬುದನ್ನು ನಿರ್ಧರಿಸಲು ಅಧ್ಯಕ್ಷರ ಕೊಠಡಿಯಲ್ಲಿ ಕೊಡೋಣ. ನಂತರ, ತಾವು ಈ ಸದನದಲ್ಲಿ ಎತ್ತಬಹುದು; ಮೂವ್ ಮಾಡಬಹುದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾವೇ, ಮಾಡಿದ ನಿಯಮ, ಇದರ ಬಗ್ಗೆ ಯಾವ ರೀತಿಯಲ್ಲಿ ಮಾಡಬಹುದೆಂಬುದನ್ನು ಸದನದಲ್ಲಿ ತೀರ್ಮಾನ ತೆಗೆದುಕೊಳ್ಳಬಹುದು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಸನ್ಮಾನ್ಯ ಸಂಸದೀಯ ವ್ಯವಹಾರ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಪ್ರಿವಿಲೇಜಸ್ ಕಮಿಟಿ ಏನಿದೆ, that is a creation of this House. ಎರಡೂ ಸದನಗಳ ಸದಸ್ಯರು ಆ ಸಮಿತಿಯಲ್ಲಿ ಕೆಲಸ ಮಾಡುತ್ತಾರೆ. ಈ ವಿಷಯವನ್ನು ಅಧ್ಯಕ್ಷರ ಅನುಮತಿ ಮೇರೆಗೆ ನಾವು ಸದನದಲ್ಲಿ ಪ್ರಸ್ತಾಪ ಮಾಡಿ, ಆ ಸಮಿತಿಯ ವ್ಯಾಪ್ತಿಗೆ ಕಳುಹಿಸಿದ ಮೇಲೆ, ಅವರು ಕೂಲಂಕುಷವಾಗಿ ಚರ್ಚೆ ಮಾಡಿ, ಎಲ್ಲಾ ವಿಚಾರಗಳನ್ನು ಗಣನೆಗೆ ತೆಗೆದುಕೊಂಡು, ತಮ್ಮ ಶಿಫಾರಸ್ಸುಗಳನ್ನು ಅಖೈರು ಮಾಡಿ, ಪುನಃ ವರದಿಯನ್ನು ಸದನಕ್ಕೆ ಒಪ್ಪಿಸಿದ್ದಾರೆ. ಈಗ ನಮಗೆ ತಿಳಿದಹಾಗೆ ಅವರ ಪ್ರಯತ್ನ, ವರದಿಯನ್ನು ಹಾಗೆಯೇ ಇಟ್ಟುಬಿಡತಕ್ಕಂಥಾದ್ದು ಬೇಡ. ಆ ವರದಿಯ ಮೇಲೆ ಮುಂದಿನ ಕ್ರಮ ಜರುಗಿಸಬೇಕೆಂದು ಸಭಾಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳಲು ಅವರು ನಿಂತಿದ್ದಾರೆ. ಈ ವರದಿ ಮೇಲೆ ಚರ್ಚೆ ಮಾಡಬೇಕೆಂಬ ಉದ್ದೇಶ ಅವರಿಗೂ ಇಲ್ಲ, ನಮಗೂ ಇಲ್ಲ, ಆ ವರದಿ ಏನಿದೆ, ಅದು ಕೂಲಂಕುಷವಾಗಿದೆ, ಸಮಗ್ರವಾಗಿದೆ, ಆದರೆ, ಆ ವರದಿ ಅನುಷ್ಠಾನಕ್ಕೆ ಬರಬೇಕು. ಆ ಶಿಫಾರಸ್ಸುಗಳೇನಿವೆ, ಆ ಶಿಫಾರಸ್ಸುಗಳು ಅನುಷ್ಠಾನಕ್ಕೆ ಬಂದಾಗ.......

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಹೇಳಿದ್ದರು ಸರಿ, ನಾನು ವರದಿಯನ್ನು ಡಿಸ್‌ಪ್ಯೂಟ್ ಮಾಡಲಿಕ್ಕೆ ನಿಂತಿಲ್ಲ.

SRI K.R. RAMESH KUMAR : If the recommendation of the Committee remain unimplemented. we may reach a stage where people will have no respect for these Committees. such an eventually should not arise. ನೀವು ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ವರದಿಯನ್ನು ಯಾವುದೇ ಕಾರಣಕ್ಕೆ ಡಿಸ್‌ಪ್ಯೂಟ್ ಮಾಡುವುದಿಲ್ಲ. ಪ್ರಿವಿಲೇಜ್ ಕಮಿಟಿ ಏನೇನು ಶಿಫಾರಸ್ಸುಗಳನ್ನು ಕೊಟ್ಟಿದೆ ಅವುಗಳನ್ನು ನಾವು ಒಪ್ಪುತ್ತೇವೆ. ಕೊನೇ ಪ್ಯಾರದಲ್ಲಿ ಏನು ಹೇಳಿದ್ದಾರೆ, ಅಷ್ಟಕ್ಕೆ ಮಾತ್ರ ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

"ಮುಂದಿನ ವಿಧಾನ ಸಭಾ ಅಧಿವೇಶನ ನಡೆಯುವಾಗ ವಿಜಯ ಕಿರಣ ಪತ್ರಿಕೆಯ ಮಾಲೀಕರು, ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರವರನ್ನು ಸದನಕ್ಕೆ ಕರೆಸಿ, ಅಸತ್ಯವಾದ ಸುದ್ದಿ ಪ್ರಕಟಣೆ ಮಾಡಿ ಸ್ವಲ್ಪ ಪ್ರಕಟಣೆ ಮಾಡಿ ಒಬ್ಬ ವ್ಯಕ್ತಿಯ ಗೌರವ ಮತ್ತು ಘನತೆಗೆ ತಂದಿದ್ದಕ್ಕೆ ವಾಗ್ದಂಡನೆ ವಿಧಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ" ಎಂದು ಅವರು ಶಿಫಾರಸ್ಸು ಮಾಡಿದ್ದಾರೆ.

ಆ ಕೆಲಸವನ್ನು ದಯಮಾಡಿ ತಾವು ಮಾಡಿಸಿಕೊಡಬೇಕು..

ಶ್ರೀ ಕೆ.ಆರ್ ರಮೇಶ್ ಕುಮಾರ್ : ನಾನೂ ಏನು ಸಲಹೆ ಮಾಡುತ್ತೇನೆಂದರೆ, ಅವರೂ ಒಪ್ಪಿಕೊಳ್ಳುವುದಾದರೆ, ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅದು ಯಾವುದೋ ಒಂದು ಅಂತಹ ದೊಡ್ಡ ಹೆಸರಾಂತ ಪತ್ರಿಕೆ ಏನಲ್ಲ. ಅವರನ್ನು ಈ ಸದನಕ್ಕೆ ಕರೆಸಿ, ಇಲ್ಲಿ ವಾಗ್ದಾಂಡನೆ ಮಾಡಿ, ಪೋಡ್‌ನ್ ಜೋಸೆಫ್‌ರವರಿಗೆ, ಮತ್ತು ಅವರಿಗೆ ಇವರಿಗೆ ಕೊಟ್ಟಂಥ ಗೌರವ ಕೊಡುವುದು ಬೇಡ. ಆ ರೀತಿ ಕೌನ್ಸಿಲ್‌ನಲ್ಲಿ ಮಾಡಿದ್ದರು. ತಾವು, ಅವರನ್ನು ತಮ್ಮ ಕಛೇರಿಗೆ ಕರೆಸಿ, ಏನು ಹೇಳಬೇಕೋ ಅದನ್ನು ಹೇಳಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವು ಈ ಕಡೆಯಿಂದ ತಮಗೇ ಅಧಿಕಾರ ಕೊಟ್ಟುಬಿಡುತ್ತೇವೆ. ಈ ವರದಿಯಲ್ಲಿ ಈ ರೀತಿ ಶಿಫಾರಸ್ಸು ಮಾಡಿದ ಮೇಲೆ, ಈ ವರದಿ ಹಾಗೆಯೇ ಸತ್ತುಹೋಗಬಾರದು. ತಾವು ಸೂಕ್ತವಾದ ನಿರ್ಧಾರ ತೆಗೆದುಕೊಳ್ಳಬೇಕು. ಇಲ್ಲಿಯೇ ಕರೆಸಬೇಕೆಂದು ನಾನೂ ಕೂಡ ಇನ್‌ಸಿಸ್ಟ್ ಮಾಡುವುದಿಲ್ಲ. ಎಲ್ಲಾದರೂ ಒಂದು ಕಡೆ ಕರೆಸಿ ಒಂದು ಜವಾಬ್ದಾರಿಯನ್ನು ತಾವು ಫಿಕ್ಸ್ ಮಾಡಬೇಕೆಂದು ನಮ್ಮ ಮನವಿ ಒಂದು ಕಮಿಟಿ ಮಾಡಿ, ಅದಕ್ಕೆ ಪ್ರಿವಿಲೇಜ್ ಎಂದು ರೆಫರ್ ಮಾಡಿ, ಅವರು ಈ ತರಹ ವರದಿ ಕೊಟ್ಟಾಗ ಕೂಡ ನಾವು ಏನೂ ಮಾಡಲಿಲ್ಲವೆಂದರೆ, ಏನೋ ಆಗುತ್ತಾ ಇರುತ್ತವೆ, ಹೋಗುತ್ತಾ ಇರುತ್ತವೆ ಎನ್ನುವ ಭಾವನೆ ಬರಬಾರದು. ತಮಗೆ ಅಧಿಕಾರ ಇದೆ, ಈ ಶಿಫಾರಸ್ಸಿನ ಮೇಲೆ ತಾವು ಸೂಕ್ತವಾದ ಕ್ರಮವನ್ನು ಜರುಗಿಸಬೇಕು. ತಮ್ಮ ಕೊಠಡಿಯಲ್ಲೇ ಕರೆಸಿ ಮಾಡುವುದರಲ್ಲಿ ನನ್ನದೇನೂ ತಕರಾರು ಇಲ್ಲ.

ಅಧ್ಯಕ್ಷರು : ಮಾನ್ಯ ರಮೇಶ್ ಕುಮಾರ್‌ರವರು ಸಲಹೆ ಮಾಡಿದ ರೀತಿಯಲ್ಲಿ ನಮ್ಮ ಕೊಠಡಿಗೆ ಕರೆಸಿ ಏನು ಮಾಡಬೇಕೋ ಆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆಗಬಹುದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇಂಥಾದ್ದನ್ನು ನಾನು ಧೈರ್ಯವಾಗಿ ಹಾಕಿದ್ದೇನೆ. ಇದು. ಈ ಸದನದ ಉಳಿದ ಶಾಸಕರ ಮೇಲೆ ಇಂತಹ ಆಪಾದನೆ ಮಾಡಿ ಅವರು ತಪ್ಪಿಹೋಗಬಾರದು. ಯಾವುದಾದರೊಬ್ಬ ವ್ಯಕ್ತಿ. ಅವನ ಹತ್ತಿರ ಆಧಾರ ಇದ್ದು, ಅವರು ಆಪಾದನೆಯನ್ನು ಮಾಡುವಂತಾದ್ದು ಆಗಬಾರದು. ಹಾಗಾದರೆ, ನಾವು ಈ ಸದನದಲ್ಲಿ ಮರ್ಯಾದೆಯಿಂದ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರ, ನಾನು ತಮಗೆ ಈ ಒಂದು ಹಕ್ಕುಬಾಧ್ಯತೆಯನ್ನು ಮೂವ್ ಮಾಡಿದ್ದಂಥಾದ್ದು, ಇದು ಅನ್ಯಾಯ ಆಗುತ್ತದೆ. ಇದು ಕೇವಲ ನನ್ನದಲ್ಲ, ನಮ್ಮ ಕುಟುಂಬದವರ

ಮೇಲೂ ಪರಿಣಾಮವಾಗುತ್ತದೆ. ನಾನೊಬ್ಬ ಭ್ರಷ್ಟ ಶಾಸಕನಾಗಿ ಈ ಸದನದಲ್ಲಿ ಕೆಲಸ ಮಾಡಲಿಕ್ಕೆ ಏನೂ ಹಕ್ಕು ಇರುವುದಿಲ್ಲ. ನಾನು ಮರ್ಯಾದೆಯಲ್ಲಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ನನ್ನ ಕ್ಷೇತ್ರದ ಜನತೆ ನನ್ನ ಮೇಲೆ ಏನು ವಿಶ್ವಾಸವನ್ನು ಇಟ್ಟುಕೊಂಡಿದ್ದಾರೆ. ಅದನ್ನು ಉಳಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಇಂತಹ ಪತ್ರಿಕೆಗಳ ಬಗ್ಗೆ ಒಂದು ಹಿಡಿತ ಬೇಕು. ಇಂತಹ ಪತ್ರಿಕೆಗಳ ಮೇಲೆ ಹಿಡಿತ ಇಲ್ಲದೇ ಇದ್ದರೆ ಎಲ್ಲರ ಮೇಲೂ ಬರುತ್ತದೆ. ಇನ್ನೂ ಕೆಲವು ಪತ್ರಿಕೆಗಳನ್ನು ನಾವು ನೋಡಿದ್ದೇವೆ. ಇಂತಹ ಪತ್ರಿಕೆಗಳ ಮೇಲೆ ಕಡಿವಾಣವನ್ನು ಹಾಕುವ ಪ್ರಯತ್ನ ಈ ಸದನದಲ್ಲಿ ನಡೆಯದಿದ್ದರೆ ಕಷ್ಟವಾಗುತ್ತದೆ ಪ್ರಾಯಶಃ ನಾವು ಒಳ್ಳೆಯ ಪತ್ರಿಕೆಗಳ ಬಗ್ಗೆ ಚರ್ಚೆ ಮಾಡುತ್ತಾ ಇಲ್ಲ. ಅವರ ಬಗ್ಗೆ ನಾವು ಯಾವ ಆಪಾದನೆಯನ್ನು ಮಾಡುವುದಿಲ್ಲ. ಆದರೆ, ಈ ಪತ್ರಿಕೆಯವರು ನನ್ನ ಮೇಲೆ ಮಾಡಿರುವ ಆಪಾದನೆ ಸರಿ ಇಲ್ಲ ಆದ್ದರಿಂದ, ಹಕ್ಕು ಬಾಧ್ಯತಾ ಸಮಿತಿಯವರು ತನಿಖೆ ಮಾಡಿ ವರದಿಯನ್ನು ಕೊಟ್ಟಿರುವಂಥಾದ್ದು, ತಾವೇನು ತೀರ್ಮಾನವನ್ನು ತೆಗೆದುಕೊಳ್ಳುತ್ತೀರಿ, ಅದಕ್ಕೆ ನಾನು ಬದ್ಧನಾಗಿರುತ್ತೇನೆ.

ಇ) ವಿಷಯ : ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೆಳೆ ಖರೀದಿಯನ್ನು ಬಾಂದ್ ಮಾಡಿರುವ ಬಗ್ಗೆ

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೆಳೆಗಾರರು ಬಹಳ ಹೆಚ್ಚು. ಇಡೀ ದೇಶದಲ್ಲಿಯೇ ತೊಗರಿ ಬೆಳೆಯುವವರಲ್ಲಿ ಬಹಳ ಪ್ರಮುಖ ಜಿಲ್ಲೆ. ಅಲ್ಲಿ ಪ್ರಗತಿ ಎಕರೆಗೆ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ತೊಗರಿ ಬೆಳೆಯಯುತ್ತಾರೆ. ಈ ವರ್ಷ ಕೂಡ ಬೆಳೆದಿದ್ದಾರೆ. ಆದರೆ, ಈ ಬೆಳೆ ಬಜಾರ್‌ಗೆ ಬಂದಕೂಡಲೇ, ಅದರ ರೇಟ್ ಡೌನ್ ಆಗಿಬಿಡುತ್ತದೆ. ಈ ವರ್ಷ ಕೂಡ, ಅವರು ಎಷ್ಟು ಖರ್ಚುಮಾಡಿದ್ದಾರೆ, ಅದಕ್ಕಿಂತ ಕಡಿಮೆ ಬಜಾರ್‌ನಲ್ಲಿ ಸಿಕ್ಕುತ್ತಾ ಇದೆ. ಸರ್ಕಾರದವರು ತೊಗರಿ ಬೆಳೆ ಬೋರ್ಡ್ ಎಂದು ಮಾಡಿದ್ದಾರೆ. ಅವರು, ಈ ತೊಗರಿ ಖರೀದಿಯನ್ನು ಶುರು ಮಾಡಿದ್ದರು. ಕಳೆದ 4-5 ದಿವಸಗಳಲ್ಲಿ ಸ್ವಲ್ಪ ಖರೀದಿ ಮಾಡಿದರು. ಆದರೆ, ಈಗ ಏಕಾಏಕಿ ಖರೀದಿಯನ್ನು ಬಂದ ಮಾಡಿದ್ದಾರೆ. ಮಾರ್ಕೆಟಿನಲ್ಲಿ ಅವರು ಖರ್ಚು ಮಾಡಿರುವ ದುಡ್ಡು ಇವತ್ತು ರೈತರಿಗೆ ಸಿಕ್ಕುತ್ತಾ ಇಲ್ಲ. ಆ ದೃಷ್ಟಿಯಿಂದ ಸರ್ಕಾರ ಮಾರ್ಕೆಟಿಗೆ ಪ್ರವೇಶ ಮಾಡಬೇಕು. ಇದು ಒಂದೇ ಅಲ್ಲ, ಇವತ್ತು ಕಾಟನ್ ಕಾರ್ಪೋರೇಷನ್ ಆಫ್ ಇಂಡಿಯಾದವರು ಮಾರ್ಕೆಟಿನಲ್ಲಿ ಬಂಥನಂತರ ಹತ್ತಿಗೆ ರೇಟ್ ಸಿಗುತ್ತದೆ. ಇಂತಹ ಕೆಲವೊಂದು ಸಂದರ್ಭಗಳಲ್ಲಿ ಸರ್ಕಾರ ಮುಂದೆ ಬರಬೇಕಾಗುತ್ತದೆ. ಇವತ್ತು ಬೋರ್ಡ್ ಮಾಡಿದ್ದಾರೆ, ಆ ಬೋರ್ಡ್‌ಗೆ ಇವತ್ತು ಹಣದ ಕೊರತೆಯೋ ಏನೋ ಗೊತ್ತಿಲ್ಲ. ಏಕಾಏಕಿ ನಿನ್ನೆ ಪೋನ್ ಮಾಡಿ ಖರೀದಿ ಮಾಡಬಾರದು ಎಂದು ಹೇಳಿದ್ದಾರೆ. ಮೊನ್ನೆ ಒಂದು ಫೋನ್ ಮಾಡಿ ಆದೇಶ ಕೊಟ್ಟರು, ಟಿ ಎ ಸಿ ಸಿ ಎಂ ಎಸ್ ಗಳಿಗೆ, ತಾಲ್ಲೂಕಾ ಮಾರ್ಕೆಟಿಂಗ್ ಕಮಿಟಿಗಳಲ್ಲಿ ಏನು ಖರೀದಿ ಮಾಡುತ್ತಿದ್ದಾರೆ, ಪ್ರತಿ ದಿವಸ 50 ಚೀಲ ಮಾತ್ರ ಖರೀದಿ ಮಾಡಿ, 50 ಕ್ವಿಂಟಾಲ್ ಮಾತ್ರ ಖರೀದಿ ಮಾಡಿ ಎಂದು ಹೇಳಿದ್ದಾರೆ. ನಿನ್ನೆ ಮತ್ತೆ ಇನ್ನೊಂದು ಆದೇಶ ಕೊಟ್ಟಿದ್ದಾರೆ. ಖರೀದಿಯನ್ನೇ ಮಾಡಬೇಡಿ ಎಂದು ಹೇಳಿದ್ದಾರೆ. ಅಂದರೆ, ಸರ್ಕಾರದಲ್ಲಿ ಹಣ ಇಲ್ಲವೇ ಅಥವಾ ವ್ಯಾಪಾರಿಗಳಿಗೆ ಲಾಭ ಮಾಡಬೇಕು, ರೈತರಿಗೆ ಶೋಷಣೆ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕಿದೆಯೋ ಗೊತ್ತಿಲ್ಲ. ಇದನ್ನು ಸ್ಪಷ್ಟಪಡಿಸಬೇಕೆಂದು ತಮ್ಮ ಮುಖಾಂತರ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಅಧ್ಯಕ್ಷರೆ. ಮಾನ್ಯ ವೈಜನಾಥ ಪಾಟೀಲರು ಬಹಳ ಮಹತ್ವದ ಪ್ರಶ್ನೆಯನ್ನು ಎತ್ತಿದ್ದಾರೆ. ನಮ್ಮ ಕಡೆ ತೊಗರಿ ಬೆಳೆ ಹೆಚ್ಚು ಮತ್ತು ಅದು ಕಮರ್ಷಿಯಲ್ ಕ್ರಾಪ್. ಅಲ್ಲಿ 5 ಕೋಟಿ ರೂಪಾಯಿ ಇತ್ತು. ಮಾರ್ಕೆಟ್ ಇಂಟರ್‌ವೆನ್‌ಷನ್ ಆದರೆ, ದಳ್ಳಾಳಿಗಳ ಹಾವಳಿ ಸ್ವಲ್ಪ ನಿಲ್ಲುತ್ತದೆ. ಎರಡು ಸಾವಿರ ರೇಟ್ ಬೇಕೆಂಬುದು ರೈತರ ಅಭಿಪ್ರಾಯ. ಆದರೂ ಕೂಡ 1,740 ರೂಪಾಯಿಗಳಿಗೆ ಮುಟ್ಟಿದೆ; ವೈಜನಾಥ ಪಾಟೀಲರು ಹೇಳುತ್ತಿದ್ದಾರೆ, ಮಾರ್ಕೆಟ್ ಇಂಟರ್‌ವೆನ್‌ಷನ್‌ಗೆ ಹಣ ಕಡಿಮೆ ಇದ್ದರೆ, ಇವತ್ತೇ ಮತ್ತೆ ಹಣ ಬಿಡುಗಡೆ ಮಾಡತಕ್ಕ ವ್ಯವಸ್ಥೆಯನ್ನು ಮಾಡಿ, ಅವರಿಗೆ ಹೆಚ್ಚಿನ ಸಹಾಯ ಮಾಡತಕ್ಕ ರೀತಿಯಲ್ಲಿ ಸರ್ಕಾರ ವ್ಯವಸ್ಥೆ ಮಾಡುತ್ತದೆ. ಅಲ್ಲಿ ಗ್ರೇಡ್ ಒನ್ ಅಂಡ್ ಟು ಅಂತ ಮಾಡಿದ್ದಾರೆ. ಗ್ರೇಡ್ ಒಂದರಲ್ಲಿ ಖರೀದಿಯೇ ಮಾಡುವುದಿಲ್ಲ. ಕಾರಣ ಏನೆಂದರೆ ಅದು ಕಡ್ಲಿಗೆ ಯಾವ ಚನ್ನಿ ಉಪಯೋಗ ಮಾಡುತ್ತಿದ್ದರೋ ಅದೇ ಸಲುವಾಗಿ ತೊಗರಿಗೂ ಉಪಯೋಗ ಮಾಡುತ್ತಿದ್ದಾರೆ. ಆ ದೃಷ್ಟಿಯಿಂದ ಅಲ್ಲಿಯೂ ಕೂಡ ಏನು ಡಿಫರೆನ್ಸ್ ಬರುತ್ತಿದೆ ಅದನ್ನು ಸರ್ಕಾರ ಸರಿಪಡಿಸಬೇಕು ಮತ್ತೆ ನಾಳೆಯಿಂದ ಬಜಾರಿಗೆ ಎಷ್ಟು ಬರುತ್ತದೆಯೋ, ಮಾರ್ಕೆಟಿಂಗ್ ಕಮಿಟಿಗೆ ಬರುತ್ತದೆಯೋ, ಟಿ ಎ ಪಿ ಎಂ ಸಿ ಗೆ ಬರುತ್ತದೆಯೋ ಅಲ್ಲಿ ಹೆಚ್ಚು ಖರೀದಿ ಮಾಡಬೇಕು ಟಿ ಎ ಪಿ ಎಂ ಸಿ ಯವರು ಮಾರ್ಕೆಟ್ ಕೊಡಬೇಕು. ಅವರು ಅಲ್ಲಿ ಹೋಗಿ ಬಿಡ್ಡಿಂಗ್ ಮಾಡಬೇಕು ಇದರಿಂದ ಸ್ವಲ್ಪ ರೇಟ್ ಬರಬಹುದು ರೈತರಿಗೆ ಇದರಿಂದ ಕಾಂಪಿಟೇಶನ್ ಹೆಚ್ಚು ಆಗಬಹುದು. ಎಂದು ನಾನು ಸರ್ಕಾರಕ್ಕೆ ಹೇಳುತ್ತೇನೆ.

ಅಧ್ಯಕ್ಷರು : ಉತ್ತರ ಕೊಟ್ಟಿದ್ದಾರಲ್ಲಾ.

ಈ) ವಿಷಯ : ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ನೀರಾವರಿ ಯೋಜನೆಗಳು ಆಗದೇ ಇರುವುದರಿಂದ ರೈತರು ಧರಣಿ ಸತ್ಯಾಗ್ರಹ ಪ್ರಾರಂಭಿಸುವ ಬಗ್ಗೆ

ಶ್ರೀ ಗೋವಿಂದ ಎಂ, ಕಾರಜೋಳ್ (ಮುದೋಳ್) : ಮಾನ್ಯ ಅಧ್ಯಕ್ಷರೆ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಕೃಷ್ಣಾ ಕಣಿವೆಯಿಂದ (ಎ) ಸ್ಕೀಮ್‌ನಲ್ಲಿ ಏನು ನೀರು ಹಂಚಿಕೆಯಾಗಿದೆ ಆ ಹಂಚಿಕೆಯಾದಂತಹ ನೀರಿನಲ್ಲಿ ಆಗಬೇಕಾದಂತಹ ಯೋಜನೆಗಳು ಇದುವರೆಗೂ ಕಾರ್ಯಗತವಾಗಿಲ್ಲ. ಆ ಕಾರಣಕ್ಕಾಗಿ ಇವತ್ತು 11 ತಾಲ್ಲೂಕಿನಲ್ಲಿ ರೈತರು ಧರಣಿ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದ್ದಾರೆ, ಮತ್ತ ಸಂಸದರ ನೇತೃತ್ವದಲ್ಲಿ, ಶಾಸಕರ ನೇತೃತ್ವದಲ್ಲಿ ಪಾದಯಾತ್ರಯ್ನು ಪ್ರಾರಂಭ ಮಾಡಿದ್ದಾರೆ. ಅದಕ್ಕಾಗಿ ನಾನು ಇವತ್ತು ಸರ್ಕಾರಕ್ಕೆ ಒಂದು ವಿವರವಾದ ಮಾಹಿತಿಯನ್ನು ಕೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಏನು ಯೋಜನೆಗಳು ಬರುತ್ತವೆ, ಕೃಷ್ಣಾ ಮೇಲ್ಕಂಡೆ ಯೋಜನೆ ಮತ್ತು ಕೃಷ್ಣಾ ಕಣಿವೆ ಯೋಜನೆಗಳ ಬಗ್ಗೆ ಬಚಾವತ್ ತೀರ್ಪಿನ ಪ್ರಕಾರ 734 ಟಿ, ಎಂ, ಸಿ, ಯಷ್ಟು ನೀರು ಹಂಚಿಕೆಯಾಗಿತ್ತು ಅದರಲ್ಲಿ 5 ಟಿ, ಎಂ, ಸಿ, ಯಷ್ಟು ನೀರನ್ನು ಮದ್ರಾಸ್‌ಗೆ ಕುಡಿಯುವ ನೀರಿಗೋಸ್ಕರ ಬಿಟ್ಟು ಕೊಟ್ಟೆವು. ಉಳಿದ 729 ಟಿ ಎಂ ಸಿ ಯಲ್ಲಿ 173 ಟಿ ಎಂ ಸಿ ಯಷ್ಟು ನೀರನ್ನು ಕೃಷ್ಣಾ ಮೇಲ್ದಂಡೆ ಯೋಜನೆಯ ಏತ ನೀರಾವರಿ ಮತ್ತು ಗ್ರ್ಯಾವಿಟಿ ಮುಖಾಂತರ ಮತ್ತು ಕೆನಾಲ್ ಮುಖಾಂತರ ನೀರಾವರಿ ಮಾಡತಕ್ಕಂಥ ಯೋಜನೆಗಳಿಗೆ ಹಂಚಿಕೆಯಾಯಿತು. ಈ ಯೋಜನೆಯನ್ನು 2000ದ ಮೇ 31ರೊಳಗಾಗಿ ಮುಗಿಸಬೇಕಾಗಿತ್ತು. ಆದರೆ ಇದುವರೆವಿಗೂ ಯೋಜನೆಗಳು ಪೂರ್ತಿಯಾಗಿಲ್ಲ. ನಮಗೆ ಹಂಚಿಕೆಯಾದಂತಹ ನೀರು ಏನು 173 ಟಿ ಎಂ ಸಿ ಇದೆ ಅದರೆ ಬಳಕೆಯಾಗಿಲ್ಲ. 173 ಟಿ ಎಂ ಸಿ ನೀರನ್ನು ಉಪಯೋಗಿಸಿ 6 ಲಕ್ಷ 22 ಸಾವಿರ ಹೆಕ್ಟೇರ್ ಭೂಮಿಗೆ ಇವತ್ತು ನೀರಾವರಿ ಮಾಡಬೇಕಾಗಿತ್ತು.

ಆದರೆ ಸರ್ಕಾರ ಇದುವರೆವಿಗೂ ಕೇವಲ 4 ಲಕ್ಷ 67 ಸಾವಿರ ಹೆಕ್ಟೇರ್‌ಗೆ ನೀರನ್ನು ಒದಗಿಸುವುದಕ್ಕೆ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಅದರಲ್ಲೂ ವಿಶೇಷವಾಗಿ ಯಾರು ಈ ರಾಷ್ಟ್ರಕ್ಕಾಗಿ ಈ ರಾಜ್ಯಕ್ಕಾಗಿ ತಮ್ಮ ಹೊಲ, ನೆಲ. ಮನೆ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ ನಿರ್ಗತಿಕರಾಗಿದ್ದಾರೆ ಅಂತಹವರ ಬಗ್ಗೆ ಸರ್ಕಾರ ಕಾಳಜಿ ಮಾಡಿಲ್ಲ, ಕಳಕಳಿಯನ್ನು ತೋರಿಸಿಲ್ಲ ಸನ್ಮಾನ್ಯ ಅಧ್ಯಕ್ಷರೇ, ದೇಶದಲ್ಲಿಯೇ ಇದೊಂದು ದೊಡ್ಡ ಯೋಜನೆ 173 ಹಳ್ಳಿಗಳು ಮುಳಗಡೆಯಾಗಿ 3 ಲಕ್ಷ 50 ಸಾವಿರ ಹೆಕ್ಟೇರ್ ಭೂಮಿ ಕಳೆದುಕೊಂಡಂತಹ ಜನ ಇವತ್ತು ಬೀದಿ ಮೇಲೆ ತುತ್ತು ಕೂಳಿಗಾಗಿ ಅಲೆಯುವಂತಹ ಪರಿಸ್ಥಿತಿ ಬಂದಿದೆ. ಸನ್ಮಾನ್ಯ ಅಧ್ಯಕ್ಷರೆ ನಾನು ಕೇಳುತ್ತೇನೆ ಎ ಸ್ಕೀಮ್‌ನಲ್ಲಿ ಹಂಚಿಕೆಯಾದಂತಹ ನೀರಿನಲ್ಲಿ ಅದರಲ್ಲೂ ವಿಶೇಷವಾಗಿ ಅಖಂಡ ಬಿಜಾಪುರ ಜಿಲ್ಲೆಯಲ್ಲಿ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಏತ ನೀರಾವರಿಗಳ ಮೂಲಕ ಇವತ್ತು ನೀರಾವರಿಯಾಗಬೇಕಾಗಿತ್ತು 2005ನೇ ಇಸವಿಗೆ ಬಂದರೂ ಕೂಡ ಒಂದೇ ಒಂದು ಹೆಕ್ಟೇರ್‌ಗೆ ನೀರು ಕೊಡಲಿಕ್ಕೆ ಸರ್ಕಾರಕ್ಕೆ ಆಗಿಲ್ಲ.

ಅಧ್ಯಕ್ಷರು : ನೀವು ಬೇಗ ಮುಗಿಸುತ್ತೇನೆಂದು ಹೇಳಿ ಭಾಷಣ ಮಾಡುವುದಕ್ಕೆ ಶುರು ಮಾಡಿಬಿಟ್ಟಿರಿ.

ಶ್ರೀ ಗೋವಿಂದ ಎಂ, ಕಾರಜೋಳ್ : ಮಾನ್ಯ ಅಧ್ಯಕ್ಷರೇ ಒಂದು ಹೆಕ್ಟೇರ್‌ಗೂ ನೀರು ಕೊಡಲಿಕ್ಕೆ ಆಗಲಿಲ್ಲ ಸಾರ್, ದಯಮಾಡಿ ತಾವು ತಿಳಿದುಕೊಳ್ಳಿ.

ಅಧ್ಯಕ್ಷರು : ತಾವು ಪ್ರಸ್ತಾಪ ಮಾಡಿದಿರಿ, ಅದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ಗೋವಿಂದ ಎಂ ಕಾರಜೋಳ್ : ಇವತ್ತು ಪ್ರಸ್ತಾಪ ಮಾಡಿದ್ದೇನೆ,

ಅಧ್ಯಕ್ಷರು : ಈಗ ವಿವರ ಹೇಳುವುದಕ್ಕೆ ಇದು ಸಮಯವಲ್ಲ. ಇನ್ನೂ ಅನೇಕ ಜನ ಮಾನ್ಯ ಸದಸ್ಯರು ಕಾದಿದ್ದಾರೆ.

ಶ್ರೀ ಗೋವಿಂದ ಎಂ ಕಾರಜೋಳ್ : ನಾನು ಸ್ವಲ್ಪ ವಿವರಕ್ಕೆ ಹೋಗುತ್ತೇನೆ.

ಅಧ್ಯಕ್ಷರು : ವಿವರ ಬೇಡ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ತಾವು ಹೇಳಿ.

ಶ್ರೀ ಗೋವಿಂದ ಎಂ ಕಾರ್‌ಜೋಳ್ : ಮಾನ್ಯ ಅಧ್ಯಕ್ಷರೇ, ನಾನು ವಿವರಕ್ಕೆ ಇನ್ನೂ ಹೋಗಿಲ್ಲ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕರೆ, ಇದರ ಬಗ್ಗೆ ಪ್ರಸ್ತಾವನೆಯನ್ನು ನಾವೂ ಸಹ ಕಳುಹಿಸಿದ್ದೇವೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಅವರು ಹೇಳುವುದಕ್ಕೆ ನಮ್ಮದೇನೂ ತಕರಾರು ಇಲ್ಲ.

ಅಧ್ಯಕ್ಷರು : ಮಾನ್ಯ ಕಾರ್‌ಜೋಳ್‌ರವರೆ, ಈ ಶೂನ್ಯವೇಳೆಯಲ್ಲಿ ತಾವು ಈ ಎಲ್ಲಾ ವಿವರಗಳನ್ನು ಹೇಳುವುದಕ್ಕೆ ಆಗುವುದಿಲ್ಲ. ತಾವು ಈಗ ಏನು ಪ್ರಸ್ತಾಪ ಮಾಡಿದ್ದೀರಿ ಅದಕ್ಕೆ ಸರ್ಕಾರದವರು ಏನು ಉತ್ತರ ಕೊಡುತ್ತಾರೆ ಎನ್ನುವುದನ್ನು ನೋಡಿ. ತಾವು ಸಹಕರಿಸಬೇಕು.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮುದ್ದೇಬಿಹಾಳಕ್ಕೆ ಹೋಗುವ ನೀರೆಲ್ಲಾ ಏತ ನೀರಾವರಿಯಿಂದಲೇ.

MR. SPEAKER : This is not the time. ಇದು ಸಮಯವಲ್ಲ. ಇನ್ನೂ ಬಹಳ ಜನ ಕಾದಿದ್ದಾರೆ. ವಿವರ ಹೇಳುವುದಕ್ಕೆ ಅವಕಾಶ ಇಲ್ಲ. ನಾನು ಮಾನ್ಯ ಸದಸ್ಯರಲ್ಲಿ ವಿನಂತಿ

ಮಾಡಿಕೊಳ್ಳುವುದೇನೆಂದರೆ ಶೂನ್ಯ ವೇಳೆಯಲ್ಲಿ ಏನು ಪ್ರಸ್ತಾಪ ಮಾಡುತ್ತೀರಿ ಅದು ಸಂಕ್ಷಿಪ್ತವಾಗಿರಬೇಕು. ಅಲ್ಲಿ ವಿವರಗಳನ್ನು ಹೇಳುವುದಕ್ಕೆ ಹೋದರೆ ನಾನು ಅದಕ್ಕೆ ಅವಕಾಶ ಕೊಡುವುದಿಲ್ಲ. ಹಿರಿಯ ಸದಸ್ಯರುಗಳೇ ಈ ರೀತಿ ಮಾಡಿದರೆ ಇನ್ನು ಅವರು ಏನು ಮಾಡುತ್ತಾರಲ್ಲ? ತಮ್ಮಂತೆ ಹಿಂದಿನ ಸಾಲಿನ ಸದಸ್ಯರೂ ಸಹ ಮಾಡುತ್ತಾರೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕರೆ, ಮಾನ್ಯ ಕಾರ್‌ಜೋಳ್‌ರವರಲ್ಲಿ ನಾನು ವಿನಂತಿ ಮಾಡುತ್ತೇನೆ. ಯಾವುದು ಕೆಲಸ ಆಗಿಲ್ಲ ಅದನ್ನು ನೇರವಾಗಿ ಹೇಳಿ. ಆದರೆ ಜನರಲೈಜ್ ಮಾಡಿ ಹೇಳುವುದು ಬೇಡ.

ಶ್ರೀ ಗೋವಿಂದ ಎಂ ಕಾರ್‌ಜೋಳ್ : ಜನರಲೈಜ್ ಮಾಡುವುದಿಲ್ಲ ನಾನು ಡಿಮ್ಯಾಂಡ್ ಹೇಳುತ್ತೇನೆ,

ಶ್ರೀ ಹೆಚ್.ಕೆ. ಪಾಟೀಲ್ : ಡಿಮ್ಯಾಂಡ್ ಹೇಳಿ ಬೇಡ ಎಂದು ಹೇಳುವುದಿಲ್ಲ. ಆಮೇಲೆ ಮಾನ್ಯ ಮುಖ್ಯಮಂತ್ರಿಗಳು ಸಭೆ ಕರೆದಿದ್ದಾರೆ ಎನ್ನುವಂತಹ ಮಾತನ್ನೂ ಸಹ ತಾವು ಹೇಳಿದಿರಿ. ಆಗಿದ್ದರೆ ಚರ್ಚೆಯನ್ನು ಅಲ್ಲಿ ಮಾಡೋಣ. ಇಲ್ಲದಿದ್ದರೆ ಇದೇ ವಿಷಯದ ಮೇಲೆ ಚರ್ಚೆ ಮಾಡುವುದಾದರೆ ಯಾವುದಾದರೊಂದು ರೂಪದಲ್ಲಿ ತೆಗೆದುಕೊಂಡು ಬನ್ನಿ. ಇಲ್ಲದೇ ಹೋದರೆ ಶೂನ್ಯ ವೇಳೆಯಲ್ಲಿ ಬಹಳ ಮಹತ್ವದ ವಿಚಾರ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಇದು ರಾಜ್ಯದ ಅತ್ಯಂತ ಗಂಭೀರವಾಗಿರತಕ್ಕಂಥ ವಿಚಾರ.

ಶ್ರೀ ಜಗದೀಶ ಶೆಟ್ಟರ್ : ಬಾಗಲಕೋಟೆ ಪ್ಯಾಕೇಜ್ ಬಗ್ಗೆ ಪುನರ್‌ವಸತಿ ಬಗ್ಗೆ ಏನೇನೂ ಅನೌನ್ಸ್ ಮಾಡಿದ್ದಿರಲ್ಲಾ ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮಿಟಿಂಗ್ ಕರೆದಿದ್ದಾರೆ. ಈ ಒಂದು ಇರಿಗೇಶನ್ ಪ್ರಾಜೆಕ್ಟ್ ಬಗ್ಗೆ ಬಿಜಾಪುರ ಜಿಲ್ಲೆಗೆ ಮತ್ತು ಬಾಗಲಕೋಟೆಗೆ ಅನುಕೂಲವಾಗುವಂತಹ ಇರಿಗೇಷನ್ ಬಗ್ಗೆ ರೈಜ್ ಮಾಡಿರುವಂತಾದ್ದು, ಇದರ ಬಗ್ಗೆ ನಾನೂ ಸಹ ಶೂನ್ಯ ವೇಳೆಯಲ್ಲಿ ಪತ್ರ ಕಳುಹಿಸಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಆ ವಿಷಯದ ಬಗ್ಗೆ ಚರ್ಚೆ ಮಾಡಿ ಇಲ್ಲದಿದ್ದರೆ ಮಾನ್ಯ ಜಗದೀಶ ಶೆಟ್ಟರ್‌ರವರೇ, ಈಗ ನಾವು ನೀರು ಉಪಯೋಗ ಮಾಡಿಲ್ಲವೆಂದು ಹೇಳಿದಿರಿ, ಆಂಧ್ರ ಪ್ರದೇಶದವರು ಟ್ರಿಬ್ಯುನಲ್ ಎದುರಿಗೆ ಏನು ಹೇಳಬೇಕೆಂದು ಇದ್ದಾರೋ ಅದನ್ನು ನಾವು ನೀವು ಪುಷ್ಟೀಕರಿಸಿದಂತೆ ಆಗಬಾರದು. ಆದ್ದರಿಂದ ಚರ್ಚೆ ಮಾಡುವುದಾದರೆ ಸಮಗ್ರವಾಗಿ ಚರ್ಚೆ ಮಾಡೋಣ. ಆಗ ಸರ್ಕಾರ ಏನು ಉತ್ತರ ಕೊಡಬೇಕೋ ಅದನ್ನು ಕೊಡುತ್ತೇವೆ. ಇಲ್ಲದೆ ಹೋದರೆ ತಾವು ಅರ್ಧ ಹೇಳಿ ಅದು ಸತ್ಯಕ್ಕೆ ಬಹಳ ಅಪಚಾರ ಮಾಡಿದಂತೆ ಆಗುತ್ತದೆ. ತಾವು ಯಾವಾಗ ಸಮಯ ಬೇಕು ಅಂತಿರೋ ಆಗ ಸಮಯವನ್ನು ಅಧ್ಯಕ್ಷರು ಒದಗಿಸಿಕೊಡುತ್ತಾರೆ.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಚರ್ಚೆ ಮಾಡತಕ್ಕಂಥಾದ್ದಲ್ಲ. ನಾನು ತಮಗೆ ಸ್ಪಷ್ಟವಾಗಿ ಹೇಳಿದ್ದೇನೆ, ಸಂಕ್ಷಿಪ್ತವಾಗಿ ಹೇಳಿ, ಸರ್ಕಾರದವರು ಉತ್ತರ ಕೊಡುತ್ತಾರೆ ನೀವು ಶೂನ್ಯ ವೇಳೆಯಲ್ಲಿ ಈ ತರಹ ಮಾಡಿದರೆ ಹೇಗೆ ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾವು ನಿಯಮ 69ರ ಅಡಿಯಲ್ಲಿ ಕೊಟ್ಟಿದ್ದೇವೆ.

ಅಧ್ಯಕ್ಷರು : ತಾವು ನಿಯಮ 69ರ ಅಡಿಯಲ್ಲಿ ಕೊಟ್ಟಿದ್ದರೆ ಅದನ್ನು ಬೇರೆ ಸಮಯದಲ್ಲಿ ತೆಗೆದುಕೊಳ್ಳುತ್ತೇನೆ.

ಶ್ರೀ ಗೋವಿಂಧ ಎಂ ಕಾರ್‌ಜೋಳ್ : ಮಾನ್ಯ ಅಧ್ಯಕ್ಷರೆ, ನಾವು ನಿಯಮ 69ರ ಅಡಿಯಲ್ಲಿ ಕೊಟ್ಟಿದ್ದೇವೆ.

ಅಧ್ಯಕ್ಷರು : ತಾವು ನಿಯಮ 69ರ ಅಡಿಯಲ್ಲಿ ನೋಟೀಸ್ ಕೊಟ್ಟಿದ್ದರೆ ಅದಕ್ಕೆ ನಾನು ಸಮಯ ನಿಗಧಿ ಮಾಡಬೇಕು. ಈಗ ನೀವು ನಿಂತಲ್ಲಿ ಪ್ರಸ್ತಾಪ ಮಾಡಿದರೆ ಹೇಗೆ?

ಶ್ರೀ ಗೋವಿಂದ ಎಂ ಕಾರ್‌ಜೋಳ್ : ಮಾನ್ಯ ಅಧ್ಯಕ್ಷರೇ, ಸಮಯ ನಿಗದಿ ಮಾಡಿ.

ಅಧ್ಯಕ್ಷರು : ಆಯಿತು. ನಾನು ಸಮಯ ನಿಗದಿ ಮಾಡುತ್ತೇನೆ. ತಾವು ಕುಳಿತುಕೊಳ್ಳಿ.

ಶ್ರೀ ಹೆಚ್. ಹಾಲಪ್ಪ (ಹೊಸನಗರ) : ಮಾನ್ಯ ಅಧ್ಯಕ್ಷರೆ, ಹೊಸನಗರ ತಾಲ್ಲೂಕಿನಲ್ಲಿ ಇವತ್ತು ಎಲ್ಲಾ ಪಕ್ಷದವರೂ ಸೇರಿ ಪೋಲೀಸ್ ಸ್ಟೇಷನ್ ಮುಂದೆ ಮುತ್ತಿಗೆ ಹಾಕಿದ್ದಾರೆ ಮತ್ತು ಅಲ್ಲಿ ಧರಣಿ ನಡೆಯುತ್ತಿದೆ. ಅದಕ್ಕೆ ಕಾರಣ ನಮ್ಮ ತಾಲ್ಲೂಕಿನ ಪ್ರತಿಷ್ಠಿತ ಕುಟುಂಬದ ಅಣ್ಣ ತಮ್ಮಂದಿರ ಒಂದು ಸಣ್ಣ ಜಗಳದಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಒಬ್ಬ ಅಣ್ಣ ಮತ್ತು ತಮ್ಮನನ್ನು ಸೆಕ್ಷನ್ 506 ಹಾಕಿ ಅರೆಸ್ಟ್ ಮಾಡಿ ಜೈಲಿಗೆ ಕಳುಹಿಸಿದ್ದಾರೆ. ಇದರಿಂದ ಇಡೀ ತಾಲ್ಲೂಕಿನಲ್ಲಿ ಇವತ್ತು ಗೊಂದಲಮಯ ವಾತಾವರಣ ಇದೆ. ಮತ್ತು ಪ್ರಕುಬ್ಧ ವಾತಾವರಣ ಇದೆ. ಅಲ್ಲಿ ಪಕ್ಷಾತೀತವಾಗಿ ಧರಣಿ ನಡೆಸುತ್ತಿದ್ದಾರೆ. ಅ ಸಬ್ ಇನ್ಸ್‌ಪೆಕ್ಟರ್ ಬಗ್ಗೆ ನಾನು ಈ ಹಿಂದೆಯೂ ಸಹ ಮುಖ್ಯಮಂತ್ರಿಗಳಿಗೆ ಮತ್ತು ಮೇಲಧಿಕಾರಿಗಳಿಗೆ ತಿಳಿಸಿದ್ದೆ, ಅವರು ಜನರ ಪರವಾದ ಕೆಲಸಗಳನ್ನು ಮಾಡುವುದನ್ನು ಬಿಟ್ಟು ಅವರ ಕೆಲಸಗಳನ್ನು ಮಾಡಿಕೊಳ್ಳುವುದರಲ್ಲಿ ನಿರತರಾಗಿದ್ದಾರೆ, ಈಗಲೂ ಸಹ ಅದೇ ಕೆಲಸ ಮಾಡಿ ಇಡೀ ತಾಲ್ಲೂಕಿನಲ್ಲಿ ಪ್ರಕುಬ್ಧವಾದ ವಾತಾವರಣ ಉಂಟಾಗಿದೆ. ಎಲ್ಲಾ ಪಕ್ಷದವರು ಧರಣಿ ಮಾಡುತ್ತಿದ್ದಾರೆ. ಸರ್ಕಾರ ಈ ಅಧಿಕಾರಿ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಈ ವಿಚಾರವಾಗಿ ಸೂಕ್ತವಾದ ವಿಚಾರಣೆ ಮಾಡಿ ಸಂಬಂಧಪಟ್ಟವರು ತಪ್ಪಿತಸ್ಥರು ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಊ) ವಿಷಯ : ರಾಣಿಬೆನ್ನೂರು ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯ ನಿವೇಶನಗಳ ಹಕ್ಕುಪತ್ರಗಳಲ್ಲಿ ಮಾಜಿ ಶಾಸಕರ ಭಾವ ಚಿತ್ರ ಮುದ್ರಿಸಿರುವ ಬಗ್ಗೆ.

ಶ್ರೀ ನೆಹರು ಓಲೇಕಾರ್ ಚನ್ನಬಸಪ್ಪ (ಬ್ಯಾಡಗಿ) : ಮಾನ್ಯ ಅಧ್ಯಕ್ಷರೆ, ನಮ್ಮ ಬ್ಯಾಡಗಿ ಕ್ಷೇತ್ರಕ್ಕೆ ಸಂಬಂಧಪಟ್ಟಂತ ರಾಣಿಬೆನ್ನೂರು ತಾಲ್ಲೂಕಿನ 36 ಹಳ್ಳಿಗಳು ಸೇರಿವೆ. ಆ 36 ಹಳ್ಳಿಗಳಲ್ಲಿ ಆಶ್ರಯ ಯೋಜನೆ ಅಡಿಯಲ್ಲಿ ನಿವೇಶನ ಹಕ್ಕುಪತ್ರವನ್ನು ಕೊಡುವಂತಹ ಸಂದರ್ಭದಲ್ಲಿ ಇಲ್ಲಿ ಹಿಂದಿನ ಶಾಸಕರನ್ನು ಹಾಗೂ ಮಾಜಿ ಮುಖ್ಯಮಂತ್ರಿಗಳು ಪೋಟೋಗಳನ್ನು ಪ್ರಿಂಟ್ ಮಾಡಿಸಿ ಕೊಟ್ಟಿದ್ದಾರೆ. ಇದು ಸರ್ಕಾರದ ಕಾನೂನಿಗೆ ವ್ಯತಿರಕ್ತವಾಗಿ ಅಧಿಕಾರಿಗಳು ರಾಣಿಬೆನ್ನೂರು ಕ್ಷೇತ್ರದಲ್ಲಿ ನಡೆದುಕೊಳ್ಳುತ್ತಿದ್ದಾರೆ. ಅ ಅಧಿಕಾರಿಗಳಿಗೆ ಎಷ್ಟೇ ಹೇಳಿದರೂ ಕೆಲವು ಏಜೆಂಟರನ್ನು ಮಾಡಿಕೊಂಡಿದ್ದಾರೆ. ಆ ಅಧಿಕಾರಿಗಳಿಗೆ ಎಷ್ಟೇ ಹೇಳಿದರೂ ಕೆಲವು ಏಜೆಂಟರನ್ನು ಮಾಡಿಕೊಂಡಿದ್ದಾರೆ. ಯಾವ ಯಾವ ಹಳ್ಳಿಗೆ ಪಟ್ಟಾಗಳನ್ನು ಕೊಡಬೇಕು ಆ ಪಟ್ಟಾಗಳನ್ನು ಏಜೆಂಟರ ಮುಖಾಂತರ ಕೊಟ್ಟು ಆ ಏಜೆಂಟರ ಮನೆಗಳಲ್ಲಿ ಇವತ್ತಿಗೂ ಸಾಕಷ್ಟು ಪಟ್ಟಾಗಳು ಇವೆ. ಆ ಪಟ್ಟಾಗಳನ್ನು ಆ ಜನರಿಗೆ ಆ ಏಜೆಂಟರು 2 ಸಾವಿರ 3 ಸಾವಿರ ತೆಗೆದುಕೊಂಡು ಕೊಡುವಂತಹ ವ್ಯವಸ್ಥೆ ಈಗಲೂ ನಡೆಯುತ್ತಾ ಇದೆ. ರಾಣಿಬೆನ್ನೂರು ಶಾಸಕರು ಮತ್ತು ನಾವು ಸಾಕಷ್ಟು ಸಲ ಹೇಳಿದರೂ ಸಹ ಇದುವರೆಗೂ

ಯಾವುದೇ ಕ್ರಮ ಆಗಿಲ್ಲ. ಆ ಪೋಟೋಗಳ ಮೇಲೆಯೇ ಎಗ್ಸಿಕ್ಯೂಟೀವ್ ಆಫೀಸರ್ ಸಹಿ ಮಾಡಿದ್ದಾರೆ. ಇಂತಹ ಒಂದು ಕ್ರಮ ಏನಿದೆ ಇದು ಸರ್ಕಾರದ ಕಾನೂನಿಗೆ ವಿರುದ್ಧವಾಗಿ ಮಾಡಿರುವಂತಾದ್ದು, ಈ ನಿಟ್ಟಿನಲ್ಲಿ ಕೂಡಲೇ ಆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಮಾನ್ಯ ಸದಸ್ಯರು ಇಲ್ಲಿ ಪ್ರಸ್ತಾಪ ಮಾಡಿರುವುದು, ಇಡೀ ರಾಜ್ಯದ ನಮ್ಮ ಮುಖ್ಯ ಕಾರ್ಯದರ್ಶಿಯವರು ಸೇರಿದಂತೆ ಅಧಿಕಾರಿಗಳು ಗಮನಿಸಬೇಕಾಗಿರುವಂತಹದ್ದು, ರಾಣಿಬೆನ್ನೂರಿನಲ್ಲಿ ಹಿಂದೆ ಇದ್ದಂತಹ ಶಾಸಕರು ಹಕ್ಕುಪತ್ರವನ್ನು ಕೊಡಬೇಕಾದರೆ, ಅವರ ಪೋಟೋ ಫಿಕ್ಸ್ ಮಾಡಿ ಹಂಚಿರುವುದು ಜಗತ್ತಿನಲ್ಲಿ ನಮ್ಮ ರಾಜ್ಯದಲ್ಲಿ ಎಲ್ಲೂ ಇದುವರೆವಿಗೂ ನೋಡಿರಲಿಲ್ಲ. ಒಂದು ಕಡೆ ಮುಖ್ಯಮಂತ್ರಿಗಳು ಇನ್ನೊಂದೆಡೆ ಅವತ್ತಿನ ಶಾಸಕರು, ರುದ್ರಪ್ಪ ಮಾನಪ್ಪ ಲಮಾಣಿ, ಪೋಟೋ ಹಾಕಿ ಪ್ರಿಂಟ್ ಮಾಡಿ ತಹಸೀಲ್ದಾರ್ ಸರ್ಟಿಫೈ ಮಾಡಿ ಹಕ್ಕು ಪತ್ರವನ್ನು ಕೊಟ್ಟಿದ್ದಾರೆ, ಬಹುಶಃ ರಾಜ್ಯದ ಇತಿಹಾಸದಲ್ಲಿ ಹಿಂದೆಲ್ಲೂ ನಡೆದಿರಲಿಲ್ಲ. ಈಗ ಆ ಶಾಸಕರಂತೂ ಇಲ್ಲ ಮತ್ತೊಬ್ಬ ಶಾಸಕರು ಬಂದಿದ್ದಾರೆ. ಪ್ರಶ್ನೆ ಇರುವುದು, ಅವರ ಪೋಟೋ ಇರುವಂತಹ ಹಕ್ಕುಪತ್ರವನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ ಇಲ್ಲದಿದ್ದರೆ ಇದೊಂದು ಕೆಟ್ಟ ಸಂಪ್ರದಾಯವಾಗುತ್ತದೆ. ಎರಡನೆಯದಾಗಿ ಅದಕ್ಕಿಂತ ಮುಖ್ಯವಾಗಿ ನಿಮ್ಮ ತಹಸೀಲ್ದಾರ್, ಡಿಸಿ ಹಾಗೂ ಎಕ್ಸಿಕ್ಯೂಟಿವ್ ಆಫೀಸರ್ಸ್ ಇದಕ್ಕೆ ಹೇಗೆ ಅವಕಾಶ ಕೊಡುತ್ತಾರೆ. ಆದುದರಿಂದ ಈ ಬಗ್ಗೆ ತಾವು ತಕ್ಷಣ ಕ್ರಮ ತೆಗೆದುಕೊಳ್ಳದೆ ಇದ್ದರೆ ಇದೊಂದು ಕೆಟ್ಟ ಸಂಪ್ರದಾಯವಾಗುತ್ತದೆ. ಎಂಎಲ್ಎ ಪೋಟೋ ಹಾಕಿ ತಹಸೀಲ್ದಾರ್ ಸರ್ಟಿಫೈ ಮಾಡಿ, ಒಂದು ಕಡೆ ಮುಖ್ಯಮಂತ್ರಿಗಳು ಇನ್ನೊಂದು ಕಡೆ ಎಂಎಲ್ಎ. ಅಫಿಶಿಯಲ್ ಆಗಿ ಹಂಚಿಬಿಟ್ಟಿದ್ದಾರೆ, ಇದು ರಿಪೀಟ್ ಆಗಬಾರದು, ಆ ತಹಸೀಲ್ದಾರ್‌ಗೆ ಜವಾಬ್ದಾರಿ ಇತ್ತೋ ಇಲ್ಲವೋ ಎಕ್ಸಿಕ್ಯೂಟಿವ್ ಆಫೀಸರ್ ಏನು ಮಾಡುತ್ತಿದ್ದ, ನೀವೇ ಅದರ ಬಗ್ಗೆ ಗಮನವನ್ನು ಕೊಡದೆ ಇದ್ದರೆ, ಬಹುಶಃ ವ್ಯವಸ್ಥೆಗಳು ಕುಸಿದು ಹೋಗುತ್ತದೆ, ಯಾರು ಏನು ಬೇಕಾದರೂ ಮಾಡಬಹುದು ಅಂತ ಆಗುತ್ತದೆ. ಮಾನ್ಯ ಸದಸ್ಯರು ಇಂತಹ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಬಹುಶಃ ಮಾನ್ಯ ಮುಖ್ಯಮಂತ್ರಿಗಳೆ ಅವರ ಮೇಲೆ ಕ್ರಮ ತೆಗೆದುಕೊಂಡು ಅದು ಆಗದ ಹಾಗೆ ಎಚ್ಚರವಹಿಸಿ.

ಶ್ರೀ ಹಂಪನಗೌಡ ಬಾದರ್ಲಿ : ರಾಷ್ಟ್ರೀಯ ಹೆದ್ದಾರಿಗಳನ್ನು ಮಾಡುವಾಗ ಹಿಂದಿನ ಸರ್ಕಾರ ಮಾನ್ಯ ವಾಜಪೇಯಿಯವರು ಮಾಜಿ ಪ್ರಧಾನಿಗಳು ಪ್ರಧಾನಮಂತ್ರಿಗಳಾಗಿದ್ದಾಗ, ನ್ಯಾಷನಲ್ ಹೈವೇಗೆ ಪೋಟೋ ಹಾಕಿದ್ದರು, ಅವಾಗ ಏತಕ್ಕೆ ಆ ಬಗ್ಗೆ ಯೋಚನೆ ಮಾಡಲಿಲ್ಲ?

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಾರ್ವಜನಿಕ ಕೆಲಸಗಳಲ್ಲಿ ಲೋಕಸಭಾ ಸದಸ್ಯರುಗಳ ಹಾಗೂ ಶಾಸಕರುಗಳ ಹೆಸರುಗಳನ್ನು ಹಾಕಿಕೊಳ್ಳುತ್ತಿರುವವರ ಬಗ್ಗೆ ಸರ್ಕಾರ ಒಂದು ನಿರ್ಧಾರ ತೆಗೆದುಕೊಳ್ಳಬೇಕು. ಏನ್ ಸಾರ್, ಪಾರ್ಲಿಮೆಂಟ್ ಕೊಡುವ ಹಣವನು ತೆಗೆದುಕೊಂಡು ಬಂದು ಇಂತಹವರು ಮಾಡಿಸಿದರೆಂದು ಅವರ ಹೆಸರುಗಳನ್ನು ಹಾಕಿಕೊಳ್ಳುವುದರಲ್ಲಿ ಏನು ಅರ್ಥವಿದೆ? ಲೋಕಸಭಾ ಸದಸ್ಯರ ನಿಧಿ ಅಥವಾ ಶಾಸಕರ ನಿಧಿ ಎಂದು ಹಾಕಲಿ. ಅವರ ಹೆಸರುಗಳನ್ನು ಹಾಕುವುದನ್ನು ಸ್ವಲ್ಪ ಸರಿಪಡಿಸಬೇಕು.

ಅಧ್ಯಕ್ಷರು : ಇಂತಹವರ ಕಾಲದಲ್ಲಿ ಆಗಿದ್ದೆಂದು ಮುಂದಿನ ಜನಾಂಗಕ್ಕೆ ಗೊತ್ತಾಗಲೆಂದು ಹಾಕಿಕೊಳ್ಳುತ್ತಾರೆ ಹಾಕಿಕೊಳ್ಳಲಿ ಬಿಡಿ.

ಶ್ರೀ ವಾಟಾಳ್‌ನಾಗರಾಜ್ : ನಾಳೆಯಿಂದ ಎಲ್ಲೆಲ್ಲಿ ಲೋಕಸಭಾ ಸದಸ್ಯರ ಹೆಸರುಗಳನ್ನು ಹಾಕಿದ್ದಾರೆ ಅದಕ್ಕೆಲ್ಲಾ ಮಸಿಬಳಿದು ತೆಗೆಸಿಬಿಡಿ ಸಾರ್.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) : ನೀವು ಹಾಕುತ್ತೀರಿ ನಾನು ಕೇಳುತ್ತೇನೆಯೇ? ಅಲ್ಲಿ ನಿಮ್ಮ ಫೋಟೋ ಇಲ್ಲದೆ ಒಂದು ಕೆಲಸವೂ ಕ್ಷೇತ್ರದಲ್ಲಿ ಆಗುವುದಿಲ್ಲ. ಕೆಫ್‌ಕನ್‌ನ್ನಿಂದ ರುದ್ರಪ್ಪ ಲಮಾಣಿಯವರು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಕ್ಕೆ ಸೇರಿದವರು ಸಮ್ಮದನನ್ನು ಹಾಕಿಸಿದ್ದಾರೆ, ಆಗಿನ ಮುಖ್ಯಮಂತ್ರಿಗಳ ಹೆಸರನ್ನು ಹಾಕಿಸಿದ್ದಾರೆ, ಮುಖ್ಯಮಂತ್ರಿಗಳ ಗುರುತಾಗಲೆಂದೆನೋ ಹಾಕಿದ್ದಾರೆ, ಬಟ್ ಎಲೆಕ್ಟೆಡ್ ರೆಪ್ರೆಸೆಂಟೇಟಿವ್ ಆದರೂ ಕೂಡ ಇದು ಸರ್ಕಾರದ ಡಾಕ್ಯುಮೆಂಟ್ ಆದಕಾರಣ ಇದನ್ನು ಹಾಕಬಾರದು, ಇದನ್ನು ಹಾಕುವುದಕ್ಕೆ ಏಕೆ ಅನುಮತಿಯನ್ನು ಕೊಟ್ಟರೆಂಬುದನ್ನು ನೋಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಈ ರೀತಿಯಾಗಿ ನೀಡಲಾಗಿರುವ ಹಕ್ಕುಪತ್ರಗಳನ್ನು ರದ್ದುಪಡಿಸಬೇಕು, ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು.

ಅಧ್ಯಕ್ಷರು : ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ, ಮತ್ತೇನು? ಚರ್ಚೆ ಮಾಡುವುದಕ್ಕಾಗುತ್ತದೆಯೇ? ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ ಮೇಲೂ ನೀವು ಹೀಗೆ ನಿಂತುಕೊಂಡು ಗಲಾಟೆ ಮಾಡಿದರೆ ಹೇಗೆ?

ಮಾನ್ಯ ಸದಸ್ಯರು : ಆ ಹಕ್ಕುಪತ್ರಗಳನ್ನು ರದ್ದುಪಡಿಸುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಹೇಳಬೇಕು.

ಊ) ವಿಷಯ : ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಬಿರುಗಾಳಿ ಆಲಿಕಲ್ಲು ಮಳೆಯಿಂದ ಬೆಳೆ ಹಾನಿಯಾಗಿರುವ ಬಗ್ಗೆ.

ಶ್ರೀ ಹಂಪನಗೌಡ ಬಾದರ್ಲಿ(ಸಿಂಧನೂರು) : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುವುದೇನೆಂದರೆ, ದಿನಾಂಕ: 6.1.05 ರಂದು ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಬಿರುಗಾಳಿ, ಮಳೆ ಆಲಿಕಲ್ಲು ಮಳೆಯಿಂದ ಬಹಳಷ್ಟು ರೈತರಿಗೆ ಆಘಾತವಾಗುತ್ತದೆ, ರೈತರು ಬೆಳೆದಂತಹ ಬೆಳೆಗೆ. ತೋಟಗಾರಿಕೆ ಬೆಳೆಗೆ ನಷ್ಟವಾಗುತ್ತೆದೆಂಬ ವಿಚಾರ ಪತ್ರಿಕೆಯಲ್ಲಿ ವರದಿಯಾಗಿದೆ. ಮತ್ತೆ ಸುನಾಮಿ ರೀತಿಯಾಗಿ ಮಳೆ ಬರುತ್ತದೆಯೋ ಮತ್ತೆ ಆಲಿಕಲ್ಲು ಮಳೆ ಯಾವ ರೀತಿಯಾಗಿ ಬರುತ್ತದೆಯೆಂಬುದನ್ನು ಹವಾಮಾನ ಇಲಾಖೆಯ ನಿರ್ದೇಶಕರವನ್ನು ಕರೆಯಿಸಿ ಆ ಬಗ್ಗೆ ಚರ್ಚೆ ಮಾಡಿ ಸರ್ಕಾರ ಏನಾದರೂ ಮುಂಜಾಗ್ರತೆಯ ಕ್ರಮ ತೆಗೆದುಕೊಳ್ಳುವ ದಿಯಲ್ಲಿದೆಯೊ ಎನ್ನುವ ವಿಚಾರವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಹಾಗೂ ಸಂಸದೀಯ ವ್ಯವಹಾರ ಸಚಿವರು) ಈ ಬಗ್ಗೆ ಕೆಲವು ಪತ್ರಿಕೆಗಳಲ್ಲಿ ವಿವರಗಳು ಬಂದಿವೆ. ತೋಟಗಳನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ

ನಾವೇನು ಮಾಡಿಕೊಳ್ಳಬಹುದೆಂದು ಕೆಲವು ಸಂಸ್ಥೆಗಳು ನೋಟಿಫಿಕೇಷನ್, ಪ್ರಕಟಣೆಗಳನ್ನು ಕೊಟ್ಟಿದ್ದಾರೆ. ಏದೇನು ಪ್ರಕಟಣೆ, ಪ್ರಿಡಿಕನ್ಸ್ ಮಾಡಿದ್ದಾರೆ ಅದು ಕ್ರಡಿಬಲ್ ಇದ್ದರೆ ಸರ್ಕಾರದ ಮಟ್ಟದಲ್ಲಿ ಏನು ಮಾಡಬೇಕು ಯಾವ ರೀತಿಯಾಗಿ ಜಾಗ್ರತೆಗೆ ಅವಕಾಶ ಮಾಡಿಕೊಡಬೇಕು ಎನ್ನುವುದರ ಬಗ್ಗೆ ನಾವು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆ ಸಚಿವರಿಬ್ಬರು ಈ ದಿಶೆಯಲ್ಲಿ ಕುಳಿತು ಚರ್ಚೆ ಮಾಡಿ ಸಭೆ ನಡೆಸಿ ಕಾರ್ಯಕ್ರಮವನ್ನು ರೂಪಿಸುತ್ತಾರೆ. ಒಂದು ವೇಳೆ ಪ್ರಿಡಿಕನ್ ಕ್ರೆಡಿಬಲ್ ಇರಲಿಲ್ಲ ಅದು ಸೈಂಟಿಫಿಕ್ ಪ್ರಿಡಿಕ್ಷನ್ ಇರಲಿಲ್ಲದಿದ್ದರೆ, ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹಂಪನಗೌಡ ಬಾದರ್ಲಿ : ಈ ಬಗ್ಗೆ ನಮ್ಮ ಉತ್ತರ ಕರ್ನಾಟಕದ ಜನತೆಯಲ್ಲಿ ಭಯಭೀತಿ ವಾತಾವರಣ ಉಂಟಾಗಿದೆ. ಸುನಾಮಿ ದುರಂತದ ನಂತರ ಭಯಭೀತಿ ವಾತಾವರಣ ಉಂಟಾಗಿರುವುದರಿಂದ ಆ ಬಗ್ಗೆ ಮುಂಜಾಗ್ರತೆಯ ಕ್ರಮಗಳೇನನ್ನು ತೆಗೆದುಕೊಳ್ಳಬೇಕು ಎನ್ನುವ ವಿಚಾರದ ಬಗ್ಗೆ ಹವಾಮಾನ ಇಲಾಖೆಯ ನಿರ್ದೇಶಕರನ್ನು ಕರೆಯಿಸಿ, ಯಾವ ಪ್ರಮಾಣದಲ್ಲಿ ಮಳೆ ಬರುತ್ತದೆ, ಆಲಿಕಲ್ಲು ಮಳೆ ಇರುತ್ತದೆ ಎಂಬುದರ ಮಾಹಿತಿಯನ್ನು ಪಡೆದು ರೈತರಿಗೆ ಮುಂಜಾಗ್ರತೆಯ ಮವಾಗಿ ತಿಳಿಸತಕ್ಕಂಥ ಪ್ರಯತ್ನ ಸರ್ಕಾರದಿಂದ ಆಗಲಿ ಎಂಬುದನ್ನು ತಮ್ಮ ಗಮನಕ್ಕೆ ರಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಹೇಗಾದರೂ ಮಾಡಿ ತೋಟಗಾರಿಕೆ ಬೆಳೆಗಳಿಗೆ ವಿಮೆ ಮಾಡುವುದಕ್ಕೆ ಸಾಧ್ಯವಿದ್ದರೆ ಅದನ್ನೂ ಪರಿಶೀಲನೆ ಮಾಡಬೇಕೆಂದು ಮಾನ್ಯ ಸಚಿವರ ಗಮನಕ್ಕೆ ರುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ : ತಮ್ಮ ಸಲಹೆಯನ್ನು ಪರಿಶೀಲಿಸುವಂತೆ ಕೃಷಿ ಸಚಿವರಿಗೆ ಳಿಸುತ್ತೇನೆ.

ಋೂ) ವಿಷಯ : ನೀರಾವರಿ ಪಂಪ್‌ಸೆಟ್‌ಗಳ ಅಕ್ರಮ ಸಕ್ರಮಗೊಳಿಸುವ ಅವಧಿ ವಿಸ್ತರಿಸುವ ಬಗ್ಗೆ.

ಶ್ರೀ ಸಿ.ಎಂ. ಉದಾಸಿ (ಹಾನಗಲ್) : ಮಾನ್ಯ ಸಭಾಧ್ಯಕ್ಷರೆ, ರಾಜ್ಯದಲ್ಲಿ ನೀರಾವರಿ ಪಂಪ್‌ಸೆಟ್‌ಗಳ ಅಕ್ರಮ ಸಕ್ರಮ ಮಾಡಲು ಈ ತಿಂಗಳ ಕೊನೆ ಎಂದು ಪ್ರಕಟಿಸಲಾಗಿದ್ದು, ಆದರೆ ಕ್ರಮಗೊಳಿಸಲು ಅಭಿವೃದ್ಧಿ ಶುಲ್ಕ 18 ಸಾವಿರ ರೂಪಾಯಿ, ಪ್ರತಿ ಹೆಚ್‌ಬಿಗೆ 720 ರೂಪಾಯಿಗಳ ಕ್ಯುರಿಟಿ ಡಿಪಾಸಿಟ್ ಹಾಗೂ 1700 ರೂಪಾಯಿಗಳ ಮೀಟರ್ ಡಿಪಾಸಿಟ್ ಎಲ್ಲಾ ಸೇರಿ ನಾಲ್ಕು ಟುಂಬಗಳಿದ್ದವರಿಗೆ20 ಸಾವಿರ ರೂಪಾಯಿಗಳಷ್ಟು ಹಣ ತುಂಬಬೇಕಾಗುತ್ತದೆ. ಇಷ್ಟೊಂದು ದೊಡ್ಡ ಮೊತ್ತದ ಹಣ ರೈತ ತುಂಬಲಾಗುತ್ತಿಲ್ಲ. ಅಭಿವೃದ್ಧಿ ಶುಲ್ಕವನ್ನು 5 ಸಾವಿರ ರೂಪಾಯಿಗಳಿಗೆ ಗೊತ್ತು ಡಿಸಲು, ಹಾಗು ಸಕ್ರಮಗೊಳಿಸುವ ಅವಧಿಯನ್ನು ವಿಸ್ತರಿಸಲು ಮಾನ್ಯ ಇಂಧನ ಸಚಿವರ ಗಮನ ಳೆಯಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಹಾಗೂ ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗ ಅವರು ಈ ಬಗ್ಗೆ ನನಗೆ ಕಳುಹಿಸಿಕೊಟ್ಟಿದ್ದಾರೆ ಅದು ನನಗಿನ್ನೂ ತಲುಪಿಲ್ಲ, ಬಗ್ಗೆ ಅರ್ಧಗಂಟೆ ಚರ್ಚೆಯನ್ನೇ ಇಡಲಾಗಿದೆ, ಅದರ ಜೊತೆ ಇದನ್ನೂ ಸೇರಿಸಿ ಚರ್ಚೆ ಮಾಡಬಹುದಾಗಿದೆ.

ಎ) ವಿಷಯ : ಚಿತ್ರದುರ್ಗದಲ್ಲಿ ಪತ್ರಕರ್ತರಿಗೆ ರಕ್ಷಣೆ ನೀಡುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾ) : ಮಾನ್ಯ ಸಭಾಧ್ಯಕ್ಷರೆ, ನಾನು ಇಲ್ಲಿ ಪ್ರಸ್ತಾಪ ಮಾಡುವ ವಿಷಯವೇನೆಂದರೆ, ಚಿತ್ರದುರ್ಗದಲ್ಲಿ ಅಲ್ಲಿಯ ಎಂಪಿಯವರು, ಮಾನ್ಯ ಸಚಿವರು ಪತ್ರಿಕಾಗೋಷ್ಠಿ ಮಾಡುವಂತಹ ಸಂದರ್ಭದಲ್ಲಿ ಅಲ್ಲಿಯ ಪತ್ರಿಕಾಕರ್ತರಿಗೆ....

ಅಧ್ಯಕ್ಷರು : ಯಾವ ಸಚಿವರು ಸ್ವಾಮಿ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮಂಜುನಾಥ್‌ರವರು ಇದ್ದರು, ಆ ಸಂದರ್ಭದಲ್ಲಿ ಪತ್ರಿಕೊಗೋಷ್ಠಿಯಲ್ಲಿ

ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಲೋಕಸಭಾ ಸದಸ್ಯರು ಹೀಗೆ ಮಾಡಿದ್ದಾರೆಂದು ಅವರ ಮೇಲೆ ಒಂದು ವಿಷಯವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಮಾನ್ಯ ಸದಸ್ಯರು ಪ್ರಯತ್ನ ಮಾಡುತ್ತಿದ್ದಾರೆ. ಅವರು ನಿಂತು ಈ ಸದನದಲ್ಲಿ ಡಿಫೆಂಡ್ ಮಾಡಿಕೊಳ್ಳುವಂತಿಲ್ಲ, ಅವರು ಇನ್ನೊಂದು ಉನ್ನತವಾಗಿರುವಂತಹ ಸಮಿತಿಯ ಸದಸ್ಯರೂ ಹೌದು. ಹಾಗೆ ಇರುವಾಗ, ಒಬ್ಬ ಪಾರ್ಲಿಮೆಂಟ್ ಸದಸ್ಯರ ವರ್ತನೆ ಕುರಿತು ಅದೇನೆ ಇರಲಿ, ತಾವು ಹೇಳುವುದು ಸತ್ಯವೊ ಅಥವಾ ಸುಳ್ಳೊ ಅದು ಬೇರೆ, ಅವರ ಬಗ್ಗೆ ತಾವು ಇಲ್ಲಿ ಪ್ರಸ್ತಾಪ ಮಾಡುವುದು ಸೂಕ್ತವಲ್ಲ. ಆದುದರಿಂದ ದಯಮಾಡಿ ಆ ಲೋಕಸಭಾ ಸದಸ್ಯರ ವಿರುದ್ಧ ಅವರೇನು ಹೇಳುತ್ತಾರೆ ಅದಕ್ಕೆ ಅವಕಾಶ ಕೊಡುವಂತಹದ್ದು ನಿಯಮಾಬಾಹಿರವಾಗುತ್ತದೆ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಎಂಪಿಯವರ ಬಗ್ಗೆ ನಾನೇನೂ ಮಾತನಾಡುತ್ತಿಲ್ಲ, ಈ ಸದನದ ಸದಸ್ಯರಾದಂತಹ ಮಾನ್ಯ ಮಂಜುನಾಥ್‌ರವರು ಅಲ್ಲಿದ್ದರು, ಅವರ ಮುಂದೆ ಇದೆಲ್ಲಾ ನಡೆದಂತಹ ಘಟನೆ. ಪತ್ರಿಕಾಗೋಷ್ಠಿಯಾದ ಮೇಲೆ ಕೆಲವು ಜನ ಹೋಗಿ ಆ ಕನ್ನಡಪ್ರಭ ಪತ್ರಿಕೆಯಲ್ಲಿ ಬಂದಿರುವುದರ ಬಗ್ಗೆ, ಹಿಂದು ಪತ್ರಿಕೆಯ ಪತ್ರಕರ್ತರ ಮೇಲೆ....

ಅಧ್ಯಕ್ಷರು : ಮಾನ್ಯ ಲೋಕಸಭಾ ಸದಸ್ಯರು, ಈ ಸದನದಲ್ಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ನಾನು ಎಂಪಿಯವರ ಬಗ್ಗೆ ನಾನೇನೂ ಮಾತನಾಡುತ್ತಿಲ್ಲ. ಇವತ್ತು ಆ ಪತ್ರಕರ್ತರ ಮೇಲೆ ಬೇರೆ ಬೇರೆ ರೀತಿಯಾಗಿ ನಡೆಯುತ್ತಿದೆ, ಒಬ್ಬ ರಾಜಕಾರಣಿ, ನಾನು ಜನಪ್ರತಿನಿಧಿ....

ಶ್ರೀ ಹೆಚ್.ಕೆ. ಪಾಟೀಲ್ : ಅಧ್ಯಕ್ಷರೆ, I am on a point of order. ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರು ಏನು ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ, ಅದನ್ನು ಯಾವುದೇ ನಿಯಮಾವಳಿಯಡಿಯಲ್ಲಿ ಎತ್ತುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕೆ ಬರುವುದಿಲ್ಲ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ, ತಾವು ನನ್ನನ್ನು ಕರೆದಿದ್ದೀರಿ, ನಾನು ಇನ್ನು ವಿಷಯವನ್ನು ಪ್ರಸ್ತಾಪ ಮಾಡೇ ಇಲ್ಲ.

ಅಧ್ಯಕ್ಷರು : ಅವರು ಎತ್ತಿರುವುದು It is a fundamental......

ಶ್ರೀ ಜಗದೀಶ್‌ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಅವರು ಈ ಸದನದ ಸದಸ್ಯರಲ್ಲ, ಅವರ ಬಗ್ಗೆ ನಾನೇನೂ ಮಾತಾನಾಡುತ್ತಿಲ್ಲ.

ಅಧ್ಯಕ್ಷರು : ನೀವು ಅವರ ಹೆಸರನ್ನು ಎತ್ತಬೇಕಾದರೆ ಕೆಲವು ನಿಯಮಗಳನ್ನು ಅನುಸರಿಸಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. You have to adhere to it.

ಶ್ರೀ ಜಗದೀಶ್‌ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಯಾರು ಕೆಲವೊಂದು ವ್ಯಕ್ತಿಗಳು ಹೋಗಿ ಆ ವ್ಯಕ್ತಿಗಳು ಹೋಗಿ ಆ ಪತ್ರಕರ್ತರ ಮನೆಗೆ ಹೋಗಿ ಧಮಕಿ ಹಾಕಿ ಈ ರೀತಿ ಪ್ರಶ್ನೆಗಳನ್ನು ಕೇಳುತ್ತೀರೋ ಹೇಗೆ ? ಆ ರೀತಿ ಕೇಳುತ್ತೀರಾ ಎಂದು ಧಮಕಿ ಹಾಕುವ ಪ್ರವೃತ್ತಿ ಇದು ಸರಿಯಲ್ಲ, ನಾಳೆ ಪತ್ರಕರ್ತರು ಒಂದು ಸರಿಯಾದ ರೀತಿಯಲ್ಲಿ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಸರಿಯಾಗಿ ಕೆಲಸ ಮಾಡುವುದಕ್ಕೆ ಇದು ಅಡೆತಡೆಯಾಗುತ್ತದೆ. ಇವತ್ತು ಕನ್ನಡಪ್ರಭ ಪತ್ರಿಕೆ, ಹಿಂದೂ ಪತ್ರಿಕೆ ಇರಬಹುದು. ಇವತ್ತು ಕೆಲವು ಪತ್ರಿಕೆಗಳು ಇದ್ದಾವೆ. ಅವರ ಬಗ್ಗೆ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಆಗಲೇ ಮಾತನಾಡಿದರು. ಅಂಥ ಕೆಲವೊಂದು ಪತ್ರಕೆಗಳಿದ್ದಾವೆ. ಅಂಥವುಗಳನ್ನು condemn ಮಾಡಲೇಬೇಕಾಗುತ್ತದೆ. ಇವತ್ತು ರೆಪ್ಯೂಟೆಡ್ ಪತ್ರಿಕೆ ಇರತಕ್ಕವರು. ಆ ಪತ್ರಕರ್ತರ ಮೇಲೆ ಈ ರೀತಿಯಾದ ಹಲ್ಲೆ ಈ ರೀತಿ ಧಮಕಿ ಮಾಡುವ ಪ್ರಸಂಗ ಬಂದರೆ ಬಹುಶಃ ನಾಳೆ ಯಾವುದೇ ಒಂದು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಸರಿಯಾದ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ ಇವತ್ತು ಅವರು ಪೋಲಿಸರ ಒಂದು ರಕ್ಷಣೆಯನ್ನು ಕೇಳಿದ್ದಾರೆ. ನಾನು ಹೆಚ್ಚಿಗೆ ವಿವರವಾಗಿ ಹೋಗುವುದಿಲ್ಲ. ಇದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಇವತ್ತು ಆ ಪತ್ರಕರ್ತರು ಪೋಲೀಸ್ ರಕ್ಷಣೆಯನ್ನು ಕೇಳಿದ್ದಾರೆ. ಅವರಿಗೆ ರಕ್ಷಣೆ ಕೊಟ್ಟಿದ್ದಾರೋ ಹೇಗೆ? ಆ ರೀತಿ ಒಂದು ಸುರಕ್ಷಿತ ಭಾವನೆ ಮೂಡುವುದಕ್ಕೆ ಯಾವ ರೀತಿ ವಾತಾವರಣವನ್ನು ತಾವು ನಿರ್ಮಾಣ ಮಾಡಿದ್ದೀರಿ? ಇದನ್ನು ಈ ಸದನಕ್ಕೆ ಮಾನ್ಯ ಮಂತ್ರಿಗಳು ಹೇಳಬೇಕೆಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಜನರಲ್ ಆಗಿ ಹೇಳಿದ್ದಾರೆ. ಜನರಲ್ ಆಗಿಯೇ ಉತ್ತರ.

ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಅವರೇನು ಹೇಳಿದ್ದಾರೆ, ಅದನ್ನು ನಾವು ಕೇಳಿಸಿಕೊಂಡಿದ್ದೇವೆ, ಸದನದ ಗಮನಕ್ಕೂ ಕೂಡ ತಂದರು. ಲೋಕಸಭಾ ಸದಸ್ಯರ ವಿರುದ್ಧ ಅವರೇನು ಕೆಲವು ಆಪಾದನೆಗಳನ್ನು ಮಾಡುವುದಕ್ಕೆ ಪ್ರಯತ್ನವನ್ನು ಮಾಡಿದ್ದರು. ಅದು ಸೂಕ್ತವಾದುದಲ್ಲ ಈ ಸದನದಲ್ಲಿ ಅವರು ಇಲ್ಲದೇ ಇರುವಾಗ ಅವರು ಡಿಫೆಂಡ್ ಮಾಡಿಕೊಳ್ಳತಕ್ಕ ಅವಕಾಶ ಇಲ್ಲದೇ ಇರುವಾಗ ಹಿರಿಯ ಸದಸ್ಯರಾದ ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರು ಆ ಆಪಾದನೆಯನ್ನು ಮಾಡಿರುವಂಥದ್ದು ಸೂಕ್ತವಾದುದಲ್ಲ. ನಾನು ತಮ್ಮಲ್ಲಿ ಕೋರುತ್ತೇನೆ, ಈ ರೀತಿಯಾಗಿರತಕ್ಕ ಯಾವುದೇ ಪ್ರಸ್ತಾಪ ಆಗಾಗ್ಗೆ ಆಗಬಾರದು ಎಂದಾದರೆ ಒಂದು ಆರೋಗ್ಯಕರವಾದ ಬೆಳವಣಿಗೆ ಇಲ್ಲಿ ಆಗಬೇಕಾದರೆ ಅವರೇನು ಮಾನ್ಯ ಎನ್. ವೈ. ಹನುಮಂತಪ್ಪನವರ ಹೆಸರನ್ನು ಪ್ರಸ್ತಾಪ ಮಾಡಿದರು. ಅದನ್ನು ಈ ಕಡತದಿಂದ ತೆಗೆಸಿಹಾಕಿಬಿಡಿ. ಒಂದು ವೇಳೆ ಏನಾದರೂ ಆ ಪತ್ರಕರ್ತರಿಗೆ ತೊಂದರೆಯಾಗಿದ್ದರೆ ಅದರ ಬಗ್ಗೆ ತಾವೇನಾದರೂ ಹೇಳುವುದಿದ್ದರೆ ನಮ್ಮ ತಕರಾರೇನು ಇಲ್ಲ. ಅಥವಾ ತಾವು ಅದನ್ನು ಮಾನ್ಯ ಸ್ಪೀಕರ್ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತರಬಹುದು. ಅದು ಯಾವುದನ್ನೇ ಮಾಡಬಹುದು. ಆದರೆ ಈ ಸಂದರ್ಭದಲ್ಲಿ ಲೋಕಸಭಾ ಸದಸ್ಯರ ವಿರುದ್ಧ ಅವರೇನು ಆಪಾದನೆ ಮಾಡುವುದಕ್ಕೆ direct, indirect ಆಪಾದನೆ ಮಾಡುವುದಕ್ಕೆ ಪ್ರಯತ್ನವನ್ನು ಮಾಡಿದ್ದಾರೆ, ಅದು ಸೂಕ್ತವಾದುದಲ್ಲ. ಅದನ್ನು ಕಡತದಿಂದ ತೆಗೆದು ಹಾಕಬೇಕೆಂದು ನಾನು ತಮ್ಮಲ್ಲಿ ಕೋರುತ್ತೇನೆ.

ಅಧ್ಯಕ್ಷರು : ಹೆಸರು ಪ್ರಸ್ತಾಪ ಆಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈಗ ಅವರಿಗೆ ಧಮಕಿ ಹಾಕಿದ್ದಾರೆ. ಅದರ ಬಗ್ಗೆ ಅವರು ಏನು ಹೇಳುತ್ತಾರೋ ಅದನ್ನು ಹೇಳಲಿ. ರಕ್ಷಣೆಯನ್ನು ಕೊಡುತ್ತೀರೋ ಇಲ್ಲವೋ? ಅಲ್ಲಿ ಪತ್ರಿಕಾಗೋಷ್ಠಿಯಲ್ಲಿ ಏನಾಯಿತು? ಆಮೇಲೆ ನಂತರದಲ್ಲಿ ಉಂಟಾದ ಘಟನೆಗಳು, ಅದರ ಬಗ್ಗೆ ಅವರು ರಕ್ಷಣೆ ಕೇಳಿದ್ದಾರೆ. ಇವತ್ತು ಪತ್ರಕರ್ತರು ರಕ್ಷಣೆಯನ್ನು ಕೇಳಿದ್ದಾರೆ. ಅದರ ಬಗ್ಗೆ ಏನು ಹೇಳುತ್ತಾರೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಇವತ್ತು ಪತ್ರಕರ್ತರ ರಕ್ಷಣೆ ಬಗ್ಗೆ ಅವರು ಹೇಳಬೇಕಾಗುತ್ತದೆ.

ಅಧ್ಯಕ್ಷರು : ಆಯಿತು ತಡೆಯಿರಿ, ಅವರು ಮಾತನಾಡುತ್ತಿದ್ದಾರೆ. ನೀವೇಕೆ ನಿಂತುಕೊಂಡ್ರಿ? ಮಧ್ಯದಲ್ಲಿ ಸುಮ್ಮನೆ ಎಲ್ಲಾ ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ಎಂಪಿ ಅವರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ಆದರೆ ಇವತ್ತು ಅಲ್ಲಿಯ ಪತ್ರಕರ್ತರು ರಕ್ಷಣೆಯನ್ನು ಕೇಳಿದ್ದಾರೆ. ಎಸ್‌ಪಿ ಅವರಿಗೆ ದೂರನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ರಕ್ಷಣೆಯನ್ನು ಕೊಟ್ಟಿದ್ದೀರೋ ಇಲ್ಲವೋ ಅಥವಾ ಅವರ ಸುರಕ್ಷತೆ ಬಗ್ಗೆ ಒಂದು ವಾತಾವರಣ ನಿರ್ಮಾಣ ಮಾಡುವಂಥದ್ದನ್ನು ಮಾಡುತ್ತೀರೋ ಇಲ್ಲವೊ? ಇದರ ಬಗ್ಗೆ ಉತ್ತರವನ್ನು ಹೇಳಿ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕರೆ, ನನಗೂ ಕೂಡ ಈ ಸುದ್ದಿ ಬಂದಿದೆ. ಮತ್ತೆ ನಾನೂ ಕೂಡ ಮೊನ್ನೆ ಸಾಕಷ್ಟು ಪತ್ರಿಕಾ ಅಕಾಡೆಮಿ ಸಭೆಗೆಲ್ಲಾ ಹೋಗಿದ್ದೇನೆ. ಇವತ್ತು ಪತ್ರಿಕಾ ಅಕಾಡೆಮಿ ಸಭೆಯಲ್ಲಿ ಹೋದಾಗ ಪತ್ರಕರ್ತರು ರಾಜ್ಯದ ಜನರ ಅಭಿಪ್ರಾಯವನ್ನು ವ್ಯಕ್ತಪಡಿಸುವ ರೀತಿಯಲ್ಲಿ ನಿರ್ಭಯವಾಗಿ ಅವರು ಕೆಲಸಕಾರ್ಯಗಳನ್ನು ಮಾಡಬೇಕು. ಇದಕ್ಕೆ ಬಹಳಷ್ಟು ಕಡೆ ಅವರು ತೊಂದರೆಗೂ ಈಡಾಗುತ್ತಿದ್ದಾರೆ. ಅಲ್ಲಿ ಕೋಲಾರದಲ್ಲಿ ಕೂಡ ಘಟನೆ ನಡೆಯಿತು. 1983 ರಲ್ಲಿ ಕ್ರಾಂತಿ ಸಂಪಾದಕರ ಕೊಲೆ ಗುಲ್ಬರ್ಗಾದಲ್ಲಿ ಆಯಿತು. ಇವೆಲ್ಲಾ ನಿದರ್ಶನಗಳು ಇದ್ದಾವೆ. ಅದಕ್ಕಾಗಿ ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ಇಲ್ಲಿಗೆ ಬರುವುದಕ್ಕೆ ಮುಂಚೆ ವಿಧಾನ ಪರಿಷತ್ತಿನಲ್ಲಿ ಮಾತನಾಡಿದ್ದೇನೆ, ನಾವು ಎಲ್ಲಾ ಕಡೆಗೂ ಆದೇಶವನ್ನು ಕೊಟ್ಟಿದ್ದೇವೆ. ಡಿಜಿ ಮತ್ತು ಪೋಲೀಸ್ ಕಮಿಷನರ್‌ಗೂ ಕೂಡ ಹೇಳಿದ್ದೇವೆ. ಮತ್ತೆ ನಾವು ಪೂರ್ಣವಾದ ವರದಿಯನ್ನು ಇವತ್ತು ತರಿಸಿ ಎಲ್ಲಿ ಘಟನೆಯಾಗಿದೆ. ಪತ್ರಕರ್ತರಿಗೆ ಯಾರು ತೊಂದರೆ ಮಾಡಿದ್ದಾರೆ. ಎಲ್ಲಿ ಬಂಧಿಸಬೇಕು ಎಂಬ ಬಗ್ಗೆ ಎಲ್ಲಾ ಪರಿಶೀಲನೆ ಮಾಡುತ್ತೇವೆ ಮಾನ್ಯ ಜಗದೀಶ್ ಶೆಟ್ಟರ್‌ರವರ ಅಪೇಕ್ಷೆ ಸರ್ಕಾರದ್ದು ಇದೆ, ಅದನ್ನು ನಿಜವಾಗಿ ಕೂಡ ಮಾಡುತ್ತೇವೆ, ಮತ್ತೆ ಅದಕ್ಕೆ ನಾಳೆಯೇ ಅಥವಾ ನಾಡಿದ್ದೋ I will make a statement in the House.

(ಅಂಕೋಲ) : (ಎ) ವಿಷಯ : ಉತ್ತರ ಕನ್ನಡ ಜಿಲ್ಲೆಯಲ್ಲಿ ರಾಜ್ಯದ ಹೆದ್ದಾರಿ ಅಭಿವೃದ್ಧಿ ಯೋಜನೆ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಕರ್ನಾಟಕ ರಾಜ್ಯದ ಹೆದ್ದಾರಿ ಅಭಿವೃದ್ಧಿ ಯೋಜನೆ, ಇದರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲವು ಪ್ಯಾಕೇಜುಗಳಲ್ಲಿ ಆಗುತ್ತಿರುವ ವಿಳಂಬ ಕುರಿತು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ನಾನು ತಮಗೆ

ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಾನು ಈಗಾಗಲೇ ಈ ವಿಷಯಗಳನ್ನು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಮಾನ್ಯ ಪಿಡಬ್ಲ್ಯೂಡಿ ಮಂತ್ರಿಗಳು ಸಹಾ ನಿಯಮ 351 ರ ಅಡಿಯಲ್ಲಿ ಉತ್ತರವನ್ನೂ ಕೂಡ ದೊರಕಿಸಿಕೊಟ್ಟಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ KSHIP ನವರು ಅಂದರೆ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಕೆಲವು ಪ್ಯಾಕೇಜುಗಳನ್ನು ತೆಗೆದುಕೊಂಡಿದ್ದಾರೆ. M 24, 25, 26, 27 ಮತ್ತು 28. ಇವೆಲ್ಲವೂ ಇಷ್ಟು ಅವಧಿಯೊಳಗೆ ಮುಗಿಯಬೇಕಾಗಿತ್ತು. ಆದರೆ ವಿಶೇಷವಾಗಿ M 25 ಅಂದರೆ ಶಿರಸಿ ಮತ್ತು ಯಲ್ಲಾಪುರದ ಮಧ್ಯೆ ಇರುವ ಪ್ಯಾಕೇಜು. ಈ ಕೆಲಸವು 1-10-2004 ಕ್ಕೆ ಮುಗಿಯಬೇಕಾಗಿತ್ತು. 50 ಕಿಲೋ ಮೀಟರ್‌ನ ಈ ಕೆಲಸ ಸುಮಾರು 17 ಕೋಟಿ ರೂಪಾಯಿ ಕೆಲಸ 1-10-2004 ಕ್ಕೆ ಮುಗಿಯಬೇಕಾಗಿತ್ತು. ಆದರೆ ಇದುವರೆಗೆ ಕೇವಲ ಮೂರು ಕಿಲೋಮೀಟರ್ ಮಾತ್ರ ಅದು ಅರ್ಧ ಕೆಲಸವನ್ನು ಮಾಡಿಬಿಟ್ಟಿದ್ದಾರೆ. ಇನ್ನು 47 ಕಿಲೋ ಮೀಟರ್ ಕೆಲಸಗಳು ಹಾಗೆಯೇ ಬಾಕಿ ಇದೆ. ಅದು ಮುಗಿದು ಮೂರು ತಿಂಗಳು ಆಗಬೇಕಾದಂಥ ಕೆಲಸಕ್ಕೆ ಕೇವಲ ಮೂರು ಕಿಲೋಮೀಟರ್ ಮಾತ್ರ ಆಗಿದೆ. ಇನ್ನು 47 ಕಿಲೋ ಮೀಟರ್ ಕೆಲಸ ಬಾಕಿ ಇದೆ. ಆದರೆ ಗುತ್ತಿಗೆದಾರರಿಗೆ ಶೇಕಡ 10 ಪರ್‌ಸೆಂಟ್ ದಂಡ ಹಾಕಿದ್ದೇವೆ. ಇನ್ನು ಅವರನು ಟರ್ಮಿನೇಟ್ ಮಾಡುವುದಕ್ಕೆ ಮಾತ್ರ. ನಮಗೆ ಉಳಿದಿರುವ ಅವಕಾಶ ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಈ ರೀತಿ ವಿಳಂಬ ಮಾಡುತ್ತಿರುವ ಗುತ್ತಿಗೆದಾರರ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ತಮಗೆ ಇರುವ ತೊಂದರೆಗಳೇನು? ತಾವು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿಯೂ ಈ ವಿಷಯವನ್ನು ಪ್ರಸ್ತಾಪ ಮಾಡಿರುವುದರಿಂದಾಗಿ ಇದಕ್ಕೆ ತಾವು ಮತ್ತು ಮಾನ್ಯ ಮುಖ್ಯಮಂತ್ರಿಗಳ ಜೊತೆ ಸೇರಿ ಈ ಗುತ್ತಿಗೆದಾರರನ್ನು ಟರ್ಮಿನೇಟ್ ಮಾಡಿ ಕೆಲಸವನ್ನು ಸಮರ್ಪಕವಾಗಿ ಮಾಡುವ ಬೇರೆ ಗುತ್ತಿಗೆದಾರರಿಗೆ ಕೊಡಬೇಕು. ನಿಗದಿತ ಅವಧಿಯೊಳಗೆ ಈ ಕೆಲಸಗಳಾಗಬೇಕು. ಇದು ಬರೀ M 25 ಬಗ್ಗೆ ಮಾತ್ರವಲ್ಲ ಇನ್ನು ಅನೇಕ ಪ್ಯಾಕೇಜ್‌ಗಳು ಇದು ರಾಜ್ಯದ ರಸ್ತೆಗಳ ಅಭಿವೃದ್ಧಿ ಕುರಿತಂತೆ ಮಾಡಿರುವ ಪ್ಯಾಕೇಜ್‌ಗಳು, ಒಟ್ಟು ಸುಮಾರು 45 ಪ್ಯಾಕೇಜ್‌ಗಳಲ್ಲಿ ಕೇವಲ ಒಂಭತ್ತು ಪ್ಯಾಕೇಜ್‌ಗಳು ಮಾತ್ರ ಮುಗಿದಿದೆ. ಉಳಿದ ಪ್ಯಾಕೇಜ್‌ಗಳು ಮುಗಿದಿಲ್ಲ. ಹಾಗಾಗಿ ಬಹಳ ವಿಳಂಬವಾಗುತ್ತಿದೆ. ಇದರಿಂದ ಕರ್ನಾಟಕದ ರಸ್ತೆಗಳೆಲ್ಲಾ ಹಾಳಾಗಿ ಹೋಗಿದೆ. ಇದರ ಬಗ್ಗೆ ಸರ್ಕಾರದವರು ತಕ್ಷಣ ಗಮನವನ್ನು ಕೊಡಬೇಕು. ಮತ್ತು M 25 ಪ್ಯಾಕೇಜ್‌ನಲ್ಲಿ ರಸ್ತೆ ಹೊಂಡ ಬಿದ್ದುಹೋಗಿದೆ. ಓಡಾಡುವುದಕ್ಕೂ ಯೋಗ್ಯವಾಗಿಲ್ಲ, ಹಾಗಾಗಿ ಓಡಾಡುವುದಕ್ಕೆ ತಕ್ಷಣ ಇಲ್ಲಿಂದ ನಿರ್ದೇಶನವನ್ನು ಕೊಟ್ಟು ಅದಕ್ಕೆ Pothole ಅನ್ನು ಮುಚ್ಚಿಸಬೇಕು. ಈ ಕೆಲಸವನ್ನು ಆ ಗುತ್ತಿಗೆದಾರರಿಂದ ಮಾಡಿಸಬೇಕು ಇಲ್ಲದಿದ್ದರೆ ಇಲಾಖಾ ವತಿಯಿಂದಲಾದರೂ ತಾವೂ ಮಾಡಿಸಬೇಕೆನ್ನುವ ಆಗ್ರಹವನ್ನು ಮಾಡುತ್ತೇನೆ. ಮತ್ತು ಗುತ್ತಿಗೆದಾರರ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಬದ್ಧವಾಗಿಯೇ ಇಲ್ಲವೋ ಅಥವಾ ಅದಕ್ಕೆ Pothole ಇರುವ ತೊಂದರೆ ತೊಡಕುಗಳೇನು ಎನ್ನುವುದನ್ನು ಸ್ಪಷ್ಟಪಡಿಸಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರೇನು M 25 ಯಲ್ಲಾಪುರ ಶಿರಸಿ ರಸ್ತೆ ಮಧ್ಯೆ 1-10-2004 ಕ್ಕೆ ರಸ್ತೆ

ಕಾಮಗಾರಿ ಮುಗಿಯಬೇಕಾಗಿತ್ತು ಅದು ಮುಗಿದಿಲ್ಲ. ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎನ್ನತಕ್ಕ ಪ್ರಶ್ನೆ ಮಾಡಿದ್ದಾರೆ. ಈಗಾಗಲೇ ನಾವು ಕಾಂಟ್ರಾಕ್ಟರ್ ಮೇಲೆ ಫೈನಾಲ್ಟಿಯನ್ನು ಹಾಕಿದ್ದೇವೆ. ಆದರೆ ಒಂದೇ ಸಾರಿ ಕಾಂಟಾಕ್ಟರ್‌ಗೆ ಏನಾದರೂ ಮಾಡಿದರೆ ಅವರು ಕೋರ್ಟಿಗೆ ಹೋಗುತ್ತಾರೆ ಎನ್ನುವ ಉದ್ದೇಶದಿಂದಲೇ ನಾವು ಅವರಿಗೆ ಒಂದು ಸಾರಿ ಎರಡು ಸಾರಿ ಅವಕಾಶವನ್ನು ಕೊಟ್ಟಿದ್ದೇವೆ. ನಾನು ನಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ, ಅವರೇನಾದರೂ ಮಾಡುವುದಿಲ್ಲ ಎನ್ನುವ ಸನ್ನಿವೇಶಕ್ಕೆ ಬಂದರೆ ಅವರನ್ನು ವಜಾ ಮಾಡುವುದಕ್ಕೂ ನಾವು ರೆಡಿ ಇದ್ದೇವೆ. ಅದರಲ್ಲೇನೂ ಯಾವ ದಾಕ್ಷಿಣ್ಯವೂ ಇಲ್ಲ, ಆದರೆ ಅವರೇನಾದರೂ ಕೋರ್ಟಿಗೆ ಹೋಗಿ ಮತ್ತೆ ಎರಡು-ಮೂರು ವರ್ಷ ಕೆಲಸ ಕುಂಠಿತವಾಗುತ್ತದೆ ಎನ್ನುವ ದೃಷ್ಟಿಯಲ್ಲಿ ನಾವು ಇದನ್ನು ಮಾಡಿದ್ದೇವೆ. ತಾವೇನು ಹೇಳಿದ್ದೀರಿ, ಅದನ್ನು ನಾನು ಸಂಬಂಧಪಟ್ಟ ಅಧಿಕಾರಿಗಳ ಕಡೆಯಿಂದ ಯಾರು ಕಂಟ್ರಾಕ್ಟರ್ ಇದ್ದಾರೆ, ಅವರು ಕೂಡಲೇ ಕಾಮಗಾರಿಯನ್ನು ಮುಗಿಸುವುದಕ್ಕೆ ನಾನು ಸೂಚನೆಯನ್ನು ಕೊಡುತ್ತೇನೆ. ಅವರೇನಾದರೂ ಮಾಡುವುದಿಲ್ಲವೆಂದರೆ ಅವರ ಮೇಲೆ ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳುವುದಕ್ಕೂ ನಾನು ಸಿದ್ಧನಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಓಡಾಡುವುದಕ್ಕೆ ಯೋಗ್ಯವಾದ ರೀತಿಯಲ್ಲಾದರೂ Pothole ನ್ನಾದರೂ ಮಾಡಿಸಿ.

ಅಧ್ಯಕ್ಷರು : ಹೇಳಿದ್ದಾರಲ್ಲಪ್ಪ, ಆಯಿತು. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು.

(ಐ) ವಿಷಯ : ಹಲಸೂರು ಲೇಕ್‌ನಲ್ಲಿ ಮೀನುಗಳ ಸಾವಿನ ಬಗ್ಗೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ ಇವತ್ತು ಬೆಳಿಗ್ಗೆ ಹಲವಾರು ಪತ್ರಿಕೆಗಳಲ್ಲಿ ನಾವೊಂದು ಸುದ್ಧಿಯನ್ನು ಓದಿದ್ದೇವೆ. ಹಲಸೂರು ಲೇಕ್‌ನಲ್ಲಿ ಮೀನುಗಳ ಸಾವು" ಎಂಬ ವಿಚಾರ ಇವತ್ತು ಪತ್ರಿಕೆಗಳಲ್ಲಿ ಬಂದಿದೆ. ಅದಕ್ಕೆ ಅಧಿಕಾರಿಗಳ ಹೇಳಿಕೆ ಪತ್ರಿಕೆಯಲ್ಲಿ 'ಬಂದಿರುವಂತೆ Deplutation of oxgen ಕಾರಣ ಇತ್ತೀಚೆಗೆ ಕಾರ್ಪೋರೇಷನ್‌ನವರು ಲಕ್ಷಾಂತರ ರೂಪಾಯಿ ಖರ್ಚನ್ನು ಮಾಡಿ ಶುದ್ಧೀಕರಣವನ್ನು ಮಾಡಿದಂತಹ ಒಂದು ಕೆರೆಯಲ್ಲಿ ಆಕ್ಸಿಜನ್ ಡಿಪ್ಲೀಷನ್ ಹೇಗೆ ಆಗುತ್ತದೆ ಎಂಬುದು ನನಗೆ ಗೊತ್ತಿಲ್ಲ. ಒಂದು ಸುದ್ದಿ ಪ್ರಕಾರ ಹಲಸೂರು ಲೇಕ್‌ನಲ್ಲಿ ಸ್ವಿಮ್ಮಿಂಗ್ ಪೂಲ್‌ನಲ್ಲಿ ಕೆಮಿಕಲ್ಸ್ ಹಾಕಿ ಅದನ್ನೆಲ್ಲಾ ವಾಶ್ ಮಾಡಿ ಅದನ್ನು ಹಲಸೂರು ಕೆರೆಗೆ ಬಿಟ್ಟಿದ್ದರಿಂದ ಈ ಮೀನುಗಳ ಸಾವು ಆಗಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಅದರ ಬಗ್ಗೆ ಮಾನ್ಯ ಮೀನುಗಾರಿಕೆ ಸಚಿವರು ಯಾರು ಎಂದು ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಲು ಇಚ್ಛೆಪಡುತ್ತೇನೆ. ಅವರು ಅದರ ಬಗ್ಗೆ ತನಿಖೆ ಮಾಡಬೇಕು. ತನಿಖೆ ಮಾಡಿ ಅಲ್ಲಿನ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾನು ಯಾರಿಗೆ ವಿಷಯ ಹೇಳಿದೆ ಎಂಬುದು ನನಗೇ ಗೊತ್ತಿಲ್ಲ. ನಾನು ಏನನ್ನು ಹೇಳಿದೆ? ಯಾರಿಗೆ ಹೇಳಿದೆ ಎಂದು ನನಗೇ ಗೊತ್ತಿಲ್ಲ. ಉತ್ತರ ಯಾರು ಕೊಡುತ್ತಾರೆಂದು ನನಗೆ ಗೊತ್ತಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮೂರು-ನಾಲ್ಕು ದಿವಸದಿಂದ ಸಾವಿರಾರು ಮೀನುಗಳು ಸತ್ತು ಹೋಗಿವೆ ಎಂದು ಹೇಳಿ ಇವತ್ತು ಪತ್ರಿಕೆಯಲ್ಲಿ ಬಂದಿರತಕ್ಕ ಮಾಹಿತಿಯನ್ನು ಆಧರಿಸಿ, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಈಗಾಗಲೇ ಸರ್ಕಾರದ ಗಮನಕ್ಕೆ ಈ ವಿಚಾರವನ್ನು ತಂದಿದ್ದಾರೆ.

ಅದಕ್ಕೆ ಕಾರಣವೇನು? ಯಾಕೆ ಹೀಗಾಗಿದೆ ಎನ್ನುವ ಬಗ್ಗೆಯೂ ವಿಚಾರಣೆ ಮಾಡುತ್ತೇವೆ. ಈ ರೀತಿ ಆಗದ ಹಾಗೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ಬಗ್ಗೆ ಸೂಕ್ತವಾಗಿರತಕ್ಕಂಥ ಕಾರ್ಯಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

(ಒ) ವಿಷಯ : ಸಿರಗುಪ್ಪದಲ್ಲಿ ನಡೆದ ಪೋಲೀಸ್ ಲಾಠಿ ಛಾರ್ಜ್ ಬಗ್ಗೆ

ಶ್ರೀ ಎಂ. ಎಸ್. ಸೋಮಲಿಂಗಪ್ಪ ಸಿರಗುಪ್ಪ) : ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಪೋಲೀಸ್ ಲಾಠಿ ಛಾರ್ಜ್‌ನಿಂದು ಒಬ್ಬರು ಸತ್ತಿದ್ದಾರೆ. ಅದರ ಬಗ್ಗೆ ಒಂದು ನಿಮಿಷ ಮಾತನಾಡಬೇಕು.

ಅಧ್ಯಕ್ಷರು : ನಾಳೆ ನಿಮಗೆ ಅವಕಾಶ ಕೊಡುತ್ತೇನೆ. ನೀವು ನೋಟೀಸ್ ಕಳುಹಿಸಬೇಕು.

ಶ್ರೀ ಎಂ.ಹೆಚ್.ಎಸ್. ಸೋಮಲಿಂಗಪ್ಪ : ನೋಟೀಸ್ ಕಳುಹಿಸಿ ಮೂರು ದಿವಸ ಆಯಿತು

ಅಧ್ಯಕ್ಷರು : ನೋಟೀಸ್ ಕಳುಹಿಸಿ ನಾಳೆ ಅವಕಾಶ ಮಾಡಿಕೊಡುತ್ತೇನೆ.

ಓ) ಕರ್ನಾಟಕ ರಾಜ್ಯ ಪತ್ರದಲ್ಲಿ ಸರ್ಕಾರಿ ಆದೇಶಗಳ ಆಂಗ್ರಭಾಷೆಯಲ್ಲಿ ಪ್ರಕಟವಾಗುತ್ತಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಒಂದು ನಿಮಿಷ ಹೇಳುತ್ತೇನೆ. ಸ್ವಲ್ಪ ಕುಳಿತುಕೊಳ್ಳಿ. ತಾವು ಏಳುವ ಉದ್ವೇಗದಲ್ಲಿ ನಾನು ಏನು ಹೇಳಬೇಕು ಎಂದು ಅರ್ಥ ಆಗುವುದಿಲ್ಲ. ಈ ಸರ್ಕಾರದ ನೀತಿ 'ಆಡಳಿತ ಭಾಷೆ ಕನ್ನಡ' ಮಾನ್ಯ ಮುಖ್ಯಮಂತ್ರಿಗಳಲ್ಲಿ ಗಮನ ಸೆಳೆಯುತ್ತಿದ್ದೇನೆ. ಸರ್ಕಾರದ ನೀತಿ ಹಾಗು ಆಡಳಿತ ಭಾಷೆ ಕನ್ನಡ. ಆದರೆ ಸರ್ಕಾರದ ಎಲ್ಲಾ ಆದೇಶಗಳೂ ಇಂಗ್ಲೀಷ್‌ನಲ್ಲಿವೆ. ಉತ್ತರ ಕೊಟ್ಟಿರತಕ್ಕದ್ದು ಇಂಗ್ಲೀಷ್, ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಕನ್ನಡದಲ್ಲಿ ಕೊಡಲೇ ಇಲ್ಲ, ಇದು ಇಂಗ್ಲೀಷ್‌ನಲ್ಲಿದೆ. ಐಪಿಡಿ ಸಾಲಪ್ಪನವರು ಪೌರ ಕಾರ್ಮಿಕರಿಗೆ ಸೌಲಭ್ಯಗಳನ್ನು ಕೊಡುವ ಬಗ್ಗೆ ಅವರು ಕೊಟ್ಟಿರತಕ್ಕ ವರದಿ ಯಥಾವತ್ತಾಗಿ ಇಂಗ್ಲೀಷ್‌ನಲ್ಲಿ ಹಾಕಿದ್ದಾರೆ. ಇದರ ಜೊತೆಗೆ ಕರ್ನಾಟಕ ರಾಜ್ಯ ಪತ್ರದ ಪ್ರತಿ ಒಂದು ಆದೇಶಗಳೂ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ನೋಡಿ ಎಲ್ಲಾ ಇಂಗ್ಲೀಷ್‌ನಲ್ಲಿದೆ. ಒಂದಾದರೂ ಕನ್ನಡದಲ್ಲಿ ಇದೆಯೇ? ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ, ನೋಡಿ ಪ್ರತಿ ಒಂದು ಆದೇಶ ಇಂಗ್ಲೀಷ್‌ನಲ್ಲಿದೆ. ನಮಗೆ ಒದಗಿಸಿರುವುದು, ಇಡೀ ಸದನಕ್ಕೆ ಒದಗಿಸಿರುವುದು ಎಲ್ಲಾ ಕನ್ನಡ ಇದೆಯೇ, ಇಲ್ಲ ಇಂಗ್ಲೀಷ್‌ನಲ್ಲಿದೆ. ತಮಗೆ ಹೇಳುತ್ತೇನೆ. ಇದರಲ್ಲಿ ಯಾವುದಾದರಾದರೂ ಒಂದರ ಬಗ್ಗೆ ಸರ್ಕಾರದ ನಿಲುವು ಏನು?

ಅಧ್ಯಕ್ಷರು : ಉತ್ತರ ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ನಿಲುವು ಏನು ಎಂಬುದನ್ನು ಹೇಳಲಿ.

ಅಧ್ಯಕ್ಷರು : ಸರ್ಕಾರದ ನಿಲುವನ್ನು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಈ ರಾಜ್ಯಪತ್ರ–ಮೇಲೆ ಹೆಸರಿಗೆ ರಾಜ್ಯಪತ್ರ: ಆದರೆ ಎಲ್ಲಾ ಆದೇಶ ಇಂಗ್ಲೀಷ್‌ನಲ್ಲಿದೆ. ಆದರೆ ರಾಜ್ಯಪತ್ರದ ಹೆಸರು ಕನ್ನಡದಲ್ಲಿ ಇದೆ. ಇದರ ಬಗ್ಗೆ ನಾವೇನು ಮಾಡಬೇಕು? ಇದರ ಬಗ್ಗೆ ನಾವು ಮಾತನಾಡಬೇಕೇ ಅಥವಾ ಬಿಡಬೇಕೇ? ತಾವು ಹೇಳಿ, ಸರ್ಕಾರದ ನೀತಿ ಬಗ್ಗೆ ಹೇಳಲಿ. ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ ಅವರೆ, ಮಾನ್ಯ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಪ್ರತಿ ಒಂದು ಪುಟ–ಪುಟ ಇಂಗ್ಲೀಷ್‌ನಲ್ಲಿದೆ. ಒಂದು ಅಕ್ಷರ ಕನ್ನಡದಲ್ಲಿ ಇಲ್ಲ. ಇಡೀಪುಟ ನೋಟ ಸಂಪೂರ್ಣ ಇಂಗ್ಲೀಷ್‌ನಲ್ಲಿದೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಕನ್ನಡಕ್ಕೆ ಈ ಪರಿಸ್ಥಿತಿ ಆದರೆ ಹೇಗೆ? ನಮ್ಮ ರಾಜ್ಯದಲ್ಲಿ ಏಕೆ ಕನ್ನಡದಲ್ಲಿ ಕೊಡುವುದಕ್ಕೆ ಆಗುವುದಿಲ್ಲ. ಆಡಳಿತ ಭಾಷೆ ಕನ್ನಡ ಅಲ್ಲವೇ?

SRI MANOHAR KALLAPPA KINEKAR : We are not knowing kannada. that is why they have given it in English. (ಮಾನ್ಯ ವಾಟಾಳ್ ನಾಗರಾಜ್ ಅವರು ಕರ್ನಾಟಕ ರಾಜ್ಯ ಪತ್ರದ ಪುಟಗಳನ್ನು ಹರಿದು ಹಾಕುತ್ತಾ ಮಾತನಾಡಿದರು)

ಅಧ್ಯಕ್ಷರು : ಒಂದು ನಿಮಿಷ ಎಂದು ಹೇಳಿ ಎಲ್ಲಾ ಪುಟವನ್ನು ಕಿತ್ತು ಹಾಕುತ್ತಿದ್ದೀರಿ. ಈ ತರಹ ಮಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ಒಂದಾದರೂ ಕನ್ನಡದಲ್ಲಿ ಇದೆಯಾ? ಎಲ್ಲಾ ಇಂಗ್ಲೀಷ್‌ನಲ್ಲಿದೆ.

SRI MANOHAR KALLAPPA KINEKAR : sir, we are not knowing kannada. It should be in kannada and English, both the languages.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ನೀತಿ ಬಗ್ಗೆ ನೋವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೆ? ಅವರಲ್ಲಿ ನಾನು ಅತ್ಯಂತರ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ದಯಮಾಡಿ, ತಾವು ಆಡಳಿತ ಭಾಷೆ ಕನ್ನಡ ಎಂದು ಒಪ್ಪಿದರೆ ತಾವು ಏನು ಮಾಡಬೇಕು ಎಂದು ಹೇಳಿ.

SRI MANOHAR KALLAPPA KINEKAR : It should be in both the languages. we are not knowing kannada, so we can understand if they give it in English.

ಶ್ರೀ ವಾಟಾಳ್ ನಾಗರಾಜ್ : ಇದು ಮರಾಠಿ ರಾಜ್ಯವಲ್ಲ. ಕರ್ನಾಟಕ ರಾಜ್ಯ. ತಾವ ದಯಮಾಡಿ.

SRI MANOHAR KALLAPPA KINEKAR : We also should understand; If they give in kannada. how can be understand?

ಶ್ರೀ ವಾಟಾಳ್ ನಾಗರಾಜ್ : ಪರಿಸ್ಥಿತಿ ಏನಾಗಿದೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸ್ಪಷ್ಟನೆ ಕೊಡಬೇಕು.

(ಗೊಂದಲ)

SRI MANOHAR KALLAPPA KINEKAR : actually that should be provided in Maruthi also. That is our right.

ಶ್ರೀ ವಾಟಾಳ್ ನಾಗರಾಜ್ : ಕನ್ನಡಕ್ಕೆ ಹೋರಾಟ ಮಾಡಿದ್ದೇನೆ. ಸುಮಾರು ನಿರಂತರವಾಗಿ 40 ವರ್ಷಗಳ ಕಾಲ ಕರ್ನಾಟಕದ ಅಭ್ಯುದಯಕ್ಕೆ ಹೋರಾಟ ಮಾಡಿದ್ದೇನೆ. ನನಗೆ ನೋವಾಗುತ್ತದೆ. ಈ ಸದನದಲ್ಲಿ ನೋವಾಗುತ್ತದೆ. ದಯಮಾಡಿ ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಸರ್ಕಾರದ ನಿಲವು ಏನು ಎಂದು ಸ್ಪಷ್ಟಪಡಿಸಬೇಕು ಎಂದು ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

SRI MANOHAR KALLAPPA KINEKAR : I can understand. In karnataka, so many minority people are also there. To safeguard the right of the minorities, it should be in English and Marathi also.

ಅಧ್ಯಕ್ಷರು : ಈಗ ಶೂನ್ಯ ವೇಳೆಯಲ್ಲಿ ವಿಚಾರ ಹೇಳುತ್ತಿದ್ದಾರೆ. ಈಗ ಯಾರು ಉತ್ತರ ಕೊಡುತ್ತಾರೆ?

(ಮಾನ್ಯ ಸದಸ್ಯರಾದ ಶ್ರೀ ಮನೋಹರ್ ಕಲ್ಲಪ್ಪ ಕಿನೇಕರ್ ಅವರು ಮರಾಠಿ ಭಾಷೆಯಲ್ಲಿ ಮಾತನಾಡಿದರು)

ಅಧ್ಯಕ್ಷರು : ಮಾನ್ಯ ಸಂಸದೀಯ ಸಚಿವರು ಉತ್ತರ ಹೇಳಿ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ವಾಟಾಳ್ ನಾಗರಾಜ್ ಅವರು.....

(ಮಾನ್ಯ ಸದಸ್ಯರಾದ ಶ್ರೀ ಮನೋಹರ್ ಕಲ್ಲಪ್ಪ ಕಿನೇಕರ್ ಅವರು ಮರಾಠಿ ಭಾಷೆಯಲ್ಲಿ ಮಾತನಾಡುತ್ತಿದ್ದರು)

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾಳೆ ಅವರು ಸಂಸ್ಕೃತ ಮಾತನಾಡುತ್ತೇವೆಂದು ಹೇಳುತ್ತಾರೆ.

(ಗೊಂದಲ)

(ಮಾನ್ಯ ಸದಸ್ಯರಾದ ಶ್ರೀ ಮನೋಹರ್ ಕಲ್ಲಪ್ಪ ಕಿನೇಕರ್ ಅವರು ಮರಾಠಿಯಲ್ಲಿ ಮಾತನಾಡುತ್ತಿದ್ದರು)

ಶ್ರೀ ಹೆಚ್.ಕೆ. ಪಾಟೀಲ್ : ಕನ್ನಡದಲ್ಲಿ ನಾವು ಯಾವುದೇ ಆದೇಶ ಕೊಡದೇ ಇದ್ದರೆ ಆರೋಪಕ್ಕೆ ನಾವು ಹೊಣೆಗಾರರು ಆಗುತ್ತೇವೆ. ಆದರೆ ಕನ್ನಡ ಆಡಳಿತ ಭಾಷೆಯನ್ನು 100ಕ್ಕೆ 100ರಷ್ಟು ಅನುಷ್ಠಾನಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅದನ್ನು ಬಿಟ್ಟು ಯಾರು ಏನೇ ಹೇಳಿದರೂ ಕೇಳುವುದಿಲ್ಲ. ಕನ್ನಡಕ್ಕೆ ಅಗ್ರಸ್ಥಾನ ಇದೆ. ಯಾರು ಏನೇ ಹೇಳಿದರೂ ಕನ್ನಡಕ್ಕೆ ಅಗ್ರಸ್ಥಾನ ಇದೆ. ಅದನ್ನು ನಾವು ಕೊಟ್ಟೇ ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಬೇಕಾದರೆ ಗೌರವವಾಗಿ ಅವರು ಈ ಸದನದಲ್ಲಿ ಇರಲಿ. ಇಲ್ಲವಾದರೆ ಗೌರವವಾಗಿ ಅವರು ಮಹಾರಾಷ್ಟ್ರ ಹೋಗಬಹುದು.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್ ಅವರ ನೋವನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ. ಆದೇಶವನ್ನು ಕನ್ನಡದಲ್ಲಿ ಕೊಟ್ಟಿಲ್ಲ. ಇಂಗ್ಲೀಷ್‌ನಲ್ಲಿ ಮಾತ್ರ ಕೊಟ್ಟಿದ್ದಾರೆ ಎನ್ನುವಂತಹದನ್ನು ನಮಗೆ ಅವರು ಒಂದೊಂದಾಗಿ ತೋರಿಸಿದ್ದರು. ಒಂದೇ ಆದೇಶವನ್ನು ಬೇರೆ ಬೇರೆ ಪಾರ್ಟ್ ಮಾಡಿ ಕೊಟ್ಟರೋ ಏನೋ ನೋಡಲಿಲ್ಲ. ದಯಮಾಡಿ ಅದನ್ನು ಕೊಡಿ. ಕನ್ನಡದಲ್ಲಿ ಇಲ್ಲದೇ ಇದ್ದರೆ ಅದನ್ನು ತಕ್ಷಣ ಕನ್ನಡೀಕರಣ ಮಾಡಿ ನಾವು ಅದನ್ನು ತಮಗೆ ಒದಗಿಸುತ್ತೇವೆ. ಹಾಗೂ ಇನ್ನು ಮುಂದೆ ಎಲ್ಲಾ ಆದೇಶಗಳನ್ನೂ ಸಹಿತ ಕನ್ನಡದಲ್ಲೇ ಹೊರಡಿಸತಕ್ಕ ಸರ್ವ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ.

ಅಧ್ಯಕ್ಷರು : ಈಗ ಸದನವನ್ನು 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 2.08ಕ್ಕೆ ಮುಂದೂಡಲ್ಪಟ್ಟು ಮತ್ತೆ 3.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಭೋಜನ ವಿರಾಮದ ನಂತರ ಪುನಃ ಮಧ್ಯಾಹ್ನ 3.22ಕ್ಕೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರಾದ ಶ್ರೀ ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

4. ಶಾಸನ ರಚನೆ

ವಿಧೇಯಕವನ್ನು ಮಂಡಿಸುವುದು

ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2005

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು): ಮಾನ್ಯ ಧ್ಯಕ್ಷರೇ, 2005ನೇ ಸಾಲಿನ ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅನುಮತಿ ೀರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ, "2005ನೇ ಸಾಲಿನ ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಸ್ತಾವ ಅಂಗೀಕಾರವಾಯಿತು

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು): ಮಾನ್ಯ ್ಯಕ್ಷರೇ, "2005ನೇ ಸಾಲಿನ ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ ವಿಧೇಯಕವನ್ನು ಮಂಡಿಸುತ್ತೇನೆ." ನುಬಂಧ-1)

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

5. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) ಾನ್ಯ ಮುಖ್ಯಮಂತ್ರಿಗಳ ಪರವಾಗಿ)

1956ರ ಕಂಪನಿ ಕಾಯಿದೆ 619(ಎ) ಪ್ರಕರಣದ ಮೇರೆಗೆ :

1. ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತದ 2003-04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.

ಶ ಸಂವಿಧಾನದ ಅನುಚ್ಛೇದ 323ರ ಪರಿಚ್ಛೇದ (2)ರ ಅನ್ವಯದ ಮೇರೆಗೆ :

1. ಕರ್ನಾಟಕ ಲೋಕಸೇವಾ ಆಯೋಗದ 2001-02ನೇ ಸಾಲಿನ ವಾರ್ಷಿಕ ವರದಿ.

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5) ಮತ್ತ 49ನೇ ಪ್ರಕರಣದ ಮೇರೆಗೆ:

1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 2002-03ನೇ ಸಾಲಿನ ಆಡಳಿತ ವರದಿ.
2. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ 2003-04ನೇ ಸಾಲಿನ ವಾರ್ಷಿಕ ವರದಿ.
- ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ 2003-04ನೇ ಸಾಲಿನ ವಾರ್ಷಿಕ ವರದಿ.
- ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ 2002-03ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ವಾರ್ಷಿಕ ವರದಿ ಮತ್ತು 2003-04ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
- ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ 2003-04ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು ವಾರ್ಷಿಕ ವರದಿ ಹಾಗೂ 2002-03ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
- ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2003-04ನೇ ಸಾಲಿನ ವಾರ್ಷಿಕ ವರದಿ ಹಾಗೂ 2002-03ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

7. ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ 2001–02, 2002–03 ಹಾಗೂ 2003–04ನೇ ಸಾಲಿನ ವಾರ್ಷಿಕ ವರದಿ ಹಾಗೂ 1998–99, 1999–2000, 2001–02 ಮತ್ತು 2003–04ನೇ ಸಾಲುಗಳ ಲೆಕ್ಕಪರಿಶೋಧನಾ ವರದಿಗಳು.
8. ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ 2003–04ನೇ ಸಾಲಿನ ವಾರ್ಷಿಕ ಹಾಗೂ ಲೆಕ್ಕಪರಿಶೋಧನಾ ವರದಿ.
9. ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2003–04ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿ.
10. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2003–04ನೇ ಸಾಲಿನ ಲೆಕ್ಕ ತಪಾಸಣಾ ವರದಿ.
11. ವಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2001–02ನೇ ಸಾಲಿನ ವಾರ್ಷಿಕ ವರದಿ.
12. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2003–04ನ ಸಾಲಿನ ವಾರ್ಷಿಕ ವರದಿ.
13. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
14. ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ 2003–04ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
15. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2003–04ನೇ ಸಾಲಿನ ಲೆಕ್ಕ ತನಿಖಾ ವರದಿ.
16. ರಾಮನಗರ–ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ 2003–04ನೇ ಸಾಲಿನ ವಾರ್ಷಿಕ ವರದಿ.
17. ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ 2003–04ನೇ ಸಾಲಿನ ವಾರ್ಷಿಕ ವರದಿ.
18. ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ 2003–04ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
19. ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ 2003–04ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
20. ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ವಾರ್ಷಿಕ ವರದಿ.

1973ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿನಿಯಮ, 39(1)ರ ಮೇರೆಗೆ

1. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2003–04ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

1964ರ ಬೆಂಗಳೂರು ಜಲಮಂಡಳಿಯ ಅಧಿನಿಯಮ. 17(1)ರ ಪ್ರಕರಣದ ಮೇರೆಗೆ:

1. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಾವೇರಿ ಭವನ, ಬೆಂಗಳೂರು 2003–04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು) (ಮಾನ್ಯ ಉಪಮುಖ್ಯ ಮಂತ್ರಿಗಳ ಪರವಾಗಿ)

II. **1951 ರಾಜ್ಯ ಹಣಕಾಸು ಸಂಸ್ಥೆ ಕಾಯ್ದೆ ಕಲಂ 37(7) ಮತ್ತು 38(3)ರ ಮೇರೆಗೆ :**

1. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ 2002-03ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ 2003-04ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು)

III **1980ರ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮ 25ರನ್ವಯ :**

1. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೃಷ್ಣಾ ಮೇಲ್ದಂಡೆ ಯೋಜನೆ, ಭೀಮರಾಯನಗುಡಿ, ಗುಲ್ಬರ್ಗಾ 2003-04ನೆ ಸಾಲಿನ ವಾರ್ಷಿಕ ವರದಿ.
2. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೃಷ್ಣ ಮೇಲ್ದಂಡೆ ಯೋಜನೆ, ಭೀಮರಾಯನಗುಡಿ, ಗುಲ್ಬರ್ಗಾ, 2002-03ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.
3. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ನೀರಾವರಿ ಯೋಜನೆಗಳ ವಲಯ, ಗುಲ್ಬರ್ಗಾ 2003-04ನೇ ಸಾಲಿನ ವಾರ್ಷಿಕ ವರದಿ ಹಾಗೂ 2001 ರಿಂದ 2003ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
4. ಭದ್ರಾ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗದ 2003-04ನೇ ಸಾಲಿನ ವಾರ್ಷಿಕ ವರದಿ.

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ :

1. ಕರ್ನಾಟಕ ನೀರಾವರಿ ನಿಗಮ ನಿಯಮಿತದ 2003-04ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧನಾ ವರದಿ.
2. ಕೃಷ್ಣಾ ಭಾಗ್ಯಜಲ ನಿಗಮ ನಿಯಮಿತದ 2003-04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 1956ರ ಅಧಿನಿಯಮ 33(2), 34(2) ಹಾಗೂ 35ರ ಪ್ರಕರಣದ ಮೇರೆಗೆ :

1. ಬೆಂಗಳೂರು ಮಹಾನಗರ ಸಂಸ್ಥೆ, ಶಾಂತಿನಗರ 2002-03ನೇ ಸಾಲಿನ ವಾರ್ಷಿಕ ಆಡಳಿತ ವರದಿ ಹಾಗೂ 2003-04ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ವರದಿ.
2. ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕೇಂದ್ರ ಕಛೇರಿ, ಗುಲ್ಬರ್ಗ, 2002-03ನೇ ಸಾಲಿನ ವಾರ್ಷಿಕ ಆಡಳಿತ ವರದಿ.
3. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು 2003-04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

V. ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) (ಬೃಹತ್ ಹಾಗೂ ಮಧ್ಯಮ ಕೈಗಾರಿಕೆ, ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರ ಪರವಾಗಿ) :

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ :

1. ಕರ್ನಾಟಕ ರೇಷ್ಮೆ ನಿಗಮ ನಿಯಮಿತದ 2001-02. 2002-03. ಹಾಗೂ 2003-04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕ ಪರಿಶೋಧನಾ ವರದಿ.

2. ಮೈಸೂರು ಮಿನರಲ್ಸ್ ನಿಯಮಿತದ 2002–03ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
3. ಕರ್ನಾಟಕ ಟ್ರಸ್ಟೀ ಕಂಪನಿ ಖಾಸಗಿ ನಿಯಮಿತ, 2002–03 ಹಾಗೂ 2003–04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
4. ಮೈಸೂರು ಸಕ್ಕರೆ ಕಂಪನಿ ನಿಯಮಿತ 2001–02ನೇ ಹಾಗೂ 2002–03ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
5. ಮೈಸೂರು ಪೇಯಿಂಟ್ಸ್ ಮತ್ತು ವಾರ್ನಿಷ್ ನಿಯಮಿತದ 2003–04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
6. ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತದ 2003–04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
7. ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ 2003–04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
8. ಕರ್ನಾಟಕ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿ ಪ್ರೈವೇಟ್ ನಿಯಮಿತ, ಬೆಂಗಳೂರು 2003–04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
9. ದಿ ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ನಿಯಮಿತದ 2003–04ನೇ ಸಾಲಿನ ವಾರ್ಷಿಕ ವರದಿ.
10. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ನಿಯಮಿತದ 2003–04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
11. ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿಯಮಿತ, 2003–04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
12. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತದ 2003–04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
13. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ 2003–04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
14. ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ನಿಯಮಿತ, 2003–04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
15. ಮೈಸೂರು ಪೇಪರ್ ಮಿಲ್ಸ್ ನಿಯಮಿತ, 2003–04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
16. ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ ನಿಯಮಿತ, 2003–04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
17. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ 2003–04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

V. ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

2000ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ 50(2)ರ ಮೇರೆಗೆ:

1. ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನ ಭಾರತಿ, ಬೆಂಗಳೂರು 2002–03ನೇ ಸಾಲಿನ ವಾರ್ಷಿಕ ವರದಿ.
2. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 2003–04ನೇ ಸಾಲಿನ ವಾರ್ಷಿಕ ವರದಿ.
3. ಮಂಗಳೂರು ವಿಶ್ವವಿದ್ಯಾಲಯ, ಮಂಗಳ ಗಂಗೋತ್ರಿ 2003–04ನೇ ಸಾಲಿನ ವಾರ್ಷಿಕ ವರದಿ.
4. ಮೈಸೂರು ವಿಶ್ವವಿದ್ಯಾಲಯ 2003–04ನೇ ಸಾಲಿನ ವಾರ್ಷಿಕ ವರದಿ.
5. ಕುವೆಂಪು ವಿಶ್ವವಿದ್ಯಾಲಯ 2003–04ನೇ ಸಾಲಿನ ವಾರ್ಷಿಕ ವರದಿ ಹಾಗೂ 2002–03ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

VI. ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ :

1. ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ 2003–04ನ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು) ಅವರು :

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ :

1. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ 2003–04ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ (ಮೆಸ್ಕಾಂ) ನಿಯಮಿತದ 2002–03ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
3. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು 2003–04ನೇ ಸಾಲಿನ ವಾರ್ಷಿಕ ವರದಿ.
4. ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣಾ ನಿಗಮ ನಿಯಮಿತ 2001–02ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

1963ರ ಕೃಷಿ ವಿಶ್ವವಿದ್ಯಾಲಯ, ಅಧಿನಿಯಮ 8(9)ನೇ ಪ್ರಕರಣದ ಮೇರೆಗೆ :

1. ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು 2003–04ನೇ ಸಾಲಿನ ವಾರ್ಷಿಕ ವರದಿ.
2. ಕೃಷಿ ವಿಶ್ವವಿದ್ಯಾಲಯ, ಧಾರವಾಡ 2003–04ನೇ ಸಾಲಿನ ವಾರ್ಷಿಕ ವರದಿ.

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ :

1. ದಿ ಮೈಸೂರು ಟೊಬ್ಯಾಕೋ ಕಂಪನಿ ನಿಯಮಿತ, ಬೆಂಗಳೂರು 2003–04ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ಸ್ಟೇಟ್ ಆಗ್ರೋ ಕಾರ್ನ್ ಪ್ರಾಡೆಕ್ಟ್ ನಿಯಮಿತ 2003–04ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

X ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):
(ಕೃಷಿ ಮಾರು ಕಟ್ಟೆ ಸಚಿವರ ಪರವಾಗಿ)

1956ರ ಕಂಪನಿ ಕಾಯಿದೆಯ. 619(ಎ) ಪ್ರಕರಣದ ಮೇರೆಗೆ :

1. ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 2002-03ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ನಿಯಮಿತದ 2003-04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪತ್ರಗಳು.
3. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು 2003-04ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

1956ರ ಕಂಪನಿ ಕಾಯಿದೆಯ, 619(ಎ) ಪ್ರಕರಣದ ಮೇರೆಗೆ :

1. ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣಾ ಹಾಗೂ ರಫ್ತು ನಿಗಮ ನಿಯಮಿತ. 2003-04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

XI ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು)
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ)

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ನೇ ಮತ್ತು 300(5)ನೇ ಪ್ರಕರಣದ ಮೇರೆಗೆ :

1. ಗುಲ್ಬರ್ಗ ಜಿಲ್ಲಾ ಪಂಚಾಯತ್ 2000-01ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ವರದಿ ಹಾಗೂ 2001-02ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಹಾಗೂ ತನಿಖಾ ವರದಿ.
2. ರಾಯಚೂರು ಜಿಲ್ಲಾ ಪಂಚಾಯತ್‌ನ 1999-2000 ಹಾಗೂ 2000-01ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಹಾಗೂ ತನಿಖಾ ವರದಿ.
3. ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ 2000-01 ಹಾಗೂ 2001-02ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನಾ ವರದಿ.
4. ಬಳ್ಳಾರಿ ಜಿಲ್ಲಾ ಪಂಚಾಯತ್ 2000-01 ಹಾಗೂ 2001-02ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿ ಹಾಗೂ 2003-04ನ ಸಾಲಿನ ವಾರ್ಷಿಕ ಆಡಳಿತ ವರದಿ.
5. ಕೊಡಗು ಜಿಲ್ಲಾ ಪಂಚಾಯತ್ 2000-01ನೇ ಸಾಲಿನ ವಾರ್ಷಿಕ ಲೆಕ್ಕ ತಂಖ್ತೆಗಳು.
6. ಬೆಂಗಳೂರು ನಗರ ಜಿಲ್ಲಾ ಪಂಚಾಯತ್, 2002-03ನೇ ಸಾಲಿನ ವಾರ್ಷಿಕ ಆಡಳಿತ ವರದಿ ಹಾಗೂ 2000-01ನೇ ಸಾಲಿನ ಲೆಕ್ಕಗಳ ತಪಾಸಣಾ ವರದಿ.
7. ಮಂಡ್ಯ ಜಿಲ್ಲಾ ಪಂಚಾಯತ್ 2000-01ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ವರದಿ.
8. ಕಾರವಾರ ಉತ್ತರ ಕನ್ನಡ ಜಿಲ್ಲಾ ಪಂಚಾಯತ್ 2000-01ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಹಾಗೂ ಲೆಕ್ಕಪತ್ರದ ಮೇಲಿನ ಲೆಕ್ಕಪರಿಶೋಧನಾ ವರದಿ.
9. ಉಡುಪಿ ಜಿಲ್ಲಾ ಪಂಚಾಯತ್ 2000-01ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿ ಹಾಗೂ 2003-04ನೇ ಸಾಲಿನ ವಾರ್ಷಿಕ ಆಡಳಿತ ವರದಿ.
10. ಕೋಲಾರ ಜಿಲ್ಲಾ ಪಂಚಾಯತ್ 2000-01ನೇ ಹಾಗೂ 2001-02ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು ವಾರ್ಷಿಕ ಲೆಕ್ಕಪತ್ರಗಳು.

11. ಕೊಪ್ಪಳ ಜಿಲ್ಲಾ ಪಂಚಾಯತ್ 2000–01ನೇ ವಾರ್ಷಿಕ ದೃಢೀಕರಿಸಿದ ವಾರ್ಷಿಕ ಲೆಕ್ಕ ಮತ್ತು ಲೆಕ್ಕಪರಿಶೋಧನಾ ವರದಿ.
12. ಬೀದರ್ ಜಿಲ್ಲಾ ಪಂಚಾಯತ್ 1999–2000 ಹಾಗೂ 2000–01ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿ.
13. ವಿಜಾಪುರ ಜಿಲ್ಲಾ ಪಂಚಾಯುತ್ 2000–01ನೇ ಸಾಲಿನ ವಾರ್ಷಿಕ ಲೆಕ್ಕಗಳ ವರದಿ(ಪರಿಶೋಧನಾ ವರದಿ)
14. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ 2000–01ನೇ ಸಾಲಿನ ವಾರ್ಷಿಕ ಲೆಕ್ಕ ತನಿಖಾ ವರದಿ.
15. ದಾವಣಗೆರೆ ಜಿಲ್ಲಾ ಪಂಚಾಯತ್ 2000–01ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ದೃಢೀಕೃತ ವಾರ್ಷಿಕ ಲೆಕ್ಕಪತ್ರ ವರದಿ ಮತ್ತು 2003–04ನೇ ಸಾಲಿನ ವಾರ್ಷಿಕ ಆಡಳಿತ ವರದಿ.
16. ಉತ್ತರ ಕನ್ನಡ ಜಿಲ್ಲಾ ಪಂಚಾಯತ್ ಕಾರವಾರ 2001–02ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಹಾಗೂ ಲೆಕ್ಕಪರಿಶೋಧನಾ ವರದಿ.
17. ಗದಗ ಜಿಲ್ಲಾ ಪಂಚಾಯತ್ 1998–99 ಹಾಗೂ 1999–2000ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಹಾಗೂ 2003–04ನೇ ಸಾಲಿನ ವಾರ್ಷಿಕ ಆಡಳಿತ ವರದಿ.
18. ಚಿತ್ರದುರ್ಗ ಜಿಲ್ಲಾ ಪಂಚಾಯುತ್ 2001–02ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ವರದಿ(ಲೆಕ್ಕಪರಿಶೋಧನಾ ವರದಿ)
19. ತುಮಕೂರು ಜಿಲ್ಲಾ ಪಂಚಾಯತ್ 2000–01ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ 2003–04ನೇ ಸಾಲಿನ ಆಡಳಿತ ವರದಿ.
20. ಬಿಜಾಪುರ ಜಿಲ್ಲಾ ಪಂಚಾಯತ್ 2001–02ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.
21. ಮೈಸೂರು ಜಿಲ್ಲಾ ಪಂಚಾಯತ್ 2000–01ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ವರದಿ.
22. ಹಾವೇರಿ ಜಿಲ್ಲಾ ಪಂಚಾಯತ್ 2000–01ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ವರದಿ.
23. ಕೊಡಗು ಜಿಲ್ಲಾ ಪಂಚಾಯತ್ 2001–01ನೇ ಸಾಲಿನ ವಾರ್ಷಿಕ ಲೆಕ್ಕ ತಃಖ್ತೆಗಳ ವರದಿ ಹಾಗೂ 2003–04ನೇ ಸಾಲಿನ ವಾರ್ಷಿಕ ಆಡಳಿತ ವರದಿ.
24. ಧಾರವಾಡ ಜಿಲ್ಲಾ ಪಂಚಾಯತ್ 2001–02ನೇ ಸಾಲಿನ ಲೆಕ್ಕಪತ್ರಗಳ ಮೇಲಿನ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿ.
25. ಹಾಸನ ಜಿಲ್ಲಾ ಪಂಚಾಯತ್ 2000–01ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳು.
26. ಶಿವಮೊಗ್ಗ ಜಿಲ್ಲಾ ಪಂಚಾಯತ್ 2003–04ನೇ ಸಾಲಿನ ವಾರ್ಷಿಕ ಆಡಳಿತ ವರದಿ.
27. ಬೀದರ್ ಜಿಲ್ಲಾ ಪಂಚಾಯತ್ 2002–03ನೇ ಸಾಲಿನ ವಾರ್ಷಿಕ ಆಡಳಿತ ವರದಿ.
28. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ 2001–02ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.
29. ಬಾಗಲಕೋಟೆ ಜಿಲ್ಲಾ ಪಂಚಾಯತ್ 1998–99, 1999–2000, 2000–01, 2001–02, 2002–03 ಹಾಗೂ 2003–04ನೇ ಸಾಲುಗಳ ವಾರ್ಷಿಕ ಆಡಳಿತ ವರದಿಗಳು.

IX. 1956ರ ಕಂಪನಿ ಕಾಯಿದೆಯ, 619(ಎ) ಪ್ರಕರಣದ ಮೇರೆಗೆ :

1. ಕರ್ನಾಟಕ ಭೂ ಸೇನಾ ನಿಗಮ ನಿಯಮಿತದ 2002-03ನೇ ಸಾಲಿನ ವಾರ್ಷಿಕ ಹಾಗೂ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು) :

XII ಅರಣ್ಯ ಮತ್ತು ಪರಿಸರ ಸಚಿವರ ಪರವಾಗಿ,

1. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ 2001-02ನೇ ಸಾಲಿನ ಲೆಕ್ಕಪತ್ರ ವರದಿಯನ್ನು ಮಂಡಿಸುತ್ತೇನೆ.

XIII ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು ಸಣ್ಣ ಉಳಿತಾಯ ಸಚಿವರ ಪರವಾಗಿ

1956ರ ಕಂಪನಿ ಕಾಯಿದೆಯ, 619(ಎ) ಪ್ರಕರಣದ ಮೇರೆಗೆ :

1. ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ನಿಯಮಿತದ 2003-04ನೇ ಸಾಲಿನ ವಾರ್ಷಿಕ ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

XIV ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು) (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ)

1966ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಅಧಿನಿಯಮ 25(3)ನೇ ಪ್ರಕರಣದ ಮೇರೆಗೆ :

1. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು 2002-03ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು) (ಪ್ರವಾಸೋದ್ಯಮ ಸಚಿವರ ಪರವಾಗಿ)

1. ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು 2001-02 ಹಾಗೂ 2003-04ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು.
2. ಶ್ರೀ ಕಂಠೀರವ ಸ್ಟುಡಿಯೋ ನಿಯಮಿತ ಕಂಠೀರವನಗರ, ಬೆಂಗಳೂರು 2003-04ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
3. ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ, ಬೆಂಗಳೂರು 2003-04ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
4. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ 2003-04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು) (ಸಮಾಜ ಕಲ್ಯಾಣ ಸಚಿವರ ಪರವಾಗಿ)

XVI ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು) (ಸಣ್ಣ ಉಳಿತಾಯ ಸಚಿವರ ಪರವಾಗಿ)

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ :

1. ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು 2003–04ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ 2003–04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪತ್ರಗಳ ವರದಿಗಳನ್ನು ಮಂಡಿಸುತ್ತೇನೆ.

XVII ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಪರವಾಗಿ)

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ :

1. ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದ 2003–04ನೇ ಸಾಲಿನ ವಾಷಿಕ ವರದಿ ಮತ್ತು ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

XVIII ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು) (ವಸತಿ ಸಚಿವರ ಪರವಾಗಿ)

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ :

1. ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ 2003–04ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನ ವರದಿ.

1973ರ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಅಧಿನಿಯಮ 19(3)ರ ಮೇರೆಗೆ:

1. ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು 2002–03ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಎಲ್ಲಾ ಕಾಗದ ಪತ್ರಗಳನ್ನು ಮಂಡಿಸಲಾಯಿತು.

6. ಅರ್ಜಿಗಳನ್ನೊಪ್ಪಿಸುವುದು

ಶ್ರೀ ಕೆ. ಪ್ರಭಾಕರ ಬಂಗೇರ(ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೇ, ಬೆಳ್ತಂಗಡಿ ನಿಡಿಗಲ್‌ನಲ್ಲಿ ಹರಿಯುತ್ತಿರುವ ನೇತ್ರಾವತಿ ನದಿಗೆ ನೀರಾವರಿ ಅಣೆಕಟ್ಟು ಕಟ್ಟುವ ಬಗೆಗಿನ ಅರ್ಜಿಯನ್ನು ಸದನಕ್ಕೊಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಒಪ್ಪಿಸಲಾಯಿತು. ಶ್ರೀ ಶಶಿಕಾಂತ್ ಅಕ್ಷಪ್ಪ ನಾಯ್ಕ್‌ರವರ ಬೆಂಗಳೂರು ಪೂರ್ವ ತಾಲ್ಲೂಕು ಕೆ.ಆರ್. ಪುರಂ ಹೋಬಳಿ, ಕೊತ್ತನೂರು ಗ್ರಾಮದ ಸರ್ವೆ ನಂ. 47ರ ಜಮೀನನ್ನು ಸಾಗುವಳಿ ಮಾಡುತ್ತಿರುವವರಿಗೆ ಮಂಜೂರು ಮಾಡುವ ಬಗೆಗಿನ ಅರ್ಜಿಯನ್ನು ಅವರ ಪರವಾಗಿ ನಾನೇ ಸದನಕ್ಕೆ ಒಪ್ಪಿಸುತ್ತಿದ್ದೇನೆ.

7 ಗಮನ ಸೆಳೆಯುವ ಸೂಚನೆಗಳು

ಅ) ವಿಷಯ : ಹುಬ್ಬಳ್ಳಿ–ಧಾರವಾಡ ನಗರಗಳಲ್ಲಿ ಕುಡಿಯುವ ನೀರಿನ ತೊಂದರೆಯಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ–ಗ್ರಾಮೀಣ) : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ–ಧಾರವಾಡ ನಗರಗಳಲ್ಲಿ ಕುಡಿಯುವ ನೀರಿನ ತೊಂದರೆಯಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ ಮಾನ್ಯ ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು) : ಹುಬ್ಬಳ್ಳಿ-ಧಾರವಾಡ ಅವಳಿ ನಗರದ ಹಾಲಿ ಜನಸಂಖ್ಯೆ 9 ಲಕ್ಷ ಇರುತ್ತದೆ. ಅವಳಿ ನಗರಗಳ ಎರಡು ಮುಖ್ಯ ನೀರಿನ ಮೂಲಗಳಲ್ಲಿ ಒಂದಾದ ನೀರ ಸಾಗರ ಜಲಾನಯನ ಪ್ರದೇಶದಲ್ಲಿ ಕಳೆದ ಮೂರು ವರ್ಷಗಳಿಂದ ಸತತವಾಗಿ ಕಡಿಮೆ ಮಳೆ ಇದ್ದುದ್ದರ ಪ್ರಯುಕ್ತ ಸದರಿ ಜಲಾಶಯವು ಸರಿಯಾಗಿ ತುಂಬಿರುವುದಿಲ್ಲ. ಏಪ್ರಿಲ್ 2002 ಕ್ಕೆ ಮೊದಲು ಮಲಪ್ರಭಾ ಜಲಾಶಯದಿಂದ ನೀರು ಪೂರೈಕೆಯ ಪ್ರತಿ 8-10 ದಿನಗಳಿಗೆ ಒಮ್ಮೆ ಇತ್ತು. ಆಗ ಸಾರ್ವಜನಿಕರಿಗೆ ಹೆಚ್ಚಿನ ತೊಂದರೆ ಉಂಟಾಗುತ್ತಿತ್ತು. ನಂತರ ರೂ. 64.00 ಕೋಟಿ ವೆಚ್ಚದ ತುರ್ತು ನೀರು ಸರಬರಾಜು ಅಭಿವೃದ್ಧಿ ಯೋಜನೆಯಡಿಯಲ್ಲಿ ಸವದತ್ತಿಯಿಂದ ಅಮ್ಮಿನಭಾವಿವರೆಗೆ ಕೊಳವೆ ಮಾರ್ಗದ ಅನುಷ್ಠಾನದ ನಂತರ 12.50 ದಶಲಕ್ಷ ಗ್ಯಾಲನ್ ನೀರಿನ ಪ್ರಮಾಣ ಲಭ್ಯವಾಗಿ ಪ್ರತಿ 7 ದಿನಗಳಿಗೆ ಒಮ್ಮೆ ನೀರು ಪೂರೈಕೆ ಮಾಡಲಾಗುತ್ತಿತ್ತು. ಅದೇ ಯೋಜನೆಯಡಿಯಲ್ಲಿ ಹೊಸ ಜಾಕ್‌ವೆಲ್ ನಿರ್ಮಿಸಿ. 1900 ಹೆಚ್.ಪಿ. ಪಂಪುಗಳನ್ನು ಚಾಲನೆಗೊಳಿಸಿ ಅಮ್ಮಿನಭಾವಿಯಲ್ಲಿ ಹೊಸದಾಗಿ ನಿರ್ಮಿಸಿಲಾದ 16.00 ಸಾಮರ್ಥ್ಯದ ಜಲಶುದ್ಧೀಕರಣ ಘಟಕವನ್ನು ಚಾಲನೆಗೊಳಿಸಿ 2004ನೇ ಸೆಪ್ಟೆಂಬರ್ ತಿಂಗಳಿನಿಂದ ಮಲಪ್ರಭಾ ಜಲಾಶಯದಿಂದ ದಿನಂಪ್ರತಿ 16.00 ದಶಲಕ್ಷ ಗ್ಯಾಲನ್ ನೀರನ್ನು ಒದಗಿಸಿ ಪ್ರತಿ 5 ದಿನಗಳಿಗೊಮ್ಮೆ ನೀರು ಪೂರೈಕೆ ಮಾಡಿ ಸಾಕಷ್ಟು ಸುಧಾರಣೆ ಮಾಡಲಾಗಿರುತ್ತದೆ.

ಮಲಪ್ರಭಾ ಜಲಾಶಯದಿಂದ ಪಡೆಯಲಾಗುತ್ತಿರುವ ಮೇಲಿನ ನೀರಿನ ಪ್ರಮಾಣದ ಜೊತೆಗೆ ಈಗ ನೀರಸಾಗರ ಜಲಾಶಯದಲ್ಲಿ ಶೇಖರಣೆಯಾಗಿರುವ ನೀರನ್ನು ದಿನಂಪ್ರತಿ 3.00 ಎಂ.ಜಿ.ಡಿ. ಪ್ರಮಾಣದಲ್ಲಿ ಪಡೆದುಕೊಂಡು ಪ್ರತಿ 4 ದಿನಗಳಿಗೊಮ್ಮೆ ಅವಳಿ ನಗರಗಳಲ್ಲಿ ನೀರು ಪೂರೈಕೆ ಮಾಡಲಾಗುತ್ತಿದೆ. ಆದರೆ ಕೆಲವು ಎತ್ತರ ಪ್ರದೇಶಗಳಲ್ಲಿ ಹಾಗೂ ಕೊಳವೆ ಮಾರ್ಗ ಜಾಲದ ಕೊನೆಯಲ್ಲಿರುವ ಬಡಾವಣೆಗಳಲ್ಲಿ ಸಮರ್ಪಕವಾಗಿ ನೀರು ಪೂರೈಕೆ ಮಾಡಲು ಸಾಧ್ಯವಾಗುತ್ತಿಲ್ಲ. ಈ ಪ್ರದೇಶಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಮೇಲೆ ತಿಳಿಸಿದಂತೆ ಕಳೆದ 3 ವರ್ಷಗಳಲ್ಲಿ ಹುಬ್ಬಳ್ಳಿ-ದಾರವಾಡ ಅವಳಿ ನಗರಗಳಲ್ಲಿನ ಕುದಿಯುವ ನೀರಿನ ಪೂರೈಕೆಯಲ್ಲಿ ಸಾಕಷ್ಟು ಸುಧಾರಣೆ ಉಂಟಾಗಿರುವುದರಿಂದ ಅವಳಿ ನಗರಗಳಲ್ಲಿ ಹಾಹಾಕಾರ ಏಳುವ ಸ್ಥಿತಿ ನಿರ್ಮಾಣವಾಗಿ ಕಾನೂನು ಸುವ್ಯವಸ್ಥೆಗೆ ಭಂಗ ತರುವಂತ ಸೂಚನೆಗಳು ಕಂಡು ಬರುತ್ತಿಲ್ಲ. ಅವಳಿ ನಗರಗಳ ಹೊರವಲಯಗಳಲ್ಲಿ ಹಲವರು ಹೊಸ ಬಡಾವಣೆಗಳು ಇದ್ದು ಆಯಾ ಬಡಾವಣೆಗಳ ನಿರ್ಮಾಣದಾರರೇ ನೀರು ಪುರೈಕೆಯ ಜವಾಬ್ದಾರಿಯನ್ನು ಹೊಂದಿರುತ್ತಾ. ಈ ಪ್ರದೇಶಗಳಲ್ಲಿ ನೀರು ಸರಬರಾಜು ವ್ಯವಸ್ಥೆಯು ಕೊಳವೆ ಬಾವಿಗಳ ಮೂಲದಿಂದ ಇದ್ದು ಈ ಕೊಳವೆ ಬಾವಿಗಳ ಇಳುವರಿಯಲ್ಲಿ ಕಡಿಮೆ ಆಗುತ್ತಿದೆ. ಈ ಪ್ರದೇಶಗಳಲ್ಲಿ ಕುದಿಯುವ ನೀರಿನ ತೀವ್ರ ತೊಂದರೆ ಇರುತ್ತದೆ. ಧಾರವಾಡ ಜಿಲ್ಲೆಯಲ್ಲಿ ಬರ ಅಧ್ಯಯನಕ್ಕಾಗಿ ಕೇಂದ್ರ ಸರ್ಕಾರದ ಅಧ್ಯಯನ ತಂಡವು ದಿ18.12.2004 ರಂದು ಭೇಟಿ ನೀಡಿದ ಸಂದರ್ಭದಲ್ಲಿ ಈ ಹೊರ ವಲಯದ ಪ್ರದೇಶಗಳಲ್ಲಿ ಕುಡಿಯುವ ನೀರಿನ ಪೂರೈಕೆ ಸುಧಾರಿಸುವ ದೃಷ್ಟಿಯಿಂದ ಟ್ಯಾಂಕರ್ ಮೂಲಕ ನೀರು ಸಾಗಣೆ, ಹೊಸ ಕೊಳವೆ ಬಾವಿಗಳನ್ನು ಸ್ವಚ್ಛಗೊಳಿಸುವುದು, ಆಳಗೊಳಿಸುವುದು ಇತ್ಯಾದಿ ಕಾಮಗಾರಿಗಳನ್ನು ಒಳಗೊಂಡ ರೂ.150.00 ಲಕ್ಷದ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳು, ಧಾರವಾಡ ಇವರು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿದ್ದು ಪರಿಶೀಲನೆಯಲ್ಲಿದೆ.

ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ನೀರು ಸರಬರಾಜು ವ್ಯವಸ್ಥೆಯನ್ನು ಸುಧಾರಿಸಲು ಅಮ್ಮಿನಭಾವಿಯಿಂದ ಹುಬ್ಬಳ್ಳಿ ನೃಪತುಂಗ ಬೆಟ್ಟದವರಿಗೆ ನೇರ ಕೊಳವೆ ಮಾರ್ಗ (23 ಕಿ.ಮೀ.) ಅಳವಡಿಸಲು ಕಾಮಗಾರಿಯನ್ನು ವಿಶ್ವಬಾಂಕ್ ನೆರವಿನೊಂದಿಗೆ ಕೈಗೊಳ್ಳಲು ರೂ. 38.00 ಕೋಟಿಗಳ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಕಾಮಗಾರಿಯನ್ನು ಶೀಘ್ರ ಪ್ರಾರಂಭಿಸಲಾಗುವುದು. ಅಲ್ಲದೆ ಮಲಪ್ರಭಾ ಜಲಾಶಯದಿಂದ 15.00 ಎಂ.ಜಿ.ಡಿ. ಹೆಚ್ಚುವರಿ ನೀರನ್ನು ಸರಬರಾಜು ಮಾಡಲು ಹಾಗೂ ಅವಳಿ ನಗರಗಳಿಲ್ಲಿ ಜಲಸಂಗ್ರಹಣಾಗಾರಗಳನ್ನು ನಿರ್ಮಿಸಿ ವಿತರಣಾ ವ್ಯವಸ್ಥೆಯನ್ನು ನವೀಕರಿಸುವ ಕಾಮಗಾರಿಗಳನ್ನೊಳಗೊಂಡು ರೂ. 176.00 ಕೋಟಿಗಳ ಅಂದಾಜು ವೆಚ್ಚದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಈ ಕಾಮಗಾರಿಗಳನ್ನು ಕೈಗೊಂಡಲ್ಲಿ ಹುಬ್ಬಳ್ಳಿ-ದಾರವಾಡ ಅವಳಿ ನಗರಗಳ ಜನತೆಗೆ ದಿನಂಪ್ರತಿ ತಲಾ 135 ಲೀಟರ್ ನೀರನ್ನು ಸರಬರಾಜು ಮಾಡಲು ಸಾಧ್ಯವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಇವತ್ತು ಹುಬ್ಬಳ್ಳಿ ಧಾರವಾಡದ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಪರಿಹಾರ ಎನ್ನುವುದರ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದರು. ಇದರ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ: ಇವತ್ತು ಬೆಂಗಳೂರಿನಲ್ಲಿ ಬಿಟ್ಟರೆ ಹುಬ್ಬಳ್ಳಿ ಧಾರವಾಡ ಮಹಾ ನಗರ ರಾಜ್ಯದಲ್ಲೇ ದೊಡ್ಡದಾದ ನಗರ. ಆದರೆ ಇವತ್ತು ಅ ನಗರದ ಜನತೆಗೆ ಐದು ದಿವಸಗಳಿಗೊಮ್ಮೆ ನೀರು ಬಿಡುವುದು ನೀವು ಒಪ್ಪಿಕೊಮಡಿದ್ದೀರಿ. ಬೆಂಗಳೂರಿನಲ್ಲಿ ಪ್ರತಿನಿತ್ಯ ನೀರು ಕೊಡುತ್ತಿದ್ದೀರಿ. ಮಂಗಳೂರಿನಲ್ಲಿ ಮತ್ತು ಮೈಸೂರಿನಲ್ಲಿ ಕೂಡ ಪ್ರತಿನಿತ್ಯ ನೀರು ಕೊಡುತ್ತಿದ್ದೀರಿ. ಆದರೆ ಹುಬ್ಬಳ್ಳಿ ಧಾರವಾಡ ಮಹಾನಗರಕ್ಕೆ ಐದು ದಿವಸಗಳಿಗೊಮ್ಮೆ ನೀರು ಕೊಡುತಿದ್ದೇವೆ ಎನ್ನುವುದು ಇದು ಸರ್ಕಾರಕ್ಕೆ ನಾಚಿಕೇಗೇಡಿನ ಸ್ಥಿತಿಯಾಗಿದೆ. ಇನ್ನು ಗ್ರಾಮೀಣ ಪ್ರದೇಶಗಳಲ್ಲಿ ನೀರು ಕೊಡಲಿಕ್ಕೆ ಸಾಧ್ಯಾ ಇದೆಯೇ ಎಂದು ಪ್ರಚಾರ ಮಾಡಬೇಕಾಗುತ್ತದೆ. ನಾಲ್ಕನೇ ಹತದ್ದು, ಐದನೇ ಹಂತದ್ದು ಯೋಜನೆ ಮಾಡಲಿಕ್ಕೆ ಬೆಂಗಳೂರಿನಲ್ಲಿ ಹಣ ಕೊಡಬೇಡಿ, ನೀರು ಸರಬರಾಜು ಯೋಜನೆ ಮಾಡಬೇಡಿ ಎಂದು ಹೇಳುವುದಿಲ್ಲ. ಐದನೇ ಹಂತದ ಯೋಜನೆ ಆರನೇ ಯೋಜನೆ ಎಲ್ಲಾ ಮಾಡುತ್ತೀರಿ, ಸಾವಿರಾರು ಕೋಟಿ ರೂಪಾಯಿ ಹಣ ಬಿಡುಗಡೆ ಮಾಡುತ್ತೀರಿ, 176 ಕೋಟಿ ರೂಪಾಯಿ ಅಂದಾಜುವೆಚ್ಚದ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದಿರಿ, ಇದು ಯಾವಾಗ ಆಗುತ್ತದೆ ? ನಾನು ಶಾಸಕ ಅದಾಗಿನಿಂದ ನೋಡುತ್ತಿದ್ದೇನೆ. 1994ರಿಂಧ ಇವತ್ತಿನವರೆಗೆ ಸರ್ಕಾರದ ಉತ್ತರ ಇದೆ. ರೀತಿ ಇದೆ. ಬೇರೆ ಏನೂ ಇಲ್ಲವೇ ಇಲ್ಲ 176 ಕೋಟಿ ರೂಪಾಯಿ ಪ್ರಾಜೆಕ್ಟ್ ಮೂರನೇ ಹಂತದ ಯೋಜನೆ ಎಷ್ಟು ಅವದಿಯಲ್ಲಿ ಅದನ್ನು ಕಂಪ್ಲೀಟ್ ಮಾಡುತ್ತೀರಿ, ಅದರಿಂದ ಎಷ್ಟು ಎಮ್‌ಜಿಡಿ ನೀರು ಬರಲಿಕ್ಕೆ ಸಾಧ್ಯ ಇದೆ ? ಇದನ್ನು ದಯಮಾಡಿ ಹೇಳಬೇಕು. ಕೊನೇ ಪಕ್ಷ ಎರಡು ದಿವಸಕ್ಕೊಮ್ಮೆ ಆದರೂ ನೀರು ಬಿಡುವ ವ್ಯವಸ್ಥೆ ಆಗಬೇಕು. ಐದು ದಿವಸ ಎಂದು ನಾವು ಹೆಮ್ಮೆ ಪಡುವುದು ಅಲ್ಲ. ಮಲಪ್ರಭದಿಂದ 16 ಎಂ.ಜಿಡಿ ನೀರು ಬರುತ್ತಿದೆ. ಹೊಸದಾಗಿ ಜಾಕ್‌ವೆಲ್ ಹಾಕಿದ ಮೇಲೆ. ಆದರೆ ನಮಗೆ ನಿಜವಾಗಿ ಬೇಕಾಗಿರುವುದು ಡೈಲಿ ನೀರು ಬಿಡಬೇಕಾದರೆ 24 ಎಂಜಿಡಿ ನೀರು ಕೊಡಬೇಕು. 135 ಲೀಟರ್ ಏನು ಹೇಳಿದಿರಿ, ಬೇರೆ ನಗರಗಳಲ್ಲಿ 125 ಲೀಟರ್ ಮಿನಿಮಮ್ ಕೊಡುತ್ತಿದ್ದಾರೆ. ಆದರೆ ನಮ್ಮಲ್ಲಿ ಮಾತ್ರ ನೀರು ಪೂರೈಕೆ ಆಗುತ್ತಿಲ್ಲ. ಹುಬ್ಬಳ್ಳಿ ಧಾರವಾಡಕ್ಕೆ

24 ಎಂಜಿಡಿ ನೀರು ಬರುವಂಥ ವ್ಯವಸ್ಥೆ ಮಾಡುವುದಕ್ಕೆ ಯಾವಾಗ ಸಾಧ್ಯ ಇದೆ ? 176 ಕೋಟಿ ರೂಪಾಯಿ ಮೂರನೇ ಹಂತದ ಯೋಜನೆ ಇದನ್ನು ಎಷ್ಟು ಅವಧಿಯಲ್ಲಿ ಅನುಷ್ಠಾನ ಮಾಡುತ್ತೀರಿ, ಅದಕ್ಕೆ ಎಷ್ಟು ಹಣ ಬಿಡುಗಡೆ ಮಾಡುತ್ತೀರಿ ? ನಾಳೆ ವರ್ಲ್ಡ್ ಬ್ಯಾಂಕ್‌ಗೆ ಹೋಗಿದೆ, ಏಷಿಯನ್ ಬ್ಯಾಂಕಿಗೆ ಹೋಗಿದೆ ಎಂದು ಹೇಳುವುದು ಬೇಡ. ಸರ್ಕಾರದ ಮಟ್ಟದಲ್ಲಿ ಹೇಳುವುದು ಬೇಡ. ಸರ್ಕಾರದ ಮಟ್ಟದಲ್ಲಿ ಚಿಂತನೆ ಮಾಡಿ, ಸರ್ಕಾರದ ಬಜೆಟ್‌ನಲ್ಲಿ ಅಲೋಕೇಷನ್ ಮಾಡಿ ವಿಶೇಷವಾಗಿ ಗ್ರ್ಯಾಂಟ್ ಕೊಡಿ, ಹುಬ್ಬಳ್ಳಿ ಧಾರವಾಡಕ್ಕೆ ಏಕೆ ವಿಶೇಷವಾದ ಗ್ರ್ಯಾಂಟ್ ಕೊಡಬಾರದು? ಬೇರೆ ಬೇರೆ ಕಡೆ ನಮ್ಮ ಮುಖ್ಯ ಮಂತ್ರಿಗಳು ಸ್ಪೆಷಲ್ ಪ್ಯಾಕೇಜ್ ಬಿಡುಗಡೆ ಮಾಡಿದ್ದಾರೆ. ಹುಬ್ಬಳ್ಳಿ ಧಾರವಾಡಕ್ಕೆ ಏಕೆ ಇಲ್ಲ? ಹುಬ್ಬಳ್ಳಿ ಸಿಟಿ, ಧಾರವಾಡ ಸಿಟಿ ಮತ್ತು ಇನ್ನೊಬ್ಬರು ಮೂರು ಜನ ಮಂತ್ರಿಗಳು ಇದ್ದೀರಿ. 176 ಕೋಟಿ ರೂಪಾಯಿ ಪ್ರಾಜೆಕ್ಟ್ ಸ್ಯಾಂಕ್ಷನ್ ಮಾಡುವುದಕ್ಕೆ ಆಗುವುದಿಲ್ಲ ಎಂದರೆ, ಹುಬ್ಬಳ್ಳಿ–ಧಾರವಾಡ ಮಹಾನಗರದ ಜನ ನಿಮಗೆ ಶಾಪ ಹಾಕುತ್ತಾರೆ. ಇದರ ಬಗ್ಗೆ ಸ್ಪಷ್ಟವಾದ ಉತ್ತರ ಬೇಕು.

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್ ಸಚಿವರು) : ಮಾನ್ಯ ಅಧ್ಯಕ್ಷರೆ ನಾವು ಇಂಪ್ರೋಮೆಂಟ ಸ್ಕೀಮ್‌ನಲ್ಲಿ ಮೊದಲು 12–14 ದಿವಸ ಇರುವುದು ಐದು ದಿನಕ್ಕೊಮ್ಮೆ ಹಾಗೂ ನಾಲ್ಕು ದಿವಸಗಳಿಗೊಮ್ಮೆ ತರುತ್ತಿದ್ದೇವೆ. ಕೆಲವೇ ದಿನಗಳಲ್ಲಿ ಅಮ್ಮಿನಭಾವಿಯಿಂದ ಉಣಕಲ್‌ವರೆಗೆ ಪೈಪ್‌ಲೈನ್ ಹಾಕುವ ಕೆಲಸ ಆರಂಭವಾಗುತ್ತದೆ. ಅದು ಆರಂಭವಾದ ಮೇಲೆ ಪ್ರತಿ ಎರಡು ದಿನಕ್ಕೊಮ್ಮೆ ನೀರು ಕೊಡುತ್ತೇವೆ. ಎರಡು–ಮೂರು ತಿಂಗಳುಗಳಲ್ಲಿ ಕೆಲಸ ಮುಗಿಯುತ್ತದೆ. ಅಮ್ಮಿನಬಾವಿಯಿಂದ ಧಾರವಾಡಕ್ಕೆ ನೀರು ಪಂಪ್ ಮಾಡಿ ಅಲ್ಲಿಂದ ಮತ್ತೆ ನಾವು ಹುಬ್ಬಳ್ಳಿಗೆ ಕಳುಹಿಸಬೇಕು. 1.5 ಅಥವಾ 2 ಎಂಜಿಡಿಯಲ್ಲಿ ಎರಡು ಎಂಜಿಡಿ ವೇಸ್ಟ್ ಆಗುತ್ತಿದೆ. ಅದು ಉಳಿತಾಯವಾಗುತ್ತದೆ. ಈಗಾಗಲೇ ಅಮ್ಮಿನಬಾವಿ ಕೆಲಸ ಉಣಕಲ್ ಟ್ಯಾಂಕ್ ಕಟ್ಟುವುದು ಮತ್ತು ಪೈಪ್‌ಲೈನ್ ಹಾಕುವ ಕೆಲಸಕ್ಕೆ ಟೆಂಡರ್ ನಿನ್ನೆ ಫೈನಲ್ ಮಾಡಿದ್ದೇವೆ. ಏಜೆನ್ಸಿ ಫೈನಲ್ ಮಾಡಿದ್ದಾರೆ. ಇನ್ನೊಂದು ತಿಂಗಳಲ್ಲಿ ಕೆಲಸ ಪ್ರಾರಂಭ ಮಾಡುತ್ತಾರೆ. ಅವರು ಒಳ್ಳೆಯ ಕಂಟ್ರಾಕ್ಟರ್ ಎಂದು ಕಾಣುತ್ತದೆ. ಒಂದು ತಿಂಗಳಲ್ಲಿ ನಾನು ಅಲ್ಲಿಯೇ ಫ್ಯಾಕ್ಟರಿ ಹಾಕಿ ಕೆಲಸ ಪ್ರಾರಂಭ ಮಾಡುತ್ತೇನೆ. ನೀವು ಆರು ತಿಂಗಳು ಕೊಟ್ಟರೆ ನಾನು ಮೂರು ತಿಂಗಳುಗಳಲ್ಲಿ ಮುಗಿಸುತ್ತೇನೆಂದು ಭರವಸೆ ಕೊಟ್ಟಿದ್ದಾರೆ. ನೀವು ಒಂದು ಯೋಗ್ಯವಾದ ಬೇಡಿಕೆ ಇಟ್ಟಿದ್ದೀರಿ. ಬೆಂಗಳೂರು ಪ್ರಕಾರ ನಮಗೂ ಪ್ರತಿ ದಿವಸ ನೀರು ಬೇಕು ಎಂದು ಹೇಳಿದ್ದೀರಿ, ಆ ಪ್ರಕಾರ ನಮ್ಮ ಮೂರನೇ ಯೋಜನೆ ಅಡಿಯಲ್ಲಿ ಅದನ್ನು ಪರ್ ಕ್ಯಾಪಿಟಾ 135 ಲೀಟರ್ ಕೊಡುವ ಯೋಜನೆಯಲ್ಲಿ 176 ಕೋಟಿ ರೂಪಾಯಿ ಯೋಜನೆ ಸಿದ್ಧವಾಗಿದೆ. ಸರ್ಕಾರದ ಪರಿಶೀಲನೆಯಲ್ಲಿ ಇದೆ. ಈಗಾಗಲೇ ಎಡಿಬಿ ಮತ್ತು ಎನ್‌ಕೆಡಿಬಿ 2005 ರ ಕೆಲಸ ಆರಂಭವಾಗುತ್ತಿದೆ. ಅದು ಮುಗಿಯುವ ಒಳಗೆ ಮೂರನೇ ಸ್ಟೇಜ್ ಮುಗಿಸಬೇಕಾಗುತ್ತದೆ. ಆದ್ದರಿಂದ ಇದನ್ನು ಕೆಲವೇ ದಿನಗಳಲ್ಲಿ ನಮ್ಮ ಹುಡ್ಕೋ ಅಥವಾ ಯಾವುದೋ ವ್ಯವಸ್ಥೆಯಲ್ಲಿ ಅಥವ ಎನ್‌ಕೆಡಿಬಿಯಲ್ಲಿ ಉಳಿತಾಯ ಮಾಡಿ 2005–06ರಲ್ಲಿ ಕೆಲಸ ಆರಂಭ ಮಾಡಿ ಮುಗಿಸುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : 176 ಕೋಟಿ ರೂಪಾಯಿಗಾಗಿ ಹುಡ್ಕೋ ಮತ್ತೊಂದು ಬೇಕಾದಷ್ಟು ಆರ್ಥಿಕ ಸಂಸ್ಥೆಗಳು ನಮ್ಮಲ್ಲಿ ಇವೆ. ಏಷಿಯನ್ ಬ್ಯಾಂಕ್ ಅಥವಾ ವರ್ಲ್ಡ್ ಬ್ಯಾಂಕ್‌ಗೆ

ಹೋಗುವ ಅವಶ್ಯಕತೆ ಇಲ್ಲ. ಆದಷ್ಟು ಬೇಗ ಡಿಸಿಷನ್ ತೆಗೆದುಕೊಂಡು ಹುಡ್ಕೋದಿಂದಾಗಲಿ, ಬೇರೆ ಕಡೆಯಿಂದಾಗಲಿ ಲೋನ್ ಸ್ಯಾಂಕ್ಷನ್ ಮಾಡಿಸಿಕೊಳ್ಳಿ. ಇದು ಏಕೆ ತಡವಾಗುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇದು ಕಳೆದ ಹತ್ತಾರು ವರ್ಷಗಳಿಂದ ಇದೇ ರೀತಿ ನಡೆಯುತ್ತಿದೆ. ಬೇಕಾದರೆ ರೆಕಾರ್ಡ್ ತೋರಿಸುತ್ತೇನೆ. ಯಾವ ರೀತಿ ಸರ್ಕಾರಗಳು ಉತ್ತರ ನೀಡಿವೆ, 176 ಕೋಟಿ ರೂಪಾಯಿಯದು ಮತ್ತು 180 ಕೋಟಿ ರೂಪಾಯಿಯದು ಮೂರನೇ ಹಂತದ ಯೋಜನೆ ಪ್ರಸ್ತಾವನೆಯಲ್ಲಿ ಇದೆ ಎಂದು 10 ವರ್ಷಗಳಿಂದ ಇದೆ. ಮತ್ತೆ ಅದೇ ಉತ್ತರ ನಿಮ್ಮ ಕಡೆಯಿಂದ ಬರಬಾರದು. ಅದಕ್ಕೆ ತಕ್ಷಣ ಸ್ಪೆಸಿಫಿಕ್ಕಾಗಿ ನಿಮ್ಮ ಬಳಿ ವ್ಯವಸ್ಥೆ ಏನಿದೆ ಎಂದು ಹೇಳಬೇಕು.

ಶ್ರೀ ಎಸ್.ಆರ್. ಮೋರೆ : ಹಿರಿಯ ಸದಸ್ಯರು ಬಹಳ ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಎನ್‌ಕೆಡಿಬಿ ಕೆಲಸ 2005ರಿಂದ ಆರಂಭ ಮಾಡುತ್ತೇವೆ. 1800 (ಹದಿನೆಂಟು ನೂರು) ಕೋಟಿ ರೂಪಾಯಿಗಳ ಯೋಜನೆ. ಹದಿನೆಂಟು ನೂರು ಕೋಟಿ ರೂಪಾಯಿಗಳಲ್ಲಿ ಉಳಿತಾಯ ಮಾಡಿಕೊಂಡು ಈ ಯೋಜನೆ ಪ್ರಾರಂಭ ಮಾಡುತ್ತೇವೆ. ಅದಕ್ಕೆ ಉತ್ತಮವಾದ ಸಲಹೆ ಕೊಟ್ಟಿದ್ದೀರಿ. ಆ ಸಭೆಗೆ ನಿಮಗೂ ಕರೆಸುತ್ತೇವೆ. 30–31ನೇ ತಾರೀಖು ಸಭೆ ಇದೆ ನಿಮಗೂ ಕೂಡ ಸಭೆಗೆ ಕರೆಸುತ್ತೇವೆ. ಅಲ್ಲಿ ರಚನಾತ್ಮಕವಾದ ಕೆಲಸ ಮಾಡಿ ಆದಷ್ಟು ಬೇಗ ಆರಂಭ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮೂರನೇ ಹಂತದ ಯೋಜನೆ ಎಲ್ಲಾ ಮಾಡುತ್ತೀರಿ, ಮಲಪ್ರಭಾ ನದಿಯಲ್ಲಿ ನೀರಿನ ಸಂಗ್ರಹ ಕಡಿಮೆಯಾಗುತ್ತಿದೆ. ಈ ಎಲ್ಲಾ ಯೋಜನೆ ಹಾಕಿಕೊಂಡು ನಾಳೆ ಹೆಚ್ಚಿನ ನೀರಿನ ಒತ್ತಡ ಬಾರದೆ ಇದ್ದರೆ ನಾಳೆ ಸರಬರಾಜು ಮಾಡುವುದಕ್ಕಾಗುವುದಿಲ್ಲ. ಹಾಗಾಗಿ ಕಳಸ ಬಂಡೂರಿ ನಾಲಾ ಯೋಜನೆ ಇದೆ. ಅದರ ಬಗ್ಗೆ ಸೆಂಟ್ರಲ್ ಗವರ್ನಮೆಂಟ್‌ನಲ್ಲಿ ಫೈಲ್ ಪೆಂಡಿಂಗ್ ಇದೆ. ಮತ್ತು ನಾವು ಆಲ್ ಪಾರ್ಟಿ ಡೆಲಿಗೇಷನ್ ತೆಗೆದುಕೊಂಡು ಹೋಗಬೇಕೆಂದು ಮುಖ್ಯ ಮಂತ್ರಿಗಳಿಗೆ ಮನವಿ ಮಾಡಿದ್ದೆವು. ಆದರೆ ಇದುವರೆಗೂ ಆಗಲಿಲ್ಲ. ಮಲಪ್ರಭಾ ಮತ್ತು ಕಳಸಾ ಬಂಡೂರಿ ನಾಲಾ ಯೋಜನೆಯಿಂದ ಜೋಡಣೆ ಮಾಡಿದರೆ ಅದರಿಂದ ಕನಿಷ್ಟ 8 ರಿಂದ 9 ಟಿಎಮ್‌ಸಿ ನೀರು ಹೆಚ್ಚುವರಿಯಾಗಿ ಮಲಪ್ರಭಾ ನದಿಗೆ ಬರುತ್ತದೆ. ಅದಕ್ಕೆ ಕೂಡ ತಾವು ಪ್ರಯತ್ನ ಮಾಡಬೇಕು. ಮೂರನೇ ಹಂತದ ಯೋಜನೆ ಜೊತೆಗೆ ಕಳಸಾ ಬಂಡೂರಿ ನಾಲಾ ಯೋಜನೆ ಅನುಷ್ಠಾನ ಮಾಡುವುದಕ್ಕೆ ಸಹಿತ ತಾವು ಪ್ರಯತ್ನ ಮಾಡಬೇಕು. ಈಗಾಗಲೇ ಇದರ ಬಗ್ಗೆ ಪ್ರಪೋಸಲ್ಸ್ ಇವೆ. ಎಸ್ಟಿಮೇಟ್ ಆಗಿದೆ, ಕೇಂದ್ರ ಸರ್ಕಾರ ಹಿಂದೆ ಒಂದು ಸಾರಿ ಕ್ಲಿಯರೆನ್ಸ್ ಕೊಟ್ಟಿತ್ತು. ಅದು ನಡುವೆ ತಕರಾರು ಆಗಿ ಸ್ಟೇ ಆಗಿದೆ. ಕೇಂದ್ರ ಸರ್ಕಾರಕ್ಕೆ ಹೋಗಿ ನಾವೆಲ್ಲಾ ಒತ್ತಡ ತೆಗೆದುಕೊಂಡು ಬಂದರೆ ಮಂಜೂರು ಆಗುತ್ತದೆ. ಇನ್ನೊಂದು ಪ್ರಪೋಸಲ್ ಇಲ್ಲಿ ನೀರು ಕಡಿಮೆ ಆದರೆ ಕಾಳಿ ನದಿಯಿಂದ ಏಕೆ ನೀರು ತರಬಾರದು ಎಂಬ ಒಂದು ಚಿಂತನೆ ಇದೆ, ನಾಳೆ ರಿಸೋರ್ಸಸ್ ಕಡಿಮೆ ಆದರೆ ಕಾಳಿ ನದಿಯಿಂದ ಏಕೆ ತರಬಾರದು ಎಂದು ಹಲವಾರು ಕಡೆ ಡಿಬೇಟ್ ಆಗಿದೆ, ಕಾಳಿ ನದಿ ಬಗ್ಗೆ ವಿಚಾರ ಇದ್ದರೆ ದಯಮಾಡಿ ತಿಳಿಸಿ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಶೆಟ್ಟರ್‌ರವರು ಉತ್ತಮವಾದ ಸಲಹೆ ಕೊಟ್ಟಿದ್ದಾರೆ. ಸರ್ಕಾರ ಎರಡನ್ನೂ ಗಂಭೀರವಾಗಿ ಪರಿಶೀಲನೆ ಮಾಡುತ್ತದೆ. ಕಳಸಾ ಬಂಡೂರಿ ಮತ್ತು ಕಾಳಿ ಎರಡರ ಬಗ್ಗೆಯೂ ಪರಿಶೀಲನೆ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಕಳಸಾ ಬಂಡೂರಿ ನಾಲಾ ಯೋಜನೆಯಿಂದ ಮಹಾ ನಗರಕ್ಕೆ ಕುಡಿಯುವ ನೀರಿನ ಯೋಜನೆಗೂ ಹಾಗೂ ಅಲ್ಲಿ ಇದ್ದಂತಹ ನಾಲ್ಕೈದು ಜಿಲ್ಲೆ ರೈತರಿಗೆ

ನೀರಾವರಿಗೆ ಅನುಕೂಲವಾಗುತ್ತದೆ. ಅದರ ಬಗ್ಗೆ ನಿಮ್ಮ ಕಡೆಯಿಂದ ಕೇಂದ್ರ ಸರ್ಕಾರಕ್ಕೆ ಒತ್ತಡ ತರಬೇಕು. ಒತ್ತಡ ತಂದರೆ ಅದು ಕ್ಲಿಯರೆನ್ಸ್ ಆಗುತ್ತದೆ. ಕಾಳಿ ನದಿ ವಿಚಾರದ ಬಗ್ಗೆ ಹೇಳಿ.

ಶ್ರೀ ಎಸ್.ಆರ್. ಮೋರೆ : ಅದು ಪರಿಶೀಲನೆಯಲ್ಲಿ ಇದೆ. ಮಲಪ್ರಭಾ ಡ್ಯಾಂನಲ್ಲಿ ನಾಲ್ಕು ಟಿಎಮ್‌ಸಿ ಮೇಲೆ ಡ್ರಾ ಮಾಡುವುದಕ್ಕೆ ಬರುವುದಿಲ್ಲ. ಇನ್ನು ಉಳಿದದ್ದು ಹಾಗೆಯೇ ನೀರಿಗಾಗಿಯೇ ಬಿಟ್ಟಿರುತ್ತೇವೆ.

ಅಧ್ಯಕ್ಷರು : ಇದರಲ್ಲಿ ಕ್ಲಾರಿಫಿಕೇಷನ್‌ಗೆ ಅವಕಾಶ ಇಲ್ಲ.

ಶ್ರೀ ಚಿಕ್ಕಣ್ಣಗೌಡ ಸಿದ್ಧನಗೌಡ ಈಶ್ವರಗೌಡ (ಕಲ್‌ಘಟಗಿ) : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಹುಬ್ಬಳ್ಳಿ ಧಾರವಾಡ ಮಹಾನಗರದ ಇಬ್ಬರು ನಾಯಕರು ಮಾತನಾಡುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಶೆಟ್ಟರ್‌ರವರೇ, ನೀವೂ ವಿರೋಧ ಪಕ್ಷದ ನಾಯಕರಾಗಿದ್ದವರು. ಗಮನ ಸೆಳೆಯುವ ಸೂಚನೆಗೆ ಯಾರು ಸಹಿ ಮಾಡಿರುತ್ತಾರೆ ಅವರು ಒಂದೆರಡು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಇದೆ. ಬೇರೆಯವರಿಗೆ ಅವಕಾಶ ಇಲ್ಲ. ರೂಲಿಂಗ್ಸ್ ಇವೆ. ನೀವು ಈ ತರಹ ಮಾಡಿದರೆ ಹೇಗೆ? ಎರಡು ನಿಮಿಷದ ಪ್ರಶ್ನೆ ಅಲ್ಲ, ನಿಯಮಾವಳಿ ಪ್ರಶ್ನೆ. ಒಂದಲ್ಲ ಒಂದು ರೀತಿಯಲ್ಲಿ ಕನೆಕ್ಟ್ ಮಾಡಿ ಕೇಳುತ್ತಾರೆ ಆಗ ಕಷ್ಟವಾಗುತ್ತದೆ. ಎರಡು ನಿಮಿಷದಲ್ಲಿ ಮುಗಿಸಿ.

ಶ್ರೀ ಚಿಕ್ಕಣ್ಣಗೌಡ ಸಿದ್ಧನಗೌಡ ಈಶ್ವರಗೌಡ : ಜಿಲ್ಲಾ ಪಂಚಾಯಿತಿ ಮೀಟಿಂಗ್‌ನಲ್ಲಿ ನಾನು ತಮ್ಮ ಗಮನಕ್ಕೆ ಕೂಡ ತಂದಿದ್ದೇನೆ. ಏಕೆಂದರೆ ನನ್ನ ಕ್ಷೇತ್ರದಲ್ಲಿ 6 ಕಿ.ಮೀ. ನೀರ್‌ಸಾಗರ್ ಕೆರೆ ಇದೆ. ಅಲ್ಲಿ ರೋಡ್ ಆಗಬೇಕಾದ ಬಗ್ಗೆಯೂ ತಮ್ಮ ಗಮನವನ್ನು ಸೆಳೆದಿದ್ದೇನೆ. ಇಲ್ಲಿಂದ ಹುಬ್ಬಳ್ಳಿಗೆ ಬರಬೇಕಾದರೆ ನಡುವೆ ಆರು ಹಳ್ಳಿಗಳು ಬರುತ್ತವೆ. ಆ ಆರು ಹಳ್ಳಿಗಳ ಮೂಲಕವೇ ಹುಬ್ಬಳ್ಳಿಗೆ ನೀರು ಸೇರುತ್ತದೆ. ಇದರಿಂದಾಗಿ ಹುಬ್ಬಳ್ಳಿಯಿಂದ ನೀವು ನೀರನ್ನು ಕುಂದಗೋಳಕ್ಕೆ ಕೊಡುತ್ತೀರಿ. ಕುಂದಗೋಳಕ್ಕೂ ನೀರು ಕೊಡುತ್ತೀರಿ ಮತ್ತು ಹುಬ್ಬಳ್ಳಿಗೂ ನೀರನ್ನು ಕೊಡುತ್ತೀರಿ. ಆದಕಾರಣ ಆ ದಾರಿಯಲ್ಲಿ ಬರುವಂಥ ಆರು ಹಳ್ಳಿಗಳೇನಿವೆ ಆ ಹಳ್ಳಿಗಳಿಗೂ ತಾವು ದಯಮಾಡಿ ನೀರನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಆ ನೀರ್‌ಸಾಗರ್ ಪೂರ್ವದಲ್ಲಿ ಇರುವ ರೋಡ್ ಬಗ್ಗೆ ಪಿಡಬ್ಲೂಡಿಯವರನ್ನು ಕೇಳಿದರೆ ಇದು ನಮಗೆ ಬರುವುದಿಲ್ಲ ಜಿಲ್ಲಾ ಪಂಚಾಯತ್‌ಗೆ ಬರುತ್ತದೆ ಎನ್ನುತ್ತಾರೆ. ಜಿಲ್ಲಾ ಪಂಚಾಯತ್‌ನವರನ್ನು ಕೇಳಿದರೆ ಇದು ನಮಗೆ ಬರುವುದಿಲ್ಲ ಪಿಡಬ್ಲ್ಯೂಡಿಯವರಿಗೆ ಬರುತ್ತದೆ ಎಂದು ಹೇಳುತ್ತಾರೆ. ಅವರನ್ನು ಮತ್ತೆ ಕೇಳಿದರೆ ಜಲಾನಯನ ಇಲಾಖೆಗೆ ಬರುತ್ತದೆ ಎನ್ನುತ್ತಾರೆ. ಆದುದರಿಂದ ದಯಮಾಡಿ ತಾವು ತಮ್ಮ ಅನುದಾನದಲ್ಲಿಯಾಗಲಿ ಅಥವಾ ಬೇರೆ ಯೋಜನೆಯಡಿ ಆ ಆರು ಕಿ.ಮೀ. ರೋಡ್‌ನ್ನು ಮಾಡಿಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ತಮ್ಮ ಗಮನವನ್ನು ಸೆಳೆಯುತ್ತೇನೆ.

(ಹಲವಾರು ಸದಸ್ಯರು ಮಾತನಾಡಲು ಎದ್ದುನಿಂತಾಗ)

ಅಧ್ಯಕ್ಷರು : ನಿಯಮಗಳನ್ನು ಪಾಲನೆ ಮಾಡದೇ ಯಾರು ಬೇಕಾದರೂ ಎದ್ದುನಿಂತು ಮಾತನಾಡಿದರೆ ಹೇಗೆ? ಮಾನ್ಯ ಸದಸ್ಯರು ಕೇಳಬೇಕೆಂದಿರುವುದನ್ನು ಒಂದೇ ಮಾತಿನ ವಾಕ್ಯದಲ್ಲಿ ದಯಮಾಡಿ ಕೇಳಬೇಕು. ಆದರೆ ಮುಂದೆ ದಯಮಾಡಿ ಈ ರೀತಿ ಮಾಡಬೇಡಿ.

ಶ್ರೀ ವಿಶ್ವನಾಥ್ ಕರಬಸಪ್ಪ ಮಾಮಾಣಿ : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ–ಧಾರವಾಡಕ್ಕೆ ನೀರು ಸವದತ್ತಿ ಮಲಪ್ರಭದಿಂದ ಹೋಗುತ್ತಿದೆ. ಈಗಾಗಲೇ ಡಿಸ್ಚಾರ್ಜ್ ಮಾಡಿ ಉಳಿದಿರತಕ್ಕಂಥದ್ದರಲ್ಲಿ

ಒಂದು ಜ್ಯಾಕ್‌ವೆಲ್ ಇದೆ ಮತ್ತು ಫಿಲ್ಟರ್‌ಹೌಸ್ ಏನಿದೆ ಅದನ್ನು ಸವದತ್ತಿ ನಗರಸಭೆಗೆ ವಹಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಆಮೇಲೆ ಸವದತ್ತಿಯಿಂದ ನೀರು ಏನು ಹುಬ್ಬಳ್ಳಿಗೆ ಹೋಗುತ್ತಿದೆ ಅಲ್ಲಿ ಆನ್ ಗೋಯಿಂಗ್ ವಿಲೇಜಸ್ ಎರಡು ವಿಲೇಜ್‌ಗಳೇನಿವೆ ಅವುಗಳಿಗೆ ನೀರನ್ನು ಕೊಡಬೇಕು. ಆದಕಾರಣ ದಯವಿಟ್ಟು ಆ ಎರಡು ಹಳ್ಳಿಗಳಿಗೂ ಸ್ವಲ್ಪ ನೀರನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ದಯವಿಟ್ಟು ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಬಿ. ಸತ್ಯನಾರಾಯಣ(ಗ್ರಾಮೀಣ ನೀರು ಸರಬರಾಜು ಮತ್ತು ಒಳಚರಂಡಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ-ಧಾರವಾಡಕ್ಕೆ ನೀರು ಸರಬರಾಜು ಮಾಡುವ ದಾರಿಯಲ್ಲಿ ಯಾವ ಯಾವ ಹಳ್ಳಿಗಳು ಬರುತ್ತವೆಯೋ ಅದನ್ನು ಎನ್‌ರೂಟ್‌ಗೆ ಕೊಡಬೇಕು ಎಂದು ನಮ್ಮ ಕಾರ್ಯಕ್ರಮದಲ್ಲಿದೆ. ಆ ಕಾರ್ಯಕ್ರಮದಲ್ಲಿ ಅದನ್ನು ಹಾಕಿ ಆ ಎರಡೂ ಹಳ್ಳಿಗಳಿಗೆ ನೀರನ್ನು ಕೊಡುತ್ತೇವೆ.

ಆ) ವಿಷಯ : ಜಮಖಂಡಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ತೊಂದರೆಯಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ.

ಶ್ರೀ ಸಿದ್ದು ಸವದಿ(ಜಮಖಂಡಿ) : ಮಾನ್ಯ ಅಧ್ಯಕ್ಷರೆ, ಜಮಖಂಡಿ ತಾಲ್ಲೂಕಿನಲ್ಲಿ ಕುದಿಯುವ ನೀರಿನ ತೊಂದರೆಯಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಮಂತ್ರಿಗಳ ಸೆಳೆಯುತ್ತೇನೆ.

ಶ್ರೀ ಬಿ. ಸತ್ಯನಾರಾಯಣ(ಗ್ರಾಮೀಣ ನೀರು ಸರಬರಾಜು ಮತ್ತು ಒಳಚರಂಡಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ,
ಉತ್ತರ:

1. ಜಮಕಂಡಿ ತಾಲ್ಲೂಕಿನ ರಬಕವಿ-ಬನಹಟ್ಟಿ, ಜಮಖಂಡಿ ಮತ್ತು ತೆರದಾಳ್ ಪಟ್ಟಣಗಳಿಗೆ ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ನೀರು ಪೂರೈಕೆಯಾಗುತ್ತಿದೆ.

2. ಜಮಖಂಡಿ ತಾಲ್ಲೂಕಿನಲ್ಲಿ 71 ಗ್ರಾಮಗಳಿದ್ದು, ಅಲ್ಲಿನ ಜನವಸತಿಗಳ ಕುಡಿಯುವ ನೀರಿನ ವ್ಯವಸ್ಥೆಗಾಗಿ 75-ನಳನೀರು(pws) ಸರಬರಾಜು, 87-ಕಿರುನೀರು(MWS) ಸರಬರಾಜು ಮತ್ತು 757-ಕೈಪಂಪು ಕೊಳವೆ ಬಾವಿಗಳನ್ನು (HP Borewells) ಒದಗಿಸಲಾಗಿದೆ.

3. ಈ ವ್ಯವಸ್ಥೆಯಿಂದ 16 ಗ್ರಾಮಗಳಿಗೆ 40 ರಿಂದ 55 Lpcdಗೂ ಮೀಗಿಲಾದ ಕುಡಿಯುವ ನೀರು ಪೂರೈಕೆಯಾಗುತ್ತಿದೆ. ಸುಮಾರು 16,000 ಜನಸಾಂದ್ರತೆಯಿರುವ ಸಾವಳಗಿ ಮತ್ತು ತುಂಗಳ ಗ್ರಾಮಗಳಿಗೆ ಕೃಷ್ಣ ನದಿ ನೀರು ಶುದ್ಧೀಕರಣ ಮಾಡಿ ಕುಡಿಯುವ ನೀರು ಪೂರೈಕೆಯಾಗುತ್ತಿದೆ. ಉಳಿದ 53 – ಗ್ರಾಮಗಳಲ್ಲಿ ಬೇಸಿಗೆ ಅವದಿಯಲ್ಲಿ ಕುಡಿಯುವ ನೀರು ಪೂರೈಕೆ ಪ್ರಮಾಣ 20 ರಿಂದ 40 Lpcdಯಾಗುತ್ತದೆ. ಸದರಿ ಗ್ರಾಮಗಳ ಕುಡಿಯುವ ನೀರು ಪೂರೈಕೆ ವ್ಯವಸ್ಥೆಯನ್ನು ಉತ್ತಮ ಪಡಿಸಲು 2004-05ರ ಸಾಲಿನಲ್ಲಿ (DDP)ಮರುಭೂಮಿ ಅಭಿವೃದ್ಧಿ ಯೋಜನೆಯಡಿ 8 ಹೊಸ ಕಾಮಗಾರಿಗಳನ್ನು ರೂ. 38.40 ಲಕ್ಷ ಅಂದಾಜಿನಲ್ಲಿ, ರಾಜ್ಯ ಮತ್ತು ಕೇಂದ್ರ ವಲಯಗಳಡಿ 18 ಹೊಸ ಕಾಮಗಾರಿಗಳನ್ನು ಒಟ್ಟು ರೂ. 62.81 ಲಕ್ಷಗಳಲ್ಲಿ ಕೈಗೊಳ್ಳಲಾಗಿದೆ. ಇದಲ್ಲದೆ, ಜಲ ನಿರ್ಮಲ ಯೋಜನೆಯಿಡಿ ಪ್ರತ್ಯೇಕವಾಗಿ ಹನಗಂಡಿ, ಆಲ್‌ಬಾಲ್, ತುಂಗಲ್ ಮತ್ತು ಸಾವಳಗಿ ರೂ. 2.28 ಕೋಟಿ ಅಂದಾಜಿನ ಯೋಜನೆ ಮಂಜೂರಾಗಿದ್ದು, ಕಾಮುಗಾರಿ ಪ್ರಗತಿಯಲ್ಲಿದೆ. ಹಾಲಿಯಿರುವ ಯೋಜನೆಗಳ ಪುನರುಜೀವನ/ಅಭಿವೃದ್ಧಿ ಸಲುವಾಗಿ NCCF/CRF ನಡಿ

ರೂ.25.00 ಲಕ್ಷ ಮತ್ತು ಡಿಡಿಪಿ ಯೋಜನೆಯಡಿ ರೂ. 5.00 ಲಕ್ಷಗಳನ್ನು ಅಗತ್ಯತೆಯನುಸಾರ ಪರ್ಯಾಯ ಜಲಮೂಲ ಸ್ಥಾಪನೆಗಾಗಿ ಒದಗಿಸಲಾಗಿದೆ. ಇಲ್ಲದೆ, ದಿ:24.1.2005ರಂದು ಬಾಗಲಕೋಟೆ ಜಿಲ್ಲಾ ಪಂಚಾಯತ್‌ಗೆ ರಾಜ್ಯ ವಲಯದ MNPಯಡಿ ರೂ. 81.00 ಲಕ್ಷ ಹೆಚ್ಚುವರಿ ಅನುದಾನವನ್ನು ಹಾಗು ದಿನಾಂಕ 25.1.2005ರಂದು ಪುನಃ ಡಿಡಿಪಿ ಕಾರ್ಯಕ್ರಮದಡಿ ರೂ. 66.30 ಲಕ್ಷಗಳನ್ನು ಕುಡಿಯುವ ನೀರಿನ ಯೋಜನೆಗಳ ಬಾಬ್ತಿಗೆ ಬಿಡುಗಡೆ ಮಾಡಲಾಗಿದೆ.

4. ಜೂನ್ 2005ರೊಳಗಾಗಿ ಈ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಜಮಖಂಡಿ ತಾಲ್ಲೂಕಿನ ಗ್ರಾಮಗಳಿಗೆ ಸಮರ್ಪಕ ಕುಡಿಯುವ ನೀರು ಪೂರೈಕೆ ವ್ಯವಸ್ಥೆ ಮಾಡಲಾಗುವುದು.

5. ಜಮಖಂಡಿ ತಾಲ್ಲೂಕಿನಲ್ಲಿರುವ 6–ಗೋಕಟ್ಟೆಗಳಿಗೆ ಜಿಎಲ್‌ಬಿಸಿ ಕಾಲುವೆಯಿಂದ ನೀರು ಹರಿಸಲಾಗುತ್ತಿದೆ.

6. ತಾಲ್ಲೂಕು ಮಟ್ಟದಲ್ಲಿ ರಚಿಸಲಾಗಿರುವ ಕಾರ್ಯಪಡೆ ಸ್ಥಳೀಯವಾಗಿ ಗ್ರಾಮೀಣ ಜನವಸತಿಗಳಿಗೆ ಕುಡಿಯುವ ನೀರಿನ ಸಮಸ್ಯೆಯಾದಲ್ಲಿ ಅದನ್ನು ಬಗೆಹರಿಸಲು ಅಗತ್ಯಕ್ರಮ ಕೈಗೊಳ್ಳುವುದು.

ಶ್ರೀ ಸಿದ್ದು ಸವದಿ :– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರೆ ಉತ್ತರದಲ್ಲಿ 16 ಸಾವಿರ ಜನಸಂಖ್ಯೆ ಇರುವ ಸಾವಳಗಿ ಮತ್ತು ತುಂಗಳ ಗ್ರಾಮಗಳಿಗೆ ಕೃಷ್ಣಾ ನದಿ ಶುದ್ಧೀಕರಣ ಮಾದಿ ಕುಡಿಯುವ ನೀರನ್ನು ಪೂರೈಸಲಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಇದು ಸತ್ಯಕ್ಕೆ ದೂರವಾದ ಸಂಗತಿ ಎಂದು ನಾನು ಹೇಳಬಯಸುತ್ತೇನೆ. ಏಕೆಂದರೆ ಸಾವಳಗಿಯಲ್ಲಿಯೇ ಸುಮಾರು 20 ಸಾವಿರ ಜನಸಂಖ್ಯೆ ಇದೆ. ತುಂಗಳ ಕೂಡ 12 ಸಾವಿರ ಜನಸಂಖ್ಯೆಯುಳ್ಳ ಒಂದು ಹಳ್ಳಿಯಾಗಿದೆ. ಎರಡೂ ಸೇರಿ ಸುಮಾರು 25 ರಿಂದ 30 ಸಾವಿರ ಜನಸಂಖ್ಯೆಯುಳ್ಳ ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸಲಾಗಿದೆ ಎನ್ನುವಂಥ ಸುಳ್ಳು ಸಂಗತಿಯನ್ನು ಉತ್ತರದಲ್ಲಿ ಕೊಟ್ಟಿದ್ದಾರೆ ಎಂದು ನನಗನ್ನಿಸುತ್ತದೆ. ಏಕೆಂದರೆ ಸುಮಾರು 10 ವರ್ಷಗಳಿಂದ ತುಂಗಳ ಗ್ರಾಮಕ್ಕೆ ನೀರುನ್ನು ಕೊಟ್ಟಿಲ್ಲ. ಈಗೋಗಲೆ ಹತ್ತು ವರ್ಷಗಳ ಹಿಂದೆ ಮಾಡಿದ ನಾಲ್ಕು ಇಂಚು ಲೈನ್ ಯೋಜನೆ ಏನು ಮಾಡಲಾಗಿತ್ತು ಅದು ಹಾಳಾಗಿದೆ. ಅದನ್ನು ಈ ಸಾರಿ ಜಲನಿರ್ಮಲ ಯೋಜನೆಯಡಿಯಲ್ಲಿ 45 ಲಕ್ಷ ರೂಪಾಯಿ ಖರ್ಚು ಮಾಡಿ, ರಿಪೇರಿ ಮಾತ್ರ ಕೇವಲ 50 ಸಾವಿರ ರೂಪಾಯಿಗಳಲ್ಲಿ ಮೂರು ಕಿ.ಮೀ. ಪೈಪಲೈನ್ ಕೆಲಸಕ್ಕೆ ಆಗುವಂಥ ಕಡೆ ಐದೂವರೆ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಇದರಲ್ಲಿ ದೊಡ್ಡ ಪ್ರಮಾಣದ ಅವ್ಯವಹಾರವಾಗಿದೆ. ಇದನ್ನು ಮಾಡಿದರೂ ಕೂಡ ತುಂಗಳ ಗ್ರಾಮಕ್ಕೆ ನೀರನ್ನು ಕೂಡುವ ಪರಿಸ್ಥಿತಿ ಸಾದ್ಯವಿರುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ. ಇದಲ್ಲದೇ ನಮ್ಮ ತಾಲ್ಲೂಕಿನ ಮೂರು ದೊಡ್ಡ ನಗರಗಳು ಇವೆ. ಈಗಾಗಲೀ ಅವರು ಹೇಗಾದರೂ ಮಾಡಿ ನಾವು ನೀರು ಸರಬರಾಜು ಯೋಜನೆ ಬಗ್ಗೆ ಹೇಳದ್ದಾರೆ. ಅದೂಸಹಿತ ಸುಳ್ಳು. ಈಗ ನಗರ ನೀರು ಸರಬರಾಜು ಯೋಜನೆಯಿಂದ ಒಂದು ಯೋಜನೆ ಪ್ರಾರಂಭವಾಗಿ ಈಗಾಗಲೇ ಅದು ಒಂದು ವರ್ಷದ ಹಿಂದೆಯೇ ಮುಗಿಯಬೇಕಾಗುತ್ತು. ಅದು ಇದುವರೆಗೆ ಮುಗಿಯದೇ ಆಮೆ ಗತಿಯಲ್ಲಿ ಕಾರ್ಯ ಪ್ರಾರಂಭವಾಗಿದೆ. ಆ ಗುತ್ತಿಗೆದಾರನ ಮೇಲೆ ಯಾವುದೇ ರೀತಿಯ ಕ್ರಮವನ್ನು ಇಲ್ಲಿಯವರೆಗೆ ಸರ್ಕಾರ ತೆಗೆದುಕೊಂಡಿಲ್ಲ. ಮುಂಜಾಗ್ರತಾ ಪ್ರಕ್ರಿಯೆ ನೀರಿನ ಸರಬರಾಜು ವಿಚಾರದಲ್ಲಿ ತೆಗೆದುಕೊಳ್ಳಬೇಕಿತ್ತು ಅದನ್ನು ಬಿಟ್ಟು ಒಂದು ಮನೆಗೆ ಬೆಂಕಿ ಬಿದ್ದಾಗ ಬಾವಿ ತೋಡಿದರು ಎನ್ನುವಂತೆ

ಈಗ 15 ದಿವಸದಲ್ಲಿ ಅಲ್ಲಿ ಕೆನಾಲ್ ಬಂದ್ ಆಗಿದ್ದರಿಂದ ನಲವತ್ತು ಸಾವಿರ ಜನಸಂಖ್ಯೆ ಇರುವ ದೊಡ್ಡ ಪಟ್ಟಣದಲ್ಲಿ ಗಂಭೀರವಾಗಿ ಕುಡಿಯುವ ನೀರಿನ ಸಮಸ್ಯೆ ಒದಗಿದೆ. ಸುಮಾರು 40 ಟ್ಯಾಂಕರ್ ಮೂಲಕ ನೀರನ್ನು ಹಾಕಿದರೂ ಕೂಡ ಸಾಕಾಗುವಷ್ಟು ನೀರನ್ನು ಒದಗಿಸಲಾರದಂಥ ಪರಿಸ್ಥಿತಿ ಇದೆ. ಇಂಥ ಸಮಯದಲ್ಲಿಯೂ ಅಲ್ಲಿ ಗುತ್ತಿಗೆ ಹಿಡಿದಿರುವ ಗುತ್ತಿಗೆದಾರನ ನಿಲುವಿನ ಬಗ್ಗೆ ಇದುವರೆಗೂ ಸರ್ಕಾರ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಈ ಬಗ್ಗೆ ನಾನು ಜಿಲ್ಲಾಧಿಕಾರಿಗಳಿಗೆ ನಾಲ್ಕೈದು ಪತ್ರಗಳನ್ನು ಬರೆದರೂ ಕೂಡ ಯಾವುದೇ ಕ್ರಮ ಗುತ್ತಿಗೆದಾರನ ಮೇಲೆ ತೆಗೆದುಕೊಂಡಿಲ್ಲ ಹಾಗೂ ಆ ಪಟ್ಟಣಕ್ಕೆ ವೇಗವಾಗಿ ನೀರನ್ನು ಬಿಡುವಂತೆ ಮಾಡಲು ಕ್ರಮವನ್ನು ತೆಗೆದುಕೊಂಡಿಲ್ಲ. ಅದೇ ಪ್ರಕಾರ ಜಮಖಂಡಿನಗರಕ್ಕೆ ಅಂದರೆ ಸುಮಾರು ಒಂದು ಲಕ್ಷ ಜನಸಂಖ್ಯೆ ಉಳ್ಳಂಥ ಜಮಖಂಡಿ ತಾಲ್ಲೂಕು ಪಟ್ಟಣಕ್ಕೂ ಕೂಡ 12 ಲಕ್ಷ ರೂ.ಗಳ ನಗರ ನೀರು ಸರಬರಾಜು ಯೋಜನೆಯಲ್ಲಿ ಒಂದು ಯೋಜನೆ ಎರಡು ವರ್ಷಗಳ ಹಿಂದೆ ಮಂಜೂರಾಗಿದ್ದರೂ ಕೂಡ ಇನ್ನೂ ಕೂಡ ಕಾರ್ಯ ಆರಂಭವಾಗಿಲ್ಲ. ಅದು ಕೂಡ ಆಮೆಗತಿಯಲ್ಲಿ ಕೆಲಸ ಪ್ರಾರಂಭವಾಗಿದೆ. ಇದಲ್ಲದೆ ಕಳೆದ ಬಾರಿ ನಮ್ಮ ತಾಲ್ಲೂಕಿನ ಜನರು ಆರು ತಿಂಗಳಲ್ಲಿ ಹದಿನೈದು ದಿವಸಗಳಿಗೊಮ್ಮೆ ಸ್ನಾನವನ್ನು ಮಾಡಿದ್ದಾರೆ. ಏಕೆಂದರೆ ಸ್ನಾನಕ್ಕೂ ಕೂಡ ನೀರಿಲ್ಲದಂಥ ಗಂಭೀರ ಪರಿಸ್ಥಿತಿ ಇತ್ತು. ಕೃಷ್ಣಾ ನದಿ ಸಂಪೂರ್ಣ ಬತ್ತಿಹೋಗಿತ್ತು. ಆ ಪರಿಸ್ಥಿತಿಯನ್ನು ಮನಗಂಡರೂ ಸರ್ಕಾರ ಯಾವುದೇ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಇದುವರೆಗೂ ಕೂಡ ಆ ಕಾರ್ಯವಾಗಿಲ್ಲ.

ಅಧ್ಯಕ್ಷರು : ಸಿದ್ದು ಸವದಿಯವರೆ, ತಾವು ಮೊದಲು ನಿಯಮಾವಳಿಗಳನ್ನು ಅರ್ಥ ಮಾಡಿಕೊಳ್ಳಿ. ಗಮನ ಸೆಳೆಯುವ ಸೂಚನೆಯಲ್ಲಿ ಮಂತ್ರಿಗಳು ಉತ್ತರ ಕೊಟ್ಟಮೇಲೆ ತಾವು ಕೇವಲ ಕ್ಲಾರಿಫಿಕೇಶನ್ ಮಾತ್ರ ಕೇಳಬೇಕು. ಅದನ್ನು ಬಿಟ್ಟು ಭಾಷಣ ಮಾಡಿದರೆ ಹೇಗೆ?

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ಬಹಳ ಗಂಭೀರವಾದ ಪರಿಸ್ಥಿತಿ ನಮ್ಮ ಕಡೆ ಇದೆ. ಒಂದು ನಿಮಿಷ ಮುಗಿಸಿಬಿಡುತ್ತೇನೆ. ಅಲ್ಲಿ ಕೃಷ್ಣಾ ನದಿ ಬತ್ತಿಹೋಗುವಂಥ ಸಂಭವವಿದೆ. ಏಕೆಂದರೆ ಆರು ಟಿ.ಎಂ.ಸಿ. ನೀರನ್ನು ಹಿಪ್ಪರಗಿ ಬ್ಯಾರೇಜ್‌ನಲ್ಲಿ ಈ ಬಾರಿ ತಡೆ ಹಿಡಿಯಲಾಗಿದೆ. ಆದರೆ ಎರಡು ತಿಂಗಳಿನಲ್ಲಿ ಮೂರು ಟಿ.ಎಂ.ಸಿ. ನೀರು ಖರ್ಚಾಗಿದೆ. ಇನ್ನು ಕೇವಲ ಎರಡು ಅಥವಾ ಎರಡೂವರೆ ಟಿ.ಎಂ.ಸಿ. ನೀರು ಮಾತ್ರ ಉಳಿದಿದೆ. ಆ ನೀರು ಇನ್ನು ಒಂದು ತಿಂಗಳು ಅಥವಾ ಒಂದೂವರೆ ತಿಂಗಳಿಗೆ ಮಾತ್ರ ಸಾಕಾಗುತ್ತದೆ. ಮತ್ತೆ ಬೇಸಿಗೆಯಲ್ಲಿ ನೀರು ಬತ್ತಿ ಹೋಗುವಂಥ ಗಂಭೀರ ಪರಿಸ್ಥಿತಿ ಇರುವುದರಿಂದ ಈಗಾಗಲೇ ಕೃಷ್ಣಾ ನದಿಗೆ ಯಾವ ಮೂಲದಿಂದ ನೀರನ್ನು ಬಿಡಲಾಗುವುದು ಎಂಬ ಬಗ್ಗೆ ಸರ್ಕಾರ ಯೋಜನೆ ಹಾಕಿಕೊಂಡಿದೆ? ಈಗಾಗಲೇ 10 ಟಿ.ಎಂ.ಸಿ. ನೀರನ್ನು ಹಿಡಕಲ್ ಜಲಾಶಯದಲ್ಲಿ ಕುಡಿಯುವ ನೀರಿನ ಸಲುವಾಗಿ ರಿಸರ್ವ್ ಮಾಡಿಟ್ಟಿದ್ದಾರೆ. ಅದರಿಂದ ಏನಾದರೂ ಕೃಷ್ಣಾ ನದಿಗೆ ನೀರನ್ನು ಬಿಡುವ ಯೋಜನೆಯನ್ನು ಹಾಕಿಕೊಂಡಿದ್ದೀರ? ಹಿಪ್ಪರಗಿ ಡ್ಯಾಂನಲ್ಲಿ ನೀರನ್ನು ತಡೆಹಿಡಿಯುವುದಕ್ಕೆ ಸಾಧ್ಯವಿದೆಯಲ್ಲಾ ಅಲ್ಲಿ ಬಿಡಿಸುವಂಥ ಯೋಜನೆಯನ್ನು ಸರ್ಕಾರ ಏನಾದರೂ ಮಾಡಿದೆಯೆ ಅಥವಾ ಬಹಳಷ್ಟು ಕೆರೆಗಳು ನಮ್ಮ ಕಡೆ ಇದೆ. ಇಲ್ಲಿ ಲಿಫ್ಟ್ ಇರಿಗೇಷನ್ ಚಾಲೂ ಮಾಡುವ ಮುಖಾಂತರ ಆ ಕೆರೆಗಳನ್ನು ತುಂಬಿಸುವಂಥ ಯೋಜನೆಯನ್ನು ಸರ್ಕಾರ ಏನಾದರೂ ಹಾಕಿಕೊಂಡಿದೆಯೆ? ನಮ್ಮ ತಾಲ್ಲೂಕಿನಲ್ಲಿ ಅಂಥ ಕೆರೆಗಳು ಇವೆ. ಇದರಿಂದ ಸುಮಾರು ಹತ್ತು ಹಳ್ಳಿಗಳಿಗೆ ಕುಡಿಯುವ ನೀರಿನ ಸೌಲಭ್ಯ ಕೊಡಬಹುದು.

ಇದರಿಂದ ಅಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಕಂಡುಹಿಡಿದಂತಾಗುತ್ತದೆ. ಆದರೆ ಅಲ್ಲಿ ಕೇವಲ ರಾಜಕೀಯದಿಂದ ರೈತರಿಗೆ ಕೇವಲ ಹತ್ತು ತಾಸು ಪಂಪ್‌ಸೆಟ್ ಓಡಿದರೂ ಕೂಡ ಮೂರೂವರೆ ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಆದರೆ ಕೇವಲ 25 ನೂರು ಎಕರೆಗೆ ನೀರನ್ನು ಕೊಟ್ಟು ಆ ಪಂಪ್‌ಸೆಟ್ ಯೋಜನೆಯನ್ನು ಬಂದ್ ಮಾಡುವಂಥ ಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಆ ಯೋಜನೆಯನ್ನು ಬಂದ್ ಇಡುವಂತಹ ಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಅದನ್ನು ಏಕೆ ಬಂದ್ ಇಟ್ಟಿರಿ? ಏಕೆ ಆ ಕೆರೆಯನ್ನು ತುಂಬಿಸಿಲ್ಲ. ಈ ರೀತಿಯ ಅನೇಕ ಯೋಜನೆಗಳು ನಮ್ಮ ತಾಲ್ಲೂಕಿನಲ್ಲಿ ಇದ್ದರೂ ಸಹ ಕುಡಿಯುವ ನೀರಿನ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚನೆ ಮಾಡಲಾರದೆ ಮತ್ತೊಮ್ಮೆ ಜನ ಗುಳಿ ಹೋಗುವಂತಹ ಗಂಭೀರ ಪರಿಸ್ಥಿತಿಯನ್ನು ತಂದೊದಗುವಂತಹ ಸ್ಥಿತಿ ಇದೆ. ಅದಕ್ಕೆ ಸರ್ಕಾರ ಸರಿಯಾದ ದಿಕ್ಕಿನಲ್ಲಿ ಒಂದು ಯೋಜನೆ ಮುಖಾಂತರ ಕಾರ್ಯವನ್ನು ಹಾಕಿಕೊಳ್ಳಬೇಕು. ಅಲ್ಲದೆ ಈಗ ಏನು ಮಾನ್ಯ ಸಚಿವರು.......

ಅಧ್ಯಕ್ಷರು : ಕ್ಲಾರಿಫಿಕೇಷನ್ ಕೇಳಿ ಎಂದರೆ ಏನಿದು?

ಶ್ರೀ ಸಿದ್ದು ಸವದಿ : ಮಾನ್ಯ ಸಚಿವರು ಈ ಗ್ರಾಮ ಪಂಚಾಯತ್ ಮುಖಾಂತರ ಟಾಸ್ಕ್‌ಫೋರ್ಸ್ ಅನ್ನು ತಾಲ್ಲೂಕು ಮಟ್ಟದಲ್ಲಿ ಏನೊಂದು ರಚನೆ ಮಾಡಿದ್ದಾರೆ ಅದರಿಂದ ಏನು ಅವ್ಯವಹಾರವಾಗುತ್ತಿದೆ ಎಂದು ಒಂದು ಮಾತಿನಲ್ಲಿ ಹೇಳಬಯಸುತ್ತೇನೆ. ಎಲ್ಲಾ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ. ಕೆಲವೊಂದು ಗ್ರಾಮಕ್ಕೆ ಸಾಕಷ್ಟು ಕುಡಿಯುವ ನೀರು ಇದ್ದು ಅದಕ್ಕೆ ಪರಿಹಾರ ಇರುತ್ತದೆ. ಆದರೆ ಇಲ್ಲಿ ಏನಾಗುತ್ತದೆ ಎಂದರೆ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಗಮನ ಸೆಳೆಯುವ ಸೂಚನೆ ಅಂದರೆ ಇದು ಭಾಷಣವಾಗುತ್ತದೆ.

ಅಧ್ಯಕ್ಷರು : ನಿಯಮಾವಳಿಗಳನ್ನು ಅವರ ಗಮನಕ್ಕೆ ತಂದರೂ ಕೂಡ ಯಾರೂ ಪಾಲಿಸದೆ ಇದ್ದರೆ ನಾವೇನು ಮಾಡಬೇಕಾಗುತ್ತದೆ? ನಾವು ಏನು ಮಾಡೋದು ಹೇಳಿ?

ಶ್ರೀ ಸಿದ್ದು ಸವದಿ : ನಾವು ಹೊಸ ಸದಸ್ಯರು, ನಾವು ಜಾಸ್ತಿ ಮಾತನಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ನಾನು ಹೇಳುವುದೇನೆಂದರೆ ಮುಂದಿನ ಸಾಲಿನಲ್ಲಿ ನಾಯಕರುಗಳೇನಿದ್ದೀರಿ, ನೀವು ಅವರಿಗೆ ಮಾರ್ಗದರ್ಶನ ನೀಡಬೇಕು. ನಿಮ್ಮ ಮಾರ್ಗದರ್ಶನದಲ್ಲಿ ಸರಿಯಾದ ರೀತಿಯಲ್ಲಿ ನಿಯಮವನ್ನು ಅರ್ಥ ಮಾಡಿಕೊಂಡು ಅದನ್ನು ಪಾಲಿಸುತ್ತಾರೆ ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಮ್ಮ ಶಾಸಕರು ತುಂಗಳಾ ಸಾವಳಗಿ ಯೋಜನೆ ಏನಿದೆ ಅದರ ಬಗ್ಗೆ ಈ ಒಂದು ಸೂಚನೆ ಕೊಟ್ಟಮೇಲೆ ಅವರ ಜೊತೆ ಇದರ ಬಗ್ಗೆ ಮಾತನಾಡಿದ್ದೇನೆ. ಅವರು ಹೇಳುವ ಪ್ರಕಾರ ಸಾವಳಗಿಯವರು ತುಂಬಾ ನೀರು ಉಪಯೋಗಿಸಿ ತುಂಗಳಕ್ಕೆ ನೀರು ಕೊಡುತ್ತಿಲ್ಲ. ಅದಕ್ಕೆ ತುಂಗಳಕ್ಕೆ ಸಪರೇಟ್ ಪೈಪ್‌ಲೈನ್ ಮಾಡಿಕೊಡಿ ಎಂದು ಒಂದು ಸಲಹೆಯನ್ನು ಕೊಟ್ಟರು. ನಾವು ಅದನ್ನು ಪರಿಶೀಲನೆ ಮಾಡುತ್ತೇವೆ. ಜೊತೆಗೆ ಈಗ ಆಗಿರತಕ್ಕಂಥ ಕಾಮಗಾರಿ ಕಳಪೆ ಇದೆ ಅಥವಾ ನೀರು ಹೋಗುತ್ತಾ ಇಲ್ಲ ಎನ್ನುವ ತೊಂದರೆಯನ್ನು ಹೇಳಿದ್ದಾರೆ. ಅದರ ಬಗ್ಗೆ ಅಧಿಕಾರಿಗಳ ಮಟ್ಟದಲ್ಲಿ ಸೂಕ್ತ ಸೂಚನೆ ಕೊಟ್ಟು ಅದನ್ನು ಸರಿಪಡಿಸತಕ್ಕಂಥ ಕೆಲಸವನ್ನು ಮಾಡುತ್ತೇನೆ. ಇನ್ನೊಂದು ಕೃಷ್ಣಾ

ನದಿಗೆ ಹಿಡಕಲ್ ಜಲಾಶಯದಿಂದ ಎಂದು ನೀರು ಹೋಗುತ್ತಾ ಇಲ್ಲ ಎನ್ನುವ ತೊಂದರೆಯನ್ನು ಹೇಳಿದ್ದಾರೆ. ಅದರ ಬಗ್ಗೆ ಅಧಿಕಾರಿಗಳ ಮಟ್ಟದಲ್ಲಿ ಸೂಕ್ತ ಸೂಚನೆ ಕೊಟ್ಟು ಅದನ್ನು ಸರಿಪಡಿಸತಕ್ಕಂಥ ಕೆಲಸವನ್ನು ಮಾಡುತ್ತೇನೆ. ಇನ್ನೊಂದು ಕೃಷ್ಣಾನದಿಗೆ ಹಿಡಕಲ್ ಜಲಾಶಯದಿಂದ ಎರಡು ಟಿಎಂಸಿ ಬಿಟ್ಟು ಹಿಪ್ಪರಗಿ ಡ್ಯಾಂನಲ್ಲಿ ಸ್ಟೋರೇಜ್ ಮಾಡಿದರೆ ಇವರಿಗೆ ಪೂರ್ಣ ನೀರು ಕೊಡುವುದಕ್ಕಾಗುತ್ತದೆ ಅದರಿಂದ ಅನೇಕ ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆಂದು ಹೇಳಿದರು. ಅದನ್ನು ನಾನು ನೀರಾವರಿ ಸಚಿವರ ಜೊತೆ ಚರ್ಚೆ ಮಾಡಿ, ಯಾವುದೇ ಡ್ಯಾಮ್‌ನಲ್ಲಿ ಕುಡಿಯುವ ನೀರಿಗೆ ನೀರನ್ನು ಸ್ಟೋರೇಜ್ ಮಾಡುವುದಕ್ಕೆ ಹಾಗೂ ಸಮಸ್ಯೆ ಬಗೆಹರಿಸುವಂತಹ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಚರ್ಚೆ ಮಾಡುತ್ತೇನೆಂದು ಹೇಳಿ ಜಮಖಂಡಿ ಮತ್ತು ತೆರೆದಾಳು ಪಟ್ಟಣಗಳ ವ್ಯಾಪ್ತಿ ಕರ್ನಾಟಕ ಅರ್ಬನ್ ವಾಟರ್ ಸಪ್ಲೈಗೆ ಬರುತ್ತದೆ, ಅದನ್ನು ಅವರು ಸರಿಪಡಿಸಬೇಕಾಗುತ್ತದೆ.

ಶ್ರೀ ಸಿದ್ದು ಸವದಿ : ಹಿಡಕಲ್ ಡ್ಯಾಮ್‌ನಿಂದ ಎರಡು ಟಿಎಂಸಿ ನೀರನ್ನು ಯಾವ ಅಧಿಯೊಳಗೆ ಬಿಡುತ್ತೀರಿ?

ಶ್ರೀ ಬಿ. ಸತ್ಯನಾರಾಯಣ : ಅದರ ಬಗ್ಗೆ ನೀರಾವರಿ ಸಚಿವರ ಜೊತೆ ಚರ್ಚೆ ಮಾಡಬೇಕು, ಅಲ್ಲದೆ ನನಗೆ ತಿಳಿದಮಟ್ಟಿಗೆ ರಾಜ್ಯದಲ್ಲಿ ಎಲ್ಲಾ ನೀರಾವರಿ ಡ್ಯಾಮ್‌ಗಳಲ್ಲಿ ಕುಡಿಯುವ ನೀರಿಗೆ ಸ್ಟೋರೇಜ್ ಮಾಡಬೇಕೆಂದು ಕಾನೂನು ಇರುವುದರಿಂದ ನೀರನ್ನು ಸ್ಟೋರೇಜ್ ಮಾಡಲೇಬೇಕಾಗುತ್ತದೆ. ಎಂಬುದು ನನ್ನ ಭಾವನೆ.

ಶ್ರೀ ಸಿದ್ದು ಸವದಿ : ಇದರ ಬಗ್ಗೆ ಚರ್ಚೆ ಮಾಡಬೇಕು, ತಕ್ಷಣ ಸಮಸ್ಯೆ ನಿರ್ಮಾಣವಾಗುತ್ತದೆ.

ಶ್ರೀ ಬಿ. ಸತ್ಯನಾರಾಯಣ : ಸನ್ಮಾನ್ಯ ಸದಸ್ಯರು ನನ್ನ ಜೊತೆ ಬರಲಿ, ಬಂದರೆ ಅವರನ್ನು ಜೊತೆಗೆ ಕರೆದುಕೊಂಡು ಹೋಗುತ್ತೇನೆ.

ಶ್ರೀ ಸಿದ್ದು ಸವದಿ : ನಮ್ಮ ತಾಲ್ಲೂಕಿನಲ್ಲಿ ಯಲಹಟ್ಟಿ ಒಂದು ಸಣ್ಣ ಗ್ರಾಮ ಇದೆ. ಅಲ್ಲಿ ಢ್ಯಾನಿಡಾ ಯೋಜನೆಯಲ್ಲಿ ಒಂದು ಕೋಟಿ ರೂಪಾಯಿ ಖರ್ಚು ಮಾಡಿದೆ. ಆದರೆ ನಾಲ್ಕು ವರ್ಷಗಳಿಂದ ಆ ಹಳ್ಳಿಗೆ ಕುಡಿಯುವ ನೀರು ಇಲ್ಲ. ಒಂದು ಕೋಟಿ ರೂಪಾಯಿ ಯಾವುದರ ಸಲುವಾಗಿ ಖರ್ಚು ಮಾಡಿದಿರಿ, ಆ ಯೋಜನೆ ಯಾವ ರೀತಿಯಾಗಿದೆ ಎಂದರೆ ಆ ಯಲಹಟ್ಟಿ ಗ್ರಾಮದ ಬುಡದಿಂದಲೇ ಹತ್ತು ಗ್ರಾಮಗಳಿಗೆ ನೀರು ಹೋಗುತ್ತದೆ. ಆದರೆ ಯಲಹಟ್ಟಿ ಗ್ರಾಮ ಬಿಟ್ಟು ನಾಲ್ಕು ಕಿಲೋಮೀಟರ್ ಮೇಲೆ ಯೋಜನೆ ಹಾಕಿದ್ದಾರೆ. ಇದರ ಉದ್ದೇಶವೇನು? ಇದಕ್ಕೆ ಯಾವಾಗ ಪರಿಹಾರ ಕಂಡುಹಿಡಿಯುತ್ತೀರಿ?

ಶ್ರೀ ಬಿ. ಸತ್ಯನಾರಾಯಣ : ಈ ವಿಷಯವನ್ನು ತಾವು ಈಗ ಪ್ರಸ್ತಾಪ ಮಾಡಿದ್ದೀರಿ, ಅದರ ಬಗ್ಗೆ ಅಧಿಕಾರಿಗಳಿಂದ ವರದಿ ತರಿಸಿ ಪರಿಶೀಲನೆ ಮಾಡಿ ನಿಮಗೆ ತಿಳಿಸುತ್ತೇನೆ.

ಅಧ್ಯಕ್ಷರು : ನಿಯಮ 69 ರ ಕೆಳಗಡೆ ಏನು ಸಾರ್ವಜನಿಕ ಮಹತ್ವದ ಚರ್ಚೆಯಾಗುತ್ತಿದೆ ಅದರಲ್ಲಿ ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡಿಲ್ಲ ಈಗ ಮಾತನಾಡಿ ತಾವು ಇವತ್ತೇ ಮುಗಿಸಬೇಕು. ಇವತ್ತೇ ಉತ್ತರ ಆಗಿ ಬಿಡಬೇಕು.

8. ನಿಯಮ 69 ರ ಮೇರೆಗೆ

ವಿಷಯ : ರಾಜ್ಯದ ಹಲವಾರು ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ, ಬೋರ್‌ವೆಲ್‌ಗಳನ್ನು ದುರಸ್ತಿಗೊಳಿಸದಿರುವುದು ಹಾಗೂ ಸತತವಾಗಿ ವಿದ್ಯುತ್ ನೀಡದಿರುವುದರಿಂದ ಉಂಟಾಗುವ ತೊಂದರೆಗಳ ವಿಚಾರ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ(ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯ ಎದುರಿಸುತ್ತಿರುವಂತಹ ಬಹಳ ಗಂಭೀರವಾಗಿ ಮೂರು ಸಮಸ್ಯೆಗಳನ್ನು ನಾವು ನಿಲುವಳಿ ಸೂಚನೆ ಮುಖಾಂತರ ಕೊಟ್ಟೆದ್ದೆವು. ಅದಕ್ಕೆ ತಾವು ನಿಯಮ 69 ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕೆ ತಮಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಬಹಳ ಪ್ರಮುಖವಾಗಿ ಮೂರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ ಒಂದು ರೇಷನ್ ಕಾರ್ಡ್, ಕುಡಿಯುವ ನೀರು ಹಾಗೂ ವಿದ್ಯುಚ್ಛಕ್ತಿ ಈ ಮೂರು ಸಮಸ್ಯೆಗಳನ್ನು ಪ್ರಸ್ತಾಪ ಮಾಡಿ ಚರ್ಚೆಗೆ ಅನುಮತಿ ಕೇಳಿದ್ದೆವು. ಈಗಾಗಲೇ ನಮ್ಮ ಸ್ನೇಹಿತರೆಲ್ಲಾ ಮಾತನಾಡಿದ್ದಾರೆ. ಸರ್ಕಾರ ಬಹಳ ಹೆಮ್ಮೆಯಿಂದ ಹೇಳುತ್ತಿದೆ ಪ್ರೋ ರೂರಲ್ ಎಂದು ನಾವು ಹಳ್ಳಿಗಾಡಿನ ಪರವಾಗಿ ಇರತಕ್ಕಂಥ ಸರ್ಕಾರ ಎಂದು. ನಾವು ಹಳ್ಳಿ ಪರ ಸರ್ಕಾರ ಎಂದು ಬಹಳ ಹೆಮ್ಮೆಯಿಂದ ಪದೇ ಪದೇ ಮಾನ್ಯ ಮುಖ್ಯಮಂತ್ರಿಗಳಿಂದ ಹಿಡಿದು ಎಲ್ಲಾ ಮಂತ್ರಿಗಳೂ ಕೂಡ ಸ್ಟೇಟ್‌ಮೆಂಟ್ ಕೊಡುತ್ತಿದ್ದಾರೆ. ಆದರೆ ಸರ್ಕಾರ ಆ ರೀತಿ ಹೇಳುತ್ತಿದೆಯೇ ಹೊರತು ವಾಸ್ತವ ಅಂಕಿಅಂಶಗಳ ಪ್ರಕಾರ ನಾವು ಪರಿಶೀಲನೆ ಮಾಡಿ ನೋಡಿದರೆ ನಿಜವಾಗಿಯೂ Not Pre-Rural. It pro-urban-aboslution ಅದು ಹಳ್ಳಿಗಾಡಿನ ಪರ ಈ ಸರ್ಕಾರ ಇಲ್ಲ, ಪಟ್ಟಣ ವಾಸಿಗಳು ಮತ್ತು ಈ ದೇಶದ ಬಂಡವಾಳಗಾರರು, ಕಾರ್ಖಾನೆ ಮಾಲೀಕರ ಪರವಾಗಿ ಹೆಚ್ಚು ವಾಲಿದೆಯೇ ಹೊರತು ಅದು ಹಳ್ಳಿಗಾಡಿನ ಪರ ಇಲ್ಲ, ಅವರೇ, ಕೊಟ್ಟಿರತಕ್ಕಂಥ ಅಂಕಿಅಂಶಗಳ ಪ್ರಕಾರ ಕುಡಿಯುವರಿಗೆ ಇಡೀ ರಾಜ್ಯಕ್ಕೆ ಕೊಟ್ಟಿರತಕ್ಕ ಹಣ 522 ಕೋಟಿ ರೂಪಾಯಿಗಳು ರಸ್ತೆಗಳು ಮತ್ತು ಬ್ರಿಡ್ಜ್‌ಗಳಿಗೆ ಕೊಟ್ಟಿರುವುದು ಈ ವರ್ಷ 146 ಕೋಟಿ ರೂಪಾಯಿಗಳು. ಎಂಪ್ಲಾಯ್‌ಮೆಂಟ್ ಮತ್ತು ವಾಟರ್‌ಶೆಡ್ ಸ್ಕೀಮ್‌ಗೆ 694 ಕೋಟಿ ರೂಪಾಯಿ. ಕೇಂದ್ರ ಮತ್ತು ರಾಜ್ಯ ಸರ್ಕಾರ ಎರಡೂ ಸೇರಿ 1,362 ಕೋಟಿ ರೂಪಾಯಿಗಳಾಗುತ್ತದೆ. ಇನ್ನು ಕೃಷಿಗೆ, ನಮ್ಮ ಕೃಷಿ ಮಂತ್ರಿಗಳು ಕೃಷಿ ಪರ ನಾನು ಎಂದು ಹೇಳುತ್ತಾರೆ, ಅವರು ಕೃಷಿಗೆ ಕೊಟ್ಟಿರತಕ್ಕಂಥ ಹಣ ಎಷ್ಟೆಂದರೆ 833 ಕೋಟಿ ರೂಪಾಯಿಗಳು. ಮತ್ತು ಸ್ವಜಲ ವಾಟರ್ ಶೆಡ್ ಡೆವಲಪ್ ಮೆಂಟ್ 100 ಕೋಟಿ ರೂಪಾಯಿ, ಪವರ್ ಸಬ್ಸಿಡಿಗೆ 1800 ಕೋಟಿ ರೂಪಾಯಿ ಕೊಟ್ಟಿದ್ದಾರೆ, ಕರ್ನಾಟಕದ ಒಟ್ಟು ಜನಸಂಖ್ಯೆ ಎಷ್ಟು? ಹಳ್ಳಿಗಳು ಎಷ್ಟು? ಆ ಹಳ್ಳಿಗಳಲ್ಲಿ ಇಡೀ ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಕೃಷಿ ಮೇಲೆ ಆಧಾರವಾಗಿದ್ದು ಜೀವನ ಮಾಡುತ್ತಿರತಕ್ಕಂಥ ಜನ ಎಷ್ಟು? ಹಳ್ಳಿಗಾಡಿನ ಪ್ರದೇಶಗಳಲ್ಲಿ ಇರತಕ್ಕಂಥ ಜನಸಂಖ್ಯೆ ಎಷ್ಟು? ಅವರು ಕೊಟ್ಟಿರುವಂತಹ ಹಣ ಎಷ್ಟು? ಇದನ್ನೆಲ್ಲಾ ಭಾಗ ಮಾಡಿದರೆ ಒಂದೊಂದು ತಲೆಗೆ 40 ರೂಪಾಯಿ ಬರುತ್ತದೆ. ಆ 40 ರೂಪಾಯಿಗಳಲ್ಲಿ ಹಳ್ಳಿಗಾಡಿನ ಪ್ರದೇಶದಲ್ಲಿ ಇರತಕ್ಕಂಥ ಜನರ ಜೀವನವನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೆಲ್ಲ ಎಂದು ಪ್ರಾಮಾಣಿಕವಾಗಿ ನಾವು ಎಲ್ಲರೂ ಆಲೋಚನೆ ಮಾಡಬೇಕಾಗುತ್ತದೆ. ಇದು ನಾನು ಕೊಟ್ಟಿರುವ ಲೆಕ್ಕವಲ್ಲ, ಅವರೇ ಕೊಟ್ಟಿರತಕ್ಕಂಥ ಲೆಕ್ಕ. ನಾನು ಎಲ್ಲಾ ವಿಚಾರಗಳನ್ನು ಮಾತನಾಡುವುದಕ್ಕೆ

ಹೋಗುವುದಿಲ್ಲ. ಇಲ್ಲಿ ಪ್ರಸ್ತಾಪ ಮಾಡಿರುವುದು ಮೂರು ವಿಚಾರ. ಕುಡಿಯುವ ನೀರು, ರೇಷನ್ ಕಾರ್ಡ್ ಮತ್ತು ಪವರ್. ಕುಡಿಯುವ ನೀರಿನ ವಿಚಾರದಲ್ಲಿ ಪರಿಸ್ಥಿತಿ ಇವತ್ತು ಗಂಭೀರವಾಗಿದೆ. ಕುಡಿಯುವ ನೀರಿನ ಬಗ್ಗೆ ಪ್ರತಿದಿವಸ ಪತ್ರಿಕೆಗಳನ್ನು ತೆಗೆದು ನೋಡಿದರೆ ಸರ್ಕಾರದ ಒಂದು ಹೇಳಿಕೆ ಇರುತ್ತದೆ. ಅದೇನೆಂದರೆ ಅಲ್ಲಿ ಇಷ್ಟು ಹಣ ಕೊಡುತ್ತಿದ್ದೇವೆ, ಒಂದು ಜಿಲ್ಲೆಗೆ ಇಷ್ಟು ಕೊಡುತ್ತಿದ್ದೇವೆ ಎಂದು. ಈಗ ತಾನೆ ಮಾನ್ಯ ಮಂತ್ರಿಗಳು ಹೇಳುತ್ತಿದ್ದರು. ಅದನ್ನು ನೀವು ಕೇಳಿಸಿಕೊಂಡಿರಿ. ಈಗಾಗಲೇ ಒಂದು ಸುದ್ದಿ ಇದೆ. ಒಂದು ಜಿಲ್ಲೆಗೆ ಒಂದು ಕೋಟಿ ರೂಪಾಯಿ ಕೊಡುತ್ತೇವೆಂದು. ಅದು ಪ್ರಪೋಸಲ್ ಇದೆ. ಸರಾಸರಿ ಒಂದು ಜಿಲ್ಲೆಗೆ ಹತ್ತು ತಾಲ್ಲೂಕುಗಳು ಇವೆ. ಕೆಲವು ಕಡೆ 12 ತಾಲ್ಲೂಕುಗಳು ಬರುತ್ತವೆ. ಒಂದು ತಾಲ್ಲೂಕಿಗೆ ಹತ್ತು ಲಕ್ಷ ರೂಪಾಯಿ ಬರುತ್ತದೆ. ಇವತ್ತು ಒಂದು ಬೋರ್‌ವೆಲ್ ಕೊರೆದು ಪಂಪ್‌ಸೆಟ್ ಅಳವಡಿಸಿ, ಭೂಮಿಯಿಂದ ನೀರು ತೆಗೆದು ಕೊಡಬೇಕಾದರೆ ಒಂದು ಲಕ್ಷ 70 ಸಾವಿರ ರೂಪಾಯಿಗಳು ಬೇಕಾಗುತ್ತದೆ. 10 ಲಕ್ಷ ರೂ ಒಂದು ತಾಲ್ಲೂಕಿಗೆ ಕೊಟ್ಟರೆ ನೀವು ಎಷ್ಟು ಹಳ್ಳಿಗಳಿಗೆ ನೀರು ಸರಬರಾಜು ಕೊಡಬಹುದು? ಹಾಗಾಗಿ ನಾಣು ಪ್ರಾಮಾಣಿಕವಾಗಿ ಕೇಳುತ್ತಿದ್ದೇನೆ, ಬಡ ಜನರ ಪರವಾಗಿ ಹಳ್ಳಿಗಾಡಿನ ಜನರ ಪರವಾಗಿ ಇರತಕ್ಕಂಥ ಸರ್ಕಾರ ಅಲ್ಲ ಇದು. ಹಾಗೆ ಇದ್ದರೆ ಪ್ರಾಮಾಣಿಕವಾಗಿ ಕುಡಿಯುವ ನೀರಿಗೆ ಒಂದು ತಾಲ್ಲೂಕಿಗೆ, ಇವತ್ತು ಬರಗಾಲವಿರುವಂತಹ ಪರಿಸ್ಥಿತಿಯಲ್ಲಿ, ಕುಡಿಯುವ ನೀರಿಗೆ ಕೆಲವು ಬರಗಾಲ ಪೀಡಿತವಾದಂತಹ ಜಿಲ್ಲೆಗಳು ಇವೆ, ತಾಲ್ಲೂಕುಗಳು ಇವೆ. ಒಂದು ತಾಲ್ಲೂಕಿಗೆ ಸರಾಸರಿಯಾಗಿ ಒಂದು ಕೋಟಿ ರೂಪಾಯಿಗಳು, ಒಂದು ಅಸೆಂಬ್ಲಿ ಕ್ಷೇತ್ರದ ಲೆಕ್ಕದಲ್ಲಿ ಕೊಟ್ಟರೂ ಸಹ ಸಾಕಾಗುವುದಿಲ್ಲ. ಮಾನ್ಯ ಶ್ರೀನಿವಾಸ ಗೌಡರಿಗೂ ಇದು ಗೊತ್ತಿದೆ. 29ನೇ ತಾರೀಖಿನ ದಿವಸ ಕೆ.ಡಿ.ಪಿ. ಮೀಟಿಂಗ್ ಇದೆ, ಅಲ್ಲಿ ಇದು ಗಂಭೀರ ಚರ್ಚೆಗೆ ಬರುತ್ತದೆ. ಅಲ್ಲಿ ಮಾನ್ಯ ಶ್ರೀನಿವಾಸ ಗೌಡರ ಎದುರಿಗೆ ಅಧಿಕಾರಿಗಳಿಗೆ ಮಾತನಾಡುವುದಕ್ಕೆ ಭಯ. ಅವರು ಹಣ ಇದೆಯೆಂದು ಹೇಳುತ್ತಾರೆ. ಆದರೆ ವಾಸ್ತವವಾಗಿ ಅದರ ಹತ್ತಿರ ಹಣವಿಲ್ಲ. ಈಗ ನಮ್ಮ ಜಿಲ್ಲೆಯಲ್ಲೇ ತೆಗೆದುಕೊಂಡರೆ ಒಂದೊಂದು ತಾಲ್ಲೂಕಿಗೆ ಸರಾಸರಿಯಾಗಿ 30 ರಿಂದ 40 ಹಳ್ಳಿಗಳಿಗೆ ಮೂರು ತಿಂಗಳುಗಳಿಂದ ಕುಡಿಯುವ ನೀರನ್ನು ಟ್ರಾನ್ಸ್‌ಪೋರ್ಟ್ ಮಾಡುತ್ತಿದ್ದೇವೆ. ಅಲ್ಲಿ ಬೋರ್‌ವೆಲ್‌ಗಳು ಇಲ್ಲದೇ ಟ್ರಾನ್ಸ್‌ಪೋರ್ಟ್ ಮಾಡುತ್ತಿದ್ದೇವೆ. ನಾವೇ ಒಂದು ಟ್ರಾಕ್ಟರ್‌ಗೆ 350 ರೂ.ಗಳಿಂದ 400 ರೂಪಾಯಿಗಳನ್ನು ಬಾಡಿಗೆ ಕೊಡಬೇಕೆಂದು ಕೆ.ಡಿ.ಪಿ. ಮೀಟಿಂಗ್‌ನಲ್ಲಿ ನಿಗದಿ ಮಾಡಿದ್ದೇವೆ. ಆ ರೀತಿಯಲ್ಲಿ ನಮ್ಮ ಜಿಲ್ಲೆಗೆ ಕಳೆದ ಮೂರು, ನಾಲ್ಕು ತಿಂಗಳುಗಳಿಂದ ಕುಡಿಯುವ ನೀರನ್ನು ಸಪ್ಲೈ ಮಾಡುತ್ತಿದ್ದೇವೆ. ಈ ಪರಿಸ್ಥಿತಿ ಬೇರೆ ಜಿಲ್ಲೆಗಳಲ್ಲೂ ಇದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ನಾವು ಹಳ್ಳಿಗಾಡಿನ ಪರವೆಂದು ಹೇಳುವಂಥ ಸರ್ಕಾರ, ನಾವು ಕುಡಿಯುವ ನೀರಿಗೆ ಪ್ರಾಶಸ್ತ್ಯವನ್ನು ಕೊಡುತ್ತೇನೆಂದು ಹೇಳುವರಂತಹ ಸರ್ಕಾರ, ಇವತ್ತಿಗೂ ಕೂಡ ಹಣವನ್ನು ಬಿಡುಗಡೆ ಮಾಡಿಲ್ಲ. ಇಲ್ಲಿ ಹಣವನ್ನು ಬಿಡುಗಡೆ ಮಾಡಿಲ್ಲವೆಂದರೆ ಏನೂ ಮಾಡಿಲ್ಲವೆಂದು ಅರ್ಥವಲ್ಲ. ಇಲ್ಲಿ ಕುಡಿಯುವ ನೀರಿಗೆ ಸಾಕಾಗುವಷ್ಟು ಹಣವನ್ನು ಬಿಡುಗಡೆ ಮಾಡಿಲ್ಲ. ನೀವು ಬೇರೆ ಯೋಜನೆಗಳಿಗೆ ಕೊಡುವಂಥಾದ್ದನ್ನು 3–4 ತಿಂಗಳು ನಿಧಾನ ಮಾಡಿ. ಅದಕ್ಕೆ ಅಷ್ಟೇನೂ ತೊಂದರೆಯಾಗುವುದಿಲ್ಲ. ಇಲ್ಲಿ ನಾವು ಶಾಸಕರಾಗಿ ಎಲ್ಲೂ ಹಳ್ಳಿಗಳಲ್ಲಿ ಓಡಾಡುವ ಹಾಗೆ ಇಲ್ಲ. ಇವರು ಮಾತನಾಡಿದರೆ ವಿಕೇಂದ್ರಿಕರಣ ಎಂದು ಹೇಳುತ್ತಾರೆ. ಪಂಚಾಯತ್ ರಾಜ್‌ಗಳಿಗೆ ಅಧಿಕಾರವನ್ನು ಕೊಟ್ಟುಬಿಟ್ಟಿದ್ದೇವೆಂದು ಹೇಳುತ್ತಿದೆ. ಈ ವಿಚಾರವನ್ನು ಆದರೆ ಏನಾದರೂ ನಾವು

ಹೇಳುತ್ತಾರೆ ಮಾತನಾಡಿದರೆ, ಮಾನ್ಯ ಡಿ.ಆರ್ ಪಾಟೀಲ್‌ರವರಿಗೆ ಸಿಟ್ಟು ಬರುತ್ತದೆ. ಅವರು ಸರಿಮಾಡಿಕೊಳ್ಳುತ್ತೇವೆಂದು ಹೇಳುತ್ತಾರೆ. ಇಲ್ಲಿ ಪಂಚಾಯತ್‌ನವರಿಗೆ ಹಣವನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಆದರೆ ಪಂಚಾಯತ್‌ನವರು ನಮಗೆ ಹಣವನ್ನು ಕೊಟ್ಟಿಲ್ಲವೆಂದು ಹೇಳುತ್ತಾರೆ. ಇವತ್ತು ಪಂಚಾಯತ್ ವ್ಯವಸ್ಥೆ ಏನು ಆಗಿದೆ? ಇವತ್ತು ಕುಡಿಯುವ ನೀರಿಗೆಂದು ಹಣವನ್ನು ಕೊಟ್ಟರೆ. ಪಂಚಾಯತ್‌ಗಳು ಬೇರೆ ಬೇರೆ ಯೋಜನೆಗಳಿಗೆ ಹಣವನ್ನು ಭಾಗವಾಗಿ ಇಟ್ಟುಕೊಂಡು ಉಪಯೋಗ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಾವು ಶಾಸಕರು ಹಳ್ಳಿಗಳಿಗೆ ಹೋದರೆ ಜನರು ನಮಗೆ ನೀರು ಕೇಡಿ ಎಂದು ಕೇಳುತ್ತಾರೆ. ಅವರು ಗ್ರಾಮ ಪಂಚಾಯತ್ ಸದಸ್ಯರುಗಳನ್ನು ಕೇಳುವುದಿಲ್ಲ. ಜಿಲ್ಲಾ ಪಂಚಾಯತ್ ಮೆಂಬರ್‌ಗಳನ್ನು ಕೇಳುವುದಿಲ್ಲ, ಮಂತ್ರಿಗಳನ್ನು ನೀರು ಕೊಡಿಯೆಂದು ಘೇರಾವ್ ಮಾಡುತ್ತಾರೆ. ಆಗ ನಾವು ನಮಗೆ ಸಂಬಂಧವಿಲ್ಲ, ಗ್ರಾಮ ಪಂಚಾಯತ್ ಸದಸ್ಯರು ನೀರು ಕೊಡುತ್ತಾರೆ, ಜಿಲ್ಲಾ ಪಂಚಾಯತ್ ಸದಸ್ಯರು ನೀರು ಕೊಡುತ್ತಾರೆ. ನಮ್ಮನ್ನು ಕೇಳಬೇಡಿ. ಎಂದು ನಾವು ಹೇಳಿದರೆ..

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಶ್ರೀರಾಮರೆಡ್ಡಿಯವರೇ, ಈ ವಿಚಾರದಲ್ಲಿ ರಾಂಗ್ ಮೆಸೇಜ್ ಹೋಗುವುದು ಬೇಡ. ನಿಮ್ಮದು ಕಮಿಟ್‌ಮೆಂಟ್ ಇದೆ. ಡಿಸೆಂಟ್ರಲ್‌ಜೇಷನ್ ಬಗ್ಗೆ, ಜನರಲ್ ಆಗಿ ಪಂಚಾಯತ್‌ಗಳಲ್ಲಿ ಆ ಒಂದು ಟೆನ್‌ಡೆಂನ್ಸಿ ಇದೆ. ಏನಾದರೂ ಒಂದು ಗ್ರಾಂಟ್ ಬಂದರೆ ಅದನ್ನು ಮೆಂಬರ್‌ವಾರು ಹಂಚಿಕೊಳ್ಳುವಂತಹ ಪದ್ಧತಿ ಪ್ರಾರಂಭವಾಗಿದೆ. ಅದು ಗಬಾರದು ನಿಜ. ಇಲ್ಲಿ ಕುಡಿಯುವ ನೀರಿಗೆಂದು ಪ್ರತ್ಯೇಕವಾಗಿ ದೊಡ್ಡ ಮೊತ್ತದಲ್ಲಿ ಹಣವನ್ನು ಬಿಡುಗಡೆ ಮಾಡಿರುವಂಥಾದ್ದು ಇಲ್ಲ. ಆ ರೀತಿ ಬಿಡುಗಡೆ ಮಾಡಿದರೆ, ಅವರಲ್ಲಿ ಏನು ವ್ಯವಸ್ಥೆ ಇದೆ, ಏನು ಇನ್‌ಫ್ರಾಸ್ಟ್ರಕ್ಚರ್ ಇದೆ? ನಾವು ಹೇಳುವಂಥಾದ್ದು, ಈ ಸಮಸ್ಯೆ ಆಗಾಧವಾದದ್ದು. ಅವರು ಇದನ್ನು ನಿಭಾಯಿಸುವುದಕ್ಕೆ ಚೈತನ್ಯವಿಲ್ಲ. ಇವು ನಮ್ಮದೇ ಸಂಸ್ಥೆಗಳಾದುದ್ದರಿಂದ, ಎಲ್ಲೋ ನಾವು ಸಿಟ್ಟಿನ ಭರದಲ್ಲಿ, ವೈಲ್ಡ್ ಅಲಿಗೇಷನ್ಸ್ ಮಾಡಿಬಿಟ್ಟರೆ, ಮತ್ತು ಆ ಕೂಸನ್ನು ನಾಳೆ ಬೆಳೆಸಬೇಕಾಗುತ್ತದೆ. ಇದು ನನ್ನ ಅಪೀಲು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ವಿಕೇಂದ್ರೀಕರಣವನ್ನು ವಿರೋಧ ಮಾಡಿ ಮಾತನಾಡುತ್ತಿಲ್ಲ. ನಾನು ಹೇಳುತ್ತಿರುವಂಥಾದ್ದು, ವಿಕೇಂದ್ರೀಕರಣದಲ್ಲಿ ಅವರಿಗೆ ಅಧಿಕಾರವನ್ನು ಕೊಟ್ಟಿದ್ದೇವೆಂದು ನೀವು ಹೇಳುತ್ತಿದ್ದೀರಿ. ನಾವು ಶಾಸಕರು ಅಲ್ಲಿ ಹೋದರೆ, ನೀರು ಕೊಡಿ, ಎಂದು ನಮ್ಮನ್ನು ಹಿಡಿದುಕೊಳ್ಳುತ್ತಾರೆ. ನಮ್ಮ ಹತ್ತಿರ ಹಣ ಇಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ವಾಸ್ತವವಾಗಿ ಹೇಳಬೇಕೆಂದರೆ, ನಾವು ನೇರವಾಗಿ ಒಬ್ಬ ಎ.ಡಬ್ಲ್ಯೂ ಇ.ಗೆ ಒಂದು ಬೋರ್‌ವೆಲ್ ಅನ್ನು ಹಾಕಿ ಎಂದು ಹೇಳುವಂತಹ ಶಕ್ತಿ ಇವತ್ತು ನಮಗೆ ಇಲ್ಲ. ಆದರೆ ಜನರು ನಮ್ಮನ್ನು ಕೇಳುತ್ತಾರೆ. ಇದಕ್ಕೆ ನಾವು ಏನು ಮಾಡಬೇಕೆಂದು ಹೇಳಿ? ನಾನು ವಿಕೇಂದ್ರೀಕರಣದ ವಿರೋಧವೂ ಇಲ್ಲ, ಮತ್ತೆ ಪಂಚಾಯತ್ ರಾಜ್ ವ್ಯವಸ್ಥೆಯ ವಿರೋಧವೂ ಇಲ್ಲ. ನಾನು ನಮ್ಮ ಪಕ್ಷದವರನಾಗಿ ಹೇಳುವುದಾದರೆ, ನಾವೇ ಮೊದಲು ಇಂಡಿಯಾ ದೇಶದಲ್ಲಿ ಜಾರಿಗೆ ತಂದಿದ್ದು, ಈ ವಿಕೇಂದ್ರಿಕರಣವನ್ನು ಮೊದಲು ಬಂಗಾಳದಲ್ಲಿ

162 ಯಾರು ತಪ್ಪು ತಿಳಿದುಕೂಳ್ಳಬಾರದು. ಆದರೆ ಇವತ್ತು ಪ್ರಾಕ್ಟಿಕಲ್ ರಿಯಾಇಟಿ ಏನು?

ಶ್ರೀ ಎಸ್.ಎಸ್.ಪಾಟೀಲ್ : ತಾವು ಈಗ ನಮ್ಮನ್ನು ಕೇಳುವುದು ಸರಿ. ಅದನ್ನು ನಾವೂ ಒಪ್ಪಿಕೂಳ್ಳುತ್ತೇವೆ, ಎಲ್ಲರೂ ಒಪ್ಪಿಕೂಳ್ಳುತ್ತಾರೆ. ಆದರೆ ಅದಕ್ಕೆ ಏನು ಮಾಡಬೇಕೆಂಬ ಸಲಹೆಯನ್ನು ತಾವು ಹೇಳಿ.

ಶ್ರೀ ಡಿ.ಆರ್.ಪಾಟೀಲ್ : ಮಾನ್ಯ ಅಧ್ಯಕರೆ, ಈ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಗಳಿಗೆ ಕೊಟ್ಟು ಎರಡು ತಿಂಗಳು ಅಯಿತು. ಪ್ರತಿವರ್ಷ ಈ ಕುಡಿಯುವ ನೀರಿನ ಸಮಸ್ಯೆ, ಈ ಟೈಮಿನಲ್ಲಿ ಇದ್ದೆ ಇರುತ್ತದೆ. ಆಗ ಜಿಲ್ಲಾ ಪಂಚಾಯತ್ಗಳಿಗೆ, ತಾಲ್ಲೂಕು ಪಂಚಾಯಿತಿಗಳಿಗೆ ಮತ್ತು ಶಾಸಕರುಗಳಿಗೆ, ಜವಾಬ್ದಾರಿ ಇತ್ತೋ, ಆಗ ಹೇಗೆ ನಿಭಾಯಿಸಿದರೋ ಹಾಗೆ ಈಗಲೂ ಇರುತ್ತದೆ. ಈಗ ಕೆಲಸ ಮಾಡುವವರು ಯಾರು? ಶಾಸಕರು ಅಗಲಿ, ತಾಲ್ಲೂಕು ಪಂಚಾಯತ್‌ರವರಾಗಲಿ, ಜಿಲ್ಲಾ ಪಂಚಾಯತ್‌ನವರಾಗಲಿ, ಕೆಲಸ ಮಾಡುವುದಕ್ಕೆ ಒಂದು ವ್ಯವಸ್ಥೆ ತಾಲ್ಲೂಕು ಪಂಚಾಯತ್‌ವರಿಗೆ ಹೇಳಿದರೂ ಮಾಡಬೇಕು, ಗ್ರಾಮ ಪಂಚಾಯತ್ನವರಿಗೂ ಹೇಳಿದರೂ ಮಾಡಬೇಕು.

ಶ್ರೀ ಕೆ. ಜಯಪ್ರಕಾಸ್ ಹೆಗ್ಡೆ : ಮಾನ್ಯ ಅಧಕ್ಷರೆ, ನೀವು ಈ ಕೆಲಸವನ್ನು ಮಾಡಲು ಅದಿಕಾರವನ್ನು ಮಾಡಲು ಅಧಿಕಾರವನ್ನು ಕೊಟ್ಟಿದ್ದೀರಿ. ಯಾವ ಅಧಿಕಾರಿ ಗ್ರಾಮ ಪಂಚಾಯತ್‌ನ ಅಧ್ಯಕ್ಷರು ಹೇಳಿದ ಕೆಲಸವನ್ನು ಮಾಡುತ್ತಾರೆ? ಇಲ್ಲಿ ಜ್ಯೂನಿಯರ್ ಇಂಜಿನಿಯರ್ ಯಾವ ಪಂಚಾಯತ್‌ನಲ್ಲಿ, ಯಾವ ವಾರ್ಡ್‌ನಲ್ಲಿ ಎಷ್ಟು ಕುಡಿಯುವ ನೀರಿನ ಸಮಸ್ಯೆ ಇದೆಯೆಂಬ ಪಟ್ಟಿಯನ್ನು, ಮಾಡಿದ್ದಾರೆಂಬುದನ್ನು ನಾನು ಮಾತನಾಡುವಂತಹ ಸಂದರ್ಭದಲ್ಲಿ ಅವರು ಕಳುಹಿಸರುವಂತಹ ಪಟ್ಟಿಯನ್ನು ಓದುತ್ತೇನೆ. ಅವು ಆ ಭಾಗಗಳಿಗೆ ಹೋಗುವುದೇ ಇಲ್ಲ. ಅವರಿಗೆ ಎಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆಯೆಂಬುದು ಗೊತ್ತಿಲ್ಲ. ಇದು ಇರುವಂತಹ ಪರಿಸ್ಥಿತಿ. ನಾಲ್ಕು ಪಂಚಾಯತ್‌ಗಳಿಗೆ ಒಬ್ಬ ಸೆಕ್ರೆಟರಿ ಇರುತ್ತಾರೆ, ಎರಡು ಪಂಚಾಯತ್‌ಗಳಿಗೆ ಒಬ್ಬರು ಇರುತ್ತಾರೆ. ಇವತ್ತು ಅಲ್ಲಿ ಹೋದರೂ ಇಲ್ಲ, ಇಲ್ಲಿ ಹೋದರೂ ಇಲ್ಲ.

ಶ್ರೀ ಡಿ.ಆರ್.ಪಾಟೀಲ್ : ನಾವು ಇಲ್ಲಿ ಜಿಲ್ಲಾ ಪಂಚಾಯತ್‌ನವರನ್ನು, ತಾಲ್ಲೂಕು ಪಂಚಾಯತ್‌ನವರನ್ನು ಕೇಳಿ. ಆ ಆಫೀಸರ್ಸ್‌ಗಳನ್ನು ವರ್ಗಾವಣೆ ಮಾಡುವುದಿಲ್ಲ, ಇಲ್ಲಿ ನಾವು ಶಾಸಕರು ಕೊಟ್ಟ ಲೆಟರ್ ಮೇಲೆ ಅವರನ್ನು ವರ್ಗಾವಣೆ ಮಾಡುತ್ತೇವೆ. ಅದಕ್ಕೆ ಅವರು ನಾವು ಏಕೆ ಅವರ ಮಾತನ್ನು ಕೇಳಬೇಕು, ಇವರ ಮಾತು ಏಕೆ ಕೇಳಬೇಕೆಂದು ಆಫೀಸರ್ಸ್ ಹೇಳುತ್ತಾರೆ. ನೀವು ಅವರಿಗೆ ಮುಗದಾಳವನ್ನು ಕೊಡಿರಿ.

ಶ್ರೀ ಕೆ. ಜಯಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನಮ್ಮ ಭಾಗದಲ್ಲಿ ಆ ರೀತಿಯ ವರ್ಗಾವಣೆಯನ್ನು ಮಾಡಿಸುತ್ತಿಲ್ಲ. ನಿಮ್ಮ ಭಾಗದಲ್ಲಿ ಆ ರೀತಿಯ ವರ್ಗಾವಣೆಯನ್ನು ಮಾಡಿಸಿರಬಹುದು. ನಮ್ಮ ಭಾಗದಲ್ಲಿ ಅಷ್ಟು ವರ್ಗಾವಣೆಯನ್ನು ನಾವು ಮಾಡಿಸಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಆ ಚರ್ಚೆ ಈಗ ಇಲ್ಲಿ ಬೇಕಾಗಿಲ್ಲ. ಇಲ್ಲಿ ನಾವು ವಿಕೇಂದ್ರಿಕರಣದ ಬಗ್ಗೆ ಚರ್ಚೆ ಮಾಡುತ್ತಿಲ್ಲ. ನಾನು ಇಲ್ಲಿ ಇಷ್ಟೇ ಕೇಳುವಂಥಾದ್ದು. ಜನರು ನಮ್ಮನ್ನು ಕೇಳುತ್ತಾರೆ, ನಾವು ಏನು ಹೇಳಬೇಕು? ನೀವು ಯಾರಿಗೆ ಅಧಿಕಾರವನ್ನು ಕೊಡುತ್ತೀರಿ, ಎಂಬ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಅವರ ಅಧಿಕಾರವನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. ಈಗ ನಾನು ಒಂದು ವಿಚಾರವನ್ನು ಹೇಳುತ್ತೇನೆ.

> "Drinking water allocation is Rs. 522 crores, yet there are several hamlets with no source of water supply, while about 200 villages get temporary supply through tankers, Nearly half of the 56,682 hamlets have saline contaminated ground water, but the Centrally funded rajiv Gandhi De-salination Scheme is crawling along."

ಅಂದರೆ 200 ಹಳ್ಳಿಗಳಿಗೆ, ಇವತ್ತೂ ಕೂಡ ಸ್ವಚ್ಛವಾದಂತಹ, ಕುಡಿಯುವುದಕ್ಕೆ ಯೋಗ್ಯವಾದಂತಹ ನೀರು ಕೊಡುವಂತಹ ಶಕ್ತಿ ಇಲ್ಲವೆಂದರೆ, ನಾವು ಸರ್ಕಾರವನ್ನು ನಡೆಸುವಂತಹ ವಿಧಾನ ಏಕೆ? ಹೇಗೆ? ಯಾರಿಗೋಸ್ಕರ ಎಂಬ ಪ್ರಶ್ನೆ ನನ್ನದು ಇದೆ. ಆ ರೀತಿಯಲ್ಲಿ ಇವತ್ತು ಸರ್ಕಾರ ಮಾತಿನಲ್ಲಿ ಇವತ್ತು ನಾವು ಬಡವರ ಪರ ಇದ್ದೇನೆ, ಹಳ್ಳಿಗಳ ಪರವಿದ್ದೇವೆಂದು ಹೇಳಿದರೆ, ಪ್ರಯೋಜನವಾಗುವುದಿಲ್ಲ. ಇದಕ್ಕೆ ಒಂದು ಸರಿಯಾದ ರೀತಿಯಾದಂಥ ವ್ಯವಸ್ಥಿತ ರೀತಿಯಾದಂಥ ವೈಜ್ಞಾನಿಕ ರೀತಿಯಾಗಿ, ಪ್ರತಿಯೊಬ್ಬ ಮನುಷ್ಯನಿಗೂ ಇವತ್ತು ನೀರು ಕುಡಿಯುವುದಕ್ಕೆ ಎಷ್ಟು ಬೇಕೋ, ಅಷ್ಟನ್ನು ಒದಗಿಸುವಂತಹ ಒಂದು ಸ್ಪಷ್ಟವಾದಂತಹ ಯೋಜನೆ ಇವತ್ತಿಗೂ ಸಹಿತ ಸರ್ಕಾರದ ಮುಂದೆ, ಇಲ್ಲ. ನಮ್ಮ ಹಳ್ಳಿಗಾಡಿನ ಜನಸಂಖ್ಯೆ ಎಷ್ಟು? ಆ ಜನಸಂಖ್ಯೆಗೆ ವೈಜ್ಞಾನಿಕವಾಗಿ ಪ್ಲಾನಿಂಗ್ ಕಮಿಷನ್‌ನವರು ನಿಗದಿ ಮಾಡಿರುವಂತಹ ರೀತಿಯಲ್ಲಿ ಒಬ್ಬ ಮನುಷ್ಯನಿಗೆ ಒಂದು ದಿವಸಕ್ಕೆ ಎಷ್ಟು ನೀರಿನ ಅವಶ್ಯಕತೆ ಇದೆ? ಅವರು 124 ಲೀಟರ್ ನೀರಿನ ಅವಶ್ಯಕತೆ ಇದೆಯೆಂಬುದು ಹೇಳುತ್ತಾರೆ. ಒಂದು ದಿವಸಕ್ಕೆ ಈ 124 ಲೀಟರ್ ನೀರನ್ನು ಸಪ್ಲೈ ಮಾಡುವುದಕ್ಕೆ ಸಾಧ್ಯ ಆಗಿದೆಯಾ? ಅದರಲ್ಲಿ ಅರ್ಧ, ಕಾಲು ಭಾಗ ಅದರಲ್ಲಿ 10ನೇ ಒಂದು ಭಾಗವಾದರೂ ಇವತ್ತು ನೀರನ್ನು ಕೊಡುತ್ತಿದ್ದೇವಾ? ಈ ಹಳ್ಳಿಗಾಡಿನ ಜನರಿಗೆ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಅಂತಹ ಒಂದು ಪರಿಸ್ಥಿತಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಇದೆ. ಆ ಪರಿಸ್ಥಿತಿಯಿಂದ ಇವತ್ತು ನಾವು ಹೊರಗೆ ಬರಬೇಕಾಗಿದೆ. ಸರ್ಕಾರ ಬೇರೆ ಯೋಜನೆಗಳನ್ನು ಮಾಡುತ್ತದೋ ಅದು ಅಲ್ಲಿ ಪ್ರಶ್ನೆ. ಇಲ್ಲಿ ಮನುಷ್ಯನಿಗೆ ಗಾಳಿ, ನೀರು ಎರಡೂ ಮುಖ್ಯವಾದದ್ದು. ಇದು ಇಲ್ಲದಿದ್ದರೆ ಬದುಕುವುದಕ್ಕೆ ಆಗುವುದಿಲ್ಲ. ಮನುಷ್ಯ ಒಂದು ಹೊತ್ತು ಊಟವಿಲ್ಲದಿದ್ದರೆ ಬದುಕುತ್ತಾನೆ. ಆದರೆ ನೀರು ಇಲ್ಲದೇ ಬದುಕುವುದಕ್ಕೆ ಸಾಧ್ಯವಿಲ್ಲ. ಅಂತಹ ಒಂದು ಪರಿಸ್ಥಿತಿ, ಇವತ್ತು ನಮ್ಮ ರಾಜ್ಯದಲ್ಲಿ ನಿರ್ಮಾಣವಾಗಿದೆ. ನಾನು ಇದರ ಬಗ್ಗೆ ಡಿಸ್ಟ್ರಿಕ್ಟ್ ವೈಸ್ ರಿಪೋರ್ಟ್ ಇದೆ, ಎಲ್ಲೆಲ್ಲಿ ಯಾವ ರೀತಿಯಲ್ಲಿ ಇದೆಯೆಂಬುದು ಇದೆ. ಇದೆಲ್ಲವನ್ನೂ ಹೇಳುವುದಕ್ಕೆ ಸಮಯ ಹೆಚ್ಚು ಆಗುತ್ತದೆ. ನಾನು ನಮ್ಮ ಕೋಲಾರ ಜಿಲ್ಲೆಯ ಉದಾಹರಣೆಯನ್ನು ಹೇಳುತ್ತೇನೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ಸತತವಾಗಿ ಇದು 4ನೇ ವರ್ಷ, ಮಳೆ ಇಲ್ಲ. ನಮಗೆ ಯಾವುದೇ ನದಿಗಳು ಇಲ್ಲ, ನಾಲೆಗಳು ಇಲ್ಲ, ಕೆರೆಗಳು ಬತ್ತಿಹೋಗಿ ನಾಲ್ಕು ವರ್ಷಗಳು ಆಗಿವೆ. ಈ ಕೆರೆಗಳಿಗೆ ನೀರು ಬಂದಿಲ್ಲ. ನಾವು ಒಂದು ಸಾವಿರ ಅಡಿ ಆಳಕ್ಕೆ ಹೋದರೂ ನೀರು ಇಲ್ಲ. ನೀವು ಒಂದು ವಾಟರ್ ಸಪ್ಲೈಗೆ ಇಷ್ಟು ಹಣವೆಂದು ಏನು ನಿಗದಿ ಮಾಡುತ್ತೀರಿ, ಅದು ನಮ್ಮ ಕೋಲಾರ ಜಿಲ್ಲೆಗೆ ಸಾಕಾಗುವುದಿಲ್ಲ. 800 ಅಡಿಯಿಂದ 1,000 ಅಡಿಯವರೆಗೂ ಭೂಮಿಯೊಳಗೆ ಹೋಗಬೇಕಾಗುತ್ತದೆ. ಈ ರೀತಿ 1,000 ಅಡಿ ಒಳಗೆ ಹೋದರೆ ಏಳೂವರೆ ಹೆಚ್.ಪಿ. ಮೋಟರ್ ಕೆಲಸ ಮಾಡುವುದಿಲ್ಲ. ಅದಕ್ಕೆ 15 ಹೆಚ್.ಪಿ. ಮೋಟಾರ್ ಬೇಕು. ಈ 15 ಹೆಚ್.ಪಿ. ಮೋಟಾರ್‌ಗೆ ಕಾಸ್ಟ್ ಜಾಸ್ತಿಯಾಗುತ್ತದೆ. ನೀವು ವಾಟರ್ ಸಪ್ಲೈಗೆ ಒಂದೂವರೆ ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದರೆ, ಅದು ಸಾಕಾಗುವುದಿಲ್ಲ. ಇನ್ನೊಂದು ದುರಂತವೇನೆಂದರೆ ಕೆ.ಇ.ಬಿ. ಯವರಿಗೆ 50,000 ರೂಪಾಯಿಗಳ ಡಿಪಾಸಿಟ್ ಅನ್ನು ಕೊಡಬೇಕು. ಜಿಲ್ಲಾ ಪಂಚಾಯತ್‌ನವರು ಬೋರ್‌ವೆಲ್‌ಗಳನ್ನು ಕೊರೆಸಿದರೆ 50,000 ರೂಪಾಯಿಗಳ ಡಿಪಾಸಿಟ್ ಅನ್ನು ಕೊಡಬೇಕು, ಸ್ಕೇರ್‌ಸಿಟಿಗೆ ಇಲ್ಲ. ಮತ್ತೆ ಶಿಫ್ಟಿಂಗ್ ಚಾರ್ಜ್ ಹಾಕುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :. ಮಿನಿವಾಟರ್ ಸಪ್ಲೈಗೆ 50,000 ರೂಪಾಯಿಗಳು, ಪೈಪ್ ವಾಟರ್ ಸಪ್ಲೈಗೆ ಒಂದು ಲಕ್ಷ ರೂಪಾಯಿಗಳು ಇದೆ. ಶಿಫ್ಟಿಂಗ್ ಚಾರ್ಜಸ್ 15 ಸಾವಿರ

ರೂಪಾಯಿಗಳನ್ನು ಕೊಡಬೇಕು. ಸ್ಕೇರ್ಸಿಟಿಗಾದರೆ ಮಾತ್ರ ಇವತ್ತು ಡೆಪಾಸಿಟ್ ಇಲ್ಲ. ಸ್ಕೇರ್ಸಿಟಿ ಹಣದಲಿ ಹೊಸ ಬೋರ್‌ವೆಲ್‌ಗಳನ್ನು ಕೊರೆಯಬಾರದೆಂದು ಸರ್ಕಾರದವರು ನಿಯಮಾವಳಿಗಳನ್ನು ರೂಪಿಸಿದ್ದೀರಿ, ಮಾನ್ಯ ಶ್ರೀನಿವಾಸಗೌಡರು ನಾನು ಹೇಳುವುದನ್ನು ಕೇಳಿಸಿಕೊಳ್ಳಬೇಕು, ಏಕೆಂದರೆ ಅವರೇ ಇದಕ್ಕೆ ಉತ್ತರ ಕೊಡಬೇಕು. ಈಗ ಅವರು ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್ ಹತ್ತಿರ ಮಾತನಾಡುತ್ತಿದ್ದಾರೆ. ಸ್ಕೇರ್ಸಿಟಿಯಲ್ಲಿ ಹಣ ಕೊಡುತ್ತೇವೆ ಎಂದು ಹೇಳಿದ್ದಾರೆ. ಹಣ ಕೊಡುತ್ತೀರಿ ನೀವು ನಾವು ಇಲ್ಲವೆನ್ನುವುದಿಲ್ಲ. ಆದರೆ ನೀವು ಏನು ನಿಯಮಾವಳಿಯನ್ನು ರೂಪಿಸಿದ್ದೀರಾ? ಸ್ಕೇರ್ಸಿಟಿಯಲ್ಲಿ ಹೊಸ ಬೋರ್‌ವೆಲ್‌ಗಳನ್ನು ಕೊರೆಯುವ ಹಾಗಿಲ್ಲ ಎಂದು ಹೇಳಿದ್ದೀರಿ. ಹಾಗಾಗಿ ನೀವು ಕರೆಂಟ್ ಚಾರ್ಜ್ ಕೊಡತಕ್ಕಂಥ ಪ್ರಶ್ನೆಯೇ ಬರುವುದಿಲ್ಲ. ನೀವು ಎಷ್ಟು ಬುದ್ಧಿವಂತರು ನೋಡಿ. ಮಿನಿ ವಾಟರ್ ಸಪ್ಲೈ ಆದರೆ ಕರೆಂಟ್ ಚಾರ್ಜ್ ಕಟ್ಟಬೇಕು, ಸ್ಕೇರ್ಸಿಟಿಯಲ್ಲಿ ಇಲ್ಲ ಎಂದು ಹೇಳುತ್ತೀರಿ.

ಶ್ರೀ ಕೆ. ಶ್ರೀನಿವಾಸಗೌಡ : ನೀವು ಬೋರ್‌ವೆಲ್ಲನ್ನು ಯಾರಿಂದಾದರೂ ಡ್ರಿಲ್ ಮಾಡಿಸಿ. ಅದರ ಪೈಪ್, ಮೋಟರ್, ಪಂಪ್ ಇವುಗಳಿಗೆ ಕಟ್ಟುವಂಥ ದುಡ್ಡು ಕಟ್ಟಬೇಕಾಗಿಲ್ಲ. ಏಕೆಂದರೆ, ಸ್ಕೇರ್ಸಿಟಿ ಪರ್ಪಸ್‌ಗೋಸ್ಕರವೇ ಆ ಬೋರ್‌ವೆಲ್ಲನ್ನು ತೋಡಿಸಿರುವುದು. ಅದಕ್ಕೆ ಏನೂ ಕೊಡಬೇಕಾಗಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದರು, ಅವುಗಳಿಗೆ ಅಂದರೆ ಮಿನಿ ವಾಟರ್ ಸಪ್ಲೈ ಸ್ಕೀಂಗೆ 50 ಸಾವಿರ ರೂಪಾಯಿ ಡೆಪಾಸಿಟ್ ಕೊಡಬೇಕು, ಮತ್ತು ಎನ್.ಆರ್. ಡಬ್ಲ್ಯೂ. ಎಸ್.ಗೆ ಒಂದು ಲಕ್ಷ ರೂಪಾಯಿ ಡೆಪಾಸಿಟ್ ಕೊಡಬೇಕು. ಅದನ್ನು ನಾನು ಒಪ್ಪುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಎಗ್ಸಿಸ್ಟಿಂಗ್ ಎನ್.ಆರ್. ಡಬ್ಲ್ಯು.ಎಸ್. ಸ್ಕೀಂನಲ್ಲಿ ಕೊರೆದ ಬೋರ್‌ವೆಲ್ ಫೇಲ್ ಆಗಿದ್ದು, ಹೊಸ ಬೋರ್‌ವೆಲ್ ಡ್ರಿಲ್ ಮಾಡಿದರೆ, ಅದಕ್ಕೆ ಏನು ಮಾಡಬೇಕು?

ಶ್ರೀ ಕೆ. ಶ್ರೀನಿವಾಸಗೌಡ : ಅದನ್ನೂ ಕೂಡ ಈಗ ಸ್ಕೇರ್ಸಿಟಿಗೆ ತೆಗೆದುಕೊಳ್ಳಲು ಹೇಳಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಇಡೀ 224 ಜನರ ಕ್ಷೇತ್ರಗಳಿಗೆ ಸಂಬಂಧಪಟ್ಟದ್ದು. ಮಂತ್ರಿಗಳಾಗಿ ನೀವೇನಾದರೂ ಉಪಯೋಗ ಮಾಡಿಕೊಂಡಿದ್ದೀರೇನೋ ನನಗೆ ಗೊತ್ತಿಲ್ಲ. ಕಳೆದ 7–8 ತಿಂಗಳಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ತಗೆದಿದ್ದೀರಿ? ನೀರು ಬಂದಿದೆಯೇ? ಈಗತಾನೇ ಮಾನ್ಯ ರಮೇಶ್ ಕುಮಾರ್‌ರವರು ಹೇಳಿದಂತೆ, 100ಕ್ಕೆ 30ರಷ್ಟು ಪೈಪ್ಡ್ ವಾಟರ್ ಸಪ್ಲೈ ನಿಂತುಹೋಗಿವೆ. ಟ್ಯಾಂಕ್ ಇದೆ, ಆದರೆ ಬೋರ್‌ವೆಲ್ ಫೇಲ್ ಆಗಿದೆ. ಪಕ್ಕದಲ್ಲಿ ಒಂದು ಬೋರ್‌ವೆಲ್ ತೆಗೆಯಿರಿ ಎಂದರೆ ಜಿಲ್ಲಾ ಪಂಚಾಯಿತಿ ದುಡ್ಡಿಲ್ಲ, ತಾಲ್ಲೂ ಪಂಚಾಯಿತಿಯಲ್ಲಿ ದುಡ್ಡಿಲ್ಲ, ಗ್ರಾಮ ಪಂಚಾಯಿತಿಯಲ್ಲಿ ದುಡ್ಡಿಲ್ಲ. ಮುಂದಕ್ಕೆ ಏನು ಮಾಡುತ್ತೀರಿ ಎನ್ನುವುದು ಬೇರೆ ವಿಷಯ. ಕಳೆದ 8 ತಿಂಗಳಿಂದ ಈ ನಿಮಿಷದವರೆಗೆ, ನಾವು ಬೋರ್‌ವೆಲ್ ತೆಗೆಸುತ್ತಿದ್ದೇವೆ ಯಡಿಯೂರಪ್ಪನವರೇ, ನಮಗೆ ಅನುಕೂಲವಾಗಿದೆ ಎಂದು ನಿಮ್ಮ ಆಡಳಿತ ಪಕ್ಷದ ಒಬ್ಬರಿಂದ ಹೇಳಿಸಿ ಬಿಡಿ ಸಾಕು. ಇಲ್ಲಿ ನಾವು ಸುಮ್ಮನೆ ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಶ್ರೀನಿವಾಸಗೌಡರು ಹೇಳಿದುದ್ದನ್ನು ನಾನು ಒಪ್ಪುತ್ತೇನೆ. ನೀವು ಸ್ಕೇರ್ಸಿಟಿಯಿಲಿ ಮೋಟಾರ್, ಪೈಪ್‌ಲೈನ್ ಎಲ್ಲವನ್ನೂ ಮಾಡಿಸಿ ಎಂದು ಹೇಳಿದರೆ

ಅಲ್ಲಿ ಪವರ್ ಸಪ್ಲೈ ಇರುವುದಿಲ್ಲ. ಆದರೆ ಆ ಬೋರ್‌ವೆಲ್ ಅನ್ನು ಕೊರೆಸಿರತಕ್ಕಂಥಾದ್ದು ಯಾರು? ಯಾವ ಸ್ಕೀಂನಲ್ಲಿ ಕೊರೆಯುತ್ತೀರಿ? ಸ್ಕೇರ್ಸಿಟಿಯಲ್ಲಿ ಬೋರ್‌ವೆಲ್‌ಗಳನ್ನು ಕೊರೆಯುವುದಿಲ್ಲ. ಕೊರೆದಿರತಕ್ಕಂಥ ಬೋರ್‌ವೆಲ್‌ಗಳಿಗೆ ಪೈಪ್, ಮೋಟಾರನ್ನು ಸ್ಕೇರ್ಸಿಟಿಯಲ್ಲಿ ಸಪ್ಲೈ ಮಾಡುತ್ತೇವೆ ಎಂದು ಹೇಳುತ್ತೀರಿ. ಆದರೆ ಬೆಸ್ಕಾಂ ಅಧಿಕಾರಿಗಳು ಏನು ಹೇಳುತ್ತಾರೆಂದರೆ, ಸ್ಕೇರ್ಸಿಟಿಯಲ್ಲಿ ಅಪ್ರೂವ್ ಆಗಿರತಕ್ಕಂಥ ಬೋರ್‌ವೆಲ್‌ಗಳ ಲಿಸ್ಟನ್ನು ಕೊಡಬೇಕೆಂದು ಹೇಳುತ್ತಾರೆ. ಡಿ.ಸಿ.ಯವರು ಅಧ್ಯಕ್ಷರಾಗಿರುವುದರಿಂದ, ಡಿ.ಸಿ.ಯವರು ಇವರಿಗೆ ಪಟ್ಟಿ ಕೊಡಬೇಕು. ಯಾವ ಯಾವ ಬೋರ್‌ವೆಲ್‌ಗಳನ್ನು ಸ್ಕೇರ್ಸಿಟಿಯಲ್ಲಿ ಕೊರೆಸಿದ್ದೇವೆ ಎನ್ನುವ ಪಟ್ಟಿಯನ್ನು ಡಿ.ಸಿ.ಯವರು ಕೊಟ್ಟಾಗ ಮಾತ್ರ ಅವರು ಅದನ್ನು ಕನ್ಸಿಡರ್ ಮಾಡುತ್ತಾರೆ. ಡಿ.ಸಿ.ಯವರು ಲಿಸ್ಟ್‌ನಲ್ಲಿ ಇಲ್ಲದೇ ಇರತಕ್ಕಂಥಾದ್ದನ್ನು ಅವರು ಕನ್ಸಿಡರ್ ಮಾಡುವುದಿಲ್ಲ. ಇದು ನಿಜವಲ್ಲವೇ? ಆಗ ನಾವೇನು ಮಾಡಬೇಕೆಂದು ಹೇಳಿ. 50 ಸಾವಿರ ರೂಪಾಯಿ ಡೆಪಾಸಿಟ್ ಎಲ್ಲಿಂದ ತಂದು ಕೊಡಬೇಕು? 15 ಸಾವಿರ ರೂಪಾಯಿ ಶಿಫ್ಟಿಂಗ್ ಚಾರ್ಜ್ ಎಲ್ಲಿಂಧ ತಂದು ಕೊಡಬೇಕು? ಹೋಗಲಿ, 50 ಸಾವಿರ ರೂಪಾಯಿ ಡೆಪಾಸಿಟ್, 15 ಸಾವಿರ ರೂಪಾಯಿ ಶಿಫ್ಟಿಂಗ್ ಚಾರ್ಜ್ ಕೊಡೋಣ. ಝಡ್.ಪಿ. ಯವರಿಗೆ ನೀವು ಹಣವನ್ನು ಬಿಡುಗಡೆ ಮಾಡಿ. ಪವರ್ ಸಪ್ಲೈಗೆ ಎಂದು ನೀವು ಝಡ್.ಪಿ.ಯವರಿಗೆ ಒಂದೇ ಒಂದು ರೂಪಾಯಿಯನ್ನೂ ಬಿಡುಗಡೆ ಮಾಡುವುದಿಲ್ಲ. ಪವರ್ ಸಪ್ಲೈ ಮಾಡಲು ಡೆಪಾಸಿಟ್ ಕೊಡಲು ನೀವು ಅವರಿಗೆ ಹಣ ಕೊಡುವುದಿಲ್ಲ. ಡೆಪಾಸಿಟ್ ಮಾಡಿ ಎಂದರೆ ಅವರಿಗೆ ಹೇಗೆ ಸಾಧ್ಯವಾಗುತ್ತದೆ? ಅದು ಸಾಧ್ಯವಿಲ್ಲ. ಇವತ್ತು ಅದರ ಪರಿಣಾಮ ಏನಾಗಿದೆ ಎಂದರೆ, ಮೂರುವರೆ ಕೋಟಿ ಜನಸಂಖ್ಯೆ ಇರತಕ್ಕಂಥ ಹಳ್ಳಿಗಳಿಗೆ ನೀವು ಇವತ್ತು ಕೊಡುತ್ತಿರತಕ್ಕಂಥ ಹಣ ಪರ ಹೆಡ್ 40 ರೂಪಾಯಿ ಆಗುತ್ತದೆ. ಹೀಗಿರುವಾಗ, ಕುಡಿಯುವ ನೀರಿನ ಸಮಸ್ಯೆಯನ್ನು ಹೇಗೆ ಪರಿಹಾರ ಮಾಡುತ್ತೀರಿ ಹೇಳಿ. ಆದ್ದರಿಂದ, ಸಭಾಧ್ಯಕ್ಷರೇ, ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡತಕ್ಕಂಥದ್ದು, ಕೇಳತಕ್ಕಂಥಾದ್ದು, ಏನೆಂದರೆ, ಅವರಿಗೆ ಪ್ರಾಮಾಣಿಕವಾಗಿ ಹಳ್ಳಿಗಾಡಿನ ಜನರ ಬಗ್ಗೆ ಕಾಳಜಿ ಇದ್ದರೆ, ಒಂದೊಂದು ಕ್ಷೇತ್ರಕ್ಕೆ ಒಂದೊಂದು ಕೋಟಿ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಬೇಕು, ಬೋರ್‌ವೆಲ್ ಕೊರೆಸತಕ್ಕಂಥ ಪ್ರೋಸೆಸ್‌ನಲ್ಲಿ ಶಾಸಕರಿಗೂ ಕೂಡ ತೀರ್ಮಾನ ತೆಗೆದುಕೊಳ್ಳತಕ್ಕಂಥ ಅಧಿಕಾರವನ್ನು ಕೊಡಬೇಕು. ಇಲ್ಲದಿದ್ದರೆ, ಏನಾಗುತ್ತದೆಂದರೆ, ಜನರು ನಮಗೆ ನೀರು ಕೇಳುತ್ತಾರೆ. ನಮ್ಮ ಹತ್ತಿರ ಹಣವಿಲ್ಲ, ನಾವು ಏನೂ ಜವಾಬು ಹೇಳಲಿಕ್ಕೆ ಆಗುವುದಿಲ್ಲ. ಆ ರೀತಿಯಲ್ಲಿ ತಕ್ಷಣವೇ ಒಂದೊಂದು ತಾಲ್ಲೂಕಿಗೆ ಒಂದೊಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು ಡೆಪಾಸಿಟ್ ತೆಗೆದುಕೊಳ್ಳತಕ್ಕಂಥಾದ್ದನ್ನು ನಿಲ್ಲಿಸಬೇಕು ಅಥವಾ ಸರ್ಕಾರದವರು ಬೇರೆ ಏನಾದರೂ ಮೆಕಾನಿಸಂಅನ್ನು ಕಂಡು ಹಿಡಿದು, ಅವರಿಗೆ ಹಣ ತುಂಬತಕ್ಕಂಥ ಕೆಲಸವನ್ನಾದರೂ ಮಾಡಬೇಕು. ಬೋರ್‌ವೆಲ್‌ಗಳನ್ನು ಕೊರೆಸಿ 3–4 ತಿಂಗಳುಗಳಾಗಿದೆ. ಕರೆಂಟ್ ಚಾರ್ಜಿಗೆ ಡೆಪಾಸಿಟ್ ಮಾಡಿಲ್ಲ ಎಂದು ಕರೆಂಟ್ ಕೊಡುತ್ತಿಲ್ಲ. ಇಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ತಕ್ಷಣ ಇದನ್ನು ಪರಿಹಾರ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ, ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಅಧ್ಯಕ್ಷರು : ಈಗ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು. ತಾವು ಮಾತನಾಡಿ, ಬೇಗ ಮುಗಿಸಬೇಕು ಹೆಗ್ಡೆಯವರೇ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ(ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ಇದೇ ಸಂದರ್ಭದಲ್ಲಿ ನಾವು ನಮ್ಮ ವಿಧಾನಸಭಾ ಚುನಾವಣೆಗಾಗಿ ಜನಗಳ ಬಳಿಗೆ ಹೋಗಿದ್ದೆವು. ಆಗ

ಸಹ, ನಾವು ಮನೆಮನೆಗೆ ಹೋದಾಗ ಕುಡಿಯುವ ನೀರಿನ ಸಮಸ್ಯೆ ಇತ್ತು. ಈ ವರ್ಷ, ಪುನಃ ಇದೇ ಸಮಯದಲ್ಲಿ ಗ್ರಾಮ ಪಂಚಾಯಿತಿಯ ಚುನಾವಣೆಗಾಗಿ ಹೋಗುವ ಪರಿಸ್ಥಿತಿ ಇದೆ. ಪುನಃ ನಾವು ಮನೆಮನೆಗೆ ಹೋದರೆ, ಅವರು ಇದನ್ನೇ ಅಂದರೆ ಕುಡಿಯುವ ನೀರು ಕೊಡಿ ಎಂದೇ ಕೇಳುತ್ತಾರೆ. ಈ ಸಂದರ್ಭದಲ್ಲಿ ಚುನಾವಣೆಗಳಾದರೆ ಎರಡು ಸಮಸ್ಯೆಗಳು ಬರುತ್ತವೆ. ಒಂದು-ಕುಡಿಯುವ ನೀರಿನ ಸಮಸ್ಯೆ. ಇನ್ನೊಂದು-ಬೇರೆ ಯಾವ ಅಭಿವೃದ್ಧಿ ಕೆಲಸಗಳನ್ನು ಮಾಡಲೂ ಆಗುವುದಿಲ್ಲ. ಸಾಮಾನ್ಯವಾಗಿ, ನವೆಂಬರ್ ಡಿಸೆಂಬರ್ ತಿಂಗಳಲ್ಲಿ ಎಲ್ಲಾ ಚುನಾವಣೆಗಳು ಬರುವಂಥಾದ್ದು ಆಗುತ್ತದೆ. ಈ ಸಮಯದಲ್ಲಿ ಯಾವುದೇ ಚುನಾವಣೆಗಳು ಬಂದರೆ ಅಭಿವೃದ್ಧಿ ಕೆಲಸಗಳು ಕುಂಠಿತವಾಗುತ್ತವೆ. ಏಕೆಂದರೆ ಕೆಲಸಗಳಿಗೆ ಹಣ ಬಿಡುಗಡೆಯಾಗುವುದು ಈಗ, ಕೆಲಸ ಮಾಡಲು ಅವಕಾಶವಿರುವಂಥಾದ್ದು ಈಗ. ಆದ್ದರಿಂದ, ಈ ವಿಷಯದಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಬೇಕಾಗುತ್ತದೆ. ಇನ್ನು, ವಿಕೇಂದ್ರೀಕರಣವನ್ನು ನಾನು ಒಪ್ಪುತ್ತೇನೆ. ಅಧಿಕಾರವನ್ನು ವಿಕೇಂದ್ರೀಕರಣ ಮಾಡಲು ನಾವು ಇದೇ ಸದನದಲ್ಲಿ ಒಪ್ಪಿದ್ದೇವೆ. ಆದರೆ ಅಧಿಕಾರ ವಿಕೇಂದ್ರೀಕರಣ ಮಾಡಿ, ಅವರಿಗೆ ಅಧಿಕಾರವನ್ನೇ ಕೊಡದಿದ್ದರೆ, ಮಾನ್ಯ ಪಾಟೀಲ್‌ರವರು ಹೇಳಿದಂತೆ ಉಗುರೂ ಇಲ್ಲ, ಹಲ್ಲೂ ಇಲ್ಲದಂಥ ಸಂಸ್ಥೆಗಳನ್ನು ಮಾಡಿ ಕೂಡಿಸಿದ್ದೇವೆ. ಈಗ ಅಧಿಕಾರ ನಡೆಸುತ್ತಾ ಇರತಕ್ಕಂಥಾದ್ದು ಸಂಸ್ಥೆಗಳಲ್ಲ, ಅಧಿಕಾರಿಗಳ ಕೈಗೆ ಸಂಪೂರ್ಣ ಅಧಿಕಾರವನ್ನು ಕೊಟ್ಟಿದ್ದೇವೆ. ಅದನ್ನು ಬದಲಾವಣೆ ಮಾಡಿ ಸಂಸ್ಥೆಗಳಿಗೇ ಅಧಿಕಾರ ಕೊಡುವಂಥಾದ್ದನ್ನು ಮಾಡಬೇಕು, ಮಾನ್ಯ ಪಾಟೀಲರು ಇನ್ನೊಂದು ಮಾತನ್ನು ಹೇಳಿದರು. ಇಂಜಿನಿಯರುಗಳನ್ನು ಟ್ರಾನ್ಸ್‌ಫರ್ ಮಾಡಿಸುತ್ತೇವೆ ಎಂದು ಹೇಳಿದರು. ನನ್ನ ಕ್ಷೇತ್ರದಲ್ಲಿ ಕೆಲವು ಇಂಜಿನಿಯರ್‌ಗಳು 10-12 ವರ್ಷಗಳಿಂದ ಖಾಯಂ ಆಗಿ ಇದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಂಜಿನಿಯರುಗಳ ಟ್ರಾನ್ಸ್‌ಫರ್ ಅಲ್ಲ, ಇಂಜಿನಿಯರ್‌ಗಳನ್ನು ಸೆಲೆಕ್ಟೆಡ್ ಇನ್ಸ್‌ಟಿಟ್ಯೂಷನ್‌ಗಳಲ್ಲಿ ಹೈರ್ ಮಾಡಿಕೊಳ್ಳಬೇಕು ಎಂದು ಸರ್ಕ್ಯುಲರ್ ಇದೆ. ನಿಮ್ಮ ವ್ಯವಸ್ಥೆಯಲ್ಲಿ ಇಂಜಿನಿಯರುಗಳನ್ನು ಅಪಾಯಿಂಟ್ ಮಾಡುವ ಪ್ರಶ್ನೆಯೇ ಉಳಿದಿಲ್ಲ. ಪಂಚಾಯಿತಿಯವರು ಇಂಥಿಂಥ ಸಂಸ್ಥೆಗಳಲ್ಲಿ ಇಂಜಿನಿಯರುಗಳನ್ನು ಕರಾರಿನ ಮೇಲೆ ತೆಗೆದುಕೊಳ್ಳಿ ಎಂದು ಕೂಡ ಸರ್ಕ್ಯುಲರ್ ಹೊರಡಿಸಿದ್ದೀರಿ. ಇದೆಲ್ಲಾ ಮುಂದೆ ಒಂದು ದಿವಸ ಎಲ್ಲಿಗೆ ಹೋಗುತ್ತದೆ?

ಅಧ್ಯಕ್ಷರು : ಮಾಧುಸ್ವಾಮಿಯವರೇ, ಜನತೆಯ ಕೈಗೆ ಅಧಿಕಾರ ಎಂದು ಹೇಳಿ ಅಧಿಕಾರವನ್ನು ಕೆಳಮಟ್ಟದವರೆಗೆ ಕೊಟ್ಟಿದ್ದಾರೆ. ನೀರಿನ ವಿಚಾರದಲ್ಲಿ ಶಾಸಕರನ್ನೂ ಜನ ಕೇಳುತ್ತಾರೆ ಎನ್ನುವುದನ್ನು ಒಪ್ಪುತ್ತೇನೆ. ಆದರೆ ಸಮನ್ವಯವಾಗಿ ಎಲ್ಲಾ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಯಾವ ರೀತಿಯಲ್ಲಿ ನಿವಾರಣೆ ಮಾಡಬೇಕು ಎನ್ನುವುದರ ಬಗ್ಗೆ ಪ್ರಮುಖವಾಗಿ ಒಂದು ತೀರ್ಮಾನಕ್ಕೆ ಬರಬೇಕೇ ಹೊರತು, ಅಧಿಕಾರ ಇವರಲ್ಲಿರಬೇಕು, ಅವರಲ್ಲಿರಬಾರದು ಅಥವಾ ಅವರಲ್ಲಿದ್ದರೆ ತೊಂದರೆಯಾಗುತ್ತದೆ, ಇವರಲ್ಲಿದ್ದರೆ ತೊಂದರೆಯಾಗುತ್ತದೆ ಎನ್ನುವುದು ಸರಿಯಲ್ಲ. ನನಗೆ ಗೊತ್ತಿರುವ ಹಾಗೆ, ಹಿಂದೆ ಮಂಡಲ ಪಂಚಾಯಿತಿಗಳಿದ್ದಾಗ ಈಗಿನಂತೆ ತಾಲ್ಲೂಕು ಪಂಚಾಯಿತಿ ಇರಲಿಲ್ಲ. ಒಂದು ಅಡ್ವೈಸರಿ ಕಮಿಟಿ ಇತ್ತು. ಶಾಸಕರ ಅಧ್ಯಕ್ಷತೆಯಲ್ಲಿದ್ದಂಥ ಈ ಕಮಿಟಿಯಲ್ಲಿ ಪಂಚಾಯಿತಿಯ ಪ್ರಧಾನರುಗಳು, ಮತ್ತು ಜಿಲ್ಲಾ ಪರಿಷತ್ತಿನ ಸದಸ್ಯರುಗಳು ಎಲ್ಲರೂ ಇದ್ದರು. ಆಗ ಸಮನ್ವಯ ಬಹಳ ಚೆನ್ನಾಗಿತ್ತು. ಆ ರೀತಿಯ ಯಾವುದಾದರೂ ಮೆಕಾನಿಸಂಅನ್ನು ಯೋಚನೆ ಮಾಡಿದರೆ ಒಳ್ಳೆಯದು ಎಂದು ನನಗನ್ನಿಸುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೇ, ನಾವು ಕೇಳಿದ್ದೂ ಅಷ್ಟನ್ನೇ, ಒಂದು ಟಾಸ್ಕ್ ಫೋರ್ಸ್ ಮಾಡಿ ಅದಕ್ಕೆ ಎಂ.ಎಲ್.ಎ.ಗಳನ್ನು ಅಧ್ಯಕ್ಷರನ್ನಾಗಿ ಮಾಡಿ. ಎಲ್ಲಾ ಪಂಚಾಯಿತಿಗರೂ ಕುಳಿತುಕೊಂಡಾಗ, ಏನು ಸಮಸ್ಯೆಯಿದೆ ಎನ್ನುವುದನ್ನು ಹೇಳುತ್ತಾರೆ, ಅದನ್ನು ಪರಿಹಾರ ಮಾಡೋಣ ಎಂದೇ ನಾವೂ ಕೇಳಿರುವುದು.

ಅಧ್ಯಕ್ಷರು : ಆ ದಿಕ್ಕಿನಲ್ಲಿ ಯೋಚನೆ ಮಾಡಿದರೆ ಒಳ್ಳೆಯದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಯಾವ ದಿಕ್ಕಿನಲ್ಲಿ ಈಗ ಯೋಚನೆ ಮಾಡಿದರೂ ಹಣ ಇಲ್ಲ. ಹಣ ಇಲ್ಲ. ಹಣ ಇಲ್ಲದೇ ಇರತಕ್ಕಂಥ ಸಮಯದಲ್ಲಿ ಕಮಿಟಿಗಳನ್ನು ಮಾಡಿ ನೀವು ಏನು ಮಾಡುತ್ತೀರಿ? ಒಂದು ಜಿಲ್ಲೆಗೆ ಒಂದು ಕೋಟಿ ರೂಪಾಯಿ ಕೊಡಿ ಎಂದರೆ ಆ ಕಮಿಟಿಗಳವರು ಎಲ್ಲಿಂದ ತಂದುಕೊಡುತ್ತಾರೆ? ಪ್ರಪೋಸಲ್ ಇರಬಹುದು, ಆದರೆ ಇದುವರೆಗೂ ಹಣ ಕೊಟ್ಟಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಕುಡಿಯುವ ನೀರಿನ ವ್ಯವಸ್ಥೆಯನ್ನು ಜಾರಿಗೆ ತರುವಂಥಾದ್ದು ಜಿಲ್ಲಾ ಪಂಚಾಯಿತಿ. ಅದನ್ನು ನಡೆಸಿಕೊಂಡು ಹೋಗುವಂಥಾದ್ದು ಗ್ರಾಮ ಪಂಚಾಯಿತಿಗೆ ಸೇರಿದ್ದು. ಗ್ರಾಮ ಪಂಚಾಯಿತಿಯವರು ಏನೇನು ಹೇಳುತ್ತಾರೋ, ಅದನ್ನು ಜಿಲ್ಲಾ ಪಂಚಾಯಿತಿಯವರು ಅವರಿಗೆ ಏನೇನು ಬೇಕೋ ಅದನ್ನು ಮಾಡುತ್ತಿದ್ದರು. ಹಸ್ತಾಂತರ ಮಾಡಿದಾಗ, ಅದನ್ನು ನಡೆಸಿಕೊಂಡು ಹೋಗಲು ಗ್ರಾಮ ಪಂಚಾಯಿತಿಯವರಿಗೆ ಆಗುತ್ತಿರಲಿಲ್ಲ. ಇವತ್ತು ನಮ್ಮ ಪರಿಸ್ಥಿತಿಯೂ ಹಾಗೆಯೇ ಆಗಿದೆ. ಒಂದು ಟ್ಯಾಪ್ ಹಾಕಬೇಕು ಎಂದರೂ ನಮ್ಮಿಂದ ಆಗುತ್ತಿಲ್ಲ. ಪ್ರತಿಯೊಬ್ಬ ಜನರೂ ಬಂದು ನಮ್ಮನ್ನು ಕೇಳುತ್ತಾರೆ. ಅದಕ್ಕೋಸ್ಕರವಾಗಿ, ಅಧಿಕಾರವನ್ನು ಗ್ರಾಮ ಪಂಚಾಯಿತಿಯಿಂದ ತೆಗೆದು ನಮಗೆ ಕೊಡಿ, ಜಿಲ್ಲಾ ಪಂಚಾಯಿತಿಯಿಂದ ತೆಗೆದು ನಮಗೆ ಕೊಡಿ ಎಂದು ಕೇಳುವುದಲ್ಲ. ಇವತ್ತು ಅಧಿಕಾರ ವಿಕೇಂದ್ರೀಕರಣ ಮಾಡಿದಂಥ ಸಂದರ್ಭಗಳಲ್ಲಿ ಸರಿಯಾದ ವ್ಯವಸ್ಥೆ ಜಾರಿಗೆ ಬರುವವರೆಗೆ ಯಾವ ರೀತಿ ನಡೆಸಿಕೊಂಡು ಹೋಗಬೇಕು ಎನ್ನುವ ಬಗ್ಗೆ ಸ್ವಲ್ಪ ಆಲೋಚನೆ ಮಾಡಬೇಕಾಗಿದೆ. ಅಧಿಕಾರಿಗಳು ಯಾರ ಮಾತು ಕೇಳುತ್ತಾರೆ, ಯಾರ ಹತ್ತಿರ ಸ್ವಲ್ಪ ಕೆಲಸವನ್ನು ಮಾಡಿಸುವುದಕ್ಕೆ ಸಾಧ್ಯವಾಗುತ್ತದೆ. ಎನ್ನುವುದನ್ನು ನೋಡಿ ಪ್ರಯತ್ನವನ್ನು ಮಾಡಬೇಕೇ ಹೊರತು, ಕೇವಲ ಇವತ್ತು ನೇರವಾಗಿ ಚುನಾವಣೆಗೆ ಹೋದಾಗ ಅಲ್ಲಿ ಗ್ರಾಮಪಂಚಾಯತಿಯ ಬಾಡಿ ಇರುವುದಿಲ್ಲ ಅಲ್ಲಿ ಕಾರ್ಯದರ್ಶಿ ಮಾಡಬೇಕು. ಅಲ್ಲಿ ಒಬ್ಬ ಕಾರ್ಯದರ್ಶಿ ಎರಡು ಗ್ರಾಮ ಪಂಚಾಯತಿಗೆ ಇದ್ದಾಗ ಅವನು ಏನು ಮಾಡುತ್ತಾನೆ? ಇವತ್ತು ನಮ್ಮ ಜಿಲ್ಲಾಪಂಚಾಯತ್‌ನಿಂದ ಯಾವ ರೀತಿಯಲ್ಲಿ ಯೋಜನೆ ರೂಪಿಸಿದೆ ಎನ್ನುವ ಒಂದು ವರದಿಯನ್ನು ಕಳುಹಿಸಿದ್ದಾರೆ. ಒಟ್ಟು ಜಿಲ್ಲೆಗೆ 81 ಕಾಮಗಾರಿಗಳು ಸಾಕಂತೆ. ನನ್ನ ಕ್ಷೇತ್ರಕ್ಕೆ 14 ಕಾಮಗಾರಿಗಳನ್ನು ಕೊಟ್ಟಿದ್ದಾರೆ. ಈ ಬೇಸಿಗೆಯಲ್ಲಿ ನಮ್ಮ ಕಡೆ ಮಳೆ ಬರುತ್ತದೆ. ಮಳೆ ಬಂದರೆ porous nature of the soil ನಿಂದಾಗಿ ಸಂಪೂರ್ಣ ಮಳೆಯ ನೀರು ಸಮುದ್ರಕ್ಕೆ ಹೋಗುತ್ತದೆ. ನಾನು ಇದನ್ನು ಹಲವಾರು ಬಾರಿ ಈ ಸದನದಲ್ಲಿ ಹೇಳಿದ್ದೇನೆ. ನಾವೆಲ್ಲಾ ಹೇಳಿದರು ಕೂಡ ನಿಮ್ಮಲ್ಲಿ ಸಾಕಷ್ಟು ಮಳೆಯಾಗಿದೆಯೆಂದು' ಇಲಾಖೆಯಿಂದ ಜಿಲ್ಲಾಧಿಕಾರಿಗಳ ಕಚೇರಿಯಿಂದ ವರದಿಯನ್ನು ತರಿಸಿಕೊಳ್ಳುತ್ತಾರೆ. ಮಳೆ ಆಗಿದೆ ಹೌದು, ಆದರೆ ನೀರು ಎಲ್ಲಿಗೆ ಹೋಗುತ್ತದೆ? ಆ ನೀರನ್ನು ತಡೆಯಲಿಕ್ಕೆ ಅಣೆಕಟ್ಟುಗಳನ್ನು ಮಾಡಿಲ್ಲ. ನೀರು ಸಂಪೂರ್ಣವಾಗಿ ಸಮುದ್ರಕ್ಕೆ ಹೋದಾಗ ನಮ್ಮಲ್ಲಿ ನೀರಿನ ಒರತೆ ಬರಬೇಕಾದರೆ ಮಲೆನಾಡಿನಲ್ಲಿ gradually ಮಳೆ ಬರಬೇಕಾಗುತ್ತದೆ. ಆ ಮಳೆ ಜಾಸ್ತಿ ಇಲ್ಲದಿದ್ದಾಗ ನಮ್ಮಲ್ಲಿ ಕುಡಿಯುವ ನೀರಿನ

ಸಮಸ್ಯೆ ಬೇಸಿಗೆಯಲ್ಲಿ ಇದ್ದೇ ಇದೆ. ಕಳೆದ ಬಾರಿ ನಾವೂ ಸಹ ಟ್ಯಾಂಕರ್‌ನಲ್ಲಿ ನೀರನ್ನು ಸಪ್ಲೈ ಮಾಡಿದ್ದೇವೆ. ಒಂದು ಕ್ಷೇತ್ರಕ್ಕೆ 14 ಕಾಮಗಾರಿಗಳು ಸಾಕೆಂದು ಜಿಲ್ಲಾಪಂಚಾಯತ್‌ನ ಅಧಿಕಾರಿಗಳು ವರದಿಯನ್ನು ಕೊಡುತ್ತಾರೆ. ಅದನ್ನು ನಂಬಿಕೊಂಡು ನಾವಿಲ್ಲಿ ಕುಳಿತುಕೊಳ್ಳುವುದು, ಸರ್ಕಾರದವರು ಅದನ್ನೇ ನಂಬಿಕೊಂಡು ಹಣವನ್ನು ಬಿಡುಗಡೆ ಮಾಡುವಂಥದ್ದು, ಈ ಜವಾಬ್ದಾರಿ ನಮ್ಮ ಮೇಲೆ ಹೊರಿಸುವಂಥದ್ದು ಅದು ಆಗಬಾರದು. ನೀವು ಒಂದೂ task force ಅನ್ನು ಮಾಡಿ. ಈ ಇಂಜಿನಿಯರ್ಸ್ ಬರಲಿ, ಜೊತೆಗೆ ಸ್ಥಳೀಯ ಸಂಸ್ಥೆಗಳವರು ನಾವೆಲ್ಲಾ ಒಟ್ಟಿಗೆ ಕ್ಷೇತ್ರಕ್ಕೆ ಹೋಗೋಣ. ಎಲ್ಲೆಲ್ಲಿ ಏನೇನು ಕಾಮಗಾರಿಗಳು ಆಗಬೇಕೆನ್ನುವಂಥದ್ದನ್ನು ಸ್ವಲ್ಪ ಪರಿಶೀಲನೆ ಮಾಡಿ ಜಾರಿಗೆ ತರುವಂಥದ್ದು ಆಗಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಎಲ್ಲರೂ ಅವರ ಜೊತೆಗೆ ಹಳ್ಳಿಗಳಿಗೆ ಹೋಗೋಣ ಎಂದು ಹೇಳುತ್ತಾರೆ. ನಿಮ್ಮ ಆರ್‌ಡಿಪಿಆರ್ ಕಾರ್ಯದರ್ಶಿಯವರು ಬಂದು ಮೀಟಿಂಗ್ ಮಾಡುತ್ತಾರೆ, ಎಲ್ಲಾ ಪಂಚಾಯತ್‌ನವರಿಗೆ ಅಧಿಕಾರ ಕೊಟ್ಟುಬಿಟ್ಟಿದ್ದೇವೆ. ಶಾಸಕರು ವಿರೋಧ ಮಾಡಿದರೂ ನಾವು ನಿಮಗೆ ಅಧಿಕಾರ ಕೊಟ್ಟುಬಿಟ್ಟಿದ್ದೇವೆಂದು ಹೇಳುತ್ತಾರೆ ಆ ಮನುಷ್ಯ ಎಷ್ಟು arrogance ಇರಬಹುದೆಂದು ಅರ್ಥಮಾಡಿಕೊಳ್ಳಿ. ಅವರು ಹೇಳಿರುವುದು ಟಿ.ವಿ.ಯಲ್ಲಿ ಬಂದಿದೆ. ಬೇಕಾದರೆ ತೆಗೆದು ನೋಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್(ಶ್ರೀನಿವಾಸಪುರ) : ಸನ್ಮಾನ್ಯ ಅಧ್ಯಕ್ಷರೆ Commitment towards decentralization ಅನ್ನು ನೀವು distort ಮಾಡಿ ಈ ತರಹ ಹೇಳಿದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, Distort ಮಾಡತಕ್ಕಂಥ ಅವಶ್ಯಕತೆ ನನಗಿಲ್ಲ ಅವರು ಹೇಳಿದ್ದಾರೆ. ಟಿ.ವಿ.ಯಲ್ಲಿ ಬಂದಿದೆ. ಬೇಕಾದರೆ ಅದರ ರೆಕಾರ್ಡ್‌ನ್ನು ತರಿಸಿ ನೋಡಿ.

(ಗೊಂದಲ)

SRI. J.C. MADHUSWAMY : De-centralization ಎಂದರೆ collapse of the system ಎಂದು ಅರ್ಥವೇ? Entire collapse of the system ಅಂತ

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಶಾಸಕರ ವಿರೋಧದ ಮಧ್ಯೆ ಕೂಡ ನಾವು ನಿಮಗೆ ಅಧಿಕಾರ ಕೊಡುತ್ತಿದ್ದೇವೆ, ಕುಡಿಯುವ ನೀರಿಗೆ ಹಣ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದನ್ನು ಹೇಳಲಿಲ್ಲವೆಂದು ಇವತ್ತು ಆ ಅಧಿಕಾರಿ ಇಲ್ಲಿ ಹೇಳಬಿಡಲಿ ನೋಡೋಣ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಆರ್‌ಡಿಪಿಆರ್ ಸೆಕ್ರೆಟರಿಯವರು ನಮ್ಮಲ್ಲಿಗೂ ಸಹ ಬಂದಿದ್ದರು. ನಮ್ಮಲ್ಲೂ ಮೀಟಿಂಗೂ ಮಾಡಿದರು. ನಾವೆಲ್ಲರೂ ಹಾಜರಿದ್ದೆವು. ರೆವಿನ್ಯೂ ಕಮಿಷನರ್‌ರವರೂ ಸಹ ಬಂದಿದ್ದರು. ಅಲ್ಲಿ ಯಾವ ಸಮಸ್ಯೆ ಸಹ ತಲೆದೋರಲಿಲ್ಲವಲ್ಲಾ. ಅವತ್ತು ಇದೇನೂ ಬರಲಿಲ್ಲವಲ್ಲಾ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆ ರೀತಿ ಹೇಳಲಿಲ್ಲವೆಂದು ಅವರು ಹೇಳಲಿ ನೋಡೋಣ. ಅವರು ಹೇಳಿರುವುದು ಟಿ.ವಿ.ಯಲ್ಲಿ ಬಂದಿರುವುದನ್ನು ನಾವೆಲ್ಲಾ ನೋಡಿದ್ದೇವೆ.

ಶ್ರೀ ಹೆಚ್.ಸಿ. ಮಹದೇವಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಕಾರ್ಯದರ್ಶಿಗಳು ಹೊಸದಾಗಿ ಯೋಜನೆಗಳನ್ನು ಅಥವಾ ಪಾಲಿಸಿಗಳನ್ನು ಅನೌನ್ಸ್ ಮಾಡುವುದಕ್ಕಾಗುವುದಿಲ್ಲ ಅಥವಾ ಹಾಗೆ ಮಾತನಾಡುವುದಕ್ಕಾಗುವುದಿಲ್ಲ. ನಾವು ಸಂವಿಧಾನದ ಕೆಳಗಡೆ ಕೆಲಸ ಮಾಡಲಿಕ್ಕೆ ಅವರಿಗೆ ಏನು ಅಧಿಕಾರ ಕೊಟ್ಟಿದ್ದೇವೆ ಅಷ್ಟಕ್ಕೆ ಸೀಮಿತ ಹೊರತು ಬೇರೆ ಆ ರೀತಿ ಮಾಡಲಿಕ್ಕೆ ಅವರಿಗೆ ಅಧಿಕಾರ ಇಲ್ಲ. ಅವರು ಒಬ್ಬ ನಿಷ್ಠಾವಂತ ಮತ್ತು ಪ್ರಾಮಾಣಿಕ ಅಧಿಕಾರಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಸಚಿವರೇ, ನಾನು ಅದನ್ನು ಇಲ್ಲಿ ನಿರೂಪಿಸುತ್ತೇನೆ. ಕ್ರಮ ತೆಗೆದುಕೊಳ್ಳುವುದಕ್ಕೆ ತಮಗೆ ಶಕ್ತಿ ಇದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೋಡಿ, ನೀವು ಸರ್ಟಿಫಿಕೇಟ್ ಕೊಡಲಿಕ್ಕೆ ನಾವು ಹೇಳುತ್ತಿಲ್ಲ. ನಾವು ನಿರೂಪಣೆ ಮಾಡುತ್ತೇವೆ. ನಿಮಗೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಶಕ್ತಿ ಇದೆಯೇ? ನಾವು ಇಲ್ಲಿ ಪ್ರೂವ್ ಮಾಡುತ್ತೇವೆ. ಕ್ರಮ ತೆಗೆದುಕೊಳ್ಳುತ್ತಾರೆಯೇ ಎನ್ನುವುದನ್ನು ಇವರು ಹೇಳಲಿ.

(ಗೊಂದಲ)

ಅಧ್ಯಕ್ಷರು : ಏಕೆ ಈ ತರಹ ಮಾತನಾಡುತ್ತಿದ್ದೀರಿ? ಒಬ್ಬರು ಮಾತನಾಡುತ್ತಿದ್ದಾಗ ಎಲ್ಲರೂ interfere ಆಗಿ ಗೊಂದಲ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಹೇಳಿರುವುದನ್ನು ನಾವು ಪ್ರೂವ್ ಮಾಡುತ್ತೇವೆ. ಟಿ.ವಿ. ರೆಕಾರ್ಡ್ ಇದೆ. ಕ್ರಮ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು : ಶ್ರೀ ಶ್ರೀರಾಮರೆಡ್ಡಿಯವರೆ, ದಯಮಾಡಿ ಕುಳಿತುಕೊಳ್ಳಬೇಕು. ಬಹಳಷ್ಟು ಸದಸ್ಯರು ಮಾತನಾಡಬೇಕೆಂದು ಚೀಟಿ ಕಳುಹಿಸುತ್ತಿದ್ದಾರೆ. ಇವತ್ತು ಈ ವಿಷಯದ ಮೇಲಿನ ಚರ್ಚೆ ಮುಗಿಯಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಅವರು ಹೇಳುವುದು ನೋಡಿ, ಅವರು ಆ ರೀತಿ ಸರ್ಟಿಫಿಕೇಟ್ ಕೊಡತಕ್ಕಂಥದ್ದು, ಅವರು ಹೇಳುವ ಉತ್ತರ ನೋಡಿ. ನಾವು ಪ್ರೂವ್ ಮಾಡುತ್ತೇವೆ, ಹಾಗಾದರೆ ಅವರು ಕ್ರಮ ತೆಗೆದುಕೊಳ್ಳುತ್ತಾರೋ ಕೇಳಿ. ಆ ಶಕ್ತಿ ಇದೆಯಾ?

ಅಧ್ಯಕ್ಷರು : ಬೇರೆ ಸದಸ್ಯರು ಮಾತನಾಡುತ್ತಿದ್ದಾಗ ನೀವು ಮಧ್ಯೆ ಬಂದು ಹಿರಿಯ ಸದಸ್ಯರಾಗಿ ನೀವು ಹೀಗೆ ಸಮಯವನ್ನು ಹಾಳು ಮಾಡಿದರೆ ಹೇಗೆ? ಈಗ ನೀರಿನ ವಿಚಾರಕ್ಕೆ ಸಂಬಂಧಿಸಿದಂತೆ ಮಾತ್ರ ಮಾತನಾಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ ಒಂದ್ನಿಮಿಷ, ನಾನು ಏನು ವಿನಂತಿ ಮಾಡಿಕೊಳ್ಳುತ್ತಿದ್ದೆ ಎಂದರೆ, ಶ್ರೀ ವಾಟಾಳ್‌ರವರು ಮಾತನಾಡುವಾಗ ಎಲ್ಲಾ ಹೇಳಿದರು. ಇತ್ತೀಚಿನ ದಿನಗಳಲ್ಲಿ ದಿನ ಕಳೆದಂತೆಲ್ಲಾ basic honesty ಇರತಕ್ಕಂಥವರು ಬಹಳ ಕಡಿಮೆಯಾಗುತ್ತಿದ್ದಾರೆ. ಪ್ರಾಮಾಣಿಕರು ಇಲ್ಲವೇ ಇಲ್ಲ. ಇಲ್ಲಿ ನಮ್ಮ ಕಾರ್ಯದರ್ಶಿಗಳಾಗಿರತಕ್ಕಂಥವರು ನಮ್ಮಲ್ಲಿಗೆ ವಿಸಿಟ್ ಮಾಡಿ ಕೆಲಸ ಮಾಡಿದ್ದಾರೆ. ಒಂದು ವೇಳೆ ಅವರಿಗೆ ಸ್ವಲ್ಪ ಹೆಚ್ಚು ಆಸಕ್ತಿ ವಿಕೇಂದ್ರೀಕರಣದಲ್ಲಿದೆ ಎಂದು ಇಟ್ಟುಕೊಳ್ಳೋಣ. ಪ್ರಾಮಾಣಿಕತೆಯಲ್ಲಿ ಕೊರತೆ ಇಲ್ಲ ಎಂದು ನಾವು ತಾವು ಎಲ್ಲಾ ಒಪ್ಪಿಕೊಳ್ಳುತ್ತೇವೆ. ನಾವು ಈ ಸದನದಲ್ಲಿ ಚರ್ಚೆ ಮಾಡುವ ವೇಳೆಗೆ ನಮ್ಮ

ವೈಮನಸ್ಸನ್ನೋ, ಆಕ್ರೋಶವನ್ನೋ ಆವೇಶವನ್ನೋ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಅವರ ಕಡೆಗೆ divert ಮಾಡಿದಾಗ ಏನಾಗುತ್ತದೆಂದರೆ, ನಿಜ, ಅವರು ಒಂದು ವೇಳೇ ಅಗತ್ಯ ಇಲ್ಲದೆ ಇರತಕ್ಕಂಥ ಆಸಕ್ತಿ ತೋರಿಸಿರಬಹುದು. ಪ್ರಾಮಾಣಿಕರಾಗಿರತಕ್ಕಂಥವರ ಉತ್ಸಾಹ ಕಡಿಮೆಯಾಗುತ್ತದೆ. ಅಪ್ರಾಮಾಣಿಕರಿಗೆ ಶಿಕ್ಷೆಯೇ ಇಲ್ಲ, ಇದರ ಮಧ್ಯೆ ಇರತಕ್ಕಂಥವರು ಇವರೂ ಸಹ ನಿರುತ್ಸಾಹರಾದರೆ ಸಂಪೂರ್ಣ ಅಪ್ರಮಾಣಿಕತೆ.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಶ್ರೀ ರಮೇಶ್‌ಕುಮಾರ್‌ರವರ ಬಗ್ಗೆ ಅಪಾರ ಗೌರವ ಇಟ್ಟುಕೊಂಡಿದ್ದೇನೆ. ಇವತ್ತು ಬೆಳಿಗ್ಗೆ ಅವರು ಅಧಿಕಾರಿಗಳ ಬಗ್ಗೆ ಮಾತನಾಡಿದ ವಿಧಾನ ಏನು? ನಾವು ಮಾತನಾಡಿದಾಗ ಮಾತ್ರ hurt ಆಗುತ್ತದೆ. ಅವರು ಮಾತನಾಡಿದಾಗ hurt ಆಗುವುದಿಲ್ಲವೇ? ಬೆಳಗ್ಗೆ ತಾವು ಮಾತನಾಡಿದಾಗ ಅಧಿಕಾರಿಗಳ ಬಗ್ಗೆ ಯಾವ ಭಾಷೆಯನ್ನು ಉಪಯೋಗಿಸಿದಿರಿ? ಯಾವ ರೀತಿ ಮಾತನಾಡಿದಿರಿ? ಇವತ್ತು ನಾವು ಹೇಳಿದರೆ, ಮಾತನಾಡಿದರೆ ಮಾತ್ರ as prsion create ಆಗುತ್ತದೆಯೇ?

ಅಧ್ಯಕ್ಷರು : ದಯಮಾಡಿ ಈ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸಿ. ಶ್ರೀ ಹೆಗ್ಡೆಯವರೆ, ದಯಮಾಡಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಮಾತ್ರ ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ಪ್ರೂವ್ ಮಾಡುತ್ತೇವೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಲಿ. ನಾವು ಪ್ರೂವ್ ಮಾಡುತ್ತೇವೆ. ಆ ಮನುಷ್ಯ ಟಿ.ವಿ.ಯಲ್ಲಿ ಹೇಳಿದ್ದಾರೆ. ಶಾಸಕರ ವಿರೋಧದ ಮಧ್ಯೆಯೂ ನಾವು ಅಧಿಕಾರ ಕೊಟ್ಟಿದ್ದೇವೆಂದು ಹೇಳಿರುವುದನ್ನು ಪ್ರೂವ್ ಮಾಡುತ್ತೇವೆ ಅದರ ಬಗ್ಗೆ privilege move ಮಾಡುತ್ತೇವೆ.

ಅಧ್ಯಕ್ಷರು : ಇಲ್ಲ, ಇಲ್ಲ, ಈಗ ಶ್ರೀ ಜಯಪ್ರಕಾಶ್ ಹೆಗ್ಡೆಯವರು ಚರ್ಚೆ ಮುಂದುವರಿಸಲಿ. ದಯಮಾಡಿ ಎಲ್ಲರು ಕುಳಿತುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು : ಶ್ರೀರಾಮರೆಡ್ಡಿಯವರೆ ದಯಮಾಡಿ ಕುಳಿತುಕೊಳ್ಳಿ. ಶ್ರೀ ಹೆಗ್ಡೆಯವರನ್ನು ಮಾತನಾಡುವುದಕ್ಕೆ ಕರೆದಿದ್ದೇನೆ. ದಯಮಾಡಿ ಎಲ್ಲಾ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ಬೇಜಬ್ದಾರಿಯಿಂದ ಇಲ್ಲಿ ಮಾತನಾಡಿದರೆ ಕೇಳಲಿ. ನಮ್ಮ ಹತ್ತಿರ ದಾಖಲೆ ಇದೆ. ಆ ಮನುಷ್ಯ ನಮ್ಮ estimate committee ಗೆ ಬಂದಿದ್ದಾಗ ಹೇಗೆ ಮಾತನಾಡಿದ್ದರೆ ಎನ್ನುವ ದಾಖಲೆ ಇದೆ.

ಅಧ್ಯಕ್ಷರು : ಗಂಭೀರ ವಿಚಾರವಾದ ಕುಡಿಯುವ ನೀರಿನ ಬಗ್ಗೆ ಮಾತನಾಡಿ ಎಂದರೆ ಏನೇನೋ ಮಾತನಾಡಿಕೊಂಡು ಸಮಯ ಹಾಳು ಮಾಡುತ್ತಿದ್ದೀರಿ, ಇನ್ನೂ ಅನೇಕ ಜನ ಸದಸ್ಯರು ಮಾತನಾಡುವುದಕ್ಕೆ ಇಚ್ಛೆಪಡುತ್ತಿದ್ದಾರೆ. ನೀವು ಈ ರೀತಿ ಮಾಡುತ್ತಿರುವುದು ಏನಿದು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈಗ ಅದೊಂದು ಇತ್ಯರ್ಥ ಆಗಬೇಕಾಗುತ್ತದೆ. ಅಧ್ಯಕ್ಷರೆ,

ಅಧ್ಯಕ್ಷರು : ಏನು ಇತ್ಯರ್ಥವಾಗಬೇಕು? ದಯಮಾಡಿ ನೀರಿಗೆ ಸಂಬಂಧಿಸಿದಂತೆ ಮಾತನಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಒಬ್ಬ ಅಧಿಕಾರಿ ಈ ರೀತಿ ಹೇಳಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ಹೌದೋ ಅಥವಾ ಇಲ್ಲವೋ ಎನ್ನುವುದನ್ನು ಮಾನ್ಯ ಸಚಿವರು ಇತ್ಯರ್ಥ ಮಾಡಿಬಿಡಲಿ. ಒಂದು ವೇಳೆ ಅವರು ಹೇಳಿದ್ದು ಹೌದಾದರೆ ಅದು ತಪ್ಪಾಗುತ್ತದೆ.

ಶ್ರೀ ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಬಳಿಗಾರ್‌ರವರು ಹಳ್ಳಿಗಾಡಿನಿಂದ ಬಂದಿರತಕ್ಕಂಥವರು. ನಾವೆಲ್ಲಾ ಹಳ್ಳಿಯಿಂದ ಬಂದ ಹಾಗೆ ಆ ಅಧಿಕಾರಿ ಕೂಡ ಹಳ್ಳಿಗಾಡಿನಿಂದ ಬಂದಿರತಕ್ಕಂಥವರು. ಮೂಲತಃ ಪ್ರಾಮಾಣಿಕತೆ ಮತ್ತು ನಿಷ್ಠೆಯನ್ನು ಇಟ್ಟುಕೊಂಡು ಸರ್ಕಾರದ ಕೆಲಸವನ್ನು ಮಾಡುತ್ತಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾವು ಯಾರೂ ಪ್ರಾಮಾಣಿಕತೆಯ ಬಗ್ಗೆ ಪ್ರಶ್ನೆಯನ್ನೇ ಮಾಡಲಿಲ್ಲ.

ಶ್ರೀ ಹೆಚ್.ಸಿ. ಮಹದೇವಪ್ಪ : ಅವರು ಪಂಚಾಯತ್ ರಾಜ್ institutions ನ ಸಂವಿಧಾನದ ಕೆಳಗಡೆ ಕೊಟ್ಟಿರತಕ್ಕಂಥ ಅಧಿಕಾರದ ವ್ಯಾಪ್ತಿ ಒಳಗಡೆಯೇ ಕೆಲಸ ಮಾಡಬೇಕೇ ವಿನಃ ಅದನ್ನು ಮೀರಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಆ ರೀತಿ ನಡೆದುಕೊಳ್ಳುವುದಿಲ್ಲ ಎಂದು ನಮ್ಮ ಸದಸ್ಯರಿಗೆ ಮನವಿ ಮಾಡುತ್ತೇನೆ.

ಅಧ್ಯಕ್ಷರು : ಪದೇ ಪದೇ ಈ ತರಹ interfere ಆಗುವುದು ಸರಿಹೋಗುವುದಿಲ್ಲ. ವಿರೋಧ ಪಕ್ಷದ ಮುಖಂಡರುಗಳು ನೀವು ಮಾರ್ಗದರ್ಶಕರಾಗಬೇಕಾದವರು ನೀವೇ ಈ ತರಹ ಮಾಡಿದರೆ ಹಿಂದೆ ಕುಳಿತುಕೊಂಡಿರುವವರಿಗೆ ಏನು ಮಾರ್ಗದರ್ಶನವಾಗುತ್ತದೆ? ಎಲ್ಲದಕ್ಕೂ ನೀವು ಸುಮ್ಮನೆ ಬಾಯಿ ಹಾಕುತ್ತೀರಿ. No, no, no, this is not the way. ದಯಮಾಡಿ ಮಾತನಾಡಿ.

ಶ್ರೀ ಮಹದೇವ (ಕೃಷ್ಣರಾಜನಗರ) : ಮಾನ್ಯ ಅಧ್ಯಕ್ಷರೆ, ಈ ವ್ಯವಸ್ಥೆ ಬಗ್ಗೆ ನಾವು ನಾಲ್ಕಾರು ವಿಚಾರಗಳನ್ನು ಹೇಳಬೇಕಾಗುತ್ತದೆ. ದಯವಿಟ್ಟು ನಮ್ಮನ್ನೂ ಸಹ ನಾವು ಕೇಳಬೇಕು. ಇವತ್ತು ವಿಕೇಂದ್ರೀಕರಣದ ಬಗ್ಗೆ ನಾವೆಲ್ಲರೂ ಸಹ ನಂಬಿಕೆ ಇಟ್ಟಿರುವಂಥವರೇ, ಮಾನ್ಯ ಇರಬಹುದು, ಸದನದಲ್ಲಿರತಕ್ಕಂಥ ಎಲ್ಲಾ ನಮ್ಮ ಸ್ನೇಹಿತರು ಎಲ್ಲಾ ಪಕ್ಷದವರು ಸಹ ಇವತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಚಿಂತನೆ ಮಾಡಿದಾಗ Whether they should go to panchayat or whether they should stay with the legislature or with the zilla panchayat ಎಂದು ರೂರಲ್ ಹೌಸಿಂಗ್ ಮತ್ತು ರೂರಲ್ ವಾಟರ್ ಸಪ್ಲೈ ಬಗ್ಗೆ ಒಂದು ದೊಡ್ಡ ಚರ್ಚೆಯಾಗಬೇಕಾಗುತ್ತದೆ. ಇದು ಬಹಳ ಗಂಭೀರವಾದಂಥ ವಿಚಾರ. ನಾನು ಇದುವರೆವಿಗೂ ಕೂಡ ಆಶ್ರಯ ಸಮಿತಿ ಏಕೆ formation ಆಗಿಲ್ಲವೆಂದು ಸದನದಲ್ಲಿ ಒಂದು ಪ್ರಶ್ನೆಯನ್ನೂ ಸಹ ಮಂಡಿಸಿದ್ದೇನೆ. ಅದು Un starred question ಎಂದು ಹೇಳಿ ನೀವು ಉತ್ತರ ಹೇಳುವುದಕ್ಕೆ ಸಿದ್ಧ ಇಲ್ಲ. ಏಕೆಂದರೆ ಶಾಸಕರಾಗಿ ಏನು ಕೇಳುತ್ತಾರೆಂದರೆ, 'ಮನೆ ಕೊಡಪ್ಪಾ ಎಂದು ಕೇಳುತ್ತಾರೆ. ಬೋರ್‌ವೆಲ್ ಕೊಡಪ್ಪಾ ಎಂದು ಶಾಸಕರಾಗಿ ಏನು ಮಾಡುವುದಿದೆ? ವಿಕೇಂದ್ರೀಕರಣ ವಿಚಾರದಲ್ಲಿ ಎಲ್ಲರೂ ಕೂಡ ನಂಬಿಕೆ ಇಟ್ಟುಕೊಂಡಿರುವಂಥವರಾಗಿದ್ದೇವೆ. ಆದರೆ ಅಧಿಕಾರಿಗಳು. they have come to a point to lead politicians. ಶಾಸಕರುಗಳನ್ನು ಲೀಡ್ ಮಾಡತಕ್ಕಂಥ situation ಅನ್ನು ಅಧಿಕಾರಿಗಳು ತಂದಿದ್ದಾರೆ. ಯಾವುದೋ ಒಂದು ಘೋಷಣೆ ಆಧಾರವನ್ನು ಇಟ್ಟುಕೊಂಡು ಇವತ್ತು ಎಲ್ಲಾ ಹಕ್ಕುಗಳನ್ನು ಮೊಟಕು ಮಾಡುತ್ತಿದ್ದಾರೆ. ದಯವಿಟ್ಟು there should be discussion on

this. ಹೌಸ್‌ನಲ್ಲಿ one hour ಈ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕಾಗುತ್ತದೆ.

ಅಧ್ಯಕ್ಷರು : ಈಗ ಈ ವಿಚಾರವನ್ನು ವಿಷಯಾಂತರ ಏಕೆ ಮಾಡುತ್ತೀರಿ? ಈಗ ನೀವು ತೌಡು ಕುಟ್ಟುವ ಕೆಲಸವನ್ನು ಮಾಡುತ್ತಿದ್ದೀರಿ. ಕುಡಿಯುವ ನೀರಿನ ವಿಚಾರದಲ್ಲಿ ಗಂಭೀರವಾಗಿ ಚರ್ಚೆಯಾಗಬೇಕೆಂದು ನೀವೇ ಹೇಳಿ 'ಈಗ ಈ ಕಡೆ ಆ ಕಡೆ ಮಾತನಾಡಿದರೆ ಅದು ಸರಿಯಲ್ಲ. ದಯಮಾಡಿ ಈಗ ಹೆಗ್ಡೆಯವರನ್ನು ಕರೆದಿದ್ದೇನೆ. ಅವರು ಮಾತನಾಡಲಿ.

ಡಾ|| ಎಂ.ಸಿ. ಸುಧಾಕರ್ : ದಯವಿಟ್ಟು ನನಗೊಂದು ಅವಕಾಶ ಕೊಡಿ ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು : ಅನಂತರ ಮಾತನಾಡುವಿರಂತೆ. ಈಗ ಕುಳಿತುಕೊಳ್ಳಿ.

SRI. MAHADEV : Irrespective of parties, ಇದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ.

ಅಧ್ಯಕ್ಷರು : ಶ್ರೀ ಮಹದೇವರವರೇ, ಯಾವುದಾದರು ನಿಯಮದಡಿಯಲ್ಲಿ ಬರೆದು ಕಳುಹಿಸಿ. ಆಗ ಅದನ್ನು ತೆಗೆದುಕೊಳ್ಳಬಹುದು.

ಡಾ|| ಎಂ.ಸಿ. ಸುಧಾಕರ್ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ಇವರು ಮಾತನಾಡುತ್ತಾರೆ. ಅನಂತರ ನಿಮಗೂ ಅವಕಾಶ ಕೊಡುತ್ತೇನೆ.

ಡಾ|| ಎಂ.ಸಿ. ಸುಧಾಕರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಮಹದೇವರವರು ಒಳ್ಳೆಯ ಒಂದು ವಿಚಾರವನ್ನು ಇಟ್ಟಿದ್ದಾರೆ.

ಅಧ್ಯಕ್ಷರು : ಶ್ರೀ ಹೆಗ್ಡೆಯವರೆ, ತಾವು ಈಗ ಮಾತನಾಡುತ್ತೀರೋ ಇಲ್ಲವೋ? ಈಗ ಯಾರೋ ಮಾತನಾಡುತ್ತಾರೆಂದು ನಿಮ್ಮ ನಿಮ್ಮೊಳಗೆ ಒಳಒಪ್ಪಂದ ಆಗಿದೆಯೇ? ನಾನು ಕರೆಯುತ್ತಿದ್ದೇನೆ. ನೀವು ಕುಳಿತುಕೊಳ್ಳುತ್ತೀರಿ, ಈ ತರಹ ಆದರೆ ಹೇಗೆ? ಈಗ ದಯಮಾಡಿ ನಿಮಗೆ ಮಾತನಾಡುವುದಕ್ಕೆ ಇಷ್ಟ ಇದ್ದರೆ ಮಾತನಾಡಿ. ಇಲ್ಲದಿದ್ದರೆ ಮುಕ್ತಾಯ ಮಾಡಿ, ಬೇರೆ ಸದಸ್ಯರನ್ನು ಮಾತನಾಡುವುದಕ್ಕೆ ಕರೆಯುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಆಯಿತು. ನಾನು ಮುಂದುವರಿಸುತ್ತೇನೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟರು. ಅದರ ಬಗ್ಗೆ ಅವರು ತನಿಖೆಯನ್ನು ಮಾಡಿಸಲಿ. ಏನು ತನಿಖೆಯನ್ನು ಮಾಡಿಸುತ್ತಾರೆ. ಅದರ ಬಗ್ಗೆ ಶಾಸಕರೆಲ್ಲಾ ಕುಳಿತು ಚರ್ಚೆ ಮಾಡಬೇಕಾಗುತ್ತದೆ.

ಅಧ್ಯಕ್ಷರು : ಈಗ ನೀರಿನ ವಿಚಾರ ಚರ್ಚೆಗೆ ತೆಗೆದುಕೊಂಡಿರುವಾಗ ಅದರ ಮಧ್ಯದಲ್ಲಿ ಯಾವ್ಯಾವುದೋ ವಿಚಾರವನ್ನು ಚರ್ಚೆಗೆ ತೆಗೆದುಕೊಂಡರೆ ಹೇಗೆ? ಬೇರೆ ನಿಯಮಾವಳಿಯಲ್ಲಿ ಅದನ್ನು ತರಲಿ ನಂತರ ಚರ್ಚೆ ಮಾಡಲಿ. ನನ್ನದೇನು ಅಡ್ಡಿ ಇದೆ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ನಾವು ಪ್ರತಿ ಸಲ ಬೇಸಿಗೆ ಬರುವಾಗ ಮಾತ್ರ scarcity ಬಗ್ಗೆ ಆಲೋಚನೆ ಮಾಡುತ್ತೇವೆ. ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯುವುದಕ್ಕೆ ಏನೂ ಆಲೋಚನೆ ಮಾಡುತ್ತಿಲ್ಲವೆಂದು ಕಾಣುತ್ತದೆ. ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಲಿಕ್ಕೆ ಆಲೋಚನೆ ಮಾಡಿದರೆ ಈ ಬೇಸಿಗೆ ಬರುವಾಗ ನಾವು ಓಡಾಡುವುದು, ಶಾಸಕರಿಗೆ ಅಧಿಕಾರ ಕೊಡಿ, ಪಂಚಾಯತ್‌ನವರಿಗೆ ಕೊಡಿ ಎನ್ನುವ ಚರ್ಚೆ ಬರುವುದಿಲ್ಲ. ನೀವು ಕುಡಿಯುವ

ನೀರಿನ ಯೋಜನೆಯನ್ನು ಮಾಡುತ್ತೀರಿ, ಪ್ರತಿಯೊಂದು ಭಾಗದಲ್ಲೂ ಎಷ್ಟು ಹಣವನ್ನು ಕೊಡಬಹುದೆನ್ನುವುದನ್ನು ಮೊದಲೇ ಕುಳಿತು ತಯಾರು ಮಾಡಿ. ಕೊನೆಯಲ್ಲಿ ಬಂದು ಬೇಸಿಗೆ ಕಾಲದಲ್ಲಿ ಇದ್ದ ನೀರಿನಲ್ಲೇ ಓಂದು ಭಾಗವನ್ನು ನಾಲ್ಕು ಜನರು ಹಂಚಿಕೊಳ್ಳುವ ಪರಿಸ್ಥಿತಿ ಬರಬಾರದು. ಇಂಜಿನಿಯರ್ಸ್ ಒಂದೇ ಭಾಗದಲ್ಲಿ ಸಾಧಾರಣವಾಗಿ 10–12 ವರ್ಷಗಳ ಕಾಲ ಕೆಲಸ ಮಾಡಿದವರು ಅವರಿಗೆ ಯಾವ ಭಾಗದಲ್ಲಿ ಸ್ಕೇರ್‌ಸಿಟಿ ಬರುತ್ತದೆಂದು ಗೊತ್ತಿಲ್ಲದೆ ಕೆಲಸ ಮಾಡುವುದಾದರೆ, ಕೊನೆ ಘಳಿಗೆಯಲ್ಲಿ ಪಟ್ಟಿ ಕೊಡುವುದಾದರೆ, ಅವರೇಕೆ ಅಲ್ಲಿರಬೇಕು? ಯಾರು ಶಾಶ್ವತವಾಗಿ 3 ವರ್ಷಗಳಿಗಿಂತ ಜಾಸ್ತಿ ಇದ್ದಾರೆ, ಅವರನ್ನು ಅಲ್ಲಿಂದ ಎತ್ತಿ ಹಾಕಿ. ಹೊಸಬರನ್ನು ತನ್ನಿ. ಏಕೆಂದರೆ, ಸ್ವಲ್ಪ ಬದಲಾವಣೆಯನ್ನು ಮಾಡುತ್ತಿದ್ದರೆ, ಅಲ್ಲಿ ಚುರುಕು ಮುಟ್ಟುತ್ತದೆ. ನಮ್ಮಲ್ಲಿದ್ದ ನೀರು ಸಮುದ್ರಕ್ಕೆ ಹೋದಾಗ ಅಲ್ಲಿ ಉಪ್ಪು ನೀರಿನ ಅಣೆಕಟ್ಟುಗಳನ್ನು ಹಾಕಬೇಕಾಗುತ್ತದೆ. ಆ ಪಶ್ಚಿಮ ವಾಹಿನಿ ಕಾರ್ಯಕ್ರಮ ಎಲ್ಲಿಗೆ ಹೋಯಿತೋ ಗೊತ್ತಿಲ್ಲ. ಕುಮಾರ್ ಬಂಗಾರಪ್ಪನವರು ಸಣ್ಣ ನೀರಾವರಿ ಮಂತ್ರಿಗಳಾಗಿದ್ದಾಗ ಅದನ್ನು ಪ್ರಾರಂಭಿಸಿದ್ದು, ಅವರ ಜೊತೆಗೇ ಹೋಯಿತೆಂದು ಕಾಣುತ್ತದೆ. ಅದನ್ನಾದರೂ ಜಾರಿಗೆ ತರಬೇಕು. ನಮ್ಮಲ್ಲಿ ಮೇಜರ್ ಇರಿಗೇಷನ್ ಪ್ರಾಜೆಕ್ಟ್ ಯಾವುದೂ ಇಲ್ಲ. ಇದನ್ನು ಮಾಡಿದರೆ ಜಲದ ಮಟ್ಟ ಮೇಲೆ ಬರುತ್ತದೆ. ಬಾವಿಗಳಲ್ಲಿ ನೀರು ಬರುತ್ತದೆ. ರೈತರಿಗೂ ಸಹಾಯವಾಗುತ್ತದೆ. ಕುಡಿಯುವ ನೀರಿನ ವ್ಯವಸ್ಥೆಗೂ ಸಹಕಾರಿಯಾಗುತ್ತದೆ. ನಮಗೆ ಸ್ವಲ್ಪ 100,150 ಕೋಟಿ ರೂಪಾಯಿಗಳನ್ನು ಒದಗಿಸಿ, ಈ ಕೆಲಸ ಮಾಡಿದರೆ ಬಹಳ ಉಪಯೋಗವಾಗುತ್ತದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಸಮುದ್ರದ ನೀರು ಕೊಡಿ ಎಂದು ಸಲಹೆ ಕೊಟ್ಟರು. ಅವರು ಸಮುದ್ರದ ನೀರನ್ನು ಕೊಡಿ ಎಂದರೆ ಉಪ್ಪು ನೀರನ್ನು ಕೊಡಿ ಎಂದು ಹೇಳಿಲ್ಲ. ಡಿ–ಸಲಿನೇಷನ್ ಪ್ಲಾಂಟ್ ಹಾಕಿ ಅದನ್ನೇ ಪ್ಯೂರಿಫೈ ಮಾಡಿ ಕೊಡಲಿಕ್ಕಾಉತ್ತದೆಯೇ ಎಂದು ನೋಡಿ. ಅದನ್ನು ಗಲ್ಫ್‌ನಲ್ಲಿ ಮಾಡುತ್ತಿದ್ದಾರೆ. ಪ್ರಾರಂಭದಲ್ಲಿ ಕಾಸ್ಟ್ ಜಾಸ್ತಿಯಾಗಬಹುದು. ಆದರೆ, it is going to be a permanent solution. ಕರಾವಳಿ ಭಾಗದಲ್ಲಿ. ನೇತ್ರಾವತಿ ನೀರನ್ನು ತಿರುಗಿಸುವ ಆಲೋಚನೆ ಮಾಡುವುದಾದರೆ ಅದು ಎಷ್ಟರಮಟ್ಟಿಗೆ ಬರುತ್ತದೆಯೋ ನನಗೆ ಗೊತ್ತಿಲ್ಲ. ನಮ್ಮಲ್ಲಿ ವಿದ್ಯುಚ್ಛಕ್ತಿ ಸಮಸ್ಯೆ ಇದೆ.

ಶ್ರೀ ಕೆ. ಶ್ರೀನಿವಾಸಗೌಡ(ಕೃಷಿ ಸಚಿವರು) : ಮಾನ್ಯ ಹೆಗ್ಡೆಯರೇ, ಒಂದು ನಿಮಿಷ. ಸಮುದ್ರದ ನೀರಿನ ಬಗ್ಗೆ ಅವರು ಹೇಳುವುದು ನಿಜವಾದಂಥ ಅಂಶ. ನಾನು ಕ್ರಿಬ್ಕೋ ಅಧ್ಯಕ್ಷನಾಗಿದ್ದಾಗ ನೋಡಿದ್ದೇನೆ ಓಮನ್‌ನಲ್ಲಿ ನೀರಿಲ್ಲ, ಅಲ್ಲಿ ಸಮುದ್ರದ ನೀರನ್ನು ಪ್ಲಾಂಟ್ ಹಾಕಿ ಯೂರಿಯಾ ಪ್ರೊಡಕ್ಷನ್‌ಗೆ ಉಪಯೋಗಿಸುತ್ತಿದ್ದೇವೆ ಕುಡಿಯುವುದಕ್ಕೂ ಆ ನೀರನ್ನೇ ಉಪಯೋಗಿಸುವ ಮಟ್ಟಕ್ಕೆ ಹೋಗಿದ್ದೇವೆ. ಇದನ್ನು ನಾವು ಎಲ್ಲಿಯಾದರೂ ಯೋಚಿಸಬೇಕು. ಸರ್ಕಾರವೂ ಇವತ್ತು ಚಿಂತನೆ ಮಾಡಿದರೆ, ಎಲ್ಲೆಲ್ಲಿ ಈ ತರಹದ ಪರಿಸ್ಥಿತಿ ಇದೆ, ಅಲ್ಲಿ ಹಣ ಖರ್ಚಾಗಬಹುದು, ಈಗ ನಾವು ಎಲ್ಲಿಯಾದರೂ ಯೋಚಿಸಬೇಕು. ಸರ್ಕಾರವೂ ಇವತ್ತು ಚಿಂತನೆ ಮಾಡಿದರೆ, ಎಲ್ಲೆಲ್ಲಿ ಈ ತರಹದ ಪರಿಸ್ಥಿತಿ ಇದೆ, ಅಲ್ಲಿ ಹಣ ಖರ್ಚಾಗಬಹುದು, ಈಗ ನಾವು ಟ್ಯಾಂಕರ್‌ಗಳನ್ನು ಹೊಡೆಯುವುದು, ಬೋರ್‌ವೆಲ್ ಹಾಕುವುದು. ಭೂಗರ್ಭದಲ್ಲಿ ದಿವಸ ಎಕ್ಸ್‌ಪ್ಲಾಯಿಂಟ್ ಮಾಡುವುದಾದರೂ ನಿಲ್ಲಿಸುವುದಕ್ಕಾದರೂ ಚಿಂತನೆಯನ್ನು ನಾವೆಲ್ಲರೂ ಸೇರಿ ಮಾಡಬೇಕು. ಕೇವಲ ಸರ್ಕಾರದ ಒಂದೇ ಚಿಂತನೆ ಅಲ್ಲ, ಇಡೀ ನಮ್ಮ ವಿಧಾನ ಸಭೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿ, ಇದನ್ನು ಯಾವ ತರಹ ಮಾಡಬಹುದೆಂದು ಮಾಡಿದರೆ ನಿಜವಾಗಲೂ ಒಳ್ಳೆಯದು. ಏಕೆಂದರೆ ನಾನು ಸ್ವತಃ ಅಲ್ಲಿ

ಹೋಗಿ ನೋಡಿದ್ದೇನೆ. ಆದ್ದರಿಂದ ಹಾಗೆಯೇ ಇಲ್ಲಿಯೇ ಮಾಡಬಹುದಾಗಿದೆ ಮಾನ್ಯ ಹೆಗ್ಡೆಯವರು ಹೇಳಿದ ಮಾತಿಗೆ ನನ್ನ ಒಪ್ಪಿಗೆಯನ್ನು ಸೂಚಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಕಳೆದ ಬಾರಿ ಶಾಸಕರ ನಿಧಿ ಕೊಡುತ್ತಿದ್ದರು. ಅದರಲ್ಲಿ ನಮಗೆ ಸ್ವಲ್ಪ ಅಲ್ಲಿ ಇಲ್ಲಿ ಕೆಲಸ ಮಾಡಿಸಲು ಸಾಧ್ಯವಾಗುತ್ತಿತ್ತು. ಬರ ಬಂದ ಮೇಲೆ ನೆಪದಲ್ಲಿ ಶಾಸಕರ ನಿಧಿಯನ್ನು ನಿಲ್ಲಿಸಿದರು. ಆದರೆ. ನಮ್ಮ ಭಾಗಕ್ಕೆ ಕೂಲಿಗಾಗಿ ಕಾಳು ಯೋಜನೆಯೂ ಇಲ್ಲ, ಶಾಸಕರ ನಿಧಿಯೂ ಇಲ್ಲ. ಎಲ್ಲವನ್ನೂ ಸಂಪೂರ್ಣವಾಗಿ ನಿಲ್ಲಿಸಿದ್ದಾರೆ. ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, ಯಾವುದೇ ಒಂದು ಸಣ್ಣ ಕೆಲಸವನ್ನು ಮಾಡಿಸಲು ನಮ್ಮ ಕೈಯಲ್ಲಾಗುತ್ತಿಲ್ಲ. ನಾವು ಇಲಾಖಾ ಕಾರ್ಯದರ್ಶಿಗಳ ಜೊತೆ ಮಾತನಾಡಿದ್ದೇನೆ. ಕೆಲವೊಮ್ಮೆ ಮಾತನಾಡುವಾಗ ಡಾ|| ಡಿ.ಎಂ. ನಂಜುಂಡಪ್ಪನವರ ವರದಿ ಬಗ್ಗೆ ಚರ್ಚೆಯಾದದ್ದು ಕಾಣುತ್ತದೆ. ನಾನು ಹೇಳಿದೆ. ಉಡುಪಿ-ಮಂಗಳೂರನ್ನು ತೆಗೆದುಕೊಂಡು ಹೋಗಿ ಗುಲ್ಬರ್ಗಾ, ಬಿಜಾಪುರ ಮಾಡಬೇಡಿ. ಉತ್ತರ ಕರ್ನಾಟಕ ಮಾಡಬೇಡಿ. ಅದನ್ನು ತಂದು ಉಡುಪಿ–ಮಂಗಳೂರಿನಲ್ಲಿ ಮಾಡಿ ಎಂದು ಹೇಳಿದೆ. ಏಕೆಂಬುದಕ್ಕೆ ನಾನು ಉದಾಹರಣೆ ಕೊಡುತ್ತೇನೆ. ಇವತ್ತು ಕುಡಿಯುವ ನೀರಿನ ಯೋಜನೆಗೆ ನಮ್ಮಲ್ಲಿ ಹಣವಿಲ್ಲ. ರಸ್ತೆಗಳಿಗೆಂದು ಒಂದು ಕ್ಷೇತ್ರಕ್ಕೆ 5 ಲಕ್ಷ ರೂಪಾಯಿ ಕೊಟ್ಟಂಥದ್ದಿದೆ. ಕೆಲವು ಕ್ಷೇತ್ರಗಳಿಗೆ 50–60 ಲಕ್ಷ ರೂಪಾಯಿಗಳು ಬಂದರೆ, ನನ್ನ ಕ್ಷೇತ್ರಕ್ಕೆ ಕೇವಲ 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಎಲ್ಲಿ ರಸ್ತೆಗಳನ್ನು ಕೊಡುತ್ತೀರಿ. Length of the road and climatic conditions ನೋಡಿ ಕೊಡಬೇಕು. ಅದೇ ರೀತಿ, ಕುಡಿಯುವ ನೀರಿನ ವ್ಯವಸ್ಥೆ ಮಾಡುವಾಗ ಎಲ್ಲಿ ಕಾರ್ಟೇಜ್ ಬರುತ್ತದೆ. ಅಲ್ಲಿ ಜಾಸ್ತಿ ಹಣ ಕೊಡುವ ವ್ಯವಸ್ಥೆ ಮಾಡಬೇಕು. ನಮ್ಮಲ್ಲಿ ಮಳೆ ನೀರು ಬಂದದ್ದು ಸಮುದ್ರಕ್ಕೆ ಹೋಗುವುದರಿಂದ, ನೀರೇ ಇರುವುದಿಲ್ಲ. ಮತ್ತು ಲೋಡ್ ಷೆಡ್ಡಿಂಗ್ ಸಮಸ್ಯೆ ಇದೆ. ನಾವು ನಮ್ಮ 2 ಜಿಲ್ಲೆಯವರೂ ಏನು ಮಾಡಿದ್ದೇವೆಂದರೆ, ಅರ್ಬನ್ ಫೀಡರ್‌ನಿಂದ ತೆಗೆದುಕೊಂಡು ಅರ್ಬನ್ ಟಾರಿಫ್ ಕಟ್ಟುತ್ತಿದ್ದೇವೆ. ಆದರೂ ಲೋಡ್ ಷೆಡ್ಡಿಂಗ್ ಸಮಸ್ಯೆ ಇದೆ. ಲೋಡ್ ಷೆಡ್ಡಿಂಗ್ ಆಗಿ ನೀರಿನ ವ್ಯವಸ್ಥೆಯನ್ನು ಸರಿಯಾಗಿ ವಿತರಣೆ ಮಾಡಲಿಕ್ಕಾಗುತ್ತಿಲ್ಲ. ಕೆಪಿಟಿಸಿಎಲ್ ನಮ್ಮ ಸಮಸ್ಯೆಯನ್ನು ಪರಿಹಾರ ಮಾಡಬೇಕಾಗುತ್ತದೆ. ಗ್ರಾಮೀಣಾಭಿವೃದ್ಧಿ ಇಲಾಖೆ ಇದರ ಬಗ್ಗೆ ಹೆಚ್ಚಿನ ಗಮನ ಹರಿಸಬೇಕಾಗುತ್ತದೆ. ನಾನು ಮಾನ್ಯ ಸತ್ಯನಾರಾಯಣರವರನ್ನು ಕೇಳುತ್ತೇನೆ, ಒಂದು ವೇಳೆ ಒಂದು ಕೋಟಿ ರೂಪಾಯಿಗಳನ್ನು ಒಂದು ಜಿಲ್ಲೆಗೆ ಕೊಟ್ಟರೆ, ಅದನ್ನು ಯಾವ ರೀತಿಯಲ್ಲಿ ವಿತರಣೆ ಮಾಡುತ್ತೀರಿ? ನೀಡ್ ಬೇಸ್ಡ್ ಕಾರ್ಯಕ್ರಮವನ್ನೂ ಮಾಡಿ ಟಾರ್ಗೆಟ್ ಓರಿಯೆಂಟೆಡ್ ಕಾರ್ಯಕ್ರಮ ಮಾಡಬೇಡಿ. ಎಷ್ಟು ಹಣ ಎಲ್ಲಿ ಅಗತ್ಯವಿದೆ ಅಲ್ಲಿಗೆ ಅಷ್ಟು ಹಣವನ್ನು ಒದಗಿಸಿ. ಇಲ್ಲದಿದ್ದರೆ, ಜನರಿಗೆ ನೀರನ್ನು ಕೊಡದೆ, ನಾವು ಸುಮ್ಮನೆ ಜನಪ್ರತಿನಿಧಿಗಳೆಂದು ಕುಳಿತುಕೊಳ್ಳಲು ಸಾಧ್ಯವಾಗುವುದಿಲ್ಲ. ದಯವಿಟ್ಟು ಇದನ್ನು ಒಂದು ಟೀಮ್, ಟಾಸ್ಕ್‌ಫೋರ್ಸ್ ಮಾಡಿ, ಸರಿಯಾದ ರೀತಿಯಲ್ಲಿ, let there be co-co-ordination. ಶಾಸಕರು, ಜಿಲ್ಲಾ, ಗ್ರಾಮ, ತಾಲ್ಲೂಕು ಪಂಚಾಯಿಗಳ ಮಧ್ಯೆ ಕೋ–ಆರ್ಡಿನೇಷನ್ ಇರಲಿ. ಒಬ್ಬೊಬ್ಬರು ಒಂದೊಂದು ಕೆಲಸ ಮಾಡಿಕೊಂಡು ಅಧಿಕಾರ ವಿಕೇಂದ್ರೀಕರಣ ಸಂಪೂರ್ಣವಾಗಿ ಆಗುವವರೆಗೂ ಜನರಿಗೆ ತಿಳುವಳಿಕೆ ಮೂಡಿ, ಯಾರ್‍ಯಾರಿಗೆ ಮತ ಹಾಕುತ್ತಿದ್ದೇವೆಂದು ಅವರಿಗೆ ಮನದಟ್ಟು ಆಗುವವರೆಗೂ ಹೊಂದಾಣಿಕೆಯಿಂದ ಕೆಲಸವನ್ನು ಮಾಡಬೇಕಾಗುತ್ತದೆ. ಅದಕ್ಕೋಸ್ಕರ ದಯವಿಟ್ಟು ಈ ಒಂದು ಟಾಸ್ಕ್‌ಫೋರ್ಸ್ ಮಾಡಿ. ಹಣವನ್ನು

ಅತಿ ಶೀಘ್ರದಲ್ಲಿ ವಿತರಣೆ ವ್ಯವಸ್ಥೆ ಮಾಡಿ. ಪುನಃ ನಾವಿಲ್ಲಿ ಕುಳಿತು ಅಧಿಕಾರಿಗಳ ಮೇಲೆ ಆಪಾದನೆ ಮಾಡಬೇಕೆಂದು ಮಾಡಲಿಲ್ಲ. ಆದರೆ, ನಡೆದ ಘಟನೆಗಳನ್ನು ಹೇಳುತ್ತಿದ್ದೇವೆ. ನಾನು ನೇರವಾಗಿ ಇನ್ನೊಂದು ಸಂದರ್ಭ ಬಂದಾಗ ಹೇಳಲು ಇಚ್ಛಿಸುತ್ತಿದ್ದೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಬಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಯೋಗೀಶಭಟ್(ಮಂಗಳೂರು) : ಸನ್ಮಾನ್ಯ ಅಧ್ಯಕ್ಷರೆ, ಮಂಗಳೂರು ಮಹಾನಗರಪಾಲಿಕೆಗೆ ಸಂಬಂಧಪಟ್ಟಂತೆ, ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪಿಸಲು ನಾನು ಇಚ್ಛಿಸುತ್ತಿದ್ದೇನೆ. ತಮ್ಮಲ್ಲಿ ನಾನು ವಿಶೇಷವಾಗಿ ವಿನಂತಿಸುತ್ತೇನೆ. ಒಂದು ಕಡೆ ಸಮುದ್ರದ ಬಗ್ಗೆ ಪ್ರಸ್ತಾಪಿಸುತ್ತಿದ್ದಾರೆ. ಒಂದು ಕಡೆ ಸಮುದ್ರದಲ್ಲಿ ಧಾರಾಳವಾಗಿ ನೀರು ಹರಿಯುತ್ತಿದೆ. ಇನ್ನೊಂದು ಬದಿಯಲ್ಲಿ ನದಿ ಇದೆ. ಅದರ ಮಧ್ಯದಲ್ಲಿ ನಮ್ಮ ಪಟ್ಟಣ ಪ್ರದೇಶವಿದೆ. ಈ ಪ್ರದೇಶದಲ್ಲಿ ನಲ್ಲಿ ನೀರನ್ನು ಅದಕ್ಕೋಸ್ಕರ ಟ್ಯಾಪ್ ಆನ್ ಮಾಡಿದರೆ ಅನೇಕ ಮನೆಗಳಲ್ಲಿ ಇವತ್ತು ಕಣ್ಣೀರು ಮಾತ್ರ. ದಿನಕ್ಕೆ 20 ಮಿಲಿಯನ್ ಗ್ಯಾಲನ್ ನೀರು ಇವತ್ತು ಬೇಕಾಗಿದೆ. ನಮಗೆ ಅಷ್ಟು ಸಾಲದಾಗಿದೆ. ಅಷ್ಟನ್ನು ಪಂಪ್ ಮಾಡಿದರೂ ಕೂಡ, ಇರುವ ವಿತರಣಾ ವ್ಯವಸ್ಥೆಯಲ್ಲಿ ನಮಗೆ ಎಲ್ಲಾ ಕಡೆಗಳಲ್ಲಿ ಸಮಗ್ರವಾಗಿ ನೀರು ವಿತರಣೆ ಮಾಡಲು ಸಾಧ್ಯವಾಗುತ್ತಿಲ್ಲ. ಇನ್ನೊಂದು ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ. ನಗರದ ಒಳಗಿರುವ ಬಾವಿ, ಕೆರೆಗಳಿಂದ ಎಲ್ಲಿಯಾದರೂ ನೀರನ್ನು ಪಂಪ್ ಮಾಡೋಣವೆಂದರೆ, ಒಳಚರಂಡಿ ಯೋಜನೆ ದುಸ್ಥಿತಿಯಲ್ಲಿದ್ದು, ಅದನ್ನೂ ನಾವು ಕಳೆದುಕೊಂಡಿದ್ದೇವೆ, ತ್ಯಾಜ್ಯಗಳು ಪೆನಿಟ್ರೇಟ್ ಆಗಿ, ಭಾವಿಗಳೆಲ್ಲಾ ಹಾಳಾಗಿದೆ. ಫ್ಲಾಟ್‌ಗಳಲ್ಲಿ 5,6,7ನೇ ಮಹಡಿಗಳವರಿಗೆ ನೀರು ಕೊಡಲು ಪಂಪಿಂಗ್ ವ್ಯವಸ್ಥೆಯಲ್ಲಿನ ನೀರನ್ನೇ ಕೊಡಬೇಕಾಗಿದೆ. ಇಂಥ ಒಂದು ದುಸ್ಥಿತಿಯಲ್ಲಿ ನಾವಿದ್ದೇವೆ. ಕರ್ನಾಟಕ ರಾಜ್ಯ ಸರ್ಕಾರ ನಮಗೆ ವಿಶೇಷವಾದ ವ್ಯವಸ್ಥೆಯನ್ನು, ಪ್ಯಾಕೇಜನ್ನೂ ಕೊಟ್ಟಿದೆ. ಏನೆಂದರೆ, ಎಡಿಬಿಗೆ ಸಂಬಂಧಪಟ್ಟಿದ್ದು. ನಾನು ಅದರ ಬಗ್ಗೆ ಪ್ರಸ್ತಾವನೆ ಮಾಡುವ ಮೊದಲು, ಇನ್ನೊಂದನ್ನು ತಮ್ಮ ಗಮನಕ್ಕೆ ತರುತ್ತೇನೆ. 20 ಮಿಲಿಯನ್ ಗ್ಯಾಲನ್ ನೀರು ದಿವಸಕ್ಕೆ ಬೇಕಾಗಿರುವುದಿದೆ. ಇದಕ್ಕೆ ಪಂಪ್ ಹಾಕಿರುವಂಥದ್ದು ನೇತ್ರಾವತಿ ವೆಂಟೆಡ್ ಡ್ಯಾಂ ಹತ್ತಿರದಿಂದ. ಇಲ್ಲಿ ಬಂದಿರುವ ಸಮಸ್ಯೆ ಎಂದರೆ, ವೆಂಟೆಡ್ ಡ್ಯಾಂನಲ್ಲಿ ಲೀಕೇಜ್ ಆರಂಭವಾಗಿದೆ. ಶಿಥಿಲತೆಯಿಂದ ಅಲ್ಲಲ್ಲಿ ನೀರು ಸೋರಿಕೆ ಆರಂಭವಾಗಿದೆ. ಮಾರ್ಚ್, ಏಪ್ರಿಲ್ ಆದ ನಂತರ ಅಲ್ಲಿ ಸಿಹಿ ನೀರಿನ ಆಸರೆ ಸಿಗುತ್ತಿಲ್ಲ. ಆದರೆ, ಅದು ಪೂರ್ಣವಾಗಿ ಸಮುದ್ರದ ಕಡೆಗೇ ಹೋಗುತ್ತಿದೆ. ಕೊನೆಗೆ, ಉಪ್ಪು ನೀರು ಬರುವಂಥದ್ದು ಇದೆ. ಇಂಥ ಒಂದು ದುಸ್ಥಿತಿಯಲ್ಲಿರುವುದರಿಂದ, ತಕ್ಷಣ ಈ ಹಳೆಯ ವೆಂಟೆಡ್ ಡ್ಯಾಂನಲ್ಲಿ ದುರಸ್ತಿ ಮಾಡಿ ಇನ್ನು ಕೇವಲ 2 ತಿಂಗಳಿದೆ. ನಾವು ಈಗ ಫೆಬ್ರವರಿ 10ರ ಹತ್ತಿರಕ್ಕೆ ಬರುತ್ತಿದ್ದೇವೆ. ಏಪ್ರಿಲ್ 15ರೊಳಗೆ ಎಲ್ಲಿಯಾದರೂ ವೆಂಟೆಡ್ ಡ್ಯಾಂ ದುರಸ್ತಿ ಸಂಪೂರ್ಣಗೊಂಡರೆ ಕನಿಷ್ಟ ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ಈಗಿರುವ ತತ್ಕಾಲದ ವ್ಯವಸ್ಥೆಯಲ್ಲಿ ನಾವೇನಾದರೂ ಸರಬರಾಜು ಮಾಡಲು ಆಗುತ್ತದೆ. ಇಲ್ಲದಿದ್ದರೆ ಹಾಹಾಕಾರ ಆಗುತ್ತದೆ. ಕಳೆದ ವರ್ಷ ನಮಗೆ ಜನರನ್ನು ಎದುರಿಸಲು ಕಷ್ಟವಾಗಿತ್ತು. ಅಂಥ ಒಂದು ದುಸ್ಥಿತಿಯನ್ನು ನಾವು ಎದುರಿಸಿದ್ದೆವು. ಇಂಥ ಸನ್ನಿವೇಶ ಉಂಟಾಗಿತ್ತು. ಎರಡನೆ ಸಮಸ್ಯೆಯನು ನಾವು ಎದುರಿಸುತ್ತಿರುವುದು ಎಂದರೆ, ಇಲ್ಲಿ ಪ್ರಮುಖವಾಗಿರುವುದು ಎಡಿಬಿ ವಿತರಣಾ ಜಾಲಕ್ಕೆ ಸಂಬಂಧಪಟ್ಟದ್ದು. ಸುಮಾರು 120 ಕೋಟಿ ರೂ. ವೆಚ್ಚದಲ್ಲಿ ಪಂಪಿಂಗ್ ಸ್ಟೇಷನ್‌ಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟ ಪೈಪ್‌ಲೈನ್‌ಗಳ ಜಾಲಗಳನ್ನು ಹಾಕುತ್ತಿದ್ದೇವೆ. ಅದರಲ್ಲಿ

ಸಮಸ್ಯೆ ಏನಾಗಿದೆ ಎಂದರೆ ಇರುವ ಸೋರ್ಸ್ ಎಷ್ಟೆಂದರೆ, ಹಳೆಯ ಸೋರ್ಸ್‌ಗಳಲ್ಲಿ ಪಂಪಿಂಗ್ ಮಾಡುತ್ತಿದ್ದೇವೆ. ಈಗ ಇದರಲ್ಲಿ ನಮ್ಮ ಲೆಕ್ಕಾಚಾರ ಇದ್ದರೆ ಇದೇ ರೀತಿ ಪಂಪ್ ಆದರೆ, ಫೆಬ್ರವರಿ ಒಳಗೆ ಎಲ್ಲಾ ನೀರು ಖಾಲಿಯಾಗುತ್ತದೆ. ನಂತರ ಅಲ್ಲಿ ಶೇಖರಣೆ ಮಾಡುವ ವ್ಯವಸ್ಥೆ ನಮ್ಮಲ್ಲಿರುವುದಿಲ್ಲ. ಈ ನಿಟ್ಟಿನಲ್ಲಿ ವೆಂಟೆಡ್ ಡ್ಯಾಂ ಮಾಡುವಂಥದ್ದು ತೀರ ಅವಶ್ಯಕತೆ ಇದೆ. ಈ ಎರಡನೇ ವೆಂಟೆಡ್ ಡ್ಯಾಂ ಬಗ್ಗೆ ಮನವರಿಕೆ ಮಾಡುವ ದೃಷ್ಟಿಯಿಂದ ಮಾನ್ಯ ಸಚಿವರಲ್ಲಿ ವೈಯಕ್ತಿಕ ನೆಲೆಯಲ್ಲಿ ಹಾಗು ಅಲ್ಲಿಯ ಮಂಗಳೂರು ಮಹಾನಗರಪಾಲಿಕೆಯ ಮೇಯರ್, ಕಾರ್ಪೋರೇಟರ್‌ಗಳು ಬೇರೆ ಬೇರೆ ರೀತಿಯಲ್ಲಿ ಡೆಲಿಗೇಷನ್ ಮೇಲೆ ಬಂದು, ಕನ್‌ವಿನ್ಸ್ ಮಾಡುವ ಎಲ್ಲಾ ಪ್ರಯತ್ನಗಳನ್ನು ನಾವು ಮಾಡಿದ್ದೇವೆ. ಆದರೆ, ಇವತ್ತು ಸಮಸ್ಯೆ ಬಂದಿರುವುದು, 120 ಕೋಟಿ ರೂ. ವೆಚ್ಚದಲ್ಲಿ ಈ ಜಾಲಗಳನ್ನು ಹಾಕುವಾಗ ಕನಿಷ್ಟ 20 ಕೋಟಿ ರೂ. ಹೊಸ ವೆಂಟೆಡ್ ಡ್ಯಾಂಗೆ ಅವಕಾಶ ಕೊಡುವುದಕ್ಕೆ ಈವರೆಗೆ ಅನುಮತಿ ಸಿಕ್ಕಿಲ್ಲ. ನಾನು ಪ್ರತಿ ದಿವಸ ಕಾಲಿಂಗ್ ನಿಯಮ 351 ಹಾಗೂ ಬೇರೆ ಬೇರೆ ಕಡೆಗಳಿಂದ, ಪ್ರಶ್ನೋತ್ತರ ಮತ್ತು ಬೇರೆ ಬೇರೆ ಕಡೆಗಳಿಂದ ಮಾಹಿತಿ ಪಡೆಯುತ್ತಿದ್ದೇನೆ. ಇವತ್ತೂ ಕೂಡ ಅನುಮತಿ ಸಿಕ್ಕಿಲ್ಲ. ಮಾನ್ಯ ಸಚಿವರ ಮೂಲಕ ಕೇಳುತ್ತೇನೆ, ನಮಗೆ ತುರ್ತಾಗಿ ಹಳೆಯ ವೆಂಟೆಡ್ ಡ್ಯಾಂ ದುರಸ್ತಿಗೆ ತಕ್ಷಣ ಅನುಮತಿ ಕೊಟ್ಟು ತಕ್ಷಣ ಎರಡು ತಿಂಗಳಲ್ಲಿ ಆಗುವ ನಿಟ್ಟಿನಲ್ಲಿ ಸಮರೋಪಾದಿಯಲ್ಲಿ ಆಗುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಎರಡನೇಯದಾಗಿ, ಶಾಶ್ವತವಾಗಿರತಕ್ಕಂಥ ಇನ್ನೊಂದು ವೆಂಟೆಡ್ ಡ್ಯಾಂ ಅದಕ್ಕೆ ಸಂಬಂಧಪಟ್ಟ ಸ್ವಲ್ಪ ದೂರದಲ್ಲಿ ಹೆಚ್ಚಿನ ರೀತಿಯಲ್ಲಿ ಮುಳಗಡೆ ಆಗದ ರೀತಿಯಲ್ಲಿ ಏನು ವ್ಯವಸ್ಥೆ ಮಾಡಬೇಕು ಆ ರೀತಿ ಮಾಡಿದರೆ ನಮಗೆ ಖಂಡಿತವಾಗಿ ಶಾಶ್ವತವಾಗಿರತಕ್ಕಂಥ ನೀರಿನ ವ್ಯವಸ್ಥೆ ನಮಗೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇನ್ನೂ 20 ಮಿ. ಗ್ಯಾಲನ್ ಫರ್ ಡೆ ಅಡಿಷನಲ್ಲಾಗಿ ಸೋರ್ಸ್‌ನ್ನು ನಾವು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ವಿಶೇಷವಾಗಿ ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ನಾನು ಒತ್ತಾಯ ತರುವುದಂಥದ್ದು, ತಾವು ಇದನ್ನು ಮಾಡಿಕೊಡಬೇಕೆನ್ನುವ ಒತ್ತಾಯವನ್ನು ಮಾಡಲಿಕ್ಕೆ ಇಚ್ಛಿಸುತ್ತಿದ್ದೇನೆ. ಇಷು ಮಾತ್ರವಲ್ಲ. ಸಮುದ್ರ ನೀರಿಂದ ಡಿಸಲೈನ್ ಮಾಡಿಕೊಂಡು ನೀರನ್ನು ಪಡೆಯುವ ನಿಟ್ಟಿನಲ್ಲಿ ಬಹಳ ಯೋಚನೆಗಳು ಆಗುತ್ತಿವೆ ಬಹಳ ಪ್ರಸ್ತಾವನೆಗಳು ಬರುತ್ತಿವೆ. ಏನೂ ಬೇಕಾಗಿಲ್ಲ ಈ ಪಶ್ಚಿಮ ವಾಹಿನಿ ಯೋಜನೆ ಯಾವುದು ಇದೆ. ಮಾನ್ಯ ಕುಮಾರ್ ಬಂಗಾರಪ್ಪನವರು ನಮ್ಮ ಜಿಲ್ಲೆಗೆ ಹಿಂದೆ ಬಂದಿದ್ದ ಸಂದರ್ಭದಲ್ಲಿ ಬಹುಶಃ ನಮ್ಮಲ್ಲರಿಗೂ ಸಂತೋಷವಾಗಿತ್ತು. ಪಶ್ಚಿಮಾಭಿಮುಖವಾಗಿ ಸಮುದ್ರಕ್ಕೆ ಸೇರುವಂಥ ಎಲ್ಲಾ ನದಿಗಳಿಗೆ ಅಲ್ಲಲ್ಲಿ ವೆಂಟೆಡ್ ಡ್ಯಾಂಗಳನ್ನು ಕಟ್ಟಿ ಬೇಕಾಗುವಂಥ ನೀರನ್ನು ಶೇಖರಣೆ ಮಾಡಿ, ಬಹುಶಃ ಮುಲ್ಕಿ ಅಂಥ ಪ್ರದೇಶಗಳಲ್ಲಿ ನಮ್ಮ ಸಚೇತಕರು ಇದ್ದಾರೆ, ಅವರ ಕ್ಷೇತ್ರದಲ್ಲಿ ಎಂಥ ಬವಣೇ ಇದೆ ಎನ್ನುವುದು ಗೊತ್ತಿದೆ. ಇಂಥ ಅನೇಕ ಪ್ರದೇಶಗಳಲ್ಲಿ, ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲಾ ಕಡೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಇರುವಂಥ ಬಹಳ ದೊಡ್ಡ ಯೋಜನೆ ಎಂದರೆ ಪಶ್ಚಿಮ ವಾಹಿನಿ ಯೋಜನೆ. ಈ ಯೋಜನೆಗೆ ಪುನಃ ಒಂದು ಕಾಯಕಲ್ಪ ಕೊಡುವಂಥದ್ದು, ಇದನ್ನು ಆರಂಭ ಮಾಡುವಂಥದ್ದು ಅವಶ್ಯಕತೆ ಇದೆ ಎನ್ನುವ ಮಾತನ್ನು ಹೇಳುತ್ತಾ, ಅದರ ಜೊತೆಯಲ್ಲಿ ಪಂಪಿಂಗ್ ಆಗುವಂಥ ವ್ಯವಸ್ಥೆಯಲ್ಲಿ ಕೂಡ 24 ಗಂಟೆ ನೇರವಾಗಿ ಎಕ್ಸ್‌ಪ್ರೆಸ್ ಫೀಡರ್‌ಗಳ ಮೂಲಕ ಮತ್ತೆ ಪಂಪಿಂಗ್ ಸ್ಟೇಷನ್‌ಗಳಲ್ಲಿ ಪಂಪ್ ಆಗುವ ವ್ಯವಸ್ಥೆ ಆದರೆ ಮಾತ್ರ ನಮಗೆ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಆಗುತ್ತದೆ.

ಇಲ್ಲದಿದ್ದರೆ ಸಹಜವಾಗಿ ತಮಗೆ ತಾಂತ್ರಿಕವಾಗಿ ಬರುವಂಥ ತೊಡಕು ಗೊತ್ತಿದೆ. ಪಂಪಿಂಗ್ ಆಗದೇ ಕೆಲವು ಗಂಟೆಗಳು ಹೋಯಿತು ಎಂದರ ಎಲ್ಲಿ ಎರಲಾಕ್ ಬರುವಂಥದ್ದು, ಬಹುಶಃ ಹಲವು ಗಂಟೆಗಳ ತನಕ ನಗರದ ಪ್ರದೇಶಗಳಲ್ಲಿ ನೀರು ಬರದೇ ಇರುವ ಒಂದು ದುಸ್ಥಿತಿ ಬರುತ್ತದೆ. ಎಕ್ಸ್‌ಪ್ರೆಸ್ ಫೀಡರ್‌ಗಳ ಮೂಲಕ ಮತ್ತೆ ಬೇರೆ ಬೇರೆ ರೀತಿಯಲ್ಲಿ ಷಟ್‌ಡಾನ್ ಆಗುವಂಥ ಸಂದರ್ಭದಲ್ಲಿ ಕೂಡ ಸ್ವೀಚ್ ಓವರ್ ಸಿಸ್ಟಂ ಅನ್ನು ಅಳವಡಿಸಿಕೊಂಡು, ಈ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದು. ವಿಶೇಷವಾಗಿ ಯೋಜನೆಯನ್ನು ಅನುಷ್ಠಾನಕ್ಕೆ ಬರುವಂಥ ನಿಟ್ಟಿನಲ್ಲಿ ತಾವು ಮಾಡಬೇಕು ಎನ್ನುವಂಥ ವಿನಂತಿಯನ್ನು ಮಾಡುತ್ತಿದ್ದೇನೆ. ಮತ್ತೆ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಹಾಗೆ ಗ್ರಾಮೀಣ ಮೊನ್ನೆ ತಾನೇ ನಮ್ಮ ಸಚೇತಕರು, ಶಾಸಕರು, ನಾವು ಎಲ್ಲರೂ ಇದ್ದುಕೊಂಡು ಒಂದು ರಿವ್ಯೂ ಮೀಟಿಂಗ್ ಮಾಡಿದಾಗ ಸುಮಾರು ಎಂಟು ಕೋಟಿ ರೂಪಾಯಿಯ ತುರ್ತು ನೆರವು ಬೇಕಾಗಿದೆ ಎಂಬ ನಿರ್ಧಾರಕ್ಕೆ ಬಂದೆವು. ಗ್ರಾಮೀಣ ಪ್ರದೇಶದಲ್ಲಿ ಬೇರೆ ಪ್ರದೇಶಗಳಲ್ಲಿ ಏನು ಸಮಸ್ಯೆ ಅನುಭವಿಸುತ್ತಿದೆ ಅದರ ಹತ್ತುಪಟ್ಟು ಸಮಸ್ಯೆಗಳು ನಮ್ಮ ಗ್ರಾಮೀಣ ಪ್ರದೇಶದಲ್ಲಿ ನೀರಿನ ಸಮಸ್ಯೆಯನ್ನು ಅನುಭವಿಸುತ್ತಿದ್ದೇವೆ. ಬಹುಶಃ ಏಪ್ರಿಲ್ ಮೇ ತಿಂಗಳಲ್ಲಿ ಶಾಸಕರಾದ ನಾವು ಹೇಗೆ ಎದುರಿಸುವುದು ಎನ್ನುವುದರ ಬಗ್ಗೆ ಬಹಳ ದೊಡ್ಡ ಕಾಳಜಿ ಹಾಗೂ ಬಹಳ ದೊಡ್ಡದಾದ ಆತಂಕದಲ್ಲಿ ನಾವು ಇದ್ದೇವೆ. ಈ ನಿಟ್ಟಿನಲ್ಲಿ ಕನಿಷ್ಠ ನಮಗೆ ಎಂಟು ಕೋಟಿ ರೂಪಾಯಿಗಳು ನಮಗೆ ಬೇಕಾಗಿದೆ. ತುರ್ತಾಗಿ ನಾನು ಹೇಳುವಂಥದ್ದು. ಇದರ ಬಗ್ಗ ತಾವು ಎಲ್ಲಾ ತರಹ ಮಾಹಿತಿಗಳನ್ನು ಜಿಲ್ಲಾಧಿಕಾರಿಗಳಿಂದ ಪಡೆದುಕೊಂಡು ಈ ಹಣವನ್ನು ಬಿಡುಗಡೆ ಮಾಡಿದಲ್ಲಿ ಕನಿಷ್ಠ ನಾವು ಮಾರ್ಚ್–ಏಪ್ರಿಲ್ ವರೆಗೆ ಆದರೂ ನಾವು ಎದುರಿಸಬಹುದು. ವಿಶೇಷವಾಗಿ ಕುಡಿಯುವ ನೀರಿನ ಸಮಸ್ಯೆಗೆ ಸಂಬಂಧಪಟ್ಟ ಹಾಗೆ ನಾವು ವ್ಯವಸ್ಥೆಯನ್ನು ಮಾಡಬಹುದು. ಗ್ರಾಮೀಣ ಪ್ರದೇಶದಲ್ಲಿರುವಂಥ ಕುಡಿಯುವ ನೀರಿನ ವ್ಯವಸ್ಥೆಗೆ ಸಂಬಂಧಪಟ್ಟಹಾಗೆ, ತಾವು ಈಗಾಗಲೇ ಹೇಳಿದ ಹಾಗೆ ಚರ್ಚೆಯಲ್ಲಿ ಬಂದ ಹಾಗೆ, 50 ಸಾವಿರ ರೂ ಡೆಪಾಸಿಟ್ ಕೊಡುವುದು ಮಾತ್ರವಲ್ಲ. ಒಂದು ಯೂನಿಟ್‌ಗೆ ಮೂರು ರೂಪಾಯಿ ನಲವತ್ತು ಪೈಸೆಕ್ಕಿಂತ ಜಾಸ್ತಿ ಚಾರ್ಜ್ ಮಾಡುವಂಥದ್ದು. ಅನೇಕ ಗ್ರಾಮ ಪಂಚಾಯಿತಿಗಳಲ್ಲಿ ಹಣ ಕಟ್ಟಲಿಲ್ಲ ಎನ್ನುವ ಕಾರಣಕ್ಕಾಗಿಯೇ ಡಿಸ್‌ನೆಕ್ಷನ್ ಆಗುವಂಥದ್ದು ಇಂಥಹ ಅನೇಕ ಸಂಗತಿಗಳು ಬಂದಿರುವಂಥ ಹಿನ್ನೆಲೆಯಲ್ಲಿ, ಗ್ರಾಮೀಣ ಭಾಗದಲ್ಲಿರುವ ನಮ್ಮ ರೈತಾಪಿ ವರ್ಗದವರಿಗೆ ಯೂನಿಟ್‌ಗೆ ನಲವತ್ತು ಪೈಸೆಯಲ್ಲಿ ನಾವು ಕೊಡುತ್ತಿದ್ದೇವೆ. ಇದೇ ರೀತಿಯಲ್ಲಿ ಕುಡಿಯುವ ನೀರಿಗೋಸ್ಕರ ಈ ಒಂದು ಮಾಪನವನ್ನು ಇಟ್ಟುಕೊಂಡು ಅಲ್ಲಿ ಹೇಗೆ ಕೃಷಿಗೋಸ್ಕರ ನಲವತ್ತು ಪೈಸೆ ಕೊಡುತ್ತಿದ್ದೇವೆ, ಇಲ್ಲಿ ಕೂಡ ನಲವತ್ತು ಪೈಸೆ ಕೊಡುವಂಥ ನಿಟ್ಟಿನಲ್ಲಿ ಮಾಡಿದರೆ, ಈಗಿರುವಂಥ ಬಜೆಟ್‌ನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಾಗಬಹುದೇನೋ ಈ ನಿಟ್ಟಿನಲ್ಲಿ ಕೂಡ ತಾವು ಸ್ಪಂದಿಸಬೇಕು, ತಮ್ಮ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆನ್ನುವ ವಿನಂತಿಯನ್ನು ಮಾಡಿ, ನಾನು ತಮ್ಮ ಮೂಲಕ ಮಾನ್ಯ ಸಚಿವರ ಹತ್ತಿರ, ವಿಶೇಷವಾಗಿ ವಿನಂತಿ ಮಾಡುವಂಥದ್ದು, ಎರಡನೇ ವೆಂಟೆಡ್ ಡ್ಯಾಂಮ್‌ಗೆ ತಾವು ಅನುಮತಿ ಕೊಡುತ್ತೇವೆ ಎನ್ನುವಂಥ ಘೋಷಣೆಯನ್ನು ತಾವು ಮಾಡಬೇಕೆಂದು ಹೇಳುವಂತಹ ವಿನಂತಿ ಹಾಗೂ ಈಗಿರುವ ವೆಂಟೆಡ್ ಡ್ಯಾಂಮ್‌ಗೆ ತುರ್ತಾಗಿ ಅದನ್ನು ದುರಸ್ತಿ ಮಾಡುವಂಥ ನಿಟ್ಟಿನಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕು ಎನ್ನುವಂಥ ಒಂದು

ವಿನಂತಿಯನ್ನು ಮಾಡಿ, ಜಿಲ್ಲೆಗೆ ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲಾ ಕಡೆಗಳಲ್ಲೂ ವಿತರಣೆ ವ್ಯವಸ್ಥೆ ಮಾಡುವಂಥ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು ತಾವು ಎಂಟು ಕೋಟಿ ರೂಯನ್ನು ಬಿಡುಗಡೆ ಮಾಡಬೇಕು ಎನ್ನುವ ವಿನಂತಿಯನ್ನೂ ಕೂಡ ತಮ್ಮ ಮೂಲಕ ಮಾಡಲಿಕ್ಕೆ ಇಚ್ಛಿಸುತ್ತೇನೆ. ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕೋಸ್ಕರ ತಮಗೆ ಧನ್ಯವಾದಗಳು.

ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾವು ಈ ಚರ್ಚೆಯನ್ನು ಆರಂಭ ಮಾಡುವ ಮೊದಲು ಸರ್ಕಾರ ಒಂದು ಹೇಳಿಕೆ ಮಾಡಿದ ನಂತರ ಈ ಚರ್ಚೆ ಪ್ರಾರಂಭ ಮಾಡಿದ್ದರೆ ತುಂಬಾ ಒಳ್ಳೆಯದಾಗುತ್ತಿತ್ತು ಎಂದು ನನಗೆ ಅನ್ನಿಸುತ್ತೆ. ಕಾರಣ, ಈ ಸರ್ಕಾರ ಬಂದ ನಂತರ ಕುಡಿಯುವ ನೀರಿಗೆ ವ್ಯವಸ್ಥೆಗೋಸ್ಕರ ಎಷ್ಟು ಹಣವನ್ನು ಈಗಾಗಲೇ ಕೊಟ್ಟಿದೆ ಎನ್ನುವ ಸಾಮಾನ್ಯ ತಿಳುವಳಿಕೆ ಬಂದಿದ್ದರೆ ಅದು ಸರಿ ಇದೆ ಅಥವಾ ಇದು ತಪ್ಪು ಇದೆ ಎಂದು ವಿಮರ್ಶೆ ಮಾಡಬಹುದಾಗಿತ್ತು. ಆದರೆ ಈಗಾಗಲೇ ಚರ್ಚೆಯನ್ನು ಪ್ರಾರಂಭ ಮಾಡಿದ್ದೇವೆ. ನನಗೆ ಅನ್ನಿಸುತ್ತದೆ ಈ ಸರ್ಕಾರ ಬಂದ ಮೇಲೆ ಕುಡಿಯುವ ನೀರಿಗಾಗಿ ಒಂದು ಪೈಸೆಯನ್ನು ಸಹ ಇದುವರೆವಿಗೂ ಕೊಟ್ಟ ಹಾಗೆ ನನಗೇನೂ ಕಾಣುವುದಿಲ್ಲ. ಅದು ಏನಾದರೂ ಇದ್ದರೆ ಅವರು ಉತ್ತರದಲ್ಲಿ ಹೇಳಿದರೆ ನಾನು ಕನ್‌ವಿನ್ಸ್ ಆಗುತ್ತೇನೆ. ಏಕೆಂದರೆ, ಎಂಟು ತಿಂಗಳಲ್ಲಿ. ಆನ್ ಗೋಯಿಂಗ್ ವರ್ಕ್ಸ್‌ಗೆ ಕೂಡ ಹಣವನ್ನು ಕೊಡಲಿಲ್ಲ. ಹಿಂದಿನ ಸರ್ಕಾರ ಮಂಜೂರು ಮಾಡಿರತಕ್ಕಂಥ ಯೋಜನೆಗಳೂ ಕೂಡ ಇವತ್ತು ಹಣ ಇಲ್ಲವೆಂದು ಹೇಳಿ ಅರ್ಧಬರ್ದ ನಿಂತು ಬಿಟ್ಟಿವೆ. ತಾಲ್ಲೂಕು ಮಟ್ಟದ ಟಾಸ್ಕ್‌ಫೋರ್ಸ್ ಕಮಿಟಿಗಳನ್ನು ಇವರು ಮಾಡಿದ್ದಾರೆ. ಬಹಳ ದೊಡ್ಡದಾಗಿ ಪತ್ರಿಕೆಗಳಲ್ಲಿ ಬಂತು. ಜನ ನಮ್ಮ ಹತ್ತಿರ ಕೇಳಿದರು ಕಮಿಟಿ ಮಾಡಿದ್ದಾರೆಂದು ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ, ನೀವು ಶಾಸಕರು ಏಕೋ ಕೇಳುವುದಿಲ್ಲ ನಮ್ಮ ಊರಿಗೆ ಕುಡಿಯುವ ನೀರು ಇಲ್ಲ ನಿಮ್ಮದೇನೋ ಇದರಲ್ಲಿ ಪಾಲಿಟಿಕ್ಸ್ ಇದೆ ಎಂದು ಹೇಳುತ್ತಾರೆ. ಒಟ್ಟಾರೆಯಾಗಿ ನಾವು ಚುನಾಯಿತ ಪ್ರತಿನಿಧಿಗಳು ನಾವು ತಲೆ ಎತ್ತಿ ಓಡಾಡುವುದು ಹಳ್ಳಿಗಳಲ್ಲಿ ಕಷ್ಟವಾಗುತ್ತದೆ. ಸಮಿತಿಗಳನ್ನು ಮಾಡಿದಿರಿ. ಅವರಿಗೆ ಏನು ಅಧಿಕಾರ ಕೊಟ್ಟಿದ್ದೀರಿ, ಎಷ್ಟು ಹಣ ಅವರ ಕೈಯಲ್ಲಿ ಕೊಟ್ಟಿದ್ದೀರಿ. ತತ್‌ಕ್ಷಣವೇ ಡ್ರೈ ಆಗಿ ಬೋರ್‌ವೆಲ್ ಒಣಗಿತು ಎಂದರೆ ಆ ಊರಿನ ಜನ 5–6 ಕಿಲೋ ಮೀಟರ್ ದೂರ ಹೋಗಬೇಕೆಂದಾದರೆ ತಕ್ಷಣ ಒಂದು ಬೋರ್‌ವೆಲ್ ಕೊರೆಯುವುದಕ್ಕೆ ಅವರ ಹತ್ತಿರ ಹಣ ಇದೆಯೇ? ಅವರ ಹತ್ತಿರ ಯಾವ ಹಣಕಾಸಿನ ಸೌಲಭ್ಯ ಕೊಟ್ಟಿದ್ದೀರಿ ಎನ್ನುವುದನ್ನು ತಾವು ದಯವಿಟ್ಟು ಮನದಟ್ಟು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ನಮಗೂ ಜನರಿಗೂ ಎಲ್ಲೋ ಒಂದು ಕಡೆ ಮಧ್ಯದಲ್ಲಿ ಸಂಶಯವನ್ನು ಹುಟ್ಟು ಹಾಕಿದ ಹಾಗೆ ಆಗುತ್ತದೆ. ಇದರಿಂದ ಬೇರೆ ಏನೂ ಆಗುವುದಿಲ್ಲ. ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಇವರ ಪರಿಸ್ಥಿತಿ ಎಷ್ಟರಮಟ್ಟಿಗೆ ಇದೆ ಎಂದು ಹೇಳುವುದಾದರೆ, ಪಾಪ ಅವರು ಗ್ರಾಮೀಣಾಭಿವೃದ್ಧಿಯ ಕುಡಿಯುವ ನೀರು ಇಲಾಖೆಯ ಸಚಿವರಾಗಿ ಇತ್ತೀಚೆಗೆ ವಹಿಸಿಕೊಂಡಿದ್ದಾರೆ. ಪಾಪ ಅವರ ಬಗ್ಗೆ ನಾನು ಅಪಾದನೆ ಮಾಡುತ್ತಿಲ್ಲ. ಏಕೆಂದರೆ, ಮಂತ್ರಿ ಮಾಡುತ್ತಾರೆ ಹಣ ಕೊಡುವುದಿಲ್ಲವೆಂದು ಹೇಳಿದರೆ ಬರಿ ಮಂತ್ರಿ ಬಿಟ್ಟರೆ ಏನೂ ಆಗುವುದಿಲ್ಲ. ಅವರ ಕೈಗೆ ಸಾಕಷ್ಟು ಹಣ ಕೊಡಬೇಕಾಗುತ್ತದೆ ಅವರು ಈ ಕೆಲಸವನ್ನು ಸರಿಯಾದ ರೀತಿಯಲ್ಲಿ ಮಾಡಬೇಕಾಗುತ್ತದೆ. ಏಕೆ ಈ ಮಾತು ಹೇಳುತ್ತೇನೆಂದರೆ, ನನ್ನ ತಾಲ್ಲೂಕಿನಲ್ಲಿ ಮಾನ್ಯ ಸಚಿವರು ದಯವಿಟ್ಟು ಗಮನಿಸಬೇಕು.

ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣ, ನೀರು ಸರಬರಾಜು ಮತ್ತು ಒಳಚರಂಡಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಅವರು ಹಣದ ಬಗ್ಗೆ ಹೇಳಿದರು ಅದಕ್ಕೆ ವಿವರ ಕೊಡುತ್ತೇನೆ.

ಸನ್ಮಾನ್ಯ ಅರಗ ಜ್ಞಾನೇಂದ್ರರವರು ಸರ್ಕಾರ ಹಣವೇ ಕೊಟ್ಟಿಲ್ಲ, ಸಚಿವರು ಹಣ ಇದೆ ಎಂದು ಹೇಳುತ್ತಾರೆಂದು ಹೇಳಿದರು. ಈಗ ನಾವು ನಮ್ಮ ಸರ್ಕಾರದ ದಾಖಲೆಗಳ ಪ್ರಕಾರ 27 ಜಿಲ್ಲೆಗಳಲ್ಲಿ ಎಲ್ಲಾ ಸ್ಕೀಂಗಳು ಅನೇಕ ಸ್ಕೀಂಗಳ ಕೆಳಗಡೆ ಪ್ರತಿಯೊಂದು ಜಿಲ್ಲೆಗೂ ಬೆಂಗಳೂರು ರೂರಲ್‌ಗೆ 678 ಲಕ್ಷ ರೂಪಾಯಿ ಹಣ ಬಿಡುಗಡೆ ಮಾಡಿದ್ದೇವೆ. ಖರ್ಚಾಗಿರುವುದು 459.80 ಲಕ್ಷ ರೂ. ಇನ್ನೂ ಉಳಿದಿದೆ. ಅದೇ ರೀತಿ ಬೆಂಗಳೂರು ಅರ್ಬನ್‌ಗೆ 466.9 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. 328.71 ಲಕ್ಷ ರೂಪಾಯಿ ಕರ್ಚಾಗಿದೆ ಅದೇ ರೀತಿ ಕೋಲಾರ ಜಿಲ್ಲೆಗೆ 466 ಲಕ್ಷ ರೂ ಬಿಡುಗಡೆ ಆಗಿದ್ದರೆ 328 ಲಕ್ಷ ರೂ ಖರ್ಚಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ದಯಮಾಡಿ ಅದರ ಪ್ರತಿಯನ್ನು ಕೊಡಿಸಿಬಿಡಿ.

ಅಧ್ಯಕ್ಷರು : ಪ್ರತಿ ಎಲ್ಲಿ ಕೊಡುತ್ತಾರೆ ಅವರ ಹತ್ತಿರ ಇರುವ ಮಾಹಿತಿಯನ್ನು ಅವರು ಹೇಳುತ್ತಿದ್ದಾರೆ.

ಶ್ರೀ ಬಿ. ಸತ್ಯನಾರಾಯಣ : ಒಂದು ನಿಮಿಷ ತಾವು ಕೇಳಬೇಕು, ನನ್ನ ಜಿಲ್ಲೆಯಾದ ತುಮಕೂರು ಜಿಲ್ಲೆಗೆ 823 ಲಕ್ಷ ರೂ ಬಿಡುಗಡೆ ಆಗಿದ್ದರೆ 438 ಲಕ್ಷ ರೂ ಖರ್ಚು ಆಗಿದೆ, ಚಿತ್ರದುರ್ಗ ಜಿಲ್ಲೆಗೆ 532 ಲಕ್ಷ ರೂ ಬಿಡುಗಡೆ ಮಾಡಿದ್ದೇವೆ 452 ಲಕ್ಷ ರೂ ಖರ್ಚಾಗಿದೆ. ಹೀಗಾಗಿ ಒಟ್ಟಾರೆ ಯಾರು ಹೇಳುವುದಾದರೆ, ಎಲ್ಲಾ 27 ಜಿಲ್ಲೆಗಳಿಂದ, 14,61,74 ಲಕ್ಷ ರೂ ಹಣವನ್ನು ಬಿಡುಗಡೆ ಮಾಡಿದ್ದೇವೆ, 9,473.35 ಲಕ್ಷ ರೂ ಹಣ ಖರ್ಚಾಗಿದೆ. ಇನ್ನೂ ಜಿಲ್ಲಾ ಪಂಚಾಯಿತಿಯಲ್ಲಿ 51 ಕೋಟಿ ರೂ ಈ ಒಂದು ಯೋಜನೆಗೆ ಪ್ಲಾನ್ ಅಂಡ್ ನಾನ್ ಪ್ಲಾನ್ ನಲ್ಲಿ ಹಣ ಇದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಸಚಿವರು ಕೋಟಿಗಟ್ಟಲೆ ಹಣದ ಲೆಕ್ಕ ಹೇಳಿದ್ದಾರೆ, ನಾನು ವಾಸ್ತವಿಕತೆಯಾಗಿ ಹೇಳುತ್ತೇನೆ, ಮಾನ್ಯ ಸಚಿವರ ಹಳ್ಳಿಗಳಲ್ಲಿ ಈ ಸ್ಥಿತಿ ಇರಬಹುದು. ನಾನು ಕೇಳುವುದು ಏನೆಂದರೆ.

ಶ್ರೀ ಬಿ. ಸತ್ಯನಾರಾಯಣ : ಮಾನ್ಯ ಅರಗ ಜ್ಞಾನೇಂದ್ರರವರ ಜಿಲ್ಲೆಗೆ ಈ ವರ್ಷಕ್ಕೆ 374.48 ಲಕ್ಷ ರೂ ಬಿಡುಗಡೆ ಆಗಿದ್ದರೆ 272.78 ಲಕ್ಷ ರೂ ಖರ್ಚಾಗಿದೆ.

ಶ್ರೀ ಅರಗ ಜ್ಞಾನೇಂದ್ರ : ಸ್ವಾಮಿ, ಈ ಲೆಕ್ಕ ಕೇಳಿ ಹಳ್ಳಿಗಳಲ್ಲಿ ನಮಗೆ ನಿಮಗೆ ಓಟು ಕೊಡುವುದಿಲ್ಲ. ಈ ಲೆಕ್ಕ ನೀವು ಹೇಳಿಬಿಡುತ್ತೀರಿ, ಮಾನ್ಯ ಸಚಿವರೇ, ಬಹುಶಃ ನನ್ನ ಕ್ಷೇತ್ರ ನಿಮ್ಮ ಕ್ಷೇತ್ರ ಇವು ಯಾವ ಹೊರತೂ ಅಲ್ಲ. ಕುಡಿಯುವ ನೀರು ಎಲ್ಲಾ ಕಡೆ ಕೊಡುತ್ತೇವೆ, ಅಥವಾ ಕೊಟ್ಟಿದ್ದೇವೆ. ನೀವು ಅಲ್ಲ ಹಿಂದಿನ ಸಚಿವರು ಇದೇ ರೀತಿ ಹೇಳಿದ್ದರು. ನಮಗೆ ಏನೂ ತೊಂದರೆಯಿಲ್ಲ ಕುಡಿಯುವ ನೀರಿಗೆ ಎಷ್ಟು ಕೋಟಿ ರೂ. ಬೇಕಾದರೂ ಕೊಡುತ್ತೇವೆ. ಜಿಲ್ಲಾಧಿಕಾರಿಗಳ ಹತ್ತಿರ ದುಡ್ಡು ಇದೆ ಎಂದು ಹೇಳಿದರು. ಜಿಲ್ಲಾಧಿಕಾರಿಗಳ ಹತ್ತಿರ ಹೋದರೆ ನಮ್ಮ ಹತ್ತಿರ ಎಲ್ಲಿದೆ ದುಡ್ಡು ಎಂದು ಹೇಳುತ್ತಾರೆ.

ಅಧ್ಯಕ್ಷರು : ಮಾನ್ಯ ಅರಗಜ್ಞಾನೇಂದ್ರರವರೆ, ಮಾನ್ಯ ಸಚಿವರು ಯಾವ್ಯಾವ ಜಿಲ್ಲೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂಬುದನ್ನು ಮತ್ತು ಇದರಲ್ಲಿ ಎಷ್ಟು ಖರ್ಚಾಗಿದೆ ಮತ್ತು ಇನ್ನು ಎಷ್ಟು ಉಳಿದಿದೆ ಎಂಬ ವಿವರವನ್ನು ಕೊಟ್ಟಿದ್ದಾರೆ, ಆದ್ದರಿಂದ, ಇದರ ಬಗ್ಗೆ ಡಿಸ್‌ಪ್ಯೂಟ್ ಮಾಡತಕ್ಕಂಥದರಲ್ಲಿ ಏನು ಅರ್ಥವಿಲ್ಲ ಆದ್ದರಿಂದ, ಬೇರೆ ಏನಾದರೂ ಸಮಸ್ಯೆ ಇರುವ ಬಗ್ಗೆ ಮಾತ್ರ ಮಾತನಾಡಿ.

ಶ್ರೀ ಅರಗ ಜ್ಞಾನೇಂದ್ರ : ನೀವು ಒಪ್ಪಿಕೊಳ್ಳುವುದಾದರೆ ಸಮ್ಮದೇನೂ ಅಭ್ಯಂತರವಿಲ್ಲ. ನೀವೂ ಕೂಡ ಒಂದು ಕ್ಷೇತ್ರದಿಂದ ಬಂದಿದ್ದೀರಿ.

ಅಧ್ಯಕ್ಷರು : ನಿಮ್ಮದೂ ಕೂಡ ಒಂದು ಕ್ಷೇತ್ರ ಇದೆ. ಹಾಗೆಯೇ ಇಲ್ಲಿರತಕ್ಕಂಥವರೆಲ್ಲಾ ಒಂದೊಂದು ಕ್ಷೇತ್ರದಿಂದ ಬಂದಿದ್ದಾರೆ. ಆದರೆ, ಏನಾಗಿದೆ ಎಂದರೆ, ಅವರು ನೀಡಿರತಕ್ಕಂಥ ಅಂಕಿ-ಅಂಶಗಳ ಬಗ್ಗೆ. at the stage we cannot dipute ಇನ್ನು ಬಹಳಷ್ಟು ಹಣ ಇದೆ ಎಂದು ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ, ನಿಮ್ಮ ಕ್ಷೇತ್ರ ಅಥವಾ ನಿಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಏನಾದರೂ ಸಮಸ್ಯೆಗಳಿದ್ದರೆ ಅವುಗಳನ್ನು ಹೇಳಿ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ಕೇಳುವುದೇನೆಂದರೆ, ತತ್‌ಕ್ಷಣ ಯಾವುದಾದರೊಂದು ಬೋರ್‌ವೆಲ್ ಡ್ರೈ ಆದಾಗ ಅದನ್ನು ಮತ್ತೆ ಕೊರೆಯುವುದಕ್ಕೆ ತಾಲ್ಲೂಕು ಟಾಸ್ಕ್‌ಫೋರ್ಸ್ ಕಮಿಟಿಗೆ ಅಧಿಕಾರವಿದೆಯೆ? ಮತ್ತೆ ಈ ರೀತಿಯಾದ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೋಸ್ಕರ ಸುಮಾರು 25 ರಿಂದ 30 ಲಕ್ಷ ರೂಪಾಯಿಗಳನ್ನು ಒಂದೊಂದು ತಾಲ್ಲೂಕು ಟಾಸ್ಕ್‌ಫೋರ್ಸ್ ಸಮಿತಿಯ ಅಧ್ಯಕ್ಷರ ಕೈಯಲ್ಲಿ ಕೊಟ್ಟಿದ್ದೀರಾ?

ಶ್ರೀ ಬಿ. ಸತ್ಯನಾರಾಯಣ(ಗ್ರಾಮೀಣ ನೀರು ಪೂರೈಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಹೇಳಿದ ಹಾಗೆ, ಜಿಲ್ಲಾ ಪಂಚಾಯತ್‌ಗಳ ವಿವಿಧ ಯೋಜನೆಗಳಿಗೋಸ್ಕರ ಒಟ್ಟು 27 ಜಿಲ್ಲೆಗಳಿಂದ 51 ಕೋಟಿ ರೂಪಾಯಿ ಇಡಲಾಗಿದೆ. ಮತ್ತೆ ಮೊನ್ನೆದಿವಸ ಅಂದರೆ, ದಿನಾಂಕ 24-01-2005ರಂದು 27.60 ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿದೆ. ಅದಲ್ಲದೆ, ಬರ ಎಂದು ಡಿಕ್ಲೇರ್ ಮಾಡಿರುವ ಕಡೆಗೆ ಬರ ಪರಿಹಾರ ನಿಧಿಯಿಂದ 20 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಮತ್ತೆ ಡಿ.ಡಿ.ಪಿ. ಯೋಜನೆಯಲ್ಲಿ 209.96 ಕೋಟಿ ರೂಪಾಯಿಗಳನ್ನು ದಿನಾಂಕ 25-1-2005 ರಂದು ಬಿಡುಗಡೆ ಮಾಡಲಾಗಿದೆ. ಈ ಹಣವನ್ನು ...ನ್ನು ಎರಡು ತಿಂಗಳಲ್ಲಿ ಅಂದರೆ, ಮಾರ್ಚ್ ತಿಂಗಳೊಳಗಾಗಿ ಖರ್ಚು ಮಾಡಬೇಕೆಂದು ಮತ್ತು ಉಪಯೋಗ ಮಾಡಿಕೊಂಡು ಹೊಸದಾಗಿ ಬೋರ್‌ವೆಲ್‌ನ್ನು ಕೊರೆಸುವುದಕ್ಕೆ ಮತ್ತು ಇರತಕ್ಕಂಥ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸುವುದಕ್ಕಾಗಿ ಮತ್ತು ಪೈಪ್‌ಲೈನ್ ಮತ್ತು ಮೋಟರ್ ...ಗಿದುಕೊಳ್ಳಬಹುದೆಂದು ಮತ್ತು ಇನ್ನಿತರ ವ್ಯವಸ್ಥೆಗಳಿಗೆ ಸದರಿ ಹಣವನ್ನು ಉಪಯೋಗ ಮಾಡಬಹುದೆಂದು ಸಂಬಂಧಪಟ್ಟಂಥ ತಾಲ್ಲೂಕು ಟಾಸ್ ಫೋರ್ಸ್ ಕಮಿಟಿಗಳಿಗೆ ಈಗಾಗಲೇ ಡೈರೆಕ್ಷನ್ ಕೊಟ್ಟಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಸಚಿವರು, ಇದಕ್ಕೆ ಸಂಬಂಧಪಟ್ಟಂಥ ಡೀಟೇಲ್ಸ್‌ನ್ನು ನಂತರ ಹೇಳಲಿ. ಈ ಸಂದರ್ಭದಲ್ಲಿ ನಾನು ತಮಗೆ ಹೇಳುವುದೇನೆಂದರೆ, ನನ್ನ ಕ್ಷೇತ್ರದಲ್ಲಿ ಬೋರ್‌ವೆಲ್ ಕೊರೆದು ಸುಮಾರು 6 ತಿಂಗಳಾಗಿದ್ದರೂ ಕೂಡ ಒಂದು ಹ್ಯಾಂಡ್‌ಪಂಪ್‌ನ್ನು ಇದುವರೆಗೂ ಹಾಕಿಲ್ಲ. ಹ್ಯಾಂಡ್‌ಪಂಪ್ ಹಾಕುವುದಕ್ಕೆ ದುಡ್ಡಿಲ್ಲವೆಂದು ಹೇಳುತ್ತಾರೆ. ಇದು ನನ್ನ ಕ್ಷೇತ್ರದಲ್ಲಿರತಕ್ಕಂಥ ಸಮಸ್ಯೆಯಾಗಿದೆ. ತಾವು ಬೇಕಾದರೆ ಯಾರನ್ನಾದರೂ ಕಳುಹಿಸಿ ಇದನ್ನು ವಿಮರ್ಶೆ ಮಾಡಿಸಬಹುದು. ಇವತ್ತಿನ ದಿವಸ ಒಂದು ಹ್ಯಾಂಡ್‌ಪಂಪ್ ಹಾಕುವುದಕ್ಕೆ 5 ಸಾವಿರ ರೂಪಾಯಿ ಬೇಕೆಂದು ಹೇಳುತ್ತಿದ್ದಾರೆ. ಆ ಬೋರ್‌ವೆಲ್‌ಗೆ ಮೋಟಾರ್ ಹಾಕಿಸಿ ಎಂದು ನಾನು ಕೇಳಿಲ್ಲ.

ಈಗಾಗಲೇ ಕೊರೆದಿರತಕ್ಕಂಥ ಒಂದು ಬೋರ್‌ವೆಲ್‌ಗೆ ಹ್ಯಾಂಡ್ ಪಂಪ್ ಹಾಕಿಸುವುದಕ್ಕೂ ದುಡ್ಡಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಮಾನ್ಯ ಅರಗಜ್ಞಾನೇಂದ್ರರವರೆ, ಮಾನ್ಯ ಸಚಿವರು ನೀಡಿರತಕ್ಕಂಥ ಅಂಕಿ–ಅಂಶಗಳ ಪ್ರಕಾರ ಶಿವಮೊಗ್ಗ ಜಿಲ್ಲೆಯಲ್ಲಿ ಇನ್ನೂ 120 ಲಕ್ಷ ರೂಪಾಯಿ ಉಳಿದಿದೆ ಎಂದು ಹೇಳಿದ್ದಾರೆ. ಆದರೆ, ಅಲ್ಲಿ ಕೇವಲ 5 ಸಾವಿರ ರೂಪಾಯಿ ಇಲ್ಲವೆಂದರೆ, ಸತ್ಯ ಯಾವುದು, ಅಸತ್ಯ ಯಾವುದೆಂದು ಗೊತ್ತಾಗುತ್ತಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಿಮ್ಮ ಪೀಠ ತುಂಬಾ ದೊಡ್ಡದು. ಆದ್ದರಿಂದ ಈ ಸದನದಿಂದ ಯಾರನ್ನಾದರೂ ನೇಮಕ ಮಾಡಿ ಇದನ್ನು ಪರಿಶೀಲನೆ ಮಾಡಿಸಿ. ಅಥವಾ ನಿಮ್ಮ ಛೇಂಬರ್‌ಗೆ ಬಂದು ಅಲ್ಲಿನ ದೂರವಾಣಿ ನಂಬರ್ ಕೊಡುತ್ತೇನೆ. ಅಲ್ಲಿ ಎಷ್ಟು ಬೋರ್‌ವೆಲ್ ಕೊರೆದಿದ್ದು ಇನ್ನೂ ಎಷ್ಟು ಬೋರ್‌ವೆಲ್‌ಗೆ ಹ್ಯಾಂಡ್‌ಪಂಪ್ ಹಾಗಿಲ್ಲ ಎಂಬುದರ ಬಗ್ಗೆ ತಾವೇ ದೂರವಾಣಿ ಮಾಡಿ ಕೇಳಬಹುದು. ಮತ್ತೆ ಶಿವಮೊಗ್ಗ ಜಿಲ್ಲಾಪಂಚಾಯತ್‌ನ ಎಗ್ಸಿಕ್ಯೂಟಿವ್ ಇಂಜಿನಿಯರ್ ಆಫೀಸ್ ಸ್ಟೋರ್‌ನಿಂದ ತೀರ್ಥಹಳ್ಳಿಗೆ ಸಾಗಾಣಿಕೆ ಮಾಡುವುದಕ್ಕೂ ನಮ್ಮ ಹತ್ತಿರ ದುಡ್ಡಿಲ್ಲವೆಂದು ಹೇಳುತ್ತಿದ್ದಾರೆ. ಮತ್ತೆ ಅವರ ಜೀಪ್‌ಗೆ ಡೀಸಲ್ ಹಾಕಿಸುವುದಕ್ಕೂ ಅವರ ಹತ್ತಿರ ಹಣವಿಲ್ಲ. ಹಾಗೆಯೇ ಅವರ ಜೀಪನ್ನು ರಿಪೇರಿ ಮಾಡಿಸಿಕೊಳ್ಳುವುದಕ್ಕೂ ಜಿಲ್ಲಾಪಂಚಾಯತ್ ಎಲ್ಲಿ ಹತ್ತಿರ 5 ಸಾವಿರ ರೂ ಹಣ ಇಲ್ಲ. ಹಾಗೆಯೇ ದೂರವಾಣಿಯ ಬಿಲ್ ಕಟ್ಟದೇ ಇರುವುದರಿಂದ ದೂರವಾಣಿ ಸಂಪರ್ಕವನ್ನು ಕಡಿತಗೊಳಿಸಲಾಗಿತ್ತು. ಇದು ನಮ್ಮ ಮರ್ಯಾದೆ ಪ್ರಶ್ನೆ ಎಂದು ಅಲ್ಲಿರತಕ್ಕಂಥ ಗುತ್ತಿಗೆದಾರರಿಂದ ಇದಕ್ಕೆ ಹಣ ಕಟ್ಟಿಸಿ ಮತ್ತೆ ರೀ ಕನೆಕ್ಟ್ ಮಾಡಿಸಿದ್ದೇವೆ. ಇಂಥ ಪರಿಸ್ಥಿತಿಯಲ್ಲಿಯೂ ಕೂಡ ಕೋಟಿಗಟ್ಟಲೆ ಹಣದ ಬಗ್ಗೆ ಇವರು ಲೆಕ್ಕ ಹೇಳುತ್ತಿದ್ದಾರೆ. ಈಗಿನ ವಾಸ್ತವಿಕ ಚಿತ್ರಣವನ್ನು ತಾವು ಹೇಳಿ. ಸರ್ಕಾರವನ್ನು ನೀವು ರಕ್ಷಣೆ ಮಾಡಿದ ಕೂಡಲೇ ಕುಬೇರ ಕೂಡ ಪೂರ್ಣ ಹಣವನ್ನು ತಮಗೆ ತಂದು ಕೊಡುವುದಿಲ್ಲ. ವಾಸ್ತವ ಪರಿಸ್ಥಿತಿ ನಮಗೂ ನಿಮಗೂ ಕೂಡ ಗೊತ್ತಿದೆ. ಮಾಧ್ಯಮದವರು ಇಲ್ಲಿಯೇ ಇದ್ದಾರೆ. ನಿಮಗೇನೂ ತೊಂದರೆಯಿಲ್ಲವೆಂದು ತಾವು ಹೇಳತಕ್ಕಂಥದ್ದನ್ನು ನಾಳೆ ದಿವಸ ಪತ್ರಿಕೆಗಳಲ್ಲಿ ಬರೆಯುತ್ತಾರೆ. ಆದರೆ, ನಾವು ನಾಳೆ ದಿವಸ ನಮ್ಮ ಕ್ಷೇತ್ರಕ್ಕೆ ಹೋದಾಗಲೇ ನಿಮ್ಮ ಪರಿಸ್ಥಿತಿ ಗೊತ್ತಾಗುವುದು.

ಅಧ್ಯಕ್ಷರು : ಮಾನ್ಯ ಸಚಿವರು ಏನು ಅಂಕಿ–ಅಂಶಗಳನ್ನು ಕೊಟ್ಟಿದ್ದಾರೆ. ಅದನ್ನು ಡಿಸ್‌ಪ್ಯೂಟ್ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಆ ರೀತಿಯಾಗಿ ಈ ಸಭೆಯಲ್ಲಿ ಹೇಳಿದರೆ ಏನಾಗುತ್ತದೆ?

ಶ್ರೀ ಅರಗ ಜ್ಞಾನೇಂದ್ರ : ತಾವು ಹೇಳತಕ್ಕಂಥದು ಸರಿ. ಗುತ್ತಿಗೆದಾರರಿಗೆ ಎಷ್ಟು ವರ್ಷಗಳಿಂದ ಬಾಕಿ ಹಣ ಕೊಡಬೇಕಾಗಿದೆ ಎಂಬುದನ್ನು ತಾವು ಹೇಳಬೇಕು. ಮತ್ತೆ ಈ ವರ್ಷ ಕುಡಿಯುವ ನೀರಿಗೋಸ್ಕರ ಎಷ್ಟು ಖರ್ಚು ಮಾಡುವುದಕ್ಕೆ ಕೊಟ್ಟಿದ್ದೀರಿ? ಸುಮಾರು ಮೂರ್‍ನಾಲ್ಕು ವರ್ಷಗಳಿಂದ ಹಣ ಕೊಟ್ಟಿಲ್ಲ. ಆಗಾಗ ಬಂದಂಥ ಹಣವನ್ನು ಬಿಡುಗಡೆ ಮಾಡಿರತಕ್ಕಂಥದ್ದನ್ನು ಈ ರೀತಿಯಾಗಿ ಲೆಕ್ಕ ಕೊಡುತ್ತಾ ಹೋದರೆ ನಾಳೆ ದಿವಸ ನಾವು ಮತ್ತು ನೀವು ಕ್ಷೇತ್ರಕ್ಕೆ ಹೋಗುವುದಕ್ಕೆ ಕಷ್ಟವಾಗುತ್ತದೆ. ನಾನು ಮೊನ್ನೆ ದಿವಸ ರೆವಿನ್ಯೂ ಕಮಿಷನರ್ ಹತ್ತಿರ ಹೋಗಿ ಮಲೆನಾಡು ಪ್ರದೇಶವನ್ನು ಬರಗಾಲ ಪ್ರದೇಶ ಎಂದು ದಯವಿಟ್ಟು ಡಿಕ್ಲೇರ್ ಮಾಡಬೇಕು ಏಕೆಂದರೆ, ಇವತ್ತಿನ ಪರಿಸ್ಥಿತಿಯಲ್ಲಿ

ಅಲ್ಲಿ ಅಂತರ್ಜಲ ಮಟ್ಟ ತುಂಬಾ ಕೆಳಮಟ್ಟಕ್ಕೆ ಹೋಗಿದೆ. ಮತ್ತು ತೀರ್ಥಹಳ್ಳಿಗೆ ಕುಡಿಯುವ ನೀರಿಲ್ಲ ಹಾಗೂ ಅಲ್ಲಿರತಕ್ಕಂಥ ಜನರಿಗೆ ಕೆಲಸವಿಲ್ಲ ಆದ್ದರಿಂದ, ಇದನ್ನು ಬರಗಾಲ ಪ್ರದೇಶ ಎಂದು ಡಿಕ್ಲೇರ್ ಮಾಡಿ ಎಂದು ಕೇಳಿದ್ದಕ್ಕೆ, ರೆವಿನ್ಯೂ ಕಮೀಷನರ್‌ರವರು ಏನು ಹೇಳಿದರೆಂದರೆ, ನಾನು ಅಲ್ಲಿ ಡಿ.ಸಿ. ಆಗಿ ಕೆಲಸ ಮಾಡಿದ್ದೇನೆ. ತಾವೇಕೆ ಈ ರೀತಿ ಹೇಳುತ್ತಿದ್ದೀರಿ. ಇವತ್ತಿನ ದಿವಸ ಮಲೆನಾಡು ಪ್ರದೇಶ ಸೆಕೆಂಡ್ ಚಿರಾಪುಂಜಿ ಆಗಿದ್ದು, ಆಗುಂಬೆಯಲ್ಲಿ ಮಳೆಯಾಗುತ್ತಿದೆ ಎಂದು ಹೇಳಿದರು. ಸುಮಾರು 10 ರಿಂದ 25 ದಿವಸ ಮಳೆಯಾಗಿದ್ದರೂ ಕೂಡ ಅದು ಪೂರ್ಣವಾಗಿ ಡ್ರೈ ಆಗಿ ಹೋಗುತ್ತದೆ. ಮತ್ತೆ ಆಗುಂಬೆಯಲ್ಲಿ ಮಳೆಯಾದರೆ ನನ್ನ ತಾಲ್ಲೂಕಿನ ಮಂಡಗದ್ದೆ ಮತ್ತು ಅಗ್ರಹಾರ ಹೋಬಳಿ ಭಾಗದಲೆಲ್ಲಾ ಇವತ್ತಿನ ದಿವಸ ಸಂಪೂರ್ಣವಾಗಿ ಡ್ರೈ ಆಗಿದೆ. ಇದನ್ನು ಹೇಳುವುದಕ್ಕೆ ನಮಗೆ ಬೇಜಾರಾಗುತ್ತದೆ. ನಮಗೆ ದಿನನಿತ್ಯ ಬರುವ ದೂರವಾಣಿ ಕರೆಗಳಿಂದ ನಾವು ರಾತ್ರಿ ಸಮಯದಲ್ಲಿ ಮಲಗುವುದಕ್ಕೆ ಆಗುತ್ತಿಲ್ಲ. ಹೆಣ್ಣುಮಕ್ಕಳು ನಮ್ಮ ಮನೆ ಎದುರಿಗೆ ಕೂಡ ಹಿಡಿದುಕೊಂಡು ಕುಳಿತುಕೊಂಡು ನಿಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ್ದಕ್ಕೆ ಇವತ್ತಿನ ದಿವಸ ನಮಗೆ ಕುಡಿಯುವ ನೀರಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ದಯವಿಟ್ಟು ವಿನಂತಿ ಮಾಡಿಕೊಳ್ಳುವುದೇನೆಂದರೆ, ಕುಡಿಯುವ ನೀರಿಗೆ ಏನಾದರೂ ಸ್ವಲ್ಪ ಹಣ ಕೊಟ್ಟು ಇವತ್ತಿನ ದಿವಸ ಬೋರ್‌ವೆಲ್ ಫೇಲ್ ಆಗಿದ್ದರೆ ಮತ್ತು ಸಿಲ್ಟ್ ಆಫ್ ಆಗಿದ್ದರೆ ಅವುಗಳನ್ನು ಡೀ ಸಿಲ್ಟಿಂಗ್ ಮಾಡಲಿಕ್ಕೆ ಕ್ಲೀನಿಂಗ್ ರಿಗ್‌ಗಳನ್ನು ಕಳುಹಿಸಿ. ಆದರೆ, ನಿಮ್ಮ ಸರ್ಕಾರದಲ್ಲಿ ಕ್ಲೀನ್ ಮಾಡತಕ್ಕಂಥ ರಿಗ್‌ಗಳು ಸರಿಯಾಗಿಲ್ಲ. ಆದ್ದರಿಂದ ಖಾಸಗಿ ಗುತ್ತಿಗೆದಾರರ ಕಡೆಯಿಂದ ಕ್ಲೀನಿಂಗ್ ರಿಗ್‌ಗಳನ್ನು ಪಡೆದುಕೊಂಡು ಕ್ಲೀನ್ ಮಾಡುವುದಕ್ಕೆ ತಾವು ದಯವಿಟ್ಟು ಹೇಳಬೇಕು. ಈ ಕೆಲಸ ದಯವಿಟ್ಟು ಆಗಲೇ ಬೇಕಾಗಿದೆ. ಹಾಗೆಯೇ ಜಿಲ್ಲಾಪರಿಷತ್‌ನ ಇಂಜಿನಿಯರ್ ವಿಭಾಗದಲ್ಲಿರತಕ್ಕಂಥ ಜೀಪ್‌ನ್ನು ನಿರ್ವಹಣೆಗೆ ಹಣ ಕೊಡಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲಿ ಒಳ್ಳೆಯ ಕೆಲಸವಾಗಿದೆ ಎಂದು ಸಚಿವರಾಗಿರತಕ್ಕಂಥ ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳಿದರು. ಬೋರ್‌ವೆಲ್ ರಿಪೇರಿಗೋಸ್ಕರ ಅಥವಾ ಒಂದು ವಾಷರ್ ಹಾಕುವುದಕ್ಕೋಸ್ಕರ ಜನರು ಶಾಸಕರ ಹತ್ತಿರ ಬಂದು ಅರ್ಜಿ ಕೊಡಬಾರದು. ಇದು ಭೂಷಣವೂ ಕೂಡ ಅಲ್ಲ. ನಾವು ಮಾಡುವುದಕ್ಕೆ ದೊಡ್ಡ ದೊಡ್ಡ ಕೆಲಸಗಳಿರುತ್ತವೆ. ಬೋರ್‌ವೆಲ್ ರಿಪೇರಿ ಮತ್ತು ಕುಡಿಯುವ ನೀರಿನ ನಿರ್ವಹಣೆ ಮಾಡುವುದಕ್ಕೆ ಪಂಚಾಯತ್‌ಗಳನ್ನು ಶಕ್ತಿಶಾಲಿ ಮಾಡುವುದಕ್ಕೆ ಅವರಿಗೆ ಹೆಚ್ಚು ಹಣವನ್ನು ಕೊಡಬೇಕು. ಹಾಗೆಯೇ ಅವುಗಳನ್ನು ಕ್ರಿಯಾಶೀಲ ಮಾಡುವುದಕ್ಕೆ ಅಲ್ಲಿಗೆ ಸರಿಯಾದಂಥ ಕಾರ್ಯದರ್ಶಿ ಅನ್ನು ಕೊಡಬೇಕು. ಇಲ್ಲದಿದ್ದರೆ, ಇದು ಸರಿಹೋಗುವುದಿಲ್ಲ. ನಮ್ಮಲ್ಲಿ ಮೂರ್ನಾಲ್ಕು ಇನ್‌ಎಫಿಶಿಯೆಂಟ್ ಕಾರ್ಯದರ್ಶಿಗಳಿದ್ದಾರೆ. ಇವರುಗಳು ಬೆಳಿಗ್ಗೆಯಿಂದ ಸಂಜೆಯವರೆಗೆ ಕುಡಿದುಕೊಂಡು ಬಿ.ಡಿ.ಓ. ಕಛೇರಿಗಳ ಹತ್ತಿರ ಹಾವು ಹರಿದಾಡುವ ರೀತಿಯಲ್ಲಿ ಹರಿದಾಡುತ್ತಿರುತ್ತಾರೆ. ಇಂಥವರನ್ನು ಸಸ್ಪೆಂಡ್ ಅಥವಾ ಡಿಸ್‌ಮಿಸ್ ಮಾಡತಕ್ಕಂತದ್ದು ಸಹಜವಾಗಿದೆ. ಸ್ವಲ್ಪ ಎಫಿಷಿಯೆಂಟ್ ಕೆಲಸ ಮಾಡತಕ್ಕಂಥವರನ್ನು ಕೊಟ್ಟರೆ ಸರ್ಕಾರಕ್ಕೂ ಕೂಡ ಗೌರವ ಇರುತ್ತದೆ. ಇವತ್ತಿನ ದಿವಸ ಪಂಚಾಯತ್‌ನಲ್ಲಿ ಒಂದು ಕೆಲಸ ಆಗದೇ ಇದ್ದರೆ, ಸರ್ಕಾರ ಮತ್ತು ಶಾಸಕರಿಗೆ ಬಯ್ಯುತ್ತಾರೆ. ಯಾವುದಾದರೊಂದು ರಸ್ತೆಯಲ್ಲಿ ಗುಂಡಿ ಬಿದ್ದಿದ್ದರೂ ಕೂಡ ನಮ್ಮನ್ನು ಮತ್ತು ನಿಮ್ಮನ್ನು ಬಯ್ಯುತ್ತಾರೆ. ಕಟ್ಟ ಕಡೆಯ ಮನುಷ್ಯನಿಗೆ ಹೋಗಿ ತಲುಪುವಂಥದ್ದು ಇದು. ಇವತ್ತಿನ ದಿವಸ ವಿಲೇಜ್ ಅಕೌಂಟೆಂಟ್ ಮತ್ತು ಪಂಚಾಯತ್ ಕಾರ್ಯದರ್ಶಿಗಳಿಬ್ಬರು

ಸರಿಯಾಗಿರುಬೇಕಾಗುತ್ತದೆ. ನಮ್ಮ ಜಿಲ್ಲೆಯ ಜಿಲ್ಲಾ ಪಂಚಾಯತ್‌ಗೆ ಮಾನ್ಯ ನಜೀರ್ ಸಾಬ್‌ರವರು 1986–1987ರಲ್ಲಿ ಬಂದಾಗ, ನಮ್ಮ ಕೆಲಸವನ್ನು ನಾವೇ ಮಾಡಿಕೊಳ್ಳಬೇಕೆಂಬುದರ ಬಗ್ಗೆ ನಮಗೆ ಕಲ್ಪನೆ ಕೊಟ್ಟರು. ಆ ಸಂದರ್ಭದಲ್ಲಿ ನಾನು ಜಿಲ್ಲಾ ಪಂಚಾಯತ್ ಸದಸ್ಯನಾಗಿದ್ದೆನು. ಆ ಸಂದರ್ಭದಲ್ಲಿ ಜಿಲ್ಲೆಯ ಎಲ್ಲಾ ಪ್ರಧಾನವನ್ನು ಕರೆದು ಕೂರಿಸಿಕೊಂಡು ಹೇಳಿದ್ದರು. ಆಗ ಒಂದು ಪಂಚಾಯತ್‌ಗೆ ಒಂದು ವರ್ಷದ ಬೋರ್‌ವೆಲ್ ಮೇಂಟೇನೆನ್ಸ್‌ಗೆಂದು 200 ರೂಪಾಯಿ ಕೊಡುತ್ತಿದ್ದರು.ಅಗ ನಮ್ಮಲ್ಲಿರತಕ್ಕಂಥ ಒಟ್ಟು ಬೋರ್‌ವೆಲ್ ಸೇರಿಸಿ ಒಂದೊಂದು ಬೋರ್‌ವೆಲ್‌ಗೆ 200 ರೂಪಾಯಿಗಳಂತೆ ಪೂರ್ಣ ಹಣವನ್ನು ಜಮಾ ಮಾಡಿದ್ದರು. ಆಗ ನಾವು ಒಂದೊಂದು ಪಂಚಾಯತ್‌ಗೆ ಇಬ್ಬರು ಹುಡುಗರನ್ನು ಆಯ್ಕೆ ಮಾಡಿಕೊಂಡು ಅವರಿಗೆ ಬೋರ್‌ವೆಲ್ ರಿಪೇರಿಯ ತರಬೇತಿಯನ್ನು ಕೊಟ್ಟಿದ್ದೆವು. ಹಾಗೆಯೇ 2.5 ಸಾವಿರ ರೂಪಾಯಿ ಕೊಟ್ಟು ಟೂಲ್ ಕಿಟ್‌ನ್ನು ಪಂಚಾಯತಿ ವತಿಯಿಂದ ಕೊಡಿಸಲಾಗಿತ್ತು. ಸುಮಾರು 10 ರಿಂದ 20 ಕಿ.ಮೀ. ದೂರದಲ್ಲಿ ಯಾವುದಾದರೊಂದು ಬೋರ್‌ವೆಲ್ ಕಟ್ಟಿದ್ದರೂ ಕೂಡ 24 ಗಂಟೆ ಅವಧಿಯೊಳಗೆ ಅಲ್ಲಿಗೆ ಹೋಗಿ ಬೋರ್‌ವೆಲ್ ರಿಪೇರಿ ಕೆಲಸವನ್ನು ನನ್ನ ತಾಲ್ಲೂಕಿನಲ್ಲಿ ಮಾಡಲಾಗುತ್ತಿತ್ತು. ಮೊದಲು ಬೋರ್‌ವೆಲ್ ಕೆಟ್ಟು ಹೋದಾಗ ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ವಿಭಾಗಕ್ಕೆ ತಿಳಿಸಬೇಕಾಗಿತ್ತು. ಅವರು ಸೀನಿಯಾರಿಟಿ ಲಿಸ್ಟ್ ಪ್ರಕಾರ ಕೆಲಸವನ್ನು ಮಾಡುತ್ತಿದ್ದರು. ಮತ್ತೆ ಆಗ ಒಂದು ವ್ಯಾನ್. ಜ್ಯೂನಿಯರ್ ಇಂಜಿನಿಯರ್ ಮತ್ತು ಒಬ್ಬ ಮೆಕಾನಿಕ್ ಹೋಗಿ ರಿಪೇರಿ ಮಾಡಿಸುತ್ತಿದ್ದರು. ಆದರೆ, ಈಗ ಆ ರೀತಿ ಇಲ್ಲ. ನಮ್ಮ ಪಂಚಾಯತ್‌ನಲ್ಲಿ ಫೋನ್ ಇದೆ. ಯಾವ ಊರಿನಲ್ಲಿ ಬೋರ್‌ವೆಲ್ ಕೆಟ್ಟಿದೆ ಎಂದು. ಆ ಊರಿನವರು ಇಲ್ಲಿಗೆ ದೂರವಾಣಿ ಮಾಡಿದರೆ ಸಾಕು. ಪಂಚಾಯತ್‌ನವರು ಬೋರ್‌ವೆಲ್‌ಗೆ ಬೇಕಾಗಿರುತಕ್ಕಂಥ ಸ್ಪೇರ್ಸ್ ಪಾರ್ಟ್ಸ್‌ನ್ನು ತಮ್ಮ ಹತ್ತಿರ ಇಟ್ಟುಕೊಂಡಿರುತ್ತಾರೆ. ಇವರು ಒಂದು ಸಲ ಹೋಗಿ ಬೋರ್‌ವೆಲ್‌ನ್ನು ರಿಪೇರಿ ಮಾಡಿ ಬಂದರೆ 50 ರೂಪಾಯಿ ಕೊಡುತ್ತಾರೆ. ಈಗ ಇದು 100 ರೂಪಾಯಿ ಆಗಿದೆ. ಒಟ್ಟಿನಲ್ಲಿ ಹೇಳುವುದಾದರೆ 24 ಗಂಟೆಯೊಳಗೆ ಬೋರ್‌ವೆಲ್ ರಿಪೇರಿ ಕೆಲಸ ನಮ್ಮ ಕಡೆ ಆಗುತ್ತಿದೆ.

ಅಧ್ಯಕ್ಷರು : ರಿಪೇರಿ ಕೆಲಸವನ್ನು ಯಾರು ಮಾಡುತ್ತಾರೆ?

ಶ್ರೀ ಅರಗಜ್ಞಾನೇಂದ್ರ : ನಮ್ಮ ಪಂಚಾಯತ್‌ನವರೇ ಮಾಡಿಸುತ್ತಾರೆ.

ಅಧ್ಯಕ್ಷರು : ಪಂಚಾಯತ್‌ನವರು ಕುಡಿಯುವ ನೀರಿನ ನಿರ್ವಹಣೆಯನ್ನು ಮಾಡಿದರೆ ಒಳ್ಳೆಯದೆಂದು ನಿಮ್ಮ ಅಭಿಪ್ರಾಯವೇ?

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನನ್ನ ಅನುಭವದಲ್ಲಿ ಹೇಳುವುದಾದರೆ ಈ ಸಿಸ್ಟಮ್ ಚೆನ್ನಾಗಿದೆ. ಆದರೆ, ಅವರಿಗೆ ಹೆಚ್ಚು ಹಣ ಕೊಡಬೇಕಾಗುತ್ತದೆ. ಆದರೆ, ಇದು ಏನಾಗಿದೆ ಎಂದರೆ, ಅಜ್ಜಿ ನೂತಿದ್ದೆಲ್ಲಾ ಮೊಮ್ಮಗನ ಉಡುದಾರಕ್ಕೆ ಸರಿಹೋಗುತ್ತದೆ ಎನ್ನುವ ರೀತಿಯಲ್ಲಿ, ಇವತ್ತಿನ ದಿವಸ ಪಂಚಾಯತ್‌ಗಳಿಗೆ ಕೊಡತಕ್ಕಂಥ ಹಣ ಕೇವಲ ಕರೆಂಟ್ ಚಾರ್ಜಸ್‌ಗೆ ಸರಿಯಾಗುತ್ತಿದೆ. ಈ ರೀತಿಯಾಗಬಾರದು. ಎಷ್ಟು ಕರೆಂಟು ಚಾರ್ಜ್ ಬರುತ್ತದೆಂಬುದನ್ನು ನೋಡಿಕೊಂಡು ಅವರಿಗೆ ಹಣ ಕೊಡಬೇಕಾಗುತ್ತದೆ. ಹಾಗೆಯೇ ಇವತ್ತಿನ ದಿವಸ ಪಂಚಾಯತ್‌ಗಳಿಗೆ ಒಳ್ಳೆಯ ಕಾರ್ಯದರ್ಶಿಯವರನ್ನು ನೇಮಕ ಮಾಡತಕ್ಕಂಥ ಕಲ್ಪನೆ ಆಗಬೇಕು. ಮತ್ತೆ ಮೆಕಾನಿಕಲ್ ಒಬ್ಬರನ್ನು ನೇಮಕ ಮಾಡಬೇಕು. ಇವತ್ತಿನದಿವಸ ಬೋರ್‌ವೆಲ್ ರಿಪೇರಿ ಮಾಡುವುದಕ್ಕೆ ಐ.ಟಿ.ಐ. ಅಥವಾ ಇಂಜಿನಿಯರ್ ಓದಿರತಕ್ಕಂಥವರು ಬೇಕಾಗಿಲ್ಲ. ಬೋರ್‌ವೆಲ್ ರಿಪೇರಿ ಮಾಡುವಾಗ

ಊರಿನ ಜನರು ಬಂದು ಪೈಪ್‌ನ್ನು ಮೇಲಕ್ಕೆ ಎತ್ತಿ ಕೊಡುತ್ತಾರೆ. ವಾಷರ್ ಅಥವ ಚೈನ್ ಅಥವಾ ಹ್ಯಾಂಡಲ್ ಹೋಗಿದ್ದರೆ ಅವುಗಳನ್ನು ಬದಲಾವಣೆ ಮಾಡುತ್ತಾರೆ ಮತ್ತೆ ಪೈಪ್‌ಗಳನ್ನೂ ಕೂಡ ಬದಲಾವಣೆ ಮಾಡುತ್ತಾರೆ. ಒಟ್ಟಿನಲ್ಲಿ ನಮ್ಮಲ್ಲಿ ಬಹಳ ಚೆನ್ನಾಗಿ ಕೆಲಸ ನಡೆದುಕೊಂಡು ಹೋಗುತ್ತಿದೆ. ಆದರೆ, ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ. ಒಂದು ಬೋರ್‌ವೆಲ್ ನಿರ್ವಹಣೆಗೆಂದು ಒಂದು ವರ್ಷಕ್ಕೆ 400 ಅಥವಾ 450 ರೂಪಾಯಿ ಕೊಡಬೇಕೆಂದು ಇದೆ. ಆದರೆ ನಮಗೆ 200 ರೂಪಾಯಿ ಕೂಡ ಬಿಡುಗಡೆ ಮಾಡುತ್ತಿಲ್ಲ. ಬೋರ್‌ವೆಲ್ ರಿಪೇರಿ ಮಾಡುವುದಕ್ಕೆ ಇವತ್ತಿನ ದಿವಸ ಪಂಚಾಯತ್‌ಗಳಲ್ಲಿ ಹಣವಿಲ್ಲ. ಆದ್ದರಿಂದ ಹೆಚ್ಚಿನ ಹಣ ಕೊಡಬೇಕು. ದಯವಿಟ್ಟು ಈ ಕೆಲಸವನ್ನು ತಾವು ಮಾಡಿದರೆ ನಮಗೂ ಮತ್ತು ನಿಮಗೂ ಕೂಡ ತಲೆನೋವು ಕಡಿಮೆಯಾಗುತ್ತದೆ. ಕುಡಿಯುವ ನೀರಿನ ನಿರ್ವಹಣೆಯನ್ನು ಪಂಚಾಯತ್‌ಗಳು ಮಾಡಿಕೊಂಡು ಹೋಗುತ್ತವೆ. ಸಣ್ಣ ಸಣ್ಣ ಕುಡಿಯುವ ನೀರಿನ ವಿಚಾರದಲ್ಲಿ ನಮಗೆ ಹೇಳತಕ್ಕಂಥದ್ದು ಮತ್ತು ನಮ್ಮನ್ನು ಅಡ್ಡ ಹಾಕತಕ್ಕಂಥದ್ದು ಸರಿಯಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು : ನೀವು ಈಗಾಗಲೇ 25 ನಿಮಿಷ ಸಮಯವನ್ನು ತೆಗೆದುಕೊಂಡಿರುತ್ತೀರಿ. ಈಗ ಇನ್ನು ಬಹಳ ಜನ ಮಾತನಾಡಬೇಕಾಗಿದೆ, ಇವತ್ತು ಇದು ಯಾವುದೇ ಕಾರಣಕ್ಕು ಮುಗಿಯಬೇಕು.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಎಲೆಕ್ಟ್ರಿಸಿಟಿ ಬಗ್ಗೆ ಈಗಾಗಲೇ ಎಲ್ಲರೂ ಹೇಳಿದ್ದಾರೆ, ನಾನು ಅದನ್ನು ಚರ್ವಿತ ಚರ್ಣ ಮಾಡಲು ಹೋಗುವುದಿಲ್ಲ. ಕುಡಿಯುವ ನೀರಿಗೆ ಎಲೆಕ್ಟ್ರಿಸಿಟಿಯನ್ನು ಚೆನ್ನಾಗಿ ಒದಗಿಸಲಿಕ್ಕೆ ಮಾಡಿ, ಕುಡಿಯುವ ನೀರಿನ ಯೋಜನೆ ಎಲ್ಲೆಲ್ಲಿ ಇವೆ ಅಲ್ಲಿ ಶೆಡ್‌ಡೌನ್ ಮಾಡದೆ ಅದೆಲ್ಲಕ್ಕೂ ಒಂದು ವ್ಯವಸ್ಥೆಯ್ನನು ಮಾಡಿದರೆ ಇದೆಲ್ಲವನ್ನೂ ಸ್ವಲ್ಪ ನೀಗಿಸುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಸ್ವಜಲಧಾರ ಯೋಜನೆ ಇದಕ್ಕೆ ಈಗಾಗಲೇ ಬಹಳ ಜನ ಹಣವನ್ನು ಕಟ್ಟಿ ಬಿಟ್ಟಿದ್ದಾರೆ ಅದನ್ನು ಕೇಂದ್ರ ಸರ್ಕಾರದವರು ಸರ್ಕಾರ ಬದಲಾವಣೆಯಾಯಿತು ಎಂದು ಹೇಳಿ ಅವರು ಬದಲಾವಣೆ ಮಾಡಿಕೊಂಡಿದ್ದಾರೋ ಏನೋ ಗೊತ್ತಿಲ್ಲ, ಅದು ಅದನ್ನು ನಾವು ಮಾಡಿದರೂ ಆ ಸರ್ಕಾರಕ್ಕೆ ಕ್ರೆಡಿಟ್ ಹೋಗುತ್ತದೆ, ಏಕೆಂದರೆ ಅದನ್ನು ಮಾಡಿದ್ದು ಮಾನ್ಯ ವಾಜಪೇಯಿಯವರ ಸರ್ಕಾರ, ಬಹಳ ಒಳ್ಳೆಯ ಯೋಜನೆ 10 ಪರ್ಸೆಂಟ್ ಹಣ ಜನರು ಕಟ್ಟಿದರೆ 90 ಪರ್ಸೆಂಟೆ ಸರ್ಕಾರ ಕೊಡುವುದು ಇದರಲ್ಲಿ ಜನರ ಸಹಭಾಗಿತ್ವ ಇರಬೇಕೆಂದು ಹೇಳಿ ಮಾಡಿದ್ದರು. ಆ ಕಾರಣಕ್ಕಾಗಿ ಅದನ್ನು ಸ್ಥಗಿತಮಾಡಿದ್ದಾರೋ ಏನೋ ಗೊತ್ತಿಲ್ಲ. ನಾನು ಹೇಳುತ್ತೇನೆ, ಇದು ಅತ್ಯಂತ ಒಳ್ಳೆಯ ಯೋಜನೆ, ಇದನ್ನು ರಾಜ್ಯ ಸರ್ಕಾರ ಮುಂದಿನ ಬಜೆಟ್‌ನಲ್ಲಿಯಾದರೂ ಇಟ್ಟುಕೊಂಡು ಸ್ವಜಲಧಾರ ಯೋಜನೆಗೆ ಹಣವನ್ನು ಕೊಡಿ, ತುಂಬಾ ಒಳ್ಳೆಯದಾಗುತ್ತದೆ. ಜನರ ಸಹಭಾಗಿತ್ವದಲ್ಲಿ ಊರುಗಳಲ್ಲಿ ಮಾಡಿ ಅವನದ್ದೇ ಒಂದು ಸೊಸೈಟಿಯನ್ನು ಮಾಡಿಕೊಂಡು ಅವರು ಮೇನ್‌ಟೇನ್ ಮಾಡಿಕೊಂಡು ಹೋಗುತ್ತಾರೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಿರುನೀರು ಯೋಜನೆಗೆ 50 ಸಾವಿರ ರೂ.ಗಳನ್ನು ಕಟ್ಟಿ ಇದನ್ನು ಓವ್ನೆಟಿಯಲ್ಲಿ ತೆಗೆದುಕೊಳ್ಳಿ ಎಂದರೆ ಇದೆಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ವಿದ್ಯುತ್ ಇಲಾಖೆ ಬೇರೆ, ನಿಮ್ಮದು ಬೇರೆ ಸರ್ಕಾರವಲ್ಲ. ಒಂದೆ ಸರ್ಕಾರದ ಎರಡು ಇಲಾಖೆಗಳು. ದಯವಿಟ್ಟು ಇದರ ಬಗ್ಗೆ ಕುಳಿತುಕೊಂಡು ಮಾತನಾಡಿ, ಇದು ಸರ್ಕಾರದ ಒಂದು ಗೌರವದ ಪ್ರಶ್ನೆ ಎಂದು ಹೇಳಿ ಅವರನ್ನು ಕನ್‌ವಿನ್ಸ್ ಮಾಡುವುದಕ್ಕೆ ಶ್ರೀ ರೇವಣ್ಣನವರು ಮತ್ತು ಶ್ರೀ ಸತ್ಯನಾರಾಯಣರವರು

ಹಾಗೂ ಶ್ರೀ ಮಹದೇವಪ್ಪನವರು ಈ ಮೂರು ಜನ ಒಂದೇ ಪಕ್ಷದವರು. ಹಾಗಾಗಿ ಒಟ್ಟಿಗೆ ಕುಳಿತುಕೊಂಡು ಆ ಮೂರು ಇಲಾಖೆಯ ಅಧಿಕಾರಿಗಳನ್ನು ಒಟ್ಟಿಗೆ ಕರೆಸಿಕೊಂಡು ಮಾತನಾಡಿ ಕುಡಿಯುವ ನೀರಿನ ಯೋಜನೆಗೆ ವಿದ್ಯುತ್‌ನ್ನು ಒದಗಿಸುವ ಒಂದು ವ್ಯವಸ್ಥೆ ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಧನ್ಯವಾದಗಳು

ಶ್ರೀ ಬಿ. ನಾಗರಾಜಶೆಟ್ಟಿ (ಬಂಟ್ವಾಳ) : ಮಾನ್ಯ ಅಧ್ಯಕ್ಷರೆ. ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳು. ಈಗಾಗಲೇ ಈ ಕುಡಿಯುವ ನೀರಿನ ತೊಂದರೆಯ ಬಗ್ಗೆ ಬಹಳಷ್ಟು ವಿಚಾರಗಳು ಮಂಡನೆಯಾಗಿದೆ.

ಶ್ರೀ ಆರ್ ಧ್ರುವನಾರಾಯಣ : ಮಾನ್ಯ ಅಧ್ಯಕ್ಷರೆ. ಅವರಿಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಅವರು ಮಾತನಾಡಲಿ. ಆದರೆ. ನಮ್ಮ ಭಾಗದಲ್ಲೂ ಕೂಡ ನೀರಿನ ಸಮಸ್ಯೆ ಇದೆ.

ಅಧ್ಯಕ್ಷರು : ಆಯಿತು. ನಿಮ್ಮ ಮಂತ್ರಿಗಳಿಗೆ ಹೇಳಿದರೆ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಡುತ್ತಾರೆ. ನೀವು ಕುಳಿತುಕೊಳ್ಳಿ.

ಶ್ರೀ ಬಿ. ನಾಗರಾಜ್ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಈಗಾಗಲೆ ಬಹಳಷ್ಟು ಜನ ಸದಸ್ಯರು ಗ್ರಾಮೀಣ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಮಾತನಾಡಿದ್ದಾರೆ. ತಮಗೆಲ್ಲಾ ತಿಳಿದ ಹಾಗೆ ದಕ್ಷಿಣ ಕನ್ನಡ ಜಿಲ್ಲೆಗೆ ರಾಜೀವ್‌ಗಾಂಧಿ ಪೈಲೆಟ್ ಯೋಜನೆ ದಿನಾಂಕ 31ನೇ ಡಿಸೆಂಬರ್ 2004ಕ್ಕೆ ಮುಕ್ತಾಯಗೊಂಡಿದೆ. ಆದರೆ ಇನ್ನೂ 60 ಪರ್‌ಸೆಂಟ್ ಗ್ರಾಮಗಳಿಗೆ ಕುಡಿಯುವ ನೀರು ಸರಿಯಾಗಿ ಸಿಗುತ್ತಿಲ್ಲ. ದಿನನಿತ್ಯ ಹರತಾಳಗಳು. ಈಗಾಗಲೆ ಹೇಳಿದ ಹಾಗೆ ನಮ್ಮ ಮನೆಯನ್ನು ಹಾಗೂ ಗ್ರಾಮಪಂಚಾಯಿತಿ ಆಫೀಸರ್ ಮನೆಗಳನ್ನು ಜನ ಮುತ್ತಿಗೆ ಹಾಕುತ್ತಿದ್ದಾರೆ. ಇನ್ನೊಂದು ಹೊಸ ಯೋಜನೆಯನ್ನು ಜಿಲ್ಲಾಧಿಕಾರಿಯವರ ಮುಖೇನ ಕೊಟ್ಟಿದ್ದೇವೆ. ನಮ್ಮ ಬಂಟ್ವಾಳ ವಿಧಾನಸಭಾ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಇತ್ತೀಚೆಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾಡಿದ ಸಮಾಲೋಚನೆಯ ಪ್ರಕಾರ ಸುಮಾರು 131 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಇದು ನನ್ನ ಒಂದು ವಿಧಾನಸಭಾ ಕ್ಷೇತ್ರಕ್ಕೆ ಮಾತ್ರ, ಅದು ಕೂಡ ಶಾಶ್ವತ ಪರಿಹಾರವಲ್ಲ. ತಾತ್ಕಾಲಿಕವಾಗಿ ಈಗಿನ ಮತ್ತು ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೋಸ್ಕರ ಈ ಪರಿಹಾರವನ್ನು ಮಂಡಿಸಿದ್ದೇವೆ. ಅದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳಲ್ಲಿ ನನ್ನ ವಿನಂತಿ ಏನೆಂದರೆ, ನೀವು ಆದಷ್ಟು ಶೀಘ್ರದಲ್ಲಿ ಈ ವ್ಯವಸ್ಥೆ ಜಾರಿಗೊಳಿಸಬೇಕು. ಈ ಬಗ್ಗೆ ಹಿಂದಿನ ಒಂದು ಮಾತು ಇದೆ. ಅದೇನೆಂದರೆ, ರಾಜೀವ್‌ಗಾಂಧಿ ಪೈಲೆಟ್ ಯೋಜನೆಗೆ ನಮ್ಮ ಜಿಲ್ಲೆಗೆ 40 ಕೋಟಿ ರೂಪಾಯಿಗಳು ಬಂದಿದೆ. ಪುನಃ ಇಷ್ಟೊಂದು ದೊಡ್ಡ ಮೊತ್ತದ ಅವಶ್ಯಕತೆ ಇದೆಯೇ ಎಂದು ಸರ್ಕಾರದ ಹಿರಿಯ ಅಧಿಕಾರಿಗಳು ಹೇಳುವುದನ್ನು ನಾವು ಕೇಳುತ್ತಿದ್ದೇವೆ. ರಾಜೀವ್‌ಗಾಂಧಿ ಪೈಲೆಟ್ ಯೋಜನೆಯಲ್ಲಿ ಹಾಕಿದ ಹೆಚ್ಚಿನ ಕೊಳವೆ ಬಾವಿಗಳು ಬರಡಾಗಿದೆ. ಅಂದರೆ ಡ್ರೈ ಆಗಿದೆ. ಎರಡನೆಯದಾಗಿ. ಭೂಮಿಯಲ್ಲಿ ನೀರಿನ ಮಟ್ಟ ಕೆಳಕ್ಕೆ ಹೋಗಿದೆ. ವಿದ್ಯುತ್ ಸರಬರಾಜಿನಲ್ಲಿ ಪರಿಮಿತ ಹಾಗೂ ನೀರಿನ ಮಟ್ಟ ಕೆಳಕ್ಕೆ ಹೋಗುವುದರಿಂದ ಪಂಪುಸೆಟ್ಟುಗಳು ವ್ಯರ್ಥವಾಗಿದೆ ಹಾಗೂ ಸರಿಯಾಗಿ ಕೆಲಸ ಮಾಡುವುದಿಲ್ಲ. ಗ್ರಾಮಪಂಚಾಯಿತಿ ಅಧೀನದಲ್ಲಿ ಪಂಪ್‌ಸೆಟ್ ಹಾಗೂ ಬೋರ್‌ವೆಲ್‌ಗಳ ದುರಸ್ತಿ ಮತ್ತು ಮೇಲ್ವಿಚಾರಣೆಯನ್ನು ಗ್ರಾಮ ಪಂಚಾಯಿತಿಗಳವರೇ

ಮಾಡಬೇಕೆಂದು ತೀರ್ಥಹಳ್ಳಿ ಶಾಸಕರು ಬಹಳ ಚೆನ್ನಾಗಿ ಹೇಳಿದರು. ಆದರೆ ನಮ್ಮ ಕ್ಷೇತ್ರದಲ್ಲಿ ಹಾಗೆ ಅಲ್ಲ, ನಮ್ಮ ಗ್ರಾಮ ಪಂಚಾಯಿತಿಯಲ್ಲಿ ಆ ಕಾನೂನಿನ ಪ್ರಕಾರ ಒಂದು ಬೇರೆ ಸಮಿತಿಯನ್ನು ಮಾಡಬೇಕಾಗಿತ್ತು. ಯಾವುದೇ ಸಮಿತಿಯನ್ನು ಮಾಡದೆ ಸರಿಯಾದ ವಸೂಲಾತಿ ಆಗದೆ ಎಲ್ಲಾ ಪಂಪ್‌ಗಳ ರಿಪೇರಿ ಬಿಲ್ 50 ಸಾವಿರ ರೂಪಾಯಿಗಳಿಂದ ಒಂದು ಲಕ್ಷ ರೂಪಾಯಿಗಳವರೆಗೆ ಬಾಕಿ ಇದೆ. ಒಂದೊಂದು ಗ್ರಾಮದಲ್ಲಿ ಆ ದೃಷ್ಟಿಯಿಂದ ಪಂಪ್ ಹಾಳಾದರೆ ಯಾರೂ ರಿಪೇರಿ ಮಾಡುವುದಕ್ಕೆ ಬರುವುದಿಲ್ಲ, ಹಿಂದಿನ ಬಾಕಿಯನ್ನು ಕೊಟ್ಟರೆ ರಿಪೇರಿ ಮಾಡುತ್ತೇವೆ ಇಲ್ಲದಿದ್ದರೆ ಇಲ್ಲವೆಂದು ಹೇಳುತ್ತಾರೆ. ಆ ದೃಷ್ಟಿಯಿಂದ ಈಗ ಇರುವ ಒಂದು ವ್ಯವಸ್ಥೆಯಲ್ಲಿ ಪ್ರಾಥಮಿಕ ಅಂತದಲ್ಲಿ ಕೂಡ ವಿಶೇಷವಾಗಿ ಗ್ರಾಮಾಂತರ ಪ್ರದೇಶದಲ್ಲಿ ಬೋರ್‌ವೆಲ್‌ಗಳು ನಿಷ್ಕ್ರಿಯವಾಗಿವೆ. ಒಳ್ಳೆಯ ನೀರು ಇರುವಂಥ ಬೋರ್‌ವೆಲ್‌ಗಳಿಗೆ ಮೋಟಾರುಗಳನ್ನು ಜೋಡಿಸುವಂಥ ವ್ಯವಸ್ಥೆಯನ್ನು ಕೂಡಲೆ ಮಾಡಬೇಕಾಗಿದೆ. ಈಗ ಇರುವಂಥ ಒಳ್ಳೆಯ ಬೋರ್‌ವೆಲ್‌ಗಳಿಗೆ ಏನಿವೆ, ಅವುಗಳನ್ನು ಇನ್ನೂ ಸ್ವಲ್ಪ ಆಳ ಮಾಡಿದರೆ ಬಹಳಷ್ಟು ನೀರು ಸಿಗುವಂತಾಗಬಹುದು. ಆ ದೃಷ್ಟಿಯಿಂದ ನನ್ನ ಒಂದು ವಿನಂತಿ ಏನೆಂದರೆ, ಈಗಾಗಲೆ ಬಹಳಷ್ಟು ಜನ ಶಾಸಕರು ಹೇಳಿದ್ದಾರೆ, ಕುಡಿಯುವ ನೀರಿನ ವ್ಯವಸ್ಥೆಯನ್ನು ಶಾಸಕರನ ನೇತೃತ್ವದಲ್ಲಿ ವಹಿಸಿಕೊಡಬೇಕೆಂದು ನನ್ನ ವಿನಂತಿ. ಆದರೆ ನನ್ನ ಕ್ಷೇತ್ರದಲ್ಲಿ ಒಂದು ಬಹಳ ವಿಶೇಷವೆಂದರೆ, ಗ್ರಾಮಪಂಚಾಯಿತಿಗಳ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಹೇಳುತ್ತಾರೆ, ನೀವು ನಾಗರಾಜ್ ಶೆಟ್ಟಿಯವರಿಗೆ ಓಟನ್ನು ಹಾಕಿದ್ದೀರಿ, ಕುಡಿಯುವ ನೀರಿಗೆ ಅವರನ್ನು ಹೋಗಿ ಕೇಳಿ ಎಂದು ಹೇಳುತ್ತಾರೆ. ಆ ದೃಷ್ಟಿಯಿಂದ ನನ್ನ ಕಷ್ಟ ಬಹಳ ದೊಡ್ಡದಿದೆ, ಅದಕ್ಕೋಸ್ಕರ ನನ್ನ ಕಳಕಳಿಯ ವಿನಂತಿ, ಉದಾಹರಣೆಗೆ ನಾನು ಕಳೆದ ವಾರ ಒಂದು ಬೋರ್‌ವೆಲ್ ಇನ್ಸ್‌ಪೆಕ್ಷನ್‌ಗೆ ಹೋಗಿದ್ದೆ, ಅದನ್ನು ದುರಸ್ತಿ ಮಾಡಿಸುದಕ್ಕೆ ಹೇಳಿದಾಗ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಎಸ್ಟಿಮೇಟ್ ಆಗಬೇಕು. ಟೆಂಡರ್ ಆಗಬೇಕು ಎಂದು ಹೇಳುತ್ತಾರೆ. ಈ ಬಗ್ಗೆ ಕೂಡಲೇ ಸ್ಪಂದಿಸಿ ಕ್ರಮ ತೆಗೆದುಕೊಂಡರೆ ಮಾತ್ರ ಈ ಸಮಸ್ಯೆ ಪರಿಹಾರವಾಗುತ್ತದೆ. ಶಾಸಕರಾದ ನಮಗೆ ಆ ಪಂಪ್‌ಗಳನ್ನು ರಿಪೇರಿ ಮಾಡಿಸುವುದಕ್ಕೆ ಮತ್ತು ಹೊಸ ಬೋರ್‌ವೆಲ್‌ಗಳನ್ನು ಹಾಕಿಸುವ ವ್ಯವಸ್ಥೆಯ ಬಗ್ಗೆ ಈಗಾಗಲೇ ಅನೇಕ ಹಿರಿಯ ಶಾಸಕರು ಮಾತನಾಡಿರುವ ಹಾಗೆ ಇದರಲ್ಲಿ ಎರಡು ವಿಚಾರಗಳು ಸ್ಪಷ್ಟ. ಒಂದು ಕೂಡಲೇ, ಮತ್ತೊಂದು ಶಾಶ್ವತ ಪರಿಹಾರ, ಇವುಗಳನ್ನು ಹೇಗೆ ಮಾಡಬೇಕೆಂದರೆ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇರುವಂಥ ಬೋರ್‌ವೆಲ್‌ಗಳ ನೀರಿನ ಮಟ್ಟ ಕೆಳಗೆ ಹೋಗಿ ಬರಡಾಗಿದೆ. ಹೊಸ ಬೋರ್‌ವೆಲ್‌ಗಳನ್ನು ಹಾಕುವುದು ಕೇವಲ ತಾತ್ಕಾಲಿಕ ಪರಿಹಾರ ಮಾತ್ರ. ಶಾಶ್ವತವಾದ ಪರಿಹಾರ ಮಾಡಬೇಕಾದರೆ ನಮ್ಮ ಜಿಲ್ಲೆಗಳ ನದಿಗಳ ಜೋಡಣೆ ಅಥವಾ ಮಾನ್ಯ ಮುಖ್ಯಮಂತ್ರಿಯವರು ಹೇಳಿದ ಹಾಗೆ ಅರಬ್ಬಿ ಸಮುದ್ರ ನಮ್ಮ ಕರಾವಳಿಯಲ್ಲಿದೆ, ಸಮುದ್ರದ ಆ ಉಪ್ಪು ನೀರನ್ನು ಶುದ್ಧೀಕರಣ ಮಾಡಿ ಕುಡಿಯುವುದಕ್ಕೆ ಉಪಯೋಗಿಸಿಕೊಳ್ಳುವ ಚಿಂತನೆ ಮಾಡುವ ಅವಶ್ಯಕತೆ ಇದೆ ಮತ್ತೊಮ್ಮೆ ಇದನ್ನು ಸರ್ಕಾರದ ಗಮನಕ್ಕೆ ತರುವುದಿಕ್ಕೆ ಇಚ್ಛೆಪಡುತ್ತೇನೆ.

ಈ ಅಧಿವೇಶನ ಮುಗಿಸಿಕೊಂಡು ನಾವು ವಾಪಸ್ ನಮ್ಮ ಕ್ಷೇತ್ರಕ್ಕೆ ಹೋದ ಕೂಡಲೇ ಕುಡಿಯುವ ನೀರಿನ ತೊಂದರೆ ಮತ್ತೆ ಜಾಸ್ತಿಯಾಗುತ್ತದೆ. ಕುಡಿಯುವ ನೀರು ಕೊಡಿ ಎಂದು ಜನ ಹೇಳುತ್ತಾರೆ. ನಮಗೆ ಸ್ವಾತಂತ್ರ ಸಿಕ್ಕು 58 ವರ್ಷವಾಯಿತು. ಕುಡಿಯುವ ನೀರನ್ನು ಕೊಡುವುದಕ್ಕಾಗದಿದ್ದರೆ ನಾವು ಶಾಸಕರಾಗಿ ಏನು ಪ್ರಯೋಜನವೆಂದು ನಮ್ಮ ಅನೇಕ ಜನ ಶಾಸಕರಲ್ಲಿ ಈ ಭಾವನೆ ಬಂದಿದೆ.

ಈ ಬಗ್ಗೆ ನನ್ನ ಕಳಕಳಿ ವಿನಂತಿ ಏನೆಂದರೆ, ನಮ್ಮ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರಿನ ವ್ಯವಸ್ಥೆಗೆ ಸನ್ಮಾನ್ಯ ಯೋಗೀಶ್‌ಭಟ್‌ರವರು ಹೇಳಿದ ಹಾಗೆ, ಮಾನ್ಯ ಮುಖ್ಯಸಚೇತಕರು ಕೂಡ ಇಲ್ಲೇ ಇದ್ದಾರೆ, ಕೂಡಲೇ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ 8 ಕೋಟಿ ರೂಪಾಯಿ ವೆಚ್ಚದ ಒಂದು ಯೋಜನೆಯನ್ನು ಡಿ.ಸಿ. ಯವರ ಮುಖಾಂತರ ಕಳುಹಿಸಿಕೊಟ್ಟಿದ್ದಾರೆ. ಅದನ್ನು ಆದಷ್ಟು ಶೀಘ್ರದಲ್ಲಿ ಕಾರ್ಯಗತ ಮಾಡಬೇಕು. ಆದ್ದರಿಂದ ಶೀಘ್ರವಾಗಿ ಸಂಬಂಧಪಟ್ಟ ಮಂತ್ರಿಯವರು ಅದಕ್ಕೆ ಸೂಕ್ತವಾದ ಕ್ರಮ ಕೈಗೊಂಡು ಆ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ನೀಡಿದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ಧ್ರುವನಾರಾಯಣ (ಸಂತೇಮಾರನಹಳ್ಳಿ) : ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಭೀಕರವಾಗಿದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಕೂಡ ಇಲ್ಲಿಯೇ ಕುಳಿತಿದ್ದಾರೆ. ನೀವು ಹಣಕೊಟ್ಟರೂ ನಾವು ಬೋರ್ ಹೊಡೆಸಿದರೂ ನೀರು ಸಿಗದೆ ಇರುವಂಥ ಒಂದು ವಾತಾವರಣ ನಮ್ಮಲ್ಲಿದೆ. ಆದ್ದರಿಂದ ನಮ್ಮ ತಾಲ್ಲೂಕಿನಿಂದ ಒಂದು ನೀಲಿ ನಕಾಶೆಯನ್ನು ಮಾಡಿ 119 ಹಳ್ಳಿಗಳಿಗೆ ನದಿಯಿಂದ ನೀರನ್ನು ಕೊಡತಕ್ಕಂಥ ಒಂದು ಪ್ಲಾನ್‌ನ್ನು ನಾವು ಮಾಡಿದ್ದೇವೆ. ಈಗಾಗಲೇ ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ ರಾಜ್ಯ ಸರ್ಕಾರದಿಂದ ಕೇಂದ್ರಸರ್ಕಾರಕ್ಕೆ ವರದಿಯನ್ನು ಸಲ್ಲಿಸಿ ವರ್ಲ್ಡ್‌ಬ್ಯಾಂಕಿನಿಂದ ಹಣವನ್ನು ಲೋನ್ ಮುಖಾಂತರ ಕೊಟ್ಟಿರುವಂಥ ನಿದರ್ಶನಗಳು ಇವೆ. ಈಗಾಗಲೆ ನಮ್ಮ ಚಾಮರಾಜನಗರ ತಾಲ್ಲೂಕಿನಲ್ಲಿ 119 ಹಳ್ಳಿಗಳಿಗೆ ಕಬಿನಿ ನದಿಯಿಂದ ಹರಿಯುವ ನೀರನ್ನು ಒಂದು ಕಡೆ ಸ್ಟೋರ್ ಮಾಡಿಕೊಂಡು ಸಮಗ್ರವಾಗಿ ನಮ್ಮ ತಾಲ್ಲೂಕಿಗೆ ನೀರನ್ನು ಕೊಡತಕ್ಕಂತ ಒಂದು ಪ್ಲಾನ್‌ನ್ನು ನಾವು ಮಾಡಿದ್ದೇವೆ. ಮಾನ್ಯ ಮಂತ್ರಿಗಳಲ್ಲಿ ನಾನು ನಿವೇದನೆ ಮಾಡಿಕೊಳ್ಳುತ್ತೇನೆ. 30 ಕೋಟಿ ರೂ.ಗಳ ಆ ಒಂದು ಪ್ಲಾನ್ ಇದೆ. ಇದಕ್ಕೆ ತಾವು ಅನುಮತಿಯನ್ನು ಕೊಟ್ಟು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ ಆ 30 ಕೋಟಿ ರೂ.ಗಳ ಆ ಒಂದು ಪ್ಲಾನ್ ಇದೆ, ಇದಕ್ಕೆ ತಾವು ಅನುಮತಿಯನ್ನು ಕೊಟ್ಟು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ ಆ 30 ಕೋಟಿ ರೂ.ಗಳು ಬಿಡುಗಡೆಯಾದರೆ ಚಾಮರಾಜನಗರ ತಾಲ್ಲೂಕಿನ 119 ಹಳ್ಳಿಗಳಿಗೆ ನೀರು ಒದಗಿಸತಕ್ಕಂಥ ಒಂದು ಈ ಯೋಜನೆ. ದಯಮಾಡಿ ನಾನು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ನನ್ನ ಕ್ಷೇತ್ರದಲ್ಲಿ ದಾಸನೂರು ಎನ್ನುವ ಗ್ರಾಮ ಇದೆ, ಎರಡು ತಿಂಗಳಲ್ಲಿ 6 ಬೋರ್‌ವೆಲ್‌ಗಳನ್ನು ಕೊರೆದಿದ್ದೇವೆ, 600 ಅಡಿಯವರೆಗೂ ಕೊರೆದರೂ ಕೂಡ ಒಂದು ತೊಟ್ಟು ನೀರು ಸಿಗಲಿಲ್ಲ. ನೀವು ಹಣ ಬಿಡುಗಡೆ ಮಾಡಿ ಬೋರ್‌ವೆಲ್ ಹೊಡೆಸಿದರೂ ಕೂಡ ನೀರು ಸಿಗದೇ ಇರತಕ್ಕ ವಾತಾವರಣ ಇದೆ. ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಕಾವೇರಿ ಮತ್ತು ಕಬಿನಿ ನದಿ ಹರಿದುಕೊಂಡು ಹೋಗುತ್ತದೆ. ಆ ನದಿ ನೀರಿನ ಮುಖಾಂತರ ಸ್ಟೋರ್ ಮಾಡಿ ಸಮಗ್ರವಾಗಿ ಎಲ್ಲಾ ಗ್ರಾಮಗಳಿಗೂ ನೀರು ಕೊಡತಕ್ಕಂತಹ ವ್ಯವಸ್ಥೆಯನ್ನು ತಾವು ಮಾಡಿಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ನಿವೇದನೆಯನ್ನು ಮಾಡಿಕೊಳ್ಳುತ್ತೇನೆ. ಈ ಯೋಜನೆಯನ್ನು ಕೈಗೆತ್ತಿಕೊಂಡು ನಮ್ಮ ತಾಲ್ಲೂಕಿಗೆ ಸಮಗ್ರವಾಗಿ ಪರಿಪೂರ್ಣವಾಗಿ ನೀರನ್ನು ಒದಗಿಸತಕ್ಕಂಥಹ ಕೆಲಸ ಮಾಡಿಕೊಡಬೇಕೆಂದು ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

†ಡಾ.ಎಂ.ಸಿ. ಸುಧಾಕರ್(ಚಿಂತಾಮಣಿ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ಬಹಳಷ್ಟು ಪಟ್ಟಣ ಪ್ರದೇಶಗಳಲ್ಲಿ ಕೆರೆಗಳ ನೀರನ್ನು ಟ್ಯಾಂಕ್‌ನಿಂದ ಸರಬರಾಜು ಮಾಡುತ್ತಿದ್ದಾರೆ. ನೀರನ್ನು ಪ್ಯೂರಿಫೈ ಮಾಡಿ ಕೊಡುತ್ತಿದ್ದಾರೆ. ಈಗಾಗಲೇ ಮಾನ್ಯ ರಾಜೇಂದ್ರನರವರು ಹಾಗೂ ಬಹಳಷ್ಟು ಹಿರಿಯ ಸದಸ್ಯರುಗಳು ಹೋದ ಸಭೆಯಲ್ಲೂ ಕೂಡ ಈ ಬಗ್ಗೆ ಗಲಾಟೆಯನ್ನು ಮಾಡಿದ್ದರು. ಬೇತಮಂಗಲ ಟ್ಯಾಂಕನ್ನು ಡೀಸಿಲ್ಟ್ ಮಾಡಬೇಕು, ಕೋಲಾರ ಪಟ್ಟಣಕ್ಕೆ ಕೊಡುತ್ತಿರುವ ಟ್ಯಾಂಕ್‌ನ್ನು ಡೀಸಿಲ್ಟ್ ಮಾಡಬೇಕು. ಚಿಂತಾಮಣಿ ಟ್ಯಾಂಕನ್ನು ಕೂಡ ಡಿಸಿಲ್ಟ್ ಮಾಡಬೇಕು. ಈ ರೀತಿಯಾಗಿ ಡೀಸಿಲ್ಟ್ ಮಾಡಬೇಕು ಹಾಗೂ ಪೋಷಕ ಕಾಲುವೆಗಳನ್ನು ನಾವು ಅಭಿವೃದ್ಧಿ ಪಡಿಸಬೇಕಾಗಿದೆ. ಅದು ಡೀಸಿಲ್ಟ್ ಮಾಡಿ ಸುಮಾರು 20-30 ವರ್ಷಗಳಾಗಿರಬಹುದು. ಆ ಕಾಲುವೆಗಳಲ್ಲಿ ಹೂಳು ತುಂಬಿ ಹೋಗಿ ನಾಳೆ ಬೆಳಿಗ್ಗೆ ಮಳೆ ಬಂದರೂ ಆ ಟ್ಯಾಂಕ್‌ಗಳಿಗೆ ನೀರು ಹೋಗದೆ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಎಲ್ಲಾ ವಿಚಾರವಾದರೆ ನೀರಿಲ್ಲದೆ ಇರುವಂತಹ ಪಟ್ಟಣಪ್ರದೇಶಗಳಲ್ಲಿ ನಾವು ಬಹಳಷ್ಟು ಮುಂದುವರಿದು ಅಂಡರ್‌ಗ್ರೌಂಡ್ ಡ್ರೈನೇಜ್ ಎಲ್ಲವನ್ನೂ ಕೂಡ ಮಾಡಿದ್ದೇವೆ, ಅದರಿಂದಾಗುವಂತಹ ಅನಾಹುತಗಳೇನು? ನೀರು ಸರಿಯಾದ ರೀತಿಯಲ್ಲಿ ಹರಿಯದೆ ಅ ಅಂಡರ್‌ಗ್ರೌಂಡ್ ಡ್ರೈನೇಜ್ ನಾಳೆ ದಿವಸ ಬ್ಲಾಕ್ ಆಗಿ ಅದರಿಂದ ಸರ್ಕಾರಕ್ಕೆ ಹೆಚ್ಚಿನ ಖರ್ಚು ಬೀಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಜೊತೆಗೆ ನಮ್ಮ ಕೋಲಾರ ಜಿಲ್ಲೆಗೆ ಸುಮಾರು 6 ತಿಂಗಳಿಂದ ಹಣವನ್ನು ಸರ್ಕಾರ ಒದಗಿಸುತ್ತಿದೆ. ಆದರೆ ನಮ್ಮ ಬೇಡಿಕೆ ಏನಿದೆ. 100 ರೂಪಾಯಿಗಳ ಬೇಡಿಕೆಯಾದರೆ 10 ರೂಪಾಯಿಗಳನ್ನು ಕೊಟ್ಟು ನೀವು 3 ತಿಂಗಳಲ್ಲಿ ಮಾಡಿ ಎಂಬ ವಿಚಾರಗಳು ನಡೆಯುತ್ತಿದೆ. ದಯವಿಟ್ಟು ಇಲ್ಲಿ ಯಾವ ರೀತಿಯಾದ ಪರಿಸ್ಥಿತಿ ಇದೆ ಅದರ ಬಗ್ಗೆ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಗೊತ್ತು. ಇದರ ಬಗ್ಗೆ ಎಲ್ಲರಿಗೂ ಸಹ ಗೊತ್ತಿದೆ. ಅದನ್ನು ಸರಿಯಾದ ರೀತಿಯಲ್ಲಿ ನೋಡಬೇಕು. ಏನು ಬೇಡಿಕೆಗಳು ಇದೆ, ಅದಕ್ಕೆ ತಕ್ಕಂತಹ ಹಣವನ್ನು ಒದಗಿಸಿದರೆ ನಾವು ಅಲ್ಲಿನ ಸಮಸ್ಯೆಯನ್ನು ಎದುರಿಸುವುದಕ್ಕೆ ಸಾಧ್ಯವಾಗುತ್ತದೆ. ಇದರ ಜೊತೆಗೆ ನಾವು ಬೋರ್‌ವೆಲ್ ಕೊರೆದು ನೀರು ಬಂದು ಪಂಪು, ಮೋಟಾರು ಕೊಟ್ಟರೂ ಕೂಡ ಎಲೆಕ್ಟ್ರಿಫಿಕೇಷನ್ ಮಾಡುವುದಕ್ಕೆ ಕಷ್ಟವಾಗುತ್ತದೆ. ಕೆಪಿಟಿಸಿಎಲ್ ಮತ್ತು ಬೆಸ್ಕಾಂನವರನ್ನು ಕೇಳಿದರೆ ಅವರು ಪೋಲ್ ಇಲ್ಲ ಮೆಟೀರಿಯಲ್ಸ್ ಇಲ್ಲವೆಂದು ಹೇಳುತ್ತಾರೆ. ಅವರು ಏನೂ ಇಲ್ಲವೆಂದು ವಿವಿಧ ರೀತಿಯಾದಂತಹ ಕಾರಣವನ್ನು ಹೇಳುತ್ತಾರೆ. ಈಗಾಗಲೇ ಗ್ರಾಮಪಂಚಾಯಿತಿಗಳಿಗೆ ಏತಕ್ಕಾಗಿ ವಹಿಸಬೇಕು ನೀರಿನ ಹಾಗೂ ಮನೆಗಳ ಜವಾಬ್ದಾರಿಯನ್ನು ಅವರಿಗೆ ವಹಿಸಬೇಕು ಎಂಬ ಬಗ್ಗೆ ಬಹಳಷ್ಟು ಚರ್ಚೆಯಾಗುತ್ತಿದೆ. ಇದರ ಬಗ್ಗೆ ನಾವು ಹೇಳಬೇಕಾದರೆ ನಮ್ಮ ಒಂದು ಮನೆತನದಲ್ಲಿ ನಾನು ಮೂರನೇ ಒಬ್ಬ ಶಾಸಕನಾಗಿ ಮೂರನೇ ತಲೆಮಾರಿನ ಶಾಸಕನಾಗಿ ಬಂದಿದ್ದೇನೆ. ಈಗಾಗಲೇ ಜನ ಏನು ಕಂಡಿದ್ದಾರೆಂದರೆ, ಇಷ್ಟು ವರ್ಷಗಳಿಂದ ಶಾಸಕರದು ಜವಾಬ್ದಾರಿ ಇಂತಹದ್ದು ಇತ್ತು. ಈಗ ನಿಮಗೆ ಜವಾಬ್ದಾರಿ ಇಲ್ಲವೆನ್ನುವಂತಹ ಮಾತನ್ನು ಅವರು ಹೇಳುತ್ತಿದ್ದಾರೆ. ನೀವು ಹೇಳುವ ಮಾತನ್ನು ನಂಬುವುದಿಲ್ಲವೆಂದು ಹೇಳುತ್ತಿದ್ದಾರೆ ನಾನು ಈಗ ಸರ್ಕಾರವನ್ನು ಕೇಳುವುದು ಇಷ್ಟೆ, ದಯವಿಟ್ಟು redefine the legislator's responsibilities. ಶಾಸಕರ ಜವಾಬ್ದಾರಿ, ರೆಸ್ಪಾನ್ಸಿಬಿಲಿಟಿ ಏನಿದೆ, ಅದನ್ನು ತಾವು ದಯವಿಟ್ಟು ತಾವು ರೀಡಿಫೈನ್ ಮಾಡಬೇಕಾಗಿದೆ. ಬಹಳಷ್ಟು ಜನ ನಾವು ಯುವಕ ಶಾಸಕರು ಏನಿದ್ದೇವೆ, ನಾಳೆ ಬೆಳಿಗ್ಗೆ ಚುನಾಯಿಸಿದ ಜನರಿಗೆ ನಾವು

ಹೇಳಬೇಕಾಗಿದೆ. ಸುಮಾರು 30 ವರ್ಷಗಳಿಂದ ಏನು ನಡೆಯುತ್ತಿದೆ ಸಂಪ್ರದಾಯ ಅದೇ ಈಗಲೂ ಕೂಡ ಮುಂದುವರಿಯುತ್ತಿದೆ. ಪ್ರತಿಯೊಂದಕ್ಕೂ ನಮ್ಮ ಹತ್ತಿರ ಬಂದು ನೀವೇ ಮಾಡಬೇಕೆನ್ನುವಂತಹ ಸಂಪ್ರದಾಯವಿದೆ. ಇದರ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಬೇಕು. ನಂತರ ಈ ಸದನದಲ್ಲಿ ಬಹಳಷ್ಟು ಹಿರಿಯರಿದ್ದೀರಿ. ಈ ಶಾಸಕರ ಜವಾಬ್ದಾರಿ ಇಷ್ಟೇ ಎಂದು ಹೇಳಿದರೆ ಇದಕ್ಕಾಗಿ ನಾವು ಚುನಾವಣೆಗೆ ಹೋಗಿ ಚುನಾಯಿತರಾಗಬೇಕಾ? ಇಲ್ಲವೆಂದರೆ ನಾವು ನಾಮಿನೇಷನ್ ಮಾಡಿಕೊಳ್ಳುವಂತಹ ಪದ್ಧತಿ ಏತಕ್ಕಾಗಿ ತರಬಾರದು ಎಂಬುದು ನನ್ನ ಅನಿಸಿಕೆಯಾಗುತ್ತದೆ. ದಯವಿಟ್ಟು ಇದರ ಬಗ್ಗೆ ಸರ್ಕಾರ ಬಹಳಷ್ಟು ಹೆಚ್ಚಿನ ಗಮನವನ್ನು ಹರಿಸಬೇಕು. ಅಧಿಕಾರ ವಿಕೇಂದ್ರೀಕರಣ ಮಾಡುವುದರ ಜೊತೆಗೆ ಶಾಸಕರ ಅಧಿಕಾರವನ್ನು ಮೊಟಕುಗೊಳಿಸುತ್ತಿದ್ದಾರೆ. ನಾವು ಅದರ ಬಗ್ಗೆ ಬಹಳಷ್ಟು ಆಲೋಚನೆಯನ್ನು ಮಾಡಬೇಕು. ಈ ಸದನದಲ್ಲಿ ಒಂದಲ್ಲ ಎರಡು ದಿವಸಗಳ ಕಾಲ ಚರ್ಚೆಯಾಗಿ ಬೇಕಾದರೆ ನಾವು ಕೇಂದ್ರಕ್ಕೆ ರೆಕಮೆಂಡೇಷನ್ ಮಾಡಿ ನಾವು ನಮ್ಮ ಸಂವಿಧಾನದಲ್ಲಿ ಇದರ ಬಗ್ಗೆ ತಿದ್ದುಪಡಿ ತರುವುದರ ಬಗ್ಗೆ ಪ್ರಯತ್ನವನ್ನು ಮಾಡಬೇಕು, ಇಲ್ಲವೆಂದರೆ ನಾವು ಓಟು ಹಾಕಿಸಿಕೊಂಡಂತಹ ಜನಕ್ಕೆ ಸ್ಪಂದಿಸದಿದ್ದರೆ ನಾವು ಯಾವುದೇ ರೀತಿಯಲ್ಲಿ ಮುಂದೆ ಪರಿಸ್ಥಿತಿ ಎದುರಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾ ಕಡೆಗೂ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಪಾಪರೆಡ್ಡಿ(ರಾಯಚೂರು) : ಮಾನ್ಯ ಅಧ್ಯಕ್ಷರೆ, ನಾನು ರಾಯಚೂರು ಕ್ಷೇತ್ರದಿಂದ ಬಂದಂತಹ ಶಾಸಕನಾಗಿದ್ದೇನೆ. ಇಡೀ ರಾಜ್ಯದಲ್ಲಿಯೇ ರಾಯಚೂರು ಕ್ಷೇತ್ರ ಅತಿ ಹೆಚ್ಚಿಗೆ ಉಷ್ಣಾಂಶ ಇರುವಂಥ ಕ್ಷೇತ್ರವಾಗಿದೆ. ಅಲ್ಲಿ 45 ಸೆಂಟಿಗ್ರೇಡ್ ಉಷ್ಣಾಂಶವಿರುತ್ತದೆ. ಈಗ ಎಲ್ಲಾ ಮಾತನಾಡಿದಂತಹ ಸದಸ್ಯ ಕ್ಷೇತ್ರದಲ್ಲಿ 32 ರಿಂದ 40 ಸೆಂಟಿಗ್ರೇಡ್ ಉಷ್ಣಾಂಶವಿರುತ್ತದೆ. ನನ್ನ ಕ್ಷೇತ್ರದಲ್ಲಿ 45 ಸೆಂಟಿಗ್ರೇಡ್ ಇರುತ್ತದೆ. ಯಾವುದೇ ಅಧಿಕಾರಿಗಳು ಈ ಭಾಗದಿಂದ ಆ ಭಾಗಕ್ಕೆ ಬರಬೇಕಾದರೆ ಪನಿಶಮೆಂಟ್ ಆಗಿಯೇ ಬರಬೇಕು. ಇಲ್ಲಿ 45 ಸೆಂಟಿಗ್ರೇಡ್ ಉಷ್ಣಾಂಶ ಇರುವ ಕಾರಣ ಇಲ್ಲಿ ಹೆಚ್ಚಿಗೆ ಬಿಸಿಲು ಇರುತ್ತದೆ, ಆದ್ದರಿಂದ ಅಲ್ಲಿಗೆ ಬರಲಿಕ್ಕೆ ಅಂಜಿಕೊಳ್ಳುತ್ತಿದ್ದಾರೆ. ನನ್ನ ಕ್ಷೇತ್ರದ ಎಲ್ಲಾ ಹಳ್ಳಿಗಳಲ್ಲಿ ನೀರಿನ ಅಭಾವ ಬಹಳಷ್ಟು ಇದೆ. ರಾಯಚೂರು ನಗರದಲ್ಲೂ ನೀರಿನ ಅಭಾವ ಬಹಳಷ್ಟು ಇದೆ. ಇಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಆಗಲೇಬೇಕಾಗಿದೆ. ಈಗ ಬಂದಂತಹ ಹಣವನ್ನು 5 ತಾಲ್ಲೂಕುಗಳಿಗೂ ಕೊಡಬೇಕಾಗುತ್ತದೆ. ಮೊನ್ನೆ ತಾನೆ 40 ಲಕ್ಷ ರೂಗಳು ಬಂದರೆ ನಮಗೆ 5 ಲಕ್ಷ ರೂಗಳನ್ನು ಕೊಟ್ಟರು. ಆದರೆ ನನ್ನ ಕ್ಷೇತ್ರದಲ್ಲಿ ಬರಗಾಲದಿಂದ ಜನರು ಕುಡಿಯುವುದಕ್ಕೆ ನೀರಿಲ್ಲದೆ ಅಲ್ಲಿಂದ ವಲಸೆ ಹೋಗುತ್ತಿದ್ದಾರೆ. ಬೇರೆ ಬೇರೆ ಊರುಗಳಿಗೆ ವಲಸೆ ಹೋಗುತ್ತಿದ್ದಾರೆ. ಅಲ್ಲಿ ಮುದುಕರು ಮತ್ತು ಸಣ್ಣ ಹುಡುಗರು ಇರುತ್ತಾರೆ. 50 ಪರ್ಸೆಂಟ್ ಜನರು ಊರು ಬಿಟ್ಟು ಹೋಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಗರಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಾಗಬೇಕು. ಅಲ್ಲಿಯೇ ಥರ್ಮಲ್ ಪ್ಲಾಂಟ್ ಇದೆ, ಅದು ಬಂದು ನನ್ನ ಕ್ಷೇತ್ರವಾದ ರಾಯಚೂರಿನಲ್ಲಿ ಹೆಚ್ಚಿಗೆ ಉಷ್ಣಾಂಶ ಇರುವುದರ ಜೊತೆಗೆ ಅಲ್ಲಿ ವಾಸ ಮಾಡುವಂತಹ ರೈತರಿಗೆ ಕರೆಂಟ್‌ನ ವ್ಯವಸ್ಥೆ ಇಲ್ಲ, 3 ಗಂಟೆಗಳು ಸತತವಾಗಿ ಉರಿದಿಲ್ಲ. ಯಾವಾಗಲೂ ಕೂಡ ಕರೆಂಟ್ ಕಟ್ ಆಗುತ್ತಿರುತ್ತದೆ. ಅದರಿಂದ ರೈತರಿಗೆ ಬಹಳಷ್ಟು ತೊಂದರೆಯಾಗಿ ರೈತರುಗಳು ಊರು ಬಿಟ್ಟು ಹೋಗುತ್ತಿದ್ದಾರೆ. ಈ ಕಾರಣದಿಂದ ಕರೆಂಟ್ ವ್ಯವಸ್ಥೆ ಕೂಡ ಸರಿಯಾಗಿಲ್ಲ, ಕುಡಿಯುವ ನೀರಿನ ವ್ಯವಸ್ಥೆ ಕೂಡ ಸರಿಯಾಗಿರುವುದಿಲ್ಲ.

ಬಂದಂತಹ ನೀರೂ ಕೂಡ ಸರಿಯಾಗಿ ಬಳಕೆಯಾಗುವುದಿಲ್ಲ. ಈಗ ತಾನೇ ಸನ್ಮಾನ್ಯ ಮಂತ್ರಿಗಳು ಹೇಳಿದರು, ಜಿಲ್ಲಾ ಪಂಚಾಯಿತಿಯಲ್ಲಿ ಬೇಕಾದಷ್ಟು ಹಣವಿದೆ, ನಾವು ಜಿಲ್ಲಾ ಪಂಚಾಯಿತಿಗೆ ಹೋಗಿ ಕೇಳಿದರ 10 ಪೈಸೆ ಕೂಡ ಇಲ್ಲವೆಂದು ಅವರು ಹೇಳುತ್ತಾರೆ. ತಾಲ್ಲೂಕು ಹಾಗೂ ಗ್ರಾಮಪಂಚಾಯಿತಿಗಳಲ್ಲೂ ಕೂಡ ಹಣ ಇಲ್ಲವೆಂದು ಹೇಳುತ್ತಾರೆ. ನಾವು ಯಾರಿಗೆ ಹೋಗಿ ಹೇಳಬೇಕು? ಜನರು ಶಾಸಕರನ್ನು ಕೇಳುತ್ತಿದ್ದಾರೆ. ನಾವು ಅಲ್ಲಿಗೆ ಹೋದ ತಕ್ಷಣ ನಮ್ಮ ಊರಿನಲ್ಲಿ ಬೋರ್‌ವೆಲ್ ಕೆಟ್ಟುಹೋಗಿದೆ, ಅದನ್ನು ರಿಪೇರಿ ಮಾಡಿ ಕೊಡಿ, ನಮಗೆ ಬೋರ್‌ನಿಂದ ನೀರನ್ನು ಕೊಡಿಸಿ ಎಂದು ಕೇಳುತ್ತಾರೆ, ನೀರನ್ನು ಕೊಡಿಸುವುದಕ್ಕೆ ರೊಕ್ಕವಿಲ್ಲ, ಜಿಲ್ಲಾ ಪಂಚಾಯಿತಿಯಲ್ಲಿ ಇಲ್ಲ, ಜಿಲ್ಲಾಧಿಕಾರಿಗಳ ಹತ್ತಿರ ಹಣವಿಲ್ಲ, ತಾಲ್ಲೂಕು ಪಂಚಾಯಿತಿಗಳಲ್ಲೂ ಕೂಡ ಹಣವಿಲ್ಲ. ಮತ್ತೆ ನಾವು ಯಾರನ್ನು ಕೇಳಬೇಕು? ಆ ಕಾರಣದಿಂದ ಸರ್ಕಾರ ಶಾಸಕರ ನಿಧಿಯನ್ನು ಪ್ರತಿಯೊಂದು ಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟರೆ ಅಲ್ಲಿ ಎಲ್ಲಾ ಹಳ್ಳಿಗಳಿಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡುವ ಬಗ್ಗೆ ಅನುಕೂಲವಾಗುತ್ತದೆ. ಆ ಕಾರಣದಿಂದ ದಯಮಾಡಿ ತಾವು ಸರ್ಕಾರದ ಮೇಲೆ ಪ್ರಭಾವ ಬೀರಿ ಒಂದೊಂದು ಕೋಟಿ ರೂಪಾಯಿಗಳನ್ನು ಒಂದೊಂದು ಕ್ಷೇತ್ರಕ್ಕೆ ಕುಡಿಯುವ ನೀರಿನ ವ್ಯವಸ್ಥೆಯು ಸಲುವಾಗಿ ಕೊಡಬೇಕು. ಹಣವನ್ನು ಗ್ರಾಮಪಂಚಾಯಿತಿಗೆ ಕೊಟ್ಟರೆ ಗ್ರಾಮಪಂಚಾಯಿತಿಯಲ್ಲಿ ಕಾರ್ಯದರ್ಶಿಗಳು ಕೆಲಸವನ್ನೇ ಮಾಡುತ್ತಿಲ್ಲ. ಒಂದೊಂದು ಗ್ರಾಮಪಂಚಾಯಿತಿ ಸೆಕ್ರೆಟರಿಗೆ ಎರಡೆರಡು ಕ್ಷೇತ್ರಗಳನ್ನು ಬಿಟ್ಟಿದ್ದಾರೆ. ಎರಡೆರಡು ಪಂಚಾಯಿತಿಗಳನ್ನು ಕೊಡುತ್ತಾರೆ. ಅವರು ಅಲ್ಲಿಗೆ ಹೋಗುವುದೇ ಇಲ್ಲ. ಅವರು ರಾಯಚೂರು ಜಿಲ್ಲಾ ಕೇಂದ್ರದಲ್ಲಿರುತ್ತಾರೆ. ಅವರು ಹಳ್ಳಿಗಳ ಪರಿಸ್ಥಿತಿಯನ್ನು ನೋಡಲಿಕ್ಕಾಗುವುದಿಲ್ಲ. ಆ ಕಾರಣದಿಂದಾಗಿಯೇ ಶಾಸಕರ ಒಂದು ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ಕಮಿಟಿಗೆ ಕೊಟ್ಟರೆ ಸರಿಯಾದಂತಹ ವ್ಯವಸ್ಥೆಯಲ್ಲಿ ಜನರು ಕೇಳಿದಾಗ ಬೋರ್‌ವೆಲ್‌ಗಳನ್ನು ಕೊಟ್ಟು ನೀರಿನ ವ್ಯವಸ್ಥೆಯನ್ನು ಮಾಡಿಕೊಡುವುದಕ್ಕೆ ಅನುಕೂಲವಾಗುತ್ತದೆ. ಈ ಒಂದು ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡು ಇದರ ಬಗ್ಗೆ ಚರ್ಚೆಯಾಗಿ ಈ ಪಂಚಾಯಿತಿಯ ಬಗ್ಗೆ ಏನು ನಿಯಮವಾಗಿದೆ ಅದನ್ನು ಬದಲಾವಣೆ ಮಾಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯವನ್ನು ಮಾಡುತ್ತೇನೆ.

ಅಧ್ಯಕ್ಷರು : ಈಗ ನಾನು ಚರ್ಚೆಯನ್ನು ಮುಕ್ತಾಯ ಮಾಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಈಗ ತಾವುಗಳೆಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು. ಈ ತರಹ ಆದರೆ ಹೇಗೆ ? ಈಗ ರಾಜ್ಯಪಾಲರ ವಂದನಾನಿರ್ಣಯವಿದೆ, ಅದರ ಮೇಲೆ ಚರ್ಚೆ ಮಾಡುವ ಬಗ್ಗೆ ಎಲ್ಲಾ ಸದಸ್ಯರು ಭಾಗವಹಿಸುವುದಕ್ಕೆ ಅವಕಾಶವಿದೆ. ಈ ತರಹ ಆದರೆ ನಾವು ಸದನವನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲರೂ ಮಾತನಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು : ಆಗುವುದಿಲ್ಲ. ಈ ರೀತಿಯಾಗಿ ಎಷ್ಟು ದಿನವೆಂದು ನಡೆಸುವುದಕ್ಕಾಗುತ್ತದೆ?

ಶ್ರೀ ಬಿ.ಎಸ್. ಯಡಿಯೂರಪ್ಪ(ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಇಷ್ಟೊಂದು ಜ್ವಲಂತ ಸಮಸ್ಯೆಗಳಿದ್ದರೂ ಸಹ ಎಲ್ಲವನ್ನೂ ಪಕ್ಕಕ್ಕೆ ಇಟ್ಟು ಕುಡಿಯುವ

…ರಿನ ಹಾಹಾಕಾರ ಹಾಗೂ ವಿದ್ಯುತ್ ಕ್ಷಾಮದ ಬಗ್ಗೆ ನಿಲುವಳಿ ಸೂಚನೆಯ ಮೇರೆಗೆ …ರ್ಚೆಯಾಗುತ್ತಿದೆ. ಅದನ್ನು ತಾವು ಕನ್‌ವರ್ಟ್ ಮಾಡಿಕೊಟ್ಟಿದ್ದೀರಿ. ಅನೇಕ ಜನ ಶಾಸಕರು ಸ್ಪೆಸಿಫಿಕ್ಕಾಗಿ …ಳಿದ್ದಾರೆ. ರಾಜ್ಯಪಾಲರ ಭಾಷಣಕ್ಕೆ ವಂದನಾನಿರ್ಣಯದ ಬಗ್ಗ ಅನೇಕ ವಿಷಯಗಳು ಇಲ್ಲಿ …ದಿದೆ, ಆ ಸಮಯದಲ್ಲಿ ಏನೇನು ಮಾತನಾಡಬೇಕೋ ಮಾತನಾಡುತ್ತೇನೆ. ಇಲ್ಲಿ ಸ್ಪೆಸಿಫಿಕ್ಕಾಗಿ …ಡಿಯುವ ನೀರು ಮತ್ತು ವಿದ್ಯುತ್‌ನ ಬಗ್ಗೆ ಇನ್ನೂ ಒಂದು ಗಂಟೆಗಳ ಕಾಲ ಚರ್ಚೆಯನ್ನು …ಾಡೋಣ. ನಾಳೆ ಒಂದು ಅರ್ಧ ದಿವಸ ಮಾಡಿ ನಂತರ ಇದನ್ನು ತೆಗೆದುಕೊಳ್ಳೋಣ. ನಾವು …ಮಗೆ ಕೋ–ಅಪರೇಟ್ ಮಾಡುತ್ತೇವಲ್ಲಾ.

ಅಧ್ಯಕ್ಷರು : ಬಹಳ ಪ್ರಮುಖವಾದಂತಹ ವಿಷಯಗಳಿವೆ. ನಿಯಮ –69ರ ಅಡಿಯಲ್ಲಿ …ರ್ಚೆ ನಡೆಯಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ಕೆಲಸ ಮಾಡಿ ಸಾರ್, ಇವತ್ತು 6–30 …ಂಟೆಯವರೆಗೂ ಚರ್ಚೆ ನಡೆಯಲಿ. ಇನ್ನೂ 10 ರಿಂದ 12 ಜನರು ಇದರ ಬಗ್ಗೆ ಮಾತನಾಡಲಿ. …ಳೆ ಈ ತರಹ ಮಾಡಿಸಿ.

ಅಧ್ಯಕ್ಷರು : ಯಡಿಯೂರಪ್ಪನವರೇ, ಬಹಳ ಕಷ್ಟವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ನಿಮಗೆ ಕೋ–ಅಪರೇಟ್ ಮಾಡುತ್ತೇನೆ. …ನ್ನು 8–10 ಜನರಿಗೆ ಮಾತನಾಡುವುದಕ್ಕೆ ಐದೈದು ನಿಮಿಷಗಳ ಕಾಲ ಅವಕಾಶವನ್ನು ಮಾಡಿಕೊಡಿ.

ಅಧ್ಯಕ್ಷರು : ಮಾತನಾಡುವುದರ ಬಗ್ಗೆ ಅವಕಾಶ ಕೊಡುವುದಕ್ಕೆ ನನ್ನದೇನೂ ಅಡ್ಡಿಯಿಲ್ಲ. …ದರೆ ಇದು ಇವತ್ತು ಮುಗಿಯದಿದ್ದರೆ ಬೇರೆ ಬೇರೆ ಸಮಸ್ಯೆಗಳು ಇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು 6–30 ಗಂಟೆಯವರೆವಿಗೂ ಕೂಡ …ಾತನಾಡಲಿ ನಾಳೆ ದಿವಸ ಬೇರೆಯವರಿಗೂ ಕೂಡ ಅವಕಾಶವನ್ನು ಮಾಡಿಕೊಡಿ.

ಶ್ರೀ ಹೆಚ್. ಅಂಜನೇಯ : ಮಾನ್ಯ ಸಭಾಧ್ಯಕ್ಷರೆ,.....

ಶ್ರೀ ವಾಟಾಳ್ ನಾಗರಾಜ್ : ಇದು ಸಂಪೂರ್ಣವಾಗಿ ಈ ದಿನವೆಲ್ಲಾ ಚರ್ಚೆಯಾಗಲಿ. …ಳೆ ಸರ್ಕಾರದವರು ಉತ್ತರ ಕೊಡಲಿ.

ಅಧ್ಯಕ್ಷರು : ಆಗುವುದಿಲ್ಲ. ಬೇರೆ ಯಾವುದೂ ಚರ್ಚೆಗೆ ಬೇಡ ಅಂತೀರಾ? ಆಯಿತು. …ಗ ಇಡೀ ಸದನ ನಿರ್ಧಾರ ಮಾಡಿಬಿಟ್ಟರೆ, ಇದೊಂದನ್ನೇ ನಾಳೆ ಇಡೀ ದಿವಸ ಚರ್ಚೆ ಮಾಡುವುದಾದರೆ …ನ್ನದೇನೂ ಅಡ್ಡಿಯಿಲ್ಲ. ಆದರೆ ಬೇರೆ ಬೇರೆ ಗಂಭೀರವಾದ ವಿಚಾರಗಳನ್ನು ಮಾನ್ಯ ಸದಸ್ಯರುಗಳು …ತ್ತಿದ್ದಾರೆ. ಅವೆಲ್ಲವೂ ಕೂಡ ಚರ್ಚೆಯಾಗಬೇಕು. ಅದಕ್ಕೋಸ್ಕರ ಸಾಕಷ್ಟು ಈ ವಿಚಾರದಲ್ಲಿ …ರ್ಚೆಯಾಗಿದೆ. ಆದ್ದರಿಂದ ಇವತ್ತು ಇದನ್ನು ಮುಕ್ತಾಯ ಮಾಡೋಣ ಅಂತ......

ಶ್ರೀ ಅರಗ ಜ್ಞಾನೇಂದ್ರ : ಈಗ ನಾವೆಲ್ಲರೂ ಮಾತನಾಡಿ ಅವರಿಗೆ ಹೃದಯ …ರಿವರ್ತನೆಗಾಗಿ ಒಂದಿಷ್ಟು ಕೋಟಿಗಟ್ಟಲೆ ದುಡ್ಡು ಕೊಡುತ್ತಾರೋ ಏನೋ ಅಂತ ಈ ಒತ್ತಡವನ್ನು …ಾವು ಹಾಕೋಣ.

(ಗೊಂದಲ)

(ಅನೇಕ ಸದಸ್ಯರುಗಳು ಎದ್ದುನಿಂತು ತಮಗೂ ಅವಕಾಶ ಕೊಡಬೇಕೆಂದು ಏಕಕಾಲದಲ್ಲಿ ಕೇಳಿದರು)

ಅಧ್ಯಕ್ಷರು : ಆಯಿತು. ಇನ್ನು ಅರ್ಧಗಂಟೆ ಚರ್ಚೆಯಾಗಲಿ. ಈಗ ಮಾನ್ಯ ಅಂಜನೇಯ ಅವರು ಐದು ನಿಮಿಷದಲ್ಲಿ ಮುಗಿಸಬೇಕು. ಈಗ ಗಂಟೆ 5.20 ಆಗಿಹೋಯಿತು. ಈಗ ದಯಮಾಡಿ ಇವತ್ತು ಚರ್ಚೆಯನ್ನು ಮುಗಿಸೋಣ. ಇದಕ್ಕೆ ಎಲ್ಲರೂ ಸಹಕರಿಸಬೇಕು. ನಾಳೆ ಅಲ್ಲಿಂದ ಉತ್ತರ. ಹೀಗೆ ಇದನ್ನು ಮುಕ್ತಾಯ ಮಾಡೋಣ. ಇನ್ನೂ ಅನೇಕ ಬೇರೆ ಬೇರೆ ಗಂಭೀರವಾದ ವಿಚಾರಗಳು ಇವೆ.ಈಗ ಅಂಜನೇಯ ಅವರೇ ನೀವು ಐದು ನಿಮಿಷದಲ್ಲಿ ಮುಗಿಸಬೇಕು.

(ಗೊಂದಲ. ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಿದರು)

ಅಧ್ಯಕ್ಷರು : ಈಗ ನಾನು ಮಾನ್ಯ ಅಂಜನೇಯ ಅವರನ್ನು ಕರೆದಿದ್ದೇನೆ, ನೀವೆಲ್ಲರೂ ಎದ್ದುನಿಂತುಕೊಂಡರೆ ಹೇಗೆ? ಮಾನ್ಯ ಅಂಜನೇಯನವರೇ, ನೀವು ಮಾತನಾಡಿ, ಐದು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಎಚ್. ಅಂಜನೇಯ(ಭರಮಸಾಗರ) : ಸನ್ಮಾನ್ಯ ಅಧ್ಯಕ್ಷರೆ, ತಾವು ನೀರಿನ ಬಗ್ಗೆ ಹೆಚ್ಚು ಸಮಯ ಕೊಟ್ಟು.....

ಅಧ್ಯಕ್ಷರು : ಐದೇ ನಿಮಿಷ....

ಶ್ರೀ ಎಚ್. ಅಂಜನೇಯ : ಪರಿಣಾಮ ಬೀರುವ ರೀತಿಯಲ್ಲಿ ತಾವು ಆಜ್ಞೆ ಮಾಡಬೇಕು. ತಾವು ಗಾಂಧಿವಾದಿಗಳು. ಸ್ವಲ್ಪ ಸುಭಾಶ್‌ಚಂದ್ರ ಬೋಸ್‌ರ ಶಿಸ್ತಿನ ರೀತಿಯಲ್ಲಿ ನೀವು ಅಧಿಕಾರಿಗಳಿಗೆ ಮತ್ತು ಮಂತ್ರಿಗಳಿಗೆ ಆದೇಶವನ್ನು ನೀಡಬೇಕು ಮತ್ತು ನಮ್ಮನ್ನು ಕಾಪಾಡಬೇಕು. ಏಕೆಂದರೆ ನಮ್ಮ ಕ್ಷೇತ್ರದಲ್ಲಿ ಏನಾಗಿದೆ ಎಂದರೆ, ಆರವತ್ತು ಹಳ್ಳಿಗಳಲ್ಲಿ ಕುಡಿಯಲಿಕ್ಕೆ ನೀರು ಇಲ್ಲ. ಎಲ್ಲಿ ಬೋರ್ ಹಾಕಿದರೂ ಕೂಡ ನೀರು ಲಭ್ಯತೆ ಆಗುತ್ತಿಲ್ಲ. ಕಳೆದ 9 ತಿಂಗಳಿಂದ ಹತ್ತು ಹಳ್ಳಿಗಳಲ್ಲಿ ಹತ್ತು ಬೋರ್‌ಗಳನ್ನು ಹಾಕಿದ್ದೇವೆ. ಅಲ್ಲಿ ನೀರು ಲಭ್ಯವಾಗಿದೆ. ಆದರೆ ನೀರು ಲಭ್ಯವಾಗಿರತಕ್ಕಂಥ ಕೊಳವೆ ಬಾವಿಗಳಿಗೆ-ಇವತ್ತು ಪೈಪ್‌ಲೈನ್ ಹಾಕುವುದಕ್ಕೆ ದುಡ್ಡು ಇಲ್ಲವೆಂದು ಹೇಳುತ್ತಾರೆ. ಮೋಟಾರ್‌ನ್ನು ಅಳವಡಿಸುವುದಕ್ಕೆ ದುಡ್ಡಿಲ್ಲ ಎಂದು ಹೇಳುತ್ತಾರೆ. ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡುವುದಕ್ಕೆ ಕೂಡ ದುಡ್ಡು ಇಲ್ಲವೆಂದು ಹೇಳುತ್ತಾರೆ. ಜಿಲ್ಲಾ ಪಂಚಾಯತಿಗೆ ಹೋಗಿ ಕೇಳಿದರೆ ಸ್ವಾಮಿ, ಇದು ನಮ್ಮದಲ್ಲ. ಗ್ರಾಮ ಪಂಚಾಯತಿಯನ್ನು ಕೇಳಿರಿ ಅಂತ ಹೇಳುತ್ತಾರೆ. ಗ್ರಾಮ ಪಂಚಾಯತಿಯಲ್ಲಿ ಅಧ್ಯಕ್ಷರೂ ಇಲ್ಲ, ಕಾರ್ಯದರ್ಶಿಗಳೂ ಇಲ್ಲ. ನಾವು ಇಷ್ಟು ಹಣ ಎಲ್ಲಿಂದ ತರುವುದು, ನಮ್ಮಲ್ಲಿರುವುದು ಎರಡು–ಮೂರು ಸಾವಿರ ರೂಪಾಯಿಗಳಲ್ಲಿ ಬೇಕಾದರೆ ರಿಪೇರಿ ಮಾಡಿಸಿ ನಮ್ಮಲ್ಲಿರುವುದು ಎರಡು–ಮೂರು ಸಾವಿರ ರೂಪಾಯಿಗಳಲ್ಲಿ ಬೇಕಾದರೆ ರಿಪೇರಿ ಮಾಡಿಸಿ ಕೊಡಬಹುದು. ಅಷ್ಟು ಮಾತ್ರ ನಮ್ಮ ಹತ್ತಿರ ಹಣ ಇದೆ. ಐದಾರು ಲಕ್ಷ ರೂಪಾಯಿ ವೆಚ್ಚಮಾಡಿ ನೀರು ತರತಕ್ಕಂಥ ಶಕ್ತಿ ಗ್ರಾಮ ಪಂಚಾಯತಿಗೆ ಇಲ್ಲವೆಂದು ಅವರು ಹೇಳುತ್ತಾರೆ. ನಾವು ಜಿಲ್ಲಾ ಪಂಚಾಯತಿಯವರಿಗೆ ಹೇಳಿಯಾಯಿತು ಮತ್ತು ಜಿಲ್ಲಾಧಿಕಾರಿಗಳಿಗೂ ಕೂಡ ಹೇಳಿಯಾಯಿತು. ಸರ್ಕಾರದ ಗಮನವನ್ನೂ ಕೂಡ ಸೆಳೆದಿದ್ದಾಯಿತು. ಆದರೆ ಇಲ್ಲಿಯವರೆಗೂ ಕೂಡ ಅದು ಕಾರ್ಯಾಚರಣೆಗೆ ಬಂದಿಲ್ಲ. ಆದ್ದರಿಂದ ಈ ಸದನವನ್ನು, ಮುಗಿಸಿ ನಮ್ಮ ಕ್ಷೇತ್ರದಲ್ಲಿ ಕಾಲಿಡುವುದಕ್ಕೆ ನಮಗೆ ಕಷ್ಟವಾಗಿದೆ. ಜನರು ನೀರು ಕೊಡಿ ಎಂದು ಅಳುತ್ತಿದ್ದಾರೆ. ಕಣ್ಣೀರು ಹಾಕುತ್ತಿದ್ದಾರೆ. ಈಗ ನಾವು ಏನಾದರೂ ಹೋಗಿ ನೋಡಿದರೆ ಅವರ ಕಣ್ಣಲ್ಲಿ ನೀರು ಬರುವುದಿಲ್ಲ, ಅವರ ಕಣ್ಣಲ್ಲಿ ರಕ್ತ ಬರುವ ಸ್ಥಿತಿ ಇವತ್ತು ಪಶುಪಕ್ಷಿಗಳು ಎಲ್ಲೆಲ್ಲಿ ಕೂಡ ಅಡ್ಡಾಡುತ್ತಿಲ್ಲ. ಭೂಮಿ ಮೇಲೆ ಒಂದು ಹನಿ ನೀರೂ ಕಾಣುತ್ತಿಲ್ಲ. ತಮ್ಮ ದನಕರುಗಳನ್ನು

ರೈತರುಗಳು ಬೇರೆ ಊರುಗಳಿಗೆ ಕಳುಹಿಸುತ್ತಿದ್ದಾರೆ. ನಮಗೇ ನೀರು ಇಲ್ಲ, ಇನ್ನೆಲ್ಲಿ ಅವುಗಳನ್ನು ಇಟ್ಟುಕೊಳ್ಳುವುದಕ್ಕೆ ಆಗುತ್ತದೆ ಅಂತ ಹೇಳಿ ಅವರು ಹೀಗೆ ಮಾಡುತ್ತಿದ್ದಾರೆ. ಹೀಗಾಗಿ ಒಂದು ಪಶುಪಕ್ಷಿ ಕೂಡ ನಮ್ಮ ಕ್ಷೇತ್ರದಲ್ಲಿ ಕಾಣುತ್ತಿಲ್ಲ. ಇಂತಹ ಒಂದು ಭೀಕರವಾದಂಥ ವಾತಾವರಣ ನಿರ್ಮಾಣವಾಗಿದೆ. ಹತ್ತು ಹಳ್ಳಿಗಳಲ್ಲಿ ಇವತ್ತು ಚಿತ್ರದುರ್ಗದಿಂದ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುತ್ತಿದ್ದೇವೆ. ಅರವತ್ತು ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಇಂತಹ ಸ್ಥಿತಿ ನಿರ್ಮಾಣವಾದ ಮೇಲೆ ನಾವು ಜನಪ್ರತಿನಿಧಿಗಳು ಅಲ್ಲಿ ಏನು ಮಾಡಬೇಕು? ನಾವು ಬಹಳ ಉತ್ಸಾಹದಿಂದ ಶಾಸಕರಾಗಿ ಆಯ್ಕೆಯಾಗಿದ್ದೇವೆ. ಏನೋ ಬಹಳ ಭರವಸೆ ಇಟ್ಟು ಜನರು ನಮ್ಮನ್ನು ಗೆಲ್ಲಿಸಿಬಿಟ್ಟಿದ್ದಾರೆ. ಈಗ ನಮಗೆ ಇದೆಲ್ಲಾ ಗೊತ್ತಾಗುತ್ತಿದೆ ಇಷ್ಟು ಕಷ್ಟ ಆಗುತ್ತದೆ ಎಂದು ಗೊತ್ತಿದ್ದರೆ ನಾವು ಚುನಾವಣೆಗೇ ನಿಲ್ಲುತ್ತಿರಲಿಲ್ಲ. ಅವರ ಕಣ್ಣೀರು ಒರೆಸಲಿಕ್ಕೆ ಆಗುತ್ತಿಲ್ಲ, ಅವರ ಕಷ್ಟಗಳಿಗೆ ಸ್ಪಂದನ ಮಾಡಲಿಕ್ಕೆ ನಮ್ಮ ಕೈಯಲ್ಲಿ ಇವತ್ತು ಆಗುತ್ತಿಲ್ಲ. ಇಂತಹ ಸ್ಥಿತಿ ನಿರ್ಮಾಣವಾಗುತ್ತದೆ ಎಂದು ನನಗೆ ಗೊತ್ತಾಗದಿದ್ದರೆ ಖಂಡಿತವಾಗಿಯೂ ನಾನು ಚುನಾವಣೆಗೆ ಸ್ಪರ್ಧೆ ಮಾಡುತ್ತಿರಲಿಲ್ಲ. ಇಂತಹ ಒಂದು ಪರಿಸ್ಥಿತಿ ನಮಗೆ ಬಂದೊದಗಿದೆ. ಆದ್ದರಿಂದ ಸರ್ಕಾರ ಶಾಸಕರ ಕಷ್ಟಕ್ಕೆ, ಜನರ ಕಷ್ಟಕ್ಕೆ ಬೆಂಬಲವಾಗಿ ನಿಲ್ಲಲೇಬೇಕು. ಏನಾದರೂ ಮಾಡಿ ರಾಜಕೀಯ ಇಚ್ಛಾಶಕ್ತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರದರ್ಶಿಸತಕ್ಕಂಥ ಶಕ್ತಿಯನ್ನು ನೀವು ಅವರಿಗೆ ನೀಡಬೇಕು, ಸರ್ಕಾರಕ್ಕೆ ನೀಡಬೇಕು. ಏಕೆಂದರೆ ನಾವು ಶಾಸಕರಾಗಿ ಒಂದು ಬೋರ್‌ವೆಲ್‌ನ್ನು ಕೂಡ ಕೊಡಿಸುವುದಕ್ಕೆ ನಮಗೆ ಯೋಗ್ಯತೆ ಇಲ್ಲ ಅಂತ ಹೇಳಿದ ಮೇಲೆ ನಾವು ಏಕೆ ಶಾಸಕರಾಗಿ ಇರಬೇಕು? ಆದ್ದರಿಂದ ತಾವು ದಯಮಾಡಿ ಸರ್ಕಾರಕ್ಕೆ ಮತ್ತೆ ಮುಖ್ಯಮಂತ್ರಿಗಳಿಗೆ ಹೇಳಿ ಕೂಡಲೇ ಈ ಸಭೆ ಮುಗಿದ ತಕ್ಷಣವೇ ಏನಾದರೂ ಮಾಡಿ ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡಿ ಶಾಸಕರ ನೇತೃತ್ವದಲ್ಲಿ ಶಾಸಕರ ಉಸ್ತುವಾರಿಯಲ್ಲಿ ನೀರು ಸರಬರಾಜು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ ಎನ್ನತಕ್ಕಂಥ ಸರ್ಕಾರದ ಸ್ಪಷ್ಟ ನಿರ್ದೇಶನ ಬರುವವರೆಗೂ ಕೂಡ ನಾವು ಸದನ ಬಿಟ್ಟು ಕದಲುವುದಿಲ್ಲ ಮತ್ತು ನಾವು ನಮ್ಮ ಊರುಗಳಿಗೆ ಕೂಡ ಹೋಗುವುದಿಲ್ಲ. ಸರ್ಕಾರದಿಂದ ಸರಿಯಾದ ಭರವಸೆ ಬರಬೇಕು. ಅವಾಗಲೇ ನಾವು ಇಲ್ಲಿಂದ ಹೋಗುವುದು. ಹಿರಿಯರಾದ ಸನ್ಮಾನ್ಯ ವಾಟಾಳ್ ನಾಗರಾಜ್ ಅವರು ಮೊನ್ನೆ ನೀರು ಸರಬರಾಜು ಮಾಡುವುದಕ್ಕೆ ಎಲ್ಲಾ ಶಾಸಕರುಗಳಿಗೂ ಕೂಡ ಒಂದೊಂದು ಕೋಟಿ ರೂಪಾಯಿ ಬಿಡುಗಡೆ ಮಾಡಬೇಕೆಂದು ಹೇಳಿದ್ದಾರೆ.

ಶ್ರೀ ಎಸ್. ರಾಜೇಂದ್ರನ್ : ಅಧ್ಯಕ್ಷರೆ, ಒಂದೊಂದು ಕೋಟಿ ರೂ ಅಲ್ಲ, ಒಂದೊಂದು ಕೆರೆಯನ್ನು ಡೀಸಿಲ್ಟಿಂಗ್ ಮಾಡಿದರೆ ಸಾಕು. ನಮ್ಮ ಜಿಲ್ಲಾ ಮಂತ್ರಿಗಳು ಇಲ್ಲಿ ಕುಳಿತುಕೊಂಡಿದ್ದಾರೆ. ನಮ್ಮ ವಾಟರ್‌ಟ್ಯಾಂಕ್ ಬಗ್ಗೆ ಸುಮಾರು ಸಲ ನಾನು ಹೇಳಿದ್ದೇನೆ. ಸರ್ಕಾರದವರು ಆ ಕೆರೆಯನ್ನು ಡೀಸಿಲ್ಟಿಂಗ್ ಮಾಡಿಕೊಟ್ಟರೆ ಸಾಕು. ಮಾನ್ಯ ವಾಟಾಳ್ ನಾಗರಾಜ್ ಅವರು ಒಂದು ಕೋಟಿ ರೂಪಾಯಿ ಕೊಡಬೇಕು, ಕೊಡದಿದ್ದರೆ ಧರಣಿ ಮಾಡುತ್ತೇವೆ ಎಂದು ನಿರ್ಧಾರ ಮಾಡಿ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಸಭೆಯಲ್ಲಿ ಇದ್ದಾರೆ. ಈಗ ಮಾಡದಿದ್ದರೆ ಡೀಸಿಲ್ಟಿಂಗ್ ಇನ್ಯಾವಾಗ ಮಾಡುವುದು ಸ್ವಾಮಿ? ಆಮೇಲೆ ನಿಮ್ಮ ಅಧಿಕಾರಿಗಳು ಎಲ್ಲಿ ಸಿಗುತ್ತಾರೆ ಹೇಳಿ. ಈಗ ಸ್ವಲ್ಪ ಮಳೆ ಬಂದಿದೆ. ಮಳೆ ಬರದೇ ಇದ್ದರೆ ಏನು ಮಾಡುತ್ತೀರಿ?

ಅಧ್ಯಕ್ಷರು : ಮಾನ್ಯ ರಾಜೇಂದ್ರನ್‌ರವರೇ ಕುಳಿತುಕೊಳ್ಳಿ. ಅವರು ಮಾತನಾಡಲಿ.

ನೀವು ಈಗಾಗಲೇ ಮಾತನಾಡಿದ್ದೀರಿ.

ಶ್ರೀ ಎಸ್. ರಾಜೇಂದ್ರನ್ : ನಾನು ಮಂತ್ರಿಗಳಿಗೆ ಹೇಳುತ್ತಿದ್ದೇನೆ. ಸ್ವಲ್ಪ ಇದರ ಬಗ್ಗೆ ನೋಡಿ.

ಶ್ರೀ ಎಚ್. ಅಂಜನೇಯ : ಎರಡು ದಿನಕಾಲ ನನ್ನ ಕ್ಷೇತ್ರದಲ್ಲಿ ಅಧಿಕಾರಿಗಳ ಜತೆಗೆ ನಾನು ಪ್ರವಾಸ ಮಾಡಿದ್ದೇನೆ. ಇಪ್ಪತ್ತೆರಡು ಗ್ರಾಮಪಂಚಾಯತಿಗಳಿಗೆ ಹೋಗಿ ಎಲ್ಲವನ್ನೂ ಅಧ್ಯಯನ ಮಾಡಿದ್ದೇನೆ. ಇಪ್ಪತ್ತೆಂಟು ಗ್ರಾಮಪಂಚಾಯತಿಗಳ ಕಾರ್ಯದರ್ಶಿಗಳನ್ನು ಮತ್ತು ಅಲ್ಲಿನ ಮುಖ್ಯಾಧಿಕಾರಿಗಳನ್ನು ಕರೆದು ನಾನು ಸಭೆ ಮಾಡಿದ್ದೇನೆ. ಎಲ್ಲರಿಂದಲೂ ಎಷ್ಟು ಹಣ ಬೇಕು ಎಂಬುದರ ಬಗ್ಗೆ ಒಂದು ಅಂದಾಜು ಪಟ್ಟಿಯನ್ನು ನನ್ನ ಕ್ಷೇತ್ರದಲ್ಲಿ ನಾವು ಸಿದ್ಧಪಡಿಸಿದ್ದೇವೆ. ಈ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಸುಮಾರು ಎರಡು ಕೋಟಿ ರೂಪಾಯಿ ಬೇಕಾಗುತ್ತದೆ. ಅಲ್ಲಿನ ಅಧಿಕಾರಿಗಳ ಜತೆಗೆ ಸಮಾಲೋಚನೆ ಮಾಡಿದಾಗ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅಗತ್ಯವಾಗಿ ಬೇಕಾಗಿರತಕ್ಕಂಥಾದ್ದು ಎರಡು ಕೋಟಿ ರೂ ಎಂದು ಅಂದಾಜು ಮಾಡಿದ್ದು ಎರಡು ಕೋಟಿ ರೂಪಾಯಿಗಳನ್ನು ತಾವು ಮಂಜೂರು ಮಾಡಲಿಕ್ಕೆ ಸರ್ಕಾರಕ್ಕೆ ತಾವು ನಿರ್ದೇಶನ ಕೊಡಬೇಕು. ಕೂಡಲೇ ಈ ಒಂದು ವ್ಯವಸ್ಥೆಯನ್ನು ಮಾಡಲಿಕ್ಕೆ ತಾವು ನಮಗೆ ಬೆಂಗಾವಲಾಗಿ ನಿಲ್ಲಬೇಕೆಂದು ತಮ್ಮಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಬಡತನ ಜಿಲ್ಲೆಯಿಂದ ಬಂದಿರತಕ್ಕದ್ದು. ಗುಲ್ಬರ್ಗಾ ಜಿಲ್ಲೆಯೆಂದರೆ ಒಂದು ಕಾಲದಲ್ಲಿ ಎಲ್ಲರೂ ಕೂಡ ಗುಲ್ಬರ್ಗಾ ಖಾಲಿ ಮಾಡಿ ಬೆಂಗಳೂರಿಗೆ ಬರುತ್ತಿದ್ದರು. ದಾವಣಗೆರೆಗೆ ಬರುತ್ತಿದ್ದರು. ನಮ್ಮ ಕಡೆಗೆಲ್ಲಾ ಬರುತ್ತಿದ್ದರು. ಆದರೆ ಇವತ್ತು ಮಾನು ಖರ್ಗೆ, ಧರ್ಮಸಿಂಗ್ ಅವರ ನೇತೃತ್ವದಲ್ಲಿ ಹಾಗೂ ವೀರೇಂದ್ರ ಪಾಟೀಲರ ನೇತೃತ್ವದಲ್ಲಿ ಆ ಭಾಗದಲ್ಲಿ ಭೀಮಾ ನದಿ ಮತ್ತು ಇನ್ನು ಉಳಿದ ನದಿಗಳನ್ನು ಹಾಯಿಸಿಕೊಂಡು ಗುಲ್ಬರ್ಗಾದಲ್ಲಿ ಹೆಚ್ಚು ನೀರನ್ನು ಕೊಡುವುದರ ಮೂಲಕ ಅವರ ಗಟ್ಟಿ ನಾಯಕತ್ವವನ್ನು ಉಳಿಸಿಕೊಂಡು ಅಲ್ಲಿ ಇವತ್ತು ಬೆಳೆಯುತ್ತಿದ್ದಾರೆ. ನಾವೂ ಕೂಡ ಬೆಳೆಯತಕ್ಕಂಥ ರಾಜಕಾರಣಿಗಳು. ನಮ್ಮಲ್ಲಿ ನೀರಾವರಿ ಇಲ್ಲ ಮತ್ತು ಯಾವ ಕೆರೆಯಲ್ಲೂ ಕೂಡ ನೀರು ತರಲಿಕ್ಕೆ ಆಗುವುದಿಲ್ಲ. ಅಪ್ಪರ್ ಭದ್ರಾ ತರಬೇಕೆಂದು ಕೂಗಾಡಿದ್ದೇವೆ.....

ಅಧ್ಯಕ್ಷರು : ಆಯಿತು. ಬೇಗ ಮುಗಿಸಿ. ಬಹಳ ಜನ ಕಾಯುತ್ತಿದ್ದಾರೆ.

ಶ್ರೀ ಎಚ್. ಅಂಜನೇಯ : ನಮ್ಮ ವಿರೋಧಪಕ್ಷದ ನಾಯಕರು ಮತ್ತು ನಮ್ಮ ನಾಯಕರು ಕೊಟ್ಟಂಥ ಸಲಹೆಯನ್ನು ಸರ್ಕಾರ ಗಂಭೀರವಾಗಿ ಮತ್ತು ಸೌಜನ್ಯದಿಂದ ಗೌರವಿಸಿ ಈ ನೀರಿನ ವಿಚಾರದಲ್ಲಿ ಸ್ಪಂದಿಸಬೇಕು ಮತ್ತು ಕುಡಿಯುವ ನೀರಿನ ಸಮಸ್ಯೆಯನ್ನು ಸಮರೋಪಾದಿಯಲ್ಲಿ ಬಗೆಹರಿಸತಕ್ಕಂಥ ಒಂದು ಸಂಕಲ್ಪವನ್ನು ಸರ್ಕಾರದವರು ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಆಗ್ರಹಿಸಿ ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಂಥ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಮಹದೇವರವರು. ನೀವು ಐದು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಮಹದೇವ್(ಕೃಷ್ಣರಾಜನಗರ) : ಮಾನ್ಯ ಅಧ್ಯಕ್ಷರೆ, ಬಹಳಷ್ಟು ಗಂಭೀರವಾದ ವಿಚಾರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ, ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ಒಂದು ದೊಡ್ಡ ಸಮಸ್ಯೆ ಮತ್ತು ಇವತ್ತು ಈ ಸದನದ ಎಲ್ಲಾ ಸದಸ್ಯರನ್ನು ಕೂಡ ಕಾಡುತ್ತಿರುವಂಥಾದ್ದು

ಒಂದೇ ಸಮಸ್ಯೆ. ಒಬ್ಬ ಶಾಸಕರ ಜವಾಬ್ದಾರಿ ಏನು? ಇದರ ಜೊತೆಗೆ ಹೊಸದಾಗಿ ಬಂದಿರತಕ್ಕಂಥ ಡಿಸೆಂಟ್ರಲೈನೇಶನ್ ಕಾನ್ಸೆಪ್ಟ್‌ನಲ್ಲಿ ನಾವು ಎಲ್ಲಿ ನಿಲ್ಲುತ್ತಾ ಇದ್ದೇವೆ ಎನ್ನುವಂಥಾದ್ದು. ಇದರಲ್ಲಿ ನಮ್ಮ ಜವಾಬ್ದಾರಿ ಏನು ಎನ್ನುವುದು ಒಂದು ಕಡೆಗೆ ಇದ್ದರೆ ಇನ್ನೊಂದು ಕಡೆಗೆ ಡಿಸೆಂಟ್ರಲೈಸೇಶನ್‌ನಲ್ಲಿ ನಾವೆಲ್ಲರೂ ಕೂಡ ನಂಬಿಕೆಯನ್ನು ಇಟ್ಟುಕೊಂಡಿರತಕ್ಕವರು. ನಾವು ಯಾರೂ ಕೂಡ ಡಿಸೆಂಟ್ರಲೈಸೇಶನ್‌ಗೆ ವಿರೋಧಿಗಳು ಅಲ್ಲ. ಈ ರಾಷ್ಟ್ರದಲ್ಲಿ ಹಲವಾರು ಬಾರಿ ಹಲವಾರು ಹಂತದಲ್ಲಿ ಡೆವಲಪ್‌ಮೆಂಟ್ ಅವಕಾಶದ ಬಗ್ಗೆ ಪ್ರಯತ್ನ ಮಾಡಿದ್ದೇವೆ. ಡೆಲ್ಲಿಯಲ್ಲಿ ಒಂದು ಬಾರಿ ಕುಳಿತು ಅಭಿವೃದ್ಧಿ ದಿಕ್ಕಿನಲ್ಲಿ ಹೊರಟಾಗ ಅದು ಯಶಸ್ವಿಯಾಗಲಿಲ್ಲ. ಹಾಗಾಗಿ ಅವರು ಮತ್ತೆ ರಾಜ್ಯಮಟ್ಟದಲ್ಲಿ ಬೆಂಗಳೂರಿನಲ್ಲಿ ಕುಳಿತು ಪ್ಲಾನಿಂಗ್ ಪ್ರೋಸಸ್ ಪ್ರಯತ್ನ ಮಾಡಿದ್ದಾರೆ. ಆದರೆ ಅಲ್ಲಿ ಕೂಡ ಫೇಲ್ ಆಗಿದ್ದಾರೆ. ಜಿಲ್ಲಾಮಟ್ಟದಲ್ಲಿ ಕೂಡ ಹೋಗಿ ಡಿಸ್ಟ್ರಿಕ್ಟ್ ಅಡಿನಿಸ್ಟ್ರೇಶನ್ ಕಡೆಯಿಂದ ಅಡ್ಮಿನಿಸ್ಟ್ರೇಶನ್ ಡೆವಲಪ್‌ಮೆಂಟ್‌ನ ಪ್ರಕ್ರಿಯೆ ಪ್ರಾರಂಭ ಮಾಡಿ ನೋಡಿದ್ದಾರೆ ಮತ್ತು ಅದರಲ್ಲಿ ವಿಫಲರಾಗಿದ್ದಾರೆ. ಕೊನೆಗೆ ಅಂತಿಮವಾಗಿ ಒಂದು ತೀರ್ಮಾನಕ್ಕೆ ಬಂದು ಯಾವುದು ಇದ್ದರೂ ಕೂಡ ಸಮುದಾಯ ಎಂದರೆ ಎನ್ನುವ ಒಂದು ತೀರ್ಮಾನಕ್ಕೆ ಏನು ಅಧಿಕಾರಿಗಳು ಮತ್ತು ತಂತ್ರಜ್ಞರು ಬಂದಿದ್ದಾರೆ. ಅದರ ಬಗ್ಗೆ ನಮಗೆಲ್ಲರಿಗೂ ಗಮನ ಮತ್ತು ಗೌರವ ಇದೆ. ಆದರ ಇವತ್ತು ಸಮುದಾಯ ಎಷ್ಟರಮಟ್ಟಿಗ ಈ ಒಂದು ಜವಾಬ್ದಾರಿಯನ್ನು ನಾವು ಕೊಟ್ಟಾಗ ಅವರು ನಿಭಾಯಿಸುವುದಕ್ಕೆ ಸಮರ್ಥರಿದ್ದಾರೆ ಎನ್ನುವುದನ್ನೂ ಕೂಡ ನಾವು ಚರ್ಚೆ ಮಾಡಬೇಕಾಗುತ್ತದೆ. ನಾವು ಇಲ್ಲಿರತಕ್ಕಂಥ ಶಾಸಕರೆಲ್ಲರೂ ಕೂಡ ಆ ಸಮುದಾಯ ಕೊಟ್ಟಂಥ ಜವಾಬ್ದಾರಿಯನ್ನು ಅತಿ ಸಮರ್ಪಕವಾಗಿ ಯಾವ ಹಣವನ್ನೂ ಪೋಲು ಮಾಡದೇನೇ ಆ ಒಂದು ಅಭಿವೃದ್ಧಿ ಹಣವನ್ನು ಉಪಯೋಗಿಸಿಕೊಳ್ಳುತ್ತದೆ ಎಂದರೆ they have finally come to a conclusion. They are the best keepers of public interest, public money. ನಾವೆಲ್ಲರೂ ಧಾರಾಳವಾಗಿ ಆ ಜವಾಬ್ದಾರಿಯನ್ನು ಸಮುದಾಯದ ಪಂಚಾಯತಿ ವ್ಯಾಪ್ತಿಗೆ ಕೊಡುವುದಕ್ಕೆ ಸಿದ್ಧರಿದ್ದೇವೆ. ಆದರೆ ಇವತ್ತು ನಮ್ಮ ಪ್ರಾಕ್ಟಿಕಲ್ ಅನುಭವ ಏನಿದೆ ಎಂದರೆ ಇವತ್ತು ಇದನ್ನು ಎಲ್ಲಾ ಶಾಸಕರುಗಳು ಕೂಡ ಒಪ್ಪಿಕೊಳ್ಳುತ್ತಾರೆ. ಇವತ್ತು ಬೋರ್‌ವೆಲ್ ರಿಪೇರಿ ಇರಬಹುದು. ಗ್ರಾಮಾಂತರ ಪ್ರದೇಶದಲ್ಲಿ ಇವತ್ತು ಅತಿ ದೊಡ್ಡ ಸಮಸ್ಯೆ ಎಂದರೆ ನೀರಾವರಿಯದ್ದು. ಈಗ ಎಲ್ಲಾ ಹಳ್ಳಿಗಳಲ್ಲಿಗಳಲ್ಲೂ ಕೂಡ ನಮ್ಮಲ್ಲಿ ವಾಟರ್‌ಸಪ್ಲೈಯನ್ನು ಕೊಟ್ಟಿದ್ದೇವೆ. ಆದರೆ ಪ್ರತಿ ವರ್ಷ ಕೂಡ ಎಷ್ಟು ಸಾರಿ ಮೋಟಾರ್ ರಿಪೇರಿಯಾಗುತ್ತದೆ ಎನ್ನುವುದನ್ನು ದಯಮಾಡಿ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಹೇಳಬೇಕಾಗುತ್ತದೆ. ಪ್ರತಿ ಹಳ್ಳಿಯಲ್ಲೂ ಕೂಡ ಯಾವುದಾದರೂ ಒಂದು ರೀತಿಯಲ್ಲಿ ಹಣ ದುರುಪಯೋಗಕ್ಕೆ ಅವಕಾಶವಾಗುತ್ತಿದೆ. ಈ ಮೋಟಾರ್ ರಿಪೇರಿ ಮತ್ತು ಮೋಟಾರ್ ಕೆಡಿಸುವುದು ಇಂತಹ ಚಿಕ್ಕಪುಟ್ಟ ಹಲವಾರು ರೀತಿಯಲ್ಲಿ ದುರುಪಯೋಗ ಮಾಡಿಕೊಳ್ಳುವುದಕ್ಕೆ ಹಲವಾರು ಕಾರ್ಯಕ್ರಮಗಳನ್ನು ಪಂಚಾಯತ್ ವ್ಯವಸ್ಥೆಯಲ್ಲಿ ಮಾಡುತ್ತಾರೆ. ಎರಡನೆಯದು, ಇವತ್ತು ಗ್ರಾಮೀಣ ಪ್ರದೇಶಗಳಲ್ಲಿ ಶಾಸಕರುಗಳು ಮೊದಲಿನಿಂದಲೂ ಕೂಡ, ಅದು ಆಶ್ರಯ ಮನೆಗಳು ಇರಬಹುದು ಅಥವಾ ಕೊಳವೆ ಬಾವಿ ವ್ಯವಸ್ಥೆ ಇರಬಹುದು, ಎಲ್ಲವನ್ನೂ ಕೂಡ ನಾವೇ ನೋಡುತ್ತಾ ಬಂದಿದ್ದೇವೆ. ಆದರೆ, ಈ ಡೀ-ಸೆಂಟ್ರಲೈಸೇಷನ್ ವ್ಯವಸ್ಥೆಯಲ್ಲಿ, ನಮ್ಮ ಸ್ನೇಹಿತರಾದಂಥ ಮಾನ್ಯ ಸುಧಾಕರ್‌ರವರು ಹೇಳಿದ ಹಾಗೆ ಶಾಸಕರು ಎಲ್ಲೆಲ್ಲಿರುತ್ತಿದ್ದಾರೆ, ಇದರ ಬಗ್ಗೆಯೂ ಕೂಡ ಚರ್ಚೆಯಾಗಬೇಕು. ಜೊತೆಗೆ, ಸಮುದಾಯಕ್ಕೆ ಕೊಟ್ಟಿರತಕ್ಕ ಜವಾಬ್ದಾರಿಯನ್ನು

ಆ ಪಂಚಾಯ್ತಿ ವ್ಯವಸ್ಥೆಯಲ್ಲಿ ನಿಭಾಯಿಸತಕ್ಕಂಥ ಸಾಮರ್ಥ್ಯ ಇದೆಯೇ ಎನ್ನುವುದನ್ನು ಕೂಡ ನಾವು ನೋಡಬೇಕಾಗುತ್ತದೆ. ಏಕೆಂದರೆ, ಒಂದೇ ಉದಾಹರಣೆ ಮೂರು ವರ್ಷಗಳ ಬರಗಾಲದ ನಂತರ, ಇವತ್ತು ಹಳ್ಳಿಗಳಲ್ಲಿ ಒಂದು ಸಮಸ್ಯೆ ಪ್ರಾರಂಭವಾಗಿದೆ. ಮೂರು ವರ್ಷಗಳ ಕಾಲ ಬೋರ್‌ವೆಲ್‌ನಲ್ಲಿ ಎಲ್ಲೂ ಕೂಡ ನೀರು ಇರಲಿಲ್ಲ. ಈಗ ನೀರು ಎಲ್ಲಾ ಕಡೆ ಬಂದಿದೆ. ಆದರೆ, ಎಲ್ಲಾ ಕಡೆ ಬದಿ ನೀರು ಹೊರಗಡೆ ಬರುತ್ತಾ ಇದೆ. ಎಲ್ಲೂ ಕೂಡ ಶಾಸಕರುಗಳಿಗೆ ಬೋರ್‌ವೆಲ್ ರಿಪೇರಿ ಮಾಡಿಸುವುದಕ್ಕೆ ಹಣ ಇಲ್ಲ. ಜಿಲ್ಲಾ ಪಂಚಾಯ್ತಿಯವರನು ಕೇಳಿದರೆ, ಇದು ನಮ್ಮ ಜವಾಬ್ದಾರಿ ಇಲ್ಲ, ಪಂಚಾಯ್ತಿಗೆ ಹೋಗಿದೆ ಎನ್ನುತ್ತಾರೆ. ಆದರೆ, ಪಂಚಾಯ್ತಿ ವ್ಯವಸ್ಥೆಯಲ್ಲಿ ಇವತ್ತಿನವರೆಗೆ ಹಣ ಬಿಡುಗಡೆಯಾಗಿಲ್ಲ. ಈ ಬೋರ್‌ವೆಲ್ ಫ್ಲಶಿಂಗ್ ಮಾಡುವುದಕ್ಕೆ ಜೊತೆಗೆ ಪ್ರತಿ ಹಂತದಲ್ಲೂ ಹಳ್ಳಿಗಳಲ್ಲಿ ವಾಟರ್ ಸಪ್ಲೈಗೆ ಮತ್ತು ಲೈಟಿಗೆ ಒಂದೇ ಟಿ.ಸಿ.ಗೆ ಹೋಗುತ್ತಿವುದರಿಂದ, ಹಾಗೂ 3-4 ಗಂಟೆಗಳ ಕಾಲ ಮಾತ್ರ ವಿದ್ಯುತ್ ಸರಬರಾಜಾಗುತ್ತಿರುವುದರಿಂದ ನೀರೂ ಕೂಡ ನೇರವಾಗಿ ಸರಬರಾಜಾಗುತ್ತಾ ಇಲ್ಲ ಹಾಗಾಗಿ, ಪ್ರತಿ ಹಳ್ಳೀಗೂ ಕೂಡ ವಾಟರ್ ಸಪ್ಲೈಗೆ ಪ್ರತ್ಯೇಕ ಟಿ.ಸಿ. ಯನ್ನು ಅಳವಡಿಸಬೇಕು. ದೊಡ್ಡ ದೊಡ್ಡ ಗ್ರಾಮಗಳಲ್ಲಿ ಎಕ್ಸ್‌ಪ್ರೆಸ್ ಫೀಡರ್ ಲೈನ್ ಎಂದು ಏನು ಕೆ.ಇ.ಬಿ.ನಲ್ಲಿದೆ uninterrupted electric supply ಕೊಡತಕ್ಕ ಎಕ್ಸ್‌ಪ್ರೆಸ್ ಫೀಡರ್‌ಲೈನನ್ನು ಕಡ್ಡಾಯವಾಗಿ ಎಲ್ಲಾ ಹಳ್ಳಿಯ ಮೇಜರ್ ವಾಟರ್ ಸಪ್ಲೈಗೆ ಅಳವಡಿಸಬೇಕು. ಈ ಮಾತನ್ನು ತಮಗೆ ತಿಳಿಸುತ್ತಾ ತಾವುಗಳು ಈ ಸದನದಲ್ಲಿ ಗ್ರಾಮೀಣ ಹೌಸಿಂಗ್ ಮತ್ತು ವಾಟರ್ ಸಪ್ಲೈ ಬಗ್ಗೆ ಸಮಗ್ರವಾದಂಥ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಸಭಾಧ್ಯಕ್ಷರನ್ನು ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತಾ ಕೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಮೆಟಗೂಡ್ (ಬೈಲಹೊಂಗಲ) : ಮಾನ್ಯ ಅಧ್ಯಕ್ಷರೆ, ಬೈಲಹೊಂಗಲ ತಾಲ್ಲೂಕಿನಲ್ಲಿ ರಾಜೀವ್‌ಗಾಂಧಿ ಸಬ್‌ಮಿಷನ್‌ನಲ್ಲಿ 19 ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ಮಾಡಿದ್ದು, ಇನ್ನು ಸ್ವಲ್ಪ ದಿವಸದಲ್ಲಿ ಇದು ಚಾಲನೆಯಲ್ಲಿ ಬರುತ್ತಾ ಇದೆ. ಈಗಾಗಲೇ ಸರ್ಕಾರ ಈ ಯೋಜನೆಗೆ 12 ರಿಂದ 13 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಮಲಪ್ರಭಾ ನದಿಯಿಂದ ನೀರನ್ನು ಎತ್ತುವ ಮೂಲಕ ಈ 19 ಹಳ್ಳಿಗಳಿಗೆ ನೀರು ಸರಬರಾಜು ಮಾಡುತ್ತಾರೆ. ಆದರೆ, ಜನವರಿ ನಂತರ ಮಲಪ್ರಭಾ ನದಿಯಲ್ಲಿ ಜಾಕ್‌ವೆಲ್ ಹತ್ತಿರ, ನೀರು ಎತ್ತುವುದಕ್ಕೆ ನೀರೇ ಇರುವುದಿಲ್ಲ. ಆದಕಾರಣ, ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದು ಈ ನಮ್ಮ 13 ಕೋಟಿ ರೂಪಾಯಿಗಳ ಯೋಜನೆ ಏನಿದೆ, ಅದು ಬೇಸಿಗೆಯಲ್ಲಿ ಉಪಯೋಗವೇ ಆಗುವುದಿಲ್ಲ. ಅದಕ್ಕೆ, ಅಲ್ಲಿ ಇನ್ನೂ 2 ರಿಂದ 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಆ ಮಲಪ್ರಭಾ ನದಿಗೆ ಒಂದು ಬ್ಯಾರೇಜನ್ನು ಮಾಡಿದರೆ ಮಾತ್ರ ನಾವು ಬೇಸಿಗೆ ಕಾಲದಲ್ಲಿ ಈ 19 ಹಳ್ಳಿಗಳಿಗೆ ನೀರು ಕೊಡಲಿಕ್ಕೆ ಸಾಧ್ಯವೆಂದು ಹೇಳುತ್ತಾ, ಈ ಕೆಲಸವನ್ನು ಮಾಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಂಡು, ಬ್ಯಾರೇಜ್ ನಿರ್ಮಾಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಹಿಮಾ ಜೆ ಪಟೇಲ್(ಚನ್ನಗಿರಿ) : ಅಧ್ಯಕ್ಷರೆ, ಚನ್ನಗಿರಿ ಮಲೆನಾಡಿನ ಸೆರಗಿನಲ್ಲಿರುವ ಒಂದು ತಾಲ್ಲೂಕು. ಅಂತಹ ಮಲೆನಾಡಿನಲ್ಲಿ ಈಗಾಗಲೇ ಬರದ ಛಾಯೆ ಪ್ರಾರಂಭವಾಗಿದ್ದು, ಕುಡಿಯುವ ನೀರಿಗೆ ಎಷ್ಟು ಹಣ ಬೇಕಾಗುತ್ತದೆಂದು ಲೆಕ್ಕ ಹಾಕಿದಾಗ ಸುಮಾರು 2 ಕೋಟಿ 11 ಲಕ್ಷ ರೂ ದಷ್ಟು ಹಣ ಬೇಕಾಗುತ್ತದೆಂದು ಕಂಡುಬಂದಿದೆ. ನಾವೆಲ್ಲಾ ಬಹಳಷ್ಟು ಜನ,

ಷಾರ್ಟ್ ಸ್ಟೆಟೆಡ್ ಆಗಿ ಈ ಸಮಸ್ಯೆ ಬಗ್ಗೆ ನೋಡುತ್ತಾ ಇದ್ದೇವೆ. ಕುಡಿಯುವ ನೀರು ಇಲ್ಲವೆಂದ ತಕ್ಷಣ ಕೊಳವೆ ಬಾವಿ ತೆಗೆಯಿರಿ ಎನ್ನುವುದು ನಮ್ಮ ತಕ್ಷಣದ ಪ್ರತಿಕ್ರಿಯೆ. ಆದರೆ, ನಾವು ಈ ಕೊಳವೆ ಬಾವಿ ತೆಗೆದು, ನೀರನ್ನು ಎಳೆದೂ ಅಂತರ್ಜಲ ಚನ್ನಗಿರಿಯಂಥ ತಾಲ್ಲೂಕಿನಲ್ಲಿ ಸುಮಾರು ಸಾವಿರದಡಿಯವರೆಗೂ ಹೋಗಿದೆ. ಇವತ್ತು ಸಾವಿರದಡಿಯ ಬಾವಿ ಕೊರೆದರೂ ಕೂಡ ಬರೀ ಧೂಳು ಬರುತ್ತಾ ಇದೆ. ಭೂಮಿಯ ಕೆಳಗಡೆ ಕೆಲವು ನದಿಗಳೇ ಹರಿಯುತ್ತಾ ಇರುತ್ತವೆ. ನದಿಯಂಥ ದೊಡ್ಡ ದೊಡ್ಡ ನೀರಿನ ಪ್ರವಾಹಗಳೇ ಹರಿಯುತ್ತಾ ಇರುತ್ತವೆ. ಅಲ್ಲಿಂದ ನಾವು ನೇರವಾಗಿ ನೀರನ್ನು ತೆಗೆದದ್ದೇ ಆದರೆ ಅಲ್ಲಿ ಒಂದು ವ್ಯಾಕ್ಯೂಮ್ ಕ್ರಿಯೇಟ್ ಆಗುತ್ತದೆ. ವ್ಯಾಕ್ಯೂಮ್ ಕ್ರಿಯೇಟ್ ಆಗಿ ಎಲ್ಲಿಯವರೆಗೆ ತಡೆದುಕೊಳ್ಳುವುದಕ್ಕೆ ಸಾಧ್ಯವೋ ಅಲ್ಲಿಯವರೆಗೆ ಇರುತ್ತದೆ. ಆಮೇಲೆ ಒಂದು ಹಂತ ಆದಮೇಲೆ ತಕ್ಷಣ ಭೂಮಿ ಕುಸಿಯುವುದಕ್ಕೆ ಶುರುವಾಗುತ್ತದೆ. ಇದು ವೈಜ್ಞಾನಿಕವಾಗಿ ನಾನು ಹೇಳುತ್ತಾ ಇರುವುದು. ಈ ಸುನಾಮಿಯಂಥ ದುರಂತಗಳು ಆಗುವುದಾದರೂ ಕೂಡ ಯಥೇಚ್ಛವಾಗಿ ಬೋರ್‌ವೆಲ್‌ಗಳನ್ನು ತೆಗೆಯುವುದರಿಂದ ಇಂತಹ ದುರಂತಗಳು ಆಗುತ್ತವೆಂದು ವಿಜ್ಞಾನಿಗಳು ಹೇಳುತ್ತಾರೆ. ನಾನು ಬಹಳ ಹಿಂದೆ ಅಂದರೆ, ನಮ್ಮ ತಂದೆಯವರು ಮುಖ್ಯಮಂತ್ರಿಗಳಾಗಿದ್ದಾಗ ಕೂಡ ನಾನು ಈ ಅಭಿಪ್ರಾಯವನ್ನು ಕೊಟ್ಟಿದೆ. ಬೋರ್‌ವೆಲ್‌ಗಳನ್ನು ಯಥೇಚ್ಛವಾಗಿ ತೆಗೆಯುವುದಕ್ಕಿಂತ, ನಾವು ವಾಟರ್ ಲಾಗಿಂಗ್, ನೀರನ್ನು ಸಂರಕ್ಷಣೆ ಮಾಡುವುದರ ಕಡೆ ಹೆಚ್ಚು ಗಮನ ಕೊಡಬೇಕು. ನಾವು ಕೆರೆಗಳನ್ನು ಅಭಿವೃದ್ಧಿ ಮಾಡುವುದರ ಕಡೆಗೆ, ಕೆರೆಯ ಹೂಳು ತೆಗೆಯುವುದರ ಕಡೆಗೆ ನಾವು ಗಮನ ಕೊಡಬೇಕೆಂದು ಹಿಂದೆ ಹೇಳಿದ್ದೆ. ಆದರೆ, ಈಗಾಗಲೇ ನಾನು ಹೇಳಿದ ಹಾಗೆ, ನಮಗೆ ಷಾರ್ಟ್ ಸ್ಟೆಟೆಡ್‌ನೆಸ್ ಆಗಿ ತಕ್ಷಣ ಕೊಳವೆ ಬಾವಿ ಕೊರೆಯದಂಥ ಪ್ರಕ್ರಿಯೆಯಲ್ಲಿ ನಾವು ನಿಜವಾಗಲೂ ವಿನಾಶದ ಕಡೆ ಹೋಗುತ್ತಾ ಇದ್ದೇವೆ. ನಾವೆಲ್ಲಾ ಸದಸ್ಯರೂ ಕೂಡ, ಇದರ ಬಗ್ಗೆ ಒಟ್ಟಾಗಿ ಆಲೋಚನೆ ಮಾಡಬೇಕಾಗಿದೆ. ಬರೀ ತಕ್ಷಣದ ಪರಿಹಾರ ನೋಡುವುದು ಅಲ್ಲ, ಮುಂದಿನ ದಿನಗಳಿಗೆ, ನಾವು ಯಾವ ರೀತಿಯ ಪರಿಹಾರ ಕಂಡುಹಿಡಿಯಬಹುದು ಎಂಬುದನ್ನು ನೋಡಬೇಕಾಗಿದೆ. ನಾನು ಶಾಸಕನ ಕೆಲಸ ಏನೆಂದುಕೊಂಡಿದ್ದೇನೆಂದರೆ, ನಿಜವಾಗಿಯೂ ಶಾಸನಗಳನ್ನು ಮಾಡುವುದು ಮಾತ್ರ ಶಾಸಕನ ಕೆಲಸ ಎಂದು ಅಂದುಕೊಂಡಿದ್ದೇನೆ. ಆದರೆ, ಈಗ ಎಂತಹ ಕೆಲಸಗಳು ಬರುತ್ತೆ ಎಂದರೆ, ಕುಡಿಯುವ ನೀರಿನದು ಹೋಗಲಿ. ನಮ್ಮ ಮಕ್ಕಳಿಗೆ ಮದುವೆ ಆಗಿಲ್ಲ, ಹೆಣ್ಣು ಮಕ್ಕಳಿಗೆ ಬಹಳ ದಿನ ಆಯಿತು. ಗಂಡು ಹುಡುಕಿ ಎನ್ನುವ ಕೆಲಸ ಕೂಡ ಬರುತ್ತೆ. ನಮ್ಮ ಮಾನ್ಯ ಅರಗ ಜ್ಞಾನೇಂದ್ರರವರು ಮಾತನಾಡುತ್ತಾ ಡೀ-ಸೆಂಟ್ರಲ್‌ಸೇಷನ್ ಬಗ್ಗೆ ಹೇಳಿದರು. ನಾನು ಅದನ್ನು ಒಪ್ಪುತ್ತೇನೆ. ಡೀ ಸೆಂಟ್ರಲ್‌ಸೇಷನ್ ಆಗಬೇಕು, ನಮ್ಮಲ್ಲಿರುವ ಸೆಕ್ರಟರಿಗಳೇನಿದ್ದಾರೆ, ಎಲ್ಲಾ ಮಹಾ ಕಳ್ಳರು ಅವರಿಗೆಲ್ಲಾ ತರಬೇತಿ ಕೊಟ್ಟು, ನಿಜವಾಗಿಯೂ ಜನರ ಪರವಾದ ಕೆಲಸ ಮಾಡುವಂತೆ ಮಾಡಬೇಕು ಆ ಮೂಲಕ ಜಿಲ್ಲಾಪಂಚಾಯ್ತಿ, ಗ್ರಾಮ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿಗಳೇನಿವೆ ಇವುಗಳನ್ನು ನಾವು ಸಬಲೀಕರಣ ಮಾಡುವುದರ ಮೂಲಕ ಮಾತ್ರ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯ, ಅದು ಬಿಟ್ಟು ಎಲ್ಲವೂ ಸೆಂಟ್ರಲೈಸ್ ಆಗುವುದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. ಶಾಸಕರು ಬೇಕಾದರೆ ಆ ಕಮಿಟಿಯಲ್ಲಿ ಇರಬಹುದು. ನೀರಿನ ಸಮಸ್ಯೆ ಬಗೆಹರಿಸುವಂಥ ತಾಲ್ಲೂಕಿನ ಕಮಿಟಿಯಲ್ಲಿದ್ದು ಅದನ್ನು ಮಾಡಬಹುದು. ಆದರೆ, ಡೀ ಸೆಂಟ್ರಲೈಸೇಷನ್ನೇ ಇದಕ್ಕೆ ಒಂದು ಪರಿಹಾರ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತಾ, ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಳಕಪ್ಪ ಜಿ. ಬಂಡಿ(ರೋಣ) : ಮಾನ್ಯ ಅಧ್ಯಕ್ಷರೆ, ಇವತ್ತಿನದಿನ ನಾವು ಶಾಸಕರಾಗಿ ಬಂದನಂತರ ಹಳ್ಳಿಗಳಲ್ಲಿ ಅಡ್ಡಾಡಿದರೆ, ಇವತ್ತು ನೀರು ಕೊಡುವುದಾಗಲೀ, ಮನೆಗಳನ್ನು ಕೊಡುವುದಾಗಲೀ ಇದು ಶಾಸಕರ ಕೆಲಸವೆಂದು ಜನ ತಿಳಿದುಕೊಂಡಿದ್ದಾರೆ. ಇವತ್ತು ಗ್ರಾಮ ಪಂಚಾಯ್ತಿ ಸದಸ್ಯರಿಗಾಗಲೀ, ಅಧ್ಯಕ್ಷರಿಗಾಗಲೀ, ಜಿಲ್ಲಾಪಂಚಾಯ್ತಿ ಸದಸ್ಯರಿಗಾಗಲೀ ಜನ ನೀರನ್ನು ಕೇಳುವುದಿಲ್ಲ, ಮನೆಯನ್ನೂ ಕೇಳುವುದಿಲ್ಲ. ಇವತ್ತು ಬೆಳಗಾದ ತಕ್ಷಣ ಶಾಸಕರ ಮನೆ ಮುಂದೆ ಜನ ಬಂದು, ಊರಲ್ಲಿ ನೀರಿಲ್ಲ, ಕರಂಟ್ ಇಲ್ಲವೆಂದು ಕೇಳುತ್ತಿದ್ದಾರೆ. ಆದರೆ, ದೊಡ್ಡ ದೊಡ್ಡ ರಾಜಕಾರಣಿಗಳು ವಿಕೇಂದ್ರೀಕರಣ ಎಂದು ಹೇಳುತ್ತಾರೆ. ಅದು ನಮ್ಮ ಬಾಯಲ್ಲಿ ರಾಜಕಾರಣ ಮಾಡುವುದಕ್ಕೆ ಮಾತ್ರ ವಿಕೇಂದ್ರೀಕರಣ ಎಂದು ಹೇಳುವುದು. ಇದೊಂದು ದುರಾದೃಷ್ಟಕರ ಬೆಳವಣಿಗೆ. ಆಗಲೇ ನಮ್ಮ ಹಿರಿಯರೂ ಹಾಗೂ ನಮ್ಮ ತಂದೆಯ ಸ್ನೇಹಿತರೂ ಆದಂಥ ಎಸ್.ಎಸ್. ಪಾಟೀಲರು ಮಧ್ಯದಲ್ಲಿ ನಿಂತು ಮಾತನಾಡಿದರು. ನಾನು ಮಾತನಾಡಿದರು. ನಾನು ಮೊನ್ನೆ ಪೇಪರಿನಲ್ಲಿ ಓದಿದೆ. ಮಾನ್ಯ ಎಸ್.ಎಸ್. ಪಾಟೀಲರ ಕ್ಷೇತ್ರದೊಳಗೆ ನೀರಿನ ಕೊರತೆ ಎಂದು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ, ಕೊಡಗಳನ್ನು ಹಿಡಿದುಕೊಂಡು ಹೋಗುತ್ತಾ ಇದ್ದುದನ್ನು ಕೊಟ್ಟಿದ್ದರು. ಅದೇ ರೀತಿ ನಮ್ಮ ಹಿರಿಯರಾದ ಮಾನ್ಯ ಡಿ.ಆರ್. ಪಾಟೀಲ್ ಸಾಹೇಬರಿಗೂ ಕೂಡ ಹೇಳುತ್ತಾ ಇದ್ದೇನೆ. ಇವತ್ತು ತಮ್ಮ ಕ್ಷೇತ್ರದಲ್ಲೂ ಕೂಡ ನೀರಿನ ಸಮಸ್ಯೆ ಸಾಕಷ್ಟು ಇರುವುದು ಈ ರಾಜ್ಯದ ಜನತೆಗೆ ಗೊತ್ತಿರುವ ವಿಚಾರ. ಶಾಸಕರು ಮಾಡಲಾರದಂಥ ಕೆಲಸಗಳನ್ನು ವಿಕೇಂದ್ರೀಕರಣದಿಂದ ಒಂದು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಹೋದರೆ, ಈ ನೀರಿನ ಸಮಸ್ಯೆ ಬಗೆಹರಿಯುತ್ತದೆಯೇ ಎಂಬುದನ್ನು ವಿಚಾರ ಮಾಡುವಂಥ ಸಮಯವೆಂದು ನಾನು ಹೇಳುತ್ತಿದ್ದೇನೆ. ಇವತ್ತು ಹಳ್ಳಿಗಳಲ್ಲಿ, ಗ್ರಾಮ ಪಂಚಾಯ್ತಿ ಸದಸ್ಯರು ಯಾವ ಮಟ್ಟಕ್ಕೆ ಬಂದಿದ್ದಾರೆಂದರೆ, ನಾನು ಮೊನ್ನೆ ಜನಸಂಪರ್ಕ ಸಭೆಗೆ ಹೋದಾಗ, ಬೇರೆ ಪಕ್ಷದವರು ಅಲ್ಲಿ ಅಧ್ಯಕ್ಷರಿದ್ದರು. ಆ ಸೆಕ್ರೆಟರಿಗಳು ಹೇಳುತ್ತಾರಂತೆ, ಆ ಶಾಸಕ ಬಂದರೇನಾಯಿತು, ಅವನಿಗೆ ಇಲ್ಲಿ ಕುರ್ಚಿ ಹಾಕಬೇಡಿ. ಪೆಂಡಾಲ್ ಹಾಕಬೇಡಿ, ಮೈಕ್ ಹಚ್ಚಬೇಡಿ, ಎರಡು ಪ್ಲಾಸ್ಟಿಕ್ ಚೀಲ ಒಗೆಯಿರಿ, ಅಲ್ಲಿಯೇ ಕುಳಿತು ಹೋಗಲಿ ಎಂದು ಹೇಳುತ್ತಾರೆ. ಆ ಜನ ಸಂಪರ್ಕ ಸಭೆಯನ್ನೂ ಕೂಡ ಮಾಡಲಾರದಂಥ ವ್ಯವಸ್ಥೆಗೆ ಗ್ರಾಮ ಪಂಚಾಯ್ತಿ ಬಂದಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇವತ್ತು ಜಲನಿರ್ಮಲ ಯೋಜನೆ ಒಂದು ಒಳ್ಳೆಯ ಯೋಜನೆ. ಅದನ್ನು ಗ್ರಾಮ ಪಂಚಾಯತಿಗೆ ಕೊಟ್ಟ ಕಾರಣ ಸರಿಯಾಗಿ ಕೆಲಸಗಳು ಆಗುತ್ತಿಲ್ಲ. ಕೆಲವೊಂದು ಗ್ರಾಮ ಪಂಚಾಯತಿಯಲ್ಲಿ ನಾವು ಇದನ್ನು ಮಾಡಬೇಕು ಅದನ್ನು ಮಾಡಬೇಕೆಂದು ಹೇಳಿ ಆ ಕೆಲಸಗಳೇ ಆಗುತ್ತಿಲ್ಲ. ನನ್ನಲ್ಲಿ ಇಟಗಿ ಎನ್ನುವ ಒಂದು ಗ್ರಾಮ ಪಂಚಾಯತಿ ಇದೆ. ಎರಡು ತಿಂಗಳಾಯಿತು ಅಲ್ಲಿ ಗ್ರಾಮ ಪಂಚಾಯತಿ ಸೆಕ್ರೆಟರಿ ಗೈರು ಹಾಜರಿ ಇದ್ದಾನೆ. ಅಲ್ಲಿ ಕುಡಿಯುವ ನೀರು ಇಲ್ಲ. ಮೆಸ್ಕಾಂನವರು ವಿದ್ಯುತ್ ಕಟ್ ಮಾಡಿ ಹೋಗಿದ್ದಾರೆ. ನಾನು ಸಂಬಂಧಪಟ್ಟ ಅಧಿಕಾರಿಗಳ ಜರಿಗೆ ತೆಗೆದುಕೊಂಡು ಬಂದಿದ್ದೇನೆ ಆದರೂ ಇವತ್ತಿನವರೆಗೂ ಕೂಡ ಅವನ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇವತ್ತು ನನ್ನ ಕ್ಷೇತ್ರದಲ್ಲಿ 2–3 ಗ್ರಾಮ ಪಂಚಾಯತಿಗಳಿಗೆ ಸೇರಿ ಒಬ್ಬ ಸೆಕ್ರೆಟರಿ ಇದ್ದಾನೆ. ಇಂತಹ ಒಂದು ಸಮಯದಲ್ಲಿ ಗ್ರಾಮ ಪಂಚಾಯತಿ ಸದಸ್ಯರು ಹಳ್ಳಿಗಳಲ್ಲಿ 24 ಗಂಟೆಗಳೂ ರಾಜಕಾರಣ ಮಾಡುತ್ತಾರೆ. 24 ಗಂಟೆಗಳು ರಾಜಕಾರಣ ಮಾಡಿದರೆ ಹಳ್ಳಿಗಳು ಉದ್ಧಾರವಾಗುತ್ತವೆಂದು ನಾವು ತಿಳಿದುಕೊಂಡಿದ್ದಾರೆ, ಇವತ್ತು ಸರ್ಕಾರ ತಿಳಿದುಕೊಂಡಿದ್ದಾರೆ ಅದೊಂದು ದೊಡ್ಡ ತಪ್ಪೆಂದು

ನಾನು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಇವತ್ತು ನನ್ನ ಎಲ್ಲಾ ಸ್ನೇಹಿತ ಶಾಸಕರಿಗೆ ಒಂದು ಅಭಿಪ್ರಾಯ ಏನೆಂದರೆ ಈ ಸಮಿಶ್ರ ಸರ್ಕಾರ ಎಲ್ಲಾ ಶಾಸಕರನ್ನು ಕಟ್ಟಿಗೆ ಕುದುರೆ ಮೇಲೆ ಕೂರಿಸುವಂತಹ ವ್ಯವಸ್ಥೆ ಮಾಡಿದೆ ಎಂದು ನಾನು ಹೇಳಬಯಸುತ್ತೇನೆ. ಈ ವಿಕೇಂದ್ರೀಕರಣ ಒಂದು ಹುಚ್ಚು ಕಲ್ಪನೆ ಎಂದು ನಾನು ಹೇಳುತ್ತಿದ್ದೇನೆ. ಇವತ್ತು ಶಾಸಕರನ್ನು ಪೂರ್ಣ ನಿಷ್ಕ್ರಿಯ ಮಾಡಿ ಮುಂದೆ ಬರುವಂತಹ ದಿನಗಳಲ್ಲಿ ನೀವೇನು ಗ್ರಾಮ ಪಂಚಾಯತಿಗಳಿಗೆ ವಿಕೇಂದ್ರೀಕರಣ ಕೊಟ್ಟು ಪೂರ್ಣ ಅಧಿಕಾರ ಕೊಟ್ಟಿದ್ದೇ ಆಯಿತು ಅಂದರೆ ಹಿಂದೆ ಮಂಡಲ್ ಪಂಚಾಯತ್‌ಗಳಿಗೆ ಅಧಿಕಾರ ಕೊಟ್ಟಾಗ ಯಾವ ರೀತಿ ಹಳ್ಳಿಗಳಲ್ಲಿ ಬಡಿದಾಟ ಹೊಡೆದಾಟ, ಮರ್ಡರ್‌ಗಳು ಆದವು ಮುಂಬರುವ ದಿನಗಳಲ್ಲಿ ಆ ರೀತಿಯ ಒಂದು ವ್ಯವಸ್ಥೆ ಖಂಡಿತವಾಗಿ ಬರುತ್ತದೆಂದು ನಾನು ಹೇಳುತ್ತಿದ್ದೇನೆ. ನೀವು ವಿಕೇಂದ್ರೀಕರಣ ಮಾಡುವುದೇ ಆದರೆ ಗ್ರಾಮ ಪಂಚಾಯತ್‌ಗೆ ಒಂದರಂತೆ ಪೊಲೀಸ್ ಸ್ಟೇಷನ್, ಒಂದು ಕೋರ್ಟ್ ಕೂಡ ಸ್ಥಾಪನೆ ಮಾಡಿ ನೀವು ವಿಕೇಂದ್ರೀಕರಣ ಮಾಡಬೇಕೆಂದು ಹೇಳಿ, ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಡಿ ಆರ್ ಪಾಟೀಲ್ (ಗದಗ್) : ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಸಮಸ್ಯೆ ಪ್ರತಿ ಬೇಸಿಗೆ ಕಾಲದಲ್ಲಿ ಚರ್ಚೆ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಾವು ಮಳೆ ನೀರನ್ನು ಇಂಗಿಸುವಂತಹ ವ್ಯವಸ್ಥೆ ಎಲ್ಲಿಯವರೆಗೂ ಮಾಡುವುದಿಲ್ಲ ಅಲ್ಲಿಯವರೆಗೆ ಇದು ಒಂದು ನಮ್ಮ ಪರಂಪರೆಯೇ ಎನ್ನುವಂತಹ ಒಂದು ಸ್ಥಿತಿ ನಿರ್ಮಾಣವಾಗಿದೆ. ಈಗ ತಾತ್ಕಾಲಿಕವಾಗಿ ಕುಡಿಯುವ ನೀರಿನ ವ್ಯವಸ್ಥೆಗೆ ಏನೇನು ಮಾಡಬೇಕೋ ಅದನ್ನು ಮಾಡಲಿಕ್ಕೆ ಅಡ್ಡಿ ಇಲ್ಲ. ಆದರೆ ದೂರದೃಷ್ಟಿಯಿಂದ ನೀರು ಹಿಡಿದು ಇಡುವ ಇಂಗಿಸುವ ಕೆಲಸ ಮಾಡಲಿಕ್ಕೆ ಹೆಚ್ಚು ಪ್ರಾಶ್ಯಸ್ತ ಕೊಟ್ಟು ನಾವು ಕೆಲಸ ಕೈಗೊಂಡರೆ ಮುಂದಿನ ಜನವರಿಯಲ್ಲಿ ಮತ್ತು ಫೆಬ್ರವರಿಯಲ್ಲಿ ಇದರ ಬಗ್ಗೆ ಚರ್ಚೆ ಮಾಡುವುದು ಸ್ವಲ್ಪ ಕಡಿಮೆಯಾಗಬಹುದೋ ಏನೋ ಅಂತ ಹೇಳಿ ನನ್ನ ಅನಿಸಿಕೆ. ಇದರೊಳಗೆ ಮಳೆ ನೀರನ್ನು ತಡೆಗಟ್ಟುವ ಕೆಲಸದಲ್ಲಿ ನಾವು ಸಮುದಾಯವನ್ನು ಇನ್‌ವಾಲ್ವ್ ಮಾಡಬೇಕಾಗುತ್ತದೆ. ಇಲ್ಲಿಯವರೆಗೆ ಈಗ ಇದ್ದ ವ್ಯವಸ್ಥೆಯಲ್ಲಿ ನಾವೆಲ್ಲಾ ಈ ಸಮಸ್ಯೆಗಳನ್ನು ಪರಿಹಾರ ಕಂಡುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಈಗಂತೂ ನಮಗೆ ಸಮಾಧಾನಕರವಾಗಿ ಈಗ ಇದ್ದ ವ್ಯವಸ್ಥೆಯಿಂದ ಪರಿಹಾರ ಸಿಕ್ಕಿಲ್ಲ ಎನ್ನುವುದು ನಮಗೆಲ್ಲಾ ಅನುಭವ. ಈಗಿರುವ ವ್ಯವಸ್ಥೆಯೊಳಗೆ ಸ್ವಲ್ಪ ಬದಲು ಮಾಡಿ ಅವರಿಗೆ ಜವಾಬ್ದಾರಿ ಕೊಟ್ಟು ನೋಡೋಣ ಅಂತ ಪ್ರಯೋಗ ನಡೆಯುತ್ತಿದೆ. ಇನ್ನೂ ಎರಡು ತಿಂಗಳು ಆಗಿಲ್ಲ ಅವರಿಗೆ ಇನ್ನೂ ಏನೂ ಹಸ್ತಾಂತರ ಮಾಡಿಲ್ಲ. ಆಗಲೇ ಏಕೆ ಮಾಡಿದಿರಿ? ಏನು ಮಾಡಿದಿರಿ ಅಂತ ಹೇಳಿ ಅವರ ಬಗ್ಗೆ ಟೀಕೆ ಟಿಪ್ಪಣಿಗಳು ಪ್ರಾರಂಭವಾಗುತ್ತಿವೆ. ದಯವಿಟ್ಟು ನಾವೆಲ್ಲರೂ ವಿಚಾರ ಮಾಡಬೇಕು, ಇದನ್ನು ನಾವೆಲ್ಲರೂ ಕೂಡಿ ಈ ಅಧಿಕಾರವನ್ನು ಕೊಡಲಿಕ್ಕೆ ಈ ಸದನದಲ್ಲಿ ತೀರ್ಮಾನ ಮಾಡಿದ್ದೇವೆ. ಅದು ಸುಮಾರು 12 ವರ್ಷಗಳ ಹಿಂದೆ ಇಲ್ಲಿಯವರೆಗೂ ಆ ಜವಾಬ್ದಾರಿಯನ್ನು ಅವರಿಗೆ ಕೊಟ್ಟಿಲ್ಲ. ಒಂದು ಅವಿಭಕ್ತ ಕುಟುಂಬದೊಳಗೆ ಅಣ್ಣ ತಮ್ಮಂದಿರು ಬೇರೆಯಾದ ಕೂಡಲೇ ಈ ಹಿರೆತನ ಮಾಡುವ ಅಣ್ಣ ತಮ್ಮನಿಗೆ ಏನಾದರೂ ಸಹಾಯ ಮಾಡಬೇಕು. ಬೇರೆಯಾಗಿ ಹೋದವನಿಗೆ. ಅವನಿಗೆ ಏನೂ ಅನುಭವ ಇರುವುದಿಲ್ಲ ಅಂತ ಹೇಳಿ ಅವನು ಮಾಡಿದ್ದನ್ನು ನಾವು ನಗುತ್ತಾ ಕುಳಿತುಕೊಂಡರೆ ತಪ್ಪು ಮಾಡಿದಂತೆ ಆಗುತ್ತದೆ. ದಯವಿಟ್ಟು ಆ ಕೆಲಸ ನಾವು ಮಾಡುವುದು ಬೇಡ. ಅವರಿಗೆ ಏನು ಜವಾಬ್ದಾರಿ ಕೊಟ್ಟಿದ್ದೇವೆ ಆ ಜವಾಬ್ದಾರಿ ನಿಭಾಯಿಸುವುದಕ್ಕೆ ಅವರಿಗೆ ಬೇಕಾದ

ಮಾರ್ಗದರ್ಶನ ಕೊಡೋಣ. ಅವರಿಗೆ ಬೇಕಾದ ಹಣಕಾಸಿನ ವ್ಯವಸ್ಥೆ ಮಾಡೋಣ. ಅವರಿಗೆ ಅವಕಾಶ ಕೊಟ್ಟು ನೋಡೋಣ. ಅವರು ಅವರ ಅವಕಾಶದೊಳಗೆ ಸರಿಯಾಗಿ ನಮ್ಮ ಮಟ್ಟಕ್ಕೆ ಬರಲಿಲ್ಲವೆಂದರೆ ಮುಂದೆ ಮರು ಚಿಂತನೆ ಮಾಡಲಿಕ್ಕೆ ಪರವಾಗಿಲ್ಲ. ಅವಕಾಶವೇ ಕೊಡದೆ ಅವರ ಬಗ್ಗೆ ಟೀಕೆ ಟಿಪ್ಪಣಿ ಮಾಡುತ್ತಾ ಹೋದೆವು ಅಂದರೆ ಬಹಳ ತಪ್ಪಾಗುತ್ತದೆ. ಮತ್ತು ನಾವೆಲ್ಲರೂ ಆ ಸಮೂಹದಿಂದ ಬೆಳೆದು ಬಂದವರೇ. ನಾವೇ ಶಾಸಕರು ಅಂದ ಕೂಡಲೇ ಮೇಲಿಂದ ಬೆಳೆದು ಬಂದಿದ್ದೇವೆ, ನಮಗೆಲ್ಲಾ ಭಾರಿ ಬುದ್ಧಿ ಇದೆ. ಭಾರಿ ಅನುಭವ ಇದೆ ಅಂತ ಏನೂ ಅಲ್ಲ. ನಮಗಿಂತ ಹೆಚ್ಚು ಅನುಭವ, ಬುದ್ಧಿ ಇದ್ದಂತಹ ಜನ ಗ್ರಾಮೀಣ ಪ್ರದೇಶದಲ್ಲಿ ಇದ್ದಾರೆ. ಗ್ರಾಮೀಣ ಸಮುದಾಯದಲ್ಲಿ ಇದ್ದಾರೆ. ಆ ಸಮುದಾಯವನ್ನು ಇನ್‌ವಾಲ್ವ್ ಮಾಡಬೇಕು ಎನ್ನುವವರು ನಾವು. ಈಗ ಏನು ವ್ಯವಸ್ಥೆ ಇದೆ ಇದರಲ್ಲಿ ಗ್ರಾಮ ಸಭೆಗಳನ್ನು ಸಬಲೀಕರಣ ಮಾಡುವುದು ನಾವು. ಗ್ರಾಮ ಪಂಚಾಯತಿಗಿಂತ ಹೆಚ್ಚು ಹಿಂದಕ್ಕೆ ನಮ್ಮ ಊರಿನಲ್ಲಿ ಕೆರೆ ಕಟ್ಟೆ ಏನಿದ್ದರೂ ಸಹ ಸಮುದಾಯವೇ ಮಾಡುತ್ತಿತ್ತು. ಆಗ ಊರು ದೈವವೇ ಮಾಡುತ್ತಿತ್ತು. ಈಗ ಬಂತು ಈ ವ್ಯವಸ್ಥೆ ಎಲ್ಲಾ ಬೋರ್‌ವೆಲ್ ಕೊರೆಯುವ ವ್ಯವಸ್ಥೆ ಯಾವಾಗ ಬಂದಿದ್ದು 60ನೇ ವರ್ಷದಿಂದ ಅದರ ಮೊದಲು ಊರಿನವರು ಯಾರೂ ನೀರು ಕುಡಿಯಲಿಲ್ಲವೇ? ಆಗ ವ್ಯವಸ್ಥೆ ಮಾಡಿಕೊಂಡಿದ್ದು ಇಲ್ಲವೇ ನಾವು? ಸರ್ಕಾರದ ಹಣ ಅಷ್ಟೇ ಅಲ್ಲ. ಆ ಸಮುದಾಯವೂ ಸಹಿತ ಹಣಕಾಸನ್ನು ಜೋಡಿಸಿ, ತಾವೂ ಪಾಲ್ಗೊಂಡು ಆ ಕೆಲಸ ಮಾಡುತ್ತಿತ್ತು. ಅದನ್ನೆಲ್ಲಾ ತಿರುಚಿಬಿಟ್ಟೆವು ನಾವು. ಎಲ್ಲವೂ ಸರ್ಕಾರವೇ ಮಾಡಬೇಕು ಎನ್ನುವಂತಹ ಒಂದು ವ್ಯವಸ್ಥೆಯನ್ನು ರೂಪಿಸಿ ನಮಗೆ ನೀಗಲಾರದಂತೆ ಆಗಿ ಈಗ ಕೈ ಎತ್ತಿ ನಿಲ್ಲುವಂತಹ ಪರಿಸ್ಥಿತಿ ಬಂದಿದೆ. ಮೊದಲಿದ್ದ ವ್ಯವಸ್ಥೆಗೆ ನಾವೆಲ್ಲರೂ ಹೋಗೋಣ. ಆಗುವುದಿಲ್ಲ ಎಂದು ಹೇಳಬೇಡಿ, ದಯವಿಟ್ಟು ಅವರಿಗೆ ಅವಕಾಶ ಕೊಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆಗ ಜನಸಂಖ್ಯೆ ಎಷ್ಟು ಇತ್ತು? ಅಂಡರ್‌ಗ್ರೌಂಡ್ ವಾಟರ್ ಲೆವೆಲ್ ಎಷ್ಟು ಇತ್ತು? ರೈನ್ ಫಾಲ್ ಎಷ್ಟು ಇತ್ತು? ಸಮುದಾಯ ಅಂದರೆ ಒಂದು ಹಳ್ಳಿಯಲ್ಲಿ ಎಷ್ಟು ವಾಸ ಇತ್ತು, ಟ್ಯಾಂಕ್ ಇಷ್ಟು ಇತ್ತು? ಪರ್ ಹೆಡ್ ಸಂಕ್ಷನ್ ಎಷ್ಟು ಆಗುತ್ತಿತ್ತು ಎನ್ನುವುದರ ಬಗ್ಗೆಯೂ ಸಹ ಸ್ವಲ್ಪ ಬೆಳಕು ಚೆಲ್ಲಿ. ಆಗಿನ ವ್ಯವಸ್ಥೆಗೆ ಈಗ ಏಕೆ ಹೋಲಿಸುತ್ತೀರಿ? ಆಗ ಕೆರೆ ನೀರು ಕುಡಿಯುತ್ತಿದ್ದೆವು. ಡಯೇರಿಯಾ ಡಿಫ್ತೀರಿಯಾ ಬರುತ್ತದೆ ಅಂತಾನೇ ಬೋರ್‌ವೆಲ್ ಹಾಕಿಸಿದ್ದು ಮಾನ್ಯ ನಜೀರ್ ಸಾಬರು. ಆಗ ಕೆರೆಯ ನೀರು ಕುಡಿದರೆ ಆಸ್ಪತ್ರೆ ಹಣ ಖರ್ಚು ಮಾಡುವುದಕ್ಕೆ ಆಗುವುದಿಲ್ಲ ಅಂತಾನೇ ಇದನ್ನು ಮಾಡಿದ್ದು ಆಗ ಒಂದು ಸೀಜನ್ ಬಂದರೆ ಹಳ್ಳಿಗಳೆಲ್ಲ ಭೇದಿ ವಾಂತಿ ಯಾವಾಗಲೂ ಆಗುತ್ತಿತ್ತು. ಅದೆಲ್ಲಾ ನಿಲ್ಲಲಿ ಅಂತ ಹೇಳಿ ಈ ವ್ಯವಸ್ಥೆಗೆ ಬಂದಿದ್ದು.

ಶ್ರೀ ಡಿ.ಆರ್. ಪಾಟೀಲ್ : ಅದೇ ಬರೀ ಬೋರ್‌ವೆಲ್ ಹಾಕಿಕೊಂಡು ಬಂದೆವಲ್ಲಾ ಅದರ ಅನುಭವವೇ ಈಗ. ನೀರು ತೆಗೆಯುತ್ತವಲ್ಲಾ ಅದಕ್ಕಿಂತ ಹೆಚ್ಚು ನೀರು ಇಂಗಿಸುವಂತಹ ಕೆಲಸ ಮಾಡಬೇಕಾಗಿತ್ತಲ್ಲಾ. ಅದನ್ನು ಮಾಡಲೇ ಇಲ್ಲ ನಾವು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ. ನೀರು ಇಂಗಿಸಬೇಕು ಎಲ್ಲಾ ಮಾಡಬೇಕು ಎನ್ನುವ ಬಗ್ಗೆ ಇಲ್ಲಿ ಯಾರದೂ ಡಿಸ್‌ಪ್ಯೂಟ್ ಇಲ್ಲ. ಆದರೆ 10 ವರ್ಷಗಳ ಹಿಂದೆ ಮಳೆ ಪ್ರಮಾಣ ಏನು? ಇವತ್ತಿನ ಮಳೆ ಪ್ರಮಾಣ ಏನು? ಅವತ್ತು ವಾಟರ್

ಕಂಜಮ್‌ಶನ್ ರೇಟು ಏನು? ಜನಸಂಖ್ಯೆ ಎಷ್ಟು? ಅವತ್ತು ನೀರು ಎಷ್ಟು ಬೇಕಾಗಿತ್ತು? ಇವತ್ತು ಎಷ್ಟು ಬೇಕಾಗಿದೆ? ಇವತ್ತಿನ ಕಂಜಮ್‌ಶನ್ ರೇಟ್ ಏನು? ಅವತ್ತಿನ ಎಕ್ಸ್‌ಪೆಂಡೇಚರ್ ಎಷ್ಟು? ಇವತ್ತಿನ ಎಕ್ಸ್‌ಪೆಂಡೇಚರ್ ಎಷ್ಟು? ಇದನ್ನೆಲ್ಲಾ ಲೆಕ್ಕ ಹಾಕಬೇಕಾಗುತ್ತದೆ. ಸುಮ್ಮ ಸುಮ್ಮನೇ ಹುಚ್ಚು ಹಿಡಿದು ಯಾರೂ ರಯೋಡಿ ಜೆನರೋ ನಲ್ಲಿ ನಡೆದಂಥ ಬೋರ್‌ವೆಲ್ ಹಾಕಿಸಲು ಹೋಗಲಿಲ್ಲ. ಮಳೆ ಪ್ರಮಾಣ ಪ್ರತಿ ವರ್ಷ ಕಡಿಮೆಯಾಗುತ್ತಿದೆ. ವಿಶ್ವ ಸಮ್ಮೇಳನದಲ್ಲಿ ಒಂದು ವರದಿ ಕೊಟ್ಟಿದ್ದಾರೆ ಓದಿ. ಇಡೀ ಜಗತ್ತಿನಲ್ಲಿ ಪ್ರತಿವರ್ಷ 15 ಪರ್ಸೆಂಟ್ ಮಳೆ ಕಡಿಮೆಯಾಗುತ್ತಿದೆ. Every year 15% rain is reducing in the whole words. ಆಗ ಆ ಪರಿಸ್ಥಿತಿಯನ್ನು ಮೀಟ್ ಮಾಡುವುದಕ್ಕೆ ಬೇಕಾದಂತಹ ವ್ಯವಸ್ಥೆಗಳು ಏನು? ಅದೆಲ್ಲಾ ಗೊತ್ತಿಲ್ಲದೆ ಹಿಂದಿನ ಪರಿಸ್ಥಿತಿ ಹೋಗೋಣ ಅಂದರೆ ಹೇಗೆ? ಹಾಗಾದರೆ ಒಂದು ಕೆಲಸ ಮಾಡೋಣ. ಹಿಂದೆ ಅಸೆಂಬ್ಲಿ ಇರಲಿಲ್ಲ. 1947ಕ್ಕೆ ಮೊದಲು. ಅಸೆಂಬ್ಲಿಯನ್ನು ರದ್ದು ಮಾಡಿ ಹಿಂದಿನದಕ್ಕೆ ಹೋಗೋಣ. ಈಗ ಏಕೆ ಬೇಕು ಅಸೆಂಬ್ಲಿ? ಹಿಂದಿನ ಪರಿಸ್ಥಿತಿಗೆ ಹೋಗೋಣ ಹಾಗಾದರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕೋರ್ಟ್‌ಗಳು ಬೇಡ. ಎರಡೂ "ನೇಚರ್ ಆಫ್ ಲಾ" ಅಲ್ಲಿಯೇ ಎಕ್ಸಿಕ್ಯೂಟೀವ್ ಆಗಲಿ.

ಶ್ರೀ ಡಿ ಆರ್ ಪಾಟೀಲ್ : ನಾವು ಕೋರ್ಟ್ ಇರಬಾರದು ಎನ್ನುವವರೇ? ಆ ಗ್ರಾಮ ಪಂಚಾಯಿತಿಯಲ್ಲಿಯೇ ನ್ಯಾಯತೀರ್ಮಾನವಾಗಬೇಕು ಎನುವವರು ನಾವು

ಶ್ರೀ ಜೆ.ಸಿ. ಮಾಧುಸ್ವಾಮಿ : ಗೌಡಿಕೆ ಮಾಡುವವರಿಗೆ ಅದು ಸರಿ. ನಮ್ಮಂತಹವರ ಗತಿ ಏನು? ನಾವು ಗೌಡರಲ್ಲಿಗೆ ನಡೆಸಿಕೊಂಡು ಬರುತ್ತೇವೆ. ನಾವೇನು ಮಾಡುವುದು? ನಾವು ಬೇರೆ ಗೌಡರ ಕಡೆ ಕುಳಿತುಕೊಂಡು ಬಂದಿರುವವರು ಸ್ವಾಮಿ.

ಎಸ್. ಶ್ರೀರಾಜೇಂದ್ರನ್ : ಜೀನ್ಸ್ ಪ್ಯಾಂಟ್‌ಗಳು ಬಂದಿವೆ ನಾಲ್ಕು ಸಲ ಅದನ್ನು ವಾಷ್ ಮಾಡಬೇಕು. ಆವತ್ತು ಜೀನ್ಸ್ ಪ್ಯಾಂಟ್ ಇತ್ತಾ?

(ಶ್ರೀ ಎ.ಟಿ. ರಾಮಸ್ವಾಮಿಯವರು ಅಧ್ಯಕ್ಷ ಪೀಠ ಅಲಂಕರಿಸಿದರು)

ಚೇರ್ಮನ್ : ಮಾನ್ಯ ಡಿ ಆರ್ ಪಾಟೀಲರೇ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾತನಾಡಿ. ಅಧಿಕಾರ ವಿಕೇಂದ್ರೀಕರಣದ ವಿಷಯ ಬಂದಾಗ ಮಾತನಾಡಿ. ಈಗ ಕುಡಿಯುವ ನೀರಿನ ಸಮಸ್ಯೆಗೆ ಸೀಮಿತವಾಗಿ ಮಾತನಾಡಿ.

ಶ್ರೀ ಡಿ.ಆರ್. ಪಾಟೀಲ್ : ಈ ಸಮಸ್ಯೆ ಬಗೆಹರಿಯಬೇಕು ಅಂದರೆ ವ್ಯವಸ್ಥೆಯೊಳಗೆ ಈ ಬದಲಾವಣೆ ಬರಲೇಬೇಕು. ವ್ಯವಸ್ಥೆಯಲ್ಲಿ ಬದಲಾವಣೆ ತರದೇ ನಾವು ಈ ಸಮಸ್ಯೆಯನ್ನು ಬಗೆಹರಿಸುತ್ತೇವೆಂದರೆ ಪ್ರತಿ ವರ್ಷ ಜನವರಿ ಮತ್ತು ಫೆಬ್ರವರಿಯಲ್ಲಿ ಈ ಸಮಸ್ಯೆ ಇದ್ದೇ ಇರುತ್ತದೆ. ನಾವು ಚರ್ಚೆ ಮಾಡುತ್ತಲೇ ಇರುತ್ತೇವೆ. 50 ವರ್ಷಗಳಿಂದ ಅವರಿಗೆ ಅಧಿಕಾರ ಕೊಟ್ಟಿಲ್ಲ. ಗ್ರಾಮಪಂಚಾಯತಿಗೆ ಏನೂ ಅಧಿಕಾರ ಕೊಟ್ಟಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಪಾಟೀಲರೇ, ತತ್ವ ಆಮೇಲೆ ಹೇಳೋಣ. ಈಗ ಕುಡಿಯುವ ನೀರು ಹೇಗೆ ಮಾಡುವುದು? ತಕ್ಷಣ ನಮಗೆ ಕುಡಿಯುವ ನೀರು ಬೇಕು. ಈಗ ನಾಳೆ ಬೆಳಿಗ್ಗೆ ನಾವು ನಮ್ಮ ಕ್ಷೇತ್ರಕ್ಕೆ ಹೋದರೆ ನೀರು ಕೇಳುತ್ತಾರೆ. ಅದು ಹೇಗೆ ಸ್ವಲ್ಪ ಸೂತ್ರ ಹೇಳಿ ಸ್ವಾಮಿ. ಮಿಕ್ಕಿದ್ದೆಲ್ಲಾ ತತ್ವ ಆಮೇಲೆ ಮಾತನಾಡೋಣ.

ಶ್ರೀ ಜೆ ಸಿ ಮಾಧುಸ್ವಾಮಿ : ಜೊತೆಗೆ 2010ಕ್ಕೆ ಅಮೆರಿಕಾ ದೇಶಕ್ಕೂ ಸಹ ಕುಡಿಯುವ ನೀರಿಗೆ ತೊಂದರೆ ಇದೆ ಅಂತ ವರದಿಗಳು ಇವೆ. ಸಮುದ್ರದಲ್ಲಿ ನೀರಿನ ಮಟ್ಟ ರೈಜ್ ಆದರೂ ಕೂಡ ಸಿಹಿ ನೀರಿನ ಮಟ್ಟ ಅಗಾಧವಾಗಿ ಕೆಳಗೆ ಹೋಗುತ್ತದೆ ಅಂತ ಒಂದು ಸೈಂಟಿಫಿಕ್ ರಿಪೋರ್ಟ್ ಇದೆ. ಆ ದಿಕ್ಕಿನಲ್ಲಿ ಸರ್ಕಾರ ಏನು ಯೋಚನೆ ಮಾಡುತ್ತದೆ ಅಂತ ಹೇಳಬೇಕು. According to scientific report, we are going to that era including America, we will face the water problem.

ಡಾ : ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಪ್ರಪಂಚದಲ್ಲಿ 97 ಭಾಗ ನೀರು ಸಮುದ್ರದಲ್ಲಿದೆ, 2.5 ಪರ್ಸೆಂಟ್ ಹಿಮದರೂಪದಲ್ಲಿದೆ, 0.5 ಪರ್ಸೆಂಟ್ ನಮಗೆ ಲಭ್ಯವಾಗುವ ನೀರು ಮಳೆಯ ಆಶ್ರಯದಿಂದಲೇ ಬರುವಂಥದ್ದು. 2.5 ಪರ್ಸೆಂಟ್ ಹಿಮದರೂಪದಲ್ಲಿರುವ ನೀರನ್ನೇ ಮನುಷ್ಯ ಬಳಸಿಕೊಳ್ಳಬೇಕಾಗುತ್ತದೆ. ನಾಗರೀಕತೆ ಹುಟ್ಟಿದ್ದು ಕೂಡ ಸಿಂಧೂ ಸಹ ಕಣಿವೆಯ ಮುಖಾಂತರವೇ induscriminate exploitation of ground water is the main cause for all this problem in the nation. ವಿಶ್ವಸಂಸ್ಥೆಯವರೂ ಕೂಡ ಸರ್ವೆ ಮಾಡಿ, 2025 ಹೊತ್ತಿಗೆ ಭಾರತದಲ್ಲಿ ಕುಡಿಯುವ ನೀರಿನ ತೀವ್ರ ತೊಂದರೆಯಾಗುತ್ತದೆಂದು ಹೇಳಲಾಗಿದೆ. ಸೈಂಟಿಫಿಕ್ ಅಪ್ರೋಚ್ ಮಾಡಬೇಕು, ನಮ್ಮ ಮೂಲ ಯಾವುದಿದೆ ಎಂಬುದನ್ನು ತಿಳಿದುಕೊಳ್ಳಬೇಕು, ಆ ಮೂಲದ ಮುಖಾಂತರ ಹಾರ್ವೆಸ್ಟ್ ಮಾಡಿ ನಮ್ಮ ಅಂತರ್ಜಲದ ಮಟ್ಟ ಹೆಚ್ಚಿಸಿಕೊಳ್ಳುವುದು ಹೇಗೆ ಎನ್ನತಕ್ಕಂಥದ್ದು, ಈಗ ಮಾನ್ಯ ಶಾಸಕರೆಲ್ಲರದ್ದೂ ಕುಡಿಯುವ ನೀರವ ಸಮಸ್ಯೆ ಇದೆ. ಕಳೆದ ಮೂರು ವರ್ಷಗಳಿಂದ ಬರಗಾಲವಿತ್ತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ತಾವೇನು ಉತ್ತರ ಕೊಡುತ್ತಿದ್ದೀರಾ? ಉತ್ತರ ಕೊಡುತ್ತಿದ್ದಾರೆ ನಾವು ಕೇಳುವುದಕ್ಕೆ ತಯಾರಿದ್ದೇವೆ ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ ಮಧ್ಯಪ್ರದೇಶ ಮಾಡಿ ಮಾತನಾಡುವ ಅವಶ್ಯಕತೆ ಇಲ್ಲ, ಉತ್ತರ ಕೊಟ್ಟರೆ ಕೇಳುವುದಕ್ಕೆ ತಯಾರಿದ್ದೇವೆ, ನೀವು ಮಂತ್ರಿಗಳು ನೀವು ಸರ್ಕಾರ, ನಾವು ಸದಸ್ಯರು ಇಂಟರ್‌ವಿನ್ ಆಗುವುದು ಬೇರೆ ಮಂತ್ರಿಗಳು ಇಂಟರ್‌ವಿನ್ ಆಗುವುದು ಬೇರೆ, ನಮಗೂ ಅಂಕಿಅಂಶಗಳು ಗೊತ್ತಿದೆ, ಅಂಡರ್‌ಗ್ರೌಂಡ್ ವಾಟರ್ ಓವರ್ ಎಕ್ಸ್‌ಪ್ಲ್ಯಾಟೇಶನ್ ಆಗುವುದಕ್ಕೆ ನಾವು ಕಾರಣರಲ್ಲ, ಅದನ್ನೆಲ್ಲಾ ನಾವು ಹೇಳುತ್ತೇವೆ.

ಶ್ರೀ ಹೆಚ್.ಸಿ. ಮಹದೇವಪ್ಪ : ಮನುಷ್ಯರೇ ಕಾರಣರಲ್ಲವೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಂಡರ್‌ಗ್ರೌಂಡ್ ವಾಟರ್ ಕತೆ ನಮಗೆ ಗೊತ್ತಿಲ್ಲವೇ? ನೀವು ಹೇಳಬೇಕೆ? 97 ಪರ್ಸೆಂಟ್, 2 ಪರ್ಸೆಂಟ್ ನಮಗೂ ಗೊತ್ತಿದೆ, ಅದನ್ನು ನೀವು ಹೇಳುವ ಅವಶ್ಯಕತೆ ಇಲ್ಲ.

ಶ್ರೀ ಎಸ್. ರಾಜೇಂದ್ರನ್ : ಅದರ ಜೊತೆಗೆ ಇನ್ನೊಂದನ್ನು ಹೇಳಬೇಕು, ತ್ರಿಟೈಮ್ಸ್ ವಾಟರ್ ಒಂದು ಟೈಮ್ ಲ್ಯಾಂಡ್, ಹೊಸದಾಗಿ ಹೇಳುವ ರೀತಿ ಮೂರು ಭಾಗ ನೀರು ಒಂದು ಭಾಗ ಜಮೀನು.

ಶ್ರೀ ಡಿ.ಆರ್. ಪಾಟೀಲ್ : ಅಧ್ಯಕ್ಷರೆ, ರನ್ ಆಫ್ ವಾಟರ್ ನಮ್ಮ ದೇಶದಲ್ಲಿರುವಷ್ಟು ಬೇರೆ ಎಲ್ಲೂ ಇಲ್ಲ, ಆದರೆ ಅದನ್ನು ಹಾರ್ವೆಸ್ಟಿಂಗ್ ಮಾಡುವಲ್ಲಿ ನಮ್ಮ ಪ್ರಯತ್ನ ಅಷ್ಟು ಸಫಲವಾಗಿಲ್ಲ. ದಯವಿಟ್ಟು ನಮ್ಮ ಕೃಷಿ ಸಚಿವರು, ಆರ್‌ಡಿಪಿಆರ್ ಸಚಿವರು, ಮಾನ್ಯ ಸತ್ಯನಾರಾಯಣರವರು,

ಮೈನರ್ ಇರಿಗೇಷನ್ ಸಚಿವರು ಇವರೆಲ್ಲರೂ ಕೂಡ ಈ ಬಗ್ಗೆ ಸಮಗ್ರವಾದ ಪ್ಲಾನ್ ಮಾಡಬೇಕು, ಇದಕ್ಕೆ ಬೇಕಾದ ಸಂಪನ್ಮೂಲವನ್ನು ಜೊಡಿಸಬೇಕು, ಸಮುದಾಯವನ್ನು ಅದರಲ್ಲಿ ಇನ್‌ವಾಲ್ವ್ ಮಾಡಲೇ ಬೇಕು, ಇದು ಅನಿವಾರ್ಯ. ನಾವು ಒಪ್ಪಲಿ ಒಪ್ಪದೆ ಇರಲಿ ನೀವು ಗ್ರಾಮೀಣ ಸಮುದಾಯವನ್ನು ಇನ್‌ವಾಲ್ವ್ ಮಾಡಿ ಕೆಲಸ ಮಾಡಲು ಕಲಿಯಲಿಲ್ಲವೆಂದರೆ ಈ ಸಮಸ್ಯೆಯನ್ನು ನಮ್ಮಿಂದ ಬಗೆಹರಿಸುವುದಕ್ಕಾಗುವುದಿಲ್ಲ, 55 ವರ್ಷದಲ್ಲಿ ಆಗುವುದಿಲ್ಲವೆನ್ನುವುದನ್ನು ಪ್ರೂವ್ ಮಾಡಿಯೇ ಬಿಟ್ಟಿದ್ದೇವೆ. 55 ವರ್ಷ ಇದರ ವ್ಯವಸ್ಥೆಯೇ ಮುಂದುವರೆದಿತ್ತು, ಅದು ಆಗಿಲ್ಲ ನಾವಂತೂ ಸೋತಿದ್ದೇವೆ. ಒಂದು ಬದಲಾವಣೆ ಮಾಡಿ ಪ್ರಯತ್ನ ನೋಡೋಣ. ಅವರಿಗೆ ಬೇಕಾದಂಥ ಮಾರ್ಗದರ್ಶನ ಮಾಡೋಣ, ಅವರಿಗೇನು ಸಹಾಯ ನಮ್ಮ ಕಡೆಯಿಂದ ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡೋಣ ಎನ್ನುವ ಮಾತನ್ನು ಹೇಳುತ್ತೇನೆ. ಸ್ನೇಹಿತರೂ ಮಾತನಾಡುವಾಗ ಗ್ರಾಮಪಂಚಾಯತಿಗೆ ಕೊಟ್ಟ ಅಧಿಕಾರದ ಬಗ್ಗೆ ಮನಸ್ಸಿಗೆ ಬಹಳ ನೋವಾಗುವ ರೀತಿಯಲ್ಲಿ ಮಾತನಾಡಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಡಿ.ಆರ್. ಪಾಟೀಲು ಮಾತ್ರಾನೇ ಗ್ರಾಮಪಂಚಾಯಿತಿಯ ವಿಕೇಂದ್ರೀಕರಣದ ಪರವಾಗಿದ್ದಾರೆ, ಉಳಿದ ಶಾಸಕರೆಲ್ಲಾ ವಿರೋಧವಿದ್ದಾರೆ ಎಂದು ಅಭಿಪ್ರಾಯ ಬರುವುದಿದೆಯಲ್ಲಾ ಅದು ತಪ್ಪು, ಇವರೊಬ್ಬರೇ ಅಲ್ಲ, ಇವರು ವಾರಸುದಾರರಾಗಿ ವಕಾಲತ್ತು ಹಾಕಬೇಕಾಗಿಲ್ಲ, ನಮಗೂ ವಿಕೇಂದ್ರೀಕರಣದ್ದು ಗೊತ್ತಿದೆ. ನಾನು ಒಬ್ಬ ಅಧಿಕಾರಿಗೆ ಸವಾಲು ಹಾಕುತ್ತೇನೆ. 1987ರಿಂದ ಗ್ರಾಮ ಪಂಚಾಯಿತಿ ವ್ಯವಸ್ಥೆ ಜಾರಿಗೆ ಬಂದಿದೆ, ಯಾವುದಾದರೂ ಒಂದು ಗ್ರಾಮ ಪಂಚಾಯಿತಿಯನ್ನು ಆಯ್ಕೆ ಮಾಡಿ ನೀವು. 1987–2004ಕ್ಕೆ ಯಾವುದಾದರೂ ಒಂದು ಗ್ರಾಮ ಪಂಚಾಯಿತಿ ಜನರಿಗೆ ಉಪಯೋಗವಾಗುವ ಒಂದು ಶಾಶ್ವತವಾದ ಕೆಲಸವನ್ನು ಮಾಡಿದ್ದರೆ ಒಪ್ಪಿ ಅಪಲಾಜಿ ಕೇಳುವುದಕ್ಕೆ ತಯಾರಿದ್ದೇನೆ ಎಂದು ಸವಾಲು ಹಾಕುತ್ತಿದ್ದೇನೆ ಅದೇ ಅಧಿಕಾರಿ ಹೋಗಿ ನೋಡಿಕೊಂಡು ಬರಲಿ. Let him choose his own panchayat. ಗ್ರಾಮಪಂಚಾಯಿತಿ ವಿಕೇಂದ್ರೀಕರಣ ಇವರಿಗೇನೇ ಗೊತ್ತಿರುವುದು ನಮಗೇನೂ ಗೊತ್ತಿಲ್ಲವೇ? ದಯವಿಟ್ಟು ನಾವು ಅದರ ವಿರುದ್ಧ ಇದ್ದೇವೆ ಎನ್ನುವ ರೀತಿಯಲ್ಲಿ ಮಾತನಾಡಬೇಡಿ. It will give a wrong message.

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಶ್ರೀರಾಮರೆಡ್ಡಿಯವರೆ, ದಯವಿಟ್ಟು ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿಟ್ಟು ತೂಕ ಮಾಡಬೇಡಿ, ಒಳ್ಳೆಯವರೂ ಇದ್ದಾರೆ ಕೆಟ್ಟವರೂ ಇದ್ದಾರೆ, ಗ್ರಾಮಪಂಚಾಯಿತಿ ಅಧ್ಯಕ್ಷರು ಒಳ್ಳೆಯವರು ಇದ್ದಾರೆ, ಇಲ್ಲಿರುವ ಶಾಸಕರಲ್ಲಿ ಒಳ್ಳೆಯವರೂ ಇದ್ದೇವೆ. ಕೆಟ್ಟವರೂ ಇದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೌದು. ಮಂತ್ರಿಗಳು ಎದ್ದು ನಿಂತು ಉತ್ತರ ಕೊಡುತ್ತಿದ್ದರೆ ಅಧಿಕಾರಿಗಳು ಕುಳಿತುಕೊಂಡು ಉತ್ತರ ಕೊಡುವ ಪರಿಸ್ಥಿತಿ ಬಂದಿದೆ ಏಕೆ ಸುಮ್ಮನೆ ಪ್ರಜಾಪ್ರಭುತ್ವದ ಬಗ್ಗೆ ತಾವೇನು ಮಾತನಾಡುತ್ತೀರಿ?

ಶ್ರೀ ಬಸವರಾಜ ರಾಯರೆಡ್ಡಿ : ನೀವು ಮಾತನಾಡುವುದು ಸರಿ ಇದೆ ಎಂದೆ.

ಶ್ರೀ ಡಿ ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಆಯ್ಕೆಯಾದ ಎಲ್ಲಾ ಸದಸ್ಯರು ಕಾನೂನಿನೊಳಗೆ ಏನು ವ್ಯವಸ್ಥೆಯನ್ನು ನಾವು ರೂಪಿಸಿದ್ದೇವೆ ಎನ್ನುವ ತಿಳುವಳಿಕೆ ಇದ್ದೇ ಚುನಾವಣೆಯಲ್ಲಿ ಆಯ್ಕೆಯಾಗಿ ಬಂದಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್ : ಕಾನೂನು ಬದಲಾವಣೆ ಮಾಡಿ, ಕಾನೂನು ಬದಲಾವಣೆ ಮಾಡಿದಾಗ ನಿಮಗೂ ಬುದ್ಧಿಕಲಿಸುವ ಶಕ್ತಿ ಜನರಿಗೆ ಇದ್ದೇ ಇದೆ. ಅವರಿಗೂ ಅಧಿಕಾರ ಏನೇನು ಇದೆ ಎನ್ನುವ ತಿಳುವಳಿಕೆ ಬಂದಿದೆ, ನೀವು ಬದಲಾವಣೆ ಮಾಡಿ, ಬದಲಾವಣೆ ಮಾಡುವುದಕ್ಕೆ ಕಾಂಗ್ರೆಸ್‌ಗೆ ಬಂದಿದ್ದೀರಿ, ನನಗೆ ಬಿಡಿ, ನಿಮಗಂತೂ ಈ ಸಮಸ್ಯೆಯನ್ನು ನಮ್ಮಿಂದ ಬಗೆಹರಿಸುವುದಕ್ಕಾಗುವುದಿಲ್ಲ. 55 ವರ್ಷದಲ್ಲಿ ಆಗುವುದಿಲ್ಲವೆನ್ನುವುದನ್ನು ಪ್ರೂವ್ ಮಾಡಿಯೇ ಬಿಟ್ಟಿದ್ದೇವೆ. 55 ವರ್ಷ ಇದ್ದ ವ್ಯವಸ್ಥೆಯೇ ಮುಂದುವರೆದಿತ್ತು, ಅದು ಆಗಿಲ್ಲ ನಾವಂತೂ ಸೋತಿದ್ದೇವೆ. ಒಂದು ಬದಲಾವಣೆ ಮಾಡಿ ಪ್ರಯತ್ನ ನೋಡೋಣ, ಅವರಿಗೆ ಬೇಕಾದಂಥ ಮಾರ್ಗದರ್ಶನ ಮಾಡೋಣ, ಅವರಿಗೇನು ಸಹಾಯ ನಮ್ಮ ಕಡೆಯಿಂದ ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡೋಣ ಎನ್ನುವ ಮಾತನ್ನು ಹೇಳುತ್ತೇನೆ. ಸ್ನೇಹಿತರು ಮಾತನಾಡುವಾಗ ಗ್ರಾಮಪಂಚಾಯತಿಗೆ ಕೊಟ್ಟ ಅಧಿಕಾರದ ಬಗ್ಗೆ ಮನಸ್ಸಿಗೆ ಬಹಳ ನೋವಾಗುವ ರೀತಿಯಲ್ಲಿ ಮಾತನಾಡಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಡಿ.ಆರ್. ಪಾಟೀಲರು ಮಾತ್ರಾನೇ ಗ್ರಾಮಪಂಚಾಯತಿಯ ವಿಕೇಂದ್ರೀಕರಣದ ಪರವಾಗಿದ್ದಾರೆ, ಉಳಿದ ಶಾಸಕರೆಲ್ಲಾ ವಿರೋಧವಿದ್ದಾರೆ ಎಂದು ಅಭಿಪ್ರಾಯ ಬರುವುದಿದೆಯಲ್ಲಾ ಅದು ತಪ್ಪು, ಇವರೊಬ್ಬರೇ ಅಲ್ಲ, ಇವರು ವಾರಸುದಾರರಾಗಿ ವಕಾಲತ್ತಾಲು ಹಾಕಬೇಕಾಗಿಲ್ಲ. ನಮಗೂ ವಿಕೇಂದ್ರೀಕರಣದ್ದು ಗೊತ್ತಿದೆ. ನಾನು ಒಬ್ಬ ಅಧಿಕಾರಿಗೆ ಸವಾಲು ಹಾಕುತ್ತೇನೆ. 1987ರಿಂದ ಗ್ರಾಮಪಂಚಾಯತಿ ವ್ಯವಸ್ಥೆ ಜಾರಿಗೆ ಬಂದಿದೆ, ಯಾವುದಾದರೂ ಒಂದು ಗ್ರಾಮ ಪಂಚಾಯತಿಯನ್ನು ಆಯ್ಕೆ ಮಾಡಿ ನೀವು. 1987–2004ಕ್ಕೆ ಯಾವುದಾದರೂ ಒಂದು ಗ್ರಾಮ ಪಂಚಾಯತಿ ಜನರಿಗೆ ಉಪಯೋಗವಾಗುವ ಒಂದು ಶಾಶ್ವತವಾದ ಕೆಲಸವನ್ನು ಮಾಡಿದ್ದಾರೆ ಒಪ್ಪಿ ಅಪಲಾಜಿ ಕೇಳುವುದಕ್ಕೆ ತಯಾರಿದ್ದೇನೆ ಎಂದು ಸವಾಲು ಹಾಕುತ್ತಿದ್ದೇನೆ. ಅದೇ ಅಧಿಕಾರಿ ಹೋಗಿ ನೋಡಿಕೊಂಡು ಬರಲಿ ಗ್ರಾಮಪಂಚಾಯತಿ ವಿಕೇಂದ್ರಿಕರಣ ಇವರಿಗೇನೇ ಗೊತ್ತಿರುವುದು ನಮಗೇನೂ ಗೊತ್ತಿಲ್ಲವೇ ದಯವಿಟ್ಟು ನಾವು ಅದರ ವಿರುದ್ಧ ಇದ್ದೇವೆ ಎನ್ನುವ ರೀತಿಯಲ್ಲಿ ಮಾತನಾಡಬೇಡಿ.

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಶ್ರೀರಾಮರೆಡ್ಡಿಯವರೆ, ದಯವಿಟ್ಟು ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿಟ್ಟು ತೂಕ ಮಾಡಬೇಡಿ, ಒಳ್ಳೆಯವರೂ ಇದ್ದಾರೆ ಕೆಟ್ಟವರೂ ಇದ್ದಾರೆ, ಗ್ರಾಮಪಂಚಾಯತಿ ಅಧ್ಯಕ್ಷರು ಒಳ್ಳೆಯವರು ಇದ್ದಾರೆ, ಕೆಟ್ಟವರು ಇದ್ದಾರೆ, ಇಲ್ಲಿರುವ ಶಾಸಕರಲ್ಲಿ ಒಳ್ಳೆಯವರು ಇದ್ದೇವೆ. ಕೆಟ್ಟವರೂ ಇದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೌದು, ಮಂತ್ರಿಗಳು ಎದ್ದು ನಿಂತು ಕೊಡುತ್ತಿದ್ದಾರೆ ಅಧಿಕಾರಿಗಳು ಕುಳಿತುಕೊಂಡು ಉತ್ತರ ಕೊಡುವ ಪರಿಸ್ಥಿತಿ ಬಂದಿದೆ, ಏಕೆ ಸುಮ್ಮನೆ ಪ್ರಜಾಪ್ರಭುತ್ವದ ಬಗ್ಗೆ ತಾವೇನು ಮಾತನಾಡುತ್ತೀರಿ?

ಶ್ರೀ ಬಸವರಾಜ ರಾಯರೆಡ್ಡಿ : ನೀವು ಮಾತನಾಡುವುದು ಸರಿ ಇದೆ ಎಂದೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಆಯ್ಕೆಯಾದ ಎಲ್ಲಾ ಸದಸ್ಯರು ಕಾನೂನಿನೊಳಗೆ ಏನು ವ್ಯವಸ್ಥೆಯನ್ನು ನಾವು ರೂಪಿಸಿದ್ದೇವೆ ಎನ್ನುವ ತಿಳುವಳಿಕೆ ಇದ್ದೇ ಚುನಾವಣೆಯಲ್ಲಿ ಆಯ್ಕೆಯಾಗಿ ಬಂದಿದ್ದೇವೆ.

ಶ್ರೀ ಬಸವರಾಜರಾಯ ರೆಡ್ಡಿ : ಕಾನೂನು ಬದಲಾವಣೆ ಮಾಡಿದರೆ ಆಯಿತು.

ಶ್ರೀ ಡಿ.ಆರ್. ಪಾಟೀಲ್ : ಕಾನೂನು ಬದಲಾವಣೆ ಮಾಡಿ, ಕಾನೂನು ಬದಲಾವಣೆ ಮಾಡಿದಾಗ ನಿಮಗೂ ಬುದ್ಧಿಕಲಿಸುವ ಶಕ್ತಿ ಜನರಿಗೆ ಇದ್ದೇ ಇದೆ. ಅವರಿಗೂ ಅಧಿಕಾರ ಏನೇನು ಇದೆ ಎನ್ನುವ ತಿಳುವಳಿಕೆ ಬಂದಿದೆ, ನೀವು ಬದಲಾವಣೆ ಮಾಡಿ, ಬದಲಾವಣೆ ಮಾಡುವುದಕ್ಕೆ ಬಂದಿದ್ದೀರಿ, ನನಗ ಬಿಡಿ, ನಿಮಗಂತೂ ಬದಲಾವಣೆ ಮಾಡುವುದಕ್ಕೆ ಹಕ್ಕೇ ಇಲ್ಲ ದೇಶದಲ್ಲಿ ಈ ಬಗ್ಗೆ ನಮಗೆ ಕಮಿಟ್‌ಮೆಂಟ್ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಬುದ್ಧಿಕಲಿಸುತ್ತಾರೆಯೇ ಅದೇನು ಕಲಿಸುತ್ತಾರೋ ಕಲಿಸಲಿ, ತಾವೇನು ಹೀಗೆ ಮಾತನಾಡುತ್ತೀರಿ, ಹಾಗಾದರೆ ನಾವೇನು ಮಾತನಾಡಬಾರದು, ಗ್ರಾಮಪಂಚಾಯತಿ ವಿಷಯ ನಾವು ಮಾತನಾಡಬಾರದು ಏಕೆಂದರೆ ಅವರು ನಮಗೆ ಬುದ್ಧಿಕಲಿಸುತ್ತಾರಲ್ಲಾ. Is he the champion of Gram Panchayat? ಅವರೇನು ಬುದ್ಧಿಕಲಿಸುತ್ತಾರೆ. ನಿಂತುಕೊಂಡು ನೀವೇನು ಮಾತನಾಡುತ್ತೀರಿ, ಶಾಸಕರಿಗೆ ಬುದ್ಧಿಕಲಿಸುತ್ತಾರಂತೆ.....

ಶ್ರೀ ಡಿ.ಆರ್. ಪಾಟೀಲ್ : ನಿಮಗೆ ಮಾತನಾಡುವುದಕ್ಕೆ ಹಕ್ಕಿದೆ, ನನಗೆ ಮಾತನಾಡುವುದಕ್ಕೆ ಹಕ್ಕಿಲ್ಲವೇ

ಶ್ರೀ ಜೆ.ಸಿ. ಮಾಧುಸ್ವಾಮಿ : ಗ್ರಾಮಪಂಚಾಯತಿಗಳಿಗೆ ಅಧಿಕಾರಕೊಡಿ ಎಂದು ಹೇಳಿ, ಇಲ್ಲಿಗೆ ಬುದ್ಧಿಕಲಿತುಕೊಂಡೇ ಬಂದಿರುವುದು.

ಛೇರ್ಮನ್ : ಈಗ ಅಧಿಕಾರ ವಿಕೇಂದ್ರಿಕರಣದ ಬಗ್ಗೆ ಚರ್ಚೆಯಾಗುತ್ತಿಲ್ಲ, ಕುಡಿಯುವ ನೀರಿನ ಬಗ್ಗೆ ಚರ್ಚೆಯಾಗುತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲಿ ವಿಕೇಂದ್ರೀಕರಣದ ಬಗ್ಗೆಯಲ್ಲ ಚರ್ಚೆಯಾಗುತ್ತಿರುವುದು. ಕುಡಿಯುವ ನೀರಿನ ಬಗ್ಗೆ ಚರ್ಚೆಯಾಗುತ್ತಿರುವುದು.

ಶ್ರೀ ಸಿ.ಎಂ. ಉದಾಸಿ(ಹಾನಗಲ್) : ಸನ್ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಪೂರೈಕೆಯ ಬಗ್ಗೆ ಗ್ರಾಮೀಣ ಭಾಗದಲ್ಲಿ ಹಾಹಾಕಾರ ಎದ್ದಿದೆ ಎಂದು ಇವತ್ತು ಸದನದ ಎಲ್ಲಾ ಸದಸ್ಯರು ಮಾತನಾಡಿದ್ದಾರೆಂಬುದು ಗಮನಕ್ಕೆ ಬಂದಿದೆ. ನಮ್ಮ ಜಿಲ್ಲೆಗೆ ಪಂಚಾಯತ್‌ರಾಜ್ ಸಚಿವರು ಬಂದಿದ್ದರು, ಅವರು ಬಂದಾಗ ಹಾವೇರಿ ಜಿಲ್ಲೆಯಲ್ಲಿ 600 ಹಳ್ಳಿಗಳಲ್ಲಿ ಸರ್ವೆ ಮಾಡಿದ ಪ್ರಕಾರ 300ಕ್ಕಿಂತ ಹೆಚ್ಚು ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಅದಕ್ಕೆ 8 ಕೋಟಿ 75 ಲಕ್ಷ ರೂಪಾಯಿಗಳ ಹಣಬೇಕೆನ್ನುವ ಮಾತುಗಳನ್ನು ಅವರು ಪ್ರಸ್ತಾವನೆಯನ್ನು ಕಳುಹಿಸಿದಾಗ ಹೇಳಿದರು. ಅಲ್ಲಿ ಲಭ್ಯವಿದ್ದ ಹಣವೆಷ್ಟು ಎಂದರೆ 88 ಲಕ್ಷ ರೂಪಾಯಿ, ಈಗ ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿದ್ದು ಕೋಟಿಗಟ್ಟಲೆ ನಾವು ಹಣ ಬಿಡುಗಡೆ ಮಾಡಿದ್ದೇವೆಂದು ಹೇಳಿದರು, 8 ಕೋಟಿ 87 ಲಕ್ಷ ರೂಪಾಯಿ ಬೇಕೆಂದು ಹೇಳಿದ್ದು ಯಾವಾಗ ಡಿಸೆಂಬರ್ 30ರವರೆಗೆ ಕೊನೆಗೆ ಬೇಕಾದ ಅವಧಿಗೆ 300 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇತ್ತು. ಆದರೆ ನಮಗೆ ತಿಳಿದಂತೆ 450 ಕ್ಕಿಂತ ಹೆಚ್ಚು ಹಳ್ಳಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದೆ. ಸುಮಾರು 15 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಹಾವೇರಿ ಒಂದೇ ಜಿಲ್ಲೆಗೆ ಬೇಕಾಗುತ್ತದೆ. ಹೀಗೆ ಇರುವಾಗ ಇವತ್ತು ಕುಡಿಯುವ ನೀರಿಗೆ ಹಣ ಬಳಕೆಯಾಗುತ್ತಿರುವುದು ಬಹಳಷ್ಟು ಕಡಿಮೆ ಎನ್ನುವುದನ್ನು ಗಮನಕ್ಕೆ ತರುತ್ತಿದ್ದೇನೆ. ಶಾಶ್ವತ ಕುಡಿಯುವ ನೀರಿನ ಪೂರೈಕೆಯ ಬಗ್ಗೆ ಏನು ಮಾಡಬೇಕೆನ್ನುವುದರ ಬಗ್ಗೆ ಆಲೋಚನೆ ಮಾಡಬೇಕಾಗಿದೆ.

ಇವತ್ತು ಹಾವೇರಿ ಜಿಲ್ಲೆಯಲ್ಲಿ ವರದಾ ನದಿ ಹರಿದು ಹೋಗಿದೆ, 11 ಬ್ಯಾರೇಜ್‌ಗಳಿದ್ದಾವೆ, ಒಂದು ಬ್ಯಾರೇಜ್‌ನಿಂದ ಮತ್ತೊಂದು ಬ್ಯಾರೇಜ್‌ನ 8 ಕಿ.ಮೀ. ಅಂತರದಲ್ಲಿ ಮತ್ತೊಂದು ಬ್ಯಾರೇಜ್ ಅನ್ನು ಮಾಡಿದ್ದಾದರೆ ಧರ್ಮ ನದಿಯಲ್ಲಿ 13 ಬ್ಯಾರೇಜ್ ಮಾಡುವಂತಹ ಅವಕಾಶಗಳಿದ್ದಾವೆ. ಇದನ್ನು ಶಾಶ್ವತ ಕುಡಿಯುವ ನೀರು ಪೂರೈಕೆಗೆ ಮಾಡಿದ್ದೇ ಆದರೆ ಶೇಕಡ 20ರಷ್ಟಾದರೂ ಕೂಡ ಕುಡಿಯುವ ನೀರಿಗೆ ಅನುಕೂಲ ಕಲ್ಪಿಸಿದಂತಾಗುತ್ತದೆ, ಇಂತಹ ಯೋಜನೆಗಳ ಬಗ್ಗೆ ಇವತ್ತು ಗಂಭೀರವಾಗಿ ಚಿಂತನೆ ಮಾಡುವುದು ಅಗತ್ಯವಿದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಆರು ಗಂಟೆಗೆ ಪ್ರತಿಪಕ್ಷದ ಎಲ್ಲಾ ನಾಯಕರನ್ನು ಮತ್ತೆ ಅನೇಕ ಶಾಸಕರನ್ನು ಬಾಗಲಕೋಟೆ ಮತ್ತು ಇತರೆ ಪ್ರಮುಖ ವಿಷಯಗಳಿಗೆ ಸಂಬಂಧಿಸಿದಂತೆ ಮಿಟಿಂಗ್‌ನ್ನು ಕರೆದಿದ್ದಾರೆ. ಈಗ ಸಭೆಯನ್ನು ಅಡ್ಜರ್ನ್ ಮಾಡಿ. ನಾಳೆ ಮಾನ್ಯ ಡಿ.ಆರ್. ಪಾಟೀಲರೇ ಮಾತನಾಡುವುದನ್ನು ಮುಂದುವರಿಸಲಿ.

ಛೇರ್ಮನ್ : ಅವರು ಮುಗಿಸಿಬಿಡಲಿ. ಚರ್ಚೆ ಸಾಕಷ್ಟು ಆಗಿದೆ. ಮುಗಿಸಿ ಮಾನ್ಯ ಡಿ.ಆರ್. ಪಾಟೀಲರೇ, ಎರಡು ನಿಮಿಷದಲ್ಲಿ ಮುಗಿಸಿ. ನೀವು ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯ ಬಗ್ಗೆ ಮಾತನಾಡಲಿಕ್ಕೆ ಹೋಗಬೇಡಿ, ನೀವು ಮುಗಿಸಿ. ನಾಳೆ ಅವಕಾಶ ಇಲ್ಲ. ಮುಗಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಅಡ್ಜರ್ನ್ ಮಾಡಿ. ನಾಳೆ ನೋಡೋಣ.

ಛೇರ್ಮನ್ : ಮಾನ್ಯ ಡಿ.ಆರ್. ಪಾಟೀಲರೇ, ತಾವು ಮುಗಿಸಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಇದಾದಕೂಡಲೇ ನೆಕ್ಸ್ಟ್ ಸಬ್ಜೆಕ್ಟ್ ನನ್ನದು ಇದೆ. ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್ ಎಲೆಕ್ಷನ್ಸ್‌ಗೆ ಮಾರ್ಗಸೂಚಿ ಆಗಿಹೋಗಿದೆ. ನೋಟೀಫಿಕೇಷನ್ಸ್ ಇಷ್ಯೂ ಮಾಡಿದರೆ ನಾನು ಏನು ವಿಚಾರವನ್ನು ಪ್ರಸ್ತಾಪ ಮಾಡಿದರೂ ಅದು ಅಪ್ರಸ್ತುತವಾಗಿಬಿಡುತ್ತೆ. ಇವತ್ತು ಅಡ್ಜರ್ನ್ ಮಾಡುತ್ತೀರಿ ಎಂದು ಹೇಳುತ್ತಿದ್ದೀರಿ. ನಾಳೆ ಅಷ್ಟೊತ್ತಿಗೆ ತೆಗೆದುಕೊಳ್ಳುತ್ತೀರಿ ಎನ್ನತಕ್ಕಂಥದ್ದು ಗೊತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮೊದಲಿಗೆ ಮಾನ್ಯ ಕೆ.ಆರ್. ರಮೇಶ್‌ಕುಮಾರ್ ಅವರದನ್ನು ತೆಗೆದುಕೊಳ್ಳಲಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಏಕೆಂದರೆ ಅವರು ನೋಟೀಫಿಕೇಷನನ್ನು ಇಷ್ಯೂ ಮಾಡಿಬಿಟ್ಟರೆ the whole thing becomes infructuous.

ಛೇರ್ಮನ್ : ಮಾನ್ಯ ಡಿ.ಆರ್. ಪಾಟೀಲರೇ ತಾವು ಮುಗಿಸಿ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅದಕ್ಕೆ ಸ್ಥಳೀಯ ಸಮಸ್ಯೆಗಳನ್ನು ಪರಿಹಾರ ಮಾಡುವಂಥ ಜವಾಬ್ದಾರಿಯನ್ನು ನಾವು ಸಮುದಾಯಕ್ಕೆ ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟರೆ ನಮಗಿಂತ ಹೆಚ್ಚು ಯಶಸ್ವಿಯಾಗಿ ಅವರು ಕೆಲಸ ಮಾಡಬಹುದು ಎನ್ನತಕ್ಕ ಭರವಸೆ ನನ್ನಲ್ಲಿದೆ. ಅದಕ್ಕೆ ದಯವಿಟ್ಟು ಅವರಿಗೆ ನಾವು ಕೊಡಬೇಕು. ಅವರಿಗೆ ಬೇಕಾಗುವಂಥ ಸಹಾಯ, ಸಹಕಾರ, ಮಾರ್ಗದರ್ಶನವನ್ನು ನಾವು ಮಾಡಬೇಕೆನ್ನುವ ಮಾತನ್ನು ನಾನು ಇಲ್ಲಿ ಹೇಳುತ್ತೇನೆ. ಮತ್ತು ಈಗಾಗಲೇ ಸರ್ಕಾರ ಬರಗಾಲ ಪರಿಹಾರ ಸಮಿತಿಯನ್ನು ನೇಮಕ ಮಾಡಿ ಅದಕ್ಕೆ ಶಾಸಕರನ್ನೇ ಅಧ್ಯಕ್ಷರನ್ನಾಗಿ ಮಾಡಿ ಸಮಿತಿಯನ್ನು ಇಟ್ಟಿದ್ದಾರೆ. ಅದರ ಮುಖಾಂತರ ನೀವು ಕುಡಿಯುವ ನೀರನ್ನು ತುರ್ತು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಬೇಕಾದ ನಿರ್ಣಯವನ್ನು ನೀವು ತೆಗೆದುಕೊಳ್ಳಬಹುದು. ಅದಕ್ಕೇನೂ ತೊಂದರೆ ಇಲ್ಲ. ಏಕೆ ಈ ರೀತಿ ತಪ್ಪು ಕಲ್ಪನೆಯನ್ನು ಮಾಡಿಕೊಂಡಿದ್ದಾರೋ ಬಹಳ ಜನ ಸ್ನೇಹಿತರು

ಎಂದು ನನಗೆ ಇನ್ನೂ ಅರ್ಥವಾಗುತ್ತಿಲ್ಲ. ಈಗಂತೂ ಯಾವ ಕಾನೂನಿನಲ್ಲೂ ಶಾಸಕರಿಗೆ ಅಧಿಕಾರ ಇಲ್ಲ. ಆದರೆ ನಾವು ಅಧಿಕಾರವನ್ನು ಚಲಾಯಿಸಬೇಕೆನ್ನುತ್ತೇವೆ. ಈ ರೀತಿ back seat driving ನ್ನು ನಾವು ಬಿಡಬೇಕು. ಯಾರಿಗೆ ಜವಾಬ್ದಾರಿ ಇದೆ, ಅವರಿಗೆ ಅಧಿಕಾರವನ್ನು ಕೊಟ್ಟುಬಿಡೋಣ. ಇದು ನನ್ನ ಒತ್ತಾಯ ಸಾರ್.

ಛೇರ್ಮೆನ್ : ಈಗ ಅನೇಕ ಮಾನ್ಯ ಸದಸ್ಯರುಗಳು ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಚರ್ಚೆ ಮಾಡಲಿಕ್ಕೆ ಪತ್ರಗಳನ್ನು ಕೊಟ್ಟಿದ್ದಾರೆ. ಈಗ ನಾಳೆ ಇನ್ನೂ ಕೂಡ ಬಹಳ ಪ್ರಮುಖವಾದ ಕಾರ್ಯಕಲಾಪಗಳನ್ನು ಸಭೆಯಲ್ಲಿ ಕೈಗೆತ್ತಿಕೊಳ್ಳಬೇಕಾಗಿರುವುದರಿಂದ ಸಚಿವರು ಉತ್ತರ ಕೊಟ್ಟಮೇಲೆ ಅವರಿಗೆ ಕ್ಲಾರಿಫಿಕೇಷನನ್ನು ಕೇಳುವುದಕ್ಕೆ ಅವರಿಗೆ ಅವಕಾಶವನ್ನು ಮಾಡಿಕೊಡಲಾಗುತ್ತದೆ. ಇವತ್ತಿಗೆ ಈ ಕುಡಿಯುವ ನೀರಿನ ಸಮಸ್ಯೆಯ ಚರ್ಚೆ ಮುಕ್ತಾಯಗೊಂಡಿದೆ. ಈಗ ಸದನವನ್ನು ನಾಳೆ ಬೆಳಿಗ್ಗೆ 10 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು 6–03 ಗಂಟೆಗೆ ಮುಂದೂಡಲ್ಪಟ್ಟು ಪುನಃ ನಾಳೆ ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

ಅನುಬಂಧ – I

395(204) : ಶ್ರೀ ಅಭಯ ಪಾಟೀಲ್ (ಬಾಗೇವಾಡಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಘಟ್ಟಪ್ರಭಾ ಹಾಗೂ ಮಲಪ್ರಭಾ ನದಿಗಳಿಂದ ಕೆಲವು ಜನ ಮರಳನ್ನು ಸಾಗಿಸುತ್ತಿದ್ದು, ಇದು ಸರ್ಕಾರಕ್ಕೆ ತಿಳಿದಿದೆಯೇ;

ಆ) ಇದನ್ನು ತಡೆಗಟ್ಟಲು ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ಘಟ್ಟಪ್ರಭಾ ಹಾಗೂ ಮಲಪ್ರಭಾ ನದಿಗಳಿಂದ ಮರಳನ್ನು ಸಾಗಿಸುವುದರಿಂದ ರಸ್ತೆ ಸಂಚಾರ ವಿಪರೀತಗೊಂಡು ರಸ್ತೆಗಳು ಹದಗೆಟ್ಟಿದೆ; ಅವುಗಳ ದುರಸ್ತಿಗೆ ಸರ್ಕಾರದ ಕ್ರಮಗಳೇನು?

ಶ್ರೀ ಧರಂಸಿಂಗ್(ಮುಖ್ಯ ಮಂತ್ರಿಗಳು)

ಅ) ಹೌದು.

ಆ) ಘಟ್ಟಪ್ರಭಾ ಹಾಗೂ ಮಲಪ್ರಭಾ ನದಿ ಪಾತ್ರದಲ್ಲಿ ಅಕ್ರಮ ಮರಳು ಗಣಿಗಾರಿಕೆ ತಡೆಗಟ್ಟಲು ಈ ಕೆಳಕಂಡಂತೆ ಕ್ರಮ ವಹಿಸಲಾಗಿದೆ.

1) 2001–02ನೇ ಸಾಲಿನಿಂದ 2004–05ನೇ ಡಿಸೆಂಬರ್ ಅಂತ್ಯದವರೆಗೆ ಅಕ್ರಮ ಮರಳು ಸಾಗಾಣಿಕೆಯ 185 ಪ್ರಕರಣಗಳನ್ನು ಪತ್ತೆ ಹಚ್ಚಿ ರೂ. 5.98 ಲಕ್ಷ ದಂಡ ವಸೂಲಿ ಮಾಡಲಾಗಿದೆ.

2) 367 ಮರಳು ನಿಕ್ಷೇಪಗಳನ್ನು ಗುರ್ತಿಸಿ ಮರಳು ಹರಾಜು ಅಧಿಸೂಚನೆ ಹೊರಡಿಸಿದೆ,

3) ಮರಳು ಹರಾಜು ಅಧಿಸೂಚನೆ ಹೊರಡಿಸಲಾದ ಪೈಕಿ 224 ಮರಳು ನಿಕ್ಷೇಪಗಳ 711.25 ಎಕರೆ ಪ್ರದೇಶವನ್ನು ಮರಳು ಗಣಿಗಾರಿಕೆಗೆ ಹರಾಜು ಮಾಡಲಾಗಿದೆ. ಹಾಗು ಇದರಿಂದ ರೂ. 66.86 ಲಕ್ಷ ರಾಜಸ್ವ ಸಂಗ್ರಹಿಸಲಾಗಿದೆ.

ಇ) ಮರಳು ಹರಾಜಿನಿಂದ ಸಂಗ್ರಹಿಸಲಾದ ಶೇ 50ರಷ್ಟು ಮೊತ್ತವನ್ನು ಆಯಾ ಗ್ರಾಮ ಪಂಚಾಯಿತ್ತಿಗಳಿಗೆ ನೀಡಲಾಗುತ್ತಿದ್ದು. ಸದರಿ ಹಣದಿಂದ ಮರಳು ಸಾಗಾಣಿಕೆಯಿಂದ ಹಾಳಾದ ರಸ್ತೆಗಳ ದುರಸ್ತಿಗೆ ಕ್ರಮ ವಹಿಸಬಹುದಾಗಿದೆ.

396(738) : ಶ್ರೀ ಅಕ್ಕಿ ಮಲ್ಲಿಕಾರ್ಜುನ್ ಸಹದೇವಪ್ಪ (ಕುಂದಗೋಳ್) : ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿರುವ ಪಶುವೈದ್ಯಕೀಯ ಆಸ್ಪತ್ರೆಗಳು ಹಾಗು ಪಶು ಚಿಕಿತ್ಸಾಲಯಗಳ ಸಂಖ್ಯೆ ಎಷ್ಟು ;

ಆ) ಸಂಚಾರಿ ಪಶುವೈದ್ಯಕೀಯ ಸೇವೆ ಚಾಲನೆಯಲ್ಲಿದೆಯೇ ;

ಇ) ಇಲ್ಲವಾದಲ್ಲಿ ಈ ಸೇವೆಯನ್ನು ಯಾವಾಗ ಒದಗಿಸಲಾಗುತ್ತಿದೆ :

ಈ) ಕುಂದಗೋಳ ತಾಲ್ಲೂಕಿನಲ್ಲಿರುವ ಪಶುವೈದ್ಯಕೀಯ ಆಸ್ಪತ್ರೆಗಳೆಷ್ಟು ;

ಉ) ಪಶುವೈದ್ಯರ ಕೊರತೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಎಷ್ಟು ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇದೆ, ಸರ್ಕಾರ ಕೊರತೆಯನ್ನು ತುಂಬಲು ಕೈಗೊಂಡ ಕ್ರಮಗಳೇನು?

ಶ್ರೀ ಮಿರಾಜುದ್ದೀನ್ ಪಟೇಲ್(ಪಶುಸಂಗೋಪನೆ ಮತ್ತು ವಕ್ಫ್ ಖಾತೆ ಸಚಿವರು)

ಅ) ಒಟ್ಟು 6 ಪಶು ಆಸ್ಪತ್ರೆಗಳು ಮತ್ತು 34 ಪಶು ಚಿಕಿತ್ಸಾಲಯಗಳು ಧಾರವಾಡ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಆ) ಸಂಚಾರಿ ಪಶು ಚಿಕಿತ್ಸಾಲಯ ಸೇವೆ ಪ್ರಸ್ತುತ ಚಾಲನೆಯಲ್ಲಿಲ್ಲ.

ಇ) ಪಶುವೈದ್ಯರ ಹುದ್ದೆ ಭರ್ತಿಯಾಗಿ ವಾಹನ ದುರಸ್ಥಿ ನಂತರ ಸೇವೆಯನ್ನು ಒದಗಿಸಲಾಗುವುದು.

ಈ) ಒಂದು ಪಶು ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದೆ

ಉ) ಬಂದಿದೆ. 21 ಸಂಸ್ಥೆಗಳಲ್ಲಿ ಪಶುವೈದ್ಯರ ಕೊರತೆ ಇದೆ. ರಾಜ್ಯದಲ್ಲಿ 250 ಪಶುವೈದ್ಯಾಧಿಕಾರಿಗಳನ್ನು ವಿಶೇಷ ನೇರ ನೇಮಕಾತಿ ಅಂತಿಮ ನಿಯಮದಡಿಯಲ್ಲಿ ನೇಮಕ ಮಾಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 192 ಗುತ್ತಿಗೆ ಪಶು ವೈದ್ಯಾಧಿಕಾರಿಗಳ ಸೇವೆಯನ್ನು ಸಕ್ರಮಗೊಳಿಸುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಬೀದರ್‌ನಲ್ಲಿ ಪಶುವೈದ್ಯಕೀಯ ವಿಶ್ವವಿದ್ಯಾಲಯ

401(1096) : ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ (ಬಿಜಾಪುರ) : ಪಟ್ಟಣ ಕಟ್ಟಿ (ಬಿಜಾಪುರ) ಮಾನ್ಯ ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರದಲ್ಲಿರುವ ಬೃಹತ್ ಮತ್ತು ಚಿಕ್ಕ ಕೈಗಾರಿಕೆಗಳು ಎಷ್ಟು;

ಆ) ಅವು ಯಾವುವು :

ಇ) ಈ ಕೈಗಾರಿಕೆಗಳು ಎಷ್ಟು ಜನರಿಗೆ ಬೃಹತ್ ಉದ್ಯೋಗ ದೊರಕಿಸಿದೆ; (ಪೂರ್ಣ ಉದ್ಯೋಗ ಅವಕಾಶ ನೀಡಿ ವಿವರ ನೀಡಿ)

ಈ) 2003-04ನೇ ಸಾಲಿನಲ್ಲಿ ಯಾವ ಯಾವ ಕೈಗಾರಿಕೆಗಳಿಗೆ ಅನುಮತಿ ನೀಡಲಾಗಿದೆ(ವಿವರ ನೀಡುವುದು)

ಉ) ಇವುಗಳಿಗೆ ನೀಡಲಾದ ಅನುದಾನದ ಪ್ರಮಾಣ ಎಷ್ಟು ;

ಊ) ಬಿಜಾಪುರ ನಗರದಲ್ಲಿ ಕೈಗಾರಿಕೆಗಳನ್ನು ಪ್ರಾರಂಭಿಸಲು ಬಾಕಿ ಇರುವ ಪ್ರಕರಣಗಳು ಎಷ್ಟು ;

ಋ) ಯಾವಾಗ ಅನುಮತಿ ನೀಡಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಸಚಿವರು)

ಅ) ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು : 5
(3 ಕಾರ್ಯ ನಿರ್ವಹಿಸುತ್ತಿವೆ 2
ಮುಚ್ಚಿರುತ್ತವೆ)
ಚಿಕ್ಕ ಕೈಗಾರಿಕೆಗಳ : 5599

ಆ) ಪ್ರತ್ಯೇಕ ಪಟ್ಟಿ ಲಗತ್ತಿಸಿದೆ.

ಇ) ಬೃಹತ್ ಕೈಗಾರಿಕೆಗಳಲ್ಲಿನ ಉದ್ಯೋಗವಕಾಶ : 1284
ಸಣ್ಣ ಕೈಗಾರಿಕೆಗಳಲ್ಲಿನ ಉದ್ಯೋಗವಕಾಶ : 24385
ಒಟ್ಟು: 25669

ಈ) ಈ ಅವಧಿಯಲ್ಲಿ 382 ಸಣ್ಣ ಕೈಗಾರಿಕಾ ಘಟಕಗಳಿಗೆ ಅನುಮತಿ ನೀಡಲಾಗಿದೆ.

ಉ) 2003–04 : 46 ಸಣ್ಣ ಕೈಗಾರಿಕಾ ಘಟಕಗಳು ರೂ. 45.42 ಲಕ್ಷ ಸಹಾಯಧನ ಮಂಜೂರು ಮಾಡಿದೆ,

2004–05 : 7 ಕೈಗಾರಿಕಾ ಘಟಕಗಳು ರೂ. 16.95 ಲಕ್ಷ ಸಹಾಯಧನ ಮಂಜೂರು ಮಾಡಿದೆ.

ಊ) ಯಾವುದೇ ಪ್ರಸ್ತಾವನೆ ಬಾಕಿ ಇಲ್ಲ.

ಋ) ಉದ್ಭವಿಸುವುದಿಲ್ಲ.

ಪ್ರಶ್ನೆ ಸಂಖ್ಯೆ 1096ರ ಅನುಬಂಧ

ಬಿಜಾಪುರ ಜಿಲ್ಲೆಯಲ್ಲಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ವಿವರ

ಕ್ರ. ಸಂ	ಜಿಲ್ಲೆಯ ಹೆಸರು	ಬಂಡವಾಳ	ಉದ್ಯೋಗ	ಷರಾ
1.	ಮಗಾರಿ ಸ್ಪಿನ್ನಿಂಗ್ ಮಿಲ್ ಪ್ರೈ.ಲಿ. ಬಿಜಾಪುರ	230.84	318	ಕೆಲಸ ನಿರ್ವಹಿಸುತ್ತಿದೆ
2.	ಮೆ: ನಂದಿ ಕೋ-ಅಪರೇಟಿವ್ ಶುಗರ್ ಫ್ಯಾಕ್ಟರಿ, ಗಲಗಲಿ.: ಬಿಜಾಪುರ.	2860.00	625	ಕೆಲಸ ನಿರ್ವಹಿಸುತ್ತಿದೆ
3.	ಮೆಃ ಸನ್ ಸೋಯಾ ಲಿಮಿಟೆಡ್ ಬಿಜಾಪುರ	248.26	66	ಮುಚ್ಚಿದೆ.
4.	ಮೆಃ ಶಿವಶಕ್ತಿ ಸಾಲ್ವೆಂಟ್ ಲಿ. ಶಿರೋಳ್, ಮುದ್ದೇಬಿಹಾಳ್	111.55	37	ಮುಚ್ಚಿದೆ.
5.	ಮೆಃ ಧ್ಯಾನಯೋಗಿ ಶ್ರೀ ಶಿವಕುಮಾರ ಸ್ವಾಮೀಜಿ ಶುಗರ್ಸ್ ಲಿಮಿಟೆಡ್ ಸಿದ್ದೇಶ್ವರ ನಗರ, ಹಿಂಡಿ	3200.00	238	ಕೆಲಸ ನಿರ್ವಹಿಸುತ್ತಿದೆ.
	ಒಟ್ಟು	**6651.25**	**1284**	

31–12–2004 ರವರೆಗಿನ ಬಿಜಾಪುರ ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳ ವರ್ಗಾವಾರು ವಿವರ

ಕ್ರ.ಸಂ.	ಹೆಸರು	ಘಟಕಗಳ ಸಂಖ್ಯೆ
1.	ಆಹಾರ ಮತ್ತು ಪಾನೀಯಗಳು	1691
2.	ಜವಳಿ ಮತ್ತು ಸಿದ್ಧ ಉಡುಪುಗಳು	782
3.	ಮರ ಮತ್ತು ಸಾಮಗ್ರಿಗಳು	516
4.	ಮುದ್ರಣ ಮತ್ತು ಸಾಮಗ್ರಿಗಳು	119
5.	ಚರ್ಮ ಮತ್ತು ಚರ್ಮೋತ್ಪನ್ನಗಳು	436
6.	ರಬ್ಬರ್ ಮತ್ತು ಪ್ಲಾಸ್ಟಿಕ್ಸ್	60
7.	ರಾಸಾಯನಿಕ ಮತ್ತು ರಾಸಾಯನಿಕ ವಸ್ತುಗಳು	65
8.	ಗ್ಲಾಸ್ ಅಂಡ್ ಸಿರಾಮಿಕ್ಸ್	73
9.	ಬೇಸಿಕ್ ಮೆಟಲ್	76
10.	ಜನರಲ್ ಇಂಜಿನಿಯರಿಂಗ್	448
11.	ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್	194
12.	ಆಟೋಮೊಬೈಲ್ಸ್	78
13.	ಸಾರಿಗೆ ಮತ್ತು ಉಪಕರಣಗಳು	58
14.	ಫೆರಸ್ ಮತ್ತು ನಾನ್ ಫೆರಸ್	–
15.	ಜಾಬ್ ವರ್ಕ್ ರಿಪೇರಿ ಮತ್ತು ಸರ್ವೀಸಿಂಗ್	522
16.	ಇತರೆ ಸೇವೆಗಳು	241
17.	ಇತರೆ	240
	ಒಟ್ಟು :	**5599**

402(1097) : ಶ್ರೀ ಅಪ್ಪ ಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರದಲ್ಲಿರುವ ಮೆಟ್ರಿಕ್ ನಂತರದ ಹಾಗೂ ಮೆಟ್ರಿಕ್ ಪೂರ್ವ ಪರಿಶಿಷ್ಟ ಜಾತಿ ಬಾಲಕರ ಮತ್ತು ಬಾಲಕಿಯರ ಸಂಖ್ಯಾ ಬಲ ಎಷ್ಟು ;

ಆ) ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಸಂಖ್ಯಾ ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಡಾ॥ ವೈ. ನಾಗಪ್ಪ(ಸಮಾಜ ಕಲ್ಯಾಣ ಸಚಿವರು)

ಅ) ಬಿಜಾಪುರ ಜಿಲ್ಲೆಯ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ನಡೆಸಲಾಗುತ್ತಿರುವ ವಿದ್ಯಾರ್ಥಿನಿಲಯಗಳ ಮತ್ತು ಅದರಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಕಂಡಂತಿದೆ.

ಕ್ರ.	ವಿದ್ಯಾರ್ಥಿನಿಲಯದ ವಿವರ	ವಿದ್ಯಾರ್ಥಿನಿಲಯಗಳ ಸಂಖ್ಯೆ			ವಿದ್ಯಾರ್ಥಿಗಳ ಸಂಖ್ಯೆ		
		ಬಾಲಕರು	ಬಾಲಕಿಯರು	ಒಟ್ಟು	ಬಾಲಕ	ಬಾಲಕಿಯರು	ಒಟ್ಟು
1	ಸರ್ಕಾರಿ ಮೆಟ್ರಿಕ್ ಪೂರ್ವ	44	10	54	2190	475	2665

2	ಅನುದಾನಿತ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು	25	–	25	586	–	886
3	ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು	3	2	5	250	100	350
4	ಮಾನ್ಯತೆ ಪಡೆದ ಸ್ವಯಂ ಸೇವಾ ಸಂಸ್ಥೆಗಳಿಂದ ನಡೆಸಲ್ಪಡುವ ಖಾಸಗಿ ಕಾಲೇಜು ವಿದ್ಯಾರ್ಥಿ ನಿಲಯಗಳು	11	–	11	393	–	393
	ಒಟ್ಟು	**83**	**12**	**95**	**3719**	**375**	**4294**

ಇ) ಬಿಜಾಪುರ ತಾಲ್ಲೂಕು ಕೇಂದ್ರದಲ್ಲಿರುವ ಸರ್ಕಾರಿ ಮೆಟ್ರಿಕ್ ನಂತರದ ಮತ್ತು ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯಾ ಬಲ ಹೆಚ್ಚಿಸಲು ಬೇಡಿಕೆ ಇದ್ದು ಅನುದಾನದ ಲಭ್ಯತೆಗೊಳಪಟ್ಟು ಪರಿಶೀಲಿಸಲಾಗುವುದು.

407(1125) : ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಕಬ್ಬು ಬೆಳೆಗಾರರಿಗೆ ವಿವಿಧ ಸಕ್ಕರೆ ಕಾರ್ಖಾನೆಗಳಿಂದ ಬರಬೇಕಾಗಿರುವ ಬಾಕಿ ಮೊತ್ತವೆಷ್ಟು (ಕಾರ್ಖಾನೆವಾರು ಬಾಕಿ ವಿವರ ನೀಡುವುದು);

ಆ) ರೈತರಿಗೆ ಬಾಕಿ ಹಣ ಪಾವತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

ಇ) ನಿಗದಿತ ಕಾಲ ಮಿತಿಯೊಳಗೆ ಈ ರೈತರಿಗೆ ಬಾಕಿ ಹಣ ಪಾವತಿ ಮಾಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೆ;

ಈ) ಸರ್ಕಾರ 2002–03ರ ಆಯವ್ಯಯ ದಲ್ಲಿ ಘೋಷಿಸಿದಂತೆ ಸಕ್ಕರೆ ಅಭಿವೃದ್ಧಿ ನಿಧಿ ಸ್ಥಾಪಿಸಿದೆಯೇ, ಸ್ಥಾಪಿಸಿದ್ದಲ್ಲಿ ಮೀಸಲಿಟ್ಟಿರುವ ಹಣವೆಷ್ಟು ?

ಉ) ಮೀಸಲಿಟ್ಟಿರುವ ಹಣದಿಂದ ಕೈಗೆತ್ತಿಕೊಂಡಿರುವ ಕಾರ್ಯಕ್ರಮಗಳೇನು;

ಊ) ಸ್ಥಾಪನೆಯಾಗದಿದ್ದಲ್ಲಿ ಅದಕ್ಕೆ ಕಾರಣಗಳೇನು ಈ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಅಮರೇಗೌಡ. ಎಲ್ ಪಾಟೀಲ್ ಬಯ್ಯಾಪುರ (ಸಕ್ಕರೆ ಸಚಿವರು)

ಅ) ರಾಜ್ಯದ ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಗಳಿಂದ ಒಟ್ಟು ರೂ. 307.87 ಕೋಟಿ ಬರಬೇಕಾಗಿದೆ. (ಕಾರ್ಖಾನೆವಾರು ಬಾಕಿ ವಿವರ ಲಗತ್ತಿಸಿದೆ)

ಆ) ಬಹುತೇಕ ಸಕ್ಕರೆ ಕಾರ್ಖಾನೆಗಳು ನಿಗದಿತ ಸಮಯದಲ್ಲಿ ಕಬ್ಬು ಬೆಲೆ ಬಾಕಿ ಮೊತ್ತವನ್ನು ಪಾವತಿಸುತ್ತಿವೆ. ಬಾಕಿ ಉಳಿಸಿಕೊಂಡಿರುವ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಕೂಡಲೇ ಪಾವತಿಸುವಂತೆ ಸೂಚನೆ ನೀಡಲಾಗಿದೆ. ಅನಿವಾರ್ಯತೆ ಇದ್ದ ಕೆಲವೊಂದು ಪ್ರಕರಣಗಳಲ್ಲಿ ಕಬ್ಬು (ನಿಯಂತ್ರಣ) ಆದೇಶ 1966ರನ್ವಯ ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಾತಿ ಮಾಡಲು ಆದೇಶ ಹೊರಡಿಸಲಾಗಿರುತ್ತದೆ. ಅದರಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಕ್ರಮ ವಹಿಸಿರುತ್ತಾರೆ.

ಇ) ನಿಗದಿತ ಕಾಲಮಿತಿಯೊಳಗೆ ರೈತರಿಗೆ ಬಾಕಿ ಹಣ ಪಾವತಿ ಮಾಡಲು ಕಾರ್ಖಾನೆಗಳಿಗೆ ಸೂಚನೆ ನೀಡಲಾಗಿದೆ.

ಈ) 2002-03ರ ಆಯವ್ಯಯದಲ್ಲಿ ಘೋಷಿಸಿರುವಂತೆ ಸಕ್ಕರೆ ಅಭಿವೃದ್ಧಿ ನಿಧಿ ಸ್ಥಾಪಿಸುವ ಉದ್ದೇಶದಿಂದ ರೂ. 16.00 ಕೋಟಿಗಳಷ್ಟು ಮೊತ್ತವನ್ನು ತೆಗೆದಿರಿಸಲಾಗಿತ್ತು. ಆದರೆ ಈ ಸಕ್ಕರೆ ಅಭಿವೃದ್ಧಿ ನಿಧಿ ಸ್ಥಾಪಿಸಲು ಕರಡು ನಿಯಮಾವಳಿಗಳನ್ನು ರೂಪಿಸಿ ಕಾನೂನು ಇಲಾಖೆಯ ಅಭಿಪ್ರಾಯ ಪಡೆಯಲಾಗಿ ಕಾನೂನು ಇಲಾಖೆಯು ಇದೇ ಹೆಸರಿನ ಸಕ್ಕರೆ ಅಭಿವೃದ್ಧಿ ನಿಧಿಯು ಈಗಾಗಲೇ ಕೇಂದ್ರ ಸರ್ಕಾರದಲ್ಲಿ ಇರುವುದರಿಂದ ಅದೇ ಹೆಸರಿನ ಮತ್ತೊಂದು ನಿಧಿಯನ್ನು ರಾಜ್ಯ ಸರ್ಕಾರವು ಸ್ಥಾಪಿಸಲು ಬರುವುದಿಲ್ಲವೆಂದು ತಿಳಿಸಿ ಬೇರೆ ಹೆಸರಿನಡಿಯಲ್ಲಿ ನಿಧಿಯನ್ನು ಸ್ಥಾಪಿಸುವಂತೆ ಸಲಹೆ ಮಾಡಿದೆ. ಈ ವಿಷಯ ಪರಿಶೀಲನೆಯಲ್ಲಿದೆ.

ಉ) ಇನ್ನು ನಿಧಿಯು ಸ್ಥಾಪನೆಯಾಗದೆ ಇರುವುದರಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಿಲ್ಲ.

ಊ) ಕಂಡಿಕೆ (ಈ)ರಲ್ಲಿ ಹೇಳಿರುವಂತೆ ಕಾನೂನು ಇಲಾಖೆಯು ಪ್ರಸ್ತಾವನೆಯನ್ನು ತಿರಸ್ಕರಿಸಿರುವುದರಿಂದ ಈ ನಿಧಿಯನ್ನು ಸ್ಥಾಪಿಸಲಾಗಿರುವುದಿಲ್ಲ. ಬೇರೆ ಹೆಸರಿನಲ್ಲಿ ಈ ನಿಧಿಯನ್ನು ಸ್ಥಾಪಿಸುವ ವಿಷಯ ಪರಿಶೀಲನೆಯಲ್ಲಿದೆ.

ಅನುಬಂಧ

ಕಾರ್ಖಾನೆವಾರು ಬಾಕಿ ವಿವರ : ದಿನಾಂಕ: 31-12-2004 ರಲ್ಲಿದ್ದಂತೆ

STATE ; KARNATAKA

SEASON : 2004-05

(Rs. in Lakhs)

Sl	Name of the Facory	SMP Fixed	Sugar cane Curshed	Amount payable	Amount paid	Balance	Previous Arrears	Total
1	Public sector							
01	M.P. MSugars		193928	1900	604	1296		1296
02	Mysore Sugar		54238	679	534	145	33	178
	Sub-Total-I		248166	2579	1138	1441	33	1474
II	Joint Sector							
03	Gangavathi		-	-	-	-		
	Sub-Total-II		-	-	-	-	-	-
III	Coop. Sector		-	-	-	-	-	-
04	Bhadra		-	-	-	-	308	308
05	Bhagyalakshmi		69245	849	455	394	231	625
06	Bidar		108782	1126	180	946	802	1748
07	Dakshina Kannada		-	-	-	-	312	312
08	Doodhganga		335680	5186	3424	1762	947	2709
09	Ghtaprabha		201600	2237	1821	416	635	1051
10	Hala siddanatha		119100	1272	1054	218	478	696

11	Hemavathy	78325	705	705	-	-	-
12	Hiranyakeshi	391649	2409	2409	-	-	-
13	Karnataka	12020	199	36	163	54	217
14	Krishna	107870	868	553	315	380	695
15	Malaprabha	82750	827	377	450	255	705
16	Mahatma Gandhi	-	-	-	-	68	68
17	Nandi	239814	2118	1725	393	166	559
18	Naranja	43531	-	-	-	886	886
19	Pandavpura	-	-	-	-	-	-
20	Raibag					1642	1642
21	Raithara	96160	995	-	995	62	1057
22	SSK Aland	-	-	-		219	219
23	Srirama	13883	121	86	35	-	35
24	Vanivilas	-	-	-	-	-	-
	Sub-Total-III	1900409	18912	12825	6087	7445	13532
IV	PRIVATE SECTOR						
25	**Athani Farmers**	197780	620	280	340	603	943
26	**Bannari Amman**	254460	2418	2252	166	-	166
27	**Chamu ndeswari**	53970	836	719	117	-	117
28	**Davana gere**	157056	173	786	115	-	901
29	**Dyanayagih**	959	959	173	786	115	901
30	**Devi Sugars**	110864	1345	1100	245	355	600
31	**Gem**		-	-	-	-	-
32	**Godavari**	827530	1108	258	850	501	1351
33	**I.S.R**	1390	-	-		244	244
34	**I.C.L.**	96035	748	668	80	966	1046
35	**Jamkhandi**	155117	971	36	935	570	1505
36	**Mahadeswar**	-	-	-	-	-	-

37 Nirani	2580	-	-	-	-	-
38 Prabhullgeshwara	131190	1312	692	620	1074	1694
39 Renuka	295800	963	-	963	-	963
40 S.C.M	96330	915	589	326	-	326
41 Shamnur	135070	912	380	532	-	532
42 Sirguppa(G)	-	-	-	-	423	423
43 Siraguppa(D)	-	-	-	-	-	-
44 Sundari	-	-	-	-	-	-
45 Ugar	746043	9066	7709	1357	13	1370
46 Venateshwar	205485	2054	959	1095	1769	2864
Sub-Total-IV	**3206298**	**30126**	**19209**	**10917**	**4864**	**15781**
Grand Total :	5354873	51617	33172	18445	12342	30787

403(1098) : ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ(ಬಿಜಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರದಲ್ಲಿ ಪರಿಶಿಷ್ಟ ಜಾತಿ(ಎಸ್.ಸಿ) ವಿದ್ಯಾರ್ಥಿಗಳಿರುವ ಸರ್ಕಾರಿ ಮೆಟ್ರಿಕ್ ಪೂರ್ವ ವಸತಿ ನಿಲಯಗಳ ಸಂಖ್ಯೆ ಎಷ್ಟು ;

ಆ) ಹೊಸದಾಗಿ ವಸತಿ ನಿಲಯುಗಳನ್ನು ಪ್ರಾರಂಭಿಸುವ ಅಗತ್ಯತೆ ಸರ್ಕಾರದ ಗಮನದಲ್ಲಿದೆಯೇ;

ಇ) ಹಾಗಿದ್ದಲ್ಲಿ. ಮೆಟ್ರಿಕ್ ಪೂರ್ವ ವಸತಿ ನಿಲಯವನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಡಾ: ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಬಿಜಾಪುರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ 54 ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿವೆ.

ಆ) ಹೌದು.

ಇ) ಅನುದಾನದ ಲಭ್ಯತೆಗೊಳಪಟ್ಟ ಹೊಸ ಮೆಟ್ರಿಕ್ ಪೂರ್ವ ವಸತಿ ನಿಲಯಗಳನ್ನು ತೆರೆಯುವ ಬಗ್ಗೆ ಪರಿಶೀಲಿಸಲಾಗುವುದು.

404(1099) : ಶ್ರೀ ಅಪ್ಪ ಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ (ಬಿಜಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಧಾನ ಸಭಾ ಮತಕ್ಷೇತ್ರಕ್ಕೊಂದು ಕಸ್ತೂರಿ ಬಾಲಕಿಯರ ವಸತಿ ಪ್ರೌಢಶಾಲೆ ಮಂಜೂರಾತಿ ನೀಡುವ ಬಗ್ಗೆ ಸರ್ಕಾರ ಗಮನಹರಿಸಿದೆಯೇ ;

ಆ) ಹಾಗಿದ್ದಲ್ಲಿ, ಈ ವಸತಿ ಪ್ರೌಢ ಶಾಲೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಗ್ರಾಮೀಣ ಮಹಿಳೆಯರ ಸಾಕ್ಷರತೆ ಪ್ರಮಾಣ ರಾಷ್ಟ್ರೀಯ ಸರಾಸರಿ 46.13% ಕ್ಕಿಂತ ಕಡಿಮೆ ಇರುವ ಮತ್ತು ಮಹಿಳೆ ಹಾಗೂ ಪುರುಷ ಸಾಕ್ಷರತೆಯಲ್ಲಿನ ಅಂತರವು ರಾಷ್ಟ್ರೀಯ ಸರಾಸರಿ

21.59% ಕ್ಕಿಂತ ಹೆಚ್ಚಾಗಿರುವ ರಾಜ್ಯದ 58 ತಾಲ್ಲೂಕುಗಳನ್ನು ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳೆಂದು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ನೀಡಿದ್ದ ಮಾರ್ಗಸೂಚಿಯಂತೆ ಗುರುತಿಸಲಾಗಿದ್ದು, ಈ ಎಲ್ಲಾ 58 ತಾಲ್ಲೂಕುಗಳಲ್ಲಿ ತಲಾ ಒಂದರಂತೆ ಕಸ್ತೂರಿ ಬಾ ಬಾಲಿಕಾ ವಸತಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲಾಗುತ್ತಿದೆ. ವಿವರವನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. ಎಲ್ಲಾ ವಿಧಾನ ಸಭಾ ಮತಕ್ಷೇತ್ರಗಳಿಗೆ ತಲಾ ಒಂದು ಕಸ್ತೂರಿ ಬಾ ಗಾಂಧಿ ಬಾಲಿಕಾ ವಿದ್ಯಾಲಯಗಳಿಗೆ ಮಂಜೂರಾತಿ ನೀಡಲು ಮಾರ್ಗಸೂಚಿಯಂತೆ ಸಾಧ್ಯವಿರುವುದಿಲ್ಲ.

ಆ). ಈ 58 ವಸತಿ ಶಾಲೆಗಳು ಹಿರಿಯ ಪ್ರಾಥಮಿಕ ಶಾಲೆಗಳಾಗಿದ್ದು, ಇವುಗಳನ್ನು 2004-05ನೇ ಸಾಲಿನಿಂದಲೇ ಕೇಂದ್ರ ಸರ್ಕಾರದ ಶಿಕ್ಷಣ ಇಲಾಖೆ ವತಿಯಿಂದ ಅನುದಾನ ಬಿಡುಗಡೆಯಾದ ನಂತರ ಪ್ರಾರಂಭಿಸಲಾಗುವುದು.

ಅನುಬಂಧ

SARVASHIKSHA ABHIYAN-KARNATAKA

ವಿಧಾನ ಸಭೆಯ ಸದಸ್ಯರಾದ ಸನ್ಮಾನ್ಯ ಶ್ರೀ. ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ, ಬಿಜಾಪುರ ಇವರ ಚುಕ್ಕೆ ಗುರುತಿನ ಸಂಖ್ಯೆ 1099

;ಯಃ ಬಿಜಾಪುರ ಮತಕ್ಷೇತ್ರದೊಂದು ಕಸ್ತೂರಿಬಾ ಬಾಲಕಿಯರ ವಸತಿ ಪ್ರೌಢ ಶಾಲೆ ಮಂಜೂರು

Details of KGBV Blocks in Karnataka

Sl No.	District Name	Name of the approved KGBV Blocks	No of KGBVs approved	Rural Female Literacy Rate	Gender Gap
1	Bangalore Rural	Channapatna	1	46.00	22.05
2	Bidar	Basavakalyam	1	44.28	27.31
		Humanbad	1	42.74	25.27
		Bidar	1	41.60	23.95
3	Bijapur	Muddebihal	1	36.56	35.62
		Sindhagi	1	35.74	30.14
		Basavana Bagewadi	1	39.43	28.60
		Bijapur	1	38.22	25.80
4	Koppal	Kushtagi	1	32.02	34.35
		Koppal	1	39.56	29.64
		Yelburga	1	40.59	28.75
		Gangavathi	1	35.84	27.82

5	Bagalkot	Hungund	1	38.03	35.98
		Bagalkot	1	37.79	32.98
		Badami	1	34.41	32.62
		Biligi	1	35.66	28.18
		Mudhol	1	38.29	25.04
		Jamakhandi	1	37.50	22.44
6	Bellary	Bellary	1	31.48	28.25
		Siraguppa	1	26.91	28.08
		Sandur	1	35.32	26.67
		Kudlgi	1	44.84	26.30
		H B Halli	1	45.74	25.50
		Hospet	1	34.69	24.96
7	Davanagere	Harpanahalli	1	42.02	22.21
8	Dharwad	Kalgattgi	1	44.40	23.03
	Dharwad	Dharwad	1	45.00	23.71
9	Gulbarga	Jewargi	1	27.86	28.82
		Chincholi	1	33.69	28.36
		Aland	1	38.33	27.93
		Gulbarga	1	47.00	27.04
		Afzalpur	1	36.35	27.02
		Shorapur	1	26.98	26.79
		Chittapur	1	29.03	23.63
		Sedam	1	27.09	23.75
		Shahapur	1	23.01	22.98
10	Raichur	Lingasagur	1	30.25	31.56
		Sindhanur	1	34.99	28.65
		Raichur	1	24.79	26.98
		Deodurga	1	25.22	25.43
		Manvi	1	28.01	24.08
11	Belgaum	Ramdurga	1	36.08	30.23
		Saundatti	1	39.91	29.3
		Gokak	1	37.05	27.71
		Raibag	1	42.00	22.48

12	Chitradurga	Molkaimur	1	37.13	25.85
		Challakere	1	43.02	22.28
13	Gadag	Ron	1	45.04	33.24
		Mundargi	1	44.47	29.98
14	Hassan	Holenarasipura	1	43.84	25.08
15	Kolar	Gudibande	1	38.54	25.36
		Mulbagilu	1	44.39	25.23
		Srinivasapur	1	46.12	25.16
		Bhagepalli	1	45.06	23.2
		Bangarpet	1	35.01	24.36
		Chintamani	1	43.04	23.54
16	Tumkur	Pavagada	1	41.49	25.68
17	Mysore	Krishnarajanagar	1	45.01	22.93
			58		

405(1100) : ಶ್ರೀ ಅಪ್ಪಸಾಹೇಬ್ (ಅಪ್ಪ) ಮಲ್ಲಪ್ಪ ಪಟ್ಟಣ ಶೆಟ್ಟಿ(ಬಿಜಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪರಿಶಿಷ್ಟ ವರ್ಗದ (ಎಸ್.ಟಿ) ವಿದ್ಯಾರ್ಥಿಗಳ ಸಲುವಾಗಿ ಆಶ್ರಮ ಶಾಲೆ ಪ್ರಾರಂಭಿಸುವ ಅಗತ್ಯತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಆಶ್ರಮ ಶಾಲೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಡಾ: ವೈ. ನಾಗಪ್ಪ(ಸಮಾಜ ಕಲ್ಯಾಣ ಸಚಿವರು)

ಅ) ಹೌದು.

ಆ) ಮುಂಬರುವ ವರ್ಷಗಳಲ್ಲಿ ಅನುದಾನದ ಲಭ್ಯತೆ ಹಾಗೂ ಅಗತ್ಯತೆಯನ್ನು ಪರಿಗಣಿಸಿ ಮಂಜೂರಾತಿ ನೀಡಲು ಕ್ರಮ ವಹಿಸಲಾಗುವುದು.

406(1124) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಆಹಾರ ಸಂಸ್ಕರಣಾ ಘಟಕಗಳೆಷ್ಟು ಘಟಕಗಳ ಹೆಸರು, ಊರು, ಹೂಡಿದ ಬಂಡವಾಳ ಸಂಸ್ಕರಣೆ ಮಾಡುತ್ತಿರುವ ಉತ್ಪನ್ನ, ವಾರ್ಷಿಕ ವಹಿವಾಟು, ರಫ್ತು ಇತ್ಯಾದಿ ಬಗ್ಗೆ ವಿವರ ನೀಡುವುದು ;

ಆ) ಇತ್ತೀಚಿನ ದಿನಗಳಲ್ಲಿ ಈ ಉದ್ಯಮ ಜಾಗತೀಕರಣ ಮಟ್ಟದಲ್ಲಿ ಅಗಾಧವಾಗಿ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಬಂದಿದ್ದಲ್ಲಿ, ಈ ಘಟಕಗಳನ್ನು ಆಕರ್ಷಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು;

ಈ) ಹಿಂದಿನ ರಾಜ್ಯ ಸರ್ಕಾರ 2003–2004ರ ಆಯವ್ಯಯದಲ್ಲಿ ಘೋಷಿಸಿದಂತೆ "ಆಹಾರ ಕರ್ನಾಟಕ ಲಿಮಿಟೆಡ್" ಎಂಬ ಕಂಪನಿಯನ್ನು ಸ್ಥಾಪಿಸಿದೆಯೇ ;

ಉ) ಸ್ಥಾಪಿಸಿದ್ದಲ್ಲಿ, ಈ ಕಂಪನಿಯ ಚಟುವಟಿಕೆಗಳೇನು (ವಿವರ ನೀಡುವುದು:
ಊ) ಸ್ಥಾಪನೆಯಾಗದಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಕರ್ಯ ಸಚಿವರು)

ಅ) ಈ ಅವಧಿಯಲ್ಲಿ ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿಯಿಂದ ರೂ. 439.78 ಕೋಟಿ ಡವಾಳ ಹೂಡಿಕೆಯ 34 ಭಾರಿ ಮತ್ತು ಮಧ್ಯಮ ಆಹಾರ ಸಂಸ್ಕರಣ ಯೋಜನೆಗಳನ್ನು ುಮೋದಿಸಲಾಗಿದೆ. ಇವುಗಳ ಪೈಕಿ ರೂ. 201.27 ಕೋಟಿ ಬಂಡವಾಳ ಹೂಡಿಕೆಯ 16 ೋಜನೆಗಳು ಈಗಾಗಲೇ ಕಾರ್ಯಗತಗೊಂಡು ಉತ್ಪಾದನೆಯಲ್ಲಿ ತೊಡಗಿವೆ. ಇವುಗಳ ರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. ಇದೇ ಅವಧಿಯಲ್ಲಿ 5166 ಸಣ್ಣ ಮತ್ತು ಅತಿ ಆಹಾರ ಸಂಸ್ಕರಣ ಕೈಗಾರಿಕೆಗಳನ್ನು ಸಹ ವಿವಿಧ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆ.

ಆ) ಗಮನಕ್ಕೆ ಬಂದಿದೆ.

ಇ) ಆಹಾರ ಸಂಸ್ಕರಣಾ ಕೈಗಾರಿಕೆಗಳು ಸ್ಥಾಪನೆಗೆ ನೆರವಾಗುವಂತೆ ಸರ್ಕಾರವು ಹೊಸ ಷಿ ಮತ್ತು ಆಹಾರ ಸಂಸ್ಕರಣಾ ಕೈಗಾರಿಕಾ ನೀತಿ 2003" ರನ್ನು ಸರ್ಕಾರಿ ಆದೇಶ ಕ್ರಮ ಸಂ.ಸಿಐ ಸ್.ಪಿ.ಐ. 2002 ದಿನಾಂಕ 28.6.2003ರಂದು ಘೋಷಿಸಲಾಗಿದೆ. ಈ ನೀತಿಯಡಿಯಲ್ಲಿ ಸೌಕರ್ಯ , ಉದ್ಯಮಕ್ಕೆ ಅಗತ್ಯ ಕಚ್ಚಾ ಸಾಮಾಗ್ರಿ/ಕೃಷಿ ಉತ್ಪನ್ನಗಳ ಪೂರೈಕೆ, ಶೀತಲ ಗೃಹ ನಿರ್ಮಾಣಕ್ಕೆ ೇಜನ, ಕೃಷಿ ಉತ್ಪನ್ನಗಳ ಮಾರುಕಟ್ಟೆ ಕಾಯಿದೆಯಲ್ಲಿ ಸರಳೀಕರಣ ಮುಂತಾದವುಗಳು ಪ್ರಮುಖ ವಾಗಿದೆ.

ಈ) ಮೆ. ಆಹಾರ ಕರ್ನಾಟಕ ಲಿಮಿಟೆಡ್ ಕಂಪನಿಯನ್ನು ಈಗಾಗಲೇ ಸ್ಥಾಪಿಸಲಾಗಿದೆ.

ಉ) ಮೆ. ಆಹಾರ ಕರ್ನಾಟಕ ಲಿಮಿಟೆಡ್ ಕಂಪನಿಯವರು ರಾಜ್ಯದ 6 ಸ್ಥಳಗಳಲ್ಲಿ ಅಂದರೆ ೂರು, ಬಾಗಲಕೋಟೆ, ಜೇವರ್ಗಿ, ಬೆಳಗಾಂ, ಹಿರಿಯೂರು ಮತ್ತು ಮದ್ದೂರಿನಲ್ಲಿ ಸ್ಥಾಪಿಸಲು ೇಶಿಸಿದ "ಆಹಾರ ಸಂಸ್ಕರಣಾ ಪಾರ್ಕ್"ಗೆ ಸಂಬಂಧಿಸಿದ ಪೂರ್ವಭಾವಿ ಕಾರ್ಯಗಳನ್ನು ಹಿಸಿದೆ. ಪ್ರತಿಯೊಂದು ಯೋಜನೆಗೆ ಸಂಬಂಧಿಸಿದಂತೆ ಮುಕ್ತ ಜಾಹಿರಾತು ಮುಖಾಂತರ ಖಾಸಗಿ ಬಂಡವಾಳ ಹೂಡಿಕೆದಾರರನ್ನು ಗುರುತಿಸಿ ಆಯ್ಕೆ ಮಾಡಲಾಗಿದೆ ಮತ್ತು ೇಜನೆಯನ್ನು ಕಾರ್ಯಗತಗೊಳಿಸಲು ಜಂಟಿ ವಲಯ ಒಪ್ಪಂದಗಳನ್ನು ಸಹ ಸಹಿ ತಲಾಗಿದೆ. ಯೋಜನೆಗಳ ನಿರ್ಮಾಣ ಕಾರ್ಯ ಮುಂಬರುವ 2-3 ತಿಂಗಳಲ್ಲಿ ಪ್ರಾರಂಭಿಸುವ ಕ್ಷೆಯಿದೆ.

ಊ) ಉದ್ಭವಿಸುವುದಿಲ್ಲ.

LISTS OF PROJECTS APPROVED BY SLSWA/SLSWCC OF FOOD PROCESSING INDUSTRY FROM THE PERIOD OF 2001 TO 2004

Sl	Name & Address of the Unit	Products	Investment	Employment	Status
1	M/s. Innovation Foods Pvt. Ltd., No. 76. Facile Towers, Victoria Road. Bangalore-560047 Contact Person : Mr. Prabu Ramachandran-Director Phone : 25093041 (Location : Sy. No. 63/9, Doddathogur Village, Electronic City, Bangalore)	Manufacture of Chocolate Products	660.00	80	Implemented
2	M/s. Rajashri Packages Pvi. Ltd. 17/26, Mahadevaram Road. Adoni Adoni-518301 Contact Person : Mr. Jayanthilal Sha Phone : 08512-53796 (Location : Baikampady Industrial Area. Mangalore)	Refined Edible Oil/ Vanaspathi	3559.60	921	Implemented CFO issued as on 12.4.2004

3	M/s. ITC Limited. 37, Chowringhee, Kolkatta-700071 Contact Person : Mr. R.S. Naware Phone : 22889371 (Location : Plot No. 3, 1st Phase. Peenya) Industrial Area Bangalore	R & D Centre for Food Industry Staples, Biscuits 15.4.2004	579.00	12	Implemented CFO Issued on 15.4.2004
4	M/S Bhartiyam Food and Bevarages, Botting of Mineral wahamagar, Bungalow, Road, New Delhi-110007 Contact Person : Mr. Anil Bhardwaj the Phone : 23935657 project in Rudrakshipura Village, Maddur Taluk, Mandya District) finalized with KIADB	Water/Pure Drinking Water		450.00	45 Under 8 UB. Implemen tation Land for (Location : Bidadi to be
5	M/S. Sree Venugopal Flour Mills Implemented 43. Sultanpet, Bangalore-560053	Wheat Products Maida, Sojee, Atta Bran	550.00	36	 CFO Issued (as on

	Contact Person : Mr. S.P. Madan Kumar Phone : 22874830 (Location : Plot No. 78, Kadugodi Industrial Area, Bangalore Urban District)					
6	M/S. Ecovinal International Pvt. Ltd., 605c, 6th Cross Road 17th "D" Main Road 6th Block, Koramangala, Bangalore-560034 Contact Person : B.K. Agarwal Phone : 25502294 (Location : Plot No. 82-85 KIADB Industrial Area, Kunigal, Tumkur District)	Natural Vinegar (6 Million litres per annum)	550-00	--	20	Implemented CFO issued (as on 31.3.2004)
	M/S Shree Laxmi Narayana Food Park Pvt. Ltd., No. 11-181 Bhagyodaya, Bramhapur, Upper Lane, Gulbarga-585103	Food Park	433.00		28	Under Implemen tation 9.5 acres of land

	Contact Person : Mr. Glururaj R Chittapurkar (Location : Jaffrabad, Gulbarga Taluk and District)				conversion completed Obtained financial assistance from canara Bank, Gulbarga.
8	M/S. Balan Natural Foods Pvt. Ltd., Sy. No. 81 an 82, Singapura Village, Yelahanka Hobli. Vidyaranyapura Post, Bangalore-560097 Contact Person : Mrs. Usha Nanda Kumar Phone : 28388498 (Location : Sy. No. 81 and 82, Singapura village, Bangalore North Taluk)	Milk Products Pouched Milk Cream Ghee-Paner	2750.00	150	Under Implment ation applied to BDA Yet to Furnish some clarification to them by the unit
9	M/S. Sri Anjaneya Agro-Tech Pvt. Ltd., Jayalakshmi Poona-Bangalore Road. Construction Davanagere-577002 Contact Person : Mrs. A.S. Veeranna	Edible Oil Refinery (50 TPD)	470.00	25	of building completed.

	Phone : 08192-31651 (Location : Mahajenahalli Village, Harihar Taluk. Davanagere District)				
10	M/s. Sri Anjaneya Cotton Mills Pvt. Ltd., Jayalakshmi Poona-Bangalore Road, Davanagere-577002 Contact Person: Mr. A.S. Veeranna Phone-08192-31651 (Location : Mahajenahalli Village, Harihar Taluk, Davanagere District)	Solvent Extraction of Edible Oils (200 TPD)	400.00	49	Implemented CFO Issued as on 15.4.2004
11	M/s. Sri Lakshmi Srinivasa Agro Foods, 67, 2nd Main, Block, 3rd Stage. Basaveshwaranagar, Bangalore-560079 Contact Person : Mr. M.K. Shiva Kumar Phone : 23230928 (Location : 31/1, 43/3, Vishveshwara purs Village, Nelamangala)	Rice Mill (26,000 TPA)	345.00	25	Implemented CFO issued as on 13.4.2004 plan approved and licence issued by Director, Factories and Boilers

12	M/S. Food Processing India Pvt. Ltd., NBM. Enclave, Lakshmipuram Extn, Sakleshpur -573 134 Hassan District. Contact Person : Mr. N.M. Shiva Prasad (Location : KSSIDC Industrial Estate, Sakleshpur, Hassan District)	Processing of Spices, Spice Powder and Spice Paste	515.30	109	Under Implementation
13	M/s. Alternative Food Process Implemented Pvt.Ltd., 49, 15th Cross, Nagar, Bangalore-560032 Contact Person : Mr. Mancoin Emmanuel, Phone : 2792815 (Location : Malur Industrial Area, Kolar District)	Processed Gherkins	300.00	63	
14	M/s. Heritage Foods (India) Ltd., Under 6-3541/C, Panjagutta, Hyderabad-500082 Contact Person : Mr. V. Nagaraju Mandya Taluk and District)	Processing and Packaging of Pasteurized Milk	332.00	70	Implementation

15	M/s. Mysore Fruit Product Ltd., P.B. No. 8615, Mahalakshmipuram Layout Post, Bangalore-560086 Contact Person : Mr, D.K. Adhikeshavalu Phone : 23347037 (Location : Yarendhalli and Veerasandra, Anekal Taluk, Bangalore Urban District)	Food Technology and Service Park-Agri Infrastructure	2114.00	12	Implemented CFO Issued (as on 8.6.04)
16	M/S. Brindavan Bevarages (P) Ltd. 214/33, 7th Cross, Cunningham Road, Vasanthanagar, Bangalore-560052 Contact Person : Mr. S.N. Ladhani Phone : 22255671 (Location : Koppal Taluk and District)	Soft Drinks and Mineral Water	4220.00	96	Implemented CFO Issued as on 8.4.04

17	M/s. Mehavin Foods No. 83, 9th Main, RMV Extension, Sadashivanagar, Bangalore-560080 Contact Person : Mr. D.M. Jayadev Phone : 23375087 (Location : Doddaspet Industrial Area, Nelamangala, Bangalore Rural District)	Whole Wheat Atta Wheat Products like Maida, Rava	340.00	25	Under Implement ation
18	M/s. Raj Poultry Processing Ltd., 1202, Building No.7 Seawoods Estate, NRI Complex. SEC, 56-58, Navi, Mumbai, Maharashtra, Contact Person : Mr. Raj Suri, Phone : 27563652 (Location : Malur Food Park, Malur Industrial Area, Kolar District)	Chicken Processing and Ready to Cook Chicken Meat	868.50	102	Under Implement ation
19	M/s. Anjaneya Agro Tech Pvt. Ltd., Jayalakshmi Poona-Bangalore issued Road, Davanagere-577002	Solvent Extraction	1189.00	130 15.4.04	Implemented CFO as on

	Contact Person -Mr. A.S. Veeranna Phone : 08192-31651 (Location : Mahajenahalli Village, Harihar, Taluk Davanagere District)				
20	M/s. Srinidhi Refineries (P) Ltd,, No.3 Santhusapet, Bangalore-560053 Contact Person : Mr. M.R. Baldev Phone : 22260481 (Location : KIADB Indl., Area, Antharasanahalli, Tumkur District)	Refined Edible Oils	425.50	51	Under Implementa tion
21	M/S. Nimish Food Products Pvt. Ltd., 21, 18th Main, R.K. Layout Padmanabhanagar, Bangalore-560070 Contact Person : Mr. S.G. Muralidhar Phone : 26798957	Ready to Eat Sneck Food Products	415.00	39	Under Implementa tion land allotted by KIADB on 24.9.2003, promoters are awaiting

	(Location : KIADB Industrial Area, Malur Taluk, Kolar District)				for investors as a joint venture, yet to implement.
22	M/S. Reitzel India Pvt. Ltd., 605/C. "G" Cross. 6th Block, 17th "D" Main, Koramangala, Bangalore - 560095 Contact Person : Mr. Bernard 1Povpon Phone : 5502650 (Location : KIADB Industrial Area, Kunigal Taluk, Tumkur District)	Processed Gherkins	350.00	360	Under Implementation construction work in advanced stage of completion, Expected Commissioning by Jan,2005
23	M/S. Global Green Co. Ltd., No. 14, S.T. Bed. 80 Feet Road. 4th Block, Koramangala Bangalore-560034 Contact Person : Mr. A.K. Kelappan	Gherkings, Peppers and Onions	1300.00	315	Implemented CFO issued.

	Phone : 5536035 (Location : Doddadunnasundra Village Hoskote Taluk. Bangalore Rural District)				
24	M/s. Sri Seeta Rama Bhaktanjaneya Food Processing Pvt.Ltd., No. 845, 10th Main, 5th Cross, Indiranagar 2nd Stage, Bangalore-560038 under Contact Person : Mr. Murali Krishna Ph.No Ph. No.080-5217777 2005.	Fuits and Vegetable	1175.00	28	Under Implementa tion civil works Progress, CFE issued, Expected Commission, by Jan.
25	M/S. CALYPSO FOODS PVT LTD., No. 210-211, issued. Richmond Rowers, 12, Pvt. Ltd., Richmond Road, Bangalore-560025 Contact Person : Sri. Dedashish Mitra Ph. NO. 080-2249572/73 (Location: Koravangla Kaval Grama,	Processing of Fresh Fruits Vegitables De-hydrated Vegetables	565.00	250	Implemented CFO Started Commercial Production from 13.1.2004

	Dudda Hobli, Hassan Taluk and District)				
26	M/s. Tinna Agro Industries Ltd., 6, Mandi Road, Sultanpur, Mehrauli, New Delhi-110030 Contact Person Sri. Gourav Sekhri Ph. No. 011-5569212, 113	Edible Oil Refinery	3000.00	80	Implemented Building Nearing Completion, likely to commence Production shortly
27	M/S. Indo-Spanish Tasty Foods Pvt Ltd., No. 29, 16th Main, 5th "B" Cross, I.A.S. Colony B.T.M. Layout, 2nd Stage, Bangalore-560076 Contact Person : Sri Nick Pandey Ph. No. 080-51250071	Processing of Preserved Vegetables in Bottles	350.00	360	Under Implementation Land Possession taken from KIADB, civil works under progress, likely to commence production by 15.2.2005 applied for CFE.

28	M/s. RAJASHRI PACKAGERS LTD. Sy. No. 5,6 & 7 Baikamapady Industrial Area, Mangalore-575011 Contact Person : Sri. Ramanlal M. Sha Ph. No. 0824-2400410/924 (Location : (Unit-II), Mudgeri KIADB Industrial Area, Karwar)	Refined Oil and Vanaspathi	3560.00	92	Under implementation Acquisition of land (noti 28(4) being issued) for formation of Industrial area by KIADB Industry required for pipeline status
29	M/s. RASHRI PACKAGERS LTD., Sy. No. 5,6 & 7 Baikamapady Industrial Area, Mangalore-575011 Contact Person : Sri. Ramanlal M. Sha	Refined Oil and Vanaspathi	3560.00	92	Under Implementation Acquisition of land (noti 28(4) being issued)

	Ph. No. 0824-2400410/924 (Location : Unit-III, Raipur, Industrial/ Tarihal Industrial Area, Growth Centre, Dharwad)				for formation of Industrial area by KIADB. Industry required for pipeline status.
30	M/s. RAJSHRI PACKAGERS LTD., Sy. No. 5, 6 & 7 Balkamapady Industrial Area, Mangalore-575011 Contact Person : Sri. Ramanlal M. Sha Ph. No. 0824-2400410 /924 (Location : Unit IV, Bommasandra Industrial Are, Bangalore)	Refined Oil and Vanaspathi	3560.00	92	Under Implementa tion of land (noti 28(4) being issued) for formation of industrial area by KIADB. Industry requ red for pipe line status.
31	M/s. Heritage Foods(India)	Milk and Milk	332.00	80	Under

31	M/s. Heritage Foods(India) Ltd., No. 6-3-541/c. Panjagutta, Hyderabad-500082 Andhra Pradesh Contact Person : Dr V. Nagaraja Naidu Ph. No. 040-2339122, 23391222 Gauribidanur Taluk, Kolar District)	Milk and Milk Products	332.00	80	Under Implementa tion 0 land application filed with Deputy Commiss ioner, Kolar, for grant of exemption U/s. 109, permission awaited.
32	M/s. Ruchi Soya Industries Ltd., Unit-2 Nariman Point, Mumbai - 400 021 Maharshtra Contact Person : Mr. M. Suresh Kamath Phone : 022-22824851/52/53 (Location : Belur Industrial Area. Dharwad)	Edible Oil Refining, Margarine, Interestified Fat and Vanaspathi, Oil Seeds Crushing and Solvent Extraction	410.00	206	Under Implementa tion Rep. of the company Mr. T.S. Satish has informed that they are awaiting Government approval for pipleine status.

33 M/s Kay Kay Agro Process (P) No 111, 7th Mile, Mysore Road, Nayandahalli, Bangalore-560039 Contact Person : Mr. S.N. Singhal Phone : 28300197 (Location : Kacharakanahalli Village, Hoskote Taluk. Bangalore Rural District)	Wheat Products	325.00	53	Under Implementation land converted for industrial use, civil works to commence from Jan. 2005 end
34 M/s. Sri Hanuman (Buhler) Rice Implemented industries, near Old Gubbi Check Post, Tumkur, Tumkur, Taluk/District -572101 Contact Person ; Mr. K.C. Byrappa	Rice Mill Plant	326.00	18	CFO issued

408(1126) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾವತಿಯ ಎಂ.ಪಿ.ಎಂ.ನ ಅರಣ್ಯ ವಿಭಾಗದಲ್ಲಿ ಕಳೆದ ಸುಮಾರು ಇಪ್ಪತ್ತು ವರ್ಷಗಳಿಂದ ಕೆಲಸ ಮಾಡುತ್ತಿರುವ ನೌಕರರನ್ನು ಖಾಯಂಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ನೌಕರರನ್ನು ಯಾವಾಗ ಖಾಯಂಗೊಳಿಸಲಾಗುವುದು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಸಚಿವರು)

ಅ) ಹೌದು.

ಆ) ಸಧ್ಯಕ್ಕೆ ಕಂಪನಿ ಅಂತಹ ನೌಕರರ ಸೇವೆಯನ್ನು ಸಕ್ರಮಗೊಳಿಸುವ ಸ್ಥಿತಿಯಲ್ಲಿರುವುದಿಲ್ಲ.

409(1127) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಶುಸಂಗೋಪನೆ ಇಲಾಖೆಯ ನಿರ್ದೇಶಕರು ಔಷಧಿ ಖರೀದಿಯಲ್ಲಿ ನಿಯಮ ಉಲ್ಲಂಘನೆ ಮಾಡಿ ಅನುಪಯುಕ್ತ ಔಷಧಿಗಳನ್ನು ಖರೀದಿಸಿದ ಬಗ್ಗೆ ತನಿಖೆ ಆರಂಭಿಸಲಾಗಿದೆ;

ಆ) ಆರಂಭಿಸಿದ್ದರೆ ತನಿಖೆ ಈಗ ಯಾವ ಹಂತದಲ್ಲಿದೆ ಹಾಗೂ ಪೂರ್ಣಗೊಳ್ಳುವುದು ಯಾವಾಗ;

ಇ) ತನಿಖೆ ಪೂರ್ಣಗೊಂಡಿದ್ದಲ್ಲಿ ತನಿಖಾ ವರದಿಯ ಸಾರಾಂಶವೇನು;

ಈ) ಅವ್ಯವಹಾರ ನಡೆಸಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ;

ಉ) ಇಲ್ಲದಿದ್ದಲ್ಲಿ ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಮಿರಾಜುದ್ದೀನ್ ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಖಾತೆ ಸಚಿವರು)

ಅ) ನಿಯಮ ಉಲ್ಲಂಘನೆ ಮಾಡಿ ಖರೀದಿ ಮಾಡಿರುದಿಲ್ಲ. ನಿರ್ದೇಶಕರ ದತ್ತ ವಿತ್ತಾಧಿಕಾರದನ್ವಯ ಖರೀದಿ ಮಾಡಲಾಗಿದೆ. ಯಾವುದೇ ಅನುಪಯುಕ್ತ ಔಷಧಿ ಖರೀದಿ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) –ಇದೆ–

ಈ) –ಇದೆ–

ಉ) –ಇದೆ–

410(1128) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗಂಗಾ ಕಲ್ಯಾಣ ಯೋಜನೆಯಡಿ ಶಿವಮೊಗ್ಗ ಜಿಲ್ಲೆಯಲ್ಲಿ ಆಯ್ಕೆಯಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳೆಷ್ಟು;

ಆ) ಇದರಲ್ಲಿ ತೆರೆದ ಬಾವಿ ಹಾಗೂ ಕೊಳವೆಬಾವಿಗಳನ್ನು ಕೊರೆಸಿರುವ ಸಂಖ್ಯೆ ಎಷ್ಟು;

ಇ) ಯಾವ ಯಾವ ದಿನಾಂಕದಲ್ಲಿ ಇವುಗಳನ್ನು ಕೊರೆಸಲಾಯಿತು(ತಾಲ್ಲೂಕುವಾರು ವಿವರ ನೀಡುವುದು);

ಈ) ಇವುಗಳಲ್ಲಿ ಪಂಪ್ ಅಳವಡಿಸಿ ವಿದ್ಯುತ್ ಸೌಲಭ್ಯ ಕೊಡಲು ಬಾಕಿ ಇರುವುದೆಷ್ಟು; ಯಾವ ಕಾರಣಕ್ಕಾಗಿ ತಡವಾಗಿದೆ.

ಉ) ಯಾವಾಗ ಸಂಪರ್ಕ ಕೊಡಲಾಗುವುದು :

ಊ) ತೆರೆದ ಬಾವಿಗಳಿಗೆ ಡೀಸೆಲ್ ಪಂಪ್ ಸೆಟ್‌ನ್ನು ಖರೀದಿಸಲಾಗಿದೆಯೇ ;

ಋ) ಈ ಫಲಾನುಭವಿಗಳಿಗೆ ಬೇಕಾದ ಸಾಮಾಗ್ರಿಗಳನ್ನು ಸರಬರಾಜು ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಎ) ತಕ್ಷಣ ಡಿಸೇಲ್ ಮೋಟಾರ್‌ಗಳನ್ನು ವಾಪಸ್ ಪಡೆದು ವಿದ್ಯುತ್ ಮೋಟಾರ್ ಒದಗಿಸುವ ವ್ಯವಸ್ಥೆಯನ್ನು ಸರ್ಕಾರವು ಕೈಗೊಳ್ಳುತ್ತಿದೆಯೇ ;

ಐ) ಡಿಸೇಲ್ ಪಂಪ್ ಮೋಟಾರ್ ಒದಗಿಸುವ ಫಲಾನುಭವಿಗಳಿಗೆ ಪರ್ಯಾಯವಾಗಿ ವಿದ್ಯುತ್ ಮೋಟಾರ್ ಒದಗಿಸಲಾಗುವುದೇ ?

ಡಾ: ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು)

ಅ) 2001–02 ನೇ ಸಾಲಿನಿಂದ 2003–04 ನೇ ಸಾಲಿನವರೆಗೆ ಒಟ್ಟು ಆಯ್ಕೆಯಾದ ಫಲಾನುಭವಿಗಳು ಪರಿಶಿಷ್ಟ ಜಾತಿ 443 ಪರಿಶಿಷ್ಟ ವರ್ಗ 87

ಆ) ತೆರೆದ ಬಾವಿಗಳು 53 ಕೊಳವಬಾವಿಗಳು 449

ಇ) ಆಯಾ ವರ್ಷದಲ್ಲಿ ಡಿಸೆಂಬರ್ ಮಾಹೆಯಿಂದ ಮೇ ಮಾಹೆಯವರೆಗೆ ಕೊಳವೆಬಾವಿಗಳನ್ನು ಕೊರೆಸಲಾಗಿದೆ (ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಈ) ಸದರಿ ಮೂರು ವರ್ಷಗಳಲ್ಲಿ ಕೊರೆದ ಎಲ್ಲಾ ಕೊಳವೆ ಬಾವಿಗಳಿಗೂ ಪಂಪ್ ಅಳವಡಿಸಲಾಗಿರುತ್ತದೆ ಇದರಲ್ಲಿ 233 ಕೊಳವೆಬಾವಿಗಳು ವಿದ್ಯುದ್ವೀಕರಣವಾಗಿದ್ದು 269 ಕೊಳವೆಬಾವಿಗಳು ವಿದ್ಯುತ್ ಸಂಪರ್ಕಕ್ಕೆ ಬಾಕಿ ಇರುತ್ತದೆ.

ಉ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು OYT ಯೋಜನೆಯನ್ನು ಜಾರಿಗೆ ತಂದಿರುವುದರಿಂದ ಸರ್ಕಾರವು ಗಂಗಾ ಕಲ್ಯಾಣ ಯೋಜನೆಯಡಿ ಸಾಮೂಹಿಕ ಮತ್ತು ವೈಯಕ್ತಿಕ ನೀರಾವರಿ ಕೊಳವೆ ಬಾವಿಗಳಿಗೆ ನಿಗಧಿಪಡಿಸಿರುವ ಘಟಕದ ವೆಚ್ಚದಲ್ಲಿ ರೂ. 25,000/– ಗಳನ್ನು ವಿದ್ಯುತ್ ಪ್ರಸರಣ ನಿಗಮಕ್ಕೆ ಪಾವತಿಸಲು ಸಾಧ್ಯವಾಗದೇ ಇದ್ದುದರಿಂದ ಈ ಬಗ್ಗೆ ಸರ್ಕಾರವು ದಿ : 10–3–04 ರಂದು ಆದೇಶ ಹೊರಡಿಸಿ OYT ಯೋಜನೆಯನ್ನು ಗಂಗಾ ಕಲ್ಯಾಣ ಯೋಜನೆಗೆ ಅನ್ವಯಿಸಬಾರದೆಂದು ಆದೇಶ ನೀಡಿದ್ದರೂ ಸಹ ವಿದ್ಯುತ್ ಪ್ರಸರಣ ನಿಗಮವು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಊ) ಪ್ರಯುಕ್ತ ದಿ : 29–12–04 ರಂದು ಮಾನ್ಯ ಉಪ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಪಡೆದ ಸಭೆಯಲ್ಲಿ ನಿಗಮದಿಂದ ಕೊರೆದು, ವಿದ್ಯುತ್ ಸಂಪರ್ಕಕ್ಕೆ ಬಾವಿ ಇರುವ ಎಲ್ಲಾ ಕೊಳವೆ ಬಾವಿಗಳಿಗೆ ಏಪ್ರಿಲ್ 2005 ಗೆ ಮಾಹೆಯ ಅಂತ್ಯದೊಳಗೆ ವಿದ್ಯುದ್ದೀಕರಣಗೊಳಿಸುವಂತೆ ಮಾನ್ಯ ಉಪ ಮುಖ್ಯ ಮಂತ್ರಿಗಳು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.

ಋ) . ಖರೀದಿಸಲಾಗಿದೆ.

ೠ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಎ) ಅನ್ವಯಿಸುವುದಿಲ್ಲ.

ಏ) ಫಲಾನುಭವಿಗಳಿಗೆ ಅವರ ಇಚ್ಛೆಯ ಮೇರೆಗೆ ಡಿಸೇಲ್ ಪಂಪ್ ಸೆಟ್‌ಗಳನ್ನು ನೀಡಲಾಗಿದೆ. ಪಂಪ್ ಬದಲಾವಣೆ ಮಾಡುವ ಬಗ್ಗೆ ಯಾವುದೇ ಕೋರಿಕೆ ಪತ್ರಗಳು ಕಛೇರಿಗೆ ಬಂದಿರುವುದಿಲ್ಲ.

ಐ) ಮಲೆನಾಡಿನ ಭಾಗಗಳಾದ ಸಾಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಕೊಳವೆಬಾವಿಗಳನ್ನು ಕೊರೆಯಲು ತಾಂತ್ರಿಕ ಕಾರಣಗಳಿಂದಾಗಿ ಇದುವರೆವಿಗೂ ಸಾಧ್ಯವಾಗಿರುವುದಿಲ್ಲ. ತೆರೆದ ಬಾವಿಗಳನ್ನು ಸದರಿ ತಾಲ್ಲೂಕುಗಳಲ್ಲಿ ಮಾಡುವುದು ಸೂಕ್ತವಾಗಿರುತ್ತದೆ. ಮಾನ್ಯ ಶಾಸಕರ ಆದೇಶದಂತೆ ಸದರಿ ಎರಡು ತಾಲ್ಲೂಕುಗಳಲ್ಲಿ ತೆರೆದ ಬಾವಿಗಳನ್ನು ನಿರ್ಮಿಸಿದ, ವಿದ್ಯುತ್ ಸಂಪರ್ಕ ಪಡೆಯಲು ಮಲೆನಾಡಿನಲ್ಲಿ ಕಷ್ಟಕರವಾಗಿದ್ದು, ಫಲಾನುಭವಿಗಳು ಡಿಸೇಲ್ ಮೋಟಾರುಗಳಿಗೆ ಸ್ವ ಇಚ್ಛೆಯಿಂದ ಪಡೆದು ಯಶಸ್ವಿಯಾಗಿ ಕೃಷಿ ಮಾಡುತ್ತಿದ್ದಾರೆ, ಫಲಾನುಭವಿಗಳಿಂದ ಇದುವರೆಗೆ ಯಾವುದೇ ದೂರುಗಳು ಕಛೇರಿಗೆ ಬಂದಿರುವುದಿಲ್ಲ. ಕಾರಣ ಪರ್ಯಾಯವಾಗಿ ಅದೇ ಫಲಾನುಭವಿಗಳಿಗೆ ವಿದ್ಯುತ್ ಮೋಟಾರ್ ಒದಗಿಸಲು ಬರುವುದಿಲ್ಲ.

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ

2001-02ನೇ ಸಾಲಿನ ಶಿವಮೊಗ್ಗ ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆಯ ತಾಲ್ಲೂಕುವಾರು ಪ್ರಗತಿ ವಿವರ ವಿಧಾನ ಮಂಡಲದ ಚುಕ್ಕೆ ಪ್ರಶ್ನೆ ಸಂಖ್ಯೆ : 1128 ಕ್ಕೆ ಉತ್ತರ

ಕ್ರ ಸಂ.	ತಾಲ್ಲೂಕುವಾರು ಕ್ಷೇತ್ರವಾರು	ಕೊರೆದ ಕೊಳವೆ ಬಾವಿಗಳ ಸಂಖ್ಯೆ		ಪಂಪ್‌ಅಳವಡಿಸಿದ ಸಂಖ್ಯೆ		ಪಂಪ್ ಅಳವಡಿಕೆಗೆ ಬಾಕಿಯಿರುವ ಸಂಖ್ಯೆ		ವಿದ್ಯುದ್ದೀಕರಣಗೊಂಡ ಸಂಖ್ಯೆ		ವಿದ್ಯುದ್ದೀಕರಣಕ್ಕೆ ಬಾಕಿಯಿರುವ ಸಂಖ್ಯೆ	
		ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ
1	ಶಿವಮೊಗ್ಗ	12	0	12	0	0	0	12	0	0	0
2	ಹೊಸನಗರ	0	0	0	0	0	0	0	0	0	0
3	ತೀರ್ಥಹಳ್ಳಿ	0	0	0	0	0	0	0	0	0	0
4	ಭದ್ರಾವತಿ	28	6	28	6	0	0	16	4	12	2
5	ಹೊಳೆಹೊನ್ನೂರು	0	0	0	0	0	0	0	0	0	0
6	ಸೊರಬ	2	0	2	0	0	0	2	0	0	0
7	ಸಾಗರ	0	0	0	0	0	0	0	0	0	0
8	ಶಿಕಾರಿಪುರ	2	0	2	0	0	0	2	0	0	0
	ಒಟ್ಟು	**44**	**6**	**44**	**6**	**0**	**0**	**32**	**4**	**12**	**2**

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ

2003–04ನೇ ಸಾಲಿನ ಶಿವಮೊಗ್ಗ ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆಯ ತಾಲ್ಲೂಕುವಾರು ಪ್ರಗತಿ ವಿವರ ವಿಧಾನ ಮಂಡಲದ ಚುಕ್ಕೆ ಪ್ರಶ್ನೆ ಸಂಖ್ಯೆ : 1128 ಕ್ಕೆ ಉತ್ತರ

ಕ್ರ ಸಂ.	ತಾಲ್ಲೂಕುವಾರು ಕ್ಷೇತ್ರವಾರು	ಕೊರೆದ ಕೊಳವೆ ಬಾವಿಗಳ ಸಂಖ್ಯೆ		ಪಂಪ್‌ಅಳವಡಿಸಿದ ಸಂಖ್ಯೆ		ಪಂಪ್ ಅಳವಡಿಕೆಗೆ ಬಾಕಿಯಿರುವ ಸಂಖ್ಯೆ		ವಿದ್ಯುದ್ದೀಕರಣಗೊಂಡ ಸಂಖ್ಯೆ		ವಿದ್ಯುದ್ದೀಕರಣಕ್ಕೆ ಬಾಕಿಯಿರುವ ಸಂಖ್ಯೆ	
		ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ
1	ಶಿವಮೊಗ್ಗ	–	–	–	–	–	–	–	–	–	–
2	ಹೊಸನಗರ	–	–	–	–	–	–	–	–	–	–
3	ತೀರ್ಥಹಳ್ಳಿ	–	–	–	–	–	–	–	–	–	–
4	ಭದ್ರಾವತಿ	–	–	–	–	–	–	–	–	–	–
5	ಹೊಳೆಹೊನ್ನೂರು	2	2	–	2	2	–	–	–	2	2
6	ಸೊರಬ	2	–	2	–	–	–	–	–	2	–
7	ಸಾಗರ	–	–	–	–	–	–	–	–	–	–
8	ಶಿಕಾರಿಪುರ	6	–	6	–	–	–	–	–	6	–
	ಒಟ್ಟು	**10**	**2**	**8**	**2**	**2**	–	–	–	**10**	**2**

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ

2002-03ನೇ ಸಾಲಿನ ಶಿವಮೊಗ್ಗ ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆಯ ತಾಲ್ಲೂಕುವಾರು ಪ್ರಗತಿ ವಿವರ ವಿಧಾನ ಮಂಡಲದ ಚುಕ್ಕೆ ಪ್ರಶ್ನೆ ಸಂಖ್ಯೆ : 1128 ಕ್ಕೆ ಉತ್ತರ

ಕ್ರ ಸಂ.	ತಾಲ್ಲೂಕುವಾರು ಕ್ಷೇತ್ರವಾರು	ಕೊರೆದ ಕೊಳವೆ ಬಾವಿಗಳ ಸಂಖ್ಯೆ		ಪಂಪ್‌ಅಳವಡಿಸಿದ ಸಂಖ್ಯೆ		ಪಂಪ್ ಅಳವಡಿಕೆಗೆ ಬಾಕಿಯಿರುವ ಸಂಖ್ಯೆ		ವಿದ್ಯುದ್ದೀಕರಣಗೊಂಡ ಸಂಖ್ಯೆ		ವಿದ್ಯುದ್ದೀಕರಣಕ್ಕೆ ಬಾಕಿಯಿರುವ ಸಂಖ್ಯೆ	
		ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ
1	ಶಿವಮೊಗ್ಗ	0	0	0	0	0	0	0	0	0	0
2	ಹೊಸನಗರ	0	0	0	0	0	0	0	0	0	0
3	ತೀರ್ಥಹಳ್ಳಿ	0	0	0	0	0	0	0	0	0	0
4	ಭದ್ರಾವತಿ	0	0	0	0	0	0	0	0	12	2
5	ಹೊಳೆಹೊನ್ನೂರು	0	0	0	0	0	0	0	0	0	0
6	ಸೊರಬ	0	0	0	0	0	0	0	0	0	0
7	ಸಾಗರ	0	0	0	0	0	0	0	0	0	0
8	ಶಿಕಾರಿಪುರ	0	0	0	0	0	0	0	0	0	0
	ಒಟ್ಟು	**0**	**0**	**0**	**0**	**0**	**0**	**0**	**0**	**0**	**0**

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ

2001-02ನೇ ಸಾಲಿನ ಶಿವಮೊಗ್ಗ ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆಯ ತಾಲ್ಲೂಕುವಾರು ಪ್ರಗತಿ ವಿವರ ವಿಧಾನ ಮಂಡಲದ ಚುಕ್ಕೆ ಪ್ರಶ್ನೆ ಸಂಖ್ಯೆ : 1128 ಕ್ಕೆ ಉತ್ತರ

ಕ್ರ ಸಂ.	ತಾಲ್ಲೂಕುವಾರು ಕ್ಷೇತ್ರವಾರು	ಕೊರೆದ ಕೊಳವೆ ಬಾವಿಗಳ ಸಂಖ್ಯೆ		ಪಂಪ್‌ಅಳವಡಿಸಿದ ಸಂಖ್ಯೆ		ಪಂಪ್ ಅಳವಡಿಕೆಗೆ ಬಾಕಿಯಿರುವ ಸಂಖ್ಯೆ		ವಿದ್ಯುದ್ದೀಕರಣಗೊಂಡ ಸಂಖ್ಯೆ		ವಿದ್ಯುದ್ದೀಕರಣಕ್ಕೆ ಬಾಕಿಯಿರುವ ಸಂಖ್ಯೆ	
		ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ
1	ಶಿವಮೊಗ್ಗ	2	0	2	0	0	0	2	0	0	0
2	ಹೊಸನಗರ	29	0	29	10	0	0	21	10	8	0
3	ತೀರ್ಥಹಳ್ಳಿ	10	0	10	0	0	0	10	0	0	0
4	ಭದ್ರಾವತಿ	12	0	12	6	0	0	12	0	0	0
5	ಹೊಳೆಹೊನ್ನೂರು	110	12	110	12	0	0	60	6	50	6
6	ಸೊರಬ	16	4	16	4	0	0	16	4	0	0
7	ಸಾಗರ	10	0	10	0	0	0	10	0	0	0
8	ಶಿಕಾರಿಪುರ	27	7	27	7	0	0	27	7	0	0
	ಒಟ್ಟು	**216**	**33**	**216**	**33**	**0**	**0**	**158**	**27**	**58**	**6**

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ

2-03ನೇ ಸಾಲಿನ ಶಿವಮೊಗ್ಗ ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆಯ ತಾಲ್ಲೂಕುವಾರು ಪ್ರಗತಿ ವಿವರ ವಿಧಾನ ಮಂಡಲದ ಚುಕ್ಕೆ ಪ್ರಶ್ನೆ ಸಂಖ್ಯೆ : 1128 ಕ್ಕೆ ಉತ್ತರ

ತಾಲ್ಲೂಕುವಾರು ಕ್ಷೇತ್ರವಾರು	ಕೊರೆದ ಕೊಳವೆ ಬಾವಿಗಳ ಸಂಖ್ಯೆ		ಪಂಪ್‌ಅಳವಡಿಸಿದ ಸಂಖ್ಯೆ		ಪಂಪ್ ಅಳವಡಿಕೆಗೆ ಬಾಕಿಯಿರುವ ಸಂಖ್ಯೆ		ವಿದ್ಯುದ್ದೀಕರಣಗೊಂಡ ಸಂಖ್ಯೆ		ವಿದ್ಯುದ್ದೀಕರಣಕ್ಕೆ ಬಾಕಿಯಿರುವ ಸಂಖ್ಯೆ	
	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ
ಶಿವಮೊಗ್ಗ	1	0	1	0	0	0	1	0	0	0
ಹೊಸನಗರ	2	0	2	0	0	0	2	0	0	0
ತೀರ್ಥಹಳ್ಳಿ	2	0	2	0	0	0	2	0	0	0
ಭದ್ರಾವತಿ	2	0	2	0	0	0	0	0	2	0
ಹೊಳೆಹೊನ್ನೂರು	2	0	2	0	0	0	0	0	2	0
ಸೊರಬ	7	3	7	3	0	0	0	0	7	3
ಸಾಗರ	6	0	6	0	0	0	6	0	0	0
ಶಿಕಾರಿಪುರ	0	0	0	0	0	0	0	0	0	0
ಒಟ್ಟು	**22**	**3**	**22**	**3**	**0**	**0**	**11**	**0**	**11**	**3**

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ

2003–04ನೇ ಸಾಲಿನ ಶಿವಮೊಗ್ಗ ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆಯ ತಾಲ್ಲೂಕುವಾರು ಪ್ರಗತಿ ವಿವರ ವಿಧಾನ ಮಂಡಲದ ಚುಕ್ಕೆ ಪ್ರಶ್ನೆ ಸಂಖ್ಯೆ : 1128 ಕ್ಕೆ ಉತ್ತರ

ಕ್ರ ಸಂ.	ತಾಲ್ಲೂಕುವಾರು ಕ್ಷೇತ್ರವಾರು	ಕೊರೆದ ಕೊಳವೆ ಬಾವಿಗಳ ಸಂಖ್ಯೆ		ಪಂಪ್‌ಅಳವಡಿಸಿದ ಸಂಖ್ಯೆ		ಪಂಪ್ ಅಳವಡಿಕೆಗೆ ಬಾಕಿಯಿರುವ ಸಂಖ್ಯೆ		ವಿದ್ಯುದ್ದೀಕರಣಗೊಂಡ ಸಂಖ್ಯೆ		ವಿದ್ಯುದ್ದೀಕರಣಕ್ಕೆ ಬಾಕಿಯಿರುವ ಸಂಖ್ಯೆ	
		ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ
1	ಶಿವಮೊಗ್ಗ	9	1	9	1	0	0	0	0	9	1
2	ಹೊಸನಗರ	13	1	13	1	0	0	0	0	13	1
3	ತೀರ್ಥಹಳ್ಳಿ	15	0	15	0	0	0	0	0	15	0
4	ಭದ್ರಾವತಿ	13	1	13	1	0	0	0	0	13	1
5	ಹೊಳೆಹೊನ್ನೂರು	54	6	54	6	0	0	0	0	54	6
6	ಸೊರಬ	17	1	17	1	0	0	0	0	17	1
7	ಸಾಗರ	10	1	10	1	0	0	0	0	9	1
8	ಶಿಕಾರಿಪುರ	20	4	20	4	0	0	2	0	20	4
	ಒಟ್ಟು	**151**	**15**	**151**	**15**	**0**	**0**	**0**	**0**	**150**	**15**

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ

2001-02ನೇ ಸಾಲಿನ ಶಿವಮೊಗ್ಗ ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆಯ ತಾಲ್ಲೂಕುವಾರು ಪ್ರಗತಿ ವಿವರ ವಿಧಾನ ಮಂಡಲದ ಚುಕ್ಕೆ ಪ್ರಶ್ನೆ ಸಂಖ್ಯೆ : 1128 ಕ್ಕೆ ಉತ್ತರ

ಕ್ರ ಸಂ.	ತಾಲ್ಲೂಕುವಾರು ಕ್ಷೇತ್ರವಾರು	ಕೊರೆದ ಕೊಳವೆ ಬಾವಿಗಳ ಸಂಖ್ಯೆ		ಪಂಪ್‌ಅಳವಡಿಸಿದ ಸಂಖ್ಯೆ		ಪಂಪ್ ಅಳವಡಿಕೆಗೆ ಬಾಕಿಯಿರುವ ಸಂಖ್ಯೆ		ವಿದ್ಯುದ್ದೀಕರಣಗೊಂಡ ಸಂಖ್ಯೆ		ವಿದ್ಯುದ್ದೀಕರಣಕ್ಕೆ ಬಾಕಿಯಿರುವ ಸಂಖ್ಯೆ	
		ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ
1	ಶಿವಮೊಗ್ಗ	12	0	12	0	0	0	12	0	0	0
2	ಹೊಸನಗರ	0	0	0	0	0	0	0	0	0	0
3	ತೀರ್ಥಹಳ್ಳಿ	0	0	0	0	0	0	0	0	0	0
4	ಭದ್ರಾವತಿ	28	6	28	6	0	0	16	4	12	2
5	ಹೊಳೆಹೊನ್ನೂರು	0	0	0	0	0	0	0	0	0	0
6	ಸೊರಬ	2	0	2	0	0	0	2	0	0	0
7	ಸಾಗರ	0	0	0	0	0	0	0	0	0	0
8	ಶಿಕಾರಿಪುರ	2	0	2	0	0	0	2	0	0	0
	ಒಟ್ಟು	**44**	**6**	**44**	**6**	**0**	**0**	**32**	**4**	**12**	**2**

411(112) ಶ್ರೀ ಆಶೋಕ್ ಆರ್ (ಉತ್ತರಹಳ್ಳಿ) ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರೇಷ್ಮೆ ಸಂಶೋಧನಾ ಅಭಿವೃದ್ಧಿ ಸಂಸ್ಥೆಯ ನೌಕರರುಗಳಿಗೆ ಕಳೆದ 5–6 ವರ್ಷಗಳಿಂದ ಸರಿಯಾಗಿ ವೇತನವನ್ನು ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ರೇಷ್ಮೆ ಸಂಶೋಧನಾ ಇಲಾಖೆಯು ತೀವ್ರವಾಗಿ ಆರ್ಥಿಕ ಸಂಕಷ್ಟವನ್ನೆದುರಿಸುತ್ತಿದ್ದು ಸಂಬಳ ಪಾವತಿಸಲು ಮತ್ತು ಅಭಿವೃದ್ಧಿ ಸಂಶೋಧನೆಗೆ ಹಣಕಾಸಿನ ಲಭ್ಯತೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಈ ನಿಟ್ಟಿನಲ್ಲಿ ಸರ್ಕಾರದ ಯೋಜನೇತರ ಇಲಾಖೆಯ ಬೆಲೆ ಸ್ಥಿರೀಕರಣ ನಿಧಿ ಹಾಗೂ ಕೇಂದ್ರದ ಯೋಜನಾ ಅನುದಾನಕ್ಕಾಗಿ ಯಾವ ಅನುಕೂಲವನ್ನು ಕಲ್ಪಿಸಲಾಗಿದೆ ,

ಈ) ಸಂಸ್ಥೆಯ ನೌಕರರಿಗೆ ನಿಯಮಿತವಾದ ವೇತನದೊಂದಿಗೆ ಸೇವಾ ಸೌಲಭ್ಯ, ವಿಜ್ಞಾನಿ ನೌಕರರಿಗೆ ಇತರ ಸಂಸ್ಥೆಗಳಿಗೆ ಹೋಲಿಕೆಯಾಗುವ ವೇತನ ಶ್ರೇಣಿ, ಪಿಂಚಣಿ ಸೌಲಭ್ಯಗಳು ಸರ್ಕಾರದ ಮಟ್ಟಲದಲಿ ಇನ್ನು ಇತ್ಯರ್ಥವಾಗದೇ ಇರಲು ಕಾರಣವೇನು ?

ಶ್ರೀ ಚೆನ್ನಿಗಪ್ಪ (ರೇಷ್ಮೆ ಸಚಿವರು)

ಅ) ಈ ಸಂಸ್ಥೆಯಲ್ಲಿ ಕಳೆದ 5–6 ವರ್ಷಗಳಿಂದ ಆರ್ಥಿಕ ಸಂಕಷ್ಟವಿದ್ದರೂ ಸಹ ಡಿಸೆಂಬರ್ 2004ರ ಮಾಹೆಯವರೆಗೆ ಬಾಕಿ ಇಲ್ಲದಂತೆ ವೇತನ ಪಾವತಿಸಲಾಗಿದೆ ಈ ಬಗ್ಗೆ ಸರ್ಕಾರವು ಸೂಕ್ತ ಕ್ರಮ ಕೈಗೊಂಡಿದೆ

ಆ) ಬಂದಿದೆ

ಇ) ಬೆಲೆ ಸ್ಥಿರೀಕರಣ ನಿಧಿಯಿಂದ 2000 ರಿಂದ ಇತ್ತೀಚಿನವರೆಗೂ 7 ಕಾರ್ಯಕ್ರಮಗಳಿಗಾಗಿ ಅನುದಾನ ಬಿಡುಗಡೆಯಾಗಿರುವ ಒಟ್ಟು ಮೊತ್ತ ರೂ 22 32 ಲಕ್ಷಗಳಾಗಿರುತ್ತದೆ ಹೆಚ್ಚಿನ ಹಣಕಾಸಿನ ಬಿಡುಗಡೆಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ

ಈ) ಸರ್ಕಾರದ ಆದೇಶಗಳನ್ನು ಆಗಿಂದ್ದಾಗೆ ಯಥಾವತ್ತಾಗಿ ಜಾರಿಗೊಳಿಸಿ ವೇತನ ಮತ್ತು ಸೇವಾ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ ಪಿಂಚಣಿ ಸೌಲಭ್ಯಕ್ಕೆ ಸಂಬಂಧಿಸಿದಂತೆ ಎಲ್ ಐ ಸಿ ಯಿಂದ ಸಂಸ್ಥೆಯ ನೌಕರರಿಗೆ ಸೌಲಭ್ಯವನ್ನು ವಿಸ್ತರಿಸಲು ಕ್ರಮ ವಹಿಸುವಂತೆ ಸೂಚಿಸಿದೆ

412(227) ·ಶ್ರೀ ಆರ್ ಆಶೋಕ್ ಮತ್ತು ಶ್ರೀ ಪಿ ಸಿ ಮೋಹನ್(ಉತ್ತರಹಳ್ಳಿ) ಮಾನ್ಯ ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ಹೊರವಲಯದಲ್ಲಿ ರಫ್ತು ಉತ್ತೇಜನಾ ಕೈಗಾರಿಕಾ ಪಾರ್ಕ್ ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆಯೇ ,

ಆ) ಈ ಉದ್ದೇಶಕ್ಕೆ ವಶಪಡಿಸಿಕೊಳ್ಳಲಾಗಿರುವ ಜಮೀನು ಎಷ್ಟು ,

ಇ) ವಶಪಡಿಸಿಕೊಳ್ಳಲಾಗಿರುವ ಜಮೀನಿನ ಒಟ್ಟು ಮೌಲ್ಯ ಎಷ್ಟು

ಈ) ಜಮೀನನ್ನು ವಶಪಡಿಸಿಕೊಂಡ ನಂತರ ಜಮೀನಿಗೆ ಪರಿಹಾರ ನೀಡಲಾಗಿದೆಯೇ ,

ಉ) [illegible]ಗಳನ್ನು ಗಾಳಿಗೆ ತೂರಿ [illegible]

ಊ) ನಿಯಮಾವಳಿಗಳನ್ನು ಉಲ್ಲಂಘಿಸಿರುವ ಪ್ರಕರಣದಲ್ಲಿ ಸರ್ಕಾರ ಯಾರನ್ನು ತಪಿತಸ್ಥರೆಂದು ಗುರುತಿಸಿದೆ.

ಋ) ಅವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಭಾರತ ಸರ್ಕಾರವು 28ನೇ ಸೆಪ್ಟೆಂಬರ್ 1994ರಲ್ಲಿ ಬೆಂಗಳೂರಿನ ಹೂಡಿ ಹತ್ತಿರ ರಫ್ತು ಉತ್ತೇಜನಾ ಕೈಗಾರಿಕಾ ಪಾರ್ಕ್ ಸ್ಥಾಪಿಸಲು ಅನುಮೋದನೆ ನೀಡಿರುತ್ತದೆ. ರಾಜ್ಯ ಸರ್ಕಾರವೂ ಸಹಾ ದಿನಾಂಕ:31-10-1995ರಲ್ಲಿ ಈ ಯೋಜನೆಗೆ ಅನುಮೋದನೆ ನೀಡಿರುತ್ತದೆ.

ಆ)

ಹಂತ	ಸರ್ಕಾರಿ ಜಮೀನು	ಖಾಸಗಿ ಜಮೀನು	ಒಟ್ಟು ಎ-ಗು
1	166.06	136.02	302.08
2	23.13	288.29	312.02
ಒಟ್ಟು	189.19	424.31	614.10

ಇ)ವಶಪಡಿಸಿಕೊಳ್ಳಲಾದ ಜಮೀನಿಗೆ ತಗಲುವ ಅಂದಾಜು ವೆಚ್ಚ ರೂ. 47,48,42,422-00 ಗಳಾಗಿರುತ್ತದೆ.

ಈ) ಇದುವರೆಗೆ ರೂ. 40,59,08,895-00 ಗಳ ಭೂಪರಿಹಾರವನ್ನು ಪಾವತಿಸಲಾಗಿದ್ದು, ಬಾಕಿ ಉಳಿದಿರುವ ರೂ. 66,89,33,527-00 ಗಳನ್ನು ಪಾವತಿಸಬೇಕಾಗಿರುತ್ತದೆ.

ಉ) ಭೂಸ್ವಾಧೀನಪಡಿಸಿಕೊಳ್ಳಲಾಗಿದ್ದ-ಜಮೀನನ್ನು ಮಾರಾಟ ಮಾಡಿರುವುದಿಲ್ಲ. ಆದರೆ ಏಕಗವಾಕ್ಷಿ ಸಮಿತಿ: ಉನ್ನತ ಮಟ್ಟದ ಸಭೆಯ ನಿರ್ಣಯದಂತೆ ಇತರೆ ಉದ್ದೇಶಕ್ಕಾಗಿ 15 ಘಟಕಗಳಿಗೆ ಜಮೀನನ್ನು ಹಂಚಿಕೆ ಮಾಡಲಾಗಿದ್ದು, ವಿವರಗಳನ್ನು ಅನುಬಂಧ-ಅರಲ್ಲಿ ಒದಗಿಸಲಾಗಿದೆ.

ಊ) -ಉದ್ಭವಿಸುವುದಿಲ್ಲ-

ಋ) -ಉದ್ಭವಿಸುವುದಿಲ್ಲ-

ಅನುಬಂಧ-ಅ

ಕ್ರಮ ಸಂಖ್ಯೆ	ಘಟಕದ ಹೆಸರು	ಚಟುವಟಿಕೆ	ವಿಸ್ತೀರ್ಣ(ಎಕರೆಗಳಲ್ಲಿ)
1	ಶ್ರೀ ಸತ್ಯ ಸಾಯಿ ಸೆಂಟ್ರಲ್ ಟ್ರಸ್ಟ್	ಸ್ಪೂಪರ್ ಸ್ಪೆಷಾಲಿಟಿ ಆಸ್ಪತ್ರೆ	52.00
2	ಡಿಸ್ಟೆಂಟ್ ಲರ್ನಿಂಗ್ ಇಂಟರ್ ನೆಟ್ ಇಂಡಿಯಾ ಲಿಮಿಟೆಡ್	ವೈದ್ಯಕೀಯ ಕಾಲೇಜು	33.57
3	ಸನ್ ರೈಸ್ ಇಂಡಿಯಾ ಇಂಟಾಕ್ಟಿವ್ ಲಿಮಿಟೆಡ್	ಬಯೋ ಟಕ್ನಾಲಜಿ	23.90
4	ಯೋಷಿತಾ ಹೈಟೆಕ್ ಇಂಟರ್ ನ್ಯಾಷನಲ್	ಹೋಟೆಲ್	0.13

5	ಇಂಡಿಯನ್ ಹೋಟಲ್ಸ್ ಪ್ರೈವೇಟ್ ಲಿಮಿಟೆಡ್	ಹೋಟೆಲ್	0.90
6	ಫೇರ್‌ಮೌಂಟ್ ಹೋಟಲ್ಸ್ ಪ್ರೈವೇಟ್ ಲಿಮಿಟೆಡ್	ಬಿಸನಸ್ ಕ್ಲಾಸ್ 4 ಸ್ಟಾರ್ ಹೋಟೆಲ್	2.00
7	ಇನ್‌ಮಾರ್ ಟೂರಿಸಂ ಅಂಡ್ ಹೋಟಲ್ಸ್ ಪ್ರೈವೇಟ್ ಲಿಮಿಟೆಡ್	ಬಿಸನೆಸ್ ಕ್ಲಾಸ್ 3 ಸ್ಟಾರ್ ಹೋಟಲ್	3.00
8	ಆದರ್ಶ ರಿಯಾಲಿಟಿ ಅಂಡ್ ಹೋಟಲ್ಸ್ ಪ್ರೈವೇಟ್ ಲಿಮಿಟೆಡ್	ಬಿಸನೆಸ್ ಕ್ಲಾಸ್ ಹೋಟಲ್	1.70
9	ಶ್ರೀ ಕೃಷ್ಣ ಕೇಟರರ್ಸ್	ಹೋಟಲ್	0.125
10	ಬಾಲಾಜಿ ಕಾರ್ಪೋರೇಷನ್ ಸರ್ವಿಸಸ್	ಹೋಟಲ್ ಕಾಂಪ್ಲೆಕ್ಸ್	0.50
11	ಸಾಯಿಕೃಷ್ಣ ಎಂಟರ್‌ಪ್ರೈಸಸ್	ಸರ್ವಿಸ್ ಸ್ಟೇಷನ್	0.50
12	ಎನ್.ವಿ.ಟಿ. ಕ್ವಾಲಿಟಿ ಸರ್ಟಿಫಿಕೇಷನ್ ಪ್ರೈವೇಟ್ ಲಿಮಿಟೆಡ್	ಟ್ರೈನಿಂಗ್ ಸೆಂಟರ್	0.33
13	ಸತ್ಯ ಸಾಯಿ ಟೂರಿಸ್ಟ್(ರಿ)	ಪಾರ್ಕಿಂಗ್ ಸೌಲಭ್ಯಕ್ಕಾಗಿ	0.40
14	ಚಾಲುಕ್ಯ ರೆಸಾರ್ಟ್ಸ್	ಹೋಟೆಲ್‌ಗಾಗಿ	20.00
15	ಗೋಪಾಲನ್ ಎಂಟರ್ ಪ್ರೈಸಸ್	S.T.P. ಗಾಗಿ	15.23

413(1093) : ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) : ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡುಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕಿನಲ್ಲಿ ವಕ್ಫ್ ಬೋರ್ಡಿಗೆ ಸಂಬಂಧಿಸಿದ ಆಸ್ತಿಗಳು ಎಷ್ಟು :

ಆ) ಈ ಆಸ್ತಿಗಳಲ್ಲಿ ಕೆಲವರು ಅತಿಕ್ರಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಇ) ಬಂದಿದ್ದಲ್ಲಿ, ಸರ್ಕಾರ ಅತಿಕ್ರಮಣದ ವಿರುದ್ಧ ಕೈಗೊಳ್ಳುವ ಕ್ರಮಗಳೇನು ;

ಈ) ಈ ಅತಿಕ್ರಮಣ ಆಸ್ತಿಯ ಮೌಲ್ಯವೆಷ್ಟು; ಇದನ್ನು ಅತಿಕ್ರಮಿಸಿಕೊಂಡಿರುವವರು ಯಾರು, ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು (ವಿವರ ಒದಗಿಸಿರಿ) ?

ಶ್ರೀ ಮಿರಾಜದ್ದೀನ್ ಎನ್ ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು)

ಅ) ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ನೋಂದಾಯಿಸಲಾಗಿರುವ ವಕ್ಫ್ ಆಸ್ತಿಗಳ ಸಂಖ್ಯೆ: 138

ಆ) ಬಂದಿದೆ

ಇ) ರಾಜ್ಯದಲ್ಲಿರುವ ಎಲ್ಲಾ ವಕ್ಫ್ ಆಸ್ತಿಗಳು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧೀನದಲ್ಲಿರುತ್ತೆ. ವಕ್ಫ್ ಮಂಡಳಿಯು ಒಂದು ಶಾಸನಬದ್ಧ ಪ್ರಾಧಿಕಾರವಾಗಿದ್ದು, ಇಂತಹ ಪರಿಸ್ಥಿತಿಗಳನ್ನು ಪ್ರಾಧಿಕಾರವಾಗಿದ್ದು, ಇಂತಹ ಪರಿಸ್ಥಿತಿಗಳನ್ನು ಎದುರಿಸಲು ವಕ್ಫ್ ಅಧಿನಿಯಮ 1995ರ ಕಲಂ 54 ರಲ್ಲಿ ಸಾಕಷ್ಟು ಅಧಿಕಾರ ಅವರಿಗೆ ಇರುತ್ತೆ.

ಈ) ಈ ಆಸ್ತಿಯ ಅಂದಾಜು ಮೌಲ್ಯ 4.00 ಲಕ್ಷ ರೂ. ಆಗಿರಬಹುದು. ಇದನ್ನು ಬಿಸ್ಮಿಲ್ಲಾಷಾವಲಿ ಮೆಕಾನ್‌ನಲ್ಲಿ ವಾಸಿಸುತ್ತಿರುವ ಎಂಟು ವ್ಯಕ್ತಿಗಳು ಅತಿಕ್ರಮಿಸಿರುತ್ತಾರೆ. ಹಾಗೂ ರಾಜ್ಯ ವಕ್ಫ್ ಮಂಡಳಿ ಇವರಿಗೆ ಈಗಾಗಲೇ ನೋಟೀಸ್‌ಗಳನ್ನು ಜಾರಿ ಮಾಡಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಈವರೆವಿಗೂ ಸರ್ಕಾರ ಯಾವುದೇ ಕ್ರಮ ಜರುಗಿಸಿರುವುದಿಲ್ಲ.

414(1094) : ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಹಾಗೂ ಮನರುಜ್ಜೀವನಕ್ಕಾಗಿ ಸರ್ಕಾರವು ವಿಶೇಷವಾಗಿ ಹಮ್ಮಿಕೊಂಡಿರುವ ಕಾರ್ಯ ಯೋಜನೆಗಳ್ಯಾವುವು :

ಆ) ವಿರಾಜಪೇಟೆಯಲ್ಲಿ ಕೈಗಾರಿಕೆಗಳ ಸಂಖ್ಯೆ ಎಷ್ಟು? ಇಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿಲ್ಲವೇ; ಯಾವ ಕಾರ್ಯಕ್ರಮ ಹಾಕಿಕೊಂಡಿದೆ.

ಇ) ಇದನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು; ಈ ಭಾಗದಲ್ಲಿ ಕೈಗಾರಿಕೆಗಳು ಇಲ್ಲದಿರುವುದನ್ನು ಸರ್ಕಾರ ಗಮನಿಸಿದೆಯೇ; ಹಾಗಿದ್ದಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳುವುದು :

ಈ) ಕೈಗಾರಿಕೆಗಳ ಸ್ಥಾಪನೆ ಹಾಗೂ ಉತ್ತೇಜನಕ್ಕಾಗಿ ಹಮ್ಮಿಕೊಳ್ಳಲಾಗಿರುವ ಕಾರ್ಯಯೋಜನೆ ಏನು ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಸಚಿವರು)

ಅ) 2001–2006ನೇ ಸಾಲಿನ ನೂತನ ಕೈಗಾರಿಕಾ ನೀತಿಯನ್ವಯ ಕೊಡಗು ಜಿಲ್ಲೆಯನ್ನು ಕೈಗಾರಿಕೆಯಲ್ಲಿ ಹಿಂದುಳಿದ 'ಸಿ' ವಲಯದಲ್ಲಿ ವರ್ಗೀಕರಿಸಲಾಗಿದೆ ಈ ವಲಯದಲ್ಲಿ ಹೊಸದಾಗಿ ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವ ಉದ್ಯಮದಾರರಿಗೆ ಈ ಕೆಳಕಂಡ ರಿಯಾಯಿತಿಗಳನ್ನು ನೀಡಲಾಗುತ್ತಿದೆ.

1. ಅತಿ ಸಣ್ಣ ಕೈಗಾರಿಕೆಗಳಿಗೆ ಸ್ಥಿರ ಬಂಡವಾಳದ ಮೇಲೆ ಶೇ. 20ರಷ್ಟು ಸಹಾಯಧನ (ಗರಿಷ್ಠ ಮಿತಿ ರೂ. 10.00 ಲಕ್ಷ)

2. ಕೈಗಾರಿಕೆಯನ್ನು ಸ್ಥಾಪಿಸಲು ಖರೀದಿಸುವ ಯಂತ್ರೋಪಕರಣದ ಮೇಲೆ ಪ್ರಥಮ ಮೂರು ವರ್ಷಗಳ ಕಾಲ ಪ್ರವೇಶ ತೆರಿಗೆ ವಿನಾಯಿತಿ ಹಾಗೂ ಕಚ್ಚಾ ಸಾಮಗ್ರಿ ಖರೀದಿ ಮೇಲೆ ಪ್ರವೇಶ ತೆರಿಗೆ 5 ವರ್ಷಗಳ ಕಾಲ ವಿನಾಯಿತಿ.

3. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಮಹಿಳಾ ಉದ್ಯಮಿಗಳಿಗೆ ಶೇ. 5ರಷ್ಟು ಹೆಚ್ಚುವರಿ ಸಹಾಯಧನ (ಗರಿಷ್ಟ ಮಿತಿ ರೂ.1 ಲಕ್ಷ).

4. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದ ವತಿಯಿಂದ ಕೈಗಾರಿಕ ಜಮೀನು ಅಥವಾ ಮಳಿಗೆಗಳ ಹಂಚಿಕೆ.

ಇದಲ್ಲದೆ ಪ್ರಧಾನಮಂತ್ರಿಗಳ ರೋಜಗಾರ ಯೋಜನೆಯಡಿ ವಿದ್ಯಾವಂತ ನಿರುದ್ಯೋಗಿ ಯುವಕ/ಯುವತಿಯರಿಗೆ ಕೈಗಾರಿಕೆ/ಸೇವೆ/ವ್ಯಾಪಾರ ಕ್ಷೇತ್ರದಲ್ಲಿ ಸ್ವಯಂ ಉದ್ಯೋಗ ಘಟಕಗಳನ್ನು ಸ್ಥಾಪಿಸಲು ವಾಣಿಜ್ಯ ಬ್ಯಾಂಕ್‌ಗಳಿಂದ ನೆರವು ನೀಡಲಾಗುತ್ತಿದೆ. ಸ್ಥಳೀಯರಲ್ಲಿ ಉದ್ಯಮಿಶೀಲತೆಯನ್ನು ಹೆಚ್ಚಿಸಲು ಒಂದು ವಾರದಿಂದ ಆರು ವಾರಗಳ ಅವಧಿಯ ವಿವಿಧ ಉದ್ಯಮಶೀಲದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಆ) ವಿರಾಜಪೇಟೆ ತಾಲ್ಲೂಕಿನಲ್ಲಿ 31.12.2004ರ ಅಂತ್ಯಕ್ಕೆ 841 ಸಣ್ಣ ಕೈಗಾರಿಕೆ ಘಟಕಗಳನ್ನು ಸ್ಥಾಪಿಸಲಾಗಿದೆ. ವಿರಾಜಪೇಟೆ ತಾಲ್ಲೂಕಿನಲ್ಲಿ ಮತ್ತು ಕೊಡಗು ಜಿಲ್ಲೆಯಲ್ಲಿ ಮಾನವ ಸಂಪನ್ಮೂಲಗಳ ಲಭ್ಯತೆಯ ಆಧಾರದ ಮೇಲೆ ಹೆಚ್ಚಿನ ಕೈಗಾರಿಕೆಗಳನ್ನು ಸ್ಥಾಪಿಸಲು ಇರುವ ಅವಕಾಶಗಳನ್ನು ಗುರುತಿಸಿ ಜಿಲ್ಲಾ ಮಟ್ಟದ ವರದಿಯನ್ನು ತಯಾರಿಸಿದೆ. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕೈಗಾರಿಕಾ ಬಂಡವಾಳ ಹೂಡಿಕೆ ವಿಚಾರ ಸಂಕೀರ್ಣ ಮತ್ತು ವಿಭಾಗೀಯ ಮಟ್ಟದಲ್ಲಿ ಮೈಸೂರಿನಲ್ಲಿ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಆಯೋಜಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ವಿಭಾಗೀಯ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಮೈಸೂರಿನಲ್ಲಿ ಫೆಬ್ರವರಿ/ಮಾರ್ಚ್ 2005ರಲ್ಲಿ ಆಯೋಜಿಸಲಾಗುವುದು. ಅದೇ ರೀತಿ ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ಉತ್ತೇಜನ ಕಾರ್ಯಕ್ರಮಗಳನ್ನು ಸಹ ಫೆಬ್ರವರಿ/ಮಾರ್ಚ್ ತಿಂಗಳುಗಳಲ್ಲಿ ನಡೆಸಲಾಗುವುದು. 15 ದಿನ ಅವಧಿಯ ಉದ್ಯಮಶೀಲತ ತರಬೇತಿ ಕಾರ್ಯಕ್ರಮವು ಸಹ ಫೆಬ್ರವರಿ 2005ರಲ್ಲಿ ಏರ್ಪಡಿಸಲಾಗಿದೆ.

ಈ) ವಿರಾಜಪೇಟೆ ತಾಲ್ಲೂಕಿನಲ್ಲಿ 10 ಎಕರೆ ಭೂ ಪ್ರದೇಶದಲ್ಲಿ ಒಂದು ಕೈಗಾರಿಕಾ ವಸಾಹತು ನಿರ್ಮಿಸಲು ಉದ್ದೇಶಸಿದೆ.

415(1095) : ಶ್ರೀ ಬಸವರಾಜ ಹೆಚ್ ಡಿ (ವಿರಾಜಪೇಟೆ) : ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿರುವ ಚಿಕಿತ್ಸಾಲಯಗಳ ಸಂಖ್ಯೆ ಎಷ್ಟು(ತಾಲ್ಲೂಕುವಾರು ವಿವರ ನೀಡುವುದು)

ಆ) ಇವುಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ; ಯಾವ ಸ್ಥಳದ ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಲಾಗುವುದು;

ಇ) ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಸ್ಥಳಗಾಳವುವು ಇದರಲ್ಲಿ ವಿರಾಜಪೇಟೆ ತಾಲ್ಲೂಕಿನ ಯಾವ ಸ್ಥಳದಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ;

ಈ) ಸದರಿ ಆಸ್ಪತ್ರೆಗಳಲ್ಲಿ ಅಗತ್ಯಕ್ಕೆ ಅನುಗುಣವಾಗಿ ವೈದ್ಯರ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು)

ಉ) ಹಾಗಿದ್ದಲ್ಲಿ ಸದರಿ ಹುದ್ದೆಗಳ ನೇಮಕಕ್ಕೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು; ಯಾವಾಗ ನೇಮಕ ಮಾಡಿಕೊಳ್ಳಲಾಗುತ್ತದೆ; ವಿವರ ನೀಡುವುದು ?

ಶ್ರೀ ಮಿರಾಜುದ್ದೀನ್. ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಖಾತೆ ಸಚಿವರು)

ಅ) ಒಟ್ಟಾರೆ ಕೊಡಗು ಜಿಲ್ಲೆಯಲ್ಲಿ 25 ಪಶು ಚಿಕಿತ್ಸಾಲಯಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳ ತಾಲ್ಲೂಕುವಾರು ವಿವರ ಈ ಕೆಳಕಂಡಂತೆ ಇರುತ್ತದೆ.

ವಿವರ	ಮಡಿಕೇರಿ	ಸೋಮವಾರಪೇಟೆ	ವಿರಾಜಪೇಟೆ	ಒಟ್ಟು
ಪಶು ಚಿಕಿತ್ಸಾಲಯ	6	8	11	25

ಆ) ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸುವ ಕಾರ್ಯಕ್ರಮವಿರುವುದಿಲ್ಲ. ಉದ್ಭವಿಸುವುದಿಲ್ಲ.

ಇ) ಹೊಸ ಪಶುವೈದ್ಯಕೀಯ ಸಂಸ್ಥೆಗಳನ್ನು ಪ್ರಾರಂಭಿಸು ಕಾರ್ಯಕ್ರಮ ಇರುವುದಿಲ್ಲ ಉದ್ಭವಿಸುವುದಿಲ್ಲ.

ಈ) ಬಂದಿದೆ

ತಾಲ್ಲೂಕುವಾರು ಖಾಲಿ ಹುದ್ದೆಗಳ ವಿವರ ಈ ಕೆಳಕಂಡಂತೆ ಇದೆ.

ವಿವರ	ಮಡಿಕೇರಿ	ಸೋಮವಾರಪೇಟೆ	ವಿರಾಜಪೇಟೆ	ಒಟ್ಟು
ಪಶು ವೈದ್ಯಾಧಿಕಾರಿ	2	5	5	12
ಪಶು ವೈದ್ಯಕೀಯ ಪರೀಕ್ಷಕರು	9	6	11	26
ಪಶುವೈದ್ಯಕೀಯ ಸಹಾಯಕರು	1	–	–	1
ಡಿ ದರ್ಜೆ	5	3	13	21
ಒಟ್ಟು	17	14	29	60

ಉ) ರಾಜ್ಯದಲ್ಲಿ 250 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ವಿಶೇಷ ನೇರ ನೇಮಕಾ ನಿಯಮದಡಿ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆ ಅಂತಿಮ ಹಂತದಲ್ಲಿ ಇದೆ. ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ 192 ಪಶುವೈದ್ಯಾಧಿಕಾರಿಗಳ ಸೇವೆಯನ್ನು ಸಕ್ರಮಗೊಳಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಪಶುವೈದ್ಯಕೀಯ ಪರೀಕ್ಷಕ ಹುದ್ದೆಗಳನ್ನು ಪಶುವೈದ್ಯಕೀಯ ಸಹಾಯಕರ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ, ಪಶುವೈದ್ಯಕೀಯ ಪರೀಕ್ಷೆ ಹುದ್ದೆಗಳನ್ನು ಡಿ ದರ್ಜೆಯ ಖಾಲಿ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ಮತ್ತು ಇತರೆ ಇಲಾಖೆಗಳಿಂದ ಮರು ವಿನ್ಯಾಸ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

416(1123) : ಶ್ರೀ ಬಸವರಾಜು. ಹೆಚ್.ಡಿ.(ವಿರಾಜಪೇಟೆ) : ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕಿನಲ್ಲಿ ರೇಷ್ಮೆ ಉತ್ಪಾದನೆಗೆ ತಾಲ್ಲೂಕಿನಲ್ಲಿ ರೇಷ್ಮೆ ಉತ್ಪಾದನೆಗೆ ಪೂರಕವಾದ ಬಿದಿರು ಸಾಮಗ್ರಿಗಳ ಖರೀದಿಯಲ್ಲಿ ಪಾರದರ್ಶಕತೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮವೇನು ;

ಇ) ಖರೀದಿಯಿಂದಾಗಿ ಪರಿಶಿಷ್ಟವರ್ಗದ ಮೇಧ ಕುಟುಂಬದವರಿಗೆ ತೊಂದರೆಯಾಗುತ್ತಿರುವುದು ನಿಜವೇ ;

ಈ) ಹಾಗಿದ್ದಲ್ಲಿ, ಪರಿಶಿಷ್ಟ ವರ್ಗದ ಮೇಧ ಸಮಾಜದ ಸೊಸೈಟಿಗಳಿಂದ ಸಾಮಗ್ರಿ ಖರೀದಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಚೆನ್ನಿಗಪ್ಪ (ರೇಷ್ಮೆ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

417 : ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲ್ಗಘಗಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆ, ಕಲಘಟಗಿ ವಿಧಾನಸಭಾ ಕ್ಷೇತ್ರ, ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಿರುವ ಗಂಗಾ ಕಲ್ಯಾಣ ಯೋಜನೆಯ ಫಲಾನುಭವಿಗಳ ವಿವರಗಳನ್ನು ತಿಳಿಸುವುದು; ಫಲಾನುಭವಿಗಳು ಯಾರು ಯಾರು ;

ಆ) ಇದರಲ್ಲಿ ಪರಿಶಿಷ್ಟ ಜಾತಿ, ಹಾಗೂ ಹಿಂದುಳಿದ ವರ್ಗಗಳ ಫಲಾನುಭವಿಗಳು ಯಾರು ಮತ್ತು ಇವರುಗಳಿಗೆ ನೀಡಿರುವ ಯೋಜನೆಯ ಸೌಲಭ್ಯಗಳೇನು;

ಇ) ಈ ಕ್ಷೇತ್ರವು ಮಲನಾಡು ಪ್ರದೇಶಾಭಿವೃದ್ಧಿ ಮಂಡಳಿಯ ವ್ಯಾಪ್ತಿಗೊಳಪಡುವುದರಿಂದ ಇದರ ಮೂಲಕ ಸದರಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆಯೇ;

ಈ) ಪ್ರಸ್ತುತ ಸಾಲಿನಲ್ಲಿ ಇದಕ್ಕಾಗಿ ಗುರುತಿಸಿರುವ ಫಲಾನುಭವಿಗಳ ಸಂಖ್ಯೆ ಎಷ್ಟು?

ಡಾ: ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಫಲಾನುಭವಿಗಳ ಪಟ್ಟಿಯನ್ನು ಅನುಬಂಧ–1,2 ಮತ್ತು 3 ರಲ್ಲಿ ತೋರಿಸಲಾಗಿದೆ.

ಆ) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಫಲಾನುಭವಿಗಳ ಪಟ್ಟಿಯನ್ನು ಅನುಬಂಧ–1 ರಲ್ಲಿ ಮತ್ತು ಹಿಂದುಳಿದ ವರ್ಗಗಳ ಪಟ್ಟಿಯನ್ನು ಅನುಬಂಧ–2 ರಲ್ಲಿ ತೋರಿಸಲಾಗಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಯವರಿಗೆ–62 ಕೊಳವೆ ಬಾವಿಗಳನ್ನು ಮತ್ತು ಪರಿಶಿಷ್ಟ ವರ್ಗದವರಿಗೆ 13 ಒಟ್ಟು 75 ಕೊಳವೆ ಬಾವಿಗಳನ್ನು ಕೊರೆಸಲಾಗಿದೆ;

ಗಂಗಾ ಕಲ್ಯಾಣ ಸಾಮೂಹಿಕ ನೀರಾವರಿ ಕೊಳವೆ ಬಾವಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಯವರಿಗೆ–4 ಮತ್ತು ಪರಿಶಿಷ್ಟ ವರ್ಗದವರಿಗೆ–4 ಒಟ್ಟು–8 ಕೊಳವೆ ಬಾವಿಗಳನ್ನು ಕೊರೆಸಲಾಗಿದೆ.

ಹಿಂದುಳಿದವರ್ಗಗಳ ಅಭಿವೃದ್ಧಿ ನಿಗಮ ಹಿಂದುಳಿದ ವರ್ಗಗಳ ಫಲಾನುಭವಿಗಳ ವಿವರಗಳನ್ನು ಅನುಬಂಧ–2ರಲ್ಲಿ ತಿಳಿಸಲಾಗಿದೆ. ವೈಯಕ್ತಿಕ ಕೊಳವೆ ಬಾವಿ ಯೋಜನೆಯ ಫಲಾನುಭವಿಗಳಿಗೆ ಘಟಕದ ಮೊತ್ತು ರೂ. 65,000/– ಗಳ ಮಿತಿಯಲ್ಲಿ ಕೊಳವೆ ಬಾವಿ ಕೊರೆಯಿಸಿ, ಪಂಪು ಮೋಟಾರು ಸರಬರಾಜು ಮಾಡಲಾಗಿರುತ್ತದೆ. ಸಾಮೂಹಿಕ ಗಂಗಾ ಕಲ್ಯಾಣ ಯೋಜನೆಯಲ್ಲಿ 1999–2000 ರಿಂದ 2003–04ನೇ ಸಾಲಿನವರೆಗೆ ಕೈಗೊಂಡ 4 ಘಟಕಗಳ ಪೈಕಿ 2 ಘಟಕಗಳಲ್ಲಿ ಯೋಜನೆಗೆ ನಿಗದಿಪಡಿಸಿದ ಘಟಕದ ಮೊತ್ತ 2.53 ಲಕ್ಷಗಳಿಂದ ಪ್ರತಿ ಘಟಕದಲ್ಲಿ ಎರಡು ಕೊಳವೆ ಬಾವಿ ಕೊರೆಯಿಸಿ ಪಂಪು ಮೋಟಾರು ಸರಬರಾಜು ಮಾಡಲಾಗಿರುತ್ತದೆ ಹಾಗೂ ಯೋಜನೆಯ ನಿಯಮಾನುಸಾರ ಪ್ರತಿ ಕೊಳವೆ ಬಾವಿಗೆ ರೂ. 25,000/– ರಂತೆ ವಿದ್ಯುತ್ ಮಂಜೂರಾತಿಗೆ ಭದ್ರತಾ ಠೇವಣಿ ಪಾವತಿಸಲಾಗಿರುತ್ತದೆ.

ಉಳಿದ 2 ಘಟಕಗಳ ವ್ಯಾಪ್ತಿಗೆ ಒಳಪಡುವ ಜಮೀನಿನ ವಿಸ್ತೀರ್ಣ 15 ಎಕರೆಗಿಂತ ಜಾಸ್ತಿ ಇದ್ದುದರಿಂದ ಯೋಜನೆಯ ಪ್ರಕಾರ 3.59 ಲಕ್ಷದ ಘಟಕದ ಆರ್ಥಿಕ ಮಿತಿಯ ಒಳಗೆ ಮೂರು ಕೊಳವೆ ಬಾವಿಗಳನ್ನು ಕೊರೆಯಿಸಲಾಗಿರುತ್ತದೆ. ಕೊಳವೆ ಬಾವಿಗಳಿಗೆ ಪಂಪು ಮೋಟಾರು ಸರಬರಾಜು ಮಾಡಿ ವಿದ್ಯುತ್ ಠೇವಣಿ ಮೊತ್ತ ರೂ. 25,000/– ಗಳಂತೆ ಪ್ರತಿ ಕೊಳವೆ ಬಾವಿಗೆ ಪಾವತಿಸಲಾಗುತ್ತದೆ.

2004–05ನೇ ಸಾಲಿಗೆ ಸಾಮೂಹಿಕ ನೀರಾವರಿ ಘಟಕದಲ್ಲಿ 3 ಕೊಳವೆ ಬಾವಿಗಳನ್ನು ಹಾಗೂ ವೈಯಕ್ತಿಕ ಕೊಳವೆ ಬಾವಿ ಯೋಜನೆಯಲ್ಲಿ 4 ಕೊಳವೆ ಬಾವಿಗಳನ್ನು ಇತ್ತೀಚೆಗೆ ಅಂದರೆ, ಜನವರಿ 2005ರ ಮಾಹೆಯಲ್ಲಿ ಕೊರೆಯಲಾಗಿರುತ್ತದೆ. ಸದರಿ ಕೊಳವೆ ಬಾವಿಗಳಿಗೆ ಪಂಪು ಮೋಟಾರು ಸರಬರಾಜು ಹಾಗೂ ವಿದ್ಯುತ್ ಠೇವಣಿ ಪಾವತಿಸಲು ಶೀಘ್ರದಲ್ಲಿಯೇ ವ್ಯವಸ್ಥೆ ಮಾಡಲಾಗುವುದು.

ಇ) ಈ ಯೋಜನೆಯನ್ನು ಮಲೆನಾಡು ಅಭಿವೃದ್ಧಿ ಮಂಡಳಿ ಮೂಲಕ ಅನುಷ್ಠಾನಗೊಳಿಸಲಾಗುತ್ತಿಲ್ಲ.

ಈ) ಪ್ರಸಕ್ತ ಸಾಲಿನಲ್ಲಿ 11 ಪರಿಶಿಷ್ಟ ಜಾತಿ ಮತ್ತು 3 ಪರಿಶಿಷ್ಟ ವರ್ಗದವರನ್ನು ಗುರುತಿಸಲಾಗಿದ್ದು, ಒಟ್ಟಾರೆ ಗುರಿಯನ್ನು 14 ಎಂದು ನಿಗಧಿಪಡಿಸಲಾಗಿದೆ. ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ 2004–05ನೇ ಸಾಲಿನಲ್ಲಿ ವೈಯಕ್ತಿಕ ಕೊಳವೆ ಬಾವಿ ಗುರಿ–4 ಮತ್ತು ಸಾಮೂಹಿಕ ನೀರಾವರಿ ಗುರಿ–1 ಎಂದು ನಿಗಧಿಪಡಿಸಿದೆ.

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಪ್ರಸಕ್ತ ಸಾಲಿನಲ್ಲಿ 4 ಫಲಾನುಭವಿಗಳನ್ನು ಆಯ್ಕೆ ಮಾಡಿದೆ.

ಅನುಬಂಧ-1

ವೈಯಕ್ತಿಕ ನೀರಾವರಿ ಬಾವಿ ಯೋಜನೆಯಡಿಯಲ್ಲಿ 1991-92ನೇ ಸಾಲಿನಿಂದ 2000-01 ನೇ ಸಾಲಿನವರೆಗೆ ಪ್ರಗತಿ, ಫಲಾನುಭವಿಗಳ ವಿವರ

ಕ್ರ.ಸಂ.	ಫಲಾನುಭವಿಗಳ ಹೆಸರು ಮತ್ತು ವಿಳಾಸ	ಜಾತಿ ಉಪಜಾತಿ
1991-92		
1	ಈರಪ್ಪ ಶೆಟ್ಟೆಪ್ಪ ದಾದುಗೋಳ ಕಳಸನಕೊಪ್ಪ	ಪ.ಜಾತಿ ಚಲವಾದಿ
2	ಗುಂಡಪ್ಪ ಚನ್ನಪ್ಪ ಸೋಲಾಪುರ ಕಳಸನಕೊಪ್ಪ	ಪ.ಜಾತಿ ಚಲವಾದಿ
	1996-97	
3	ಬಸಪ್ಪ ಕರೆಪ್ಪ ಹರಿಜನ ದಾಸನೂರ	ಪ.ಜಾತಿ ಮಾದರ
4	ಸಿದ್ಧಪ್ಪ ಯಲ್ಲಪ್ಪ ಮಾದರ ಸೋಲಾರಕೊಪ್ಪ	ಪ.ಜಾತಿ ಮಾದರ
5	ಗಂಗವ್ವಾ ಹನುಮಂತಪ್ಪ ತಳವಾರ ಮಡಕಿಹೊನ್ನಳ್ಳಿ	ಪ.ವರ್ಗ ವಾಲ್ಮೀಕಿ
	2000-01	
6	ರೂಪಲಪ್ಪ ಸೋಮಲಪ್ಪ ಲಮಾಣಿ ದೇವಿಕೊಪ್ಪ	ಪ.ಜಾತಿ ಲಂಬಾಣಿ
7	ಪಕೀರಪ್ಪ ನೀಲಪ್ಪ ಲಂಬಾಣಿ ದೇವಿಕೊಪ್ಪ	ಪ.ಜಾತಿ ಲಂಬಾಣಿ
8	ಕಲ್ಲವ್ವ ಕೋಂ ರಾಮಪ್ಪ ಹರಿಜನ ಹಿರೇಹೊನ್ನಳ್ಳಿ	ಪ.ಜಾತಿ ಮಾದರ
9	ಬಾಳಕೃಷ್ಣ ದಾದುಗೋಳ ಕಳಸನಕೊಪ್ಪ	ಪ.ಜಾತಿ ಚಲವಾದಿ
10	ಸಿದ್ಧಪ್ಪ ಶಿವಪ್ಪ ಕಳಸನಕೊಪ್ಪ ದೇವಲಿಂಗನಕೊಪ್ಪ	ಪ.ವರ್ಗ ವಾಲ್ಮೀಕಿ
11	ಪ್ರಕಾಶ ಪಕ್ಕೀರಪ್ಪಾ ಹೊಸಮನಿ ಗುಮ್ಮವಾಡ	ಪ.ಜಾತಿ ಮಾದರ
12	ಶ್ರೀಮತಿ ಮಾಲವ್ವ ರಾಮು ಲಮಾಣಿ ಬಿ. ಶಿಗ್ಗಟ್ಟಿ	ಪ.ಜಾತಿ ಲಂಬಾಣಿ

13	ರಾಮಪ್ಪ ಗೋವಿರಪ್ಪ ಲಮಾಣಿ.	ಪ.ಜಾತಿ.
	ಬಿ. ಶಿಗ್ಗಟ್ಟಿ	ಲಂಬಾಣಿ
14	ಸಂಗಪ್ಪ ಯಲ್ಲಪ್ಪ ಹಂಚಿನಮನಿ	ಪ.ವರ್ಗ
	ಬೇಲವಂತರ	ವಾಲ್ಮೀಕಿ
15	ಮಂಜುನಾಥ ಬಸಪ್ಪ ವಾಲಿಕಾರ	ಪ.ವರ್ಗ
	ದೇವಲಿಂಗನಕೊಪ್ಪ	ವಾಲ್ಮೀಕಿ
16	ಕರವ್ವ ಕರೆಪ್ಪ ಮಾರ	ಪ.ಜಾತಿ
	ಗಂಭ್ಯಾಪುರ	ಮಾದರ

ಕ್ರ.ಸಂ.	ಧಾರವಾಡ ಜಿಲ್ಲೆ : ಕಲಘಟಗಿ ಮತ ಕ್ಷೇತ್ರ ಫಲಾನುಭವಿಗಳ ಹೆಸರು ಮತ್ತು ವಿಳಾಸ	ಜಾತಿ ಉಪಜಾತಿ
	2001–02	
1	ಉಡಚಪ್ಪ ಯಲ್ಲಪ್ಪ ಕಾರಕೋಜಿ, ಗುಮ್ಮಗೋಳ	ಪ.ಜಾತಿ
2	ಸೋಮಪ್ಪ ಹೋಬಣ–ಲಮಾಣಿ, ನಲ್ಲಿಹರವಿ,	ಪ.ಜಾತಿ
3	ಭಿಮಪ್ಪ ರಾಮಪ್ಪ ಲಮಾಣಿ, ಆಸ್ತಿಕಟ್ಟೆ	ಪ.ಜಾತಿ
4	ನರಸಪ್ಪ ಬಸಪ್ಪ ಲಮಾಣಿ, ದೇವಿಕೊಪ್ಪ	ಪ.ಜಾತಿ
5	ಶ್ರೀಮತಿ ರುಕ್ಕವ್ವ ಲಾಲಪ್ಪ ಲಮಾಣಿ, ದೇವಿಕೊಪ್ಪ	ಪ.ಜಾತಿ
6	ಭೊಜಪ್ಪ ಲಾಲಪ್ಪ ಲಮಾಣಿ, ದೇವಿಕೊಪ್ಪ	ಪ.ಜಾತಿ
7	ಮಲ್ಲಪ್ಪ ರಾಮಪ್ಪ ವಾಲೀಕಾರ, ಶಿವನಾಪುರ	ಪ.ವರ್ಗ
8	ದುರ್ಗಪ್ಪ ಯಲ್ಲಪ್ಪ ಮಾದರ, ನೆಲ್ಲಿಹರವಿ	ಪ.ಜಾತಿ
9	ಫಕಿರಪ್ಪ ಬಸಪ್ಪ ಅರಳಿಕಟ್ಟೆ, ನೆಲ್ಲಿಹರವಿ	ಪ.ಜಾತಿ
10	ಬಸವಣೆ–ಪ್ಪ ಕಲ್ಲಪ್ಪ ಕಟ್ಟಿಮನಿ, ಹನುಮಾಪುರ	ಪ.ಜಾತಿ
11	ಹನುಮಂತಪ್ಪ ಮಹದೇವಪ್ಪ ಉಗ್ಗಿನಕೇರಿ	ಪ.ವರ್ಗ
12	ಲಕ್ಷ್ಮಣ ಬಸಪ್ಪ ಎತ್ತಿನಗುಡ್ಡ, ಸುಳಿಕಟ್ಟೆ	ಪ.ವರ್ಗ
13	ಶ್ರೀಮತಿ ನೀಲವ್ವ ದೇವಿಂದ್ರಪ್ಪ ಕಟ್ಟಿಮನಿ	ಪ.ಜಾತಿ
	ದೇವಿಕೊಪ್ಪ	ಮಾರ
14	ಶ್ರೀಮತಿ ಶಂಕ್ರವ್ವ ಸುಭಾಸ ಮಾದರ, ಬಗಡಗೇರಿ	ಪ.ಜಾತಿ
	2001–02	
15	ರಮೇಶ ಬಾಲಪ್ಪ ದೊಡ್ಡಮನಿ, ರಾಮನಾಳ	ಪ.ಜಾತಿ
16	ಪಕಿರಪ್ಪ ಪಕಿರಪ್ಪ ಮಾದರ, ಗುಮ್ಮಗೋಳ	ಪ.ಜಾತಿ
17	ಗುರುಲಿಂಗಪ್ಪ ಬಸಪ್ಪ ಹೊಸಮನಿ, ಗುಮ್ಮಗೋಳ	ಪ.ಜಾತಿ
18	ಈಶ್ವರಪ್ಪ ಬಸಪ್ಪ ಹೊನ್ನಮ್ಮನವರ, ನೀರಸಾಗರ	ಪ.ವರ್ಗ
19	ಕರೆಪ್ಪ ನಿಂಗಪ್ಪ ಕಾಳೆ, ಗಂಭ್ಯಾಪುರ	ಪ.ಜಾತಿ
20	ಸರೋಜಾ ಉಳವಪ್ಪ ಬಿರಳ್ಳಿ, ಗಂಭ್ಯಾಪುರ	ಪ.ಜಾತಿ

21	ಶಿವರುದ್ರಪ್ಪ ರಾಮಪ್ಪ ಕೋರೆ, ಕಳಸನಕೊಪ್ಪ	ಪ.ಜಾತಿ
22	ರಾಮಪ್ಪ ಕಲ್ಲಪ್ಪ ವಾಲಿಕಾರಿ, ತಾವರಗೇರಿ	ಪ.ವರ್ಗ
23	ಸಹದೇವಪ್ಪ ಬಸವಣೆ–ಪ್ಪ ಕಲಘಟಗಿ	ಪ.ಜಾತಿ
	ಮಿಶ್ರಿಕೋಟಿ	ಮೋಚಿಗೇರ
24	ಫಕಿರಪ್ಪ ಲಕ್ಕಪ್ಪ ಹರಿಜನ, ಬಸವನಕೊಪ್ಪ	ಪ.ಜಾತಿ
25	ಸಹದೇವಪ್ಪ ಹನುಮಂತಪ್ಪ ಹರಿಜನ, ಬಸವನೊಪ್ಪ	ಪ.ಜಾತಿ
26	ಲಾಲಪ್ಪ ಲಚಮಪ್ಪ ಲಮಾಣಿ, ಬಿ. ಶಿಗ್ಗಟ್ಟಿ	ಪ.ಜಾತಿ
27	ಬಸಪ್ಪ ಧರ್ಮಪ್ಪ ಹರಿಜನ, ಸೋಲಾರಕೊಪ್ಪ	ಪ.ಜಾತಿ

ಅನುಬಂಧ–1

ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಇದುವರೆವಿಗೆ ಕೊರೆದ ಕೊಳವೆ ಬಾವಿಗಳ ಫಲಾನುಭವಿಗಳ ವಿವರ

ಧಾರವಾಡ ಜಿಲ್ಲೆ : ಕಲಘಟಗಿ ಮತ ಕ್ಷೇತ್ರ

ಕ್ರಮ ಸಂಖ್ಯೆ	ಒಟ್ಟು ಫಲಾನುಭವಿಗಳ ಸಂಖ್ಯೆ	ಕೊಳವೆ ಬಾವಿ ಕೊರೆದ ಫಲಾನುಭವಿಗಳ ಹೆಸರು	ಗ್ರಾಮ	ಜಾತಿ ಉಪಜಾತಿ
1	4	ಮಾರುತಿ ಬಾಲಪ್ಪ ಮುತ್ತನಾಳ	ಕಳಸನಕೊಪ್ಪ	ಮಾದರ
		ಸಾಂಬಾಜಿ ಬಾಲಪ್ಪ ಮುತ್ತನಾಳ	ಕಳಸನಕೊಪ್ಪ	ಮಾದರ
2	6	ಮಹಾದೇವಪ್ಪ ಹೊಳೆಯಪ್ಪ ಅತ್ತಿಮರದ	ಸೋಮನ	ವಾಲ್ಮೀಕಿ
		ಗಂಗಪ್ಪ ಈರಪ್ಪ ತಳವಾರ	ಕೊಪ್ಪ	ವಾಲ್ಮೀಕಿ
3	6	ನೀಲಪ್ಪ ರತ್ನಪ್ಪ ಲಮಾಣಿ	ಶಿಗ್ಗಟ್ಟಿ	ಲಮಾಣಿ
		ಭೋಜಪ್ಪ ಹೊನ್ನಪ್ಪ ಕುರಿ	ಶಿಗ್ಗಟ್ಟಿ	ಲಮಾಣಿ
4	3	ಶ್ರೀಕಾಂತ ಬಸವಂತಪ್ಪ ದಾದಗೋಳ	ಕಳಸನಕೊಪ್ಪಕ	ಚಲುವಾದಿ
		ಬಸವಂತಪ್ಪ ಭರಮಪ್ಪ ದಾದಗೋಳ	ಕಳಸನಕೊಪ್ಪ	
5	6	ಪರಸಪ್ಪ ಭೀಮಪ್ಪ ತಳವಾರ	ಕಾಮಧೇನು	ವಾಲ್ಮೀಕಿ
		ಫಕಿರಪ್ಪ ಗಂಗಪ್ಪ ತಳವಾರ	ಕಾಮಧೇನು	ವಾಲ್ಮೀಕಿ
6	3	ರತ್ನಪ್ಪ ರೂಪಣ್ಣ ಲಮಾಣಿ	ದೇವಿಕೊಪ್ಪ	ಲಮಾಣಿ
		ಜಯರಾಮ ರೂಪಣ್ಣ ಲಮಾಣಿ	ದೇವಿಕೊಪ್ಪ	ಲಮಾಣಿ
7	6	ಗುರಪ್ಪಾ ಈರಪ್ಪ ದಾದುಗೋಳ	ಕಳಸನಕೊಪ್ಪ	ಚಲುವಾದಿ
		ಬಸವಣೆಪ್ಪ ಈರಪ್ಪ ದಾದುಗೋಳ	"	"
		ಅಣ್ಣಪ್ಪ ಈರಪ್ಪ ದಾದುಗೋಳ	"	"
8	4	ಯಶವಂತ ದಾನಪ್ಪ ಲಮಾಣಿ	ಬಿ.ಶಿಗ್ಗಟ್ಟಿ	ಲಮಾಣಿ
		ವಾಚಪ್ಪ ಬಾನಪ್ಪ ಲಮಾಣಿ	"	"

ಅನುಬಂಧ-1.

ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಇದುವರೆವಿಗೆ ಕೊರೆದ ಕೊಳವೆ ಬಾವಿಗಳ ಫಲಾನುಭವಿಗಳ ವಿವರ

ಧಾರವಾಡ ಜಿಲ್ಲೆ : ಕಲಘಟಗಿ ಮತ ಕೇತ್ರ

ಕ್ರಮ ಸಂಖ್ಯೆ	ಒಟ್ಟು ಫಲಾನುಭವಿಗಳ ಸಂಖ್ಯೆ	ಕೊಳವೆ ಬಾವಿ ಕೊರೆದ ಫಲಾನುಭವಿಗಳ ಹೆಸರು	ಗ್ರಾಮ	ಜಾತಿ ಉಪಜಾತಿ
1	4	ಮಾರುತಿ ಬಾಲಪ್ಪ ಮುತ್ತನಾಳ	ಕಳಸನಕೊಪ್ಪ	ಮಾದರ
		ಸಾಂಬಾಜಿ ಬಾಲಪ್ಪ ಮುತ್ತನಾಳ	ಕಳಸನಕೊಪ್ಪ	ವಾಲ್ಮೀಕಿ
2	6	ಮಹಾದೇವಪ್ಪ ಹೊಳೆಯಪ್ಪ ಅತ್ತಿಮರದ	ಸೋಮನ	ವಾಲ್ಮೀಕಿ
		ಗಂಗಪ್ಪ ಈರಪ್ಪ ತಳವಾರ	ಕೊಪ್ಪ	ವಾಲ್ಮೀಕಿ
3	6	ನೀಲಪ್ಪ ರತ್ನಪ್ಪ ಲಮಾಣಿ	ಶಿಗ್ಗಟ್ಟಿ	ಲಮಾಣಿ
		ಭೋಜಪ್ಪ ಹೊನ್ನಪ್ಪ ಕುರಿ	ಶಿಗ್ಗಟ್ಟಿ	ಲಮಾಣಿ
4	3	ಶ್ರೀಕಾಂತ ಬಸವಂತಪ್ಪ ದಾದಗೋಳ	ಕಳಸನಕೊಪ್ಪ	ಲಮಾಣಿ
		ಬಸವಂತಪ್ಪ ಭರಮಪ್ಪ ದಾದಗೋಳ	ಕಳಸನಕೊಪ್ಪ	
5	6	ಪರಸಪ್ಪ ಭೀಮಪ್ಪ ತಳವಾರ	ಕಾಮಧೇನು	ವಾಲ್ಮೀಕಿ
		ಫಕೀರಪ್ಪ ಗಂಗಪ್ಪ ತಳವಾರ	ಕಾಮಧೇನು	ವಾಲ್ಮೀಕಿ
6	3	ರತ್ನಪ್ಪ ರೂಪಣ್ಣ ಲಮಾಣಿ	ದೇವಿಕೊಪ್ಪ	ಲಮಾಣಿ
		ಜಯರಾಮು ರೂಪಣ್ಣ ಲಮಾಣಿ	ದೇವಿಕೊಪ್ಪ	ಲಮಾಣಿ
7	6	ಗುರಪ್ಪಾ ಈರಪ್ಪ ದಾದುಗೋಳ	ಕಳಸನಕೊಪ್ಪ	ಚಲುವಾದಿ
		ಬಸವಣೆಪ್ಪ ಈರಪ್ಪ ದಾದುಗೋಳ	"	"
		ಅಣ್ಣಪ್ಪ ಈರಪ್ಪ ದಾದುಗೋಳ	"	"
8	4	ಯಶವಂತ ದಾನಪ್ಪ ಲಮಾಣಿ	ಬಿ.ಶಿಗ್ಗಟ್ಟಿ	ಲಮಾಣಿ
		ವಾಚಪ್ಪ ದಾನಪ್ಪ ಲಮಾಣಿ		

ಕ್ರ.ಸಂ.	ಧಾರವಾಡ ಜಿಲ್ಲೆ : ಕಲಘಟಗಿ ಮತ ಕ್ಷೇತ್ರ ಫಲಾನುಭವಿಗಳ ಹೆಸರು ಮತ್ತು ವಿಳಾಸ	ಜಾತಿ ಉಪಜಾತಿ
	2002-03	
1	ಯಲ್ಲಪ್ಪ ಕಲ್ಲಪ್ಪ ಭಗೋಳ, ಕಣಸನಕೊಪ್ಪ	ಪ.ಜಾತಿ, ಚಲುವಾದಿ
2	ರಾಮಪ್ಪ ರತ್ನಪ್ಪ ಲಮಾಣಿ, ಬಿ. ಶಿಗ್ಗಟ್ಟಿ	ಪ.ಜಾತಿ. ಲಮಾಣಿ
3	ರತ್ನಪ್ಪ ಗೋವಿರಪ್ಪ ಲಮಾಣಿ, ಬಿ. ಶಿಗ್ಗಟ್ಟಿ	ಪ.ಜಾತಿ. ಲಮಾಣಿ
4	ಪಾರವ್ವ ಹನುಮಂತಪ್ಪ ಧಾರವಾಡ	ಪ.ವರ್ಗ
5	ಭೀಮಪ್ಪ ಶೆಟ್ಟೆಪ್ಪ ಅಲಗೂರ, ಹುಲಗಿಕೊಪ್ಪ	ಪ.ಜಾತಿ. ಚಲುವಾದಿ

143-27

6	ಕಲ್ಲಪ್ಪ ಪರಸಪ್ಪ ತಳವಾರ, ಅರಳೇಹೊಂಡ	ಪ.ವರ್ಗ. ವಾಲ್ಮೀಕಿ
7	ನಿಂಗವ್ವ ಫಕಿರಪ್ಪ ಮಾದರ, ದಾಸ್ತಿಕೊಪ್ಪ	ಪ.ಜಾತಿ, ಮಾದರ
8	ಶಂಕರ ಶೆಟ್ಟೆಪ್ಪ ಭಗೋಳ, ಕಳಸನಕೊಪ್ಪ	ಪ.ಜಾತಿ. ಚಲುವಾದಿ
9	ಲಕ್ಕಪ್ಪ ಕೂಬಪ್ಪ ಲಮಾಣಿ, ಬಿ. ಶಿಗ್ಗಟ್ಟಿ	ಪ.ಜಾತಿ. ಲಮಾಣಿ
10	ಭೀಮಪ್ಪ ಪಕಿರಪ್ಪ ಬಸರಿಕೊಪ್ಪ ಗುಮ್ಮಾವಾಡ	ಪ.ವರ್ಗ. ವಾಲ್ಮೀಕಿ
11	ಯಲ್ಲಪ್ಪ ಅಪ್ಪಣ-ವಾಲಿಕಾರ, ಜೋಡಳ್ಳಿ	ಪ.ವರ್ಗ, ವಾಲ್ಮೀಕಿ
12	ಲೋಕಪ್ಪ ದಾನಪ್ಪ ಲಮಾಣೀ, ಬಿ. ಶಿಗ್ಗಟ್ಟಿ	ಪ.ಜಾತಿ. ಲಮಾಣಿ
13	ಬಸಪ್ಪ ಕರೆಪ್ಪ ಮೇತ್ರಿ, ಶಿವನಾಪುರ	ಪ.ಜಾತಿ. ಮಾದರ
	2003–04	
1	ಶಂಕ್ರಪ್ಪ ದ್ಯಾಮಣ್ಣ-ಕಿಳ್ಳಿಕ್ಯಾತರ, ಹಿಂಡಸಗೇರಿ	ಪ.ಜಾತಿ. ಶಿಳ್ಳಿಕ್ಯಾತರ
2	ಮರೆಪ್ಪ ಧರ್ಮಪ್ಪ ಭಜಂತ್ರಿ, ಪರಸಾಪುರ	ಪ.ಜಾತಿ. ಕೊರಮ
3	ನಾಗವ್ವ ಲಚಮಪ್ಪ ಲಮಾಣಿ, ಬಿ. ಶಿಗ್ಗಟ್ಟಿ	ಪ.ಜಾತಿ. ಬಿ. ಶಿಗ್ಗಟ್ಟಿ
4	ಯಮುನಪ್ಪ ಮೇಲಗಿರಿಯಪ್ಪ ಅವಧಿ. ಸಿಂಗನಹಳ್ಳಿ	ಪ.ಜಾತಿ, ಚಲುವಾದಿ
5	ಶಿವಪ್ಪ ಗಂಗಪ್ಪ ಲಮಾಣಿ, ದೇವಿಕೊಪ್ಪ	ಪ.ಜಾತಿ, ಲಮಾಣಿ
6	ಲೋಕಪ್ಪ ತಿಪ್ಪಣ-ಲಮಾಣಿ ದೇವಿಕೊಪ್ಪ ತಾಂಡಾ	ಪ.ಜಾತಿ ಲಮಾಣಿ
7	ಬಸಪ್ಪ ಫಕೀರಪ್ಪ ಮೇತ್ರಿ, ನಾಗನೂರ	ಪ.ಜಾತಿ. ಮಾದರ
8	ಗೋಪಾಲ ನಿಂಗಪ್ಪ ವಡ್ಡರ ಅರೇಬಸವನಕೊಪ್ಪ	ಪ.ಜಾತಿ, ಬೋವಿ ಭೋವಿ
9	ಸಂಜೀವ ಮಲ್ಲಪ್ಪ ಸಾಂಬ್ರಾಣಿ, ಗುಮ್ಮಾವಾಡ	ಪ.ಜಾತಿ, ಸಮಗಾರ
10	ಗುರುಸಿದ್ದಪ್ಪ ಮರೆಪ್ಪ ಮೇಲಿನಮನಿ ರಾಮಾಪುರ	ಪ.ಜಾತಿ ಮಾದರ

ಅನುಬಂಧ-2

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಚಿಕ್ಕನಗೌಡರ ಸಿದ್ದನಗೌಡರ ಈಶ್ವರಗೌಡ(ಕಲ್ಘಟಗಿ) ಅವರ ಪ್ರಶ್ನೆ ಸಂಖ್ಯೆ 923ರ ಅನುಬಂಧ

ಕಲಘಟಗಿ ವಿಧಾನಸಭಾ ಕ್ಷೇತ್ರದಲ್ಲಿ 1999–00ನೇ ಸಾಲಿನಿಂದ 2004–05 ಸಾಲಿನವರೆಗೆ ಗಂಗಾಕಲ್ಯಾಣ ಯೋಜನೆಯಲ್ಲಿ ಸೌಲಭ್ಯ ನೀಡಿರುವ ಫಲಾನುಭವಿಗಳ ವಿವರ

ಕ್ರ. ಸಂ.	ವರ್ಷ	ಫಲಾನುಭವಿಗಳ ಹೆಸರು	ಗ್ರಾಮ	ಜಾತಿ
		ಸಾಮೂಹಿಕ ಕೊಳವೆ ಬಾವಿಗಳು		
1	1999–2000	ಶಂಕರೆಗೌಡ ಫಕೀರಗೌಡ ಹಿರೇಬೀದಿ	ಮುತ್ತಗಿ	ಲಿಂಗಾಯಿತ
		ಗೂಪ್ಪ ಫಕೀರಪ್ಪ ಡಂಬಳ	ಮುತ್ತಗಿ	ಲಿಂಗಾಯಿತ
		ಕಲ್ಲಪ್ಪ ಶಂಕ್ರಪ್ಪ ಮುಂಗೋಜಿ		ಲಿಂಗಾಯಿತ
		ವೈಯಕ್ತಿಕ ಕೊಳವೆ ಬಾವಿಗಳು		
		–	–	–
2	2000–01	–	–	–

		ವೈಯಕ್ತಿಕ ಕೊಳವೆ ಬಾವಿಗಳು		
		ಫಕೀರಪ್ಪ ಉಮ್ಮಪ್ಪ ಗೌಳಿ	ರಾಮನಾಳ	ಕುರುಬ
		ಚನ್ನ ಬಸಪ್ಪ ಭಿಮಪ್ಪ ಧರಣ್ಣವರ	ಜನ್ನಾರು	ಹಾಲಮತ
		ಸಾಮೂಹಿಕ ಕೊಳವೆ ಬಾವಿಗಳು		
	2001–02	ಕಲ್ಲಪ್ಪ ಬಸವಣ್ಣಪ್ಪ ದರೂರೆ	ಗಂಜೀವಟ್ಟಿ	ಲಿಂಗಾಯಿತ
		ಬಸಪ್ಪ ಈಶ್ವರಪ್ಪ ದರೂರ	ಗಂಜೀವಟ್ಟಿ	ಲಿಂಗಾಯಿತ
		ವಿರೂಪಾಕ್ಷಪ್ಪ ದರೂರೆ	ಗಂಜೀವಟ್ಟಿ	ಲಿಂಗಾಯಿತ
		ವೈಯಕ್ತಿಕ ಕೊಳವೆ ಬಾವಿಗಳು		
		ನಿಂಗಪ್ಪ ತಮ್ಮಣ್ಣ ನುಗ್ಗಿಕೇರಿ	ದೇವಿಕೊಪ್ಪ	ಸುಣಗಾರ
		ಗುರುನಾಥ ಈರಪ್ಪ ಕಮ್ಮಾರ	ಬೀರವಳ್ಳಿ	ಪಂಚಾಳ
		ಸಾಮೂಹಿಕ ಕೊಳವೆ ಬಾವಿಗಳು		
4	2002–03	ವೀರನಗೌಡ ಶಂಕರಗೌಡ ಪಾಟೀಲ	ಕಾಮಧೇನು	ಸಾದರು
		ರಾಮಪ್ಪ ಮಹಾದೇವಪ್ಪ ಉಣಕಲ್	ಕಾಮಧೇನು	ಕುರುಬ
		ಭರಮೆಗೌಡ ಶಂಕರಗೌಡ ಪಾಟೀಲ್		ಸಾದರು
		ವೈಯಕ್ತಿಕ ಕೊಳವೆ ಬಾವಿಗಳು		
		ಸಾವಕ್ಕ ಪರಸಪ್ಪ ಲಕ್ಕಣ್ಣನವರ	ದೇವಿಕೊಪ್ಪ	ಅಂಬಿಗ
		ವಿಠ್ಠಲ ಫಕೀರಪ್ಪ ನಿಗದಿ	ರಾಮನಾಳ	ಕ್ಷತ್ರಿಯ
		ಸಾಮೂಹಿಕ ಕೊಳವೆ ಬಾವಿಗಳು		
5	2003–04	ಫಕೀರಪ್ಪ ಚನ್ನಬಸಪ್ಪ ತಿಗಡಿ	ಬಮ್ಮಿಗಟ್ಟಿ	ಲಿಂಗಾಯಿತ
		ಶಂಕ್ರಪ್ಪ ಚನ್ನಬಸಪ್ಪ ತಿಗಡಿ	ಬಮ್ಮಿಗಟ್ಟಿ	ಲಿಂಗಾಯಿತ
		ಚಂದ್ರಶೇಖರ ಚನ್ನಬಸಪ್ಪ ತಿಗಡಿ	ಬಮ್ಮಿಗಟ್ಟಿ	ಲಿಂಗಾಯಿತ
		ಗಂಗಪ್ಪ ಚನ್ನಬಸಪ್ಪ ತಿಗಡಿ		ಲಿಂಗಾಯಿತ
		ವೈಯಕ್ತಿಕ ಕೊಳವೆ ಬಾವಿಗಳು		
		ಗೋವಿಂದಪ್ಪ ಬ. ಹೊನ್ನಿಹಳ್ಳಿ	ಧೂಳಿಕೊಪ್ಪ	ಕಬ್ಬೇರ
		ಮಲ್ಲಪ್ಪ ವೀರಟಗಿ	ಬುಡರಸಂಗ	ಕುರುಬ
		ಸಾಮೂಹಿಕ ಕೊಳವೆ ಬಾವಿಗಳು		
6	2004–05	ಮಲ್ಲಪ್ಪ ಚನ್ನಪ್ಪ ಸಪಡ್ಲ.	ಬೆಂಡಲಗಟ್ಟಿ	ಲಿಂಗಾಯಿತ
		ಈರಪ್ಪ ಮಲ್ಲಪ್ಪ ಸಪಡ್ಲ	ಬೆಂಡಲಗಟ್ಟಿ	ಲಿಂಗಾಯಿತ
		ಚೆನ್ನಪ್ಪ ಮಲ್ಲಪ್ಪ ಸಪಡ್ಲ.	ಬೆಂಡಲಗಟ್ಟಿ	ಲಿಂಗಾಯಿತ
		ವೈಯಕ್ತಿಕ ಕೊಳವೆ ಬಾವಿಗಳು		
		ರಾಮಪ್ಪ ಬಸಪ್ಪ ಕಬ್ಬಾರ	ಯಮ್ಮಿವಾಡ	ಕುರುಬ
		ಮುಡಿಯಪ್ಪ ಮಂ. ಪಾಟೀಲ	ಅರಳಿಕಟ್ಟೆ	ಲಿಂಗಾಯಿತ
		ಈರಪ್ಪ ನಿಂಗಪ್ಪ ಬಡಿಗೇರ	ಕರಡೀಕೊಪ್ಪ	ಪಂಚಾಳ
		ಫಕೀರಪ್ಪ ಮು. ಪಾಟೀಲ		

ಅನುಬಂಧ-3

List of beneficiaries benifited in Kataghatgi Taluk under Ganga Kalyana

SL. NO.	Name of the Beneficiaries	Village	Taluk
1	Ishwarappa B. Navalur	B. Gudihal	Kalaghatgi
2	Mohammed Ismail Bahadur	Tabakada Honnalli	Kalaghatgi
3	Dawalsab M. Kumbar	Jemminal	Kalghatgi
4	Husainsab M. Shetasanadi	Dasanur	Kalghatgi
5	Eshwarappa Shinganhalli	Banagitti Gudihal	Kalghatgi
6	Babasab Hazresab Jemmihal	Banagitti Gudihal	Kalghatgi
7	Mohammed Ali Peer Sab Attar	Dalikoppa	Kalghatgi
8	Magthumsab Immamsab Walikar	Kamadhenu	Kalghatgi
9	Imam Sab Gathar Sab Kumbar	Jammihal	Kalaga tagi
10	Bharamppa Basappa Kati	Surashetti Koppa	Kalaga tagi
11	Santhosh Sabash Rangoli	Kalagatagi	Kalaga tagi
12	Daniel Jinappa Dupad	Kalagatagi	Kalaga tagi
12	Daniel Jinappa Dupad	Kalagatagi	Kalaga tagi
13	Jayappal jeenappa Budappanavar	Dummawad	Kalaga tagi
14	Chandrakanth G. Badappanavar	Dumawad	Kalagadgi
15	Jeenappa Bhimappa	B. Gudhal	Kalagadgi
16	Anatappa neeralakatta	Dumawad	Kalagadgi
17	Basappa M. Narendra	Gandayapure	Kalagadgi
18	Ashoka B. Shabhanavar	Kalagatagi	Kalagadgi
19	Mahaveer G. Balikaee	Kalagatagi	Kalagadgi

418(301) : ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) : ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ರೇಷ್ಮೆ ಗೂಡಿನ ಬೆಲೆ ವಿಪರೀತ ಕಡಿಮೆಯಾಗಿ ರೇಷ್ಮೆ ಬೆಳೆಗಾರರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದರೆ, ಸರ್ಕಾರ ರೇಷ್ಮೆ ಬೆಳೆಗೆ ಬೆಂಬಲ ಬೆಲೆ ನೀಡಲು ಕ್ರಮ ಕೈಗೊಂಡಿದೆಯೇ ?

ಶ್ರೀ ಚೆನ್ನಿಗಪ್ಪ (ರೇಷ್ಮೆ ಸಚಿವರು)

ಅ) ಅಂತಹ ಪರಿಸ್ಥಿತಿ ಇಲ್ಲ

ಆ) ಉದ್ಭವಿಸುವುದಿಲ್ಲ.

419(909) : ಶ್ರೀ ಧ್ರುವ ನಾರಾಯಣ ಆರ್ (ಸಂತೇಮರಹಳ್ಳಿ) : ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಂತೇಮರಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ ಜಾನುವಾರಗಳ ಸಂಖ್ಯೆಗನುಗುಣವಾಗಿ ಪಶು ಚಿಕಿತ್ಸಾ ಕೇಂದ್ರಗಳಿಲ್ಲದಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಹೆಚ್ಚಿನ ಪಶು ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದಿದೆಯೇ;

ಇ) ಇದ್ದರೆ, ಈ ಬಗ್ಗೆ ಏಂದು ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಖಾತೆ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

420(921) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಿಲ್ಲೆಯ ಆರ್ಥಿಕ ಉನ್ನತಿಯ ಉದ್ದೇಶದಿಂದ ವಾರಾಹಿ ನೀರಾವರಿ ಯೋಜನೆಯ ಅನುಷ್ಠಾನದ ಆಧಾರದಲ್ಲಿ ಆರಂಭಿಸಲಾದ ಬ್ರಹ್ಮಾವಾರ ಸಕ್ಕರೆ ಕಾರ್ಖಾನೆಯನ್ನು ಮುಚ್ಚಲು ಸರ್ಕಾರ ಉದ್ದೇಶಿಸಿದೆಯೇ;

ಆ) ಕೊರತೆಯಿಂದಾಗಿ ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಮುಚ್ಚುವ ಪರಿಸ್ಥಿತಿಗೆ ಬಂದಿರುವುದರಿಂದ ವರಾಹಿ ನೀರಾವರಿ ಯೋಜನೆಗೆ ಚಾಲನೆ ಕೊಟ್ಟು ರೈತರ ಪಾಲಿಗೆ ಇರುವ ಏಕೈಕ ಸಕ್ಕರೆ ಕಾರ್ಖಾನೆಯನ್ನು ಪುನಃಶ್ಚೇತನಗೊಳಿಸಿ ಉಳಿಸಿಕೊಳ್ಳಲಾಗುವುದೇ;

ಇ) ರೈತರು ಕಾರ್ಖಾನೆಗೆ ಪೂರೈಸಿದ ಕಬ್ಬು ಎಷ್ಟು ಹಣ ಪಾವತಿಸಲು ಬಾಕಿ ಇದೆ ಹಾಗೂ ಯಾವಾಗ ಪಾವತಿಸಲಾಗುವುದು; (ವರ್ಷಾವಾರು ವಿವರ ನೀಡುವುದು)

ಈ) ಸಕ್ಕರೆ ಕಾರ್ಖಾನೆ ಮುಚ್ಚುವುದೇ ಅದಲ್ಲಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಬದಲಿ ವ್ಯವಸ್ಥೆಯನ್ನು ಕಲ್ಪಿಸಲಾಗುವುದೇ;

ಉ) ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಈ ಕಾರ್ಖಾನೆಯು ಮುಚ್ಚಲು ಯಾವುದೇ ಅಂತಹ ಪ್ರಸ್ತಾವನೆ ಸಧ್ಯಕ್ಕೆ ಪರಿಶೀಲನೆಯಲ್ಲಿ ಇರುವುದಿಲ್ಲ.

ಆ) ಈ ಕಾರ್ಖಾನೆಯ ಪುನಶ್ಚೇತನದ ಬಗ್ಗೆ ಸೂಕ್ತ ಸಲಹೆ ನೀಡಲು ಜಿಲ್ಲಾಧಿಕಾರಿಗಳು ಉಡುಪಿ ಇವರ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದುದ, ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಕಾರ್ಖಾನೆಯು ರೂ. 312.00 ಲಕ್ಷ ಹಣವನ್ನು ಕಬ್ಬು ಪೂರೈಕೆ ಮಾಡಿದ ರೈತರಿಗೆ ಪಾವತಿಸಲು ಬಾಕಿ ಇರುತ್ತದೆ. ಈ ಬಾಕಿಯ ವರ್ಷಾವಾರು ವಿವರ ಈ ಕೆಳಗಿನಂತಿದೆ.

2001-02 - 96.00 ಲಕ್ಷ

2002-03 - 216.00 ಲಕ್ಷ

ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

421(310) : ಶ್ರೀ ಹೆಚ್. ಹಾಲಪ್ಪ (ಹೊಸನಗರ) : ಮಾನ್ಯ ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಪೇಪರ್ ಮಿಲ್ಸ್ ಕಾರ್ಖಾನೆಯು ಮುಚ್ಚುವ ಸ್ಥಿತಿಯಲ್ಲಿದೆಯೇ;

ಆ) ಮುಚ್ಚಿದಲ್ಲಿ ನೌಕರರ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುವುದು(ವಿವರ ಕೊಡುವುದು)?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್. ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

423(209) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಕೇಂದ್ರ ಸರ್ಕಾರವು ಸಮಾಜ ಕಲ್ಯಾಣ ಇಲಾಖೆಗೆ ಯಾವ ಯಾವ ಯೋಜನೆಯಡಿ ಎಷ್ಟೆಷ್ಟು ಅನುದಾನ ಒದಗಿಸಿದೆ; (ಯೋಜನೆವಾರು, ವರ್ಷವಾರು ವಿವರ ನೀಡುವುದು);

ಆ) ಈ ಹಣಕ್ಕೆ ರಾಜ್ಯ ಸರ್ಕಾರವು ಎಷ್ಟು ಮ್ಯಾಚಿಂಗ್ ಗ್ರಾಂಟನ್ನು ನೀಡಬೇಕಿತ್ತು ಹಾಗೂ ಎಷ್ಟು ಮ್ಯಾಚಿಂಗ್ ಗ್ರಾಂಟನ್ನು ನೀಡಬೇಕಿತ್ತು ಹಾಗೂ ಎಷ್ಟು ಮ್ಯಾಚಿಂಗ್ ಗ್ರಾಂಟನ್ನು ನೀಡಿದೆ; (ವರ್ಷವಾರು ಯೋಜನೆವಾರು ವಿವರಗಳನ್ನು ಒದಗಿಸುವುದು)?

ಶ್ರೀ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಕಳೆದ 3 ವರ್ಷದಲ್ಲಿ ಕೇಂದ್ರ ಸರ್ಕಾರವು ಸಮಾಜ ಕಲ್ಯಾಣ ಇಲಾಖೆ ಅನುಷ್ಠಾನಿಸಿದ ಪರಿಶಿಷ್ಟ ಜಾತಿ ಕಾರ್ಯಕ್ರಮಗಳಿಗೆ ಕಾರ್ಯಕ್ರಮಗಳಿಗೆ ಒದಗಿಸಿದ ಒಟ್ಟಾರೆ ಒದಗಿಸಿದ ಅನುದಾನದ ವಿವರ ಈ ಕೆಳಕಂಡಂತಿದೆ.

ಸಾಲು	ಒಟ್ಟು ಅನುದಾನ (ಲಕ್ಷ ರೂ.ಗಳಲ್ಲಿ)
2001-02	4286.48
2002-03	4314.01
2003-04	5221.00
ಒಟ್ಟು	**13822.00**

ಯೋಜನೆವಾರು ವರ್ಷಾವಾರು ವಿವರ ಅನುಬಂಧ ಅ–ದಲ್ಲಿ ನೀಡಿದೆ

ಆ) ರಾಜ್ಯ ಸರ್ಕಾರ ನೀಡಬೇಕಾದ ಹಾಗೂ ನೀಡಿದ ಮ್ಯಾಚಿಂಗ್ ಗ್ರಾಂಟ್ ಒಟ್ಟಾರೆ ವಿವರ ಈ ಕೆಳಕಂಡಂತಿದೆ.

ಸಾಲು	ಮ್ಯಾಚಿಂಗ್ ಗ್ರಾಂಟ್ (ಲಕ್ಷ ರೂ.ಗಳಲ್ಲಿ)	
	ನೀಡಬೇಕಾಗಿದ್ದು	ನೀಡಿದ್ದು
2001–02	568.92	858.85
2002–03	915.22	565.40
2003–04	642.96	1137.00
ಒಟ್ಟು	**2127.10**	**2561.25**

ಯೋಜನಾವಾರು ವರ್ಷಾವಾರು ವಿವರ ಅನುಬಂಧ ಅ–ದಲ್ಲಿ ನೀಡಿದೆ.

ಅನುಬಂಧ-ಅ

ಕೇಂದ್ರ ಸರ್ಕಾರದ ಸಹಾಯಧನ ಅಡಿಯಲ್ಲಿ ಸಮಾಜ ಕಲ್ಯಾಣ ಇಲಾಖೆ ಅನುಷ್ಠಾನಿಸುತ್ತಿರುವ ಪರಿಶಿಷ್ಟ ಜಾತಿ ಕಲ್ಯಾಣ ಕಾರ್ಯಕ್ರಮ ಕುರಿತ 2001-02 ರಿಂದ 2003-04 ನೇ ಸಾಲಿನ ವರೆಗಿನ ಅನುದಾನದ ವಿವರ:

ಕ್ರ ಸಂ.	ಯೋಜನೆ	ಕೇಂದ್ರ ಸರ್ಕಾರದಿಂದ ಒದಗಿಸಿದ ಅನುದಾನ			ರಾಜ್ಯ ಸರ್ಕಾರ ನೀಡಬೇಕಾದ ಮ್ಯಾಚಿಂಗ್			ರಾಜ್ಯ ಸರ್ಕಾರದಿಂದ ನೀಡಲಾದ ಮ್ಯಾಚಿಂಗ್			ಷರಾ
		2001–	2002–	2003–	2001–	2002–	2003–	2001–	2002–	2003–	
ಅ)	ಕೇಂದ್ರ ವಲಯ ಕಾರ್ಯ										
1)	ವಿಶೇಷ ಘಟಕ ಯೋಜನೆಗೆ ವಿಶೇಷ ಕೇಂದ್ರೀಯ ನೆರವು:225–01–793–0–00 2225–01–191–1–02	2986.12	2386.12	2124.76							
2)	ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಗಳು: 2225–01–277–0–78	732.13	984.47	2432.23							

3)	ಪ್ರತಿಭಾವಂತ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ: 2225–01–277–0–00		28.20	21.56							
ii	ತರಬೇತಿ ಮತ್ತು ಸಂಬಂಧಪಟ್ಟ ಇತರೆ ಯೋಜನೆಗಳು: 2225–01–277–0–02	0.00	0.00	14.33	0.00	0.00	14.33	48.91	40.00	50.00	(00)
	ಒಟ್ಟು	42.6–48	4041.01	5221.51	568.892	915.22	642.96	858.85	565.40	1137.00	

(0) ಕೇಂದ್ರ ವಲಯ ಕಾರ್ಯಕ್ರಮವಾದ್ದರಿಂದ ರಾಜ್ಯ ಸರ್ಕಾರದಿಂದ ಮ್ಯಾಚಿಂಗ್ ಗ್ರ್ಯಾಂಟ್ ಒದಗಿಸುವ ಅವಶ್ಯಕತೆ ಇರುವುದಿಲ್ಲ.

(00) ವೇತನ ಹಾಗು ಕಛೇರಿಯ ದೈನಂದಿನ ನಿರ್ವಹಣೆ ಮುಂತಾದವುಗಳನ್ನು ರಾಜ್ಯ ಸರ್ಕಾರದ ಅನುದಾನದಲ್ಲಿ ಭರಿಸಿದೆ.

424(1131) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) : ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2004ನೇ ಏಪ್ರಿಲ್ ಅಂತ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ (SSI) ಸರ್ಕಾರ ವಿತರಿಸಲಾಗಿದ್ದು ಸಹಾಯಧನ ಮೊತ್ತವೆಷ್ಟು;

ಆ) ಸಹಾಯಧನ ಪಡೆದ ಫಲಾನುಭವಿಗಳೆಷ್ಟು;

ಇ) ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಸಹಾಯಧನ ಮೊತ್ತವೆಷ್ಟು ಹಾಗೂ ಸಣ್ಣ ಕೈಗಾರಿಕೆಗಳೆಷ್ಟು;

ಈ) ವಿತರಿಸ ಬೇಕಾಗಿರುವ ಮೊತ್ತವೆಷ್ಟು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ದಿನಾಂಕ: 31.3.2004ಕ್ಕೆ ರೂ. 429.43 ಕೋಟಿ ಬಿಡುಗಡೆಗೆ ಬಾಕಿ ಇರುತ್ತದೆ.

ಆ) ದಿನಾಂಕ: 1.1.99 ರಿಂದ 31.3.2003ರವರೆಗೆ ಕೆಲವೊಂದು ನಿರ್ದಿಷ್ಟ ವರ್ಗದ ಘಟಕಗಳಿಗೆ ಶೇ. 50ರಂತೆ ಬ್ಯಾಂಕು ಮತ್ತು ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಹಣ ಪಡೆದಿರುವ 10340 ಘಟಕಗಳಿಗೆ ರೂ. 129.25 ಕೋಟಿ ಬಿಡುಗಡೆ ಮಾಡಲಾಗಿದೆ.

ಇ) 2004–05ನೇ ಸಾಲಿನಲ್ಲಿ ರೂ. 77.59 ಕೋಟಿ ಸಹಾಯ ಸಹಾಯಧನವನ್ನು ಶೇ. 50ರಂತೆ ಬಿಡುಗಡೆ ಮಾಡಲಾಗಿದೆ.

ಈ) ದಿನಾಂಕ: 31.12.2004ರ ಅಂತ್ಯಕ್ಕೆ 20238 ಘಟಕಗಳಿಗೆ ರೂ. 354.94 ಕೋಟಿ ಮೊತ್ತ ಬಿಡುಗಡೆ ಮಾಡಬೇಕಾಗಿದೆ. ಉಳಿದ ಸಹಾಯಧನವನ್ನು 2004–05 ಹಾಗೂ 2005–06ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

425(1129) : ಶ್ರೀ ಜೀವರಾಜ್, ಡಿ.ಎನ್(ಶೃಂಗೇರಿ): ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರ ಜವಳಿ ಪಾರ್ಕ್ ಸ್ಥಾಪಿಸಲು ಉದ್ದೇಶಿಸಿದೆಯೇ ;

ಆ) ಉದ್ದೇಶಿಸಿದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು ;

ಇ) ರಫ್ತು ನಿರ್ಬಂದ ನೀತಿಯಿಂದ ಕರ್ನಾಟಕದಲ್ಲಿನ ಜವಳಿ ಉದ್ಯಮಿಗಳು ಅವಕಾಶಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಬಂದಿದ್ದಲ್ಲಿ, ತೆಗೆದುಕೊಂಡ ಕ್ರಮವೇನು?

ಶ್ರೀ ಸತೀಶ್. ಎಲ್. ಜಾರಕಿಹೊಳಿ (ಜವಳಿ ರಾಜ್ಯ ಸಚಿವರು)

ಅ) ಹೌದು.

ಆ) ಒಂದು ಪಾರ್ಕ್‌ನ್ನು ದೊಡ್ಡಬಳ್ಳಾಪುರದಲ್ಲಿ ಸ್ಥಾಪಿಸಲು ಮಂಜೂರಾತಿ ನೀಡಿದ್ದು, ಆ ಪಾರ್ಕಿಗೆ ಮೂಲಭೂತಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಇ) ಇಲ್ಲಾ
ಈ) ಉದ್ಭವಿಸುವುದಿಲ್ಲ.

426(1133) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶೃಂಗೇರಿಯಲ್ಲಿರುವ ಪದವಿ ಪೂರ್ವ ವಿದ್ಯಾರ್ಥಿನಿ ನಿಲಯದಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಆ) ನಕ್ಸಲ್ ಪೀಡಿತ ಪ್ರದೇಶದ ಗಿರಿಜನ ವಿದ್ಯಾರ್ಥಿನಿಯರಿಗೆ ಪ್ರವೇಶಾವಕಾಶ ಕಲ್ಪಿಸಲು ನಿಗದಿತ ಸಂಖ್ಯೆಗಿಂತ ಈ ಸಾಲಿನಲ್ಲಿ ಹೆಚ್ಚಿನ ವಿದ್ಯಾರ್ಥಿನಿಯರನ್ನು ವಸತಿ ನಿಲಯಕ್ಕೆ ಸೇರಿಸಿಕೊಳ್ಳಲಾಗಿದೆಯೇ, ಹಾಗಿದ್ದಲ್ಲಿ ಹೆಚ್ಚುವರಿ ಅನುದಾನವನ್ನು ಒದಗಿಸಲಾಗುವುದೇ. ಯಾವಾಗ ಒದಗಿಸಲಾಗುವುದು;

ಇ) ಹೆಚ್ಚಿನ ಗಿರಿಜನ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲು ಹಾಗೂ ವಿದ್ಯಾರ್ಥಿ ನಿಲಯದ ಸಂಖ್ಯಾ ವಿದ್ಯಾರ್ಥಿ ನಿಲಯದ ಸಂಖ್ಯಾ ಬಲವನ್ನು ಹೆಚ್ಚಿಸುವ ಪ್ರಸ್ತಾವನೆಯನ್ನು ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿಯು ಸರ್ಕಾರಕ್ಕೆ ಕಳುಹಿಸಿದೆಯೆ;

ಈ) ಕಳುಹಿಸಿದ್ದಲ್ಲಿ, ಯಾವಾಗ ಮಂಜೂರಾತಿ ನೀಡಲಾಗುವುದು?

ಶ್ರೀ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಶೃಂಗೇರಿಯಲ್ಲಿ 50 ಸಂಖ್ಯಾಬಲದ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಒಂದು ವಿದ್ಯಾರ್ಥಿನಿಲಯವಿದೆ ಶೃಂಗೇರಿಯಲ್ಲಿ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯವಿರುವುದಿಲ್ಲ.

ಆ) ಶೃಂಗೇರಿಯಲ್ಲಿ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯ ಇಲ್ಲದಿರುವುದರಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೊಸ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲು ಮತ್ತು ಸಂಖ್ಯಾಬಲವನ್ನು ಹೆಚ್ಚಿಸಲು ಪ್ರಸ್ತಾವನೆ ಬಂದಿದೆ.

ಈ) ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

427(1132) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) : ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಪ್ಪ ಶೃಂಗೇರಿ ಹಾಗೂ ನರಸಿಂಹರಾಜಪುರ ತಾಲ್ಲೂಕುಗಳಲ್ಲಿರುವ ಪಶು ಆಸ್ಪತ್ರೆ ವೈದ್ಯರ ಹಾಗೂ ಇತರೆ ಸಿಬ್ಬಂದಿಗಳ ಹುದ್ದೆಗಳು ಖಾಲಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ ಯಾವಾಗ ಭರ್ತಿ ಮಾಡಲಾಗುವುದು.

ಶ್ರೀ ಮಿರಾಜುದ್ದೀನ್ ಎನ್, ಪಟೇಲ್(ಪಶುಸಂಗೋಪನೆ ಮತ್ತು ವಕ್ಫ್ ಖಾತೆ ಸಚಿವರು)

ಅ) ಬಂದಿದೆ.

ಆ) 1. 250 ಪಶುವೈದ್ಯಾಧಿಕಾರಿಗಳನ್ನು ವಿಶೇಷ ನೇರ ನೇಮಕಾತಿ ಮೂಲಕ ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ.

2. ಗುತ್ತಿಗೆ ಆಧಾರದ ಮೇರೆಗೆ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 192 ಪಶುವೈದ್ಯಾಧಿಕಾರಿಗಳ ಸೇವೆಯನ್ನು ಖಾಯಂಗೊಳಿಸುವ ವಿಷಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

3. ಪಶುವೈದ್ಯಕೀಯ ಮೇಲ್ವಿಚಾರಕರ ಮತ್ತು ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳಿಂದ ಅನುಕ್ರಮವಾಗಿ ಮುಂಬಡ್ತಿ ಮೂಲಕ ಹಾಗೂ ಪಶುವೈದ್ಯಕೀಯ ಪರೀಕ್ಷಕರ ಖಾಲಿ ಹುದ್ದೆಗಳನ್ನು ಪಶುವೈದ್ಯಕೀಯ ಸಹಾಯಕರ ವೃಂದದಿಂದ ಮುಂಬಡ್ತಿ ಮೂಲಕ ತುಂಬಲು ಸರ್ಕಾರದ ಪರಿಶೀಲನೆಯಲ್ಲಿದೆ, ಖಾಲಿ ಡಿ ದರ್ಜೆ ಹುದ್ದೆಗಳನ್ನು ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಅನುಕಂಪದ ಆಧಾರದ ಮೇಲೆ ಹಾಗೂ ಇತರೆ ಇಲಾಖೆಗಳಿಂದ ಮರು ವಿನ್ಯಾಸದ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗುತ್ತದೆ.

428(116) : ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು(ಶಿವಾಜಿನಗರ) : ಮಾನ್ಯ ಸಣ್ಣ ಕೈಗಾರಿಕಾ ಮತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆಯಲ್ಲಿ 1990ರಲ್ಲಿ ನಡೆದಿರುವ ಅವ್ಯವಹಾರಗಳಾವುವು:

ಆ) ಈ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ತನಿಖೆ ನಡೆಸಲಾಗಿದೆಯೇ(ತನಿಖಾವರದಿಯ ಪ್ರತಿ ನೀಡುವುದು):

ಇ) ಅವ್ಯವಹಾರಗಳಿಗೆ ಸಂಬಂಧಪಟ್ಟಂತೆ ಎಷ್ಟು ಜನರ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ:

ಈ) ಈಗ ಮತ್ತೆ ಹೊಸದಾಗಿ ತನಿಖೆ ನಡೆಸಲು ಸರ್ಕಾರ ನಿರ್ಧರಿಸಿದೆಯೇ:

ಉ) ಹಾಗಿದ್ದಲ್ಲಿ ಅದಕ್ಕೆ ಕಾರಣವೇನು:

ಊ) ಹಿಂದಿನ ತನಿಖಾ ವರದಿಯನ್ನು ಸರ್ಕಾರ ತಿರಸ್ಕರಿಸಲು ಉದ್ದೇಶಿಸಿದೆಯೇ:

ಋ) ಹಾಗಿದ್ದಲ್ಲಿ, ಅದಕ್ಕೆ ಕಾರಣವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ದಿನಾಂಕ: 1-4-199 ರಿಂದ 31-7-1992ರ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರಿಯವರ ಅನುಮೋದನೆ ಪಡೆಯದೆ ಖರೀದಿ ಆದೇಶ ನೀಡಿರುವುದಕ್ಕೆ ಸಂಬಂಧಿಸಿರುತ್ತದೆ.

ಆ) ಹೌದು.

ಇ) ಕಂಪನಿಯಲ್ಲಿ ಇಲಾಖಾ ವಿಚಾರಣೆ ನಡೆಸಿದಾಗ 4 ಜನ ಅಧಿಕಾರಿಗಳು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೆ ಕಛೇರಿ ಆದೇಶ ನೀಡಿರುವುದು ರುಜುವತಾಗಿರುತ್ತದೆ. ಈ ಮೊತ್ತವನ್ನು ಮೂರು ಜನರಿಂದ ವಸೂಲಾತಿ ಮಾಡಲಾಗಿದೆ. ನಾಲ್ಕನೇ ಅಧಿಕಾರಿಯಾದ ಶ್ರೀ ಬಿ.ಟಿ. ಜನಾರ್ಧನ್ ಅವರಿಂದ ರೂ 19,73,901-00 ವಸೂಲಿಗಾಗಿ ಬಾಕಿ ವಸೂಲಿಯಾಗಿರುವುದಿಲ್ಲ.

ಈ) ಇಲ್ಲ.

ಉ) ಇಲ್ಲ

ಊ) ಇಲ್ಲ

ಋ) ಉದ್ಭವಿಸುವುದಿಲ್ಲ.

429(121) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದೇವನಹಳ್ಳಿ ಬಳಿ ನಿರ್ಮಿಸಲಿರುವ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸರ್ಕಾರ ಯಾವಾಗ ಅಂತಿಮ ಅನುಮತಿ ನೀಡಿತು;

ಆ) ಇದಕ್ಕಾಗಿ ನೀಡಿರುವ ಒಟ್ಟು ಜಮೀನೆಷ್ಟು ;

ಇ) ಸುಮಾರು 400 ಎಕರೆ ಜಮೀನನ್ನು ಕಡಿತಗೊಳಿಸಿರುವುದು ನಿಜವೇ;

ಈ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು;

ಉ) ಕಾನೂನು ಒಪ್ಪಂದದ ದಾಖಲೆ ಹಾಗೂ ಇತರ ಕಾಗದ ಪತ್ರಗಳನ್ನು ತಯಾರಿಸಲು ಬ್ರಿಟನ್‌ನ ಕಾನೂನು ಸೇವಾ ಸಂಸ್ಥೆಗೆ 18 ಕೋಟಿ ರೂ ನೀಡಿರುವುದು ನಿಜವೇ;

ಊ) ರಾಜ್ಯದಲ್ಲಿಯೇ ಈ ಸೇವೆ ದೊರಕುತ್ತಿರಲಿಲ್ಲವೇ;

ಋ) ರಾಜ್ಯ ಸರ್ಕಾರ ಈ ಉದ್ದೇಶಿತ ವಿಮಾನ ನಿಲ್ದಾಣಕ್ಕಾಗಿ ಇಲ್ಲಿಯವರೆಗೆ ಖರ್ಚುಮಾಡಿದ ಹಣವೆಷ್ಟು;

ೠ) ಈ ವಿಮಾನ ನಿಲ್ದಾಣದ ಕಾರ್ಯ ಯಾವಾಗ ಪ್ರಾರಂಭವಾಗುತ್ತದೆ;

ಐ) ಈ ಕಾಮಗಾರಿ ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ದೇವನಹಳ್ಳಿ ಬಳಿ ನಿರ್ಮಿಸಲಿರುವ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸರ್ಕಾರವು ಎರಡು ಪ್ರಮುಖ ಯೋಜನೆಯ ಒಪ್ಪಂದಗಳಾದ ರಾಜ್ಯದ ಬೆಂಬಲ ಒಪ್ಪಂದ ಮತ್ತು ಭೂಮಿ ಗುತ್ತಿಗೆಯ ಒಪ್ಪಂದ ಇವುಗಳಿಗೆ ದಿನಾಂಕ 21–12–2004 ರಂದು ಅಂತಿಮ ಅನುಮತಿಯನ್ನು ನೀಡಿದೆ.

ಆ) ಇದಕ್ಕಾಗಿ ಸುಮಾರು 4100 ಎಕರೆಗಳಷ್ಟು ಜಮೀನು ಬೇಕಾಗುತ್ತದೆ.

ಇ) ಹೌದು

ಈ) ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಸಲಹೆಯಂತೆ ರನ್ ವೇ ಹೊಂದಿಕೆಯಲ್ಲಿ ಬದಲಾವಣೆ ಮಾಡಬೇಕಾಗಿರುವುದರಿಂದ ಸುಮಾರು 400 ಎಕರೆ ಜಮೀನು ಯೋಜನಾ ನಿವೇಶನದ ಉತ್ತರದ ಕಡೆಗೆ ಅಧಿಕವಾಗಿದ್ದು ಆದರೆ ದಕ್ಷಿಣದ ಕಡೆಗೆ ಹೆಚ್ಚುವರಿ ಬೇಕಾಗುವುದು.

ಉ) ನಿಜ. ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಸಂಸ್ಥೆ ಮತ್ತು ಖಾಸಗಿ ಪಾಲುದಾರರು ಕಾನೂನು ಒಪ್ಪಂದದ ದಾಖಲೆ ಹಾಗೂ ಇತರೆ ಕಾಗದ ಪತ್ರಗಳನ್ನು ತಯಾರಿಸಲು ವಿದೇಶಿ ಕಾನೂನು ಸಲಹೆಗಾರರಿಂದ ಸಲಹೆ ಪಡೆದು ಸದರಿ ವೆಚ್ಚವನ್ನು ಬಿಐಎಎಲ್ ಸಂಸ್ಥೆ ಭರಿಸಲಾಗಿದೆ.

ಊ) ವಿದೇಶಿ ಖಾಸಗಿ ಪಾಲುದಾರರು ತಮ್ಮದೇ ಆದ ಕಾನೂನು ಸಲಹೆಗಾರರ ಜೊತೆ ಸಲಹೆ ಪಡೆದಿರುವುದರಿಂದ ಇದು ಅನ್ವಯಿಸುವುದಿಲ್ಲ.

ಋ) ರಾಜ್ಯ ಸರ್ಕಾರವು ಈ ಯೋಜನೆಯ ಬಾಬ್ತು ದಿನಾಂಕ 13–01–2005 ರವರೆಗೆ ರೂ. 110.31 ಕೋಟಿಗಳನ್ನು ಗೆ ಬಿಡುಗಡೆ ಮಾಡಿದೆ ಇದರಲ್ಲಿ ಭೂಸ್ವಾಧೀನ ವೆಚ್ಚ ಕೂಡ ಸೇರಿದೆ.

ಋ) ಮಾರ್ಚ್ 2005ರಲ್ಲಿ ವಿಮಾನ ನಿಲ್ದಾಣದ ಕಾರ್ಯ ಪ್ರಾರಂಭವಾಗುವ ನಿರೀಕ್ಷೆ ಇದೆ.

ಐ) ಈ ಕಾಮಗಾರಿ ಕೆಲಸ ಪ್ರಾರಂಭವಾದ 33 ತಿಂಗಳುಗಳಲ್ಲಿ ಪೂರ್ಣಗೊಳಿಸಲಾಗುವುದು.

430(126) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಬೃಹತ್, ಮಧ್ಯಮ ಮತ್ತು ಸಣ್ಣ ಪ್ರಮಾಣ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಾರ್ವಜನಿಕ ಸ್ವಾಮ್ಯದ ಬೃಹತ್ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿ ಎಷ್ಟು ಕೈಗಾರಿಕೆಗಳು ರೋಗಗ್ರಸ್ತವಾಗಿವೆ;

ಇ) ಇವುಗಳನ್ನು ಮುಚ್ಚದೆ ಪುನಃಶ್ಚೇತನಗೊಳಿಸಲು ಸರ್ಕಾರ ನಿರ್ಧರಿಸಿದೆಯೇ;

ಈ) ಹಾಗಿದ್ದಲ್ಲಿ, ಇಲ್ಲಿಯುವರೆಗೆ ಯಾವ ಯಾವ ರೋಗಗ್ರಸ್ತ ಉದ್ದಿಮೆಗಳನ್ನು ಪುನಃಶ್ಚೇತನಗೊಳಿಸಲಾಗಿದೆ ಹಾಗೂ ಉಳಿದ ಎಲ್ಲಾ ರೋಗಗ್ರಸ್ತ ಉದ್ದಿಮೆಗಳನ್ನು ಯಾವಾಗ ಪುನಃಶ್ಚೇತನಗೊಳಿಸಲಾಗುವುದು;

ಉ) ಇದಕ್ಕಾಗಿ ಸರ್ಕಾರಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು;

ಊ) ರೋಗಗ್ರಸ್ತವಾಗಲು ಕಾರಣಗಳನ್ನು ಕಂಡುಹಿಡಿದು, ಪುನಃಶ್ಚೇತನಗೊಂಡ ಕೈಗಾರಿಕೆಗಳು ಮತ್ತೆ ರೋಗಗ್ರಸ್ತವಾಗುವುದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್, ಮಧ್ಯಮ ಮತ್ತು ಸಣ್ಣ ಪ್ರಮಾಣ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಸಚಿವರು)

ಅ) ರಾಜ್ಯದಲ್ಲಿ 27 ಸಾರ್ವಜನಿಕ ಸ್ವಾಮ್ಯದ ಬೃಹತ್ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳಿವೆ.

ಆ) ಇವುಗಳಲ್ಲಿ 21 ಉದ್ದಿಮೆಗಳು 2002–03ನೇ ಸಾಲಿನಲ್ಲಿ ನಷ್ಟ ಅನುಭವಿಸಿದೆ.

ಇ) ರೋಗಗ್ರಸ್ತವಾಗಿರುವಂತಹ ಉದ್ದಿಮೆಗಳನ್ನು ಪುನಃಶ್ಚೇತನಗೊಳಿಸಲು ಅರ್ಹವಾದ ಸಾರ್ವಜನಿಕ ಉದ್ದಿಮೆಗಳನ್ನು ಪ್ರತ್ಯೇಕ, ಪ್ರತ್ಯೇಕವಾಗಿ ಪರಿಗಣಿಸಿ ಪುನಶ್ಚೇತನಗೊಳಿಸಲು ತೀರ್ಮಾನಿಸಲಾಗುತ್ತಿದೆ.

ಈ) ಸಚಿವ ಸಂಪುಟದ ಉಪ ಸಮಿತಿಯು ಎನ್.ಜಿ.ಇ.ಎಫ್. ಮೈಸುಗರ್, ಎಂ.ಪಿ.ಎಂ. ಮತ್ತು ಕೆ.ಎಸ್.ಡಿ.ಎಲ್. ಘಟಕಗಳನ್ನು ಪುನಶ್ಚೇತನಗೊಳಿಸಲು ಶಿಫಾರಸ್ಸನ್ನು ಸಚಿವ ಸಂಪುಟಕ್ಕೆ ಮಾಡಲು ತೀರ್ಮಾನಿಸಿದೆ. ಉಳಿದ ರೋಗಗ್ರಸ್ತ ಉದ್ದಿಮೆಗಳನ್ನು ಅವುಗಳ ಅರ್ಹತೆಗನುಗುಣವಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಪರಿಶೀಲಿಸಿ. ಕ್ರಮ ಕೈಗೊಳ್ಳಲಾಗುವುದು.

ಉ) ಇದಕ್ಕೆ ತಗಲುವ ವೆಚ್ಚವನ್ನು ಅಂದಾಜು ಮಾಡಲಾಗುತ್ತಿದೆ.

ಊ) ಸಚಿವ ಸಂಪುಟ ಉಪ ಸಮಿತಿಯು ಪುನಶ್ಚೇತನಗೊಳಿಸಲು ಶಿಫಾರಸ್ಸು ಮಾಡುವಾಗ ಮತ್ತೆ ರೋಗಗ್ರಸ್ತವಾಗುವುದನ್ನು ತಡೆಗಟ್ಟಲು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಹಾಗು ಸಚಿವ ಸಂಪುಟದ ಉಪ ಸಮಿತಿಯು, ಮುಂದೆ ಪುನಶ್ಚೇತನಕ್ಕೆ ಪ್ರತ್ಯೇಕ ಪ್ರತ್ಯೇಕವಾಗಿ ಪರಿಶೀಲಿಸಿದಾಗ ರೋಗಗ್ರಸ್ತವಾಗುವುದನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳಲಾಗುವುದು.

431(729) ಶ್ರೀ. ಕೃಷ್ಣ ಪಾಲೇಮಾರ್. ಜಿ (ಸುರತ್ಕಲ್) ಮಾನ್ಯ ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಕಿಗೆ ಉತ್ತರಿಸುವರೆ ?

ಅ) ಸುರತ್ಕಲ್ ಪ್ರದೇಶ ಬೈಕಂಪಾಡಿ ಗ್ರಾಮದಲ್ಲಿ ಬಿ.ಪಿ.ಸಿ.ಎಲ್. ಮತ್ತಿತರ ಸಂಸ್ಥೆಗೆ ಸ್ವಾಧೀನಪಡಿಸಿಕೊಟ್ಟ ರೈತ ಕುಟುಂಬಗಳಿಗೆ ಮನೆ ನಿವೇಶನವನ್ನು ಒದಗಿಸಿಕೂಡಲಾಗಿದೆಯೇ.

ಆ) ಸಂಸ್ಥೆಗೆ ತಮ್ಮ ಭೂಮಿಯನ್ನು ಬಿಟ್ಟು ಕೊಟ್ಟು ನಿರ್ವಸಿತರಾಗಿರುವ ಬಡಜನರಿಗೆ ಮನೆ ನಿವೇಶನವನ್ನು ಕೂಡಲಾಗಿದೆಯೇ.

ಇ) ಇಲ್ಲವಾದಲ್ಲಿ ಕಾರಣಗಳೇನು,

ಈ) ಭೂಸ್ವಾಧೀನತೆಗೆ ಮಾಡಲು ನೀಡಿದ ಭರವಸೆಯಂತೆ ನಿವೇಶನ ನೀಡಲು ಕ್ರಮ ಜರುಗಿಸುವರೆ?

ಶ್ರೀ. ಪಿ.ಜಿ. ಆರ್. ಸಿಂಧ್ಯಾ (ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಮಂಡಳಿಯಿಂದ ಬಿ.ಪಿ.ಸಿ.ಎಲ್.ಸಂಸ್ಥೆಗೆ ಬೈಕಂಪಾಡಿ ಭೂಸ್ವಾಧೀನಪಡಿಸಿದ ಜಮೀನುಗಳಲ್ಲಿ ವಾಸದ ಮನೆಗಳು ಇಲ್ಲದ ಜಮೀನನ್ನು ಸ್ವಾಧೀನಪಡಿಸಿರುವುದರಿಂ ? ಭೂಪರಿಹಾರ ಪಾವತಿಸಲಾಗಿದೆ.

ನಾಗಾರ್ಜುನ ಸ್ಟೀಲ್ ಸಂಸ್ಥೆಗೆ ಬೈಕಂಪಾಡಿ ಗ್ರಾಮದಲ್ಲಿ ಭೂಸ್ವಾಧೀನಪಡಿಸಿದ ಜಮೀನಿನಲ್ಲಿ ವಸತಿ ಕಳೆದುಕೂಂಡ 43 ಕುಟುಂಬಗಳಿಗೆ ಕುಳಾಯಿ ಪುನರ್ವಸತಿ ಕಲ್ಪಿಸಿಕೂಡಲಾಗಿದೆ.

ಆ) ನಾಗಾರ್ಜುನ ಸ್ಟೀಲ್ ಸಂಸ್ಥೆಗೆ ಬೈಕಂಪಾಡಿ ಗ್ರಾಮದಲ್ಲಿ ಭೂಸ್ವಾಧೀನಪಡಿಸಿದ ಜಮೀನಿನಲ್ಲಿ ವಸತಿ ಕಳೆದುಕೂಂಡ 43 ಕುಟುಂಬಗಳಿಗೆ ಕುಳಾಯಿ ಪುನರ್ವಸತಿ ಕಲ್ಪಿಸಿಕೂಡಲಾಗಿದ್ದ , ಈ ಪೈಕಿ 16 ಕುಟುಂಬದವರು ನಿವೇಶನದ ಹಕ್ಕು ಪತ್ರ ಸ್ವೀಕರಿಸಿರುತ್ತಾರೆ.

ಇ) ಉದ್ಭವಿಸುವುದಿಲ್ಲ.

ಈ) ನಾಗಾರ್ಜುನ ಸ್ಟೀಲ್ ಸಂಸ್ಥೆಗೆ ಬೈಕಂಪಾಡಿ ಗ್ರಾಮದಲ್ಲಿ ಭೂಸ್ವಾಧೀನಪಡಿಸಿದ ಜಮೀನಿನಲ್ಲಿ ವಸತಿ ಕಳೆದುಕೂಂಡ 43 ಕುಟುಂಬಗಳಿಗೆ ಕುಳಾಯಿ ಪುನರ್ವಸತಿ ಕಲ್ಪಿಸಿಕೂಡಲಾಗಿದು , ಈ ಪೈಕಿ 16 ಕುಟುಂಬದವರು ನಿವೇಶನದ ಹಕ್ಕು ಪತ್ರ ಸ್ವೀಕರಿಸಿರುತ್ತಾರೆ. ಉಳಿದವರಿಗೆ ನಿವೇಶನದ ಹಕ್ಕು ಪತ್ರಗಳನ್ನು 15 ದಿವಸಗಳಲ್ಲಿ ನೀಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

432(730) ಶ್ರೀ. ಕೃಷ್ಣ ಪಾಲೇಮಾರ್. ಜಿ (ಸುರತ್ಕಲ್) ಮಾನ್ಯ ಭಾರೀ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೇಗಳಿಗೆ ಉತ್ತರಿಸುವರೆ ?

ಅ) ಸುರತ್ಕಲ್ ಕ್ಷೇತ್ರದ ಬೈಕಂಪಾಡಿ ಗ್ರಾಮದಲ್ಲಿ ಬಿ.ಪಿ.ಸಿ.ಎಲ್ ಮತ್ತು ಹೆಚ್.ಪಿ.ಸಿ.ಎಲ್. ಮತ್ತಿತರ ಸಂಸ್ಥೆಗಳಿಗೆ ಭೂಸ್ವಾಧೀನಪಡಿಸಿಕೊಟ್ಟು ಜಮೀನುಗಳ ವಿಸ್ತೀರ್ಣ ಎಷ್ಟು?

ಆ) ಭೂಮಾಲೀಕರಿಗೆ ನಗದಾಗಿ ಕೂಟ್ಟು ಪರಿಹಾರಧನದ ಒಟ್ಟು ಮಾತ್ತ ಎಷ್ಟು ಹಾಗೂ ಜಮೀನಿಗೆ ನಿಗದಿಪಡಿಸಲಾದ ಮೊತ್ತ ಎಷ್ಟು

ಇ) ಭೂಸ್ವಾಧೀನಪಡಿಸುವಾಗ ಬೂಮಾಲೀಕರಿಗೆ ಕೊಟ್ಟ ಭರವಸೆಗಳನ್ನು ಹಾಗೂ ಅವುಗಳನ್ನು ಕಾರ್ಯಗತ ಗೊಳಿಸಲಾಗಿದೆಯೇ.

ಈ) ಇಲ್ಲವಾದಲ್ಲಿ ಕಾರಣಗಳೇನು?

ಉ) ಜಮಿನನ್ನು ಕಳೆದುಕೊಂಡ ಅರ್ಹ ರೈತ ಕುಟುಂಬದ ಅಭ್ಯರ್ಥಿಗಳಿಗೆ ಉದ್ಯೋಗ ನೀಡುವ ಭರವಸೆಯನ್ನು ಸಂಸ್ಥೆಗಳಯ ಈಡೇರಿಸಿವೆಯೇ?

ಊ) ಇಲ್ಲವಾದಲ್ಲಿ ಮುಂದಿನ ಕ್ರಮಗಳೇನು.

ಶ್ರೀ ಪಿ.ಜಿ.ಆರ್. ಸಿಂಧ್ಯ ಮಾನ್ಯ (ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಮಂಡಳಿಯಿಂದ ಬೈಕಂಪಾಡಿ ಗ್ರಾಮದಲ್ಲಿ ಈ ಕೆಳಕಂಡಂತೆ ಜಮೀನನ್ನು ಭೂಸ್ವಾಧೀನಪಡಿಸಲಾಗಿದೆ.

	ಖಾಸಗಿ	ಸರ್ಕಾರಿ	ಒಟ್ಟು
ಬಿ.ಪಿ.ಸಿ.ಎಲ್	69.80	2.18	71.18
ಎಂ.ಅರ್.ಪಿ.ಎಲ್	19.84	–	19.84
ನಾಗಾರ್ಜುನ ಸ್ಟೀಲ್	111.91	–	111.91
		ಒಟ್ಟು	**203.73**

ಆ) ಭೂಮಾಲೀಕರಿಗೆ ನಾಡಾಗಿ ಪರಿಹಾರವನ್ನು ಕೊಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಬಿ.ಪಿ.ಸಿ.ಎಲ್. ಕಂಪನಿಗೆ ಸ್ವಾಧೀನಪಡಿಸಿದ ಜಮೀನಿಗೆ ಪ್ರತಿ ಎಕರೆಗೆ ರೂ.4,10,000–00 ರಂತೆ ಬೆಲೆ ನಿಗಧಿಪಡಿಸಿದ್ದು, ಒಟ್ಟು ರೂ.2,84,71,500–00 ಗಳನ್ನು ಪರಿಹಾರ ಧನವನ್ನು ಪಾವತಿಸಲಾಗಿದೆ.

ಎಂ.ಆರ್.ಪಿ.ಎಲ್. ಕಂಪನಿಗೆ ಪೈಪಲೈನ್ನಾಗಿ ಸ್ವಾಧೀನಪಡಿಸಿದ ಜಮೀನಿಗೆ ಪ್ರತಿ ಎಕರೆಗೆ ರೂ.3,60,000–00 ಗಳಂತೆ ಬೆಲೆ ನಿಗಧಿಪಡಿಸಿದ್ದು, ಒಟ್ಟು ರೂ.71,42,400–00 ಗಳನ್ನು ಪರಿಹಾರಧನವಾಗಿ ಪಾವತಿಸಲಾಗಿದೆ......

ನಾಗಾರ್ಜುನ ಸ್ಟೀಲ್ ಕಂಪನಿಯವರಿಗೆ ಸ್ವಾಧೀನಪಡಿಸಿದ ಜಮೀನಿಗೆ ಪ್ರತಿ ಎಕರೆಗೆ ರೂ.3,22,000–00 ರಂತೆ ಬೆಲೆ ನಿಗಧಿಪಡಿಸಿದ್ದು ಒಟ್ಟು ರೂ.3,63,37,700–00 ಗಳನ್ನು ಪರಿಹಾರಧನವಾಗಿ ಪಾವತಿಸಲಾಗಿದೆ.

ಇ) ಮಂಡಳಿಯಿಂದ ಭೂಮಾಲೀಕರಿಗೆ ಭೂಪರಿಹಾರ ನೀಡುವುದನ್ನು ಹೊರತುಪಡಿಸಿ, ಬೇರೆ ಯಾವುದೇ ಭರವಸೆಯನ್ನು ನೀಡಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ

ಉ) ಮೆ: ನಾಗಾರ್ಜುನ ಸಂಸ್ಥೆಯು ಜಮೀನನ್ನು ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಗೆ ಹಿಂದಿರುಗಿಸಿದೆ.

ಮೆ: ಬಿ.ಪಿ.ಸಿ.ಎಲ್. ಸಂಸ್ಥೆಯು ಭಾರತ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ.

ಮೆ: ಎಂ.ಆರ್.ಪಿ.ಸಿ.ಎಲ್. ಸಂಸ್ಥೆಗೆ ಸಂಬಂಧಿಸಿದಂತೆ ವಿವರ ಈ ಕೆಳಕಂಡಂತಿದೆ:–

ಅ) ನೌಕರಿ ನೀಡಿರುವುದು : 148 ಜನರಿಗೆ

ಆ) ನೌಕರಿಯ ಬದಲಾಗಿಪ್ರತಿ ಕುಟುಂಬಕ್ಕೆ
ರೂ. 1.90 ಲಕ್ಷಗಳಂತೆ ಪರಿಹಾರವನ್ನು ನೀಡಿರುವುದು. : 328
ಇ) ಪರಿಹಾರದ ಭಾಗಶ:(ರೂ. 1.5 ಲಕ್ಷ)
ಪಾವತಿಸಿರುವುದು. : 06
ಈ) ಪರಿಹಾರ ಪಡೆದಿಲ್ಲದವರು : 12 ಪ್ರಕರಣ

494

ಊ) ಉದ್ಭವಿಸುವುದಿಲ್ಲ.

433(733) ಶ್ರೀ. ಕೃಷ್ಣ ಪಾಲೇಮಾರ್. ಜಿ (ಸುರತ್ಕಲ್) ಮಾನ್ಯ ಜವಳಿ ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಳೆದ ಎರಡು ವರ್ಷಗಳಲ್ಲಿ ಕೈಮಗ್ಗ ನೇಕಾರರ ಸಾಲವನ್ನು ಮನ್ನಾ ಮಾಡಲು ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು?

ಆ) ಒಟ್ಟಾರೆ ಕೈಮಗ್ಗ ಹಾಗೂ ನೇಕಾರರ ಅಭಿವೃದ್ಧಿಗಾಗಿ ಬಿಡುಗಡೆ ಮಾಡಿದ ಹಣ ಎಷ್ಟು?

ಅ) ಯಾವುದೂ ಇಲ್ಲಾ

ಶ್ರೀ ಸತೀಶ್.ಎಲ್.ಜಾರಕಿ ಹೊಳೆ (ಜವಳಿ ರಾಜ್ಯ ಸಚಿವರು)

ಆ)

ವರ್ಷ	(ರೂ, ಲಕ್ಷಗಳುಲ್ಲಿ)
2003–04	636.89
2004–05	2405.22

(ದಿನಾಂಕ. 15–1–2005 ರವರೆಗೆ)

434(735) ಶ್ರೀ ಕೃಷ್ಣ ಪಾಲೇಮಾರ್ (ಸುರತಕಲ್) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಈ ಕೆಳಕಂಡ ಪ್ರಶ್ನೇಗಳಿಗೆ ಉತ್ತರಿಸುವರೆ.

ಅ) ರಾಜ್ಯದಲ್ಲಿ ಗುರುತಿಸಲಾಗಿರುವ ಒಟ್ಟು ಗೋವುಗಳ ತಳಿಗಳ ಸಂಖ್ಯೆ ಎಷ್ಟು:

ಆ) ಅವುಗಳಲ್ಲಿ ಎಷ್ಟು ಸಂಖ್ಯೆಯ ತಳಿಗಳು ಕ್ಷೀಣಿಸುತ್ತಿರುವುದನ್ನು ಗುರುತಿಸಲಾಗಿದೆ:

ಇ) ಗೋವುಗಳ ತಳಿ ಸಂರಕ್ಷಣೆಗೆ ಸರ್ಕಾರದ ಕಾರ್ಯಕ್ರಮಗಳೇನು?

ಈ) ರಾಜ್ಯದಲ್ಲಿ ಎಷ್ಟು ಸರ್ಕಾರಿ ಮತ್ತು ಖಾಸಗಿ ಗೋತಳಿ ಕೇಂದ್ರಗಳು ಕಾರ್ಯಾನಿರ್ವಹಿಸುತ್ತಿದೆ?

ಶ್ರೀ ಮಿರಾಜುದೀನ್ ಎಸ್. ಪಟೇಲ್(ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) 2003 ರ ಜಾನುವಾರು ಗಣತಿಯಲ್ಲಿ ಒಟ್ಟು 8 ಗೋ ತಳಿಗಳನ್ನು ರಾಜ್ಯದಲ್ಲಿ ಗುರುತಿಸಲಾಗಿದೆ.

ಆ) ಎಲ್ಲ ಸ್ಥಳೀಯ ಗೋ ತಳಿಗಳ ಸಂಖ್ಯೆ ಕ್ಷಿಣಿಸುತ್ತಿರುವುದು ಗುರುತಿಸಲಾಗಿದೆ.

ಇ) ಪ್ರಮುಖ ದೇಶಿಯ ತಳಿಗಳಾದ ಹಳ್ಳಿಕಾರ್, ಅಮೃತ ಮಹಲ್, ಖಿಲ್ಲಾರ್ ಮತ್ತು ದೇವಣಿ ಗೋವುಗಳ ಸಂರಕ್ಷಣೆ ಹಾಗೂ ಸಂವರ್ಧನೆಗಾಗಿ ಪ್ರತ್ಯೇಕ ತಳಿ ಅಭಿವೃದ್ಧಿ ಕ್ಷೇತ್ರಗಳನ್ನು ಸ್ಥಾಪಿಸಿ ಈ

ತಳಿಗಳ ಗುಣ ಲಕ್ಷಣಗಳನ್ನು ಸಂರಕ್ಷಿಸುವ ಜೊತೆಗೆ ಹಾಲು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಹಾಗೂ ಹೂರೆ ಎಳೆಯುವ ಶಕ್ತಿಯನ್ನು ಹೆಚ್ಚಿಸಲು ಆಯ್ದ ತಳಿಗಳ ಸಂವರ್ಧನೆಯನ್ನು ಸದರಿ ತಳಿಗಳ ಪ್ರದೇಶಗಳಲ್ಲಿ ಕೈಗೊಳ್ಳಲಾಗಿದೆ.

ಶುದ್ಧ ತಳಿಗಳ ಮಿಶ್ರ ತಳಿ ಹಾಗೂ ದೇಶಿಯ ತಳಿಗಳ ಘನೀಕೃತ ವೀರ್ಯವನ್ನು ಗ್ರಾಮಾಂತರ ಪ್ರದೇಶದಲ್ಲಿನ ರೈತರು ದೇಶಿಯ ತಳಿ ಅಭಿವೃದ್ಧಿಗಾಗಿ ರಾಜ್ಯಾದ್ಯಂತ ಇರುವ 3774 ಪಶುವೈದ್ಯಕೀಯ ಸಂಸ್ಥೆಗಳ ಮೂಲಕ ಕೃತಕ ಗರ್ಭದಾರಣ ಸೌಲಭ್ಯವನ್ನು ಸಹ ಒದಗಿಸಲಾಗಿದೆ.

ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆಯ ಸ್ಥಾಪನೆ.

ಗ್ರಾಮಾಂತರ ಪ್ರದೇಶದ ರೈತರಿಗೆ ಮಿಶ್ರ ತಳಿ ಹಾಗೂ ದೇಶಿಯ ತಳಿಗೋವುಗಳಲ್ಲಿನ ಗುಣ ಲಕ್ಷಣಗಳ ಬಗ್ಗೆ ಅಗ್ಗಿಂದಾಗ್ಗೆ ತರಬೇತಿ ಮೂಲಕ ತಳಿಗಳ ಸಂರಕ್ಷಣೆ ಹಾಗೂ ಅಭಿವೃದ್ಧಿ ಕಾರ್ಯಕ್ರಮ ಕೈಗೂಳ್ಳಲಾಗಿದೆ.

ಈ) ರಾಜ್ಯದಲ್ಲಿ ಒಟ್ಟು 11 ಸರ್ಕಾರಿ ಗೋತಳಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಖಾಸಗಿ ಗೋತಳಿ ಸಂವರ್ಧನಾ ಕ್ಷೇತ್ರಗಳು ಮಾಹಿತಿ ಲಭ್ಯವಿಲ್ಲ.

435(737) ಶ್ರೀ.ಜಿ. ಕೃಷ್ಣ ಪಾಲೇಮಾರ್ ವಿಧಾನ ಸಭಾ ಸದಸ್ಯರು (ಸುರತ್ಕಲ್) ಮಾನ್ಯ ಬೃಹತ್, ಮಧ್ಯಮ,ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಂಗಳೂರಿನಲ್ಲಿ ವಿಶೇಷ ಆರ್ಥಿಕ ವಲಯ ಯೋಜನೆಯನ್ನು ರೂಪಿಸಲಾಗಿದೆಯೇ?

ಆ) ರೂಪಿಸಿದ್ದಲ್ಲಿ ಅದರ ವಿವರಗಳೇನು?

ಇ) ಇಲ್ಲವಾದಲ್ಲಿ ಸರ್ಕಾರದ ಭರವಸೆಯಂತೆ ಯೋಜನೆಯನ್ನು ರೂಪಿಸಿ ಯಾವಾಗ ಜಾರಿಗೊಳಿಸಲು ಉದ್ದೇಶಿಸಲಾಗಿದೆ.

iii) ಡಿಜಿಸಿಎ ರವರು ದೇವನಹಳ್ಳಿಯ ನಿವೇಶನವನ್ನು ಪರೀಕ್ಷಿಸಿ, ತಾತ್ವಿಕ ಒಪ್ಪಿಗೆಯನ್ನು ನೀಡಿರುತ್ತಾರೆ.

iv) ರಾಜ್ಯ ಸರ್ಕಾರವು ರಾಜ್ಯ ನೆರವು/ಒತ್ತಾಸೆ ಒಪ್ಪಂದವನ್ನು ಬಿ.ಐ.ಎ.ಎಲ್ ನವರೊಂದಿಗೆ ದಿನಾಂಕ 20-01-2005 ರಂದು ಸಹಿ ಮಾಡಿರುತ್ತಾರೆ.

v) ರಾಜ್ಯ ಸರ್ಕಾರವು ಕೆ.ಎಸ್.ಎಸ್.ಡಿ.ಸಿ. ಮುಖಾಂತರ ಭೂಮಿ ಗುತ್ತಿಗೆ ಒಪ್ಪಂದವನ್ನು ಬಿ.ಐ.ಎ.ಎಲ್. ನವರೊಂದಿಗೆ ದಿನಾಂಕ 20-01-05 ರಂದು ಸಹಿ ಮಾಡಿರುತ್ತಾರೆ.

vi) ಅಲ್ಪ ವಿಸ್ತೀರ್ಣದ ಹೆಚ್ಚುವರಿ ಭೂಮಿಯನ್ನು ಹೊರತುಪಡಿಸಿ ಭೂ ಸ್ವಾಧೀನ ಕಾರ್ಯವು ಪೂರ್ಣಗೊಂಡಿದೆ.

ಆ) ವಿಮಾನ ನಿಲ್ದಾಣ ಅಭಿವೃದ್ಧಿ, ನಿರ್ಮಾಣ ನಿರ್ವಹಣೆ ಮತ್ತು ಪೋಷಣೆ ಇವುಗಳಿಗೆ ಬಿ.ಐ.ಎ.ಎಲ್ ಸಂಸ್ಥೆ ಜವಾಬ್ದಾರಿಯಾಗಿದೆ. ಬಿ.ಐ.ಎ.ಎಲ್ ಸಂಸ್ಥೆಯು EPC ಗುತ್ತಿಗೆಯನ್ನು M/s L & T Limited, M/s Siemens India Ltd., ಮತ್ತು Germany ಇವರಿಗೆ ನೀಡಲು ಉದ್ದೇಶಿಸಿದೆ. ಇದ್ದಕ್ಕಾಗಿ ಸುಮಾರು 4000 ಎಕರೆಗಳಷ್ಟು ಜಮೀನಿನ ಅವಶ್ಯಕತೆ ಇದೆ.

ಇ) ಅರಣ್ಯ ಇಲಾಖೆಯ ಜಮೀನನ್ನು ಒಳಗೊಂಡಂತೆ ಸುಮಾರು 1750 ಎಕರೆ ಸರ್ಕಾರಿ ಜಮೀನು ಹಾಗೂ 2250 ಎಕರೆ ರೈತರ ಜಮೀನು ನಿರ್ಮಾಣಕ್ಕೆ ಬೇಕಾಗಿದೆ.

ಈ) ಸ್ವಾಧೀನ ಪಡಿಸಿಕೊಂಡಿರುವ ರೈತರ ಜಮೀನಿಗೆ ಎಕರೆ ಒಂದಕ್ಕೆ ರೂ. 5 ಲಕ್ಷ ಪರಿಹಾರ

ಧನವನ್ನು ನೀಡಲಾಗಿದೆ. ಇದಲ್ಲದೆ, ಜಮೀನಿನಲ್ಲಿರುವ ಮರಮುಟ್ಟುಗಳ ಹಾಗೂ ಕಟ್ಟಡಗಳಿಗೆ ಪರಿಹಾರಧನವನ್ನು ನೀಡಲಾಗಿದೆ. ಇದುವರೆವಿಗೂ ಸುಮಾರು 1150 ರೈತರಿಗೆ ಪರಿಹಾರ ಧನವನ್ನು ಪಾವತಿಸಲಾಗಿದೆ.

499(136) : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ತಾಲ್ಲೂಕು ಆರ್ಟಿಜನ್ ಸಹಕಾರಿ ಸಂಘಗಳ ಸಂಖ್ಯೆ ಎಷ್ಟು ಹಾಗೂ ಯಾವುವು;

ಆ) ಇವುಗಳಿಗೆ ಸರಕಾರ ಹಾಗೂ ಖಾದಿ ಗ್ರಾಮೋದ್ಯೋಗ ಮಂಡಳಿಯಿಂದ ಕೊಟ್ಟಿರುವ ಧನಸಹಾಯ 31.3.04ಕ್ಕೆ ಎಷ್ಟು;

ಇ) ಈ ಸಂಘಗಳು 31.3.04ಕ್ಕೆ ಗಳಿಸಿರುವ ಹಾಗೂ ಕೂಡಿಟ್ಟಿರುವ ಲಾಭ ಮತ್ತು ಹಾನಿ ಎಷ್ಟು;

ಈ) ಈ ಸಂಘಗಳ 2003-04ರಲ್ಲಿ ಮಾಡಿದ ವ್ಯವಹಾರ ವಹಿವಾಟು ಮೊತ್ತವೆಷ್ಟು;

ಉ) ಈ ಸಂಘಗಳ ಪೈಕಿ ಕಾರ್ಯನಿರತ, ಸ್ಥಗಿತ ಹಾಗೂ ಸಮಾಪನ ಸಂಘಗಳು 31.3.04ಕ್ಕೆ ಎಷ್ಟು;

ಶ್ರೀ ಪಿ.ಜಿ.ಆರ್.ಸಿಂಧ್ಯ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) 159. (ಪಟ್ಟಿ ಲಗತ್ತಿಸಿದೆ)

ಆ) ದಿನಾಂಕ : 31.3.2004ಕ್ಕೆ ಸರ್ಕಾರದಿಂದ ಹಾಗೂ ಖಾದಿ ಮಂಡಳಿಯಿಂದ ನೀಡಿರುವ ಆರ್ಥಿಕ ಸಹಾಯ ಕ್ರಮವಾಗಿ ರೂ. 18,85,835 ಮತ್ತು ರೂ. 3,89,39,224 ಒಟ್ಟು 4,08,25,056 ರೂ. ಗಳನ್ನು 159 ಆರ್ಟಿಜನ್ ಸಹಕಾರಿಸಂಘಗಳಿಗೆ ನೀಡಲಾಗಿದೆ.

ಇ) ದಿನಾಂಕ : 31.3.2004ಕ್ಕೆ ಲಾಭ ರೂ. 8.63 ಲಕ್ಷ, ಹಾನಿ ರೂ. 133.43 ಲಕ್ಷ.

ಈ) 2003-04ನೇ ಸಾಲಿನಲ್ಲಿ ಈ ಸಂಘಗಳು ಮಾಡಿದ ವ್ಯವಹಾರ ವಹಿವಾಟು ಮೊತ್ತ ರೂ. 1098.64 ಲಕ್ಷ.

ಉ) ದಿನಾಂಕ: 31.3.2004ಕ್ಕೆ ತಾಲ್ಲೂಕು ಆರ್ಟಿಜನ್ ಸಹಕಾರಿಸಂಘಗಳು ಈ ಕೆಳಕಂಡ ಸ್ಥಿತಿಯಲ್ಲಿರುತ್ತವೆ:

01) ಕಾರ್ಯನಿರತ : 71

02) ಸ್ಥಗಿತ : 38

03) ಸಮಾಪನ : 50

ಕರ್ನಾಟಕ ರಾಜ್ಯದಲ್ಲಿರುವ ತಾಲ್ಲೂಕು ಮಟ್ಟದ ಕಸುಬುದಾರರ ಸಹಕಾರಿ ಸಂಘಗಳು

ಕ್ರ. ಸಂ	ತಾಲ್ಲೂಕು ಮಟ್ಟದ ಕಸುಬುದಾರರ ಸಹಕಾರಿ ಸಂಘಗಳ ಹೆಸರು	ಜಿಲ್ಲೆ
1	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಅಥಣಿ	ಬೆಳಗಾವಿ
2	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಬೈಲಹೊಂಗಲ	ಬೆಳಗಾವಿ
3	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ರಾಮದುರ್ಗ	ಬೆಳಗಾವಿ
4	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಗೋಕಾಕ	ಬೆಳಗಾವಿ
5	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಸವದತ್ತಿ	ಬೆಳಗಾವಿ
6	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ರಾಯಬಾಗ	ಬೆಳಗಾವಿ
7	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಖಾನಾಪೂರ	ಬೆಳಗಾವಿ
8	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಹುಕ್ಕೇರಿ	ಬೆಳಗಾವಿ
9	ಚಾಮರಾಜನಗರ ತಾಲ್ಲೂಕು ಗ್ರಾ. ಕಸಬುದಾರರ ಕೈಗಾರಿಕ ವಿವಿದೋದ್ದೇಶಗಳ ಸಹಕಾರಿ ಸಂಘ ನಿ	ಚಾಮರಾಜನಗರ
10	ಯಳಂದೂರು ತಾಲ್ಲೂಕು ಗ್ರಾ. ಕಸಬುದಾರರ ಕೈಗಾರಿಕ ವಿವಿದೋದ್ದೇಶಗಳ ಸಹಕಾರಿ ಸಂಘ ನಿ. ಯಳಂದೂರು	ಚಾಮರಾಜನಗರ
11	ಕೊಳ್ಳೇಗಾಲ ತಾಲ್ಲೂಕು ಗ್ರಾ. ಕಸಬುದಾರರ ಕೈಗಾರಿಕ ವಿವಿದೋದ್ದೇಶಗಳ ಸಹಕಾರಿ ಸಂಘ ನಿ. ಕೊಳ್ಳೇಗಾಲ	ಚಾಮರಾಜನಗರ
12	ಗುಂಡ್ಲುಪೇಟೆ ತಾಲ್ಲೂಕು ಗ್ರಾ. ಕಸಬುದಾರರ ಕೈಗಾರಿಕ ವಿವಿದೋದ್ದೇಶಗಳ ಸಹಕಾರಿ ಸಂಘ ನಿ. ಗುಂಡ್ಲುಪೇಟೆ	ಚಾಮರಾಜನಗರ
13	ಗದಗ ತಾಲ್ಲೂಕು ಗ್ರಾ. ಕಸುಬುದಾರರ ವಿವಿದೋದ್ದೇಶ ಸಹಕಾರ ಸಂಘ ನಿ ಗದಗ	ಗದಗ

14	ರೋಣ ತಾಲ್ಲೂಕು ಗ್ರಾ. ಕಸುಬುದಾರರ ವಿವಿದೋದ್ದೇಶ ಸಹಕಾರ ಸಂಘ ನಿ ರೋಣ	ಗದಗ
15	ನರಗುದ ತಾಲ್ಲೂಕು ಗ್ರಾ. ಕಸುಬುದಾರರ ವಿವಿದೋದ್ದೇಶ ಸಹಕಾರ ಸಂಘ ನಿ ನರಗುಂದ	ಗದಗ
16	ಮುಂಡರಗಿ ತಾಲ್ಲೂಕು ಗ್ರಾ. ಕಸುಬುದಾರರ ವಿವಿದೋದ್ದೇಶ ಸಹಕಾರ ಸಂಘ ನಿ ಮುಂಡರಗಿ	ಗದಗ
17	ಶಿರಹಟ್ಟಿ ತಾಲ್ಲೂಕು ಗ್ರಾ. ಕಸುಬುದಾರರ ವಿವಿದೋದ್ದೇಶ ಸಹಕಾರ ಸಂಘ ನಿ ಶಿರಹಟ್ಟಿ	ಗದಗ
18	ಬೆಂಗಳೂರು ಉತ್ತರ ತಾಲ್ಲೂಕು ಗ್ರಾ. ಕಸುಬುದಾರರ ವಿವಿದೋದ್ದೇಶ ಸಹಕಾರ ಸಂಘ ನಿ. ಬೆಂಗಳೂರು	ಬೆಂಗಳೂರು ನಗರ
19	ಬೆಂಗಳೂರು ದಕ್ಷಿಣ ತಾಲ್ಲೂಕು ಗ್ರಾ. ಕಸುಬುದಾರರ ವಿವಿದೋದ್ದೇಶ ಸಹಕಾರ ಸಂಘ ನಿ. ಬೆಂಗಳೂರು	ಬೆಂಗಳೂರು ನಗರ
20	ಅನೇಕಲ್ ತಾಲ್ಲೂಕು ಗ್ರಾ. ಕಸುಬುದಾರರ ವಿವಿದೋದ್ದೇಶ ಸಹಕಾರ ಸಂಘ ನಿ.ಅನೇಕಲ್	ಬೆಂಗಳೂರು ನಗರ
21	ಚಿಕ್ಕಮಗಳೂರು ತಾಲ್ಲೂಕು ಗ್ರಾ. ಕಸುಬುದಾರರ ವಿವಿದೋದ್ದೇಶ ಸಹಕಾರ ಸಂಘ ನಿ. ಚಿಕ್ಕಮಗಳೂರು	ಚಿಕ್ಕಮಗಳೂರು
22	ಮೂಡಿಗೆರೆ ತಾಲ್ಲೂಕು ಗ್ರಾ. ಕಸುಬುದಾರರ ವಿವಿದೋದ್ದೇಶ ಸಹಕಾರ ಸಂಘ ನಿ. ಮೂಡಿಗೆರೆ	ಚಿಕ್ಕಮಗಳೂರು
23	ಕೊಪ್ಪ ತಾಲ್ಲೂಕು ಗ್ರಾ. ಕಸುಬುದಾರರ ವಿವಿದೋದ್ದೇಶ ಸಹಕಾರ ಸಂಘ ನಿ. ಕೊಪ್ಪ	ಚಿಕ್ಕಮಗಳೂರು
24	ತರಿಕೆರೆ ತಾಲ್ಲೂಕು ಗ್ರಾ. ಕಸುಬುದಾರರ ವಿವಿದೋದ್ದೇಶ ಸಹಕಾರ ಸಂಘ ನಿ. ತರಿಕೆರೆ	ಚಿಕ್ಕಮಗಳೂರು
25	ಕಡೂರು ತಾಲ್ಲೂಕು ಗ್ರಾ. ಕಸುಬುದಾರರ ವಿವಿದೋದ್ದೇಶ ಸಹಕಾರ ಸಂಘ ನಿ. ಕಡೂರು	ಚಿಕ್ಕಮಗಳೂರು
26	ಪುತ್ತೂರು ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಪುತ್ತೂರು	ಮಂಗಳೂರು
27	ಸುಳ್ಯ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ.ಅಮರ ಮೂಡ್ನೂರು ಸುಳ್ಯ	ಮಂಗಳೂರು

28	ಶಿವಮೊಗ್ಗ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಶಿವಮೊಗ್ಗ	ಶಿವಮೊಗ್ಗ
29	ಭದ್ರಾವತಿ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಭದ್ರಾವತಿ	ಶಿವಮೊಗ್ಗ
30	ತೀರ್ಥಹಳ್ಳಿ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ತೀರ್ಥಹಳ್ಳಿ	ಶಿವಮೊಗ್ಗ
31	ಸಾಗರ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಸಾಗರ	ಶಿವಮೊಗ್ಗ
32	ಶಿಕಾರಿಪುರ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಶಿಕಾರಿಪುರ	ಶಿವಮೊಗ್ಗ
33	ಸೊರಬ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಸೊರಬ	ಶಿವಮೊಗ್ಗ
34	ಕಾರ್ಕಳ ತಾಲ್ಲೂಕು ಮಟ್ಟದ ಖಾದಿ ಗ್ರಾಮೋದ್ಯೋಗ ಸಹಕಾರ ಸಂಘ ನಿ. ಕಾರ್ಕಳ	ಉಡುಪಿ
35	ಉಡುಪಿ ತಾಲ್ಲೂಕು ಮಟ್ಟದ ಖಾದಿ ಗ್ರಾಮೋದ್ಯೋಗ ಸಹಕಾರ ಸಂಘ ನಿ. ಉಡುಪಿ	ಉಡುಪಿ
36	ಕುಂದಾಪುರ ತಾಲ್ಲೂಕು ಮಟ್ಟದ ಖಾದಿ ಗ್ರಾಮೋದ್ಯೋಗ ಸಹಕಾರ ಸಂಘ ನಿ. ಕುಂದಾಪುರ	ಉಡುಪಿ
37	ಹಾವೇರಿ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಹಾವೇರಿ	ಹಾವೇರಿ
38	ಬ್ಯಾಡಗಿ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಬ್ಯಾಡಗಿ	ಹಾವೇರಿ
39	ಹಿರೆಕೆರೂರು ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಹಿರೇಕೆರೂರು	ಹಾವೇರಿ
40	ರಾಣೇಬೆನ್ನೂರು ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ರಾಣೇಬೆನೂರು	ಹಾವೇರಿ
41	ಸವಣೂರು ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಸವಣೂರು	ಹಾವೇರಿ

42	ಶಿಗ್ಗಾಂವ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಶಿಗ್ಗಾಂವ	ಹಾವೇರಿ
43	ಹಾನಗಲ್ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ.ಹಾವಗಲ್	ಹಾವೇರಿ
44	ಮೈಸೂರು ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಮೈಸೂರು	ಮೈಸೂರು
45	ಕೆ.ಆರ್. ನಗರ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಕೆ.ಆರ್. ನಗರ	ಮೈಸೂರು
46	ಹುಣಸೂರು ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಹುಣಸೂರು	ಮೈಸೂರು
47	ಪಿರಿಯಾಪಟ್ಟಣ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಪಿರಿಯಾಪಟ್ಟಣ	ಮೈಸೂರು
48	ಹೆಚ್.ಡಿ ಕೋಟೆ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಹೆಚ್. ಡಿ ಕೋಟೆ	ಮೈಸೂರು
49	ನಂಜನಗೂಡು ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ನಂಜನಗೂಡು	ಮೈಸೂರು
50	ಟಿ. ನರಸಿಪುರ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಟಿ. ನರಸಿಪುರ	ಮೈಸೂರು
51	ಮಡಿಕೇರಿ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಮಡಿಕೇರಿ	ಕೊಡಗು
52	ಬೀದರ್ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ.ಬೀದರ್	ಬೀದರ್
53	ಭಾಲ್ಕಿ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಭಾಲ್ಕಿ	ಬೀದರ್
54	ಹುಮನಾಬಾದ್ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಹುಮನಾಬಾದ್	
55	ಬಸವ ಕಲ್ಯಾಣ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಬಸವ ಕಲ್ಯಾಣ	ಬೀದರ್

56	ಔರಾದ್ ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ಕೈಗಾರಿಕ ಸಹಕಾರ ಸಂಘ ನಿ. ಔರಾದ್	ಬೀದರ್
57	ತಾಲ್ಲೂಕು ಗ್ರಾ. ಕಸಬುದಾರರ ಕೈಗಾರಿಕಾ ವಿವಿದೋದ್ದೇಶ ಸಹಕಾರ ಸಂಘ ನಿ. ಚಿತ್ರದುರ್ಗ	ಚಿತ್ರದುರ್ಗ
58	ತಾಲ್ಲೂಕು ಗ್ರಾ. ಕಸಬುದಾರರ ಕೈಗಾರಿಕಾ ವಿವಿದೋದ್ದೇಶ ಸಹಕಾರ ಸಂಘ ನಿ.ಚಳ್ಳಕೆರೆ	
59	ತಾಲ್ಲೂಕು ಗ್ರಾ. ಕಸಬುದಾರರ ಕೈಗಾರಿಕಾ ವಿವಿದೋದ್ದೇಶ ಸಹಕಾರ ಸಂಘ ನಿ. ಮೊಳಕಾಲ್ಲೂರು	ಚಿತ್ರದುರ್ಗ
60	ತಾಲ್ಲೂಕು ಗ್ರಾ. ಕಸಬುದಾರರ ಕೈಗಾರಿಕಾ ವಿವಿದೋದ್ದೇಶ ಸಹಕಾರ ಸಂಘ ನಿ. ಹಿರಿಯೂರು	ಚಿತ್ರದುರ್ಗ
61	ತಾಲ್ಲೂಕು ಗ್ರಾ. ಕಸಬುದಾರರ ಕೈಗಾರಿಕಾ ವಿವಿದೋದ್ದೇಶ ಸಹಕಾರ ಸಂಘ ನಿ. ಹೊಸದುರ್ಗ	ಚಿತ್ರದುರ್ಗ
62	ತಾಲ್ಲೂಕು ಗ್ರಾ. ಕಸಬುದಾರರ ಕೈಗಾರಿಕಾ ವಿವಿದೋದ್ದೇಶ ಸಹಕಾರ ಸಂಘ ನಿ. ಹೊಳಲ್ಕೆರೆ	ಚಿತ್ರದುರ್ಗ
63	ಚನ್ನರಾಯಪಟ್ಟಣ ತಾಲ್ಲೂಕು ಮಟ್ಟದ ಕಸಲುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಚನ್ನರಾಯಪಟ್ಟಣ	ಹಾಸನ
64	ಬೇಲೂರು ತಾಲ್ಲೂಕು ಮಟ್ಟದ ಕಸಲುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಬೇಲೂರು	ಹಾಸನ
65	ಹೊಳೆನರಸಿಪುರ ತಾಲ್ಲೂಕು ಮಟ್ಟದ ಕಸಲುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಹೊಳೆನರಸಿಪುರ	ಹಾಸನ
66	ಆಲೂರು ತಾಲ್ಲೂಕು ಮಟ್ಟದ ಕಸಲುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಆಲೂರು	ಹಾಸನ
67	ಅರಕಲಗೂಡು ತಾಲ್ಲೂಕು ಮಟ್ಟದ ಕಸಲುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಅರಕಲಗೂಡು	ಹಾಸನ
68	ಅರಸಿಕೆರೆ ತಾಲ್ಲೂಕು ಮಟ್ಟದ ಕಸಲುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಅರಸಿಕೆರೆ	ಹಾಸನ
69	ಹಾಸನ ತಾಲ್ಲೂಕು ಮಟ್ಟದ ಕಸಲುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಹಾಸನ	ಹಾಸನ

70	ಕನಕಪುರ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಕನಕಪುರ	ಬೆಂಗಳೂರು ಗ್ರಾಮಾಂತರ
71	ರಾಮನಗರ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ರಾಮನಗರ	ಬೆಂಗಳೂರು ಗ್ರಾಮಾಂತರ
72	ಚನ್ನಪಟ್ಟಣ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಚನ್ನಪಟ್ಟಣ	ಬೆಂಗಳೂರು ಗ್ರಾಮಾಂತರ
73	ಮಾಗಡಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಮಾಗಡಿ	ಬೆಂಗಳೂರು ಗ್ರಾಮಾಂತರ
74	ನೆಲಮಂಗಲ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ನೆಲಮಂಗಲ	ಬೆಂಗಳೂರು ಗ್ರಾಮಾಂತರ
75	ದೊಡ್ಡಬಳ್ಳಾಪುರ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ದೊಡ್ಡಬಳ್ಳಾಪುರ	ಬೆಂಗಳೂರು ಗ್ರಾಮಾಂತರ
76	ದೇವನಹಳ್ಳಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ದೇವನಹಳ್ಳಿ	ಬೆಂಗಳೂರು ಗ್ರಾಮಾಂತರ
77	ಹೊಸಕೋಟೆ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಹೊಸಕೋಟೆ	ಬೆಂಗಳೂರು ಗ್ರಾಮಾಂತರ
78	ಚಿಕ್ಕನಾಯಕನ ಹಳ್ಳಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಚಿಕ್ಕನಾಯಕನಹಳ್ಳಿ	ತುಮಕೂರು
79	ಕುಣಿಗಲ್ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಕುಣಿಗಲ್	ತುಮಕೂರು

80	ಕೊರಟಗೆರೆ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಕೊರಟಗೆರೆ	ತುಮಕೂರು
81	ಮಧುಗಿರಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಮಧುಗಿರಿ	ತುಮಕೂರು
82	ಪಾವಗಡ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಪಾವಗಡ	ತುಮಕೂರು
83	ಶಿರಾ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಶಿರಾ	ತುಮಕೂರು
84	ತಿಪಟೂರು ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ತಿಪಟೂರು	ತುಮಕೂರು
85	ತುರುವೇಕೆರೆ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ತುರುವೇಕೆರೆ	ತುಮಕೂರು
86	ತುರುವೇಕೆರೆ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ತುರುವೇಕೆರೆ	ತುಮಕೂರು
87	ತುಮಕೂರು ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ತುಮಕೂರು	ತುಮಕೂರು
88	ಗುಲ್ಬರ್ಗಾ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಗುಲ್ಬರ್ಗಾ	ಗುಲ್ಬರ್ಗಾ
89	ಅಫಜಲ್‌ಪುರ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಅಫಜಲ್‌ಪುರ	ಗುಲ್ಬರ್ಗಾ
90	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಶಹಾಪುರ	ಗುಲ್ಬರ್ಗಾ
91	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಸೋಲಪುರ	ಗುಲ್ಬರ್ಗಾ
92	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಚಿಂಚೋಳಿ	ಗುಲ್ಬರ್ಗಾ
93	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಸೇಡಂ	ಗುಲ್ಬರ್ಗಾ

94	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಯಾದಗಿರಿ	ಗುಲ್ಬರ್ಗಾ
95	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಚಿತ್ತಾಪುರ	ಗುಲ್ಬರ್ಗಾ
96	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಜೇವರ್ಗಿ	ಗುಲ್ಬರ್ಗಾ
97	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಬಾಗೇವಾಡಿ	ಬಿಜಾಪುರ
98	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಸಿಂದಗಿ	ಬಿಜಾಪುರ
99	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಇಂಡಿ	ಬಿಜಾಪುರ
100	ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಬಿಜಾಪುರ	ಬಿಜಾಪುರ
101	ಬಾಗಲಕೋಟೆ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಬಾಗಲಕೋಟೆ	ಬಾಗಲಕೋಟೆ
102	ಬೀಳಗಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಬೀಳಗಿ	ಬಾಗಲಕೋಟೆ
103	ಹುನಗುಂದ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಹುನಗುಂದ	ಬಾಗಲಕೋಟೆ
104	ಜಮಕಂಡಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಜಮಕಂಡಿ	ಬಾಗಲಕೋಟೆ
105	ಬಾದಾಮಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಬಾದಾಮಿ	ಬಾಗಲಕೋಟೆ
106	ಕೊಪ್ಪಳ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಕೊಪ್ಪಳ	ಕೊಪ್ಪಳ
107	ಕುಷ್ಟಗಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಕುಷ್ಟಗಿ	ಕೊಪ್ಪಳ

108	ಯಲಬುರ್ಗ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಯಲಬುರ್ಗ	ಕೊಪ್ಪಳ
109	ಗಂಗಾವತಿ ತಾಲ್ಲೂಕು ಮಟ್ಟದ, ಕಸುಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಗಂಗಾವತಿ	ಕೊಪ್ಪಳ
110	ಪಾಂಡವಪುರ ತಾಲ್ಲೂಕು ಮಟ್ಟದ, ಕಸುಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಪಾಂಡವಪುರ	ಮಂಡ್ಯ
111	ಕೃಷ್ಣರಾಜಪೇಟೆ ತಾಲ್ಲೂಕು ಮಟ್ಟದ, ಕಸುಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಕೃಷ್ಣರಾಜಪೇಟೆ	ಮಂಡ್ಯ
112	ಶ್ರೀರಂಗ ಪಟ್ಟಣ ತಾಲ್ಲೂಕು ಮಟ್ಟದ, ಕಸುಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಶ್ರೀರಂಗಪಟ್ಟಣ	ಮಂಡ್ಯ
113	ಮಳವಳ್ಳಿ ತಾಲ್ಲೂಕು ಮಟ್ಟದ, ಕಸುಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಮಳವಳ್ಳಿ	ಮಂಡ್ಯ
114	ಮಂಡ್ಯ ತಾಲ್ಲೂಕು ಮಟ್ಟದ, ಕಸುಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಮಂಡ್ಯ	ಮಂಡ್ಯ
115	ಮದ್ದೂರು ತಾಲ್ಲೂಕು ಮಟ್ಟದ, ಕಸುಬುದಾರರ ವಿವಿದೋಃದ್ದೇಶಗಳ ಸಹಕಾರಿ ಸಂಘ ಮದ್ದೂರು	ಮಂಡ್ಯ
116	ನಾಗಮಂಗಲ ತಾಲ್ಲೂಕು ಮಟ್ಟದ, ಕಸುಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ನಾಗಮಂಗಲ	ಮಂಡ್ಯ
117	ಹುಬ್ಬಳ್ಳಿ ತಾಲ್ಲೂಕು ಮಟ್ಟದ, ಕಸುಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಹುಬ್ಬಳ್ಳಿ	ಧಾರವಾಡ
118	ಕಲಘಟಗಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಕಲಘಟಗಿ	ಧಾರವಾಡ
119	ಧಾರವಾಡ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಧಾರವಾಡ	ಧಾರವಾಡ
120	ನವಲಗುಂದ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ನವಲಗುಂದ	ಧಾರವಾಡ
121	ಕುಂದಗೋಳ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಕುಂದಗೋಳ	ಧಾರವಾಡ

122	ಬಳ್ಳಾರಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಬಳ್ಳಾರಿ	ಬಳ್ಳಾರಿ
123	ಶಿಡಗುಪ್ಪ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಶಿಡಗುಪ್ಪ	ಬಳ್ಳಾರಿ
124	ಹೊಸಪೇಟೆ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಹೊಸಪೇಟೆ	ಬಳ್ಳಾರಿ
125	ಹಡಗಲಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಹಡಗಲಿ	ಬಳ್ಳಾರಿ
126	ಸಂಡೂರು ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಸಂಡೂರು	ಬಳ್ಳಾರಿ
127	ಹಗರಿ ಬೊಮ್ಮನಹಳ್ಳಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಹಗರಿ ಬೊಮ್ಮನಹಳ್ಳಿ	ಬಳ್ಳಾರಿ
128	ಕೂಡ್ಲಿಗಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಕೂಡ್ಲಿಗಿ	ಬಳ್ಳಾರಿ
129	ಕಾರವಾರ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಕಾರವಾರ	ಕಾರವಾರ
130	ಅಂಕೋಲ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಅಂಕೋಲ	ಕಾರವಾರ
131	ಕುಮಟಾ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಕುಮಟಾ	ಕಾರವಾರ
132	ಹೊನ್ನಾವರ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಹೊನ್ನಾವರ	ಕಾರವಾರ
133	ಭಟ್ಕಳ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಭಟ್ಕಳ	ಕಾರವಾರ
134	ಸಿದ್ದಾಪುರ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಸಿದ್ದಾಪುರ	ಕಾರವಾರ
135	ಸಿರ್ಸಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಸಿರ್ಸಿ	ಕಾರವಾರ
136	ಯಲ್ಲಾಪುರ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಯಲ್ಲಾಪುರ	ಕಾರವಾರ
137	ಹಳಿಯಾಳ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಹಳಿಯಾಳ	ಕಾರವಾರ
138	ಮುಂಡಗೋಡ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಮುಂಡಗೋಡ	ಕಾರವಾರ

139	ಗೌರಿಬಿದನೂರು ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಗೌರಿಬಿದನೂರು	ಕೋಲಾರ
140	ಬಾಗೇಪಲ್ಲಿ ತಾಲ್ಲೂಕು ಮಟ್ಟದ, ಕಸಬುಧಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಬಾಗೇಪಲ್ಲಿ	ಕೋಲಾರ
141	ಮುಳಬಾಗಿಲು ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಮುಳಬಾಗಿಲು	ಕೋಲಾರ
142	ಶಿಡ್ಲಘಟ್ಟ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಶಿಡ್ಲಘಟ್ಟ	ಕೋಲಾರ
143	ಬಂಗಾರಪೇಟೆ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಬಂಗಾರಪೇಟೆ	ಕೋಲಾರ
144	ಚಿಕ್ಕಬಳ್ಳಾಪುರ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಚಿಕ್ಕಬಳ್ಳಾಪುರ	ಕೋಲಾರ
145	ಶ್ರೀನಿವಾಸಪುರ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಶ್ರೀನಿವಾಸಪುರ	ಕೋಲಾರ
146	ಕೋಲಾರ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಕೋಲಾರ	ಕೋಲಾರ
147	ಚಿಂತಾಮಣಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಚಿಂತಾಮಣಿ	ಕೋಲಾರ
148	ಮಾಲೂರು ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಮಾಲೂರು	ಕೋಲಾರ
149	ರಾಯಚೂರು ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ರಾಯಚೂರು	ರಾಯಚೂರು
150	ಮಾನವಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಮಾನವಿ	ರಾಯಚೂರು
151	ಸಿಂಧನೂರು ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಸಿಂಧನೂರು	ರಾಯಚೂರು
152	ಲಿಂಗಸೂಗೂರು ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಲಿಂಗಸೂಗೂರು	ರಾಯಚೂರು
153	ದೇವದುರ್ಗ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ದೇವದುರ್ಗ	ರಾಯಚೂರು
154	ದಾವಣಗೆರೆ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ದಾವಣಗೆರೆ	ದಾವಣಗೆರೆ
155	ಹರಿಹರ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಹರಿಹರ	ದಾವಣಗೆರೆ

156	ಹರಪ್ಪನಹಳ್ಳಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಹರಪ್ಪನಹಳ್ಳಿ	ದಾವಣಗೆರೆ
157	ಚನ್ನಗಿರಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಚನ್ನಗಿರಿ	ದಾವಣಗೆರೆ
158	ಜಗಳೂರು ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಜಗಳೂರು	ದಾವಣಗೆರೆ
159	ಹೊನ್ನಳಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಹೊನ್ನಳಿ	ದಾವಣಗೆರೆ

500(1143) : ಶ್ರೀ ಯೋಗಿಶ್ವರ್ ಭಟ್. ಎನ್(ಮಂಗಳೂರು) ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಂಗಳೂರು ವಿಮಾನ ನಿಲ್ದಾಣವನ್ನು ಅಂತರರಾಷ್ಟೀಯ ಮಟ್ಟದಲ್ಲಿ ಅಭಿವೃದ್ಧಿಗೊಳಿಸಲು ಕೈಗೊಂಡ ಕ್ರಮಗಳೇನು?

ಆ) ಈ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಬರುವ ಕಾಮಗಾರಿಗಳು ಯಾವಾಗ ಆರಂಭವಾಯಿತು; ಅವು ಯಾವುವು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು?

ಇ) ಇವುಗಳಿಗೆ ಬಿಡುಗಡೆಯಾಗಬೇಕಾದ ರಾಜ್ಯ ಮತ್ತು ಕೇಂದ್ರದ ಹಣ ಎಷ್ಟು?

ಈ) ಬಿಡುಗಡೆ ಆಗಿದ್ದಲ್ಲಿ (ಯಾವಾಗ ಬಿಡುಗಡೆಯಾಗಿದೆ) ಎಷ್ಟು ಹಣ ಬಿಡುಗಡೆಯಾಗಿದೆ?

ಉ) ಬಿಡುಗಡೆಯಾಗದಿದ್ದಲ್ಲಿ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಕೈಗಾರಿಕೆ ಮತ್ತು ಮೂಲಸೌಲಭ್ಯಯ ಅಭಿವೃದ್ಧಿ ಸಚಿವರು):

ಅ) ಮಂಗಳೂರು ವಿಮಾನ ನಿಲ್ದಾಣದಲ್ಲಿ ಎರಡನೇ ' ರನ್ ವೆ ' ನಿರ್ಮಾಣ ಕಾರ್ಯವನ್ನು ಏರ್‌ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ (AAI) (ಎಎಐ) ಸಂಸ್ಥೆಯುವರು ಕೈಗೆತ್ತಿಕೊಂಡಿರುತ್ತಾರೆ. ಅಗತ್ಯವಿರುವ ಜಮೀನನ್ನು ಒದಗಿಸುವುದು ಕರ್ನಾಟಕ ಸರ್ಕಾರದ ಜವಾಬ್ದಾರಿಯಾಗಿದ್ದು, ಈ ಬಾಬ್ತು ಈಗಾಗಲೇ ರೂ. 11.00 ಕೋಟಿಗಳನ್ನು ಖರ್ಚು ಮಾಡಿದೆ. ಭೂಮಿ ಸಮತಟ್ಟು ಮಾಡುವಿಕೆ ಇತ್ಯಾದಿ ಕಾಮಗಾರಿಗಳು ನಡೆಯುತ್ತಿವೆ. ಇದನ್ನು ಹೊರೆತುಪಡಿಸಿ, AAI ಸಂಸ್ಥೆಯವರು ಹೊಸ ಟರ್ಮಿನಲ್ ಹಾಗೂ ಇತರೆ ಸೌಲಭ್ಯಗಳನ್ನು ನಿಮೀಸಲು ಕೇಳಿರುವ 158 ಎಕರೆ ಹೆಚ್ಚುವರಿ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡು ಒದಗಿಸಲು ಕರ್ನಾಟಕ ಸರ್ಕಾರ ತೀರ್ಮಾನಿಸಿದೆ. ಇದಕ್ಕೆ ಸುಮಾರು ರೂ. 10.50 ಕೋಟಿ ಖರ್ಚಾಗುವುದು. ಕೇಂದ್ರ ಸರ್ಕಾರವು ಈ ಕಾಮಗಾರಿಗಾಗಿ ಅಗತ್ಯವಿರುವ ಹಣವನ್ನು ನೇರವಾಗಿ ಸ್ಥಳೀಯ AAI ಅಧಿಕಾರಿಗಳಿಗೆ ಒದಗಣೆ ಮಾಡುತ್ತಿದೆ.

501(1144) : ಶ್ರೀ ಯೋಗೀಶ್ ಭಟ್. ಎನ್ (ಮಂಗಳೂರು) ಮಾನ್ಯ ಮಾನ್ಯ ಬೃಹತ್,ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಂಗಳೂರು ವಿಶೇಷ ಅರ್ಥಿಕ ವಲಯ ಅಭಿವೃದ್ಧಿ ಕಾಯಗಳು ಯಾವ ಹಂತದಲ್ಲಿದೆ?

ಆ) ಬಂಡವಾಳ ಹೂಡಿಲು ಹಾಗೂ ಆಕರ್ಷಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಇದರ ಫಲಿತಾಂಶ ಏನು?

ಇ) ಈ ಬಗ್ಗೆ ಓ.ಎನ್.ಜಿ.ಸಿ. ಸಂಸ್ಥೆ ಯಾವ ಯೋಜನೆಗಳನ್ನು ಹಾಗೂ ಎಷ್ಟು ಬಂಡವಾಳ ಹೊಡಲು ಒಪ್ಪಂದ ಮಾಡಲಾಗಿದೆ (Special Econimic Zone)

ಈ) ಈ ಒಪ್ಪಂದ ಅನುಷ್ಠಾನಕ್ಕೆ ತರಲು ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳೇನು; ಅದರಿಂದ ಆಗುವ ಲಾಭಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಮಾನ್ಯ ಬೃಹತ್,ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) :

ಅ) ಮೆ. ಕೆನರಾ ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರೀಸ್ ರವರು ಕರಾವಳಿ ವಿಶೇಷ ಆರ್ಥಿಕ ವಲಯ ಪ್ರಸ್ತಾವನೆಗೆ ರಾಜ್ಯ ಸರ್ಕಾರದ ಶಿಫಾರಿಸ್ಸಿನ ಮೇರೆಗೆ ಕೇಂದ್ರ ಸರ್ಕಾರವು ತಾತ್ವಿಕ ಅನುಮೋದನೆ ನೀಡಿದೆ. ಈ ಯೋಜನೆಯನ್ನು ಖಾಸಗಿ ಬಂಡವಾಳ ಹೂಡಿಕೆದಾರರ ಸಹಯೋಗದೊಂದಿಗೆ ಕಾರ್ಯಗತಗೂಳಿಸಬೇಕಾಗಿದೆ.

ಆ) ಮೆ. ಆಯಿಲ್ ಮತ್ತು ನ್ಯಾಚುರಲ್ ಗ್ಯಾಸ್ ಕಾರ್ಪೋರೇಷನ್ ರವರು ಮಂಗಳೂರಿನಲ್ಲಿ ನೈಸರ್ಗಿಕ ಅನಿಲ ಆಮದು ಸ್ಥಾವರ ಹಾಗೂ ಇತರೆ ಬೃಹತ್ ಪೆಟ್ರೋ ಕೆಮಿಕಲ್ ಸ್ಥಾವರಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದ ಹಿನ್ನೆಲೆಯಲ್ಲಿ ಮಂಗಳೂರಿನ ಕರಾವಳಿ ವಿಶೇಷ ಆರ್ಥಿಕ ವಲಯ ಸ್ಥಾಪನೆಯಲ್ಲಿ ಪಾಲುದಾರಿಕೆ ಪಡೆಯುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ಆದರಂತೆ ಕರಾವಳಿ ವಿಶೇಷ ಆರ್ಥಿಕ ಯೋಜನೆಯನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಮೆ. ಕೆನರಾ ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರೀಸ್ , ಮೆ.ಓ.ಎನ್.ಜಿ.ಸಿ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ನಡುವೆ ಒಂದು ಒಪ್ಪಂದಕ್ಕೆ ದಿ: 30.8.2004 ರಂದು ಸಹಿ ಮಾಡಲಾಗಿದೆ ಹಾಗೂ ಯೋಜನೆಯ ಅನುಷ್ಠಾನಕ್ಕಾಗಿ ಪೂರ್ವಭಾವಿ ಸಿದ್ಧತೆಗಳನ್ನು ನಡೆಸಲಾಗಿದೆ.

ಇ) ಕರಾವಳಿ ವಿಶೇಷ ಆರ್ಥಿಕ ವಲಯದಲ್ಲಿ ಈ ಕೆಳಕಂಡ ಯೋಜನೆಗಳನ್ನು ಸ್ಥಾಪಿಸುವ ಮೆ.ಓ.ಎನ್.ಜಿ.ಸಿ / ಎಮ್.ಆರ್.ಪಿ.ಎಲ್. ರವರು ಪ್ರಸ್ತಾವನೆಗಳಿಗೆ ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿಯು ಒಪ್ಪಿಗೆ ನೀಡಿದೆ.

ಕ್ರ. ಸಂ	ಯೋಜನೆ	ಉದ್ದೇಶಿತ ಬಂಡವಾಳ
1	ಪೆಟ್ರೋ ಕೆಮಿಕಲ್ ಮತ್ತು ಆರೋಮ್ಯಾಟಿಕ್ಸ್ ಘಟಕ	7475.00
2	ಅನಿಲ ಆಧಾರಿತ 2000 MW ಶಾಖೋತ್ಪನ್ನ ವಿದ್ಯುತ್ ಘಟಕ	8594.50
3	ನೈಸರ್ಗಿಕ ಅನಿಲ ರಿ-ಗ್ಯಾಸಿಫಿಕೇಷನ್ ಘಟ್ಟಕ	3950.00
4	ಮಂಗಳೂರು – ಹಾಸನ – ಬೆಂಗಳೂರು ನೈಸರ್ಗಿಕ ಅನಿಲ ಸಾಗಾಣಿಕೆ ಪೈಪ್ಲೈನ್ ಘಟಕ	945.00
	ಒಟ್ಟು	**20964.50**

ಈ) ಕರಾವಳಿ ವಿಶೇಷ ಆರ್ಥಿಕ ವಲಯ ಸೇರಿದಂತೆ ರಾಜ್ಯದಲ್ಲಿ ಸ್ಥಾಪಿಸಲ್ಪಡುವ ಎಲ್ಲಾ ವಿಶೇಷ ಆರ್ಥಿಕ ವಲಯಗಳಿಗೆ ಪ್ರೋತ್ಸಾಹಿಸುವ ದೃಷ್ಟಿಯಿಂದ ಸರ್ಕಾರವು ಆದೇಶ ಕ್ರಮ ಸಂಖ್ಯೆ 202 ಎಸ್.ಪಿ.ಟಿ 2001 ದಿ : 25.2.2002 ರಲ್ಲಿ ರಾಜ್ಯದ ವಿಶೇಷ ಆರ್ಥಿಕ ವಲಯ ನೀತಿಯನ್ನು ಘೋಷಿಸಿದೆ. ಈ ನೀತಿಯಡಿಯಲ್ಲಿ ವಿಶೇಷ ಆರ್ಥಿಕ ವಲಯ ಯೋಜನೆ ಮತ್ತು ಅಂತಹ ವಲಯಗಳಲ್ಲಿ ಸ್ಥಾಪಿಸಲ್ಪಡುವ ಕೈಗಾರಿಕಾ ಘಟಕಗಳಿಗೆ ಮೂಲಭೂತ ಸೌಕರ್ಯ, ವಾಣಿಜ್ಯ ತೆರಿಗೆ ವಿನಾಯಿತಿ, ಕಾರ್ಮಿಕ ಖಾಯ್ದೆಗಳ ಸರಳೀಕೃತ ಅನುಷ್ಠಾನ ಮುಂತಾದ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಕರಾವಳಿ ವಿಶೇಷ ಆರ್ಥಿಕ ವಲಯ ಸ್ಥಾಪನೆಯಿಂದಾಗಿ ಮಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಫ್ತು ವಹಿವಾಟು ಹೆಚ್ಚಿಸುವ ಹಾಗೂ ಉದ್ಯೋಗವಕಾಶ ಹೆಚ್ಚಿಸುವ ನಿರೀಕ್ಷೆಯಿದೆ.

502(1145) : ಶ್ರೀ ಯೋಗೀಶ್ ಭಟ್. ಎನ್.(ಮಂಗಳೂರು) ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಂಗಳೂರು ವಿಮಾನ ನಿಲ್ದಾಣ ಅಭಿವೃದ್ಧಿ ಕಾಮಗಾರಿಗಳು ಯಾವ ಹಂತದಲ್ಲಿ ಇವೆ ಪೂರ್ಣಗೊಳಿಸಲು ತಗಲುವ ವೆಚ್ಚ ಎಷ್ಟು ಹಾಗೂ ಅವದಿ ಎಷ್ಟು?

ಆ) ಕೇಂದ್ರ ಹಗೂ ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು? ಯಾವಾಗ ಮಾಡಲಾಗಿದೆ? ಬಾಕಿಯಿರುವ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಇ) ಮಂಗಳೂರು–ಹಾಸನ ರೈಲ್ವೆ ಬ್ರಾಡ್ಗೇಜ್ ಕನ್ವರ್ಷನ್ ಕಾಮಗಾರಿಗಳ ಪೂರ್ಣಗೊಳಿಸಲು, ರಾಜ್ಯ ಸರಕಾರ ಬಿಡುಗಡೆ ಮಾಡಬೇಕಾದ ಹಣ ಎಷ್ಟು; ಯಾವಾಗ ಮಾಡಲಾಗುವುದು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಮಂಗಳೂರು ವಿಮಾನ ನಿಲ್ದಾಣದಲ್ಲಿ ಎರಡನೇ ರನ್ ವೇ ನಿರ್ಮಾಣ ಕಾರ್ಯವನ್ನು ಏರ್‌ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ(ಎಎಐ) ಸಂಸ್ಥೆಯವರು ಕೈಗೆತ್ತಿಕೊಂಡಿರುತ್ತಾರೆ. ಎರಡನೇ ರನ್‌ವೇ ಕಾಮಗಾರಿಗೆ ಕರ್ನಾಟಕ ರಾಜ್ಯ ಸರ್ಕಾರವು ಸುಮಾರು 11.00 ಕೋಟಿ ರೂ. ಗಳನ್ನು ಭೂಸ್ವಾಧೀನ ಹಾಗೂ ಪುನರ್ವಸತಿ ಕೆಲಸಗಳಿಗಾಗಿ ಖರ್ಚು ಮಾಡಿದೆ ಉಳಿದೆಲ್ಲ ಖರ್ಚುಗಳನ್ನು AAI ಸಂಸ್ಥೆಯು ಭರಿಸಲಿದೆ ರೂ. 11 ಕೋಟಿಗಳನ್ನು ಖರ್ಚು ಮಾಡಿದೆ. ಎರಡನೇ ರನ್ ವೇ ಕಾರ್ಯಾ ಡಿಸೆಂಬರ್ 2005ರ ಹೊತ್ತಿಗೆ ಪೂರ್ಣಗೊಳ್ಳುವ ಸಂಭವವಿದೆ.

ಇ) ಹಾಸನ – ಮಂಗಳೂರು ಗೇಜ್ ಪರಿವರ್ತನೆ ಯೋಜನೆಯ ಕಾಮಗಾರಿಯ ಒಟ್ಟು ವೆಚ್ಚ ರೂ. 291 ಕೋಟಿ ಆಗಿರುತ್ತದೆ. ಈ ಬಗ್ಗೆ ಸ್ಥಾಪನೆಗೊಂಡಿರುವ ಹೆಚ್.ಎಂ.ಆರ್.ಡಿ.ಸಿ (HMRDC)ಯ ಷೇರುದಾರರ ಒಪ್ಪಂದದನ್ವಯ ರಾಜ್ಯ ಸರ್ಕಾರವು ರೂ. 45 ಕೋಟಿ ಈಕ್ವಿಟಿ ನೀಡಬೇಕಾಗಿದೆ. ಈಗಾಗಲೇ ರೂ. 28 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ಕಾಮಗಾರಿಯ ಚಟುವಟಿಕೆಗಳು ಬಿರುಸಿನಿಂದ ಸಾಗಿರುತ್ತದೆ. 2005ನೇ ಸಾಲಿನ ಮಧ್ಯದಲ್ಲಿ ಈ ಮಾರ್ಗವು ಪೂರ್ಣಗೊಳ್ಳುವ ಗುರಿ ಇದೆ 2004–05ನೇ ಸಾಲಿನ ಪೂರಕ ಅನುದಾನದಲ್ಲಿ ರೂ. 17 ಕೋಟಿಗಳ ಮೊತ್ತವನ್ನು ಒದಗಿಸಲು ಆರ್ಥಿಕ ಇಲಾಖೆಯನ್ನು ಕೋರಲಾಗಿದೆ.

503(1146)ಶ್ರೀ ಯೋಗೇಶ್ ಭಟ್.ಎಸ್.ವಿಧಾನ ಸಭಾ ಸದಸ್ಯರು (ಮಂಗಳೂರು) ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಂಗಳೂರಿನ ವಿಶೇಷ ಆರ್ಥಿಕ ವಲಯದ ಅಭಿವೃದ್ಧಿ ಒ.ಎನ್.ಜಿ.ಸಿ.ಯೋಜನೆಯ ಅನುಷ್ಠಾನ (25 ಸಾವಿರ ಕೋಟಿ) ಆಗುವಂತೆ ರಾಜ್ಯ ಸರಕಾರ ಕೈಗೊಂಡ ಕ್ರಮಗಳೇನು; ಈ ಯೋಜನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ರಾಜ್ಯದಲ್ಲಿ ಉಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಆ. ಮಂಗಳೂರು–ಹಾಸನ ರೈಲ್ವೆ ಬ್ರಾಡ್‌ಗೇಜ್ ಕನ್ವರ್ಷನ್ ಕಾಮಗಾರಿಗಳ ಪೂರ್ಣಗೊಳಿಸಲು, ಮಂಗಳೂರು ವಿಮಾನ ನಿಲ್ದಾಣವನ್ನು ಅಂತರಾಷ್ಟ್ರೀಯವಾಗಿ ಬೆಳೆಸಲು ರಾಜ್ಯ ಸರ್ಕಾರದ ಕ್ರಮಗಳೇನು; ಬಿಡುಗಡೆ ಮಾಡಬೇಕಾದ ಹಣ ಎಷ್ಟು; ಯಾವಾಗ ಮಾಡಲಾಗುವುದು;

ಶ್ರೀ ಪಿ.ಜಿ.ಆರ್.ಸಿಂಧ್ಯ (ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) :

ಅ. ಮಂಗಳೂರಿನಲ್ಲಿ ಕರಾವಳಿ ವಿಶೇಷ ಆರ್ಥಿಕ ವಲಯವನ್ನು ಸ್ಥಾಪಿಸಲು ಮೆ;ಕೆನರ ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರೀಸ್‌ರವರು ಅರ್ಜಿ ಸಲ್ಲಿಸಿದ್ದು, ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇರೆಗೆ ಕೇಂದ್ರ ಸರ್ಕಾರವು ಯೋಜನೆಗೆ ಅನುಮೋದನೆ ನೀಡಿದೆ. ತದನಂತರ ಮೆ; ಆಯಿಲ್ ಮತ್ತು ನ್ಯಾಚುರಲ್ ಗ್ಯಾಸ್ ಕಾರ್ಪೋರೇಷನ್‌ರವರು ಮಂಗಳೂರಿನಲ್ಲಿ ನೈಸರ್ಗಿಕ ಅನಿಲ ಆಮದು ಸ್ಥಾವರ ಮತ್ತು ಇತರೆ ಬೃಹತ್ ಪೆಟ್ರೋ ಕೆಮಿಕಲ್ ಸ್ಥಾವರಗಳನ್ನು ಸ್ಥಾಪಿಸುವ ಬೃಹತ್ ಯೋಜನೆಗಳನ್ನು ಹಮ್ಮಿಕೊಂಡಿದ್ದು, ಈ ಯೋಜನೆಗಳನ್ನು ಕರಾವಳಿ ವಿಶೇಷ ಆರ್ಥಿಕ ವಲಯದಲ್ಲಿ ಸ್ಥಾಪಿಸುವ ಬಗ್ಗೆ ಹಾಗೂ ಕರಾವಳಿ ವಿಶೇಷ ಆರ್ಥಿಕ ವಲಯ ಯೋಜನೆಗಳನ್ನು ಪಾಲ್ಗೊಳ್ಳುವಿಕೆ ಬಗ್ಗೆ ಒ.ಎನ್.ಜಿ.ಸಿ. ಸಂಸ್ಥೆಯು ಇಚ್ಛೆ ವ್ಯಕ್ತಪಡಿಸಿದ್ದಾರೆ. ಅದರಂತೆ ಮೆ; ಕೆನರ ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರೀಸ್, ಮೆ; ಒ.ಎನ್.ಜಿ.ಸಿ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಭಿವೃದ್ಧಿ ಮಂಡಳಿ ನಡುವಿನ ಒಂದು ಒಡಂಬಡಿಕೆಯನ್ನು ದಿನಾಂಕ : 30.08.2004ರಂದು ಸಹಿ ಮಾಡಲಾಗಿದೆ. ಯೋಜನೆಯ ಪೂರ್ವಭಾವಿ ಕಾರ್ಯಗಳನ್ನು/ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ.

ಪ್ರತ್ಯೇಕವಾಗಿ ಒ.ಎನ್.ಜಿ.ಸಿ./ ಎಂ.ಆರ್.ಪಿ.ಎಲ್ ರವರು ಸಲ್ಲಿಸಿದ ಈ ಕೆಳಕಂಡ ಯೋಜನೆಗಳಿಗೂ ಸಹ ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ ವತಿಯಿಂದ ಒಪ್ಪಿಗೆ ನೀಡಲಾಗಿದೆ.

ಕ್ರ. ಸಂ	ಯೋಜನೆ	ಉದ್ದೇಶಿತ ಬಂಡವಾಳ
1	ಪೆಟ್ರೋ ಕೆಮಿಕಲ್ ಮತ್ತು ಆರೋಮ್ಯಾಟಿಕ್ಸ್ ಘಟಕ	7475.00
2	ಅನಿಲ ಆಧಾರಿತ 2000 MW ಶಾಖೋತ್ಪನ್ನ ವಿದ್ಯುತ್ ಘಟಕ	8594.50

3	ನೈಸರ್ಗಿಕ ಅನಿಲ ರಿ–ಗ್ಯಾಸಿಫಿಕೇಷನ್ ಘಟ್ಟಕ	3950.50
4	ಮಂಗಳೂರು – ಹಾಸನ – ಬೆಂಗಳೂರು ನೈಸರ್ಗಿಕ ಅನಿಲ ಸಾಗಾಣಿಕೆ ಪೈಪ್ಲೈನ್ ಘಟಕ	945.00
	ಒಟ್ಟು	**20964.50**

ಆ) ಮಂಗಳೂರು ವಿಮಾನ ನಿಲ್ದಾಣವನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಅಭಿವೃದಿಗೊಳಿಸಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಜೊತೆಗೂಡಿ ಅಗತ್ಯ ಕ್ರಮಗಳನ್ನು ಜರುಗಿಸಿದೆ. ಎರಡನೇ ರನ್ ವೇ ನಿರ್ಮಾಣ ಕಾರ್ಯಕ್ಕೆ ಒಟ್ಟಾರೆ ಅಗತ್ಯವಿರುವ 186.33 1/2 ಎಕರೆ ಜಮೀನ್ನು AAI ಗೆ ಹಸ್ತಾಂತರಿಸಲಾಗಿದೆ. ವಿಸ್ತಾರಣಾ ಕಾರ್ಯಕ್ಕೆ ಅಗತ್ಯವಿರುವ ಭೂಸ್ವಾಧೀನ ಸಂಬಂಧ ಈಗಾಗಲೇ ರೂ. 11.00 ಕೋಟಿಗಳನ್ನು ರಾಜ್ಯ ಸರ್ಕಾರವು ಬಿಡುಗಡೆ ಮಾಡಿದೆ.

ಹಾಸನ – ಮಂಗಳೂರು ಗೇಜ್ ಪರಿವರ್ತನೆ ಯೋಜನೆಯ ಕಾಮಗಾರಿಯ ಒಟ್ಟು ವೆಚ್ಚ ರೂ. 291ಕೋಟಿ ಆಗಿರುತ್ತದೆ. ಹೆಚ್ಎಂಆರ್‌ಡಿಸಿ ಷೇರುದಾರರ ಒಪ್ಪಂದದನ್ವಯ ರಾಜ್ಯ ಸರ್ಕಾರವು ರೂ. 45 ಕೋಟಿ ಈಕ್ವಿಟಿ ನೀಡಬೇಕಾಗಿದೆ. ಈಗಾಗಲೇ ರೂ. 28 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ.

ಕಾಮಗಾರಿಯ ಚಟುವಟಿಕೆಗಳು ಬಿರುಸಿನಿಂದ ಸಾಗಿರುತ್ತದೆ. 2005ನೇ ಸಾಲಿನ ಮಧ್ಯದಲ್ಲಿ ಈ ಮಾರ್ಗವು ಪೂರ್ಣಗೊಳ್ಳುವ ನಿರೀಕ್ಷೆ ಇದೆ. 2004–05 ನೇ ಸಾಲಿನ ಪೂರಕ ಅನುದಾನದಲ್ಲಿ ರೂ. 17ಕೋಟಿಗಳ ಮೊತ್ತವನ್ನು ಒದಗಿಸಲು ಆರ್ಥಿಕ ಇಲಾಖೆಯನ್ನು ಕೋರಲಾಗಿದೆ.

ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2005
(2005ರ ವಿಧಾನಸಭೆಯ ವಿಧೇಯಕ ಸಂಖ್ಯೆ 2)

ಕನಾಟಕ ರಾಜ್ಯಕ್ಕೆ ವಿದ್ಯುಚ್ಛಕ್ತಿ ಅಧಿನಿಯಮ, 2003ರ ಅನ್ವಯದ ಸಂಬಂಧದಲ್ಲಿ ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕುಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯಕ್ಕೆ ವಿದ್ಯುಚ್ಛಕ್ತಿ ಅಧಿನಿಯಮ, 2003 (2003ರ ಕೇಂದ್ರ ಅಧಿನಿಯಮ 36) ಅನ್ವಯಿಸುವ ಸಂಬಂಧದಲ್ಲಿ ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:–

(1) ಈ ಅಧಿನಿಯಮವನ್ನು ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2005 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 151ನೇ ಪ್ರಕರಣದ ಪ್ರತಿಯೋಜನೆ:-

ವಿದ್ಯುಚ್ಛಕ್ತಿ ಅಧಿನಿಯಮ, 2003 (2003ರ ಕೇಂದ್ರ ಅಧಿನಿಯಮ 36 151ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"151. ಅಭಿಯೋಜನೆಯನ್ನು ಪ್ರಾರಂಭಿಸುವುದು:- ರಾಜ್ಯ ಸರ್ಕಾರ ಅಥವಾ ಒಬ್ಬ ಲೈಸನ್ಸುದಾರ ಅಥವಾ ಈ ಅಧಿನಿಯಮದ ಅಡಿಯಲ್ಲಿ ಒಂದು ಉತ್ಪಾದನಾ ಕಂಪನಿ ಅಥವಾ ರಾಜ್ಯ ಸರ್ಕಾರವು ಅಥವಾ ಒಬ್ಬ ಲೈಸನ್ಸುದಾರ ಅಥವಾ ಉತ್ಪಾದನಾ ಕಂಪನಿಯ ಅಧಿಕಾರ ನೀಡಿದಂಥ ಒಬ್ಬ ಅಧಿಕಾರಿ ಅಥವಾ ಅಪರಾಧವೆಂದು ಆರೋಪಿಸಲಾದ ಕೃತದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯ ಕೋರಿಕೆಯ ಮೇಲಲ್ಲದೆ ಈ ಅಧಿನಿಯಮದ ಅಥವಾ ಅದರಡಿ ಹೊರಡಿಸಿದ ಯಾವುದೇ ನಿಯಮ, ವಿನಿಯಮ, ಲೈಸನ್ಸು ಅಥವಾ ನಾಡಿದ ಆದೇಶದ ಅಡಿಯಲ್ಲಿಯ ಯಾವುದೇ ಅಪರಾಧಕ್ಕಾಗಿ ಯಾವೊಬ್ಬ ವ್ಯಕ್ತಿಯ ಅಭಿಯೋಜನೆಯನ್ನು ಪ್ರಾರಂಭಿಸತಕ್ಕದ್ದಿಲ್ಲ."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಅಧಿನಿಯಮದ ಅಡಿಯಲ್ಲಿ ಅಪರಾಧಗಳ ಸಂಜ್ಞಾನವನ್ನು ತೆಗೆದುಕೊಳ್ಳಲು ಪ್ರಾಧಿಕೃತ ನ್ಯಾಯಾಲಯಗಳು (ವಿಶೇಷ ನ್ಯಾಯಾಲಯಗಳು) ಮುಂದೆ ಫಿರ್ಯಾದನ್ನು ದಾಖಲು ಮಾಡುವುದಕ್ಕೆ ರಾಜ್ಯದಲ್ಲಿ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಸ್ಥಾಪಿತವಾದ ಪೊಲೀಸು ವಿವಕ್ಷಣ(ವಿಜಿಲೆನ್ಸ್) ಸ್ಟೇಷನ್‌ಗಳಿಗೆ ಅಧಿಕಾರವನ್ನು ನೀಡಲು ವಿದ್ಯುಚ್ಛಕ್ತಿ ಅಧಿನಿಯಮ, 2003ರ (2003ರ ಕೇಂದ್ರ ಅಧಿನಿಯಮ 36) 151ನೇ ಪ್ರಕರಣಕ್ಕೆ ತಿದ್ದುಪಡಿ ತರುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ವಿಧೇಯಕವನ್ನು ಅನುಷ್ಠಾನಕ್ಕೆ ತರುವುದರಿಂದ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ.

ಹೆಚ್. ಡಿ. ರೇವಣ್ಣ
ಲೋಕೋಪಯೋಗಿ ಮತ್ತು ಇಂಧನ ಸಚಿವರು

ಟಿ.ರಾಜಣ್ಣ
ಕಾರ್ಯದರ್ಶಿ

ಅನುಬಂಧ

ವಿದ್ಯುಚ್ಛಕ್ತಿ ಅಧಿನಿಯಮ 2003ರ (2003ರ ಕೇಂದ್ರ ಅಧಿನಿಯಮ 36)ಉದ್ಧೃತ ಭಾಗ

151ನೇ ಪ್ರಕರಣ:- ಯಾವುದೇ ನ್ಯಾಯಾಲಯವು ಈ ಅಧಿನಿಯದ ಅಡಿಯಲ್ಲಿ ದಂಡನೀಯವಾದ ಅಪರಾಧದ ಸಂಜ್ಞಾನವನ್ನು ಸಮುಚಿತ ಸರ್ಕಾರ ಅಥವಾ ಸಮುಚಿತ ಆಯೋಗ ಅಥವಾ ಈ ಉದ್ದೇಶಕ್ಕಾಗಿ ಅವುಗಳು ಪ್ರಾಧಿಕಾರ ನೀಡದ ಅವರ ಯಾವೊಬ್ಬ ಅಧಿಕಾರಿ ಅಥವಾ ಮುಖ್ಯ ವಿದ್ಯುತ್ ಪರಿವೀಕ್ಷಕ ಅಥವಾ ಲೈಸನ್ಸುದಾರ ಅಥವಾ ಸಂದರ್ಭಾನುಸಾರ ಕಂಪನಿಯಿಂದ ಪಡೆದ ಲಿಖಿತ ದೂರಿನ ಮೇಲೆ ಹೊರತುಪಡಿಸಿ ತೆಗೆದುಕೊಳ್ಳುವಂತಿಲ್ಲ.

ಕರ್ನಾಟಕ ವಿಧಾನಸಭೆ
ಶುಕ್ರವಾರ 28ನೇ ಜನವರಿ 2005ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1) ಪ್ರಶ್ನೋತ್ತರಗಳು:

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಪ್ರಶ್ನೆ ಸಂಖ್ಯೆ: 46 (967)

ಅಧ್ಯಕ್ಷರು : ಮಾನ್ಯ ಹಾಲಪ್ಪನವರೇ, ತಮ್ಮ ಪ್ರಶ್ನೆ ಆರ್ಥಿಕ ಇಲಾಖೆಗೆ ವರ್ಗಾವಣೆಯಾಗಿದೆ.

ಶ್ರೀ ಹೆಚ್. ಹಾಲಪ್ಪ (ಹೊಸನಗರ) : ಅದನ್ನು ಯಾವಾಗ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು : ಮಂಗಳವಾರ ತೆಗೆದುಕೊಳ್ಳುತ್ತೇನೆ.

ಪ್ರಶ್ನೆ ಸಂಖ್ಯೆ: 47(529) ಮತ್ತು 48(347)

(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ.)

ಪ್ರಶ್ನೆ ಸಂಖ್ಯೆ: 49(731)

ಅಧ್ಯಕ್ಷರು : ಮಾನ್ಯ ಕೃಷ್ಣಮೂರ್ತಿಯವರೇ, ಮಾನ್ಯ ಸಹಕಾರ ಸಚಿವರು ತಮ್ಮ ಪ್ರಶ್ನೆಗೆ ಉತ್ತರಿಸಲು ಕಾಲಾವಕಾಶ ಕೇಳಿದ್ದಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಅಧ್ಯಕ್ಷರೇ, ವಿಧಾನ ಸಭೆಯಲ್ಲಿ ನಾನು ನಾಲ್ಕನೇ ಬಾರಿಗೆ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಕಾಲಾವಕಾಶ ಕೇಳಿದ್ದಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ. ನಾನು ನನ್ನ ಅಭಿಪ್ರಾಯವನ್ನು ಹೇಳಿಬಿಡುತ್ತೇನೆ.

ಅಧ್ಯಕ್ಷರು : ಮಾನ್ಯ ಸಹಕಾರ ಸಚಿವರು ಇಲ್ಲೇ ಇದ್ದಾರೆ. ಅದೇನು ಹೇಳಬೇಕೋ ಹೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೇ, ನೀವೇನು ಬ್ಯಾಲೆಟ್ ಅನ್ನು ಮಾಡಬೇಕೆಂದು ಡೇಟ್ ಅನ್ನು ನಿಗದಿ ಮಾಡಿದ್ದೀರೋ, ಆ ದಿನಾಂಕಕ್ಕೆ ಮುಂಚಿತವಾಗಿಯೇ ನಾನು ಇದನ್ನು ಕೊಟ್ಟಿದ್ದೇನೆ. ಆದರೂ ಕೂಡ ಇದಕ್ಕೆ ಸರಿಯಾದ ಉತ್ತರ ಬರಲಿಲ್ಲವೆಂದರೆ ಹೇಗೆ? ಈಗಾಗಲೇ ಸದನದಲ್ಲಿ ನಾಲ್ಕು ಬಾರಿ ಶ್ರೀರಾಮ್ ಚಿಟ್ಸ್ ಬಗ್ಗೆ ಪ್ರಸ್ತಾಪವಾಗಿದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ತನಿಖೆ ಮಾಡಿಸುತ್ತೇನೆ ಎಂದು ಇಲ್ಲಿ ಹೇಳಿದ್ದಾರೆ. ಹೆಚ್ಚು ಕಡಿಮೆ ಇದು ಬಹು ಕೋಟಿ ರೂಪಾಯಿಗಳ ಹಗರಣವೇ ಆಗಿದೆ. ಇದೆಲ್ಲದರ ಬಗ್ಗೆ ನನ್ನ ಹತ್ತಿರ ದಾಖಲೆ ಇದೆ. ಪ್ರಶ್ನೆಗೆ ಉತ್ತರ ಕೊಡುವುದು ಬೇಡ. ಹೋಗಲಿ, ಈ ದಾಖಲೆಗಳನ್ನಾದರೂ ಪರಿಶೀಲನೆ ಮಾಡಿ, ತನಿಖೆ ಮಾಡಿಸಿ, ತಪ್ಪಿತಸ್ಥರಿಗೆ ಶಿಕ್ಷೆ ಕೊಡುತ್ತೀರಾ? ಒಂದು ವೇಳೆ ಅವರೇನಾದರೂ ತಪ್ಪಿತಸ್ಥರಲ್ಲವೆಂದು ಹೇಳಿದರೆ

ನಾನು ನನ್ನ ಶಾಸಕನ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ. ಮಾನ್ಯ ಡಿ.ಕೆ. ಶಿವಕುಮಾರ್‌ರವರು ಸಚಿವರಾಗಿದ್ದಾಗ ಇದೇ ಪ್ರಶ್ನೆ ಎರಡು ಬಾರಿ ಪ್ರಸ್ತಾಪವಾಗಿದೆ. ಮಾನ್ಯ ವಿಶ್ವನಾಥ್‌ರವರು ಸಚಿವರಾಗಿದ್ದಾಗ ಸಹ ಎರಡು ಬಾರಿ ಪ್ರಸ್ತಾಪವಾಗಿದೆ. ನಾನು ಈಗ ಸರಿಯಾದ ಸಂದರ್ಭದಲ್ಲಿ ತಮ್ಮ ಆದೇಶವನ್ನು ಪರಿಪಾಲನೆ ಮಾಡಿ ಪ್ರಶ್ನೆ ಕೇಳಿದ್ದೇನೆ. ಆದರೂ ಉತ್ತರ ಬರಲಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಮಾನ್ಯ ಸಚಿವರು ಏನು ಹೇಳುತ್ತಾರೋ ಕೇಳೋಣ ಇರಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಇದರಲ್ಲಿ ಅಧಿಕಾರಿಗಳು ಶಾಮೀಲಾಗಿದ್ದಾರೆ. ನನ್ನ ಹತ್ತಿರ ದಾಖಲೆ ಇದೆ, ತಾವು ತನಿಖೆ ಮಾಡಿಸುವುದಾದರೆ ಅದನ್ನೆಲ್ಲಾ ಕೊಡುತ್ತೇನೆ. ಪ್ರಶ್ನೆಯೂ ಬೇಡ, ಉತ್ತರವೂ ಬೇಡ, ಒಂದು ಗ್ರೂಪ್‌ನಲ್ಲಿ 40 ಜನ ಇದ್ದರೆ....

ಅಧ್ಯಕ್ಷರು : ದಯಮಾಡಿ ನಾನು ಹೇಳುವುದನ್ನು ಕೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೇ, ಒಂದೇ ಒಂದು ನಿಮಿಷ. ನಾನು ಜಾಸ್ತಿ ಮಾತನಾಡುವುದಿಲ್ಲ. ಶ್ರೀರಾಮ್ ಚಿಟ್ಸ್ ಫಂಡ್‌ನವರು ಐದು ಹೆಸರಿನಲ್ಲಿ ಸಂಸ್ಥೆಯನ್ನು ರಿಜಿಸ್ಟರ್ ಮಾಡಿಸಿದ್ದಾರೆ.

ಅಧ್ಯಕ್ಷರು : ಬೇರೆ ವಿಚಾರ ಇಲ್ಲಿ ಏಕೆ? ನೀವು ಪ್ರಶ್ನೆ ಕೇಳಿದ್ದೀರಿ. ಮಾನ್ಯ ಸಚಿವರು ಅದಕ್ಕೆ ಉತ್ತರಿಸಲು 15 ದಿವಸಗಳ ಕಾಲಾವಕಾಶವನ್ನು ಕೋರಿದ್ದಾರೆ. ಸಂಬಂಧಪಟ್ಟ ಸಚಿವರು ಇಲ್ಲೇ ಇದ್ದಾರೆ. ಮಾನ್ಯ ಸಚಿವರು 4ನೇ ತಾರೀಖಿನೊಳಗಾಗಿ ಅಂದರೆ ಈ ಅಧಿವೇಶನ ಮುಗಿಯುವುದ ರೊಳಗಾಗಿ ತಮ್ಮ ಪ್ರಶ್ನೆಗೆ ಉತ್ತರ ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಕೃಷ್ಣಮೂರ್ತಿಯವರು ಬಹಳ ಹಿರಿಯ ಸದಸ್ಯರಾಗಿದ್ದಾರೆ. ಅವರ ಬಗ್ಗೆ ನಮಗೆ ಸಾಕಷ್ಟು ಗೌರವ ಇದೆ. ದಯವಿಟ್ಟು ಅವರು ತಪ್ಪು ತಿಳಿದುಕೊಳ್ಳಬಾರದು. ಸದನದಲ್ಲಿ ಮಾನ್ಯ ಗೌರವಾನ್ವಿತ ಸದಸ್ಯರಿಗೆ ಯಾವ ವಿಚಾರದಲ್ಲಿ ಮಾಹಿತಿ ಬೇಕಾಗಿದ್ದರೂ ಸಹಿತ ನಾವು ಅವರಿಗೆ ಅದನ್ನು ಕೊಡಬೇಕಾಗುತ್ತದೆ. ಪಾರದರ್ಶಕವಾದ ರೀತಿಯಿಂದ ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನೂ ಸಹ ಅವರಿಗೆ ಕೊಡಬೇಕಾಗಿರುವುದು ಸರ್ಕಾರದ ಜವಾಬ್ದಾರಿಯಾಗಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗೇನು ಇವರು ಪ್ರಶ್ನೆ ಕೇಳಿದ್ದಾರೋ, ಈ ಪ್ರಶ್ನೆಗೆ ಇಡೀ ಶ್ರೀರಾಮ್ ಕಂಪೆನಿಯ ಇತಿಹಾಸ, ಅವರು ಯಾವಾಗ ಹುಟ್ಟಿದರು? ಕರ್ನಾಟಕದಲ್ಲಿ ಅವರ ಸುಮಾರು ಮೂರು ಸಾವಿರ ಗ್ರೂಪ್ಸ್ ಇವೆ, ಪ್ರತಿಯೊಂದು ಗ್ರೂಪ್‌ನಲ್ಲಿ 30–40 ಜನ ಮೆಂಬರ್ಸ್ ಇದ್ದಾರೆ, ಅವರ ಹೆಸರುಗಳ ಬಗ್ಗೆ ಮಾಹಿತಿಗಳನ್ನೆಲ್ಲಾ ಸಂಗ್ರಹಿಸಬೇಕಾಗಿದೆ. ಇದೆಲ್ಲಾ ಮಾಹಿತಿಯನ್ನು ಒಂದು ವಾರದಲ್ಲಿ ತರಿಸಲಿಕ್ಕೆ ಸಾಧ್ಯವಿದೆಯೇ ಎಂಬುದನ್ನು ಮಾನ್ಯ ಸದಸ್ಯರೇ ವಿಚಾರ ಮಾಡಬೇಕು. ಲೆಜಿಸ್ಲೇಚರ್‌ನಲ್ಲಿ ಇಂತಹ ವಿಚಾರಗಳನ್ನು

ಬೇರೆ ಬೇರೆ ಮಾರ್ಗಗಳಿಂದ ತರಲಿಕ್ಕೆ ಅವಕಾಶ ಇದೆ. ಅದಕ್ಕಾಗಿ half an hour discussion ಇದೆ ಅಥವಾ ಮತ್ತಿತರ ಮಾರ್ಗಗಳಿವೆ. ಇಂತಹ ಪ್ರಶ್ನೆಗಳಿಗೆ ಉತ್ತರಿಸಲು ನಾನು ಸಾವಿರಾರು ಜನರ ಹೆಸರುಗಳ ಬಗ್ಗೆ ಮಾಹಿತಿ ಸಂಗ್ರಹಿಸಬೇಕಾಗುತ್ತದೆ. ಸಾವಿರಾರು ಜನರ ಹೆಸರುಗಳನ್ನು ನಾನು ಕೇವಲ 4–5 ದಿವಸಗಳಲ್ಲಿ ಹೇಗೆ ತರಲಿಕ್ಕೆ ಸಾಧ್ಯವಿದೆ? ಹಾಗಾಗಿ ಇದಕ್ಕೆ answer ಮಾಡುವುದು practically difficult ಇದೆ. Specific ಆಗಿ ಇಂತಹ ಕೇಸ್‌ನಲ್ಲಿ ಅನ್ಯಾಯವಾಗಿದೆ ಎಂದು ಕೇಳಿದ್ದಲ್ಲಿ, ಆ ಬಗ್ಗೆ ನಾಳೆ ಅಥವಾ ನಾಡಿದ್ದೇ ಉತ್ತರಿಸಲು ಸಾಧ್ಯವಿದೆ, I agree. ಅವರಲ್ಲಿ ಮೂರು ಸಾವಿರ ಗ್ರೂಪ್ಸ್ ಇವೆ. ಆ ಮೂರು ಸಾವಿರ ಗ್ರೂಪ್‌ನಲ್ಲಿ 10–20 ಸಾವಿರ ಜನ ಮೆಂಬರ್ಸ್ ಇದ್ದಾರೆ. ಆ ಮೆಂಬರ್ ಯಾರು? ಅವರ ಇತಿಹಾಸ ಏನು? ಅವರ ಹೆಸರಿನ ಮಾಹಿತಿ ತರಬೇಕಾದರೆ naturally I want quite some time. ಹಾಗಾಗಿ ಮಾನ್ಯ ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಅವರು Specific ಆಗಿ ಏನಾದರು ಪ್ರಶ್ನೆ ಕೇಳಿದರೆ, ಅದರ ಬಗ್ಗೆ ನಾನು specific ಆಗಿ ಇಲ್ಲೇ ಉತ್ತರ ಕೊಡುತ್ತೇನೆ ಅಥವಾ ಅವರನ್ನು ನನ್ನ ಛೇಂಬರ್ಸ್‌ಗೆ ಕರೆಸಿ ಅವರಿಗೆ ಏನೆಲ್ಲಾ ಮಾಹಿತಿ ಬೇಕೋ ಅದನ್ನು ಕೊಡುತ್ತೇನೆ. ಆದರೆ ಅವರು ಈಗ ಕೇಳಿರುವಂತಹ ಈ ಪ್ರಶ್ನೆಗೆ ಉತ್ತರ ಕೊಡಬೇಕಾದರೆ, I require a minimum of one-month time. ಅದಕ್ಕಿಂತ ಮುಂಚೆ ಇದಕ್ಕೆ ಕೊಡಲಿಕ್ಕಾಗುವುದಿಲ್ಲ. ಇದಕ್ಕೆ ಉತ್ತರ ಕೊಡುವುದು ಬಹಳ difficult ಇದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಇದರ ಬಗ್ಗೆ ಸಂಬಂಧಪಟ್ಟ ದಾಖಲೆಗಳ ಮಾಹಿತಿ ನನ್ನ ಬಳಿ ಇದೆ. ತೆಲಗಿ ಪ್ರಕರಣದಷ್ಟೇ ದೊಡ್ಡ ಪ್ರಕರಣ ಇದು. ಇದೇನೂ ಸಣ್ಣ ಪ್ರಕರಣವಲ್ಲ.......

ಅಧ್ಯಕ್ಷರು : ಮಾನ್ಯ ಕೃಷ್ಣಮೂರ್ತಿಗಳೇ,.............

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ. ದಯವಿಟ್ಟು ನನಗೆ ಮಾತನಾಡಲು ಅವಕಾಶ ಕೊಡಿ. ಮಾನ್ಯ ಸದಸ್ಯರು ಕೇಳುವಂತಹ ಪ್ರಶ್ನೆಗಳಿಗೆ ಸರಿಯಾದ ಉತ್ತರ ಸಿಗದಿದ್ದರೆ ಪ್ರಶ್ನೋತ್ತರ ವೇಳೆ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ..........

ಅಧ್ಯಕ್ಷರು : ದಯಮಾಡಿ ತಾವು ನಾನು ಹೇಳುವುದನ್ನು ಕೇಳಬೇಕು. ಸುಮ್ಮನೆ ಕಾಲಹರಣ ಮಾಡುವುದು ಬೇಡಿ. ನಿಮ್ಮ ಪ್ರಶ್ನೆಯನ್ನು ಮುಂದೂಡಿದ್ದೇನೆ. ಮಾನ್ಯ ಸಚಿವರು ಯಾವ ಕಾರಣಕ್ಕೋಸ್ಕರ ಉತ್ತರಿಸಲು ವಿಳಂಬವಾಗಿದೆ ಎಂದು ಹೇಳಿದ್ದಾರೆ. ಬೇರೆ ರೀತಿಯಲ್ಲಿ ಈ ವಿಚಾರವನ್ನು ಚರ್ಚಿಸಬಹುದು ಎಂದು ಹೇಳಿದ್ದಾರೆ....... ನಾನು ಹೇಳುವುದನ್ನು ಕೇಳುವುದಿಲ್ಲವಲ್ಲಾ

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಒಟ್ಟಿನಲ್ಲಿ ಮಾನ್ಯ ಸಚಿವರು ಎಷ್ಟು ದಿವಸಗಳಲ್ಲಿ ಉತ್ತರ ಕೊಡುತ್ತಾರೆ ಎಂಬುದನ್ನಾದರೂ ಹೇಳಲಿ.

ಅಧ್ಯಕ್ಷರು : ಎಲ್ಲಾ ದಾಖಲಾತಿಗಳೂ ನನ್ನ ಹತ್ತಿರ ಇದೆ, ಇಲಾಖೆಯ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ, ಇದು ಈ ಹಿಂದೆ ಅನೇಕ ಸಾರಿ ಪ್ರಸ್ತಾಪವಾಗಿದೆ ಮುಂತಾದ ವಿಚಾರಗಳನ್ನೆಲ್ಲಾ ತಾವಿಲ್ಲಿ ಹೇಳಿದ್ದೀರಿ. ಬೇರೆ ರೀತಿಯಲ್ಲಿ ಇದನ್ನು ಚರ್ಚೆ ಮಾಡುವುದಕ್ಕೆ ತೆಗೆದುಕೊಂಡು ಬನ್ನಿ, ನಾನು ಅದಕ್ಕೆ ಅವಕಾಶ ಕೊಡುತ್ತೇನೆ. ಇದರ ಬಗ್ಗೆ ಚರ್ಚೆಯಾಗಲಿ. ಆಗ ಸರ್ಕಾರದವರು ಏನು ಉತ್ತರ ಹೇಳುತ್ತಾರೋ ನೋಡೋಣ. ಚರ್ಚೆ ನಡೆದು ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವಂತಾಗಲಿ. ಆದ್ದರಿಂದ ಇದನ್ನು ತಾವು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

ಸಮಗ್ರ ಗೇರು ಅಭಿವೃದ್ಧಿ ಯೋಜನೆ

50(1248) ಶ್ರೀ ಯೋಗೀಶ್ ಭಟ್. ಎನ್ (ಮಂಗಳೂರು) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಎಷ್ಟು ಹೆಕ್ಟೇರ್ ಪ್ರದೇಶಗಳಲ್ಲಿ ಗೇರು ಕೃಷಿಯನ್ನು ಬೆಳೆಯಲಾಗುತ್ತಿದೆ (ಜಿಲ್ಲಾವಾರು ಮಾಹಿತಿ ನೀಡುವುದು) ಸದರಿ ಜಿಲ್ಲೆಗಳಲ್ಲಿ ಉತ್ಪನ್ನವಾಗುತ್ತಿರುವ ಗೇರು ಬೀಜಗಳ ಪ್ರಮಾಣ ಎಷ್ಟು;

ಆ) ಸಮಗ್ರ ಗೇರು ಅಭಿವೃದ್ಧಿ ಯೋಜನೆ ಅಡಿಯಲ್ಲಿ ಉತ್ತಮ ಗುಣಮಟ್ಟದ ಗೇರು ಸಸಿಗಳನ್ನು ವಿತರಿಸಲು ನೀಡಲಾದ ಅನುದಾನದ ಮೊತ್ತ ಎಷ್ಟು;

ಇ) ಆರ್ಥಿಕ ಬೆಳೆಯಾದ ಗೇರು ಕೃಷಿಗೆ ಪ್ರೋತ್ಸಾಹಿಸುವ ದಿಶೆಯಲ್ಲಿ ಸರಕಾರದ ಕಾರ್ಯಕ್ರಮಗಳೇನು;

ಈ) ಗೇರು ಹಣ್ಣನ್ನು ಉಪಯುಕ್ತವಾಗಿ ಬಳಸಲು ಪೂರಕ ಯೋಜನೆಗಳನ್ನು ಸರಕಾರವು ರೂಪಿಸಿ ಕಾರ್ಯಗತಗೊಳಿಸಿದೆಯೆ ಹಾಗೂ ಹೌದಾದಲ್ಲಿ ವಿವರಗಳೇನು;

ಉ) ಗೇರು ಕೃಷಿ ಕುರಿತಾದ ಸಂಶೋಧನಾ ಕಾರ್ಯಕ್ರಮಗಳನ್ನು ಸರಕಾರ ಜಾರಿಗೊಳಿಸಿದೆಯೆ ಹಾಗೂ ಹೌದಾದಲ್ಲಿ ವಿವರಗಳೇನು?

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು)

ಅ) ರಾಜ್ಯದಲ್ಲಿ ಗೇರು ಬೆಳೆಯನ್ನು 61,571 ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತಿದೆ. ಇದರ ಉತ್ಪನ್ನವು 1.05 ಲಕ್ಷ ಟನ್ ಇರುತ್ತದೆ. ಜಿಲ್ಲಾವಾರು ಮಾಹಿತಿಯು ಈ ಕೆಳಗಿನಂತಿರುತ್ತದೆ.

ಕ್ರ. ಸಂ.	ಜಿಲ್ಲೆಗಳು	ವಿಸ್ತೀರ್ಣ (ಹೆ) (2000-01)	ಉತ್ಪಾದನೆ (ಟನ್ಸ್)
1	2	3	4
1.	ಬೆಂಗಳೂರು (ನಗರ)	88	120
2.	ಬೆಂಗಳೂರು (ಗ್ರಾ)	147	294
3.	ಕೋಲಾರ	2506	4503
4.	ತುಮಕೂರು	43	67
5.	ದಾವಣಗೆರೆ	48	84
6.	ಶಿವಮೊಗ್ಗ	2202	3209
7.	ಮೈಸೂರು	277	342
8.	ಚಾಮರಾಜನಗರ	117	176
9.	ಮಂಡ್ಯ	60	79
10.	ಕೊಡಗು	1770	2655
11.	ದಕ್ಷಿಣ ಕನ್ನಡ	27662	41916
12.	ಉಡುಪಿ	20557	41114
13.	ಹಾಸನ	77	82
14.	ಚಿಕ್ಕಮಗಳೂರು	366	176
15.	ಬೆಳಗಾವಿ	3409	6192
16.	ಧಾರವಾಡ	9	18
17.	ಹಾವೇರಿ	19	29
18.	ಉತ್ತರ ಕನ್ನಡ	2107	3549
19.	ಕೊಪ್ಪಳ	2	3
20.	ಬಳ್ಳಾರಿ	5	5
21.	ಬೀದರ್	90	44
	ಒಟ್ಟು	**61571**	**104807**

ಆ) ಕೇಂದ್ರ ಪುರಸ್ಕೃತ ಸಮಗ್ರ ಗೇರು ಅಭಿವೃದ್ಧಿ ಯೋಜನೆ ಅಡಿಯಲ್ಲಿ ಉತ್ತಮ ಗುಣಮಟ್ಟದ ಗೇರು ಸಸಿಗಳನ್ನು ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ವಿತರಿಸಲು 2004-05ನೇ ಸಾಲಿನಲ್ಲಿ ರೂ.75.79 ಲಕ್ಷಗಳ ಅನುದಾನವನ್ನು ನೀಡಲಾಗಿದೆ

ಇ) ಗೇರು ಕೃಷಿಯುನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಹೊಸ ಹಾಗೂ ಅಧಿಕ ಇಳುವರಿ ನೀಡುವ ತಳಿಗಳ ಗೇರು ಕಸಿಗಿಡಗಳನ್ನು ಪ್ರತಿ ಫಲಾನುಭವಿಗೆ ರೂ. 3000 ವರೆಗೆ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ಆಯ್ದ ರೈತರಿಗೆ ಉಚಿತವಾಗಿ ನೀಡಲಾಗುತ್ತಿದೆ.
2. ರೈತರಿಗೆ ಗೋಡಂಬಿ ಆಧುನಿಕ ಬೇಸಾಯ ಕ್ರಮಗಳ ಬಗ್ಗೆ ತರಬೇತಿ ನೀಡಲಾಗುತ್ತಿದೆ.
3. ಗೋಡಂಬಿ ಬೆಳೆಗೆ ಬೀಳುವ ಕೀಟ ಮತ್ತು ರೋಗಗಳ ನಿರ್ವಹಣೆಗೆ ಗೋಡಂಬಿ ಬೆಳೆಗಾರರಿಗೆ ವಿವಿಧ ಹತೋಟಿ ಕ್ರಮಗಳನ್ನು ಪಾಲಿಸಲು ತರಬೇತಿ ನೀಡಲಾಗುತ್ತಿದೆ.
4. ಗೋಡಂಬಿ ಬೆಳೆಗೆ ಬೀಳುವ ಕೀಟ ಮತ್ತು ರೋಗ ಹತೋಟಿಗಾಗಿ ಸಸ್ಯ ಸಂರಕ್ಷಣೆ ಔಷಧಿಗಳನ್ನು ಇತರೆ ತೋಟದ ಬೆಳೆಗಳಿಗೆ ನೀಡುವ ಮಾದರಿಯಲ್ಲಿ ಶೇಕಡ 50ರ ರಿಯಾಯಿತಿ ದರದಲ್ಲಿ ರೈತರಿಗೆ ನೀಡಲಾಗುತ್ತಿದೆ.
5. ಇಲಾಖಾ ತೋಟಗಾರಿಕೆ ಕ್ಷೇತ್ರಗಳಲ್ಲಿ ಉತ್ತಮ ಗುಣಮಟ್ಟದ ಗೇರು ಕಸಿ ಗಿಡಗಳ ಉತ್ಪಾದನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ.
6. ಪ್ರದೇಶಕ್ಕೆ ಸೂಕ್ತವಾದ ತಳಿಗಳನ್ನು ಗುರುತಿಸಲು ಹಾಗೂ ಅಧಿಕ ಇಳುವರಿ ನೀಡುವ ತಳಿಗಳ ಮೌಲ್ಯಮಾಪನ ಹಾಗೂ ಸಂಶೋಧನೆಗಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿರುತ್ತದೆ.
7. ಗೋಡಂಬಿ ಪ್ಲಾಂಟೇಷನ್‌ಗಳಲ್ಲಿ ಎಂಡೋಸಲ್ಫಾನ್ ಕೀಟನಾಶಕದ ಬಳಕೆಯನ್ನು ಹಿಂತೆಗೆದುಕೊಳ್ಳಲಾಗಿದೆ.
8. ಗೋಡಂಬಿಯ ಆಧುನಿಕ ಬೇಸಾಯ ಕ್ರಮದ ಬಗ್ಗೆ ವಿಚಾರಸಂಕಿರಣಗಳನ್ನು ಏರ್ಪಡಿಸಿದೆ.

ಈ) ಹೌದು. CFTRI ಸಂಸ್ಥೆಯು ಗೇರು ಹಣ್ಣಿನ ಜ್ಯೂಸ್, ಇತರೆ ಸಂಸ್ಕರಿಸಿದ ಪದಾರ್ಥಗಳನ್ನು ಉತ್ಪಾದಿಸಲು ತಂತ್ರಜ್ಞಾನವನ್ನು ರೂಪಿಸಿರುತ್ತದೆ.

ಉ) ಹೌದು. ಸಮಗ್ರ ಗೇರು ಅಭಿವೃದ್ಧಿ ಯೋಜನೆಯಡಿ ಪ್ರದೇಶಕ್ಕೆ ಸೂಕ್ತವಾದ ತಳಿಗಳನ್ನು ಗುರುತಿಸಲು ಹಾಗೂ ಅಧಿಕ ಇಳುವರಿ ನೀಡುವ ತಳಿಗಳ ಮೌಲ್ಯಮಾಪನದ ಸಂಶೋಧನೆಗಾಗಿ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಧಾರವಾಡ ವತಿಯಿಂದ ಕೈಗೊಳ್ಳಲಾಗುತ್ತಿರುವ ಸಂಶೋಧನೆ ಪ್ರಗತಿಯಲ್ಲಿರುತ್ತದೆ. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಧಾರವಾಡ ಹಾಗೂ ಭಾರತ ಸರ್ಕಾರದ ರಾಷ್ಟ್ರೀಯ ಗೇರು ಸಂಶೋಧನಾ ಕೇಂದ್ರ (ಎನ್.ಆರ್.ಸಿ.ಸಿ), ಪುತ್ತೂರುರವರು ಗೇರು ಸಂಶೋಧನೆ ಕಾರ್ಯಗಳನ್ನು ಹಮ್ಮಿಕೊಂಡಿರುತ್ತಾರೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಗೇರು ಬೀಜ ಪರಿಷ್ಕರಣ, ಅದರಲ್ಲೂ ವಿಶೇಷವಾಗಿ ರಫ್ತೋದ್ಯಮಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಇಡೀ ನಮ್ಮ ರಾಜ್ಯಕ್ಕೆ ರಫ್ತಿನ ಮೂಲಕ ಆರ್ಥಿಕ ಶಕ್ತಿಯನ್ನು ತಂದುಕೊಡುವಂತಹ ಒಂದು ಉದ್ದಿಮೆ ಇದಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಇಲ್ಲಿ ಬೆಳೆಯತಕ್ಕಂಥ ಕೃಷಿ ಉತ್ಪನ್ನಗಳಲ್ಲಿ ಗೇರು ಉತ್ಪನ್ನ ಎಷ್ಟಿದೆ ಎಂಬ ಮಾಹಿತಿ ಬೇಕಾಗುತ್ತದೆ. ಅಷ್ಟೂ ಸಾಲದೆ ವಿದೇಶಗಳಿಂದ ಅದನ್ನು ಆಮದು ಮಾಡಿ ತರುವಂತಹ ಒಂದು ಪ್ರಯತ್ನ ಕೂಡ ನಡೆಯುತ್ತಿದೆ. ಈ ನಿಟ್ಟಿನಲ್ಲಿ ಕಳೆದ ಹಲವು ವರ್ಷಗಳಲ್ಲಿ, ಇದಕ್ಕೆ ಕೊಡಬೇಕಾಗಿರುವಂತಹ ಆದ್ಯತೆಯನ್ನು ನಾವು ಕೊಟ್ಟಿಲ್ಲ. ಈ ನಿಟ್ಟಿನಲ್ಲಿ 75.79 ಲಕ್ಷ ರೂಪಾಯಿಗಳ ಅನುದಾನವನ್ನು ಮಾತ್ರ ಗೇರು ಕೃಷಿಗೆ ಸಂಬಂಧಪಟ್ಟಂತೆ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿಯಲ್ಲಿ ಕೊಟ್ಟಿದ್ದೀರಿ. ಕನಿಷ್ಟ ಇದನ್ನು 5 ಕೋಟಿ ರೂಪಾಯಿಗಳಿಗಾದರೂ ಏರಿಸಬೇಕು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಈ ನಿಟ್ಟಿನಲ್ಲಿ ತಾವು ಕೈಗೊಳ್ಳುವಂತಹ ಕಾರ್ಯಕ್ರಮಗಳೇನು?

ಶ್ರೀ ಆರ್. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಯೋಗೀಶ್ ಭಟ್‌ರವರು cashew ಬೆಳೆಯ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಇದು ಬಹಳ ಸಂತೋಷದ ವಿಷಯ. ನಿಜವಾಗಿಯೂ ಕೂಡ ಈಗ ರೈತ ಆರ್ಥಿಕವಾಗಿ ಸಬಲವಾಗಿರಬೇಕಾದರೆ, ಅದೂ ಬಯಲು ಸೀಮೆಯಲ್ಲಿ ಉತ್ತಮ ಲಾಭದಾಯಕವಾದ ಬೆಳೆ ಅಂದರೆ ಗೇರು ಕೃಷಿಯಾಗಿದೆ.

ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು 61,571 ಹೆಕ್ಟೇರ್ ಜಮೀನಿನಲ್ಲಿ ಇದನ್ನು ಬೆಳೆಯುತ್ತಿದ್ದೇವೆ. ಈಗಾಗಲೇ ನಾವು 1,04,807 ಟನ್‌ಗಳಷ್ಟು ಗೇರು ಬೀಜವನ್ನು ಉತ್ಪಾದನೆ ಮಾಡಿರತಕ್ಕಂಥದ್ದು ಇದೆ. ಇದು ಬಯಲು ಸೀಮೆ, ಬೆಂಗಳೂರು ಉತ್ತರ, ಬೆಂಗಳೂರು ರೂರಲ್, ಕೋಲಾರ, ತುಮಕೂರು, ದಾವಣಗೆರೆ, ಶಿವಮೊಗ್ಗ, ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಹಾಸನ, ಚಿಕ್ಕಮಗಳೂರು, ಬೆಳಗಾಂ, ಧಾರವಾಡ, ಹಾವೇರಿ, ಉತ್ತರ ಕನ್ನಡ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಬೀದರ್ ಈ ಎಲ್ಲಾ ಜಿಲ್ಲೆಗಳಲ್ಲಿ ಕೂಡ ಹಮ್ಮಿಕೊಂಡಿದ್ದೇವೆ. ಈಗಾಗಲೇ 75.79 ಲಕ್ಷ ರೂ.ಗಳ ಹಣವನ್ನು ಸಹಾಯಧನವಾಗಿ ರೈತರಿಗೆ ಸಸಿಗಳ ಮುಖಾಂತರ ಕೊಡುತ್ತಿದ್ದೇವೆ. ಇನ್ನು ಕೂಡ ಮುಂದೆ ಹೆಚ್ಚಿನ ರೀತಿಯಲ್ಲಿ ಆದ್ಯತೆ ಕೊಡಬೇಕೆಂಬ ಬಗ್ಗೆ ಸರ್ಕಾರದ ಚಿಂತನೆ ಮಾಡುತ್ತಿದೆ. ಈಗ ಬರತಕ್ಕಂತಹ ಆಯವ್ಯಯದಲ್ಲಿ ಈ ಬಯಲುಸೀಮೆ ಪ್ರದೇಶಗಳಿಗೆ ಲಾಭದಾಯಕವಾದ ಬೆಳೆ ಆಗಿರುವುದರಿಂದ ಇದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಚಿಂತನೆ ಮಾಡಿ, ಈಗಾಗಲೇ ಇಲ್ಲಿಂದ ಹೊರದೇಶಗಳಿಗೆ ಸುಮಾರು 2,500 ಟನ್‌ಗಳಷ್ಟು ರಫ್ತು ಮಾಡುತ್ತಿದ್ದೇವೆ. ಕಾಫಿ ಬಿಟ್ಟರೆ ಎರಡನೇ ಸ್ಥಾನದಲ್ಲಿ ಗೇರು ಬೀಜ ಉದ್ಯಮ ಇದೆ. ಹೆಚ್ಚಿನ ರೀತಿಯಲ್ಲಿ ಇದಕ್ಕೆ ಒಂದು ಸೌಲಭ್ಯವನ್ನು

ಕೊಟ್ಟು ಬಯಲು ಸೀಮೆ ರೈತರಿಗೆ ಅನುಕೂಲ ಆಗುವ ರೀತಿಯಲ್ಲಿ ಮಾಡಬೇಕೆಂಬ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ನ್ಯಾಷನಲ್ ಹಾರ್ಟಿಕಲ್ಚರ್ ಮಿಷನ್‌ನ ಸುಮಾರು 250 ಕೋಟಿ ರೂಪಾಯಿ ಯೋಜನೆಯನ್ನು ತಯಾರು ಮಾಡಿದ್ದೇವೆ. ಆ ಯೋಜನೆಯಲ್ಲಿ ಕೂಡ ಮೂರನೇ ಸ್ಥಾನವನ್ನು ಕೊಟ್ಟಿರತಕ್ಕಂಥದ್ದು ಇದೆ. ಈ ಯೋಜನೆಯಲ್ಲಿ ಕೂಡ ನಾವು ಇದನ್ನು ಅಳವಡಿಸಿದ್ದೇವೆ. ಅದೇ ರೀತಿಯಲ್ಲಿ ನ್ಯಾಷನಲ್ ರೀಸರ್ಚ್ ಸೆಂಟರ್ ಆಫ್ ಕ್ಯಾಶ್ಯೂ ಪುತ್ತೂರು ಎಂದು ಇದೆ. ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ಇದೆ ಅಲ್ಲಿ ಆಗಬಹುದು, ಅಗ್ರಿಕಲ್ಚರ್ ರಿಸರ್ಚ್ ಸೈನ್ಸ್ ಆಫ್ ಕೋಲಾರ ಡಿಸ್ಟ್ರಿಕ್ಟ್ ಎನ್ನುವುದರ ಬಗ್ಗೆ ಅಲ್ಲಿ ಆಗಬಹುದು, ಮಂಗಳೂರಿನ ಉಳ್ಳಾಲದಲ್ಲಿ ಈ ಮೂರೂ ಕೇಂದ್ರ ಸ್ಥಾನಗಳಲ್ಲಿ ಇದನ್ನು ಮಾಡುತ್ತಿದ್ದೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಡೀಟೆಲ್ಸ್ ಬರೆದು ಕೊಡುವುದು ಅಭ್ಯಾಸ. ಗೇರನ್ನು ಮಾಮೂಲಾಗಿ ಬೆಳೆಯತಕ್ಕಂತಹ ಭೂಮಿಯಲ್ಲಿ ಬೆಳೆಯುವುದಿಲ್ಲ. ಹೆಚ್ಚು ಫಲವತ್ತಾಗಿಲ್ಲದ ಭೂಮಿ, ನೀರಿನ ಸೌಕರ್ಯ ಇಲ್ಲದೆ ಇರತಕ್ಕಂತಹ ಭೂಮಿ ಮತ್ತು ಪಾಳು ಬಿದ್ದಿರುವ ಭೂಮಿಯಲ್ಲಿ ಗೇರು ಬೀಜ ಉತ್ಪಾದನೆಗೆ ಪ್ರೋತ್ಸಾಹ ಮಾಡಿ ಲ್ಯಾಂಡ್ ಗ್ರ್ಯಾಂಟ್ ಮಾಡುತ್ತಿದ್ದವು. ವಿಶೇಷವಾಗಿ ನಮ್ಮ ಬಯಲು ಸೀಮೆ ಪ್ರದೇಶಗಳಲ್ಲಿ ಇದನ್ನು ಬೆಳೆಯುತ್ತಾರೆ. ಇದು ರಫ್ತು ಬೆಳೆ ಇದೆ. ಈ ಎಲ್ಲಾ ಸ್ಕೀಮ್‌ಗಳು, ಎಲ್ಲಾ 156 ಓದುವುದರ ಬದಲು ರೈತರಿಗೆ ಗೇರು ಬೆಳೆಯುವುದಕ್ಕೆ ನೇರವಾಗಿ ಸರ್ಕಾರ ಕೊಡತಕ್ಕಂತಹ ಪ್ರೋತ್ಸಾಹ ಏನು, ತೆಗೆದುಕೊಂಡಿರತಕ್ಕಂತಹ ಕಾರ್ಯಕ್ರಮ ಏನು ಎಂಬುದನ್ನು ಹೇಳಿದರೆ ಸಾಕು. ಉಳ್ಳಾಲ ಒಂದು ವರೈಟಿ ಇದೆ. ಇಷ್ಟೆಲ್ಲಾ ಸಂಶೋಧನೆ ಆದ ಮೇಲೆ ಉಳ್ಳಾಲ ವರೈಟಿ ಒಂದರಲ್ಲಿ ಸ್ವಲ್ಪ ಲಾಭದಾಯಕ ಆಗುತ್ತಿದೆ ಎಂದು ರೈತರಿಗೆ ಮನವರಿಕೆಯಾಗಿದೆ. ಈ ಸಸಿಗಳನ್ನು ನಡೆಸುವುದಕ್ಕೆ ಎಷ್ಟು ಸಹಾಯ ಮಾಡಿದ್ದೀರಿ? ಪ್ರೋತ್ಸಾಹಧನ ಏನಾದರೂ ಕೊಡುತ್ತಿದ್ದೀರಾ? ಎಷ್ಟು ವರ್ಷಗಳಿಂದ ಈ ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಅದಾದ ಮೇಲೆ ಉತ್ಪಾದನೆ ಹೆಚ್ಚಿಗೆ ಆಗಿದೆಯೇ? ಅವರ ಹತ್ತಿರ 96 ಸ್ಕೀಮ್‌ಗಳು ಇರುತ್ತವೆ. ಅವೆಲ್ಲಾ ಓದುತ್ತಾ ಹೋದರೆ ಯಾರಿಗೆ ಅರ್ಥವಾಗುತ್ತದೆ? ನಾವು ಅಷ್ಟು ಓದಿಲ್ಲ.

ಶ್ರೀ ಆರ್. ಶ್ರೀನಿವಾಸ್ : ಮಾನ್ಯ ರಮೇಶ್ ಕುಮಾರ್‌ರವರು ಇಲ್ಲಿ ಏನು ಪ್ರಶ್ನೆ ಕೇಳಿದ್ದಾರೆ? ನಾನೂ ಒಬ್ಬ ರೈತ ನನಗೆ ಗೊತ್ತಿದೆ. ಅದರ ಬಗ್ಗೆ ಸರ್ಕಾರ ಈಗಾಗಲೇ ಕ್ರಮ ತೆಗೆದುಕೊಂಡಿದೆ. 50 ಪರ್ಸೆಂಟ್ ರಿಯಾಯಿತಿ ದರದಲ್ಲಿ ಗೊಬ್ಬರ ಕೊಡುತ್ತಿದ್ದೇವೆ. ಉಚಿತವಾಗಿ ಸಸಿಗಳನ್ನು ಕೂಡ ವಿತರಣೆ ಮಾಡುತ್ತಿದ್ದೇವೆ. ಆ ಸಸಿಗಳಲ್ಲಿ ಯಾವ್ಯಾವುದು ಇದೆ ಎಂದರೆ, ಬಹುತೇಕ ಕೋಲಾರ ಜಿಲ್ಲೆಯಲ್ಲಿ ಶ್ರೀನಿವಾಸಪುರ ಹಾಗೂ ಮುಳಬಾಗಲು ತಾಲ್ಲೂಕುಗಳಲ್ಲಿ ಹೆಚ್ಚಿನ ರೀತಿಯಲ್ಲಿ ಇದನ್ನು ಅವಲಂಬಿಸಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಶ್ರೀನಿವಾಸಪುರದಲ್ಲಿ ಕಳೆದ ಐದು ವರ್ಷಗಳಲ್ಲಿ ಉಳ್ಳಾಲ ಜಾತಿಯ ಸಸಿಗಳನ್ನು ಎಷ್ಟು ಕೊಟ್ಟಿದ್ದಾರೆ? ಯಾವ ವರ್ಗದ ರೈತರಿಗೆ ಕೊಟ್ಟಿದ್ದಾರೆ, ಅದರಿಂದ ಎಷ್ಟು ಉತ್ಪಾದನೆ ಹೆಚ್ಚಿಗೆ ಆಗಿದೆ?

ಶ್ರೀ ಆರ್. ಶ್ರೀನಿವಾಸ್ : ಕೋಲಾರ ಜಿಲ್ಲೆಯಲ್ಲಿ 2,506 ಹೆಕ್ಟೇರ್ ಎಂದರೆ ಬಹುಶ: 5,000 ಚಿಲ್ಲರೆ ಎಕರೆಗಳನ್ನು ಕೋಲಾರ ಜಿಲ್ಲೆಯಲ್ಲಿ ಕೊಟ್ಟಿರತಕ್ಕಂಥದ್ದು ಇದೆ. ತಾಲ್ಲೂಕು ವೈಸ್ ಮಾಹಿತಿ ತಾವು ಕೇಳಿದರೆ ಮುಂದೆ ಮಾಹಿತಿ ಒದಗಿಸುತ್ತೇವೆ. ಯಾರ್‍ಯಾರಿಗೆ ಎಷ್ಟು ಕೊಟ್ಟಿದ್ದೇವೆಂದು ತಿಳಿಸುತ್ತೇವೆ. ನಾವು ಸಸಿಗಳನ್ನು ಉಚಿತವಾಗಿ ಕೊಟ್ಟಿದ್ದೇವೆ. ಯಾವುದೇ ಹಣ ತೆಗೆದುಕೊಂಡಿಲ್ಲ. ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ಏನು ಉಳ್ಳಾಲ ಜಾತಿಯ ಸಸಿಗಳನ್ನು ತರಿಸಿದ್ದೇವೆ ಇದನ್ನು ಉಚಿತವಾಗಿ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ತಾವು ಗೇರು ಕೃಷಿಗೆ ಕೊಡಬೇಕಾದ ಆದ್ಯತೆಯನ್ನು ಕೊಟ್ಟಿಲ್ಲ. ಮಾನ್ಯ ಹಿರಿಯ ಸದಸ್ಯರೂ ಸಹ ಇದೇ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಕಳೆದ ಐದು ವರ್ಷಗಳಿಂದ ಪ್ರಗತಿಯಲ್ಲಿ ಇರುವಂತಹ ನಿಗಮಕ್ಕೂ ಕೂಡ ಶಕ್ತಿ ಇಲ್ಲ. ಇರುವುದರಲ್ಲಿ ಅಸೆಟ್ಸ್ ಎಷ್ಟು ಇದೆ ಅಂದರೆ ಸೋಷಿಯಲ್ ಫಾರೆಸ್ಟರಿ ಮತ್ತು ಇನ್ನಿತರ ವಿಧಾನಗಳಿಂದ ಎಂದು ತಾವು ಉತ್ತರ ಕೊಟ್ಟಿದ್ದೀರಿ. ಕೇವಲ 75 ಲಕ್ಷದಷ್ಟು ಎಂದು ಹೇಳಿಗ್ದೀರಿ, ಇಂಪೋರ್ಟ್ ಮಾಡುವುದು 30,000 ಟನ್‌ಗಳಿಗಿಂತ ಹೆಚ್ಚಿಗೆ ವಿದೇಶಗಳಿಂದ ಆಮದು ಮಾಡಿಕೊಳ್ಳುವ ಪ್ರೋಸೆಸ್ ಮಾಡುತ್ತಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಿಮ್ಮ ಇಲಾಖೆ ಇದೆಯಲ್ಲಾ ಅದಕ್ಕೆ ಕುಸ್ತಿಯಲ್ಲಿ ಮುಂಗಿನ್ ಹೊಡೆಸುವುದು ಎಂದು ಹೇಳುತ್ತಾರೆ ಎಂದರೆ ಪಲ್ಟಿ ಹೊಡೆಸುವುದು. ಇದೇ ಸದನದಲ್ಲಿ ಮಾನ್ಯ ಈಶ್ವರಪ್ಪನವರು ಮತ್ತು ಇತರೇ ಸ್ನೇಹಿತರು ಎಲ್ಲರೂ ಓಸ್ವಾಲ್ ಬಗ್ಗೆ ದೊಡ್ಡ ಗದ್ದಲ ಎಬ್ಬಿಸಿದ್ದರು. ಓಸ್ವಾಲ್ ರೈತರನ್ನೆಲ್ಲಾ ಮುಳುಗಿಸಿ ಹೋದ ತಾಳೆಗರಿ ವಿಚಾರದಲ್ಲಿ ಎಂದು ಹೇಳುತ್ತಿದ್ದರು. ಈಗ ಓಸ್ವಾಲ್ ಅನ್ನು ಮತ್ತೆ ವಾಪಸ್ ಕರೆದುಕೊಂಡು ಬರುತ್ತಿದ್ದಾರೆ. ಈ ವಿಷಯ ನಿಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ, ಈ ಇಲಾಖೆಯಲ್ಲಿ ಬಹಳ ಗಟ್ಟಿಗರು ಇದ್ದಾರೆ. ಇಲಾಖೆ ಬೆಳೆಯುವುದು ಇಲಾಖೆಯಿಂದಲೇ ಹೊರತು ರೈತರಿಗೆ ಸಹಾಯ ಮಾಡುವುದು ಮುಖ್ಯವಲ್ಲ. ಎಲ್ಲೆಲ್ಲಿ ಏನೇನು ಆಧಾಯ ಇದೆ, ಅವರಿಗೆ ಏನು ಬೆನಿಫಿಟ್ ಸಿಗುತ್ತದೆ ಅದು ಮುಖ್ಯ. ಇಂತಹವರೇ ಈ ಸ್ಕೀಮ್‌ಗಳನ್ನು ನಿಮಗೆ ಬರೆದು ಕೊಡುವುದು. ನಿಮ್ಮ ಪ್ರಾಮಾಣಿಕತೆಯನ್ನು ನಾವು ಅನುಮಾನಿಸುವುದಿಲ್ಲ. ನಿಮ್ಮ ಒಟ್ಟಿಗೆ ನಾವು ಇದ್ದೇವೆ. ಆದರೆ ನೀವು ಅವರನ್ನು ನೋಡತಕ್ಕಂತಹ ದೃಷ್ಟಿ ಬೇರೆ ಆಗಬೇಕು. ಈ ದೃಷ್ಟಿಯಲ್ಲಿ ನೀವು ನೋಡಿದರೆ ಅವರು ನಿಮ್ಮ ಕೈಗೆ ಸಿಗುವುದಿಲ್ಲ. ನಮಗೂ ನಿಮಗೂ ಹಾರ್ಟಿಕಲ್ಚರ್‌ನಲ್ಲಿ ಏನೂ ಸಿಗುವುದಿಲ್ಲ. ಮಣ್ಣು ಕೊಡುತ್ತಾರೆ ಅಷ್ಟೆ. ಪ್ರತಿ ದಿವಸ ಒಂದು ಹಿಡಿ ಮಣ್ಣು ತಿನ್ನಬೇಕು.

ಶ್ರೀ ಅರಗ ಜ್ಞಾನೇಂದ್ರ : ಗೇರು ಬಡವರ ಬೆಳೆ, ಶ್ರೀಮಂತರ ಆಹಾರ. ಕ್ಯಾಶ್ಯೂ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನವರು ಮತ್ತು ಹಾರ್ಟಿಕಲ್ಚರ್‌ನವರು ಇತ್ತೀಚೆಗೆ ಗಿಡ ಒದಗಿಸುತ್ತಿದ್ದಾರೆ. ಗ್ರಾಫ್ಟೆಡ್ ಸೀಡ್ಲಿಂಗ್ ಉಳ್ಳಾಲ-1, ಉಳ್ಳಾಲ-2 ಎಂದು ಎರಡು ವೆರೈಟಿಗಳಿವೆಯಲ್ಲಾ ಇವು ಹೆಚ್ಚಿನ ಈಲ್ಡ್ ಕೊಡುತ್ತವೆ. ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ ಹಾಗೆ ಯಾವುದಕ್ಕೂ ಬೇಡದೇ ಇರುವ ಭೂಮಿಯಲ್ಲಿ ಇದನ್ನು ಬೆಳೆಯುವುದು. ಖುಷ್ಕಿಯಲ್ಲಿ ನೀರೂ ಬೇಡ, ಗೊಬ್ಬರ ಬೇಡ ಇನ್ನೇನೂ ಬೇಡದೆ ಇರುವ ಭೂಮಿಯಲ್ಲಿ ಈ ಸೀಡ್ಲಿಂಗ್ ಹಾಕಿದರೆ ಸಾಕು ಬೆಳೆ ಬೆಳೆದುಕೊಳ್ಳುತ್ತದೆ. ಮಾನ್ಯ ಯೋಗೀಶ್ ಭಟ್‌ರವರು ಹೇಳಿದ ಹಾಗೆ ನಮ್ಮ ಕರ್ನಾಟಕ ರಾಜ್ಯ ಒಂದಕ್ಕೆ 30 ರಿಂದ 40 ಸಾವಿರ ಟನ್ ರಾನಟ್ಸ್‌ಗಳನ್ನು ಇಂಪೋರ್ಟ್ ಮಾಡಿಕೊಳ್ಳುತ್ತಿದ್ದೇವೆ. ಅದನ್ನು ನಿಲ್ಲಿಸಿ ನಮ್ಮ ಸಾವಿರಾರು ಜನ ಹೆಣ್ಣು ಮಕ್ಕಳಿಗೆ ಕೆಲಸ ಕೊಡಿಸುವ ಉದ್ಯಮ ಇದು. ಇದರಿಂದ ರೈತರಿಗೆ ಉಪಯೋಗವಾಗುತ್ತದೆ. ಮತ್ತು ಕಾರ್ಮಿಕರಿಗೆ ಉಪಯೋಗವಾಗುತ್ತದೆ. ದಯಮಾಡಿ ಮಾನ್ಯ ಸಚಿವರು ಗ್ರಾಫ್ಟೆಡ್ ಸೀಡ್ಲಿಂಗ್ ತಯಾರು ಮಾಡತಕ್ಕಂತಹ ಕೆಲಸ ಮಾಡಬೇಕು. ಸೀಡ್ಲಿಂಗ್ ಒದಗಿಸಿದರೆ ಸಾಕು ಬೇರೆ ಏನೂ ದುಡ್ಡು ಕೊಡುವ ಅವಶ್ಯಕತೆ ಇಲ್ಲ. ರೈತರು ತೆಗೆದುಕೊಂಡು ಹೋಗಿ ನೆಟ್ಟು ಜೋಪಾನವಾಗಿ ನೋಡಿಕೊಳ್ಳುತ್ತಾರೆ. ಇದಕ್ಕೆ ಬಹಳ ಡಿಮ್ಯಾಂಡ್ ಇದೆ. ಈ ವರ್ಷದ ಬಜೆಟ್‌ನಲ್ಲಿ ಸೀಡ್ಲಿಂಗ್‌ಗೋಸ್ಕರ ಎರಡು-ಮೂರು ಕೋಟಿ ರೂಪಾಯಿಗಳಾದರೂ ನಿಗದಿ ಮಾಡಿ. ಮನೆ ಕಾಂಪೌಂಡ್‌ನಲ್ಲಿ ನಾಲ್ಕು-ನಾಲ್ಕು ಗಿಡ ಹಾಕಿಕೊಂಡರೆ ಎಣ್ಣೆ ಬೆಣ್ಣೆಯ ಖರ್ಚಿಗಾಗುತ್ತದೆ. ಈ ಉದ್ಯಮವನ್ನು ಬಡವರು ಎಲ್ಲರೂ ಮಾಡುತ್ತಾರೆ. ಆದ್ದರಿಂದ, ತಾವು ಈ ಕೆಲಸವನ್ನು ಮಾಡುತ್ತೀರಾ ಹೇಳಿ?

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಚಿಕ್ಕಮಗಳೂರು ಜಿಲ್ಲೆಯ 366 ಹೆಕ್ಟೇರ್ ವಿಸ್ತೀರ್ಣದಲ್ಲಿ ಇದೆ ಎಂದು ಹೇಳಿದ್ದಾರೆ. ಮಾನ್ಯ ಆರಗ ಜ್ಞಾನೇಂದ್ರರವರು ಮತ್ತು ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ಹಾಗೆ ಪ್ರಶ್ನೆಗೆ ಉತ್ತರ ಕೊಡುವುದು ಹಳೆಯ ಸರಕು. ಇಲ್ಲಿ ಕೊಟ್ಟಿರುವ ಉತ್ತರದ ಪ್ರಕಾರ ಚಿಕ್ಕಮಗಳೂರು ಜಿಲ್ಲೆಯಲ್ಲಿ 366 ಹೆಕ್ಟೇರ್‌ನಲ್ಲಿ ಇದೆ ಎಂದು ತೋಟಗಾರಿಕೆ ಇಲಾಖೆಯವರು ಪ್ರೂವ್ ಮಾಡುತ್ತಾರಾ? ಶ್ರೀ ಆರಗ ಜ್ಞಾನೇಂದ್ರರವರು ಹೇಳಿದ ಹಾಗೆ 1991-92 ಹಾಗೂ 1993ರಲ್ಲಿ ಸ್ವಲ್ಪ ಉಳ್ಳಾಲ ಮಾದರಿಯನ್ನು ನಮ್ಮಲ್ಲಿ ಹಾಕಿದ್ದಾಗ ಚೆನ್ನಾಗಿ ಉತ್ಪಾದನೆ ಬಂದಿತ್ತು. ಅದು ಬಡವರ ಬೆಳೆ ಮತ್ತು ಶ್ರೀಮಂತರ ಆಹಾರ. ಅದಕ್ಕೆ ಬಂಗಾರದ ರೇಟ್ ಇದೆ. ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ಹಾಗೆ ಶಾಸಕರು ಕೇಳಿದ ಪ್ರಶ್ನೆಗೆ ಉದ್ಭವಿಸುವುದಿಲ್ಲ, ಗಂಭೀರವಾಗಿದೆ, ಅನುದಾನ ಈ ವರ್ಷ ಬಿಡುಗಡೆಯಾಗಿದೆ, ಬರೀ ಇದೇ ಉತ್ತರವನ್ನು ಪ್ರಶ್ನೆಗಳಿಗೆ ಕೊಡುತ್ತಿದ್ದರೆ ಶಾಸಕರು ಕೇಳಿದ ಪ್ರಶ್ನೆಗೆ ಅರ್ಥ ಇದೆಯಾ? ಇದಕ್ಕೆ ಏನಾದರೂ ಪರಿಹಾರ ಕಂಡು ಹಿಡಿಯಲೇಬೇಕು. ಸದನದಲ್ಲಿ ಒಬ್ಬ ಶಾಸಕ ಪ್ರಶ್ನೆ ಕೇಳಿದ ಮೇಲೆ

ಅದಕ್ಕೆ ಪರಿಹಾರ ಕಂಡು ಹಿಡಿಯಬೇಕಾದರೆ, ಅದು ಅನುಷ್ಠಾನಕ್ಕೆ ಬರಲಿಕ್ಕೆ ಸದನದಲ್ಲಿಯೇ ಒಂದು ಅವಕಾಶ ಮಾಡಿಕೊಡಬೇಕು. 366 ಹೆಕ್ಟೇರ್ ಪ್ರದೇಶದಲ್ಲಿದೆ ಎಂದು ಇಂದಿನ ತೋಟಗಾರಿಕೆ ಸಚಿವರು ಉತ್ತರ ಹೇಳಿದರೆ ಇನ್ನು 10 ವರ್ಷ ಬಿಟ್ಟು ಪ್ರಶ್ನೆ ಕೇಳಿದರೂ ಮುಂದಿನ ತೋಟಗಾರಿಕೆ ಸಚಿವರು 366 ಹೆಕ್ಟೇರ್ ಪ್ರದೇಶದಲ್ಲಿದೆ ಎಂದೇ ಹೇಳುತ್ತಾರೆ. ಏನು ಅಧಿಕಾರಿಗಳು ಬರೆದುಕೊಟ್ಟಿದ್ದನ್ನು ಮಂತ್ರಿಗಳು ಓದುತ್ತಾರೆ.

ಅಧ್ಯಕ್ಷರು : ಕೃಷ್ಣಮೂರ್ತಿಯವರೇ, ಶ್ರೀನಿವಾಸ್ ಅವರು ಮಂತ್ರಿಯಾಗಿದ್ದಾರೆ. ಅವರೂ ಹಾಗೆನೇ, ನೀವೂ ಮಂತ್ರಿಯಾದರೆ ನೀವೂ ಅವರ ಹಾಗೆಯೇ ನೀವೇ ಎಲ್ಲಾ ತಯಾರು ಮಾಡುವುದಕ್ಕಾಗುತ್ತದೆಯೇ?

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಶಾಸಕರು ಕಳುಹಿಸಿದ ಮೇಲೆ ಮಂತ್ರಿಗಳು ಹಿಂದಿನ ಕಡತಗಳನ್ನು ಪರಿಶೀಲನೆ ಮಾಡಿ ಶಾಸಕರಿಗೆ ಜವಾಬ್ದಾರಿಯುತವಾದ ಉತ್ತರ ಕೊಡಬೇಕಾಗುತ್ತದೆ. 366 ಹೆಕ್ಟೇರ್ ಭೂಮಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇದೆ ಎಂದು ಹೇಳಿದರೆ ಎಲ್ಲಿ ಇದೆ ಎಂದು ತೋರಿಸಲಿ. ಈ ಬೆಳೆ ಬೆಳೆಯಬೇಕಾದರೆ ಕಡೂರು ತಾಲ್ಲೂಕು ಅಥವಾ ತರೀಕೆರೆ ತಾಲ್ಲೂಕಿನಲ್ಲಿ ಮಾತ್ರ ಬೆಳೆಯ ಬೇಕಾಗುತ್ತದೆ.

ಅಧ್ಯಕ್ಷರು : ಇದನ್ನು ಪ್ರೂವ್ ಮಾಡಿದರೆ ಇದರ ಬಗ್ಗೆ ಏನಾದರೂ ವಿಚಾರಣೆ ಮಾಡಬಹುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಇದಕ್ಕೆ ಅತ್ಯಂತ ಹೆಚ್ಚು ಮಳೆ ಬೇಕಾಗಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಉಳ್ಳಾಲ ವೆರೈಟಿ ಮತ್ತು ಚಿಂತಾಮಣಿ ವೆರೈಟಿ ಎಂದು ಎರಡು ಇವೆ. ಮಾನ್ಯ ಯೋಗೀಶ್ ಭಟ್‌ರವರು ಹೇಳಿದ ಹಾಗೆ ಆ ಭಾಗದಲ್ಲಿ ಮೊದಲಿನಿಂದ ತಲೆ ತಲಾಂತರಗಳಿಂದ ಅವರದೇ ಆದ ಗೇರು ಬೀಜ ಬೆಳೆಯನ್ನು ಹಾಕಿಕೊಂಡು ಬಂದಿದ್ದಾರೆ.

ಇನ್ನೂ ಕೂಡ ಆ ರೈತರು ಅದನ್ನು ಕಿತ್ತು, ಹೊಸದನ್ನು ನಾಟುವಂತಹ ಚಿಂತನೆಗಳನ್ನು ನಾವಿನ್ನೂ ತರಬೇಕಾಗಿದೆ. ಅದು ಆ ಭಾಗದ ಜನರ ಬಗ್ಗೆಯಾಯಿತು. ನಮ್ಮ ಭಾಗದಲ್ಲಿ ಚಿಂತಾಮಣಿ-1 ಎಂಬ ತಳಿಯೊಂದನ್ನು ತೋಟಗಾರಿಕೆ ಇಲಾಖೆಯಿಂದ ನಾವು ಕಂಡುಹಿಡಿದಿದ್ದೇವೆ. ಅದು ಒಳ್ಳೆಯ ಹೈಬ್ರಿಡ್ ವೆರೈಟಿಯಾಗಿರುವುದರಿಂದ, ಇತ್ತೀಚೆಗೆ ಅಂದರೆ 2-3 ವರ್ಷಗಳಿಂದೀಚೆಗೆ ಇದರ ಮೇಲೆ ಹೆಚ್ಚಿಗೆ ಪ್ರಯೋಗಗಳನ್ನು ಮಾಡಿ ರೈತರನ್ನು ಒಪ್ಪಿಸುವಂತಹ ಕೆಲಸವಾಗುತ್ತಿದೆ. ಆ ಭಾಗದಲ್ಲಿ ಬಹಳಷ್ಟು 30-40 ವರ್ಷಗಳ ಕಾಲ ಇರುವಂತಹ ಮರಗಳನ್ನು ಕಡಿದು, ಇದನ್ನು ನೆಡಬೇಕಾದರೆ ಬಹಳ ಕಷ್ಟವಾಗುತ್ತದೆ. ಇದನ್ನು ನೆಟ್ಟರೆ ಮುಂದಿನ 4-5 ವರ್ಷಗಳ ಕಾಲ ರೈತನಿಗೆ ಫಸಲು ಬರುವುದಿಲ್ಲ. ರೈತ ಅದನ್ನು ಕಡಿದು, ಇದನ್ನು ಹಾಕಬೇಕಾದರೆ, ಮೊದಲು ಅವನ ಮನಸ್ಸನ್ನು ನಾವು ನಮ್ಮ ಕಡೆಗೆ ಎಳೆದುಕೊಳ್ಳಬೇಕಾಗುತ್ತದೆ. ಆ ಪ್ರಯತ್ನಗಳನ್ನು ತೋಟಗಾರಿಕೆ ಇಲಾಖೆ ನಡೆಸುತ್ತಿದೆ. ನಮ್ಮ ಭಾಗದಲ್ಲಿ ಚಿಂತಾಮಣಿ-1 ಇತ್ತೀಚೆಗೆ ಜನಪ್ರಿಯವಾಗುತ್ತಿದೆ.

ನಾನೂ ಕೂಡ 6 ಎಕರೆಯಲ್ಲಿ ಇದನ್ನು ಹಾಕಿದ್ದೇನೆ. ಇದು ಮೂರು ವರ್ಷಕ್ಕೆಲ್ಲಾ ಫಸಲು ಬರುವಂತಹ ಒಳ್ಳೆಯ ವೆರೈಟಿಯಾಗಿರುವುದರಿಂದ, ಇದನ್ನು ಇಡೀ ನಮ್ಮ ರಾಜ್ಯದಲ್ಲಿ ಹೆಚ್ಚಿಗೆ ಬೆಳೆಸಬೇಕಾಗಿದೆ. ಎಲ್ಲಾದರೂ ಬೆಳೆಯಲಿ, ಪ್ರಪಂಚದಲ್ಲೆಲ್ಲಾ ಇದಕ್ಕೆ ಡಿಮ್ಯಾಂಡ್ ಇರುವುದರಿಂದ, ಇದಕ್ಕೆ ಆದ್ಯತೆ ಕೊಡುವುದರ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತಿದೆ. ....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ ಪ್ರಶ್ನೆಗೆ ತೋಟಗಾರಿಕೆ ಮಂತ್ರಿಗಳು ಉತ್ತರ ಕೊಡಬೇಕಾಗಿದೆಯೋ ಅಥವಾ ಕೃಷಿ ಮಂತ್ರಿಗಳು ಉತ್ತರ ಕೊಡಬೇಕಾಗಿದೆಯೋ? ತೋಟಗಾರಿಕೆ ಸಚಿವರು ಇಲ್ಲೇ ಕುಳಿತಿದ್ದಾರಲ್ಲಾ?

ಗೊಂದಲ

ಶ್ರೀ ಕೆ. ಶ್ರೀನಿವಾಸಗೌಡ : ಅವರ ಪರವಾಗಿಯೇ ಸರ್ಕಾರದಿಂದ ನಾನು ಉತ್ತರ ಹೇಳುತ್ತಿದ್ದೇನೆ. ನಾನೇನು ಬೇರೆಯೇ? ನಾನೂ ಕೂಡ ಸರ್ಕಾರದ ಭಾಗವೇ ಆಗಿದ್ದೇನೆ. ಆ ಮಂತ್ರಿಯೇ ಉತ್ತರ ಹೇಳಬೇಕು, ಈ ಮಂತ್ರಿಯೇ ಉತ್ತರ ಹೇಳಬೇಕು ಅಂದರೆ ಹೇಗೆ?

ಗೊಂದಲ

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಸಂಬಂಧಪಟ್ಟ ಖಾತಾ ಸಚಿವರು ಇಲ್ಲೇ ಇದ್ದಾರೆ. ಮಾನ್ಯ ಕೃಷಿ ಸಚಿವರು ಮಧ್ಯೆ ಪ್ರವೇಶ ಮಾಡಿ ಅವರ ಅಪಾರ ಅನುಭವಗಳನ್ನು ಹೇಳಿದ್ದಾರೆ.

ಗೊಂದಲ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಶ್ರೀನಿವಾಸಗೌಡರು ಎಲ್ಲಾ ವಿಚಾರಗಳಲ್ಲೂ ಬಹಳ ಬುದ್ಧಿವಂತರು ಎಂಬುದು ನಮಗೆಲ್ಲಾ ಗೊತ್ತಿದೆ. ಆದರೆ ಮಂತ್ರಿಗಳು ಇಲ್ಲೇ ಕುಳಿತಿದ್ದರೂ, ನೀವು ಅವರ ಪರವಾಗಿ ಉತ್ತರ ಕೊಡುತ್ತಿರುವುದು, ಅವರನ್ನು ಅವಮಾನಿಸಿದಂತಾಗುತ್ತಿದೆ.

ಗೊಂದಲ

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಸಚಿವರು ಮೊದಲ ಬಾರಿಗೆ ಮಂತ್ರಿಗಳಾಗಿದ್ದಾರೆ....

ಗೊಂದಲ

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಒಬ್ಬ ಮಂತ್ರಿಗಳು ಹಾಜರಿದ್ದಾಗ, ಅವರ ಪರವಾಗಿ ಇನ್ನೊಂದು ಇಲಾಖಾ ಸಚಿವರು ಉತ್ತರ ಹೇಳುವುದನ್ನು ನಾವು ಕೇಳೇ ಇರಲಿಲ್ಲ. ಕನಿಷ್ಠ ಪಕ್ಷ ಅವರನ್ನು ಹೊರಗಾದರೂ ಕಳುಹಿಸಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಾಧುಸ್ವಾಮಿಯವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಅವರು ಜನತಾದಳ (ಎಸ್) ಇವರು ಕಾಂಗ್ರೆಸ್. ಅವರಿಬ್ಬರೂ ರಕ್ತ

ಸಂಬಂಧಿಗಳಾಗಿರುವುದರಿಂದ ಸ್ವಲ್ಪ ಸಹಾಯ ಮಾಡುತ್ತಿದ್ದಾರೆ. ಅದನ್ನೇಕೆ ಆಕ್ಷೇಪಿಸುತ್ತೀರಿ?

ಅಧ್ಯಕ್ಷರು : ಶ್ರೀನಿವಾಸ್‌ರವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಹೇಳಿ.

ಶ್ರೀ ಆರ್. ಶ್ರೀನಿವಾಸ್ : ದಯವಿಟ್ಟು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳು ಕೇಂದ್ರ ಸರ್ಕಾರದಲ್ಲಿ ಒಂದೇ ಇಲಾಖೆ ವ್ಯಾಪ್ತಿಯಡಿ ಬರುವುದರಿಂದ, ಬಹುಶ: ಕೆಲವು ಸಂದರ್ಭಗಳಲ್ಲಿ ಕೃಷಿ ಮಂತ್ರಿಯೂ ಉತ್ತರ ಕೊಡಬಹುದು ಅಥವಾ ತೋಟಗಾರಿಕಾ ಸಚಿವರೂ ಸಹ ಕೊಡಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಇಲ್ಲದಿದ್ದರೆ ಇವರು ಉತ್ತರ ಕೊಡಬಹುದು.

ಶ್ರೀ ಆರ್. ಶ್ರೀನಿವಾಸ್ : ಅವರು ತಮ್ಮ ಅನಿಸಿಕೆಗಳನ್ನು ಹೇಳುತ್ತಿದ್ದರಷ್ಟೇ.

ಅಧ್ಯಕ್ಷರು : ಶ್ರೀರಾಮರೆಡ್ಡಿಯವರೇ, ಪ್ರತಿಯೊಂದಕ್ಕೂ ಮಧ್ಯೆ ಪ್ರವೇಶಿಸಿದರೆ ಹೇಗೆ? ದಯಮಾಡಿ ತಾವು ಸ್ವಲ್ಪ ಸಹಕರಿಸಿ.

ಶ್ರೀ ಆರ್. ಶ್ರೀನಿವಾಸ್ : ಮಾನ್ಯ ಶ್ರೀರಾಮರೆಡ್ಡಿಯವರೇ, ಮಾನ್ಯ ಶ್ರೀನಿವಾಸಗೌಡರು ತಮ್ಮ ಅನಿಸಿಕೆಯನ್ನು ಹೇಳಿದ್ದಾರೆ, ಅಷ್ಟೇ ಹೊರತು ನನ್ನ ಇಲಾಖೆ ಬಗ್ಗೆ ಉತ್ತರ ಹೇಳಿಲ್ಲ. ಕೋಲಾರ ಜಿಲ್ಲೆಯಲ್ಲಿ ಇರತಕ್ಕಂಥ ತಳಿ ಬಗ್ಗೆ.........

ಶ್ರೀ ಜೆ.ಸಿ. ಮಾಧುಸ್ವಾಮಿ : ಮಂತ್ರಿಗಳು question hour ನಲ್ಲಿ ನಿಂತುಕೊಂಡು ಮಾತನಾಡಿದರು ಅದು ಉತ್ತರವಾಗುತ್ತದೆಯೇ ಹೊರತು ಅನಿಸಿಕೆಯಾಗುವುದಿಲ್ಲ. ಈ ಬಗ್ಗೆ ಮಾನ್ಯ ಅಧ್ಯಕ್ಷರು ತಿಳಿ ಹೇಳಬೇಕು.

ಅಧ್ಯಕ್ಷರು : ಈ ಹಿಂದೆ ಈ ತರಹದ ಅನೇಕ ಪ್ರಸಂಗಗಳು ನಡೆದಿವೆ. ಅದನ್ನೇ ದೊಡ್ಡ ವಿಷಯವನ್ನಾಗಿ ಮಾಡಿಕೊಂಡು ಅದರ ಬಗ್ಗೆ ಏಕೆ ಮಾತನಾಡುತ್ತೀರಿ? ಮಾನ್ಯ ಸಚಿವರು ತಮ್ಮ ಉತ್ತರ ಹೇಳಿ.

ಶ್ರೀ ಆರ್.ಶ್ರೀನಿವಾಸ್: ಮಾನ್ಯ ಸದಸ್ಯರು ಸದನದಲ್ಲಿ ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಉತ್ತರ ಕೊಡತಕ್ಕಂಥದ್ದು ನನ್ನ ಜವಾಬ್ದಾರಿಯಾಗಿದೆ. ಮಾನ್ಯ ಯೋಗೀಶ್ ಭಟ್‌ರವರು ಪ್ರಶ್ನೆ ಕೇಳಿದ್ದರೆ, ನೀವೇಕೆ ಕೇಳುತ್ತಿದ್ದೀರಿ ಎಂದು ನಾನು ಹೇ ವುದಕ್ಕಾಗುವುದಿಲ್ಲ. ಏಕೆಂದರೆ ಸದನದ ನಿಯಮಾವಳಿ ಪ್ರಕಾರ ನಿಮಗೂ ಕೂಡ ಪ್ರಶ್ನೆ ಕೇಳುವುದಕ್ಕೆ ಅವಕಾಶ ಇದೆ. ಅದೇ ರೀತಿಯಲ್ಲಿ ನಿಯಮಾವಳಿ ಪ್ರಕಾರ ನಾನು answer ಹೇಳಬಹುದು.......

ಗೊಂದಲ

ಶ್ರೀ ವಾಟಾಳ್ ನಾಗರಾಜ್ : ಇದು ಅಯ್ಯಪ್ಪನ ಚಾವಡಿ ಆಗಿದ್ದರೆ ತಾವು ಹಾಗೆ ಹೇಳಬಹುದಾಗಿತ್ತು. ಆದರೆ ಇದು ಅಯ್ಯಪ್ಪನ ಚಾವಡಿ ಅಲ್ಲ, ಇದು ಶಾಸನಸಭೆ..

ಗೊಂದಲ

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ಪದೇ ಪದೇ ಈ ರೀತಿಯಾಗಿ ಎದ್ದು ನಿಂತುಕೊಂಡು ಮಾತನಾಡುವಂತಾದ್ದು ಸರಿಯಲ್ಲ. ನಾನು ಇದನ್ನು ಒಪ್ಪುವುದಿಲ್ಲ. ನೀವು ಏನು ಮಾತನಾಡುವುದಿದ್ದರೂ, ನನ್ನ permission ತೆಗೆದುಕೊಂಡು ಮಾತನಾಡಬೇಕಾಗುತ್ತದೆ. ಎಲ್ಲರೂ ಎದ್ದು ನಿಂತುಕೊಂಡು, interfere ಆಗಿ ಈ ತರಹ ಮಾತನಾಡುವುದಾದರೆ, ಸಭೆ ನಡೆಸುವುದು ಬಹಳ ಕಷ್ಟವಾಗುತ್ತದೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಗೊಂದಲ

ಶ್ರೀ ಆರ್. ಶ್ರೀನಿವಾಸ್ : ಸದನದಲ್ಲಿ ಯಾರು ಪ್ರಶ್ನೆ ಕೇಳಿದರೂ ಅದಕ್ಕೆ ಉತ್ತರ ಹೇಳತಕ್ಕಂಥ ಪದ್ಧತಿ ಇದೆ. ಕೆಲವು ಸಂದರ್ಭದಲ್ಲಿ ಅನಿಸಿಕೆಗಳನ್ನು ಹೇಳುತ್ತಾರೆ. ನೀವ್ಯಾಕೆ ಅದನ್ನು ಹೇಳುತ್ತಿದ್ದೀರಿ ಎಂದು ಕೇಳುವುದಕ್ಕಾಗುವುದಿಲ್ಲ........

ಅಧ್ಯಕ್ಷರು : ಮಾನ್ಯ ಶ್ರೀನಿವಾಸ್‌ರವರೇ, ಮಾನ್ಯ ಯೋಗೀಶ್ ಭಟ್‌ರವರು ಮತ್ತು ಇನ್ನಿತರ ಸದಸ್ಯರು ಏನೆಲ್ಲಾ ಪ್ರಶ್ನೆಗಳನ್ನು ಕೇಳಿದ್ದಾರೋ ಅದಕ್ಕೆ ಉತ್ತರ ಕೊಡಿ.

ಶ್ರೀ ಆರ್. ಶ್ರೀನಿವಾಸ್ : ಮಾನ್ಯ ಸದಸ್ಯರು ಇದರಲ್ಲಿ ಎಷ್ಟು varieties ಇದೆ ಎಂದು ಕೇಳಿದ್ದಾರೆ ಇದರಲ್ಲಿ ಸುಮಾರು 24 selection varieties ಇವೆ. ಇದರಲ್ಲಿ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದಲ್ಲಿ ಎಂದು ಬೇರೆ ಬೇರೆ ಇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ Selection-2, ಉಲ್ಲಾಳ್–1, ಉಲ್ಲಾಳ್–3, ಉಲ್ಲಾಳ್–4 ಮತ್ತು ಉಲ್ಲಾಳ್–50 ಇವೆ. ನಮ್ಮ ಈ ಕಡೆಯೆಲ್ಲಾ ಚಿಂತಾಮಣಿ–1 ಹಾಕುತ್ತಾರೆ. ಈಗ ಹೊಸದಾಗಿ 'ದಾನ' ಎಂಬ ಒಂದು ತಳಿ ಅಭಿವೃದ್ಧಿಪಡಿಸಲಾಗಿದೆ. ಈ variety ಏನಿದ್ದರೂ ಕೂಡ ಕೋಲಾರದ ಬಯಲು ಸೀಮೆಗೆ ಸೀಮಿತವಾದುದಾಗಿದೆ. ಒಳ್ಳೆಯ yield ಬರತಕ್ಕಂಥ ಈ ತರಹದ ಹೊಸದಾದ ತಳಿಯೊಂದನ್ನು ನಮ್ಮ ಸಂಶೋಧನಾ ಕೇಂದ್ರದಿಂದ ಕಂಡುಹಿಡಿಯಲಾಗಿದೆ. ಇದರಿಂದ ಉತ್ಪಾದನೆ ಜಾಸ್ತಿಯಾಗುತ್ತದೆ. ಇನ್ನು ಮೂರನೇ ಪ್ರಶ್ನೆಗೆ ಉತ್ತರಿಸುವುದಾದರೆ,....

ಶ್ರೀ ಎನ್. ಯೋಗೀಶ್ ಭಟ್ : ಮೂರನೇ ಪ್ರಶ್ನೆಯನ್ನು ನಾನು ಮಾನ್ಯ ಅಧ್ಯಕ್ಷರ ಮೂಲಕ ಮತ್ತೊಮ್ಮೆ ತಮಗೆ ನೆನಪು ಮಾಡುತ್ತಿದ್ದೇನೆ. 4 ಲಕ್ಷ ಟನ್ ಗೇರು pulp ಹಾಳಾಗಿ ಹೋಗುತ್ತಿದೆ. ಇವತ್ತು ಗೇರು ಬೀಜ ಮಾತ್ರ ಸಂಸ್ಕರಣೆಯಾಗುತ್ತಿದೆ. 4 ಲಕ್ಷ ಟನ್‌ನಷ್ಟು ಗೇರು pulp ಇವತ್ತು ಯಾವುದಕ್ಕೂ ಕೂಡ ಉಪಯೋಗವಾಗುತ್ತಿಲ್ಲ. ಇದನ್ನು ಒಳ್ಳೆಯ ಪೇಯವಾಗಿ ಅಥವಾ ಇನ್ನಾವುದೇ ರೀತಿಯಲ್ಲಿ ಉಪಯೋಗ ಮಾಡುವುದಕ್ಕೆ CFTRI ಗೆ ವಹಿಸಲಾಗಿದೆ ಎಂದು ಹೇಳಿದ್ದೀರಿ. ಈ ನಿಟ್ಟಿನಲ್ಲಿ ಆಹಾರ ಸಂಸ್ಕರಣಾ ಘಟಕದ ವಲಯವನ್ನು ತಾವು ಮಂಗಳೂರಿಗೆ ಮಂಜೂರಾತಿ ಮಾಡಿಕೊಡಬೇಕು. ಈ ಮೂಲಕ ಕನಿಷ್ಠ ನಾವಾದರೂ ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಆದ್ದರಿಂದ ಈ ಒಂದು ಯೋಜನೆಗೆ ತಾವು ಅನುಮೋದನೆ ಕೊಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಆರ್. ಶ್ರೀನಿವಾಸ್ : ಮಾನ್ಯ ಸದಸ್ಯರು ಇವತ್ತು ಕೇವಲ ಬೀಜವನ್ನು ಮಾತ್ರ ಉಪಯೋಗಿಸಲಾಗುತ್ತಿದೆ, ಹಣ್ಣನ್ನು ಯಾರೂ ಕೂಡ ಉಪಯೋಗಿಸದೇ ಅದು ಕೊಳೆತು ಹೋಗುತ್ತಿದೆ ಎಂದು ಹೇಳುತ್ತಿದ್ದಾರೆ, ಇದು ನಿಜ. Food processing unit ಒಂದನ್ನು ಮಾಡಿ ಹಣ್ಣಿನಿಂದ by-products ಮಾಡಿ ಅದರ ಸದುಪಯೋಗ ಪಡೆದುಕೊಳ್ಳತಕ್ಕಂಥ ಸಲಹೆಯನ್ನೇನು ಮಾಡಿದ್ದಾರೆ, ಅದು ಬಹಳ ಉತ್ತಮವಾದುದಾಗಿದೆ. ಆ ಸಲಹೆಯನ್ನು ನಾನು ಸರ್ಕಾರದ ಗಮನಕ್ಕೆ ತರುತ್ತೇನೆ. ಕೇವಲ ಮಂಗಳೂರಿನಲ್ಲಿ ಮಾತ್ರವಲ್ಲ, ನಮ್ಮ ಏರಿಯಾದಲ್ಲೂ ಕೂಡ ಇದರ ಉತ್ಪನ್ನ ಜಾಸ್ತಿಯಾಗುತ್ತಿದೆ. ಬಹುತೇಕ ರೈತರೆಲ್ಲರೂ ಕೂಡ ಇದನ್ನೇ ಅವಲಂಭಿಸಿದ್ದಾರೆ. ಅದರಲ್ಲಿ ನಾನೂ ಕೂಡ ಒಬ್ಬನಾಗಿದ್ದೇನೆ. ನಾನೂ ಕೂಡ ಬಯಲುಸೀಮೆಯವನಾಗಿರುವುದರಿಂದ, ನಾನು ಇದನ್ನು ಸರ್ಕಾರದ ಗಮನಕ್ಕೆ ತಂದು ಸೂಕ್ತವಾದ ಕ್ರಮ ತೆಗೆದುಕೊಳ್ಳುವಂತೆ ಮಾಡುತ್ತೇನೆ. ನಾವು ಯಾವ ರೀತಿಯಲ್ಲಿ 5–6 ಕಡೆಗಳಲ್ಲಿ ಮತ್ತು ಬೆಳಗಾಂನಲ್ಲಿ ಕರ್ನಾಟಕ ಫುಡ್ ಪಾರ್ಕ್ಸ್ ಅನ್ನು ಆರಂಭಿಸುತ್ತೇವೆ ಎಂದು ಘೋಷಿಸಿದ್ದೇವೆಯೋ, ಅದೇ ರೀತಿಯಲ್ಲಿ ಇದನ್ನೂ ಕೂಡ ಮಾಡುವುದಕ್ಕೆ ಚಿಂತನೆ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.

ಅಧ್ಯಕ್ಷರು : ಈಗ ಬಿ.ಪಿ. ವೆಂಕಟಮುನಿಯಪ್ಪನವರ ಪ್ರಶ್ನೆ.

ಶ್ರೀ ಕೆ. ಪ್ರಭಾಕರ ಬಂಗೇರ : ಸನ್ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಗೋಡಂಬಿಯ ವಿಚಾರವಾಗಿ......

ಅಧ್ಯಕ್ಷರು : ಈಗ ಮಾನ್ಯ ವೆಂಕಟಮುನಿಯಪ್ಪನವರು ತಮ್ಮ ಪ್ರಶ್ನೆಯನ್ನು ಕೇಳಬೇಕು. ದಯಮಾಡಿ ಮಾನ್ಯ ಬಂಗೇರಾರವರು ಕುಳಿತುಕೊಳ್ಳಬೇಕು. ನಾನು ಈಗಾಗಲೇ ಮಾನ್ಯ ವೆಂಕಟಮುನಿಯಪ್ಪನವರನ್ನು ಕರೆದು ಮುಂದಿನ ಪ್ರಶ್ನೆಗೆ ಹೋಗಿರುವುದರಿಂದ ದಯಮಾಡಿ ತಾವು ಕುಳಿತುಕೊಳ್ಳಬೇಕು.

ಬಂಗಾರಪೇಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಕೈಗೊಂಡಿರುವ ಕಾಮಗಾರಿಗಳು

51(1253) ಶ್ರೀ ವೆಂಕಟಮುನಿಯಪ್ಪ ಬಿ.ಪಿ. (ಬೇತಮಂಗಲ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2004–2005ನೇ ಸಾಲಿನಲ್ಲಿ ಬಂಗಾರಪೇಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸ್ಥಳೀಯ ಶಾಸಕರ ಗಮನಕ್ಕೆ ತರದೇ ಕಾಮಗಾರಿಗಳನ್ನು ಮಂಜೂರು ಮಾಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇವುಗಳಲ್ಲಿ ಬಹಳಷ್ಟು ಕಾಮಗಾರಿಗಳು ಅನಗತ್ಯವಾಗಿರುವುದರಿಂದ, ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುವುದಿಲ್ಲವೆ;

ಇ) ಈ ಅನಗತ್ಯ ಕಾಮಗಾರಿಗಳನ್ನು ನಿಲ್ಲಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಇಲ್ಲ.

ಆ) ವಾಷಿಕ ಕ್ರಿಯಾ ಯೋಜನೆಯಡಿ ಮಂಜೂರಾದ ಎಲ್ಲಾ ಕಾಮಗಾರಿಗಳು ಮಾರುಕಟ್ಟೆ ಪ್ರಾಂಗಣದಲ್ಲಿ ಮೂಲಭೂತ ಸೌಕರ್ಯಗಳು ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಲು ಮಂಜೂರಾಗಿರುತ್ತದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ.ಪಿ. ವೆಂಕಟಮುನಿಯಪ್ಪ : ಮಾನ್ಯ ಅಧ್ಯಕ್ಷರೇ, ಬಂಗಾರಪೇಟೆ ತಾಲ್ಲೂಕಿನಲ್ಲಿ 2004-05ರಲ್ಲಿ ಸುಮಾರು 1 ಕೋಟಿ 5 ಲಕ್ಷ ರೂಪಾಯಿಗಳ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದಾರೆ. ಆದರೆ ಈ ಕಾಮಗಾರಿಗಳನ್ನು ಸರಿಯಾಗಿ ಕಾರ್ಯಗತಗೊಳಿಸಿಲ್ಲ. ಇದರಿಂದ ಸರ್ಕಾರಕ್ಕೆ ಬಹಳಷ್ಟು ನಷ್ಟವಾಗಿದೆ. ಇದರ ಬಗ್ಗೆ ಪರಿಶೀಲನೆ ಮಾಡಿ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೇ, 2004-05ರಲ್ಲಿ 1 ಕೋಟಿ 5 ಲಕ್ಷ ರೂಪಾಯಿಗಳಿಗೆ 46 ಕಾಮಗಾರಿಗಳಿಗೆ ಮಂಜೂರಾತಿ ಕೊಟ್ಟಿದ್ದೇವೆ. ಈ ಮಂಜೂರಾತಿಯನ್ನು 2000ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳಿನಲ್ಲಿ ನೀಡಲಾಗಿದೆ. ಅದರಲ್ಲಿ 30 ಕಾಮಗಾರಿಗಳು ಈಗಾಗಲೇ ಪೂರ್ತಿಗೊಂಡಿವೆ. 9 ಕಾಮಗಾರಿಗಳು ಪ್ರಗತಿಯಲ್ಲಿವೆ. ಇನ್ನುಳಿದ 7 ಕಾಮಗಾರಿಗಳಿಗೆ ಟೆಂಡರ್ ಕರೆಯಲು ತಾಂತ್ರಿಕ ಮಂಜೂರಾತಿ ನೀಡಬೇಕಾಗಿದೆ. ನಾನೂ ಕೂಡ ಕಳೆದ ತಿಂಗಳಿನಲ್ಲಿ ಬಂಗಾರುಪೇಟೆಯಲ್ಲಿನ ಕಾಮಗಾರಿಗಳ ಬಗ್ಗೆ ರಿವ್ಯೂ ಮೀಟಿಂಗ್‌ವೊಂದನ್ನು ಮಾಡಿದ್ದೆ. ಅಲ್ಲಿ ನಮ್ಮ ಶಾಸಕರು ಈ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದರು. ನಾನು ಅಲ್ಲಿಗೆ ಕಮಿಟಿಯೊಂದನ್ನು ಕಳುಹಿಸುತ್ತಿದ್ದೇನೆ. ಎಲ್ಲಿ ಕಳಪೆ ಕಾಮಗಾರಿಗಳಾಗಿವೆಯೋ, ಅದನ್ನು ತಕ್ಷಣ ನಿಲ್ಲಿಸಿ, ಅದರ ಬಗ್ಗೆ ತನಿಖೆ ಮಾಡಿಸಿ, ಸಂಪೂರ್ಣ ವರದಿಯನ್ನು ಶಾಸಕರಿಗೆ ಕಳುಹಿಸಿಕೊಡುತ್ತೇನೆ.

ಮತ್ತೆ ಅಲ್ಲಿ ಐದು ಲಕ್ಷ ರೂಪಾಯಿಗಳ ಮೌಲ್ಯದ ಗಿಡ ನೆಟ್ಟು ಎಪಿಎಂಸಿ ಮಾರ್ಕೆಟ್‌ನೊಳಗೆ ಒಂದು ಉದ್ಯಾನ ಮಾಡುತ್ತಿದ್ದಾರೆ ಎಂದು ಹೇಳಿದರು. ನಾನು ಎಪಿಎಂಸಿ ವತಿಯಿಂದ ಉದ್ಯಾನ ಮಾಡುವುದನ್ನು ಈ ವರ್ಷದಿಂದ ಎಲ್ಲಾ ಕಡೆ ನಿಲ್ಲಿಸಿದ್ದೇನೆ. ಪ್ರತಿಯೊಂದು ಎಪಿಎಂಸಿಯವರು ಒಂದೊಂದು ಯೋಜನೆಯಲ್ಲಿ ಏನೇನು ಎಪಿಎಂಸಿ ಯಾರ್ಡ್‌ನಲ್ಲಿ 5 ಲಕ್ಷ ರೂಗಳ ಮೌಲ್ಯದ ಗಿಡ ಹಚ್ಚುವುದು ಅಥವಾ ಉದ್ಯಾನ ಮಾಡುವುದು ಇದೆ. ಇಂತಹ ಕಾರ್ಯಕ್ರಮಗಳನ್ನು ತೆಗೆಯಬೇಕೆಂದು ಹೇಳಿ ಅದನ್ನು ಬಂದ್ ಮಾಡಿದ್ದೇನೆ. ಏಕೆಂದರೆ ಗಿಡ ಹಚ್ಚುವುದು ಆಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಮಾಡುತ್ತಾರೆ. ಆದುದರಿಂದ ಅದನ್ನು ನಾವು ಮಾಡುವುದು ಬೇಡವೆಂದು ಹೇಳಿ ಸೆಕ್ರೆಟರಿಯವರನ್ನು ಕರೆದು

ನೀವು ಯಾವುದನ್ನೂ ಕೂಡ ಮಾಡಕೂಡದು. ಅವಶ್ಯಕತೆ ಇದ್ದ ಕಾಮಗಾರಿಗಳನ್ನು ಮಾತ್ರ ತೆಗೆದುಕೊಳ್ಳಬೇಕೆಂದು ಸೂಚನೆ ಕೊಟ್ಟಿದ್ದೇನೆ. 2004ರ ಫೆಬ್ರವರಿ ತಿಂಗಳಲ್ಲಿ ಈ ಕಾಮಗಾರಿ ಮಂಜೂರಾಗಿದ್ದರಿಂದ ಅದಕ್ಕೆ ಸಂಬಂಧಪಟ್ಟ ಹಾಗೆ ಈಗಾಗಲೇ ಸೆಕ್ರೆಟರಿಯವರಿಗೆ ಒಂದು ಆದೇಶ ಕೂಡ ಮಾಡಿದ್ದೇನೆ. ಮುಂದಿನ ಕಾಮಗಾರಿ ತೆಗೆದುಕೊಳ್ಳಬೇಕಾದರೆ ಮಾನ್ಯ ಶಾಸಕರೊಂದಿಗೆ ಸಮಾಲೋಚಿಸಿ ಮಾಡುತ್ತೇವೆ. ಸೆಕ್ರೆಟರಿಯವರು ಕೂಡ ತಮ್ಮ ಸಂಪರ್ಕ ಬೆಳೆಸಿ ಯಾವುದು ಮಹತ್ವವಿದೆ, ಯಾವುದು ಎಪಿಎಂಸಿಗೆ ಮಾಡಬೇಕಾಗಿದೆ ಅಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಈಗಾಗಲೇ ಸೂಚನೆಯನ್ನು ನೀಡಿದ್ದೇನೆ. ಆ ಪ್ರಕಾರ ಕಳಪೆ ಕಾಮಗಾರಿ ಮಾಡಿರುವುದು ಎಲ್ಲಿ ಆಗಿದ್ದರೂ ಕೂಡ ಅದರ ಬಗ್ಗೆ ಸಂಪೂರ್ಣವಾಗಿ ತನಿಖೆಯನ್ನು ಮಾಡಿಸುತ್ತೇನೆ.

ಶ್ರೀ ಬಿ.ಪಿ. ವೆಂಕಟಮುನಿಯಪ್ಪ : ಮಾನ್ಯ ಸಚಿವರು ನನ್ನ ಜೊತೆ ಏನು ಕಳಪೆ ಕಾಮಗಾರಿಯಾಗಿದೆ ಅದನ್ನು ಪರಿಶೀಲನೆ ಮಾಡಿ ಅದಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ತಾವು ಕಳಪೆ ಕಾಮಗಾರಿಗಳನ್ನು ಪರಿಶೀಲನೆ ಮಾಡಬೇಕು, ನಾನೂ ಅವರ ಜೊತೆಗೆ ಇರುತ್ತೇನೆ ಎಂದು ಹೇಳುತ್ತಾರೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಈಗಾಗಲೇ 46ರಲ್ಲಿ 30 ಕಾಮಗಾರಿಗಳು ಪೂರ್ಣವಾಗಿದೆ. ನಾನು ಮಾನ್ಯ ಸದಸ್ಯರನ್ನು ಕರೆದುಕೊಂಡು ಹೋಗಿ ಪರಿಶೀಲನೆ ಮಾಡುತ್ತೇನೆ.

ಮುಂಡರಗಿ ತಾಲ್ಲೂಕು ಹಾರೋಗೇರಿ ಗ್ರಾಮದಲ್ಲಿ ಶಾಲಾ ಮಕ್ಕಳಿಗೆ ಹಂಚುವ ಆಹಾರದಲ್ಲಿನ ಅವ್ಯವಹಾರ

52(736) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕು ಹಾರೋಗೇರಿ ಗ್ರಾಮದಲ್ಲಿ ಶಾಲಾ ಮಕ್ಕಳಿಗಾಗಿ ಹಂಚುವ ಆಹಾರ ಧಾನ್ಯವನ್ನು ಶಾಲಾ ಮಕ್ಕಳಿಗೆ ಹಂಚದೇ ಆ ಗ್ರಾಮದ ವ್ಯವಸಾಯ ಸೇವಾ ಸಹಕಾರ ಬ್ಯಾಂಕಿನ ಕಾರ್ಯದರ್ಶಿ ದುರುಪಯೋಗ ಮಾಡಿಕೊಂಡಿದ್ದು ನಿಜವೇ;

ಆ) ಹಾಗಿದ್ದರೆ ಅವರ ಮೇಲೆ ಇನ್ನೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ದುರುಪಯೋಗ ಆಗಿರುವುದಿಲ್ಲ.

ಆ) ಶಾಲಾ ಮಕ್ಕಳಿಗೆ ಆಹಾರ ಧಾನ್ಯ ವಿತರಣೆ ಮಾಡಿಲ್ಲವೆಂದು ಗ್ರಾಮಸ್ಥರಿಂದ ದೂರು ಬಂದ ಪ್ರಯುಕ್ತ ವ್ಯವಸ್ಥಾಪಕರನ್ನು ಸಿಸಿಸಿ ವತಿಯಿಂದ ಅಮಾನತ್ತುಗೊಳಿಸಿ ಆದೇಶ ಮಾಡಲಾಗಿರುತ್ತದೆ. ನಂತರ ವ್ಯವಸ್ಥಾಪಕರ ಮೇಲೆ ಆಂತರಿಕ ವಿಚಾರಣೆ

ನಡೆಸಲಾಗಿ ಆಹಾರ ಧಾನ್ಯ ದುರುಪಯೋಗ ಕಂಡುಬಂದಿರುವುದಿಲ್ಲ. ಆದರೆ ಆಹಾರ ಸಮಿತಿ (ಸಿಸಿಸಿ) ಕೆ.ಸಿ.ಸಿ. ಬ್ಯಾಂಕ್ ನಿ., ಧಾರವಾಡ ಇವರಿಗೆ ವಿಚಾರಣಾ ವರದಿ ಬಂದಿದ್ದು, ನಿರ್ಣಯಕ್ಕಾಗಿ ಬಾಕಿ ಇರುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಸಚಿವರು ಉತ್ತರ ಕೊಟ್ಟಿದ್ದಾರೆ. ಹಿಂದಿನ ಅಧಿವೇಶನದಲ್ಲಿ ದುರುಪಯೋಗವಾಗಿದೆ ಎಂದು ಕೊಟ್ಟಿದ್ದಾರೆ. ಅದರ ಬಗ್ಗೆ ಎಲ್ಲಾ ಲೆಕ್ಕ ಇದೆ. ಆದರೆ ಈ ಸಲ ದುರುಪಯೋಗವಾಗಿಲ್ಲವೆಂದು ಉತ್ತರ ಕೊಡುತ್ತಾರೆ. ಇದರಂತಹ ದುರಂತ ಎಲ್ಲೂ ಇಲ್ಲ. ಸನ್ಮಾನ್ಯ ಮಂತ್ರಿಗಳೇ, ಇದನ್ನು ಮುಚ್ಚಿ ಹಾಕುವಂತಹ ಒಂದು ವ್ಯವಸ್ಥಿತವಾದಂತಹ ಪಿತೂರಿ ನಡೆದಿದೆ. ಅದಕ್ಕೆ ಸಂಬಂಧಪಟ್ಟ ಹಾಗೆ ನಾನು ಒಂದು ಸಂಗತಿಯನ್ನು ಓದುತ್ತೇನೆ. ಬಹುಶ: ತಾವು ಇದನ್ನು ಪುನ: ಎನ್‌ಕ್ವೈರಿಗೆ ಹಾಕಿದರೆ ಸಿದ್ಧ ಮಾಡುವುದಕ್ಕೆ ಕೂಡ ಆ ಗ್ರಾಮದವರು ತಯಾರಿದ್ದಾರೆ. ಅಲ್ಲಿ ಒಬ್ಬ ಕಾರ್ಯದರ್ಶಿ ಬಹುಶ: ಆಹಾರ ಧಾನ್ಯವನ್ನು ಹಂಚೇ ಇಲ್ಲ, ಅಲ್ಲಿ ಏನೇನೋ ಮಾಡಿ ಲೆಕ್ಕ ಸರಿ ಮಾಡಿದ್ದಾನೆ. ಕಡೆಯಲ್ಲಿ ಊರಿನವರೆಲ್ಲಾ ಸೇರಿಕೊಂಡು ಅವನನ್ನು ಹಿಡಿದುಕೊಂಡು ಎರಡು ತಿಂಗಳು ಹಂಚಿಸಿದರು, ಮಧ್ಯದ ಎರಡು ತಿಂಗಳು ಹಂಚೇ ಇಲ್ಲ. ಹಂಚು ಎಂದಾಗ ಅವನು ಎಲ್ಲಾ ಕಾಳು ಮಾರಿಕೊಂಡು ಬಿಟ್ಟಿದ್ದ. ಇವತ್ತು ಕೂಡ ಆ ಗ್ರಾಮದ ಶಾಲೆಯಲ್ಲಿ ಬಿಸಿಯೂಟ ಕಾರ್ಯಕ್ರಮವನ್ನು ಚಾಲೂ ಮಾಡಿಲ್ಲ, ಆ ಊರಿನ ಜನರು ಜನವರಿ 26ನೇ ತಾರೀಖು ಸೆಕ್ರೆಟರಿ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ ಮೇಲೆ ಸಹ ಆ ಕಾರ್ಯಕ್ರಮ ಇಡೀ ರಾಜ್ಯದಲ್ಲಿ ಪ್ರಾರಂಭವಾದರೂ ಕೂಡ ಅಲ್ಲಿ ಚಾಲೂ ಆಗಿಲ್ಲ. ಸನ್ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ, ಇದರ ಬಗ್ಗೆ ವಿಚಾರಣೆ ಮಾಡಿ. "ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ಭೀಮಪ್ಪ ಸಿದ್ದಪ್ಪ ಬಜಂಗ ಅವರು ನಮ್ಮ ಶಾಲೆಗೆ ಅಕ್ಕಿಯನ್ನು ವಿತರಿಸುತ್ತಿದ್ದಾರೆ. ಜನವರಿ ಮತ್ತು ಫೆಬ್ರವರಿ ಎರಡು ತಿಂಗಳುಗಳ ಶಾಲಾ ಮಕ್ಕಳಿಗೆ ಅಕ್ಕಿಯನ್ನು ಹಂಚಿರುವುದಿಲ್ಲ" ಎಂದು ಮಾಸ್ತರ್ ಬರೆದುಕೊಟ್ಟಿದ್ದಾರೆ. ನಂತರ ಶಿರಸ್ತೇದಾರ್ ಎನ್‌ಕ್ವೈರಿಗೆ ಹೋದಾಗ ಅಂಗಡಿಕಾರರು ಅಧಿಕೃತ ರೇಷನ್ ಪಡೆದ ಎಂದು ಹೇಳಿರುವುದು ತಪ್ಪು. ಈಗ ಯಾದಿಯಲ್ಲಿ ಇದ್ದಂತಹ ಹುಡುಗರು ಹೆಚ್ಚಿನ ತರಗತಿಯಲ್ಲಿ ವ್ಯಾಸಂಗ ಮಾಡಿದ್ದಾರೆ. ಅಂದರೆ ಯಾದಿಯಲ್ಲಿ ಒಂದನೇ ವರ್ಗವೆಂದು ತೋರಿಸಿರುವ ಮಕ್ಕಳು ಈಗ ಸಧ್ಯ 3ನೇ ವರ್ಗದಲ್ಲಿ ಇರುತ್ತಾರೆ." ಜನವರಿ ಫೆಬ್ರವರಿ ತಿಂಗಳಲ್ಲಿ ರೇಷನ್ ಕೊಟ್ಟಿರುವುದಿಲ್ಲವೆಂದು ಜವಾಬಿನಲ್ಲೂ ತಿಳಿಸಿರುತ್ತಾರೆ. ಅವನೇ ಹೇಳಿದ್ದಾನೆ. ಇದು ಆದ ಕೂಡಲೇ ರಿಪೋರ್ಟ್ ಬಂದ ತಕ್ಷಣ 15 ದಿವಸ ಸಸ್ಪೆಂಡ್ ಮಾಡಿದ ಹಾಗೆ ಮಾಡಿದರು. ಅಲ್ಲಿ ಒಬ್ಬರನ್ನು ಹಾಕಿದರು, ಅವನು ಚಾರ್ಜ್ ಕೊಡಲಿಲ್ಲ. ಅಮೇಲೆ ಅವನನ್ನು ಏನು ಮಾಡಿದರು? ಸೆಕ್ರೆಟರಿ ಆಗಿ ಮತ್ತೆ ಅಲ್ಲಿಗೆ ಹಾಕಿದರು. ಮಾನ್ಯ ಸಚಿವರು

ಇಲ್ಲಿ ನೋಡಬೇಕು. "ಮೇಲ್ಕಂಡ ವಿಷಯದ ಬಗ್ಗೆ ತಮ್ಮಲ್ಲಿ ಆರಿಕೆ ಮಾಡಿಕೊಳ್ಳುವುದೇನೆಂದರೆ ಶಾಲೆಯ ಮುಖ್ಯ ಉಪಾಧ್ಯಾಯರು ಬರೆದುಕೊಡುವುದೇನೆಂದರೆ ಜನವರಿ ಹಾಗೂ ಫೆಬ್ರವರಿ 2002ರಲ್ಲಿ ಮಧ್ಯಾಹ್ನದ ಉಪಹಾರ ಯೋಜನೆಯಲ್ಲಿ ಮಕ್ಕಳಿಗೆ ಸದರಿ ಹಾಜರಾತಿ ನೀಡಿದ್ದರೂ ಸಹ ಅಕ್ಕಿ ವಿತರಣೆಯಾಗಿರುವುದಿಲ್ಲ." ಈ ಗಳಿಗೆಯವರೆಗೆ ಅದರ ರೆಕಾರ್ಡ್ ಸಿಗುತ್ತದೆ. ಇದನ್ನು ಮುಚ್ಚಿ ಹಾಕುವುದಕ್ಕೆ ಒಂದು ವ್ಯವಸ್ಥೆ ನಡೆದಿದೆ ಮಾನ್ಯ ಸಹಕಾರ ಸಚಿವರೇ ಸುಮ್ಮನೆ ಒಂದು ವರದಿ ತರಿಸಿಕೊಂಡ ಹಾಗೆ ಮಾಡಿ ಅವನನ್ನು ಅಲ್ಲಿ ಹಾಕಿ ಅದನ್ನು ಮುಚ್ಚುವಂತಹ ಪ್ರಯತ್ನ ನಡೆದಿದೆ. ದಯವಿಟ್ಟು ಪುನ: ಅದನ್ನು ವಿಚಾರಣೆ ಮಾಡಿ, ಅವನ ಮೇಲೆ ಕ್ರಮ ತೆಗೆದುಕೊಳ್ಳುವುದಲ್ಲದೆ ಈ ವರದಿ ಕೊಟ್ಟಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ಹೇಗೆ ಎನ್ನುವುದನ್ನು ಹೇಳಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ನಮಗೆ ಬಂದ ಮಾಹಿತಿ ಪ್ರಕಾರ ಮ್ಯಾನೇಜರ್ ಏನು ಆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಾರೆ, ಅವರ ಮೇಲೆ ದೂರು ಬಂದಾಗ ತಕ್ಷಣ ಅವರನ್ನು ಸಸ್ಪೆಂಡ್ ಮಾಡಲಾಗಿದೆ. ಅದರ ನಂತರ ಹೆಡ್ ಮಾಸ್ಟರ್ ರಿಪೋರ್ಟ್ ಕೊಟ್ಟಿದ್ದು ಅಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗಿಲ್ಲ ಎಂದು. ಆ ರಿಪೋರ್ಟ್ ಆಧಾರದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಾಗಿದೆ. ಅದರಂತೆ ಅಸಿಸ್ಟಂಟ್ ರಿಜಿಸ್ಟ್ರಾರ್ ಅವರ ಹೆಸರು ನಮ್ಮ ಶಾಸಕರ ಹೆಸರೇ, ಎಸ್.ಎಸ್. ಪಾಟೀಲ್ ಎಂದು ಅವರನ್ನು ಎನ್‌ಕ್ವೈರಿ ಆಫೀಸರ್ ಎಂದು ಅಪಾಯಿಂಟ್ ಮಾಡಿ ಈಗಾಗಲೇ ಎನ್‌ಕ್ವೈರಿ ರಿಪೋರ್ಟ್ ಸಹ ಕಾಮನ್ ಕೇಡರ್ ಆಥಾರಿಟಿಗೆ ಕೊಟ್ಟಿದ್ದಾರೆ ಏಕೆಂದರೆ ಇದು ಡಿಸಿಸಿ ಬ್ಯಾಂಕ್‌ನ ಅಂಡರ್‌ನಲ್ಲಿ ಬರುತ್ತದೆ. ಡಿಸಿಸಿ ಬ್ಯಾಂಕ್‌ನ ಕಾಮನ್ ಕೇಡರ್ ಅಥಾರೀಟಿಗೆ ರಿಪೋರ್ಟ್ ಕೊಟ್ಟಿದ್ದಾರೆ. ಆ ರಿಪೋರ್ಟ್ ಪ್ರಕಾರ ಮುಂದಿನ ಕ್ರಮವನ್ನು ಕಾಮನ್ ಕೇಡರ್ ಆಥಾರಿಟಿ ತೆಗೆದುಕೊಳ್ಳಬೇಕಾಗಿದೆ. ನಮಗೆ ಬಂದ ಮಾಹಿತಿ ಪ್ರಕಾರ ಅಕ್ಕಿ ಬೇರೆ ಬೇರೆ ಡೇಟ್‌ಗಳಲ್ಲಿ ಶಾಲೆಗಳಿಗೆ ವಿತರಣೆಯಾಗಿದೆ. ಈಗ ಮಾನ್ಯ ಶಾಸಕರು ಇದು ಸರಿಯಿಲ್ಲವೆಂದು, ಇದರ ಬಗ್ಗೆ ಮತ್ತೊಮ್ಮೆ ಎನ್‌ಕ್ವೈರಿ ಮಾಡಬೇಕೆಂದು ಹೇಳಿದ್ದಾರೆ. ಮತ್ತೊಮ್ಮೆ ಎನ್‌ಕ್ವೈರಿ ಮಾಡುತ್ತೇವೆ. ಏಕೆಂದರೆ ಪಾರದರ್ಶಕವಾಗಿ ಇರಬೇಕಾಗುತ್ತದೆ. ನಮಗೆ ಬಂದ ಮಾಹಿತಿ ಪ್ರಕಾರ ಯಾವುದೂ ಮಿಸ್ ಅಪ್ರೋಪ್ರಿಯೇಷನ್ ಆಗಿಲ್ಲವೆಂದು ರಿಪೋರ್ಟ್ ಇದೆ. ಆದರೆ ಶಾಸಕರಿಂದ ಕೆಲವು ಮಾಹಿತಿ ಏನು ಬಂದಿದೆ ಅವರು ಅದರ ಕಾಗದ ಪತ್ರಗಳನ್ನು ಕೊಡಬೇಕು. ಆ ಆಧಾರದ ಮೇಲೆ ಪುನ: ನಾನು ನ್ಯಾಯಬದ್ಧವಾಗಿ ವಿಚಾರಣೆ ಮಾಡುವುದಕ್ಕೆ ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ವಿಚಾರಣೆ ಮಾಡುವವರು ಪ್ರಾಮಾಣಿಕ ಅಧಿಕಾರಿಯಾಗಿರಬೇಕು. ಹಿಂದೆ ಯಾರು ವಿಚಾರಣೆ ಮಾಡಿದ್ದಾರೆ ಅವರ ಮೇಲೆ ಕ್ರಮವಾಗಬೇಕು.

ಅಧ್ಯಕ್ಷರು : ಪ್ರಾಮಾಣಿಕರನ್ನು ಪತ್ತೆ ಹಚ್ಚುವುದು ಹೇಗೆಂದು ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಇದ್ದಾರೆ, ಸಿಗುತ್ತಾರೆ, ಸಂಪೂರ್ಣವಾಗಿ ಎಲ್ಲರೂ ಅಪ್ರಾಮಾಣಿಕರು ಇಲ್ಲ, ಪ್ರಾಮಾಣಿಕ ಅಧಿಕಾರಿ ಇಲಾಖೆಯಲ್ಲಿ ಇದ್ದಾರೆ.

ಅಧ್ಯಕ್ಷರು : ಅವರನ್ನು ಮೆಷಿನ್ ಹಾಕಿ ಹುಡುಕಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಈ ದಿವಸ ಕೆಸಿಸಿ ಬ್ಯಾಂಕ್‌ನಲ್ಲಿ ಸ್ಪೆಷಲ್ ಆಫೀಸರ್ ಆಗಿ ಒಬ್ಬ ಪ್ರಾಮಾಣಿಕ ಅಧಿಕಾರಿಯನ್ನು ಹಾಕಿದ್ದಾರೆ. ಅವರನ್ನು ಎನ್‌ಕ್ವೈರಿಗೆ ಹಾಕಿ. ಅವರೇ ಹೋಗಿ ಎನ್‌ಕ್ವೈರಿ ಮಾಡಿಕೊಂಡು ಬರಲಿ. ಎಲ್ಲರಿಗೂ ಅವರು ಒಂದು ನೋಟೀಸ್ ಕೊಡಲಿ ನನಗೂ ನೋಟಿಸ್ ಕೊಡಲಿ. ಹೋಗುತ್ತೇನೆ, ಕುಳಿತುಕೊಂಡು ಇದೆಲ್ಲಾ ದಾಖಲೆಗಳನ್ನು ತೋರಿಸುತ್ತೇನೆ. ನೋಡಿ ಎನ್‌ಕ್ವೈರಿ ಮಾಡಿ ಏನು ಸರಿಯಿದೆ ಅದನ್ನು ಮಾಡಬೇಕು. ಮಾನ್ಯ ಮಂತ್ರಿಗಳು ದಯವಿಟ್ಟು ಅದನ್ನು ಏನು ಮಾಡುತ್ತೀರಿ ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸದಸ್ಯರು ಕೆಸಿಸಿ ಬ್ಯಾಂಕ್‌ನಲ್ಲಿರುವ ಸ್ಪೆಷಲ್ ಆಫೀಸರ್ ಇದನ್ನು ಎನ್‌ಕ್ವೈರಿ ಮಾಡಬೇಕೆಂದು ಹೇಳಿದ್ದಾರೆ. ಅವರನ್ನೇ ಎನ್‌ಕ್ವೈರಿ ಅಫೀಸರನ್ನಾಗಿ ಮಾಡಿ ಕಳುಹಿಸುತ್ತೇವೆ.

ಉತ್ತರಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಪಡಿತರ ಚೀಟಿ ತೆಗೆದು ಹಾಕುತ್ತಿರುವುದು

53(113) ಶ್ರೀ ಅಶೋಕ್ ಆರ್ (ಉತ್ತರಹಳ್ಳಿ) ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಸಂಬಂಧಪಟ್ಟಂತೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖಾ ವತಿಯಿಂದ ಬಡ ಕುಟುಂಬಕ್ಕೆ ಸೇರಿದವರ ಆಹಾರ ಪಡಿತರ ಚೀಟಿಯನ್ನು ತೆಗೆದು ಹಾಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೊಳಪಡುವ ಒಂದು ಗ್ರಾಮದಲ್ಲಿ ಎಷ್ಟು ಎ.ಪಿ.ಎಲ್. ಪಡಿತರ ಚೀಟಿಗಳನ್ನು ತೆಗೆದು ಹಾಕಲಾಗಿದೆ (ಗ್ರಾಮ ಪಂಚಾಯಿತಿವಾರು ಅಂಕಿ ಅಂಶ ನೀಡುವುದು);

ಇ) ಎ.ಪಿ.ಎಲ್. ಪಡಿತರ ಚೀಟಿಗಳನ್ನು ಏಕಾಏಕಿ ತೆಗೆದುಹಾಕಲು ಕಾರಣವೇನು;

ಈ) ಎ.ಪಿ.ಎಲ್. ಪಡಿತರ ಚೀಟಿಯನ್ನು ತೆಗೆದುಹಾಕಿರುವ ಬಡ ಕುಟುಂಬಕ್ಕೆ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಲಾಗಿದೆಯೇ? (ವಿವರ ನೀಡುವುದು)?

ಶ್ರೀ ಹೆಚ್.ಸಿ. ಮಹದೇವ ಪ್ರಸಾದ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಇಲ್ಲಾ. ಅನೇಕ ಅನರ್ಹ ಕುಟುಂಬಗಳು ಬಿ.ಪಿ.ಎಲ್. ಪಡಿತರ ಚೀಟಿ ಹೊಂದಿರುತ್ತಾರೆ ಅಂತಹ ಅನರ್ಹ ಕುಟುಂಬಗಳನ್ನು ಗುರ್ತಿಸಿ ಅಂತಹ ಬಿ.ಪಿ.ಎಲ್. ಪಡಿತರ ಚೀಟಿಗಳನ್ನು ಮಾತ್ರ ರದ್ದುಪಡಿಸಲಾಗುತ್ತಿದೆ.

ಆ) ಇಲ್ಲಾ. ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಯಾವುದೇ ಎ.ಪಿ.ಎಲ್. ಪಡಿತರ ಚೀಟಿಗಳನ್ನು ರದ್ದುಪಡಿಸಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ. ರಾಜ್ಯಾದ್ಯಂತ ಅನರ್ಹ ಕುಟುಂಬಗಳು ಬಿಪಿಎಲ್ ಪಟ್ಟಿಯಲ್ಲಿ ಸೇರ್ಪಡೆಯಾಗಿದ್ದು, ಮತ್ತು ಅರ್ಹ ಕುಟುಂಬಗಳು ಕೈಬಿಟ್ಟು ಹೋಗಿದೆ ಎಂದು ದೂರುಗಳು ಬಂದ ಕಾರಣ, ಅರ್ಹ ಕುಟುಂಬಗಳ ಸೇರ್ಪಡೆ, ಅನರ್ಹ ಕುಟುಂಬಗಳ ರದ್ದಾತಿಗಾಗಿ, ಮನೆ ಮನೆ ಪುನರ್ ಸಮೀಕ್ಷೆ ಕಾರ್ಯವನ್ನು ಸರ್ಕಾರಿ ಆದೇಶ ಸಂಖ್ಯೆ: ಅನಾಸ 114 ಡಿಆರ್ಎ 2004, ದಿನಾಂಕ 10-1-2005ರಂದು ಆದೇಶ ಹೊರಡಿಸಿದೆ. ಸಮೀಕ್ಷೆ ಕಾರ್ಯ ಪ್ರಾರಂಭವಾಗಿದೆ. ಈ ಸಮೀಕ್ಷೆಯಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳು / ಜನ ಪ್ರತಿನಿಧಿಗಳು / ಸ್ವಯಂ ಸೇವಾ ಸಂಸ್ಥೆಗಳ ಪದಾಧಿಕಾರಿಗಳು ಸಮಗ್ರ ಸಮೀಕ್ಷೆಯಲ್ಲಿ ಪಾಲ್ಗೊಂಡು ಗ್ರಾಮ ಸಭೆಗಳ ಮುಂದೆ ಅರ್ಹ / ಅನರ್ಹ ಪಟ್ಟಿಯನ್ನು ಮಂಡಿಸಿ, ಅನುಮೋದನೆಗಾಗಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಹಾಲಿ ಕೊಟ್ಟಿರತಕ್ಕ ಪಡಿತರ ಚೀಟಿಗಳು ಒಂದೊಂದು ಪಂಚಾಯಿತಿಯ ವ್ಯಾಪ್ತಿಯಲ್ಲಿ 200ಕ್ಕೂ ಮೇಲ್ಪಟ್ಟು ಪಡಿತರ ಚೀಟಿಗಳನ್ನು ವಾಪಸ್ಸು ತೆಗೆದುಕೊಂಡಿದ್ದೀರಿ. ಈಗ ಹೊಸದಾಗಿ ಒಂದು ಸಮಿತಿ ಮಾಡಿ ಯಾರ್ಯಾರು ಅನರ್ಹರಿದ್ದಾರೆ ಅವರನ್ನೆಲ್ಲಾ ತೆಗೆಯುತ್ತೇವೆಂದು ಹೇಳಿದ್ದೀರಿ. ಆದಕ್ಕೆ ಗೈಡ್‌ಲೈನ್ಸ್ ಎಲ್ಲಾ ಕೊಟ್ಟಿದ್ದೀರಿ. ಆದರೆ ನನ್ನ ಪ್ರಶ್ನೆ ಇಷ್ಟೆ, ಈಗ ನೀವು ರದ್ದು ಮಾಡಿದ್ದೀರಲ್ಲಾ ನಾವೇ ಎಲ್ಲಾ ಕಡೆ ಹೋಗಿ ತಹಸೀಲ್ದಾರ್ ಇರಬಹುದು ಅಲ್ಲಿನ ಅಧಿಕಾರಿ ಇರಬಹುದು ಎಲ್ಲಾ ಕಡೆ ಕೊಟ್ಟಿದ್ದೇವೆ. ಬಡವರು ಎಂದು ಗುರುತು ಮಾಡುವುದು ಹೇಗೆ? ಇವರು ಏನು ಮಾಡಿದ್ದಾರೆಂದರೆ ರೇಷನ್ ಅಂಗಡಿಯವರಿಗೆ ಕಂಟ್ರಾಕ್ಟ್ ಕೊಟ್ಟು ಬಿಟ್ಟಿದ್ದಾರೆ. ರೇಷನ್ ಅಂಗಡಿಯವನು ಯಾರು ಪರ್‌ಫೆಕ್ಟ್ ಆಗಿ ಅಂಗಡಿಯವರು ಕೊಡತಕ್ಕಂಥ ರೇಷನ್ ತೆಗೆದುಕೊಂಡು ಹೋಗುತ್ತಿದ್ದ ಅವರನ್ನು ತೆಗೆದು ಹಾಕಿ ಬಿಟ್ಟ. ಯಾರು ರೇಷನ್ ತೆಗೆದುಕೊಂಡು ಹೋಗುತ್ತಿರಲಿಲ್ಲ ಅವರನ್ನು ಪಟ್ಟಿಯಲ್ಲಿ ಇಟ್ಟುಕೊಂಡ. ಏಕೆಂದರೆ ಅವನಿಂದ ರೇಷನ್ ಅಂಗಡಿಗೆ ಆದಾಯ ಇದೆ. ಅವರು ಕುರಿಯನ್ನು ಕಾಯುವುದಕ್ಕೆ ತೋಳವನ್ನು ಬಿಟ್ಟುಬಿಟ್ಟಿದ್ದಾರೆ. ಇದನ್ನು ಸಮೀಕ್ಷೆ ಮಾಡಲಿಲ್ಲ. ನಾನು ಬಹಳ ಹಳ್ಳಿಗಳನ್ನು ಭೇಟಿ ಮಾಡಿದ್ದೇನೆ. ಒಂದು ಕಡೆನೂ ಇವರು ಸಮೀಕ್ಷೆ ಮಾಡಿಲ್ಲ. ಆ ರೇಷನ್ ಅಂಗಡಿಯವನು ಏನು ಕೊಡುತ್ತಾನೆ ಅದನ್ನೇ ಇವರು ತೆಗೆದು ಹಾಕಿದ್ದಾರೆ. ಅಂದರೆ ಅರ್ಥವೇನು? ರೇಷನ್ ಅಂಗಡಿಯವರ ಜೊತೆ ನಾವು ಶಾಮೀಲಾಗಿರಬೇಕಾ? ಈಗ ಆ ಕಾರ್ಡುಗಳನ್ನು ತೆಗೆಯಬೇಕಾದರೆ ಅದಕ್ಕೆ ವೈಜ್ಞಾನಿಕವಾದಂತಹ ಸಮೀಕ್ಷೆ ಮಾಡಬೇಕಲ್ಲಾ. ವೈಜ್ಞಾನಿಕವಾಗಿ ಏನಾದರೂ ಮಾಡಲಿ. ಈಗ ತಾವು ಒಂದು ಸಮಿತಿಯನ್ನು ನೇಮಕ ಮಾಡಿದ್ದೀರಿ. ಅದಕ್ಕೆ

5ನೇ ತಿಂಗಳಿನಲ್ಲಿ ವರದಿ ಕೊಡಿ ಎಂದು ಕೇಳಿದ್ದೀರಿ. ಸಮೀಕ್ಷೆ ಮಾಡಿ ವರದಿ ಕೊಡಲಿ. ಅದರಲ್ಲಿ ಯಾರ್ಯಾರು ಅನರ್ಹರು ಇದ್ದಾರೆ ಅವರನ್ನು ತೆಗೆದು ಹಾಕಿ. ಅದರಲ್ಲಿ ನಮ್ಮದು ಯಾವುದೇ ತಂಟೆ ತಕರಾರು ಇಲ್ಲ. ನೀವು ಒಂದೊಂದು ಪಂಚಾಯಿತಿಗೆ 200 ಜನರನ್ನು ತೆಗೆದುಬಿಟ್ಟರೆ ಅವರು ರೇಷನ್ ಅಂಗಡಿಯಲ್ಲಿ ಭಿಕ್ಷೆ ಬೇಡುತ್ತಿದ್ದಾರೆ. ಪ್ರತಿದಿನ ರೇಷನ್ ಅಂಗಡಿಗೆ ಬರುವುದು ಅವನು ಇಲ್ಲ ಎಂದು ಹೇಳುವುದು. ಭೂತಯ್ಯನ ಮಗ ಅಯ್ಯು ಚಿತ್ರದಲ್ಲಿ ಮಾದಯ್ಯನ ಮನೆ ಹರಾಜು ಎಂದು ಹಾಕಿದ ಹಾಗೆ. ಎಲ್ಲಾ ರೇಷನ್ ಅಂಗಡಿಯಲ್ಲಿ ಅವರ ಹೆಸರುಗಳನ್ನು ಹಾಗೂ ಅವರ ಟೋಕನ್ ನಂಬರ್ ಹಾಕಿ ಗೋಡೆಗೆ ಅಂಟಿಸಿಬಿಟ್ಟಿದ್ದಾರೆ. ನಿಮಗೆ ರೇಷನ್ ಕೊಡುವುದಕ್ಕಾಗುವುದಿಲ್ಲ, ಇದು ಜಿಲ್ಲಾಧಿಕಾರಿಗಳ ಆದೇಶ ಎಂದು ಹಾಕಿದ್ದಾರೆ. ಅಂದರೆ ಯಾವ ಬಡ ರೈತನೂ ಇವತ್ತು ರೇಷನ್ ತೆಗೆದುಕೊಳ್ಳುವುದಕ್ಕೆ ಅಧಿಕಾರ ಇಲ್ಲವೆ? ನೀವು ತೆಗೆಯುವುದಕ್ಕೆ ಮೊದಲು ಏಕೆ ಸಮೀಕ್ಷೆ ಮಾಡಲಿಲ್ಲ? ಸಮೀಕ್ಷೆ ಮಾಡಿ ನಂತರ ತೆಗೆದು ಹಾಕಬೇಕಾಗಿತ್ತು. ಈ ರೀತಿ ಏಕಾಏಕಿ ತೆಗೆದು ಹಾಕಿರತಕ್ಕಂಥ ಕಾರ್ಡುಗಳಿಗೆ ನೀವು ರೇಷನ್ ಕೊಡಬೇಕು ಇದು ನಮ್ಮ ಆಗ್ರಹ.

ಶ್ರೀ ಸಿದ್ಧ ಸವದಿ : ನಮ್ಮ ಜಮಖಂಡಿಯಲ್ಲಿ ಕೂಡ ಇದೇ ರೀತಿಯಾಗಿದೆ. ಒಂದೊಂದು ಹಳ್ಳಿಯಲ್ಲಿ 400 ರಿಂದ 500 ರೇಷನ್ ಕಾರ್ಡುಗಳನ್ನು ತೆಗೆದು ಹಾಕಿದ್ದಾರೆ. ಯಾವ ಉದ್ದೇಶಕ್ಕೆ ಕೊಟ್ಟಿರಿ ಏಕೆ ತೆಗೆದಿರಿ? ಕೇವಲ ಶ್ರೀಮಂತರ ಕಾರ್ಡುಗಳನ್ನು ಮಾತ್ರ ಉಳಿಸಿಕೊಂಡಿದ್ದಾರೆ.

ಗೊಂದಲ

ಅಧ್ಯಕ್ಷರು : ಎಲ್ಲಾ ಮಾನ್ಯ ಸದಸ್ಯರುಗಳು ಎದ್ದು ನಿಂತು ಬಿಟ್ಟರೆ ಏನು ಮಾಡುವುದು ಹೇಳಿ? ನೀವು ಈ ರೀತಿ ನಿಂತುಕೊಂಡರೆ ಕಲಾಪವನ್ನು ನಡೆಸುವುದು ಹೇಗೆ?.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ಸರ್ಕಾರ ಬಡವರ ವಿರೋಧಿಯಾಗಿದೆ ಎನ್ನುವುದಕ್ಕೆ ಇದಕ್ಕಿಂತ ತಾಜಾ ಉದಾಹರಣೆ ಯಾವುದು ಬೇಕು?

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ಬಹಳ ಜನ ಸದಸ್ಯರು ಎದ್ದು ನಿಂತಿದ್ದಾರೆ. ಎಲ್ಲರಿಗೂ ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ. ಈ ಪ್ರಶ್ನೆಯನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಕನ್‌ವರ್ಟ್ ಮಾಡಿಬಿಡೋಣ. ಈಗ ಮಾನ್ಯ ಮಂತ್ರಿಯವರು ಉತ್ತರವನ್ನು ಕೊಡಲಿ, ನಂತರ ಅಗತ್ಯವಿದ್ದರೆ ಆ ರೀತಿ ಮಾಡೋಣ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ಬಹಳ ಜನ ಸದಸ್ಯರು ಎದ್ದು ನಿಂತಿದ್ದಾರೆ. ಎಲ್ಲರಿಗೂ ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ. ಈ

ಪ್ರಶ್ನೆಯನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಕನ್‌ವರ್ಟ್ ಮಾಡಿಬಿಡೋಣ. ಈಗ ಮಾನ್ಯ ಮಂತ್ರಿಯವರು ಉತ್ತರವನ್ನು ಕೊಡಲಿ, ನಂತರ ಅಗತ್ಯವಿದ್ದರೆ ಆ ರೀತಿ ಮಾಡೋಣ.

ಗೊಂದಲ

ಶ್ರೀ ಆಲ್ಕೋಡ್ ಹನುಮಂತಪ್ಪ : ಸರ್ಕಾರ ಉತ್ತರವನ್ನು ಹೇಳಲು ಅವಕಾಶ ಕೊಡಿ, ನಾವೂ ಕೂಡ ಸರ್ಕಾರದ ಉತ್ತರವನ್ನು ಕೇಳಬೇಕಾಗುತ್ತದೆ. ಸರ್ಕಾರದ ಉತ್ತರವನ್ನು ಕೇಳುವುದಿಲ್ಲ, ಬರೀ ಪ್ರಶ್ನೆಯನ್ನು ಕೇಳುತ್ತೇವೆಂದರೆ ಹೇಗೆ?

ಅಧ್ಯಕ್ಷರು : ಎಲ್ಲರೂ ನಿಂತಿದ್ದಾರೆ, ಕುಳಿತುಕೊಳ್ಳಿ. ಮಾನ್ಯ ಮಂತ್ರಿಯವರು ಏನು ಹೇಳುತ್ತಾರೆಂಬುದನ್ನು ಕೇಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಾವು ಮಾನ್ಯ ಮಂತ್ರಿಯವರು ಉತ್ತರವನ್ನು ಕೊಡಲಿ ಎಂದು ನಿಂತಿರುವುದು, ಇದು ಬಹಳ ಮುಖ್ಯವಾದಂತಹ ವಿಷಯವಾಗಿದೆ. ನಾವು ಇದಕ್ಕೆ ಅಡ್ಡಿಯನ್ನುಂಟು ಮಾಡುವ ಪ್ರಶ್ನೆಯೇ ಇಲ್ಲ. ಇದು ಇಡೀ ಸದನದ ಎಲ್ಲಾ ಶಾಸಕರಿಗೆ ಸಂಬಂಧಪಟ್ಟಂತಹ ವಿಷಯವಾಗಿದೆ. ಈ ನಿಮ್ಮ ಹಿಂದಿನ ಸರ್ಕಾರ 3-4 ವರ್ಷಗಳ ಸಮಯವನ್ನು ತೆಗೆದುಕೊಂಡು ಈ ಬಡರನ್ನು ಐಡೆಂಟಿಫೈ ಮಾಡಿದೆ. ಅವರಿಗೆ ಕಾರ್ಡ್‌ಗಳನ್ನು ಕೊಟ್ಟಿದೆ. ಮಾನ್ಯ ಶಾಸಕರುಗಳಿಂದ ಹಂಚಿಕೆ ಮಾಡಿದೆ, ಕಾರ್ಯಕ್ರಮವನ್ನು ಮಾಡಿದರು. ಇದರ ಸಂಖ್ಯೆ ಜಾಸ್ತಿಯಾಯಿತು, ಈ ಕಾರಣಕ್ಕೆ ನೀವು ಯಾರು ಶ್ರೀಮಂತರು ಇದ್ದಾರೆ, ಯಾರು ಎಲಿಜಿಬಲ್ ಇಲ್ಲ, ಅವರಿಗೆ ಕೊಟ್ಟಿರುವುದನ್ನು ವಾಪಸ್ಸು ತೆಗೆದುಕೊಂಡಿದ್ದರೆ ಇಲ್ಲಿ ಯಾರೂ ಪ್ರಸ್ತಾಪ ಮಾಡುತ್ತಿರಲಿಲ್ಲ. ಆದರೆ ಇಲ್ಲಿ ಯಾರು ಬಲಿಪಶುವಾಗಿರುವಂಥಾದ್ದು ಅಂದರೆ ಕಡುಬಡವರು. ಯಾರಿಗೆ ಮಾತನಾಡುವ ಶಕ್ತಿ ಇಲ್ಲ. ಅವರ ಪರವಾಗಿ ಮಾತನಾಡುವವರು ಇಲ್ಲ. ಅದು ಯಾವುದೇ ಆಗಲಿ, ಪಕ್ಷಭೇದ ಮರೆತು ಮಾತನಾಡಿ, ಇಲ್ಲಿ ನಾವು ಚರ್ಚೆ ಮಾಡುವುದು, ಉತ್ತರವನ್ನು ತೆಗೆದುಕೊಳ್ಳುವುದಕ್ಕೋಸ್ಕರ, ಅದು ತಮಗೂ ಗೊತ್ತಿದೆ. ಅದುದರಿಂದ ನಮ್ಮ ಒತ್ತಾಯವೇನೆಂದರೆ, ಈಗ ಜನರಿಗೆ ಮುಗಿಸುತ್ತೇವೆ, ಫೆಬ್ರವರಿಯಲ್ಲಿ ಕೊಡುತ್ತೇವೆ, ಮಾರ್ಚ್‌ನಲ್ಲಿ ಮುಗಿಸುತ್ತೇವೆ, ಏಪ್ರಿಲ್‌ನಲ್ಲಿ ಮುಗಿಸುತ್ತೇವೆಂದು ಈ ರೀತಿಯಾಗಿ ಹೇಳಿಕೊಂಡು ಈ 3-4-5 ತಿಂಗಳು ನೀವು ಯಾರು ನಿಜವಾದ ಕಡುಬಡವರು ಎಂದು ನೀವೇ ಐಡೆಂಟಿಫೈ ಮಾಡಿ, ಯಾರಿಗೆ ಹಳದಿ ಕಾರ್ಡ್‌ಗಳನ್ನು ಕೊಟ್ಟಿದ್ದಿರೋ, ಅವರಿಗೆ ಪಡಿತರ ವ್ಯವಸ್ಥೆಯಲ್ಲಿ ಅನ್ಯಾಯವಾಗಿದೆ. ಇಲ್ಲಿ ನಮ್ಮ ವಿನಂತಿ ಏನೆಂದರೆ, ದಯಮಾಡಿ ಯಾರಿಗೆ ಕಾರ್ಡ್‌ಗಳನ್ನು ಕೊಟ್ಟಿದ್ದೀರಿ, ಅವರಿಗೆ ಇವತ್ತಿನಿಂದ ರೇಷನ್ ಕೊಡುವುದಕ್ಕೆ ಪ್ರಾರಂಭ ಮಾಡಿ. ನಾನು ಇದೇ ಸದನದಲ್ಲಿ ಚರ್ಚೆ ಮಾಡಿದೆ. 16-17 ಲಕ್ಷ ಟೆಂಪರರಿ ಲೈಸನ್ಸ್ ಪರ್ಮಿಟ್ ಕೊಟ್ಟಿದ್ದವರಿಗೆ ವಾಪಸ್ಸು ತೆಗೆದುಕೊಂಡಿದ್ದೇವೆ ಎಂದು ಹೇಳಿದಾಗ, ಮಾನ್ಯ ಮುಖ್ಯಮಂತ್ರಿಯವರು,

ಕಂಟಿನ್ಯೂ ಮಾಡಿದ್ದೇವೆಂದು ಹೇಳಿದರು. ಈಗ ಅಂಥವರದ್ದನ್ನು ವಾಪಸ್ಸು ತೆಗೆದುಕೊಂಡಿದ್ದೀರಿ. ಈಗ ನಮ್ಮದು ಏನೆಂದರೆ ಹೊಸದಾಗಿ ಐಡೆಂಟಿಫೈ ಮಾಡಿ, ಅದನ್ನು ಯಾವಾಗ ಬೇಕಾದರೂ, ಫೈನಲೈಜ್ ಮಾಡಿ. ನೀವು ಫೈನಲೈಜ್ ಮಾಡಿ ಫ್ರೆಷ್ ಲಿಸ್ಟ್ ಮಾಡುವವರೆಗೆ, ಲಿಸ್ಟ್‌ನಲ್ಲಿರುವಂತಹ ಎಲ್ಲಾ ಬಡವರಿಗೆ ಪಡಿತರ ವ್ಯವಸ್ಥೆಯನ್ನು ಮುಂದುವರೆಸ ಬೇಕೆಂದು ಕೇಳುತ್ತಿದ್ದೇವೆ. ಇದನ್ನು ನೀವು ಒಪ್ಪುತ್ತೀರೆಂದು ತಿಳಿಯುತ್ತೇನೆ. ಅನಂತರ ಯಾರು ಬಡವರು, ಯಾರು ಶ್ರೀಮಂತರು, ನೀವು ಹೊಸದಾಗಿ ಐಡೆಂಟಿಫೈ ಮಾಡಿದ ಮೇಲೆ, ನೀವು ಅವರನ್ನು ತೆಗೆದುಹಾಕಿದರೆ ನಮ್ಮದು ಏನು ಅಭ್ಯಂತರವೂ ಇಲ್ಲ. ಆದರೆ ಈಗ ಕಟ್ ಮಾಡಿರುವಂಥವರು ಕಡು ಬಡವರಾಗಿದ್ದಾರೆ. ಇದಕ್ಕೆ ತಾವು ಏನು ಉತ್ತರವನ್ನು ಕೊಡುತ್ತೀರೋ, ಕೊಡಿ.

ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬೆಂಗಳೂರು ಉತ್ತರಹಳ್ಳಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ, ಇದು ಅವರ ಪ್ರಶ್ನೆ ಇರುವಂಥಾದ್ದು.

ಗೊಂದಲ

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಉತ್ತರ ಹೇಳಲಿ, ಮಾನ್ಯ ಯಡಿಯೂರಪ್ಪನವರೇ, ನಿಮ್ಮ ಸದಸ್ಯರಿಗೆ ನೀವು ಹೇಳಬೇಕು. ಈ ರೀತಿ ಮಧ್ಯೆ ಮಧ್ಯೆ ಎದ್ದರೆ ಕಷ್ಟವಾಗುತ್ತದೆ. ಮಾನ್ಯ ಮಂತ್ರಿಗಳೇ, ನೀವು ಉತ್ತರ ಹೇಳಿ.

ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್ : ಮಾನ್ಯ ಅಧ್ಯಕ್ಷರೇ, ಉತ್ತರಹಳ್ಳಿ ಕ್ಷೇತ್ರಕ್ಕೆ 81,855 ಹಳದಿ ಕಾರ್ಡುಗಳನ್ನು ವಿತರಣೆ ಮಾಡಲಾಗಿದೆ. ಅದರ ಪೈಕಿ 5,351 ಕಾರ್ಡುಗಳನ್ನು ಎಲಿಜಿಬಲ್ ಇಲ್ಲವೆಂಬ ಕಾರಣಕ್ಕಾಗಿ ರದ್ದು ಮಾಡಲಾಗಿದೆ. ಈ ಹಿಂದಿನ ಡಿಸೆಂಬರ್ ತಿಂಗಳಲ್ಲಿ ರದ್ದುಪಡಿಸಿರುವಂಥಾದ್ದು ಅದು ರಾಜ್ಯದಾದ್ಯಂತ ಕುಟುಂಬಗಳ ಸಂಖ್ಯೆಗಿಂತ ಹೆಚ್ಚಿಗೆ ಕಾರ್ಡುಗಳು ವಿತರಣೆಯಾಗಿರುವಂಥಾದ್ದು, ಗಮನಕ್ಕೆ ಬಂದುದ್ದರಿಂದ, ಅದನ್ನು ಕಡಿತಗೊಳಿಸಬೇಕೆಂಬ ತೀರ್ಮಾನವಾಗಿ, ಎಲ್ಲೆಲ್ಲಿ ಅನರ್ಹರಿಗೆ ಕಾರ್ಡುಗಳನ್ನು ಕೊಟ್ಟಿತ್ತೋ, ಅಂಥದ್ದನ್ನು ಕಡಿಮೆ ಮಾಡಬೇಕೆಂದು ಆದೇಶ ಕೊಡಲಾಯಿತು. ಆ ಪ್ರಕಾರವಾಗಿ ಅಲ್ಲಲ್ಲಿ, ಎಲ್ಲಾ ಗ್ರಾಮಗಳಲ್ಲಿ, ಎಲ್ಲಾ ಪಡಿತರ ವ್ಯಾಪ್ತಿಯ ಗ್ರಾಮಗಳಲ್ಲಿ, ಈ ಕಾರ್ಡುಗಳನ್ನು ಕಡಿಮೆ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡಿದೆ. ಅದರಲ್ಲಿ ಈ ಉತ್ತರಹಳ್ಳಿ ಕ್ಷೇತ್ರದಲ್ಲಿ 5,351 ಕಾರ್ಡುಗಳನ್ನು ಕಡಿಮೆಗೊಳಿಸಲಾಗಿದೆ. ಇದನ್ನು ಕಡಿಮೆಗೊಳಿಸಿರುವಂಥ ವಿಚಾರದ ಬಗ್ಗೆ, ಮಾನ್ಯ ಸದಸ್ಯರು, ಇದರಲ್ಲಿ ಸರಿಯಾದಂತಹ ಕ್ರಮವನ್ನು ಅನುಸರಿಸಿಲ್ಲ. ಅವರು ಮನಸೋ ಇಚ್ಛೆಯಂತೆ ನ್ಯಾಯ ಬೆಲೆ ಅಂಗಡಿಯವರೊಡಗೂಡಿ ಮಾಡಿದ್ದಾರೆಂಬ ಆರೋಪವನ್ನು ಮಾಡಿದ್ದಾರೆ. ಇದರ ಬಗ್ಗೆ ಉತ್ತರಹಳ್ಳಿ ಕ್ಷೇತ್ರದಲ್ಲಿ ಯಾವ ರೀತಿ ರದ್ದು ಮಾಡಿದ್ದಾರೆಂಬ ವಿಚಾರವಾಗಿ, ಮಾನ್ಯ ಸದಸ್ಯರೊಡನೆ ಸಮಾಲೋಚನೆ ಮಾಡಿ, ನಮ್ಮ ಅಧಿಕಾರಿಗಳನ್ನು ಕೂರಿಸಿ, ಇದರ ಸಮಸ್ಯೆಯನ್ನು ಬಗೆ ಹರಿಸುವಂತಹ

ಕೆಲಸವನ್ನು ಮಾಡುತ್ತೇನೆ. ಇನ್ನು ರಾಜ್ಯಾದ್ಯಂತ ಈ ರೀತಿ ಪಡಿತರ ವ್ಯವಸ್ಥೆಯಲ್ಲಿ ಅಸಮರ್ಪಕವಾಗಿದೆಯೆಂಬ ಬಗ್ಗೆ ಮಾನ್ಯ ಸದಸ್ಯರುಗಳು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆಯೂ ಸರ್ಕಾರ ಸ್ಪಂದಿಸುತ್ತದೆ. ನಾವೂ ಕೂಡ ಈ ಕಾರಣಕ್ಕಾಗಿ ಸಮಗ್ರವಾದ ಸಮೀಕ್ಷೆಯಾಗಬೇಕು, ಯಾವುದೇ ಕಾರಣಕ್ಕೂ ಅರ್ಹ ಕುಟುಂಬಗಳು ಈ ಒಂದು ಸೌಲಭ್ಯದಿಂದ ವಂಚನೆಯಾಗಬಾರದೆಂಬ ದೃಷ್ಟಿಯಿಂದ, ಈಗ ಪುನರ್ ಸಮೀಕ್ಷಾ ಕಾರ್ಯವನ್ನು ಹಮ್ಮಿಕೊಂಡು, ಇದಕ್ಕೆ ಮಾನ್ಯ ಸದಸ್ಯರೆಲ್ಲ ಸಹಕಾರವನ್ನು ಕೋರಿದ್ದೇನೆ, ಮತ್ತೆ ಅವರೆಲ್ಲರಿಗೂ ಪತ್ರವನ್ನು ಬರೆದಿದ್ದೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ಏನು ಮಾನದಂಡವನ್ನು ಅಳವಡಿಸಬೇಕೆಂಬ ಬಗ್ಗೆ ಸುತ್ತೋಲೆಯನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ಬಹಳ ಒತ್ತಡ ಬಂದದ್ದರಿಂದ ಗ್ಯಾಸ್ ಮತ್ತು ಟಿ.ವಿ. ಹೊಂದಿರುವವರನ್ನು ಇದರ ವ್ಯಾಪ್ತಿಯಿಂದ ಹೊರತುಪಡಿಸಿದ್ದೇವೆ. ಇನ್ನು ಅಂತಿಮವಾಗಿ ಅವರ ಜೀವನಮಟ್ಟ ಏನು ಇದೆ, ಇದರ ಬಗ್ಗೆ ಕುಟುಂಬಗಳ ಸಮೀಕ್ಷೆ ಮಾಡುವ ಸಮಯದಲ್ಲಿ, ಕುಟುಂಬದ ಜೀವನ ಮಟ್ಟವನ್ನು ನೋಡಿ ನಿರ್ಣಯಿಸಬೇಕೆಂದು ಒಂದು ಸುತ್ತೋಲೆಯನ್ನು ಹೊರಡಿಸಿ, ಇದರ ಪ್ರತಿಗಳನ್ನು ಎಲ್ಲಾ ಮಾನ್ಯ ಶಾಸಕರುಗಳಿಗೂ ಕೂಡ ಕೊಟ್ಟಿದ್ದೇವೆ. ನಾನೂ ಕೂಡ 4 ವಿಭಾಗಗಳ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಸಭೆಯನ್ನೂ ಕೂಡ ಕರೆದು, ಇದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕೆಂದು ಹೇಳಿದ್ದೇನೆ. ಮತ್ತು ತಾವೇ ಪ್ರತಿ ತಾಲ್ಲೂಕುಗಳಿಗೂ ಖುದ್ದಾಗಿ ಹೋಗಬೇಕು. ಗ್ರಾಮ ಪಂಚಾಯತ್‌ಗೆ ಒಬ್ಬೊಬ್ಬ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ನೋಡಲ್ ಅಫೀಸರ್‌ಗಳನ್ನಾಗಿ ನೇಮಕ ಮಾಡಿ, ಅವರ ನೇತೃತ್ವದಲ್ಲಿ ಈ ಸರ್ವೆ ಕಾರ್ಯ ನಡೆಯಬೇಕು. ಈ ಸರ್ವೆ ಕಾರ್ಯ ನಡೆಯುವಾಗ ಸಾಕಷ್ಟು ಪ್ರಚಾರವನ್ನು ಆ ಗ್ರಾಮಗಳಲ್ಲಿ ಟಾಂಟಾಂ ಮಾಡಿಸಿ, ಸರ್ವೆ ಕಾರ್ಯ ನಡೆಯುತ್ತಿದೆಯೆಂಬುದನ್ನು ತಿಳಿಸಬೇಕು. ಇದರಲ್ಲಿ ಸ್ಥಳೀಯ ಸ್ತ್ರೀ ಶಕ್ತಿ ಸಂಘಗಳು ಮತ್ತು ಚುನಾಯಿತ ಪ್ರತಿನಿಧಿಗಳು ಯಾರಿದ್ದಾರೆ. ಅವರನ್ನು ಈ ಸಮೀಕ್ಷೆ ಕಾರ್ಯವನ್ನು ಮಾಡುವಾಗ ಜೊತೆಯಲ್ಲಿ ಕರೆದುಕೊಂಡು ಮನೆ ಮನೆಗಳಿಗೆ ಹೋಗಿ ಸಮೀಕ್ಷೆ ಮಾಡಿ ಇದರಲ್ಲಿ ಯಾರು ಅನರ್ಹರಿದ್ದಾರೆ ಅವರ ಕಾರ್ಡುಗಳನ್ನು ರದ್ದುಗೊಳಿಸಬೇಕು. ಈಗ ತಾವು ಹೇಳಿದ ಹಾಗೆ ಯಾರಾದರೂ ನ್ಯಾಯ ಬೆಲೆ ಅಂಗಡಿಯುವರ ಒಟ್ಟು ಕಾರ್ಡುಗಳನ್ನು ಹೊಂದಿರುವಂಥಾದ್ದು, ಅಥವಾ ಇನ್ಯಾರಾದರೂ ಬೇರೆ ಬೇರೆ ಹೆಸರಿನಲ್ಲಿ ಕಾರ್ಡುಗಳನ್ನು ತೆಗೆದುಕೊಂಡಿರುವಂಥಾದ್ದು ಇರಬಹುದು. ಇಲ್ಲಿ ಕುಟುಂಬಗಳ ಸಂಖ್ಯೆಗಿಂತ ಕಾರ್ಡುಗಳನ್ನು ಕೊಟ್ಟಿರುವಂಥ ಸಂಖ್ಯೆ ಜಾಸ್ತಿ ಇದೆ. ಹಾಗೆಂದ ಮೇಲೆ ಸಾಕಷ್ಟು ಬೋಗಸ್ ಕಾರ್ಡುಗಳು ವಿತರಣೆಯಾಗಿರುವಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆ. ಇದನ್ನು ಸ್ಥಳೀಯ ಮಟ್ಟದ ಅಧಿಕಾರಿಗಳೇ ನಿರ್ವಹಣೆ ಮಾಡುತ್ತಿದ್ದುದ್ದರಿಂದ, ಇದರಲ್ಲಿ ಸ್ವಲ್ಪ ಲೋಪವಾಗಿರುವಂಥ ಸಾಧ್ಯತೆಗಳು ಇವೆ.

ಆದುದರಿಂದ ಇದನ್ನು ತಪ್ಪಿಸಬೇಕೆಂಬ ದೃಷ್ಟಿಯಿಂದ ಇದರ ಬಗ್ಗೆ ಪಾರದರ್ಶಕವಾದ ರೀತಿಯಲ್ಲಿ ಮತ್ತು ಎಲ್ಲಾ ಜನಪ್ರತಿನಿಧಿಗಳ ಗಮನಕ್ಕೆ ಬರುವ ರೀತಿಯಲ್ಲಿ, ಶಾಸಕರುಗಳಿಗೆ ಯಾವ್ಯಾವ ಗ್ರಾಮ ಪಂಚಾಯತ್‌ಗಳಲ್ಲಿ ಸಮೀಕ್ಷೆ ನಡೆಯುತ್ತಿದೆಯೆಂಬ, ಪ್ರತಿಯೊಂದು ಮಾಹಿತಿಯನ್ನು ಆಯಾ ತಾಲ್ಲೂಕಿನ ತಹಶೀಲ್ದಾರರು ನೀಡಬೇಕೆಂಬ ಆದೇಶವನ್ನು ಸರ್ಕಾರ ಕೊಟ್ಟಿದೆ. ಈ ಮಾರ್ಚ್ ತಿಂಗಳ ಒಳಗೆ ಪೂರ್ಣ ಸಮೀಕ್ಷಾ ಕಾರ್ಯವನ್ನು ಮಾಡಿ, ನಿರ್ದಿಷ್ಟವಾದಂತಹ ಸಂಖ್ಯೆ ಏನು ಬರುತ್ತದೆ, ಆ ಆಧಾರದ ಮೇಲೆ ಮಾರ್ಪಾಡುಗಳನ್ನು ಮಾಡಿ, ಈ ಪಡಿತರ ವಿತರಣಾ ವ್ಯವಸ್ಥೆ ಸಮರ್ಪಕವಾಗಿ, ಅದರಲ್ಲೂ ವಿಶೇಷವಾಗಿ ಅರ್ಹ ಕುಟುಂಬಗಳಿಗೆ ವಂಚನೆಯಾಗಬಾರದೆಂಬ ದೃಷ್ಟಿಯಲ್ಲಿ ಈ ಪ್ರಯತ್ನವನ್ನು ಮಾಡುತ್ತಿದ್ದೇವೆ. ಆದುದರಿಂದ ಈಗ ತಾವು ಏನು ಕೇಳಿದ್ದೀರಿ, ಈ ಸರ್ವೆ ಕಾರ್ಯಕ್ಕೆ ತಾವು ಸಹ ಸಹಕಾರವನ್ನು ಕೊಟ್ಟು, ಮಾಡಿದರೆ ಇದು ಯಶಸ್ವಿಯಾಗುತ್ತದೆಂಬ ಮಾತನ್ನು ಹೇಳುತ್ತೇನೆ.

ಗೊಂದಲ

ಅಧ್ಯಕ್ಷರು : ಈಗ ಎಲ್ಲರನ್ನೂ ಸಮಾಧಾನ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಪ್ರತಿಪಕ್ಷದ ನಾಯಕರು ಈಗ ಏನು ಕೇಳಿದ್ದಾರೆ ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳಿದ್ದಾರೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೇ, ನಾವು ಹೇಳುತ್ತಿರುವಂಥಾದ್ದು ಹಿಂದಿನ ಸರ್ಕಾರ ಮೂರು ಬಾರಿ ಸಮೀಕ್ಷೆ ಮಾಡಿದೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳಿದ್ದಾರೆ. ದಯಮಾಡಿ ಕುಳಿತುಕೊಳ್ಳಿ. ಎಲ್ಲರೂ ಈ ರೀತಿ ಎದ್ದು ನಿಂತುಕೊಂಡರೆ ಹೇಗೆ?

ಗೊಂದಲ

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೇ, ಈಗ ಕಾರ್ಡ್‌ಗಳನ್ನು ರದ್ದು ಮಾಡಿದ್ದಾರಲ್ಲಾ, ಅವರ ಗತಿ ಏನಾಗಬೇಕು? ರದ್ದು ಆಗಿರುವವರಿಗೆ ಕೂಡಲೇ ರೇಷನ್ ಕೊಡಬೇಕು.

ಶ್ರೀಮತಿ ಸುನೀತಾ ವೀರಪ್ಪಗೌಡ ಜೆ : ಮಾನ್ಯ ಅಧ್ಯಕ್ಷರೇ, ಈಗ ಬಡವರಿಗೆ ಕೊಟ್ಟಿದ್ದ ಕಾರ್ಡುಗಳನ್ನು ರದ್ದು ಮಾಡಿದ್ದಾರೆ.

ಗೊಂದಲ

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಆರ್. ಅಶೋಕ್ : ನೀವು ಮಾಡಿಸತಕ್ಕಂಥ ಸಮೀಕ್ಷೆ ಏನು ಫಲಿತಾಂಶ ಕೊಡುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಈಗ ರದ್ದು ಮಾಡಿರತಕ್ಕಂಥ ಜನಗಳ ಪಾಡೇನು? ನೀವು ಸಮೀಕ್ಷೆ ಮಾಡಿ. ಸಮೀಕ್ಷೆ ಮಾಡಿದಾಗ, ಯಾರ್ಯಾರು ಅರ್ಹರಲ್ಲ ಎಂದು ಅದರಲ್ಲಿ ಬರುತ್ತದೋ ಅಂಥವರನ್ನೆಲ್ಲಾ ವಜಾ ಮಾಡಿ. ಅದುವರೆಗೂ ಅವರಿಗೆ ನೀವು ರೇಷನ್ ಕೊಡಬೇಕು. ಏಕೆಂದರೆ, ಅವರೆಲ್ಲರೂ

ಬಡವರಿದ್ದಾರೆ. ಬಡವರ ಚೀಟಿಯನ್ನೇ ನೀವು ತೆಗೆದು ಹಾಕಿರುವುದು. ಸಾಹುಕಾರರ ಚೀಟಿಯನ್ನು ನೀವು ಕಿತ್ತು ಹಾಕಿಲ್ಲ. ಇವತ್ತು ಅವರೆಲ್ಲ ಬೀದಿಯಲ್ಲಿ ಭಿಕ್ಷೆ ಬೇಡುತ್ತಿದ್ದಾರೆ. ಅದಕ್ಕೋಸ್ಕರವಾಗಿ, ನೀವು ಕೂಡಲೇ ರೇಷನ್ ಕೊಡಬೇಕು. ನಿಮ್ಮ ಸಮೀಕ್ಷೆ ಆಗುವವರೆಗೆ ಅವರಿಗೆ ಯಾವುದೇ ಕಾರಣಕ್ಕೂ ರೇಷನ್ ನಿಲ್ಲಿಸಬಾರದು ಎಂದು ನಾನು ಆಗ್ರಹ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಈಗಾಗಲೇ, ಹಿಂದಿನ ಸರ್ಕಾರ ಇದ್ದಾಗ ಮೂರು ಸಲ ಸಮೀಕ್ಷೆಯಾಗಿದೆ. ಅದರ ರಿಸಲ್ಟ್ ಏನು? ಹಿಂದಿನ ಸರ್ಕಾರ ಮೂರು ಸಲ ಸಮೀಕ್ಷೆ ಮಾಡಿತು. ಆದರೂ ಏನೂ ಮಾಡಲಿಲ್ಲ. ಈಗ ನೀವು ಸಮೀಕ್ಷೆ ಪ್ರಾರಂಭ ಮಾಡಿದ್ದೀರಿ. ಅದರ ಬಗ್ಗೆ ಎಲ್ಲಾ ಜನಪ್ರತಿನಿಧಿಗಳಿಗೆ ಮಾಹಿತಿ ಕೊಡಲಾಗಿದೆ, ಅಲ್ಲಿಯ ತಹಶೀಲ್ದಾರರು ಅವರನ್ನು ಅಪ್ರೋಚ್ ಮಾಡುತ್ತಿದ್ದಾರೆ ಎಂದು ಹೇಳಿದ್ದೀರಿ. ನಾನು ಇಲ್ಲಿ ಹೇಳುತ್ತಿದ್ದೇನೆ, ಯಾವ ಜನಪ್ರತಿನಿಧಿಗಳಿಗಾಗಲಿ, ಯಾವ ಶಾಸಕರನ್ನಾಗಲೀ, ಯಾವುದೇ ತಹಶೀಲ್ದಾರರಾಗಲೀ ಅಥವಾ ಫುಡ್ ಆಫೀಸರ್‌ಗಳಾಗಲೀ ಇದುವರೆಗೆ ಅಪ್ರೋಚ್ ಆಗಿಲ್ಲ. ಯಾರೋ ಒಬ್ಬರು ಏನೋ ಸಮೀಕ್ಷೆ ಮಾಡುತ್ತಾರೆ. ಅದರಲ್ಲಿ ನಿಜವಾಗಿ ಮತ್ತೆ ಬಲಿಪಶು ಆಗುವವರು ಬಡವರೇ. ಆದರೆ, ಯಾರು ಶ್ರೀಮಂತರಿದ್ದಾರೆ, ಅನರ್ಹರಿದ್ದಾರೆ ಅವರು ಇದರ ಫಾಯದೆ (ಲಾಭ) ತೆಗೆದುಕೊಳ್ಳುತ್ತಾರೆ. ನಿಜವಾಗಿ ಯಾರಿಗೆ ಬೇಕಾಗಿದೆ, ಅವರಿಗೆ ಇದು ಸಿಗುವುದೇ ಇಲ್ಲ. ಈಗಾಗಲೇ ನೀವು ಹಲವಾರು ಪಡಿತರ ಚೀಟಿಗಳನ್ನು ರದ್ದು ಮಾಡಿದ್ದೀರಿ. ಚುನಾವಣೆಗೆ ಮುಂಚೆ, ಆಗ ಇದ್ದಂಥ ಕಾರ್ಡ್‌ಗಳನ್ನು ಕಸಿದುಕೊಂಡು ಒಂದು ಚೀಟಿ ಕೊಟ್ಟಿದ್ದರು. ಈಗ ಆ ಚೀಟಿಯನ್ನೂ ವಾಪಸ್ಸು ತೆಗೆದುಕೊಂಡಿದ್ದಾರೆ. ಹೀಗಾಗಿ ನೀವು ಬಡವರಿಗಾಗಿ ಹಳ್ಳಿಗಾಡಿನಲ್ಲಿರುವವರಿಗೆ ಮೂರವರೆ ರೂಪಾಯಿಗೆ ಅಕ್ಕಿ ಕೊಡುತ್ತೇವೆ, ಎರಡೂವರೆ ರೂಪಾಯಿಗೆ ಗೋಧಿ ಕೊಡುತ್ತೇವೆ ಎಂದು ತಂದಿರುವ ಯೋಜನೆಯಂತೆ, ಅದು ಇವತ್ತು ಅವರಿಗೆ ಸಿಗುತ್ತಿಲ್ಲ. ಯಾರು ನಿಜವಾಗಿ ಬಡವರಿದ್ದಾರೆ, ಅವರು ಬಲಿಪಶುಗಳಾಗುತ್ತಿದ್ದಾರೆ. ಹಾಗಾಗಿ, ನೀವು ಈ ಸಮೀಕ್ಷೆಯನ್ನು ಎಷ್ಟು ಅವಧಿಯೊಳಗೆ ಮಾಡಿಸುತ್ತೀರಿ, ಏನು ವಿಚಾರ ಎನ್ನುವ ಬಗ್ಗೆ ಹೇಳಬೇಕು.

ಅಧ್ಯಕ್ಷರು : ದಯಮಾಡಿ ಕೇಳಿ. ನನ್ನದು ಒಂದೇ ಒಂದು ಪ್ರಶ್ನೆ ಇದೆ. ಒಂದು ಪ್ರಶ್ನೆಯನ್ನು ಕೇಳಿದವರಿಗೆ, ಒಂದೋ ಎರಡೋ ಉಪ ಪ್ರಶ್ನೆಗಳನ್ನು ಹಾಕುವುದಕ್ಕೆ ಅವಕಾಶವಿದೆ. ಕೆಲವು ಗಂಭೀರ ಪ್ರಶ್ನೆಗಳು ಬಂದಾಗ, ಬೇರೆಯವರಿಗೂ ಒಂದೋ, ಎರಡೋ ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಮಾಡಿ ಕೊಡುತ್ತಿದ್ದೇವೆ. ಆದರೆ ಎಲ್ಲರೂ ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ, ಅದರ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ, ಅದರ ಬಗ್ಗೆ ಸಲಹೆಗಳನ್ನು ಕೊಡುವುದಕ್ಕೆ ಈ ರೀತಿ ನಿಂತುಕೊಂಡರೆ, ನಾನು ಪ್ರಶ್ನೋತ್ತರವನ್ನು ಹೇಗೆ ಮುಗಿಸುವುದು? ದಯಮಾಡಿ ನೀವೆಲ್ಲಾ ಸೇರಿ ನನಗೊಂದು ಸಲಹೆ ಕೊಟ್ಟು ಬಿಟ್ಟರೆ, ನಾನು ಆ ರೀತಿ ನಡೆದುಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಪ್ರಶ್ನೆ ಕೇಳುವುದಕ್ಕೆ ನಿಂತಿಲ್ಲ. ಇದು ಕಂಟೆಂಪ್ಟ್ ಆಫ್ ದಿ ಹೌಸ್ ಆಗುತ್ತದೆ ಎಂದು ಹೇಳುವುದಕ್ಕೆ ನಿಂತಿದ್ದೇನೆ. ಈ ವಿಷಯಕ್ಕೆ ಸಂಬಂಧಿಸಿದಂತೆ, ಇವರು ತೆಗೆದುಕೊಂಡಿರುವ ಕೃತ್ಯ, ಈ ಸಭೆಗೆ ಅಗೌರವ ತರುವಂಥ ಕೃತ್ಯವಾಗುತ್ತದೆ. ಏಕೆಂದರೆ, ಇವರು ಹೋದಸಲದ ಅಧಿವೇಶನದಲ್ಲಿ, ಈ ಶಾಸನಸಭೆಯಲ್ಲಿಯೇ, 'ಯಾರ್ಯಾರಿಗೆ ಕಾರ್ಡ್ ಇಲ್ಲ, ಅವರಿಗೆ ಕಾರ್ಡ್ ವಿತರಿಸುತ್ತೇವೆ' ಎಂದು ಹೇಳಿಕೆ ಕೊಟ್ಟಿದ್ದಾರೆ. ಆದರೆ ಈಗ ಏಕಾಏಕಿ ಕಾರ್ಡ್‌ಗಳನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆ. ಹೋದ ಸಲ ನಾವು ಮತ್ತು ಮಾನ್ಯ ಯಡಿಯೂರಪ್ಪ ನವರು ಪ್ರಸ್ತಾಪ ಮಾಡಿದಾಗ, 'ಹೆಚ್ಚುವರಿಯಾಗಿ ಕಾರ್ಡ್ ಕೊಡುತ್ತೇವೆ, ಯಾರ್ಯಾರದು ಚೀಟಿ ತೆಗೆದುಕೊಂಡಿದ್ದೇವೋ, ಅವರಿಗೆಲ್ಲಾ ರೇಷನ್ ಕಾರ್ಡನ್ನು ವಾಪಸ್ಸು ಕೊಡುತ್ತೇವೆ, ರಾಜ್ಯದಲ್ಲಿ 14 ಲಕ್ಷದಿಂದ 16 ಲಕ್ಷ ಕಾರ್ಡುಗಳನ್ನು ಕೊಡುತ್ತೇವೆ' ಎಂದು ಇದೇ ಶಾಸನಸಭೆಯಲ್ಲಿ ನಿಂತು ಉತ್ತರ ಹೇಳಿದಂಥ ನೀವು, ಈಗ ಶಾಸನಸಭೆಯ ಗಮನಕ್ಕೆ ತರದೇ, ಯಾವುದೇ ಶಾಸನ ರೂಪಿಸದೇ ಕಾರ್ಡ್‌ಗಳನ್ನು ವಿತ್‌ಹೋಲ್ಡ್ ಮಾಡುತ್ತಿರುವುದು, ವಾಪಸ್ಸು ತೆಗೆದುಕೊಳ್ಳುತ್ತಿರುವುದು, ಕಂಟೆಂಪ್ಟ್ ಆಫ್ ದಿ ಹೌಸ್ ಆಗುವುದಿಲ್ಲವೇ ಎನ್ನುವ ನನ್ನ ಪ್ರಶ್ನೆಗೆ ತಾವು ಉತ್ತರ ಹೇಳಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಈಗ ಮಾನ್ಯ ಮಾಧುಸ್ವಾಮಿಯವರು ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಸರ್ಕಾರದವರು ಯಾರದ್ದೋ ಕೆಲವರ ಕಾರ್ಡುಗಳನ್ನು ತೆಗೆದಿದ್ದರು. ಹಿಂದಿನ ವಿಧಾನಸಭಾ ಅಧಿವೇಶನದಲ್ಲಿ ಮಾನ್ಯ ಪ್ರತಿಪಕ್ಷದ ನಾಯಕರು ಮತ್ತು ಕೆಲವರೆಲ್ಲಾ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಯಾರಿಗೆ ತೆಗೆದು ಹಾಕಿದ್ದೇವೆ, ಅವರಿಗೆಲ್ಲಾ ಮತ್ತೆ ಮುಂದುವರೆಸುತ್ತೇವೆ ಅನ್ನತಕ್ಕಂಥ ಮಾತನ್ನು ಸರ್ಕಾರದವರು ಹೇಳಿದರು. ಯಾರನ್ನು ಬಿಟ್ಟಿದ್ದರೋ, ಮತ್ತೆ ಅವರೆಲ್ಲರಿಗೂ ಎಂದು ಸರ್ಕಾರ ಈಗ ಆದೇಶ ಮಾಡಿಲ್ಲ. ಈಗ ಪರಿಷ್ಕರಣೆ ಮಾಡಿ ಕೆಲವರನ್ನು ಕಿತ್ತು ಹಾಕಿದ್ದಾರೆ. ಹಿಂದೆ, ಕಿತ್ತು ಹಾಕಿದ್ದವರು......

ಗೊಂದಲ

ಅಧ್ಯಕ್ಷರು : ದಯಮಾಡಿ ನನ್ನ ಮಾತನ್ನೂ ಕೇಳಿ. ನೀವು ಹೇಳಿದ್ದನ್ನೇ ನಾನು ಕೇಳಬೇಕು ಎಂದರೆ ಹೇಗೆ? ಏನಿದು, ಇದೇನು ಸಭೆಯೋ, ಏನು?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರು ಮಾತನಾಡುವಾಗ ಅವರು ಏನು ಹೇಳುತ್ತಾರೋ ಅದನ್ನು ಕೇಳಿ, ಆಮೇಲೆ ನೀವು ಹೇಳುತ್ತಿರುವ ಮಾಹಿತಿ ಸರಿಯಲ್ಲ ಎಂದು ಹೇಳಿ.

ಅಧ್ಯಕ್ಷರು : ಏನಾಗಿದೆ ಎಂದರೆ, ಹಿಂದೆ ಏನು ತೆಗೆದು ಹಾಕಿದ್ದರು. ಅವರಿಗೆಲ್ಲಾ ಮತ್ತೆ ಕೊಡುತ್ತೇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಅನೌನ್ಸ್ ಮಾಡಿದ್ದರು. ಮತ್ತೆ ಅವರನ್ನೇ, ಅಂದರೆ ಕಿತ್ತು ಹಾಕಿರತಕ್ಕಂಥ ಪಟ್ಟಿ ಏನಿತ್ತು,

ಅವರನ್ನೇ ಕಿತ್ತು ಹಾಕಿರತಕ್ಕಂಥ ಆದೇಶವಿದ್ದರೆ, ತಾವು ಹೇಳುವಂಥಾದ್ದು ಅಟ್ರಾಕ್ಟ್ ಆಗುತ್ತದೆ. ಆದರೆ ಆ ರೀತಿ ಆಗಿಲ್ಲ, ಈಗ ಪರಿಷ್ಕರಣೆಗೆ ತೆಗೆದುಕೊಂಡಿದ್ದಾರೆ.

ಶ್ರೀ ಆರ್. ಅಶೋಕ್ : ಪರಿಷ್ಕರಣೆಗೆ ಈಗ ಅನೌನ್ಸ್ ಮಾಡಿದ್ದಾರೆ.

ಅಧ್ಯಕ್ಷರು : ಅಶೋಕ್‌ರವರೇ, ದಯಮಾಡಿ ಅರ್ಥಮಾಡಿಕೊಳ್ಳಿ, ಮಾನ್ಯ ಮಾಧುಸ್ವಾಮಿಯವರು ಎತ್ತಿರುವುದಕ್ಕೆ ಸಂಬಂಧಪಟ್ಟಂತೆ ಹೇಳುತ್ತಿದ್ದೇನೆ. ಪರಿಷ್ಕರಣೆ ಮಾಡಿ ಕೆಲವರನ್ನು ಕಿತ್ತು ಹಾಕಿದ್ದಾರೆ. ಆದ್ದರಿಂದ, ಅವರು ಹೇಳಿದಂತೆ, ಇದಕ್ಕೆ ಏನು ಒಂದು ಪ್ರಿವಿಲೇಜ್ ಇದೆ ಅಟ್ರಾಕ್ಟ್ ಆಗುವುದಿಲ್ಲ ಎಂದು ಹೇಳುತ್ತೇನೆ. (ವಿರೋಧ ಪಕ್ಷದ ನಾಯಕರಾದ ಬಿ.ಎಸ್. ಯಡಿಯೂರಪ್ಪನವರು ಮಾತನಾಡಲು ಪ್ರಯತ್ನಿಸಿದರು)

ಅಧ್ಯಕ್ಷರು : ಯಡಿಯೂರಪ್ಪನವರೇ, ಇದನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಹಾಕುತ್ತೇನೆ. ಹೀಗಾದರೆ ಇದು ಮುಗಿಯುವುದಿಲ್ಲ. ಇದನ್ನು ಬೇರೆ ರೀತಿಯಲ್ಲಿ ತೆಗೆದುಕೊಳ್ಳೋಣ ಬಿಡಿ. ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕಲರ್ ಟಿ.ವಿ. ಇದ್ದವರಿಗೆ, ಗ್ಯಾಸ್ ಇದ್ದವರಿಗೆ ತೆಗೆದು ಹಾಕಿದ್ದುದ್ದನ್ನು ಮತ್ತೆ ವಾಪಸ್ಸು ಕೊಡುತ್ತೇವೆ ಎಂದು ಹೇಳಿದ್ದಾರೆ.

ಅಧ್ಯಕ್ಷರು : ಯಡಿಯೂರಪ್ಪನವರೇ, ಸೋಮವಾರ ಅಥವಾ ಮಂಗಳವಾರ ಇದನ್ನು ಚರ್ಚೆ ಮಾಡೋಣ. ಆಗ ಅವರು ಏನಾದರೊಂದು ತೀರ್ಮಾನಕ್ಕೆ ಬಂದು ಉತ್ತರ ಕೊಡುತ್ತಾರೆ. ಇಲ್ಲದಿದ್ದರೆ ಈ ಸಮಸ್ಯೆ ಮುಗಿಯುವುದಿಲ್ಲ.

ಶ್ರೀ ಆರ್. ಅಶೋಕ್ : ಹೊಸದಾಗಿ ಒಂದು ಸರ್ಕ್ಯುಲರ್ ಹೊರಡಿಸಿದ್ದಾರೆ. ಅದರಲ್ಲಿ ಏನು ಹಾಕಿದ್ದಾರೆ ಗೊತ್ತೇ? ಯಾರಿಗೆ ಒಂದು ಸಾವಿರ ರೂಪಾಯಿ ಆದಾಯ ಬರುತ್ತದೋ, ಅವರಿಗೆ ಕೊಡುವುದಿಲ್ಲ ಎಂದು ಹೇಳಿದ್ದಾರೆ. ಒಬ್ಬ ಕೂಲಿ ಮಾಡುವವನೂ ಸಹ ದಿನಕ್ಕೆ 50 ರೂಪಾಯಿ ಸಂಬಳ ತೆಗೆದುಕೊಳ್ಳುತ್ತಾನೆ.

ಅಧ್ಯಕ್ಷರು : ಇದು ಬಹಳ ಗಂಭೀರವಾದ ಪ್ರಶ್ನೆ. ಎಲ್ಲಾ ಸದಸ್ಯರೂ ಸಹ ಅವರವರ ಕ್ಷೇತ್ರಗಳಲ್ಲಿ ಆಗಿರತಕ್ಕಂಥ ವಿಚಾರಗಳನ್ನು ಹೇಳಲು, ಪ್ರಸ್ತಾಪ ಮಾಡಲು ಇಚ್ಛಿಸುವುದರಿಂದ, ಇದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಹೇಳಿದ ಹಾಗೆ, ಪರಿಷ್ಕರಣೆ ಮಾಡಿ ಹೆಸರುಗಳನ್ನು ಕೈಬಿಟ್ಟಿದ್ದರೆ, ನಮ್ಮದೇನೂ ವಿರೋಧವಿರಲಿಲ್ಲ. ಆದರೆ, ಪರಿಷ್ಕರಣೆ ಪ್ರಾರಂಭ ಮಾಡುತ್ತೇವೆ ಎಂದು ಹೇಳಿ, ತಾತ್ಕಾಲಿಕವಾಗಿ ತಮಗೆ ಖುಷಿ ಬಂದಂತೆ ಒಂದೊಂದು ತಾಲ್ಲೂಕಿನಲ್ಲಿ 5 ಸಾವಿರದಿಂದ 10 ಸಾವಿರದವರೆಗೂ ಪಡಿತರ ಕಾರ್ಡು ಕೊಟ್ಟಿರತಕ್ಕಂಥಾದ್ದನ್ನು ಕಟ್ ಮಾಡಿದ್ದಾರೆ. ಇದು, ತಮ್ಮ ಕೆ.ಆರ್. ಪೇಟೆ ತಾಲ್ಲೂಕು ಸೇರಿಸಿ ಮಾಡಿರುವಂಥಾದ್ದು.

ಅಧ್ಯಕ್ಷರು : ಇದರ ಬಗ್ಗೆ ಮಾನ್ಯ ಸಚಿವರನ್ನು ಕೇಳೋಣ. ಖುಷಿ ಬಂದಂತೆ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ, ಈ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಎಲ್ಲರಿಗೂ ಗೊತ್ತಿರುವಂಥಾದ್ದು. ಅರ್ಧ ಗಂಟೆ ಚರ್ಚೆ ಮಾಡುವುದರಿಂದ ಇದಕ್ಕೆ ಪರಿಹಾರ ಸಿಗುವುದಿಲ್ಲ.

ಅಧ್ಯಕ್ಷರು : ಅವರು ಏನು ಹೇಳುತ್ತಾರೆಂದು ಕೇಳೋಣ. ಯಾವುದು ಮಾನದಂಡ ಎಂದು ಹೇಳುತ್ತಾರೇನೋ ಕೇಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವುದೇ ಮಾನದಂಡ ಇಲ್ಲವೇ ಇಲ್ಲ. ತಮಗೆ ಖುಷಿ ಬಂದ ಹಾಗೆ ಮಾಡಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸಚಿವರು ರಿಪ್ಲೈ ಕೊಡಲು ಸಿದ್ಧರಿದ್ದಾರೆ. ನೀವು ಹೀಗೇ ರಿಪ್ಲೈ ಕೊಡಬೇಕು ಎಂದು ಮಂತ್ರಿಗಳನ್ನು ಕಂಪೆಲ್ ಮಾಡಲು ಆಗುವುದಿಲ್ಲ. ಸಮಸ್ಯೆ ಗಂಭೀರವಾಗಿದೆ, ಅದಕ್ಕೊಂದು ಪರಿಹಾರವನ್ನು ಕಂಡು ಹಿಡಿಯಬೇಕಾಗುತ್ತದೆ. ಮಾನ್ಯ ಸಚಿವರು ಅದಕ್ಕೆ ಉತ್ತರ ಕೊಡುತ್ತಾರೆ. ಆದರೆ, ಇಲ್ಲೇ, ತಕ್ಷಣ ಉತ್ತರ ಕೊಡುವುದು ಬಹಳ ಕಷ್ಟವಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಸಹಕರಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಿಂದೆ ಬೇರೆ ಸರ್ಕಾರವಿತ್ತೇ? ಅವರನ್ನು ಐಡೆಂಟಿಫೈ ಮಾಡಿದವರು ನೀವೇ. ಚುನಾವಣೆಯಲ್ಲಿ ಓಟು ತೆಗೆದುಕೊಂಡ ಮೇಲೆ ಈಗ ಅವರು ಬೇಡವಾಯಿತೇನು? ಚುನಾವಣೆ ಮುಗಿಸಿಕೊಂಡು ಬಂದಮೇಲೆ, ಇದೇ ಸದನದಲ್ಲಿ ಮೊದಲನೇ ಅಧಿವೇಶನದಲ್ಲಿ, 16 ಲಕ್ಷ ಟೆಂಪೊರ್ವರಿ ಕಾರ್ಡ್ ಇದೆ, ಅದನ್ನು ಖಾಯಂ ಮಾಡುತ್ತೇವೆ ಎಂದು ಮುಖ್ಯಮಂತ್ರಿಗಳು ಘೋಷಣೆ ಮಾಡಲಿಲ್ಲವೇ? ಅವತ್ತು ನಾವು ಹೇಳಿದ್ದೆವೇ ಇದನ್ನು?

ಶ್ರೀ ಕೆ. ಶ್ರೀನಿವಾಸಗೌಡ : ತಾವು ರೂಲಿಂಗ್ ಕೊಟ್ಟಿದ್ದೀರಿ, ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೀರಿ.

ಅಧ್ಯಕ್ಷರು : ನಾನು ಹೇಳಿದ್ದೇನೆ. ಆದರೂ ಅವರಿಗೆ ಸಮಾಧಾನವಾಗಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ : ತಾವು ಅರ್ಧ ಗಂಟೆ ಅವಕಾಶ ಕೊಡಿ, ಮಾತನಾಡಲಿ. ಆದರೆ ಸರ್ಕಾರದವರು ಈಗಲೇ ಉತ್ತರ ಕೊಡಲಿ, ಹೀಗೇ ಕೊಡಲಿ ಎಂದರೆ ಹೇಗೆ? ತಾವು ರೂಲಿಂಗ್ ಕೊಟ್ಟ ಮೇಲೂ ಇವರು ಈ ರೀತಿ ಮಾಡಿದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾರ್ಯಾರಿಗೆ ವಾಪಸ್ಸು ತೆಗೆದುಕೊಂಡಿದ್ದೀರಿ, ಅವರೆಲ್ಲರಿಗೂ ಪಡಿತರನ್ನು ಮುಂದುವರೆಸಬೇಕು. ಪರಿಷ್ಕರಣೆ ಆದ ಮೇಲೆ ಯಾರಿಗೆ ಬೇಕಾದರೂ ಕಟ್ ಮಾಡಿ.

ಗೊಂದಲ

ಶ್ರೀ ವಾಟಾಳ್ ನಾಗರಾಜ್ : ತಡೆಹಿಡಿದಿರುವವರಿಗೆಲ್ಲಾ ಪಡಿತರವನ್ನು ಕೊಡಬೇಕು.

ಗೊಂದಲ

ಅಧ್ಯಕ್ಷರು : ಎಲ್ಲರೂ ಒಟ್ಟಿಗೆ ಹೀಗೆ ಮಾತನಾಡಿದರೆ ಹೇಗೆ ಕುಳಿತುಕೊಳ್ಳಿ.

ಶ್ರೀ ಆರ್. ಅಶೋಕ್ : ನನ್ನ ಕಾನ್ಸ್‌ಟಿಟ್ಯೂಯೆನ್ಸಿಯಲ್ಲಿ 10 ಸಾವಿರ ಕಾರ್ಡುಗಳನ್ನು ಕಟ್ ಮಾಡಿದ್ದಾರೆ.

ಅಧ್ಯಕ್ಷರು : ನಿಮ್ಮೊಬ್ಬರದೇ ಅಲ್ಲ, ಎಲ್ಲಾ ಕಾನ್ಸ್‌ಟಿಟ್ಯೂಯೆನ್ಸಿಯಲ್ಲೂ ಮಾಡಿದ್ದಾರೆ. ಹೀಗಾದರೆ, ಎಲ್ಲರೂ, ಎಲ್ಲಾ ಕಾನ್ಸ್‌ಟಿಟ್ಯೂಯೆನ್ಸಿಯವರೂ ಎದ್ದು ನಿಂತುಕೊಳ್ಳುತ್ತಾರೆ? ಕುಳಿತುಕೊಳ್ಳಿ ನೀವು. ಇದು ಕೆಟ್ಟ ಸಂಪ್ರದಾಯ.

ಗೊಂದಲ

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಮಾತನಾಡಲು ಪ್ರಯತ್ನಿಸಿದರು)

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ, ನೀವು ಸಭೆಗೆ ಅತೀತರಲ್ಲ. ಮೊದಲು ದಯಮಾಡಿ ಕುಳಿತುಕೊಳ್ಳಿ. ಈಗ ನಾನು ಎದ್ದು ನಿಂತಿದ್ದೇನೆ. ಎಲ್ಲಾ ಸದಸ್ಯರಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ಇದು ಬಹಳ ಗಂಭೀರವಾದ ವಿಚಾರ. ಅದಕ್ಕಾಗಿಯೇ ಇದನ್ನು ಬೇರೆ ರೂಪದಲ್ಲಿ ಅಂದರೆ ಅರ್ಧ ಗಂಟೆ ಕಾಲಾವಧಿಯ ಚರ್ಚೆಗೆ ತೆಗೆದುಕೊಳ್ಳೋಣ, ಅರ್ಧ ಗಂಟೆಯನ್ನು ಇದಕ್ಕೆ ವಿನಿಯೋಗ ಮಾಡೋಣ, ಚರ್ಚೆಯಾಗಲಿ. ಅನೇಕ ಸದಸ್ಯರು ಏನು ಹೇಳುತ್ತಾರೆ ಎಂದು ಕೇಳೋಣ. ಕೇಳಿಯಾದ ಮೇಲೆ, ಮಾನ್ಯ ಸಚಿವರು ಸಮಗ್ರವಾದ ಒಂದು ಉತ್ತರವನ್ನು ಕೊಡಲಿ, ಆಗ ಏನಾದರೊಂದು ತೀರ್ಮಾನಕ್ಕೆ ಬರೋಣ. ಆಗ ಏನು ಹೇಳುತ್ತಾರೋ ಕೇಳೋಣ.

ಶ್ರೀ ವಾಟಾಳ್ ನಾಗರಾಜ್ : ಈಗ ತಡೆಹಿಡಿದಿರುವುದನ್ನು ಮೊದಲು ತೆಗೆಯಲಿ. ಎಲ್ಲಾ ಕ್ಷೇತ್ರಗಳಲ್ಲೂ ತಡೆಹಿಡಿದಿದ್ದಾರೆ.

ಅಧ್ಯಕ್ಷರು : ಸ್ವಲ್ಪ ನನ್ನ ಮಾತನ್ನು ಕೇಳಿ. ಇದರ ಬಗ್ಗೆ ಸೋಮವಾರ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಆವತ್ತು ಏನು ಹೇಳುತ್ತಾರೆ ಎಂದು ಕೇಳಿ ಬಿಟ್ಟು ಆನಂತರ ಮುಂದಿನ ವಿಚಾರ ಮಾತನಾಡೋಣ. ಒಂದೆರಡು ದಿವಸ ತಡೆಯಲೂ ನಿಮಗೆ ಸಮಾಧಾನವಿಲ್ಲವೇ? ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ಇದಕ್ಕೆ ಸೋಮವಾರದ ದಿವಸ ಅರ್ಧ ಗಂಟೆಯನ್ನು ಫಿಕ್ಸ್ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಸೋಮವಾರ ಫಿಕ್ಸ್ ಮಾಡಿ ಆದರೆ ಇವತ್ತು ಅಜೆಂಡಾದಲ್ಲಿ ಅರ್ಧ ಗಂಟೆಗೆ ಕಾಲಾವಧಿ ಚರ್ಚೆಗೆ ಬಂದಿದೆ. ಇವತ್ತು ಚರ್ಚೆಗೆ ತೆಗೆದುಕೊಳ್ಳದಿದ್ದರೆ ಇದು ಮುಂದೆ ಬರುವುದೇ ಇಲ್ಲ. ಐಪಿ ಸೆಟ್ಟುಗಳಿಗೆ ಕಡಿಮೆ ದರದಲ್ಲಿ ವಿದ್ಯುತ್ ಪೂರೈಕೆ ಮಾಡುವ ಬಗ್ಗೆ ಇವತ್ತು ಅಜೆಂಡಾದಲ್ಲಿ ಬಂದಿದೆ. ಇದೂ ಕೂಡ ಅಜೆಂಡಾದಲ್ಲಿ ಬರಲೇಬೇಕು.

ಅಧ್ಯಕ್ಷರು : ಅಜೆಂಡಾದಲ್ಲಿ ಹಾಕುತ್ತೇನೆ. ಆಯಿತು, ಹಾಕಿಸೋಣ. ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಲ್ಪ ಮುಂಚೆ ತೆಗೆದುಕೊಳ್ಳಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಅಧ್ಯಕ್ಷರು : ಆಯಿತು, ತೆಗೆದುಕೊಳ್ಳೋಣ. ಅದಕ್ಕೇನು, ಗಂಭೀರವಾದ ವಿಚಾರವಾಗಿದೆ, ತೆಗೆದುಕೊಳ್ಳೋಣ.

ತುಮಕೂರು ಜಿಲ್ಲೆಯಲ್ಲಿ ಹಳದಿ ಪಡಿತರ ಕಾರ್ಡುಗಳ ವಿತರಣೆ

54(1225) ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಳದಿ ಕಾರ್ಡುಗಳ ವಿತರಣೆಯ ಬಗ್ಗೆ ಸಾರ್ವಜನಿಕರಿಂದ ಬಂದಿರುವ ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಅರ್ಹ ಫಲಾನುಭವಿಗಳಿಗೆ ಹಳದಿ ಪಡಿತರ ಕಾರ್ಡುಗಳ ವಿತರಣೆ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಇ) ತುಮಕೂರು ಜಿಲ್ಲೆಯಲ್ಲಿ ಸರ್ಕಾರ ನಿಗಧಿಪಡಿಸಿದ್ದ ದರಕ್ಕಿಂತ ಹೆಚ್ಚಿನ ದರದಲ್ಲಿ ಆಹಾರ ಪಡಿತರವನ್ನು ಮಾರಾಟ ಮಾಡುತ್ತಿರುವವರ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು? ವಿವರ ನೀಡುವುದು?

ಶ್ರೀ ಹೆಚ್.ಸಿ. ಮಹದೇವ ಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಹೌದು.

ಆ) ಅರ್ಹ ಫಲಾನುಭವಿಗಳು ಕೈಬಿಟ್ಟು ಹೋಗಿವೆ. ಅನರ್ಹ ಕುಟುಂಬಗಳ ಪಟ್ಟಿ ಸೇರ್ಪಟ್ಟಿವೆ ಎಂದು ಸರ್ಕಾರದ ಗಮನಕ್ಕೆ ಬಂದಿದ್ದರ ಕಾರಣ ವಿವಿಧ ಇಲಾಖೆಗಳ ಅಧಿಕಾರಿಗಳು / ನೌಕರರನ್ನು ಒಳಗೂಡಿಸಿ, ಜನಪ್ರತಿನಿಧಿಗಳು, ಸ್ತ್ರೀಶಕ್ತಿ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೂಡಿಸಿಕೊಂಡು ಮನೆಮನೆ ಪುನರ್ ಸಮೀಕ್ಷೆ ಕಾರ್ಯ ಮಾಡಲು ಸರ್ಕಾರ ಸಂಖ್ಯೆ: ಅನಾಸ 114 ಡಿಆರ್ಎ 04, ದಿನಾಂಕ 10–1–2005ರಂದು ಆದೇಶ ಹೊರಡಿಸಿದೆ. ಈ ಆದೇಶದಂತೆ ಪುನರ್ ಸಮೀಕ್ಷೆ ಕಾರ್ಯ ಪ್ರಾರಂಭವಾಗಿದ್ದು, ಸಮೀಕ್ಷೆಯ ಫಲಿತಾಂಶವನ್ನು ಗ್ರಾಮ ಸಭೆಗಳಲ್ಲಿ / ವಾರ್ಡ್ ಸಭೆಗಳಲ್ಲಿ ಇಟ್ಟು ಅನುಮೋದನೆ ಪಡೆಯುವ ನಿರೀಕ್ಷೆ ಏಪ್ರಿಲ್ 2005ರಲ್ಲಿ ಇರುತ್ತದೆ. ಬೇಡಿಕೆ ಎಷ್ಟು ಎಂದು ನಿರ್ಧರಿಸಿದ ಮೇಲೆ ಅರ್ಹರಿಗೆ ಹಳದಿ ಪಡಿತರ ಚೀಟಿ ವಿತರಿಸಲಾಗುವುದು.

ಇ) ತುಮಕೂರು ಜಿಲ್ಲೆಯ ತಾಲ್ಲೂಕುಗಳಲ್ಲಿ ನ್ಯಾಯಬೆಲೆ ಅಂಗಡಿಯವರು ಸರ್ಕಾರ ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ದರವನ್ನು ಪಡೆದಿರುವ ಅಂಶ ಗಮನಿಸಲಾಗಿದ್ದು, ಅಂತಹ ಪಡಿತರ ವಿತರಣೆಯ ಅಂಗಡಿಗಳ ವಿರುದ್ಧ ಕೈಗೊಂಡಿರುವ ಕ್ರಮದ ವಿವರಗಳು ಅನುಬಂಧ–1ರಲ್ಲಿ ಲಗತ್ತಿಸಿದೆ.

ಅನುಬಂಧ-1

ತಾಲ್ಲೂಕು		ನ್ಯಾಯಬೆಲೆ ಅಂಗಡಿ ಹೆಸರು	ದೂರಿನ ಮೇಲೆ ತೆಗೆದುಕೊಂಡ ಕ್ರಮ
ತುಮಕೂರು		ವೈ.ಆರ್.ಎಸ್.ನ್ಯಾ.ಬೆ.ಅಂ. ಚಿಕ್ಕೋನಹಳ್ಳಿ	ಕಾರಣ ಕೇಳಿ ನೋಟೀಸ್ ನೀಡಲಾಗಿರುತ್ತದೆ
ಶಿರಾ	1)	ಎಸ್.ಆರ್.ಎ.ಎಸ್. ನ್ಯಾಬೆ ಅಂ. ಶಿರಾ ಟೌನ್	ತಹಶೀಲ್ದಾರ್‌ರವರು ಕಾರಣ ಕೇಳಿ ನೋಟೀಸ್ ನೀಡಿರುತ್ತಾರೆ.
	2)	ರಾಮಲಿಂಗಾಪುರ ನ್ಯಾ.ಬೆ.ಅಂ. ಬುಕ್ಕಾಪಟ್ಟಣ ಹೋ.,	ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಿದೆ
	3)	ವೈ.ಆರ್.ಎಸ್. ಯಾದಲಡಕು, ಹುಲಿಕುಂಟೆ ಹೋ.,	ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಿದೆ
	4)	ವಿಎಸ್‌ಎಸ್‌ಎನ್, ಚಿಕ್ಕಹುಲಿಕುಂಟೆ	ಸದರಿ ನ್ಯಾಯಬೆಲೆ ಅಂಗಡಿ ಪ್ರಾಧೀಕರಣವನ್ನು ಅಮಾನತ್ತು ಗೊಳಿಸಲಾಗಿರುತ್ತದೆ.
	5)	ಕ್ರೆಸೆಂಟರ ಮಹಿಳಾ ವಿವಿದೋದ್ದೇಶ ಸಂಘ, ಶಿರಾ ಪಟ್ಟಣ	ತಹಶೀಲ್ದಾರ್‌ರವರು ಕಾರಣ ಕೇಳಿ ನೋಟೀಸ್ ನೀಡಿರುತ್ತಾರೆ.
	6)	ಶಾರದಾ ಏಜೆನ್ಸಿ, ಅಗ್ರಹಾರ ಹುಲಿಕುಂಟೆ ಹೋ.,	ತಹಶೀಲ್ದಾರ್‌ರವರು ಕಾರಣ ಕೇಳಿ ನೋಟೀಸ್ ನೀಡಿರುತ್ತಾರೆ.
ಕುಣಿಗಲ್	1)	ಎನ್.ಆರ್. ಕೃಷ್ಣಶೆಟ್ಟಿ ನ್ಯಾ.ಬೆ.ಅಂ. ನಾಗಸಂದ್ರ	ಸದರಿ ನ್ಯಾಯಬೆಲೆ ಅಂಗಡಿ ಪ್ರಾಧೀಕರಣವನ್ನು ಅಮಾನತ್ತು ಗೊಳಿಸಲಾಗಿರುತ್ತದೆ.
	2)	ಶ್ರೀ ಲಕ್ಷ್ಮೀದೇವಿ ಮಹಿಳಾ ಸಹಕಾರಿ ಸಂಘ, ಸೊಂದಲಗೆರೆ	ಸದರಿ ನ್ಯಾಯಬೆಲೆ ಅಂಗಡಿ ಪ್ರಾಧೀಕರಣವನ್ನು ಅಮಾನತ್ತು ಗೊಳಿಸಿ, ಕಾರಣ ಕೇಳಿ ನೋಟೀಸ್ ನೀಡಲಾಗಿದೆ.
	3)	ಹೆಚ್.ಟಿ. ಲಕ್ಷ್ಮಣಗೌಡ, ಹೊನ್ನೇನಹಳ್ಳಿ	ಸದರಿ ನ್ಯಾಯಬೆಲೆ ಅಂಗಡಿ ಪ್ರಾಧೀಕರಣವನ್ನು ಅಮಾನತ್ತು ಗೊಳಿಸಲಾಗಿರುತ್ತದೆ.
ಚಿಕ್ಕನಾಯಕನ ಹಳ್ಳಿ	1)	ಶ್ರೀ ಹನುಮಂತಯ್ಯ ನ್ಯಾ.ಬೆ.ಅಂ. ಹುಳೀಯಾರು ಹೋ.	ಸದರಿ ನ್ಯಾಯ ಬೆಲೆ ಅಂಗಡಿ ಹೊಸಹಳ್ಳಿಪಾಳ್ಯ, ಪ್ರಾಧೀಕರಣವನ್ನು ಅಮಾನತ್ತು ಗೊಳಿಸಲಾಗಿರುತದೆ.

1	2	3
	2) ಎಲ್.ಎನ್.ಸಿ.ಎಸ್. ಹಂದನಕೆರೆ ನ್ಯಾ.ಬೆ.ಅಂ. ಹಂಚನಕೆರೆ ಹೋ.,	ಸದರಿ ನ್ಯಾಯಬೆಲೆ ಅಂಗಡಿ ಪ್ರಾಧೀಕರಣವನ್ನು ಅಮಾನತ್ತು ಗೊಳಿಸಲಾಗಿರುತ್ತದೆ.
ಮಧುಗಿರಿ	1) ವಿ.ಎಸ್.ಎಸ್.ಎನ್.ನ್ಯಾ.ಬೆ.ಅಂ. ದೊಡ್ಡಮಾಲೂರು 2) ವಿ.ಎಸ್.ಎಸ್.ಎನ್.ನ್ಯಾ.ಬೆ.ಅಂ. ಸಿಂಗನಹಳ್ಳಿ 3) ವಿ.ಎಸ್.ಎಸ್.ಎನ್. ನ್ಯಾ.ಬೆ.ಅಂ. ಗುಟ್ಟೆ 4) ನ್ಯಾ.ಬೆ.ಅಂ. ಎಮ್ಮೆಡ ಗೊಂಡನಹಳ್ಳಿ 5) ನ್ಯಾ.ಬೆ.ಅಂ. ಮೈದನಹಳ್ಳಿ 6) ನ್ಯಾ.ಬೆ.ಅಂ. ಯಾಕಾರ್ಲಹಳ್ಳಿ 7) ಎಫ್.ಎಸ್.ಸಿ.ಎಸ್. ನ್ಯಾ.ಬೆ.ಅಂ ಗುಂಡಗಲ್ಲು 8) ರಾಮಯ್ಯಶೆಟ್ಟಿ ನ್ಯಾ.ಬೆ.ಅಂ. ಕೊಡಿಗೇನಹಳ್ಳಿ 9) ಬಾಲರಾಜ್ ಗುಪ್ತ ನ್ಯಾ.ಬೆ.ಅಂ ಕೊಡಿಗೇನಹಳ್ಳಿ 10) ಮುಕ್ತಿಯಾರ್ ನ್ಯಾ.ಬೆ.ಅಂ. ಕೊಡಿಗೇನಹಳ್ಳಿ 11) ವೆಂಕಟೇಶ್ ನ್ಯಾ.ಬೆ.ಅಂ. ಕೊಡಿಗೇನಹಳ್ಳಿ 12) ನ್ಯಾ.ಬೆ.ಅಂ. ಸೋದೇನಹಳ್ಳಿ 13) ಕ್ರಿಯಾಶೀಲ ಮಹಿಳಾ ಸಂಘ ಪೋಲೇನಹಳ್ಳಿ 14) ನಯಾಜ್ ನ್ಯಾ.ಬೆ.ಅಂ. ಮಧುಗಿರಿ ಟೌನ್	ಸದರಿ ನ್ಯಾಯಬೆಲೆ ಅಂಗಡಿಗಳಿಗೆ ಹೆಚ್ಚಿನ ದರ ಪಡೆದುದುಕ್ಕಾಗಿ ಕಾರಣ ಕೇಳಿ ನೋಟೀಸ್ ನೀಡಿ ಅವರುಗಳಿಂದ ಸಮಜಾಯಿಷಿಯನ್ನು ಸಹ ತಹಶೀಲ್ದಾರ್‌ರವರು ಪಡೆದಿರುತ್ತಾರೆ. ಹಾಗೂ ಸದರಿ ವರದಿಗಳನ್ನು ಜಿಲ್ಲಾಧಿಕಾರಿಗಳಿಗೆ ವರದಿ ಮಾಡಲು ಸೂಚಿಸಲಾಗಿದೆ.

1	2	3
	15) ವಿ.ಎಸ್.ಎಸ್.ಎನ್. ನ್ಯಾ.ಬೆ.ಅಂ. ನೇರಳೆಕೆರೆ	
	16) ವಿ.ಎಸ್.ಎಸ್.ಎನ್. ನ್ಯಾ.ಬೆ.ಅಂ. ಕಾಟಗೊಂಡನಹಳ್ಳಿ	
	17) ನ್ಯಾ.ಬೆ.ಅಂ. ಶೆಟ್ಟಿಹಳ್ಳಿ	
	18) ನ್ಯಾ.ಬೆ.ಅಂ. ಕೋಡಗದಾಲ	
	19) ನ್ಯಾ.ಬೆ.ಅಂ. ಬಟ್ಟಗೆರೆ	
	20) ನ್ಯಾ.ಬೆ.ಅಂ. ನಿಟ್ರಹಳ್ಳಿ	
	21) ನ್ಯಾ.ಬೆ.ಅಂ. ಬ್ಯಾಲ್ಯ	
	22) ವಿ.ಎಸ್.ಎಸ್.ಎನ್. ನ್ಯಾ.ಬೆ.ಅಂ. ಬ್ಯಾಲ್ಯ	
	23) ನ್ಯಾ.ಬೆ.ಅಂ. ದೊಡ್ಡಹೊಸಹಳ್ಳಿ	
	24) ವಿ.ಎಸ್.ಎಸ್.ಎನ್. ನ್ಯಾ.ಬೆ.ಅಂ. ಪುರವಾರ	
	25) ಎಫ್.ಎಸ್.ಸಿ.ಎಸ್.ನ್ಯಾ.ಬೆ.ಅಂ. ಬಡಕನಹಳ್ಳಿ	
	26) ನ್ಯಾ.ಬೆ.ಅಂ. ಗೊಂದಿಹಳ್ಳಿ	
	27) ನ್ಯಾ.ಬೆ.ಅಂ. ಗೊಂದಿಹಳ್ಳಿ ತಾಂಡ	
	28) ನ್ಯಾ.ಬೆ.ಅಂ. ಗಂಜಲಗೊಂಡಿ	
	29) ಎಫ್.ಎಸ್.ಸಿ.ಎಸ್. ಗಂಜನಗೊಂಡಿ	
	30) ನ್ಯಾ.ಬೆ.ಅಂ. ಸಂಬೋನಹಳ್ಳಿ	
	31) ವಿ.ಎಸ್.ಎಸ್.ಎನ್. ನ್ಯಾ.ಬೆ.ಅಂ. ತುರುವೇಕೆರೆ	
	32) ಎಫ್/ಎಸ್.ಸಿ.ಎಸ್.ನ್ಯಾ.ಬೆ.ಅಂ. ಭಕ್ತರಹಳ್ಳಿ	
	33) ನ್ಯಾ.ಬೆ.ಅಂ. ಜಡೆಗೊಂಡನಹಳ್ಳಿ	
	34) ನ್ಯಾ.ಬೆ.ಅಂ. ವಡೇರಹಳ್ಳಿ	
	35) ನ್ಯಾ.ಬೆ.ಅಂ. ಐಡಿಹಳ್ಳಿ (ಲಕ್ಷ್ಮೀನರಸಪ್ಪ)	
	36) ನ್ಯಾ.ಬೆ.ಅಂ. ಐಡಿಹಳ್ಳಿ (ವಸಂತಮ್ಮ)	

1	2	3
	37) ಶಾನ್‌ವಾನ್ ನ್ಯಾ.ಬೆ.ಅಂ. ಬುಡವನಹಳ್ಳೀ	
	38)- ವಿ.ಎಸ್.ಎಸ್.ಎನ್.ನ್ಯಾ.ಬೆ.ಅಂ. ದಬ್ಬೇಗಟ್ಟ	
	39) ವಿ.ಎಸ್.ಎಸ್.ಎನ್.ನ್ಯಾ.ಬೆ.ಅಂ. ಬೆಲ್ಲದಮಡಗು	
	40) ಎಫ್‌ಪಿಡಿ ಹೊನ್ನಾಪುರ.	

ಅಧ್ಯಕ್ಷರು : ಈ ಪ್ರಶ್ನೆ ಕೂಡ ಪಡಿತರ ಚೀಟಿ ವಿತರಣೆಗೆ ಸಂಬಂಧಿಸಿರುವುದರಿಂದ ಇದನ್ನು ಕೂಡ ಸೋಮವಾರ ಅರ್ಧ ಗಂಟೆ ಕಾಲಾವಧಿ ಚರ್ಚೆಯಲ್ಲಿ ತೆಗೆದುಕೊಳ್ಳೋಣ.

ಶ್ರೀ ಕ್ಯಾತ್‌ಸಂದ್ರ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಮೊದಲನೆಯ ಭಾಗ ಆ ಪ್ರಶ್ನೆಗೆ ಸಂಬಂಧಪಟ್ಟಿರುವಂಥದ್ದು ಎಂದು ನಾನು ಒಪ್ಪುತ್ತೇನೆ. 2ನೇ ಮತ್ತು ಮೂರನೇ ಭಾಗದ ಪ್ರಶ್ನೆಯಲ್ಲಿ ನಮ್ಮ ತುಮಕೂರು ಜಿಲ್ಲೆಗೆ ಮಾತ್ರ ಸೀಮಿತವಾಗಿರತಕ್ಕಂಥ ಕೆಲವು ವಿಚಾರಗಳಿವೆ. ಅದರಲ್ಲಿ ಬಹಳ ತಪ್ಪು ಮಾಹಿತಿ ಕೊಟ್ಟಿರತಕ್ಕಂಥದ್ದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಆದ್ದರಿಂದ ತಾವು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ಇದನ್ನೂ ಸಹ ಪ್ರಸ್ತಾಪ ಮಾಡಬಹುದೆಂದು ತಾವು ತಿಳಿಸುತ್ತಿದ್ದೀರಿ. ಆದರೆ ಈ ಒಂದು ತಪ್ಪು ಮಾಹಿತಿಯನ್ನು ಏನು ಕೊಟ್ಟಿದ್ದಾರೆ, ಅದನ್ನೂ ಕೂಡ ಸರಿಪಡಿಸಿಕೊಂಡು ಆ ಒಂದು ಚರ್ಚೆ ಸಂದರ್ಭದಲ್ಲಿ ಉತ್ತರ ಕೊಡುವುದಕ್ಕೆ ತಾವು ಸೂಚನೆ ಕೊಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಆಗಬಹುದು. ತಾವು ಹೇಳಿದ ರೀತಿಯಲ್ಲಿ ಅರ್ಧ ಗಂಟೆ ಕಾಲಾವಧಿ ಚರ್ಚೆಯಲ್ಲಿ ಅದಕ್ಕೂ ಸೇರಿಸಿ ಉತ್ತರ ಕೊಡುತ್ತೇನೆ.

ಅಧ್ಯಕ್ಷರು : ಆಯಿತು.

ಕಾಫಿ ಬೆಳೆಗಾರರಿಗೆ ಸಾಲದ ಮೇಲಿನ ಬಡ್ಡಿ ಮನ್ನಾ

55(51) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾಫಿ ಬೆಳೆಗಾರರ ಸಹಕಾರ ಸಂಘದಲ್ಲಿನ ಸಾಲದ ಮೇಲಿರುವ ಬಡ್ಡಿಯನ್ನು ಸರ್ಕಾರ ಮನ್ನಾ ಮಾಡಲು ರೂ. 39.00 ಕೋಟಿ ಮೀಸಲಿಟ್ಟಿದ್ದರೂ ಅದನ್ನು ಇನ್ನೂ ಕಾರ್ಯಗತಗೊಳಿಸದಿರಲು ಕಾರಣವೇನು;

ಆ) ಬಡ್ಡಿ ಮನ್ನಾ ಮಾಡುವ ಯೋಜನೆಯನ್ನು ಸರ್ಕಾರ ಕೈಬಿಟ್ಟಿದ್ದೇಯೆ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಹಾಸನ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳ ಕಾಫಿ ಬೆಳೆಗಾರರು ಮಳೆ ಆಭಾವ, ಬೆಳೆ ಹಾನಿ, ಬೆಲೆ ಕುಸಿತ ಮತ್ತು ಬರದ ಹಿನ್ನೆಲೆಯಲ್ಲಿ ಸಂಕಷ್ಟಕ್ಕೀಡಾಗಿದ್ದು ಅವರ ಸಮಸ್ಯೆಯ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ನಂತರ ಕಾಫಿ ಬೆಳೆಗಳಿಗೆ ಹಾಸನ, ಚಿಕ್ಕಮಗಳೂರು ಮತ್ತು ಕೊಡಗು ಡಿ.ಸಿ.ಸಿ ಬ್ಯಾಂಕುಗಳು ನೀಡಿರುವ ದಿನಾಂಕ 30-6-2003ಕ್ಕೆ ಬಾಕಿ ಇರುವ ಸುಸ್ತಿ, ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳ ಅಸಲನ್ನು (ರೂ. 121.01 ಕೋಟಿ) ದಿನಾಂಕ 30-6-2004ರ ಒಳಗಾಗಿ ಮರುಪಾವತಿಸಿದಲ್ಲಿ ಸದರಿ ಸಾಲಗಳ ಮೇಲಿನ ಪೂರ್ಣ ಬಡ್ಡಿಯನ್ನು (ರೂ. 38.26 ಕೋಟಿಗಳು) ಮನ್ನಾ ಮಾಡಲು ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿದ್ದು, ಅದರಂತೆ ಫೆಬ್ರವರಿ 2004ರಲ್ಲಿ ಮಂಡಿಸಿದ ಆಯವ್ಯಯದ ಭಾಷಣದಲ್ಲಿ ಘೋಷಣೆ ಮಾಡಲಾಗಿತ್ತು. ದಿನಾಂಕ 19-7-2004ರಂದು ಮಂಡಿಸಿದ ಆಯವ್ಯಯದಲ್ಲಿ ಕಾಫಿ ಪ್ಯಾಕೇಜ್ ಸಲುವಾಗಿ ರೂ. 38.61 ಲಕ್ಷ ಅವಕಾಶವನ್ನು ಒದಗಿಸಲಾಗಿದೆ. ಕಡತವನ್ನು ಆರ್ಥಿಕ ಇಲಾಖೆಗೆ ಸೂಕ್ತ ಅನುಮೋದನೆಗಾಗಿ ಕಳುಹಿಸಿಕೊಡಲಾಗಿದೆ.

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಹಿಂದಿನ ಸರ್ಕಾರದ ಅಂದಿನ ಮುಖ್ಯಮಂತ್ರಿಯವರು ಕಾಫಿ ಬೆಳೆಗಾರರ ಸಂಕಷ್ಟವನ್ನು ಪರಿಗಣಿಸಿ ಸುಮಾರು 39 ಕೋಟಿ ರೂಪಾಯಿಗಳಷ್ಟು ಬಡ್ಡಿ ಹಣವನ್ನು ಮನ್ನಾ ಮಾಡುತ್ತೇವೆನ್ನುವ ಆಶ್ವಾಸನೆಯು ಬಜೆಟ್‌ನಲ್ಲಿ ಬಂದು, ಎರಡೂ ಸದನಗಳಲ್ಲೂ ಕೂಡ ಅದು ಪ್ರಸ್ತಾಪವಾಗಿ, ಅದಕ್ಕೆ ಸದನದ ಒಪ್ಪಿಗೆ ಆಗಿ ಒಂದು ವರ್ಷವಾಧರೂ ಇಲ್ಲಿಯವರೆಗೆ ಈ ಯೋಜನೆ ಜಾರಿಯಾಗಿಲ್ಲ. ಇಷ್ಟು ಡಿಲೇ ಆಗುವುದಕ್ಕೆ ಕಾರಣವೇನೆಂದು ನಾನು ಬಹಳ ಸ್ಪಷ್ಟವಾಗಿ ಕೇಳಿದ್ದೇನೆ. ಇದಕ್ಕೆ ಮಾನ್ಯ ಸಚಿವರಿಂದ ಸ್ಪಷ್ಟ ಉತ್ತರ ದೊರಕಿಲ್ಲ. ಇವತ್ತಿನ ದಿವಸ ಕಾಫಿ ಬೆಳೆಗಾರರೆಲ್ಲರೂ ಸಂಕಷ್ಟದಲ್ಲಿದ್ದಾರೆ. ನಿನ್ನೆಯ ದಿವಸ ಕಾಫಿ ಬೆಳೆಯುವ ಜನಪ್ರತಿನಿಧಿಗಳು ಮತ್ತು ಕಾಫಿ ಹೋರಾಟ ಸಮಿತಿಯವರು ಮಾನ್ಯ ಉಪ ಮುಖ್ಯಮಂತ್ರಿಯವರ ಜೊತೆಯಲ್ಲಿ ಈ ವಿಚಾರವಾಗಿ ಬಹಳ ಗಂಭೀರವಾಗಿ ಚರ್ಚೆ ಮಾಡಿದ್ದಾರೆ. ಅವರು ಕೂಡ ಈ ಬಗ್ಗೆ ಸ್ಪಂದನ ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಆದ್ದರಿಂದ, ಈ ಯೋಜನೆಯನ್ನು ಯಾವಾಗ ಜಾರಿ ಮಾಡುತ್ತೀರಿ ಎನ್ನುವ ಬಗ್ಗೆ ಒಂದು time bound ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ತಮಗೆ ಮನವಿ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಕಾಫಿ ಬೆಳೆಗಾರರು ಸಹ ಬಹಳ ಕಷ್ಟದಲ್ಲಿದ್ದಾರೆ. ಹಾಗಾಗಿ 30-06-2003ರ ತನಕ ಏನು 121.01 ಕೋಟಿ ರೂಪಾಯಿ Principle overdue ಇತ್ತು ಅದನ್ನು ಮರುಪಾವತಿ ಮಾಡಿದರೆ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡುತ್ತೇವೆಂದು

ಫೆಬ್ರವರಿ 2004ನೇ ಇಸವಿಯ ಮುಂಗಡಪತ್ರದಲ್ಲಿ ಸರ್ಕಾರದಿಂದ ಒಂದು ಭರವಸೆ ಕೊಟ್ಟಿರುವುದು ನಿಜ. ಈಗ ಇದಕ್ಕೆ ಬಜೆಟ್‌ನಲ್ಲಿ ಹಣವನ್ನು provide ಮಾಡಿದ್ದಾರೆ. ಆದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ಇದು ಜಾರಿಗೆ ಬರಬೇಕಾಗಿದೆ. ಜಾರಿಗೆ ಬರಬೇಕಾಗಿದೆಯೆಂದರೆ, ಈಗಾಗಲೇ ಯಾವುದು over due ಇದೆ ಆ principle ಅನ್ನು over due ರೈತರು ಕೊಟ್ಟರೆ ಬಡ್ಡಿ ಮನ್ನಾ ಮಾಡಬೇಕಾಗಿತ್ತು. ಈಗಾಗಲೇ ಈ ಕಡತವನ್ನು ಹಣಕಾಸಿನ ಇಲಾಖೆಗೆ ಕಳುಹಿಸಿದ್ದೇವೆ. ಮಾನ್ಯ ಉಪ ಮುಖ್ಯಮಂತ್ರಿಗಳು ಇದರ ಬಗ್ಗೆ ಸ್ಪಂದಿಸಿದ್ದಾರೆಂದು ತಾವು ಈಗಾಗಲೇ ಹೇಳಿದಿರಿ. ಹಾಗಾಗಿ ನಾವೂ ಕೂಡ ಅವರ ಜೊತೆ ಚರ್ಚೆ ಮಾಡಿ ಇದಕ್ಕೆ ಆದಷ್ಟು ಬೇಗನೆ ಪರಿಹಾರ ಕಂಡುಹಿಡಿಯಲಿಕ್ಕೆ ಪ್ರಯತ್ನ ಮಾಡುತ್ತೇವೆ ಮತ್ತು ಅವರು ಹೇಳಿದ ಹಾಗೆ ಕಾಫಿ ಬೆಳೆಗಾರರು ನಿಜವಾಗಿ ಕಷ್ಟದಲ್ಲಿದ್ದಾರೆ. ಇದರ ಬಗ್ಗೆ ಗಮನ ಹರಿಸಲು ಸರ್ಕಾರದಿಂದ ಸ್ವಲ್ಪ ದಿವಸ ವಿಳಂಬವಾಗಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾಗಾಗಿ ತಕ್ಷಣ ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ನಿನ್ನೆ ಈ ಸಂಬಂಧ ನಾವು ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರಾಗಿರತಕ್ಕಂಥ ಮಾನ್ಯ ಸಿದ್ಧರಾಮಯ್ಯನವರನ್ನು ಭೇಟಿ ಮಾಡಿದಾಗ ಅವರು ಏನು ಹೇಳಿದರೆಂದರೆ, ಹಿಂದಿನ ಆಯವ್ಯಯದಲ್ಲಿ ಹಿಂದಿನ ಸರ್ಕಾರ...

ಅಧ್ಯಕ್ಷರು : ಶ್ರೀ ರವಿಯವರೇ, ಅವರ ಪ್ರಶ್ನೆಗೆ ನೀವು ಎದ್ದುನಿಂತುಕೊಂಡು ಉಪಪ್ರಶ್ನೆ ಕೇಳಿದರೆ ಹೇಗೆ?

ಶ್ರೀ ಸಿ.ಟಿ. ರವಿ : ಅವರ ಅನುಮತಿ ತೆಗೆದುಕೊಂಡೇ ಉಪ ಪ್ರಶ್ನೆ ಕೇಳುತ್ತಿದ್ದೇನೆ.

ಅಧ್ಯಕ್ಷರು : ಯಾರ ಅನುಮತಿಯನ್ನು ಕೇಳಿದಿರಿ?

ಶ್ರೀ ಸಿ.ಟಿ. ರವಿ : ಶ್ರೀ ಭೋಪಯ್ಯನವರ ಅನುಮತಿಯನ್ನು.

ಅಧ್ಯಕ್ಷರು : ಅವರ ಅನುಮತಿ ಅಲ್ಲ, ನನ್ನ ಅನುಮತಿಯನ್ನು ಕೇಳಬೇಕು.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ತಾವೇ ನನಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು. ಅವರನ್ನು ಯಿಲ್ಡ್ ಆಗಿ ಎಂದು ಕೇಳಿಕೊಂಡೇ ಇಲ್ಲಿ ನಾನು ಉಪಪ್ರಶ್ನೆ ಕೇಳುತ್ತಿದ್ದೇನೆ. ನೀವೇ ಅನುಮತಿ ಕೊಡಬೇಕು.

Mr. Speaker : No, no, no, ಅನುಮತಿ ಕೇಳದೆಯೇ ಸುಮ್ಮನೆ ಎಲ್ಲಾ ಸಮಯದಲ್ಲಿ ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಸಿ.ಟಿ. ರವಿ : ಮಾನ್ಯ ಸಭಾಧ್ಯಕ್ಷರೆ, ನಾಲ್ಕು ಜಿಲ್ಲೆಯಲ್ಲಿ ಅಲ್ಲಿಯ ಕಾಫಿ ಬೆಳೆಗಾರರ ಜೀವನ್ಮರಣದ ಪ್ರಶ್ನೆಯಿದೆ ಮತ್ತು ಸಹಕಾರಿ ವ್ಯವಸ್ಥೆ ಉಳಿದುಕೊಳ್ಳಬೇಕಾಗಿದೆ.

ಅಧ್ಯಕ್ಷರು : ಒಂದ್ನಿಮಿಷದೊಳಗೆ ಪ್ರಶ್ನೆ ಕೇಳಿ ಮುಗಿಸಬೇಕು.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ನಿನ್ನೆ ನಾವು ಹಣಕಾಸು ಸಚಿವರನ್ನು ಭೇಟಿ ಮಾಡಿದಾಗ ಅವರು ಏನು ಹೇಳಿದರೆಂದರೆ, ಹಿಂದಿನ ಆಯವ್ಯಯದಲ್ಲಿ ಹಿಂದಿನ ಸರ್ಕಾರ ಮಂಡಿಸಿದಂಥ ಮುಂಗಡಪತ್ರಕ್ಕೂ ಈಗಿನ ಸರ್ಕಾರಕ್ಕೂ ಸಂಬಂಧವಿಲ್ಲ. ಹಿಂದೆ ಮಂಡಿಸಿರುವುದು ಹಿಂದೆ ಆಗಿ ಹೋಯಿತು, ಈಗಿನದು ಮಾತ್ರ ಈಗಿನ ಲೆಕ್ಕಕ್ಕೆ ಎಂದು ನಮಗೆ ಬಹಳ ಸ್ಪಷ್ಟವಾಗಿ ಹೇಳಿದರು. ಆದರೆ ಸಹಕಾರ ಸಚಿವರು ಉತ್ತರ ಕೊಟ್ಟಿರುವುದರೊಳಗಡೆ–ನಾವು ಈಗ ಹಣಕಾಸು ಇಲಾಖೆಯ ಅನುಮೋದನೆಗೆ ಕಳುಹಿಸಿದ್ದೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಯಾವುದು ಸತ್ಯ ಎನ್ನುವುದು ಇಲ್ಲಿ ಸಾಬೀತಾಗಬೇಕು. ಹಣಕಾಸು ಇಲಾಖೆಯ ಅನುಮೋದನೆಗೆ ಕಳುಹಿಸಿದ್ದೇ ಆದರೆ ಸಹಕಾರ ಬ್ಯಾಂಕುಗಳಿಗೆ ಸುತ್ತೋಲೆ ಹೋಗಬೇಕು, ಅಸಲು ಕಟ್ಟಿದವರಿಗೆ ಬಡ್ಡಿ ಮನ್ನಾ ಆಗಬೇಕು. ಅದಿಲ್ಲವೆಂದರೆ, ಅದು ಉಂಟೋ ಅಥವಾ ಇಲ್ಲವೋ? ಮುಂಗಡ ಪತ್ರದಲ್ಲಿ 39 ಕೋಟಿ ರೂಪಾಯಿ ಬಡ್ಡಿ ರಿಯಾಯಿತಿ ಕೊಟ್ಟಿದ್ದು ಈ ಸರ್ಕಾರಕ್ಕೆ ಬದ್ಧತೆ ಇದೆಯೋ ಇಲ್ಲವೋ ಎನ್ನುವುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಹಣಕಾಸಿನ ಸಚಿವರು ಇವರಿಗೇನು ಹೇಳಿದ್ದಾರೆ ಎನ್ನುವ ವಿಚಾರದ ಬಗ್ಗೆ ನಾನು ಮಾತನಾಡುವುದಿಲ್ಲ. ಆದರೆ ಫೆಬ್ರವರಿ 2004ರಲ್ಲಿ ಮುಂಗಡ ಪತ್ರ ಮಂಡನೆ ಮಾಡಿದಾಗ ಬಜೆಟ್‌ನಲ್ಲಿ ಈ ಸ್ಕೀಂ ಬಗ್ಗೆ ಹಾಸನ, ಕೊಡಗು, ಚಿಕ್ಕಮಗಳೂರು ಜಿಲ್ಲೆಯ ಕಾಫಿ ಬೆಳೆಗಾರರು 121.01 ಕೋಟಿ ರೂಪಾಯಿ Principle ಕೊಡಬೇಕಾಗಿತ್ತು. ಅದಕ್ಕೆ ಬಡ್ಡಿ ಮನ್ನಾ ಮಾಡುತ್ತೇವೆಂದು ಬಜೆಟ್‌ನಲ್ಲಿ provision ಮಾಡಿದ್ದರು. ಅನಂತರ ಉಪ ಮುಖ್ಯಮಂತ್ರಿಗಳು ಸಹ ಬಜೆಟ್ ಮಂಡನೆ ಮಾಡಿದಾಗ ಈ ಸ್ಕೀಂಗೆ ಕೂಡ ಹಣ ಇಟ್ಟಿದ್ದಾರೆ. ಹಾಗಾಗಿ ಈ ಸ್ಕೀಂ ಅನ್ನು ಅವರೂ ಕೂಡ ಒಪ್ಪಿಕೊಂಡ ಹಾಗೆ ಆಗುತ್ತದೆ. ನಾನು ಈಗಾಗಲೇ ಹೇಳಿದ ಹಾಗೆ ಹಣಕಾಸಿನ ಸಚಿವರ ಜೊತೆ ಮಾತನಾಡಿ ಈ ಸಮಸ್ಯೆಯ ಗಾಂಭೀರ್ಯವನ್ನು ಅವರ ಗಮನಕ್ಕೆ ತಂದು ರೈತರಿಗೆ ಏನು ಸಹಾಯ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ನೋಡಿ ಖಂಡಿತವಾಗಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ತಮ್ಮ ಮೂಲಕ ಸದನಕ್ಕೆ, ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತಿದ್ದೇನೆ.

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಒಂದು ವರ್ಷ ಕಳೆದು ಹೋಗಿದೆ. ಅವತ್ತು 39 ಕೋಟಿ ರೂಪಾಯಿ ಇದ್ದದ್ದು ಇವತ್ತು ಅದು 60 ಕೋಟಿ ರೂಪಾಯಿ ಆಗುತ್ತದೆ. ಈ ರೀತಿ ನೀವು ಯಾವುದೇ ಯೋಜನೆ ತಂದರೆ ಇದರಿಂದ ಬೆಳೆಗಾರರಿಗೆ ಏನು ಲಾಭ? ಇವತ್ತು ಸರ್ಕಾರ ಬಡ್ಡಿ ಮನ್ನಾ ಮಾಡುತ್ತದೆ, ಬಡ್ಡಿ ಮನ್ನಾ ಮಾಡುತ್ತದೆಂದು ಯಾರೂ ಬಡ್ಡಿ ಹಣ ಕಟ್ಟಿಲ್ಲ. ಅವರ ಬಡ್ಡಿ ಬೆಳೆಯುತ್ತಲೇ ಇದೆ. ನನ್ನ ಕಳಕಳಿ ಏನೆಂದರೆ, ಸರ್ಕಾರ ಆ ಸ್ಕೀಂನ್ನು ಜಾರಿಗೆ ತರುವುದಾದರೆ ತಕ್ಷಣ ತನ್ನಿ. ಇಲ್ಲದಿದ್ದರೆ ಇಲ್ಲ ಎಂದು

ಸ್ಪಷ್ಟವಾಗಿ ಹೇಳಿ. ಇವತ್ತು ಅದನ್ನು ನಂಬಿಕೊಂಡು ಹಣ ಕಟ್ಟದೆ ಬ್ಯಾಂಕ್‌ನಲ್ಲಿ ಬಡ್ಡಿ ಹಣ ಬೆಳೆಯುತ್ತಿದೆ. ಅದಕ್ಕಾಗಿ ನಾನು time bound ಹಾಕಿ ಎಂದು ಪುನ: ವಿನಂತಿ ಮಾಡುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ, ಅದು ಸರಿಯಾಗಿದೆ. ಏಕೆಂದರೆ ಸರ್ಕಾರ ಯಾವುದೋ ವಿಚಾರದಲ್ಲಿ ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿದಾಗ ಅದನ್ನು ಮಾಡುವುದಿದ್ದರೆ time bound ಹಾಕಿ ಮಾಡಬೇಕು. ಇಲ್ಲದಿದ್ದರೆ ರೈತರಿಗೂ ಕಷ್ಟವಾಗುತ್ತದೆ ಮತ್ತು ಸಹಕಾರಿ ಸಂಘಕ್ಕೂ ಕಷ್ಟವಾಗುತ್ತದೆ. ಇವತ್ತು ರಾಜ್ಯದ ಹಲವಾರು ಸಹಕಾರ ಸಂಘಗಳು ಅನಾರೋಗ್ಯವಾಗಿರುವುದಕ್ಕೆ ಅದೂ ಕೂಡ ಒಂದು ಕಾರಣವೆಂದು ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ಈ ಸ್ಕೀಂನಲ್ಲಿ ಸಹ ಇದಕ್ಕೆ ಮನ್ನಣೆ ಸಿಗಲಿಕ್ಕೆ ಸ್ವಲ್ಪ ತಡವಾಗಿದೆ ಎನ್ನುವುದನ್ನೂ ಸಹ ನಾನು ಒಪ್ಪಿಕೊಂಡಿದ್ದೇನೆ. ಹಾಗಾಗಿ ತಮ್ಮೆಲ್ಲರ ಸಹಕಾರದಿಂದ ಆದಷ್ಟು ಬೇಗನೆ ಇದಕ್ಕೆ....

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಸಭಾಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ ಒಂದು ಉಪ ಪ್ರಶ್ನೆ ಕೇಳುತ್ತೇನೆ.

ಗೊಂದಲ

ಅಧ್ಯಕ್ಷರು : ದಯಮಾಡಿ ಸಾಕು. ಈಗಾಗಲೇ ಒಂದು ಗಂಟೆಗಿಂತ ಹೆಚ್ಚು ಸಮಯವಾಗಿದೆ. ಈಗ ಮುಂದಿನ ಪ್ರಶ್ನೆ ತೆಗೆದುಕೊಳ್ಳುತ್ತೇನೆ. ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್‌ರವರು ಪ್ರಶ್ನೆ ಕೇಳಿ.

ಗೊಂದಲ

ಅಧ್ಯಕ್ಷರು : ಶ್ರೀ ಬಸವರಾಜುರವರೇ, ದಯಮಾಡಿ ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳಬೇಕು. ಆ ತರಹ ಆಗುವುದಿಲ್ಲ.

ಗೊಂದಲ

ಅಧ್ಯಕ್ಷರು : ಈಗ ನಿಯಮಾವಳಿಗಳನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಒಂದೊಂದು ಪ್ರಶ್ನೆಗೆ ನಾನು ಕಾಲು ಗಂಟೆ ಸಮಯ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ..... ಇರಲಿ. ಎಲ್ಲಾ ಸಮಸ್ಯೆ ಇದ್ದದ್ದೇ. ಇದೊಂದನ್ನೇ ನೀವು ಕೇಳಿಬಿಟ್ಟರೆ ಆಗಿ ಹೋಗುತ್ತದೆಯೇ? ನೀವು ಅವರ ಹತ್ತಿರ ಹೋಗಿ ಮಾತನಾಡಿ ಸಮಸ್ಯೆಗಳನ್ನು ನಿವಾರಣೆ ಮಾಡಿಕೊಳ್ಳಿ.

ಬೆಳಗಾವಿ ಜಿಲ್ಲೆಯಲ್ಲಿ ಪಡಿತರ ಜಿಲ್ಲೆ ಒದಗಿಸುವ ಬಗ್ಗೆ

56(205) ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ನೀಡುವ ಆಹಾರ ಧಾನ್ಯ ಚೆನ್ನಾಗಿದೆಯೇ ಎಂಬ ಬಗ್ಗೆ ಸರ್ಕಾರ ಪರಿಶೀಲಿಸಿದೆಯೇ;

ಆ) ರಾಜ್ಯದಲ್ಲಿ ಎಷ್ಟು ಕುಟುಂಬಗಳಿಗೆ ಆಹಾರ ಧಾನ್ಯ ಒದಗಿಸಲಾಗುತ್ತಿದೆ?

ಇ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಕುಟುಂಬಗಳಿಗೆ ಇನ್ನು ಪಡಿತರ ಚೀಟಿ ಪೂರೈಸಬೇಕಾಗಿದೆ;

ಈ) ಬಾಕಿ ಉಳಿದ ಕುಟುಂಬಗಳಿಗೆ ಯಾವಾಗ ಪಡಿತರ ಚೀಟಿ ಒದಗಿಸಲಾಗುವುದು;

ಉ) ರಾಜ್ಯದಲ್ಲಿ ಆಹಾರ ಧಾನ್ಯ ಪಡಿತರ ಚೀಟಿಗಳಿಗನುಗುಣವಾಗಿ ಸಮರ್ಪಕವಾಗಿ ಒದಗಿಸಲಾಗಿದೆಯೇ;

ಊ) ಸಮರ್ಪಕವಾಗಿ ಒದಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಹೆಚ್.ಸಿ. ಮಹದೇವ ಪ್ರಸಾದ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಅ) ಭಾರತ ಆಹಾರ ನಿಗಮದ ಪ್ರಾದೇಶಿಕ ಶಾಖೆಗಳಿಂದ ರಾಜ್ಯದಲ್ಲಿ ಪಡಿತರ ವ್ಯವಸ್ಥೆಗೆ ಆಹಾರ ಧಾನ್ಯ ಸರಬರಾಜು ಮಾಡಲಾಗುತ್ತಿದೆ. ಎತ್ತುವಳಿ ಮಾಡುವಾಗಲೇ ಉತ್ತರ ಗುಣಮಟ್ಟದ ಆಹಾರ ಧಾನ್ಯವಿದ್ದರೆ ಮಾತ್ರ ಎತ್ತುವಳಿ ಮಾಡಲು ನಿರ್ದೇಶಿಸಲಾಗಿದೆ ಹಾಗೂ ಈ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ.

ಆ) ರಾಜ್ಯದಲ್ಲಿ 2004ರ ಡಿಸೆಂಬರ್ ಅಂತ್ಯಕ್ಕೆ ಈ ಕೆಳಕಂಡ ಕುಟುಂಬಗಳಿಗೆ ಆಹಾರ ಧಾನ್ಯ ಒದಗಿಸಲಾಗುತ್ತಿದೆ. ಎಪಿಎಲ್ ಪಡಿತರ ಚೀಟಿಗಳಿಗೆ ಬೇಡಿಕೆ ಇಲ್ಲದಿರುವುದರಿಂದ ಸಪ್ಟೆಂಬರ್ ತಿಂಗಳಿನಿಂದ ಆಹಾರ ಧಾನ್ಯಗಳನ್ನು ನಿಲ್ಲಿಸಲಾಗಿದೆ.

ಎಎವೈ	ಬಿಪಿಎಲ್	ಎಪಿಎಲ್	ಒಟ್ಟು
719700	6338990	4270634	11329324

ಇ) 57325 ಅಂತ್ಯೋದಯ, 526316 ಬಿ.ಪಿ.ಎಲ್. ಹಾಗೂ 31118 ಎ.ಪಿ.ಎಲ್ ಪಡಿತರ ಚೀಟಿಗಳನ್ನು ಬೆಳಗಾವಿ ಜಿಲ್ಲೆಯಲ್ಲಿ ನೀಡಲಾಗಿದೆ. ಕೈಬಿಟ್ಟುಹೋದ ಅರ್ಹ ಕುಟುಂಬಗಳ ಸೇರ್ಪಡೆಗಾಗಿ ಜನವರಿ 2005ರಿಂದ ಮನೆಮನೆ ಪುನರ್ ಸಮೀಕ್ಷೆ ಕೈಗೊಳ್ಳಲಾಗಿದೆ. ಈ ಸಮೀಕ್ಷೆಯಿಂದ ಹೊರಬೀಳುವ ಅರ್ಹ ಕುಟುಂಬಗಳ ಪಟ್ಟಿಯನ್ನು ಗ್ರಾಮಸಭೆ / ವಾರ್ಡ್‌ಸಭೆಗಳ ಮುಂದೆ ಮಂಡಿಸಲಾಗುವುದು. ಈ ಕಾರ್ಯವು ಏಪ್ರಿಲ್ 2005ಕ್ಕೆ ಮುಕ್ತಾಯಗೊಳ್ಳಲಿದೆ.

ಈ) ಸಮೀಕ್ಷೆ ಕಾರ್ಯ 2005ರ ಏಪ್ರಿಲ್ ಮಾಹೆಯಲ್ಲಿ ಮುಕ್ತಾಯಗೊಳ್ಳುವುದರಿಂದ ಸಮೀಕ್ಷೆ ಮುಗಿದ ತಕ್ಷಣವೇ ಬಾಕಿ ಉಳಿದ ಅರ್ಹ ಕುಟುಂಬಗಳಿಗೆ ಪಡಿತರ ಚೀಟಿ ನೀಡಲಾಗುವುದು.

ಉ) ಹೌದು. ಆಹಾರ ಧಾನ್ಯಗಳನ್ನು ಪಡಿತರ ಚೀಟಿಗಳಿಗನುಗುಣವಾಗಿಯೇ ಸಮರ್ಪಕವಾಗಿ ಒದಗಿಸಲಾಗುತ್ತದೆ.

ಊ) ಸಮರ್ಪಕವಾಗಿ ಆಹಾರ ಧಾನ್ಯ ಒದಗಿಸಲು ಸ್ಥಳೀಯರನ್ನೊಳಗೊಂಡ ಜಾಗೃತ ಸಮಿತಿಗಳನ್ನು ಪ್ರತಿ ನ್ಯಾಯಬೆಲೆ ಅಂಗಡಿಗೆ ರಚಿಸಿ ಮೇಲುಸ್ತುವಾರಿ ಮಾಡಲಾಗುತ್ತಿದೆ. ಹಾಗೂ ಗ್ರಾಮಗಳಲ್ಲಿ ಆಹಾರ ಅದಾಲತ್ ನಡೆಸಿ ಸ್ಥಳೀಯ ಪಡಿತರ ಚೀಟಿದಾರರ ಕುಂದುಕೊರತೆ ನಿವಾರಿಸಲಾಗುತ್ತಿದೆ. ನ್ಯಾಯಬೆಲೆ ಅಂಗಡಿಗಳ ತನಿಖೆಯನ್ನು ಪ್ರತಿ ತಿಂಗಳು ತಪ್ಪದೆ ಮಾಡಲಾಗುತ್ತಿದೆ.

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ : ಮಾನ್ಯ ಅಧ್ಯಕ್ಷರೆ, ನಾನು ನನ್ನ ಮತ ಕ್ಷೇತ್ರದಲ್ಲಿ ದಿನಾಂಕ 12-1-05 ರಿಂದ 19-01-05ರವರೆಗೆ ಒಂದು ವಾರದ ಕಾಲ ಗ್ರಾಮಸಭೆಗಳನ್ನು ಇಟ್ಟುಕೊಂಡಂಥ ಸಂದರ್ಭದಲ್ಲಿ ಸಾಮಾನ್ಯವಾಗಿ ಕಡುಬಡವರು ಆಹಾರಧಾನ್ಯದ ಬಗ್ಗೆ ಮತ್ತು ಪಡಿತರ ವ್ಯವಸ್ಥೆ ಬಗ್ಗೆ ಬಹಳಷ್ಟು ನೊಂದು ಆ ಜನ ಅರ್ಹ ಬಡ ಜನರಿಗೆ ಬದಲಾಗಿ ಆದಾಯ ಹೆಚ್ಚಿರತಕ್ಕಂಥ ಕುಟುಂಬಗಳಿಗೆ ಪಡಿತರ ಚೀಟಿಯನ್ನು ನೀಡತಕ್ಕಂಥದ್ದು ಆಗಿದೆ. ಇದನ್ನು ಸರಿಪಡಿಸಬೇಕೆನ್ನುವ ಹಿನ್ನೆಲೆಯಲ್ಲಿ ಇತ್ತೀಚೆಗೆ ರದ್ದುಪಡಿಸಿದ ಹಳದಿ ಕಾರ್ಡ್‌ಗಳಲ್ಲಿ ಕಡು ಬಡವರದ್ದೇ ಹೆಚ್ಚಾಗಿರುತ್ತದೆ. ಈ ವಿಷಯವನ್ನು ನಾನು ತಹಸೀಲ್ದಾರ್‌ರವರ ಗಮನಕ್ಕೆ ತಂದಾಗ ಅವರು ಅದನ್ನು ಸರಿಪಡಿಸಿದ್ದಾರೆ. ಮೊನ್ನೆ ಕೆಲವು ಜನರ ಪಡಿತರ ಚೀಟಿಯನ್ನು ಕಟ್ ಮಾಡಿದಾಗ ಸಹ, ಅದನ್ನು ತಹಸೀಲ್ದಾರ್‌ರವರಿಗೆ ಹೇಳಿದಾಗ, ಅವರು ಅದನ್ನು ಸರಿಪಡಿಸಿದ್ದಾರೆ. ನಿಜವಾಗಿ ಬಹಳ ದೊಡ್ಡ ಜನರಿಗೆ ಮಾತ್ರ ಪಡಿತರ ಚೀಟಿ ಹೋಗುತ್ತಿದೆ. ಇದಕ್ಕೆ ಸಂಬಂಧಪಟ್ಟಂತೆ ಸರಿಯಾದ ವ್ಯವಸ್ಥೆಯನ್ನು ಮಾಡುವುದಕ್ಕೆ ತಹಸೀಲ್ದಾರ್‌ರವರಿಗೆ ಅಥವಾ ಅಲ್ಲಿನ ತಲಾಟಿಯವರಿಗೆ ಹೇಳಬೇಕಾಗಿ ವಿನಂತಿ. ಹುಕ್ಕೇರಿ ಮತ ಕ್ಷೇತ್ರದಲ್ಲಿ ಇವತ್ತು ತಾವು ಹೇಳಿದ ಪ್ರಕಾರ, 74 ಸಾವಿರ ಕುಟುಂಬಗಳಿವೆ. ಅದರಲ್ಲಿ ಈಗಾಗಲೇ ಬಹಳಷ್ಟು ಜನರಿಗೆ ಹಳದಿ ಕಾರ್ಡ್ ಸಿಕ್ಕಿಲ್ಲ. ಇನ್ನು ನಿಜವಾಗಿ...

ಅಧ್ಯಕ್ಷರು : ಶಶಿಕಾಂತ ಅಕ್ಕಪ್ಪ ನಾಯಕರ್, ಇದನ್ನು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿದ್ದೇವೆ. ನೀವು ಹಳದಿ ಕಾರ್ಡ್ ಅನ್ನೇ ಕೇಳುತ್ತಿದ್ದೀರಿ. ಬೇಗ ಕೇಳಿ.

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ : ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಪ್ರಶ್ನೆ ಇದರಲ್ಲಿದೆ. ಅದಕ್ಕೆ ಕೇಳುತ್ತಿದ್ದೇನೆ.

ಅಧ್ಯಕ್ಷರು : ಕೇಳಿ. ಅದು ಸರಿಯಾದ ರೀತಿಯಲ್ಲಿ ಹಂಚಿಕೆಯಾಗಿಲ್ಲ ಎನ್ನುವ ಪ್ರಶ್ನೆಯನ್ನು ನೀವು ಕೇಳುತ್ತಿದ್ದೀರಿ. ಈಗಾಗಲೇ ಅದಕ್ಕೆ ಸಂಬಂಧಪಟ್ಟಂತೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಆ ಚರ್ಚೆಯಲ್ಲಿ ಅವತ್ತು ಭಾಗವಹಿಸಿ. ನಿಮ್ಮ ಭಾಗದಲ್ಲಿ ಏನಾಗಿದೆ ಅದನ್ನು ಹೇಳಿ. ಅದೇ ಪ್ರಶ್ನೆ, ಮತ್ತೆ ಏತಕ್ಕೆ? ನಿಮಗೆ ಅವತ್ತು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ : ಸೋಮವಾರದ ದಿವಸ ಆ ಪ್ರಶ್ನೆಗೆ ನನಗೆ ಅವಕಾಶ ಮಾಡಿಕೊಡುವುದಾದರೆ...

ಅಧ್ಯಕ್ಷರು: ಆಯಿತು. ಮಾಡಿಕೊಡೋಣ.

ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಯಲ್ಲಿ ಬೆಳೆವಿಮೆ ಯೋಜನೆ

57(510) ಶ್ರೀ ಆಂಜನೇಯ ಹೆಚ್. (ಭರಮಸಾಗರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳಿಗೆ ಬೆಳೆ ವಿಮೆ ಯೋಜನೆ ಅಡಿಯಲ್ಲಿ ಎಷ್ಟು ಹಣವನ್ನು ರೈತರಿಗೆ ಕಳೆದ ಮೂರು ವರ್ಷಗಳಲ್ಲಿ ವಿತರಿಸಲಾಗಿದೆ;

ಆ) ಇನ್ನೂ ವಿತರಿಸಬೇಕಾದ ಹಣವೆಷ್ಟು;

ಇ) ಬಾಕಿ ಇರುವ ವಿಮೆ ಹಣವನ್ನು ರೈತರಿಗೆ ಯಾವಾಗ ಹಂಚಲಾಗುವುದು?

ಶ್ರೀ ಶ್ರೀನಿವಾಸಗೌಡ ಕೆ. (ಕೃಷಿ ಸಚಿವರು)

ಅ) ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳಿಗೆ ಬೆಳೆ ವಿಮಾ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ರೈತರಿಗೆ ವಿತರಿಸಲಾದ ಬೆಳೆ ವಿಮಾ ನಷ್ಟ ಪರಿಹಾರ ಈ ಕೆಳಕಂಡಂತಿದೆ.

(ಲಕ್ಷ ರೂ.ಗಳಲ್ಲಿ)

ವರ್ಷ	ಚಿತ್ರದುರ್ಗ	ದಾವಣಗೆರೆ
2001–02	123.56	257.76
2002–03	194.41	1142.68
2003 ಮುಂಗಾರು	463.46	948.63
ಒಟ್ಟು	781.43	2349.07

ಆ) 2003–04ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆ ವಿಮಾ ನಷ್ಟ ಪರಿಹಾರವನ್ನು ವಿತರಿಸಬೇಕಾಗಿದೆ. ವಿವರಗಳು ಕೆಳಕಂಡಂತಿದೆ.

(ಲಕ್ಷ ರೂ.ಗಳಲ್ಲಿ)

ಚಿತ್ರದುರ್ಗ	397.80
ದಾವಣಗೆರೆ	21.67
ಒಟ್ಟು	419.47

ಇ) ದಿನಾಂಕ 3-1-2005 ರಂದು ಭಾರತೀಯ ಕೃಷಿ ವಿಮಾ ಕಂಪನಿ ನಿಯಮಿತ ಸಂಸ್ಥೆಯಿಂದ ರಾಜ್ಯ ಸರ್ಕಾರದ ಪಾಲಿನ ಹಣವನ್ನು ಬಿಡುಗಡೆ ಮಾಡಲು ಬೇಡಿಕೆ ಬಂದಿದ್ದು, ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಶೀಘ್ರದಲ್ಲೇ ರೈತರಿಗೆ 2003–04ರ ಹಿಂಗಾರು ಮತ್ತು ಬೇಸಿಗೆ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲಾಗುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ (ಶ್ರೀ ಹೆಚ್. ಆಂಜನೇಯರವರ ಪರವಾಗಿ): ಇದರಲ್ಲಿ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ತಾವು ಕೊಡಬೇಕಾದ ಬಾಕಿ ಹಣವೆಷ್ಟು? ಇನ್ನೂ ಎಷ್ಟು ಹಣ ಕೊಡಬೇಕೆಂದು ಕೇಳಿದ್ದಕ್ಕೆ ಅವರು ಒಪ್ಪಿದ್ದಾರೆ. 419.47 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ ಎಂದು ಹೇಳಿದ್ದಾರೆ. ತಾವು ಕೊಡಬೇಕಾಗಿರುವ ಮೊತ್ತವೇ ಕಡಿಮೆ. ಈ ಕೃಷಿ ವಿಮೆ ಬಗ್ಗೆ ಈ ಶಾಸನ

ಸಭೆಯಲ್ಲಿ 10, 12 ಸಲ ಪ್ರಸ್ತಾಪವಾಗಿರಬಹುದು. ಯಾವತ್ತಾದರೂ ಕಾಲ ನಿಗದಿಪಡಿಸಿಕೊಂಡು, ಆ ರೈತರು ಸಂಕಷ್ಟಕ್ಕೆ ಸಿಕ್ಕಿ ಹಾಕಿಕೊಂಡು, ತಾವು ಕನಿಷ್ಠ ಏನು ಇಳುವರಿ ನಿಗದಿ ಮಾಡುತ್ತೀರಿ, ಆ ಕನಿಷ್ಠ ಇಳುವರಿ ಬರಲಿಲ್ಲವೆಂದು ಹೇಳಿ ಬೆಳೆ ವಿಮೆ ಮಾಡಿಸಿರುವುದು. ಯಾವಾಗಲೋ ಕೊಟ್ಟರೆ, ಅವನು ಜೀವನ ಮಾಡುವುದು ಹೇಗೆ? ಅವನಿಗೆ ಈ ವಿಮೆ ಇಟ್ಟಿದ್ದು ಏಕೆ? ಸನ್ಮಾನ್ಯ ಸಚಿವರೆ, ವಿಮೆ ಎನ್ನುವುದಕ್ಕೆ ಒಂದು ಅರ್ಥ ಉಳಿಯಬೇಕಲ್ಲವೇ? ಯಾವತ್ತು ಕೊಡುತ್ತೀರಿ? ಇದೇ ರೀತಿ, ರಾಜ್ಯದಲ್ಲಿರುವವರಿಗೆ ಯಾವತ್ತು ಕೊಡುತ್ತೀರಿ?

ಶ್ರೀ ಕೆ. ಶ್ರೀನಿವಾಸಗೌಡ : ಇನ್ನು ಒಂದು ತಿಂಗಳಲ್ಲಿ ಬಾಕಿ ಇರುವ ಹಣವನ್ನು ಕೊಡಿಸುವಂತೆ ಈಗಾಗಲೇ ನಾವು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿದ್ದೇವೆ. ಒಂದು ತಿಂಗಳಲ್ಲಿ ಈ ಹಣವನ್ನು ಬಿಡುಗಡೆ ಮಾಡುತ್ತೇವೆ. ರಾಜ್ಯದಲ್ಲಿಯೂ ಕೂಡ 221.34 ಕೋಟಿ ರೂಪಾಯಿ ಬಾಕಿ ಇದೆ. ಇನ್ನು ಒಂದು ತಿಂಗಳಲ್ಲಿ ಈ ಹಣವನ್ನು ಕೊಡುವಂಥ ಕೆಲಸ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ವಿಮೆಯನ್ನು ಇವತ್ತೇನು ತಾಲ್ಲೂಕು ಮಟ್ಟ ಅಥವಾ ಹೋಬಳಿ ಮಟ್ಟವನ್ನು ಒಂದು ಆವರೇಜ್ ಆಗಿ ಇಟ್ಟುಕೊಂಡು ಮಾಡುತ್ತಿದ್ದೀರಿ, ಅದನ್ನು ಕನಿಷ್ಠ ಗ್ರಾಮ ಮಟ್ಟಕ್ಕೆ ತಂದು ಸರ್ವೆ ಮಾಡುವುದು ಆಗಬೇಕು. ನಿಮ್ಮ ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್ ಅಥವಾ ಯೀಲ್ಡ್ ಆವರೇಜ್ ಮೇಲೆ ಒಂದೊಂದು ಹಳ್ಳಿಗೆ, ಒಂದೊಂದು ಗ್ರಾಮಕ್ಕೆ ಸೀಮಿತವಾಗಿ ಫಸಲು ನಷ್ಟವಾಗಿರುವುದಕ್ಕೆ ವಿಮೆ ಮಾಡಿಸಲು ಮುಂದೆ ಕ್ರಮ ಜರುಗಿಸುತ್ತೀರಾ?

ಶ್ರೀ ಕೆ. ಶ್ರೀನಿವಾಸಗೌಡ : ಇದರ ವಿಷಯದಲ್ಲಿ ಹಿಂದಿನ ವಿಧಾನಸಭೆಯಲ್ಲಿ ನಾನು ಹೇಳಿದ್ದೆ. ಹೋಬಳಿ ಮಟ್ಟದಲ್ಲಿ ಇದ್ದುದ್ದನ್ನು ಪಂಚಾಯಿತಿ ಮಟ್ಟಕ್ಕೆ ತಂದಿದ್ದೇವೆ. ಒಂದು ಹೋಬಳಿಗೆ ಸಾಮಾನ್ಯವಾಗಿ 5-6 ಪಂಚಾಯಿತಿಗಳು ಇರುತ್ತವೆ. ಅಲ್ಲಿ 12 ಸರ್ವೆ ನಂಬರ್‌ಗಳಲ್ಲಿ ನಾವು ಥ್ರೆಶೋಲ್ಡ್ ಯೀಲ್ಡ್ ಮಾಡುವಂಥ ಕೆಲಸ ಮಾಡಿದ್ದೇವೆ. ಆದುದರಿಂದ, ಪ್ರತಿ ಪಂಚಾಯಿತಿಯಲ್ಲಿಯೂ ಈ ಕೆಲಸವನ್ನು ಇಲ್ಲಿಂದಾಚೆಗೆ ಮಾಡುವ ಬಗ್ಗೆ ಸೂಚನೆಗಳನ್ನು ಕೊಟ್ಟಿದ್ದೇವೆ. ಮುಂದೆ ಪ್ರತಿ ಪಂಚಾಯಿತಿವೈಜ್ ಮಾಡಿ, ಬರುವ ಥ್ರೆಶೋಲ್ಡ್ ಯೀಲ್ಡ್ ಅನ್ನು ಕಂಡುಹಿಡಿಯುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಶ್ರೀನಿವಾಸಗೌಡರು, 221 ಕೋಟಿ ರೂಪಾಯಿ ಬಾಕಿ ಇದೆ ಎಂದು ಹೇಳಿದ್ದಾರೆ. 2003-04ರ ಹಿಂಗಾರು ಬೆಳೆ ವಿಮೆಯನ್ನು ಬಿಡುಗಡೆ ಮಾಡಲಿಲ್ಲ. ಒಂದು ತಿಂಗಳಲ್ಲಿ ಬಿಡುಗಡೆ ಮಾಡುತ್ತೇವೆಂದು ಹೇಳುತ್ತೀರಿ. ಅದು ಈವರೆಗೆ ಆಗಬೇಕಾಗಿತ್ತು. ಆಗಲೇ ಬಿಡುಗಡೆಯಾಗಿ ರೈತರ ಕೈಗೆ ಬರಬೇಕಾಗಿತ್ತು. ಬಹಳ ಲೇಟ್ ಆಗಿ ಮಾಡುತ್ತಿದ್ದೀರಿ. ಒಂದು ವಾರದಲ್ಲಿ ಹಣ ಬಿಡುಗಡೆಯಾಗಬೇಕೆಂದು ನಾನು ಒತ್ತಾಯಿಸುತ್ತೇನೆ. ಇದರಲ್ಲಿ ಹಲವಾರು ಲೋಪ-ದೋಷಗಳಿವೆ. ಆ ಲೋಪ-ದೋಷಗಳು ತಮ್ಮ ಗಮನಕ್ಕೆ ಬಂದಿರಬಹುದು. ಉದಾಹರಣೆಗೆ ಹೇಳುವುದಾದರೆ, ಕಲಘಟಗಿ ತಾಲ್ಲೂಕಿನಲ್ಲಿ ಯಾವ ರೈತರು

ಪ್ರೀಮಿಯಂ ತುಂಬಿದ್ದಾರೆ, ಆ ರೈತರಿಗೆ ಬೆಳೆ ವಿಮೆಯನ್ನು ಕೊಡಲಿಲ್ಲ. ಬೆಳಗಾಂ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿ ರೈತರಿಗೆ ಬೆಳೆ ವಿಮೆ ಹಣ ಸಿಗಲಿಲ್ಲ. ನಮ್ಮ ಧಾರವಾಡ ತಾಲ್ಲೂಕಿನಲ್ಲಿ ಇವತ್ತು ಅಲ್ಲಿಯ ರೈತರಿಗೆ ಸಿಕ್ಕಿತು. ಆದರೆ ಪಕ್ಕದ ಕಲಘಟಗಿ ಮತ್ತು ಖಾನಾಪುರ ತಾಲ್ಲೂಕುಗಳಲ್ಲಿ ಇಲ್ಲ. ಹೀಗಾಗಿ ಇವತ್ತು ಕೆಲವೊಂದು ಲೋಪ-ದೋಷಗಳಾಗಿವೆ. ಆಣೆವಾರಿ ಲೆಕ್ಕ ಮಾಡುವುದರಲ್ಲಿ, ಸಮೀಕ್ಷೆ ಮಾಡುವುದರಲ್ಲಿ ಸರಿಯಾಗಿ ಆಗಿಲ್ಲ. ಹೀಗಾಗಿ, ಇದರ ಬಗ್ಗೆ ಎನ್‌ಕ್ವಯರಿ ಮಾಡುವುದನ್ನು ಮಾಡುತ್ತೀರಾ? ಮಾನ್ಯ ಸಚಿವರಾದ ಮೋರೆಯವರು ಹಿಂದೆ ಧಾರವಾಡ ತಾಲ್ಲೂಕಿನಲ್ಲಿ ಕೆಲವೊಂದು ಅವ್ಯವಹಾರಗಳಾಗಿವೆ ಎಂಬ ಬಗ್ಗೆ ಸಿಓಡಿ ಎನ್‌ಕ್ವಯರಿ ಮಾಡಿಸುತ್ತೇನೆಂದು ಹೇಳಿದ್ದರು. ಇನ್ನೂವರೆಗೆ ಅದರ ಬಗ್ಗೆ ವಿಚಾರ ಮಾಡಲಿಲ್ಲ. ಕಲಘಟಗಿ, ಖಾನಾಪುರ ತಾಲ್ಲೂಕಿನಲ್ಲಿ ಹೋಗಿ ಎನ್‌ಕ್ವಯರಿ ಆಫೀಸರ್ ಹತ್ತಿರ ತನಿಖೆ ಮಾಡಿಸುತ್ತೇನೆಂದು ಹೇಳಿದ್ದರು. ಅದು ಇನ್ನೂವರೆಗೆ ಆಗಲಿಲ್ಲ. ಅಲ್ಲಿರುವ ಲೋಪದೋಷಗಳ ಬಗ್ಗೆ ಕೃಷಿ ಇಲಾಖೆಯಿಂದ ಜನರಲ್ ಇನ್‌ಷೂರೆನ್ಸ್ ಕಂಪನಿಗೆ ರಿಪೋರ್ಟ್ ಬಂದಿದೆ. ಆದರೆ, ಇಲ್ಲಿಯವರೆಗೆ ಆ ಲೋಪ ದೋಷಗಳನ್ನು ಸರಿ ಮಾಡುವಂಥದ್ದು ಆಗಲಿಲ್ಲ. ಎಲ್ಲಾ ರೈತರಿಗೂ ಇವತ್ತು ಬೆಳೆ ವಿಮೆ ಹಣ ಸಿಗಲಿಲ್ಲ. ಇದರಿಂದ ಬಹಳಷ್ಟು ಅನ್ಯಾಯವಾಗಿದೆ. ಇದರ ಬಗ್ಗೆ ಕೂಲಂಕಷವಾದ ತನಿಖೆಯನ್ನು ನೀವು ಮಾಡುತ್ತೀರೋ, ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ನಿಮಗೆ ರೈತರ ಬಗ್ಗೆ ಕಳಕಳಿ ಇದೆ; ನಮಗೆ ಅರ್ಥವಾಗುತ್ತದೆ. ಈ ಬೆಳೆ ವಿಮೆ ಬಗ್ಗೆ ಈ ರಾಜ್ಯದಲ್ಲಿದ್ದ ರೈತರಿಗೆ ವಿಶ್ವಾಸ ಹೊರಟು ಹೋಗುತ್ತಿದೆ. ಪ್ರಾರಂಭದ ಮೊದಲನೇ ವರ್ಷ ಸ್ವಲ್ಪ ನೆಮ್ಮದಿ ಇತ್ತು. ಮಧ್ಯದಲ್ಲಿ ಒಬ್ಬ ರೈತನಿಗೆ ಕೊಟ್ಟಿದ್ದಾರೆ. ಆ ಕಡೆ, ಈ ಕಡೆ ಕೊಟ್ಟಿಲ್ಲ. ತರಿ ಎಂದು ಹೇಳಿ ಸಾಲ ತೆಗೆದುಕೊಂಡವನು, ಸಾಲ ತೆಗೆದುಕೊಳ್ಳದೇ ಇದ್ದವನಿಗೂ ಇದರಲ್ಲಿ ವ್ಯತ್ಯಾಸ ಮಾಡಿದ್ದಾರೆ. ಒಂದೊಂದು ತಾಲ್ಲೂಕಿನಲ್ಲಿ ವಿಚಿತ್ರವಾಗಿದೆ. ಆ ಅಧಿಕಾರಿಗಳಿಗೆ ಏನಾಗಿದೆಯೋ ಗೊತ್ತಿಲ್ಲ. ಸ್ಯಾಂಪಲ್ ಸರ್ವೆ ಮಾಡುವ ಸಮಯದಲ್ಲಿ ಬೋರ್‌ವೆಲ್ಸ್‌ಗೆ 7-8 ಪಾಯಿಂಟ್ ಮಾಡಿದ್ದರೆಂದುಕೊಳ್ಳಿ, ಅದರಲ್ಲಿ 3-4 ಪಾಯಿಂಟ್ ಬೋರ್‌ವೆಲ್ ಇರುವುದನ್ನು ಸ್ಯಾಂಪಲ್ ತೆಗೆದುಕೊಂಡಿದ್ದಾರೆ. ಇಳುವರಿ ಜಾಸ್ತಿ ಇರುತ್ತದೆ. ಹೀಗಾಗಿ, ಇಡೀ ನಮ್ಮ ರಾಜ್ಯದ ಆ ಜಿಲ್ಲೆ, ಈ ಜಿಲ್ಲೆ ಎಂದು ಅಲ್ಲ, ಬರಗಾಲವೆಂದು ನಾವೇ ಘೋಷಣೆ ಮಾಡಿ, ಒಂದು ಚೀಲ ಬೆಳೆ ಬೆಳೆಯದಿದ್ದರೂ ಸಹ ಬೆಳೆ ವಿಮೆ ಮಾಡಿದವರಿಗೆ ಬೆಳೆ ವಿಮೆ ಹಣ ಸಿಕ್ಕಿಲ್ಲ. ಇದು ಇಡೀ ರಾಜ್ಯದಲ್ಲಿರುವುದು. ಮಾನ್ಯ ಮುಖ್ಯ ಮಂತ್ರಿಗಳು ತಾವು ಅನೇಕ ಸಂದರ್ಭಗಳಲ್ಲಿ ಒಂದು ತನಿಖೆ ಮಾಡಿಸುತ್ತೇವೆಂದು ಹೇಳಿದ್ದಿರಿ. ಯಾವ ರೀತಿಯ ತನಿಖೆ ಮಾಡುತ್ತೀರಿ? ಇಲ್ಲದಿದ್ದರೆ, ತೀರ್ಮಾನ ಮಾಡಿ. ಯಡಿಯೂರಪ್ಪನವರೆ, ಬೆಳೆ ವಿಮೆಯನ್ನು ಸರಿಯಾಗಿ ಮಾಡುವುದಕ್ಕಾಗುವುದಿಲ್ಲ, ಯಾರೂ ಕಟ್ಟುವುದು ಬೇಡವೆಂದು ಹೇಳಿ. ಸಾಲ

ತೆಗೆದುಕೊಳ್ಳುವವರಿಗೆ ಬೆಳೆ ವಿಮೆ ಕಂಪಲ್‌ಸರಿ. ಇಷ್ಟೆಲ್ಲಾ ಆದ ಮೇಲೂ ಸಹ, ಅಧಿಕಾರಿಗಳು ಖುಷಿ ಬಂದಂತೆ, ಮನ ಬಂದಂತೆ ವರ್ತನೆ ಮಾಡಿದರೆ, ರೈತರೇನು ಮಾಡಬೇಕು? ಇಡೀ ರಾಜ್ಯದಲ್ಲಿ ಎಲ್ಲಿಯಾದರೂ ನೀವು ಸಚಿವರು ಸೇರಿಕೊಂಡು ಹೋಗಿ ನೋಡಿ. ಎಲ್ಲ ಕಡೆ ಮಾತನಾಡುವುದು, ಹಳದಿ ಕಾರ್ಡ್ ಸಿಗಲಿಲ್ಲ, ಬೆಳೆ ವಿಮೆ ಹಣ ಸಿಗಲಿಲ್ಲವೆನ್ನುವ ಕೂಗು ರಾಜ್ಯದ ಇಡೀ 224 ಕ್ಷೇತ್ರಗಳಲ್ಲಿಯೂ ಇದೆ. ಇದಕ್ಕೆ ಪರಿಹಾರ ಹುಡುಕುತ್ತೀರಾ ಅಥವಾ ತನಿಖೆ ಮಾಡುತ್ತೀರಾ? ಯಾವ ರೀತಿಯ ತನಿಖೆ ಮಾಡುತ್ತೀರಾ?

ಶ್ರೀ ಗೋವಿಂದ ಎಂ. ಕಾರಜೋಳ : ನಮ್ಮ ಭಾಗದಲ್ಲಿ ಬಿಳಿಜೋಳ, ಸೂರ್ಯಕಾಂತಿ, ಕಡಲೆ, ಗೋಧಿ ಈ ನಾಲ್ಕು ಬೆಳೆಗಳಿಗೆ ಮಾತ್ರ ರಾಷ್ಟ್ರೀಯ ವಿಮೆ ಯೋಜನೆಯಡಿಯಲ್ಲಿ ಬೆಳೆ ವಿಮೆ ಮಾಡುತ್ತಾರೆ. ಆದರೆ, ಮುಧೋಳ ತಾಲ್ಲೂಕಿನಲ್ಲಿ, ಜಮಖಂಡಿ ತಾಲ್ಲೂಕಿನಲ್ಲಿ, ಬೆಳಗಾಂ ಜಿಲ್ಲೆಯ ಕೆಲವು ಭಾಗಗಳಲ್ಲಿ ಕಬ್ಬಿನ ಬೆಳೆ ಬಹಳ ಮುಖ್ಯವಾದ ಬೆಳೆ. ಅದು ರಾಷ್ಟ್ರೀಯ ವಿಮಾ ಯೋಜನೆಯಡಿಯಲ್ಲಿ ಕವರ್ ಆಗಿಲ್ಲ. ಅದನ್ನು ನಾನು ಒಪ್ಪುತ್ತೇನೆ. ಆದರೆ, ಪ್ರಮುಖ ಬೆಳೆ ಕಬ್ಬು ಆಗಿರುವುದರಿಂದ, ಕಳೆದ 2 ವರ್ಷಗಳಿಂದ ಕಬ್ಬಿಗೆ ಬಿಳಿ ಉಣ್ಣೆ ಹೇನಿನ ರೋಗ ಬರುತ್ತಿದೆ. ಹೀಗಾಗಿ, ಇವತ್ತು ಇಳುವರಿ ಕಡಿಮೆಯಾಗುತ್ತಿದೆ. ಕಬ್ಬಿನ ಬೆಳೆ ನಾಶವಾಗುತ್ತಿದೆ. ಅದಕ್ಕೆ ನಾನು ಸರ್ಕಾರಕ್ಕೆ ವಿನಂತಿಸುವುದೇನೆಂದರೆ, ಕಬ್ಬಿನ ಬೆಳೆಯನ್ನೂ ಕೂಡ ರಾಷ್ಟ್ರೀಯ ಬೆಳೆ ವಿಮಾ ಯೋಜನೆಯಡಿಯಲ್ಲಿ ಕವರ್ ಮಾಡಲಿಕ್ಕೆ ತಾವು ಪ್ರಯತ್ನ ಮಾಡಬೇಕು. ಸರ್ಕಾರ ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಹೇಳಬೇಕೆಂದು ವಿನಂತಿಸುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಬೆಳೆ ವಿಮೆ ನಿಗದಿ ಮಾಡಬೇಕಾಗಿದ್ದರೆ, ಥ್ರೆಶೋಲ್ಡ್ ವ್ಯಾಲ್ಯು ಎಂದೇನು ಹೇಳುತ್ತಿದ್ದಾರೆ, ಅದು ಬಹಳ ಕಡಿಮೆ ಇದೆ. ರೈತರಿಗೆ ಬೆಳೆ ವಿಮೆಯಿಂದ ವಂಚನೆಯಾಗಲು ಮುಖ್ಯ ಕಾರಣವೆಂದರೆ, ಥೈಶೋಲ್ಡ್ ವ್ಯಾಲ್ಯು ಎಂದೇನು ಫಿಕ್ಸ್ ಮಾಡುತ್ತಾರೆ, ಅದನ್ನು ಯಾವ ಆಧಾರದ ಮೇಲೆ ಫಿಕ್ಸ್ ಮಾಡುತ್ತಿದ್ದಾರೆನ್ನುವುದು ಬಹಳ ಮುಖ್ಯವಾಗುತ್ತದೆ. ಈಗ ನಮ್ಮ ತಾಲ್ಲೂಕು ಮಟ್ಟದಲ್ಲೇನಾಗುತ್ತಿದೆ ಎಂದರೆ, ಇವತ್ತು ಉದಾಹರಣೆಗೆ ಹೇಳಬೇಕಾದರೆ, ನಮ್ಮ ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ತೊಗರಿ ಕನಿಷ್ಟವೆಂದರೆ 5ಕ್ವಿಂಟಾಲ್ ಬೆಳೆಯುವುದನ್ನು ನಾವು ಸರ್ವೆ ಸಾಧಾರಣವಾಗಿ ನೋಡಬಹುದು. ಆದರೆ, ಆಗ ಥ್ರೆಶೋಲ್ಡ್ ವ್ಯಾಲ್ಯು ಅನ್ನು 2 ಕ್ವಿಂಟಾಲ್ 3 ಕ್ವಿಂಟಾಲ್ ಎಂದು ಫಿಕ್ಸ್ ಮಾಡುತ್ತಾರೆ. ನಾವು ಕೆಟ್ಟ ಪರಿಸ್ಥಿತಿಯಲ್ಲಿಯೂ ಕೂಡ 2 ಕ್ವಿಂಟಾಲ್ ಬೆಳೆದರೆ, ನಮ್ಮ ರೈತರಿಗೆ ಅದರ ಫಲ ಸಿಗುತ್ತಿಲ್ಲ. ಅದಕ್ಕೆ ಥ್ರೆಶೋಲ್ಡ್ ವ್ಯಾಲ್ಯು ಅನ್ನು ಯಾವ ರೀತಿ ಫಿಕ್ಸ್ ಮಾಡುತ್ತಿದ್ದಾರೆ; ಅದರ ಬಗ್ಗೆ ಇನ್ನೊಂದು ಸಾರಿ ವಿಚಾರ ಮಾಡಿ ಮಾಡಬೇಕು. ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅರ್ಧಗಂಟೆಗಳ ಕಾಲ ಅವಕಾಶ ಮಾಡಿಕೊಡಬೇಕು. ಈ ಸದನದಲ್ಲಿ ಬೆಳೆ ವಿಮೆಯ ಬಗ್ಗೆ

ಬಹಳಷ್ಟು ಅಭಿಪ್ರಾಯಗಳು ಇನ್ನೂ ಸಂಗ್ರಹವಾಗಬೇಕಾಗಿದೆ. ಅದಕ್ಕೆ ತಾವು ಕಾಲಾವಕಾಶ ಮಾಡಿಕೊಡಬೇಕು. ನಂತರ ಹಿಂಗಾರಿ 2003–04 ಹಿಂಗಾರಿನ ಬೆಳೆ ವಿಮೆ ಇನ್ನೂ ಆಗಿಲ್ಲ, ಏಕೆಂದರೆ ಈಗಾಗಲೇ ಅದು ಆಗಬೇಕಾಗಿತ್ತು. ನಂತರ 2004–2005ರ ಮುಂಗಾರು ಬೆಳೆಯದು ಕೂಡ ಅತಿ ಶೀಘ್ರದಲ್ಲಿ ಅದನ್ನು ಮಾಡಲಿಕ್ಕೆ ವ್ಯವಸ್ಥೆ ಮಾಡಬೇಕು.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಇನ್ಸೂರೆನ್ಸ್ ವ್ಯವಸ್ಥೆಯಲ್ಲಿ ಬಹಳ ಲೋಪದೋಷಗಳಿವೆ. ಎರಡನೆಯದು ರಾಜಕೀಯ ಪ್ರಭಾವದಿಂದ ಕೂಡ ಬಹಳ ಇನ್ಸೂರೆನ್ಸ್ ಆಗುತ್ತಿವೆ. ನಾನು ಬೇಕಾದರೆ ಉದಾಹರಣೆ ಕೊಡುತ್ತೇನೆ. ಅಮೇಲೆ ತಾವು ಥ್ರೆರೋಲ್ಡ್ ಯೀಲ್ಡ್ ಬಗ್ಗೆ ಹೇಳುತ್ತೀರಿ. ಮೊನ್ನೆ ಇದು ಜಿಲ್ಲಾ ಪಂಚಾಯಿತಿ ಸಭೆಯಲ್ಲಿ ಚರ್ಚೆಯಾದಾಗ ಅವರು ಸ್ಯಾಟಲೈಟ್ ಮೂಲಕ ಸರ್ವೆ ಮಾಡಿ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಅದು ಸ್ಯಾಟಲೈಟ್ ಸರ್ವೆ ಆದಾಗ ಹಸಿರಾಗಿ ನೋಡುವಾಗ ಕಾಣುತ್ತದೆ. ನಂತರ ಅದು ಹೂಬಿಟ್ಟು, ಫಲ ಬಂದು ಅದು ಹುಳುಗಳಿಂದ ಪಾರಾಗಿ ಅದು ಬಂದಾಗ ಅದರ ಪರಿಸ್ಥಿತಿ ಏನಾಗಿರುತ್ತದೆ? ಇದು ಅವೈಜ್ಞಾನಿಕ ಅಲ್ಲವೆ? ಸ್ವಲ್ಪ ದಯಮಾಡಿ ಮಾನ್ಯ ಕೃಷಿ ಸಚಿವರು ಈ ಎರಡು ವಿಷಯಗಳ ಬಗ್ಗೆ ಹೇಳಬೇಕು. ರಾಜಕೀಯ ಹಸ್ತಕ್ಷೇಪದಿಂದ ಮತ್ತು ಥ್ರೆರೋಲ್ಡ್‌ನಲ್ಲಿ ಅನ್‌ಸೈಂಟಿಫಿಕ್ ಮೆಥಡ್‌ನಿಂದ ಆಗುವ ಪರಿಣಾಮಗಳ ಬಗ್ಗೆ ಹೇಳಬೇಕು.

ಶ್ರೀ ಚಿಕ್ಕನಗೌಡ್ರ ಸಿದ್ಧನಗೌಡ ಈಶ್ವರಗೌಡ : ಮಾನ್ಯ ಅಧ್ಯಕ್ಷರೆ, ನನಗೆ ಎರಡು ನಿಮಿಷ ಅವಕಾಶ ಕೊಡಿ.

ಶ್ರೀ ರೇವುನಾಯಕ್ ಬೆಳಮಗಿ : ನನಗೂ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಎಲ್ಲರೂ ಈ ರೀತಿಯಾಗಿ ಎದ್ದು ನಿಂತುಕೊಂಡರೆ ನಾನು ಏನು ಮಾಡಬೇಕು ನೀವೇ ಹೇಳಿ. ನಿಮಗೆ ಎಷ್ಟು ಹೇಳಿದರೂ ಅರ್ಥವಾಗದಿದ್ದರೆ ನಾನು ಏನು ಮಾಡಬೇಕೆಂಬುದು ನನಗೆ ಅರ್ಥವಾಗುತ್ತಿಲ್ಲ. ಪ್ರತಿಯೊಂದು ಪ್ರಶ್ನೆಗೂ ಎದ್ದು ನಿಂತುಕೊಳ್ಳುತ್ತೀರಿ.

ಶ್ರೀ ಚಿಕ್ಕನಗೌಡ್ರ ಸಿದ್ಧನಗೌಡ ಈಶ್ವರಗೌಡ : ಅಲ್ಲಿ ನಾವು ಸತ್ಯಾಗ್ರಹ ಹೂಡಿದ್ದೇವೆ. ತಾವು ನನಗೆ ಅವಕಾಶ ಮಾಡಿಕೊಡಬೇಕು, ಏಕೆಂದರೆ, ಅಲ್ಲಿ ಪರಿಸ್ಥಿತಿ ತುಂಬಾ ಕೆಟ್ಟಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಸಭಾಧ್ಯಕ್ಷರು ಈ ಕಡೆ ಗಮನಿಸಬೇಕು. ಅಲ್ಲಿ ಕಳೆದ ಹದಿನೈದು ದಿವಸಗಳಿಂದ ಇದೇ ಬೆಳೆಯ ವಿಮೆಗೋಸ್ಕರ ಹಗಲು-ರಾತ್ರಿ ಅಲ್ಲಿ ಸತ್ಯಾಗ್ರಹ ಮಾಡುತ್ತಿರುವುದರಿಂದ ರೈತರು ಅಲ್ಲಿ ಓಡಾಡುವುದಕ್ಕೆ ಬಿಡುತ್ತಿಲ್ಲ. ಅವರಿಗೆ ಅವಕಾಶ ಮಾಡಿಕೊಡಿ.

ಶ್ರೀ ಚಿಕ್ಕನಗೌಡ್ರ ಸಿದ್ಧನಗೌಡ ಈಶ್ವರಗೌಡ (ಕಲಘಟಗಿ) : ನನಗೆ ಅವಕಾಶ ಕೊಡಿ ನಾನು ಎರಡು ವಿಷಯಗಳನ್ನು ಮಾತನಾಡಬೇಕಾಗಿದೆ, ಈಗ ಕೃಷಿ ಬಗ್ಗೆ

ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾವು ಸಾಕಷ್ಟು ಹೋರಾಟ ಮಾಡಿದ್ದೇವೆ, ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ಮೋರೆಯವರು ಏನು ಆದೇಶ ಕೊಟ್ಟಿದ್ದರು ಎಂದರೆ, ಇದನ್ನು ಸಿಓಡಿಗೆ ಒಪ್ಪಿಸುತ್ತೇವೆ ನಮಗೆ ಅವಕಾಶ ಕೊಡಿ ಎಂದು ಹೇಳಿದರು. ಹೀಗಾಗಿ ನಾವು ತಡೆದುಕೊಂಡಿದ್ದೇವೆ. ಇವತ್ತು ಅನೇಕ ಸದಸ್ಯರು ಈ ಸೆಕ್ಷನ್‌ನಲ್ಲಿ ಗಮನ ಸೆಳೆದಿದ್ದಾರೆ. ಕಲಘಟಗಿ ಮತ ಕ್ಷೇತ್ರದಲ್ಲಿ ಒಂದು ಪೈಸೆನೂ ಇಲ್ಲ, ಬರೀ ಹೀಗೆ ನಡೆಯುತ್ತಿದೆ, ಇವರು ಹೇಳುತ್ತಾರೆ ಅಧಿಕಾರಿಗಳಿಗೆ ಹೋಗಿ ನೀವು ಅಲ್ಲಿ ಸರ್ವೆ ಮಾಡಿರಿ, ಅಣೇವಾರಿ ಮಾಡಿ ಎಂದು ಹೇಳುತ್ತಾರೆ. ನಾನು ಜಿಲ್ಲಾ ಉಸ್ತುವಾರಿ ಮಂತ್ರಿಯವರಿಗೆ ಒಂದು ಮಾತು ಹೇಳಿದ್ದೇನೆ ಏನು ಹೇಳಿದ್ದೇನೆ ಎಂದರೆ, ಅಲ್ಲಿ ಬಂದಂಥ ಅಧಿಕಾರಿಗಳು ಯಾವ ತಾಲ್ಲೂಕಿಗೆ ಬಂದರು, ಯಾವ ಹೊಲಕ್ಕೆ ಹೋದರು ಎನ್ನುವ ಮಾಹಿತಿ ಕೊಟ್ಟರೆ ನಾನು ರಾಜೀನಾಮೆ ಕೊಡುತ್ತೇನೆಂದು ಹೇಳಬೇಕಾಯಿತು. ಒಂದು ಗ್ರಾಮಕ್ಕೂ ನಿಮ್ಮ ಯಾವ ಅಧಿಕಾರಿಗಳೂ ಬಂದಿಲ್ಲ. ತಾಲ್ಲೂಕು ಮಟ್ಟದಲ್ಲಿ ಕುಳಿತು ಸರ್ವೆ ಮಾಡಿದ್ದಾರೆ, ರಿಪೋರ್ಟ್ ಕೊಟ್ಟಿದ್ದಾರೆ, ಯಾವ ಹಳ್ಳಿಗೂ ಭೇಟಿಯಾಗಿಲ್ಲ, ಸರ್ವೆ ಮಾಡಿಲ್ಲ, ಅಣೇವಾರಿ ಮಾಡಿಲ್ಲ, ಇಂಥ ಅಧಿಕಾರಿಗಳನ್ನು ತೆಗೆದುಕೊಂಡು ರೈತರು ಇವತ್ತು ನೇಣು ಹಾಕಿಕೊಳ್ಳಬೇಕೆ? 27 ಜಿಲ್ಲೆಗಳಿಗೆ ಒಂದು ಪೈಸೆನೂ ಬಂದಿಲ್ಲ. ಇವತ್ತು ಅಲ್ಲಿ ಗಹಲು ರಾತ್ರಿ ಕೂಡಿ ಸತ್ಯಾಗ್ರಹ ನಡೆಯುತ್ತಿದೆ. ಅದಕ್ಕೆ ತಾವು ದಯಮಾಡಿ ಕೂಲಂಕುಷವಾಗಿ ತನಿಖ ಮಾಡಿಸಿ ಕ್ರಮ ಕೈಗೊಳ್ಳಬೇಕು.

ಅಧ್ಯಕ್ಷರು : ಏನು ಪ್ರಶ್ನೆ ಕೇಳಬೇಕು ಅದನ್ನು ಒಂದೆರಡು ಮಾತುಗಳಲ್ಲಿ ಕೇಳಿರಿ.

ಶ್ರೀ ರೇವು ನಾಯಕ್ ಬೆಳಮಗಿ : ಸನ್ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಏನಾಗಿದೆ ಎಂದರೆ,

ಅಧ್ಯಕ್ಷರು : ಈಗ ನಾವು ಪ್ರಶ್ನೆಗಳನ್ನು ಬಂದ್ ಮಾಡಬೇಕು ಅಷ್ಟೆ. ಈ ರೀತಿಯಾದರೆ ಹೇಗೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸಮಸ್ಯೆಗಳು ಅಷ್ಟು ಇವೆ ಏನು ಮಾಡುವುದು?

ಅಧ್ಯಕ್ಷರು : ಅಲ್ಲಿ ಕಾಗೇರಿಯವರೇ, ನೀವು ಹಿರಿಯ ಸದಸ್ಯರು ಇದ್ದೀರಿ, ನಿಯಮಗಳು ಇವೆ, ನಿಯಾಮಾವಳಿಗಳ ಪ್ರಕಾರ ಹೋಗಬೇಕಾಗುತ್ತದೆ. ಸಮಸ್ಯೆಗಳು ಇರುವುದು ನಿಜ. ಹುಟ್ಟಿರುವುದೇ ಒಂದು ದೊಡ್ಡ ಸಮಸ್ಯೆ.

ಶ್ರೀ ರೇವುನಾಯಕ್ ಬೆಳಮಗಿ : ಗುಲ್ಬರ್ಗಾ ಜಿಲ್ಲೆಯಲ್ಲಿ ರೈತರ ಕ್ರಾಪ್ ಇನ್ಸೂರೆನ್ಸ್ ಸಲುವಾಗಿ ಬಹಳಷ್ಟು ತಾರತಮ್ಯ ನಡೆಯುತ್ತಿದೆ. ಕಳೆದ ಸದನದಲ್ಲಿ ಕೂಡ ನಾನು ಮಾತನಾಡಿದ್ದೇನೆ. ಈಗಲೂ ಕೂಡ ಆ ವಿಷಯದಲ್ಲಿ ಬಹಳವಾಗಿ ಈ ಸದನಕ್ಕೆ ಹಾಗೂ ತಮಗೆ ಹಾಗೂ ಸರಕಾರಕ್ಕೆ ಬಹಳ ನೊಂದು ನಾನು ಹೇಳಬೇಕಾಗುತ್ತದೆ. ಏಕೆಂದರೆ, ಈ ಇನ್ಸೂರೆನ್ಸ್ ಯಾವ ರೀತಿ ಆಗುತ್ತಿದೆ ಯಾವ ರೀತಿಯಲ್ಲಿ ಹೆಚ್ಚಿಗೆ ಆ ಕಡೆಗೆ ಹೋಗುತ್ತದೆಂದು ತಿಳಿದುಕೊಳ್ಳಲು ನಾವು

ಡಿ.ಸಿ. ಯವರನ್ನು ಭೇಟಿಯಾದರೆ ಅವರು ಕೃಷಿ ಅಧಿಕಾರಿಯನ್ನು ತೋರಿಸಿದರು, ಕೃಷಿ ಅಧಿಕಾರಿಯ ಬಳಿಗೆ ಹೋದರೆ ಕಂದಾಯ ಅಧಿಕಾರಿಯನ್ನು ತೋರಿಸಿದರು, ಒಂದಕ್ಕೊಂದು ತಾರತಮ್ಯ ಮಾಡಿ ಒಟ್ಟು ಅದು ಯಾವ ರೀತಿ ರಿಪೋರ್ಟ್ ಆಗಿದೆ ಎಂಬುದನ್ನು ನಮಗೆ ತೋರಿಸಿಲ್ಲ. ನಾನು ಒಬ್ಬ ಎಂಎಲ್‌ಎ ಆಗಿ ನನಗೆ ತೋರಿಸಿಲ್ಲ, ಹಾಗಾದರೆ ಪಾರದರ್ಶಕತೆ ಎಲ್ಲಿದೆ? ಏಕೆಂದರೆ, ಗುರುಮಿಟ್ಕಲ್ ಮತ್ತು ಜೇವರ್ಗಿ ತಾಲ್ಲೂಕಿಗೆ ಹೆಚ್ಚಿನ ಇನ್ಸೂರೆನ್ಸ್ ಹೋಗುತ್ತದೆ. ನಮ್ಮ ಕಡೆಯ ರೈತರು ಏನು ಪಾಪ ಮಾಡಿದ್ದಾರೆ? ಆಳಂದ ತಾಲ್ಲೂಕು ಆಗಲಿ, ಗುಲ್ಬರ್ಗಾ ತಾಲ್ಲೂಕು ಆಗಲಿ, ಸರಕಾರದಲ್ಲಿ ಈ ರೀತಿಯ ತಾರತಮ್ಯ ಏಕೆ? ಅವರೂ ರೈತರೆ; ನಮ್ಮ ಕ್ಷೇತ್ರದಲ್ಲಿ ಇರುವವರು ರೈತರೇ ನಾವು ಬಿಜೆಪಿ ಎಂಎಲ್‌ಎ ಆಗಿರಬಹುದು, ರೈತರು ಯಾರು? ನಾವು ರೈತರನ್ನು ಅನ್ನದಾತ ಎಂದು ಹೇಳುತ್ತೇವೆ ರೈತರನ್ನು ಉದ್ಧಾರ ಮಾಡುತ್ತೇವೆಂದು ಹೇಳಿ ಆಶ್ವಾಸನೆ ಕೊಟ್ಟು ಭಾಷಣ ಮಾಡಿ ನಾವು ಅಧಿಕಾರಕ್ಕೆ ಬರುತ್ತೇವೆ, ಅಧಿಕಾರ ಬಂದ ಬಳಿಕ ಮರೆತು ಹೋಗಿಬಿಟ್ಟರೆ ಹೇಗೆ? ದಯವಿಟ್ಟು ಕಳಕಳಿಯ ವಿನಂತಿ ಮಾಡಿಕೊಳ್ಳುತ್ತೇನೆ. ಈ ತಾರತಮ್ಯ ಏಕೆ? ಇದನ್ನು ಸರಿಪಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಈ ವಿಷಯವಾಗಿ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯವರು ಕೇಳಿರುವುದು, ಅದರ ಬಗ್ಗೆ ಬೇಕಾದರೆ ಅರ್ಧ ಗಂಟೆಗಳ ಕಾಲ ಚರ್ಚೆ ಮಾಡಲಿಕ್ಕೆ ನಾನು ಸಿದ್ಧನಿದ್ದೇನೆ. ಎಲ್ಲೆಲ್ಲಿ ಕೇಳಿದರೆ, ಹೇಗೆ? ತಾವು ಒಂದೊಂದು ಪ್ರದೇಶಕ್ಕೆ ಸೀಮಿತವಾಗಿ ಕೇಳಬೇಕಾಗುತ್ತದೆ. ಎಲ್ಲರೂ ಕೇಳಿದರೆ ನಾವು ಒಂದೇ ಸಾರಿ ಉತ್ತರ ಒದಗಿಸುವುದಕ್ಕೆ ಕಷ್ಟವಾಗುತ್ತದೆ.

ಅಧ್ಯಕ್ಷರು : ಸಚಿವರೇ ಒಂದು ನಿಮಿಷ. ಇನ್ನು ಮುಂದೆ ಯಾರು ಪ್ರಶ್ನೆಗಳನ್ನು ಕೇಳಿರುತ್ತಾರೆ ಅವರಿಗೆ ಒಂದು ಅಥವಾ ಎರಡು ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಮಾಡುತ್ತೇನೆ, ಎಲ್ಲಾ ಮಾನ್ಯ ಸದಸ್ಯರು ಸಹಕರಿಸಬೇಕು, ಬೇರೆಯವರಿಗೆ ಯಾವುದೇ ಕಾರಣಕ್ಕೆ ಅವಕಾಶ ಮಾಡಿ ಕೊಡುವುದಕ್ಕಾಗುವುದಿಲ್ಲ. ಈಗ ತಾವು ಉತ್ತರ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ತಾವು ಅದನ್ನು ಪುನರ್ ಪರಿಶೀಲನೆ ಮಾಡಬೇಕು. ನಾವು ಮನವಿ ಮಾಡುತ್ತಿದ್ದೇವೆ ಸಾರ್, ಬೆಂಗಳೂರಿಗೆ ಬಾಂಬ್ ಬಿದ್ದು ಬಿಟ್ಟಿತು, ಆಗ ನಾವು ಎರಡೇ ಪ್ರಶ್ನೆಗಳನ್ನು ಕೇಳುವುದಕ್ಕೆ ಆಗುತ್ತದೆಯೇ?

ಅಧ್ಯಕ್ಷರು : ಇಲ್ಲ ಇಲ್ಲ ಈ ರೀತಿ ಆದರೆ ಆಗುವುದಿಲ್ಲ ಅಯಿತು ಆ ಪ್ರಶ್ನೆ ಕೇಳಿದಾಗ ನೋಡೋಣ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾವು ಕೇಳಿದ ಪ್ರಶ್ನೆ ಅನ್‌ಸ್ಟಾರ್ಡ್ ಆಗಿ ಬಂದಾಗ, ಕೇಳಬೇಕಾಗುತ್ತದೆ ಅಲ್ಲವೆ?

ಅಧ್ಯಕ್ಷರು : ನೀವು ಎಲ್ಲಾ ಪ್ರತಿ ಪಕ್ಷದಲ್ಲಿ ಕುಳಿತಿರುವ ಹಿರಿಯ ಮುಖಂಡರು, ಏನು ನಿಯಮಾವಳಿ ಇದೆ, ಲೋಕಸಭೆಯಲ್ಲಿ ಏನು ಅನುಸರಿಸುತ್ತಿದ್ದಾರೆ ಎಂಬುದನ್ನು

ನೋಡಿ ಒಂದು ಗಂಟೆ ಒಂದು ನಿಮಿಷ ಮುಂದಕ್ಕೆ ಹೋಗುವುದಿಲ್ಲ, ಅಲ್ಲಿಗೆ ಎಷ್ಟು ಕ್ವೊಶ್ಚನ್ಸ್ ಆಗುತ್ತದೆ ಅಷ್ಟಕ್ಕೆ ನಿಲ್ಲಿಸುತ್ತಾರೆ. ಒಬ್ಬರಿಗೆ ಒಂದು ಅದು ಯಾರು ಕೇಳಿರುತ್ತಾರೆ ಅವರಿಗೆ ಒಂದೇ ಒಂದು ಉಪ ಪ್ರಶ್ನೆ ಏಳುವುದಕ್ಕೆ ಅವಕಾಶ, ವಿಶೇಷ ಸಂದರ್ಭದಲ್ಲಿ ಎರಡು ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕೊಡುತ್ತಾರೆ. ನಿಯಮ ಏನು ಇಲ್ಲವೇನು? ನಿಮ್ಮಿಷ್ಟ ಬಂದ ರೀತಿಯಲ್ಲಿ ಈ ಸಭೆ ನಡೆಸುವುದಾದರೆ ಪ್ರಯೋಜನವಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಲೋಕಸಭೆ, ವರ್ಷಕ್ಕೆ ನೂರು ದಿವಸ ಸೇರುತ್ತದೆ ವಿಧಾನಸಭೆ ವರ್ಷಕ್ಕೆ 20 ದಿನ ಸೇರುವುದು ಕಷ್ಟ ಇದೆ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ತಾವು ಆದೇಶ ಕೊಟ್ಟು ಬಿಡುತ್ತೀರಿ, ನಾವು ಮತ್ತೆ ಅದನ್ನು ಪ್ರಶ್ನೆ ಮಾಡುವುದಕ್ಕೆ ಬರುವುದಿಲ್ಲ, ಉಪ ಪ್ರಶ್ನೆಗಳಿಗೆ ಬೇರೆ ಯಾರಿಗೂ ಅವಕಾಶ ಕೊಡುವುದಿಲ್ಲವೆಂದು ಹೇಳಿದಿರಿ, ಬಹಳ ದೊಡ್ಡ ಕಷ್ಟವಾಗುತ್ತದೆ, ನಾನು ತಮ್ಮಲ್ಲಿ ಅತ್ಯಂತ ನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ, ತಮ್ಮ ಕಾರ್ಯಾಲಯಕ್ಕೆ ತಾವು ಸೂಚನೆ ಕೊಡಬೇಕು. ನಾವು ಪಟ್ಟಿ ತಯಾರು ಮಾಡುವಾಗ ಕ್ಷೇತ್ರಗಳಿಗೆ ಸಂಬಂಧಪಟ್ಟ ಹಾಗೆ ಅರ್ಧ ಭಾಗ ಪ್ರಶ್ನೆಗಳಿರಬೇಕು. ಉಳಿದರ್ಧ ಪ್ರಶ್ನೆಗಳು ಏನು ಇರುತ್ತವೆ ಅವು ಸಾರ್ವಜನಿಕ ಮಹತ್ವ ಇರುವಂಥಾಗಬೇಕು. ಸಾರ್ವಜನಿಕ ಮಹತ್ವದ ವಿಷಯಗಳು ಇದ್ದಾಗ ಯಾರಾದರೂ ಒಬ್ಬರು, ಇಬ್ಬರು, ಎದ್ದರೆ ಪ್ರಶ್ನೆಯ ಮಹತ್ವ ನೋಡಿಕೊಂಡು ಸದಸ್ಯರ ಹಿನ್ನೆಲೆ ನೋಡಿಕೊಂಡು ತಾವು ತಮ್ಮ ವಿವೇಚನೆಯನ್ನು ಉಪಯೋಗ ಮಾಡಿ ಕಳುಹಿಸಬೇಕಾಗುತ್ತದೆ. ಹಿಂದೆ ಎಲ್ಲಾ ನಾವು ಒಂದು ಗಂಟೆಗೆ ಮುಗಿಸುತ್ತಿದ್ದೆವು. ಒಂದು ಗಂಟೆಗೆ ಮುಗಿಸುವುದಕ್ಕೆ ನಾವು ತಮಗೆ ಸಹಕಾರ ಕೊಡುತ್ತೇವೆ. ಆದರೆ ಬೇರೆಯವರಿಗೆ ಅವಕಾಶ ಕೊಡುವುದಿಲ್ಲವೆಂದು ತಾವು ಪತ್ರ ಹೊರಡಿಸಿದರೆ ಬಹಳ ಕಷ್ಟ.

ಅಧ್ಯಕ್ಷರು : ಇಲ್ಲ, ಎರಡೆರಡು ಗಂಟೆಯಾದರೂ ಮುಗಿಯುತ್ತಿಲ್ಲ. ಈಗ ಏನೆಂದರೆ, ಮಹತ್ವದ ಪ್ರಶ್ನೆ ಇದ್ದರೆ ಅದಕ್ಕೆ ಒಂದೆರಡು ಉಪ ಪ್ರಶ್ನೆ ಕೇಳುವುದಕ್ಕೆ ಬೇರೆಯವರಿಗೆ ಅವಕಾಶ ಮಾಡಿಕೊಡೋಣ. ಆದರೆ ಇಡೀ ಸಭೆಯೇ ಎದ್ದು ಎಲ್ಲರೂ ಸಹ ಕೇಳಬೇಕು ಎಂದರೆ, ಎಲ್ಲರೂ ನಿಂತುಕೊಂಡರೆ ಸಮಯ ಹಾಳಾಗುವುದಿಲ್ಲವೇ? ಇದಕ್ಕೇನು ಮಾಡುವುದು ಹೇಳಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ತಮ್ಮ ಕಷ್ಟ ತಮ್ಮ ನೋವು ನಮಗೆ ಅರ್ಥವಾಯಿತು, ತಮ್ಮೊಟ್ಟಿಗೆ ನಾವು ಸಹಕರಿಸುತ್ತೇವೆ. ಆದರೆ ತಾವು ಸಾರಾಸಗಟಾಗಿ ಯಾರಿಗೂ ನಾನು ಅವಕಾಶ ಕೊಡುವುದಿಲ್ಲವೆಂದು ಹೇಳಿದರೆ ಕಷ್ಟವಾಗುತ್ತದೆ, ಅನೇಕ ವಿಷಯಗಳು ಹಾಗೆಯೇ ಹೊರಟು ಹೋಗುತ್ತವೆ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹೇಳಿದ ಹಾಗೆ ಕೆಲವು ಸಾರಿ ಪ್ರಶ್ನೆಗಳು ಅನ್‌ಸ್ಟಾರ್ಡ್ ಆಗಿದ್ದರೆ, ಆ ವಿಷಯ ಸಾರ್ವಜನಿಕ ಮಹತ್ವದ್ದು ಇದ್ದರೆ, ಕಷ್ಟ. ಆದುದರಿಂದ ತಾವು ಸ್ವಲ್ಪ

ಅದನ್ನು ಹಿಂದಕ್ಕೆ ಪಡೆದುಕೊಂಡರೆ ಸದನಕ್ಕೆ ಒಳ್ಳೆಯದಾಗುತ್ತದೆಂದು ನಾನು ಹೇಳಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರು, ಯಾವುದೇ ಪ್ರಶ್ನೆಗೆ ಉಪ ಪ್ರಶ್ನೆಯನ್ನು ಬೇರೆಯವರು ಕೇಳಲಿ; ಆದರೆ ನಾಲ್ಕು ಉಪ ಪ್ರಶ್ನೆಗಳ ಮೇಲೆ ಅವಕಾಶ ಕೊಡುವುದಕ್ಕಾಗುವುದಿಲ್ಲ, ಅದಕ್ಕೆ ಸಹಕರಿಸಬೇಕು. ಒಂದು ನಿಯಮಾವಳಿಗೆ ಗಟ್ಟಿಯಾಗಿ ಬಿಡೋಣ. ಬೇರೆ ಯಾರಾದರೂ ಪ್ರಮುಖರು ನಿಂತು ಅವರ ಅನುಭವದಲ್ಲಿ ಒಂದು ಎರಡು ಪ್ರಶ್ನೆಗಳಿದ್ದರೆ ಅವಕಾಶ ಮಾಡೋಣ, ಅದನ್ನೇ ಎಲ್ಲರೂ ಕೇಳುವುದಕ್ಕೆ ಬಯಸುತ್ತಾರೆ, ಅದು ಆಗುವುದಿಲ್ಲ, ಪ್ರಶ್ನೋತ್ತರವನ್ನು ನಿಗದಿತ ವೇಳೆಯಲ್ಲಿ ಮುಗಿಸಲಿಕ್ಕೆ ಆಗುವುದಿಲ್ಲ, ದಯಮಾಡಿ ಎಲ್ಲರೂ ಸಹಕರಿಸಬೇಕು. ವಿಶೇಷವಾದ ಸಮಯದಲ್ಲಿ ಬೇರೆಯವರಿಗೆ ಒಂದಿಬ್ಬರಿಗೆ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಎಲ್ಲದಕ್ಕೂ ಅವಕಾಶ ಕೊಡುವುದು ಬೇಡ, ರಾಜ್ಯಮಟ್ಟದ್ದು, ಬಹಳ ಪ್ರಮುಖವಾಗಿರುವುದಕ್ಕೆ ತಾವು ಅವಕಾಶ ಕೊಡಿ.

ಅಧ್ಯಕ್ಷರು : ಆಯಿತು, ಮಾನ್ಯ ಸದಸ್ಯರಾದ ಶ್ರೀ ರಮೇಶ್ ಕುಮಾರ್‌ರವರು ಏನು ಸಲಹೆ ಕೊಟ್ಟಿದ್ದಾರೆ ಅದನ್ನು ಒಪ್ಪಿದ್ದೇನೆ, ಯಾವುದೇ ಸಂದರ್ಭದಲ್ಲಿ ಅವರಲ್ಲದೆ ಬೇರೆಯವರಿಗೂ ಇಬ್ಬರು ಪ್ರಮುಖರಿಗೆ ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ಸಹಕರಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರು ಹೇಳಿದ್ದು ಇವತ್ತು ಉಪ ಪ್ರಶ್ನೆ ಕೇಳಬೇಡಿ ಎಂದು ಹೇಳಿದ್ದು, ಮುಂದಿನ ದಿವಸಕ್ಕೆ ಅವರು ಬೇಡ ಎನ್ನಲಿಲ್ಲ ನೀವೇ ಊಹೆ ಮಾಡಿಕೊಂಡರೆ ಹೇಗೆ? ಇವತ್ತು ಬಹಳ ಉಪ ಪ್ರಶ್ನೆಗಳನ್ನು ಕೇಳಿದ್ದಾರೆ, ಮುಂದಕ್ಕೆ ಬೇಡ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಇವತ್ತು ಈ ಪ್ರಶ್ನೆಗೆ ಎಂದೇ.. ಆಯಿತು ಬಿಡಿ. ಮಾನ್ಯ ಸದಸ್ಯರು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ತಾವು ಸಹಾಯ ಮಾಡಿದ್ದಕ್ಕೆ ಧನ್ಯವಾದಗಳು.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಸದಸ್ಯರು ಕೇಳಿದಂಥ ಎಲ್ಲಾ ಪ್ರಶ್ನೆಗಳಿಗೂ ಕೂಡ ಈ ಹಂಗಾಮಿ ಬೆಳೆ ಕಟಾವಿಗೆ ತಾಲ್ಲೂಕು ಮಟ್ಟದಲ್ಲಿ ಕನಿಷ್ಠ 16 ಬೆಳೆ ಕಟಾವುಗಳನ್ನು ಮಾಡುತ್ತೇವೆ, ಹೋಬಳಿ ಮಟ್ಟದಲ್ಲಿ 10 ಮಾಡುತ್ತೇವೆ, ಗ್ರಾಮಪಂಚಾಯಿತಿಯಲ್ಲಿ ಎಂಟು ಮಾಡುತ್ತೇವೆ. ಇದಕ್ಕೆ ಕಟಾವು ಪ್ರಯೋಗಗಳಿಗೆ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಕೃಷಿ ಮತ್ತು ಕಂದಾಯ ಇಲಾಖೆಗಳ ಸಹಯೋಗದಿಂದ ನಾವು ಈ ರೀತಿಯ ಥ್ರೆಶೋಲ್ಡ್ ಯೀಲ್ಡ್ ಅನ್ನು ಮಾಡುತ್ತೇವೆ. ಇವತ್ತು ಬಹಳಷ್ಟು ಜಾಗದಲ್ಲಿ ಆಗಿಲ್ಲ, ಕಲಘಟಗಿಯಲ್ಲಿ ಆಗಿಲ್ಲ, ಹೊನ್ನಾಳಿಯಲ್ಲಿ ಆಗಿಲ್ಲ, ಎನ್ನುವಂಥದ್ದನ್ನು ಕೆ... ವು ಸದಸ್ಯರು ಹೇಳಿದರು. ನಾನು ಸ್ವತ: ಹೊನ್ನಾಳಿ ತಾಲ್ಲೂಕಿನ ರೈತರನ್ನು ಕ... ಊ ರೈತರ ಪ್ರತಿನಿಧಿ...ನ್ನು, ನನ್ನ ಕೊಠಡಿಗ... ...ಗೆಸಿ

ಪ್ರತಿಯೊಂದನ್ನೂ ಕೂಡ ನಮ್ಮ ಅಧಿಕಾರಿಗಳ ಜೊತೆಯಲ್ಲಿ ಅವರ ಜೊತೆಗೆ ಚರ್ಚೆ ಮಾಡಿದಾಗ ಅಲ್ಲಿ ಅದೇ ರೈತ ಇಷ್ಟೇ ಯೀಲ್ಡ್ ಬಂದಿದೆ ಎಂದು ಸಹಿ ಹಾಕಿದ್ದಾನೆ. ಮಾನ್ಯ ಸದಸ್ಯರು ಹೇಳಿದರು, ನಾನು ಒಬ್ಬ ರೈತ, ರೈತರಿಗೆ ನಾಲ್ಕು ಕಾಸು ಸಿಕ್ಕಬೇಕು ಎನ್ನುವವನಲ್ಲಿ ನಾನು ಮೊದಲಿಗೆ ಅವರೇ ಸಹಿ ಹಾಕಿ ಮತ್ತೆ ಸ್ಟ್ರೈಕ್ ಕುಳಿತುಕೊಂಡು ನನ್ನ ಹತ್ತಿರ ಬಂದು, ನಮ್ಮ ಅಧಿಕಾರಿಗಳಿಂದ ಆ ಫೈಲ್‌ಗಳನ್ನು ತೆಗೆದು ಅವರ ಮುಂದೆ ಇಟ್ಟಾಗ ಹೌದು ಹೌದು ನಾವು ಸಹಿ ಮಾಡಿದೆವು, ಎಂದು ಹೇಳಿದ್ದಾರೆ. ಒಟ್ಟಾರೆ ಈ ವರ್ಷ ಕೆಲವು ಜಿಲ್ಲೆಗಳಲ್ಲಿ ಬೆಳೆ ಹೆಚ್ಚಾಗಿದೆ. ಕೆಲವು ಕಡೆ ಬೆಳೆ ಬಂದಿರತಕ್ಕಂಥದ್ದನ್ನು ನೋಡಿ ಕೆಲವು ಕಡೆ ನಮಗೆ ಬಂದಿಲ್ಲ ಎನ್ನತಕ್ಕಂಥ ವಿಚಾರ ಇದೆ. ಈಗಾಗಲೇ ಕೆಲವು ಮಾನ್ಯ ಸದಸ್ಯರು ಮಾತನಾಡುತ್ತಾ ಮಾನ್ಯ ಮೋರೆಯವರು ಇದನ್ನು ಸಿ.ಓ.ಡಿ. ತನಿಖೆಗೆ ಕೊಡುತ್ತೇವೆಂದರು ಎಂದು ಹೇಳಿದರು ಈ ರೀತಿಯಾದ ತಪ್ಪುಗಳಾದರೂ ಆಗಿದ್ದಲ್ಲಿ ಇದನ್ನು ತನಿಖೆ ಮಾಡಲು ಸಿ.ಓ.ಡಿ.ಗೆ ಕೊಡುವುದಕ್ಕೆ ನಾನೇನು ಹಿಂದು ಮುಂದು ನೋಡುವುದಿಲ್ಲ. ಈ ರೀತಿಯಾದ ತಪ್ಪುಗಳು ಆಗಿದ್ದರೆ ಸಿ.ಓ.ಡಿ. ತನಿಖೆ ಖಂಡಿತ ಮಾಡಿಸುತ್ತೇನೆ. ಆದರೆ, ಆ ರೀತಿಯಾದ ತಪ್ಪುಗಳಾಗಿಲ್ಲವೆಂದು ನನ್ನ ಗಮನಕ್ಕೆ ಬಂದಿದೆ. ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ನಾನು ನೋಡಿರತಕ್ಕಂಥ ಫೈಲ್‌ಗಳ ಸಮೇತ ನಮ್ಮ ಅಧಿಕಾರಿಗಳನ್ನು ನಿಮ್ಮ ಹತ್ತಿರ ಕಳುಹಿಸಿಕೊಡುತ್ತೇನೆ. ತಾವು ಅದನ್ನು ನೋಡಬಹುದು. ಮತ್ತೆ ಇಲ್ಲಿ ಏನಾಗಿದೆ ಎಂದರೆ ಸಹಿ ಮಾಡಿರತಕ್ಕಂಥ ರೈತರೇ ಇವತ್ತಿನ ದಿವಸ ಅಲ್ಲಿ ಸ್ಟ್ರೈಕ್ ಮಾಡುತ್ತಿದ್ದಾರೆ. ಇವತ್ತಿನ ದಿವಸ ರೈತರಿಗೆ ನಾಲ್ಕು ಕಾಸು ಸಿಗಬೇಕು ಎನ್ನತಕ್ಕಂಥದ್ದರಲ್ಲಿ ಎರಡು ಮಾತಿಲ್ಲ. ಆದರೆ, ಇದಕ್ಕೆ ಸಹಿ ಮಾಡಿ ಮತ್ತೆ ಅವರೇ ಅಲ್ಲಿ ಸ್ಟ್ರೈಕ್ ಮಾಡಿದರೆ ಏನರ್ಥ? ನಾನು ಸ್ವತ: ನೋಡದೆ ಏನನ್ನು ಮಾತನಾಡುವುದಿಲ್ಲ. ಸ್ವತ: ನೋಡಿದ ಮೇಲೆ ಇದನ್ನು ನಾನು ಇಲ್ಲಿ ಮಾತನಾಡುತ್ತಿದ್ದೇನೆ. ಇನ್ನು ಮಾನ್ಯ ಕಾರ್‌ಜೋಳ್‌ರವರು ಕಬ್ಬನ್ನು ಬೆಳೆ ವಿಮೆ ವ್ಯಾಪ್ತಿಗೆ ಸೇರಿಸಬೇಕೆಂದು ಕೇಳಿದರು. ಆದರೆ, ಮುಧೋಳ್ ತಾಲ್ಲೂಕಿನ ಮತ್ತು ಇತರೇ ರೈತ ವರ್ಗದವರು ಕಬ್ಬಿಗೆ ವಿಮೆ ಬೇಡವೆಂದು ಕೋರ್ಟ್‌ಗೆ ಹೋಗಿ ಸ್ಟೇ ತಂದಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ನಿಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಬೇರೆ ದೃಷ್ಟಿ ಇಟ್ಟುಕೊಂಡು ನಾವು ಖಂಡಿತ ನಿಮ್ಮ ಹತ್ತಿರ ಇದನ್ನು ಪ್ರಸ್ತಾಪ ಮಾಡಿಲ್ಲ. ತಾವು ಈಗ ಉತ್ತರ ಕೊಡತಕ್ಕಂಥದ್ದು ನಾಳೆ ದಿವಸ ಪತ್ರಿಕೆಗಳಲ್ಲಿ ಬಂದಾಗ ನಾವ್ಯಾರೂ ಕೂಡ ನಮ್ಮ ಕ್ಷೇತ್ರಗಳಲ್ಲಿ ಓಡಾಡುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿ ಬರುತ್ತದೆ. ಆದ್ದರಿಂದ ನನ್ನ ಅನುಭವದಲ್ಲಿ ನಾನು ತಮಗೆ ಹೇಳುವುದೇನೆಂದರೆ, ನಾನು ಮತ್ತು ಮಾನ್ಯ ಉದಾಸಿಯವರು ಎಲ್ಲಾ ಕಡೆ ಪರಿಶೀಲನೆ ಮಾಡಿದ ಪ್ರಕಾರ ಅಲ್ಲಿರುವ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಮತ್ತು ಸಮಯಕ್ಕೆ ಸರಿಯಾಗಿ ಸರ್ವೆ ಮಾಡದೇ ಇರುವುದರಿಂದ

ಮತ್ತು ಸಮಯಕ್ಕೆ ಸರಿಯಾಗಿ ರಿಪೋರ್ಟ್ ಕೊಡದೇ ಗೊಂದಲವಾಗಿ ಇವತ್ತಿನ ದಿವಸ ಬೆಳೆ ವಿಮೆ ಹಣ ಸಿಕ್ಕಿಲ್ಲ. ಈ ಸಂದರ್ಭದಲ್ಲಿ ನಾವು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ತಾವು ಇದನ್ನು ಪರಿಶೀಲನೆ ಮಾಡಿಸಿ ಮತ್ತು ಇದರ ಬಗ್ಗೆ ತನಿಖೆ ಕೂಡ ಮಾಡಿಸಿ. ಮುಂದಾದರೂ ಬೆಳೆ ವಿಮೆ ಹಣ ಯಾರ್ಯಾರಿಗೆ ಸಿಕ್ಕಿಲ್ಲ ಮತ್ತು ಅನ್ಯಾಯವಾಗಿರತಕ್ಕಂಥವರಿಗೆ ಬೆಳೆ ವಿಮೆ ಹಣ ಕೊಡಿಸತಕ್ಕಂಥ ಪ್ರಯತ್ನ ಮಾಡಬೇಕು. ಬೇಕಾದರೆ ನಿಮ್ಮ ಛೇಂಬರ್‌ನಲ್ಲಿ ಒಂದು ಸಭೆ ಕರೆಯಿರಿ. ಇದಕ್ಕೆ ಸಂಬಂಧಪಟ್ಟಂಥ ಎಲ್ಲಾ ಮಾಹಿತಿಗಳನ್ನು ನಾವು ತಂದುಕೊಡುತ್ತೇವೆ. ಮತ್ತೆ ಇದರ ಬಗ್ಗೆ ಅಲ್ಲಿ ಚರ್ಚೆ ಮಾಡಿ ಇದಕ್ಕೊಂದು ಪರಿಹಾರವನ್ನು ಕಂಡುಹಿಡಿಯೋಣ. ಇದು ಬಿಜೆಪಿ ಮತ್ತು ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷದ ಪ್ರಶ್ನೆಯಲ್ಲ.

ಶ್ರೀ ಕೆ. ಶ್ರೀನಿವಾಸಗೌಡ : ರೈತರಲ್ಲಿ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷವೆಂಬುದೇನಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಈ ಸದನದ ಮುಖಾಂತರ ನಮಗೆ ಪರಿಹಾರ ಸಿಗುತ್ತದೆಂದು ರೈತರು ನಂಬಿಕೊಂಡಿರುತ್ತಾರೆ. ಆದ್ದರಿಂದ, ಅವರಿಗೆ ನಿರಾಶೆಯಾಗಬಾರದು.

ಶ್ರೀ ಕೆ. ಶ್ರೀನಿವಾಸಗೌಡ : ಹಿಂದೆ 272 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ, ಮತ್ತೆ ಈಗ 221 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಳೆದ ಮೂರು ವರ್ಷಗಳಿಂದ ಸಾವಿರಾರು ಕೋಟಿ ರೂಪಾಯಿಗಳಷ್ಟು ಬೆಳೆ ನಾಶವಾಗಿದೆ.

ಶ್ರೀ ಕೆ. ಶ್ರೀನಿವಾಸಗೌಡ : ಎಲ್ಲಿಯಾದರೂ ತಪ್ಪಾಗಿದ್ದರೆ ಅದನ್ನು ಸರಿಪಡಿಸುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಛೇಂಬರ್‌ನಲ್ಲಿ ಒಂದು ಸಭೆ ಕರೆಯಿರಿ. ಈ ಸಭೆಗೆ ಅಧಿಕಾರಿಗಳನ್ನು ಸಹ ಕರೆಯಿರಿ. ನಮ್ಮ ಹತ್ತಿರ ಇರತಕ್ಕಂಥ ದಾಖಲೆಗಳ ಜೊತೆಗೆ ನಿಮ್ಮ ಜೊತೆ ಚರ್ಚೆ ಮಾಡುತ್ತೇವೆ. ಆದ್ದರಿಂದ, ಇದಕ್ಕಿಂತ ಮುಂಚಿತವಾಗಿ ದಯವಿಟ್ಟು ಉತ್ತರ ಕೊಡುವುದಕ್ಕೆ ಹೋಗಬೇಡಿ.

ಶ್ರೀ ಕೆ. ಶ್ರೀನಿವಾಸಗೌಡ : ಆಗಬಹುದು. ಕಬ್ಬನ್ನು ಬೆಳೆ ವಿಮೆಗೆ ಸೇರಿಸಬಾರದೆಂದು ಮುಧೋಳ್ ತಾಲ್ಲೂಕಿನ ಮತ್ತು ಇತರೇ ರೈತರು ಸ್ಟೇ ತಂದಿದ್ದಾರೆ. ಆದ್ದರಿಂದ, ಕಬ್ಬು ಬೆಳೆ ವಿಮೆಗೆ ಬರುವುದಿಲ್ಲ. ಕಬ್ಬು ಬೆಳೆಗೆ ಬೆಳೆ ವಿಮೆ ಮಾಡಬಾರದೆಂದು ನಮ್ಮದೇನೂ ವಿರೋಧವಿಲ್ಲ. ಆದರೆ, ಇದಕ್ಕೆ ಸ್ಟೇ ತಂದಿರುವುದರಿಂದ ಇದನ್ನು ಮಾಡುವುದಕ್ಕೆ ಆಗುತ್ತಿಲ್ಲವೆಂದು ಹೇಳುತ್ತಿದ್ದೇನೆ. ಇವತ್ತಿನ ದಿವಸ ಯಾವುದೇ ಬೆಳೆ ವಿಮೆ ಯಾವುದೇ ರೀತಿಯ ಗೊಂದಲಗಳಿಲ್ಲದ ರೀತಿಯಲ್ಲಿ ಆಗಬೇಕೆಂಬುದು ನಮ್ಮ ಉದ್ದೇಶವಾಗಿದೆ. ಇದಕ್ಕಾಗಿ ತಾಲ್ಲೂಕು

ಮಟ್ಟದಲ್ಲಿ 5, 6, 12 ಸರ್ವೆ ನಂಬರ್‌ನ್ನು ಪ್ರತಿ ಪಂಚಾಯತಿ ವೈಜ್ ಮಾಡಿಸಿ ಇನ್ನು ಮುಂದಿನ ದಿನಗಳಲ್ಲಿ ಈ ಕೆಲಸವನ್ನು ಮಾಡುತ್ತೇವೆ ಎಂಬ ಮಾತನ್ನು ಈ ಸಮಯದಲ್ಲಿ ತಮ್ಮ ಮೂಲಕ ಈ ಸದನಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಗೊಂದಲ

ಅಧ್ಯಕ್ಷರು : ಈಗ ಮುಂದಿನ ಪ್ರಶ್ನೆಗೆ ಹೋಗೋಣ. ಮಾನ್ಯ ಸಿ.ಟಿ. ರವಿಯವರೇ, ನಿಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸರಿಯಾದ ಉತ್ತರ ಹೇಳಿಲ್ಲ.

ಅಧ್ಯಕ್ಷರು : ನೀವು ಬಯಸಿದ ರೀತಿಯಲ್ಲಿ ಉತ್ತರ ಹೇಳಿಸುವುದಕ್ಕೆ ನಮ್ಮಿಂದ ಆಗುವುದಿಲ್ಲ. ಈಗಾಗಲೇ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಈಗ ಮಾನ್ಯ ಸಿ.ಟಿ. ರವಿಯವರು ಪ್ರಶ್ನೆ ಕೇಳಿ.

ಗೊಂದಲ

ಶ್ರೀ ಎಂ.ಪಿ. ರೇಣುಕಾಚಾರ್ಯ : ಕಳೆದ 35 ದಿವಸಗಳಿಂದ ಹೊನ್ನಾಳಿಯಲ್ಲಿ ರೈತರು ಹಗಲು ರಾತ್ರಿ ಧರಣಿ ಸತ್ಯಾಗ್ರಹ ನಡೆಸುತ್ತಿದ್ದಾರೆ.

ಅಧ್ಯಕ್ಷರು : ಈ ರೀತಿಯಾದರೆ ಸಭೆ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರವಿಯವರೆ, ತಾವು ಈಗ ತಮ್ಮ ಪ್ರಶ್ನೆ ಕೇಳಿ. ನಾನು ಈಗ ಮುಂದಿನ ಪ್ರಶ್ನೆಗೆ ಹೋಗಿದ್ದೇನೆ.

ಶ್ರೀ ಎಂ.ಪಿ. ರೇಣುಕಾಚಾರ್ಯ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು.

ಗೊಂದಲ

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರು ಇಲ್ಲಿ ಇಲ್ಲವೆ? ಮಾನ್ಯ ಗೋವಿಂದ ಕಾರ್‌ಜೋಳ್‌ರವರೆ, ತಾವು ಉಪನಾಯಕರಾಗಿದ್ದೀರಿ, ಆದ್ದರಿಂದ ನಿಮ್ಮ ಸದಸ್ಯರುಗಳನ್ನು ಸ್ವಲ್ಪ ನಿಯಂತ್ರಣದಲ್ಲಿಡದಿದ್ದರೆ ನಾನು ಇದನ್ನು ಬಿಟ್ಟು ಓಡಿ ಹೋಗಬೇಕಾಗುತ್ತದೆ. ಬೇರೆ ಪ್ರಶ್ನೆಗಳಿಗೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲವೆಂದರೆ, ಅವಕಾಶ ಕೊಡಿ ಎಂದು ತಾವೇ ಹೇಳುತ್ತೀರಿ. ಆದರೆ ಎಲ್ಲರೂ ಎದ್ದು ನಿಂತುಕೊಂಡು ಗಲಾಟೆ ಮಾಡಿದರೆ ಏನರ್ಥ? ಆದ್ದರಿಂದ ನಿಮ್ಮ ಕಡೆಯ ಸದಸ್ಯರಿಗೆ ನೀವು ಸ್ವಲ್ಪ ಹೇಳಬೇಕು. ಇಲ್ಲಿನ ನಿಯಮಾವಳಿಗಳನ್ನು ಗಾಳಿಗೆ ತೂರಿ ಬಿಡಬೇಕೆ? ಈ ರೀತಿಯಾದರೆ ನಾನು ಸಭೆ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈಗ ಮಾನ್ಯ ರವಿಯವರು ತಮ್ಮ ಪ್ರಶ್ನೆ ಕೇಳಿ.

ಗೊಂದಲ

ಅಧ್ಯಕ್ಷರು : ದಯವಿಟ್ಟು ಎಲ್ಲರು ಕುಳಿತುಕೊಳ್ಳಬೇಕು. ಮಾನ್ಯ ರವಿಯವರೆ, ತಮ್ಮ ಪ್ರಶ್ನೆಯನ್ನು ಕೇಳಿ.

ರಾಸಾಯನಿಕ ಗೊಬ್ಬರಗಳಿಂದ ಭೂಮಿ ಫಲ ವತ್ತತೆ ಕೊರತೆ

58(1448) ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಸಾಯನಿಕ ಕ್ರಿಮಿನಾಶಕ ಹಾಗೂ ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಭೂಮಿ ತನ್ನ ಸತ್ವ ಕಳೆದುಕೊಂಡು ಬರಿದಾಗುತ್ತಿರುವುದು ಹಾಗೂ ಜಲ, ವಾಯು ಮಾಲಿನ್ಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕ ಬಳಕೆಯಿಂದ ರೈತರ ಉತ್ಪಾದನಾ ವೆಚ್ಚ ಹೆಚ್ಚುತ್ತಿದ್ದು ಉತ್ಪಾದಕತೆ ಕಡಿಮೆಯಾಗುತ್ತಿರುವುದು ಸರ್ಕಾರ ಗಮನಿಸಿದೆಯೇ;

ಇ) ಹಾಗಿದ್ದಲ್ಲಿ, ಭೂಮಿಯ ಸತ್ವ ಕಾಪಾಡಲು ಹಾಗೂ ರೈತರ ಉತ್ಪಾದನಾ ವೆಚ್ಚ ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಸಾವಯವ ಕೃಷಿಯಿಂದ ಭೂಮಿ ಸತ್ವ ಹೆಚ್ಚಿ, ಮಾಲಿನ್ಯ ಕಡಿಮೆಯಾಗಿ ರೈತನ ವೆಚ್ಚ ತಗ್ಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಈ ಪದ್ಧತಿಯನ್ನು ಸಾಧ್ಯವಿರುವಡೆ ವ್ಯಾಪಕವಾಗಿ ಜಾರಿಗೆ ತಂದು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ;

ಊ) ಸಾವಯುವ ಗೊಬ್ಬರದ ಮಾಲಿಕರಿಗೆ ಸರ್ಕಾರ ನೀಡುತ್ತಿರುವ ಸಹಾಯವೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಹೌದು.

ಆ) ಹೌದು.

ಇ) ಭೂಮಿಯ ಸತ್ವ ಕಾಪಾಡಲು ಹಾಗೂ ರೈತರ ಉತ್ಪಾದನಾ ವೆಚ್ಚ ಕಡಿಮೆ ಮಾಡಲು ಸರ್ಕಾರವು ಸಾವಯವ ಗೊಬ್ಬರಗಳ ಬಳಕೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ಸಾವಯವ ಗೊಬ್ಬರಗಳನ್ನು ತಮ್ಮಲ್ಲೆ ಲಭ್ಯವಿರುವ ಸಂಪನ್ಮೂಲಗಳಿಂದ ಸ್ವತ: ತಯಾರಿಸಿಕೊಳ್ಳಲು ಉತ್ತೇಜನ ನೀಡಲಾಗುತ್ತಿದೆ. ಕಾಂಪೋಸ್ಟ್ ಘಟಕ, ಎರೆಹುಳು ಗೊಬ್ಬರಗಳ ಘಟಕ ನಿರ್ಮಾಣಕ್ಕೆ, ಹಸಿರೆಲೆ ಗೊಬ್ಬರ ಬೀಜಗಳ ವಿತರಣೆಗೆ ಸಹಾಯಧನ ನೀಡಲಾಗುತ್ತಿದೆ ಕಡಿಮೆ ವೆಚ್ಚದ ಜೈವಿಕ ಪೀಡೆನಾಶಕಗಳು, ಜೈವಿಕ ಗೊಬ್ಬರಗಳು, ಸಾವಯವ ಗೊಬ್ಬರಗಳು, ಸಸ್ಯಜನ್ಯ ಕೀಟನಾಶಕಗಳು, ಜೈವಿಕ ನಿಯಂತ್ರಣಕಾರಗಳು ಇವುಗಳ ಬಳಕೆಗೆ ಪ್ರೋತ್ಸಾಹ ನೀಡುವುದರ ಜೊತೆಗೆ ಸಹಾಯಧನವನ್ನು ಸಹಾ ನೀಡಲಾಗುತ್ತಿದೆ.

ಈ) ಹೌದು.

ಉ) ಸಾವಯವ ಕೃಷಿಯನ್ನು ಉತ್ತೇಜಿಸಲು ಸರ್ಕಾರವು ಸಾವಯವ ಕೃಷಿ ನೀತಿಯನ್ನು ಮಾರ್ಚ್ 2004ರ ಮಾಹೆಯಲ್ಲಿ ಘೋಷಿಸಿದೆ. ಮಳೆಯಾಶ್ರಿತ ಮತ್ತು ಬರಪೀಡಿತ ಪ್ರದೇಶಗಳಲ್ಲಿ ಸಾವಯವ ಕೃಷಿ ಪದ್ಧತಿಯ ಅಳವಡಿಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಸಾವಯುವ ಕೃಷಿ ನೀತಿಯು ವಿವಿಧ ಧ್ಯೇಯೋದ್ದೇಶಗಳನ್ನು ಹಾಗೂ ಉತ್ತೇಜನ ಮಾರ್ಗೋಪಾಯುಗಳನ್ನು ಕಾರ್ಯಗತಗೊಳಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಅಧಿಕಾರಯುಕ್ತ ಸಮಿತಿಗಳನ್ನು ರಚಿಸಲಾಗಿದೆ. 2004-05ನೇ ಸಾಲಿನಿಂದ ವಿವಿಧ ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇಲಾಖೆಯು ವಿವಿಧ ಯೋಜನೆಗಳಡಿಯಲ್ಲಿ ಎರೆಹುಳು ಗೊಬ್ಬರ ತಯಾರಿಕೆಗೆ ಹಾಗೂ ಕಾಂಪೋಸ್ಟ್ ಗೊಬ್ಬರ ತಯಾರಿಕೆಗೆ ಪ್ರೋತ್ಸಾಹ ಧನ ನೀಡುತ್ತಿದೆ. ಪ್ರತಿ ಎರೆಹುಳು ಗೊಬ್ಬರ ಘಟಕ ನಿರ್ಮಾಣಕ್ಕೆ ರೂ.1,000.00 ಹಾಗೂ ಕಾಂಪೋಸ್ಟ್ ಗೊಬ್ಬರ. ತೊಟ್ಟಿ ನಿರ್ಮಾಣಕ್ಕೆ ರೂ. 3,000-00ಗಳ ಪ್ರೋತ್ಸಾಹ ಧನ ನೀಡಿ ಉತ್ತೇಜಿಸಲಾಗುತ್ತಿದೆ. ಗುಣ ಮಟ್ಟದ ಸಾವಯವ ಗೊಬ್ಬರ ತಯಾರಿಕೆಗೆ ತಾಂತ್ರಿಕತೆಯನ್ನು ರೈತರಿಗೆ ಇಲಾಖೆಯ ಕ್ಷೇತ್ರ ವಿಸ್ತರಣಾ ಸಿಬ್ಬಂದಿಯ ಮೂಲಕ ನೀಡಲಾಗುತ್ತಿದೆ.

ಶ್ರೀ ಸಿ.ಟಿ. ರವಿ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ, ಆದರೆ, ರಾಸಾಯನಿಕ ಕ್ರಿಮಿನಾಶಕ ಮತ್ತು ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಭೂಮಿ ತನ್ನ ಸತ್ವವನ್ನು ಯಾವಾಗಿನಿಂದ ಕಳೆದುಕೊಳ್ಳುವುದಕ್ಕೆ ಪ್ರಾರಂಭವಾಯಿತೆಂಬುದರ ಬಗ್ಗೆ ಇವರು ವಿವರಗಳನ್ನೇನೂ ಕೊಟ್ಟಿಲ್ಲ. ಉತ್ಪಾದನೆ ವೆಚ್ಚ ಜಾಸ್ತಿಯಾಗಿರುವುದರಿಂದ ರೈತ ನಷ್ಟ ಅನುಭವಿಸಿರುವುದು ಮತ್ತು ರೈತ ಸಾಲಗಾರನಾಗುವುದಕ್ಕೆ ಪ್ರಮುಖ ಕಾರಣವಾಗಿರುವುದರ ಜೊತೆಗೆ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಬಳಕೆಯು ಕಾರಣವೆಂಬುದನ್ನು ಗಮನಿಸಿದೆ ಎಂದು ಸರ್ಕಾರ ಹೇಳಿದೆ. ಈ ರೀತಿ ಇದ್ದಾಗ, ಇವತ್ತಿನ ದಿವಸ ರೈತನ ಸಂಕಷ್ಟದ ಪರಿಸ್ಥಿತಿಗೆ ಒಂದು ರೀತಿಯಲ್ಲಿ ಪರೋಕ್ಷವಾಗಿ ಕೃಷಿ ಇಲಾಖೆಯೂ ಕೂಡ ಹೊಣೆಯಾಗಬೇಕಾಗುತ್ತದೆ. ಈ ಒಂದು ನಿಟ್ಟಿನಲ್ಲಿ ರೈತನ ನೆರವಿಗೆ ಕ್ರಮ ಕೈಗೊಳ್ಳಲಾಗುತ್ತದೆಯೇ ಎಂಬುದನ್ನು ಮಾನ್ಯ ಕೃಷಿ ಸಚಿವರು ಇಲ್ಲಿ ಹೇಳಬೇಕು.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ರಾಸಾಯನಿಕ ಗೊಬ್ಬರ ಹಾಗೂ ಔಷಧಗಳಿಂದ ಆರೋಗ್ಯದ ಮೇಲೆ ಪ್ರಭಾವ ಬೀರತಕ್ಕಂಥದ್ದು ನಿಜ. ಆದರೆ, ನಮ್ಮ ದೇಶದಲ್ಲಿ ಹಿಂದೆ 36 ಕೋಟಿ ಜನಸಂಖ್ಯೆ ಇದ್ದಂಥದ್ದು ಈಗ 105 ಕೋಟಿಗೆ ಮುಟ್ಟಿದೆ. ಆಹಾರ ಧಾನ್ಯಗಳನ್ನು ನಾವು ಬೆಳೆಯದೇ ಹೋದರೆ, ಈ ದೇಶದ ಇಷ್ಟೊಂದು ಜನರಿಗೆ ಆಹಾರ ಕೊಡುವುದು ಕಷ್ಟವಾಗುತ್ತದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ನೇರವಾಗಿ ಹೇಳವುದುಕ್ಕೆ ಇಷ್ಟಪಡುತ್ತೇನೆ.

ನಾನೂ ಕೂಡ ಅನೇಕ ಗೊಬ್ಬರದ ಕಾರ್ಖಾನೆಗಳ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಇವತ್ತಿನ ದಿವಸ ಈ ಕಷ್ಟವಿದೆ. ಆದರೆ ಇನ್ನೊಂದು ಕಡೆ ಜನಸಂಖ್ಯೆ ಹೆಚ್ಚುತ್ತಾ ಹೋಗುತ್ತಿದೆ. ಇವೆರೆಡರ ಮಧ್ಯೆ ಜನಸಂಖ್ಯೆಯ ಬೆಳವಣಿಗೆಯನ್ನು ನಿಲ್ಲಿಸತಕ್ಕಂಥ ಪರಿಸ್ಥಿತಿ ಕೂಡ ಅಷ್ಟೇ ಮುಖ್ಯವಾಗಿ ಆಗಬೇಕಾಗಿದೆ. ಇವತ್ತಿನದಿವಸ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಇದರಲ್ಲಿ ಸಾವಯವ ಗೊಬ್ಬರವನ್ನು ಪ್ರತಿ ತಾಲ್ಲೂಕಿನಲ್ಲಿ 100 ಹೆಕ್ಟೇರ್ ಜಮೀನಿನಲ್ಲಿ ಮಾಡತಕ್ಕಂಥದ್ದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಮತ್ತೆ ಇದರ ಬಗ್ಗೆ ರೈತರಲ್ಲಿ ಮನದಟ್ಟು ಮಾಡುವಂಥ ಕೆಲಸವನ್ನೂ ಕೂಡ ಮಾಡಿದ್ದೇವೆ. ಜನಸಂಖ್ಯೆಯನ್ನು ಕಡಿಮೆ ಮಾಡುವುದರ ಜೊತೆಗೆ ಸಾವಯವ ಗೊಬ್ಬರದ ಉತ್ಪಾದನೆ ಹೆಚ್ಚಿಗೆ ಮಾಡಿ ರೈತರಿಗೆ ಒದಗಿಸುವಂಥ ಕೆಲಸಕ್ಕಾಗಿ ಇಡೀ ರಾಜ್ಯದಲ್ಲಿ ಇದರ ಬಗ್ಗೆ ಕ್ರಮಗಳನ್ನು ಜರುಗಿಸಲಾಗಿದೆ ಎಂಬ ಮಾತನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಇಲ್ಲಿ ಜನಸಂಖ್ಯೆ ಹೆಚ್ಚಳ ಮಾತ್ರ ಇದಕ್ಕೆ ಕಾರಣವಲ್ಲ. ಇವತ್ತಿನ ದಿವಸ ಕೃಷಿ ಇಲಾಖೆ ಬಹುರಾಷ್ಟ್ರೀಯ ಕಂಪನಿಗಳ ಜೊತೆಯಲ್ಲಿ ಶಾಮೀಲಾಗಿ ಮತ್ತು ಅವರು ಕೊಡತಕ್ಕಂಥ ಆಮೀಷಕ್ಕೆ ಒಳಗಾಗಿ ರೈತರಿಗೆ ಬೇಡವಾದಂಥ ಮತ್ತು ಭೂಮಿಯನ್ನು ಬರಡು ಮಾಡತಕ್ಕಂಥ ರಾಸಾಯನಿಕ ಗೊಬ್ಬರಗಳ ಬಳಕೆಗೆ ನಿರಂತರವಾಗಿ ಉತ್ತೇಜನ ಕೊಡುತ್ತಾ ಬಂದಿದ್ದಾರೆ. ಇವತ್ತಿನ ದಿವಸ ಇದರ ಉಪಯೋಗದಿಂದ ದೀರ್ಘವಾದ ಪರಿಣಾಮವಾಗುತ್ತದೆಂದು ಅರಿವಿಗೆ ಬಂದಾಗ ಇದರ ಬಗ್ಗೆ ಯಾವುದೇ ಮುಲಾಜಿಗೆ ಒಳಗಾಗಬಾರದು. ಮತ್ತೆ ಇವತ್ತಿನ ದಿವಸ ಆಹಾರ ಉತ್ಪಾದನೆ ಹೆಚ್ಚಾಗಬೇಕೆಂಬುದು ನಿಜವಾಗಿದ್ದರೂ ಕೂಡ ಸಹಜವಾಗಿರತಕ್ಕಂಥ ಈ ಒಂದು ಸಾವಯವ ಗೊಬ್ಬರದಿಂದಲೇ ಆಹಾರ ಉತ್ಪಾದನೆಯನ್ನು ಜಾಸ್ತಿ ಮಾಡಬಹುದು. ಈ ರೀತಿ ಮಾಡುವುದಕ್ಕೆ ಅವಕಾಶವಿದ್ದರೂ ಕೂಡ ಮತ್ತೆ ರಾಸಾಯನಿಕ ಗೊಬ್ಬರಗಳನ್ನು ಉಪಯೋಗ ಮಾಡತಕ್ಕಂಥದ್ದು ಸರಿಯಲ್ಲ. ನುಸಿಪೀಡೆ ರೋಗ ಬಂದಾಗ ಯಾವುದೋ ಔಷಧಿಯನ್ನು ತಂದು ಇರತಕ್ಕಂಥ ತೆಂಗಿನ ಮರಗಳನ್ನು ಸಾಯುವಂತೆ ಮಾಡಿದರು. ಮತ್ತೆ ಇದನ್ನು ಯಾರೋ ಅನುಕೂಲಕ್ಕೆ ಮಾಡಿದ್ದು, ಇದು ಕೂಡ ಆ ರೀತಿ ಆಗಬಹುದಾಗಿದೆ. ಆದ್ದರಿಂದ, ಇದಕ್ಕೆ ಅವಕಾಶ ಕೊಡದೇ ನಿರ್ದಾಕ್ಷಿಣ್ಯವಾಗಿ ರಾಸಾಯನಿಕ ಗೊಬ್ಬರದ ಉಪಯೋಗವನ್ನು ದೂರಗಾಮಿ ಪರಿಣಾಮ ಮತ್ತು ರೈತನಿಗೆ ವೈಯಕ್ತಿಕವಾಗಿ ಆಗತಕ್ಕಂಥ ಹಾನಿ ಮತ್ತು ಭೂಮಿ ತಾಯಿ ಇವತ್ತಿನದಿವಸ ಸತ್ವ ಕಳೆದುಕೊಳ್ಳುತ್ತಿರುವುದನ್ನು ಗಮನಿಸಿ ಇದರ ಉಪಯೋಗಕ್ಕೆ ನಿಷೇಧ ಹಾಕಬೇಕು. ಇದಕ್ಕೆ ಕೃಷಿ ಇಲಾಖೆ ತಯಾರಿದೆಯೇ ಎಂಬ ಪ್ರಶ್ನೆಯನ್ನು ಮಾನ್ಯ ಸಚಿವರ ಮುಂದಿಡುತ್ತೇನೆ. ಮತ್ತೆ ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದೇನೆಂದರೆ, ಕೇವಲ ಪುಸ್ತಕ ಓದಿರತಕ್ಕಂಥ ಇಲಾಖೆಯಲ್ಲಿರುವ

ತಜ್ಞರನ್ನು ಅಷ್ಟೇ ಬಳಸಿಕೊಳ್ಳದೆ ಸಾವಯವ ಕೃಷಿಯಲ್ಲಿ ಸಾಧನೆ ಮಾಡಿರತಕ್ಕಂಥ ಸಾಕಷ್ಟು ಜನ ಸಾಧಕರು ನಮ್ಮಲ್ಲಿದ್ದಾರೆ. ಇವರನ್ನು ಇದರಲ್ಲಿ ಬಳಸಿಕೊಂಡು ಸಾವಯವ ಕೃಷಿಯನ್ನು ವ್ಯಾಪಕಗೊಳಿಸುವುದಕ್ಕೆ ಮತ್ತು ಭೂಮಿಯ ಫಲವತ್ತತೆಯನ್ನು ಹೆಚ್ಚು ಮಾಡುವುದಕ್ಕೆ ಮತ್ತು ಇದರ ಜೊತೆಗೆ ರೈತ ಹೆಚ್ಚು ಉತ್ಪಾದನೆ ವೆಚ್ಚವಿಲ್ಲದೆ ಸಹಜವಾದ ರೀತಿಯಲ್ಲಿ ಉತ್ಪಾದನೆ ಮಾಡುವ ಕಡೆಗೆ ಕೃಷಿ ಇಲಾಖೆ ರೈತರಿಗೆ ಉತ್ತೇಜನ ಕೊಡಬೇಕು. ಈಗ ಕೊಡತಕ್ಕಂಥ ಒಂದು ಮತ್ತು ಮೂರು ಸಾವಿರ ರೂಗಳ ಸಹಾಯಧನ ಯಾವುದಕ್ಕೂ ಸಾಕಾಗುವುದಿಲ್ಲ. ಹಿಂದೆ ರೈತನಿಗೆ ಕೀಟನಾಶಕದ ಬಳಕೆ ಗೊತ್ತಿಲ್ಲದೆ ಇರುವಾಗ ಶೇಕಡ 50 ರಿಂದ 60ರಷ್ಟು ಸಬ್ಸಿಡಿ ಕೊಟ್ಟು ಇದರ ಹೆಚ್ಚು ಬಳಕೆಗೆ ಪ್ರೇರಣೆ ಕೊಟ್ಟರು. ಇದರ ಬಳಕೆಗೆ ಪ್ರೇರಣೆ ಕೊಟ್ಟವರು ಈಗ ಸಾವಯವ ಗೊಬ್ಬರದ ಬಳಕೆಗೆ ಕೊಡುತ್ತಿರುವ ಒಂದು ಮತ್ತು ಮೂರು ಸಾವಿರ ರೂಪಾಯಿ ಸಹಾಯಧನ ಏನೇನು ಸಾಲದು. ಆದ್ದರಿಂದ, ಈ ಸಹಾಯಧನವನ್ನು ಹೆಚ್ಚು ಮಾಡುವ ಬಗ್ಗೆ ಕೃಷಿ ಇಲಾಖೆ ಮತ್ತು ಕೃಷಿ ಸಚಿವರು ಯೋಚನೆ ಮಾಡಿದ್ದಾರೆಯೇ ಎಂಬುದರ ಬಗ್ಗೆ ತಮ್ಮ ಮೂಲಕ ಮಾನ್ಯ ಸಚಿವರಿಂದ ಉತ್ತರ ಪಡೆಯುವುದಕ್ಕೆ ಬಯಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ಈಗಾಗಲೇ ನಮ್ಮ ಡೆವಲಪ್‌ಮೆಂಟ್ ಕಮಿಷನರ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ ಸಾವಯವ ಗೊಬ್ಬರಗಳ ಉತ್ಪತ್ತಿ ಮತ್ತು ಅದನ್ನು ಉಪಯೋಗಿಸುವಂಥ ಕೆಲಸವನ್ನು ಇಡೀ ರಾಜ್ಯದಲ್ಲಿ ಕೈಗೆತ್ತಿಕೊಂಡಿದ್ದೇವೆ. ಮಾನ್ಯ ಸಿ.ಟಿ. ರವಿಯವರು ಹೇಳುವುದು ನಿಜ, ಇದನ್ನು ನಾವು ಹೆಚ್ಚು ಹೆಚ್ಚು ಅಳವಡಿಸಿಕೊಳ್ಳಲು ರೈತರು ಅದನ್ನು ಒಪ್ಪಿಕೊಳ್ಳಬೇಕು. ನಮ್ಮ ಭಾಗದಲ್ಲಿ ಏನಾದರೂ ಸಹಕಾರ ಸಂಘದಲ್ಲಿ ಕಾಂಪ್ಲೆಕ್ಸ್ ಗೊಬ್ಬರಗಳು ಇಲ್ಲದಿದ್ದರೆ ಆ ರಾತ್ರಿ ಸೊಸೈಟಿಗಳಿಗೆಲ್ಲಾ ರೈತರು ಮುತ್ತಿಗೆ ಹಾಕುತ್ತಾರೆ. ನಮ್ಮ ಭಾಗದಲ್ಲೂ ಕೂಡ ಆ ಗೊಬ್ಬರ ಇಲ್ಲದೆ ವ್ಯವಸಾಯ ಮಾಡುವುದಕ್ಕೆ ಆಗುವುದಿಲ್ಲವೆನ್ನತಕ್ಕಂಥ ಭಾವನೆಗೆ ರೈತ ತಲುಪಿ ಬಿಟ್ಟಿದ್ದಾನೆ. ಅದನ್ನು ನಾವು ಒಂದೇ ದಿವಸದಲ್ಲಿ ಮಾಡಿ ಮುಗಿಸುತ್ತೇವೆಂದು ಹೇಳುವುದಕ್ಕೆ ನಾನು ಇಚ್ಛೆಪಡುವುದಿಲ್ಲ. ಇದನ್ನು ಎಷ್ಟು ಸಾಧ್ಯವಿದೆ ಅಷ್ಟು ಸಾಧ್ಯತೆ ಮಾಡಿ ರೈತರನ್ನು ಒಪ್ಪಿಸಿ ಈ ಕೆಲಸ ಮಾಡಬೇಕಾಗುತ್ತದೆ. ಆ ಕೆಲಸವನ್ನು ನಮ್ಮ ಇಲಾಖೆಯ ವತಿಯಿಂದ ಮಾಡುತ್ತೇವೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಕರ್ನಾಟಕ ರಾಜ್ಯ ಬೀಜ ನಿಗಮದಿಂದ ಬೀಜ ಮಾರಾಟ

59(1083) ಶ್ರೀ ಶಿವಾನಂದ ನಾಯಕ್ (ಭಟ್ಕಳ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರೈತರಿಗೆ ಮಾರಾಟ ಮಾಡುವ ಬೀಜಗಳು ಬೀಜ ನಿಗಮದವರು ನಿಗದಿಪಡಿಸಿದ ದರಕ್ಕಿಂತ ಕಡಿಮೆ ದರದಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ದೊರಕುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ ಬೀಜ ನಿಗಮವನ್ನು ಯಾವ ಕಾರಣಕ್ಕಾಗಿ ಪ್ರಾರಂಭಿಸಲಾಗಿದೆ ಹಾಗೂ ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುವುದಿಲ್ಲವೇ (ವಿವರ ತಿಳಿಸುವುದು)?

ಶ್ರೀ ಶ್ರೀನಿವಾಸಗೌಡ ಕೆ. (ಕೃಷಿ ಸಚಿವರು)

ಅ) ಕರ್ನಾಟಕ ರಾಜ್ಯ ಬೀಜ ನಿಗಮದವರು ನಿಗದಿಪಡಿಸಿದ ಮಾರಾಟ ದರಕ್ಕಿಂತ ಕಡಿಮೆ ದರದಲ್ಲಿ ಬೀಜಗಳು ಮುಕ್ತ ಮಾರುಕಟ್ಟೆಯಲ್ಲಿ ದೊರಕುವ ಸಾಧ್ಯತೆ ಇದೆ.

ಆ) ರೈತರಿಗೆ ಉತ್ತಮ ಗುಣಮಟ್ಟದ ಬೀಜವನ್ನು ಪೂರೈಸುವ ಸಲುವಾಗಿ ಹಾಗೂ ಖಾಸಗೀ ಬೀಜ ಮಾರಾಟಗಾರರ ಶೋಷಣೆಯಿಂದ ರೈತರನ್ನು ಕಾಪಾಡುವ ಸಲುವಾಗಿ ಕರ್ನಾಟಕ ರಾಜ್ಯ ಬೀಜ ನಿಗಮವನ್ನು ಸ್ಥಾಪಿಸಲಾಗಿದೆ. ಇದರಿಂದಾಗಿ ಈವರೆಗೆ ಸರ್ಕಾರದ ಬೊಕ್ಕಸಕ್ಕೆ ಯಾವುದೇ ವಿಧವಾದ ನಷ್ಟ ಉಂಟಾಗಿರುವುದಿಲ್ಲ.

ಶ್ರೀ ಶಿವಾನಂದ ನಾಯಕ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ, ಈಗಾಗಲೇ ಅವರು ಒಪ್ಪಿಕೊಂಡಂತೆ ಮುಕ್ತ ಮಾರುಕಟ್ಟೆಯಲ್ಲಿ ಕಡಿಮೆ ದರದಲ್ಲಿ ಬೀಜ ಸಿಗುತ್ತದೆಂದು ಉತ್ತರವನ್ನು ಕೊಟ್ಟಿದ್ದಾರೆ. ರೈತರಿಗೆ ಎಲ್ಲಿ ಕಡಿಮೆ ದರದಲ್ಲಿ ಬೀಜ ಸಿಗುತ್ತದೆ ಅಲ್ಲಿ ಅವರು ಖರೀದಿ ಮಾಡುತ್ತಾರೆ. ಸರಿಯಾದ ರೀತಿಯ ಒಂದು ಕ್ವಾಲಿಟಿ ಇರುವುದಿಲ್ಲ, ಅದು ಸಂಸ್ಕರಣೆಯಾಗಿರುವುದಿಲ್ಲ ಆ ಬೀಜವನ್ನು ರೈತರು ಖರೀದಿ ಮಾಡಿ ಬೆಳೆಯನ್ನು ಬೆಳೆಯುವುದರಿಂದ ಹೆಚ್ಚಿನ ಒಂದು ಇಳುವರಿ ಸಿಗುತ್ತಿಲ್ಲ. ಸರ್ಕಾರವೇ ಆ ಒಂದು ದರಕ್ಕೆ ಒದಗಿಸಿಕೊಟ್ಟರೆ ರೈತರಿಗೆ ಹೆಚ್ಚು ಅನುಕೂಲವಾಗುತ್ತದೆ. ತಾವು ಈಗಾಗಲೇ 14 ರೂ.ಗಳಿಗೆ ಒಂದು ಕೆ.ಜಿ. ಯಂತೆ ಭತ್ತವನ್ನು ಕೊಡುತ್ತಿದ್ದೀರಿ. ಆದರೆ ಅದನ್ನು ಸರಿಯಾದ ಸಮಯಕ್ಕೆ ಕೊಡುತ್ತಿಲ್ಲ, ರೈತರ ಬೇಡಿಕೆ ಇರುವಂಥ ಎಲ್ಲಾ ತಳಿಯ ಬೀಜಗಳನ್ನು ತಾವು ಕೊಡುತ್ತಿಲ್ಲ ತಮ್ಮ ಇಲಾಖೆಯಿಂದ ರಾಶಿ ಎನ್ನುವ ಒಂದು ತಳಿಯನ್ನು ಮಾತ್ರ ಕೊಡುತ್ತಿದ್ದೀರಿ ರೈತರ ಬೇಡಿಕೆ ಇರುವಂಥದ್ದು ಜಯಾ, ಭದ್ರಾ ಮತ್ತು ಜ್ಯೋತಿ ಎನ್ನುವ ತಳಿಗಳು, ಇದನ್ನು ತಾವು ಒದಗಿಸಿಕೊಡುತ್ತಿಲ್ಲ. ತಾವು ಮೇ ತಿಂಗಳ ಮೊದಲನೆಯ ವಾರದಲ್ಲಿ ಕೊಡಬೇಕಾಗುತ್ತದೆ. ತಾವು ಮೇ ತಿಂಗಳ ಕೊನೆಯಲ್ಲಿ ಅಥವಾ ಜೂನ್, ಜುಲೈ ತಿಂಗಳಲ್ಲಿ ಕೊಡ... ರೈತರಿಗೆ

ಏನು ಅನುಕೂಲವಾಗುತ್ತಿಲ್ಲ, ತಾವು ಸಮಯಕ್ಕೆ ಸರಿಯಾಗಿ ಒದಗಿಸಿಕೊಡಬೇಕು. ರೈತರಿಗೆ ಮಾರುಕಟ್ಟೆಯಲ್ಲಿ ಯಾವ ದರಕ್ಕೆ ಸಿಗುತ್ತದೆ ಅದೇ ದರಕ್ಕೆ ಒದಗಿಸಿ ಕೊಡುವಂಥ ಕೆಲಸವನ್ನು ತಾವು ಮಾಡಬೇಕು. ನಾನು ತಮಗೆ ಮತ್ತೊಂದು ಪ್ರಶ್ನೆಯನ್ನು ಕೇಳಿದ್ದೆ, ತಾವು ಉತ್ತರವನ್ನು ಕೊಡಲಿಲ್ಲ. ಮಣ್ಣು ಪರೀಕ್ಷೆ ಕೇಂದ್ರದ ಬಗ್ಗೆ ನನ್ನ ಬೇಡಿಕೆ ಇದೆ, ನಮ್ಮ ಜಿಲ್ಲೆಯ ಶಿರ್ಶಿಯಲ್ಲಿ ಒಂದೇ ಒಂದು ಕೇಂದ್ರ ಇದೆ. ಇದಕ್ಕೆ ತಮ್ಮಿಂದ ಉತ್ತರ ಬರಲಿಲ್ಲ, ಅದಕ್ಕಾಗಿ ತಾವು ಉತ್ತರವನ್ನು ಕೊಡುವ ಸಂದರ್ಭದಲ್ಲಿ ಇದಕ್ಕೂ ಕೂಡ ಉತ್ತರವನ್ನು ಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ನಾವು ಭಟ್ಕಳದಿಂದ ಶಿರ್ಶಿಗೆ ಹೋಗಬೇಕಾದರೆ 110 ಕಿ.ಮೀ. ಆಗುತ್ತದೆ, ಕರಾವಳಿಯ 5 ತಾಲ್ಲೂಕುಗಳಿಗೆ ಅನುಕೂಲವಾಗುವ ಒಂದು ಪ್ರದೇಶವೆಂದರೆ ಹೊನ್ನಾವರ, ಹೊನ್ನಾವರ ತಾಲ್ಲೂಕಿನಲ್ಲಿ ಒಂದು ಮಣ್ಣು ಪರೀಕ್ಷಾ ಕೇಂದ್ರವನ್ನು ತೆರೆದರೆ ರೈತರಿಗೆ ಹೆಚ್ಚು ಅನುಕೂಲದ ಜೊತೆಗೆ ಲಾಭ ಕೂಡ ಆಗುತ್ತದೆ. ಅದಕ್ಕೂ ಸಹ ತಾವು ಉತ್ತರವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಾನಂದ್ ನಾಯಕ್‌ರವರು ಹೇಳಿದ ಹಾಗೆ ಮಾರ್ಕೆಟ್‌ನಲ್ಲಿ ಕೆಲವು ಖಾಸಗಿ ಕಂಪನಿಯವರು ಕೆಲವು ಬೀಜಗಳನ್ನು ಕಡಿಮೆ ದರದಲ್ಲಿ ಮಾರಾಟ ಮಾಡುತ್ತಾರೆ. ಆದರೆ ನಮ್ಮ ಬೀಜ ನಿಗಮದವರಿಗೆ ತಮ್ಮದೇ ಆದ ಇನ್‌ಫ್ರಾಸ್ಟ್ರಕ್ಚರ್ ಇದೆ, ಗೋಡೌನ್ ಇದೆ, ಇದೆಲ್ಲವನ್ನು ಲೆಕ್ಕ ಹಾಕಿ ಬೀಜದ ಬೆಲೆಯನ್ನು ಕಟ್ಟುತ್ತಾರೆ. ನಾನು ಹೋದಸಾರಿ ಕಡ್ಲೆಕಾಯಿಗೆ ಈ ತರಹ ಆದಾಗ ಸಂಬಂಧಪಟ್ಟ ತುಮಕೂರು ಜಿಲ್ಲೆಯ ಎಲ್ಲಾ ಶಾಸಕರನ್ನು ಕರೆದು ಚರ್ಚೆ ಮಾಡಿ ಅದನ್ನು ಕಡಿಮೆ ರೇಟ್ ಮಾಡಿಸಿರುತ್ತೇನೆ. ಮುಂದಿನ ದಿನಗಳಲ್ಲಿ ಸಮಯಕ್ಕೆ ಸರಿಯಾಗಿ ಮಳೆಯಾದ್ಯಾಗ ಯಾವ್ಯಾವ ಜಿಲ್ಲೆಯಲ್ಲಿ ಯಾವ್ಯಾವ ಬೀಜ ಬೇಕೋ ಅಲ್ಲಿ ಮೊದಲೇ ಗೊಬ್ಬರ ಹಾಗೂ ಬೀಜಗಳನ್ನು ಇಡುವಂಥ ಕೆಲಸವನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಣ್ಣು ಪರೀಕ್ಷಾ ಕೇಂದ್ರದ ಬಗ್ಗೆ ತಾವು ಒಂದು ಒಳ್ಳೆಯ ಪ್ರಶ್ನೆಯನ್ನು ಕೇಳಿರುತ್ತೀರಿ, ಇವತ್ತು ಆ ಪ್ರಶ್ನೆ ಇಲ್ಲದೆ ಇರುವುದರಿಂದ ಯಾವ ತರಹ ಮಾಡಬೇಕು ಎನ್ನುವುದರ ಬಗ್ಗೆ ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಅವರಿಗೆ ಸೂಚನೆಯನ್ನು ಕೊಟ್ಟು ತಮ್ಮನ್ನು ಸಂಪರ್ಕಿಸಿ ಆ ಕೆಲಸ ಮಾಡುವಂತೆ ಹೇಳುತ್ತೇನೆ.

ಶ್ರೀ ಶಿವಾನಂದ ನಾಯಕ್ : ಮಾನ್ಯ ಅಧ್ಯಕ್ಷರೆ, ನಾನು ತಳಿಯ ಬಗ್ಗೆ ಕೇಳಿದ್ದೇನೆ. ತಾವು ಒಂದೇ ರಾಸಿ ತಳಿ ಕೊಡುತ್ತಿದ್ದೀರಿ. ಉಳಿದ ತಳಿಗಳ ಬಗ್ಗೆ ರೈತರ ಬೇಡಿಕೆ ಇದೆ, ಅವುಗಳನ್ನು ಕೂಡ ಒದಗಿಸಿಕೊಡಬೇಕೆಂದು ನಾನು ತಮ್ಮನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಬೀಜಗಳು ನಮ್ಮಲ್ಲಿ ಎಲ್ಲಾ ಸಿಗುತ್ತವೆ. ಆ ಸಮಯದಲ್ಲಿ ನಿಮಗೆ ರಾಸಿ ತಳಿ ಬಂದಿರಬಹುದು, ಇವತ್ತು ಖಾಸಗಿ ಕಂಪನಿಗಳವರು ಭತ್ತ, ರಾಗಿ ಮಾಡುವುದಿಲ್ಲ. ಸೀಡ್ ಕಾರ್ಪೋರೇಶನ್‌ರವರನ್ನು ಬಿಟ್ಟರೆ ಖಾಸಗಿ ಕಂಪನಿಯವರು ಮಾಡುವುದಿಲ್ಲ. ಬೀಜ ನಿಗಮದವರು ಮಾತ್ರ ಮಾಡುವುದು ಖಾಸಗಿ ಕಂಪನಿಯವರು ಏಕೆ ಮಾಡುವುದಿಲ್ಲವೆಂದರೆ ಅವರಿಗೆ ಹೆಚ್ಚಿಗೆ ಲಾಭ ಬರುವುದಿಲ್ಲ. ಹೆಚ್ಚಿನ ಕ್ವಾಂಟಂ ಇರುತ್ತದೆ, ರೇಟ್ ಕಡಿಮೆ ಇರುತ್ತದೆ. ಅವರು ಕಡಿಮೆ ಇರುವುದನ್ನು ಮಾಡಿ ಜಾಸ್ತಿ ಹಣವನ್ನು ಮಾಡುವ ಕೆಲಸವನ್ನು ಅವರು ಮಾಡುತ್ತಾರೆ. ತಾವು ಹೇಳಿದಂತೆ ಯಾವ್ಯಾವ ಬೀಜಗಳು ಬೇಕು ಅವುಗಳನ್ನು ಮುಂದಿನ ದಿನಗಳಲ್ಲಿ ಸರಿಯಾದ ಸಮಯಕ್ಕೆ ಒದಗಿಸುವಂಥ ಕೆಲಸವನ್ನು ಮಾಡುತ್ತೇವೆಂದು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡುವ ಗೌರವಧನ

60(963) ಶ್ರೀಮತಿ ಶಕುಂತಲ ಟಿ. ಶೆಟ್ಟಿ (ಪುತ್ತೂರು) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಂಗನವಾಡಿ ಕಾರ್ಯಕರ್ತೆಯರಿಗೆ ಪ್ರಸ್ತುತ ನೀಡುತ್ತಿರುವ ಗೌರವಧನ ಎಷ್ಟು;

ಆ) ಸದರಿ ವೇತನದಲ್ಲಿ ರಾಜ್ಯ ಸರ್ಕಾರದ ಹಾಗೂ ಕೇಂದ್ರದ ಪಾಲು ಎಷ್ಟು;

ಇ) ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ ಎಷ್ಟು;

ಈ) ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವವರ ಸಂಖ್ಯೆ ಎಷ್ಟು;

ಉ) ರಾಜ್ಯವು ಎಲ್ಲಾ ರೀತಿಯ ಕೆಲಸಗಳಿಗೆ ಕನಿಷ್ಟ ವೇತನ ನಿಗದಿಪಡಿಸಿರುವುದು ನಿಜವೇ;

ಊ) ಹಾಗಿದ್ದಲ್ಲಿ ಇವರಿಗೆ ಈ ಕನಿಷ್ಠ ವೇತನವನ್ನು ಪಾವತಿಸದಿರಲು ಕಾರಣಗಳೇನು;

ಋ) ಈ ಬಗ್ಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು;

ೠ) ಅಂಗನವಾಡಿಗಳಿಗೆ ಪೂರೈಸುವ ಆಹಾರ ಸಾಮಗ್ರಿ ಗುಣಮಟ್ಟ ಕಳಪೆಯಾಗಿರುವುದು ನಿಜವೆ;

ಎ) ಇದನ್ನು ಎಲ್ಲಿಂದ ಖರೀದಿಸಲಾಗುವುದು. ಇವುಗಳನ್ನು ಖರೀದಿಸಲು ಇರುವ ಮಾನದಂಡಗಳೇನು;

ಏ) ಹೊಸದಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಮಂಜೂರಾದ ಅಂಗನವಾಡಿ (ಶಿಶು ಆಹಾರ) ಕೇಂದ್ರಗಳೆಷ್ಟು;

ಐ) ಇವುಗಳಿಗೆ ಅಂಗನವಾಡಿ ಕಾರ್ಯಕರ್ತೆಯರನ್ನು, ಸಹಾಯಕಿಯರನ್ನು ಹಾಗೂ ಮೇಲ್ವಿಚಾರಕಿಯರನ್ನು ನೇಮಕ ಮಾಡಿಕೊಳ್ಳಲಾಗುವುದೆ?

ಶ್ರೀಮತಿ ಭಾಗಿರಥೀ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) 40301

ಈ) 1775

ಉ) ನಿಜ

ಊ) ಅಂಗನವಾಡಿ ಕಾರ್ಯಕರ್ತೆಯರು ಗೌರವಧನ ಪಡೆಯುವ ಕಾರ್ಯಕರ್ತೆಯರಾಗಿದ್ದು ಅವರಿಗೆ ಕನಿಷ್ಟ ವೇತನ ನಿಗದಿಪಡಿಸಿರುವುದಿಲ್ಲ.

ಋ) ಅನ್ವಯಿಸುವುದಿಲ್ಲ.

ೠ) ನಿಜವಲ್ಲ.

ಎ) ಪ್ರಸಕ್ತ ಪದ್ಧತಿಯಂತೆ ತಾಲ್ಲೂಕ ಪಂಚಾಯಿತಿಗಳು ಅಂಗನವಾಡಿಗಳಿಗೆ ಅಗತ್ಯವಾದ ಆಹಾರ ಪದಾರ್ಥಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ನಿಯಮ 2000ದನ್ವಯ ಖರೀದಿಸಲಾಗುತ್ತಿದೆ. ಅಕ್ಕಿಯನ್ನು ಭಾರತೀಯ ಆಹಾರ ನಿಗಮದಿಂದ ಬಿ.ಪಿ.ಎಲ್. ದರದಲ್ಲಿ. ಖಾದ್ಯ ತೈಲವನ್ನು ಕರ್ನಾಟಕ ರಾಜ್ಯ ಸ್ವಾಮ್ಯಕ್ಕೆ ಒಳಪಟ್ಟ ಸಂಸ್ಥೆಯಾದ ಕರ್ನಾಟಕ ರಾಜ್ಯ ಎಣ್ಣೆ ಬೆಳೆಗಾರರ ಸಂಘದಿಂದ, ಎಆರ್‌ಇಎಫ್‌ನ್ನು ಕರ್ನಾಟಕ ರಾಜ್ಯ ಸ್ವಾಮ್ಯಕ್ಕೆ ಒಳಪಟ್ಟ ಸಂಸ್ಥೆಯಾದ ಕರ್ನಾಟಕ ಆಗ್ರೋಕಾರ್ನ್ ಸಂಸ್ಥೆ ಇವರಿಂದ ಶೇ. 50 ಭಾಗ, ಉಳಿದ ಶೇ.50 ಭಾಗವನ್ನು ಕ್ರಿಸ್ಟಿ ಫ್ರೈಡ್ ಗ್ರಾಮ ಇಂಡಸ್ಟ್ರೀಸ್ ಇವರಿಂದ ಖರೀದಿಸಲಾಗುತ್ತಿದೆ.

ಏ) ಹೊಸದಾಗಿ ಅಂಗನವಾಡಿ ಕೇಂದ್ರಗಳು ಮಂಜೂರಾಗಿರುವುದಿಲ್ಲ, ಸರ್ವ ಶಿಕ್ಷಣ ಅಭಿಯಾನದಡಿ 100 ವಿಶೇಷ ಶಾಲಾ ಪೂರ್ವ ಶಿಕ್ಷಣ ಕೇಂದ್ರಗಳನ್ನು ಪ್ರಾರಂಭಿಸಲಾಗಿರುತ್ತದೆ.

ಐ) ಇಲ್ಲ. ಈ ವಿಶೇಷ ಶಾಲಾಪೂರ್ವ ಶಿಕ್ಷಣ ಕೇಂದ್ರಗಳಿಗೆ 100 ಭೋಧಕಿಯರು ಮತ್ತು 100 ಸಹಾಯಕಿಯರನ್ನು ನೇಮಿಸಲಾಗಿರುತ್ತದೆ.

ಅನುಬಂಧ
ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕರಿಗೆ ನೀಡುತ್ತಿರುವ ಗೌರವಧನ ವಿವರ

ಕ್ರ. ಸಂ.	ವಿದ್ಯಾರ್ಹತೆ ವಿವರ	ಭಾರತ ಸರ್ಕಾರ ದಿಂದ ನೀಡುತ್ತಿರುವ ಗೌರವಧನ	ರಾಜ್ಯ ಸರ್ಕಾರ ದಿಂದ ನೀಡುತ್ತಿರುವ ಹೆಚ್ಚುವರಿ ಗೌರವಧನ	ಒಟ್ಟು
1.	ಎಸ್.ಎಸ್.ಎಲ್.ಸಿ. ಫೇಲ್	ರೂ. 938	ರೂ. 450	ರೂ. 1388
2.	ಎಸ್.ಎಸ್.ಎಲ್.ಸಿ. ಫೇಲ್ ಜೊತೆಗೆ 5 ವರ್ಷದ ಅನುಭವ	ರೂ. 969	ರೂ. 450	ರೂ. 1419
3.	ಎಸ್.ಎಸ್.ಎಲ್.ಸಿ. ಫೇಲ್ ಜೊತೆಗೆ 10 ವರ್ಷದ ಅನುಭವ	ರೂ. 1000	ರೂ. 450	ರೂ. 1450
4.	ಎಸ್.ಎಸ್.ಎಲ್.ಸಿ. ಉತ್ತೀರ್ಣ	ರೂ. 1000	ರೂ. 450	ರೂ. 1450
5.	ಎಸ್.ಎಸ್.ಎಲ್.ಸಿ. ಉತ್ತೀರ್ಣ ಜೊತೆಗೆ 5 ವರ್ಷ ಅನುಭವ	ರೂ. 1031	ರೂ. 450	ರೂ. 1481
6.	ಎಸ್.ಎಸ್.ಎಲ್.ಸಿ. ಉತ್ತೀರ್ಣ ಜೊತೆಗೆ 10 ವರ್ಷದ ಅನುಭವ	ರೂ. 1063	ರೂ. 450	ರೂ. 1513.
7.	ಅಂಗನವಾಡಿ ಸಹಾಯಕೀಯರು	ರೂ. 500	ರೂ. 225	ರೂ. 725

ಶ್ರೀಮತಿ ಶಕುಂತಲ ಟಿ. ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇದರಲ್ಲಿ ಕೇಂದ್ರ ಹಾಗೂ ರಾಜ್ಯದ ಅಧೀನದಲ್ಲಿ ಸಿಗುವಂಥ ಗೌರವಧನದ ಬಗ್ಗೆ ಪಟ್ಟಿಯನ್ನು ಕೊಟ್ಟಿದ್ದಾರೆ. ವಿಶೇಷವೆಂದರೆ, ಕೇಂದ್ರ ಸರ್ಕಾರದ ಅನುದಾನದ ಮೇರೆಗೆ ಗೌರವಧನವನ್ನು ಏರಿಸುತ್ತಾ ಬಂದಿದ್ದಾರೆ. ಆದರೆ ರಾಜ್ಯ ಸರ್ಕಾರ ಎಸ್‌ಎಸ್‌ಎಲ್‌ಸಿಯವರಿಗೆ ಪ್ರಾರಂಭದಿಂದ 450 ರೂ.ಗಳಿಂದ ಕೊನೆಯವರೆಗೆ ಅಂದರೆ ಪಾಸಾದವರಿಗೂ ಕೂಡ 450 ರೂಗಳನ್ನು

ಕೊಡುತ್ತಿದ್ದಾರೆ. ಅಂಗನವಾಡಿ ಸಹಾಯಕರಿಗೆ ಕನಿಷ್ಟ ವೇತನವನ್ನು ಬಿಟ್ಟು ಕೇವಲ ದಿನಕ್ಕೆ 25 ರೂ.ಗಳು ಇಲ್ಲದಂತೆ ವೇತನವನ್ನು ನಿಗದಿ ಮಾಡಿದೆ. ಗೌರವಧನ ಪಡೆಯತಕ್ಕಂಥ ಕಾರ್ಯಕರ್ತೆಯರನ್ನು ಸರ್ಕಾರ ಜನರ, ಆಡುಗಳ, ಕುರಿಗಳ ಲೆಕ್ಕವನ್ನು ಹಾಕುವುದಕ್ಕೂ ಕೂಡ ಕಳುಹಿಸುತ್ತಿತ್ತು. ಎಲ್ಲದಕ್ಕೂ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆಂದು ಗೌರವಧನವೆಂದು ಇಡುತ್ತಿದೆ. ಕನಿಷ್ಟ ವೇತನವನ್ನು ಕೊಟ್ಟಿಲ್ಲವೆಂದರೆ ಹೇಗೆ? ಆದ್ದರಿಂದ ಮಹಿಳೆಯರನ್ನು ಕಡೆಗಣಿಸುತ್ತಿದ್ದಾರೆಂದು ನನಗನ್ನಿಸುತ್ತಿದೆ. ಅಂಗನವಾಡಿ ಕೇಂದ್ರಗಳಿಗೆ ಒದಗಿಸತಕ್ಕಂಥ ಆಹಾರ ಕಳಪೆಯಾಗಿರುವುದಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ, ನನಗನ್ನಿಸಿದಂತೆ ಹೆಚ್ಚಿನ ಕಡೆ ಕಳಪೆ ಆಹಾರಧಾನ್ಯ ಬರುತ್ತಿದೆ. ಕೆಲವು ಕಡೆ ಬಂದಿರುವ ಹುಡಿಯನ್ನು ಮಕ್ಕಳು ತಿನ್ನದೆ ಕುರಿ ಮತ್ತು ಹಂದಿಗಳಿಗೆ ಕೊಡುವಂಥ ಪರಿಸ್ಥಿತಿ ನಡೆಯುತ್ತಿದೆ. ನನ್ನ ಕ್ಷೇತ್ರದಲ್ಲಿ ಕೆಲವೊಂದು ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಾಮಗ್ರಿ ಬಂದಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಹೇಳಬೇಕು.

ಶ್ರೀಮತಿ ಭಾಗೀರಥಿ ಮರುಳಸಿದ್ಧನಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂಥ ಪ್ರಶ್ನೆ ಮತ್ತು ಅವರ ಕಳಕಳಿಯನ್ನು ಅರ್ಥ ಮಾಡಿಕೊಂಡು ಇವತ್ತು ಕೇಂದ್ರ ಸರ್ಕಾರ ಎಸ್‌ಎಸ್‌ಎಲ್‌ಸಿ ಪಾಸ್ ಮತ್ತು ಫೇಲಾದವರಿಗೆ ಸ್ವಲ್ಪ ಮಟ್ಟಿನ ಹಣವನ್ನು ಹೆಚ್ಚಿಗೆ ಕೊಡುತ್ತಿದೆ, ಅದರಂತೆ ರಾಜ್ಯ ಸರ್ಕಾರ ಕೂಡ ಹೆಚ್ಚಿಗೆ ಕೊಡುವುದಕ್ಕೆ ನಿಗದಿ ಮಾಡಿದ್ದೀರಾ ಎನ್ನುವ ಪ್ರಶ್ನೆಯನ್ನು ನನ್ನ ಮುಂದಿಟ್ಟಿದ್ದಾರೆ. ಇದನ್ನು ನಾನು ಪರಿಶೀಲನೆ ಮಾಡಿ ನನ್ನ ಇಲಾಖೆಯ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಇದನ್ನು ಯಾವ ರೀತಿಯಲ್ಲಿ ಹೆಚ್ಚಿಸಲು ಸಾಧ್ಯವಾಗುತ್ತದೆ ಎನ್ನುವುದನ್ನು ನಾನು ನೋಡುತ್ತೇನೆ ಎನ್ನತಕ್ಕಂಥ ವಿಷಯವನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಲು ಇಷ್ಟಪಡುತ್ತೇನೆ. ಇದರ ಜೊತೆಯಲ್ಲಿ ಆಹಾರದ ಗುಣಮಟ್ಟ ಸರಿಯಾಗಿಲ್ಲ ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ನನ್ನ ಮುಂದಿಟ್ಟಿದ್ದಾರೆ. ಆದರೆ ಇವತ್ತು ಆಹಾರದ ತೂಕ ಮತ್ತು ಅದರ ಗುಣಮಟ್ಟವನ್ನು ನೋಡಲಿಕ್ಕೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಬಾಲವಿಕಾಸ ಸಮಿತಿ ಎಂದು ನಾವು ರಚನೆಯನ್ನು ಮಾಡಿರುತ್ತೇವೆ. ಈ ನಿಟ್ಟಿನಲ್ಲಿ ತಾವು ತಂದಿರತಕ್ಕಂಥ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಇದನ್ನು ನಾನು ಪರಿಶೀಲನೆ ಮಾಡಿ ಆಹಾರದ ಗುಣಮಟ್ಟವನ್ನು ಕಾಯ್ದುಕೊಳ್ಳುವ ಕೆಲಸವನ್ನು ಅಧಿಕಾರಿಗಳಿಗೆ ತಿಳಿಸಿ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೂರನೆಯದಾಗಿ, ತಮ್ಮ ಕ್ಷೇತ್ರದಲ್ಲಿ ಕೆಲವೊಂದು ಗ್ರಾಮಗಳಿಗೆ ಆಹಾರ ಸಾಮಗ್ರಿ ಬಂದಿಲ್ಲವೆನ್ನುವ ಮಾತನ್ನು ಕೂಡ ತಿಳಿಸಿರುತ್ತೀರಿ, ಈಗಾಗಲೇ ಆ ವಿಚಾರ ನನ್ನ ಗಮನಕ್ಕೆ ಬಂದಿದ್ದು ಅದನ್ನು ಅಧಿಕಾರಿಗಳಿಗೆ ತಿಳಿಸಿ ಇನ್ನು ಕೇವಲ ಎರಡು ದಿನಗಳಲ್ಲಿ ಎಲ್ಲಾ ಕೇಂದ್ರಗಳಿಗೆ ಆಹಾರ

ಸಾಮಗ್ರಿಯನ್ನು ಮುಟ್ಟಿಸತಕ್ಕಂಥ ವ್ಯವಸ್ಥೆ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ನಾನು ತಮ್ಮ ಮುಖೇನ ಮಾನ್ಯ ಸದಸ್ಯರಿಗೆ ತಿಳಿಯಬಯಸುತ್ತೇನೆ.

ಶ್ರೀಮತಿ ಶಕುಂತಲ ಬಿ. ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಿಗೆ ನಾನು ಧನ್ಯವಾದಗಳನ್ನು ಹೇಳುತ್ತೇನೆ, ಏಕೆಂದರೆ ತಕ್ಷಣ ನೀವು ಆಹಾರ ಸಾಮಗ್ರಿಗಳನ್ನು ಒದಗಿಸುತ್ತೇನೆಂದು ಹೇಳಿರುವುದಕ್ಕೆ. ಆದರೆ ಅಂಗನವಾಡಿ ಕೇಂದ್ರಗಳನ್ನು ಗ್ರಾಮ ಪಂಚಾಯಿತಿ ಅಧೀನಕ್ಕೆ ತರುವಂಥ ವ್ಯವಸ್ಥೆ ನಡೆಯುತ್ತಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆಗೆ ಸಚಿವರನ್ನು ಮಾಡುವುದೇ ಮಹಿಳೆಯರನ್ನೇ. ಆದರೆ ಪುರುಷರನ್ನು ನೇಮಕ ಮಾಡಿ ಅದರೊಳಗೆ ಏನಿದ ಎಂದು ನೋಡಿಕೊಳ್ಳಲು ಬಿಡುತ್ತಿಲ್ಲ. ಯಾರಿಗೂ ಬೇಡವಾದ ಖಾತೆಯನ್ನು ಮಹಿಳೆಯರಿಗೆ ಕೊಟ್ಟಿದ್ದಾರೆ, ಎಲ್ಲಾ ಸೂಪರ್ ವೈಸರ್‌ಗಳು ಮಹಿಳೆಯರೇ ಆಗಿದ್ದಾರೆ. ಅಂಗನವಾಡಿಗಳನ್ನು ಪಂಚಾಯಿತಿ ಅಧೀನಕ್ಕೆ ತಂದು ಪಂಚಾಯಿತಿಯವರು ಅವರ ಮೇಲೆ ಕಾರುಬಾರು ಮಾಡುವಂಥ ವ್ಯವಸ್ಥೆ ಮಾಡಿದ್ದು ಏಕೆ? ಅದು ಅಗತ್ಯವಿಲ್ಲವೆಂದು ನನ್ನ ಅನಿಸಿಕೆ. ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸಚಿವರ ಅಭಿಪ್ರಾಯವನ್ನು ಕೇಳುತ್ತಿದ್ದೇನೆ.

ಶ್ರೀಮತಿ ಭಾಗೀರಥಿ ಮರುಳಸಿದ್ಧನಗೌಡ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಎತ್ತಿರುವಂತಹ ಪ್ರಶ್ನೆ ಈಗ ನನ್ನ ಗಮನಕ್ಕೆ ಬರುತ್ತಿದೆ. ಆದರೆ ಈ ವಿಚಾರವಾಗಿ ಪರಿಶೀಲನೆ ಮಾಡುತ್ತೇನೆ ಎನ್ನತಕ್ಕಂಥಹ ಮಾತನ್ನು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ..

ಅಧ್ಯಕ್ಷರು : ಹೆಗಡೆಯವರೆ, ಇನ್ನು ಬಹಳಷ್ಟು ಪ್ರಶ್ನೆಗಳು ಇವೆ. ಈಗಾಗಲೇ 2 ಗಂಟೆಗಳು ಕಳೆದಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ಪ್ರಾರಂಭ ವಾಗಿರುವಂತಹ ಶಾಲಾ ಪೂರ್ವ ಶಿಕ್ಷಣ ಕೇಂದ್ರ ಇದೆಯಲ್ಲಾ ಅವರಿಗೆ ಆಹಾರ ಸಿಗುತ್ತಿಲ್ಲ. ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ಅಂಗನವಾಡಿ ಕೇಂದ್ರಗಳು ದೊಡ್ಡ ಪ್ರಮಾಣದಲ್ಲಿ ಪ್ರಾರಂಭವಾಗಿದೆ. ಅದಕ್ಕೆ ಶಾಲಾ ಪೂರ್ವ ಶಿಕ್ಷಣ ಕೇಂದ್ರ ಎನ್ನುತ್ತಾರೆ. ಅಲ್ಲಿ ಅಂಗನವಾಡಿಯ ರೀತಿಯಲ್ಲಿ ಅವರನ್ನು ನೇಮಿಸಿಕೊಂಡಿದ್ದಾರೆ. ಆದರೆ ಅವರಿಗೆ ಆಹಾರವನ್ನು ಕೊಡುತ್ತಿಲ್ಲ. ಈ ಒಂದು ಅಂಗನವಾಡಿ ಕೇಂದ್ರಕ್ಕೆ ಆಹಾರ ಸಿಗುತ್ತಿದೆ, ಇನ್ನೊಂದು ಅಂಗನವಾಡಿ ಮಕ್ಕಳಿಗೆ ಆಹಾರ ಸಿಗುತ್ತಿಲ್ಲ ಎನ್ನುವಂತಹ ಭಾವನೆ ಹೆಚ್ಚಾಗುತ್ತಿದೆ. ಸರ್ವ ಶಿಕ್ಷಣ ಅಭಿಯಾನದ ಯೋಜನೆಯಡಿಯಲ್ಲಿ ಪ್ರಾರಂಭವಾಗಿರುವಂತಹ ಅಂಗನವಾಡಿಗಳಿಗೆ ಆಹಾರವನ್ನು ಸರ್ಕಾರ ಯಾವಾಗಿನಿಂದ ಕೊಡುತ್ತದೆ ಎಂಬುದನ್ನು ತಿಳಿಸಬೇಕು.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ನಾನು ಇನ್ನೊಂದು ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಅನೇಕ ಯೋಜನೆಗಳನ್ನು ಈ ಅಂಗನವಾಡಿ ಕಾರ್ಯಕರ್ತರನ್ನು ಉಪಯೋಗಿಸಿಕೊಂಡು ಮಾಡುತ್ತಿದ್ದಾರೆ. ಆ ಸಂದರ್ಭದಲ್ಲಿ ಅವರಿಗೆ ಇನ್‌ಸೆಂಟೀವ್ ಕೊಡುವಂತಹ ಯೋಜನೆಯನ್ನು ತಾವು ಹಾಕಿಕೊಂಡಲ್ಲಿ ಈಗ ಸಿಗುವಂತಹ ಗೌರವಧನದ ಜೊತೆಯಲ್ಲಿ ಹೆಚ್ಚಿನ ಅನುಕೂಲ ಅವರಿಗೆ ಆಗುತ್ತದೆ ಎನ್ನುವುದನ್ನು ತಾವು ಪರಿಶೀಲಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀಮತಿ ಶಕುಂತಲಾ ಟಿ. ಶೆಟ್ಟಿ : ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆ ಕರಾವಳಿ ಜಿಲ್ಲೆಯಾದ ಕಾರಣ ಒಂದು ಮನೆಯಿಂದ ಒಂದು ಮನೆಗೆ ಕನಿಷ್ಠ ಅರ್ಧ ಕಿಲೋ ಮೀಟರ್‌ನಷ್ಟು ದೂರ ಇದೆ. ಆದಕಾರಣ ನಮ್ಮ ಜಿಲ್ಲೆಗೆ ಹೆಚ್ಚಿನ ಅಂಗನವಾಡಿಗಳನ್ನು ಹೊಸದಾಗಿ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ.

ಶ್ರೀಮತಿ ಭಾಗೀರಥಿ ಮರುಳಸಿದ್ಧನಗೌಡ : ಮಾನ್ಯ ಸದಸ್ಯರು ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ಎತ್ತಿರುವಂತಹ ಪ್ರಶ್ನೆಗೆ ತಾವು ಹೇಳಿರತಕ್ಕಂತಹ ವಿಚಾರ ನಿಜ. ಏಕೆಂದರೆ 2000ದಷ್ಟು ಈ ಕೇಂದ್ರಗಳ ನಡೆಯುತ್ತಿವೆ. ಕೇವಲ 2 ತಿಂಗಳು ಮಾತ್ರ ನಾವು ಆಹಾರವನ್ನು ಕೊಟ್ಟಿದ್ದೇವೆ; ನಂತರ ಕೊಡುವುದಕ್ಕೆ ಆಗಲಿಲ್ಲ. ಇದರ ಬಗ್ಗೆ ತಮಗೂ ಕೂಡ ಗೊತ್ತಿರುವ ಹಾಗೆ ನೇರವಾಗಿ ಹಣ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಿರುವುದರಿಂದ ಅವರು ಕೇವಲ ಶಿಕ್ಷಣ ನೀಡುವುದಕ್ಕಾಗಿ ಕೊಡುವುದಕ್ಕೆ ಸಾಧ್ಯವಾಗುತ್ತದೆ, ನಮಗೆ ಆಹಾರವನ್ನು ಒದಗಿಸುವುದಕ್ಕೆ ಆಗುತ್ತಿಲ್ಲ ಎನ್ನುವಂತಹ ಮಾತನ್ನು ಅವರು ತಿಳಿಸಿರುವುದರಿಂದ ಈ ಕಾರ್ಯಕ್ರಮ ನಿಂತಿದೆ ಎನ್ನುವಂತಹ ಮಾತನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರುಗಳಿಗೆ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರಾದ ಶ್ರೀ ಯೋಗೀಶ್ ಭಟ್‌ರವರು ಕೇಳಿರುವಂತಹ ಪ್ರಶ್ನೆ ಅಂಗನವಾಡಿ ಕಾರ್ಯಕರ್ತೆಯರು ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ, ಬೇರೆ ಕಡೆಗಳಲ್ಲಿ ಕೆಲಸಗಳನ್ನು ಕೂಡ ಮಾಡುತ್ತಿದ್ದಾರೆ, ಅದರಿಂದ ಅವರಿಗೆ ಯಾವುದೇ ರೀತಿಯ ಹಣವನ್ನು ಕೊಡುತ್ತಿಲ್ಲವೆಂದು ಹೇಳುತ್ತಿದ್ದಾರೆ. ಈಗಾಗಲೇ ಹಲವಾರು ಬೇರೆ ಬೇರೆ ಇಲಾಖೆಯ ಕೆಲಸಗಳನ್ನು ಮಾಡುತ್ತಿರುವಲ್ಲಿ ಆ ಅಂಗನವಾಡಿ ಕಾರ್ಯಕರ್ತೆಯರಿಗೆ ಆಯಾ ಇಲಾಖೆಯಿಂದ ಹಣವನ್ನು ಕೊಡುತ್ತಾ ಇದ್ದೇವೆ. ಉದಾಹರಣೆಗೆ ಹೇಳುವುದಾದರೆ ಸ್ತ್ರೀಶಕ್ತಿ ಗ್ರೂಪ್‌ಗಳನ್ನು ರಚನೆ ಮಾಡುವಂತಹ ಸಂದರ್ಭದಲ್ಲಿ ಅವರಿಗೆ 50 ರೂಪಾಯಿಗಳನ್ನು ಕೊಡುತ್ತಿದ್ದೇವೆ. ಹಾಗೆಯೇ ಈ ಆರೋಗ್ಯ ಇಲಾಖೆಯಲ್ಲಿ ಸಂಬಂಧಪಟ್ಟ ಹಾಗೆ ಕೆಲಸ ಮಾಡುವಂತಹವರಿಗೆ ಆ ಇಲಾಖೆಯಿಂದಲೇ ಅವರಿಗೆ ಹಣವನ್ನು ಭರಿಸುತ್ತಿದ್ದೇವೆ ಎನ್ನುವಂತಹ ಮಾತನ್ನು ಆಯಾ ಇಲಾಖೆಗಳು ಭರಿಸುತ್ತಿವೆ ಎನ್ನುವಂತಹ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಈಗ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಈಗ ರಘುಪತಿ ಭಟ್‌ರವರು ಪ್ರಶ್ನೆಯನ್ನು ಕೇಳಿ.

ಮಾನ್ಯ ಸದಸ್ಯರು : ಸನ್ಮಾನ್ಯ ಅಧ್ಯಕ್ಷರೆ, ನನ್ನ ತಾಲ್ಲೂಕಿನಲ್ಲಿ ಅಂಗನವಾಡಿಗಳಲ್ಲಿ ಕೊಡುತ್ತಿರುವಂತಹ ಬೇಳೆಕಾಳುಗಳು ಏನಿವೆ, ಅದು ಬಹಳ ಕಳಪೆ ಮಟ್ಟದ್ದಾಗಿರುತ್ತದೆ. ಅವುಗಳ ಗುಣಮಟ್ಟವನ್ನು ಹೆಚ್ಚಿಸುವ ಬಗ್ಗೆ ತಾವು ಆದೇಶವನ್ನು ಕೊಡಬೇಕು.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ನಿಮ್ಮ ಸದಸ್ಯರುಗಳು ಈ ರೀತಿಯಾಗಿ ಮಾತನಾಡಿದರೆ ಹೇಗೆ ಈಗಾಗಲೇ ಪ್ರಶ್ನೋತ್ತರಗಳಿಗೆ 2 ಗಂಟೆಗಳು ಕಳೆದಿದೆ.

ಶ್ರೀಮತಿ ಭಾಗೀರಥಿ ಮರುಳಸಿದ್ಧನಗೌಡ : ನಾನು ಮೊದಲೇ ಇದರ ಬಗ್ಗೆ ಹೇಳಿದೆ. ನಾನು ಇಲಾಖೆಯನ್ನು ವಹಿಸಿಕೊಂಡ ಕೇವಲ ಒಂದು ವಾರದಲ್ಲಿ ಇದಕ್ಕೆ ಸಂಬಂಧಪಟ್ಟಂತ ಎಲ್ಲಾ ವಿಚಾರಗಳ ಬಗ್ಗೆ ನಾನು ನೋಡಿದ್ದೇನೆ. ತಮ್ಮ ಕಳಕಳಿ ಏನಿದೆ, ಅದೂ ಕೂಡ ನನ್ನ ಕಳಕಳಿಯಾಗಿದೆ, ಆ ನಿಟ್ಟಿನಲ್ಲಿ ನಾನು ಕೆಲಸ ಮಾಡುತ್ತೇನೆ ಎನ್ನುವಂತಹ ಮಾತನ್ನು ತಮ್ಮ ಮುಖಾಂತರ ಹೇಳುತ್ತಿದ್ದೇನೆ.

ಆ) ತಡೆಹಿಡಿಯಲಾದ ಪ್ರಶ್ನೋತ್ತರಗಳು

ಬ್ರಹ್ಮಾವರ ಸಕ್ಕರೆ ಕಾರ್ಖಾನೆಯ ಸಮಸ್ಯೆ ಪರಿಹಾರ

36(650) ಶ್ರೀ ರಘುಪತಿ ಭಟ್ (ಉಡುಪಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬ್ರಹ್ಮಾವರ ಸಕ್ಕರೆ ಕಾರ್ಖಾನೆಯು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಬಡ ಕೃಷಿಕರ ಜೀವನಾಡಿ ಎಂಬುದು ಸರ್ಕಾರಕ್ಕೆ ಅರಿವಿದೆಯೇ;

ಆ) ಆದಾಗ್ಯೂ ಸಕ್ಕರೆ ಕಾರ್ಖಾನೆಯನ್ನು ಮುಚ್ಚಲು ಸನ್ನಾಹ ನಡೆದಿರುವುದು ನಿಜವೇ;

ಇ) ಬ್ರಹ್ಮಾವರ ಸಕ್ಕರೆ ಕಾರ್ಖಾನೆಯಿಂದ ಕೃಷಿಕರಿಗೆ ಪಾವತಿಸಬೇಕಾದ ಬಾಕಿ ಹಣವೆಷ್ಟು;

ಈ) ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಕಬ್ಬು ಪೂರೈಸಿದ ಬಡ ಕಬ್ಬು ಬೆಳೆಗಾರರ ಸಾಲ ಬಡ್ಡಿ, ಮನ್ನಾ ಮಾಡುವ ಇಚ್ಛೆ, ಸರ್ಕಾರದ ಮುಂದಿದೆಯೇ;

ಉ) ಸಕ್ಕರೆ ಕಾರ್ಖಾನೆಯ ಸಿಬ್ಬಂದಿ ವರ್ಗದವರಿಗೆ ನೀಡಬೇಕಾದ ಬಾಕಿ ವೇತನವನ್ನು ಯಾವಾಗ ಪಾವತಿ ಮಾಡಲಾಗುವುದು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಹೌದು.

ಆ) ಈ ಕಾರ್ಖಾನೆಯನ್ನು ಮುಚ್ಚಲು ಯಾವುದೇ ಪ್ರಸ್ತಾವನೆ ಸಧ್ಯಕ್ಕೆ ಪರಿಶೀಲನೆಯಲ್ಲಿ ಇರುವುದಿಲ್ಲ.

ಇ) ರೂ. 312.00 ಲಕ್ಷಗಳು

ಈ) ಅಂತಹ ಯಾವುದೇ ಪ್ರಸ್ತಾವನೆಯಿರುವುದಿಲ್ಲ.

ಉ) ಪ್ರಸ್ತುತ ಕಾರ್ಖಾನೆಯು ಆರ್ಥಿಕ ಸಂಕಷ್ಟದಲ್ಲಿದ್ದು ಕಾರ್ಖಾನೆಯು ಪುನಃಶ್ಚೇತನಗೊಂಡು ತನ್ನ ಹಂಗಾಮನ್ನು ಪ್ರಾರಂಭಿಸಿದಲ್ಲಿ ಈ ಬಾಕಿ ಸಂಬಳವನ್ನು ಪಾವತಿಸುವ ಸಾಧ್ಯತೆ ಇರುತ್ತದೆ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾ ಸಕ್ಕರೆ ಕಾರ್ಖಾನೆಯನ್ನು ಮುಚ್ಚುವಂತಹ ಪ್ರಸ್ತಾವನೆ ಸಧ್ಯಕ್ಕೆ ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇವತ್ತು ಸಕ್ಕರೆ ಕಾರ್ಖಾನೆ ಯಾವುದೇ ರೀತಿಯ ಕೆಲಸವನ್ನು ಮಾಡುತ್ತಿಲ್ಲ. ಕಳೆದ ಎರಡು-ಮೂರು ವರ್ಷಗಳಿಂದ ಕಬ್ಬು ಅರೆಯುವುದನ್ನು ಕೂಡ ಮಾಡುತ್ತಿಲ್ಲ. ಹಿಂದಿನ ಸರ್ಕಾರ ಇರುವಂತಹ ಸಂದರ್ಭದಲ್ಲಿ ಒಂದು ಮಾಹಿತಿ ಪತ್ರಿಕೆಗಳ ಮೂಲಕ ಬಂದಿತ್ತು. ಇಲ್ಲಿ ಲೇ ಆಫ್ ಮಾಡುತ್ತೇವೆನ್ನುವುದರ ಬಗ್ಗೆ ಒಂದು ಮಾಹಿತಿ ಬಂದಿತ್ತು. ಆದರೆ ಅದರ ಬಗ್ಗೆ ಸರ್ಕಾರ ಏನು ನಿಲುವು ತಾಳಿದೆ ಎಂಬುದರ ಬಗ್ಗೆ ಹೇಳಬೇಕು. ಏಕೆಂದರೆ, ಸರ್ಕಾರ ಇವತ್ತು ಆ ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಬಗ್ಗೆ ಏನಾದರೂ ಕ್ರಮವನ್ನು ತೆಗೆದುಕೊಳ್ಳಬೇಕು, ನಮ್ಮ ಜಿಲ್ಲೆ ಔದ್ಯೋಗಿಕ ಜಿಲ್ಲೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯ ರೈತರ ಬಹಳ ದೊಡ್ಡ ಆರ್ಥಿಕ ಪರಿಸ್ಥಿತಿಯನ್ನು ಏನಾದರೂ ನಾವು ಹೆಚ್ಚಿಸಬೇಕಾದರೆ ಒಂದೇ ಒಂದು ಮಾರ್ಗ ಇರುವಂತಹದ್ದು ಅಂದರೆ ಸಕ್ಕರೆ ಕಾರ್ಖಾನೆಯನ್ನು ಉಳಿಸುವಂತಹದ್ದು ಆಗಬೇಕು. ರೈತರಿಗೆ ಸುಮಾರು 3 ಕೋಟಿ 20 ಲಕ್ಷ ರೂಪಾಯಿಗಳಷ್ಟು ಹಣ ಕೊಡುವುದು ಬಾಕಿ ಇದೆ. ಕಳೆದ 21 ತಿಂಗಳಿಂದ ನೌಕರರಿಗೆ ಸಂಬಳ ಸಿಗಲಿಲ್ಲ. ಇನ್ನು ನಮ್ಮ ಸಹಕಾರಿ ಸಂಸ್ಥೆಗಳಿಗೆ ಸುಮಾರು 6 ಕೋಟಿ ರೂಪಾಯಿಗಳಷ್ಟು ಸಾಲವನ್ನು ಕೊಡುವುದು ಬಾಕಿ ಇದೆ. ಇದರಲ್ಲಿ 3 ಸಂಗತಿಗಳು ಇವೆ. ರೈತರ ಸಮಸ್ಯೆಗಳಿಗೆ ಪರಿಹಾರ ಸಿಗುವಂತೆ ಆಗುತ್ತದೆ, ಸಹಕಾರಿ ಸಂಸ್ಥೆಗಳಿಗೆ ತಗುಲಿಕೊಂಡಂತಹ ಸಾಲ ವಾಪಸ್ಸು ಕೊಡದಿದ್ದರೆ ನಮ್ಮ ಜಿಲ್ಲೆಯ ಸಹಕಾರಿ ಸಂಸ್ಥೆಗಳು ಮುಳುಗುವಂತಹ ವ್ಯವಸ್ಥೆಯಾಗುತ್ತದೆ. ಆದ್ದರಿಂದ ಅದನ್ನು ಪುನಶ್ಚೇತನಗೊಳಿಸುವಂತಹದ್ದರ ಬಗ್ಗೆ ಈಗ ಕನಿಷ್ಟ 3 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡುವುದರ ಬಗ್ಗೆ ಸರ್ಕಾರ ಇಚ್ಛಿಸಿದೆಯಾ? ಕೇಂದ್ರ ಸರ್ಕಾರದಿಂದ 50 ಲಕ್ಷ ರೂಪಾಯಿಗಳನ್ನು ಕಬ್ಬಿನ ನಿಧಿಯಿಂದ ತೆಗೆದುಕೊಡುವಂತಹ ಹಣ ವಾಪಸ್ಸು ಕೊಡದೆ ಇದ್ದುದರಿಂದ ಹೊಸ ಸಾಲಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು. ಇದನ್ನು ಮುಚ್ಚಲಿಕ್ಕೆ ಆಗದೆ ಇದ್ದರೆ ಪುನಃಶ್ಚೇತನಗೊಳಿಸುವಂತಹದ್ದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂಬುದರ ಬಗ್ಗೆ ತಾವು ಹೇಳಬೇಕು. ಈಗ ಸುಮಾರು 18.82 ಕ್ವಿಂಟಾಲ್‌ನಷ್ಟು

ಸಕ್ಕರೆ ದಾಸ್ತಾನು ಇದೆ. ಅದನ್ನಾದರೂ ತಕ್ಷಣ ಮಾರಿ ರೈತರಿಗೆ ಮತ್ತು ನೌಕರರಿಗೆ ಹಣ ಕೊಟ್ಟು ಪುನಃಶ್ಚೇತನಗೊಳಿಸುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆಯೆ ಎನ್ನುವಂತಹ ಮಾತನ್ನು ಹೇಳಬೇಕೆಂದು ಇಚ್ಛಿಸುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಇದು ನನ್ನ ಕ್ಷೇತ್ರದಲ್ಲಿ ಇದೆ. ಮಾನ್ಯ ಸಚಿವರು ಉತ್ತರ ಹೇಳಿದ ಮೇಲೆ ನಾನು ಕೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, 1973ನೇ ಇಸವಿಯಲ್ಲಿ ಈ ಕಾರ್ಖಾನೆ ಪ್ರಾರಂಭವಾಯಿತು. ಈ ಕಾರ್ಖಾನೆಯಲ್ಲಿ 5951 ಸದಸ್ಯರುಗಳು ಇದ್ದಾರೆ, 183 ಜನ ಖಾಯಂ ಹಾಗೂ 17 ಜನರು ಟೆಂಪರರಿಯಾಗಿ ಟೋಟಲ್ ಎರಡು ನೂರು ಜನರು ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಈ ಕಾರ್ಖಾನೆ ನನಗೆ ತಿಳಿದ ಪ್ರಕಾರ, ಇದು ಪ್ರಾರಂಭವಾದಾಗಿನಿಂದ ಲಾಭವನ್ನು ಮಾಡಿರುವುದಿಲ್ಲ. ಮುಖ್ಯವಾಗಿ ಏನಿದೆ, ಇದಕ್ಕೆ ಬೇಕಾಗುವ ಕಬ್ಬು ರಾ–ಮೆಟೀರಿಯಲ್ಸ್ ಯಾವ ಪ್ರಮಾಣದಲ್ಲಿರಬೇಕು, ಅದು ಇಲ್ಲ. ಹಾಗಾಗಿ ಈ ಕಾಖಾನೆಯ ಟೋಟಲ್ ಅಕ್ಯುಮುಲೇಟೆಡ್ ಲಾನ್ 4387.67 ಲಕ್ಷ ರೂಪಾಯಿಗಳು ಆಗುತ್ತದೆ. ಈಗಾಗಲೇ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ 312 ಲಕ್ಷ ರೂಪಾಯಿಗಳನ್ನು ರೈತರಿಗೆ ಕಬ್ಬಿನ ಬಾಕಿಯನ್ನು ಕೊಡಬೇಕಾಗಿದೆ, ಕಾರ್ಮಿಕರಿಗೆ 225 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ. ಹಾಗಾಗಿ ಈ ಕಾರ್ಖಾನೆಯನ್ನು ಪುನಃ ರಿವೈವ್ ಮಾಡಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಜಯಪ್ರಕಾಶ್ ಹೆಗ್ಡೆಯವರು ಹೇಳಿದ್ದಾರೆ, ಅವರು ಪುನಃ ಅದರ ಬಗ್ಗೆ ಪ್ರಸ್ತಾಪವನ್ನು ಮಾಡಬಹುದು. ನಮ್ಮ ಕೇಂದ್ರ ಸಚಿವರಾದಂತಹ ಶ್ರೀ ಆಸ್ಕರ್ ಫರ್ನಾಂಡಿಸ್‌ರವರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದನ್ನು ಮಾಡಬೇಕೆಂದು ಸರ್ಕಾರದ ಇಚ್ಛೆಯೂ ಕೂಡ ಇದೆ. ಆದರೆ ಇದು ಪೀಸ್ ಮಿಲ್ ಆಗಿ ಇದರ ಬಗ್ಗೆ ಡಿಸಿಷನ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಓವರ್‌ಆಲ್ ಆಗಿ ಹೇಳುವುದಾದರೆ, ರಾಜ್ಯದಲ್ಲಿ 21 ಸಕ್ಕರೆ ಕಾರ್ಖಾನೆಗಳು ಇವೆ, ನಾನು ಸಹಕಾರಿ ಕ್ಷೇತ್ರದ ಬಗ್ಗೆ ಮಾತನಾಡುತ್ತಿದ್ದೇನೆ, ಕೇವಲ ನಿಜವಾಗಿ ಒಂದೇ ಕಾರ್ಖಾನೆ ಲಾಭದಲ್ಲಿ ಇರುವುದು. ಆದೆಂದರೆ ನಂದಿ ಮಾತ್ರ. ಬಾಕಿ ಎರಡು ಲಾಭವೆಂದು ತೋರಿಸಿದರೂ, naturally I am not able to agree to that. ಹಾಗಾಗಿ ಬಹಳಷ್ಟು ಸಕ್ಕರೆ ಕಾರ್ಖಾನೆಗಳು ಹಲವಾರು ಕಾರಣಗಳಿಂದ ಅನಾರೋಗ್ಯವಾಗಿದೆ. ಅದರ ಬಗ್ಗೆ ಸರ್ಕಾರದಲ್ಲಿ ಯಾವ ಪ್ರಕಾರವಾಗಿ ಅವು ರಿವೈವ್ ಮಾಡುವುದಕ್ಕೆ ಸಾಧ್ಯ, ನಾವು ರೀಹ್ಯಾಬಿಲಿಟೇಟ್ ಮಾಡಬೇಕಾದರೆ ಇದರ ಬಗ್ಗೆ ಸರ್ಕಾರದ ಜವಾಬ್ದಾರಿ ಏನು ಅಲ್ಲಿರುವಂತಹ ನಮ್ಮ ಷೇರು ಹೋಲ್ಡರ್ಸ್ ರೆಸ್ಪಾನ್ಸಿಬಿಲಿಟಿ ಏನು? ನಾವು ಎನ್‌ಸಿಡಿಸಿ ಯಿಂದ ಏನು ಸಹಾಯವನ್ನು ಮಾಡಬಹುದು. ಕೇಂದ್ರ ಸರ್ಕಾರದಲ್ಲಿ ಶುಗರ್ ಡೆವಲಪ್‌ಮೆಂಟ್ ಫಂಡ್ ಎಂದು ಕ್ರಿಯೇಟ್ ಮಾಡುತ್ತಿದ್ದಾರೆ. ಅದರಿಂದ ನಾವು

ಏನು ಸಹಾಯವನ್ನು ತೆಗೆದುಕೊಳ್ಳಬಹುದು. ಇದರ ಬಗ್ಗೆ ಸಮಗ್ರವಾದಂತಹ ಚಿಂತನೆ ನಡೆಯುತ್ತಿದೆ. ಆ ಸಮಯದಲ್ಲಿ ಇದರ ಬಗ್ಗೆ ಚಿಂತನೆಯನ್ನು ಮಾಡಲಾಗುವುದು. ಹೀಗೆ ಸಕ್ಕರೆ ದಾಸ್ತಾನು 2002-03ರಲ್ಲಿ 18821 ಕ್ವಿಂಟಾಲ್ ಇದೆ ಇದರ ಅಂದಾಜು ಬೆಲೆ ಎರಡೂವರೇ ಕೋಟಿ ರೂಪಾಯಿಗಳು ಆಗಬಹುದು. ಅದು ರಿಲೀಸಸ್ ಯಾವ ಪ್ರಕಾರ ಕೇಂದ್ರ ಸರ್ಕಾರದಿಂದ ಬರುತ್ತದೆ ಅಥವಾ ಸ್ಪೆಷಲ್ ಕೇಸ್ ಪ್ರಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಅದನ್ನು ರಿಲೀಸ್ ಮಾಡಿಕೊಂಡು ರೈತರ ಪೇಮೆಂಟ್ ಮಾಡಬೇಕಾಗುತ್ತದೆ. ಅದನ್ನು ಮಾಡುವ ಬಗ್ಗೆ ಸರ್ಕಾರ ಪ್ರಾಮಾಣಿಕವಾಗಿ ಕೆಲಸವನ್ನು ಮಾಡುತ್ತದೆ. ಅಲ್ಲಿ ಸುಮಾರು 50 ಎಕರೆ ಜಮೀನು ಇದೆ, ಅದನ್ನು ಮಾರಾಟ ಮಾಡುವ ಬಗ್ಗೆ ಅನುಮತಿಯನ್ನು ಕೇಳಿದ್ದರು, 110 ಎಕರೆ ಜಮೀನು ಇದೆ, ಕೇವಲ 50 ಎಕರೆ ಜಮೀನನ್ನು ಮಾರಾಟ ಮಾಡುವ ಬಗ್ಗೆ ಅನುಮತಿಯನ್ನು ಕೇಳಿದ್ದರು ನಾನು ಮೊನ್ನೆ ದಿನ ಅದರ ಬಗ್ಗೆ ಅನುಮತಿಯನ್ನು ಕೊಟ್ಟಿದ್ದೇನೆ. ಅದನ್ನು ಪಾರದರ್ಶಕವಾಗಿ ಮಾರಾಟ ಮಾಡಿ ಅದು ಕೈಗಾರಿಕೆಗೆ ಉಪಯೋಗವಾಗುವಂತೆ ಮಾರಿ ಎಂದು ಆದೇಶವನ್ನು ಮಾಡಿದ್ದೇನೆ. ಹಾಗಾಗಿ ಈ ಕೈಗಾರಿಕೆ ಬಹಳ ಕಷ್ಟದಲ್ಲಿದೆ, ರೈತರು ಬಹಳ ಕಷ್ಟದಲ್ಲಿದ್ದಾರೆ, ಹಾಗಾಗಿ ಇದನ್ನು ರಿವೈವ್ ಮಾಡುವುದು ಸ್ವಲ್ಪ ಕಷ್ಟದ ಕೆಲಸವಾದರೂ ಸಹ ಅದರ ಬಗ್ಗೆ ಒಂದು ಪ್ರಯತ್ನ ನಡೆಯುತ್ತಿದೆ ಎಂದು ಮಾನ್ಯ ಸದಸ್ಯರಿಗೆ ಹಾಗೂ ಸದನಕ್ಕೆ ಭರವಸೆಯನ್ನು ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯ್ಯೂರಪ್ಪ : ಅಲ್ಲಿ ಸಾವಿರಾರು ಜನರು ಸತ್ಯಾಗ್ರಹ ಮಾಡಿ ಚಳುವಳಿ ಮಾಡಿದ್ದರ ಬಗ್ಗೆ ನಾನು ಅಲ್ಲಿಗೆ ಹೋಗಿ ಬಂದಿದ್ದೇನೆ. ತಾವು ಸಾಕಷ್ಟು ಅನುಭವಿಗಳಾಗಿದ್ದೀರಿ, ನಿಮಗೆ ಈ ಇಲಾಖೆ ಸಿಕ್ಕಿದೆ. ತಾವು ಏನು ಉತ್ತರವನ್ನು ಕೊಟ್ಟಿದ್ದೀರಿ. ಸಕ್ಕರೆ ಕಾರ್ಖಾನೆಯ ಸಿಬ್ಬಂದಿ ವರ್ಗದವರಿಗೆ ನೀಡಬೇಕಾಗಿರುವ ಬಾಕಿಯ ಬಗ್ಗೆ ಸ್ಪಷ್ಟವಾದ ಉತ್ತರವಿಲ್ಲ. ರೈತರಿಗೆ 312 ಲಕ್ಷ ರೂಪಾಯಿಗಳು ಬಾಕಿ ಬರಬೇಕಾಗಿದ್ದು ಅದರ ಬಗ್ಗೆ ಏನೂ ಇಲ್ಲ. ಈಗ ಇಲ್ಲಿ ಪ್ರಶ್ನೆ ಇರುವುದು ಕಬ್ಬು ಕೊಟ್ಟಂತಹ ರೈತ ಇವತ್ತು ಬೀದಿ ಪಾಲಾಗಿದ್ದಾನೆ. ನಿಮಗೆ ಗೊತ್ತಿರುವ ಹಾಗೆ ದಕ್ಷಿಣ ಕನ್ನಡ ಜಿಲ್ಲೆಯ ಭಾಗದಲ್ಲಿ 2-3 ಜಿಲ್ಲೆಗಳಿಗೆ ಇವತ್ತು ಅಲ್ಲಿ ಬೇರೆ ಯಾವುದೇ ಬೆಳೆಗಳು ಲಾಭದಾಯಕವಾಗಿಲ್ಲ. ಅವರು ಅಲ್ಪ ಸ್ವಲ್ಪ ಕಬ್ಬು ಬೆಳೆದುಕೊಂಡು ಉಳಿದುಕೊಳ್ಳೋಣವೆನ್ನುವುದರ ಬಗ್ಗೆಯೇ ಆ ಕಾರ್ಖಾನೆ ಪ್ರಾರಂಭವಾಗಿರುವುದು, ಯಾರೋ ಮಧ್ಯವರ್ತಿಗಳು ಬೇರೆ ಯಾವುದೇ ರೀತಿಯಲ್ಲಿ ಲಾಸ್ ಆಗುತ್ತಿದ್ದರೆ ಅದನ್ನು ತಮ್ಮ ಹತೋಟಿಗೆ ತೆಗೆದುಕೊಂಡು ಆ ಕಾರ್ಖಾನೆಯನ್ನು ಉಳಿಸಿ ರೈತರನ್ನು ಉಳಿಸಬೇಕಾಗಿದೆ. ಇವತ್ತು ಮೊಲಾಸಿಸ್‌ಗೆ ಒಳ್ಳೆಯ ರೇಟ್ ಸಿಗುವಂತಹ ಕಾಲದಲ್ಲಿ ಸಕ್ಕರೆಗೆ ಇವತ್ತು ಕೆಜಿಗೆ 17-18 ರೂಪಾಯಿ ರೇಟ್ ಆಗಿರುವಂಥ ಸಂದರ್ಭದಲ್ಲಿ ಲಾಭದಾಯಕವಾಗಿ ಇದನ್ನು ನಡೆಸಬಹುದು. ರೈತರಿಗೆ

ಇದರಿಂದಾಗಿ ಅನುಕೂಲವಾಗುತ್ತದೆ. ಅದಕ್ಕಾಗಿ ಸರ್ಕಾರ ಇದರ ಬಗ್ಗೆ ಮುಂದೆ ಬಂದು ರೈತರ ಬಾಕಿಯನ್ನು ತೀರಿಸಿ ಕಾರ್ಮಿಕರಿಗೆ ಕಳೆದ 18–20 ತಿಂಗಳಿಂದ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ಯಾರೂ ಕೂಡ ಹೇಳುವವರು ಕೇಳುವವರು ಇಲ್ಲದಂತಾಗಿದೆ. ನಿಮ್ಮ ಕಾಲದಲ್ಲಾದರೂ ತತಕ್ಷಣ ರೈತರ ಬಾಕಿಯನ್ನು ತೀರಿಸಿ, ಆ ಕಾರ್ಖಾನೆಯನ್ನು ಪ್ರಾರಂಭ ಮಾಡದೆ ಇದ್ದರೆ, ನೋಡಿ ಈಗ 50 ಎಕರೆ ಜಮೀನನ್ನು ಮಾರುತ್ತಿದ್ದೀರಿ, ನಾನು ಇದರ ಬಗ್ಗೆ ನಿಮಗೆ ಇವತ್ತೇ ಹೇಳುತ್ತಿದ್ದೇನೆ. ಇನ್ನೊಂದು ವರ್ಷ ಆದ ಮೇಲೆ ಆ ಕಾರ್ಖಾನೆಯನ್ನೇ ಹರಾಜು ಹಾಕಿ ಬಾಕಿಯನ್ನು ತೀರಿಸಿ ಕ್ಲೋಸ್ ಮಾಡಬೇಕಾಗತ್ತದೆ. ಆ ಸ್ಥಿತಿಗೆ ಬರುವುದಕ್ಕೆ ಮುಂಚೆಯೇ ಇದನ್ನು ಉಳಿಸುವುದರ ಬಗ್ಗೆ ಏನಾದರೂ ಪ್ಲಾನ್ ಮಾಡುತ್ತೀರಾ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದನ್ನು ಉಪಯೋಗ ಮಾಡುವಂತಹ ಸ್ಥಿತಿಯಲ್ಲಿ ಅದು ಇಲ್ಲ. ಈಗ ಅಲ್ಲಿ ಮುಖ್ಯವಾಗಿ ಆಗಬೇಕಾಗಿರುವುದು ಈಗ ಆ ಫ್ಯಾಕ್ಟರಿ, ರೈತರಿಗೆ ಅಂಡರ್‌ಟೇಕಿಂಗ್‌ನ್ನು ಕೊಟ್ಟಿದೆ. ಬೇರೆ ಎಲ್ಲಾ ಸಾಲ ಮನ್ನಾ ಮಾಡುತ್ತೀರಿ. ಇಲ್ಲಿಯೂ ಸಹ ಬಡ್ಡಿ ಮನ್ನಾ ಮಾಡದಿದ್ದರೆ ಸಕ್ಕರೆ ಕಾರ್ಖಾನೆಗಳಿಗೆ ಹಣ ಕೊಟ್ಟರೂ ಕೂಡ ಅದು ಬಡ್ಡಿ ತುಂಬುವುದಕ್ಕೆ ಸಾಕಾಗುವುದಿಲ್ಲ. ಅದಕ್ಕೋಸ್ಕರ ಕೂಡಲೇ ಕ್ರಮ ತೆಗೆದುಕೊಳ್ಳಬೇಕಾದದ್ದು ಏನೆಂದರೆ ಅವರಿಗೆ ಬಡ್ಡಿ ಮನ್ನಾ ಮಾಡಬೇಕು. ಅಲ್ಲಿ ಫ್ರೀಜ್ ಮಾಡಿ ಸಕ್ಕರೆ ಕಾರ್ಖಾನೆಯವರು ಅಂಡರ್‌ಟೇಕಿಂಗ್ ಕೊಟ್ಟಿದ್ದರಿಂದ ರೈತರ ಮೇಲೆ ನೀವು ಬಡ್ಡಿಯನ್ನು ಹಾಕಬೇಡಿ. ಅದನ್ನು ಸಕ್ಕರೆ ಕಾರ್ಖಾನೆ ಮುಖೇನ ಕೊಡಬೇಕು. ಹಾಗೆಯೇ ಇದ್ದ ಸಕ್ಕರೆಯನ್ನು ಸ್ಪೆಶಲ್ ಆರ್ಡರ್ ತೆಗೆದುಕೊಂಡು ರಿಲೀಸ್ ಮಾಡಿಸಿಕೊಳ್ಳಿ. ಏಕೆಂದರೆ ಅಲ್ಲಿ ಆ ಹವಾಮಾನಕ್ಕೆ ಸಕ್ಕರೆ ನೀರಾಗುತ್ತಿದೆ, ಕಲರ್ ಫೇಡ್ ಆಗುತ್ತಿದ್ದು ಅದು ಬ್ರೌನ್ ಕಲರ್‌ಗೆ ಟರ್ನ್ ಆಗುತ್ತಿದೆ. ಆದ್ದರಿಂದ ಅದನ್ನು ತಕ್ಷಣದಲ್ಲಿ ಮಾರಾಟ ಮಾಡದೇ ಇದ್ದರೆ ನಿಮಗೆ ಮುಂದೆ ಸಕ್ಕರೆ ಮಾರಾಟಕ್ಕೆ ಸಿಗುವುದಿಲ್ಲ. ಮತ್ತೆ ತಾವು ಕಾರ್ಖಾನೆ ಪುನರ್ ಪ್ರಾರಂಭದ ಮೇಲೆ ನೌಕರರಿಗೆ ಸಂಬಳವನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಇದಕ್ಕೆ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಇಲ್ಲಿ ನಿಮ್ಮ ಉತ್ತರದಲ್ಲಿ "........... ಪ್ರಾರಂಭಿಸಿದ್ದಲ್ಲಿ ಈ ಬಾಕಿ ಸಂಬಳವನ್ನು ಪಾವತಿಸುವ ಸಾಧ್ಯತೆ ಇರುತ್ತದೆ" ಎಂದಿದೆ. ಆ ಸಾಧ್ಯತೆ ಇರಬೇಕಾದರೆ ಇವತ್ತು sugar production is secondary. ನೀವು ಪ್ರಮುಖವಾಗಿ ಕೋಜನರೇಶನ್ ಮಾಡಬೇಕು, ಡಿಸ್ಟಿಲರಿಯನ್ನು ಮಾಡಬೇಕು. ಹಾಗೆ ಮಾಡಿದರೆ ಆಗ ಸಕ್ಕರೆ ಕಾರ್ಖಾನೆ ಲಾಭದಾಯಕವಾಗುತ್ತದೆ. ಕೇವಲ ಸಕ್ಕರೆಯನ್ನು ಉತ್ಪಾದನೆ ಮಾಡಿದಾಗ ಸಕ್ಕರೆ ಕಾರ್ಖಾನೆ ಲಾಭದಯಕವಾಗುವುದಿಲ್ಲ. ಇವೆಲ್ಲವನ್ನೂ ಮಾಡಬೇಕೆಂದರೆ ಸುಮಾರು ಐವತ್ತು ಕೋಟಿ ರೂಪಾಯಿ ಬೇಕಾಗುತ್ತದೆ. ಇದನ್ನು ಯಾವ ರೀತಿ

ತಾವು ವ್ಯವಸ್ಥೆ ಮಾಡುತ್ತೀರಿ ಎಂದು ಹೇಳಬೇಕು. ಇದರ ಜತೆಗೆ ಕಬ್ಬಿಗೆ ಏರಿಯಾವನ್ನು ಕೂಡ ಫಿಕ್ಸ್ ಮಾಡಬೇಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : 21 ಕೈಗಾರಿಕೆಗಳ ಜೊತೆಯಲ್ಲಿ ಮಾತನಾಡುವಾಗ ಪ್ರತಿಯೊಬ್ಬರೂ ತಮಗೆ 50 ಕೋಟಿ ರೂ. ಕೊಡಿ ಎಂದು ಕೇಳುತ್ತಾರೆ. ಮಲಪ್ರಭಾದವರು ನಮಗೆ 30 ಕೋಟಿ ರೂ. ಕೊಡಿ ಎನ್ನುತ್ತಾರೆ, ಖಾನಾಪುರದವರು ನಮಗೆ 50 ಕೋಟಿ ರೂ. ಕೊಡಿ ಎನ್ನುತ್ತಾರೆ. ಹಾವೇರಿಯಲ್ಲಿ ಮಾನ್ಯ ಉದಾಸಿಯವರೂ ಕೂಡ ಭೇಟಿಯಾಗಿ ನಮ್ಮ ಕೈಗಾರಿಕೆಗೂ 40 ಕೋಟಿ ರೂ. ಕೊಡಿ ಎಂದು ಹೇಳುತ್ತಾರೆ. ನಿಜ, ಅವರು ಕೇಳುವುದು ಸರಿ. ಇಲ್ಲಿ ಉದ್ದೇಶ ಇರುವಂಥಾದ್ದು ರೈತರಿಗೆ ಒಳ್ಳೆಯದಾಗಬೇಕು, ಹಲವಾರು ಜನರಿಗೆ ಉದ್ಯೋಗ ಅವಕಾಶ ಆಗುತ್ತದೆ ಎಂಬುದು ನಿಜ. ಆದರೆ ಅಂತಿಮವಾಗಿ ಸರ್ಕಾರಕ್ಕೂ ಸಹ ಇತಿಮಿತಿಗಳು ಇವೆ. ಯಾವುದಕ್ಕೆ ಆದ್ಯತೆಯನ್ನು ಕೊಡಬೇಕೆಂದು ಇತಿಮಿತಿ ಇರುತ್ತದೆ. ಆ ಇತಿಮಿತಿಯಲ್ಲಿ ಕೆಲಸ ಮಾಡುವಾಗ ನಾನು ಮೊದಲೇ ಹೇಳಿದೆ, ಬ್ರಹ್ಮಾವರದ ಸಕ್ಕರೆ ಕಾರ್ಖಾನೆಯನ್ನು ಅಷ್ಟೇ ಕಣ್ಮುಂದೆ ಇಟ್ಟುಕೊಂಡು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಓವರ್‌ಆಲ್ ಈ ಕೈಗಾರಿಕೆಗಳು ಏನಿವೆ, ಈ ಸಕ್ಕರೆ ಕಾರ್ಖಾನೆಗಳು ಅನಾರೋಗ್ಯದಿಂದ ಕೂಡಿವೆ. ಅವರು ಪ್ರಾರಂಭ ಮಾಡಲಿಕ್ಕೆ ಏನು ಮಾಡಬೇಕು ಎಂದು ಇದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಆ ಚಿಂತನೆ ಸರ್ಕಾರದಿಂದ ನಡೆಯುತ್ತಿದೆ. ಎರಡನೇಯದು, ತಾವು ಏನು ಸಲಹೆ ಕೊಟ್ಟಿರಿ, ನಾನು ಆಗಲೇ ಒಪ್ಪಿಕೊಂಡೆ. 2002-03ರದ್ದು ನಿಜ. ವಾತಾವರಣ ಪರಿಸ್ಥಿತಿ ಬದಲಾವಣೆಯಿಂದ ಸಕ್ಕರೆ ಬಣ್ಣ ಹಳದಿಯಾಗುತ್ತಿದೆ. ಹಾಗಾಗಿ ಇದರ ಬೆಲೆ ಎರಡೂವರೆ ಕೋಟಿ ರೂ.ಗಳು ಹೊಸ ಸಕ್ಕರೆ ಬೆಲೆ ಮೂರೂವರೆ ಕೋಟಿ ರೂ. ಆಗುತ್ತದೆ. ಹಾಗೆಯೇ ಅದರ ಬಗ್ಗೆ ಕೇಂದ್ರ ಸರ್ಕಾರದ ಜತೆಗೆ ಸಂಪರ್ಕ ನಡೆಸಿ ಆದಷ್ಟು ಬೇಗನೆ ಹಣ ರಿಲೀಸ್ ಮಾಡಿಕೊಂಡು ರೈತರ ಅನುಕೂಲಕ್ಕಾಗಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಲಿಕ್ಕೆ ಮೊದಲನೆಯದಾಗಿ ಪ್ರಯತ್ನ ಮಾಡುತ್ತೇನೆ. ಅನಂತರ ಜಮೀನು ಮಾರಾಟ ಮಾಡಲಿಕ್ಕೆ ಏನು ಅನುಮತಿಯನ್ನು ಕೇಳಿದ್ದಾರೆ, ಆ ಅನುಮತಿಯನ್ನು ನಾವು ಏಕೆ ಕೊಟ್ಟೆವು ಎಂದರೆ ಆ ಹಣ ಬಂದರೆ ಕೊನೆಯ ಪಕ್ಷ ಅವರು ಕಾರ್ಮಿಕರಿಗೆ ಕೊಡಲಿಕ್ಕೆ ಆಗಲಿ ಅನುಕೂಲವಾಗುತ್ತದೆ. ಬ್ಯಾಂಕ್ ಲಯಾಬಿಲಿಟೀಸ್ ಇದ್ದು ಬಹಳಷ್ಟು ಬ್ಯಾಂಕುಗಳಿಗೆ ತೊಂದರೆಯಾಗಿದೆ. ಹಾಗಾಗಿ ಅವರಿಗೂ ಸ್ವಲ್ಪ ಸಹಾಯವಾಗುತ್ತದೆ. ಈ ದೃಷ್ಟಿಯಿಂದ ನಾವು ಸಹಾಯ ಮಾಡಿದ್ದೇವೆ. ರಿವೈವಲ್ ಪ್ಯಾಕೇಜ್ ಏನಿದೆ, ನಾನು ನೇರವಾಗಿ ಇಷ್ಟು ಹಣ ಕೊಡುವುದಕ್ಕೆ ಸಾಧ್ಯವೆಂದು ಹೇಳುವುದಕ್ಕೆ ಆಗುವುದಿಲ್ಲ. ಹಣಕಾಸು ಇಲಾಖೆಯ ಜತೆ ಚರ್ಚೆ ಮಾಡಿ ಇದರ ಬಗ್ಗೆ ಒಂದು ನಿರ್ಣಯ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಎಲ್ಲಾ ರೈತರಿಗೆ ಬಡ್ಡಿ ಮನ್ನಾ ಮಾಡಬೇಕು,

ರೈತರಿಗೆ ಸುಸ್ತಿಬಡ್ಡಿ ಮನ್ನಾ ಮಾಡಬೇಕು, ಸಕ್ಕರೆ ಕಾರ್ಖಾನೆಗೆ ಬಡ್ಡಿ ಮನ್ನಾ ಮಾಡಬೇಕು ಎಂದು ಏನಿದೆ, ಈ ಎಲ್ಲಾ ಪ್ರಸ್ತಾವನೆ ಹಣಕಾಸು ಸಚಿವರ ಮುಂದೆ ಇದೆ. ಅವರು ಬಜೆಟ್‌ನಲ್ಲಿ ಏನೇನು ಕೊಡುತ್ತಾರೆ ಎಂದು ಕಾದು ನೋಡಬೇಕಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದು ರೈತರ ಸಮಸ್ಯೆ ಅಲ್ಲ. ಕಾರ್ಖಾನೆ ದುಡ್ಡು ಕೊಡದೆ ಇದ್ದುದರಿಂದ ಅವರು ಕಟ್ಟಲಿಕ್ಕೆ ಆಗಲಿಲ್ಲ. ಕಾರ್ಖಾನೆ ಹಣ ಕೊಟ್ಟಿದ್ದರೆ ಅವರು ಕೋಆಪರೇಟಿವ್ ಸೊಸೈಟಿಗೆ ಹಣ ಕಟ್ಟುತ್ತಿದ್ದರು. ಈಗ ಕಾರ್ಖಾನೆಯವರು ಹಣ ಕೊಡದೇ ಇರುವುದರಿಂದ ಇಷ್ಟು ಬಡ್ಡಿಯಾಗಿದೆ. ಆದಕಾರಣ ಇದನ್ನು ಕಾರ್ಖಾನೆಯಿಂದ ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : ರಾಜ್ಯದ ರೈತರಿಗೆ ಬಡ್ಡಿ ಮತ್ತು ಸುಸ್ತಿಬಡ್ಡಿ ಮನ್ನಾ ಮಾಡುವ ವಿಚಾರದಲ್ಲಿ ಒಂದು ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ನಾನು ಹಣಕಾಸು ಸಚಿವರ ಜತೆಯಲ್ಲಿ ಚರ್ಚೆ ಮಾಡಿ.......

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದು ಡೈರೆಕ್ಟ್ ಲೋನ್ ಅಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಸಕ್ಕರೆ ಕಾರ್ಖಾನೆಗಳು ಏನು ಸಾಲ ಪಡೆದುಕೊಂಡಿದ್ದಾರಲ್ಲಾ, ಅದರ ಬಗ್ಗೆ ಬಡ್ಡಿ ಮನ್ನಾ ಮಾಡುವ ಬಗ್ಗೆ ಯಾವ ಚಿಂತನೆಯೂ ಸರ್ಕಾರದಲ್ಲಿ ನಡೆಯುತ್ತಿಲ್ಲ. ಕೇವಲ ರೈತರ ಬಗ್ಗೆ ಮಾತ್ರ ನಡೆಯುತ್ತಿದೆ. ಅದೂ ಕೋಆಪರೇಟಿವ್ ಲೋನ್ಸ್, ನ್ಯಾಶನಲೈಸ್ಡ್ ಬ್ಯಾಂಕ್‌ಗಳ ಬಗ್ಗೆ ಅಲ್ಲ. ಹಾಗಾಗಿ ಆ ಚಿಂತನೆ ನಡೆದಾಗ ಈ ವಿಷಯವನ್ನು ಸಹ ನಾನು ಹಣಕಾಸು ಸಚಿವರ ಗಮನಕ್ಕೆ ತಂದು ಇದರ ಬಗ್ಗೆಯೂ ಸಹ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಸಾಕು. ಈಗ ಮುಂದಕ್ಕೆ ಹೋಗೋಣ.

ಶ್ರೀ ಕೆ. ರಘುಪತಿ ಭಟ್ : ಕೋರ್ಟಿನ ಆದೇಶದ ಪ್ರಕಾರ ಅಲ್ಲಿ ಎಲಂಗೆ ಒಮ್ಮೆ ಬಂದಿತ್ತು. ಮತ್ತೆ ಪುನಃ ಸಹಕಾರಿ ಸಂಸ್ಥೆಗಳು ನಮಗೂ ಸಹ ಕೊಡಲಿಕ್ಕೆ ಉಂಟು ಎಂದು ಹೇಳಿಕೊಂಡು ಕೋರ್ಟಿಗೆ ಹೋಗಿ ಮುಂದೆ ಹಾಕಿದ್ದಷ್ಟೇ ವಿನಹ ಒಬ್ಬ ಖಾಸಗಿ ಗುತ್ತಿಗೆದಾರರಿಗೆ ಕೊಡಲಿಕ್ಕೆ ಉಂಟು ಎಂದು ಕೋರ್ಟಿನ ಆದೇಶದ ಪ್ರಕಾರ ಎಲಂಗೆ ಎಲ್ಲಾ ಬಂದಿದೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂಬುದನ್ನು ಹೇಳಬೇಕು. ಇನ್ನೊಂದು, ಇದನ್ನು ಖಾಸಗೀಕರಣ ಮಾಡಿ ಲೀಸ್‌ಗೆ ಆಗಲಿ ಯಾರಿಗಾದರೂ ಕೊಡುವಂಥ ಉದ್ದೇಶ ಸರ್ಕಾರದಲ್ಲಿ ಇದ್ದರೆ ಅದರಿಂದ ಏನಾದರೂ ಪರಿಹಾರ ತರಲಿಕ್ಕೆ ಸಾಧ್ಯತೆ ಇದೆಯೆ? ಸಹಕಾರಿ ಸಂಸ್ಥೆಯಾದ್ದರಿಂದ ಅದಕ್ಕೆ ಏನಾದರೂ ತೊಡಕು ಇದೆಯಾ? ನನಗೆ ತಿಳಿದ ಮಟ್ಟಿಗೆ ಯಾರೋ ಕೆಲವು ಖಾಸಗಿ ಸಂಸ್ಥೆಗಳು ಅದನ್ನು ತೆಗೆದುಕೊಳ್ಳುವುದಕ್ಕೆ ಮುಂದೆ ಬಂದಿದ್ದಾರೆ. ಏಕೆಂದರೆ ಬಂದರು ಹತ್ತಿರದಲ್ಲಿ ಇರುವುದರಿಂದ, ಅದರಿಂದ ಸಾಗಾಟಕ್ಕೆ ಪ್ರಯೋಜನವಾಗುತ್ತದೆ ಎನ್ನುವ ದೃಷ್ಟಿ ಇಟ್ಟುಕೊಂಡು ಅವರು ಆಸಕ್ತಿ ತೋರಿದ್ದಾರೆ. ಮಾನ್ಯ ಸಚಿವರು ಏನು ಹೇಳಿದರು ಎಂದರೆ ಕಬ್ಬು ಬೇಕಾದಷ್ಟು

ಅಲ್ಲಿ ಪೂರೈಕೆಯಾಗುತ್ತಿಲ್ಲ ಎಂದು. ಅದು ಮುಂಚಿನ ಕಾಲ. ಈಗ ಅಲ್ಲಿ ಕಬ್ಬು ಬೆಳೆಗಾರರು ಬೇಕಾದಷ್ಟು ಕಬ್ಬು ಬೆಳೆಯುತ್ತಿದ್ದಾರೆ ಮತ್ತು ಅವರು ಸಾಕಷ್ಟು ಜಾಗ್ರತರಾಗಿದ್ದಾರೆ. ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಬೇರೆ ಬೆಳೆ ಬೆಳೆಯದೇ ಇರುವುದರಿಂದ ಕಬ್ಬನ್ನು ಜಾಸ್ತಿ ಬೆಳೆಯುತ್ತಿದ್ದಾರೆ. ಈಗ ಕಬ್ಬು ಪೂರೈಕೆಗೆ ಯಾವ ತೊಂದರೆಯೂ ಇಲ್ಲ. ಸಕ್ಕರೆ ಕಾರ್ಖಾನೆ ಪುನಃಶ್ಚೇತನಕ್ಕೆ ಬಂದರೆ ಖಂಡಿತವಾಗಿಯೂ ಇದು ಸರಿಹೋಗುತ್ತದೆ. ಇದರ ಬಗ್ಗೆಯೂ ಕೂಡ ಮಾನ್ಯ ಸಚಿವರು ಉತ್ತರ ಹೇಳಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ ಹಾಗೆ ಪೀಸ್‌ಮೀಲ್ ಆಗಿ ಯಾವುದೇ ಸಮಸ್ಯೆಯನ್ನು ಪರಿಹರಿಸಲಿಕ್ಕೆ ಆಗುವುದಿಲ್ಲ. ನಾಳೆ ರಾಜ್ಯದಿಂದ 100–150 ಹಿರಿಯ–ಕಿರಿಯ ಸಹಕಾರಿಗಳನ್ನು ನಾನು ಕರೆದಿದ್ದೇನೆ. ಅದು ಕೋಆಪರೇಟಿವ್ ಇರಬಹುದು, ಪಿ.ಎಲ್.ಡಿ. ಬ್ಯಾಂಕುಗಳು ಇರಬಹುದು, ಮಾರ್ಕೆಂಟಿಂಗ್ ಸೋಸೈಟೀಸ್ ಇರಬಹುದು, ಸಕ್ಕರೆ ಕಾರ್ಖಾನೆಗಳು ಇರಬಹುದು, ಸ್ಪಿನ್ನಿಂಗ್ ಮಿಲ್ಸ್ ಇರಬಹುದು. ಯಾವ ಪ್ರಕಾರ ಇದನ್ನು ರಿವ್ಯೆವ್ ಮಾಡಬೇಕು ಎಂದು ಅವರ ಸಲಹೆಗಳನ್ನು ತೆಗೆದುಕೊಳ್ಳುವುದಕ್ಕೆ ನಾಳೆ ಅವರು ರಾಜ್ಯದ ಬೇರೆಬೇರೆ ಕಡೆಯಿಂದ ಬರುತ್ತಿದ್ದಾರೆ. ಹಾಗಾಗಿ ಅವರ ಜೊತೆ ಮುಂಜಾನೆಯಿಂದ ಕುಳಿತು ಅವರ ಸಲಹೆಗಳನ್ನು ಪಡೆದುಕೊಳ್ಳುತ್ತಿದ್ದೇನೆ. ಹಾಗೆ ಸಲಹೆಯನ್ನು ಪಡೆದುಕೊಂಡು ಕಾಂಪ್ರಹೆನ್ಸೀವ್ ಆಗಿ ಮಾಡಬೇಕೆಂದು ಮಾಡಿದ್ದೇವೆ. ಏಕೆಂದರೆ ಇವತ್ತು ಬಹಳಷ್ಟು ಸಂಸ್ಥೆಗಳು ಅವು ಪ್ರೈಮರಿ ಸೊಸೈಟೀಸ್ ಇರಬಹುದು, 127 ಪಿ.ಎಲ್.ಡಿ ಬ್ಯಾಂಕುಗಳಲ್ಲಿ unrestricted eligibility to finance ಆಗಿ ಕೇವಲ 28 ಬ್ಯಾಂಕುಗಳು ಮಾತ್ರ ಇವೆ. ಹೀಗಾಗಿ ಕಳೆದ ಏಳೆಂಟು ವರ್ಷಗಳಲ್ಲಿ ಬಹಳಷ್ಟು ಸಹಕಾರಿ ಸಂಸ್ಥೆಗಳು ಪ್ರೈಮರಿ ಸೊಸೈಟಿಗಳು ಇರಬಹುದು, ಪಿ.ಎಲ್.ಡಿ. ಬ್ಯಾಂಕ್ ಇರಬಹುದು, ಅವರು ಅರ್ಹತೆಯನ್ನು ಕಳೆದುಕೊಂಡಿದ್ದಾರೆ. ನಾವು 1500 ಕೋಟಿ ರೂಪಾಯಿಗಳ ಸಾಲ ಏನು ಕೊಟ್ಟಿದ್ದೆವು, ಅದು ಈಗ ಒಂದು ಸಾವಿರ ಕೋಟಿ ರೂಗೆ ಬಂದಿದೆ. ಕೇಂದ್ರ ಸರ್ಕಾರದಲ್ಲಿ ಮಾನ್ಯ ಮನಮೋಹನ್‌ಸಿಂಗ್ ಅವರು ರೂರಲ್ ಕ್ರೆಡಿಟ್ ರೇಟ್‌ನ್ನು ಡಬಲ್ ಮಾಡಿ ಎಂದು ಹೇಳುತ್ತಾರೆ. ಅಂದರೆ ನಾವು ಸಹಕಾರ ಕ್ಷೇತ್ರದಲ್ಲಿ ಇದನ್ನು ಮೂರು ಸಾವಿರ ಕೋಟಿ ರೂ. ಮಾಡಬೇಕಾಗುತ್ತದೆ. ಹಾಗಾಗಿ ಹಣಕಾಸು ಸಚಿವರು ಇದರ ಬಗ್ಗೆ ಚಿಂತನೆ ಮಾಡುತ್ತಿದ್ದಾರೆ. ನಾನು ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ರೈತರ ಕಷ್ಟ, ಸಹಕಾರ ಸಂಘಗಳ ಕಷ್ಟವನ್ನು ಗಮನದಲ್ಲಿಟ್ಟುಕೊಂಡು ಒಂದು ಯೋಗ್ಯವಾದ ನಿರ್ಣಯವನ್ನು ಬರುವ ಮುಂಗಡ ಪತ್ರದಲ್ಲಿ ಸರ್ಕಾರ ಮಾಡುತ್ತದೆ ಎನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ನಾನು ಕೊಡುತ್ತಿದ್ದೇನೆ.

ಶ್ರೀ ಕಾರಜೋಳ ಗೋವಿಂದ ಮಕಟಪ್ಪ : ಒಂದು ಮಹತ್ವದ ವಿಚಾರ ಇದೆ.

ಅಧ್ಯಕ್ಷರು : ಯಾವುದು ಮಹತ್ವದ ವಿಚಾರ ಅಲ್ಲ ಹೇಳಿ.

ಶ್ರೀ ಕಾರಜೋಳ ಗೋವಿಂದ ಮಕಟಪ್ಪ : ಸನ್ಮಾನ್ಯ ಅಧ್ಯಕ್ಷರೇ, ಕಳೆದ ನಾಲ್ಕು ವರ್ಷದಿಂದ ಸಕ್ಕರೆ ಕಾರ್ಖಾನೆಗಳು ಮತ್ತು ಕಬ್ಬು ಬೆಳೆಯತಕ್ಕಂಥ ರೈತರು ಸಂಕಷ್ಟದಲ್ಲಿರುವುದರಿಂದ ಕೇಂದ್ರ ಸರ್ಕಾರ ಕಳೆದ ವರ್ಷ ಒಂದು ಆದೇಶವನ್ನು ಹೊರಡಿಸಿತ್ತು. ಅದು ಏನು ಆದೇಶ ಎಂದರೆ ಸಕ್ಕರೆ ಬಾಂಡುಗಳನ್ನು ಬಿಡುಗಡೆ ಮಾಡಿ ನಾಲ್ಕು ಪರ್ಸೆಂಟ್ ಬಡ್ಡಿ ದರದಲ್ಲಿ ಆ ಕಾರ್ಖಾನೆಗಳಿಗೆ ಸಾಲವನ್ನು ಕೊಡಬೇಕು ಮತ್ತು ಒನ್‌ಟೈಮ್ ಅಸಿಸ್ಟೆನ್ಸ್ ಮಾಡಬೇಕು ಎಂದು ಹೇಳಿ ಕೇಂದ್ರ ಸರ್ಕಾರ ನಿರ್ಧಾರ ಮಾಡಿದ ಪ್ರಕಾರ ನಮ್ಮ ನೆರೆಯ ರಾಜ್ಯವಾದ ಮಹಾರಾಷ್ಟ್ರದಲ್ಲಿ ಈ ಯೋಜನೆಯ ಮೂಲಕ ಸುಮಾರು ಹದಿಮೂರು ನೂರು ಕೋಟಿ ರೂಪಾಯಿ ಲಾಭವನ್ನು ಅವರು ಈಗಾಗಲೇ ಪಡೆದಿದ್ದಾರೆ. ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಸಕ್ಕರೆ ಬಾಂಡುಗಳನ್ನು ಬಿಡುಗಡೆ ಮಾಡುವುದಕ್ಕೆ ಸರ್ಕಾರಕ್ಕೆ ಇರುವ ತೊಂದರೆ ಏನು? ನೀವು ಕೂಡ ಅದನ್ನು ಕೂಡಲೇ ಬಿಡುಗಡೆ ಮಾಡಿ. ಯಾವ್ಯಾವ ಕಾರ್ಖಾನೆಗಳು ಕಷ್ಟದಲ್ಲಿವೆ, ಯಾವ್ಯಾವುದು ಸಂಕಷ್ಟದಲ್ಲಿವೆ ಅವರ ನೆರವಿಗೆ ತಾವು ಬರಬೇಕಾಗುತ್ತದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಕೂಡಲೇ ತಾವು ಕೂಡ ಈ ಯೋಜನೆಯನ್ನು ಹಾಕಿಕೊಂಡು ಸಂಕಷ್ಟದಲ್ಲಿರುವಂತಹ ಕಬ್ಬು ಬೆಳೆಗಾರರ ಮತ್ತು ಕಾರ್ಖಾನೆಗಳಿಗೆ ನೆರವಿಗೆ ಬರಬೇಕು ಎಂದು ಸರ್ಕಾರಕ್ಕೆ ಮತ್ತೊಮ್ಮೆ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪನಾಯಕರು ಏನು ಸಲಹೆ ಕೊಟ್ಟಿದ್ದಾರೆ, ಕೇಂದ್ರ ಸರ್ಕಾರ ಒಂದು ಯೋಜನೆ ತಂದಿದೆ. ಸಕ್ಕರೆ ಕಾರ್ಖಾನೆಗಳು ಯಾವು ಸಿಕ್ ಆಗಿವೆ, ಯಾವುದು ರಿಹ್ಯಾಬಿಲೇಟ್ ಆಗಬೇಕಾಗಿದೆ, ಅವುಗಳಿಗೆ 4 ಪರ್ಸೆಂಟ್ ಬಡ್ಡಿ ದರದಲ್ಲಿ ಸಾಲ ಕೊಡುವುದು. ಇದರ ಲಾಭ ಕರ್ನಾಟಕ ಎಷ್ಟು ತೆಗೆದುಕೊಳ್ಳಬೇಕಾಗಿತ್ತು, ಅಷ್ಟು ತೆಗೆದುಕೊಂಡಿಲ್ಲ ವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾಗೂ ಲಾಭ ತೆಗೆದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಆದರೆ, ಒಂದು ವಿಚಾರ. ನಾನು ರಿವ್ಯೂ ಮಾಡುವಾಗ ಹಲವಾರು ಸಕ್ಕರೆ ಕಾರ್ಖಾನೆಗಳನ್ನು ನೋಡಿದ್ದೇನೆ. ಫೈನಾನ್ಷಿಯಲ್ ಡಿಸಿಪ್ಲೀನ್ ಇಲ್ಲ. ಸಕ್ಕರೆ ಕಾರ್ಖಾನೆಯಲ್ಲಿ ಫೈನಾನ್ಷಿಯಲ್ ಡಿಸಿಪ್ಲೀನ್ ಇಲ್ಲ. ಅದೇ ಪ್ರೈವೇಟ್ ಸೆಕ್ಟಾರ್‌ನಲ್ಲಿರತಕ್ಕ ಸಕ್ಕರೆ ಕಾರ್ಖಾನೆಗಳು ಚೆನ್ನಾಗಿ ನಡೆಯುತ್ತಾ ಇವೆ. ಇಲ್ಲಿ ಏಕೆ ನಡೆಯುತ್ತಾ ಇಲ್ಲವೆನ್ನುವ ಪ್ರಶ್ನೆಗೆ ಸಹ ಉತ್ತರ ಸಿಗಬೇಕಾಗಿದೆ. ನಾನು ಯಾರ ಮೇಲೂ ಆಪಾದನೆ ಮಾಡುತ್ತಾ ಇಲ್ಲ. ಆದರೆ, ಸಹಕಾರಿ ರಂಗದಲ್ಲಿ ಸಕ್ಕರೆ ಕಾರ್ಖಾನೆಗಳು, ಇವು ರೈತರ ಸಂಸ್ಥೆಗಳು ಅಲ್ಲಿ ರೈತರಿಗೆ, ಕೃಷಿ ಕಾರ್ಮಿಕರಿಗೆ ಒಳ್ಳೆಯ ಸಹಾಯ ಆಗಬೇಕು. ಒಳ್ಳೆಯ ಯೋಗ್ಯ ದರ ಸಿಗಬೇಕು. ಸಕಾಲದಲ್ಲಿ ಪೇಮೆಂಟ್ ಆಗಬೇಕು. ಇದು ಆಗುತ್ತಾ ಇಲ್ಲ. ಹಾಗಾಗಿ, ಆ ದರ

ಬಗ್ಗೆ ಸಮಗ್ರವಾಗಿ ಒಂದು ಚಿಂತನೆ ಮಾಡಿ ಪರಿಹಾರ ಕಂಡುಹಿಡಿಯಲಿಕ್ಕೆ ಎಲ್ಲರೂ ಕೂಡಿ, ಪಕ್ಷಾತೀತವಾಗಿ ಪ್ರಯತ್ನ ಮಾಡಬೇಕಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಈ ಸಕ್ಕರೆ ಕಾರ್ಖಾನೆಗಳಲ್ಲಿ ತಿಮಿಂಗಲಗಳು ಸೇರಿಸಿಕೊಂಡಿವೆ. ಆ ತಿಮಿಂಗಿಲಗಳನ್ನು ನೀವು ಪನಿಷ್ ಮಾಡಬೇಕಲ್ಲಾ. ಈ ರಾಜ್ಯದಲ್ಲಿರುವಂಥ ಯಾವುದೇ ಸಹಕಾರಿ ಸಂಸ್ಥೆಗಳನ್ನು ತೆಗೆದುಕೊಳ್ಳಿ. ಅಷ್ಟೊಂದು ಒಳ್ಳೆಯ ರೀತಿಯಲ್ಲಿ ಹೆಸರು ಪಡೆದು ರೈತರಿಗೆ ಅನುಕೂಲವಾಗುತ್ತಿದ್ದ ಕಾರ್ಖಾನೆಗಳು ಎಲ್ಲವೂ ಮುಚ್ಚುವ ಸ್ಥಿತಿಗೆ ಬಂದಿವೆ. ರಾಜ್ಯ ಸರ್ಕಾರದವರು ಬೇಕಾದಷ್ಟು ಸಹಾಯವನ್ನೂ ಕೊಟ್ಟಿದ್ದಾರೆ. ಇಷ್ಟಾದರೂ ಅಲ್ಲಿ ಹಗಲು ದರೋಡೆ ನಡೆಯುತ್ತಿರಬೇಕಾದರೆ ಎಲ್ಲಾದರೂ ಒಂದು ಕಡೆ ಪನಿಷ್‌ಮೆಂಟ್ ಯಾರಿಗಾದರೂ ಆಗಿದೆಯೇ? ಸರ್ಕಾರ ಕ್ರಮ ತೆಗೆದುಕೊಂಡಿದೆಯೇ? ಹಾಗಾದರೆ, ಈ ಸಹಕಾರಿ ಕ್ಷೇತ್ರದ ಬಗ್ಗೆ ಜನ ವಿಶ್ವಾಸ ಕಳೆದುಕೊಳ್ಳುವುದಿಲ್ಲವೇ? ಇದರ ಬಗ್ಗೆ ಏನಾದರೂ ಗಂಭೀರವಾದ ಚರ್ಚೆ ನಡೆದಿದೆಯೇ, ಚಿಂತನೆ ನಡೆದಿದೆಯೇ? ಇಲ್ಲೇನಾಗಿದೆ ಎಂದರೆ, ಯಾರು ಬೇಕಾದರೂ, ಎಷ್ಟು ಬೇಕಾದರೂ ಲೂಟಿ ಮಾಡಿಕೊಂಡು ಹೋಗಿ, ಸರ್ಕಾರದ ಮೇಲೆ ಹೊರೆಯಾಗುತ್ತಿದೆ. ಬ್ರಹ್ಮಾವರದ ಸಕ್ಕರೆ ಕಾರ್ಖಾನೆಯ ವಿಚಾರದಲ್ಲಿ ರೈತರು ಸಫರ್ ಆಗುತ್ತಿದ್ದಾರಲ್ಲಾ, ಇದಕ್ಕೆ ಯಾರು ಜವಾಬ್ದಾರರು? ಇದು ಆಗುತ್ತಲೇ ಬರುತ್ತಿದೆಯಲ್ಲಾ. ನೀವು ಎಲ್ಲಾದರೊಂದು ಕಡೆ ಸೀರಿಯಸ್ಸಾಗಿ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳದೇ ಇದ್ದರೆ, ಯಾರೋ ಕೆಲವರು ಜೈಲಿಗೆ ಹೋಗದೇ ಇದ್ದರೆ, ಯಾರದೋ ಮನೆ ಮಠ ಹರಾಜು ಮಾಡದೇ ಇದ್ದರೆ ಇದಕ್ಕೆ ಕೊನೆ ಎಲ್ಲಿ ಅಂತ?

ಶ್ರೀ ಆರ್.ವಿ. ದೇಶಪಾಂಡೆ : ಯಾರು ಬೇಕಾದರೂ ಲೂಟಿ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಕಾಯಿದೆಗಳು, ಕಾನೂನುಗಳು ಇವೆ. ಆದರೆ, ನೀವು ಹೇಳಿದ ಹಾಗೆ ಫೈನಾನ್ಷಿಯಲ್ ಡಿಸಿಪ್ಲೀನ್ ಬರಬೇಕಾಗಿದೆ. ನಾನು ಇಲಾಖೆಯ ಜವಾಬ್ದಾರಿ ತೆಗೆದುಕೊಂಡ ಮೇಲೆ ನೋಡಿದ್ದೇನೆ. ಆರ್ಥಿಕ ಡಿಸಿಪ್ಲೀನ್ ಏನಿದೆ, ಅದು ಬಹಳ ಕೊರತೆ ಇದೆ. ಹಾಗಾಗಿ, ಮುಖ್ಯವಾಗಿ ಇಲ್ಲಿ ಫೈನಾನ್ಷಿಯಲ್ ಡಿಸಿಪ್ಲೀನ್ ತರುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ನಾವು ಮಾಡುತ್ತೇವೆನ್ನುವ ಭರವಸೆ ಕೊಡುತ್ತೇನೆ. ಯಾರು ತಪ್ಪು ಮಾಡಿದ್ದಾರೆ, ಅವರು ಯಾರೇ ಇರಬಹುದು. ಅದು ಪ್ರೈವೇಟ್ ಸೆಕ್ಟಾರ್‌ನಲ್ಲಿ ಮಾಡುತ್ತಾರೆ ಅಥವಾ ಕೋಆಪರೇಟಿವ್ ಸೆಕ್ಟಾರ್‌ನಲ್ಲಿ ಮಾಡುತ್ತಾರೆ, ಆ ರೀತಿ ಯಾರು ಮಾಡಿದ್ದಾರೆ ಖಂಡಿತವಾಗಿ ಆ ವಿಚಾರ ನಮ್ಮ ಗಮನಕ್ಕೆ ಬಂದಾಗ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂದು ಭರವಸೆ ಕೊಡುತ್ತೇನೆ.

ಮಾನ್ಯ ಸದಸ್ಯರು : ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆಯಲ್ಲಿ 1200 ಕೋಟಿ ರೂಪಾಯಿ ರೈತರ ಬಾಕಿ ಇದೆ. ಇಷ್ಟು ಭಾರ ಇಟ್ಟುಕೊಂಡು ಸಕ್ಕರೆ ಕಾರ್ಖಾನೆಗಳಲ್ಲಿ ಯಾವ ರೀತಿಯಿಂದ ತೂಗಿಸಿಕೊಂಡು ಹೋಗುತ್ತಾರೆನ್ನುವುದನ್ನು ಆಲೋಚನೆ ಮಾಡಬೇಕಾಗಿದೆ.

ಶ್ರೀ ಕೆ. ರಘುಪತಿ ಭಟ್ : ಖಾಸಗಿಯವರಿಗೆ ಕೊಡುವುದರ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವುದನ್ನು ಹೇಳಿದರೆ ಒಳ್ಳೆಯದು. ಏಕೆಂದರೆ, ಕೆಲವರು ಮುಂದೆ ಬರುತ್ತಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಸಕ್ಕರೆ ಕಾರ್ಖಾನೆಗಳ ಬಗ್ಗೆ ಮಾಜಿ ಸಚಿವರಾದಂಥ ಕೌಜಲಗಿಯವರ ನಾಯಕತ್ವದಲ್ಲಿ ಸಚಿವರ ಸಂಪುಟದ ಸಬ್ ಕಮಿಟಿ ಮಾಡಿದ್ದು ಅವರು ವರದಿ ಕೊಟ್ಟಿದ್ದಾರೆ. ಅದರಲ್ಲಿ ಪ್ರತಿಯೊಂದು ಸಕ್ಕರೆ ಕಾರ್ಖಾನೆಗಳ ಬಗ್ಗೆ, ಅದು ಪ್ರೈವೇಟ್, ಜಾಯಿಂಟ್ ಸೆಕ್ಟಾರ್, ಸರ್ಕಾರದ್ದು ಇರಬಹುದು, ಕೋ ಆಪರೇಟಿವ್‌ದು ಇರಬಹುದು, ಏನು ನಿರ್ಣಯ ತೆಗೆದುಕೊಳ್ಳಬಹುದೆಂಬುದಕ್ಕೆ ವರದಿ ಕೊಟ್ಟಿದ್ದಾರೆ. ಅದೂ ಸಹ ಇವತ್ತು ಸಚಿವ ಸಂಪುಟದ ಮುಂದೆ ಇದೆ. ತಾವೇನು ಸಲಹೆ ಕೊಟ್ಟಿದ್ದೀರಿ, ಪ್ರೈವೇಟೈಸ್ ಮಾಡಬೇಕೇ, ಲೀಸ್ ಕೊಡಬೇಕೇ ಈ ಸಲಹೆಯೂ ಅದರಲ್ಲಿ ಸೇರಿದೆ. ಅದರ ಬಗ್ಗೆ ಸರ್ಕಾರ, ಸಚಿವ ಸಂಪುಟ ಚಿಂತನೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತದೆ.

ದೇವದಾಸಿಯರಿಗೆ ವಸತಿ ಸೌಕರ್ಯ ಕಲ್ಪಿಸುವ ಬಗ್ಗೆ

42(18) ಶ್ರೀ ಕಾರಜೋಳ್ ಗೋವಿಂದ ಮಕಟಪ್ಪ (ಮುಧೋಳ) ಮಾನ್ಯ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದೇವದಾಸಿ ಮಹಿಳೆಯರಿಗೆ ವಿಶೇಷ ವಸತಿ ಯೋಜನೆಯನ್ನು ಪ್ರಸಕ್ತ ಸಾಲಿನಲ್ಲಿ ಕೈ ಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ ಕಾರಣವೇನು;

ಇ) ಕೂಡಲೇ ಇವರಿಗೆ ವಸತಿ ಯೋಜನೆಯನ್ನು ಪುನ: ಪ್ರಾರಂಭಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು;

ಈ) ಪ್ರಸಕ್ತ ಸಾಲಿನಲ್ಲಿ ಎಷ್ಟು ಹಣ ಒದಗಿಸಲಾಗುವುದು?

ಶ್ರೀಮತಿ ಭಾಗೀರಥಿ ಮರಳ ಸಿದ್ಧನಗೌಡ (ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವರು)

ಅ) ದೇವದಾಸಿ ಮಹಿಳೆಯರಿಗೆ ವಿಶೇಷ ವಸತಿ ಕಲ್ಪಿಸುವ ಯೋಜನೆ ಯಾವುದು ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ್ : ಸನ್ಮಾನ್ಯ ಅಧ್ಯಕ್ಷರೇ, ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. ಈ ರಾಜ್ಯದಲ್ಲಿ ದೇವದಾಸಿ ಮಹಿಳೆಯರಿಗೆ ಸರ್ಕಾರದಲ್ಲಿ ವಿಶೇಷವಾದಂಥ ಒಂದು ವಸತಿ ಯೋಜನೆ ಇತ್ತು. ಅದನ್ನು ಸರ್ಕಾರ ಕೈಬಿಡಲಿಕ್ಕೆ ಕಾರಣ ಏನು ಎಂದು. ಇದಕ್ಕೆ ಸರ್ಕಾರದ ಉತ್ತರ ಬಂದಿದೆ. ದೇವದಾಸಿ

ಮಹಿಳೆಯರಿಗೆ ವಿಶೇಷವಾದಂಥ ವಸತಿ ಯೋಜನೆ ಈ ರಾಜ್ಯದಲ್ಲಿ ಇರಲಿಲ್ಲ ಎಂದು. ಈ ಪ್ರಶ್ನೆ ನಿನ್ನೆ ಸಮಾಜ ಕಲ್ಯಾಣ ಇಲಾಖೆ ಪಟ್ಟಿಯಲ್ಲಿ ಸೇರಿತ್ತು. ಇವತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ಉತ್ತರ ಕೊಡುತ್ತಿದ್ದಾರೆ. ಇದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ವಿಷಯ ಅಲ್ಲ. ಇದು ಪರಿಶಿಷ್ಟಜಾತಿ ಜನಾಂಗದವರ ಪ್ರಶ್ನೆ ಇರುವುದರಿಂದ, ಇದಕ್ಕೆ ಸಮಾಜ ಕಲ್ಯಾಣ ಇಲಾಖೆಯವರೇ ಉತ್ತರಿಸಬೇಕಾಗಿತ್ತು. ಆದರೆ, ನಾನು ಸರ್ಕಾರಕ್ಕೆ ತಮ್ಮ ಮುಖಾಂತರ ಒಂದು ಪ್ರಶ್ನೆ ಕೇಳುವುದಕ್ಕೆ ಬಯಸುತ್ತೇನೆ. ದಯವಿಟ್ಟು ತಾವೂ ಕೂಡ ಗಮನ ಕೊಡಬೇಕು. ವಿಶೇಷವಾದಂಥ ಯೋಜನೆ ಈ ರಾಜ್ಯದಲ್ಲಿ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಸರ್ಕಾರಕ್ಕೆ ಏನಾದರೂ ಜವಾಬ್ದಾರಿ ಇದ್ದರೆ, ಜವಾಬ್ದಾರಿಯುತವಾಗಿ ಉತ್ತರ ಕೊಡಬೇಕಾಗಿತ್ತು. ಈ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಜನಾಂಗದ ದೇವದಾಸಿ ಹೆಣ್ಣು ಮಕ್ಕಳಿಗೆ ವಿಶೇಷವಾದಂಥ ಹೌಸಿಂಗ್ ಯೋಜನೆ ಇತ್ತು. ನಾನೇ ನನ್ನ ಕ್ಷೇತ್ರದಲ್ಲಿ ಹಿಂದಿನ ಅವಧಿಯಲ್ಲಿ ಕೊಡಿಸಿದ್ದೇನೆ. ಆದರೆ, ಇಲ್ಲಿ ಈ ಯೋಜನೆ "ಇಲ್ಲ" ಎಂದು ಉತ್ತರ ಕೊಟ್ಟಿದ್ದಾರೆ. ಇದು ಎಷ್ಟೊಂದು ಬೇಜವಾಬ್ದಾರಿ ಎಂಬುದನ್ನು ತಾವೇ ವಿಚಾರ ಮಾಡಿ. ಸರ್ಕಾರಕ್ಕೆ ನಾನು ಒಂದು ಸವಾಲನ್ನು ಹಾಕುವುದಕ್ಕೆ ಬಯಸುತ್ತೇನೆ. ಈ ಯೋಜನೆ ಇತ್ತು ಎನ್ನುವುದನ್ನು ನಾನು ಸಿದ್ಧ ಮಾಡಿಕೊಟ್ಟರೆ, ಈ ಸರ್ಕಾರ ರಾಜಿನಾಮೆ ಕೊಡುತ್ತದೆಯೇ ಹೇಳಲಿ. ಇಲ್ಲ ಎಂದರೆ, ನಾನು ಬೇಕಾದರೆ ರಾಜಿನಾಮೆ ಕೊಡಲಿಕ್ಕೆ ಸಿದ್ಧ ಇದ್ದೇನೆ.

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ : ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಹಿರಿಯರಿದ್ದಾರೆ, ಎಲ್ಲಾ ವಿಚಾರಗಳು ಅವರಿಗೆ ಗೊತ್ತಿರುವುದರಿಂದ, ಇವತ್ತು ಅವರೇನು ಹೇಳುತ್ತಿದ್ದಾರೆ. ಈ ಕಾರ್ಯಕ್ರಮ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಿದ್ದು ಎಂದು. ಆದರೆ, ಈ ಕಾರ್ಯಕ್ರಮ ನಡೆಯುತ್ತಾ ಇರುವುದು ನಮ್ಮ ಇಲಾಖೆಯಿಂದಲೇ. ಹಣ ಮಾತ್ರ ನೇರವಾಗಿ ಸಮಾಜ ಕಲ್ಯಾಣ ಇಲಾಖೆಗೆ ಹೋಗತಕ್ಕಂಥಾದ್ದು. ಇಲ್ಲಿ ದೇವದಾಸಿಯರಿಗೆ ವಿಶೇಷ ವಸತಿ ಯೋಜನೆ ಎನ್ನತಕ್ಕಂಥಾದ್ದು ಯಾವುದೂ ಇಲ್ಲ. ಬಹುಶ: ತಮಗೂ ಗೊತ್ತಿರುವ ಹಾಗೆ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ವಿಶೇಷವಾಗಿ ಸರ್ಕಾರವನ್ನು ಟಾರ್ಗೆಟ್ ಕೊಡುತ್ತದೆ, ಆ ಸಂದರ್ಭದಲ್ಲಿ ನಾವು ಇವರನ್ನು ವಿಶೇಷವಾಗಿ ವಸತಿಯನ್ನು ಕಲ್ಪಸಬಹುದಾಗಿದೆ. ಅದು ತಮಗೂ ಗೊತ್ತಿರತಕ್ಕ ವಿಚಾರ. ಆದರೆ, ನಾವು ಈ ದೇವದಾಸಿ ಯರೇನಿದ್ದಾರೆ, ಈ ಅನಿಷ್ಟ ಪದ್ಧತಿಯನ್ನು ಹೋಗಲಾಡಿಸಬೇಕೆಂದು ಪುನರ್ ವಸತಿ ಎನ್ನತಕ್ಕ ವಿಚಾರದಲ್ಲಿ ಹಲವಾರು ಜಿಲ್ಲೆಗಳಲ್ಲಿ, ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಈ ಪದ್ಧತಿಯನ್ನು ಆದಷ್ಟು ನಿವಾರಣೆ ಮಾಡಲಿಕ್ಕೆ ನಮ್ಮ ಇಲಾಖೆಯಿಂದ ಪ್ರಯತ್ನಪಡುತ್ತಿದ್ದೇವೆ.

ಈ ದೇವದಾಸಿ ಪದ್ಧತಿ ಆದಷ್ಟು ಬೇಗ ನಿವಾರಣೆಯಾಗಬೇಕು. ಅವರಲ್ಲಿ ಅವೇರ್‌ನೆಸ್ ಮೂಡಿಸಬೇಕು ಮತ್ತು ಆರ್ಥಿಕ, ಸಾಮಾಜಿಕ ಅಭಿವೃದ್ಧಿಯನ್ನು ಅವರು ಹೊಂದಬೇಕು ಮತ್ತು ಅವರ ಆದಾಯ, ಉತ್ಪನ್ನ ಚಟುವಟಿಕೆಗಳಿಗೆ ಬ್ಯಾಂಕ್ ಮುಖಾಂತರ ಸಾಲ ಯೋಜನೆ ಮತ್ತು ಇನ್ನಿತರ ಸವಲತ್ತನ್ನು ಕೊಟ್ಟು, ಅವರಿಗೆ ಪುನರ್ ವಸತಿಯನ್ನು ಮಾಡುತ್ತಿದ್ದೇವೆ. ಅವರು ಏನು ಕೇಳುತ್ತಿದ್ದಾರೆ, ಯಾವ ಕೆಲಸವನ್ನು ಮಾಡಬೇಕು, ಆ ಕೆಲಸಗಳಿಗೆ ನಾವು ಹಣಕಾಸು ಇತ್ಯಾದಿ ಎಲ್ಲಾ ನೆರವನ್ನು ಕೊಡುತ್ತಾ ಬಂದಿದ್ದು ಹಿಂದೆ ಮೂರು ಜಿಲ್ಲೆಗಳಲ್ಲಿ ಮಾತ್ರ ಈ ಕಾರ್ಯಕ್ರಮ ಮಾಡುತ್ತಿದ್ದೆವು. ಆದರೆ, 1994ರ ಸರ್ವೆ ನಂತರ ಸುಮಾರು 10 ಜಿಲ್ಲೆಗಳಲ್ಲಿ ನಾವು ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಇದು ತಮಗೂ ಗೊತ್ತಿರತಕ್ಕ ವಿಚಾರ. ಪ್ರಸಕ್ತ ಸಾಲಿನಲ್ಲಿ ಸುಮಾರು 70 ಲಕ್ಷ ರೂಪಾಯಿಗಳ ಆಯವ್ಯಯವನ್ನು ಇಟ್ಟುಕೊಂಡು ಈ ಎಲ್ಲಾ ಜಿಲ್ಲೆಗಳಲ್ಲಿ ಪುನರ್ ವಸತಿಯನ್ನು ಕಲ್ಪಿಸುವ ನಿಟ್ಟಿನಲ್ಲಿ ನಾವು ಸಾಗುತ್ತಾ ಇದ್ದೇವೆ. ಸನ್ಮಾನ್ಯ ಸಭಾಧ್ಯಕ್ಷರೇ, ತಮ್ಮ ಮುಖಾಂತರ ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ನನ್ನ ಇಲಾಖೆಗೆ ಸಂಬಂಧಪಟ್ಟ ಕೆಲವು ಕಾರ್ಯಕ್ರಮಗಳು ಅಡೆತಡೆ ಆಗುವಲ್ಲಿ ಕೆಲವು ಇಲಾಖೆಗಳು ನನಗೆ ಕಾರಣ ಆಗುತ್ತಾ ಇವೆ. ಈ ಆಹಾರಕ್ಕೆ ಸಂಬಂಧಪಟ್ಟ ಹಾಗೆ ತಾಲ್ಲೂಕು ಪಂಚಾಯ್ತಿಯಲ್ಲಿ ನಮ್ಮ ಹಣ ಪೂಲ್ ಆಗುತ್ತದೆ. ಅಲ್ಲಿಂದ, ಸಮಯಕ್ಕೆ ಸರಿಯಾಗಿ ನಮಗೆ ಹಣ ಬಿಡುಗಡೆಯಾಗುವುದಿಲ್ಲ. ದೇವದಾಸಿಯರ ಪುನರ್ ವಸತಿ ಮಾಡಬೇಕೆಂದರೆ, ಈ ಹಣ ಸಮಾಜ ಕಲ್ಯಾಣ ಇಲಾಖೆಯಲ್ಲಿ ಪೂಲ್ ಆಗಿರುತ್ತದೆ. ಈ ಕಾರಣದಿಂದ ನಮಗೆ ಕೆಲವು ಕಾರ್ಯ ಕ್ರಮಗಳನ್ನು ಮಾಡುವುದಕ್ಕಾಗುತ್ತಾ ಇಲ್ಲ. ನಾನು ಈಗಾಗಲೇ ನಮ್ಮ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಿಗೆ ಒಂದು ಪತ್ರವನ್ನು ಬರೆದಿದ್ದೇನೆ. ಆದಷ್ಟು ಬೇಗ ನಮಗೆ ಈ ಹಣವನ್ನು ಕೊಡಿ, ನಾವು ಕಾರ್ಯಕ್ರಮವನ್ನು ಮಾಡಬೇಕು ಎಂಬುದಾಗಿ ಅವರಿಗೆ ಪತ್ರವನ್ನು ಬರೆದಿದ್ದೇನೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸನ್ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ್ : ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಈ ಯೋಜನೆ “ಇಲ್ಲ” ಎಂದು ವಾದ ಮಾಡುತ್ತಿದ್ದಾರಲ್ಲಾ, ಎಂತಹ ವಿಚಿತ್ರ ಸಂಗತಿ ಇದು. ಈ ಯೋಜನೆ ಈ ರಾಜ್ಯದಲ್ಲಿ ಇತ್ತು. ನನ್ನ ಕ್ಷೇತ್ರದಲ್ಲೇ, ನಾನೇ ಹಿಂದಿನ ಅವಧಿಯಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇನೆ. ಇವತ್ತು ಈ ಯೋಜನೆಯೇ ರಾಜ್ಯದಲ್ಲಿ ಇಲ್ಲ ಎಂದು ಹೇಳಿದರೆ ಹೇಗೆ? ಸರ್ಕಾರದ್ದು ಎಷ್ಟೊಂದು ಬೇಜವಾಬ್ದಾರಿತನದ ಉತ್ತರ. ಅಧಿಕಾರಿಗಳನ್ನು ಸ್ವಲ್ಪ ತರಾಟೆಗೆ ತೆಗೆದುಕೊಳ್ಳ ಬೇಕಾಗುತ್ತದೆ. ಇದು ಸಮಾಜ ಕಲ್ಯಾಣ ಇಲಾಖೆಯಲ್ಲೇ ಇತ್ತು. ಪರಿಶಿಷ್ಟ ಜಾತಿ ಪಂಗಡದವರಿಗಾಗಿ ಏನೊಂದು ವಿಶೇಷವಾದಂಥ ಅಭಿವೃದ್ಧಿ ಕಾರ್ಪೋರೇಷನ್

ಇದೆ, ಆ ಕಾರ್ಪೋರೇಷನ್ ಮುಖಾಂತರವೇ ನಡೆದಿದೆ. ಅವರೇ ರಾಜೀವ್ ಗಾಂಧಿ ಹೌಸಿಂಗ್ ಸ್ಕೀಮ್‌ಗೆ ಹಣ ಕೊಟ್ಟಿದ್ದಾರೆ. ಅವರೇ ಮುನಿಸಿಪಾಲಿಟಿಗಳಿಗೆ ಹಣ ಕೊಟ್ಟಿದ್ದಾರೆ. "ಇಲ್ಲ" ಎಂದು ವಾದ ಮಾಡಿದರೆ ಹೇಗೆ? ಇದಕ್ಕೆ ಏನಾದರೂ ಜವಾಬ್ದಾರಿ ಬೇಡವೇ?

ಅಧ್ಯಕ್ಷರು : ಮಾನ್ಯ ಕಾರಜೋಳ್‌ರವರೇ, ಮಾನ್ಯ ಸಚಿವರು ಹೊಸಬರು ಇದ್ದಾರೆ, ಅಧಿಕಾರಿಗಳು ಏನು ಮಾಹಿತಿ ಕೊಟ್ಟಿದ್ದಾರೆ, ಅದರ ಪ್ರಕಾರ ಉತ್ತರ ಕೊಟ್ಟಿದ್ದಾರೆ. ನೀವು, ಹಿಂದೆ ಈ ಯೋಜನೆ ಇತ್ತು, ನನ್ನ ಕ್ಷೇತ್ರದಲ್ಲೇ ಈ ಕೆಲಸಗಳಾಗಿದೆ ಎನ್ನುವುದನ್ನು ಹೇಳಿದ್ದೀರಿ. ಅದನ್ನು ಮಾನ್ಯ ಸಚಿವರು ನೋಡುತ್ತಾರೆ. ಏನಾದರೂ ತಪ್ಪಾಗಿದ್ದರೆ, ಅದನ್ನು ಸರಿಪಡಿಸಿ ಅವರ ಇಲಾಖೆಯ ಅಧಿಕಾರಿಗಳಿಗೆ ಏನು ಆದೇಶ ಮಾಡಬೇಕೋ ಅದನ್ನು ಮಾಡುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ್ : ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಸದನದಲ್ಲಿ ಈ ರೀತಿ ಉತ್ತರ ಕೊಟ್ಟರೆ ಹೇಗೆ?

ಅಧ್ಯಕ್ಷರು : ಮಾನ್ಯ ಸದಸ್ಯರುಗಳಲ್ಲಿ, ಈಗ ಪ್ರಶ್ನೋತ್ತರ ಎರಡು ಗಂಟೆ ಮೀರಿ ನಡೆಯುತ್ತಾ ಇದೆ. ಈ ರೀತಿ ಪ್ರಶ್ನೋತ್ತರವನ್ನು ನಡೆಸಲಿಕ್ಕೆ ಸಾಧ್ಯವಿಲ್ಲ. ಕ್ಷೇತ್ರಕ್ಕೆ ಸಂಬಂಧಪಡದೇ ಇರತಕ್ಕಂಥ ಸಾರ್ವಜನಿಕ ಮಹತ್ವದ ಪ್ರಶ್ನೆಗಳಿಗೆ ಆ ಸದಸ್ಯರು ಅಲ್ಲದೇ ಬೇರೆಯವರಿಗೆ ಒಂದು ಅಥವಾ ಎರಡು ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಯಾವುದೇ ಸಂದರ್ಭಧಲ್ಲೂ ಒಂದೂವರೆ ಗಂಟೆಗಿಂತ ಹೆಚ್ಚು ಪ್ರಶ್ನೋತ್ತರವನ್ನು ನಡೆಸುವುದಕ್ಕೆ ಸಾಧ್ಯ ಆಗುವುದಿಲ್ಲ. ಏನದರೂ ಅದೇ ತರಹ ಆದರೆ, ಅಲ್ಲಿಗೆ ನಾನು ಮುಕ್ತಾಯ ಮಾಡುತ್ತೇನೆ. ಪ್ರಶ್ನೆಗಳು ಲ್ಯಾಪ್ಸ್ ಆಗುತ್ತದೆ, ಏನೂ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಎಲ್ಲರೂ ಸಹಕರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

2) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 28–1–05ರ 4ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 155 ಪ್ರಶ್ನೆಗಳ ಪೈಕಿ 90 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. (ಅನುಬಂಧ–1)

ಅಧ್ಯಕ್ಷರು : ಮಂಡಿಸಲಾಗಿದೆ.

2. ಹಕ್ಕುಚ್ಯುತಿ ಪ್ರಸ್ತಾವ

ವಿಷಯ : ಶೃಂಗೇರಿ ಶಾಸಕರಾದ ಶ್ರೀ ಡಿ.ಎಸ್. ಜೀವರಾಜ್ ಅವರನ್ನು ಡಿವೈಎಸ್‌ಪಿಯವರು ಬಂಧನ ಮಾಡಿರುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಈಗಾಗಲೇ ತಮ್ಮಲ್ಲಿ ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇರುವುದರಿಂದ, ಸನ್ಮಾನ್ಯ ಮುಖ್ಯಮಂತ್ರಿಗಳೇ, ಈ ದತ್ತ ಜಯಂತಿಯ ಸಂದರ್ಭದಲ್ಲಿ, ನಮ್ಮ ಎಲ್ಲಾ ಶಾಸಕರಿಗೆ ಸಂಬಂಧಪಟ್ಟಿದ್ದು, ಅದರಲ್ಲಿ ಬೇರೆ ಪ್ರಶ್ನೆ ಏನೂ ಇಲ್ಲ. ದತ್ತಜಯಂತಿಯನ್ನು ಮಾಡಿದ್ದು ಸರಿಯೋ ತಪ್ಪೋ ಅದು ಬೇರೆ ವಿಷಯ. ನಾವು ಎಲ್ಲರೂ ಸಹಿ ಮಾಡಿರುವ ಒಂದು ಹಕ್ಕುಚುತಿಯನ್ನು ಮಂಡಿಸುತ್ತಿದ್ದೇವೆ. ದಿನಾಂಕ 17-12-2004ರಂದು ಕೊಪ್ಪದಲ್ಲಿ ದತ್ತ ಜಯಂತಿ ವಿಚಾರದಲ್ಲಿ ಮೈಕ್ ಹಿಡಿದುಕೊಂಡು ಭಾಷಣವನ್ನು ಶೃಂಗೇರಿ ಶಾಸಕ ಶ್ರೀ ಜೀವರಾಜ್‌ರವರು ಪ್ರಾರಂಭ ಮಾಡುತ್ತಿದ್ದ ಹಾಗೆ ಆ ಮೈಕ್‌ಗೆ ಲೈಸೆನ್ಸ್ ಇಲ್ಲ ಎಂದು ಹೇಳಿ ಡಿವೈಎಸ್‌ಪಿ ಶಿವಕುಮಾರ್ ಎನ್ನುವ ಅವರು ಸೆಕ್ಷನ್ 143, 144, 147, 148, 332 ಮತ್ತು 353ರ ಅನ್ವಯ ಶಾಸಕ ಶ್ರೀ ಜೀವರಾಜ್‌ರವರನ್ನು ಬಂಧನ ಮಾಡಿ, ಆಶ್ಚರ್ಯ ಅಂದರೆ ಅವರನ್ನು ಕೊಪ್ಪದ ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಸಾಮಾನ್ಯ ಖೈದಿಗಳ ಜೊತೆ ನಡೆದುಕೊಂಡ ರೀತಿ, ಅದಕ್ಕಿಂತ ಕೀಳಾಗಿ ನಡೆದುಕೊಂಡು ಅವರನ್ನು ಪೋಲೀಸ್ ಸ್ಟೇಷನ್‌ನ ಲಾಕಪ್‌ನಲ್ಲಿ ಇಟ್ಟಿದ್ದಾರೆ. ಆ ಸಂದರ್ಭದಲ್ಲಿ ಆ ಮಾರ್ಗವಾಗಿ ನಾನು ಹೋಗುತ್ತಿರಬೇಕಾದರೆ ಚಿತ್ರದುರ್ಗದ ಹತ್ತಿರ ಹೋದಾಗ ಮಾನ್ಯ ಮುಖ್ಯಮಂತ್ರಿಗಳ ಸಂಪರ್ಕ ಮಾಡಿದೆ. ಆಗ ಸಾಯಂಕಾಲದ ಸಮಯ; ಸುಮಾರು ಏಳೂವರೆ ಗಂಟೆ, ಸ್ವಾಮಿ, ಈ ತರಹ ಆಗಿದೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚುನಾಯಿತ ಶಾಸಕ ತನ್ನ ಕ್ಷೇತ್ರದಲ್ಲಿ ಸರಿ ಕಂಡದ್ದನ್ನು ಮಾಡುತ್ತಿರುತ್ತಾನೆ. ನೀವು ಬಂಧನ ಮಾಡುವುದರ ಬಗ್ಗೆ ನಮ್ಮದೇನೂ ವಿರೋಧ ಇಲ್ಲ. ಆದರೆ ಒಬ್ಬ ಚುನಾಯಿತ ಶಾಸಕನನ್ನು ಎಳೆದುಕೊಂಡು ಹೋಗಿ, ಇನ್ನೂ ಅನೇಕ ಜನರನ್ನು ಬಂಧನ ಮಾಡಿ, ಲಾಕಪ್‌ನಲ್ಲಿಟ್ಟಾಗ ಮುಖ್ಯಮಂತ್ರಿಗಳು ಸೂಚನೆ ಕೊಟ್ಟ ಮೇಲೆ ಸಂಪರ್ಕ ಮಾಡಿ ಲಾಕಪ್‌ನಿಂದ ಹೊರ ತರುವಂತಹ ಪ್ರಯತ್ನ ಮಾಡಿದೆವು. ಇದು ಒಂದು ಭಾಗ. ಆದಾದ ಮೇಲೆ ಇವರು ನಾನೇನೂ ತಪ್ಪು ಮಾಡಿಲ್ಲ ನಾನು ಯಾವುದೇ ಜಾಮೀನು ಕೊಡುವುದಿಲ್ಲವೆಂದರೂ ಶಿವಮೊಗ್ಗ ಜೈಲಿಗೆ ಅವರನ್ನು ಕರೆದುಕೊಂಡು ಹೋದರು. ಅದರ ಬಗ್ಗೆ ನಾವು ಪ್ರಶ್ನೆ ಮಾಡುತ್ತಿಲ್ಲ. ಇವರು ಶಾಸಕರು, ನನ್ನನ್ನು ಈ ರೀತಿ ಅಮಾನುಷವಾಗಿ ಈ ಒಬ್ಬ ಡಿವೈಎಸ್‌ಪಿಯವರು ನಡೆದುಕೊಂಡರು ಎಂದು ಹೇಳಿ ಅವರು ಒಂದು ಪತ್ರಿಕಾ ಹೇಳಿಕೆಯನ್ನು ಅಲ್ಲಿ ಎಲ್ಲೋ ಒಂದು ಕಡೆ ಕೊಟ್ಟರು. ಪತ್ರಿಕಾ ಹೇಳಿಕೆಯಲ್ಲಿ ಏನು ಇದೆ ಎನ್ನುವುದರ

ಬಗ್ಗೆ ಬಹಳ ಸ್ಪಷ್ಟವಾಗಿ, ಈ ಡಿವೈಎಸ್‌ಪಿ ಈ ಶಾಸಕರಿಗೆ ಒಂದು ನೋಟಿಸ್ ಕಳುಹಿಸಿದ್ದಾರೆ. ನನಗೆ ಮರ್ಯಾದೆ ಹೋಗಿದೆ, ನನ್ನ ಮನಸ್ಸಿಗೆ ನೋವಾಗಿದೆ ನೀನು 25 ಲಕ್ಷ ರೂಪಾಯಿಗಳ ದಂಡ ಕೊಡಬೇಕು, ಇಲ್ಲದಿದ್ದರೆ ನಾನು ಕೋರ್ಟ್‌ಗೆ ಹೋಗುತ್ತೇನೆಂದು ಹೇಳಿ ಲಾಯರ್ ನೋಟಿಸ್ ಕೊಟ್ಟಿದ್ದಾನೆ ನಾನು ಆ ವಿವರಕ್ಕೆ ಹೋಗುವುದಿಲ್ಲ. ಅವರು ಹೇಳಿರುವುದೇನು ಸ್ವಾಮಿ? ನಾನು ಇನ್ನೂ ಮೈಕ್ ಹಿಡಿದು ಭಾಷಣ ಆರಂಭಿಸಬೇಕು ಎನ್ನುವಷ್ಟರಲ್ಲಿ ವೇದಿಕೆ ಬಳಿಗೆ ಗೂಳಿಯಂತೆ ನುಗ್ಗಿದ ಶಿವಕುಮಾರ್ ತಮ್ಮನ್ನು ಏಕಾಏಕಿ ತಳ್ಳಿ, ಕಾರ್ಯಕರ್ತರನ್ನು ಮನಸ್ಸೋಇಚ್ಛೆ ಲಾಠಿಯಿಂದ ಥಳಿಸಿದ್ದಾರೆ. ನೀವು ಶಾಸಕನಾದರೆ ಏನು? ನಿನ್ನನ್ನು ನೋಡಿಕೊಳ್ಳುತ್ತೇನೆಂದು ಹೇಳಿ ಲಾಕಪ್‌ಗೆ ತಳ್ಳಿದರು. ಶಿವಕುಮಾರರನ್ನು ಅಮಾನತ್ತುಪಡಿಸಿ ಮೊಕದ್ದಮೆಯನ್ನು ಹಿಂದಕ್ಕೆ ಪಡೆಯದ ಹೊರತು, ಡಿವೈಎಸ್‌ಪಿ ಒತ್ತಡಕ್ಕೆ ಕಾರಣ, ಏನು ತಾಲ್ಲೂಕಿನ ..... ಇದಕ್ಕೆ ಕಾರಣ ಅಂದರೆ 11 ಕ್ಲಬ್‌ಗಳಲ್ಲಿ ಏನು ನಡೆಯುತ್ತಿತ್ತು ಅದನ್ನು ನಾನು ವಿರೋಧ ಮಾಡಿದೆ. ಈ ಎಲ್ಲಾ ಕಾರಣಗಳಿಗೋಸ್ಕರ ನನಗೆ ಈ ರೀತಿ ಅನ್ಯಾಯ ಮಾಡಿದ್ದಾರೆ" ಎಂದು ಇವರು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟರು. ಒಂದೇ ಶಬ್ದ 'ಗೂಳಿಯಂತೆ ನುಗ್ಗಿ ನನ್ನನ್ನು ಎಳೆದುಕೊಂಡು ಹೋದರು' ಎಂದು ಹೇಳಿದರೆ ಅವರಿಗೆ ಮನಸ್ಸು ನೋವಾಯಿತಂತೆ, "Your press statement has caused mental agony and physical pain and personal hardship and inconvenience to my client. For the mental agony, physical pain and loss of reputation, the damage is estimated at Rs.25 lakhs". 25 ಲಕ್ಷ ರೂ. ದಂಡ ಕೊಡು, ಇಲ್ಲದಿದ್ದರೆ ನಿನ್ನ ಮೇಲೆ ಕೇಸ್ ಹಾಕುತ್ತೇನೆ. ಈ ಮಾತನ್ನು ಆ ಮನುಷ್ಯ ಹೇಳಿದ್ದಾನೆ. ನಾನು ಕೇಳುತ್ತೇನೆ ಇಲ್ಲಿರುವಂತಹ ನಮ್ಮ ಶಾಸಕ ಮಿತ್ರರು ಯಾರೇ ಇರಲಿ ಯಾವುದೇ ಪಕ್ಷ ಇರಲಿ ಒಬ್ಬ ಚುನಾಯಿತ ಪ್ರತಿನಿಧಿ ತನ್ನ ಕರ್ತವ್ಯವನ್ನು ಮಾಡಬೇಕಾದರೆ ಅವಮಾನವಾಗಿರುವುದು ಇವರಿಗೆ ಲಾಕಪ್‌ಗೆ ಹಾಕಿರುವುದು ಇವರಿಗೆ, ಮುಖ್ಯಮಂತ್ರಿಗಳು ಮಧ್ಯೆ ಪ್ರವೇಶ ಮಾಡಿ ಮಾತನಾಡಿದ್ದಾರೆ. ಇಷ್ಟೆಲ್ಲಾ ಆದ ಮೇಲೆ ಅವರು ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ನಾನು ಏಕೆ ಜಾಮೀನು ಕೊಡಬೇಕು ಎಂದು ಒಂದು ಹೇಳಿಕೆ ಕೊಟ್ಟರೆ ನನಗೆ ಅವಮಾನ ಆಗಿದೆ ಎಂದು ಹೇಳಿ ಅವನು ಲಾಯರ್ ನೋಟಿಸ್ ಕೊಡಿಸುತ್ತಾನೆ, ನೀನು 25 ಲಕ್ಷ ರೂ. ದಂಡ ಕಟ್ಟಬೇಕು ಇಲ್ಲದಿದ್ದರೆ ನಾನು ಕೋರ್ಟಿಗೆ ಹೋಗುತ್ತೇನೆ ಎನ್ನುವುದಾದರೆ ಇಲ್ಲಿ ಇವತ್ತು ಎಲ್ಲಾ ಶಾಸಕರು ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ನಾನು ಹೆಚ್ಚು ವಿವರಕ್ಕೆ ಹೋಗುವುದಿಲ್ಲ. ನಾವು ಕೆಲವು ದಾಖಲೆಗಳನ್ನು ಅವರಿಗೆ ಕೊಟ್ಟಿದ್ದೇವೆ. ದಯಮಾಡಿ ಏನು ಚರ್ಚೆ ಮಾಡದೇ ನೇರವಾಗಿ ಇದನ್ನು ಹಕ್ಕುಚ್ಯುತಿಗೆ ರೆಫರ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ, ನಾನು ತಮಗೆ ಈ ದಾಖಲೆಗಳನ್ನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು : ಈಗ ಸರ್ಕಾರ ಏನು ಹೇಳುತ್ತದೆಂಬುದನ್ನು ಕೇಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇದೇನು ಶಾಸಕರಿಗೆ ಅವಮಾನ ಆಗಿದೆ, ಸದಸ್ಯರು ಮಾತನಾಡಲಿ, ನಾನು ಏಕೆ ಎರಡೇ ನಿಮಿಷದಲ್ಲಿ ಮುಗಿಸಿದೆ ಅಂದರೆ ಉಳಿದ ಸದಸ್ಯರು ಸಹಿ ಮಾಡಿದ್ದಾರೆ. ಅವರು ಮಾತನಾಡಲಿ ಎಂದು. ದಯಮಾಡಿ ಮಾನ್ಯ ಅಧ್ಯಕ್ಷರೇ ಇದು ಎಲ್ಲರಿಗೂ ಸಂಬಂಧಪಟ್ಟಿದ್ದು.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ಶಾಸಕರು ಹೋರಾಟಗಳನ್ನು ಮಾಡುವುದು, ಆ ಹೋರಾಟಗಳ ಮೂಲಕ ಜನಗಳ ಕಷ್ಟಕ್ಕೆ ಆಧಾರವಾಗುವುದು. ಆ ಮೂಲಕ ನಮ್ಮ ದಾರಿ ನೋಡಿಕೊಳ್ಳುವುದು ಹೊಸ ವಿಷಯವಲ್ಲ ಮಾನ್ಯ ಅಧ್ಯಕ್ಷರೇ ಅದರಲ್ಲಿ ಕೆಲವು ಸಾಮಾಜಿಕ ಘಟನೆಗಳಿಗೆ ಹೋರಾಟಗಳು ಆಗುತ್ತವೆ, ಕೆಲವು ಸಮಸ್ಯೆಗಳು ರೈತರದ್ದು ಇರಬಹುದು, ಕಾರ್ಮಿಕರದ್ದು ಇರಬಹುದು, ಮತ್ತೊಬ್ಬರದ್ದು ಇರಬಹುದು, ಹೋರಾಟಗಳನ್ನು ಮಾಡುವುದು ಅನಿವಾರ್ಯವಾಗುತ್ತದೆ. ನಾವು ಏನೂ ಮಾಡಲೇಬಾರದು ಶಾಸಕರಾದವರು ಕೋರ್ಟಿನಲ್ಲಿ ನಿಂತುಕೊಳ್ಳುವುದಕ್ಕೆ ಹೆದರಿಕೊಳ್ಳಬೇಕು ಎನ್ನುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುವುದು ಪ್ರಜಾಪ್ರಭುತ್ವಕ್ಕೆ ಅಷ್ಟೊಂದು ಕ್ಷೇಮಕರ ಎಂದು ನಾನು ಭಾವಿಸಿಲ್ಲ. ಇದು ಶೃಂಗೇರಿ ಶಾಸಕರು ಒಬ್ಬರ ಗೌರವದ ಪ್ರಶ್ನೆ ಅಲ್ಲ ಅಧ್ಯಕ್ಷರೇ. ನಾವೆಲ್ಲಾ ಕೋರ್ಟ್‌ಗಳ ಮುಂದೆ ನಿಂತಿದ್ದೇವೆ. ಪೋಲೀಸ್‌ನವರು ನಮ್ಮನ್ನು ಅರೆಸ್ಟ್ ಮಾಡಿ ತೋರಿಸಿದ್ದಾರೆ. ನಮ್ಮನ್ನೆಲ್ಲಾ ಕಸ್ಟಡಿಯಲ್ಲಿ ತೆಗೆದುಕೊಂಡು ಹೋಗಿ ನಿಲ್ಲಿಸಿದ್ದೇವೆಂದು ಹೇಳಿಕೆಗಳನ್ನು ಕೊಟ್ಟಿದ್ದಾರೆ. ಆದರೆ ಇದು ಶಾಸಕರ ಗೌರವದ ಪ್ರಶ್ನೆಯಾಗಿದೆ. ಏನಾಗಿದೆ ಅಂದರೆ ಒಬ್ಬ ಶಾಸಕರು ಮಾತನಾಡುವುದಕ್ಕೆ ಮೊದಲೇ ಅವರು ಏನು ಆಡಿದರು ಎಂದು ಹೇಳಿ ಉದ್ರಿಕ್ತ ಪರಿಸ್ಥಿತಿ ನಿರ್ಮಾಣ ಮಾಡುತ್ತಿದ್ದರಾ? ಅಲ್ಲಿ ಏನಾದರೂ ಕಾನೂನು ಬಾಹಿರ ಚಟುವಟಿಕೆಯಾಗುವಂತಹ ಸ್ಥಿತಿಯನ್ನು ನಿರ್ಮಾಣ ಮಾಡುತ್ತಿದ್ದರಾ? ಅಲ್ಲಿ ಏನಾದರೂ ಅವರ ಮಾತಿನಿಂದ ಅಲ್ಲೋಲ ಕಲ್ಲೋಲವಾಗುವಂತಹ ಸ್ಥಿತಿ ನಿರ್ಮಾಣವಾಗುತ್ತಿತ್ತೇ? ಇದು ಯಾವುದನ್ನು ವಿವೇಚನೆಗೆ ತೆಗೆದುಕೊಳ್ಳುವುದಕ್ಕೆ ಮೊದಲೇ ಒಬ್ಬ ಅಧಿಕಾರಿ ಅಲ್ಲಿ ಅವರು ಸ್ಟೇಷನ್ ಹೌಸ್ ಆಫೀಸರ್ ಅಲ್ಲ. ಡ್ಯೂಟಿಯಲ್ಲಿರಬೇಕಾದ ಅಧಿಕಾರಿಯೂ ಅಲ್ಲ, ಅವರು ಸಬ್ ಇನ್ಸ್‌ಪೆಕ್ಟರ್ ಅಲ್ಲ, ಅಥವಾ ಸರ್ಕಲ್ ಇನ್ಸ್‌ಪೆಕ್ಟರ್ ಅಲ್ಲ. ಅವರೊಬ್ಬರು ಉನ್ನತ ಅಧಿಕಾರಿ ಡಿವೈಎಸ್‌ಪಿ ಅವರು ಏಕಾಏಕಿ ಹೋಗಿ ಕೊರಳು ಪಟ್ಟಿ ಹಿಡಿದುಕೊಂಡು ಬಂದು ವ್ಯಾನ್‌ಗೆ ತುಂಬಿ ಕಸ್ಟಡಿಯಲ್ಲಿ ಕೂರಿಸಿ ಅದೇ ಆ ಸ್ಟೇಷನ್ ಇನ್‌ಚಾರ್ಜ್ ಇರುವ ಆಫೀಸರ್ ಸಹಾನುಭೂತಿ ತೋರಿಸಿ ನನ್ನ ಸ್ಟೇಷನ್‌ನಲ್ಲಿ ಈ ರೀತಿ ಶಾಸಕರು ಕುಳಿತುಕೊಳ್ಳಬಾರದು, ಕೂರಿಸಿರುವುದು ತಪ್ಪು ಎಂದು ಹೇಳಿ ಭಾವನೆ ವ್ಯಕ್ತಪಡಿಸಿದಾಗ ಕೂಡ ಅಮಾನುಷವಾಗಿ ವರ್ತಿಸುವುದು ಖಂಡನೀಯ. ಸರ್ಕಾರ ಇದಕ್ಕೆ ಏನಾದರೂ ಒಂದು ತಡೆ

ತರಬೇಕಾಗುತ್ತದೆ. ಅಲ್ಲಿರುವ ಸ್ಟೇಷನ್ ಇನ್‌ಚಾರ್ಜ್ ಇವರಿಂದಾಗಿ ನನಗೆ ಕಷ್ಟವಾಗಿದೆ ಲಾ ಅಂಡ್ ಆರ್ಡರ್‌ನ್ನು ನಾನು ನಿಭಾಯಿಸುವುದಕ್ಕೆ ಆಗುತ್ತಿಲ್ಲ, ಇವರ ಮೇಲೆ ಏನಾದರೂ ಕ್ರಮ ಜರುಗಿಸಬೇಕು ಎಂದು ಏನಾದರೂ ಮಾನ್ಯ ಜಿಲ್ಲಾಧಿಕಾರಿಗಳಿಗೆ ಆಗಲಿ ಅಥವಾ ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ಗೆ ಆಗಲಿ ಮನವಿ ಮಾಡಿಕೊಂಡು ಅವರ ಮೇಲೆ ನಾನು ಕ್ರಮ ಜರುಗಿಸಲೇಬೇಕು. ಈ ದಿಸೆಯಲ್ಲಿ ನನಗೆ ಮಾರ್ಗದರ್ಶನ ಮಾಡಿ ಎಂದು ಕೇಳುವುದು ವಾಡಿಕೆ. ಡಿವೈಎಸ್‌ಪಿ ಯವರೇ ಏಕಾಏಕಿ ಹೋಗಿ ಲಾ ಅಂಡ್ ಆರ್ಡರ್ ಅನ್ನು ಎನ್‌ಫೋರ್ಸ್ ಮಾಡುವ ಸ್ಥಿತಿ ನಿರ್ಮಾಣವಾಗಿರುವುದು ಈ ರಾಜ್ಯದ ದುರ್ದೈವ ಅಧ್ಯಕ್ಷರೇ. ಅದು ಮಾಡಬೇಕಾದುದು ಅವರಲ್ಲ. ಅಲ್ಲಿ ಒಬ್ಬ ಸಬ್‌ಇನ್ಸ್‌ಪೆಕ್ಟರ್ ಇದ್ದಾರೆ. ಅವರನ್ನು ಮೀರಿ ಅಲ್ಲೊಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಇದ್ದಾರೆ. ಅವರನ್ನು ಆ ಸ್ಟೇಷನ್ ಇನ್‌ಚಾರ್ಜ್ ಎಂದು ಕರೆಯುತ್ತೇವೆ. ಜೂರಿಸ್‌ಡಿಕ್ಷನ್ ಆಫೀಸರ್ಸ್ ಅವರು ಕೋರ್ಟಿಗೆ ಬಂದು ನಿಂತುಕೊಂಡು ಸಾಕ್ಷಿ ಹೇಳಬೇಕಾದವರು ಅವರು. ಡಿವೈಎಸ್‌ಪಿಯವರು ಕೋರ್ಟಿಗೆ ಬರುವುದಿಲ್ಲ. ಇವರು ಏಕೆ ಹೋದರು? ಇವರು ಏಕೆ ಆ ವಾತಾವರಣವನ್ನು ಅಲ್ಲಿ ಸೃಷ್ಟಿ ಮಾಡಿದರು? ಇವರಿಗೆ ಏನು ಇತ್ತು? ಈ ಹಿನ್ನೆಲೆಯಲ್ಲಿ ನೋಡಿದಾಗ ಅಲ್ಲಿ ಒಂದು 8-10 ಕ್ಲಬ್‌ಗಳನ್ನು ನಿಲ್ಲಿಸಿ ಎಂದು ಆ ಶಾಸಕರು ಮನವಿ ಮಾಡಿದ್ದರೂ ಕೂಡ ಅವುಗಳನ್ನು ನಿಲ್ಲಿಸಲಿಲ್ಲ. ಅವರಿಗೆ ಮಾಮೂಲಿ ಹೋಗುತ್ತಿರುತ್ತದೆಯೋ ಏನೋ, ಅದಕ್ಕೆ ನಿಲ್ಲಿಸಲಿಲ್ಲ ಎಂದು ಮಾತನಾಡಿರುವುದನ್ನು ಒಂದು ಸೇಡಾಗಿ ಇಟ್ಟುಕೊಂಡು ಒಬ್ಬ ಅಧಿಕಾರಿ ಇಂತಹ ಸಮಯವನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಬಂದರೆ ಸಾರ್ವಜನಿಕ ಕ್ಷೇತ್ರದಲ್ಲಿ ಯಾರೂ ಪ್ರಜಾಪ್ರತಿನಿಧಿಗಳು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಅದನ್ನೇ ದೊಡ್ಡದು ಮಾಡಿಕೊಂಡು ಸರ್ಕಾರದ ಪರ್ಮಿಶನ್ ತೆಗೆದುಕೊಂಡಿಲ್ಲ. ಸರ್ಕಾರವನ್ನು ಕೇಳಿಲ್ಲ, ಅಥವಾ ತಮ್ಮ ಗಮನಕ್ಕೆ ತಂದಿಲ್ಲ. ನಮ್ಮ ರಕ್ಷಣೆ ಮಾಡಬೇಕಾಗಿರುವುದು ಮಾನ್ಯ ಅಧ್ಯಕ್ಷರು. ನಾನು ಶಾಸಕನಾಗಿದ್ದಾಗ ನನ್ನ ಮೇಲೆ ಒಂದು ಕೇಸ್ ಹಾಕುತ್ತಿದ್ದಾನೆ ಒಬ್ಬ ಅಧಿಕಾರಿ, ಕ್ರಿಮಿನಲ್ ಪ್ರಾಸಿಕ್ಯೂಷನ್ ಮಾಡುತ್ತಾರೆ ಅಂದರೆ ಕನಿಷ್ಟ ಇಲ್ಲಿಂದ ಒಂದು ಪರ್ಮಿಶನ್ ತೆಗೆದುಕೊಳ್ಳಬೇಕಾಗಿತ್ತು ಅವನು. ನನಗೆ ಈ ತರಹ ಕೆಲಸ ಮಾಡುವುದಕ್ಕೆ ಅಡ್ಡಿ ಮಾಡಿದ್ದಾರೆ. ನನಗೆ ಈ ತರಹ ಕೆಲಸ ಮಾಡುವುದಕ್ಕೆ ಅಡ್ಡಿ ಮಾಡಿದ್ದಾರೆ. ನನಗೆ ಈ ತರಹ ಅವಹೇಳನ ಮಾಡಿದ್ದಾರೆ. ಹೀಗಾಗಿ ನನ್ನ ಗೌರವಕ್ಕೆ ಚ್ಯುತಿ ಆಗಿದೆ, ನನ್ನ ಮಾನ ಹರಣ ಆಗಿದೆ, ನಾನು ಮಾನನಷ್ಟ ಮೊಕದ್ದಮೆ ಹಾಕುತ್ತೇನೆ ಎಂದು ಕೇಳುವಷ್ಟು ಸೌಜನ್ಯವಾದರೂ ಇರಬೇಕು, ಅಥವಾ ಸರ್ಕಾರಕ್ಕಾದರೂ ಪೂರ್ಣ ಮಾಹಿತಿ ಕೊಡಬೇಕು. ಅದಕ್ಕೆ ನಾನು ಇಲ್ಲ ಎನ್ನುವುದಿಲ್ಲ. ಅವರೂ ಈ ದೇಶದ ಒಬ್ಬ ಪ್ರಜೆ. ಅವರಿಗೆ ಚ್ಯುತಿಯಾಗಿದ್ದರೆ ಮಾಡಬೇಕಾಗಿತ್ತು. There is an exemption.

ನಿಮ್ಮ defarmation ಕೇಸ್‌ನಲ್ಲಿ 9ನೇ ಎಗ್ಜಂಪಷನ್ ಸ್ಪಷ್ಟವಾಗಿ ಹೇಳುತ್ತದೆ. ಯಾರಾದರೂ ಒಬ್ಬರು ಸಾರ್ವಜನಿಕರ ಹಿತದೃಷ್ಟಿಯಿಂದ ಒಬ್ಬ ಅಧಿಕಾರಿಗೆ ನಾವು ಮಾತನಾಡಿದಾಗ that cannot be treated as defamation. ಎಂದು ಹೇಳಿ. ಅದಕ್ಕೆ ನಾನು ನಿಮಗೆ ಕನ್‌ವಿನ್ಸ್ ಮಾಡಲಿಕ್ಕೆ ಎದ್ದಿದ್ದೇನೆ. ಆತ defamation case ಹಾಕಬೇಕಾದರೆ ಮಿಸ್ಟರ್ ಶೃಂಗೇರಿ ಶಾಸಕರು ವೈಯಕ್ತಿಕವಾಗಿ ಏನಾದರೂ ಆಸಕ್ತಿ ಇಟ್ಟುಕೊಂಡು ಮಾತನಾಡಿದ್ದರಾ? ಸಾರ್ವಜನಿಕರ ಹಿತಾಸಕ್ತಿಯಿಂದ ಮಾತನಾಡಿದ್ದರಾ ಎನ್ನುವುದನ್ನು ನೋಡ ಬೇಕಾಗುತ್ತದೆ. ನಾನೂ ಕೂಡ ನಾಳೆ ಮಾತನಾಡಬೇಕಾಗುತ್ತದೆ ಅಧ್ಯಕ್ಷರೇ? ನನ್ನ ಕ್ಷೇತ್ರದಲ್ಲಿ ಇಷ್ಟು ಕ್ಲಬ್‌ಗಳು ನಡೆಯುತ್ತಿವೆ; ಅವುಗಳ ಮೂಲಕ ಇಷ್ಟು ಜೂಜು ಆಗುತ್ತಿದೆ. ಅದನ್ನು ನಿಲ್ಲಿಸದೇ ಹೋದರೆ ಇದರಲ್ಲಿ ಏನೋ ಬೇರೆ ಆಸಕ್ತಿ ಇರಬೇಕೆಂದು ನಾನು ಭಾವಿಸುತ್ತೇನೆ ಎನ್ನುವ ಮಾತನ್ನು ನಾನು ಆಡಬೇಕಾಗುತ್ತದೆ. ಇಲ್ಲದಿದ್ದರೆ ನನ್ನ ನಂಬಿಕೆಯನ್ನು ನನ್ನ ಕ್ಷೇತ್ರದಲ್ಲಿ ಉಳಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಅದನ್ನೇ ದೊಡ್ಡದು ಮಾಡಿ ನನಗೆ ಮಾಮೂಲಿ ಹೋಗುತ್ತಿದೆ ಎಂದು ನೀವು ಪ್ರೆಸ್‌ನಲ್ಲಿ ಹೇಳಿದ್ದೀರಿ ಎಂಬ ಒಂದು ಕಾರಣಕ್ಕೆ defamation case ಹಾಕುವುದಾದರೆ, ನಾಳೆ ಈ ಮನೆಯ ಸದಸ್ಯರು ಜನಗಳಿಗೆ ಜವಾಬ್ದಾರರಾಗಿರಬೇಕಾಗುತ್ತದೆ? ನಾವು ನಮ್ಮ ಕರ್ತವ್ಯವನ್ನು ನಿಭಾಯಿಸುವುದು ಹೇಗೆ?

Coming to section 144. ಸನ್ಮಾನ್ಯ ಅಧ್ಯಕ್ಷರೆ ಇವತ್ತು ಈ ರಾಜ್ಯದ ಸ್ಥಿತಿ ಏನಾಗಿದೆ ಎಂಬ ಬಗ್ಗೆ ತಾವು ಮಾಹಿತಿ ತರಿಸಿ ನೋಡಬೇಕು. ಸಣ್ಣಪುಟ್ಟ ಘಟನೆಗೆ ಮಾತು ಎತ್ತಿದರೆ ಸೆಕ್ಷನ್ 144, 144, 144. ನನ್ನ ಕ್ಷೇತ್ರದಲ್ಲಿ ಮೈನ್ಸ್ ನಡೆಯುತ್ತಿದೆ, ಅಲ್ಲಿ ಹುಡುಗರು ಓಡಾಡುತ್ತಾರೆಂದು 5 ಸಲ ಸೆಕ್ಷನ್ 144 ಹಾಕಿದ್ದಾರೆ, ನಾನು ಮೊನ್ನೆ ಸಬ್ ಡಿವಿಷನ್ ಮ್ಯಾಜಿಸ್ಟ್ರೇಟ್‌ರನ್ನು ಫೋನ್ ಮಾಡಿ ಕೇಳಿದೆ, ಏನು ತಾವು ಈ ಕಾಯ್ದೆಗಳ ಪರಿಣಾಮ ತಿಳಿದುಕೊಂಡಿದ್ದೀರಾ? ಸೆಕ್ಷನ್ 144 ಅಂದರೇನು ಎಂದು ತಿಳಿದುಕೊಂಡಿದ್ದೀರಿ? ಪ್ರತಿಬಂಧಕ ಆಜ್ಞೆ ಎಂದರೆ ಏನು ತಿಳಿದುಕೊಂಡಿದ್ದೀರಿ ಗೊತ್ತಾ, ಗೊತ್ತಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳೇ ಶಾಸಕರ ಗೌರವದ ಪ್ರಶ್ನೆಯನ್ನು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ, ಈ ಸೆಕ್ಷನ್ 144 ಇವೆಲ್ಲಾ ಹಾಕುವ ಮೊದಲೇ ಏನಾದರು ಒಂದು ಸ್ಥಿತಿ ನಿರ್ಮಾಣವಾಗಿದೆ ಎಂದು ಕನ್ವಿನ್ಸ್ ಮಾಡಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಹಾಕುವುದು ಒಂದು. ಎರಡನೆಯದು ನಾವ್ಯಾರು ಗಲಾಟೆ ಮಾಡುವುದು ಸರಿ ಇತ್ಯಾದಿ ಧಾರ್ಮಿಕ ವಿಚಾರಗಳಿಗೆ ನಾನು ಹೋಗುವುದಿಲ್ಲ. ಸರ್ಕಾರಕ್ಕೆ ಕಾನೂನು ಪಾಲನೆ ಮಾಡುವ ಎಲ್ಲಾ ಹಕ್ಕಿದೆ, ಜವಾಬ್ದಾರಿ ಇದೆ. ಏನೋ ಒಂದು ಘಟನೆ ನಡೆಯುವುದಕ್ಕೆ ಮೊದಲೇ ಒಬ್ಬ ಶಾಸಕರ ಕೊರಳಪಟ್ಟಿಯನ್ನು ಹಿಡಿದುಕೊಂಡು ವ್ಯಾನಿಗೆ ತುಂಬಿಕೊಂಡು ಹೋಗಿ ಎಲ್ಲೋ ಒಂದು ಕಡೆ ಕೂಡಿಸಿ, ನಾನು ಡಿವೈಎಸ್‌ಪಿ ಹೇಳುತ್ತಿದ್ದೇನೆ ಇವರನ್ನು

ಆಚೆಗೆ ಬಿಡಬೇಡವೆಂದು ಹೇಳುವ ಸ್ಥಿತಿ ಈ ರಾಜ್ಯದಲ್ಲಿ ಕಾಣುವುದೆನೆಂದರೆ ಇದಕ್ಕಿಂತ ದುರ್ದೈವ ಬೇರೆ ಇಲ್ಲ. ಎರಡನೆಯದಾಗಿ, ಇವರು ಸರ್ಕಾರಿ ಅಧಿಕಾರಿಯೂ ಅಲ್ಲವೋ ಎನ್ನುವುದು ತೀರ್ಮಾನವಾಗಬೇಕಾಗುತ್ತದೆ. ಸರ್ಕಾರಿ ಅಧಿಕಾರಿಯಾಗಿದ್ದರೆ ಶಾಸಕರಿಗೆ ಈ ಡಿಫಮೇಷನ್‌ಗೆ ನೋಟಿಸ್ ಕೊಡುವ ಮೊದಲು ಸರ್ಕಾರದ ಅನುಮತಿಯನ್ನು ತೆಗೆದುಕೊಳ್ಳಲಾಗಿದೆಯೇ ಎನ್ನುವುದನ್ನು ನಾವು ನೋಡಬೇಕು. ಇದೇ ಘಟನೆಯಲ್ಲಿ ಇನ್ನೊಂದು ರೆಫರೆನ್ಸ್ ತೆಗೆದುಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ರಮೇಶ್ ಕುಮಾರ್‌ರವರು ಈ ಸದನದ ಅಧ್ಯಕ್ಷರಾಗಿದ್ದವರು, ಪತ್ರಿಕೆಗಳಲ್ಲಿ ಟಿವಿಗಳಲ್ಲಿ ನೋಡಿ ನಮಗೆ ದೊಡ್ಡ ಆಘಾತವಾಯಿತು. ಯಾವ ರಮೇಶ್‌ಕುಮಾರ್‌ರವರನ್ನು ಜಡ್ಜ್ ಎಂದು ತೋರಿಸಿಟ್ಟು ಅಥವಾ ಮುಖ್ಯಮಂತ್ರಿ ಸ್ಥಾನದಲ್ಲಿ ತೋರಿಸಿಬಿಟ್ಟು ಇಡೀ ರಾಜ್ಯಕ್ಕೆ ವೈಭವೀಕರಿಸಿದ್ದೆವು, ಆ ರಮೇಶ್‌ಕುಮಾರ್‌ರವರು ಒಂದು ಗಂಭೀರವಾದ ಕೇಸ್‌ನಲ್ಲಿ ಸಿಕ್ಕಿಹಾಕಿ ಕೊಂಡಿದ್ದಾರೆ, ಯಾವ ಕೇಸು? ನನಗೆ ಗೊತ್ತಿರಲಿಲ್ಲ, ನಾನು ತರಿಸಿಕೊಂಡು ನೋಡಿದೆ. ನಾನು ವಿರೋಧಪಕ್ಷದ ನಾಯಕನಾಗಿ ಕೆಲಸ ಮಾಡಬೇಕಾಗಿದೆ, ಒಬ್ಬ ಆಡಳಿತಪಕ್ಷದ, ಅದರಲ್ಲೂ ಈ ಸದನದ ಅಧ್ಯರಾಗಿದ್ದವರ ಬಗ್ಗೆ ಇಂತಹ ಒಂದು ಗಂಭೀರವಾದ ಆಪಾದನೆ ಬಂದಾಗ ನೋಡಬೇಕಾಗಿದೆ, ಒಂದೂವರೆ ವರ್ಷವಾದ ನಂತರ, ಒಂದು ಸಿಓಡಿ ವರದಿಯಲ್ಲಿ ಯಾರೋ ಒಬ್ಬ ಅಧಿಕಾರಿ ಹೋಗಿ ತನಿಖೆ ಮಾಡಿಕೊಂಡು ಹುರುಳಿಲ್ಲವೆಂದು ಬರೆದ ಮೇಲೆ ಅಲ್ಲಿಗೆ ಬಂದ ಮತ್ತೊಬ್ಬ ಡಿವೈಎಸ್‌ಪಿ ಏಕಾಏಕಿಯಾಗಿ ಒಂದು ಕಡತವನ್ನು ಬಿಲ್ಟ್‌ಅಪ್ ಮಾಡಿ, ಇವರದ್ದು ಮತ್ತು ಇವರ ಸಹೋದರರ ಇನ್‌ವಾಲ್ವ್‌ಮೆಂಟ್ ನನಗೆ ಕಂಡುಬರುತ್ತದೆಂದರೆ, ವರದಿ ಕೊಡುವುದಕ್ಕೆ ಸಿಓಡಿ ನಿಯಮವಿದೆ, ಸರ್ಕಾರಕ್ಕೆ ಅಸಿಸ್ಟ್ ಮಾಡುವುದಕ್ಕೆ, ಅವರೇ ಡೈರೆಕ್ಟ್ ಆಗಿ ಹೋಗಿ ಚಾರ್ಜ್ ಶೀಟ್ ಫ್ರೇಂ ಮಾಡುವವರಲ್ಲ. ಮಾನ್ಯ ರಮೇಶ್ ಕುಮಾರ್‌ರವರು ಮರ್ಡರ್ ಕೇಸ್‌ನಲ್ಲಿ ಇನ್‌ವಾಲ್ವ್ ಆಗಿದ್ದಾರೆಂದು ಏಕಾಏಕಿಯಾಗಿ ಡಿವೈಎಸ್‌ಪಿ ಪ್ರೆಸ್‌ಗೆ ರಿಲೀಸ್ ಮಾಡುತ್ತಾನೆ, without the permission of the authority. ಕಾನೂನು ಇದೆ, he is punishable under law. ಯಾವುದೇ ಸರ್ಕಾರಿ ವರದಿಯನ್ನು, ಯಾವುದೇ ತನಿಖೆಯನ್ನು ಸಂಬಂಧಪಟ್ಟ ಮೇಲಿನ ಅಧಿಕಾರಿಯ ಅನುಮತಿ ಇಲ್ಲದೆ ಯಾವ ಅಧಿಕಾರಿ ಲೀಕ್ ಮಾಡುತ್ತಾನೆ ಅವನ ಮೇಲೆ ಕಾನೂನಿನ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದಿದೆ. ಆ ಡಿವೈಎಸ್‌ಪಿ ಲೀಕ್ ಮಾಡಿದರೆ ಇನ್ಯಾರೋ ಶ್ರೇಷ್ಠ ನ್ಯಾಯಾಲಯದಲ್ಲಿ ಕುಳಿತುಕೊಂಡು ಅರ್ಜಿ ಹಾಕಿದರು, ಆ ವರದಿಯನ್ನು ಹೈಕೋರ್ಟ್ ಪರಾಮರ್ಶೆ ಮಾಡಬೇಕೆಂದರು, ಅವತ್ತು ಸುದೈವ ಸಿಟಿಂಗ್ ಜಡ್ಜ್ ಹೇಳುತ್ತಾರೆ, ಇದಕ್ಕೂ ನನಗೂ ಸಂಬಂಧವಿಲ್ಲ ಹೋಗಿ ಎನ್ನುತ್ತಾರೆ. ಇದಾದ ಮೇಲೆ ಜಡ್ಜ್ ಬರುತ್ತಾರೆ, ಏಕಾಏಕಿಯಾಗಿ, 'Rameshkumar has to be secured' ಬಳಸಿರುವ ಪದ, if I

am right sir. ನಾನು ಓದಿರುವ ಮಾಹಿತಿ, ಚಾರ್ಜ್‌ಶೀಟ್ ಮಾಡಿ ನೋಡಿ ಈಗ ತನಿಖೆ ಮಾಡಿ ಎಂದು ಹೇಳಿಲ್ಲ, He must be secured. Mr. Rameshkumar and his brother has to be secured. ಆ ಪದದ ಅರ್ಥ ಎಲ್ಲಾದರೂ ಇದ್ದರೆ ಹುಡುಕಿ ತಂದು ನಮಗೆ ಒಪ್ಪಿಸಿ ಎಂದು, ಈಗ ತಾವು ಅವರನ್ನು ಒಪ್ಪಿಸಬೇಕು. ಈಗ ಅವರು ಇಲ್ಲಿದ್ದಾರೆ, ಕಾನೂನಿನ ವ್ಯಾಖ್ಯಾನ ಏನು ಹೇಳುತ್ತದೆಂದರೆ, he must be secured through Hon'ble Speaker of this House. ನಾಳೆ ಶಾಸಕರು ಏನಾಗಬೇಕೆಂಬುದು ಅಧ್ಯಕ್ಷರೇ, ನಮಗೆ ಅರ್ಥವಾಗುತ್ತಿಲ್ಲ. ಏಕೆ ಈ ಡಿವೈಎಸ್‌ಪಿ ರ್‍ಯಾಂಕ್‌ನ ಅಧಿಕಾರಿಗಳು, ಸರ್ಕಲ್ ಇನ್ಸ್‌ಪೆಕ್ಟರ್ ರ್‍ಯಾಂಕ್‌ನ ಅಧಿಕಾರಿಗಳು, ಈ ರೀತಿ ಮಾಡುತ್ತಾರೆ? I am not here to argue on behalf of Mr. Rameshkumar ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. If at all he has committed any mistake under the law, any offence under the criminal law, let the Court take its own course. ನಾನು ಬೇಡವೆನ್ನುವುದಿಲ್ಲ. ಆದರೆ ಮಧ್ಯಂತರದಲ್ಲಿ ಡಿವೈಎಸ್‌ಪಿಗಳು ಇವತ್ತು ನಮ್ಮನ್ನು ಆಳುವ ಸ್ಥಿತಿಗೆ ಬಂದರೆ ಡಿವೈಎಸ್‌ಪಿಗಳು ನಮ್ಮ ಚರಿತ್ರೆ ಅಥವಾ ನಮ್ಮನ್ನು ದೊಡ್ಡ ಮನುಷ್ಯರನ್ನಾಗಿ ಮಾಡುವ ಸ್ಥಿತಿಗೆ ಬಂದರೆ ನಾವು ಎಲ್ಲಿಗೆ ಹೋಗಬೇಕು? ಯಾರು ನಮ್ಮ ರಕ್ಷಣೆಗೆ ಬರುತ್ತಾರೆ, ಎಲ್ಲಿಗೆ ಈ ಆಡಳಿತ ಹೋಗುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇವತ್ತೇನು ಶೃಂಗೇರಿ ಶಾಸಕರಾದ ಜೀವ್‌ರಾಜ್‌ರವರಿಗಾಗಿದೆ, ಇದನ್ನೇನಾದರೂ ತಾವು ಛೀಮಾರಿ ಮಾಡದಿದ್ದರೆ, ಇದಕ್ಕೆ ನೀವೇನಾದರೂ ರಕ್ಷಣೆ ಕೊಡದೆ ಹೋದರೆ ಯಾವುದೇ ಶಾಸಕ ನಾಳೆ ಶಾಸಕರಾಗಿ ಈ ರಾಜ್ಯದಲ್ಲಿ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ನಾಳೆ ನಾನೊಂದು ಕೆಡಿಪಿ ಸಭೆ ಮಾಡುವಾಗ ಇನ್ಯಾವುದೊ ರಿವ್ಯೂ ಮಾಡುವಾಗ, ಆಕಸ್ಮಾತ್ ಒಂದು ಮಾತನಾಡಿದರೆ, he may go against a case. ಅಧಿಕಾರಿ ನಮ್ಮ ಮೇಲೆ ಅಲ್ಲಿ ಹೋಗಿ ಡೆಫರ್‌ಮೇಷನ್ ಕೇಸ್ ಹಾಕಬಹುದು. ಏಕೆಂದರೆ ಅದೆಲ್ಲಾ ಪತ್ರಿಕೆಯಲ್ಲಿ ಬಂದುಬಿಡುತ್ತದಲ್ಲಾ. ಹಾಗಾದರೆ ನಾವು ಬಾಯಿ ಹೊಲಿದುಕೊಂಡು ಶಾಸಕರು ಕೆಲಸ ಮಾಡಬೇಕೆ ಎಂದು ಕೇಳಬೇಕಾಗಿದೆ. ಇವತ್ತೇನು ಶೃಂಗೇರಿ ಶಾಸಕರಿಗಾಗಿದೆ ಇದನ್ನು ವೈಯಕ್ತಿಕವೆಂದು ಭಾವಿಸುವುದು ಒಂದಾದರೆ, ಎರಡನೆಯದು ಇಡೀ ಶಾಸನ ಸಭೆಯ ಹಕ್ಕಿಗೆ ಚ್ಯುತಿಯಾಗಿದೆ ಎನ್ನುವುದು ನನ್ನ ಭಾವನೆ. ಏಕೆಂದರೆ ಒಬ್ಬ ಅಧಿಕಾರಿ ನಿಜ, ಅವರನ್ನು ಅರೆಸ್ಟ್ ಮಾಡಬೇಕಾಗಿತ್ತು, ಅವರನ್ನು ಗೌರವಾನ್ವಿತವಾಗಿ ಕರೆದುಕೊಂಡು ಹೋಗಬೇಕಾಗಿತ್ತು, ಅವರನ್ನು ವಾರ್ನ್ ಮಾಡಿಬಿಡಬೇಕಾಗಿತ್ತು, ಅದನ್ನೆಲ್ಲಾ ಪ್ರಿವಿಲೇಜ್‌ನಲ್ಲಿ, ಕೌಲ್ ಅಂಡ್ ಶಕ್ದಾರ್ ಪುಸ್ತಕದಲ್ಲಿ, ಹೇಗೆ ಒಬ್ಬ ಶಾಸಕರನ್ನು, ಸಂಸತ್ ಸದಸ್ಯರನ್ನು ಅರೆಸ್ಟ್ ಮಾಡಿದಾಗ ನಡೆದುಕೊಳ್ಳಬೇಕಾಗುತ್ತದೆಂದು ಕೋಟ್ ಮಾಡಿಬಿಟ್ಟಿದ್ದಾರೆ. ಅವರೇನೂ ಮರ್ಡರ್ ಕೇಸ್‌ನಲ್ಲೆ ಇರಲಿಲ್ಲ, ಇನ್ಯಾವುದೋ ರೇಪ್ ಕೇಸ್‌ನಲ್ಲಿ ಅವರು ಇರಲಿಲ್ಲ.

ನೀವು ಸೆಕ್ಷನ್ 143, 144 ಘೋಷಣೆ ಮಾಡಿದಾಗ, ಪ್ರತಿಭಟನೆ ಮಾಡುವವರೆಲ್ಲಾ ನಿಂತುಕೊಂಡೇ ನಿಂತುಕೊಳ್ಳುತ್ತೇವೆ, ಸ್ಟ್ರೈಕ್ ಮಾಡುತ್ತೇವೆಂದು ಹೇಳೇ ಹೇಳುತ್ತೇವೆ, ಇಲ್ಲವೆಂದರೆ ಈ ರಾಜ್ಯದಲ್ಲಿ ನಮ್ಮ ಫಂಡಮೆಂಟಲ್ ರೈಟ್ಸ್ ನಾನೇನಾದರೂ ಪ್ರತಿಭಟಿಸಬೇಕೆನ್ನುವ ಹಕ್ಕಿಗೆ ಅರ್ಥವೇ ಉಳಿಯುವುದಿಲ್ಲ. ಅದನ್ನೇ ದೊಡ್ಡ ಅಪರಾಧವೆಂದು ಕನ್ಸಿಡರ್ ಮಾಡಿ ಅವರನ್ನು ಅರೆಸ್ಟ್ ಮಾಡಿರುವುದೊಂದು ತಪ್ಪಾದರೆ, ಅವರ ವಿರುದ್ಧವಾಗಿ ಇವತ್ತು ಡೆಫಮೇಷನ್ ನೋಟಿಸನ್ನು ದುಡ್ಡು ಇದೆ ಎಂದು, ಇಪ್ಪತ್ತೈದು ಲಕ್ಷ ರೂಪಾಯಿಗಳ ನೋಟಿಸ್ ಕೊಟ್ಟರೆ, ಆ ಅಧಿಕಾರಿ ಇವತ್ತು ಎರಡು ಲಕ್ಷ ರೂಪಾಯಿಗಳ ಸ್ಟ್ಯಾಂಪ್ ಕಟ್ಟಬೇಕು, ಡಿಫಮೇಷನ್ ಕೇಸ್ ಹಾಕಬೇಕಾದರೆ ಇವತ್ತು ಟೆನ್ ಪರ್ಸೆಂಟ್ ಡೆಫಾಸಿಟ್ ಮಾಡಬೇಕಾಗಿದೆ. 25 ಲಕ್ಷ ರೂಪಾಯಿಗಳ ಡೆಫಮೇಶನ್ ಕೇಸ್‌ಗೆ ಎರಡೂವರೆ ಲಕ್ಷ ರೂಪಾಯಿಗಳ ಡಿಪಾಸಿಟ್ ಕಟ್ಟುತ್ತಾರೆಂದರೆ, ನಾಳೆ ಅವರ ಆಸ್ತಿಯನ್ನು ಅಸೆಸ್ ಮಾಡಿಸಬೇಕೆಂದು ನಾನು ಕೇಳುತ್ತೇನೆ. ಅದನ್ನು ಮಾಡುತ್ತಾರೆಂದು ತಿಳಿದುಕೊಂಡು ನಾವು ಮಾತನಾಡುತ್ತಿರುವುದು ಸಾರ್, ಅಷ್ಟೊಂದು ಇನ್‌ಕಂ ಎಲ್ಲಿಂದ ಬರುತ್ತದೆ ಎಂದಾದರೂ ನಾವು ಕೇಳಬೇಕಾಗುತ್ತಲ್ಲಾ, in case if it goes before the court. He has proved his intention to go before the court. He has told. ನಾನು ಇಷ್ಟು ಲಕ್ಷ ರೂಪಾಯಿಗಳ ಮಾನನಷ್ಟ ಮೊಕದ್ದಮೆಯನ್ನು ನಿಮ್ಮ ಮೇಲೆ ಹಾಕುತ್ತಿದ್ದೇನೆಂದರೆ ಮೇಲೆ he must deposit 10% of the amount. ಮತ್ತೆ ಅವರ ಮರ್ಯಾದೆ ಮಾನ ಎಷ್ಟು ಲಕ್ಷಕ್ಕೆ ಬಾಳುತ್ತದೆ ಎನ್ನುವುದು ಸಭೆಗೆ ಗೊತ್ತಾಗಬೇಕು, ಮಾನ್ಯ ಅಧ್ಯಕ್ಷರು ನಮ್ಮ ಶಾಸಕರದ್ದು ಎಷ್ಟು ಲಕ್ಷಕ್ಕೆ ಬಾಳುತ್ತದೆಂದು ಹೇಳಬೇಕು. ಈಗ ನಮ್ಮನ್ನು ಹಿಡಿದು ಕೊಳ್ಳಪಟ್ಟಿ ಹಿಡಿದು ಜೈಲಿಗೆ ಹಾಕಿದರು.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ನನ್ನ ವಿಚಾರವನ್ನು ಪ್ರಸ್ತಾಫ ಮಾಡಿದಕ್ಕೆ ನಾನು ಉತ್ತರ ಹೇಳುವುದಕ್ಕೆ ಹೋಗುವುದಿಲ್ಲ, ಪಾರ್ಲಿಮೆಂಟರಿ ಆಫೇರ್ಸ್ ಮಿನಿಸ್ಟರ್ ಇದ್ದಾರೆ, ಮಾನ್ಯ ಎಂ.ಪಿ. ಪ್ರಕಾಶ್‌ರವರಿದ್ದಾರೆ, ಮಾನ್ಯ ಡಿ. ಮಂಜುನಾಥ್‌ರವರು ಆ ಮನೆ ಮತ್ತು ಈ ಮನೆಯಲ್ಲಿ ಪ್ರಿಸೈಡಿಂಗ್ ಆಫೀಸರ್ ಆಗಿ ಕೆಲಸ ಮಾಡಿದ್ದಾರೆ. ಅಧ್ಯಕ್ಷರೆ ಈ ನೋಟಿಸ್ ಅನ್ನು ತಾವು ನೋಡಿ ಪ್ರಕಾಶ್‌ರವರೇ, ಲೀಗಲ್ ನೋಟಿಸ್ ಅನ್ನು ತಾವು ಓದಬೇಕು, ಆತನ ಅವೇರ್‌ಮೆಂಟ್ ನಮ್ಮ ಸಹೋದ್ಯೋಗಿ ಜೀವರಾಜ್‌ರವರ ಮೇಲೆ ಏನು? ನೀವು ನನ್ನ ಮೇಲೆ ವೆಯಲೆಂಟ್ ಆಗಿ ಭಾಷೆಯನ್ನು ಬಳಸಿದ್ದೀರಿ, ಡೆಫಮೇಟರಿ ಭಾಷೆ ಉಪಯೋಗಿಸಿದ್ದೀರಿ ಮೋಟಿವ್ಸ್ ಇಂಪ್ಯೂಟ್ ಮಾಡಿದ್ದೀರಿ, ಈ ಎಲ್ಲಾ ಆಪಾದನೆಗಳನ್ನು ಸಬ್‌ಸ್ಟ್ಯಾನ್ಸಿಯೇಟ ಮಾಡಿಕೊಳ್ಳುವುದಕ್ಕೆ ನಾನು ಹೇಳುವುದೇನೆಂದರೆ, 'ಗೂಳಿಯಂತೆ ನುಗ್ಗಿದ್ದೀರೆಂದು' ನನ್ನ ಮೇಲೆ ಹೇಳಿದ್ದೀರಿ ಕಲ್ಲೇಟಿನಿಂದ ನಮ್ಮ ಕಾರ್ಯಕರ್ತರು ನಿಮ್ಮ ಹಣೆಗೆ ಹೊಡೆದಿದ್ದರೆ, ಹಾಗೆ ಒಂದು ವೇಳೆ ಆಗಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ, ಪ್ರೈಮಾಫೇಸಿ, ಇಷ್ಟು ಮಾತ್ರಕ್ಕೆ

ಈ ವ್ಯಕ್ತಿತ್ವದ ಅಧಿಕಾರಿಗೆ ಅಪಮಾನವಾಯಿತೆಂದು ಒಬ್ಬ ಶಾಸಕರಿಗೆ ಲೀಗಲ್ ನೋಟಿಸ್ ಕೊಡುತ್ತಾರೆಂದರೆ, ನಾವು ಎಲ್ಲಿಗೆ ಹೋಗಿ ತಲುಪುತ್ತಿದ್ದೇವೆ? ಯಾವ ಶಾಸಕ ಕೆಲಸ ಮಾಡುವುದಕ್ಕಾಗುತ್ತದೆ? ಇದು ಯಾವ ತರಹದ ಡಿಸೈನ್, ಎಲ್ಲಿಂದ ಎಲ್ಲಿಗೆ ನಾವು ಹೋಗುತ್ತಿದ್ದೇವೆ. ಆತನ ಡಿಫೆನ್ಸ್ ನೋಡಿ, ಹೊಸದಾಗಿ ನಾವೇನೂ ಡಾಕ್ಯುಮೆಂಟ್ ಸದನಕ್ಕೆ ಸಪ್ಲೈ ಮಾಡಬೇಕಾದ್ದಿಲ್ಲ, ಆತನ ಡಿಫೆನ್ಸ್ ಏನೆಂದರೆ, ನಾನು ಪ್ರಾಮಾಣಿಕ, ನನ್ನ ಕ್ಲೈಂಟ್ ಅದ್ವಿತೀಯ ನಾಯಕ, ಅವನು ದೊಡ್ಡ ಮನುಷ್ಯ, ಅವನ ಕೆರಿಯರ್ ಚೆನ್ನಾಗಿದೆ, ಇವರೇನು ಜೀವರಾಜ್‌ರವರ ಮೇಲಿನ ಅಧಿಕಾರಿಗಳೇ? ಆತನ ಕಾನ್ಫಿಡೆನ್ಷಿಯಲ್ ರೆಕಾರ್ಡ್ ಅನ್ನು ಇವರು ನೋಡಿದ್ದಾರಾ? ಅವನು ಒಳ್ಳೆಯವನೋ ಕೆಟ್ಟವನೋ, ಸಸ್ಪೆಂಡ್ ಆಗಿದ್ದನೋ ಆಗಿರಲಿಲ್ಲವೋ, ಹಾನ್‌ಸ್ಟೋ, ಡಿಸ್‌ಹಾನೆಸ್ಟೋ, ನೋಟಿಸ್ ಇತ್ತೋ ಇಲ್ಲವೋ, ಇವರಿಗೆ ಹೇಗೆ ಗೊತ್ತಾಗಬೇಕು? ಅದು ಗೊತ್ತಾಗುವುದು ಅವರ ಮೇಲಿನಾಧಿಕಾರಿಗಳಿಗೆ, ಸರ್ಕಾರ ನಿನಗೆ ಪೋಸ್ಟಿಂಗ್ಸ್ ಕೊಟ್ಟಿದೆ ನೀನು ಅಲ್ಲಿ ಬಂದು ಕೆಲಸ ಮಾಡುತ್ತಿದ್ದಿಯಾ, ಮತ್ತೆ ನೀನೇ ಒಪ್ಪಿಕೊಳ್ಳುತ್ತಿಯಾ, proceedings under law as established by law ಆಗಬೇಕಾಗಿರತಕ್ಕ ಎಲ್ಲಾ ಕೆಲಸವನ್ನೂ ಕೂಡ, ಸ್ಟೇಷನ್ ಹೌಸ್ ಆಫೀಸರ್ ಯಾರಿದ್ದಾರೆ, ಅವರು ನಡೆಸಿಕೊಂಡು ಹೋಗಿದ್ದಾರೆ ಹಾಗಾದರೆ ನಿನ್ನ ಪ್ರಶ್ನೆ ಎಲ್ಲಿ ಬಂತು? Where do you come into the picture? ಸ್ಟೇಷನ್ ಹೌಸ್ ಆಫೀಸರ್ ಯಾರು ಇದ್ದರು, ಅವರು ಸೆಕ್ಯೂರ್ ಮಾಡಿಕೊಂಡರು, ಯಾವ ಕಲಂನ್ನು ಇವರ ಮೇಲೆ ಹಾಕಬೇಕಾಗಿತ್ತೋ ಹಾಕಿದ್ದಾರೆ. ಜ್ಯುಡಿಸಿಯಲ್ ಕಸ್ಟಡಿಗೆ ಕಳುಹಿಸಿದ್ದಾರೆ. All these things are over. ನೀನು ಯಾಕೆ ಬಂದೆ? ನಿನ್ನ ಪ್ರಶ್ನೆ ಎಲ್ಲಿ ಬಂತು? There is something that doesn't meet the eye. ನಮ್ಮ ಕಣ್ಣಿಗೆ ನೇರವಾಗಿ ಕಾಣದೇ ಇರತಕ್ಕಂಥದ್ದು ಯಾವುದೋ ಸತ್ಯವನ್ನು ಮುಚ್ಚಿಡಲಿಕ್ಕೆ ಅಥವಾ ಇವರು ಹೇಳಿರತಕ್ಕಂಥ ಯಾವುದೋ ಮಾತಿಗೆ ನೇರವಾಗಿ ಪ್ರತಿಭಟನೆ ಮಾಡುವುದಕ್ಕೆ ಸಾಧ್ಯ ಇಲ್ಲದೆ ಶಾಸಕರು ತನ್ನ ಕೆಲಸವನ್ನು ನಿರ್ವಹಣೆ ಮಾಡಲಿಕ್ಕೆ ಉದ್ದ್ಯಾಪೂರ್ವಕವಾಗಿ ಮತ್ತು ಬುದ್ಧಿಪೂರ್ವಕವಾಗಿ conscious ಆಗಿ ಈ ನೋಟೀಸ್ ಎನ್ನುವ ಅಸ್ತ್ರವನ್ನು ಬಳಸಿಕೊಂಡು ಮಾಡುತ್ತಿದ್ದಾರೆ ಎಂದು ಅನಿಸುತ್ತದೆ. ಕಮಿಟಿಗೆ ಏಕೆ ರೆಫರ್ ಮಾಡಬೇಕು? ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ, ನಾವು ಗೌರವಸ್ಥರಲ್ಲದೆ ಹೋದರೂ ನಮಗೆ ಗೌರವ ಕೊಡಿ, ನಾವು ಶಾಸಕರಾಗಿದ್ದೇವೆ ಎಂದು ಕೇಳುವ ಮಟ್ಟಕ್ಕೆ ನಾವು ಇಳಿದಿಲ್ಲ. ಶಾಸಕರಾದ ಮಾತ್ರಕ್ಕೆ ಅವತ್ತು ಚುನಾವಣೆಯಾಗುತ್ತದೆ, ಮತ ಎಣಿಕೆ ಮಾಡುತ್ತಾರೆ, ನಮ್ಮ ಅದೃಷ್ಟ, 4 ಮತ ಹೆಚ್ಚಿಗೆ ಬರುತ್ತದೆ. ಡಿಕ್ಲೇರ್ ಮಾಡುತ್ತಾರೆ. ಶಾಸಕರಲ್ಲದವರು ಗೌರವಸ್ಥರಲ್ಲ ಎಂದು ಹೇಳತಕ್ಕ ಒಂದು ಮೌಢ್ಯಕ್ಕೂ ನಾವು ಇಳಿದಿಲ್ಲ. ಆದರೆ ಈ ಸದನಕ್ಕೆ ತನ್ನದೇ ಆದಂಥ ಒಂದು ಗೌರವವಿದೆ. ನಮ್ಮ ಪುಣ್ಯನೋ, ಅದೃಷ್ಟವೋ ಜನರ ಇಷ್ಟವೋ ನಾವು ಇಲ್ಲಿ ಒಳಗೆ ಬಂದಿದ್ದೇವೆ.

ನಾವು ಈ ಸದನದ ಒಳಗೆ ಕೆಲಸ ಮಾಡುವ ವೇಳೆಗೆ ಸದನದ ಗೌರವ ನಮ್ಮ ಗೌರವದೊಟ್ಟಿಗೆ ಶಾಮೀಲಾಗಿರುತ್ತದೆ. ಇಂಥವರು ಈ ರೀತಿ ಪಡೆದುಕೊಳ್ಳತಕ್ಕಂಥದ್ದರಿಂದ ಸದನದ ಗೌರವಕ್ಕೆ ಎಷ್ಟು ಅಪಾಯವಾಗುತ್ತದೆ? ಯಾರು ಮುಂದೆ ಇಲ್ಲಿ ನಿರ್ಭಯವಾಗಿ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ? ನಾನಂತೂ ನಾನು ಹೇಳಿಕೊಳ್ಳುವುದಕ್ಕೇ ಹೋಗುವುದಿಲ್ಲ. ಸನ್ಮಾನ್ಯ ಮಾಧುಸ್ವಾಮಿಯವರಿಗೆ ಯಾರು ಬ್ರೀಫ್ ಮಾಡಿದರೋ ಸ್ವಲ್ಪ ಹೆಚ್ಚು ಕಡಿಮೆ ಇದ್ದುದನ್ನೆಲ್ಲಾ ಹೇಳಿದ್ದಾರೆ, ಆಯಿತು. ನಾನು ನನ್ನ ಹಣೆಬರಹವನ್ನು ಕೋರ್ಟಿನ್ನಲ್ಲಿ ಇತ್ಯರ್ಥ ಮಾಡಿಕೊಳ್ಳುತ್ತೇನೆ. ಅಥವಾ ಮತ್ತೊಮ್ಮೆ ಅವಕಾಶ ಸಿಕ್ಕಿದಾಗ ಎಲ್ಲಾ ದಾಖಲೆಗಳನ್ನು ತಮಗೆ ನಾನು ಒಪ್ಪಿಸುತ್ತೇನೆ. ಎಲ್ಲಿಗೆ ನಾವು ಇಳಿದಿದ್ದೇವೆಂದು ಹೇಳಿದರೆ ಯಾವ ಶಾಸಕ ಕೆಲಸ ಮಾಡುವುದಕ್ಕಾಗುತ್ತದೆ? ಸ್ಟೇಷನ್ ಹೌಸ್ ಆಫೀಸರ್ ಕೇಸನ್ನು ರಿಜಿಸ್ಟರ್ ಮಾಡಿದರು. ನಿನ್ನ ಹಣೆಗೆ ಏಟು ಬಿತ್ತು. ಅವರು ಗೂಳಿ ನುಗ್ಗಿದಂತೆ ನುಗ್ಗಿದರು ಎಂದು ನಿನ್ನ ಮೇಲೆ ಹೇಳಿದರು. ನೀನ್ಯಾಕೆ ಹೋಗಿದ್ದೆ ಅಲ್ಲಿಗೆ? ಈ ಸದನದಲ್ಲಿ ಅನೇಕ ವೇಳೆ ನಾವು ಆರೋಪ, ಪ್ರತ್ಯಾರೋಪಗಳನ್ನು ಮಾಡಿಕೊಳ್ಳುವ ವೇಳೆಯಲ್ಲಿ ಎಂಥೆಂಥ ಭಾಷೆಯನ್ನು ಬಳಸುತ್ತೇವೆ. ಮಾನ್ಯ ಜೆ.ಹೆಚ್. ಪಟೇಲರು ಅಲ್ಲಿ ಕುಳಿತಿದ್ದರು. ಮಾನ್ಯ ಗುಂಡುರಾಯರು ಇಲ್ಲಿ ಕುಳಿತಿದ್ದರು. ಕೈ ಕೈ ಮಿಲಾಯಿಸಿಕೊಂಡು ಬಿಟ್ಟರು. ಇದೆಲ್ಲಾ ನಡೆದಿಲ್ಲವೇ? ನಿಜಲಿಂಗಪ್ಪನವರ ವಿಚಾರದಲ್ಲಿ ಶ್ರೀಮಾನ್ ಗೋಪಾಲಗೌಡರು ಬಳಸಿರತಕ್ಕ ಭಾಷೆ. ನಾವು ಒಂದು ಕ್ಷಣವೂ ತಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅಜೀಜ್ ಸೇಠ್‌ರವರು ಈ ಸದನದಲ್ಲಿ ಮಾಡಿರತಕ್ಕ ಗಲಾಟೆ, ಏನು ಅಧ್ಯಕ್ಷರೇ? ಇದರಲ್ಲಿ ಪಕ್ಷ ಪಂಗಡದ ಪ್ರಶ್ನೆ ಇಲ್ಲ. ಸೈದ್ಧಾಂತಿಕವಾದ ವಿಚಾರ ಬಂದಾಗ ಅವರ ಜೊತೆಗೆ ನಾನು ಇಲ್ಲ. ನನ್ನ ಸಿದ್ಧಾಂತ ನನ್ನದು. ಅವರ ಸಿದ್ಧಾಂತ ಅವರದು. ಆದರೆ ಸಹೋದ್ಯೋಗಿಗಳಾಗಿ ನಾವು ಇಲ್ಲಿ ಸದನದಲ್ಲಿ ಶಾಸಕರುಗಳಾಗಿ ನಾವು ಒಟ್ಟಿಗೆ ಕೆಲಸವನ್ನು ಮಾಡುವಾಗ ಕನಿಷ್ಟವಾಗಿ ನಮಗೆ ಸಂವಿಧಾನಬದ್ಧವಾಗಿ ಇರತಕ್ಕ ಗೌರವ ನಮಗೆ, ಇರುವಂಥ ಹಕ್ಕು ಕೂಡ ಉಲ್ಲಂಘನೆಯಾದರೆ ಬಹುಶ: ನಾವ್ಯಾರೂ ಇಲ್ಲಿ ಸದನದಲ್ಲಿ ಇರಬೇಕಾದ ಅಗತ್ಯವೇ ಇಲ್ಲ. ಈತ ಈ ನೋಟೀಸನ್ನು ಕೊಡಲಿಕ್ಕೆ ಮೇಲಾಧಿಕಾರಿಗಳ ಅಥವಾ ಸರ್ಕಾರದಿಂದ ಪರವಾನಿಗೆಯನ್ನು ಪಡೆದಿದ್ದಾನಾ? ತಕ್ಷಣವೇ ವಿಚಾರಣೆ ಮಾಡಬೇಕು. If he has attempted to issue this notice to Mr. Jeevaraj without obtaining the permission from his higher authories, he should be kept under suspension forthwith. It is not a joke. ಸನ್ಮಾನ್ಯ ಮುಖ್ಯಮಂತ್ರಿಗಳು ಸಹೃದಯಿಗಳು. ನನ್ನ ಕಷ್ಟದಲ್ಲಿ ನಾನು ಹೋಗಿ ಅವರ ಎದುರಿಗೆ ನಿಂತಾಗ ಅತ್ಯಂತ ಗೌರವದಿಂದ ನನ್ನನ್ನು ನಡೆಸಿಕೊಂಡಿದ್ದಾರೆ. ನಮಗೆ ಕಾನೂನಿನ ಚೌಕಟ್ಟಿನೊಳಗೆ ಯಾವ ರೀತಿ ನೆರವನ್ನು ಕೊಡಬಹುದು ಅದನ್ನು ಕೊಟ್ಟಿದ್ದಾರೆ.

ಒಬ್ಬ ಹಿರಿಯಣ್ಣನಂತೆ ನನ್ನ ಜೊತೆಗೆ ನಿಂತುಕೊಂಡು ನನಗೆ ಮಾರಲ್ ಕರೇಜ್‌ನ್ನು ಕೊಟ್ಟಿದ್ದಾರೆ. ಅವರು ಇದರಲ್ಲೆಲ್ಲಾ ಪಾರ್ಟಿ, ಪಂಗಡ, ಅಧಿಕಾರ, ಅವರು ಯಾರನ್ನೋ ರಕ್ಷಣೆ ಮಾಡುವುದಕ್ಕೆ ಹೋಗುತ್ತಾರೆ ಎಂದು ನಾನು ಅನುಮಾನಪಡುವ ವ್ಯಕ್ತಿಯಲ್ಲ. As an individual, our Chief Minister is a person of very high stature. ಅವರು ಬಹಳ ದೊಡ್ಡ ನಾಯಕರು ಎಂದು ಹೇಳುವುದಕ್ಕೆ ನಾನು ಹೊಗಳುವುದಕ್ಕೆ ತಯಾರಾಗಿಲ್ಲ. ಆದರೆ ಒಬ್ಬ ಮನುಷ್ಯನಾಗಿ, ಒಬ್ಬ ವ್ಯಕ್ತಿಯಾಗಿ, ಇನ್ನೊಬ್ಬ ವ್ಯಕ್ತಿಯ ಜೊತೆಗೆ ನನ್ನ ವ್ಯವಹಾರವನ್ನು ನಡೆಸುವಾಗ ಅತ್ಯಂತ ದೊಡ್ಡ ಹೃದಯ ಇರತಕ್ಕಂಥ ವ್ಯಕ್ತಿ. ಇವತ್ತು ಅಧಿಕಾರ ಕೂಡ ಅವರ ಕೈಯಲ್ಲಿದೆ. He has to exhibit his mettle today. He has to display the humanitarian aspect of his personal display in this House. ಮಾನ್ಯ ಜೀವರಾಜ್ ಘನೆಯವರ ಗತಿ ಏನಾಗಿರಬೇಕು? ಒಂದು ಹೋರಾಟವನ್ನು ಮಾಡುವುದಕ್ಕೆ ಹೋದವನಿಗೆ ಲಾಕಪ್‌ನಲ್ಲಿ ಹಾಕಿದರೆ ಹೇಗೆ? ಏನು ಸ್ಮಗ್ಲಿಂಗೋ, ಕಳ್ಳತನವೋ ಇನ್ನೇನೋ ಆದರೆ ಪರವಾಗಿಲ್ಲ. ನಾವೆಲ್ಲಾ politicalisation ಗೆ... ಹೋಗತಕ್ಕವರು. ಇದು ನನಗೆ ಅನಿಸುತ್ತದೆ ಅಧ್ಯಕ್ಷರೇ, ತಾವು ದಯಮಾಡಿ ದೊಡ್ಡ ಮನಸ್ಸು ಮಾಡಬೇಕು. You should take it up directly for discussion. ಕಮಿಟಿಗೆ ರೆಫರ್ ಮಾಡತಕ್ಕಂಥದ್ದು, I am sorry, I had to take your time.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವುದಕ್ಕೆ ಇನ್ನೇನು ಬಹಳ ಉಳಿದಿಲ್ಲ. ಈ ಸರ್ಕಾರ ಈ ವಿಷಯವನ್ನು ದತ್ತಜಯಂತಿ ಅದರ ಪರಿಣಾಮಗಳ ದೃಷ್ಟಿಯಲ್ಲಿ ನೋಡಬಾರದು ಎಂದು ನನ್ನ ಬಿನ್ನಹ. ಏಕೆಂದರೆ ನಾನೂ ಕೂಡ ಆ ಪಕ್ಷಕ್ಕೆ ಸೇರಿದವನಲ್ಲ. ನನಗೆ ನನ್ನದೇ ಆದ ಪಕ್ಷ ಇದೆ. ನಮ್ಮದು ಬೇರೆ ನಿಲುವಿದೆ. ಅಲ್ಲಿ ನಡೆಯಬಾರದು ಅದು. ಸರ್ಕಾರ ಒಂದು ಕಾರ್ಯಕ್ರಮವನ್ನು ಅವರು ರದ್ದುಮಾಡಿದಾಗ ಕಾನೂನುಬಾಹಿರ ಮತ್ತೊಂದು ಮಗದೊಂದು ನಾನು ಅದನ್ನು ಒಪ್ಪುತ್ತೇನೆ. ಆದರೆ ಏನೂ ನಡೆಯುವುದಕ್ಕೆ ಮೊದಲೇ ಅವರು ಹೀಗೆ ಮಾಡುತ್ತಾರೆ, ಹಾಗೆ ಮಾಡುತ್ತಾರೆ ಎಂದು ತಿಳಿದುಕೊಂಡು ಒಬ್ಬ ಶಾಸಕರ ಮೇರೆ ತೆಗೆದುಕೊಂಡಿರುವುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಆ ದೃಷ್ಟಿಯಲ್ಲಿ ನೋಡಬಾರದು ಒಂದು. ಎರಡನೆಯದು, ಸಾರ್ವಜನಿಕ ದೃಷ್ಟಿಯಲ್ಲಿ ಶಾಸಕರದ್ದು ಯಾರಾದರೂ ಗೌರವ ಹೋಗುತ್ತದೆ ಎಂದು ಹೇಳಿ ಆರಂಭವಾದರೆ ನಾಳೆ ಮಂತ್ರಿಗಳದ್ದೂ ಹೋಗುತ್ತದೆ. ಇನ್ನೊಬ್ಬರದ್ದೂ ಹೋಗುತ್ತದೆಂದು ಹೇಳಿ ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈ ಮನೆ ಎಲ್ಲರಿಗೂ ಸೇರಿದ್ದು ಅಧ್ಯಕ್ಷರೇ. ಇದರ ಗೌರವವನ್ನು ನಾವೆಲ್ಲಾ ಸೇರಿ ಉಳಿಸಬೇಕಾಗಿದೆ. ಇದನ್ನು ಜಾಸ್ತಿ ಮಾಡಬೇಕಾಗಿದೆ. ಅಕಸ್ಮಾತ್ ಸಣ್ಣಪುಟ್ಟ ತಪ್ಪುಗಳನ್ನು ಫೀಲ್ಡ್‌ನಲ್ಲಿ ಹೊರಗಡೆ ಹೊಸದಾಗಿ ಬಂದವರು ಅಥವಾ ಆವೇಶಗಳಲ್ಲಿ ನಾವು ಮಾಡಬಹುದು. ನೀವು ಕರೆದು ನಮ್ಮನ್ನು ಛೀಮಾರಿ ಮಾಡಿ. ಏನ್ರೀ? ಶಾಸಕರುಗಳಾಗಿ ಹೀಗೆ ವರ್ತಿಸುತ್ತೀರಿ

ಎಂದು ಹೇಳಿ. ಅದನ್ನು ಬಿಟ್ಟು ಪೊಲೀಸರ ಕೈಗೊಂಬೆಗಳನ್ನಾಗಿ ಶಾಸಕರನ್ನು ಬಿಡುವುದು ಯಾರಿಗೂ ಗೌರವ ತರುವಂಥ ವಿಷಯವಲ್ಲ. ಎರಡನೆಯದು, ಅಧಿಕಾರಿಗಳಿಗೆ ಸ್ವಲ್ಪ ಭಯವಿರಬೇಕು. ಅವರಿಗೆ, he has every right. ನಾನು ನಿಮಗೆ ಹೇಳಿದೆ, defamation ಕೇಸನ್ನು ಹಾಕಲಿಕ್ಕೆ ಅವರಿಗೆ ಅಧಿಕಾರ ಇಲ್ಲವೆಂದು ನಾನು ಹೇಳುವುದಿಲ್ಲ. ಅದಕ್ಕೆ ಮೊದಲೇ ಪರ್ಮಿಷನ್ ತೆಗೆದುಕೊಳ್ಳಬೇಕಾಗಿತ್ತು, and he has to prove, was he there as a rightful duty officer ಎಂದು ಇವರನ್ನು ಕರೆದಿದ್ದು ಯಾರು? ಇವರು ಯಾರ behalf of ಅಲ್ಲಿಗೆ ಹೋಗಿ ಕೆಲಸವನ್ನು ಮಾಡುತ್ತಿದ್ದರು? ಅಲ್ಲಿ ಸಬ್ ಇನ್ಸ್‌ಪೆಕ್ಟರ್ ಏನು ಮಾಡುತ್ತಿದ್ದ? ಸರ್ಕಲ್ ಇನ್ಸ್‌ಪೆಕ್ಟರ್ ಏನಾಗಿದ್ದ? ಇದೆಲ್ಲಾ ವಿಚಾರಣೆಯಾಗಬೇಕಾಗುತ್ತದೆ. ಯಾವುದೋ ಸೇಡು ಇಟ್ಟುಕೊಂಡು ನೀವು ಕ್ಲಬ್ ನಡೆಸುತ್ತಿರುವುದರಿಂದ ನಿಮಗೆ ಮಾಮೂಲಿ ಬರುತ್ತಿರಬಹುದು ಎಂದು ಅವರು ಪಟ್ಟ ಒಂದು ಅನುಮಾನವನ್ನೇ ಇವತ್ತು ದೊಡ್ಡದು ಮಾಡಿಕೊಂಡು ಒಬ್ಬ ಶಾಸಕರ ಮೇಲೆ ಹೀಗೆ ಹರಿಹಾಯುವುದಕ್ಕೆ ಶುರು ಮಾಡಿದರೆ ಇದು ಕ್ಷಮಿಸಲಾರದ ಘಟನೆ ಎಂದು ಹೇಳಿ ಈ ಬಗ್ಗೆ ತಾವು ಶಿಸ್ತು ಕ್ರಮವನ್ನು ಕೈಗೊಳ್ಳಬೇಕೆಂದು ಹೇಳಿ ನಿಮ್ಮನ್ನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಾಗ ಕರ್ನಾಟಕ ರಾಜ್ಯದ ಲಾ ಅಂಡ್ ಆರ್ಡರ್ ಬಗ್ಗೆ ಪ್ರಸ್ತಾಪ ಮಾಡಲು ಅವಕಾಶ ಇದೆ. ಇವತ್ತು ವಿರೋಧ ಪಕ್ಷದ ನಾಯಕರು specific ಆಗಿ ಮಾನ್ಯ ಜೀವರಾಜ್ ಅವರನ್ನು ಡಿವೈಎಸ್‌ಪಿ ಹಿಡಿದು ಅವಮಾನ ಮಾಡಿ ಅಲ್ಲಿ ಕೇಸನ್ನು ಹಾಕಿದ್ದಾರೆ ಎಂದು ಹೇಳಿದ್ದಾರೆ. ಅದರ ಬಗ್ಗೆ ನಾನು ಹೇಳುತ್ತೇನೆ, ಮತ್ತೆ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚಿಸುವಾಗ ಲಾ ಅಂಡ್ ಆರ್ಡರ್ ಬಗ್ಗೆ ಎಲ್ಲೆಲ್ಲಿ ಈ ತರಹದ ಪೊಲೀಸ್ ದೌರ್ಜನ್ಯ ನಡೆಯುತ್ತಿದೆ, ಅದರ ಬಗ್ಗೆ ತಾವು ಹೇಳುವುದಕ್ಕೆ ಅವಕಾಶ ಇದೆ. ತಾವು (ವಾಟಾಳ್ ನಾಗರಾಜ್‌ರವರನ್ನು ಉದ್ದೇಶಿಸಿ) ಮಾತನಾಡಲಿಕ್ಕೆ ಮಾನ್ಯ ಸಭಾಧ್ಯಕ್ಷರು ಅವಕಾಶವನ್ನು ಕೊಟ್ಟರೆ ಮಾತನಾಡಬಹುದು.

ಶ್ರೀ ವಾಟಾಳ್ ನಾಗರಾಜ್ : ನನ್ನ ಸಹಿ ಇದೆ.

ಶ್ರೀ ಧರ್ಮಸಿಂಗ್ : ತಾವು ಸಹಿಯನ್ನು ಹಾಕಿಯೇ ಬಿಟ್ಟಿದ್ದೀರಾ?

ನಗು

ಶ್ರೀ ಜೆ.ಸಿ. ಮಾಧುಸ್ವಾಮಿ : ತಮ್ಮನ್ನು ಕೇಳದೆ ಇವರು ಸಹಿಯನ್ನು ಹಾಕಬಹುದಾ ಸಾರ್? ಇದೊಂದು ದೊಡ್ಡ ಪ್ರಿವಿಲೇಜ್.

ನಗು

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ನೋಡಿ, ಏನೋ ನೀವು ಒಂದು ವಿಶ್ವಾಸಕ್ಕೆ ಪ್ರೀತಿಗೆ ಹೇಳಿದರೆ ಅದನ್ನು ಇಲ್ಲಿ ದೊಡ್ಡದು ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ಇಲ್ಲಿ ಬಹಳ ಪ್ರಾಮುಖ್ಯವಾಗಿರುವುದು

ಅಂದರೆ ಡಿವೈಎಸ್‌ಪಿಗೆ ಶಾಸಕರನ್ನು ಬಂಧಿಸಿ ಕರೆದುಕೊಂಡು ಹೋಗುವುದಕ್ಕೆ ಅಧಿಕಾರವಿಲ್ಲ. ನಾನು ಹೇಳತಕ್ಕಂಥದ್ದು ಏನೆಂದರೆ, ಮತ್ತೆ ಅವರೇ ಹೋಗಿ ಅಲ್ಲಿ ಸೆಕ್ಷನ್ 143, 144, 147, 148, 332, 353 ಇದು ಇಂಡಿಯನ್ ಪೀನಲ್ ಕೋಡ್‌ನಲ್ಲಿದೆ; ಅದನ್ನು ಹಾಕುತ್ತಾರೆ. ಅವರು ಯಾರನ್ನು ಬಂಧನ ಮಾಡಿದರೂ ಅವರ ಮೇಲೆ ಹತ್ತು-ಹನ್ನೆರಡು ಕೇಸ್‌ಗಳನ್ನು ಹಾಕತಕ್ಕಂಥದ್ದು ಇದೆ. ಇದಾದಮೇಲೆ ಮಾನ್ಯ ಜೀವರಾಜ್ ಅವರನ್ನು ಬಂಧನ ಮಾಡಿದ ಮೇಲೆ ಅವರನ್ನು ಲಾಕಪ್‌ನಲ್ಲಿ ಇಟ್ಟಮೇಲೆ ಒಂದು ಗಂಟೆಯ ನಂತರ ಸರ್ಕಲ್ ಇನ್ಸ್‌ಪೆಕ್ಟರ್ ನೇರವಾಗಿ ಹೇಳುತ್ತಾರೆ, ಈ ಬಂಧನ ಸರಿ ಇಲ್ಲ ಅದು ನನ್ನ ಸಟೇಷನ್‌ನಲ್ಲಿ ಲಾಕಪ್‌ನಲ್ಲಿ ಇಟ್ಟಿರತಕ್ಕಂಥದ್ದು. ಇದು ಸರಿಯಾದ ನೀತಿಯಲ್ಲ ಎಂದು ತಕ್ಷಣವೇ ಬಿಡುಗಡೆ ಮಾಡುತ್ತಾರೆ. ಇವೆರಡೇ ಸಾಕು. ಡಿವೈಎಸ್‌ಪಿ ಅವರು ವೈಯಕ್ತಿಕವಾಗಿ ದ್ವೇಷದಿಂದ ಮಾನ್ಯ ಜೀವರಾಜ್ ಅವರನ್ನು ಬಂಧನ ಮಾಡಿರತಕ್ಕದ್ದು ಸರ್ಕಲ್ ಇನ್ಸ್‌ಪೆಕ್ಟರ್‌ಗೂ ಗೊತ್ತಿಲ್ಲದೆ, ಸಬ್ ಇನ್ಸ್‌ಪೆಕ್ಟ್‌ಗೂ ಗೊತ್ತಿಲ್ಲದೆ ಯಾರಿಗೂ ಗೊತ್ತಿಲ್ಲದೇ ಬಹಳ ದುರುದ್ದೇಶಪೂರ್ವಕವಾಗಿ, ಅಲ್ಲಿ ಭಾಷಣವನ್ನು ಮಾಡುವ ಅವಕಾಶವನ್ನು ತಪ್ಪಿಸಿ ನೇರವಾಗಿ ತೆಗೆದುಕೊಂಡು ಹೋಗುತ್ತಾರೆ. ನಾನು ಬಹಳ ಒತ್ತಿ ಒತ್ತಿ ಹೇಳುತ್ತಿದ್ದೇನೆ. ಸರ್ಕಲ್ ಇನ್ಸ್‌ಪೆಕ್ಟರ್ ಕರೆಕ್ಟ್ ಇದ್ದಾರೆ. ಸರ್ಕಲ್ ಇನ್ಸ್‌ಪೆಕ್ಟರ್ ಏನು ಹೇಳುತ್ತಾರೆ? ನನ್ನ ಸ್ಟೇಷನ್‌ನಲ್ಲಿ ಬಂಧನ ಮಾಡಿರತಕ್ಕದ್ದು ಸರಿಯಲ್ಲ. ಅದು ಅಲ್ಲಿಗೆ. ತಕ್ಷಣ ಮುಗಿದು ಹೋಯಿತು. ಡಿವೈಎಸ್‌ಪಿ ಅವರು ಮಾಡಿರತಕ್ಕದ್ದು ನೇರವಾಗಿ ತಪ್ಪಾಗಿದೆ ಎನ್ನತಕ್ಕದ್ದು. ಮತ್ತು ಅವರು 25 ಲಕ್ಷ ರೂಪಾಯಿಗಳ ಮಾನ ನಷ್ಟ ಮೊಕದ್ದಮೆ ಹೂಡುತ್ತೇನೆ ಎನ್ನುತ್ತಾರೆ. ನನಗೆ ಅನ್ನಿಸುತ್ತದೆ. ಶಾಸಕರ ಮೇಲಾಗಲಿ, ಮಂತ್ರಿಗಳ ಮೇಲಾಗಲಿ, ಯಾರೊಬ್ಬ ಸಾರ್ವಜನಿಕ ವ್ಯಕ್ತಿಯ ಮೇಲೆ ಸರ್ಕಾರಿ ನೌಕರ ಯಾವುದೇ ಒಂದು ಮೊಕದ್ದಮೆ ಹೂಡಬೇಕಾದರೆ ಸರ್ಕಾರದ ಅನುಮತಿಯನ್ನು ಪಡೆಯಬೇಕು. ಮುಖ್ಯ ಕಾರ್ಯದರ್ಶಿಯವರ ಅನುಮತಿಯನ್ನು ಪಡೆಯಬೇಕು. ಇಲ್ಲಿ ಅನುಮತಿ ಪಡೆದಿಲ್ಲ. ನೇರವಾಗಿ ಅವರ ವಕೀಲರ ಮೂಲಕ ನೋಟೀಸನ್ನು ಜಾರಿ ಮಾಡುತ್ತಾರೆ. ಅವರು ಏನು ಹೇಳುತ್ತಾರೆ? ಡಿವೈಎಸ್‌ಪಿ ಸತ್ಯ ಹರಿಶ್ಚಂದ್ರ, ಸತ್ಯಹರಿಶ್ಚಂದ್ರನನ್ನು ಬಿಟ್ಟರೆ ಡಿವೈಎಸ್‌ಪಿ ಅವರೇ ಸತ್ಯ ಹರಿಶ್ಚಂದ್ರ. ತಾವು ಜೀವನದಲ್ಲಿ ಹಣ ಮುಟ್ಟಿಲ್ಲ, ಲಂಚ ಪಡೆದಿಲ್ಲ, ಬಹಳ ಪ್ರಾಮಾಣಿಕ. ಅತ್ಯಂತ ಪ್ರಾಮಾಣಿಕ. ನಮ್ಮ ಕಕ್ಷಿದಾರ ಅತ್ಯಂತ ಪ್ರಾಮಾಣಿಕ, ಅತ್ಯಂತ ಪ್ರಾಮಾಣಿಕನ ಮೇಲೆ ಶಾಸಕರು ಈ ರೀತಿ ಹೇಳಬಹುದೇ? ಒಂದು ಲಕ್ಷ ರೂಪಾಯಿ ಲಂಚವನ್ನು ಕ್ಲಬ್‌ಗಳಲ್ಲಿ ಪ್ರತಿದಿನ ತೆಗೆದುಕೊಳ್ಳುತ್ತಾರೆ. ಇವೆಲ್ಲಾ ಹೇಳಬಹುದೇ? ಎಲ್ಲಾದರೂ ಉಂಟೇ? ಒಬ್ಬ ಹರಿಶ್ಚಂದ್ರನ ಮೇಲೆ, ಅದೂ ಬಹಳ ಸತ್ಯ ಹರಿಶ್ಚಂದ್ರ! ಅವನ ಮೇಲೆ ಎಲ್ಲಾದರೂ ಹೇಳಬಹುದಾ? ಇದು ಸರಿಯಾದುದು ಅಲ್ಲ. ಅವರ ವಕೀಲರು ಹೇಳತಕ್ಕದ್ದು ಸರಿಯಾದುದು ಅಲ್ಲ. ಜೊತೆಗೆ ಅವರಿಗೆ ಮಾನಸಿಕವಾಗಿ ನೋವಾಗಿದೆ ಎಂದು ಹೇಳುತ್ತಾರೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಹರಿಶ್ಚಂದ್ರ ಎಂದು ಹೇಳಿ ಪದೇ ಪದೇ ಹರಿಶ್ಚಂದ್ರನ ಬಗ್ಗೆ ಹೇಳುವುದು ಅಷ್ಟು ಸೂಕ್ತವಲ್ಲ. ಏಕೆಂದರೆ ಹರಿಶ್ಚಂದ್ರ ಮೊದಲು ಸುಳ್ಳನ್ನೇ ಹೇಳಿದ್ದ. ಅವನು ಸತ್ಯ ಹರಿಶ್ಚಂದ್ರ ಅಲ್ಲ. ಏಕೆಂದರೆ ಮಹಾಭಾರತದ ಪುರಾಣದಲ್ಲಿ ಹರಿಶ್ಚಂದ್ರ ತಾನು ಪುತ್ರಕಾಮೇಷ್ಠಿ ಯಜ್ಞವನ್ನು ಮಾಡಿ ಮಗನನ್ನು ಪಡೆದ. ಆಗ ಆಗ್ನಿ ದೇವರು ನಿನ್ನ ಮಗ ಪ್ರಾಪ್ತ ವಯಸ್ಸಿಗೆ ಬಂದ ತಕ್ಷಣವೇ ನೀನು ಆತನನ್ನು ಬಲಿ ಕೊಡಬೇಕು; ಹವಿಸ್ಸಿಗೆ ಅರ್ಪಿಸಬೇಕು ಎಂದು ಹೇಳಿದರು. ಹರಿಶ್ಚಂದ್ರನಿಗೆ ಪುತ್ರ ವ್ಯಾಮೋಹ ಬೆಳೆದಿದ್ದರಿಂದ ಮಗನನ್ನು ಕೊಡದೇ ಪುನಶೇಪ ಎಂಬ ಒಬ್ಬ ಬಡ ಬ್ರಾಹ್ಮಣನ ಮಗನನ್ನು ಆಗ್ನಿಗೆ ಹವಿಸು ಕೊಡುತ್ತಾನೆ. ಆದ್ದರಿಂದ ಹರಿಶ್ಚಂದ್ರ ಸತ್ಯ ಹೇಳಿದವನು ಅಲ್ಲ. ಮೊದಲೇ ಸುಳ್ಳು ಹೇಳಿದವನು. ಆದ್ದರಿಂದ ತಾವು ಅದನ್ನು ಹೇಳಬಾರದು ಎಂದು ಅಷ್ಟೇ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳುತ್ತಿರುವುದು ಬರೇ ಹರಿಶ್ಚಂದ್ರನ ವಿಷಯ ಅಲ್ಲ. ಸತ್ಯ ಹರಿಶ್ಚಂದ್ರನ ವಿಷಯವನ್ನು ಹೇಳುತ್ತಿದ್ದೇನೆ. ಯಾವಾಗ ಸತ್ಯ ಹರಿಶ್ಚಂದ್ರ ಆಗುತ್ತಾನೆ. ಕೊನೆಯವರೆಗೂ ಎಷ್ಟೇ ಕಷ್ಟವನ್ನು ವಿಶ್ವಾಮಿತ್ರ ಕೊಟ್ಟಾಗಲೂ, ಎಷ್ಟೇ ತೊಂದರೆ ಕೊಟ್ಟಾಗಲೂ ಎಲ್ಲಿಗೆ ಹೋಗುತ್ತಾನೆ ಸತ್ಯ ಹರಿಶ್ಚಂದ್ರ? ತನ್ನ ಧರ್ಮ ಪತ್ನಿಯನ್ನೇ ಹರಾಜಿಗೆ ಇಡುತ್ತಾನೆ. ಅದಕ್ಕೇ ಸತ್ಯ ಹರಿಶ್ಚಂದ್ರ ಎಂದು ಹೇಳುವುದು. ಸತ್ಯ ಹರಿಶ್ಚಂದ್ರ ಎಂದು ಹೇಳತಕ್ಕದ್ದು ತಮಗೆ ನಾನು ಅತ್ಯಂತ ಕಳಕಳಿಯಿಂದ ಹೇಳುತ್ತಿದ್ದೇನೆ. ತನ್ನ ಧರ್ಮ ಪತ್ನಿಯನ್ನೇ ಬಹಿರಂಗವಾಗಿ ಹರಾಜಿಗೆ ಇಟ್ಟಂತಹ ಇತಿಹಾಸ ಇದೆ. ಅದು ಸತ್ಯ ಹರಿಶ್ಚಂದ್ರನ ಕಥೆ. ಅದಕ್ಕೇ ಸತ್ಯ ಹರಿಶ್ಚಂದ್ರ ಎಂದು ಬರುತ್ತದೆ. ಇಲ್ಲದಿದ್ದರೆ ಬರೇ ಹರಿಶ್ಚಂದ್ರನಾಗಿ ಉಳಿಯುತ್ತಿದ್ದ. ಇಲ್ಲಿ ಆ ಸತ್ಯಹರಿಶ್ಚಂದ್ರವನ್ನು ಡಿವೈಎಸ್‌ಪಿ ತಾನು ಹೋಲಿಕೆ ಮಾಡಿಕೊಂಡು, ಅಧ್ಯಕ್ಷರೇ 25 ಲಕ್ಷ ರೂಪಾಯಿಗಳನ್ನು ಕೇಳುತ್ತಾನೆ.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳುತ್ತಿರುವುದು ಬರೇ ಹರಿಶ್ಚಂದ್ರನ ವಿಷಯ ಅಲ್ಲ. ಸತ್ಯ ಹರಿಶ್ಚಂದ್ರನ ವಿಷಯವನ್ನು ಹೇಳುತ್ತಿದ್ದೇನೆ. ಯಾವಾಗ ಸತ್ಯ ಹರಿಶ್ಚಂದ್ರ ಆಗುತ್ತಾನೆ. ಕೊನೆಯವರೆಗೂ ಎಷ್ಟೇ ಕಷ್ಟವನ್ನು ವಿಶ್ವಾಮಿತ್ರ ಕೊಟ್ಟಾಗಲೂ, ಎಷ್ಟೇ ತೊಂದರೆ ಕೊಟ್ಟಾಗಲೂ ಎಲ್ಲಿಗೆ ಹೋಗುತ್ತಾನೆ ಸತ್ಯ ಹರಿಶ್ಚಂದ್ರ? ತನ್ನ ಧರ್ಮ ಪತ್ನಿಯನ್ನೇ ಹರಾಜಿಗೆ ಇಡುತ್ತಾನೆ. ಅದಕ್ಕೇ ಸತ್ಯ ಹರಿಶ್ಚಂದ್ರ ಎಂದು ಹೇಳುವುದು. ಸತ್ಯ ಹರಿಶ್ಚಂದ್ರ ಎಂದು ಹೇಳತಕ್ಕದ್ದು ತಮಗೆ ನಾನು ಅತ್ಯಂತ ಕಳಕಳಿಯಿಂದ ಹೇಳುತ್ತಿದ್ದೇನೆ. ತನ್ನ ಧರ್ಮ ಪತ್ನಿಯನ್ನೇ ಬಹಿರಂಗವಾಗಿ ಹರಾಜಿಗೆ ಇಟ್ಟಂತಹ ಇತಿಹಾಸ ಇದೆ. ಅದು ಸತ್ಯ ಹರಿಶ್ಚಂದ್ರನ ಕಥೆ. ಅದಕ್ಕೇ ಸತ್ಯ ಹರಿಶ್ಚಂದ್ರ ಎಂದು ಬರುತ್ತದೆ. ಇಲ್ಲದಿದ್ದರೆ ಬರೇ ಹರಿಶ್ಚಂದ್ರನಾಗಿ ಉಳಿಯುತ್ತಿದ್ದ. ಇಲ್ಲಿ ಆ ಸತ್ಯಹರಿಶ್ಚಂದ್ರನನ್ನು ಡಿವೈಎಸ್‌ಪಿ ತಾನು ಹೋಲಿಕೆ ಮಾಡಿಕೊಂಡು, ಅಧ್ಯಕ್ಷರೇ, 25 ಲಕ್ಷ ರೂಪಾಯಿಗಳನ್ನು ಕೇಳುತ್ತಾನೆ. ಅಂದರೆ

25 ಲಕ್ಷ ರೂಪಾಯಿಗಳನ್ನು ಕೊಟ್ಟುಬಿಟ್ಟರೆ ಅವನ ಮಾನ ಮರ್ಯಾದೆ ಹೋಗಿರುವುದೆಲ್ಲಾ ಬರುತ್ತದೆ. 25 ಲಕ್ಷ ರೂಪಾಯಿಗಳನ್ನು ಕೊಟ್ಟು ಬಿಟ್ಟರೆ ಅವನ ಮಾನ, ಮರ್ಯಾದೆ ಹೋಗಿರತಕ್ಕದ್ದು ಬರುವುದು ಮತ್ತು ಅವನು ತಿಂಗಳಿಗೆ ಒಂದು ಲಕ್ಷ ರೂಪಾಯಿ ವಸೂಲು ಮಾಡುವುದು ಕ್ಲಬ್‌ಗಳಲ್ಲಿ, ಇವೆಲ್ಲಾ ಹೋಗುತ್ತದೆ. 25 ಲಕ್ಷ ರೂಪಾಯಿಗಳನ್ನು ಕೊಟ್ಟರೆ, ಅಂದರೆ 25 ಲಕ್ಷ ರೂಪಾಯಿಗಳಿಗೆ ಮಾತ್ರ ಅವನ ಮಾನ, ಮರ್ಯಾದೆ. ಅವನ ರೇಟು ಎಷ್ಟಪ್ಪಾ ಎಂದರೆ, ಅವನ ಮಾನ, ಮರ್ಯಾದೆ, ರೇಟು ಎಷ್ಟಪ್ಪಾ ಎಂದರೆ 25 ಲಕ್ಷ ರೂಪಾಯಿ. ಮತ್ತು ಅವನ ಲಾಯರ್‌ಗೆ ಒಂದು ಸಾವಿರ ರೂಪಾಯಿ, ಇಷ್ಟು ಕೊಟ್ಟರೆ ಮಾನ, ಮರ್ಯಾದೆಯಲ್ಲಾ ಉಳಿಯಿತು. 25 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಮಾನ, ಮರ್ಯಾದೆ ಉಳಿಯುತ್ತದೆ. ಅಂದರೆ ನನಗೆ ಅನಿಸುತ್ತದೆ. ಮೊದಲನೆಯದಾಗಿ ಈ ಅಧಿಕಾರಿಯ ಬಗ್ಗೆ ಸಮಗ್ರವಾಗಿ ತನಿಖೆ ಆಗಲೇಬೇಕು. ಅಲ್ಲಿಯವರೆಗೆ ಈ ಅಧಿಕಾರಿಯನ್ನು ಈ ಕೂಡಲೇ ಅಮಾನತ್ತಿನಲ್ಲಿಡಬೇಕು. ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕಾದ ಕೆಲಸ, ಆ ಅಧಿಕಾರಿಯನ್ನು ತತ್‌ಕ್ಷಣ ಅಮಾನತ್ತಿನಲ್ಲಿಟ್ಟು ಸಮಗ್ರವಾದಂತಹ ತನಿಖೆ ಮಾಡಬೇಕು. ಈಗ ಮೊದಲು ಆಗಬೇಕಾದ ಕೆಲಸ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಈ ಕೆಲಸ ತುರ್ತಾಗಿ, ತತ್‌ಕ್ಷಣದಿಂದ ಅಧಿಕಾರಿಯನ್ನು ಅಮಾನತ್ತಿನಲ್ಲಿಟ್ಟಿದ್ದೇನೆ, ಮುಂದೆ ಅದರ ಬಗ್ಗೆ ತನಿಖೆ ಆಗಲಿ ಎನ್ನತಕ್ಕದ್ದು ಒಂದು. ನಮಗೆ ಅನಿಸುತ್ತದೆ. ಶಾಸಕರುಗಳ ಬಗ್ಗೆ ರಕ್ಷಣೆ ಕೊಡಬೇಕು. ಅನೇಕ ಕಡೆ ಹಿಂದೆ ಇತ್ತು. ಇದರ ಬಗ್ಗೆ ಸದನದಲ್ಲಿ ತೀರ್ಮಾನ ಆಗಬೇಕು. ಯಾರನ್ನೇ ಬಂಧನ ಮಾಡಬೇಕಾದರೆ ಅಧ್ಯಕ್ಷರ ಅನುಮತಿ ಪಡೆಯಬೇಕಾಗಿತ್ತು. ಮತ್ತು ಯಾರನ್ನೇ ಬಂಧನ ಮಾಡಿದ ಮೇಲೆ ಅಧ್ಯಕ್ಷರಿಗೆ ಇಂಥಿಂಥ ಒಂದು ಕಲಂನಲ್ಲಿ ಬಂಧನ ಮಾಡಿದ್ದೇವೆ ಎಂದು ಹೇಳಬೇಕಾಗಿತ್ತು. ಮತ್ತು ಯಾರನ್ನೇ ಬಂಧನ ಮಾಡಿದರೂ ಈ ಸದನದಲ್ಲಿ ಬಂಧನವಾದಂತಹ ಶಾಸಕರು ಇಂತಹ ಕಡೆ, ಇಂತಹ ಸೆಕ್ಷನ್‌ನಲ್ಲಿ ಬಂಧನವಾಗಿದ್ದಾರೆ ಎಂದು ಹೇಳತಕ್ಕದ್ದು ಪದ್ಧತಿ ಇದೆ. ನಾನು ಸುಮಾರು 1967ರಿಂದ ಬಂಧನಗೊಂಡಿದ್ದೇನೆ. ಸಾವಿರಾರು ಬಾರಿ ನನಗೆ ಬಂಧನವಾಗಿದೆ. ಇದೇ ಸದನದಲ್ಲಿ ನನ್ನ ಹೆಸರು ಅನೇಕ ಬಾರಿ ವ್ಯಾಖ್ಯಾನ ಆಗಿದೆ; ನನ್ನ ಹೆಸರು ಬಂದಿರತಕ್ಕದ್ದು ಇದೆ. ನಾವು ಅನೇಕ ಹೋರಾಟ ಮಾಡಬೇಕಾಗುತ್ತದೆ, ಚಳುವಳಿ ಮಾಡಬೇಕಾಗುತ್ತದೆ. ರಸ್ತೆಯಲ್ಲಿ ಬರಬೇಕಾಗುತ್ತದೆ. ನಮ್ಮ ಭಾಷಣ ಯಾವ ರೀತಿ ಇರಬೇಕು ಎಂದು ಹೇಳಿ ಪೊಲೀಸರು ನಮಗೆ ಬರೆದುಕೊಡಬೇಕಾಗಿಲ್ಲ. ಪೊಲೀಸ್‌ನವರು ಹೇಳಿದ ಹಾಗೆ ನಾವು ಹೇಳುವುದಕ್ಕೆ ಆಗುವುದಿಲ್ಲ. ನಮ್ಮ ಭಾಷಣ ತೀಕ್ಷ್ಣವಾಗಿರಬಹುದು. ಅನೇಕ ಸಾರಿ ಬೇರೆ ಬೇರೆ ದಿಕ್ಕನ್ನು ತಲುಪಿರಬಹುದು. ಆದರೆ ಇದನ್ನು ತಪ್ಪು ಎಂದು ಹೇಳಿ ಒಬ್ಬ ಅಧಿಕಾರಿ ನಮ್ಮ ಸಾರ್ವಜನಿಕ ಜೀವನದಲ್ಲಿ ನಮ್ಮ ಭಾಷಣವನ್ನು ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮ ಮಾತನ್ನು ತಡೆಹಿಡಿಯತಕ್ಕಂಥ ಶಕ್ತಿ ಅವರಿಗೆ ಇಲ್ಲ ಆ ದೃಷ್ಟಿಯಿಂದ ನಮಗೆ ನಾನು ಹೇಳುತ್ತಿದ್ದೇನೆ. ಇಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್

ಅವರ ಒಂದೇ ಒಂದು ಮಾತು ಸಾಕು. ಸರ್ಕಲ್ ಇನ್ಸ್‌ಪೆಕ್ಟರ್ ಅವರು ಹೇಳಿರತಕ್ಕ ಒಂದೇ ಒಂದು ವಾಕ್ಯದಿಂದ ಆ ಡಿವೈಎಸ್‌ಪಿ ಅವರನ್ನು ಸಂಪೂರ್ಣವಾಗಿ ಈ ಕ್ಷಣದಿಂದ ಅಮಾನತ್ತು ಮಾಡತಕ್ಕದ್ದು ಸರ್ಕಾರದ ಕರ್ತವ್ಯ. ಇದರ ಜೊತೆಗೆ ಮಾನ್ಯ ರಮೇಶ್ ಕುಮಾರ್ ಅವರ ಬಗ್ಗೆ ನಮ್ಮ ಮಾನ್ಯ ಮಾಧುಸ್ವಾಮಿ ಅವರು ಮಾತನಾಡಿದರು ಇದಕ್ಕೂ ಅದಕ್ಕೂ ತಾಳೆ ಮಾಡುವುದು ಬೇಡ. ಅದಕ್ಕಾಗಿ ಬೇರೆ ದಿವಸ ಸಮಗ್ರವಾಗಿ ಅದರ ಬಗ್ಗೆ ಚರ್ಚೆ ಆಗಲೇಬೇಕು. ನಿಮ್ಮ ಶ್ರೀ ರಮೇಶ್ ಕುಮಾರ್‌ರವರನ್ನು ಉದ್ದೇಶಿಸಿ, ವಿಚಾರ ಸಮಗ್ರವಾಗಿ ತನಿಖೆ ಆಗಬೇಕು. ಒಂದು ಪಿತೂರಿ ಆಗಿದೆ. ಕೊಲೆ ಆಪಾದನೆಯಲ್ಲಿ ಒಬ್ಬ ಗೌರವಾನ್ವಿತ ವ್ಯಕ್ತಿಯನ್ನು ಅದೇ ಕ್ಷೇತ್ರದಲ್ಲಿ ಸೇರಿಸಬೇಕಾದರೆ ಇದರ ಹಿಂದೆ ಒಂದು ದೊಡ್ಡ ಪಿತೂರಿ ನಡೆದಿದೆ. ಯಾವ ರೀತಿ ಪಿತೂರಿ ಆಯಿತು? ಹೇಗೆ ಆಯಿತು? ಯಾರು ಮಾಡಿದ್ದಾರೆ ಎನ್ನತಕ್ಕದ್ದನ್ನು ಸಮಗ್ರವಾಗಿ ಈ ಸದನದಲ್ಲಿ ಹೇಳಬೇಕಾಗುತ್ತದೆ. ಈ ಸದನದಲ್ಲಿ ಅದು ಚರ್ಚೆ ಆಗಲೇಬೇಕು ಎಂದು ಹೇಳುತ್ತೇನೆ. ಸವಿಸ್ತಾರವಾಗಿ, ಸಮಗ್ರವಾಗಿ ಚರ್ಚೆ ಆಗಬೇಕು. ಯಾವಾಗ ಅವರು ಕೇಸು ಹಾಕಿದರು? ಯಾವಾಗ ಇವರು ಅದರಲ್ಲಿ ಸೇರಿದ್ದರು? ಈ ಕೊಲೆ ಆಪಾದನೆಯಲ್ಲಿ ಇವರನ್ನು ಸೇರಿಸಿದ ಉದ್ದೇಶ ಏನು? ಯಾವ ಕಾರಣಕ್ಕೋಸ್ಕರವಾಗಿ? ಏನೂ ಇಲ್ಲದೇ ನೇರವಾಗಿ ನ್ಯಾಯಾಲಯ ತತ್‌ಕ್ಷಣ ಅವರು ನ್ಯಾಯಾಲಯಕ್ಕೆ ಬರಬೇಕು ಎಂದು ಹೇಳತಕ್ಕದ್ದು...

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಪ್ರಚಾರಕ್ಕೆ ಯಾವಾಗ ಬರುವುದು ಎಂದರೆ ನಾನು ಕಾಂಗ್ರೆಸ್ ಪಕ್ಷಕ್ಕೆ ಸೇರಿದೆ. ಚುನಾವಣೆಗೆ ಅಲ್ಲಿಂದ ಸ್ಪರ್ಧಿಸಬೇಕು ಎಂದು ಹೇಳಿ ಕಾಂಗ್ರೆಸ್ ಪಕ್ಷದ ಟಿಕೇಟ್ ಗೆ ಆಕಾಂಕ್ಷಿ ಆಗಿದ್ದೆ. ಆ ಟಿಕೇಟ್ ಹಂಚಿಕೆ ವೇಳೆಗೆ ಪೇಪರ್‌ನಲ್ಲಿ, ಟಿವಿಯಲ್ಲಿ ಪ್ರಚಾರ ಬರುತ್ತದೆ. ನಾನು ಕೊಲೆ ಆಪಾದನೆಯಲ್ಲಿ ಸಂಬಂಧ ಇದ್ದೇನೆ ಎಂದು ಬರುತ್ತದೆ. ಆಮೇಲೆ ಹೋಗಿ ಬಿಡುತ್ತದೆ. ಪುನ: ಈ ಮಂತ್ರಿಮಂಡಲದ ವಿಸ್ತರಣೆ ಬಂತಲ್ಲಾ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದೆ. ನನಗೂ ಅದಕ್ಕೂ ಸಂಬಂಧ ಇಲ್ಲ, ನನಗೆ ಆಗಿ ಬರುವುದಿಲ್ಲ. ನಾನು ಹೊರಗೇ ಇರುತ್ತೇನೆಂದರೂ ಸಹ ಯಾರಿಗೋ ಅನುಮಾನ. ಮತ್ತೆ ಆ ಟೈಮಿಗೇ ಬರುತ್ತದೆ. ಇದು ಸಮಯ ನೋಡಿ ಆ ಆಪಾದನೆ ಪ್ರಚಾರಕ್ಕೆ ಬರುತ್ತದೆ. ಬೇರೆ ಟೈಮಿನಲ್ಲಿ ಆ ಪ್ರಚಾರ ಇರುವುದಿಲ್ಲ. ಅದರ ಬಗ್ಗೆ ಒಂದು ದಿವಸ ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಸಮಗ್ರವಾಗಿ ಅದರ ಬಗ್ಗೆ ಚರ್ಚೆ ಆಗಬೇಕಾಗತ್ತದೆ. ತಮಗೆ ಹೇಳಿಯೇ ಚರ್ಚೆ ಮಾಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇನ್ನೊಂದು ಮೋಷನ್ ತರಿಸಿ.

ಶ್ರೀ ವಾಟಾಳ್ ನಾಗರಾಜ್ : ಬೇರೆ ಸಂದರ್ಭ ಉಪಯೋಗಿಸಿಕೊಂಡು ತಾವು ಅವಕಾಶ ಕೊಡಬೇಕಾಗುತ್ತದೆ. ಸಮಗ್ರ ಚರ್ಚೆ ಆಗಲಿ. ಈಗ ನಾನು

ಅಂತಿಮವಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಈಗ ನಿಜಕ್ಕೂ ಈ ಸದನದಲ್ಲಿ ಒಬ್ಬ ಸದಸ್ಯರಿಗೆ ಆಗಿರತಕ್ಕ ಅತ್ಯಂತ ಅಗೌರವ ಮತ್ತು ನೋವು ಆಗಿರುವುದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಮ್ಮ ಮೂಲಕ ತರುತ್ತೇನೆ. ತತ್‌ಕ್ಷಣ ಅವರು ಕೊಡುವ ಉತ್ತರದಲ್ಲಿ ಆ ಡಿವೈಎಸ್‌ಪಿ ಅವರನ್ನು ಅಮಾನತ್ತು ಮಾಡಿದ್ದೇವೆ ಎನ್ನತಕ್ಕ ಮಾತನ್ನು ಅವರು ಹೇಳಬೇಕು ಎಂದು ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ದತ್ತ ಪೀಠದ ವಿಚಾರದಲ್ಲಿ ನನಗೂ ಬಿಜೆಪಿಯವರಿಗೂ ಮೂಲಭೂತವಾದಂತಹ ವ್ಯತ್ಯಾಸ ಇದೆ. ಆದರೆ ಆ ವಿಚಾರ ಬೇರೆ. ಒಬ್ಬ ಶಾಸಕರಿಗೆ ಪೊಲೀಸ್ ಆಫೀಸರ್ ಅವರು ಅವರ ಜೊತೆ ವರ್ತನೆ ಮಾಡಿರತಕ್ಕಂಥ ವಿಚಾರದಲ್ಲಿ ಯಾರೂ ಒಪ್ಪಲಿಕ್ಕೆ ಸಾಧ್ಯವಿಲ್ಲ. ಮತ್ತೇ ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಹೋರಾಟ ಮಾಡತಕ್ಕಂಥ ಪ್ರತಿ ಸಂದರ್ಭದಲ್ಲೂ ಸೆಕ್ಷನ್ 143, 144, 150 ಹಾಕುತ್ತಾರೆ. ಅದನ್ನು ಹಾಕಿದಾಗ, ಹಾಕಿದ್ದಾರೆ ಎಂದು ಹೇಳಿ ನಾವ್ಯಾರೂ ನಮ್ಮ ಹಕ್ಕುಗಳನ್ನು ಚಲಾವಣೆ ಮಾಡದೇ ಇರಲಿಕ್ಕೆ ಸಾಧ್ಯ ಇಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನದತ್ತವಾಗಿ ಕೊಟ್ಟಿರತಕ್ಕಂಥ ಹಕ್ಕು ಪ್ರತಿಭಟನೆ ಮಾಡತಕ್ಕಂಥ ಹಕ್ಕು. ಆ ಪ್ರತಿಭಟನೆ ಹಕ್ಕನ್ನು ಮೊಟಕುಗೊಳಿಸತಕ್ಕಂಥ ಅಧಿಕಾರವನ್ನು ದಯವಿಟ್ಟು ಪೊಲೀಸ್ ಅಧಿಕಾರಿಗಳಿಗೆ ವರ್ಗಾಯಿಸಬೇಡಿ. ಅದೇ ಈ ರಾಜ್ಯದಲ್ಲಿ ಆಗಿರತಕ್ಕಂಥದ್ದು. ಬಹಳ ಪ್ರಮುಖವಾಗಿ ಆಗಿರತಕ್ಕದ್ದು ಏನೆಂದರೆ ಸಂವಿಧಾನ ದತ್ತವಾದಂತಹ ಹಕ್ಕನ್ನು ನಿರಾಕರಣೆ ಮಾಡಲಿಕ್ಕೆ ಪೊಲೀಸ್‌ನವರನ್ನು ಉಪಯೋಗಿಸತಕ್ಕದ್ದು ಏನು ಇದೆ ಇದೊಂದು ದುರಂತ. ಕಾರ್ಮಿಕರು ಹೋರಾಟ ಮಾಡಿದರೂ ಪೊಲೀಸ್‌ನವರು ಮಧ್ಯೆ ಪ್ರವೇಶ ಮಾಡುತ್ತಾರೆ. ಜನ ಹೋರಾಟ ಮಾಡಿದರೂ ಪೊಲೀಸ್‌ನವರು ಮಧ್ಯೆ ಪ್ರವೇಶ ಮಾಡುತ್ತಾರೆ. ಶಾಸಕರು ಹೋರಾಟ ಮಾಡಿದರೂ ಪೋಲೀಸ್‌ನವರು ಮಧ್ಯ ಪರವೇಶ ಮಾಡುತ್ತಾರೆ. ಪೊಲೀಸ್‌ನವರು ಇರತಕ್ಕದ್ದು ಕಾನೂನನ್ನು ಏನಾದರೂ ನಾವು ನಮ್ಮ ಕೈಗೆ ತೆಗೆದುಕೊಂಡರೆ, ನಮ್ಮ ಮೇಲೆ ಬೇಕಾದರೆ ಕ್ರಮ ತೆಗೆದುಕೊಳ್ಳಲಿ. ಆದರೆ ಕಾನೂನು ಬದ್ಧವಾಗಿ ಹೋರಾಟ ಮಾಡತಕ್ಕಂಥ ಸಂದರ್ಭದಲ್ಲಿ ಪೊಲೀಸ್‌ನವರು ಮಧ್ಯೆ ಪ್ರವೇಶ ಮಾಡಲಿಕ್ಕೆ ಅವಕಾಶ ಮಾಡಿಕೊಡತಕ್ಕದ್ದು ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನು ನಿಯಂತ್ರಣ ಮಾಡತಕ್ಕಂಥ ಪೊಲೀಸ್‌ನವರಿಗೆ ಕೊಟ್ಟಿರತಕ್ಕಂಥಹದ್ದು ಇದೊಂದು ದುರಂತ. ಇವತ್ತು ಪರಿಸ್ಥಿತಿ ಹೇಗಿದೆ ಎಂದರೆ ಪ್ರಧಾನ ಮಂತ್ರಿ, ರಾಷ್ಟ್ರಪತಿ ಅವರೂ ಸಹ ಒಬ್ಬ ಮನುಷ್ಯನನ್ನು ಅರೆಸ್ಟ್ ಮಾಡುವ ಹಕ್ಕು ಇಲ್ಲ. ಆದರೆ ಈ ದೇಶದಲ್ಲಿ ಒಬ್ಬ ಆರ್ಡಿನರಿ ಪೊಲೀಸಿನವರಿಗೆ ಆ ಅಧಿಕಾರ ಇದೆ. ಬೇಕಾದರೆ, ಅವರು ಪ್ರಧಾನಮಂತ್ರಿಯವರನ್ನೂ ಕೂಡ ಪೊಲೀಸ್ ಠಾಣೆಗೆ ಕರೆದುಕೊಂಡು

ಹೋಗಬಹುದು. ಮತ್ತು ರಾಷ್ಟ್ರಪತಿಯವರನ್ನೂ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗುವಂತಹ ಕಾನೂನು ಏನಿದೆ, ಇದು ಪ್ರಜಾಪ್ರಭುತ್ವಕ್ಕೆ ಸಂಪೂರ್ಣ ವ್ಯತಿರಿಕ್ತವಾಗಿದೆ. ಈ ವ್ಯವಸ್ಥೆಯನ್ನು ಅಳಿಸಿ ಹಾಕದಿದ್ದರೆ ಇಂತಹ ಘಟನೆಗಳೆಲ್ಲವೂ ಜರುಗುತ್ತಲೇ ಇರುತ್ತವೆ. ಡಿವೈಎಸ್‌ಪಿಯವರು ಈ ವಿಚಾರದಲ್ಲಿ ಮಧ್ಯೆ ಪ್ರವೇಶಿಸಲು ಅವರಿಗಿದು ಸಂಬಂಧವೇ ಇಲ್ಲ. ಅಲ್ಲಿರುವ ಸರ್ಕಲ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ ಅವರ ಜವಾಬ್ದಾರಿಯನ್ನು ಡಿವೈಎಸ್‌ಪಿಯವರು ನಿರ್ವಹಿಸುವ ಅವಶ್ಯಕತೆಯಿಲ್ಲ. ಆದರೂ ಈ ಪ್ರಕರಣದಲ್ಲಿ ಡಿವೈಎಸ್‌ಪಿಯವರು ಮಧ್ಯೆ ಪ್ರವೇಶಿಸಿದ್ದಾರೆಂದರೆ, ಇದರ ಹಿಂದೆ ಏನೋ ಒಂದು ಭಾರಿ ಉದ್ದೇಶವಿದೆ ಎನ್ನುವುದು ಸ್ಪಷ್ಟವಾಗುತ್ತದೆ. ನಿಜವಾಗಿಯೂ ಆತನಿಗೆ ಏನಾದರೂ ಮಾನನಷ್ಟವಾಗಿದ್ದರೆ, ಸಿವಿಲ್ ಪ್ರೊಸೀಜರ್ ಕೋಡ್ ಆ್ಯಕ್ಟ್ ಪ್ರಕಾರ ಕೋರ್ಟಿನಲ್ಲಿ ಮಾನನಷ್ಟ ಮೊಕದ್ದಮೆ ಹೂಡಬಹುದಿತ್ತು. ಈ ರೀತಿ ಮಾಡದೆ, ಆತ ಹಣ ಕೇಳಿದ್ದಾನೆಂದರೆ, ಅದರರ್ಥ ಬೇರೆ ರೀತಿಯದಾಗುತ್ತದೆ. ಮಾನನಷ್ಟ ಮೊಕದ್ದಮೆ ಹೂಡುವಲ್ಲಿ ಎರಡು ವಿಧಾನಗಳಿವೆ. ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಮಾನನಷ್ಟ ಮೊಕದ್ದಮೆ ಹೂಡಬಹುದು. ಮತ್ತೊಂದು, ಸಿವಿಲ್ ಪ್ರೊಸೀಜರ್ ಕೋಡ್ ರೀತ್ಯ ಮಾನನಷ್ಟ ಮೊಕದ್ದಮೆ ಹೂಡಬಹುದು. ಈ ಪ್ರಕರಣದಲ್ಲಿ ಆತನಿಗೆ ನಿಜವಾಗಿಯೂ ಮಾನನಷ್ಟವಾಗಿದ್ದರೆ, ತನ್ನ ಮಾನದ ಬಗ್ಗೆ ಆತನಿಗೆ ಮರ್ಯಾದೆ ಇದ್ದಿದ್ದರೆ, ಸಿವಿಲ್ ಪ್ರೊಸೀಜರ್ ಕೋಡ್ ರೀತ್ಯ ಮಾನನಷ್ಟ ಮೊಕದ್ದಮೆ ಹೂಡಬಹುದಿತ್ತು. ಇದು ಬಿಟ್ಟು ಹಣ ಕೇಳಿದ್ದಾನೆಂದರೆ, ಹಣಕ್ಕೋಸ್ಕರ ತನ್ನ ಮಾನ-ಮರ್ಯಾದೆಯನ್ನೂ ಹರಾಜಿಗಿಟ್ಟಿರುವಂತಹ ಒಬ್ಬ ಮನುಷ್ಯ ಜನಪ್ರತಿನಿಧಿಯಾಗಿರುವ ಶಾಸಕರನ್ನು ಆ ರೀತಿ ನಡೆಸಿಕೊಳ್ಳಲು ಕಾನೂನು ರೀತ್ಯ ಅವಕಾಶವಿರುವುದಿಲ್ಲ. ಆದುದರಿಂದ, ಈ ಪ್ರಕರಣದಲ್ಲಿ ತಕ್ಷಣ ಆತನ ಮೇಲೆ ಕ್ರಮ ಕೈಗೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಷಯ ತರಬಯಸುವುದೇನೆಂದರೆ, ಈ ಘಟನೆ ಜರುಗಿದ ದಿವಸವೇ ಅವರನ್ನು ಬಂಧಿಸಿ, ಎಳೆದುಕೊಂಡು ಹೋಗಿ ಲಾಕಪ್‌ನಲ್ಲಿ ಇಟ್ಟಿದ್ದಾರೆಂದು ಗೊತ್ತಾದ ಕೆಲವೇ ನಿಮಿಷಗಳಲ್ಲಿ ನಾನು ಮುಖ್ಯಮಂತ್ರಿಯವರನ್ನು ಸಂಪರ್ಕಿಸಿದೆ. ಮಾನ್ಯ ಮುಖ್ಯಮಂತ್ರಿಯವರು ತಕ್ಷಣವೇ ಪೊಲೀಸ್ ಠಾಣೆಯನ್ನು ಸಂಪರ್ಕಿಸಿದರು. ಇಷ್ಟಾದ ನಂತರವೂ ಅವರು ಜಾಮೀನು ಕೇಳಿದಾಗ, 'ನಾನೇನು ತಪ್ಪು ಮಾಡಿದ್ದೇನೆ? ನಾನು ಜಾಮೀನು ಕೊಡುವುದಿಲ್ಲ' ಎಂದೊಡನೆ ಅವರನ್ನು ತಮ್ಮ ಕಸ್ಟಡಿಗೆ ತೆಗೆದುಕೊಂಡರು. ಅದರ ಬಗ್ಗೆ ನಮಗೇನೂ ಚಿಂತೆ ಇಲ್ಲ. ಆದರೆ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ನಂತರವೂ, ಈ ಬಗ್ಗೆ ಒಂದು ಹೇಳಿಕೆ ನೀಡಿದರು ಎಂದು ಮಾರನೇ ದಿವಸ ಬೆಳಿಗ್ಗೆ ಇವೆಲ್ಲವನ್ನೂ ಕಾದು ನೋಡಿ, 'ನೀವು 25 ಲಕ್ಷ ರೂಪಾಯಿಗಳ ದಂಡ ಕೊಡಬೇಕು' ಎಂದು ನೋಟೀಸ್

ಕೊಡುತ್ತಾ, 'ನನ್ನ ಮರ್ಯಾದೆ ಹೋಗಿದೆ, ನನಗೆ ಮಾನಸಿಕ ಹಿಂಸೆಯುಂಟಾಗಿದೆ, ನಾನು ಕೋರ್ಟಿಗೆ ತೆರಳಿ ನಿಮ್ಮ ಮೇಲೆ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ' ಎಂದು ಹೇಳುವ ಮೂಲಕ ಒಂದು ಸಲ ಇಂತಹ ಪ್ರವೃತ್ತಿ ಪ್ರಾರಂಭವಾದರೆ, ನನಗೆ ನೆನಪಿರುವಂತೆ ಕಳೆದ 56–57 ವರ್ಷಗಳಲ್ಲಿ ಈ ರಾಜ್ಯದಲ್ಲಿ ಶಾಸಕರುಗಳ ಮೇಲೆ ಈ ರೀತಿಯಾಗಿ ನೋಟೀಸ್ ಕೊಟ್ಟು '25 ಲಕ್ಷ ರೂಪಾಯಿಗಳನ್ನು ಕೊಡು, ಇಲ್ಲದಿದ್ದರೆ, ಮಾನನಷ್ಟ ಮೊಕದ್ದಮೆ ಹೂಡುತ್ತೇನೆ' ಎಂದು ಕೇಳಿರುವುದು, ನನಗೆ ಗೊತ್ತಿರುವ ಪ್ರಕಾರ ಇದು ಮೊದಲನೆಯದಾಗಿದೆ. ನಮಗೆ ಖಾಕಿ ಬಟ್ಟೆ ಬಗ್ಗೆ ಒಂದು ಗೌರವವಿರಬೇಕಾಗುತ್ತದೆ. ಅವರು ನಮ್ಮ ರಕ್ಷಕರು ಎನ್ನುವ ಭಾವನೆ ಇದೆ. ಈ ಭಾವನೆಯನ್ನು ಒಮ್ಮೆ ಕಳೆದುಕೊಂಡರೆ, ಪೊಲೀಸ್ ಠಾಣೆಗಳಲ್ಲಿ ನಾವು ವಿವಿಧ ರೀತಿಯ ಅಪಮಾನಗಳನ್ನು ಅನುಭವಿಸಿದ್ದೇವೆ. ವಾಟಾಳ್ ನಾಗರಾಜ್‌ರವರೆ, ನೀವೂ ಸಹ ಎಂತೆಂತಹ ಹೋರಾಟಗಳನ್ನು ನಡೆಸಿ, ಎಂತೆಂತಹ ಅಪಮಾನಗಳನ್ನು ಅನುಭವಿಸಿದ್ದೀರಲ್ಲವೇ? ಇವೊತ್ತು ಇಂತಹ ಪ್ರವೃತ್ತಿ ಬೆಳೆಯಲು ರಾಜ್ಯದ ಗೃಹಮಂತ್ರಿಯಾಗಿರುವ ಮಾನ್ಯ ಮುಖ್ಯಮಂತ್ರಿಯವರೇ ಅವಕಾಶ ಮಾಡಿಕೊಟ್ಟರೆ ಪರಿಣಾಮ ಏನಾಗಬಹುದು? ಅದಕ್ಕೋಸ್ಕರ, ನಮ್ಮ ಸ್ನೇಹಿತರೆಲ್ಲರೂ ಇದರ ಬಗ್ಗೆ ಮಾತನಾಡುವಾಗ ನಾವೆಲ್ಲರೂ ಬಹಳ ಶಾಂತ ರೀತಿಯಿಂದ, ಸಮಾಧಾನದಿಂದಿದ್ದೆವು. ನಾವೆಲ್ಲರೂ ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೇವೆ. ನಾನು ಇದರ ಬಗ್ಗೆ ಹೆಚ್ಚು ಮಾತನಾಡಬಾರದು. ಏಕೆಂದರೆ, ಮುಖ್ಯಮಂತ್ರಿಗಳು ಈ ವಿಷಯದಲ್ಲಿ ಇಂಟರ್‌ಫಿಯರ್ ಆಗಿದ್ದರೂ ಸಹ ಆತನ ಧೈರ್ಯ ಎಷ್ಟು? ಸೊಕ್ಕು ಎಷ್ಟು? ಧಿಮಾಕು ಎಷ್ಟು? ಈ ತರಹ ನೋಟೀಸ್ ಕೊಡುತ್ತಾರೆಂದರೆ, ಪೊಲೀಸ್ ಅಧಿಕಾರಿಗಳಿಗೆ ಏನಾದರೂ ಅನ್ನಿಸಬೇಕಲ್ಲಾ? ತಾವು ಉನ್ನತಾಧಿಕಾರಿಗಳನ್ನು ಕರೆಸುವ ಮೂಲಕ ಇಷ್ಟೊತ್ತಿಗೆ ಎಚ್ಚರಿಗೆ ನೀಡಿದ್ದರೆ. ನನಗೆ ಅರ್ಥವಾಗುತ್ತಿತ್ತು. ಇಷ್ಟರೊಳಗಾಗಿ ನೀವು ಆತನನ್ನು ಕರೆದು ಮಾತನಾಡಿ 'ಹೋಗಿ ಕ್ಷಮಾಪಣೆ ಕೇಳಿ ಬಾ' ಎಂದೋ ಇಲ್ಲವೇ 'ವಿತ್‌ಡ್ರಾ ಮಾಡಿಕೊಳ್ಳಿ' ಎಂದಾದರೂ ಉನ್ನತಾಧಿಕಾರಿಗಳಿಗೆ ಸೂಚಿಸುವ ಮೂಲಕ ಅವರಿಗೆ ಹೇಳಿಸಬಹುದಿತ್ತಲ್ಲವೇ? ಈ ಪ್ರಕರಣದಲ್ಲಿ ಏನೂ ಮಾಡದೆ ಈ ಸಧನದಲ್ಲಿ ಚರ್ಚೆಯಾಗುವವರೆಗೂ ಸುಮ್ಮನೆ ಇದ್ದೀರಿ. ನಾನು ಮಾನ್ಯ ಮುಖ್ಯಮಂತ್ರಿಗಳ ಮನೆಗೆ ಹೋಗಿದ್ದೇನೆ. 'ನಿಮ್ಮಲ್ಲಿಗೆ ರಕ್ಷಣೆ ಕೇಳಿ ನಾನು ಬಂದಿಲ್ಲ. ನಿಮ್ಮ ಕಾಲದಲ್ಲಿ ಈ ರೀತಿಯ ಅಪಮಾನಕರ ಘಟನೆ ಜರುಗಬಾರದು. ಪೊಲೀಸ್ ಅಧಿಕಾರಿಗಳ ವರ್ತನೆ ಕುರಿತಂತೆ ನಿಮ್ಮ ಗಮನಕ್ಕೆ ತರಲು ಬಂದಿದ್ದೇನೆ' ಎಂದು ಹೇಳಿ ವಾಪಸ್ಸು ಬಂದಿದ್ದೇನೆ. ಆದುದರಿಂದ, ದಯವಿಟ್ಟು ಆತನನ್ನು ಅಮಾನತುಗೊಳಿಸಿ, ತನಿಖೆಗೊಳಪಡಿಸಬೇಕೆಂದು ಒತ್ತಾಯಿಸುತ್ತೇನೆ. ಇಲ್ಲದಿದ್ದರೆ, ಈ ಪ್ರಕರಣ ಹಕ್ಕುಬಾಧ್ಯತಾ ಸಮಿತಿ ಮುಂದೆ ಬರುತ್ತದೆ, ಸಮಿತಿಯವರು ಈ ಕುರಿತಂತೆ ಸೂಕ್ತ ಕ್ರಮ ಕೈಗೊಳ್ಳುತ್ತಾರೆ.

ಶ್ರೀ ಆರ್. ರಾಜೇಂದ್ರನ್ (ಕೆ.ಜಿ.ಎಫ್) : ಸನ್ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಈ ವಿಷಯ ಕುರಿತಂತೆ ಶಾಸಕ ಮಿತ್ರರೆಲ್ಲರೂ ಸಾಕಷ್ಟು ಮಾತನಾಡಿದ್ದಾರೆ. It is a shame. ಒಬ್ಬ ಶಾಸಕರನ್ನು ಜೈಲಿಗೆ ಹಾಕುವ ಮೂಲಕ ಅವರಿಗೆ ಅಪಮಾನವೆಸಗಿದ್ದಾರೆ. ಆದರೆ, ಡಿವೈಎಸ್‌ಪಿಗೆ ಇದರಿಂದ ಯಾವುದೇ ಅಪಮಾನವಾಗಿಲ್ಲ. ಅವರ (ಶಾಸಕರು) ಮುಖ ಗಮನಿಸಿದರೆ ಅವರು 25 ಲಕ್ಷ ರೂಪಾಯಿಗಳನ್ನು ಕೊಡುವ ತರಹ ಕಾಣುತ್ತಾರೆಯೇ? ಇಲ್ಲವೇ, ಡಿವೈಎಸ್‌ಪಿ ಅವರನ್ನು ಅಟ್ಯಾಕ್ ಮಾಡುವ ತರಹ ಕಾಣುತ್ತಾರೆಯೇ? ಪೊಲೀಸರು ಡ್ರೆಸ್ ಹಾಕಿಕೊಂಡ ಬಳಿಕ ಅವರಿಗೆ ಒಂದು ಗೌರವ ಇರುತ್ತದೆ. ಅವರು ಕೇಸ್‌ಗಳನ್ನು ಹೇಗೆ ಬರೆದಿದ್ದಾರೆಂದರೆ ಸೆಕ್ಷನ್ 128, 143, 144 ಮತ್ತು ಸೆಕ್ಷನ್ ಹೀಗಾದರೆ ಇವರೆಲ್ಲರೂ ಮೆಡಿಕಲ್ ಲ್ಯಾಬ್‌ನಲ್ಲಿರಬೇಕು! ಒಬ್ಬನನ್ನು ಕರೆದುಕೊಂಡು ಹೋಗಿ ಚೆಕ್ ಮಾಡಿ ಎಂದರೆ 'Sugar, Mucus, Urine' ಎಂದು ಬರೆಯುತ್ತಾರೆ! ಅವರು ಒಂದು ಪಟ್ಟಿ ಮಾಡಿಕೊಂಡಿದ್ದಾರೆ. ಇವರನ್ನು ಏಕೇ ಕೇಳಿದರೂ ತಕ್ಷಣ 'ಇವರು ನಮ್ಮನ್ನು ಹೊಡೆಯುವುದಕ್ಕೆ ಬಂದರು' 'ನಮ್ಮ ಮೇಲೆ ಜೋರು ಮಾಡಿದರು' 'ಶರ್ಟ್ ಹಿಡಿದುಕೊಂಡರು' ಕಾಲರ್ ಹಿಡಿದುಕೊಂಡರು ಮುಂತಾಗಿ ಈ ರೀತಿ ಬರೆಯುವುದಕ್ಕೆಂದೇ ಒಬ್ಬ ಕ್ಲರ್ಕ್ ಇದ್ದಾನೆ. ಆತನಿಗೆ ಹೇಳಿದರೆ ಸಾಕು, ಯಾವ್ಯಾವ ರೀತಿಯ ಶಿಕ್ಷೆಗಳಿವೆಯೋ ಅವೆಲ್ಲವನ್ನೂ ಬರೆದುಕೊಡುತ್ತಾನೆ. ಇವರು ಅದಕ್ಕೆ ಸಹಿ ಮಾಡುತ್ತಾರೆ. ಇಂತಹ ಅಧಿಕಾರಿಗಳಿಗೆ, all IPS Officers are learned people. ಅವರಿಗೆ ಕೇಸ್ ಬರೆಯಲು ಗೊತ್ತಿಲ್ಲದಿದ್ದರೆ, even a dog will not respect. That is the only main problem. ಐಎಎಸ್ ಅಧಿಕಾರಿ ಕಡೆ ಇರುವ ಜನರು ಜೋರಾಗಿ ಮಾತನಾಡುತ್ತಾರೆ. ಅವರು ಬರೆಯುವುದೂ ಇಲ್ಲ. ಅರೆಸ್ಟ್ ಮಾಡುವುದೂ ಇಲ್ಲ. ಇದೊಂದು ಮಾತ್ರ ಇರುವುದರಿಂದಲೇ ಅವರು ಎಲ್ಲರನ್ನೂ ಬೈಯ್ಯುವುದು. ಅವರು ಹೇಳುವುದು ಹೇಗಿದೆಯೆಂದರೆ 'ನಾವು ಪ್ರಧಾನಮಂತ್ರಿಯವರನ್ನೂ ಅರೆಸ್ಟ್ ಮಾಡುತ್ತೇವೆ' 'ಊರಿನಲ್ಲಿರುವವರನ್ನೆಲ್ಲಾ ಅರೆಸ್ಟ್ ಮಾಡುತ್ತೇವೆ' 'ಸೆಂಟ್ರಲ್ ಗವರ್ನಮೆಂಟ್‌ನಲ್ಲಿರುವ ಮಿನಿಸ್ಟರ್ ಅನ್ನೂ ಸಹ ಅರೆಸ್ಟ್ ಮಾಡುತ್ತೇವೆ' ಎಂದು ಹೇಳುತ್ತಾರೆಂದರೆ, ಅದಕ್ಕೇ 'ನಾವು ಯಾರನ್ನೂ ಬಿಡುವುದಿಲ್ಲ'ವೆಂದು ನಕ್ಸಲೈಟ್ಸ್ ಹೇಳುವುದು! They are the right person. ಆದರೆ, ಇವರು ಏನು ಮಾಡುತ್ತಾರೆಂದರೆ, ನಾವು ಹೋಗಿ ಕೇಳಿದಾಗ, ನಮಗಿರುವ ಭಯವೇನೆಂದರೆ, ಎನ್‌ಕೌಂಟರ್ ಮಾಡಿಬಿಡುತ್ತಾರೆ! ಅವರಿಗೆ ನಾವೇನಾದರೂ oblige ಮಾಡಲಿಲ್ಲವೆಂದರೆ, ಎನ್‌ಕೌಂಟರ್ ಮಾಡಿ ಮುಗಿಸಿಬಿಡುತ್ತಾರೆ! 'ಆತ ನನ್ನನ್ನು ಕೊಲೆ ಮಾಡಲು ಬಂದಿದ್ದ. ಅದಕ್ಕೋಸ್ಕರ, ಎನ್‌ಕೌಂಟರ್ ಮಾಡಬೇಕಾಯಿತು' ಎಂದು ಒಂದು ಚಿಕ್ಕ ಚಾಕು ತೆಗೆದುಕೊಂಡು ಕೈಯನ್ನು ಕತ್ತರಿಸಿಕೊಂಡ ರೀತಿ ನಾಟಕವಾಡಿ, ಅದರ ಮೇಲೆ ದೊಡ್ಡದಾಗಿ ಪಟ್ಟಿ ಕಟ್ಟಿಕೊಳ್ಳುತ್ತಾನೆ. ಆ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತದೆ. ಆದರೆ, ಆತ ಕಟ್ಟಿಕೊಂಡಿರುವ ಪಟ್ಟಿಯನ್ನು ಬಿಚ್ಚಿದರೆ ಅಲ್ಲಿ ಗಾಯದ ಗುರುತೂ ಇರುವುದಿಲ್ಲ! ನಮ್ಮ ಊರಿನಲ್ಲಿ ಇದೇ ರೀತಿ ನಡೆದಿರುವುದು! ಇಲ್ಲಿ ಒಬ್ಬ ಎಂಎಲ್‌ಎಗೆ ರಕ್ಷಣೆ ಇಲ್ಲವೆಂದರೆ, ನಾಳೆ ದಿವಸ

ನಮ್ಮನ್ನೂ ಜೈಲಿಗೆ ಕಳುಹಿಸುತ್ತಾರೆ. ನಮ್ಮ ಊರಿನಲ್ಲಿ ಪೊಲೀಸ್ ಅಧಿಕಾರಿಗಳು ಏನು ಮಾಡುತ್ತಾರೆಂದರೆ, 'ಏಯ್, ಎತ್ತಿ ಒಳಗಡೆ ಹಾಕು' 'ಬಳ್ಳಾರಿಗೆ ಹಾಕು' ಎನ್ನುತ್ತಾರೆ! ಇದೇನು ತಮಾಷೆಯೇ? Is it the way of commanding a legislator? After all, he is holding one Police Department. We are attending all the departments. ಜನರಿಗೆ ಕುಡಿಯುವ ನೀರಿನ ಸೌಲಭ್ಯ ಸಿಗಲಿಲ್ಲವೆಂದರೆ ನಾವು ನೀರು ಸರಬರಾಜು ಮಾಡುವ ಇಲಾಖೆಯನ್ನು ಸಂಪರ್ಕಿಸಬೇಕು. ಆದರೆ, ಪೊಲೀಸ್ ಅಧಿಕಾರಿಗಳಾದವರು ಕಾನೂನನ್ನು ಈ ರೀತಿ ಜಾಲಿಯಾಗಿ ನಿರ್ವಹಿಸುತ್ತಾರೆ! ಅದನ್ನು ಬಿಟ್ಟು ಅವರು ಬೇರೆ ಇನ್ನೇನು ಮಾಡುತ್ತಾರೆ? ಅವರಿಂದ ಜನರಿಗೆ ರೇಷನ್ ಕಾರ್ಡ್ ಒದಗಿಸಿಕೊಡುವುದಕ್ಕಾಗುತ್ತದೆಯೇ? ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿಕೊಡುವುದಕ್ಕಾಗುತ್ತದೆಯೇ? ನಾವು ಯಾವುದೋ ಒಂದು ವಿಚಾರವಾಗಿ ಪೊಲೀಸ್ ಠಾಣೆಗೆ ಹೋದೆವೆಂದು ಇಟ್ಟುಕೊಳ್ಳಿ. ಅಲ್ಲಿರುವ ಪೊಲೀಸ್ ಆಫೀಸರ್ ಏನು ಹೇಳುತ್ತಾನೋ ಅದನ್ನು ಕೇಳಿಕೊಂಡು 'ನೀವೆಲ್ಲರೂ ಹೊರಗಡೆ ಹೋಗಿ. ಇಲ್ಲದಿದ್ದರೆ, ಲಾಠಿಚಾರ್ಜ್ ಮಾಡುತ್ತೇವೆ' ಎಂದು ಹೇಳಿದ ತಕ್ಷಣ ನಾವು ಹೊರಬಂದು ಬಿಡಬೇಕು. ಎಲ್ಲರಿಗೂ ಇಪ್ಪತ್ತು ಕಿಲೋ ಅಕ್ಕಿ ಒದಗಿಸಿಕೊಡಿರೆಂದರೆ ಅವರು ತರಿಸಿಕೊಡುವುದಕ್ಕಾಗುತ್ತದೆಯೇ? ಲಾ ಅಂಡ್ ಆರ್ಡರ್ ಮೇನ್‌ಟೇನ್ ಮಾಡಬೇಕು. ಲಾ ಅಂಡ್ ಆರ್ಡರ್ ಮೇನ್‌ಟೇನ್ ಮಾಡುತ್ತೇನೆಂದು ಸುಮ್ಮನೆ ಬಾಯಲ್ಲಿ ಹೇಳಿಕೊಂಡು, ಸ್ಟೈಲ್ ಮಾಡಿಕೊಂಡು ಹೋಗಬಾರದು. ಈಗ ಎರಡು ಕೈಗಳಿವೆ. ನಮಸ್ಕಾರ ಹೇಳಬೇಕೆಂದು ಕಾನೂನು ಇದೆ. ಒಂದು ಕೈ ಮೇಲೆತ್ತುವ ಮೂಲಕ ನಮಸ್ಕಾರವೆಂದು ಹೇಳಬಹುದು. ಅದರಲ್ಲಿ ತಪ್ಪೇನೂ ಇಲ್ಲ. ಆದರೆ, ಯಾವ್ಯಾವುದನ್ನು ಯಾವ್ಯಾವ ರೀತಿ ಮಾಡಬೇಕೆಂಬ ಬಗ್ಗೆ ರೀತಿ–ನೀತಿಗಳಿವೆ. ಈಗ ಹಸ್ತಲಾಘವ (shake hand) ಮಾಡಬೇಕೆಂದರೆ, ಎರಡೂ ಕೈಗಳನ್ನೂ ಮುಂದೆ ತಂದು shake hand ಮಾಡಬಹುದು. ಒಂದು ಕೈಯಲ್ಲೂ shake hand ಮಾಡಬಹುದು. ತಪ್ಪೇನೂ ಇಲ್ಲ. ಆದರೆ, ಎಲ್ಲಿ ತಪ್ಪಾಗುತ್ತದೆಂದರೆ, ಸೆಲ್ಯೂಟ್ ಹೊಡೆಯುವ ಸಮಯದಲ್ಲಿ ಒಂದು ಕೈ ಎತ್ತಿ ಸೆಲ್ಯೂಟ್ ಹೊಡೆಯುವ ಬದಲು ಎರಡೂ ಕೈಗಳನ್ನೂ ಮೇಲೆತ್ತಿ ಸೆಲ್ಯೂಟ್ ಹೊಡೆದರೆ ಅದು ಅಸಹ್ಯವೆನಿಸುತ್ತದೆ! That is the law. ಅಲ್ಲವೇ? 'ಎರಡು ಕೈಗಳಿವೆ, ಆದುದರಿಂದ, ನಾನು ಹೀಗೇ ಮಾಡುವುದು. ಅದೇ ರೀತಿ ಸೆಲ್ಯೂಟ್ ಹೊಡೆಯಬೇಕಾದಾಗಲೂ ಎರಡೂ ಕೈಗಳನ್ನೂ ಮೇಲೆತ್ತಿ ಹೊಡೆಯುತ್ತೇನೆ'ಂದರೆ ಹೇಸಿಗೆಯಾಗುತ್ತದೆ! ಪೊಲೀಸ್ ಡಿಪಾರ್ಟ್‌ಮೆಂಟ್ ಮಾಡುವುದೂ ಅದೇ. 'ನನ್ನದೇನೂ ತಪ್ಪಿಲ್ಲದೆ, ಎರಡೂ ಕೈಗಳಿಂದ ಸೆಲ್ಯೂಟ್ ಮಾಡಿದರೂ ಕೂಡ ಅದನ್ನು ಪಾಪವೆಂದು ಹೇಳುವುದಕ್ಕಾಗುತ್ತದೆಯೇ?' ಎಂದು ಅವರು ಹೇಳುತ್ತಾರೆ! ನನ್ನ ಮತಕ್ಷೇತ್ರದ ಊರಿನಲ್ಲಿ ನನಗೆ ಭಯವಾಗಿರುವುದೇನೆಂದರೆ, 'ಯಾವುದೇ ತರಹದ ಸಿವಿಲ್ ಕೇಸ್ ನನ್ನ ಮೇಲಿಲ್ಲ. ನನಗೆ

ಭಯವಾಗಿರುವುದೇನೆಂದರೆ, ಯಾವುದಾದರೊಂದು ಕೇಸ್ ದಾಖಲಿಸಿ ನನ್ನನ್ನು ಜೈಲಿಗೆ ಹಾಕಬೇಕೆಂದು ಕಾಯುತ್ತಿರುತ್ತಾರೆ! ಯಾವುದಾದರೊಂದು ಕೇಸ್ ಹಾಕಿ ಜೈಲಿಗೆ ಕಳುಹಿಸಬೇಕು ಎಂದು They are eagerly waiting what for? ಎನ್‌ಕ್ವೈರಿ ಮಾಡಬೇಕು. Before they write. ಶಾಸಕರುಗಳನ್ನು ಬಂಧಿಸುವ ಮುನ್ನ ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತಂದು ಅವರ ಅನುಮತಿ ಪಡೆದುಕೊಳ್ಳಬೇಕಾಗುತ್ತದೆ. ಆದರೆ, ಇವರು ಶಾಸಕರುಗಳನ್ನು ಬಂಧಿಸುವ ಮುನ್ನ ಸಭಾಧ್ಯಕ್ಷರ ಅನುಮತಿ ಕೇಳುತ್ತಾರೆಯೇ? ಬದಲಾಗಿ ಅವರನ್ನು ಬಂಧಿಸುವ ಮೂಲಕ ಜೈಲಿಗೆ ತಳ್ಳಿ, ಹೊಡೆದು ಬಳಿಕ, 'ಸ್ವಾಮಿ, ಆತ ತಪ್ಪು ಮಾಡಿಲ್ಲ' ಎಂದು ಹೇಳುತ್ತಾರೆ! ಮತ್ತು ಅವರು ಮಂತ್ರಿಗಳ ಬಳಿಗೆ ಹೋಗಿ 'ಸರ್, ಅವರು ಸುಳ್ಳು ಹೇಳುತ್ತಾರೆ. ನನ್ನನ್ನು ಬೈಯ್ಯುತ್ತಾರೆ' ಎಂದೆಲ್ಲಾ ಹೇಳುತ್ತಾರೆ. ಆದರೆ, ಪೊಲೀಸ್ ಠಾಣೆಯಲ್ಲಿ ಈತ ಬಂಧಿತರನ್ನು ಬೈಯ್ಯುವುದಿಲ್ಲವೇ? ಹೆಣ್ಣು ಮಕ್ಕಳನ್ನು ಬೈಯ್ಯುವುದಿಲ್ಲವೇ? Therefore I don't want to talk about the Police Department. But it is a shame on the part of a Legislator, who was fighting for his right. They have all the rights. We can fight anywhere. ಹತ್ತು ಜನರು ಬರುತ್ತಾರೆ, 'ಸ್ವಾಮಿ, ನಮಗೆ ಈ ತರಹ ಅನ್ಯಾಯವಾಗಿದೆ, ಕುಳಿತುಕೊಂಡು ಧರಣಿ ಮಾಡುತ್ತೇವೆ' ಎಂದರೆ, 'ಏಯ್, ಪಬ್ಲಿಕ್‌ಗೆ ನೀವು ತೊಂದರೆ ಕೊಡುತ್ತಿದ್ದೀರಿ' ಎಂದು ಹೇಳುತ್ತಾರೆ. ಆದರೆ, ಪಬ್ಲಿಕ್‌ಗೆ ನಿಜವಾಗಿಯೂ ತೊಂದರೆ ಕೊಡುವವನು ಈತನೇ ಆಗಿದ್ದಾನೆ. ಉದಾಹರಣೆಗೆ, ಕ್ಲಬ್‌ಗಳನ್ನು ರಾತ್ರಿ 10.30 ಗಂಟೆ ನಂತರ ಮುಚ್ಚಬೇಕೆಂದು ಕಾನೂನಿದ್ದರೂ, ಮಧ್ಯರಾತ್ರಿ 12.30 ಗಂಟೆ ತನಕವೂ ಕ್ಲಬ್ ಕಾರ್ಯನಿರ್ವಹಿಸಲು ಅನುವು ಮಾಡಿಕೊಡುತ್ತಾನೆ! ಶಾಸಕರು ಈ ಬಗ್ಗೆ ದೂರು ನೀಡಿದರೂ ಕೇಳುವುದಿಲ್ಲ. ಕ್ಲಬ್‌ನವರು ಈತನಿಗೆ ಹಣ ನೀಡಿಲ್ಲವೆಂದರೆ, ಕ್ಲಬ್ ಅನ್ನು ರಾತ್ರಿ 10.00 ಗಂಟೆಗೆ ಮುಚ್ಚುವಂತೆ ತಗಾದೆ ಶುರು ಮಾಡುತ್ತಾನೆ. 'ನಿಮ್ಮ ಕ್ಷೇತ್ರದಲ್ಲಿ ಕಳ್ಳಬಟ್ಟಿ ಸಾರಾಯಿ ತಯಾರಿಸಿ ಮಾರಾಟ ಮಾಡಲಾಗುತ್ತಿದೆಯೇ?' ಎಂದು ಒಂದು ಪ್ರಶ್ನೆ ಕೇಳಿ ನೋಡಿ. 'ಆ ತರಹ ನಮ್ಮ ಕ್ಷೇತ್ರದಲ್ಲಿ ನಡೆದೇ ಇಲ್ಲ'ವೆಂದು ಸಹಿ ಹಾಕಿಕೊಡುತ್ತಾರೆ! ಅವರಿಗೆ ಹಣ ಕೊಟ್ಟಿಲ್ಲವೆಂದರೆ, ಬಂಧಿಸಿ ಕರೆದುಕೊಂಡು ಬಂದು, ಹೊಡೆದು, ಆತನ ಮೇಲೆ ಕೇಸ್ ದಾಖಲಿಸುತ್ತಾರೆ. These are all the barricades. Therefore the Honble Chief Minister who is holding the Home Minister's post, must take into task; He should not spare. ಅವರು ಡಿವೈಎಸ್‌ಪಿ ಆಗಿರಲಿ, ಎಸ್‌ಪಿ ಆಗಿರಲಿ ನಾವು ಗೌರವ ನೀಡುತ್ತೇವೆ. ನಾವು ಪೊಲೀಸ್ ಅಧಿಕಾರಿಗಳಾದ ಯಾರನ್ನೂ ಕೂಡ 'ಏಯ್, ಡಿವೈಎಸ್‌ಪಿ ಬಾ ಇಲ್ಲಿ' ಎಂದು ಕರೆಯುವುದಿಲ್ಲ. ಆದರೆ, ನಮ್ಮೆದುರಿಗೆ ಅವರು ಸಿಕ್ಕಾಗ ನಾವು 'ನಮಸ್ಕಾರ' ಎಂದು ಹೇಳಿದರೆ, ಅವರು 'ಓಹ್' ಎಂದು ಹೇಳುತ್ತಾರೆ! ಅವರದ್ದು ಅದೇನು ಸ್ಟೈಲು. ನಾವೆಲ್ಲರೂ

ಗೂಬೆಗಳೇ? ಎಂಎಲ್‌ಎಗಳಾದವರು ಓದಿಲ್ಲವೇ? ನಾವೇನೂ ಕಡಿಮೆ ಇಲ್ಲ. ಆ ದಿವಸ ಅವರು ಆ ಡಿಪಾರ್ಟ್‌ಮೆಂಟ್‌ಗೆ ಹೋದರು ಆದರೆ ನಾವು ಈ ಡಿಪಾರ್ಟ್‌ಮೆಂಟ್ ಬಂದೆವು. ಆದರೆ ನಾವು ಅವರ ಹಿಂದೆ ಹೋಗಲು ನಡೆದುಕೊಂಡು ಹೋಗಬೇಕು, ಏನೋ ಚಿಂತನೆಯನ್ನು, ದೇವರನ್ನು ತಲೆಯ ಮೇಲೆ ಇಟ್ಟುಕೊಂಡು ಹೋಗುವ ರೀತಿ ಹೋಗಬೇಕು. ಸಾರ್, ಸಾರ್ They are waiting for an opportunity. That should not. In your regime, we have high regards for you. Our Honble Chief Minister, as told by the Hon'ble Member Sri Ramesh Kumar, he is a top man. You can command the police department. Transfer ಸಮಯದಲ್ಲಿ ಒಂದು ನೋಡಿ. ನಿಮಗೆ ಟ್ರಾನ್ಸ್‌ಫರ್ ಆಗುತ್ತದೆ ಎಂದಾಗ ಮಾತ್ರ ಇವರು ನಮಗೆ ಬೆಂಡ್ ಆಗುವುದು, ಅಲ್ಲಿಯವರೆಗೆ ಆಗುವುದೇ ಇಲ್ಲ. ಟ್ರಾನ್ಸ್‌ಫರ್ ಮಾಡಿಕೊಟ್ಟ ಬೆಳಿಗ್ಗೆಯೇ ಎದೆಯನ್ನು ಸೆಟೆದು ನಿಂತುಕೊಳ್ಳುತ್ತಾರೆ, ಒಂದೊಂದು ದಿವಸ ಟ್ರಾನ್ಸ್‌ಫರ್ ಮಾಡಿ ಇವರನ್ನು ಆಗ ಗೊತ್ತಾಗುತ್ತದೆ, ಇವರಿಗೆ ಎರಡು ವರ್ಷ ಆದ ಮೇಲೆ ನನ್ನ ಮುಟ್ಟುವುದು ಎಂದು ತಿಳಿದು ಕೊಂಡಿದ್ದಾರೆ. ಆದ್ದರಿಂದ Any moment, they should be suspended and thrown them out. ಅಂತ ಸ್ಥಿತಿ ಬಂದರೆ, ಇವರು ರೌಡಿಗಳಿಗೆ ಸಾಯಿಸಿಬಿಡು ನಾನು ನೋಡಿಕೊಳ್ಳುತ್ತೇನೆಂದು ಹೇಳಿಕೊಡುತ್ತಾರೆ. That all should be monitored. For the social and economic development of the people, this is important. ನಾವು ಜೋರು ಮಾಡಿಬಿಟ್ಟರೆ, ಇವರೇ ಹೇಳಿಕೊಡುತ್ತಾರೆ, ಇದರ ಬಗ್ಗೆ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವಾಗ ವಿವರವಾಗಿ ಮಾತನಾಡೋಣ. ಸಧ್ಯಕ್ಕೆ What happened to my hon'ble friend, may happen to all the 225 MLA's. ನಾಳೆ ನಮಗೆ ಆಗಬಹುದು, Please put an end to it. Let my hon'ble Chief Minister may please pass an order. ನಮ್ಮ ಮಾನ್ಯ ವಾಟಾಳ್ ನಾಗರಾಜ್ ಸಾಹೇಬರು ಹೇಳಿದ ರೀತಿ ಒಂದು 24 ಲಕ್ಷ ರೂ. ಸರ್ಕಾರ ಏನಾದರೂ ವ್ಯವಸ್ಥೆ ಮಾಡಿ ಅವರ ಗೌರವವನ್ನು ಕಾಪಾಡಿ. ಬೇಕಾದರೆ ನಾವೆಲ್ಲಾ ಒಂದೊಂದು ದಿವಸದ ನಮ್ಮ ಸಂಬಳವನ್ನು ಕೊಡುತ್ತೇವೆ. ಇನ್ನೇನು ಮಾಡಲು ಆಗುತ್ತದೆ? ಅವರ ಮುಖವನ್ನು ನೋಡಿದರೆ ಕೊಡಲು ಆಗುತ್ತದೆಯೆ? ಇಲ್ಲ ಎಂದು ಹೇಳುತ್ತಾರೆ. ಸುನಾಮಿ ರೀತಿ ಏನಾದರೂ ಒಂದು ಡೊನೇಷನ್ ಮಾಡಿ. ಇಲ್ಲ ಎಂದರೆ ಬೇರೆ ಗತಿಯೇ ಇಲ್ಲ. ಪೊಲೀಸ್ ಇಲಾಖೆಯವರ ಮಾನವನ್ನು ಉಳಿಸಲು ಬೇಕಾದರೆ ನಾವು ದುಡ್ಡನ್ನು ಕೊಡುತ್ತೇವೆ. ಅದನ್ನು ವಾಪಸ್ ತೆಗೆದುಕೊಳ್ಳಲೇಬೇಕು ಎಂದು ಹೇಳಿ please pass an order immediaetely to suspend him or constitute a committee to conduct an enquiry whether it was true or false. I am thankful to you for giving me

this opportunity.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾಹಿತಿ ಕೊಡಲು ಅಪೇಕ್ಷೆ ಪಡುತ್ತೇನೆ. ನಾನು ಪಕ್ಕದ ಕ್ಷೇತ್ರದವನು. ಈ ಘಟನೆ ನಡೆದ ತಕ್ಷಣ ನಾನು ಮಾನ್ಯ ಜೀವರಾಜ್ ಅವರೊಡನೆ ಟೆಲಿಫೋನ್‌ನಲ್ಲಿ ಮಾತನಾಡಿದೆ, ಅವರು ನನ್ನನ್ನು ಕರೆದುಕೊಂಡು ಹೋಗಿ ಸೆಲ್‌ನಲ್ಲಿ ಹಾಕಿಬಿಟ್ಟಿದ್ದಾರೆ, ನನ್ನ ಪರಿಸ್ಥಿತಿ ಈ ರೀತಿ ಆಯಿತು ಎಂದು ಬಹಳ ಖೇದರಿಂದ ನನ್ನ ಜೊತೆ ಮಾತನಾಡಿದರು. ಅವರು ಸೆಲ್‌ನಲ್ಲಿ ಇದ್ದಾಗಲೇ ಅವರ ಸೆಲ್‌ಫೋನ್‌ಗೆ ಮಾತನಾಡಿದವನು ನಾನು. ತಕ್ಷಣ ನಾನು ಮಾನ್ಯ ಯಡಿಯೂರಪ್ಪನವರನ್ನು ಕಾಂಟಾಕ್ಟ್ ಮಾಡಿದೆ, ಮಾನ್ಯ ಯಡಿಯೂರಪ್ಪನವರು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿದರು, ನಾನು ಇಲ್ಲಿ ಕೊಡಬೇಕಾದ ಮಾಹಿತಿ ಏನೆಂದರೆ, ಈ ಘಟನೆ ನಡೆಯುತ್ತದೆ, ಹೋರಾಟ ನಡೆಯುತ್ತದೆ ಎಂಬ ಕಲ್ಪನೆಯೇ ಇಲ್ಲದಿದ್ದಾಗ ಹದಿನೈದು ದಿನಗಳ ಮೊದಲೇ ಮಾನ್ಯ ಮುಖ್ಯಮಂತ್ರಿಗಳನ್ನು ಕಾಣಲು ಮಾನ್ಯ ಜೀವರಾಜ್‌ರವರು ಇಲ್ಲಿಗೆ ಬಂದಿದ್ದಾರೆ. ನನ್ನ ಕ್ಷೇತ್ರದಲ್ಲಿ 12 ಕ್ಲಬ್‌ಗಳು ಓಪನ್ ಆಗಿವೆ, ಡಿ.ವೈ.ಎಸ್.ಪಿ. ಯವರ ನೇತ್ರತ್ವದಲ್ಲಿ ಇಸ್ಪೀಟ್ ಕ್ಲಬ್‌ಗಳ ಜುಗಾರಿ ನಡೆಯುತ್ತಿದೆ, ಊರೂರಿಗೆ ಹೋದಾಗ ಹೆಣ್ಣು ಮಕ್ಕಳು ನಮ್ಮ ಗಂಡಂದಿರು ಸಮಯಕ್ಕೆ ಸರಿಯಾಗಿ ಬರುವುದಿಲ್ಲ ಜೀವರಾಜ್‌ರವರೇ ನಿಮಗೆ ಓಟನ್ನು ಕೊಟ್ಟು ಗೆಲ್ಲಿಸಿದ ಮೇಲೆ ನಮ್ಮ ಮನೆ ಪರಿಸ್ಥಿತಿ ಹೀಗಾಯಿತು, ನಾವು ಹಾಳಾಗಿ ಹೋಗುತ್ತಿದ್ದೇವೆ, ದಯವಿಟ್ಟು ಆ ಕ್ಲಬ್‌ಗಳನ್ನು ಮುಚ್ಚಿಸುತ್ತಿರೋ ಅಥವಾ ಕ್ಲಬ್‌ಗಳಲ್ಲಿ ನಿಮಗೂ ಮಾಮೂಲಿ ಮಾಡಿಕೊಂಡಿದ್ದೀರೋ ಎಂದು ಕೇಳಿದರಂತೆ. ಅದನ್ನು ಮಾನ್ಯ ಜೀವರಾಜ್ ರವರು ನಮಗೆ ಹೇಳಿದರು. ಮಾನ್ಯ ಜೀವರಾಜ್‌ರವರು ಬೇಜಾರಾಗಿ ಇಲ್ಲಿಗೆ ಬಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸಿಕ್ಕಲಿಲ್ಲ, ಆದ್ದರಿಂದ ಮುಖ್ಯಮಂತ್ರಿಗಳ ವಿಶೇಷ ಅಧಿಕಾರಿಗಳಾದ ಶ್ರೀ ಸಿದ್ಧಯ್ಯ ನವರನ್ನು ಭೇಟಿ ಮಾಡಿದ್ದಾರೆ. ನೋಡಿ ನಮ್ಮ ಕ್ಷೇತ್ರದಲ್ಲಿ ಡಿ.ವೈ.ಎಸ್.ಪಿ. ಯವರ ನೇತೃತ್ವದಲ್ಲಿ ಈ ರೀತಿ ಆಗುತ್ತಿದೆ, ದಯವಿಟ್ಟು ಏನಾದರೂ ಮಾಡಬೇಕಲ್ಲಾ ಎಂದು ಅವರಲ್ಲಿ ಕೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ ತಮ್ಮನ್ನು ಭೇಟಿ ಮಾಡಲು ಬಂದ ಮಾನ್ಯ ಜೀವರಾಜ್‌ರವರು ಮಾನ್ಯ ಸಿದ್ಧಯ್ಯನವರ ಹತ್ತಿರ, ನಾನು ಮುಖ್ಯಮಂತ್ರಿಗಳ ಹತ್ತಿರ ಮಾತನಾಡಬೇಕಾಗಿದೆ, ಡಿ.ವೈ.ಎಸ್.ಪಿ. 12 ಕ್ಲಬ್‌ಗಳನ್ನು ಓಪನ್ ಮಾಡಿಸಿಕೊಂಡು ನನ್ನ ಕ್ಷೇತ್ರಕ್ಕೆ ಅವಮಾನ ಮಾಡಿದ್ದಾರೆಂದು ಹೇಳಲು ಬಂದಿದ್ದಾರೆ, ಈ ಘಟನೆ ನಡೆಯುತ್ತದೆ ಎಂಬ ಕಲ್ಪನೆ ಇಲ್ಲ. ಈ ಘಟನೆ ನಡೆಯುವುದಕ್ಕಿಂತ ಹದಿನೈದು ದಿವಸ ಮೊದಲು; ಮಾನ್ಯ ಸಿದ್ಧಯ್ಯನವರು ಈಗ ಮಂತ್ರಿಮಂಡಲ ರಚನೆಯಾಗುತ್ತಿದೆ, ಮಾನ್ಯ ಮುಖ್ಯಮಂತ್ರಿಯವರು ಬಿಸಿಯಾಗಿದ್ದಾರೆ. ಸ್ವಲ್ಪ ಫ್ರೀಯಾಗಿದ್ದಾಗ ಈ ಮಂತ್ರಿಮಂಡಲ ರಚನೆಯಾದ ತಕ್ಷಣ ಬನ್ನಿ, ಮಾತನಾಡೋಣ, ಅವರನ್ನು ಟ್ರಾನ್ಸ್‌ಫರ್ ಅಥವಾ ಇನ್ನಾವುದನ್ನೋ ಮಾಡಲು ತೊಂದರೆ ಇಲ್ಲ ಎಂದು

ಹೇಳಿಕಳುಹಿಸಿದ್ದಾರೆ. ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಬ್ರಹ್ಮದತ್‌ರವರನ್ನು ಭೇಟಿ ಮಾಡಿದ್ದಾರೆ, ಅವರೂ ಸಹ ಅವರ ಮೇಲೆ ಏನಾದರೂ ಮಾಡೋಣವೆಂದು ಸಮಾಧಾನ ಹೇಳಿ ಕಳುಹಿಸಿದ್ದಾರೆ. ನನ್ನ ಕ್ಷೇತ್ರದಲ್ಲಿ ಈ ರೀತಿ ನಡೆಯುತ್ತಿದೆ ಎಂದು ಚಿಕ್ಕಮಗಳೂರಿನ ಎಸ್.ಪಿ. ಯವರ ಹತ್ತಿರ ಮಾತನಾಡಿದ್ದಾರೆ, ಹದಿನೈದು ದಿವಸದ ಮೊದಲು ಇಷ್ಟು ಹೇಳಿ ಹೋಗಿದ್ದಾರೆ. ಸೇಡು ತೀರಿಸಿಕೊಳ್ಳುವುದಕ್ಕಾಗಿ, ಈ ರೀತಿ ನನ್ನ ಮಾಮೂಲಿಗೆ ಹಿರಿಯ ಅಧಿಕಾರಿಗಳ ಹತ್ತಿರ ಹೇಳಿ ಧಕ್ಕೆ ಮಾಡಿದ ಎಂದು. ಏಕೆಂದರೆ ಚಿಕ್ಕಮಗಳೂರಿನ ಎಸ್.ಪಿ. ತಕ್ಷಣ ಅವರಿಗೆ ಮಾತನಾಡಿದ್ದಾರೆ. ಒಬ್ಬ ಪೊಲೀಸ್ ಆಫೀಸರ್ ನಮ್ಮ ಮೇಲೆ ಈ ಸೇಡನ್ನು ತೀರಿಸಿಕೊಳ್ಳುವುದಾದರೆ, ನಾವು ಈ ಸದನದಲ್ಲಿ ಕುಳಿತುಕೊಂಡು ಕೆಲಸ ಮಾಡುವುದು ಹೇಗೆ? ನಮ್ಮ ಕ್ಷೇತ್ರಗಳಲ್ಲಿ ಶಾಂತಿ ಸುವ್ಯವಸ್ಥೆ, ಗೌರವ, ಜನರ ಮಾನ ಪ್ರಾಣವನ್ನು ರಕ್ಷಣೆ ಮಾಡುವುದರಲ್ಲಿ ನಾವು ಅವರಿಗೆ ಸಹಕಾರ ಕೊಡುವುದು ಯಾವ ರೀತಿ ಹೇಳಿ? ಅದೇ ಶೃಂಗೇರಿ ಕ್ಷೇತ್ರದಲ್ಲಿ ಬೇಕಾದಷ್ಟು ನಕ್ಸಲೀಯರು ರಕ್ಷಣೆಗೆ ಹೋದಂಥ ಇವರ ಕಾನ್‌ಸ್ಟೆಬಲ್‌ನ್ನು ಎಳೆದುಕೊಂಡು ಹೋದರು, ಅವರಿಗೆ ಈ ಡಿ.ವೈ.ಎಸ್.ಪಿ, ಏನು ಮಾಡಿದರು? ಅವರನ್ನು ಹಿಡಿದರೋ? ಅದನ್ನು ಮಾಡಬಹುದಿತ್ತಲ್ಲಾ? ಜೀವರಾಜ್‌ರವರ ಶರಟನ್ನು ಹಿಡಿದುಕೊಂಡು ಹೋಗಿ ಸೆಲ್‌ಗೆ ತಳ್ಳುವ ಬದಲು ಗನ್ ಹಿಡಿದುಕೊಂಡು ಬಂದು ಒಬ್ಬ ಪೊಲೀಸ್ ಕಾನ್‌ಸ್ಟೇಬಲ್‌ನ್ನು ಎಳೆದುಕೊಂಡು ಹೋದಂಥ ಸಂದರ್ಭದಲ್ಲಿ ನನ್ನ ಇಲಾಖೆಯು ಮರ್ಯಾದೆ ಹೋಗಿದೆಯೆಂದು ಸಿಟ್ಟು ಬರಬೇಕಿತ್ತಲ್ಲಾ? ಅವರ ಮೇಲೆ ಸೇಡು ತೀರಿಸಿಕೊಳ್ಳಬೇಕಾಗಿತ್ತಲ್ಲಾ? ಶೃಂಗೇರಿ ಕ್ಷೇತ್ರ ಮಾತ್ರವಲ್ಲ ಮಲೆನಾಡಿನ ಕಾಡುಗಳಲ್ಲಿ ಬಾಂಬುಗಳನ್ನು ಇಟ್ಟುಕೊಂಡಿದ್ದಾರಲ್ಲಾ? ಜೀವರಾಜ್ ಬರಿ ಮೈಕ್ ಹಿಡಿದುಕೊಂಡು ಮಾತನಾಡಿದ್ದು ಒಂದು ಅಪರಾಧವೆಂದು ಸೆಲ್ ಒಳಗೆ ತಳ್ಳುತ್ತಾರೆ, ನನ್ನ ಮತ್ತು ಜೀವರಾಜ್‌ರವರ ಕ್ಷೇತ್ರದಲ್ಲಿ ಕಾಡಿನಲ್ಲಿ ಬಾಂಬನ್ನು ಇಟ್ಟುಕೊಂಡು ಹಫ್ತಾ ವಸೂಲಿ ಮಾಡುತ್ತಿದ್ದಾರೆ, ಅವರ ಮೇಲೆ ಇವರು ಹೋಗಿ ಸೇಡನ್ನು ತೀರಿಸಕೊಳ್ಳಲು ಆಗಲಿಲ್ಲ. ಅಲ್ಲಿಯ ಜನರಿಗೆ ರಕ್ಷಣೆ ಕೊಡಲು ಆಗಲಿಲ್ಲ. ಇದಕ್ಕೆ ರಕ್ಷಣೆ ಕೊಡಬೇಕಾಗುತ್ತದೆ, ಮಾನ್ಯ ಮುಖ್ಯಮಂತ್ರಿಗಳೇ, ಇದು ಪಕ್ಷ ಮತ್ತು ರಾಜಕಾರಣದ ಪ್ರಶ್ನೆಯಲ್ಲ, ಇದು ಎಲ್ಲರ ಗೌರವದ ಪ್ರಶ್ನೆ, ಅಧಿಕಾರಿಗಳು ಈ ರೀತಿ ನಮ್ಮನ್ನು ನಿಯಂತ್ರಣ ಮಾಡುವುದಾದರೆ, ನಮ್ಮ ಕೆಲಸಕ್ಕೆ ಅಡ್ಡಿಯನ್ನುಂಟು ಮಾಡುವುದಾದರೆ ನಾವು ಇಲ್ಲಿ ಕೆಲಸ ಮಾಡಲು ಕಷ್ಟವಾಗುತ್ತದೆ, ಚುನಾಯಿತ ಪ್ರತಿನಿಧಿಗಳು ನಾವೆಲ್ಲರೂ ಇದ್ದೇವೆ, ದಯಮಾಡಿ ಇದನ್ನು ನಿಯಂತ್ರಣ ಮಾಡಬೇಕಾಗುತ್ತದೆ, ಒಳ್ಳೆಯ ಮೆಸೇಜ್ ಅಧಿಕಾರಿಗಳಿಗೆ ಹೋಗಬೇಕಾಗುತ್ತದೆ. ಎಲ್ಲಾ ಪೊಲೀಸ್ ಅಧಿಕಾರಿಗಳು ಕೆಟ್ಟವರೆಂದು ನಾನು ಹೇಳುವುದಿಲ್ಲ. ಯಾರು ದುಷ್ಟ, ಕೆಟ್ಟ ಅಧಿಕಾರಿಗಳು ಇದ್ದಾರೆ, ಮಾಮೂಲಿ ತೆಗೆದುಕೊಂಡು ಓಸಿಯಾಡಿಸಿಕೊಂಡು, ಓಸಿ ಪಾರ್ಟನರ್ ಹಾಕಿಕೊಂಡು ನಡೆಯುತ್ತಿದ್ದಾರೆ ಆ ಕ್ಷೇತ್ರದಲ್ಲಿ ನಾವು ಹೇಳುವಂತಿಲ್ಲ ಎಂದಾದರೆ

ನಾಳೆ ಅವರನ್ನು ಹಿಡಿದು ನಿಲ್ಲಿಸುವವರು ಇಲ್ಲದಂತಾಗುತ್ತದೆ. ದಯಮಾಡಿ ಇದನ್ನು ನಿಯಂತ್ರಣಕ್ಕೆ ತರಬೇಕು, ಅವರನ್ನು ಶಿಕ್ಷಿಸಬೇಕು, ಸಸ್ಪೆನ್‌ಷನ್ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಮುಖ್ಯಮಂತ್ರಿಗಳು, ಏಕೆಂದರೆ ಎಲ್ಲಾ ಮಾತನಾಡಿದ್ದಾರೆ, ಚರ್ಚೆ ಮುಂದುವರೆಸುವ ಅಗತ್ಯವಿಲ್ಲ. ಮಾನ್ಯ ಮುಖ್ಯಮಂತ್ರಿಗಳೇ ಮಾತನಾಡಿ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ಒಂದು ಡಿ.ವೈ.ಎಸ್.ಪಿ. ಯವರಿಂದ ಜೀವರಾಜ್‌ರವರ ಘಟನೆ ನಡೆದಿದೆ, ಇದು ದತ್ತಪೀಠದ ಮೇಲೆ ಆಗತಕ್ಕ ಘಟನೆ. ನಾನು ಅದರ ಬಗ್ಗೆ ವಿವರವಾಗಿ ಚರ್ಚೆ ಮಾಡಲು ಸಿದ್ಧನಿಲ್ಲ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪೊಲೀಸ್ ಇಲಾಖೆಯ ಬಗ್ಗೆ ಮಾತನಾಡುವಾಗ ಅವೆಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಇವತ್ತು ಎಲ್ಲರೂ ಇದಕ್ಕೆ ಸಹಿ ಹಾಕಿದ್ದೇವೆಂದು ಎಲ್ಲರೂ ತಮ್ಮತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಯಾರಿಗೂ ಶಾಸಕರ ಹಕ್ಕನ್ನು ಮೊಟಕು ಮಾಡುವುದಕ್ಕೆ ಅವಕಾಶ ಇಲ್ಲ. ಏಕೆಂದರೆ House is Supreme. ಆದರೂ ಘಟನೆ ಏಕಾಗಿದೆ ಎಂಬ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಯಾರ ಬಗ್ಗೆ ನಾವು ಮಾತನಾಡುತ್ತಿದ್ದೇವೆ ಅವನು ಇಲ್ಲಿ ಬಂದು ಎಕ್ಸ್‌ಪ್ಲನೇಷನ್ ಕೊಡತಕ್ಕದ್ದು ಇಲ್ಲ. ಸರಿಯಾದ ರೀತಿಯಲ್ಲಿ ಕಾನೂನಿನ ಪರಿಪಾಲನೆಯಾಗಬೇಕು ಎಂಬ ಆದೇಶವನ್ನು ಸರ್ಕಾರದ ವತಿಯಿಂದ ಕೊಡುತ್ತೇವೆ. ಅಷ್ಟೇ ದಕ್ಷತೆಯಿಂದ ನಮ್ಮ ಅಧಿಕಾರಿಗಳು ಅದನ್ನು ಪಾಲನೆ ಮಾಡಬೇಕು ಎಂದು ಮುಖ್ಯ ಮಂತ್ರಿಯ ಅಥವಾ ಗೃಹ ಮಂತ್ರಿಯ ಮತ್ತು ನಮ್ಮಗಳ ನಿರೀಕ್ಷೆ ಇರುತ್ತದೆ. ಇದು ಆಗಿರತಕ್ಕ ಘಟನೆ ಇದು ಆದಮೇಲೆ ಏನೂ ದೊಡ್ಡ ಮಹಾ ಅಪರಾಧವಾಗಿಲ್ಲ ಎನ್ನತಕ್ಕದ್ದು ಇದೆ. ಏಕೆಂದರೆ ಇಲ್ಲೇ ಕುಳಿತು ವಾದವಿವಾದ ನಡೆಯುತ್ತಿದೆ. ಮಾನ್ಯ ಸಿದ್ದಯ್ಯನವರು ಹೇಳಿದರು ಎಂದು ಹೇಳಿದರು. ಒಬ್ಬರು ಶಾಸಕರಿಗೆ ಒಂದಲ್ಲ ಐವತ್ತು ಸಲ ಬೇಕಾದರೂ ಭೇಟಿಯಾದವನು ನಾನು ಒಬ್ಬನೇ. ಎಲ್ಲರಿಗೂ ಮುಂಜಾನೆ ಆರು ಗಂಟೆಯಿಂದ ನಾನು ಭೇಟಿಯಾಗುತ್ತೇನೆ. ಅದರ ಬಗ್ಗೆ ಎರಡು ಮಾತಿಲ್ಲ. ಮಾನ್ಯ ಜೀವರಾಜ್‌ರವರೂ ಕೂಡ ಹೇಳಿದಾಗ ಅವರ ಜೊತೆ ನಾನು ಮಾತನಾಡಿದ್ದೇನೆ. ಮಾನ್ಯ ಯಡಿಯೂರಪ್ಪನವರು ಕೂಡ ಬಂದು ಹೇಳಿದ್ದಾರೆ. ಆಗಲೂ ಕೂಡ ಈ ವಿಚಾರದಲ್ಲಿ ಸಂಪರ್ಕ ಮಾಡಿ ಮಾತನಾಡಿದ್ದೇನೆ. ಯಾವಾಗಲೂ ಇಂಥ ಘಟನೆ, ಆದರಲ್ಲೂ ದತ್ತಿ ಪೀಠದಂಥ ಕಾರ್ಯಕ್ರಮ ವಿವಾದಾತ್ಮಕ ಸ್ಥಳದಲ್ಲಿ ನಡೆಯುವಂಥ ಸಂದರ್ಭದಲ್ಲಿ ಬಹಳ ಜಾಗ್ರತೆಯಿಂದ ಅಲ್ಲಿಗೆ ಯಾರು ಬಂದರು, ಯಾರು ಹೋದರು, ಅಲ್ಲಿ ಏನಾಗಿದೆ, ಎನ್ನತಕ್ಕಂಥದ್ದರ ಬಗ್ಗೆ ಸೂಕ್ತ ರೀತಿಯಲ್ಲಿ ಕ್ರಮ ತೆಗೆದುಕೊಂಡಿದ್ದೇವೆ. ಇವೊತ್ತು ಶಾಸಕರ ಮೇಲಾಗಲಿ, ಲೋಕಸಭಾ

ಸದಸ್ಯರ ಮೇಲಾಗಲಿ, ಒಟ್ಟಾರೆ ಜನಪ್ರತಿನಿಧಿಗಳ ಮೇಲೆ ಕ್ರಮ ತೆಗೆದುಕೊಳ್ಳುವಾಗ ಅದಕ್ಕೆ ಮುಂಚೆ ಸರ್ಕಾರದ ಇಲಾಖೆಯ ಅನುಮತಿಯನ್ನು ಪಡೆಯದೆ ಯಾರೂ ಕೂಡ ಕ್ರಮ ಜರುಗಿಸುವಂತಿಲ್ಲ. ಈಗ ಸಾಕಷ್ಟು ಐ.ಎ.ಎಸ್. ಆಫೀಸರ್‌ಗಳು ಇದ್ದಾರೆ. ನಾನು ಅವರ ಹೆಸರುಗಳನ್ನು ಹೇಳುವುದಕ್ಕೆ ಇಚ್ಛಪಡುವುದಿಲ್ಲ. ಅವರುಗಳು ಬಂದು ನಮ್ಮ ಮೇಲೆ ಸಾರ್ವಜನಿಕರಿಂದ ಮಾನ ಹಾನಿಯ್ಯಾಗಿದ್ದೆಯಾದ ಕಾರಣ ನಾವು ಅವರ ಮೇಲೆ ಮಾನನಷ್ಟ ಮೊಕದ್ದಮೆ ಹಾಕಲು ಅವಕಾಶ ಮಾಡಿಕೊಡಿ ಎಂದು ಕೇಳಿದರು. ಆದರೆ ನಾನು ಯಾರಿಗೂ ಅವಕಾಶ ಮಾಡಿಕೊಟ್ಟಿಲ್ಲ. ಏಕೆಂದರೆ ನೀವೆಲ್ಲರೂ ಕೂಡ ಒಂದು ರಾಜ್ಯದ ಅಧಿಕಾರಿಗಳಾಗಿ ಕೆಲಸವನ್ನು ಮಾಡುತ್ತಿದ್ದೀರಿ, ಸಾರ್ವಜನಿಕರ ಮೇಲೆ ಈ ತರಹದ ಮೊಕದ್ದಮೆಯನ್ನು ಹಾಕಲು ಈ ಸರ್ಕಾರದಲ್ಲಿ ನನ್ನ ಅವಧಿಯಲ್ಲಿ ನಾನು ಯಾರಿಗೂ ಕೂಡ ಪರವಾನಗಿಯನ್ನು ಕೊಡುತ್ತಿಲ್ಲವೆಂದು ಹೇಳಿದೆ. ಆದರೆ ಇಲ್ಲಿ ಈ ಘಟನೆ ನಡೆದಿರುವುದಕ್ಕೆ ಸಂಬಂಧಪಟ್ಟಂತೆ ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 191ರಡಿಯಲ್ಲಿ ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬೇಕೆಂದು ಹೇಳಿದ್ದಾರೆ. ಈಗ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋದರೆ ಅದು ದೊಡ್ಡದಾಗುತ್ತದೆ. ಮತ್ತೆ ಮಾನ್ಯ ರಾಜ್ಯಪಾಲರ ಭಾಷಣದ ಮೇಲೂ ಅವರೂ ಮಾತನಾಡಬಹುದು. ಆದರೆ ಇವೊತ್ತಿನ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರ ನಾಯಕರು ಏನು ಹೇಳಿದ್ದಾರೆ, ಅದನ್ನು ನಾನು ಪ್ರಿವಿಲೇಜ್ ಕಮಿಟಿಗೆ ವಹಿಸಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಡಿ.ವೈ.ಎಸ್.ಪಿ. ಯನ್ನು ಸಸ್ಪೆಂಡ್ ಮಾಡುವುದು ಅಥವಾ ಆತನನ್ನು ವರ್ಗ ಮಾಡುವುದು ಆಗಬೇಕು. ಏಕೆಂದರೆ ಈ ರೀತಿ ಮಾಡಿರುವುದಕ್ಕೆ ಆತನ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳೇ, ಇದನ್ನು ತಾವು ಹಕ್ಕುಚ್ಯುತಿಗೆ ಕಳುಹಿಸಿ ಮತ್ತೆ ತಕರಾರು ಮಾಡುವಂಥದ್ದು ಏನೂ ಇದರಲ್ಲಿ ಇಲ್ಲ. ಇಲ್ಲಿ ಕಣ್ಣಿಗೆ ಕಂಡಂತೆ ನೇರವಾಗಿದೆ. ತಾವು ಈ ಬಗ್ಗೆ ಸದನದಲ್ಲಿಯೇ ತೀರ್ಮಾನವನ್ನು ತೆಗೆದುಕೊಳ್ಳಬಹುದು. ತಾವು ಒಪ್ಪಿರುವ ಪ್ರಕಾರ ಅಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್, ಈ ಬಂಧನ ಆಗಿದ್ದು ಸರಿಯಲ್ಲವೆಂದು ಹೇಳಿದ್ದಾರೆ. ಇನ್ನು ತಮ್ಮ ಸರ್ಕಾರದ ನಿಲುವೂ ಕೂಡ ಏನಿದೆಯೆಂದು ಯಾವುದೇ ಒಬ್ಬ ಅಧಿಕಾರಿ ಸಾರ್ವಜನಿಕ ಜೀವನದಲ್ಲಿರುವವರ ಮೇಲಾಗಲಿ, ಮಂತ್ರಿಗಳ ಮೇಲಾಗಲಿ, ಶಾಸಕರ ಮೇಲಾಗಲಿ, ಏನಾದರೂ ಅವರು ಮೊಕದ್ದಮೆ ಹೂಡಬೇಕಾದರೆ ಸರ್ಕಾರದ ಅನುಮತಿಯನ್ನು ಪಡೆಯಬೇಕು. ಅನುಮತಿಯನ್ನೇ ಪಡೆಯದೆ ಒಂದು ನೋಟೀಸನ್ನು ಜಾರಿ ಮಾಡಿದ್ದಾರೆ. ಇದರಿಂದ ಮೇಲ್ನೋಟಕ್ಕೆ ಇದು ಎದ್ದು ನೇರವಾಗಿ ಕಾಣುತ್ತಿದೆ. ಆದುದರಿಂದ ಆ ಅಧಿಕಾರಿಯನ್ನು ತಾವು ಅಮಾನತ್ತಿನಲ್ಲಿಡಬೇಕು ಎಂದು ಕಳಕಳಿಯಿಂದ ಹೇಳಬಯ

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ಎರಡು ವಿಚಾರಗಳು ನನ್ನ ಕಡೆ ಇವೆ. ಇವೊತ್ತೇನು ಪ್ರಸ್ತಾಪ ಮಾಡಿದ್ದಾರೆ ಆ ಬಗ್ಗೆ ನೇರವಾಗಿ ನಾನು ಮ್ಯಾಜಿಸ್ಟೇರಿಯಲ್ ಎನ್‌ಕ್ವೈರಿ ಮಾಡಬೇಕು. ಜಿಲ್ಲಾಧಿಕಾರಿಗಳಿಗೆ ಹೇಳುತ್ತೇನೆ. ವಸ್ತುಸ್ಥಿತಿ ಏನಾಗಿದೆ ಎಂಬುದನ್ನು ತಿಳಿದುಕೊಂಡು ನಾನು ಅದರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂಬುದು ಒಂದು ವಿಚಾರ. ಇವೊತ್ತು ಇಷ್ಟೆಲ್ಲಾ ಸದಸ್ಯರುಗಳು ಹೇಳಿದ ಮೇಲೆ ಹಕ್ಕುಚ್ಯುತಿಯಾಗಿದೆಯೆಂದು ಹಕ್ಕುಬಾಧ್ಯತಾ ಸಮಿತಿಗೆ ವಹಿಸಲಾಗಿದೆ. ಅಲ್ಲೂ ಕೂಡ ಶಾಸಕರುಗಳು ಸದಸ್ಯರಾಗಿರುತ್ತಾರೆ, ಅವರುಗಳೂ ಕೂಡ ಈ ಬಗ್ಗೆ ಹೇಳುತ್ತಾರೆ. ಆಗ ಅಲ್ಲೂ ಕೂಡ ಸಮಗ್ರವಾದ ನಿರ್ಣಯವನ್ನು ಈ ಬಗ್ಗೆ ತೆಗೆದುಕೊಳ್ಳಬಹುದು.

ಶ್ರೀ ಅರಗ ಜ್ಞಾನೇಂದ್ರ : ನಾಳೆಯಿಂದ ಅಲ್ಲಿ ಜನಪ್ರತಿನಿಧಿಗಳು ಕೆಲಸ ಮಾಡುವುದಾದರೂ ಹೇಗೆ ಹೇಳಿ. ಅದೇ ಡಿ.ವೈ.ಎಸ್.ಪಿ. ಜೊತೆ ಕೆಲಸ ಮಾಡುವುದಾದರೂ ಹೇಗೆ ಹೇಳಿ. ಇದರ ಬಗ್ಗೆ ತಾವು ಹೇಳಬೇಕು.

ಅಧ್ಯಕ್ಷರು : ಈಗ ಹಲವಾರು ಮಾನ್ಯ ಸದಸ್ಯರುಗಳು ಇದರಲ್ಲಿ ಹಕ್ಕುಚ್ಯುತಿಯಾಗಿದೆ. ಆದ್ದರಿಂದ ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ರೆಫರ್ ಮಾಡಬೇಕೆಂದು ಕೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಒಪ್ಪಿದ್ದಾರೆ. ಈ ಸದನ ಕೂಡ ಒಪ್ಪಿದೆ ಎಂದು ಭಾವಿಸಿ ಹಕ್ಕುಚ್ಯುತಿಯಾಗಿದೆ ಎಂದು ಏನು ಹೇಳಲಾಗಿದೆ ಅದನ್ನು ಪರಿಶೀಲನೆ ಮಾಡಲು ಪ್ರಿವಿಲೇಜ್ ಕಮಿಟಿಗೆ ನಾನು ರೆಫರ್ ಮಾಡುತ್ತೇನೆ. ಈಗ ಮಾನ್ಯ ಶಿವಾನಂದ ನಾಯಕರ್‌ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವ ವಿಷಯದ ಬಗ್ಗೆ ನನಗೆ ಹೇಳಿದ್ದರು. ಈಗ ಮಾನ್ಯ ಶಿವಾನಂದ ನಾಯಕ್‌ರವರು ಅದನ್ನು ಪ್ರಸ್ತಾಪ ಮಾಡಬೇಕು.

ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪ ಮಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದಿಸುತ್ತಾ ತುಂಬಾ ನೋವಿನಿಂದ ಈ ಸಂಗತಿಯನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಅಧ್ಯಕ್ಷರೆ, ನಾನು ಹಿಂದಿನ ವಿಷಯಕ್ಕೆ ಸಂಬಂಧಪಟ್ಟಂತೆ ಒಂದ್ನಿಮಿಷ ಮಾತನಾಡುತ್ತೇನೆ. ಇದು ನನ್ನ ಮನವಿ. ಏಕೆಂದರೆ ನಾನು ಇಷ್ಟು ಹೊತ್ತಿನವರೆಗೂ ಮಾತನಾಡಲಿಲ್ಲ. ಮುಖ್ಯಮಂತ್ರಿಗಳು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಲು ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಅದು ಸರಿ. ಆದರೆ ಒಬ್ಬ ಅಧಿಕಾರಿ ನನ್ನನ್ನು ಕರೆದುಕೊಂಡು ಹೋಗಿ ಒಂದು ಗಂಟೆಗಳ ಕಾಲ ಸೆಲ್‌ನಲ್ಲಿ ಇಟ್ಟಿದ್ದಾರೆ ಎಂದ ಮೇಲೆ ಅವರನ್ನು ಅಮಾನತ್ತಿನಲ್ಲಿಡದಿದ್ದರೆ ನಾನು ಹೇಗೆ ನನ್ನ ಕ್ಷೇತ್ರದಲ್ಲಿ ಯಾವ ರೀತಿ ಕೆಲಸ ಮಾಡುವುದಕ್ಕಾಗುತ್ತದೆ ಹೇಳಿ. ನನ್ನ ಪದ್ಧತಿಯನ್ನು ತಾವು ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು : ಜೀವರಾಜ್‌ರವರೆ, ಹಕ್ಕುಚ್ಯುತಿಯಾಗಿದೆಯಾದ ಕಾರಣ ಅದನ್ನು ಹಕ್ಕುಬಾಧ್ಯತಾ ಸಮಿತಿಗೆ ರೆಫರ್ ಮಾಡಬೇಕೆಂದು ನಿಮ್ಮ ನಾಯಕರು ನೋಟಿಸ್‌ನ್ನು ಕೊಟ್ಟಿದ್ದಾರೆ.

(ಮಾನ್ಯ ಸದಸ್ಯರುಗಳನೇಕರು ಡಿವೈಎಸ್‌ಪಿ ಯನ್ನು ಸಸ್ಪೆಂಡ್ ಮಾಡಬೇಕೆನ್ನುತ್ತಿದ್ದರು)

ಅಧ್ಯಕ್ಷರು : ಈಗ ಆ ವಿಷಯದ ಚರ್ಚೆ ಮುಗಿದಿದೆ. ನನಗೆ ನೋಟಿಸ್ ಬಂದದ್ದು ಹಕ್ಕುಚ್ಯುತಿಯಾಗಿರುವುದರಿಂದ ಅದನ್ನು ಹಕ್ಕುಬಾಧ್ಯತಾ ಸಮಿತಿಗೆ ರೆಫರ್ ಮಾಡಬೇಕು ಎಂದು ವಿನಂತಿ ಮಾಡಿದ್ದು. ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ ಸರ್ಕಾರದ ಕಡೆಯಿಂದ ನಮ್ಮದೇನೂ ಅಡ್ಡಿಯಿಲ್ಲ. ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬಹುದು ಎಂದು ಹೇಳಿದರು. ಸಾಮಾನ್ಯವಾಗಿ ಅಂಥ ಸಂದರ್ಭಗಳಲ್ಲಿ ಅವಕಾಶ ಇಲ್ಲದೇ ಇದ್ದರೂ ಕೂಡ ಈ ಸದನದ ಒಪ್ಪಿಗೆ ಇದೆ ಎಂದು ಭಾವಿಸಿ ನಾನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿದ್ದೇನೆ. ಅದು ಈಗ ಚರ್ಚೆ ಮುಗಿದಿದೆ. ಮುಂದಿನ ಕಾರ್ಯಕಲಾಪಕ್ಕೆ ಹೋಗೋಣ.

ಶ್ರೀ ಅರಗ ಜ್ಞಾನೇಂದ್ರ : ಅ ಅಧಿಕಾರಿಯನ್ನು ಸಸ್ಪೆಂಡ್ ಮಾಡದಿದ್ದರೆ ಅಲ್ಲಿಯ ಶಾಸಕರು ಕೆಲಸ ಮಾಡುವುದಾದರೂ ಹೇಗೆ ಹೇಳಿ.

ಅಧ್ಯಕ್ಷರು : ಅದು ಬೇರೆ ವಿಚಾರ ಆ ಬಗ್ಗೆ ವಿಚಾರಣೆ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈಗ ಮುಂದಕ್ಕೆ ಹೋಗೋಣ.

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಸಭಾ ನಾಯಕರು ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡುವಂಥ ತೀರ್ಮಾನವನ್ನು ತೆಗೆದುಕೊಳ್ಳಬೇಕು. ನಾಳೆ ನಾವು ನಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ನಾಳೆ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಯಾರೂ ಕೆಲಸ ಮಾಡಲು ಆಗದೇ ಇರತಕ್ಕಂಥ ಪರಿಸ್ಥಿತಿ ಇದೆ.

ಅಧ್ಯಕ್ಷರು: ದಯಮಾಡಿ ತಾವು ಕುಳಿತುಕೊಳ್ಳಿ. ಶಿವಾನಂದ ನಾಯಕರೆ, ನೀವು ವಿಷಯ ಪ್ರಸ್ತಾಪ ಮಾಡುತ್ತೀರೋ ಇಲ್ಲವೋ? ಬೇರೆ ಸದಸ್ಯರುಗಳು ಎದ್ದುನಿಂತುಕೊಂಡಿದ್ದಾರೆ ಎಂದು ನೀವು ಕುಳಿತುಕೊಂಡರೆ ಹೇಗೆ? ಈಗಾಗಲೇ ಹಿಂದಿನ ವಿಷಯದ ಚರ್ಚೆ ಮುಗಿಸಿ ನಾನು ಮುಂದಿನ ಕಾರ್ಯಕಲಾಪಕ್ಕೆ ಹೋಗಿದ್ದೇನೆ. ನೀವು ಬೆಳಿಗ್ಗೆ ನನ್ನ ಛೇಂಬರ್‌ಗೆ ಬಂದು ಗಲಾಟೆ ಮಾಡಿ ಶೂನ್ಯ ವೇಳೆಯಲ್ಲಿ ಒಂದು ವಿಷಯ ಪ್ರಸ್ತಾಪ ಮಾಡಲು ಅವಕಾಶ ಕೊಡಬೇಕು ಎಂದು ಕೇಳಿದಿರಿ. ಆ ಪ್ರಕಾರ ನಾನು ಈಗ ಅವಕಾಸ ಮಾಡಿಕೊಟ್ಟಿದ್ದೇನೆ. ಈಗ ಪ್ರಸ್ತಾಪ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಿಮ್ಮ ಹತ್ತಿರ ಈಗ ಸಂದರ್ಭ ಸರಿ ಇಲ್ಲದಿರುವುದರಿಂದ ಬೇರೆ ಬೇರೆ

ಕಾರಣಕ್ಕಾಗಿ ನಾನು ಹೆಚ್ಚು ಮಾತನಾಡುತ್ತಿಲ್ಲ. ನೀವು ಹೀಗೆ ಮಾಡಿ. ಅಲ್ಲಿ ಎಸ್.ಪಿ, ಡಿ.ಸಿ, ಆ ದತ್ತಜಯಂತಿ ಹಿನ್ನಲೆ, ಈ ಎಲ್ಲಾ ಕಾರಣಕ್ಕೆ ಸಾಕಷ್ಟು ಸಂಬಂಧಗಳು ಕುಲಗೆಟ್ಟು ಹೋಗಿದೆ. ಅವರದೇ ಆದ ರೀತಿ, ನಮ್ಮದೇ ಆದ ರೀತಿ ಬೇರೆ. ಅದು ಅವರು ಕಾನೂನಿನಂತೆ ಏನಾದರೂ ಮಾಡಿಕೊಳ್ಳಲಿ. ತಾವು ಹೋಂ ಕಮಿಶನರ್‌ರಿಂದ ಇದರ ಬಗ್ಗೆ ತನಿಖೆ ಮಾಡಿಸಿ. ಆಗ ಕಡೇಪಕ್ಷ ವಾಸ್ತವಿಕ ಸತ್ಯಸಂಗತಿ ನಿಮ್ಮ ಗಮನಕ್ಕೆ ಬರುತ್ತದೆ. ಪ್ರಿವಿಲೇಜ್ ಕಮಿಟಿಯವರು ಏನು ಸಭೆ ಸೇರಿ ಕರೆಯಬೇಕೋ ಅದು ಡಿಲೇ ಆಗುತ್ತದೆ. ಆದುದರಿಂದ ಈ ತನಿಖೆಯನ್ನು ಮೊದಲು ಯಾರಾದರೂ ಹೋಂ ಸೆಕ್ರಟರಿ, ಹೋಂ ಕಮಿಶನರ್, ಇವರ್‍ಯಾರಿಂದಲಾದರೂ ಮಾಡಿಸಿ. ಇದನ್ನಾದರೂ ದಯವಿಟ್ಟು ತಾವು ಮಾಡಿಸಿ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಶಾಸಕರ ಬಂಧನ ಮಾಡಿದರು ಎನ್ನುವ ವಿಷಯವಾಗಿದೆ. ನಾನು ಮಾನ್ಯ ಜೀವರಾಜ್‌ರವರ ಬಗ್ಗೆ ತಿಳಿದುಕೊಂಡಿದ್ದೇನೆ. ಅವರ ಜೊತೆಯಲ್ಲಿಯೇ ಅವರ ಮತಕ್ಷೇತ್ರಕ್ಕೆ ನಾನು ಹೋಗಿದ್ದೇನೆ; ನೋಡಿದ್ದೇನೆ. ಇದನ್ನು ನಮ್ಮ ಹೋಂ ಕಮಿಶನರ್‌ರವರಿಂದ ತನಿಖೆ ಕೂಡ ಮಾಡಿಸಿ ಏನಿದೆ ನೋಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಓ.ಕೆ. ಸಾರ್.

ಅಧ್ಯಕ್ಷರು : ಈಗ ಶಿವಾನಂದ ನಾಯ್ಕರವರು ಮಾತನಾಡಬೇಕು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ: (ಅ) ಭಟ್ಕಳದಲ್ಲಿ ತಿಮ್ಮಪ್ಪನಾಯ್ಕರ ಕೊಲೆಗೆ ಸಂಬಂಧಪಟ್ಟಂತೆ ಕೊಲೆಗಾರರನ್ನು ಪತ್ತೆ ಹಚ್ಚಿಲ್ಲದಿರುವ ಬಗ್ಗೆ

ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಅಧ್ಯಕ್ಷರೆ, ತುಂಬಾ ನೋವಿನಿಂದ ಈ ಸಂಗತಿಯನ್ನು ಹೇಳುತ್ತಿದ್ದೇನೆ. ಕಳೆದ ಅಧಿವೇಶನದಲ್ಲೂ ಕೂಡ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಭಟ್ಕಳದಲ್ಲಿ 19 ಕೊಲೆಗಳಾಗಿವೆ. ಇದು 20ನೇ ಕೊಲೆ ಕಳೆದ ಎಂಟು ತಿಂಗಳ ಹಿಂದೆ ನಡೆದಿರುವುದು. ಅದು ರಾಷ್ಟ್ರೀಯ ಹೆದ್ದಾರಿ ಎನ್.ಹೆಚ್. 17ರಲ್ಲಿ ರಾತ್ರಿ 10.30ಕ್ಕೆ ನಡೆದಿರುವುದು. ಆಗ ಅಲ್ಲಿ ತಿಮ್ಮಪ್ಪನಾಯ್ಕರ ಹತ್ಯೆಯಾಗಿದೆ. ಅವರನ್ನು ಗುಂಡಿಟ್ಟು ಕೊಲೆ ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಹಿಂದೆ ಈ ಮನೆಯ ಸದಸ್ಯರಾಗಿದ್ದ ಡಾ: ಚಿತ್ತರಂಜನ್‌ರವನ್ನೂ ಕೂಡ ಹತ್ಯೆ ಮಾಡಲಾಗಿತ್ತು. ಭಟ್ಕಳದಲ್ಲಿ ಈಗಾಗಲೇ 20 ಕೊಲೆಗಳಾಗಿದ್ದರೂ ಕೂಡ ಒಬ್ಬ ಕೊಲೆಗಾರರನ್ನೂ ಕೂಡ ಈವರೆಗೆ ಪತ್ತೆಹಚ್ಚಲಿಲ್ಲ ಮತ್ತು ಒಬ್ಬರ ಮೇಲೂ ಕೇಸ್ ಬುಕ್ ಮಾಡಲಿಲ್ಲ ಮತ್ತು ಯಾರನ್ನೂ ಸಹ ಅರೆಸ್ಟ್ ಮಾಡಲಿಲ್ಲ. ಭಟ್ಕಳದಲ್ಲಿ ಜೀವನ ಮಾಡುವಂಥ ಜನರು ಒಂದು ರೀತಿಯಲ್ಲಿ ಭಯಭೀತರಾಗಿ ನಾಳೆ ಏನು ಆಗುತ್ತದೋ ಎಂದು ಭಯಭೀತರಾಗಿ ತಮ್ಮ ಜೀವ ರಕ್ಷಣೆಯನ್ನು ಯಾರು ಮಾಡುತ್ತಾರೆ ಎನ್ನುವ ಪ್ರಶ್ನೆ ಅವರಲ್ಲಿ ಮೂಡಿದೆ. ಆದುದರಿಂದ ತುಂಬಾ ನೋವಿನಿಂದ ಈ ಸಂಗತಿಯನ್ನು

ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಹಿಂದಿನ ಅಧಿವೇಶನದಲ್ಲಿ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಸರ್ಕಾರದಿಂದ ನನಗೆ ಉತ್ತರ ಸಿಗಲಿಲ್ಲ. ಈಗಲೂ ಅದೇ ರೀತಿ ನಡೆದುಕೊಂಡಿದ್ದಾರೆ. ಈಗಾಗಲೇ ಅಲ್ಲಿಯ ಜನರು ಧರಣಿಯನ್ನು ಕುಳಿತಿದ್ದಾರೆ. ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಹೀಗಾದರೆ ಸರ್ಕಾರದ ಮೇಲೆ, ವ್ಯವಸ್ಥೆ ಮೇಲೆ ಹೇಗೆ ಜನರಲ್ಲಿ ವಿಶ್ವಾಸ ಮೂಡುವುದಕ್ಕೆ ಸಾಧ್ಯವಿದೆ? ನಿರಂತರವಾಗಿ ಕೊಲೆ ನಡೆಯುತ್ತಲೇ ಇದೆ. ಕೊಲೆಗಾರರನ್ನು ಪತ್ತೆ ಹಚ್ಚುವ ಕೆಲಸವನ್ನು ಸರ್ಕಾರ ಈವರೆಗೆ ಮಾಡಲಿಲ್ಲ. ಯಾರ ಮೇಲೂ ಕೇಸ್ ಬುಕ್ ಮಾಡಲಿಲ್ಲ. ಡಾ: ಚಿತ್ತರಂಜನ್‌ರವರ ಕೊಲೆಯಾದಾಗ ಅದಕ್ಕೆ ಸಂಬಂಧಪಟ್ಟಂತೆ ಒಂದು ಆಯೋಗವನ್ನು ರಚನೆ ಮಾಡಲಾಯಿತು. ಆ ಆಯೋಗ ವರದಿ ಕೊಟ್ಟು ಈಗಾಗಲೇ ಆರೇಳು ವರ್ಷವಾಗಿದೆ. ಆ ವರದಿಯನ್ನೂ ಕೂಡ ಸರ್ಕಾರ ಮುಚ್ಚಿಟ್ಟಿದೆ. ಏಕೆ ಈ ಭಟ್ಕಳದ ಜನರ ಮೇಲೆ ಸರ್ಕಾರ ಈ ರೀತಿ ಧೋರಣೆಯನ್ನು ಅನುಸರಿಸುತ್ತಿದೆ? ತುಂಬಾ ನೋವಿನಿಂದ ಈ ಸಂಗತಿಯನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ನನಗೆ ಈ ಬಗ್ಗೆ ಸ್ಪಷ್ಟವಾದ ಉತ್ತರ ಸರ್ಕಾರದಿಂದ ಬೇಕು. ಈ ಕೇಸ್ ಏನಾಗಿದೆ? ತಿಮ್ಮಪ್ಪನಾಯ್ಕರ ಕೊಲೆ ನಡೆದು ಈಗಾಗಲೇ 8 ತಿಂಗಳಾಗಿದೆ. ಈ ಎಂಟು ತಿಂಗಳ ಅವಧಿಯಲ್ಲಿ ಸರ್ಕಾರದ ಇಲಾಖೆಯವರು ಏನು ಮಾಡಿದ್ದಾರೆ? ಯಾವ ಹಂತದಲ್ಲಿ ಇದೆ, ಡಾ: ಚಿತ್ತರಂಜನ್‌ರವರಿಗೆ ಸಂಬಂಧಪಟ್ಟಂಥ ಜಗನ್ನಾಥ್‌ಶೆಟ್ಟಿ ಆಯೋಗ ಮತ್ತು ರಾಮಚಂದ್ರ ಆಯೋಗದ ವರದಿಯನ್ನು ಏಕೆ ಸರ್ಕಾರ ಮುಚ್ಚಿಟ್ಟಿದೆ? ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಸರ್ಕಾರದಿಂದ ನಾನು ನಿರೀಕ್ಷೆ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ತಮ್ಮ ಹತ್ತಿರ ಬಂದು ಬಹಳ ನೋವಿನಿಂದ ವಿಷಯವನ್ನು ಪ್ರಸ್ತಾಪ ಮಾಡಿದೆ. ಏಕೆಂದರೆ ನಮ್ಮ ಕ್ಷೇತ್ರದಲ್ಲಿ ಧರಣಿ ಆಗುತ್ತಿದೆ, ಜನರಿಗೆ ಸರ್ಕಾರದ ಮೇಲೆ ಒಂದು ರೀತಿ ವಿಶ್ವಾಸವಿಲ್ಲದ ಹಾಗಾಗಿದೆ.

ಅಧ್ಯಕ್ಷರು : ಆಯಿತು ಬಿಡಿ. ವಿಷಯ ಪ್ರಸ್ತಾಪ ಮಾಡಿದ್ದೀರಿ. ಹೇಳಿದ್ದನ್ನೇ ಮತ್ತೆ ಹೇಳುತ್ತಿದ್ದೀರಿ. ಸಾಕು ಬಿಡಿ. ಈಗ ಮಾನ್ಯ ಸಭಾನಾಯಕರು, ಉತ್ತರ ಹೇಳಿ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಶೂನ್ಯ ವೇಳೆಯಲ್ಲಿ ಇಂತಹ ವಿಷಯ ಕೇಳಿದರೆ ಸರ್ಕಾರದ ವತಿಯಿಂದ ಸ್ಪಷ್ಟವಾದ ಉತ್ತರ ಸಿಗುವುದಿಲ್ಲ. ಆದರೆ 2004ರಲ್ಲಿ ತಿಮ್ಮಪ್ಪನಾಯಕರ ಹತ್ಯೆಯಾಗಿದೆ. ಆದರೆ ಇದುವರೆಗೆ ಯಾರನ್ನೂ ಬಂಧಿಸಿಲ್ಲ ಎಂದು ಹೇಳಿದರು, ನಾನು ಅಧಿಕಾರಿಗಳಿಗೆ ಹೇಳಿ ತ್ವರಿತವಾಗಿ ಆ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಹಿಂದಿನ ಸದನದಲ್ಲಿಯೂ ಇದೇ ರೀತಿ ಉತ್ತರ ಸಿಕ್ಕಿತ್ತು.

ಶ್ರೀ ಧರ್ಮಸಿಂಗ್ : ನೀವು ಕೂಡ ಸೀನಿಯರ್ ಲೆಜಿಸ್ಲೇಟರ್ ಇದ್ದೀರಿ, ಪ್ರಶ್ನೆ ರೂಪದಲ್ಲಿ, ಇಲ್ಲವೇ ಗಮನ ಸೆಳೆಯುವ ಸೂಚನೆ ರೂಪದಲ್ಲಿ ಕೇಳಿದರೆ ಉತ್ತರ ಕೊಡಬಹುದು. ಶೂನ್ಯ ವೇಳೆಯಲ್ಲಿ ಬಂದ ಮೇಲೆ ಅದು ಎಲ್ಲಾ ಕಡೆಯಿಂದ ಸಮರ್ಪಕವಾದ ಉತ್ತರ ಆಗುವುದಿಲ್ಲ. ಆದರೂ ಕೂಡ ನಾನು ಹೇಳುತ್ತಿದ್ದೇನೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಉತ್ತರಿಸುವಾದ ಇದರ ಬಗ್ಗೆ ಕೂಡ ಸವಿಸ್ತಾರವಾದ ಉತ್ತರ ಕೊಡುತ್ತೇನೆ.

ಅಧ್ಯಕ್ಷರು : ರಮೇಶ್ ಕುಮಾರ್‌ರವರೇ, ನೀವು ಗಮನ ಸೆಳೆಯುವ ಸೂಚನೆ ಹಾಕಿದ್ದೀರಿ....

(ಆ) ಶೂನ್ಯವೇಳೆಯಲ್ಲಿ ತಮ್ಮ ಕ್ಷೇತ್ರದ ವಿಷಯ ಪ್ರಸ್ತಾಪಿಸಲು ಅವಕಾಶ ಸಿಗಲಿಲ್ಲವೆಂದು ಮಾನ್ಯ ಸದಸ್ಯರಾದ ಶ್ರೀ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡರಿಂದ ಧರಣಿ

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ (ಕಲಘಟಗಿ) : ಮಾನ್ಯ ಅಧ್ಯಕ್ಷರೆ, ನಾನು ಶೂನ್ಯ ವೇಳೆಯಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಚೀಟಿ ಬರೆದು ಕಳುಹಿಸಿದ್ದೇನೆ.

ಅಧ್ಯಕ್ಷರು : ಆಯಿತು, ಸಮಯ ಕೊಡೋಣ. ಈಗ ಕುಳಿತುಕೊಳ್ಳಿ. ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಪ್ರಶ್ನೋತ್ತರಕ್ಕೆ ಎರಡರಿಂದ ಎರಡೂವರೆ ಗಂಟೆ ಸಮಯ ಆಗಿದೆ. ದಯಮಾಡಿ ಕೇಳಿ, ಶೂನ್ಯವೇಳೆಯಲ್ಲಿ ಒಂದು ಅಥವಾ ಎರಡು ವಿಷಯಗಳನ್ನು ಪ್ರಸ್ತಾಪಿಸುವುದಕ್ಕೆ ಅವಕಾಶ ಕೊಡಬಹುದು. ನಿಮಗೆ ಇನ್ನೊಂದು ದಿವಸ ಅವಕಾಸ ಕೊಡೋಣ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : ನನಗೆ ಅವಕಾಶ ಕೊಡಸಿದ್ದರೆ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಶಾಸಕರಾದ ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡರವರು ಬಾವಿಯಲ್ಲಿ ಬಂದು ಧರಣಿ ಪ್ರಾರಂಭಿಸಿದರು)

ಅಧ್ಯಕ್ಷರು : ನೀವು ಏನು ಬೇಕಾದರೂ ಮಾಡಿಕೊಳ್ಳಬಹುದು. ನಾನು ಸಭಾ ನಿಯಮದ ಪ್ರಕಾರ ಕೆಲಸ ಮಾಡಬೇಕಾಗುತ್ತದೆ. ಮಾನ್ಯ ಯಡಿಯೂರಪ್ಪನವರೇ, ನಿಮ್ಮ ಸದಸ್ಯರು ಪ್ರತಿಯೊಂದಕ್ಕೂ ಥ್ರೆಟ್ ಮಾಡುತ್ತಾರೆ. ಪ್ರತಿಯೊಂದಕ್ಕೂ ನಿಂತುಕೊಳ್ಳುತ್ತಾರೆ. ಈ ತರಹ ಆದರೆ ನಾನು ಸಭೆ ನಡೆಸುವುದಕ್ಕಾಗುವುದಿಲ್ಲ. ಇದನ್ನು ಸಹಿಸಿಕೊಳ್ಳುವುದಕ್ಕೆ ನನಗೆ ಸಾಧ್ಯವಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಅವರ ಕ್ಷೇತ್ರದಲ್ಲಿ ಹಗಲು ರಾತ್ರಿ ಧರಣಿ ನಡೆಯುತ್ತಿದೆ. ಸತ್ಯಾಗ್ರಹ ನಡೆಯುತ್ತಿದೆ, ಹೋರಾಟ ನಡೆಯುತ್ತಿದೆ. ಸಂಬಂಧಪಟ್ಟ ಡಿಸಿ ಯವರು ಕೂಡ ಹೋಗಿ ಅಲ್ಲಿ ಮಾತನಾಡಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಮೋರೆಯವರಿಗೆ ಹೇಳುತ್ತಿದ್ದೇನೆ, ಕಲಘಟಗಿಯಲ್ಲಿ ಹಗಲು ರಾತ್ರಿ ಸತ್ಯಾಗ್ರಹ ನಡೆಯುತ್ತಿದೆ. ಪ್ರಮುಖ ಬೆಳೆ ವಿಮೆ ಇರಬಹುದು,

ಮತ್ತು ಅಭಿವೃದ್ಧಿ ಬಗ್ಗೆ ಇರಬಹುದು, ದಯಮಾಡಿ ತಾವಾದರೂ ಹೋಗಿ ಅಲ್ಲಿ ಧರಣಿ ಕುಳಿತಿರುವವರ ಜೊತೆ ಮಾತನಾಡಬೇಕೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ರಮೇಶ್ ಕುಮಾರ್‌ರವರೇ, ತಾವು ಕೇಳಿ. ಜಗದೀಶ್ ಶೆಟ್ಟರ್‌ರವರೇ, ದಯಮಾಡಿ ಕೂತುಕೊಳ್ಳಿ ಇನ್ನೂ ಅನೇಕ ಸಮಸ್ಯೆಗಳು ಇವೆ. ಇವತ್ತಲ್ಲ ನಾಳೆ ನಾನು ಅವಕಾಶ ಕೊಡುತ್ತೇನೆ. ದಯಮಾಡಿ ಸಹಕರಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ನೀವು ಎಲ್ಲಾ ರೀತಿ ಸಹಕಾರ ಕೊಡುತ್ತಿದ್ದೀರ. ನಮ್ಮ ಎಲ್ಲಾ ಸಮಸ್ಯೆಗಳನ್ನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ. ಅದಕ್ಕೆ ನಿಮಗೆ ಅಭಿನಂದನೆಗಳು. ಪ್ರಶ್ನೆ ಇಷ್ಟೆ. ಮಾನ್ಯ ಮುಖ್ಯಮಂತ್ರಿಗಳಿದ್ದಾರೆ, ನಾವು ನಿಮಗೆ ಒತ್ತಾಯ ಮಾಡುವುದಿಲ್ಲ.

ಅಧ್ಯಕ್ಷರು : ಆಯಿತು, ಇವತ್ತಲ್ಲ ನಾಳೆ ಅವಕಾಶ ಕೊಡೋಣ. ಆದರೆ ಇವತ್ತೇ ಅವಕಾಶ ಕೊಡಬೇಕೆಂದರೆ ಇದನ್ನೆಲ್ಲಾ ನನಗೆ ಸಹಿಸಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಒತ್ತಾಯ ಮಾಡುವುದಿಲ್ಲ. ಸನ್ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ. ರಾಜ್ಯದ ಜನತೆ ಜ್ವಲಂತ ಸಮಸ್ಯೆಗಳನ್ನು ತೆಗೆದುಕೊಂಡು ಸತ್ಯಾಗ್ರಹ ಚಳುವಳಿ ನಡೆಸಿದರೆ ಆ ಬಗ್ಗೆ ಸರ್ಕಾರ ಗಮನ ಹರಿಸಿ ಕ್ರಮ ಕೈಗೊಳ್ಳುವುದು ಸಾಮಾನ್ಯವಾಗಿ ನಡೆದುಕೊಂಡು ಬಂದಿರುವ ಪದ್ಧತಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾರೂ ಶಾಶ್ವತವಾಗಿ ಇರುವುದಿಲ್ಲ. ಅದಲು ಬದಲು ಆಗುತ್ತಾರೆ. ನಿಜವಾದ ಜ್ವಲಂತ ಸಮಸ್ಯೆಗಳ ಸಲುವಾಗಿ ಹತ್ತಾರು ದಿವಸಗಳಿಂದ ಧರಣಿ ಕುಳಿತಾಗ ಡೆಪ್ಯುಟಿ ಕಮಿಷನರ್ ಆಗಲಿ ಜಿಲ್ಲಾ ಉಸ್ತುವಾರಿ ಸಚಿವರಾಗಲಿ ಯಾರೂ ಬಂದು ನಿಮ್ಮ ಕಷ್ಟ ಏನು ಎಂದು ವಿಚಾರಿಸಿ ಅದು ಸರಿ ಇದ್ದರೆ ಅದಕ್ಕೆ ಸ್ಪಂದಿಸುತ್ತೇವೆಂದು ಭರವಸೆ ಕೊಡದೆ ಇದ್ದರೆ ನೀವು ಬೇಕಾದರೆ ಧರಣಿ ಕುಳಿತುಕೊಳ್ಳಿ, ನೀವು ಸಾಯಿರಿ ನಿಮಗೆ ಏನೂ ಸಂಬಂಧ ಇಲ್ಲವೆಂದು ಹೇಳುವುದಾದರೆ ಹೇಗೆ? ಕಲಘಟಗಿಯಲ್ಲಿ ಕಳೆದ 15 ದಿವಸಗಳಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ನೀವೇ ಎನ್‌ಕ್ವೈರಿ ಮಾಡುತ್ತೇವೆಂದು ಹೇಳಿದ್ದೀರಿ. ಬೆಳೆ ವಿಮೆ ಬಗ್ಗೆ ಈ ರೈತರ ಜ್ವಲಂತ ಸಮಸ್ಯೆ ಇದೆ. ಇದರ ಬಗ್ಗೆ ಆ ಕ್ಷೇತ್ರದ ಸಮಸ್ಯೆ ತೆಗೆದುಕೊಂಡು ಅವರು ಧರಣಿ ಮಾಡುತ್ತಿದ್ದಾರೆ. ನಿಮ್ಮ ಅಧಿಕಾರಿಗಳು ಹೋಗಿ ಆ ಸಮಸ್ಯೆ ಬಗೆಹರಿಸುವ ಭರವಸೆ ಕೊಟ್ಟರೆ ಉತ್ತಮ. ನೀವು ಒಳಗಡೆ ಬನ್ನಿ.

(ಮಾನ್ಯ ಶಾಸಕರಾದ ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ ರವರು ಧರಣಿ ಮುಕ್ತಾಯ ಮಾಡಿ ತಮ್ಮ ಸ್ಥಾನಕ್ಕೆ ವಾಪಸ್ಸಾದರೂ)

ಅದಕೋಸ್ಕರ ದಯವಿಟ್ಟು ತಾವು ಯಾರಾದರೂ ಹೋಗಿ ಆ ಸಮಸ್ಯೆ ಬಗೆಹರಿಸಿ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಶಾಸಕರು ಏನು ಮಾಡಬೇಕು?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಸಚಿವರು) : ಮಾನ್ಯ ಸಿದ್ದನಗೌಡರಿಗೆ ಮುಂಜಾನೆ ಕರೆದು ಮಾತನಾಡಿದ್ದೇನೆ. ನಾಳೆ ಧಾರವಾಡಕ್ಕೆ ಹೋದಾಗ ಪ್ರತ್ಯೇಕವಾದ

ಸಭೆ ಏರ್ಪಾಡು ಮಾಡಿ ಅವರ ಸಮಸ್ಯೆಗಳನ್ನು ನಾನು ಬಗೆಹರಿಸುತ್ತೇನೆ. ಅವರು ಎರಡು ಸಮಸ್ಯೆಗಳನ್ನು ಹೇಳಿದ್ದಾರೆ. ಒಂದು ಕೆರೆಯಲ್ಲಿ ಹೂಳು ತೆಗೆಸುವುದು ಮತ್ತು ಇನ್ನೊಂದು ಕಾಲೇಜ್ ಕೊಡುವುದು. ಈಗಾಲೇ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಇದು ಏನು ಸಮಸ್ಯೆ ಎಂದು ಕೇಳಿಕೊಂಡು ನನಗೆ ಹೇಳಿ ಎಂದು ಹೇಳಿದ್ದಾರೆ. ಇದನ್ನು ಮಾಡುತ್ತೇನೆ.

ಅಧ್ಯಕ್ಷರು : ಯಡಿಯೂರಪ್ಪನವರೇ, ದಯಮಾಡಿ ಹೇಳಿ, ಇದು ಶೂನ್ಯವೇಳೆ....

ಶ್ರೀ ಕೆ. ಶ್ರೀನಿವಾಸಗೌಡ : ನಾಳೆ ಎಲ್ಲಾ ಸದಸ್ಯರು ಈ ರೀತಿ ಧರಣಿ ಕುಳಿತುಕೊಂಡರೆ ಸರ್ಕಾರ ಕೆಲಸ ಮಾಡುವುದು ಹೇಗೆ? ಪ್ರತಿಯೊಂದಕ್ಕೂ ಅಧ್ಯಕ್ಷರು ಇದಕ್ಕೆ ಅನುಮತಿ ಕೊಡಬಾರದು.

ಅಧ್ಯಕ್ಷರು : ನಾನು ಪ್ರತಿಪಕ್ಷದ ನಾಯಕರಲ್ಲಿ ವಿನಂತಿಸುವುದು, ಬಹಳ ಜನ ಶೂನ್ಯ ವೇಳೆಯಲ್ಲಿ ಅವಕಾಶ ಕೊಡಬೇಕೆಂದು ನನ್ನ ಛೇಂಬರ್‌ನಲ್ಲಿ ಬಂದು ಕೇಳುತ್ತಾರೆ. ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ. ಬಹಳ ಪ್ರಮುಖವಾದ ವಿಷಯ ಇದ್ದರೆ ದಿವಸಕ್ಕೆ ಇಬ್ಬರಿಗೆ ಅವಕಾಶ ಕೊಡಬಹುದು. ಆ ಮೇಲೆ ಗಮನ ಸೆಳೆಯುವ ಸೂಚನೆಗೆ ಒಂದೆರಡಕ್ಕೆ ಅವಕಾಶ ಕೊಡಬಹುದು. ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ಯಾವುದೇ ಬಿಸ್‌ನೆಸ್ ನಡೆಯುವುದಿಲ್ಲ. ಆ ಕಾರಣದಿಂದ ಇವತ್ತು ಶೂನ್ಯವೇಳೆಯಲ್ಲಿ ವಿಷಯಗಳು ಜಾಸ್ತಿಯಾಗಿರುವುದರಿಂದ ಇವತ್ತು ಮತ್ತೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಇನ್ನು ಮುಂದೆ ಎರಡು ಗಮನ ಸೆಳೆಯುವ ಸೂಚನೆ, ಶೂನ್ಯವೇಳೆಯಲ್ಲಿ ಎರಡು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಎಲ್ಲರೂ ಸಹಕಾರ ನೀಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಇ) ಕನಕಪುರ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಶಾಸಕು ತಮ್ಮ ಅನುದಾನವನ್ನು ಸಮರ್ಪಕವಾಗಿ ಬಳಸದಿದ್ದರೆ ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಸಂಸತ್ ಸದಸ್ಯರು ಪತ್ರಿಕಾ ಹೇಳಿಕೆ ನೀಡಿರುವ ಬಗ್ಗೆ.

ಶ್ರೀ ಕೆ. ಅನ್ನದಾನಿ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ದಯಮಾಡಿ ಎರಡು ನಿಮಿಷ ಅವಕಾಶ ಮಾಡಿಕೊಡಿ. ನಾನು ಹೆಚ್ಚಿಗೆ ಮಾತನಾಡುವುದಿಲ್ಲ.

ಅಧ್ಯಕ್ಷರು : ಮಾನ್ಯ ಅನ್ನದಾನಿಯವರಲ್ಲಿ ವಿನಂತಿ ಮಾಡುವುದು ಇಷ್ಟೆ. ಈಗ ಹೇಳಿದ್ದೇನೆ, ಮತ್ತೆ ಮತ್ತೆ ನೀವು ಅವಕಾಶ ಕೇಳುತ್ತಿದ್ದೀರಿ. ನಿಮ್ಮ ಕ್ಷೇತ್ರಕ್ಕೆ ಅದು ಪ್ರಮುಖವಾಗಿರಬಹುದು, ಆದರೆ ಸದನ ನಡೆಯಬೇಕು. ನಿಯಮಾಳಿ ಪ್ರಕಾರ ನಡೆಯಬೇಕು. ಅದಕ್ಕೆ ದಯಮಾಡಿ ತಾವು ಸಹಕರಿಸಬೇಕು.

ಶ್ರೀ ಕೆ. ಅನ್ನದಾನಿ : ಮಾನ್ಯ ಅಧ್ಯಕ್ಷರೆ, ಸಂಸತ್ ಸದಸ್ಯರು ಶಾಸಕರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂತಹ ವಿಚಾರ, ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಿದ್ದು. ನನಗೆ ಒಬ್ಬನಿಗೆ ಸಂಬಂಧಪಟ್ಟಿದ್ದು ಅಲ್ಲ. ಈ ಹೇಳಿಕೆ ಇಡೀ ರಾಜ್ಯದ ಶಾಸಕರಿಗೆ ಸಂಬಂಧಪಟ್ಟ ವಿಚಾರ ಚರ್ಚೆ ಮಾಡುತ್ತಿದ್ದೇನೆ. ಎರಡು ನಿಮಿಷ ಅವಕಾಶ ಮಾಡಿಕೊಡಿ. ಮಾನ್ಯ ಅಧ್ಯಕ್ಷರೆ, ದಿನಾಂಕ 27-1-2005ರ ಗುರುವಾರದ ಕನ್ನಡಪ್ರಭ ದಿನಪತ್ರಿಕೆಯಲ್ಲಿ 'ಅಭಿವೃದ್ಧಿ ಕಾರ್ಯ ಕೈಗೊಳ್ಳದಿದ್ದರೆ ಕ್ರಮ' ಎಂಬ ಶೀರ್ಷಿಕೆ ಅಡಿಯಲ್ಲಿ ಕನಕಪುರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸಂಬಂಧಪಟ್ಟಂತೆ ನಮ್ಮ ಸಂಸತ್ ಸದಸ್ಯರು ಒಂದು ಹೇಳಿಕೆ ಕೊಟ್ಟಿದ್ದಾರೆ. 'ಕನಕಪುರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಶಾಸಕರು ತಮ್ಮ ಅನುದಾನವನ್ನು ಸಮರ್ಪಕವಾಗಿ ಬಳಸದಿದ್ದರೆ ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳುವುದಕ್ಕೆ ಹಿಂಜರಿಯುವುದಿಲ್ಲ' ಎಂದು ಹೇಳಿಕೆ ಕೊಟ್ಟಿದ್ದಾರೆ. ಈ ಹೇಳಿಕೆ ಯಾವ ಅರ್ಥವನ್ನು ಕೊಡುತ್ತದೆ ಎಂದು ನೀವು ಪರಿಶೀಲಿಸಬೇಕು. ದಯಮಾಡಿ ಈ ಶಾಸಕರಿಗೆ ಅಪಮಾನ ಆಗಿರತಕ್ಕಂತಹ ಹೇಳಿಕೆ, ಇದರ ಬಗ್ಗೆ ನೀವು ಕ್ರಮ ತೆಗೆದುಕೊಳ್ಳಬೇಕೆಂದು ಈ ಸದನದ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಈ ಹೇಳಿಕೆ ಶಾಸಕರ ಹಕ್ಕನ್ನು ಕಿತ್ತುಕೊಳ್ಳುವ ಪ್ರಯತ್ನವನ್ನು ಮಾಡಿರತಕ್ಕಂಥದ್ದು ಎಷ್ಟು ಸಮಂಜಸ ಎನ್ನತಕ್ಕಂಥದ್ದನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಇವತ್ತು ಅಭಿವೃದ್ಧಿ ಕಾರ್ಯ ಕೈಗೊಳ್ಳದಿದ್ದರೆ, ಸಮರ್ಪಕವಾಗಿ ಕಾರ್ಯನಿರ್ವಹಿಸದೆ ಇದ್ದರೆ, ಉತ್ತಮವಾಗಿ ಕೆಲಸ ಮಾಡದೆ ಇದ್ದರೆ ಶಾಸಕರ ಮೇಲೆ ಕ್ರಮ ಕೈಗೊಳ್ಳುತ್ತೇವೆಂದು ಹೇಳುವ ಹೇಳಿಕೆ ಕೊಟ್ಟಿದ್ದಾರೆ. ಶಾಸಕರು ಅಭಿವೃದ್ಧಿ ಕಾರ್ಯಕೈಗೊಳ್ಳುತ್ತಾರಾ? ಅಭಿವೃದ್ಧಿ ಕಾರ್ಯ ಕೈಗೊಳ್ಳತಕ್ಕಂತಹವರು ಶಾಸಕರಾ? ಈ ಕೆಲಸವನ್ನು ಮಾಡತಕ್ಕಂತಹವರು ಯಾರು ಎನ್ನತಕ್ಕಂತಹ ಪ್ರಶ್ನೆ ಕೂಡ ಇಲ್ಲದೆ ಶಾಸಕರ ಮೇಲೆ ಇಂತಹ ಹೇಳಿಕೆ ಕೊಟ್ಟಿರತಕ್ಕಂಥದ್ದು ಸರಿಯೋ? ಎಂದು ಈ ಸದನದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಕನಕಪುರ ಲೋಕಸಭಾ ವ್ಯಾಪ್ತಿಯ ಒಳಗಡೆ ಎಂಟು ಜನ ಶಾಸಕರು ಇದ್ದಾರೆ. ಈ ಎಂಟು ಜನ ಶಾಸಕರಿಗೂ ಕೂಡ ಅಪಮಾನ ಆಗಿರತಕ್ಕಂತಹ ವಿಚಾರ ಇದು. ನಮ್ಮ ಮೇಲೆ ಕ್ರಮ ಕೈಗೊಳ್ಳುತ್ತಾರೆ ಎನ್ನುವ ವಿಚಾರವನ್ನು ಇವತ್ತು ಹೇಳಿದ್ದಾರೆ. ಇಡೀ ರಾಜ್ಯದ ಶಾಸಕರಿಗೆ ಅಪಮಾನ ಆಗಿರುವುದು, ಇದು ಹಕ್ಕುಚ್ಯುತಿಯಾಗಿರತಕ್ಕಂತಹ ವಿಚಾರ. ಕೂಡಲೇ ಈ ವಿಚಾರವನ್ನು ಹಕ್ಕುಬಾಧ್ಯತಾ ಸಮಿತಿಗೆ ವಹಿಸಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅಧ್ಯಕ್ಷರೇ, ಅವರೇ ಹೇಳತಕ್ಕಂತಹ ರೀತಿಯಲ್ಲಿ ನೋಡಿದರೆ ಅದರಲ್ಲಿ ಏನೂ ಹಕ್ಕುಚ್ಯುತಿ ಆಗತಕ್ಕಂತಹ ವಿಚಾರವಿಲ್ಲ. ಬಹುಶಃ ಪಾರ್ಲಿಮೆಂಟ್

ಸದಸ್ಯರು ಏನು ಅಭಿಪ್ರಾಯವನ್ನು ಹೇಳಿದ್ದಾರೆ ಎಂದರೆ ಬೇಗ ಹಣ ಖರ್ಚು ಮಾಡಿ ಅಭಿವೃದ್ಧಿ ಕೆಲಸ ಆಗಲಿ ಎಂದು ಹೇಳಿರಬಹುದು. ಅವರು ಹೇಳಿರುವ ಮಾತು ಆ ರೀತಿ ಇದೆ ಎಂದು ಕಾಣಿಸುತ್ತದೆ. ನೋಟಿಸ್ ಕೊಟ್ಟ ಮೇಲೆ ಆ ನೋಟೀಸ್ ಮೇಲೆ ಚರ್ಚೆ ಮಾಡಬಹುದು. ನೋಟಿಸ್ ಇಲ್ಲದೆ ಪ್ರಿವಿಲೇಜ್‌ಗೆ ಕೊಡಬೇಕೆಂದರೆ ಹೇಗೆ?

ಶ್ರೀ ಕೆ. ಅನ್ನದಾನಿ : ದಯಮಾಡಿ ಮಾನ್ಯ ಸಚಿವರು ಇಂತಹ ಉತ್ತರವನ್ನು ಕೊಡಬಾರದು.

ಅಧ್ಯಕ್ಷರು : ಅನ್ನದಾನಿಯವರೇ, ಶಾಸಕರು ಅವರವರ ಕ್ಷೇತ್ರದಲ್ಲಿ ಕೆಲಸ ಮಾಡಬೇಕು. ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಅಧಿಕಾರ ಲೋಕಸಭಾ ಸದಸ್ಯರಿಗೆ ಇಲ್ಲಿ ಇದೆ?

ಶ್ರೀ ಕೆ. ಅನ್ನದಾನಿ : ಹಾಗಾದರೆ ಅವರು ಈ ರೀತಿಯ ಹೇಳಿಕೆಯನ್ನು ಏಕೆ ಕೊಟ್ಟರು ಎಂದು ದಯಮಾಡಿ ಸದನದಲ್ಲಿ ಹೇಳಬೇಕು.

ಶ್ರೀ ಹೆಚ್.ಸಿ. ಬಾಲಕೃಷ್ಣ : ದಯಮಾಡಿ ಇದಕ್ಕೆ ಉತ್ತರ ಕೊಡಿಸಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಬೇಕು.

ಅಧ್ಯಕ್ಷರು : ಇದರಲ್ಲಿ ಏನೂ ಅರ್ಥ ಇಲ್ಲ. ಉಪ್ಪು ಇಲ್ಲ, ಹುಳಿ ಇಲ್ಲ. ಇದರಿಂದ ಸದನದ ಸಮಯವನ್ನು ಹಾಳು ಮಾಡುವುದು ಬೇಡ.

ಶ್ರೀ ಕೆ. ಅನ್ನದಾನಿ : ಶಾಸಕರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವರಿಗೆ ಸರ್ಕಾರ ಅಧಿಕಾರ ನೀಡಿದೆಯಾ?

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ನಿಯಮಾನುಸಾರ ಅವರು ಏನು ನೋಟಿಸ್ ಕೊಡಬೇಕೋ ಆ ಪ್ರಕಾರ ತಮಗೆ ಅವರು ಚರ್ಚೆಗೆ ಈ ವಿಷಯ ತೆಗೆದುಕೊಳ್ಳಿ ಎಂದು ನೋಟಿಸ್ ಕೊಡಲಿ. ಆದರೆ ಈ ಸಂದರ್ಭದಲ್ಲಿ ಯಾವ ವಿಚಾರವನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ ಅದರ ಬಗ್ಗೆ ನಿರ್ಣಯ ಹಂತ ಕೂಡ ಬರುವುದಕ್ಕೆ ಆಗುವುದಿಲ್ಲ. ಆದುದರಿಂದ ಮಾನ್ಯ ಸದಸ್ಯರು ನೋಟಿಸ್ ಕೊಟ್ಟಾಗ ಅದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಕೆ. ಅನ್ನದಾನಿ : ಮಾನ್ಯ ಅಧ್ಯಕ್ಷರೆ, ಶಾಸಕರ ಅನುದಾನದಲ್ಲಿ ಬರತಕ್ಕಂಥ ಅಭಿವೃದ್ಧಿ ಕಾರ್ಯಗಳನ್ನು ಸರಿಯಾಗಿ ಮಾಡದಿದ್ದರೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅವರು ಶಾಸಕರಿಗೆ ಈ ರೀತಿಯ ಮಾತನ್ನು ಬಳಸಬಹುದೆ ಎನ್ನತಕ್ಕಂಥದ್ದರ ಬಗ್ಗೆ ದಯಮಾಡಿ ಈ ಸದನದಲ್ಲಿ ಮಾನ್ಯ ಸಚಿವರು ಹೇಳಬೇಕು. ನಮಗೆ ಅಂದರೆ ಶಾಸಕರಿಗೆ ಅಪಮಾನ ಆಗಿದೆ. ಆದುದರಿಂದ ಈ ಶಾಸನ ಸಭೆಯಲ್ಲಿ ಹಕ್ಕುಚ್ಯುತಿಯನ್ನು ನಾವು ಮಂಡನೆ ಮಾಡುತ್ತಿದ್ದೇವೆ. ಆದುದರಿಂದ ದಯಮಾಡಿ ತಾವು ಇದನ್ನು ಹಕ್ಕುಬಾಧ್ಯತಾ

ಸಮಿತಿಗೆ ವಹಿಸಬೇಕೆಂದು ತಮ್ಮಲ್ಲಿ ಮನವಿಯನ್ನು ಮಾಡುತ್ತೇನೆ. ಏಕೆಂದರೆ ಅವರು ಅವರ ಅನುದಾನದ ಅಡಿಯಲ್ಲಿ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡದೇ ಇದ್ದರೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಅವರು ಹೇಳಿಲ್ಲ. ಶಾಸಕರ ಅನುದಾನದ ಅಡಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಸರಿಯಾಗಿ ಮಾಡದಿದ್ದರೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಮಾನ್ಯ ಸಚಿವರು ದಯಮಾಡಿ ಈ ಬಗ್ಗೆ ಸದನದಲ್ಲಿ ಉತ್ತರ ಹೇಳಬೇಕು.

ಈ) ಹೊಸದಾಗಿ ಆಯ್ಕೆಯಾದ ಸದಸ್ಯರಿಗೆ ಓರಿಯೆಂಟೇಶನ್ ಟ್ರೈನಿಂಗ್ ಕೊಡುವ ಬಗ್ಗೆ

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ತಮ್ಮ ಆದೇಶದಂತೆ ಗಮನ ಸೆಳೆಯುವ ಸೂಚನೆಯನ್ನು ಪ್ರಸ್ತಾಪ ಮಾಡುತ್ತೇನೆ. ಆದರೆ ಈಗ ಇಲ್ಲಿ ಸಂಸದೀಯ ವ್ಯವಹಾರಗಳ ಸಚಿವರು ಇಲ್ಲಿ ಇದ್ದಾರೆ. ಈ ಕೂಡಲೇ ಸಚಿವರು ಸದನಕ್ಕೆ ಹೊಸದಾಗಿ ಆಯ್ಕೆಯಾಗಿ ಬಂದಿರುವ ಶಾಸಕರಿಗೆ ಓರಿಯೆಂಟೇಶನ್ ಟ್ರೈನಿಂಗ್ ಕೊಡದೇ ಹೋದರೆ, ನಿಯಮಾವಳಿಗಳ ಬಗ್ಗೆ ಅವರಿಗೆ ತಿಳುವಳಿಕೆ ಕೊಡದೇ ಹೋದರೆ ನಮಗೆ ಬಹಳ ಕಷ್ಟವಾಗುತ್ತದೆ. ಆದಕಾರಣ ಸಂಸದೀಯ ವ್ಯವಹಾರಗಳ ಸಚಿವರು ಈ ಕಡೆಗೆ ತಕ್ಷಣ ಗಮನ ಹರಿಸಬೇಕು. ಏಕೆಂದರೆ ಪಾಪ ಅವರು ಹೊಸ ಶಾಸಕರಿದ್ದಾರೆ, ಅವರಿಗೆ ನಿಯಮಾವಳಿಗಳ ಬಗ್ಗೆ ಪರಿಷಯ ಇಲ್ಲ, ಅವರಿಗೊಂದು ಆತಂಕ ಇರುತ್ತದೆ, ಹೇಳಬೇಕು ಎನ್ನತಕ್ಕಂಥ ತವಕ ಇರುತ್ತದೆ. ತರಬೇತಿ ಕೊಡುವುದು ತಮ್ಮ ಜವಾಬ್ದಾರಿ ತಾವು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಕಡೇಪಕ್ಷ ಸಾಯಂಕಾಲದ ಸಮಯದಲ್ಲಾದರೂ ಹೊಸ ಶಾಸಕರಿಗೆ ಒಂದೊಂದು ಗಂಟೆ ಕೂರಿಸಿಕೊಂಡು ನಿಯಮಾವಳಿಗಳ ಬಗ್ಗೆ ತಿಳುವಳಿಕೆ ಕೊಡಬೇಕು. ಪಾಪ ನೋಡಿ ಅವರು ಪ್ರಿವಿಲೇಜ್ ಮೂವ್ ಮಾಡುತ್ತೇವೆ ಎಂದು ಹೇಳುತ್ತಾರೆ. ಪ್ರಿವಿಲೇಜ್‌ಗೆ ನೋಟಿಸ್ ಹೇಗೆ ಕೊಡಬೇಕು, ಪ್ರಿವಿಲೇಜ್ ವಿಚಾರವನ್ನು ಹೇಗೆ ಪ್ರಸ್ತಾಪ ಮಾಡಬೇಕು ಎಂಬ ಬಗ್ಗೆ ಅವರಿಗೆ ಅನುಭವ ಇಲ್ಲ. ನೀವು ಉದ್ವೇಗಕ್ಕೆ ಒಳಗಾಗುತ್ತೀರಿ. ಸಮಯ ಹೋಗುತ್ತದೆ ಎಂದು ಹೇಳುತ್ತೀರಿ, ಉತ್ತರ ಹೇಳುವುದಕ್ಕೆ ಹೇಳುತ್ತೀರಿ. ಪತ್ರಿಕಾ ಹೇಳಿಕೆಗಳನ್ನು ಆಧರಿಸಿ ಇಲ್ಲಿ ನಾವು ಚರ್ಚೆಯನ್ನೇ ಮಾಡುವುದಕ್ಕೆ ಬರುವುದಿಲ್ಲ. ಬಹಳ ಕಷ್ಟವಾಗುತ್ತದೆ. ಆದುದರಿಂದ ತಾವು ದಯಮಾಡಿ ಕಡೇಪಕ್ಷ ಸಾಯಂಕಾಲ ಸಮಯದಲ್ಲಿ ಒಂದೊಂದು ಗಂಟೆಯಂತೆ ಒಂದೊಂದು ಬ್ಯಾಚ್ ಕರೆದು ಹೊಸ ಶಾಸಕರು ಯಾರಿದ್ದಾರೆ ಅವರಿಗೆ ಒಂದು ವಾರದೊಳಗೆ ಸ್ವಲ್ಪ ಪ್ರಯತ್ನ ಮಾಡಿ ಓರಿಯೆಂಟೇಷನ್ ಕಾರ್ಯಕ್ರಮ ಹಾಕಿಕೊಂಡು ತರಬೇತಿ ಕೊಟ್ಟರೆ ಅನುಕೂಲವಾಗುತ್ತದೆ. ಈಗ ನಾನು ನನ್ನ ಕ್ಷೇತ್ರದ ವಿಷಯಕ್ಕೆ ಬರುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೊಸಬರು ಇರಬಹುದು. ಅವರಿಗೆ ನಿಯಮಾವಳಿ ಸಧ್ಯಕ್ಕೆ ಗೊತ್ತಿಲ್ಲದಿರಬಹುದು. ಆದರೆ ಅವರು ಎತ್ತಿದ ವಿಚಾರದ ಬಗ್ಗೆ ಏನು ಮಾಡಬೇಕು ಎಂಬುದನ್ನು ಸರ್ಕಾರದವರು ಹೇಳಬೇಕಲ್ಲವೇ? ಏನು ಮಾಡದೇ ಸುಮ್ಮನೆ ಆಗಿಬಿಟ್ಟರೆ ಹೇಗೆ? ಈ ವಿಚಾರವನ್ನು ಇಂಥ ನಿಯಮದಡಿಯಲ್ಲಿ ಚರ್ಚೆಗೆ ಕಳುಹಿಸಿಕೊಡಿ ಎಂಬುದನ್ನಾದರೂ ಹೇಳಬೇಕಲ್ಲವೆ? ಶಾಸಕರು ಹೊಸಬರು ಇರಬಹುದು, ಆದರೆ ಅವರು ತಮ್ಮ ದುಗುಡವನ್ನು ಸದನದಲ್ಲಿ ವ್ಯಕ್ತಪಡಿಸಿದ್ದಾರೆ. ಅವರು ಹೇಳಿರುವುದನ್ನು ಸದನ ಬಹಳ ಲಘುವಾಗಿ ತೆಗೆದುಕೊಂಡರೆ ಶಾಸಕರು ಯಾವ ರೀತಿ ಕೆಲಸ ಮಾಡುವುಕ್ಕಾಗುತ್ತದೆ ಹೇಳಿ. ಆದುದರಿಂದ ಸರ್ಕಾರದವರು ಇದರ ಬಗ್ಗೆ ಹೇಳಬೇಕು.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರಾದ ಅನ್ನದಾನಿಯವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ನೋಟಿಸ್‌ನ್ನು ಕೊಟ್ಟಿದ್ದರು. ಆ ನೋಟಿಸಿನ ಕೆಲವು ವಿಚಾರಗಳನ್ನು ನಾವು ಇಲ್ಲಿ ಗಮನಿಸಿದ್ದೇವೆ. ತಾವು ಶಾಸಕರುಗಳಿಗೆ ಅಪಮಾನವಾಗಿದೆ ಎನ್ನುವುದರ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ತಾವು ಹೇಳಿರತಕ್ಕಂಥ ಕೆಲವು ಮಾಹಿತಿಗಳನ್ನು ತರಿಸಿ ನೋಡೋಣ. ಆದರೆ ಅದಲ್ಲಕ್ಕಿಂತ ಹೆಚ್ಚಾಗಿ ಮೇಲ್ನೋಟಕ್ಕೆ ಕಂಡಂತೆ ಇದನ್ನು ಯಾವುದೇ ರೀತಿಯಾಗಿ ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸತಕ್ಕಂಥದ್ದಾಗಲೀ ಅಥವಾ ಆ ಬಗ್ಗೆ ಈ ಸಂದರ್ಭದಲ್ಲಿ ಚರ್ಚೆ ಮಾಡುವಂಥದ್ದಾಗಲೀ ಸೂಕ್ತವಾಗುವುದಿಲ್ಲ. ಆದರೆ ಸನ್ಮಾನ್ಯ ಹಿರಿಯ ಸದಸ್ಯರಾದ ರಮೇಶ್‌ಕುಮಾರ್‌ರವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದು ನಮಗೆ ಹಾಗೂ ಅದರಲ್ಲೂ ವಿಶೇಷವಾಗಿ ನನಗೆ ಹೇಳಿದ್ದು ಎಂದು ತಿಳಿದುಕೊಳ್ಳುತ್ತೇನೆ. ಅವರು ನನಗೆ ಮಾರ್ಗದರ್ಶನ ಮಾಡಿದ್ದಾರೆ. ಬಹುಶ: ಈ ಅಧಿವೇಶನ 4ನೇ ತಾರೀಕು ಮುಗಿಯಬಹುದು. ಇದು ಮುಗಿದ ಮೇಲೆ ಆದಷ್ಟು ಶೀಘ್ರದಲ್ಲಿ ಎರಡು ದಿವಸ ಅಥವಾ ಮೂರು ದಿವಸಗಳ ಮಟ್ಟಿಗೆ ಓರಿಯೆಂಟೇಷನ್ ಕೋರ್ಸ್ ಬಗ್ಗೆ ಏರ್ಪಾಡನ್ನು ಮಾಡುತ್ತೇನೆ.

4. ಗಮನ ಸೆಳೆಯುವ ಸೂಚನೆಗಳು

6) ಶ್ರೀನಿವಾಸಪುರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಪದವಿ ಕೋರ್ಸ್‌ಗಳ ಕೆಲವು ವಿಭಾಗಗಳನ್ನು ತೆರೆಯುವ ಬಗ್ಗೆ

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ಶ್ರೀನಿವಾಸಪುರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಪದವಿ ಕೋರ್ಸ್‌ಗಳ ಕೆಲವು ವಿಭಾಗಗಳನ್ನು ತೆರೆಯುವ ಬಗ್ಗೆ ಉನ್ನತ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿ ಕೋರಿ, ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

1) ಸರ್ಕಾರಿ ಕಾಲೇಜುಗಳಲ್ಲಿ ಹೊಸ ಕೋರ್ಸು : ಹೊಸ ಕಾಂಬಿನೇಷನ್ : ಹೊಸ ವಿಷಯಗಳನ್ನು ಪ್ರಾರಂಭಿಸಲು ಸ್ಥಳೀಯ ವಿದ್ಯಾರ್ಥಿಗಳ, ಪೋಷಕರು, ಸ್ಥಳೀಯ ಪ್ರತಿನಿಧಿಗಳ ಬೇಡಿಕೆಗಳಿಗನುಗುಣವಾಗಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಗಮನದಲ್ಲಿಟ್ಟುಕೊಂಡು ಸಂಬಂಧಪಟ್ಟ ವಿಶ್ವವಿದ್ಯಾಲಯ ಹಾಗೂ ಕಾಲೇಜು ಶಿಕ್ಷಣ ಆಯುಕ್ತರ ವರದಿಯನ್ನಾಧರಿಸಿ ಪ್ರಸ್ತಾವನೆಗಳನ್ನು ಸರ್ಕಾರವು ಪರಿಶೀಲಿಸುತ್ತದೆ.

2) ಶ್ರೀನಿವಾಸಪುರ ಸರ್ಕಾರಿ ಕಾಲೇಜಲ್ಲಿ ಪ್ರಸ್ತುತ ಬಿ.ಎ. ಮತ್ತು ಬಿ.ಎಸ್ಸಿ. ಕೋರ್ಸುಗಳನ್ನು ನಡೆಸುತ್ತಿದ್ದು, ಬಿ.ಎ. ತರಗತಿಯಲ್ಲಿ (ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ) 600 ವಿದ್ಯಾರ್ಥಿಗಳು ಹಾಗೂ ಬಿ.ಎಸ್ಸಿ ತರಗತಿಯಲ್ಲಿ (ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತವಿಜ್ಞಾನ) 20 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ.

3) ಶ್ರೀನಿವಾಸಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಲ್ಲಿ ಮೈಕ್ರೋ ಬಯೋಲಜಿ, ಸೆರಿಕಲ್ಚರ್, ಕಂಪ್ಯೂಟರ್ ಸೈನ್ಸ್, ಬಯೋಟೆಕ್ನಾಲಜಿ, ಬಿ.ಬಿ.ಎಂ. ಮತ್ತು ಕಾಮರ್ಸ್ ಕೋರ್ಸುಗಳನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ. ಒಂದು ಪಕ್ಷ ಪ್ರಸ್ತಾವನೆ ಸ್ವೀಕೃತವಾದಲ್ಲಿ ಅದನ್ನು ಪರಿಶೀಲಿಸಿ ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡುವುದಿಷ್ಟೆ. ಇದು ಸರ್ಕಾರಿ ಸ್ವಾಮ್ಯದಲ್ಲಿರತಕ್ಕಂಥ ಕಾಲೇಜು. ಶ್ರೀನಿವಾಸಪುರ ಈ ರಾಜ್ಯದ ಗಡಿ ಅಂಚಿನಲ್ಲಿ ಇರತಕ್ಕಂಥ ಪ್ರದೇಶ. ಈ ಕಾಲೇಜಿಗೆ ಪ್ರವೇಶ ಬಯಸಿ ಬರತಕ್ಕಂಥ ವಿದ್ಯಾರ್ಥಿಗಳು ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಂದ ಬರುವವರೇ ಆಗಿರುತ್ತಾರೆ. 100ಕ್ಕೆ 100ರಷ್ಟು ವಿದ್ಯಾರ್ಥಿಗಳೂ ಅಂಥವರುಗಳೇ ಇರುತ್ತಾರೆ. ಸರ್ಕಾರಕ್ಕೆ ಪ್ರಸ್ತಾವನೆಯು ಬಂದಿಲ್ಲ ಎನ್ನತಕ್ಕಂಥ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. ಈಗ ಇರತಕ್ಕಂಥ ಕೋರ್ಸ್‌ಗಳು ಏನಿವೆ ಅವು ವಿದ್ಯಾರ್ಥಿಗಳು ತಮ್ಮ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುವುದಕ್ಕೆ ಇವೊತ್ತಿನ ಪರಿಸ್ಥಿತಿಯಲ್ಲಿ ಈ ಕೋರ್ಸ್‌ಗಳು ಹೆಚ್ಚು ಸಹಾಯವಾಗುವುದಿಲ್ಲ. ಆದುದರಿಂದ ನಾನು ಪ್ರಸ್ತಾಪ ಮಾಡಿರುವ ವಿಭಾಗಗಳನ್ನು ಶ್ರೀನಿವಾಸಪುರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾರಂಭ ಮಾಡಬೇಕು. ನಾನು ಆ ಕಾಲೇಜಿನ ಪ್ರಾಂಶುಪಾಲರಲ್ಲಿ ವಿನಂತಿ ಮಾಡಿಕೊಂಡು ನಿಮಗೆ ಪ್ರಸ್ತಾವನೆಯನ್ನು ಕಳುಹಿಸುವುದಕ್ಕೆ ಹೇಳುತ್ತೇನೆ. ತಾವು ದಯಮಾಡಿ ನನಗೊಂದು ಆಶ್ವಾಸನೆಯನ್ನು ಕೊಡಿ. ಅಲ್ಲಿರತಕ್ಕಂಥ ಮಕ್ಕಳ ಹಿತದೃಷ್ಟಿಯಿಂದ ಬರುವ ಶೈಕ್ಷಣಿಕ ವರ್ಷದಿಂದ ಬಯೋಟೆಕ್ನಾಲಜಿ, ಮೈಕ್ರೋಬಯಾಲಜಿ, ಇದರ ಜೊತೆಗೆ ಬಿ.ಬಿ.ಎಂ. ಮತ್ತು ಕಾಮರ್ಸ್ ಕನಿಷ್ಠ ಈ ನಾಲ್ಕು ಕೋರ್ಸ್‌ಗಳನ್ನು ಪ್ರಾರಂಭ ಮಾಡುತ್ತೇವೆ ಎನ್ನತಕ್ಕಂಥ

ಮಾತನ್ನು ತಾವು ಸದನದಲ್ಲಿ ಹೇಳಿದರೆ ಆ ಗ್ರಾಮೀಣ ಭಾಗದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿರತಕ್ಕಂಥ ಕುಟುಂಬದ ಬಡ ಮಕ್ಕಳಿಗೆ ಬಹಳ ದೊಡ್ಡ ಉಪಕಾರ ಮಾಡಿದಂತಾಗುತ್ತದೆಂದು ಹೇಳಿ ತಮ್ಮಲ್ಲಿ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಅವರ ಬೇಡಿಕೆಯ ಮನವಿ ಏನಿದೆಯೋ ಅದನ್ನು ಗಮನದಲ್ಲಿಟ್ಟುಕೊಂಡು ಹೇಳಿದ್ದೇನೆ. ನಾನು ಅಲ್ಲಿಗೆ ನಮ್ಮ ಆಯುಕ್ತರು ಹಾಗೂ ವಿಶ್ವವಿದ್ಯಾಲಯದ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಕಳುಹಿಸುತ್ತೇನೆ. ಅವರ ರಿಪೋರ್ಟ್ ತೆಗೆದುಕೊಂಡು ಮುಂದೆ ಕ್ರಮ ತೆಗೆದುಕೊಳ್ಳುತ್ತೇನೆ. ಈ ಕಾಲೇಜು ಸುಮಾರು 20 ವರ್ಷದ ಹಿಂದೆಯೇ ಪ್ರಾರಂಭವಾಗಿದೆ. ಅಲ್ಲಿ ಒಟ್ಟು 5 ಕ್ಲಾಸ್ ರೂಂಗಳು ಇವೆ. ನಾನ್ ಟೀಚಿಂಗ್ ಸ್ಟಾಫ್ 4 ಜನ ಇದ್ದಾರೆ, ಟೀಚಿಂಗ್ ಸ್ಟಾಫ್ 10 ಜನರು ಇದ್ದಾರೆ. ಅಡಿಶನಲ್ ಕ್ಲಾಸ್ ರೂಂಗಳು ಬೇಕು. ಈಗ ಹೈಯರ್ ಎಜುಕೇಶನ್‌ಗೆ ಸಾಕಷ್ಟು ದುಡ್ಡು ಇಲ್ಲವಾಗಿದೆ. ಈಗ 166 ಸರ್ಕಾರಿ ಕಾಲೇಜುಗಳು ಇವೆ. ಒಟ್ಟು 42 ಕಾಲೇಜುಗಳಿಗೆ ಬಿಲ್ಡಿಂಗ್‌ಗಳು ಇಲ್ಲವಾಗಿದೆ. ಅದಕ್ಕೆ ನಾನು ಒಂದು ಪ್ರಸ್ತಾವನೆಯನ್ನು ಇಟ್ಟುಕೊಂಡು ಹುಡ್ಕೋದಿಂದ ಸಾಲ ತೆಗೆದುಕೊಂಡು ಕಟ್ಟಿಸೋಣ ಎಂದು ಯೋಚನೆ ಮಾಡುತ್ತಿದ್ದೇನೆ. ಅರ್ಧಂಬರ್ಧ ಕೆಲಸವಾಗಿರುವ ಬಿಲ್ಡಿಂಗ್‌ಗಳನ್ನು ಮುಗಿಸಬೇಕಾಗಿದೆ. ಈಗಾಗಲೇ ಈ ನಿಟ್ಟಿನಲ್ಲಿ ಆರು ತಿಂಗಳುಗಳಲ್ಲಿ ಸುಮಾರು 10 ಬಿಲ್ಡಿಂಗ್ ಕೆಲಸಗಳನ್ನು ಮುಗಿಸಲಾಗಿದೆ. ಮಾನ್ಯ ಸದಸ್ಯರ ಬೇಡಿಕೆ ಏನಿದೆ ಅದು ಒಳ್ಳೆಯ ಬೇಡಿಕೆಯೇ ಆಗಿದೆ. ಏಕೆಂದರೆ ಇವೊತ್ತಿನ ದಿವಸ ಗ್ರಾಮಾಂತರ ಪ್ರದೇಶದಲ್ಲಿ ಬಿ.ಎ., ಬಿ.ಎಸ್ಸಿ. ಮಾಡಿದವರಿಗೆ ಕೆಲಸ ಸಿಗುವುದು ಬಹಳ ಕಷ್ಟವಿದೆ. ಆದುದರಿಂದ ಮಾನ್ಯ ಸದಸ್ಯರು ಬಿ.ಬಿ.ಎಂ. ಮತ್ತು ಮೈಕ್ರೋಬಯಾಲಜಿ, ಕಾಮರ್ಸ್ ಹಾಗೂ ಬಯೋಟೆಕ್ನಾಲಜಿಯಂಥ ಹೊಸ ಕೋರ್ಸ್‌ಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಪ್ರಾರಂಭ ಮಾಡಲು ಕೇಳಿದ್ದಾರೆ. ಇಂಥ ಕೋರ್ಸ್‌ಗಳನ್ನು ಇವೊತ್ತಿನ ದಿವಸ ಗ್ರಾಮಾಂತರ ಪ್ರದೇಶದಲ್ಲಿ ಪ್ರಾರಂಭ ಮಾಡುವುದು ಬಹಳ ಒಳ್ಳೆಯದೇ ಆಗಿದೆ. ಇದರ ಬಗ್ಗೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಹಿರಿಯ ಸದಸ್ಯರಾದ ಮಾನ್ಯ ರಮೇಶ್‌ಕುಮಾರ್‌ರವರಿಗೆ ನಾನು ಆಶ್ವಾಸನೆಯನ್ನು ಕೊಡುತ್ತಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಾನು ತಮಗೆ ಏನು ಹೇಳುತ್ತೇನೆಂದರೆ ತಮ್ಮ ಸಂಸದೀಯ ವ್ಯವಹಾರಗಳ ನಡವಳಿಕೆಗಳಲ್ಲಿ ಕೆಲವು ಆಶ್ವಾಸನೆಗಳು ಅವು ಆಶ್ವಾಸನೆಗಳಾಗಿಯೇ ಇವೆ. ನಾನು ಆ ಭರವಸೆಗಳು ಈಡೇರಬೇಕು ಎನ್ನುವ ಉದ್ದೇಶದಿಂದ ತಮ್ಮನ್ನು ಕೇಳಿದ್ದು. ತಾವು ಅತ್ಯಂತ ಜವಾಬ್ದಾರಿಯಿಂದ ಮತ್ತು

ಜಾಣತನದಿಂದ ಪರಿಶೀಲನೆ ಮಾಡುತ್ತೇನೆ ಎಂದು ಹೇಳಿ ಕುಳಿತುಬಿಟ್ಟಿರಿ. ನಾನು ಅದಕ್ಕೆ ತೃಪ್ತಿಯಾಗತಕ್ಕಂಥವನಲ್ಲ. ನಾನು ತಮ್ಮಲ್ಲಿ ಮತ್ತೊಮ್ಮೆ ಕೇಳಿಕೊಳ್ಳುತ್ತಿದ್ದೇನೆ, ಕಟ್ಟಡದ ಒಂದೇ ವಿಚಾರ ನಿಮಗೆ ತೊಂದರೆಯಾಗುವುದಾದರೆ ಸ್ಥಳೀಯ ಜನರ ಹತ್ತಿರ ಹೋಗಿ ದಾನ, ಧರ್ಮ ಕೇಳಿ, ಭಿಕ್ಷೆಯನ್ನಾದರೂ ಬೇಡುತ್ತೇವೆ, ನಾವೂ ನಿಮಗೆ ಸಹಕಾರ ಕೊಡುತ್ತೇವೆ, ಶೆಡ್ಡೋ ಅಥವಾ ಏನನ್ನಾದರೂ ಹಾಕಿಕೊಳ್ಳುತ್ತೇವೆ, ಏಕೆಂದರೆ ಇಂದು ನಮ್ಮ ಮಕ್ಕಳಿಗೆ ಈ ಕೋರ್ಸ್‌ಗಳ ಅಗತ್ಯವಿದೆ. ಏಕೆಂದರೆ ಅವರುಗಳಿಗೆ ಖಾಸಗಿ ಕಾಲೇಜುಗಳಿಗೆ ಹೋಗಿ ಡೊನೇಷನ್ ಕೊಟ್ಟು ಇಂಥ ಕೋರ್ಸ್‌ಗಳನ್ನು ಓದಲು ಆರ್ಥಿಕ ಶಕ್ತಿ ಇಲ್ಲವಾಗಿದೆ. ನಾನು ಸದನದ ಒಳಗೆ, ಹೊರಗೆ ಸರ್ಕಾರಿ ಶಿಕ್ಷಣ ಸಂಸ್ಥೆಗಳ ಪರವಾಗಿ ಬಹಳ ಬಲವಾದಂಥ ನಿಲುವನ್ನು ತಾಳಿರತಕ್ಕಂಥವನು. ಹೀಗಿರುವಾಗ ನಮ್ಮ ಬೇಡಿಕೆಯನ್ನೂ ನೀವು ಈಡೇರಿಸದೇ ಹೋದರೆ ನಾವು ಜನರ ಎದುರಿಗೆ ಒಂದು ರೀತಿಯಲ್ಲಿ ಅಪಹಾಸ್ಯಕ್ಕೆ ಗುರಿಯಾಗುತ್ತೇವೆ. ಪ್ರೈವೇಟ್‌ನವರನ್ನು ವಿರೋಧ ಮಾಡುತ್ತೇವೆ, ಸರ್ಕಾರದವರು ಸೌಲಭ್ಯ ಕೊಡುವುದಿಲ್ಲ, ಹೀಗಾದರೆ ಮಕ್ಕಳಲ್ಲಿ ಹೋಗಬೇಕು? ದಯಮಾಡಿ ನಮ್ಮ ರಕ್ಷಣೆಗೆ ನೀವು ಬರಬೇಕು. ನೀವು ಧೈರ್ಯವಾಗಿ ಮುಂದಿನ ಶೈಕ್ಷಣಿಕ ವರ್ಷದಿಂದ ಈ ಕೋರ್ಸ್‌ಗಳನ್ನು ಅಲ್ಲಿಗೆ ಕೊಡುತ್ತೇನೆ ಎಂದು ನಮಗೆ ಹೇಳಬೇಕು. ಈ ವಿಷಯದಲ್ಲಿ ನಿಮ್ಮ ಕಷ್ಟ ಹಂಚಿಕೊಳ್ಳುವುದಕ್ಕೆ ನಿಮ್ಮ ಜೊತೆಯಲ್ಲಿ ಇರುವುದಕ್ಕೆ ನಾವು ತಯಾರಿದ್ದೇವೆ. ನೀವು ಬೇಕಾದರೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಹೇಳಿ.

(ಶ್ರೀ ಅರಗ ಜ್ಞಾನೇಂದ್ರ ಅವರು ಪೀಠವನ್ನಲಂಕರಿಸಿದರು)

ಶ್ರೀ ಡಿ. ಮಂಜುನಾಥ್ : ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವ ಅವಶ್ಯಕತೆ ಇಲ್ಲ. ಏಕೆಂದರೆ ಬಿಲ್ಡಿಂಗ್‌ಗೆ ದುಡ್ಡಿಲ್ಲ. ಈಗ ಏನಾಗಿದೆ ಎಂದರೆ ಮಾನ್ಯ ಸದಸ್ಯರು ನಿಮಗೆ ರೂಮುಗಳನ್ನು ಬೇಕಾದರೆ ಕೊಡಿಸುತ್ತೇವೆ ಎಂಬ ಆಶ್ವಾಸನೆ ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಈ ವರ್ಷ ಬಿ.ಕಾಂ ಮತ್ತು ಬಿ.ಬಿ.ಎಂ. ಬಿಟ್ಟು ಬಯೋಟೆಕ್ನಾಲಜಿ, ಕಂಪ್ಯೂಟರ್ ಸೈನ್ಸ್ ಇವೆಲ್ಲಕ್ಕೂ ಸ್ವಲ್ಪ ಹಣ ಜಾಸ್ತಿ ಬೇಕಾಗುತ್ತದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಹೀಗೆ ಮಾಡಿದರೆ ಹೇಗೆ? ಬಿ.ಬಿ.ಎಂ. ಅಥವಾ ಬಿ.ಕಾಂಗೆ ರೂ ಒದಗಿಸುತ್ತೇವೆ. ಬಯೋಟೆಕ್ನಾಲಜಿ ಅಥವಾ ಮೈಕ್ರೋ ಬಯಾಲಾಜಿ ಇವೆರಡಲ್ಲಿ ಯಾವುದಾದರೂ ಒಂದು ಮಾಡಿ. ಆಗಬಹುದಾ?

ಶ್ರೀ ಡಿ. ಮಂಜುನಾಥ್ : ಆಗಬಹುದು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಧನ್ಯವಾದಗಳು.

ಆ) ಕೆ.ಜಿ.ಎಫ್‌ನಲ್ಲಿರುವ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸ್ಟಾಂಪ್ ಪೇಪರ್ ಮಾರಾಟ ಮಾಡುವ ವಿಚಾರ ಕುರಿತು.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಅಧ್ಯಕ್ಷರೆ, ಕೆ.ಜಿ.ಎಫ್. ನಲ್ಲಿರುವ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸ್ಟಾಂಪ್ ಪೇಪರ್ ಮಾರಾಟ ಮಾಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಪರ್ಯಾಯ ವ್ಯವಸ್ಥೆಯನ್ನು ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ. ಅವರು ಹೇಳಿದ ಹಾಗೆ ಬಿಳಿ ಹಾಳೆ ಅಥವಾ ದಸ್ತಾವೇಜು ಶೀಟುಗಳ ಮೇಲೆ ಚರಸ್ಥಿರ ಆಸ್ತಿಗಳನ್ನು ನೊಂದಾಯಿಸಿಕೊಳ್ಳಬಹುದಾಗಿದೆ. ಈಗ ಅದರ ಬಗ್ಗೆ ನಾನು ಒಂದು ಹೇಳಿಕೆಯನ್ನು ಓದ ಬಯಸುತ್ತೇನೆ.

ದಿನಾಂಕ 1-4-2003 ರಿಂದ ಛಾಪಾ ಕಾಗದ ಬಳಕೆಯನ್ನು ನಿಲ್ಲಿಸಲಾಗಿದೆ.

ಪರ್ಯಾಯ ವ್ಯವಸ್ಥೆಯಾಗಿ ನೋಂದಣಿಗೆ ಸಂಬಂಧಿಸಿದಂತೆ ಬಿಳಿ ಹಾಳೆ ಅಥವಾ ದಸ್ತಾವೇಜು ಷೀಟುಗಳ ಮೇಲೆ ಚರ/ಸ್ಥಿರಾಸ್ತಿಗಳನ್ನು ನೋಂದಾಯಿಸಿ ಕೊಳ್ಳಬಹುದಾಗಿದೆ. ಆದ್ದರಿಂದ, ನೋಂದಣಿ ಮಾಡಿಸಿಕೊಳ್ಳುವ ದಸ್ತಾವೇಜುಗಳಿಗೆ ಈಗ ಛಾಪಾ ಕಾಗದಗಳ ಅವಶ್ಯಕತೆ ಇರುವುದಿಲ್ಲ, ನೋಂದಣಿಗೆ ಸಂಬಂಧಿಸಿದ ದಸ್ತಾವೇಜುಗಳಿಗೆ ಯಾವುದೇ ರಾಷ್ಟ್ರೀಕೃತ ಹಾಗೂ ಷೆಡ್ಯೂಲ್ ಬ್ಯಾಂಕಿನಲ್ಲಿ ಡಿ.ಡಿ./ ಪೇ ಆರ್ಡರ್ ಮೂಲಕ ಪಾವತಿಸಿ ಉಪ ನೋಂದಣಿ ಕಛೇರಿಯಲ್ಲಿ ಹಾಜರುಪಡಿಸಿ ದಸ್ತಾವೇಜುಗಳನ್ನು ನೋಂದಾಯಿಸಲು ವ್ಯವಸ್ಥೆ ಮಾಡಲಾಗಿದೆ.

ನೋಂದಣಿಗೆ ಐಚ್ಛಿಕವಾಗಿರುವ ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ಒಂದು ಪ್ರಕರಣದಲ್ಲಿ 500/- ರೂಗಳಿಗೆ ಮೀರದ ಡಾಕ್ಯುಮೆಂಟ್ ಷೀಟನ್ನು ಸಾರ್ವಜನಿಕರಿಂದ ಹಣ ಪಾವತಿಸಿಕೊಂಡು State Bank of Mysore, State Bank of India, State Bank of Hyderabad ಬ್ಯಾಂಕುಗಳ ಮೂಲಕ ವಿತರಿಸಲಾಗುತ್ತಿದೆ.

ಕೆ.ಜಿ.ಎಫ್.ನಲ್ಲಿ State Bank of Mysoreನ ಶಾಖೆಯಿದ್ದು, ಸದರಿ ಶಾಖೆಯಿಂದ ನೋಂದಣಿಗೆ ಐಚ್ಛಿಕವಾಗಿರುವ ದಸ್ತಾವೇಜುಗಳಿಗೆ ಬೇಕಾಗುವ ಡಾಕ್ಯುಮೆಂಟ್ ಷೀಟುಗಳನ್ನು ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗುವುದು.

ಶ್ರೀ ಎಸ್. ರಾಜೇಂದ್ರನ್ : ಸಂತೋಷ, ಹತ್ತು ರೂಪಾಯಿ ಸ್ಟಾಂಪ್ ಪೇಪರ್ ಬೇಕೆಂದರೆ ನಮ್ಮ ಬಂಗಾರು ಪೇಟೆಯಿಂದ ಮೈಸೂರು ಬ್ಯಾಂಕ್‌ಗೆ ಹೋಗಿ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ನಾವು ಅಲ್ಲಿಗೆ ಆಟೋದಲ್ಲಿ ಹೋಗಿ ಬರಲು 50 ರೂಪಾಯಿ ಖರ್ಚು ಮಾಡಬೇಕು. ಕೆ.ಜಿ.ಎಫ್. ನಿಂದ ಬಂಗಾರುಪೇಟೆಗೆ ಹಾಗೂ ಬಂಗಾರು ಪೇಟೆಯಿಂದ ಕೆ.ಜಿ.ಎಫ್. ಗೆ ಹಾಳೆ

ತೆಗೆದುಕೊಂಡು ಹೋಗುವುದಕ್ಕೆ ಬರಬೇಕು; ಅದರಿಂದ ನಮಗೆ ಬಹಳ ಖರ್ಚಾಗುತ್ತದೆ. ಈಗಾಗಲೇ ತಾವು ಅದರ ಬಗ್ಗೆ ವ್ಯವಸ್ಥೆ ಮಾಡುತ್ತೇನೆಂದು ಹೇಳಿದ್ದೀರಿ. ಕೆ.ಜಿ.ಎಫ್. ನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯಿಂದ ನೀವು ಸ್ಟಾಂಪ್ ಪೇಪರ್ ಪಡೆಯುವ ವ್ಯವಸ್ಥೆ ಮಾಡಿದರೆ ನಮಗೆ ಬಹಳ ಸಂತೋಷವಾಗುತ್ತದೆ. ಅದರಿಂದ ನಮ್ಮ ಜನರಿಗೆ ಅನುಕೂಲವಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಅವರ ಸಲಹೆ ಸೂಕ್ತವಾದುದು. ಈಗಾಗಲೇ ಅಲ್ಲಿನ ಶಾಖೆಯವರಿಗೆ ತಾವು ಪ್ರಾರಂಭ ಮಾಡಿ ಎಂದು ತಿಳಿಸಿದ್ದೇವೆ. ಅದರ ಜೊತೆಗೆ ಮಾನ್ಯ ಸದಸ್ಯರ ಅವಗಾಹನೆಗೆ ತರುತ್ತಿದ್ದೇನೆ, ತಾವು ಬಿಳಿ ಹಾಳಿ ಮೇಲೆ ಅಥವಾ ದಸ್ತಾವೇಜು ಶೀಟುಗಳ ಮೇಲೆ ಕೂಡ ನೋಂದಾಯಿಸಬಹುದು. ಈಗ ಛಾಪಾ ಕಾಗದದ ಮೇಲೆ ಮಾಡಬೇಕೆಂದು ಇಲ್ಲ. ಆದುದರಿಂದ ಅಲ್ಲಿರತಕ್ಕಂಥ ಜನಗಳಿಗೆ ಈ ಸ್ಟಾಂಪ್ ಪೇಪರ್ ಮೇಲೆ ಮಾಡಬೇಕೆಂದು ಹಳೇ ಕಾಲದ ಸಂಪ್ರದಾಯ ಇರುವುದರಿಂದ ಆ ರೀತಿ ಭಾವಿಸಿಕೊಳ್ಳುತ್ತಾರೆ. ಆದರೆ ಛಾಪಾ ಕಾಗದದ ಅವ್ಯವಹಾರ ಆದ ನಂತರ ಕಾನೂನಿಗೆ ತಿದ್ದುಪಡಿಯಾಗಿದೆ. ಬಿಳಿ ಹಾಳೆಯಲ್ಲಿ ಕೂಡ ತಾವು ನೋಂದಾವಣೆ ಮಾಡಬಹುದು. ಅಥವಾ ದಸ್ತಾವೇಜು ಶೀಟು ದಪ್ಪವಾಗಿರುತ್ತದೆ, ಅದು ಹಾಳಾಗದೆ ಇರುತ್ತದೆ. ಆ ಶೀಟ್‌ನಲ್ಲಿ ಕೂಡ ತಾವು ಮಾಡಿಬಹುದು. ಆದರೆ ತಾವು ಹೇಳಿದ ಹಾಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕೆಜಿಎಫ್ ಶಾಖೆಗೆ ಈ ಅಧಿಕಾರವನ್ನು ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತೇವೆ.

Sri S. Rajendran : Immediately you must consider ಏಕೆಂದರೆ court ಕಾಂಪ್ಲೆಕ್ಸ್ ಇದೆ; ಎಜುಕೇಷನ್ ಇನ್ಸಿಟಿಟ್ಯೂಷನ್ ಇದೆ. ಅವರು ಏನು ಮಾಡುತ್ತಾರೆ ಎಂದರೆ ಪೇ ಆರ್ಡರ್ ಇಲ್ಲ, 10 ರೂಪಾಯಿಯ ಸ್ಟಾಂಪ್ ಪೇಪರ್ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. Kindly instruct by a very strong notification to the State Bank of Mysore to issue that. Thank you sir.

ಇ) ಗಂಗಾ ಕಲ್ಯಾಣ ಮತ್ತು ವೈಯುಕ್ತಿಕ ಕೊಳವೆ ಬಾವಿ ಯೋಜನೆಗಳ ಅನುಷ್ಠಾನದ ಬಗ್ಗೆ

ಶ್ರೀ ಎ.ಎಸ್. ಬಸವರಾಜು (ಅರಸೀಕೆರೆ) : ಮಾನ್ಯ ಅಧ್ಯಕ್ಷರೆ, ಗಂಗಾ ಕಲ್ಯಾಣ ಮತ್ತು ವೈಯುಕ್ತಿಕ ಕೊಳವೆ ಬಾವಿ ಯೋಜನೆಗಳ ಅನುಷ್ಠಾನದ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಡಾ: ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು 1975ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು ಪ.ಜಾತಿ ಮತ್ತು ಪ.ವರ್ಗದ ಬಡಜನಗಳ

ಸರ್ವತೋಮುಖ ಅಭಿವೃದ್ಧಿಗಾಗಿ ಕರ್ನಾಟಕದ ಒಂದು ಅಂಗಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ.

ನಿಗಮವು ಪ.ಜಾತಿ / ಪರಿಶಿಷ್ಟ ವರ್ಗದ ಬಡಜನರನ್ನು ಬಡತನ ರೇಖೆಯಿಂದ ಮೇಲೆ ತರಲು ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಈ ಪೈಕಿ ಕನಿಷ್ಟ ಎರಡು ಎಕರೆ ಖುಷ್ಕಿ ಜಮೀನು ಹೊಂದಿರುವ ಸಣ್ಣ ರೈತರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು 1984ರಲ್ಲಿ ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು. ಈ ಯೋಜನೆಯಲ್ಲಿ ಪ್ರತಿ ಫಲಾನುಭವಿಗೆ (ಒಂದು ಕೊಳವೆ ಬಾವಿ) ಗರಿಷ್ಟ ರೂ. 65,000 ಸಹಾಯಧನದೊಂದಿಗೆ ಕೊಳವೆ ಬಾವಿ ಕೊರೆಯಿಸಿ ಪಂಪ್ ಅಳವಡಿಸಿ, ವಿದ್ಯುತ್ ಸಂಪರ್ಕವನ್ನು ನೀಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಮೇಲ್ಕಂಡ ಯೋಜನೆಯಿಂದ ಕನಿಷ್ಟ 2 ಎಕರೆ ಖುಷ್ಕಿ ಜಮೀನು ಹೊಂದಿರುವ ಸಣ್ಣ ರೈತರಿಗೆ ಮಾತ್ರ ನೀರಾವರಿ ಸೌಲಭ್ಯವನ್ನು ಒದಗಿಸುವುದರಿಂದ ಅತಿ ಸಣ್ಣ ರೈತರಿಗೆ ಇದರಿಂದ ಯಾವುದೇ ಪ್ರಯೋಜನ ದೊರಕಿದಂತಾಗಿಲ್ಲ. ಆದಕಾರಣ 1995-96 ರಿಂದ ಅತಿ ಸಣ್ಣ ರೈತರಿಗೂ ನೀರಾವರಿ ಸೌಲಭ್ಯವನ್ನು ಒದಗಿಸುವ ಸಲುವಾಗಿ ಗಂಗಾ ಕಲ್ಯಾಣ ಯೋಜನೆಯನ್ನು ಹಮ್ಮಿಕೊಳ್ಳಲಾಯಿತು. ಈ ಯೋಜನೆಯಲ್ಲಿ ಒಂದೇ ಕಡೆ ಕನಿಷ್ಟ 8 ಎಕರೆ ಖುಷ್ಕಿ ಜಮೀನು ಹೊಂದಿರುವ ಕನಿಷ್ಟ 3 ಜನ ಅತಿ ಸಣ್ಣ ರೈತರಿಗೆ ಶೇ. 100 ಅಂದರೆ ರೂ. 2.53 ಲಕ್ಷ ಸಹಾಯಧನ ಹಾಗೂ ಕನಿಷ್ಟ 15 ಎಕರೆ ಖುಷ್ಕಿ ಜಮೀನು ಹೊಂದಿರುವ ಕನಿಷ್ಟ 5 ಜನರಿಗೆ ಶೇ. 100 ರಂತೆ ಅಂದರೆ ರೂ. 3.59 ಲಕ್ಷ ಸಹಾಯಧನದಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಈ ಮೇಲ್ಕಂಡ ಎರಡು ಯೋಜನೆಗಳಲ್ಲಿ ನಿಗಮವು ಪ್ರಾರಂಭದಿಂದ ದಿನಾಂಕ 30-11-2004 ರವರೆಗೆ ಈ ಕೆಳಕಂಡಂತೆ ಪ್ರಗತಿ ಸಾಧಿಸಿದೆ.

ಕ್ರ. ಸಂ.	ಯೋಜನೆಯ ಹೆಸರು	ಒಟ್ಟು ಕೊರೆದ ಬಾವಿಗಳು	ಫಲಾನುಭವಿಗಳ ಸಂಖ್ಯೆ	ಜಮೀನಿನ ವಿಸ್ತೀರ್ಣ	ವಿದ್ಯುಧೀಕರಣವಾದ ಕೊ.ಬಾ ಸಂಖ್ಯೆ	ಇರುವ ಬಾಕಿ ಸಂ:
1.	ವೈಯುಕ್ತಿಕ ನೀರಾವರಿ ಕೊಳವೆ ಬಾವಿಗಳು	19200	19200	50031	13318	5882
2.	ಸಾಮೂಹಿಕ ನೀರಾವರಿ ಕೊಳವೆ ಬಾವಿಗಳು	11536	28588	58857	11005	531
	ಒಟ್ಟು	30736	47788	108888	24323	6413

ಕಳೆದ ಮೂರು ವರ್ಷಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಗಂಗಾ ಕಲ್ಯಾಣ ಯೋಜನೆಯಡಿ ಮತ್ತು ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ಮಂಜೂರು ಮಾಡಿದ ಕೊಳವೆ ಬಾವಿಗಳ ವಿವರ ಈ ಕೆಳಕಂಡಂತಿದೆ.

ವರ್ಷ	ಗಂಗಾ ಕಲ್ಯಾಣ ಯೋಜನೆ		ವೈಯುಕ್ತಿಕ ನೀರಾವರಿ ಕೊಳವೆ ಬಾವಿ	
	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ
2001–02	296	134	3165	1055
2002–03	297	151	577	294
2003–04	377	114	3948	818
ಒಟ್ಟು	970	399	7690	2167

ಇದರಲ್ಲಿ ಕೊರೆಸಲಾದ ಬಾವಿಗಳ ಮತ್ತು ವಿದ್ಯುತ್ ಸರಬರಾಜು ನೀಡಿದ ಬಾವಿಗಳ ವಿವರ ಈ ಕೆಳಕಂಡಂತಿದೆ (ಕ್ಷೇತ್ರವಾರು ವಿವರ ಅನುಬಂಧ–ಅ ರಲ್ಲಿ ಲಗತ್ತಿಸಿದೆ)

ವರ್ಷ	ಕೊರೆಸಲಾದ ಕೊಳವೆ ಬಾವಿ ವಿವರ				ವಿದ್ಯುದೀಕರಣ ಕೊಳವೆಬಾವಿ ವಿವರ			
	ಗಂ.ಕ.ಯೋ		ವೈ.ನೀಕೊಬಾ		ಗಂ.ಕ.ಯೋ		ವೈ.ನೀ.ಕೊ.ಬಾ	
	ಪ.ಜಾ.	ಪ.ವರ್ಗ	ಪ.ಜಾ	ಪ.ವರ್ಗ	ಪ.ಜಾ.	ಪ.ವರ್ಗ	ಪ.ಜಾ.	ಪ.ವರ್ಗ
2001–02	245	98	1672	418	27	64	952	272
2002–03	157	61	1571	659	75	28	520	141
2003–04	188	50	2170	297	18	06	150	29
ಒಟ್ಟು	**590**	**209**	**5413**	**1374**	**220**	**98**	**1622**	**442**

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿ ಕೊರೆಯಲಾದ 6413 ಕೊಳವೆ ಬಾವಿಗಳು ದಿನಾಂಕ 30–11–2004ರಂತೆ ವಿದ್ಯುಧೀಕರಣಕ್ಕೆ ಬಾಕಿ ಇರುತ್ತವೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು O.Y.T. (Own Your Transformer) ಯೋಜನೆಯನ್ನು ಜಾರಿಗೆ ತಂದಿದ್ದು ಈ ಪ್ರಕಾರ ಘಟಕ ವೆಚ್ಚದ ಮಿತಿಯಲ್ಲಿ ರೂ. 25,000/– ಗಳನ್ನು ನಿಗಮವು ಪಾವತಿಸಲು ಸಾಧ್ಯವಾಗದ ಕಾರಣ ಈ ಬಗ್ಗೆ ಸರ್ಕಾರದ ಗಮನ ಸೆಳೆದು ದಿನಾಂಕ 24–2–2004ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಕೈಗೊಂಡ ತೀರ್ಮಾನದಂತೆ ಸರ್ಕಾರದ ಆದೇಶ ಸಂ: ಸಕಇ 152 ಎಸ್‌ಡಿಸಿ 02 (ಭಾಗ–1), ದಿನಾಂಕ 10–3–2004 ರಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಕೊಳವೆ ಬಾವಿಗಳಿಗೆ O.Y.T. (Own Your Transformer) ಯೋಜನೆಯಡಿ ತಾರದೆ ಹಳೆಯ ಯೋಜನೆಯಡಿ 30

ದಿವಸಗಳೊಳಗಾಗಿ ವಿದ್ಯುಧೀಕರಣಗೊಳಿಸುವಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ಸೂಚಿಸಲಾಗಿತ್ತು. ಆದರೂ ವಿದ್ಯುತ್ ಪ್ರಸರಣ ನಿಗಮವು ಯಾವುದೇ ಕ್ರಮ ಕೈಗೊಂಡಿರಲಿಲ್ಲ.

ಈ ಹಿನ್ನೆಲೆಯಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 29-12-2004 ರಂದು ನಡೆದ ಸಭೆಯಲ್ಲಿ, (ಆ ಸಭೆಯಲ್ಲಿ ನಾನು ಭಾಗವಹಿಸಿದ್ದೆ.) ಸರ್ಕಾರದ ಅನುದಾನಕ್ಕಾಗಿ ಕಾಯದೇ ಏಪ್ರಿಲ್ 2005 ಮಾಹೆಯ ಅಂತ್ಯದೊಳಗೆ ವಿದ್ಯುತ್ ಸಂಪರ್ಕಕ್ಕೆ ಬಾಕಿ ಇರುವ ಎಲ್ಲಾ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಆದೇಶ ನೀಡಲಾಗಿದೆ.

ಅದರಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮರವರು ದಿನಾಂಕ 19-1-2005ರಲ್ಲಿ ಅರೆ ಸರ್ಕಾರಿ ಪತ್ರವನ್ನು ಎಲ್ಲಾ ನಾಲ್ಕು ವಿದ್ಯುತ್ ಪ್ರಸರಣ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಕಳುಹಿಸಿ ಏಪ್ರಿಲ್ 2005ರ ಮಾಹೆಯ ಅಂತ್ಯದೊಳಗಾಗಿ ವಿದ್ಯುಧೀಕರಣಗೊಳಿಸಲು ಆದೇಶ ನೀಡಿರುತ್ತಾರೆ. ಅದರಂತೆ ಕಾರ್ಯ ಪ್ರಗತಿಯಲ್ಲಿದೆ.

ಅನುಬಂಧ–ಅ

ಕ್ರ.ಸಂ.	ಜಿಲ್ಲೆ ಹಾಗೂ ಕ್ಷೇತ್ರದ ಹೆಸರು	ವರ್ಷ	ಗಂಗಾ ಕಲ್ಯಾಣ ಯೋಜನೆ						ವೈಯುಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ					
			ಗುರಿ		ಸಾಧನೆ		ವಿದ್ಯುದ್ದೀಕರಣವಾದ ಕೊಳವೆ ಬಾವಿಗಳು		ಗುರಿ		ಸಾಧನೆ		ವಿದ್ಯುದೀಕರಣವಾದ ಕೊಳವೆ ಬಾವಿಗಳು	
			ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ
1	2	3	4	5	6	7	8	9	10	11	12	13	14	15
1. ಬಾಗಲಕೋಟೆ ಜಿಲ್ಲೆ:														
1.	ಬಾಗಲಕೋಟೆ	2001–02	2	0	2	0	2	0	22	10	17	0	8	4
		2002–03	2	0	0	0	0	0	8	3	2	2	0	0
		2003–04	2	2	0	0	0	0	23	6	11	1	0	0
		ಒಟ್ಟು	6	2	2	0	2	0	53	19	30	3	8	4
2.	ಜಮಖಂಡಿ	2001–02	2	0	0	0	0	0	15	5	15	4	4	4
		2002–03	0	0	0	0	0	0	6	5	6	5	0	0
		2003–04	2	0	0	0	0	0	18	1	10	1	0	0
		ಒಟ್ಟು	2	0	0	0	0	0	39	11	31	10	4	4
3.	ಬೀಳಗಿ	2001–02	2	0	2	0	2	0	15	5	12	5	2	3
		2002–03	0	0	0	0	0	0	8	2	6	2	0	0
		2003–04	2	0	2	0	2	0	27	1	7	1	0	0
		ಒಟ್ಟು	**4**	**0**	**4**	**0**	**4**	**0**	**50**	**8**	**25**	**8**	**2**	**3**

1	2	3	4	5	6	7	8	9	10	11	12	13	14	15
4.	ಮುಧೋಳ್	2001–02	2	2	0	2	0	2	30	5	14	0	9	0
		2002–03	2	0	2	0	2	0	10	3	6	3	0	0
		2003–04	2	2	0	0	0	0	45	1	45	1	0	0
		ಒಟ್ಟು	**6**	**4**	**2**	**2**	**2**	**2**	**85**	**9**	**65**	**4**	**9**	**0**
5.	ಬಾದಾಮಿ	2001–02	0	0	0	0	0	0	15	10	5	0	5	3
		2002–03	2	2	0	0	0	0	4	3	4	3	0	0
		2003–04	2	0	2	0	0	0	20	2	10	1	0	0
		ಒಟ್ಟು	**4**	**2**	**2**	**0**	**0**	**0**	**39**	**15**	**19**	**4**	**5**	**3**
6.	ಗುಳೇದಗುಡ್ಡ	2001–02	2	0	2	0	0	0	15	5	10	6	2	4
		2002–03	2	0	2	0	2	0	4	10	4	7	0	0
		2003–04	2	0	0	0	0	0	21	1	10	1	0	0
		ಒಟ್ಟು	**6**	**0**	**4**	**0**	**2**	**0**	**40**	**16**	**24**	**14**	**2**	**4**
7.	ಹುನಗುಂದ	2001–02	0	0	0	0	0	0	15	5	0	0	0	0
		2002–03	2	0	0	0	0	0	3	3	3	3	0	0
		2003–04	2	0	0	0	0	0	21	2	13	0	0	0
		ಒಟ್ಟು	**4**	**0**	**0**	**0**	**0**	**0**	**39**	**10**	**16**	**3**	**0**	**0**

1	2	3	4	5	6	7	8	9	10	11	12	13	14	15
2. ಬೆಂಗಳೂರು ಗ್ರಾಮಾಂತರ ಜಿಲ್ಲೆ														
1.	ಮಾಗಡಿ	2001–02	4	2	0	2	0	0	15	5	15	1	9	1
		2002–03	3	0	3	0	3	0	16	5	16	5	16	0
		2003–04	2	0	2	0	2	0	24	2	9	0	2	0
		ಒಟ್ಟು	**9**	**2**	**5**	**2**	**5**	**0**	**55**	**12**	**40**	**6**	**27**	**1**
2.	ನೆಲಮಂಗಲ	2001–02	0	0	0	0	0	0	15	5	5	0	5	2
		2002–03	2	2	2	0	2	0	13	1	10	0	10	0
		2003–04	2	2	2	0	0	0	24	4	4	1	0	0
		ಒಟ್ಟು	**4**	**4**	**4**	**0**	**2**	**0**	**52**	**10**	**19**	**1**	**15**	**2**
3.	ರಾಮನಗರ	2001–02	3	0	0	0	0	0	15	5	10	0	10	0
		2002–03	2	0	2	0	2	0	23	1	20	0	0	0
		2003–04	2	0	0	0	0	0	21	2	3	1	3	0
		ಒಟ್ಟು	**7**	**0**	**2**	**0**	**2**	**0**	**59**	**8**	**33**	**1**	**19**	**0**
4.	ಚನ್ನಪಟ್ಟಣ	2001–02	0	0	0	0	0	0	25	5	5	0	5	0
		2002–03	2	0	2	0	2	0	13	0	10	0	0	0
		2003–04	2	0	2	0	0	0	21	2	2	1	0	0
		ಒಟ್ಟು	**4**	**0**	**4**	**0**	**2**	**0**	**59**	**7**	**17**	**1**	**5**	**0**

1	2	3	4	5	6	7	8	9	10	11	12	13	14	15
5.	ದೇವನಹಳ್ಳಿ	2001–02	0	0	0	0	0	0	15	5	1	0	1	0
		2002–03	4	0	4	0	2	0	13	1	13	0	9	0
		2003–04	2	2	0	0	0	0	25	3	0	1	0	0
		ಒಟ್ಟು	**6**	**2**	**4**	**0**	**2**	**0**	**53**	**9**	**14**	**1**	**10**	**0**
6.	ದೊಡ್ಡಬಳ್ಳಾಪುರ	2001–02	2	0	0	0	0	0	15	17	2	0	2	0
		2002–03	4	2	4	0	2	0	14	1	4	0	0	0
		2003–04	2	2	0	0	0	0	21	2	0	1	0	0
		ಒಟ್ಟು	**8**	**4**	**4**	**0**	**2**	**0**	**50**	**20**	**6**	**1**	**2**	**0**
7.	ಹೊಸಕೋಟೆ	2001–02	0	0	0	0	0	0	19	5	2	0	2	0
		2002–03	2	2	2	0	2	0	23	15	9	11	0	3
		2003–04	2	0	0	0	0	0	21	2	0	0	0	0
		ಒಟ್ಟು	**4**	**2**	**2**	**0**	**2**	**0**	**63**	**22**	**11**	**11**	**2**	**3**
8.	ಸಾತನೂರು	2001–02	0	0	0	0	0	0	15	5	2	1	0	1
		2002–03	2	0	2	0	2	0	3	1	0	0	0	0
		2003–04	2	0	0	0	0	0	21	2	2	0	0	0
		ಒಟ್ಟು	**4**	**0**	**2**	**0**	**2**	**0**	**39**	**8**	**4**	**1**	**0**	**1**
9.	ಕನಕಪುರ	2001–02	8	0	0	0	0	0	15	5	0	1	0	0
		2002–03	3	0	2	0	0	0	3	1	0	0	0	0
		2003–04	2	0	0	0	0	0	21	2	7	0	0	0
		ಒಟ್ಟು	**13**	**0**	**2**	**0**	**0**	**0**	**39**	**8**	**7**	**1**	**0**	**0**

1	2	3	4	5	6	7	8	9	10	11	12	13	14	15
3. ಬೆಂಗಳೂರು ನಗರ ಜಿಲ್ಲೆ														
1.	ಯಲಹಂಕ	2001–02	0	0	0	0	0	0	15	5	1	0	1	0
		2002–03	0	0	0	0	0	0	8	2	8	0	8	0
		2003–04	6	0	0	0	0	0	25	3	6	0	0	0
		ಒಟ್ಟು	**6**	**0**	**0**	**0**	**0**	**0**	**48**	**10**	**15**	**0**	**9**	**0**
2.	ಉತ್ತರಹಳ್ಳಿ	2001–02	0	0	0	0	0	0	15	5	1	0	1	0
		2002–03	0	0	0	0	0	0	10	1	2	0	2	0
		2003–04	6	0	5	0	0	0	25	3	10	2	4	2
		ಒಟ್ಟು	**11**	**0**	**5**	**0**	**0**	**0**	**50**	**9**	**13**	**2**	**7**	**2**
3.	ವರ್ತೂರು	2001–02	0	0	0	0	0	0	15	5	0	0	0	0
		2002–03	5	0	4	5	4	0	5	1	5	0	0	0
		2003–04	11	2	0	5	0	0	25	4	8	0	0	0
		ಒಟ್ಟು	**11**	**2**	**4**	**0**	**4**	**0**	**45**	**10**	**13**	**0**	**0**	**0**
4.	ಆನೇಕಲ್	2001–02	20	4	6	0	0	2	16	5	15	2	15	2
		2002–03	20	4	1	0	0	0	22	2	22	0	17	0
		2003–04	26	6	8	0	0	0	25	4	4	0	0	0
		ಒಟ್ಟು	**66**	**14**	**15**	**0**	**0**	**2**	**63**	**11**	**41**	**2**	**32**	**2**

1	2	3	4	5	6	7	8	9	10	11	12	13	14	15
4. ಬೆಳಗಾಂ ಜಿಲ್ಲೆ														
1.	ಬೆಳಗಾಂ	2001–02	0	0	0	0	0	0	15	5	0	5	0	0
		2002–03	2	0	0	0	0	0	2	1	2	0	2	0
		2003–04	0	2	0	0	0	0	0	0	0	0	0	0
		ಒಟ್ಟು	**2**	**2**	**0**	**0**	**0**	**0**	**17**	**6**	**2**	**5**	**2**	**0**
2.	ರಾಮದುರ್ಗ	2001–02	0	0	0	0	0	0	15	5	5	1	3	1
		2002–03	2	0	0	2	0	0	5	1	5	1	1	1
		2003–04	4	0	4	0	0	0	25	6	25	4	0	0
		ಒಟ್ಟು	**6**	**0**	**4**	**2**	**0**	**0**	**45**	**12**	**35**	**6**	**4**	**2**
3.	ಸವದತ್ತಿ	2001–02	0	0	0	0	0	0	15	5	10	2	6	2
		2002–03	2	2	0	0	0	0	7	4	7	4	1	2
		2003–04	2	2	2	0	0	0	21	5	21	5	0	0
		ಒಟ್ಟು	**4**	**4**	**2**	**2**	**0**	**0**	**43**	**14**	**38**	**11**	**7**	**4**
4.	ಬೈಲಹೊಂಗಲ	2001–02	0	0	0	0	0	0	15	5	11	2	4	1
		2002–03	2	0	2	0	0	0	5	5	5	5	1	0
		2003–04	0	0	0	0	0	0	25	2	25	1	0	0
		ಒಟ್ಟು	**2**	**0**	**2**	**0**	**0**	**0**	**45**	**12**	**41**	**8**	**5**	**1**

2	3	4	5	6	7	8	9	10	11	12	13	14	15
ಕಿತ್ತೂರು	2001–02	0	0	0	0	0	0	15	5	10	2	5	1
	2002–03	0	0	2	0	0	0	5	3	5	3	1	0
	2003–04	0	0	0	0	0	0	13	2	5	5	0	0
	ಒಟ್ಟು	**0**	**0**	**2**	**0**	**0**	**0**	**33**	**10**	**20**	**10**	**6**	**0**
ಖಾನಾಪುರ	2001–02	0	0	0	0	0	0	15	5	0	0	0	0
	2002–03	2	0	0	0	0	0	8	3	8	3	4	0
	2003–04	2	0	0	0	0	0	18	2	18	0	0	0
	ಒಟ್ಟು	**4**	**0**	**0**	**0**	**0**	**0**	**41**	**10**	**26**	**3**	**4**	**0**
ಉಚ್ಚಗೋವ್	2001–02	0	0	0	0	0	0	15	5	1	0	0	0
	2002–03	0	0	0	0	0	0	2	1	2	0	2	0
	2003–04	0	0	0	0	0	0	13	2	2	0	0	0
	ಒಟ್ಟು	**0**	**0**	**0**	**0**	**0**	**0**	**30**	**8**	**4**	**0**	**2**	**0**
ವಾಗೇವಾಡಿ	2001–02	0	0	0	0	0	0	15	5	1	0	0	0
	2002–03	0	2	0	0	0	0	1	1	0	0	0	0
	2003–04	2	2	2	0	0	0	14	2	3	0	0	0
	ಒಟ್ಟು	**2**	**4**	**2**	**0**	**0**	**0**	**30**	**8**	**3**	**0**	**0**	**0**

1	2	3	4	5	6	7	8	9	10	11	12	13	14	15
9.	ಗೋಕಾಕ್	2001–02	0	0	0	0	0	0	15	5	3	5	2	0
		2002–03	2	0	2	0	0	2	10	6	8	6	1	2
		2003–04	2	2	0	2	0	0	19	3	12	6	0	0
		ಒಟ್ಟು	**4**	**2**	**2**	**2**	**0**	**2**	**44**	**14**	**23**	**17**	**3**	**2**
10.	ಅರಬಾವಿ	2001–02	2	0	2	0	0	0	15	5	5	0	0	0
		2002–03	0	0	0	0	0	0	5	2	5	2	1	0
		2003–04	0	0	0	0	0	0	14	2	10	1	0	0
		ಒಟ್ಟು	**2**	**0**	**2**	**0**	**0**	**0**	**34**	**9**	**20**	**3**	**1**	**0**
11.	ಹುಕ್ಕೇರಿ	2001–02	2	0	2	0	2	0	15	5	6	2	4	2
		2002–03	0	2	0	0	0	0	5	2	5	2	1	0
		2003–04	0	0	0	0	0	0	14	2	5	0	0	0
		ಒಟ್ಟು	**2**	**2**	**2**	**0**	**2**	**0**	**34**	**9**	**16**	**4**	**5**	**2**
12.	ಸಂಕೇಶ್ವರ	2001–02	0	0	0	0	0	0	15	5	6	2	4	0
		2002–03	0	0	0	0	0	0	2	1	5	1	2	2
		2003–04	2	0	0	0	0	0	17	2	12	0	0	0
		ಒಟ್ಟು	**2**	**0**	**0**	**0**	**0**	**0**	**34**	**8**	**23**	**3**	**6**	**2**
13.	ನಿಪ್ಪಾಣಿ	2001–02	0	0	0	0	0	0	15	5	7	0	0	0
		2002–03	0	0	0	0	0	0	5	2	5	2	1	0
		2003–04	0	0	0	0	0	0	14	2	10	0	0	0
		ಒಟ್ಟು	**0**	**0**	**0**	**0**	**0**	**0**	**34**	**9**	**22**	**2**	**1**	**0**

1	2	3	4	5	6	7	8	9	10	11	12	13	14	15
ಶ್ರೀ ಎ.ಎಸ್. ಬಸವರಾಜು : ಗಂಗಾ ಕಲ್ಯಾಣ ಯೋಜನೆಗೆ ಸಂಬಂಧಪಟ್ಟಂತೆ ಮಾನ್ಯ ಸಚಿವರಲ್ಲಿ ಒಂದು ಮನವಿ, ಬಹುಶ:......................

ಛೇರ್ಮನ್ : ಬಸವರಾಜುರವರೇ, ಒಂದು ನಿಮಿಷ. ವಿದ್ಯುತ್ ಸಚಿವರು ಏನೋ ಹೇಳುತ್ತಾರೆ, ಕೇಳೋಣ. ನಿಮ್ಮ ಸಮಸ್ಯೆಗೆ ಉತ್ತರ ಬಂದುಬಿಡಬಹುದು.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) ಗಂಗಾ ಕಲ್ಯಾಣ ಯೋಜನೆಯನ್ನು ಮಾಡಿದ್ದು ಇಡೀ ರಾಷ್ಟ್ರದಲ್ಲೇ ಕರ್ನಾಟಕ ಸರ್ಕಾರ ಮೊದಲನೆಯದು ಎಂದರೆ ತಪ್ಪಾಗಲಾರದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಬಗ್ಗೆ ಇಡೀ ರಾಷ್ಟ್ರದಲ್ಲಿ ಯಾವುದಾದರೂ ಒಂದು ಕಾರ್ಯಕ್ರಮ ರೂಪಿಸಿದ್ದರೆ, ಅದು ಕರ್ನಾಟಕ ಸರ್ಕಾರ ಎನ್ನುವುದನ್ನು ನಾನು ಈ ಸಭೆಯ ಮುಖೇನ ಹೇಳಬೇಕಾಗುತ್ತದೆ. ಈಗಾಗಲೇ, ನಮ್ಮ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ, ಕೆ.ಪಿ.ಟಿ.ಸಿ.ಎಲ್. ಮತ್ತು ನಾಲ್ಕು ಎಸ್ಕಾಂ ಕಂಪೆನಿಗಳ ಅಧಿಕಾರಿಗಳನ್ನು ಕರೆಸಿ ಒಂದು ಮೀಟಿಂಗ್ ಮಾಡಿದ್ದು, ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರು ಈಗಾಗಲೇ ಸೂಚನೆ ಕೊಟ್ಟಿದ್ದಾರೆ. ಆದರಂತೆ, ಯಾವುದೇ ಕಾರಣಕ್ಕೂ ಈ ಕೆಲಸ ನಿಲ್ಲಿಸಬಾರದು, ಕೆಲಸ ಮಾಡಬೇಕು ಎಂದು ನಾವು ನಾಲ್ಕು ಎಸ್ಕಾಂ ಕಂಪೆನಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಅದರಂತೆ ಅವರು ಕೆಲಸ ಮಾಡುತ್ತಾರೆ. ಅದರಲ್ಲಿ ಯಾರೂ ಅನುಮಾನ ಪಡಬೇಕಾಗಿಲ್ಲ. ಎಲ್ಲಾದರೂ ಆಗಿಲ್ಲ ಎಂದರೆ, ಅದನ್ನು ತಿಳಿಸಿದರೆ, ನಾವು ಸಂಬಂಧಪಟ್ಟಂಥ ಎಸ್ಕಾಂ ಕಂಪನಿಗೆ ಹೇಳಿ, ಅದನ್ನು ಮಾಡಿಸತಕ್ಕಂಥ ಕಾರ್ಯಕ್ರಮವನ್ನು ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸನ್ಮಾನ್ಯ ಇಂಧನ ಸಚಿವರಿಗೆ ಕೆಲಸ ಮಾಡಲು ನಮ್ಮ ಅರ್ಥ ಸಚಿವರು ಹಣ ಬಿಡುಗಡೆ ಮಾಡಿದ್ದಾರೋ, ಅಥವಾ ಇಲ್ಲವೋ ಎನ್ನುವುದನ್ನು ತಾವು ಸ್ಪಷ್ಟವಾಗಿ ಹೇಳಬೇಕು. ಏಕೆಂದರೆ, ಇಲ್ಲಿ ಹಣದ ಪ್ರಶ್ನೆ ಎಂದು ಬಿಟ್ಟಿತು. ಬಸವರಾಜುರವರು ಕೇಳಿದ್ದು, ನೀವು ಇಷ್ಟು ಕನೆಕ್ಷನ್ಸ್‌ನ್ನು ಕೊಟ್ಟಿಲ್ಲ? ಎಷ್ಟು ವರ್ಷದಿಂದ ಕೊಟ್ಟಿಲ್ಲ ಎಂದಷ್ಟೇ ಕೇಳಿದ್ದಾರೆ. ಆದರೆ ಇಲ್ಲಿ ಹಣಕಾಸಿನ ವಿಚಾರ ಬಂದಿದ್ದರಿಂದ ಕೇಳುತ್ತಿದ್ದೇನೆ, ತಮಗೇನಾದರೂ ಹಣಕಾಸಿನ ಸಮಸ್ಯೆ ಇದ್ದು, ಕನೆಕ್ಷನ್ಸ್ ಕೊಡಲು ಆಗಲಿಲ್ಲವೇ ಎನ್ನುವುದನ್ನು ತಾವು ಈ ಶಾಸನ ಸಭೆಯಲ್ಲಿ ಹೇಳಬೇಕು.

ಶ್ರೀ ಹೆಚ್.ಡಿ. ರೇವಣ್ಣ : ಹಣಕಾಸಿನ ವಿಚಾರದಲ್ಲಿ, ಹಣವನ್ನು ಕೊಡುತ್ತೇವೆ ಎಂದು ಈಗಾಗಲೆ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದರಲ್ಲಿ ಯಾರೇನೂ ಅನುಮಾನ ಪಡಬೇಕಾಗಿಲ್ಲ. ಹಣ ಬರದಿದ್ದರೂ ಪರವಾಗಿಲ್ಲ, ಕೆಲಸ ಮಾಡಿ ಎಂದು ಸೂಚನೆ ಕೊಟ್ಟಿದ್ದೇವೆ. ಹಣ ಬರುತ್ತದೆ, ಅದರಲ್ಲೇನೂ ಅನುಮಾನ ಪಡಬೇಕಾಗಿಲ್ಲ, ಹಣವನ್ನು ಬಿಡುಗಡೆಯೂ ಮಾಡಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಛೇರ್ಮನ್ : ಅಂದರೆ, ತಾವು ಕನೆಕ್ಷನ್ ಕೊಡುತ್ತೀರಿ.

ಶ್ರೀ ಎ.ಎಸ್. ಬಸವರಾಜು : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಲ್ಲಿ ಒಂದು ಮನವಿ ಎಂದರೆ, ಅರಸೀಕೆರೆ ತಾಲ್ಲೂಕಿನಲ್ಲಿ, 2003-04ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯವರಿಗೆ-2, ಪರಿಶಿಷ್ಟ ಪಂಗಡದವರಿಗೆ-2, ಆ ರೀತಿ 20 ಎಂದು ಹೇಳಿದ್ದಾರೆ. ಪರಿಶಿಷ್ಟ ಪಂಗಡದವರಿಗೆ-1, ಪರಿಶಿಷ್ಟ ಜಾತಿಯವರಿಗೆ-4 ಕೊಡಲಾಗಿದೆ ಎಂದು ಹೇಳಿದ್ದಾರೆ. ಹೀಗೆ ಕೊಟ್ಟಿರತಕ್ಕಂಥಾದ್ದು ಯಾವುದೂ ಶಾಸಕರ ಗಮನಕ್ಕೆ ಬರುತ್ತಿಲ್ಲ. ಶಾಸಕರನ್ನು ಕೇಳತಕ್ಕಂಥ ಸೌಜನ್ಯವಿಲ್ಲ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ, ದಯಮಾಡಿ ಆಯಾ ಕ್ಷೇತ್ರದ ಶಾಸಕರೊಂದಿಗೆ ವಿಚಾರ ಮಾಡಿ, ಕೊಳವೆ ಬಾವಿಗಳನ್ನು ಕೊರೆಸಬೇಕು ಎಂದು ಕೇಳಿಕೊಳ್ಳುತ್ತೇನೆ. ಈಗ ಕೊರೆದಿರತಕ್ಕಂಥ ಬಾವಿಗಳ ವಿವರಗಳನ್ನಾದರೂ ಅಧಿಕಾರಿಗಳು ಶಾಸಕರಿಗೆ ಕೊಡಬೇಕು ಎನ್ನುವ ಮನವಿಯನ್ನು ನಾನು ಮಾಡುತ್ತಿದ್ದೇನೆ.

ಛೇರ್ಮನ್ : ತಾಲ್ಲೂಕು ಕಮಿಟಿಗಳಿಗೆ ಅಧ್ಯಕ್ಷರು ಶಾಸಕರುಗಳೇ ಅಲ್ಲವೇ? ಅರಸೀಕೆರೆಯಲ್ಲಿ ಬೇರೆ ಏನಾದರೂ ವ್ಯವಸ್ಥೆ ಉಂಟೇ ಎಂದು ನೋಡಿ.

ಶ್ರೀ ಹೆಚ್.ಡಿ. ರೇವಣ್ಣ : ತಾಲ್ಲೂಕು ಲೆವೆಲ್‌ನಲ್ಲಿ ಫಲಾನುಭವಿಗಳ ಪಟ್ಟಿಗೆ ಶಾಸಕರು ಸೈನ್ ಹಾಕಬೇಕು ಎಂದು ಇದೆ. ಸನ್ಮಾನ್ಯ ಶಾಸಕರಿಗೆ ಇದು ಗೊತ್ತಾಗಿಲ್ಲ ಎಂದು ಕಾಣುತ್ತದೆ. ಶಾಸಕರಾದ ನಿಮ್ಮ ಅಧ್ಯಕ್ಷತೆಯಲ್ಲೇ ನಡೆಯುವುದು ಅದು. ಅದರಲ್ಲಿ ನಾವ್ಯಾರೂ ಇಂಟರ್‌ಫಿಯರ್ ಆಗುತ್ತಿಲ್ಲ. ನಿಮ್ಮ ತಾಲ್ಲೂಕಿಗೆ ಐದು ಇದ್ದರೆ, ಐದನ್ನೂ ಅಲಾಟ್ ಮಾಡುವ ಅಧಿಕಾರ ನಿಮಗೇ ಇರುವುದು. ನೀವು ಯಾರಿಗೆ ಬೇಕಾದರೂ ಮಾಡಬಹುದು. ಇದುವರೆಗೂ ಮಾಡಿಲ್ಲವೆಂದರೆ, ಅದನ್ನು ನನ್ನ ಗಮನಕ್ಕೆ ತಂದರೆ ನಾನು ಮಾಡಿಸಿಕೊಡುತ್ತೇನೆ.

ಶ್ರೀ ಎ.ಎಸ್. ಬಸವರಾಜು : ಅದು ನಮ್ಮ ಗಮನಕ್ಕೆ ಬಂದಿರದೇ ಇರಬಹುದು. ಆದರೆ, ಭೋರ್ ಎಷ್ಟು ಅಡಿ ಕೊರೆಯಲಾಗಿದೆ, ನೀರು ಬಂದಿದೆಯೇ, ಇಲ್ಲವೇ ಎನ್ನುವ ಮಾಹಿತಿಯನ್ನೂ ಹೇಳತಕ್ಕಂಥ ಸೌಜನ್ಯ ಇಲ್ಲವಲ್ಲಾ. ಯಾರಿಗೆ ಕೊರೆದಿದ್ದೀರಿ, ಯಾರಿಗೆ ಬಿಟ್ಟಿದ್ದೀರಿ? ನಾವು ಒಂದು ಪತ್ರವನ್ನೂ ಸಹ ಕೊಟ್ಟಿರುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಶಾಸಕರಿಗೆ ನಾನು ಮನವಿ ಮಾಡುವುದು ಇಷ್ಟೇ. ಫಲಾನುಭವಿಗಳನ್ನು ಆಯ್ಕೆ ಮಾಡುವುದು ನೀವೇ. ಹೀಗಿರುವಾಗ ನೀವು ಯಾರಿಗೆ ಕೊರೆದಿದ್ದೀರಿ, ಯಾರಿಗೆ ಬಿಟ್ಟಿದ್ದೀರಿ ಎಂದು ಹೇಗೆ ಕೇಳುತ್ತೀರಿ? ಎಷ್ಟು ಅಡಿ ಕೊರೆದಿದ್ದಾರೆ, ಅದರಲ್ಲೇನಾದರೂ ದುಡ್ಡು ಹೊಡೆದಿದ್ದಾರಾ ಎನ್ನುವ ಮಾಹಿತಿ ಬೇಕಿದ್ದರೆ, ಆ ರೀತಿ ಏನಾದರೂ ಇದ್ದರೆ ಹೇಳಿ, ನಾನು ಮಾಹಿತಿ ತರಿಸಿಕೊಡುತ್ತೇನೆ.

ಛೇರ್ಮನ್ : ಈ ವಿಷಯ ಇಲ್ಲಿಗೆ ಮುಗಿದಿದೆ. ಈಗ ಒಂದು ಖಾಸಗಿ ನಿರ್ಣಯವಿದೆ.

ಶ್ರೀ ವಾಟಾಳ್ ನಾಗರಾಜ್ : ಸಭೆ ಎಷ್ಟು ಹೊತ್ತಿನವರೆಗೆ ನಡೆಯುತ್ತದೆ ಎಂದು ಹೇಳಬೇಕು.

ಛೇರ್ಮನ್ : ಈಗ ನೀವು ಖಾಸಗಿ ನಿರ್ಣಯದ ಮೇಲೆ ಮಾತನಾಡಲು ಪ್ರಾರಂಭ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ನಾನು ಪ್ರಾರಂಭಿಸುತ್ತೇನೆ, ಆದರೆ ಸದನ ಎಷ್ಟು ಹೊತ್ತಿನವರೆಗೆ ನಡೆಯುತ್ತದೆ.

5. ಛೇರ್ಮನ್‌ರ ಅಪ್ಪಣೆ ಮೇರೆಗೆ

ಅ) ಬಿಜಾಪುರ-ಬಾಗಲಕೋಟೆ ಜಿಲ್ಲೆಯ 11 ತಾಲ್ಲೂಕುಗಳ ರೈತರು ದಿನಾಂಕ 30-1-2005ರಂದು ಆಲಮಟ್ಟಿ ಡ್ಯಾಮಿನ ಗೇಟನ್ನು ಬಂದ್ ಮಾಡಲು ಹೊರಟಿರುವ ಬಗ್ಗೆ

ಶ್ರೀ ಗೋವಿಂದ ಎಂ. ಕಾರಜೋಳ್ (ಮುಧೋಳ್) : ಮಾನ್ಯ ಅಧ್ಯಕ್ಷರೇ, 24ನೇ ತಾರೀಖಿನಂದು ನಾನು ಒಂದು ನೋಟೀಸ್ ಕೊಟ್ಟಿದ್ದೇನೆ. ನನಗೆ ಇವತ್ತಿನವರೆಗೂ ಅವಕಾಶ ಸಿಕ್ಕಿಲ್ಲ. ರೈತರ ಸಮಸ್ಯೆ ಇದೆ.

ಛೇರ್ಮನ್ : ಕಾರಜೋಳಾರವರೇ, ನಿಮಗೆ ಸೋಮವಾರದ ದಿವಸ ಅವಕಾಶ ಸಿಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ : ಸೋಮವಾರ ಎಂದರೆ ಆಗುವುದಿಲ್ಲ. ಅಲ್ಲಿ ಗಲಾಟೆಯಾಗುತ್ತಿದೆ. 30ನೇ ತಾರೀಖು ಅಲ್ಲಿನ ರೈತರುಗಳೆಲ್ಲಾ ಆಲಮಟ್ಟಿ ಡ್ಯಾಂನ ಸೈಟಿನಲ್ಲಿ ಸೇರುತ್ತಿದ್ದಾರೆ. ಗೇಟ್ ಬಂದ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಇಂಥ ಗಂಭೀರ ಸಮಸ್ಯೆ ಇರುವಾಗ ಚರ್ಚೆಗೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಛೇರ್ಮನ್ : ಅಜೆಂಡಾದಲ್ಲಿ ನಿಮ್ಮ ವಿಷಯ ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಪದೇಪದೇ ವಿನಂತಿ ಮಾಡಿದ್ದೇನೆ, ಪ್ರತಿದಿನ ಸದನ ಸೇರಿದಾಗ, ಬೆಳಗ್ಗೆ ಬಂದ ತಕ್ಷಣ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಆದರೂ ಅವಕಾಶವಿಲ್ಲವೆಂದರೆ ಹೇಗೆ? ನಾಳೆ ಲಕ್ಷಾಂತರ ರೈತರು ಆಲಮಟ್ಟಿ ಡ್ಯಾಂನಲ್ಲಿ ಸೇರುತ್ತಾರೆ.

ಛೇರ್ಮನ್ : ನಿಯಮ 69ರಡಿಯಲ್ಲಿ ಪ್ರಸ್ತಾಪ ಮಾಡಲು ಅಜೆಂಡಾದಲ್ಲಿ ನಿಮ್ಮ ವಿಷಯವಿಲ್ಲ. ಹಾಗಾಗಿ ಅವಕಾಶ ಕೊಡಲು ಆಗುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ತಮ್ಮಲ್ಲಿ ಏನು ವಿನಂತಿ ಮಾಡುತ್ತೇನೆ ಎಂದರೆ, ದಯಮಾಡಿ ಇವತ್ತು ಅವಕಾಶ ಮಾಡಿಕೊಡಿ, ನಾವು ಪ್ರಸ್ತಾಪ ಮಾಡುತ್ತೇವೆ, ಸರ್ಕಾರ ಉತ್ತರ ಹೇಳಲಿ. ಅದರಿಂದ ರೈತರಿಗೆ ನಾಳೆ ಒಂದು ಸಮಾಧಾನವಾಗುತ್ತದೆ. ಇಲ್ಲದಿದ್ದರೆ, ನಾಳೆ ರೈತರೇನಾದರೂ ಗಲಾಟೆ ಮಾಡಿದರೆಂದರೆ ಅದಕ್ಕೆ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ. ಹದಿನೈದು ನಿಮಿಷ ಅವಕಾಶ ಮಾಡಿಕೊಡಿ.

ಛೇರ್ಮನ್ : ನಿಮ್ಮ ವಿಷಯವನ್ನು ಸೋಮವಾರ ಹಾಕಿಕೊಡುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ : 30ನೇ ತಾರೀಖಿನಂದು, ಒಟ್ಟು 11 ತಾಲ್ಲೂಕುಗಳಿಂದ ಲಕ್ಷಾಂತರ ರೈತರುಗಳು ಬಂದು ಆಲಮಟ್ಟಿ ಡ್ಯಾಂನಲ್ಲಿ ಸೇರುತ್ತಾರೆ.

ಛೇರ್ಮನ್ : ನೀವು ಯಾವ ವಿಚಾರವನ್ನು ಹೇಳುತ್ತಿದ್ದೀರಿ?

ಶ್ರೀ ಗೋವಿಂದ ಎಂ. ಕಾರಜೋಳ : ಆಲಮಟ್ಟಿ ಯೋಜನೆಗೆ ಸಂಬಂಧಿಸಿದಂತೆ ಸಮಗ್ರ ನೀರಾವರಿಯ ಬಗ್ಗೆ ಅಖಂಡ ಬಿಜಾಪುರ ಜಿಲ್ಲೆಯ ವಿಷಯವನ್ನು ನಾನು ಮಾತನಾಡುತ್ತಿದ್ದೇನೆ.

ಛೇರ್ಮನ್ : ನಿಮ್ಮ ವಿಷಯ ಅಜೆಂಡಾದಲ್ಲಿ ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ನಿಯಮ 69ರಡಿಯಲ್ಲಿ ನೋಟೀಸ್ ಕೊಟ್ಟಿದ್ದೇನೆ. 25ನೇ ತಾರೀಖು ಅನುಮತಿ ಕೊಡುತ್ತೇನೆಂದು ಅಧ್ಯಕ್ಷರು ಹೇಳಿದ್ದರು, ಇವತ್ತಿನವರೆಗೂ ಕೊಟ್ಟಿಲ್ಲ. ಇದು ಗಂಭೀರವಾದಂಥ ಸಮಸ್ಯೆ.

ಛೇರ್ಮನ್ : ನಿಮ್ಮ ನೋಟೀಸಿಗೆ ಅಧ್ಯಕ್ಷರು ಅನುಮತಿ ಕೊಟ್ಟಿಲ್ಲ. ಈಗ ನೀವು ಯಾವ ನಿಯಮಾವಳಿಯಡಿಯಲ್ಲಿ ಮಾತನಾಡುತ್ತೀರಿ?

ಶ್ರೀ ಗೋವಿಂದ ಎಂ. ಕಾರಜೋಳ : 30ನೇ ತಾರೀಖು 11 ತಾಲ್ಲೂಕುಗಳಿಂದ ಬರುವ ಎಲ್ಲಾ ರೈತರು ಸೇರುತ್ತಾರೆ. ಅವರು ಆಲಮಟ್ಟಿ ಗೇಟನ್ನು ಬಂದ್ ಮಾಡಲಿಕ್ಕೆ ಹೊರಟಿದ್ದಾರೆ. ಸಮಸ್ಯೆಯಾಗಬಹುದು, ಅದಕ್ಕಾಗಿ ಅನುಮತಿ ಕೊಡಿ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ಪ್ರಸ್ತಾವನೆ ಮಾಡಲಿಕ್ಕಾದರೂ ಬಿಡಿ.

ಛೇರ್ಮನ್ : ಯಾವ ನಿಯಮಾವಳಿಯ ಪ್ರಕಾರ ಪ್ರಸ್ತಾವನೆ ಮಾಡುತ್ತಾರೆ? ನಿಯಮ 69ರ ಪ್ರಕಾರ ಪ್ರಸ್ತಾವನೆಗೆ ಆಜೆಂಡಾದಲ್ಲಿ ಅವಕಾಶ ಕೊಟ್ಟಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಪ್ರಸ್ತಾಪ ಮಾಡಲು ಅನುಮತಿಯನ್ನು ಕೇಳುತ್ತಿದ್ದೇನೆ. ನಾನು ಈಗ ಪ್ರಸ್ತಾಪ ಮಾಡುತ್ತಿಲ್ಲ. ಅನುಮತಿ ಕೊಡಲು ಮನವಿ ಮಾಡುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ : ಈ ಸದನವನ್ನು ಸಂಜೆಯವರೆಗೂ ನಡೆಸಲು ನಮ್ಮದೇನೂ ತಕರಾರಿಲ್ಲ. ಆದರೆ ಊಟಕ್ಕೆ ಬಿಟ್ಟು, ನಂತರ ಪುನ: ನಡೆಸಿ, ನಾವು ಬೇಡವೆನ್ನುವುದಿಲ್ಲ. ಎಲ್ಲರೂ ಎದ್ದು ಹೋದ ಮೇಲೆ ಏನು ಸದನ ನಡೆಸುವುದು? ಒಬ್ಬೊಬ್ಬರೇ ಎದ್ದು ಹೋಗಬೇಕಾಗುತ್ತದೆ. ಎಲ್ಲಾ ಬೆಂಚ್ ಖಾಲಿ ಇವೆ. ಸೋಮವಾರ ಅವಕಾಶ ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ, ಸೋಮವಾರ ಹಾಕಿಕೊಂಡಿರಿ. ಯಾರೂ ಇಲ್ಲದಿರುವಾಗ ನೀವು ಏನು ಚರ್ಚೆ ಮಾಡುತ್ತೀರಿ? ನಾವು ಮಾತ್ರ ಪೂರ್ಣ ಮುಗಿಸಿಕೊಂಡು ಹೋಗಬೇಕು ಎಂದು ಕುಳಿತಿದ್ದೇವೆ. ಎಲ್ಲರೂ ಹೀಗೆ ಹೋಗುವುದಾದರೆ ನಾವು ಏಳುತ್ತೇವೆ.

ಛೇರ್ಮನ್ : ಕಾರಜೋಳರವರೇ, ನಿಮ್ಮ ನೋಟೀಸನ್ನು ಅಧ್ಯಕ್ಷರು ಪುರಸ್ಕರಿಸಲಿಲ್ಲ. ನಿಮ್ಮ ವಿಷಯವನ್ನು ಇಂದಿನ ಅಜೆಂಡಾದಲ್ಲಿ ಹಾಕಿಲ್ಲ. ಹಾಗಾಗಿ ಈ ಸಂದರ್ಭದಲ್ಲಿ ಅನುಮತಿ ಕೊಡಲು ಆಗುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಅನುಮತಿ ಕೊಡಬೇಕು ಎಂದೇ ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

ಛೇರ್ಮನ್ : ಈಗ Calling Attention ಮುಗಿಯಿತು. ಈಗ Zero Hour ಕೂಡ ಇಲ್ಲ. ಹಾಗಾಗಿ ನೀವು ಇಲ್ಲಿ raise ಮಾಡಲಿಕ್ಕೆ ಅವಕಾಶವಿಲ್ಲ.

ಶ್ರೀ ಕಾರಜೋಳ ಮಕಟಪ್ಪ ಗೋವಿಂದಪ್ಪ : ನಾನು ಖಾಸಗಿಯಾಗಿ ಮಾನ್ಯ ಅಧ್ಯಕ್ಷರ chamberನಲ್ಲಿ ಭೇಟಿಯಾದಾಗ ನನಗೆ ಅವರು ಹೇಳಿದ್ದಾರೆ. ಅದಕ್ಕಾಗಿ ಯಾವಾಗ ಅವಕಾಶ ಕೊಡುತ್ತಿದ್ದೀರೆಂದು ನಾನು ವಿನಂತಿ ಮಾಡುತ್ತಿದ್ದೇನೆ. ನಾನು ಪ್ರಸ್ತಾಪ ಮಾಡುತ್ತಿಲ್ಲ.

ಛೇರ್ಮನ್ : ಸೋಮವಾರ ದಿವಸ ಅವಕಾಸ ಮಾಡಿಕೊಡುತ್ತೇವೆ.

ಶ್ರೀ ಕಾರಜೋಳ ಎಂ. ಗೋವಿಂದಪ್ಪ : ಸೋಮವಾರ ಎಂದರೆ 30ನೇ ತಾರೀಖು ಜನ ಸೇರುತ್ತಾರೆ. ನನ್ನದೊಂದು ವಿನಂತಿ ಕೇಳಿಬಿಡಿ. 30ನೇ ತಾರೀಖು ಬಿಜಾಪುರ, ಬಾಗಲಕೋಟೆಯ 11 ತಾಲ್ಲೂಕಿನ ಜನರು ಸೇರುತ್ತಿದ್ದಾರೆ. ಸರ್ಕಾರದಿಂದ ಒಂದು ನಿರ್ದಿಷ್ಟವಾದಂಥ ಸೂಚನೆ ಹೋಗದೇ ಇದ್ದರೆ ಅವರು ಆ ದಿನ ಆಲಮಟ್ಟಿ damನ gate ಗಳನ್ನು ಬಂದ್ ಮಾಡುತ್ತಾರೆ. Dam ಗೆ ನುಗ್ಗುತ್ತಾರೆ, ಇದರಿಂದ ಸಮಸ್ಯೆ ಆಗಬಹುದು. ನಾಳೆ law and order problem ಆಗಬಹುದು. ಅದಕ್ಕಾಗಿ ಇಲ್ಲಿ ಇವತ್ತು ಚರ್ಚೆಗೆ ಸರ್ಕಾರ ಅನುಮತಿ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಸಿ.ಎಸ್. ಅಪ್ಪಾಜಿ ನಾಡಗೌಡ : ಮಾನ್ಯ ಅಧ್ಯಕ್ಷರೆ, ಸೋಮವಾರ ದಿವಸ ಈ ವಿಷಯವನ್ನು ಅಜೆಂಡಾದಲ್ಲಿ ಹಾಕಿಕೊಂಡರೆ ಸರ್ಕಾರದ ಪತಿಯಿಂದ

ನಾವೂ ಕೂಡ ಕೆಲವರು ಆ ವಿಷಯವಾಗಿ ಮಾತನಾಡುವವರಿದ್ದೇವೆ. Damನ gateಗೆ ನುಗ್ಗುವುದಾಗಲೀ, ಚಿತಾವಣೆ ಮಾಡತಕ್ಕಂಥದ್ದಾಗಲೀ ನಿಮ್ಮಂಥ ನಾಯಕರಿಂದ ಈ ಸಭೆಯಲ್ಲಿ ಪ್ರಸ್ತಾವನೆ ಆಗಬಾರದು. ಏಕೆಂದರೆ, ನಾವು ನೇರವಾಗಿ ಹೇಳಬೇಕೆಂದರೆ...

ಗೊಂದಲ

ಛೇರ್ಮನ್ : ದಯವಿಟ್ಟು ಈ ಕಡೆ ನೋಡಿಕೊಂಡು ಮಾತನಾಡಿ.

ಗೊಂದಲ

ಶ್ರೀ ಕಾರಜೋಳ ಎಂ. ಗೋವಿಂದಪ್ಪ : ನಮ್ಮಂಥ ನಾಯಕರು ಚಿತಾವಣೆ ಕೊಡುತ್ತಾರೆಂದು ಮಾನ್ಯ ಸದಸ್ಯರು ಏನು ಆರೋಪ ಮಾಡಿದರು, ಮಾನ್ಯ ಅಧ್ಯಕ್ಷರೆ, ವಿನಂತಿ ಮಾಡುತ್ತಿದ್ದೇನೆ, ಆ ಶಬ್ದವನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು. ನಾವು ಚಿತಾವಣೆ ಮಾಡುವುದಕ್ಕೆ ಹೊರಟಿಲ್ಲ.

ಗೊಂದಲ

ಶ್ರೀ ಸಿ.ಎಸ್. ಅಪ್ಪಾಜಿ ನಾಡಗೌಡ : ಅಲ್ಲಲ್ಲ, ಅದು ಪಕ್ಷಾತೀತವಾಗಿ ಇಲ್ಲ. ಪಕ್ಷಾತೀತ ಎಷ್ಟರಮಟ್ಟಿಗೆ ಇದೆ ಎನ್ನುವುದು ಎಲ್ಲರಿಗೆ ಗೊತ್ತಿದೆ.

ಗೊಂದಲ

ಶ್ರೀ ಕಾರಜೋಳ ಎಂ. ಗೋವಿಂದಪ್ಪ : ನಾವು ಚಿತಾವಣೆ ಮಾಡುವುದಕ್ಕೆ ಹೊರವಿಲ್ಲ. ಆದ್ದರಿಂದ ಅವರು ವಾಪಸ್ಸು ತೆಗೆದುಕೊಳ್ಳಬೇಕು.

ಛೇರ್ಮನ್ : ಈಗ ಈ subject ಅನ್ನು move ಮಾಡಲಿಕ್ಕೆ ಅನುಮತಿ ಇಲ್ಲ.

ಗೊಂದಲ

ಶ್ರೀ ಕಾರಜೋಳ ಎಂ. ಗೋವಿಂದಪ್ಪ : ನಿಮ್ಮಂಥ ನಾಯಕರ ಚಿತಾವಣೆ ಎಂದು ಇಲ್ಲಿ ಮಾನ್ಯ ಸದಸ್ಯರಾದ ಶ್ರೀ ಅಪ್ಪಾಜಿ ನಾಡಗೌಡರು ಹೇಳಿದರು. ನಿಮ್ಮಂಥ ನಾಯಕರು ಆರಿಸಿ ಬಂದಿದ್ದಕ್ಕಾಗಿಯೇ ಇವತ್ತು ಬಿಜಾಪುರ ಜಿಲ್ಲೆಯಲ್ಲಿ ಗೊಂದಲ ನಡೆದಿದೆ.

ಗೊಂದಲ

ಶ್ರೀ ಕಾರಜೋಳ ಎಂ. ಗೋವಿಂದಪ್ಪ : 50 ವರ್ಷ ಆದರೂ ಸಹ ಇವತ್ತು ನೀರಾವರಿ ಸೌಲಭ್ಯ ಸಿಕ್ಕಿಲ್ಲ. ಬೇಸಿಗೆ ದಿನದಲ್ಲಿ ನೀರು ಹಂಚಿಕೆಯಾದದ್ದನ್ನು ಬಳಸಿಕೊಳ್ಳಲಿಕ್ಕೆ ಆಗಲಿಲ್ಲ. ಇದು ನಿಮ್ಮಂಥವರು ಸಚಿವರಾದ್ದುದಕ್ಕೆ ಈ ರೀತಿ ಆಗಿದೆ.

ಛೇರ್ಮನ್ : ಖಾಸಗಿ ನಿರ್ಣಯದ ಮೇಲೆ ಶ್ರೀ ವಾಟಾಳ್ ನಾಗರಾಜ್‌ರವರು ಮಾತನಾಡಿ.

ಆ) ಗ್ರಾಮ ಪಂಚಾಯಿತಿಗಳ ಚುನಾವಣೆ ನಡೆಸುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಛೇರ್ಮನ್‌ರವರೆ, ನಾನು ಖಾಸಗಿ ನಿರ್ಣಯದ ಮೇಲೆ ಚರ್ಚೆ ಆರಂಭ ಮಾಡುವುದಕ್ಕೆ ಮುಂಚೆ ಮಾನ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ, ಗ್ರಾಮ ಪಂಚಾಯತಿ ಚುನಾವಣೆಗೆ ಚುನಾವಣಾ ಆಯೋಗ ರೆಡಿ ಇದೆಯೆಂದು ಪತ್ರಿಕೆಗಳಲ್ಲಿ ಹೇಳಿದೆ. ನಾಳೆ ನಾಡಿದ್ದರಲ್ಲಿ ಚುನಾವಣೆಗೆ notification ಆಗತಕ್ಕಂಥದ್ದರ ಚಿಂತನೆ ಇದೆ. ಆದ್ದರಿಂದ ಗ್ರಾಮ ಪಂಚಾಯತಿ ಚುನಾವಣೆ ಬಗ್ಗೆ ಸರ್ಕಾರದ ನಿರ್ಧಾರವೇನು? ಗ್ರಾಮ ಪಂಚಾಯತಿ ಚುನಾವಣೆ ನಡೆಸುತ್ತಾರೆಯೇ ಅಥವಾ ಮುಂದಕ್ಕೆ ಹಾಕುತ್ತಾರೆಯೇ? ತೀರ್ಮಾನ ಏನು ತೆಗೆದುಕೊಂಡಿದ್ದಾರೆ? ನಾವು ಚುನಾವಣೆ ನಡೆಸುವುದಕ್ಕೆ ತಯಾರಿದ್ದೇವೆಂದು ಚುನಾವಣಾ ಆಯೋಗದವರು ಹೇಳಿದ್ದಾರೆ. ಅವರಿಂದ ನಾಳೆ ನಾಡಿದ್ದು ಏನಾದರೂ notification ಆಯಿತೆಂದರೆ, ಮುಂದೆ ಏನು ಮಾಡಬೇಕು, ಯಾವತ್ತು ಚುನಾವಣೆ ಎನ್ನುವುದನ್ನು ತಾವು ದಯಮಾಡಿ ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಛೇರ್ಮನ್‌ರವರೆ, ಗ್ರಾಮ ಪಂಚಾಯತಿ ಚುನಾವಣೆ ದೃಷ್ಟಿಯಿಂದ ಒಂದು ವಾರದ ಹಿಂದೆ ಸನ್ಮಾನ್ಯ ಮುಖ್ಯಮಂತ್ರಿಗಳು ನಿಗದಿತ ಅವಧಿಯಲ್ಲಿ ಗ್ರಾಮಪಂಚಾಯಿ ಚುನಾವಣೆ ಆಗುತ್ತದೆಂದು ಹೇಳಿದರು. ಇನ್ನು ಎರಡು ದಿವಸಗಳಲ್ಲಿ ಇದರ ಬಗ್ಗೆ ಸರ್ಕಾರದಿಂದ ನಾವು ತೀರ್ಮಾನ ಮಾಡುತ್ತೇವೆ ಎನ್ನುವ ಮಾತನ್ನು ಮೊನ್ನೆಯ ದಿವಸ ಹೇಳಿದರು. ಅಂದರೆ, ಆಯೋಗ ಚುನಾವಣೆ ಮಾಡುವುದಕ್ಕೆ ಸಿದ್ಧವಿರುವಂಥ ಸಂಧರ್ಭದಲ್ಲಿ 2005ರ ಮಾರ್ಚ್‌ಗೆ ಗ್ರಾಮಪಂಚಾಯತಿಗಳ ನಿಗದಿತ ಅವಧಿ ಮುಗಿಯುತ್ತಿದೆ. ಆದ್ದರಿಂದ ಚುನಾವಣೆ ನಿಗದಿತ ವೇಳೆಗೆ ನಡೆಯಬೇಕಾಗಿದೆ. ಗ್ರಾಮಪಂಚಾಯತಿ ಅಧಿನಿಯಮ 83ರ ನಿಯಮದಂತೆ ಈ ಸಂಸ್ಥೆಗಳ ಅವಧಿಯನ್ನು ವಿಸ್ತರಿಸುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಒಂದು ಸಲ ಇನ್ನು ಎರಡು ಮೂರು ದಿವಸಗಳಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದರೆ, ಆಯೋಗ ಯಾವ ತೀರ್ಮಾನವನ್ನು ತೆಗೆದುಕೊಳ್ಳುತ್ತದೋ ಅದಕ್ಕೆ ಇವರು interfere ಆದ ಹಾಗೆ ಆಗುತ್ತದೆ. ಇದರಿಂದ ಗೊಂದಲ ಉಂಟಾಗುವುದಕ್ಕೆ ಅವಕಾಶವಾಗುತ್ತದೆ. ಈಗಾಗಲೇ ಚುನಾವಣೆ ಬಗ್ಗೆ notification ಹೊರಡಿಸುವುದಕ್ಕೆ ಸಿದ್ಧತೆಗಳಾಗಿವೆ. ಈಗ notification ಹೊರಡಬೇಕು. ಅಕಸ್ಮಾತ್ ಯಾವುದಾದರೂ ಕಾರಣಕ್ಕೆ ಚುನಾವಣೆ ಮುಂದೆ ಹೋದರೆ ಮುಂದೆ ಕೆಲವು ಪರೀಕ್ಷೆಗಳು, ತೊಂದರೆಗಳು ಪ್ರಾರಂಭವಾಗುತ್ತವೆ. ಜಿಲ್ಲಾ ಪಂಚಾಯತ್ ಚುನಾವಣೆ ಜೂನ್ ತಿಂಗಳಲ್ಲಿ ನಡೆಯಬೇಕಾಗಿದೆ. ಈ ಎಲ್ಲಾ ಗೊಂದಲಗಳ ನಡುವೆ ಈಗಾಗಲೇ ಗ್ರಾಮ ಪಂಚಾಯತ್ ಚುನಾವಣೆಗಳು ನಡೆಯುತ್ತವೆ ಎನ್ನುವ ಕಾರಣಕ್ಕೋಸ್ಕರ ಇವತ್ತು ಎಲ್ಲ ರೀತಿಯ ಸಿದ್ಧತೆಗಳು

ಆಗಿರುವಂಥ ಸಮಯದಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳೇ ನಿಂತು ಹೋಗಿವೆ. ಹೊಸ ಚುನಾವಣೆ ಆಗುತ್ತದೆ, ಹೊಸ ಸಮಸ್ಯೆ ಸೃಷ್ಟಿಯಾಗುತ್ತದೆಂದು, ಇವು ಯಾವುದನ್ನಾದರೂ ಕಂಡು ನೀವು ಚುನಾವಣೆಯನ್ನು ಮುಂದೂಡಿದರೆ ಕೇಂದ್ರ ಸರ್ಕಾರದಿಂದ ಸುಮಾರು 700–800 ಕೋಟಿ ರೂಪಾಯಿ ಅನುದಾನ ಇದಕ್ಕೇನು ಬರಬೇಕಾಗಿದೆ, ಅದಕ್ಕೂ ಅಡ್ಡಿಯಾಗುವಂಥ ಸಂಭವವಿದೆ. ಇವತ್ತು ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರ ಇರುವಂಥ ಸಮಯದಲ್ಲಿ, ಆ ಸಭೆಯಲ್ಲಿ ಜನತಾದಳ ಒಂದು ಕಡೆ ಚುನಾವಣೆ ಆಗಬೇಕೆಂದು ಹೇಳಿದರೆ, ಕಾಂಗ್ರೆಸ್‌ನವರು ಬೇಡ ಎಂದು ಹೇಳುವಂಥ ಈ ಗೊಂದಲದಲ್ಲಿ ಗಂಡಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು ಎನ್ನುವ ರೀತಿಯಲ್ಲಿ ಇವತ್ತು ವ್ಯವಸ್ಥೆಯೇ ಹಾಳಾಗುವಂಥ ಸಂಭವವಿದೆ. ಹಾಗಾಗಿ, ಆಯೋಗ ಎಲ್ಲ ಸಿದ್ಧತೆ ಮಾಡಿಕೊಂಡಿರುವುದರಿಂದ ಅದಕ್ಕೆ ನಾವು interfere ಆಗುವುದಿಲ್ಲವೆನ್ನುವ ಭರವಸೆ ಮಾನ್ಯ ಮಂತ್ರಿಗಳಿಂದ ನನಗೆ ಬೇಕು. Notification ಆದ ಮೇಲೆ 45 ದಿವಸ ಬೇಕು. ಆದ್ದರಿಂದ ನಿಗದಿತ ಅವಧಿಯಲ್ಲಿ ಈ ಚುನಾವಣೆ ಆಗಬೇಕಾಗಿದೆ. ಅದನ್ನು ತಡೆಯುವ ಅಧಿಕಾರವೂ ಸಹ ಸರ್ಕಾರಕ್ಕೆ ಇಲ್ಲ. ಅದಕ್ಕೋಸ್ಕರ 'ಚುನಾವಣೆ ಮಾಡುತ್ತೇವೆ ಅಥವಾ ಇಲ್ಲದಿದ್ದರೆ ಇಲ್ಲ. ಏಕೆಂದರೆ, ನಮ್ಮದೇ ಆದಂಥ ಬೇರೆ ಬೇರೆ ಕಾರಣಕ್ಕೋಸ್ಕರ ಚುನಾವಣೆ ಮುಂದೂಡುತ್ತಿದ್ದೇವೆಂದು ಅದನ್ನಾದರೂ ಸತ್ಯ ಹೇಳುವ ಮೂಲಕ ಈ ರಾಜ್ಯದ ಜನತೆಗೆ ಸ್ಪಷ್ಟವಾದ ಉತ್ತರ ನೀಡಬೇಕು. ಇಲ್ಲವೆಂದರೆ, ಚುನಾವಣೆ ಆಯೋಗ ಈಗಾಗಲೇ ಚುನಾವಣೆ ನಡೆಸುವುದಕ್ಕೆ ನಮ್ಮದೇನೂ ಅಡ್ಡಿ ಆತಂಕಗಳು ಇಲ್ಲವೆಂದು ಮುನ್ನಡೆಯುತ್ತಿರುವುದರಿಂದ, ಚುನಾವಣೆ ನಿಗದಿತ ಅವಧಿಯಲ್ಲಿ ನಡೆಯುತ್ತದೆಂದು ಅದನ್ನಾದರೂ ಸರ್ಕಾರ ಹೇಳಬೇಕು. ಏಕೆಂದರೆ, ಗ್ರಾಮಪಂಚಾಯತಿಗೆ ಕೊಡಬೇಕಾದಂಥ 5 ಲಕ್ಷ ರೂಪಾಯಿಯಲ್ಲಿ ಇದುವರೆವಿಗೂ ನೀವು ಅದರ ಅಭಿವೃದ್ಧಿಗೆ ಚುನಾವಣೆ ಬಂದರೂ ಸಹ ಇನ್ನೂಕೂಡ ಸುಮಾರು ಎರಡೂವರೆ ಲಕ್ಷ ರೂಪಾಯಿಗಳಲ್ಲಿ ಒಂದು ಪೈಸೆಯನ್ನು ಸಹ ಬಿಡುಗಡೆ ಮಾಡಿಲ್ಲ. ರೂ. 83 ಸಾವಿರ ಎಂದು ಒಂದು ಅಭಿವೃದ್ಧಿಗೆಂದು ಬಿಡುಗಡೆ ಮಾಡಿದಿರಿ. ಅದಾದ ಮೇಲೆ street lightಗೆ ಅಡ್ಜಸ್ಟ್ ಮಾಡಿಕೊಂಡಿರಿ. ಆ ಅನುದಾನ ಸಹ ಬಿಡುಗಡೆಯಾಗಿಲ್ಲ. ಅಭಿವೃದ್ಧಿ ಕಾರ್ಯ ನಿಂತುಹೋಗಿದೆ ಮತ್ತು ಈ ಗೊಂದಲದಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದ ಕೆಲಸವನ್ನು ಯಾರು ಮಾಡಬೇಕು? ಗ್ರಾಮಪಂಚಾಯತಿ ಮಾಡಬೇಕೇ? ಅವರು ಮಾಡಬೇಕೆಂದರೆ ಅವರಿಗೆ ಸ್ಟಾಫ್ ಇಲ್ಲ. ಟೆಕ್ನಿಕಲ್ ಹ್ಯಾಂಡ್ಸ್ ಇಲ್ಲ. ಈ ರೀತಿಯ ಗೊಂದಲಗಳು ಇರಬೇಕಾದರೆ ಮತ್ತೆ ಚುನಾವಣೆ ಮುಂದೆ ಹೋದರೆ ವ್ಯವಸ್ಥೆಯೇ ಬುಡಮೇಲಾಗುತ್ತದೆ. ಅದಕ್ಕೋಸ್ಕರ ಸರ್ಕಾರದ ಸ್ಪಷ್ಟವಾದಂಥ ನಿರ್ಧಾರವೇನು? ನಿಗದಿತ ಅವಧಿಯಲ್ಲಿ ಚುನಾವಣೆ ಆಗುತ್ತದೋ ಇಲ್ಲವೋ ಎಂಬುದನ್ನು ಸ್ಪಷ್ಟವಾಗಿ ಮಾನ್ಯ ಹಿರಿಯ ಸಚಿವರು ಹೇಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಛೇರ್ಮನ್‌ರವರೇ, ನಿನ್ನೆಯ ದಿವಸ ಸನ್ಮಾನ್ಯ ರಮೇಶ್ ಕುಮಾರ್‌ರವರು ಮತ್ತು ನಾವೆಲ್ಲಾ ಸೇರಿ ಚುನಾವಣಾ ಕ್ಷೇತ್ರಗಳ ನಿಗದಿ ಬಗ್ಗೆ ನಡೆದಿರತಕ್ಕಂಥ anomalies ನ್ನು ಸರಿಪಡಿಸಬೇಕೆನ್ನುವ ಬಗ್ಗೆ ಒಂದು notice ಅನ್ನು ಕೊಟ್ಟಿದ್ದೆವು. ಅದು ಪಟ್ಟಿಯಲ್ಲಿತ್ತು. ಅದು ಈಗ ಚರ್ಚೆಯಾಗಬೇಕಿತ್ತು. ಏಕೆಂದರೆ notification ಆದ ಮೇಲೆ ನಾವು ಚರ್ಚೆ ಮಾಡಿ ಪ್ರಯೋಜನವಿಲ್ಲ.

ಛೇರ್ಮನ್ : ಅದನ್ನು ಸೋಮವಾರಕ್ಕೆ ಹಾಕಿಕೊಂಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಷ್ಟರೊಳಗೆ notification issue ಮಾಡಿದರೆ ಏನು ಮಾಡುವುದು? ಅದಕ್ಕೋಸ್ಕರ ಇವತ್ತು ಸರ್ಕಾರ ಉತ್ತರ ಕೊಡಬೇಕು. ಅಷ್ಟರೊಳಗೆ notification issue ಮಾಡಿಬಿಟ್ಟು ನಾಳೆ ಅದರ ಮೇಲೆ ಚರ್ಚೆ ಮಾಡಲಿಕ್ಕೆ ಬರುವುದಿಲ್ಲ. ಏಕೆಂದರೆ ಈ ಚುನಾವಣಾ ಆಯೋಗ ಅಥವಾ creation of this House. ಹಾಗಾಗಿ ಅವರ ಕ್ಷೇತ್ರ ವಿಂಗಡಣೆ ಏನಿದೆ ಅವರೇ ಹೊರಡಿಸಿರತಕ್ಕಂಥ ಪಂಚಾಯತಿ ಕಾನೂನಿಗೆ ಅದು ವಿರುದ್ಧವಾಗಿದೆ. ಅಸೆಂಬ್ಲಿ ಚುನಾವಣೆ ಸಂದರ್ಭದಲ್ಲಿ ಇದ್ದಂಥ ಯಾವ ಯಾವ ಮತಗಟ್ಟೆಗಳು ಇವೆಯೋ, ಆ ಮತಗಟ್ಟೆಗಳಿಗೆ ಸೇರತಕ್ಕಂಥ ಎಲ್ಲಾ ಹಳ್ಳಿಗಳನ್ನೆಲ್ಲ ಸೇರಿಸಿ ಒಂದು ಕ್ಷೇತ್ರ ಎಂದು ಮಾಡಿದ್ದಾರೆ. ಹಿಂದೆ ಆ ರೀತಿ ಇರಲಿಲ್ಲ. ಗ್ರಾಮ ಪಂಚಾಯತಿ ಆಕ್ಟ್‌ನಲ್ಲಿರತಕ್ಕಂಥ ರೀತಿಯಲ್ಲಿಯೇ ಆ ಕ್ಷೇತ್ರಗಳನ್ನು ವಿಂಗಡಣೆ ಮಾಡದೆ ಈ ರೀತಿ ಮಾಡಿರತಕ್ಕಂಥದ್ದು ಕಾನೂನು ಪಂಚಾಯತಿರಾಜ್ ಆಕ್ಟ್‌ಗೆ ವಿರುದ್ಧವಾಗಿದೆ. ಅದನ್ನು ಚರ್ಚೆ ಮಾಡಿ ಸರಿಪಡಿಸಬೇಕೆನ್ನುವ ಉದ್ದೇಶದಿಂದ ನಾವು notice ಕೊಟ್ಟಿದ್ದೆವು. ಆದ್ದರಿಂದ, notification ಕೊಡದೆ ಅಲ್ಲಿಯವರೆಗೆ ಇರಬೇಕೆಂದು ದಯವಿಟ್ಟು ಸರ್ಕಾರದವರು ಚುನಾವಣೆ ಆಯೋಗಕ್ಕೆ ಹೇಳಬೇಕು, ಅಥವಾ ಸರ್ಕಾರದವರು ಅದರ ಬಗ್ಗೆ ಏನು ಚಿಂತನೆ ಮಾಡಿದ್ದಾರೆ ಎನ್ನುವುದನ್ನಾದರೂ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಛೇರ್ಮನ್‌ರವರೆ, ಪತ್ರಿಕೆಯಲ್ಲಿ ಬಂದಿರುವ ಪ್ರಕಾರ ಚುನಾವಣೆಯನ್ನು ಮುಂದೂಡತಕ್ಕಂಥ ಚಿಂತನೆ ಇದೆಯೆಂದು ತಿಳಿದು ಬಂದಿದೆ. ಆ ರೀತಿ ಮುಂದೂಡುವುದಕ್ಕೆ ಹೋದಾಗ ಯಾವ ಕಾರಣಕ್ಕೆ ಮುಂದೂಡುತ್ತಾರೆ? ಯಾವ ಉದ್ದೇಶಕ್ಕೋಸ್ಕರ ಮುಂದೂಡತಕ್ಕಂಥ ವಿಚಾರ ಸರ್ಕಾರದಲ್ಲಿದೆ? ಇವುಗಳನ್ನು ಸ್ಪಷ್ಟಪಡಿಸಬೇಕು. ಇಲ್ಲವೆಂದರೆ, ನಾಳೆ, ನಾಡಿದ್ದರಲ್ಲಿ ಅವರು notification ಹೊರಡಿಸುತ್ತಾರೆ. ಆದಾದ ತಕ್ಷಣ ಚುನಾವಣೆಗೆ ರೆಡಿಯಾಗಬೇಕು. ಚುನಾವಣೆ ಯಾವ ತಿಂಗಳಲ್ಲಿ ನಡೆಯುತ್ತದೆ? ಇವುಗಳನ್ನೆಲ್ಲಾ ಸರ್ಕಾರ ಸ್ಪಷ್ಟಪಡಿಸಬೇಕು.

ಡಾ: ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಛೇರ್ಮನ್‌ರವರೆ, ರಾಜ್ಯದ ಚುನಾವಣಾ ಆಯೋಗ

ಒಂದು ಸ್ವಾಯತ್ತ ಸಂಸ್ಥೆ. ಆ ಚುನಾವಣಾ ಆಯೋಗ ತೆಗೆದುಕೊಳ್ಳತಕ್ಕಂಥ ನಿರ್ಧಾರಕ್ಕೆ ಸರ್ಕಾರ ಬದ್ಧವಾಗಿರಬೇಕಾಗುತ್ತದೆ ಮತ್ತು ಈಗಾಗಲೇ ರಾಜ್ಯ ಚುನಾವಣಾ ಆಯೋಗ ಕೇಂದ್ರ ಚುನಾವಣಾ ಆಯೋಗದ ಮಾರ್ಗಸೂಚಿ ಪ್ರಕಾರ ಕಾರ್ಯವನ್ನು ನಡೆಸುತ್ತದೆ. ಮಾರ್ಚ್ ಅಂತ್ಯದೊಳಗಡೆ ಎಲ್ಲಾ ಗ್ರಾಮಪಂಚಾಯತ್‌ಗಳಿಗೆ statutory power ಇರತಕ್ಕಂಥ ಚುನಾವಣಾ ಆಯೋಗ ಚುನಾವಣೆಗೆ ಎಲ್ಲಾ ಸಿದ್ಧತೆ ಮಾಡಿಕೊಂಡಿದೆ. ಸರ್ಕಾರ ಕೂಡ ಚುನಾವಣೇ ನಡೆಸುವುದಕ್ಕೆ ಸಿದ್ಧವಾಗಿದೆ. ಅನೇಕ ಜನ ಸದಸ್ಯರು ಇಲ್ಲಿ ಗೊಂದಲವಾಗಿದೆ, ಮೀಸಲಾತಿ ಈ ತರಹ ತೊಂದರೆಯಾಗಿದೆ ಎನ್ನತಕ್ಕಂಥ ಭಾವನೆಗಳನ್ನು ಕೂಡ ವ್ಯಕ್ತ ಮಾಡುತ್ತಿದ್ದಾರೆ. ಮೀಸಲಾತಿ ನಿರ್ಧಾರ ಮಾಡತಕ್ಕಂಥ ಅಧಿಕಾರವನ್ನು ಪಂಚಾಯತ್ ರಾಜ್ ಕಾಯಿದೆಯಲ್ಲಿ ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆ. 2001ನೇ ಸಾಲಿನ ಸೆನ್ಸಸ್ ಏನಿದೆ ಆ population ಆಧಾರದ ಮೇಲೆ ಮತ್ತು 1-1-12005ಕ್ಕೆ populationಗೆ ಸಂಬಂಧಿಸಿದಂತೆ additional registration ಆಗಿದೆ, ಆ ಜನಸಂಖ್ಯೆಯ ಆಧಾರದ ಮೇಲೆ ಮೀಸಲಾತಿಗಳನ್ನು ನಿರ್ಧಾರ ಮಾಡುವಂಥ ಅಧಿಕಾರವನ್ನು ಪಂಚಾಯತ್ ರಾಜ್ ಕಾಯ್ದೆ ಕೆಳಗಡೆ ಆಯಾಯ ಜಿಲ್ಲಾಧಿಕಾರಿಗಳಿಗೆ. ಅಧಿಕಾರ ಕೊಟ್ಟಿದೆ. ಚುನಾವಣಾ ಆಯೋಗದ ಮಾರ್ಗಸೂಚಿಗಳ ಕೆಳಗಡೆ ಅವರೆಲ್ಲಾ ಕೆಲಸ ಮಾಡುತ್ತಾರೆ. ಸರ್ಕಾರದಿಂದ ನಾವು ಚುನಾವಣೆ ನಡೆಸಲಿಕ್ಕೆ ಸಿದ್ಧವಾಗಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಚುನಾವಣೆ ನಿಗದಿತ ಅವಧಿಗೆ ನಡೆಯಬೇಕು ಹಾಗೂ ಯಾವುದೇ ಕಾರಣಕ್ಕೂ ಮುಂದೂಡಬಾರದೆಂದು ನಮ್ಮವರ ಒಕ್ಕೊರಲಿನ ಒತ್ತಾಯವಾಗಿದೆ. ಚುನಾವಣಾ ಆಯೋಗ ಎಲ್ಲವನ್ನೂ ಸಿದ್ದ ಮಾಡಿಕೊಂಡಿರುವಂಥ ಸಮಯದಲ್ಲಿ ಮೊನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ಇನ್ನು ಎರಡು ಮೂರು ದಿವಸದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿದರೆ, ಅಂದರೆ ಆ ಒಂದು ಆಯೋಗದ ವ್ಯಾಪ್ತಿ ಮೇಲೆ ತಮ್ಮ ಪ್ರಭಾವ ಬೀರಿದಂತಾಗುತ್ತದೆ. ಅದಕ್ಕೋಸ್ಕರ ಈಗ ಎಲ್ಲವೂ ಸಿದ್ಧವಾಗಿರುವುದರಿಂದ ನಿಗದಿತ ಅವಧಿಯಲ್ಲಿಯೇ ಚುನಾವಣೆ ಮಾಡುತ್ತಾರೆ. ನಾವು ಯಾವುದೇ interfere ಆಗುವುದಿಲ್ಲ ಇಲ್ಲಿ ರಾಜಕಾರಣ ಮಾಡುವುದಿಲ್ಲವೆಂದು ಇಷ್ಟು ನೀವು ಹೇಳಿದರೆ ಸಾಕು.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಸಚಿವರು, ಈಗಾಗಲೇ ಚುನಾವಣಾ ಆಯೋಗದವರು ಈ ಬಗ್ಗೆ ನಿರ್ಧಾರ ತೆಗೆದುಕೊಂಡಿದ್ದಾರೆ, ಅದು ಸ್ವಾಯತ್ತ ಸಂಸ್ಥೆ, ಚುನಾವಣೆ ನಡೆಸುವುದಕ್ಕೆ ಬೇಕಾದ ಎಲ್ಲಾ ತರಹದ ಏರ್ಪಾಡುಗಳನ್ನೂ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇಲ್ಲಿರುವ ಅನೇಕ ಶಾಸಕರು ಮತ್ತು ಸಾರ್ವಜನಿಕರು ಕೆಲವು ವಿಚಾರಗಳ ಬಗ್ಗೆ ಮಾನ್ಯ ಮಂತ್ರಿಗಳಿಗೆ, ಮುಖ್ಯಮಂತ್ರಿಗಳಿಗೆ, ಉಪ ಮುಖ್ಯಮಂತ್ರಿಗಳಿಗೆ ಮನವಿ ಕೊಟ್ಟಿದ್ದಾರೆ. ಒಂದು ಕೊಟ್ಟಿರುವ ಮನವಿ ಎಂದರೆ,

ಮತದ್ಧಾರರ ಕ್ಷೇತ್ರಗಳನ್ನು ಪುನರ್ ವಿಂಗಡಣೆ ಮಾಡುವ ಸಂದರ್ಭದಲ್ಲಿ ಸ್ವಲ್ಪ ಅವ್ಯವಸ್ಥೆಯಾಗಿದೆ. ಆ ಕಾರಣಕ್ಕಾಗಿ ಜಿಲ್ಲಾಧಿಕಾರಿಗಳು; ಮತದಾರರ ಕ್ಷೇತ್ರದಲ್ಲಿ ಮೀಸಲಾತಿ ಮಾಡುವುದರಲ್ಲಿ ಕಾನೂನು ಬಾಹಿರವಾದ ಕೆಲವು ಘಟನೆಗಳು ನಡೆದಿವೆ ಎನ್ನುವ ವಿಚಾರವನ್ನು ತಿಳಿಸಿದ್ದಾರೆ. ಎರಡನೆಯದು ಬಹಳ ಮುಖ್ಯವಾಗಿರುವ ಆಕ್ಷೇಪಣೆ ಎಂದರೆ, 400 ಜನರಿಗೆ ಒಬ್ಬ ಸದಸ್ಯರು ಎನ್ನುವುದಿದ್ದಾಗ, 2001ರ ಜನಗಣತಿಯ ಆಧಾರದ ಮೇಲೆ ನೀವು ಚುನಾವಣೆ ಮಾಡುವುದಾಗಿದ್ದರೆ, ಜನಸಂಖ್ಯೆ ಹೆಚ್ಚು ಇರುವ ಕಾರಣಕ್ಕೆ ಒಂದೊಂದು ಗ್ರಾಮ ಪಂಚಾಯಿತಿಯಲ್ಲಿ 60-70 ಮಂದಿ ಸದಸ್ಯರಾಗುವ ಸಂಭವ ಇರುವುದರಿಂದ, ಗ್ರಾಮ ಪಂಚಾಯಿತಿಗಳು ಸುಸೂತ್ರವಾಗಿ ತಮ್ಮ ನಡಾವಳಿಗಳನ್ನು ನಡೆಸಿಕೊಂಡು ಹೋಗಲಿಕ್ಕಾಗುವುದಿಲ್ಲ. ಆದುದರಿಂದ, ನೀವು 600 ಅಥವಾ 700 ಸದಸ್ಯರಿಗೆ ಒಬ್ಬರನ್ನು ಸದಸ್ಯರನ್ನಾಗಿ ಮಾಡಿ ಎನ್ನುವ ಬೇಡಿಕೆಯನ್ನು ಮಾನ್ಯ ಸಚಿವರ ಮತ್ತು ಮುಖ್ಯಮಂತ್ರಿಗಳ ಮುಂದೆ ಕೊಟ್ಟಿದ್ದಾರೆ. ಈಗಾಗಲೇ ಅನೌಪಚಾರಿಕವಾಗಿ ಮಾನ್ಯ ಮುಖ್ಯಮಂತ್ರಿಗಳ ಜೊತೆ ಈ ವಿಚಾರವನ್ನು ಚರ್ಚೆ ಮಾಡಿದ್ದೇವೆ. ಆ ಕಾರಣಕ್ಕಾಗಿ ಪ್ರಾಯಶ: ಮುಖ್ಯಮಂತ್ರಿಗಳು ಇನ್ನು 2 ದಿವಸಗಳೊಳಗೆ ನಿರ್ಧರಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಇಂಥ ಪ್ರಮುಖವಾದ ವಿಷಯದಲ್ಲಿ ಪ್ರತಿಪಕ್ಷದವರ ಜೊತೆ ನೀವು ಚರ್ಚೆ ಮಾಡಲಿಲ್ಲ. ಈಗ ಜನಸಂಖ್ಯೆ ಇದೆಲ್ಲ ಸಂಗತಿಗಳ ಬಗ್ಗೆ ಹೇಳುತ್ತೀರಿ. 2 ತಿಂಗಳ ಮುಂಚೆ ಯೋಚಿಸಬೇಕಿತ್ತು.

ಗೊಂದಲ

2001ರ ಸೆನ್ಸಸ್ ಆಧಾರದ ಮೇಲೆ ತೀರ್ಮಾನವಾದ ಮೇಲೆ ನಿಮ್ಮ ಟೋನ್ ನೋಡಿದರೆ, ರಾಗ ನೋಡಿದರೆ, ಏನಾದರೂ ಮಾಡಿ ಚುನಾವಣೆ ಮುಂದೂಡಲು...

ಶ್ರೀ ಎಂ.ಪಿ. ಪ್ರಕಾಶ್ : ನಿಮ್ಮ ರಾಗ ಪ್ರಾರಂಭವಾಗಿದ್ದು.........

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಏನಂದ ಮಾಡುವುದೇನೆಂದರೆ, ಸಮಯಕ್ಕೆ ಸರಿಯಾಗಿ ಚುನಾವಣೆ ಮಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ನಿಮ್ಮ ರಾಗ ನೋಡಿದರೆ..

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗೇನು ಚುನಾವಣಾ ಆಯೋಗ ನಿರ್ಧಾರ ಮಾಡಿದೆ, ಆ ರೀತಿ ಚುನಾವಣೆಯಾಗಬೇಕೆಂಬುದು ನಮ್ಮ ಸ್ಪಷ್ಟವಾದ ನಿರ್ಧಾರ.

ಶ್ರೀ ಎಂ.ಪಿ. ಪ್ರಕಾಶ್ : ನಾನು ಇನ್ನೂ ಕುಳಿತಿಲ್ಲ. ವಿರೋಧ ಪಕ್ಷದ ನಾಯಕರು ಎತ್ತಿರುವುದಿಲ್ಲ ನಾವು ಯಾವ ರಾಗವನ್ನೂ ಹಾಡಿಲ್ಲ. ಆದರೆ, ಈಗ ರಾಗ ಹಾಡುವ ಮೂಲಕ ಚುನಾವಣೆಯನ್ನು ಮುಂದೂಡುತ್ತೇವೆ ಎನ್ನುವ ಪ್ರಸ್ತಾಪ ಬಂದಿರುವುದಾದರೆ, ತಮಗೆ ಮುಜುಗರ ಮಾಡಲು ನಾನು ಹೇಳಲು ಇಷ್ಟಪಡುವುದಿಲ್ಲ. ತಮ್ಮ ಶಾಸಕರುಗಳೇ ವೈಯಕ್ತಿಕವಾಗಿ ನನ್ನ ಹತ್ತಿರ ಬಂದು ಚುನಾವಣೆ ಮುಂದೂಡಿಸಿ ಎನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ರೆಕಾರ್ಡ್‌ಗೆ ಹೋಗಬಾರದು. ಐ ಆಮ್ ಸಾರಿ.

ಶ್ರೀ ಎಂ.ಪಿ. ಪ್ರಕಾಶ್ : ರಾಗದ ಬಗ್ಗೆ ಏಕೆ ಹೇಳುತ್ತೀರಿ?

ಗೊಂದಲ

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಪಕ್ಷದ ಸ್ಪಷ್ಟವಾದ ನಿಲುವು ಸಮಯಕ್ಕೆ ಸರಿಯಾಗಿ ಚುನಾವಣೆಯಾಗಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಇರಬಹುದು, ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾರೋ ಒಬ್ಬಿಬ್ಬರು ವೈಯಕ್ತಿಕ ಅಭಿಪ್ರಾಯದ ಪ್ರಶ್ನೆ ಅಲ್ಲ.

ಗೊಂದಲ

ಶ್ರೀ ಎಂ.ಪಿ. ಪ್ರಕಾಶ್ : ಈಗ ರಾಗವನ್ನು ಏಕೆ ನೀವು ಕಂಡುಹಿಡಿದಿರಿ?

ಗೊಂದಲ

ತಾವು ಹೇಳಿದಿರಿ, ನಿಮ್ಮ ರಾಗವನ್ನು ನೋಡಿದರೆ......... ಏನು ರಾಗವನ್ನು ಹಾಡಿದಿರಿ?

ಗೊಂದಲ

ಶ್ರೀ ಎಂ.ಪಿ. ಪ್ರಕಾಶ್ : ನಿಮ್ಮ ಶಾಸಕರು ವೈಯಕ್ತಿಕವಾಗಿ ಬಂದಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ವೈಯಕ್ತಿಕ ಬೇಡ.

ಶ್ರೀ ಎಂ.ಪಿ. ಪ್ರಕಾಶ್ : ಬಿಡಿ. ಅದು ಏಕೆ ರೆಕಾರ್ಡ್‌ಗೆ ಹೋಗಬಾರದು?

ಗೊಂದಲ

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಬಿಜೆಪಿಯ ಸ್ಪಷ್ಟವಾದ ನಿಲುವು ಸಮಯಕ್ಕೆ ಸರಿಯಾಗಿ ಚುನಾವಣೆಯಾಗಬೇಕು.

ಗೊಂದಲ

ಶ್ರೀ ಎಂ.ಪಿ. ಪ್ರಕಾಶ್ : ನಮ್ಮ ಸರ್ಕಾರದ ನಿಲುವು.

ಗೊಂದಲ

ಶ್ರೀ ಎಂ.ಪಿ. ಪ್ರಕಾಶ್ : ನಮ್ಮ ಸರ್ಕಾರದ ನಿಲುವೂ ಕೂಡ ಚುನಾವಣೆ ಆಗಬೇಕೆಂಬುದಾಗಿದೆ. ಆ ವಿಚಾರದಲ್ಲಿ ಎರಡು ಅಭಿಪ್ರಾಯಗಳಿಲ್ಲ. ಆದರೆ, ನಾನು ಹೇಳಿದ್ದು, ಕೆಲವರು ಬಂದು ಈ ರೀತಿಯಾದ ಮನವಿ ಕೊಟ್ಟಿದ್ದಾರೆಂದು ಹೇಳಿದಾಗ, ಅಲ್ಲಿಯ ಶಾಸಕರು ಕೊಟ್ಟಿದ್ದಾರೆ. ತಾವು ನೋಟೀಸ್ ಕೊಟ್ಟಿದ್ದೀರಿ. ಬೇರೆ ಶಾಸಕರು, ಬೇರೆ ಪಕ್ಷದವರು ಕೊಟ್ಟಿದ್ದಾರೆನ್ನುವ ಮಾತನ್ನು ಹೇಳಿದಾಗ, ಬಿಜೆಪಿ ಶಾಸಕರು ವೈಯಕ್ತಿಕವಾಗಿ ಬಂದು ಹೇಳಿದ್ದಾರೆಂದು ಹೇಳಿದೆ. ಅದು ರೆಕಾರ್ಡ್‌ಗೆ ಹೋಗಬಾರದೆಂದು ಹೇಳುವುದಿದೆಯಲ್ಲಾ ಅದು ತಪ್ಪಲ್ಲ. ತಾವು ಹೇಳಿರಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ರೆಕಾರ್ಡ್‌ಗೆ ಹೋಗಬಾರದೆಂದು ಹೇಳಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ತಾವು ಹೇಳಿದಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆದರೆ, ಭಾರತೀಯ ಜನತಾ ಪಾರ್ಟಿಯ ನಿಲುವು ಎಂದರೆ, ಸಮಯಕ್ಕೆ ಸರಿಯಾಗಿ ಚುನಾವಣೆಯಾಗಬೇಕು.

ಗೊಂದಲ

ಶ್ರೀ ಎಂ.ಪಿ. ಪ್ರಕಾಶ್ : ನಾವು ಅದಕ್ಕೆ.....

ಗೊಂದಲ

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾರೋ ಒಬ್ಬಿಬ್ಬರ ಶಾಸಕರು ಕೊಟ್ಟಿರಬಹುದು. ಆದರೆ ಬಿಜೆಪಿಯ ಸ್ಪಷ್ಟವಾದ ನಿಲುವು, ಸಮಯಕ್ಕೆ ಸರಿಯಾಗಿ ಚುನಾವಣೆ ಆಗಬೇಕು.

ಶ್ರೀ ಎಂ.ಪಿ. ಪ್ರಕಾಶ್ : ನಾವು ನಿಮ್ಮಷ್ಟೇ ಅದಕ್ಕೆ ಬದ್ಧರಾಗಿದ್ದೇವೆ. ಈ ವಿಚಾರದಲ್ಲಿ ಆ ಮಾತನ್ನು ನಾವು ಹೇಳಿರಬಹುದೇ ವಿನ: ಮಾನ್ಯ ಸಚಿವರೂ ಕೂಡ ಈಗಾಗಲೇ ಹೇಳಿದ್ದಾರೆ. ಚುನಾವಣಾ ಆಯುಕ್ತರಿಗೆ ನಾವು ಯಾವುದೇ ತರಹದ ಸಂದೇಶವನ್ನು ಕಳುಹಿಸಿಕೊಟ್ಟಿಲ್ಲ. ಅದನ್ನು ನಡೆಸುವ ಜವಾಬ್ದಾರಿ ಅದರದ್ದು ಇದೆ. ಆದುದರಿಂದ, ಸರ್ಕಾರದಿಂದ ಕೂಡ ಏನೂ ಮಾಡಿಲ್ಲ. ಆದರೆ, ಆ ಬಗ್ಗೆ ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳು ಬಹಳ ಸ್ಪಷ್ಟವಾಗಿ, ಎರಡು ದಿವಸಗಳ ನಂತರ ಈ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಚುನಾವಣಾ ಆಯೋಗದ ಮೇಲೆ ಒಂದು ರೀತಿಯ ಬಲ ಪ್ರಯೋಗ ಮಾಡಿದಂತೆ ಅಥವಾ ಅವರನ್ನು ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆನ್ನುವುದು ಮೇಲ್ನೋಟಕ್ಕೆ ಕಾಣುತ್ತಿದೆ. ಹಾಗಾಗಿ, ಗೊಂದಲ ಪ್ರಾರಂಭವಾಗಿರುವುದು, ನಾವು ಯಾರೂ ಇಂಟರ್‌ಫಿಯರ್ ಆಗುವುದಿಲ್ಲ, ಚುನಾವಣಾ ಆಯೋಗ ಅದರಂತೆ ಚುನಾವಣೆ ಮಾಡಲಿ ಎಂದು ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ : ಇವತ್ತಿನವರೆಗೂ ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಚುನಾವಣೆ ನಡೆಸುವುದಕ್ಕೆ ನಾವು ತಯಾರಾಗಿದ್ದೇವೆಂದು ಚುನಾವಣಾ ಆಯೋಗದವರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಮಾರ್ಚ್‌ನಲ್ಲಿ ಚುನಾವಣೆ ಆಗಬೇಕಾದುದು, ಅಂತ್ಯ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಅವಧಿ ಮಾರ್ಚ್‌ವರೆಗೆ ಇದೆ. ಅಷ್ಟರಲ್ಲಿ ಚುನಾವಣೆಯಾಗಬೇಕು. ಮಾರ್ಚ್‌ನಲ್ಲಿ ಮಾಡಬೇಕೆ, ಫೆಬ್ರವರಿಯಲ್ಲಿ ಮಾಡಬೇಕೇ? ಎನ್ನುವುದು ಒಂದೇ ಪ್ರಶ್ನೆ. ಮಾರ್ಚ್‌ನಲ್ಲಿ ವಿದ್ಯಾರ್ಥಿಗಳಿಗೆ ಎಲ್ಲಾ ಪರೀಕ್ಷೆ ಇದೆ ಎನ್ನುವುದಕ್ಕೆ ಇಲ್ಲಿ ಗಮನ ಕೊಟ್ಟಿದ್ದಾರೆ. ಚುನಾವಣೆ ಆಯೋಗದವರು ತಮಗೆ ಚುನಾವಣೆ ಮಾಡುವುದಕ್ಕೆ ಎರಡು ಲಕ್ಷ ಮಂದಿ ಸಿಬ್ಬಂದಿ ಬೇಕು, ಅದಕ್ಕೆ ನಮಗೆ ಅವಕಾಶ ಕೊಡಿ ಎಂದು ಹೇಳಿ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದಾರೆ. ಆದುದರಿಂದ, ಸರ್ಕಾರ ಇದೆಲ್ಲವನ್ನೂ ಪರಿಶೀಲಿಸಿ; ಇದರಲ್ಲಿ ರಾಜಕೀಯ ಪ್ರಶ್ನೆ ಇಲ್ಲ. ನಾನು

ಅದನ್ನು ಹೇಳುತ್ತಿಲ್ಲ. ನಾವು ಯಾರು ಹೇಳಿದರೂ ಯಾವತ್ತು ನೀವು ಮುಂದಕ್ಕೆ ಹಾಕುತ್ತೀರಿ. ನಿಮ್ಮ ರಾಗ ನಮಗೆ ಬೇಕಾಗಿಲ್ಲ. ರಾಗದ ಬಗ್ಗೆ ನಾನು ಮಾತನಾಡುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಈ ರಾಗವನ್ನು ಕೇಳಲಿಕ್ಕೆ ಬಹಳ ಜನಕ್ಕೆ ಕಿವಿ ಇಂಪಾಗಿರುತ್ತದೆ, ಆದರೆ, ತೋರಗಾಣಿಕೆಗೆ ಮಾತ್ರ ನೀವು ರಾಗ ಶುರು ಮಾಡಿದ್ದೀರಲ್ಲಾ.

ಛೇರ್ಮನ್ : ಮುಂದೆ ಎಳೆಯುವುದು ಬೇಡ.

ಶ್ರೀ ವಾಟಾಳ್ ನಾಗರಾಜ್ : ನಾನೇನು ಕೇಳಿದೆ ಎಂದರೆ, ಮಾನ್ಯ ಯಡಿಯೂರಪ್ಪನವರು ಯಾವ ರಾಗದಲ್ಲಿ ಕೇಳುತ್ತಾರೆಯೋ ನನಗೆ ಗೊತ್ತಿಲ್ಲ. ಈ ರಾಗಗಳು ಯಾವುದು ಎಂಬುದನ್ನು ಸಂಗೀತದಲ್ಲಿ ಪರಿಚಯವಿರುವವರು ನೀವು; ಅವರು ಹೇಳಬೇಕು. ನನಗೆ ನಿಜವಾದ ಸಂಗೀತದಲ್ಲಿ ಪರಿಚಯವಿದೆ. ರಾಜಕೀಯ ಸಂಗೀತದಲ್ಲಿ ಸ್ವಲ್ಪ ಕಷ್ಟ. ಆದುದರಿಂದ, ರಾಗ ಯಾವುದೆಂದು ನೀವಿಬ್ಬರೂ ತೀರ್ಮಾನಿಸಿ. ಪ್ರಶ್ನೆ ಬೇರೆ ನಾನು ತಮ್ಮನ್ನು ನೇರವಾಗಿ ಕೇಳುತ್ತಿದ್ದೇನೆ, ನಿಗದಿಯಾದ ಕಾಲಕ್ಕೆ ಚುನಾವಣೆ ಮಾಡುತ್ತೀರಾ? ಅವರು ಸಿಬ್ಬಂದಿ ಕೇಳಿದ್ದಾರೆ, ಎರಡು ಲಕ್ಷ ಜನ ಸಿಬ್ಬಂದಿ ಬೇಕು ಎಂದು ಕೇಳಿದ್ದಾರೆ. ಚುನಾವಣಾ ಆಯೋಗದವರು 5,650 ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ನಡೆಸಲು ಚುನಾವಣಾ ಆಯೋಗ ಸಕಲ ಸಿದ್ಧತೆ ಮಾಡಿಕೊಂಡಿದ್ದರೂ... ನಾವು ಮಾಡಿಕೊಂಡಿದ್ದೇವೆಂದು ಹೇಳಿದ್ದಾರೆ. ನಾನು ತಮ್ಮನ್ನೇನು ಕೇಳುತ್ತಿದ್ದೇನೆಂದರೆ, ನಾಳೆ, ನಾಡಿದ್ದು 2 ದಿವಸ ಇದೆ. ಅವರೇನಾದರೂ ಇದರ ಬಗ್ಗೆ ಚುನಾವಣಾ ವೇಳಾಪಟ್ಟಿ ಪ್ರಕಟಣೆ ಮಾಡಿದರೆ ಮುಂದೇನು ಎನ್ನುವ ಪ್ರಶ್ನೆ ಇಲ್ಲಿ ಚರ್ಚೆಗೆ ಬರುವ ಪ್ರಶ್ನೆ ಅಲ್ಲ. ಅದೇನೂ ಆಕಾಶದಿಂದ ಇಳಿದಿಲ್ಲ. ಅದು ಈ ಸದನಕ್ಕೆ ಸಂಬಂಧಪಟ್ಟಿದ್ದೇ. ಈ ಸದನದಿಂದಲೇ ತಯಾರಾದುದು. ಇದೆಲ್ಲವೂ ಆಗಿರುವುದು. ತಾವು, ಜಿಲ್ಲಾಧಿಕಾರಿಗಳಿಗೆ ಮೀಸಲಾತಿ ಬಗ್ಗೆ ಅವರಿಗೆ ಅವಕಾಶ ಕೊಟ್ಟಿದ್ದೇವೆಂದು ಹೇಳುತ್ತೀರಿ. ಮೀಸಲಾತಿ ಪ್ರಕ್ರಿಯೆ ಮುಗಿದಿದೆಯೇ? ಆ ಪ್ರಕ್ರಿಯೆ ಮುಗಿದಿದ್ದರೆ, ತಾವು ಚುನಾವಣೆಗೆ ತಯಾರಾಗಿದ್ದರೆ, ಸಿಬ್ಬಂದಿ ಕೊಡುತ್ತೀರಾ ಅದರ ಬಗ್ಗೆ ಸ್ವಲ್ಪ ಸ್ಪಷ್ಟಪಡಿಸಿಬಿಟ್ಟರೆ, ಈ ಸದನಕ್ಕೆ, ಎಲ್ಲ ಪಕ್ಷದವರಿಗೆ ಅನುಕೂಲವಾಗುತ್ತದೆಂದು ತಮಗೆ ಕೇಳುತ್ತೇನೆ.

ಡಾ: ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು): ಈಗಾಗಲೇ ನಾನು ಸ್ಪಷ್ಟಪಡಿಸಿದ್ದೇನೆ ಮತ್ತು ನಮ್ಮ ಹಿರಿಯ ಸಚಿವರಾದ ಶ್ರೀ ಎಂ.ಪಿ. ಪ್ರಕಾಶ್‌ರವರೂ ಹೇಳಿದ್ದಾರೆ. ಚುನಾವಣಾ ಆಯೋಗ ತೆಗೆದುಕೊಳ್ಳುವ ನಿರ್ಧಾರದಲ್ಲಿ ಸರ್ಕಾರ ಮಧ್ಯೆ ಪ್ರವೇಶ ಮಾಡುವುದಿಲ್ಲ. ಮೀಸಲಾತಿ ನಿರ್ಧಾರ ಮಾಡುವ ಅಧಿಕಾರವನ್ನು ಕಾಯ್ದೆಯಲ್ಲಿ ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದಾರೆ. ಸರ್ಕಾರ ಅದರಲ್ಲಿ ಪ್ರವೇಶ ಮಾಡುವುದಿಲ್ಲ. 2001ರ ಜನಗಣತಿಯ ಜನಸಂಖ್ಯೆಯ ಆಧಾರದ ಮೇಲೆ ಮೀಸಲಾತಿಯನ್ನು ತೀರ್ಮಾನ ಮಾಡಿದ್ದಾರೆ ಮತ್ತು 1-1-05ನೇ ಇಸವಿಗೆ ಅಡಿಷನಲ್ ಆಗಿ 18 ವರ್ಷ ತುಂಬಿದ ಮತದಾರರು ಅಲ್ಲಿ ನೋಂದಾವಣೆ ಮಾಡಿಕೊಂಡಿದ್ದಾರೆ. ಎಲ್ಲವನ್ನೂ ಸೇರಿಸಿ ಮೀಸಲಾತಿಯನ್ನು

ತೀರ್ಮಾನ ಮಾಡಿ ಜಿಲ್ಲಾಧಿಕಾರಿಗಳು ಚುನಾವಣಾ ಆಯೋಗಕ್ಕೆ ಕಳುಹಿಸುತ್ತಾರೆ. ನಾವು ಇದುವರೆಗೆ ಚುನಾವಣಾ ಆಯೋಗದ ವಿಚಾರದಲ್ಲಿ ಸಂಪರ್ಕ ಮಾಡಿಲ್ಲ. ಅದು ಸ್ವಾಯತ್ತ ಸಂಸ್ಥೆ. ಅವರು ತೆಗೆದುಕೊಳ್ಳುವ ನಿರ್ಧಾರಕ್ಕೆ, ಯಾವಾಗ ಚುನಾವಣೆ ನಡೆಸಿದರೂ, ಅದಕ್ಕೆ ಸರ್ಕಾರ ಬದ್ಧವಾಗಿರುತ್ತದೆ.

ಛೇರ್ಮನ್ : ಈಗ ವಾಟಾಳ್ ನಾಗರಾಜ್‌ರವರೆ, ಖಾಸಗಿ ನಿರ್ಣಯವಿದೆ. 3 ಗಂಟೆಯಾಗಿದೆ..

6. ಖಾಸಗಿ ಸದಸ್ಯರ ನಿರ್ಣಯ

ವಿಷಯ: ಇಡೀ ರಾಜ್ಯಾದ್ಯಂತ ಯಾವುದೇ ವರ್ಗದ ಮತದ, ಧರ್ಮದ ಜನ ವಿವಾಹ ಕಾರ್ಯಕ್ರಮಗಳನ್ನು ಕುಟುಂಬಗಳಿಗೆ ಸೀಮಿತಗೊಳಿಸುವ ಮೂಲಕ ವ್ಯಾಪಾರೀಕರಣವನ್ನು ವೈಭವೀಕರಣವನ್ನು ನಿಲ್ಲಿಸುವ ದೃಷ್ಟಿಯಿಂದ ಈ ಸದನವು ಒಂದು ಹೊಸ ಶಾಸನವನ್ನು ರಚಿಸಲು ನಿರ್ಣಯಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಛೇರ್ಮನವರೆ, ನಾನು ಆರಂಭ ಮಾಡುತ್ತೇನೆ. ಖಾಸಗಿ ನಿರ್ಣಯದ ಮೇಲೆ ಮಾತನಾಡಬೇಕಾಗಿದ್ದರೆ ಊಟ ಮಾಡಬೇಕು. ಅದಕ್ಕೆ ಮನಸ್ಸು ಬಹಳ ಸಂತೋಷವಾಗಿರಬೇಕು. ಪಕ್ಕದಲ್ಲಿ ಶ್ರೀರಾಮರೆಡ್ಡಿಯವರು, ಬ್ರಹ್ಮಚಾರಿ ಸದಸ್ಯರಿದ್ದಾರೆ. ಅವರ ಬಗ್ಗೆ ನಾವು ಮಾತನಾಡಬೇಕು. ಪ್ರೇಮ ವಿವಾಹದ ಬಗ್ಗ ಮಾತನಾಡಬೇಕು. ಇವೆಲ್ಲವುಗಳ ಬಗ್ಗೆ ಊಟ ಮಾಡಿದಾಗ ಚೆನ್ನಾಗಿ ಮಾತನಾಡಬಹುದು. ಆದುದರಿಂದ, ಒಂದೇ ಒಂದು ಮಾತು...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಯಾವುದು ಅದು ಖಾಸಗಿ ನಿರ್ಣಯ?

ಶ್ರೀ ವಾಟಾಳ್ ನಾಗರಾಜ್ : ಆ ಖಾಸಗಿ ನಿರ್ಣಯ ಯಾವುದೆಂದರೆ, "ಇಡೀ ರಾಜ್ಯಾದ್ಯಂತ ಯಾವುದೇ ವರ್ಗದ, ಮತದ, ಧರ್ಮದ ಜನ ವಿವಾಹ ಕಾರ್ಯಕ್ರಮಗಳನ್ನು ಕುಟುಂಬಗಳಿಗೆ ಸೀಮಿತಗೊಳಿಸುವ ಮೂಲಕ ವ್ಯಾಪಾರೀಕರಣವನ್ನು ವೈಭವೀಕರಣವನ್ನು ನಿಲ್ಲಿಸುವ ದೃಷ್ಟಿಯಿಂದ ಈ ಸದನವು ಒಂದು ಹೊಸ ಶಾಸನವನ್ನು ರಚಿಸಲು ನಿರ್ಣಯಿಸುತ್ತದೆ."
ಇದರ ಬಗ್ಗೆ ರಮೇಶ್ ಕುಮಾರ್‌ರವರು ಮಾತನಾಡಿದ್ದಾರೆ. ನಾನು ಮಾತನಾಡಿಲ್ಲ. ಆದುದರಿಂದ, ನಾವೆಲ್ಲರೂ ಮಾತನಾಡಬೇಕಾಗಿದ್ದರೆ, ಮೊದಲನೆಯದು ಉತ್ಸಾಹವಿರಬೇಕು. ಪ್ರೇಮ ವಿವಾಹದ ಬಗ್ಗೆ ಮಾತನಾಡುತ್ತೇವೆ. ಈಗ ಏನು ಉತ್ಸಾಹ ಬರುತ್ತದೆ? ಬರುವುದಿಲ್ಲ. ಆದುದರಿಂದ, ನಾನು ಆರಂಭ ಮಾಡಿದ್ದೇನೆ. ದಯಮಾಡಿ ಈಗ ಸದನವನ್ನು ಮುಂದೂಡಿ, ಮುಂದಿನ ಶುಕ್ರವಾರ ನಾನು ಚರ್ಚೆಯನ್ನು ಮುಂದುವರಿಸುತ್ತೇನೆ.

ಛೇರ್ಮನ್ : ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2 ಗಂಟೆ 49 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ: ದಿನಾಂಕ 31ನೇ ಜನವರಿ 2005ರಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು).

ಅನುಬಂಧ - 1

504(727) : ಶ್ರೀ ಅಭಯ ಪಾಟೀಲ್ (ಹಿರೇಬಾಗೇವಾಡಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಹತ್ತಿ ನೂಲಿನ ಗಿರಣಿಯು ಕಳೆದ ಎಷ್ಟು ವರ್ಷಗಳಿಂದ ಸ್ಥಗಿತಗೊಂಡಿದೆ, ಸ್ಥಗಿತಗೊಳ್ಳಲು ಕಾರಣವೇನು;

ಆ) ಈ ಮಿಲ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರ ಸಂಖ್ಯೆ ಎಷ್ಟು? ಅವರಿಗೆ ಪೂರ್ತಿ ವೇತನ ನೀಡಲಾಗಿದೆಯೇ? ನೀಡದಿದ್ದಲ್ಲಿ ಬಾಕಿ ಇರುವ ವೇತನ ಎಷ್ಟು;

ಇ) ಕಾರ್ಮಿಕರಿಗೆ ಬಾಕಿ ವೇತನವನ್ನು ಪಾವತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಈ ಮಿಲ್ ನಷ್ಟಕ್ಕೊಳಗಾಗಿರುವುದೇ;

ಉ) ಹಾಗಿದ್ದಲ್ಲಿ ತಪ್ಪಿತಸ್ಥರ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ದಿನಾಂಕ 5-1-1998 ರಿಂದ 31-3-2000 ಹಾಗೂ ದಿನಾಂಕ 2-6-2001 ರಿಂದ ಇಲ್ಲಿಯವರೆಗೆ ಸ್ಥಗಿತಗೊಂಡಿರುತ್ತದೆ. ಆರ್ಥಿಕ ಮುಗ್ಗಟ್ಟಿನಿಂದ ಸ್ಥಗಿತಗೊಂಡಿರುತ್ತದೆ.

ಆ) ಗಿರಣಿಯಲ್ಲಿ ಅಂದಾಜು 650 ಕಾರ್ಮಿಕರಿದ್ದು, ಸ್ಥಗಿತಗೊಂಡಾಗಿನಿಂದ ಇವರಿಗೆ ವೇತನ ನೀಡಿರುವುದಿಲ್ಲ. ಬಾಕಿ ಇರುವ ವೇತನ ಅಂದಾಜು ರೂ. 325.00 ಲಕ್ಷಗಳು.

ಇ) ಟಾಟಾ ಎಕನಾಮಿಕ್ ಕನ್ಸಲ್ಟೆನ್ಸಿ ಸಂಸ್ಥೆಯವರು ಗಿರಣಿಯ ಕಾರ್ಯನಿರ್ವಹಣೆಯ ಬಗ್ಗೆ ಅಧ್ಯಯನವನ್ನು ನಡೆಸಿ ಗಿರಣಿಯ ಆಧುನೀಕರಣ ಮತ್ತು ಪುನಶ್ಚೇತನಗೊಳಿಸುವ ಬಗ್ಗೆ ವರದಿ ನೀಡಿರುತ್ತಾರೆ. ಆದರೆ ಕೆಲವು ಗಿರಣಿಗಳು ಈ ವರದಿಯನ್ನು ಆಕ್ಷೇಪಿಸಿರುವುದರಿಂದ ಮತ್ತು ಈ ಸಂಸ್ಥೆಯು ನೀಡಿರುವ ವರದಿಯು ಸರಿಯಿಲ್ಲ ಎಂಬ ಕಾರಣದಿಂದಾಗಿ ಈ ಗಿರಣಿಯೂ ಸೇರಿ 3 ಗಿರಣಿಗಳ ಅಂದರೆ ರಾಯಚೂರು, ಮಲಪ್ರಭಾ ಮತ್ತು ತುಂಗಭದ್ರ ಸಹಕಾರಿ ನೂಲಿನ ಗಿರಣಿಗಳ ಕಾರ್ಯನಿರ್ವಹಣೆ ಬಗ್ಗೆ ಅಧ್ಯಯನವನ್ನು ದಕ್ಷಿಣ ಭಾರತೀಯ ಜವಳಿ ಸಂಶೋಧನಾ ಸಂಸ್ಥೆ, ಕೊಯಮತ್ತೂರು (ಸಿಟ್ರಾ) ಇವರಿಗೆ ವಹಿಸಿ, ವರದಿಯನ್ನು ಪಡೆಯಲು ಯೋಜಿಸಿದೆ. ಈ ಉದ್ದೇಶಕ್ಕಾಗಿ ಹಣ ಬಿಡುಗಡೆ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಈ) ಹೌದು.

ಉ) ನಷ್ಟಕ್ಕೆ ಸಂಬಂಧಪಟ್ಟಂತೆ ಸಂಬಂಧಿಸಿದ ಆಡಳಿತ ಮಂಡಳಿಯ ನಿರ್ದೇಶಕರುಗಳು, ವ್ಯವಸ್ಥಾಪಕ ನಿರ್ದೇಶಕರುಗಳು ಹಾಗೂ ಗಿರಣಿಯ ಕೆಲವು

ಸಿಬ್ಬಂದಿಯ ಮೇಲೆ 49 ಸರ್ ಚಾರ್ಜ್ ಪ್ರಕರಣಗಳನ್ನು ದಾಖಲಿಸಿಕೊಂಡಿದ್ದು ಅವುಗಳು ವಿಚಾರಣಾ ಹಂತದಲ್ಲಿರುತ್ತದೆ.

505(460) : ಶ್ರೀ ಅಕ್ಕಿ ಮಲ್ಲಿಕಾರ್ಜುನ್ ಸಹದೇವಪ್ಪ ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002 ಮತ್ತು 2003ರಲ್ಲಿ ಮುಂಗಾರು ವಿಮಾ ಯೋಜನೆಗೆ ಧಾರವಾಡ ಜಿಲ್ಲೆಯಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ;

ಆ) ಪ್ರಸ್ತುತ ಸಾಲಿನಲ್ಲಿ ವಿಮಾ ಕಂತು ತುಂಬಿದರೂ ಸಹಿತ, ಕೆಲವೊಂದು ರೈತರಿಗೆ ವಿಮಾ ಸೌಲಭ್ಯ ದೊರೆಯದಿರುವುದು ಮತ್ತು ಇದರಲ್ಲಿ ವ್ಯತ್ಯಾಸವಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಯಾವ ಕ್ರಮ ತೆಗೆದುಕೊಳ್ಳಲಾಗಿದೆ; ಬಿಡುಗೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು;

ಇ) ಅನ್ಯಾಯವಾದ ರೈತರಿಗೆ ವಿಮಾ ಹಣವನ್ನು ಯಾವಾಗ ಬಿಡುಗಡೆ ಮಾಡುವಿರಿ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಧಾರವಾಡ ಜಿಲ್ಲೆಗೆ 2002ರ ಮುಂಗಾರು ಹಂಗಾಮಿನಲ್ಲಿ ರೂ. 1072.36 ಲಕ್ಷ ಮತ್ತು 2003ರ ಮುಂಗಾರು ಹಂಗಾಮಿನಲ್ಲಿ ರೂ. 10415.58 ಲಕ್ಷ ಬೆಳೆ ವಿಮಾ ನಷ್ಟ ಪರಿಹಾರವನ್ನು ಬಿಡುಗಡೆ ಮಾಡಲಾಗಿದೆ.

ಆ) ಕೇಂದ್ರ ಸರ್ಕಾರದ ಮಾರ್ಗಸೂಚಿಯ ಪ್ರಕಾರ ಒಂದು ಅಧಿಸೂಚಿತ ಪ್ರದೇಶದಲ್ಲಿ ವಾಸ್ತವಿಕ ಇಳುವರಿಯನ್ನು ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇದ್ದರೆ, ಆ ಪ್ರದೇಶದಲ್ಲಿ ಆ ಬೆಳೆಗೆ ವಿಮೆ ಮಾಡಿಸಿದ ರೈತರೆಲ್ಲರಿಗೂ ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆ. ಅಂತಹ ರೈತರ 2003ರ ಮುಂಗಾರು ಹಂಗಾಮಿನಲ್ಲಿ ಬೆಲೆ ವಿಮಾ ನಷ್ಟ ಪರಿಹಾರ ಈಗಾಗಲೇ ಇತ್ಯರ್ಥ ಪಡಿಸಲಾಗುತ್ತದೆ. 2003ರ ಮುಂಗಾರು ಹಂಗಾಮಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಬೆಳೆ ಸಾಲ ಪಡೆಯದ ರೈತರ ಬೆಳೆ ವಿಮಾ ನಷ್ಟ ಪರಿಹಾರವನ್ನು ರೈತವಾರು ವಿವರವಾದ ತನಿಖೆಯನ್ನು ಜಮೀನಿನಲ್ಲಿ ಬೆಳೆ ಇದ್ದಾಗಲೇ ಭಾರತೀಯ ಕೃಷಿ ವಿಮಾ ಕಂಪನಿ ನಿಯಮಿತ ಸಂಸ್ಥೆಯು ತೆಗೆದುಕೊಂಡಿತ್ತು. ತನಿಖೆಯ ಪ್ರಕಾರ ವಿಮೆಗೆ ಒಳಪಟ್ಟ ರೈತರ ಕ್ಷೇತ್ರ ಬಿತ್ತನೆಯಾದ ಕ್ಷೇತ್ರಕ್ಕಿಂತ ಕಡಿಮೆ ಇದ್ದರೆ, ಬಿತ್ತನೆ ಕ್ಷೇತ್ರಕ್ಕೆ ವಿಮಾ ಸಂಸ್ಥೆಯು ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸಿರುತ್ತದೆ. ವಿಮೆಗೆ ಒಳಪಟ್ಟ ಬೆಳೆಯು ಬಿತ್ತನೆಯಾಗದೇ ಇದ್ದರೆ, ಅಂತಹ ರೈತರಿಗೆ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸಿರುವುದಿಲ್ಲ.

ತನಿಖಾ ಸಮಯದಲ್ಲಿ ಧಾರವಾಡ ಜಿಲ್ಲೆಯಲ್ಲಿ 4399 ರೈತರ ದಾಖಲಾತಿಗಳನ್ನು ಕೆಲವು ಬ್ಯಾಂಕುಗಳು ಒದಗಿಸದ ಕಾರಣ ಇವರ ಬೆಳೆ ವಿಮಾ ನಷ್ಟ ಪರಿಹಾರವನ್ನು ತಡೆ ಹಿಡಿಯಲಾಗಿದೆ. ಈಗ ಬ್ಯಾಂಕುಗಳು ದಾಖಲಾತಿಗಳನ್ನು

ಒದಗಿಸುತ್ತಿದ್ದು, ತನಿಖೆಯನ್ನು ಪೂರ್ಣಗೊಳಿಸಿ, ಶೀಘ್ರದಲ್ಲೆ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲಾಗುವುದು.

ಇ) ತಡೆ ಹಿಡಿಯಲಾದ 4399 ರೈತರು ಬೆಳೆ ವಿಮಾ ನಷ್ಟ ಪರಿಹಾರವನ್ನು ಭಾರತೀಯ ಕೃಷಿ ವಿಮಾ ಕಂಪನಿ ನಿಯಮಿತ ಸಂಸ್ಥೆಯು ತನಿಖೆಯನ್ನು ಪೂರ್ಣಗೊಳಿಸಿ ಶೀಘ್ರದಲ್ಲಿ ಇತ್ಯರ್ಥಪಡಿಸಲಿದೆ.

506(461) : ಶ್ರೀ ಅಕ್ಕಿ ಮಲ್ಲಿಕಾರ್ಜುನ್ ಸಹದೇವಪ್ಪ (ಕುಂದಗೋಳ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತ ಸಂಜೀವಿನಿ ಯೋಜನೆಯು ಜಾರಿಯಲ್ಲಿದೆಯೆ;

ಆ) ಯೋಜನೆಯ ವಿವರಗಳೇನು;

ಇ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ;

ಈ) ಈ ಯೋಜನೆಗೆ ಮೀಸಲಾಗಿಟ್ಟ ಹಣದ ಮೊತ್ತ ಎಷ್ಟು?

ಶ್ರೀ ಪ್ರಕಾಶ ಬಿ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಇದೆ.

ಆ) ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯು ರಾಜ್ಯದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಸಹಯೋಗದೊಂದಿಗೆ "ರೈತ ಸಂಜೀವಿನಿ" ಅಪಘಾತ ಪರಿಹಾರ ಯೋಜನೆಯನ್ನು 1996 ರಿಂದ ಜಾರಿಗೊಳಿಸುತ್ತಿದೆ. ರಾಜ್ಯದಲ್ಲಿ ಜಮೀನು ಹೊಂದಿರುವ ರೈತರು ಅಥವಾ ಅವರ ಕೃಷಿ ಅವಲಂಭಿತ ಕುಟುಂಬ ಸದಸ್ಯರು ಕೃಷಿ ಜಮೀನಿನಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವಾಗ ಹಾಗೂ ಮುಖ್ಯ ಮಾರುಕಟ್ಟೆ ಪ್ರಾಂಗಣ, ಉಪ ಮಾರುಕಟ್ಟೆ ಪ್ರಾಂಗಣ ಮತ್ತು ಮಾರುಕಟ್ಟೆ ಉಪ ಪ್ರಾಂಗಣಗಳಲ್ಲಿ ಕೃಷಿ ಮಾರಾಟ ಚಟುವಟಿಕೆಗಳಲ್ಲಿ ತೊಡಗಿರುವಾಗ ಅಪಘಾತ ಸಂಭವಿಸಿ, ಸಾವು ಅಥವಾ ಅಂಗವಿಕಲತೆ ಉಂಟಾದಲ್ಲಿ ಅವರ ಕುಟುಂಬಕ್ಕೆ ಆರ್ಥಿಕ ಸಹಾಯ ನೀಡಿ ಸಾಮಾಜಿಕ ಭದ್ರತೆ ಒದಗಿಸುವುದು. ರೈತ ಸಂಜೀವಿನಿ ಅಪಘಾತ ಪರಿಹಾರ ಯೋಜನೆಯ ಮೂಲ ಉದ್ದೇಶವಾಗಿರುತ್ತದೆ. ಅಪಘಾತದಿಂದ ಮರಣ ಹೊಂದಿದ ಸಂದರ್ಭಗಳಲ್ಲಿ ರೂ. 25,000–00ಗಳ ಪರಿಹಾರಧನ ಹಾಗೂ ಅಂಗವಿಕಲತೆ ಉಂಟಾದಲ್ಲಿ ಅಂಗವಿಕಲತೆಗೆ ಅನುಗುಣವಾಗಿ 1,500–00 ರೂ.ಗಳವರೆಗೆ ನಿಯಮದಡಿ ದಾಖಲಾತಿಗಳನ್ನು ಪರಿಶೀಲಿಸಿ ಮಂಜೂರು ಮಾಡಲು ರೈತ ಸಂಜೀವಿನಿ ನಿಯಮಾವಳಿಗಳಲ್ಲಿ ಅವಕಾಶವಿರುತ್ತದೆ.

ಇ) ದಿನಾಂಕ 1–4–1996 ರಿಂದ 31–12–2004 ರವರೆಗೆ ಧಾರವಾ ಜಿಲ್ಲೆಯಲ್ಲಿ ಒಟ್ಟು 38 ಜನ ಫಲಾನುಭವಿಗಳಿಗೆ 6,73,000–00 ರೂ.ಗಳನ್ನು ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆಯಡಿಯಲ್ಲಿ ಮಂಜೂರು ಮಾಡಿದೆ.

ಈ) ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯು 2004–05ನೇ ಸಾಲಿನ ಆಯವ್ಯಯದಲ್ಲಿ ಈ ಯೋಜನೆಗೆ ರೂ. 1.20 ಕೋಟಿಗಳನ್ನು ಮೀಸಲಿರಿಸಿದೆ.

507(958) : ಶ್ರೀ ಅಲ್ಕೋಡ್ ಹನುಮಂತಪ್ಪ (ದೇವದುರ್ಗ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯಲ್ಲಿ ಯೋಜನಾವಾರು ತಾಲ್ಲೂಕುವಾರು ಯಾವ ಯಾವ ಯೋಜನೆಗಳಿಗೆ ಎಷ್ಟು ಹಣ ಮಂಜೂರು ಮಾಡಲಾಗಿದೆ, ಖರ್ಚಾದ ಮತ್ತು ಉಳಿದ ಹಣ ಎಷ್ಟು;

ಆ) ಸರ್ಕಾರದ ಯೋಜನೆಗಳು ಫಲಾನುಭವಿಗಳಿಗೆ ಸಮಯಕ್ಕೆ ಸರಿಯಾಗಿ ಸಿಗದೆ ಅಧಿಕಾರಿಗಳು ವಿಳಂಬ ನೀತಿಯನ್ನು ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಅಂತಹ ಅಧಿಕಾರಿಗಳ ಮೇಲೆ ತೆಗೆದುಕೊಂಡ ಕ್ರಮಗಳೇನು?

ಶ್ರೀಮತಿ ಭಾಗೀರಥಿ ಮರುಳ ಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ರಾಯಚೂರು ಜಿಲ್ಲೆಯಲ್ಲಿ ಯೋಜನಾವಾರು ಮತ್ತು ತಾಲ್ಲೂಕುವಾರು ಮಂಜೂರು ಮಾಡಿರುವ ಹಾಗೂ ಖರ್ಚು ಬಾಕಿ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಇಲ್ಲ. ಉದ್ಭವಿಸುವುದಿಲ್ಲ.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಆಲ್ಕೋಡ್ ಹನುಮಂತಪ್ಪ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 958ಕ್ಕೆ ಅನುಬಂಧ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಜಿಲ್ಲೆಯ ಹೆಸರು	ತಾಲ್ಲೂಕು	2004–05ರ ಡಿಸೆಂಬರ್ ಅಂತ್ಯಕ್ಕೆ		
				ಬಿಡುಗಡೆ ಯಾದ ಹಣ	ಖರ್ಚು	ಉಳಿಕೆ
1.	ಶಿಶು ಅಭಿವೃದ್ಧಿ ಯೋಜನೆ	ರಾಯಚೂರು	ರಾಯಚೂರು	91.76	90.23	1.53
			ಮಾನ್ವಿ	69.93	63.20	6.73
			ಸಿಂಧನೂರು	75.21	67.74	7.47
			ಲಿಂಗಸಗೂರು	60.80	58.45	2.35
			ದೇವದುರ್ಗ	50.80	44.17	6.63
2.	ಅಂಗನವಾಡಿ ಕಾರ್ಯಕರ್ತೆಯರ ಹೆಚ್ಚುವರಿ ಗೌರವಧನ (ಕೇಂದ್ರ)	ರಾಯಚೂರು	ರಾಯಚೂರು	13.06	10.99	2.04
			ಮಾನ್ವಿ	9.33	9.32	0.01
			ಸಿಂಧನೂರು	10.28	10.18	0.04
			ಲಿಂಗಸೂಗೂರು	8.82	8.20	–
			ದೇವದುರ್ಗ	8.49	6.95	1.54
3.	ಅಂಗನವಾಡಿ ಕಾರ್ಯಕರ್ತೆಯರ ಹೆಚ್ಚುವರಿ ಗೌರವಧನ (ರಾಜ್ಯ)	ರಾಯಚೂರು	ರಾಯಚೂರು	5.97	6.49	–
			ಮಾನ್ವಿ	4.39	4.30	0.09

1	2	3	4	5	6	7
			ಸಿಂಧನೂರು	4.77	4.70	0.07
			ಲಿಂಗಸೂಗೂರು	3.63	3.62	0.01
			ದೇವದುರ್ಗ	2.82	4.33	–
4.	ಶಿಶುಪಾಲನಾ ಕೇಂದ್ರಗಳಿಗೆ ಅನುದಾನ ಕೇಂದ್ರ	ರಾಯಚೂರು	ರಾಯಚೂರು	0.48	0.48	–
			ಮಾನ್ವಿ	–	–	–
			ಸಿಂಧನೂರು	0.15	0.15	–
			ಲಿಂಗಸೂಗೂರು	0.43	0.43	–
			ದೇವದುರ್ಗ	0.28	0.29	–
5.	ಶಿಶುಪಾಲನಾ ಕೇಂದ್ರಗಳಿಗೆ ಅನುದಾನ ರಾಜ್ಯ	ರಾಯಚೂರು	ರಾಯಚೂರು	0.21	0.50	–
			ಮಾನ್ವಿ	0.18	0.18	–
			ಸಿಂಧನೂರು	0.32	0.32	–
			ಲಿಂಗಸೂಗೂರು	0.78	0.78	–
			ದೇವದುರ್ಗ	0.57	0.92	–
6.	ಅಂಗನವಾಡಿ ಕಟ್ಟಡಗಳ ನಿರ್ಮಾಣ	ರಾಯಚೂರು	ರಾಯಚೂರು	2.68	2.68	–
			ಮಾನ್ವಿ	1.81	1.81	–
			ಸಿಂಧನೂರು	2.44	2.44	–
			ಲಿಂಗಸೂಗೂರು	–	–	–
			ದೇವದುರ್ಗ	1.52	1.52	–

1	2	3	4	5	6	7
7.	ಮಾದರಿ ಅಂಗನವಾಡಿ ಕಟ್ಟಡ	ರಾಯಚೂರು	ರಾಯಚೂರು	2.31	2.31	–
			ಮಾನ್ವಿ	2.31	–	2.31
			ಸಿಂಧನೂರು	3.85	3.85	–
			ಲಿಂಗಸೂಗೂರು	–	–	–
			ದೇವದುರ್ಗ	2.31	2.31	–
8.	ಮಹಿಳಾ ಮಂಡಲಿಗಳಿಗೆ ಧನ ಸಹಾಯ	ರಾಯಚೂರು	ರಾಯಚೂರು	0.20	0.20	–
			ಮಾನ್ವಿ	0.15	1.50	–
			ಸಿಂಧನೂರು	0.13	0.13	–
			ಲಿಂಗಸೂಗೂರು	0.14	0.14	–
			ದೇವದುರ್ಗ	0.12	0.10	0.02
9.	ದೇವದಾಸಿ ಹಾಗೂ ವಿಧವೆಯರ ಪುನರ್ವಿವಾಹ	ರಾಯಚೂರು	ರಾಯಚೂರು	–	–	–
			ಮಾನ್ವಿ	–	–	–
			ಸಿಂಧನೂರು	–	–	–
			ಲಿಂಗಸೂಗೂರು	–	–	–
			ದೇವದುರ್ಗ	0.20	0.20	–
10.	ಪೌಷ್ಟಿಕ ಆಹಾರ	ರಾಯಚೂರು	ರಾಯಚೂರು	97.29	82.19	10.10
			ಮಾನ್ವಿ	66.73	67.14	–
			ಸಿಂಧನೂರು	73.64	70.86	2.78
			ಲಿಂಗಸೂಗೂರು	77.01	76.75	0.26
			ದೇವದುರ್ಗ	55.74	55.39	0.35

1	2	3	4	5	6	7
11.	ಪಿ.ಎಂ.ಜಿ.ವೈ.	ರಾಯಚೂರು	ರಾಯಚೂರು	11.83	12.93	–
			ಮಾನ್ವಿ	23.28	22.96	0.32
			ಸಿಂಧನೂರು	29.74	29.84	–
			ಲಿಂಗಸೂಗೂರು	9.34	9.54	–
			ದೇವದುರ್ಗ	12.81	14.33	–
12.	ನಿರ್ಗತಿಕ ಮಕ್ಕಳ ಕುಟೀರಗಳು	ರಾಯಚೂರು	ರಾಯಚೂರು	–	–	–
			ಮಾನ್ವಿ	1.49	1.66	–
			ಸಿಂಧನೂರು	0.77	2.41	–
			ಲಿಂಗಸೂಗೂರು	3.76	3.18	0.55
			ದೇವದುರ್ಗ	0.96	0.96	–
13.	ಬಾಲಕಿಯರ ವಸತಿ ನಿಲಯ	ರಾಯಚೂರು	ರಾಯಚೂರು	2.75	2.75	–
			ದೇವದುರ್ಗ	2.66	2.66	–
14.	ಹಾಜರಾತಿ ಶಿಷ್ಯವೇತನ	ರಾಯಚೂರು	ರಾಯಚೂರು	1.20	1.20	–
			ಮಾನ್ವಿ	1.20	1.20	–
			ಸಿಂಧನೂರು	1.20	1.20	–
			ಲಿಂಗಸೂಗೂರು	1.20	1.20	0.05
			ದೇವದುರ್ಗ	1.20	1.20	0.34
[illegible]	ಸಾಂತ್ವನ	ರಾಯಚೂರು	ರಾಯಚೂರು	0.60	0.60	–
16.	ಸ್ವಯಂಸಿದ್ಧ (ಕೇ.ಪು.ಯೋ)	ರಾಯಚೂರು	ರಾಯಚೂರು	6.295	6.295	–

1	2	3	4	5	6	7
			ದೇವದುರ್ಗ	6.273	6.273	–
17.	ಸ್ತ್ರೀ ಶಕ್ತಿ ಯೋಜನೆ	ರಾಯಚೂರು	ರಾಯಚೂರು	44.012	44.012	–
			ಮಾನ್ವಿ	40.626	40.626	–
			ಸಿಂಧನೂರು	45.746	45.746	–
			ಲಿಂಗಸೂಗೂರು	37.786	37.788	–
			ದೇವದುರ್ಗ	22.016	22.016	–
18.	ಉದ್ಯೋಗಿನಿ ಯೋಜನೆ	ರಾಯಚೂರು	ರಾಯಚೂರು	0.875	0.189	0.311
			ಮಾನ್ವಿ	0.90	0.964	0.404
			ಸಿಂಧನೂರು	0.875	–	0.50
			ದೇವದುರ್ಗ	0.925	0.13	0.62
			ಲಿಂಗಸೂರು	0.90	0.195	0.555
19.	ಲಂಬಾಣಿ ಕಸೂತಿ ತರಬೇತಿ ಯೋಜನೆ	ರಾಯಚೂರು	–	0.90	–	0.90
20.	ಮಹಿಳಾ ತರಬೇತಿ ಯೋಜನೆ	ರಾಯಚೂರು	ರಾಯಚೂರು	2.80	2.80	–
			ಮಾನ್ವಿ	–	–	–
			ಸಿಂಧನೂರು	0.60	0.60	–
			ದೇವದುರ್ಗ	0.60	0.60	–
			ಲಿಂಗಸೂರು	0.60	0.60	–
	ದೇವದಾಸಿ ಪುನರ್ವಸತಿ ಯೋಜನೆ	ರಾಯಚೂರು	–	28.00	0.80	27.11

1	2	3	4	5	6	7
22.	ನಗರ ಸ್ತ್ರೀಶಕ್ತಿ ಯೋಜನೆ	ರಾಯಚೂರು	ರಾಯಚೂರು	–	–	–
			ಮಾನ್ವಿ	–	–	–
			ಸಿಂಧನೂರು	–	–	–
			ದೇವದುರ್ಗ	–	–	–
			ಲಿಂಗಸೂರು	–	–	–
23.	ಮಾರುಕಟ್ಟೆ ನೆರವಿನ ಯೋಜನೆ ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ ಇಲಾಖೆ	ರಾಯಚೂರು		0.35	–	0.35
24.	ಆಧಾರ ಯೋಜನೆ	ರಾಯಚೂರು		0.72	0.72	
25.	ಸಾಧನೆ ಮತ್ತು ಸಲಕರಣೆ	ರಾಯಚೂರು		0.50	0.50	
26.	ವಿದ್ಯಾರ್ಥಿ ವೇತನ	ರಾಯಚೂರು		2.30	2.30	
27.	ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ ಧನ	ರಾಯಚೂರು		0.22	0.22	
28.	ವಿಶ್ವ ಅಂಗವಿಕಲರ ದಿನಾಚರಣೆ	ರಾಯಚೂರು		0.15	0.15	
29.	ವೃದ್ಧಾಶ್ರಮಕ್ಕೆ ಸಹಾಯಧನ	ರಾಯಚೂರು		1.96		1.96

510(1060) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಪತ್ತೆಯಾದ ಕಳಪೆ ಬಿತ್ತನೆ ಬೀಜ, ಕೀಟನಾಶಕ ಹಾಗೂ ರಸಗೊಬ್ಬರ ಪ್ರಕರಣಗಳು ಎಷ್ಟು (ಜಿಲ್ಲಾವಾರು, ಕಂಪನಿವಾರು ವಿವರ ನೀಡುವುದು);

ಆ) ಈ ಪ್ರಕರಣಗಳಲ್ಲಿ ಎಷ್ಟು ಮೊಕದ್ದಮೆಗಳನ್ನು ಹೂಡಲಾಗಿದೆ ಹಾಗೂ ಎಷ್ಟು ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಲಾಗಿದೆ.

ಇ) ಇಂತಹ ಪ್ರಕರಣಗಳನ್ನು ತಡೆಯಲು ಕಾನೂನಿಗೆ ತಿದ್ದುಪಡಿ ತರುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ, ಇದ್ದಲ್ಲಿ ವಿವರ ನೀಡುವುದು;

ಈ) ಹೊರ ದೇಶಗಳಲ್ಲಿ ನಿಷೇಧಿಸಿದ ಅನೇಕ ಕೀಟ ನಾಶಕಗಳು ನಮ್ಮ ರಾಜ್ಯದಲ್ಲಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಅವುಗಳನ್ನು ರಾಜ್ಯದಲ್ಲಿ ನಿಷೇಧಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ 19508 ಬೀಜ ಮಾದರಿಗಳನ್ನು ವಿಶ್ಲೇಶಿಸಲಾಗಿದ್ದು, ಈ ಪೈಕಿ 274 (ಶೇ. 1.4) ಮಾದರಿಗಳು ಕಡಿಮೆ ಗುಣಮಟ್ಟದ್ದೆಂದು (ಮೊಳೆಯುವಿಕೆ ಕಡಿಮೆ) ವರದಿಯಾಗಿದೆ. ಜಿಲ್ಲಾವಾರು, ಕಂಪನಿವಾರು ವಿವರಗಳನ್ನು ಅನುಬಂಧ–1 (ಅ) ಹಾಗೂ 2(ಅ)ರಲ್ಲಿ ನೀಡಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ಒಟ್ಟು 13584 ಕೀಟನಾಶಕಗಳ ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದು ಅವುಗಳ ಪೈಕಿ 219 ಮಾದರಿಗಳು ಮಿಸ್ ಬ್ರಾಂಡ್ ಬಂದಿರುತ್ತವೆ. (ಶೇ. 1.6) ಜಿಲ್ಲಾವಾರು, ಕಂಪನಿವಾರು ವಿವರಗಳನ್ನು ಅನುಬಂಧ–1 (ಅ) ಹಾಗೂ 2(ಆ)ರಲ್ಲಿ ನೀಡಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ 22526 ರಸಗೊಬ್ಬರ ಮಾದರಿಗಳನ್ನು ವಿಶ್ಲೇಷಿಸಲಾಗಿದ್ದು, ಈ ಪೈಕಿ 528 (ಶೇ. 2.34) ಮಾದರಿಗಳು ಕಡಿಮೆ ಗುಣಮಟ್ಟದ್ದೆಂದು ವರದಿಯಾಗಿದೆ. ಜಿಲ್ಲಾವಾರು, ಕಂಪನಿವಾರು ವಿವರಗಳನ್ನು ಅನುಬಂಧ–1(ಇ) ಹಾಗೂ 2(ಇ)ರಲ್ಲಿ ನೀಡಲಾಗಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ಬಿತ್ತನೆ ಬೀಜಕ್ಕೆ ಸಂಬಂಧಿಸಿದಂತೆ 84 ಪ್ರಕರಣಗಳಲ್ಲಿ ಮೊಕದ್ದಮೆ ಹೂಡಲಾಗಿದೆ. 13 ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ಕೀಟನಾಶಕಗಳಿಗೆ ಸಂಬಂಧಿಸಿದಂತೆ 219 ಮಿಸ್ ಬ್ರಾಂಡ್ ಪ್ರಕರಣಗಳ ಪೈಕಿ ಈಗಾಗಲೇ 34 ಪ್ರಕರಣಗಳಲ್ಲಿ ಮೊಕದ್ದಮೆ

ಹೂಡಲಾಗಿದ್ದು, ನ್ಯಾಯಾಲಯಗಳಲ್ಲಿ ಪ್ರಕರಣಗಳು ವಿವಿಧ ಹಂತದಲ್ಲಿವೆ. ಅನುಬಂಧ-2 (ಆ)ರಲ್ಲಿ ವಿವರ ನೀಡಿದೆ. ಇಲ್ಲಿಯವರೆಗೆ ಒಂದು ಪ್ರಕರಣದಲ್ಲಿ ನ್ಯಾಯಾಲಯದಿಂದ ತೀವಶು ಬಂದಿದ್ದು ದಂಡ ವಿಧಿಸಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ರಸಗೊಬ್ಬರಕ್ಕೆ ಸಂಬಂಧಿಸಿದಂತೆ 53 ಪ್ರಕರಣಗಳಲ್ಲಿ ಮೊಕದ್ದಮೆ ಹೂಡಲಾಗಿದೆ ಹಾಗೂ ನ್ಯಾಯಾಲಯದಲ್ಲಿ ವಿವಿಧ ಹಂತದಲ್ಲಿ ಪ್ರಕರಣಗಳು ಇರುವುದರಿಂದ ತೀರ್ಪು ಇನ್ನು ಬಂದಿರುವುದಿಲ್ಲ. ವಿವರಗಳನ್ನು ಅನುಬಂಧ-1 (ಇ) ಹಾಗೂ 2(3)ರಲ್ಲಿ ನೀಡಲಾಗಿದೆ.

ಇ) ಬಿತ್ತನೆ ಬೀಜಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರ ರೂಪಿಸಿರುವ ಕಾಯ್ದೆಗಳನ್ನು ಜಾರಿಗೊಳಿಸುತ್ತದೆ. ಆದ್ದರಿಂದ, ತಿದ್ದುಪಡಿ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇರುತ್ತದೆ. ಆದರೂ ಸಹ ರಾಜ್ಯ ಸರ್ಕಾರ ತಿದ್ದುಪಡಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸಮಗ್ರ ರೀತಿಯಾಗಿ ತಿದ್ದುಪಡಿಯಾಗಿರುವ ಹೊಸ ಬೀಜ ಕಾಯ್ದೆ 2002 ಕೇಂದ್ರ ಸರ್ಕಾರ ಅನುಮೋದನೆ ನೀಡಿದ್ದು, ಪಾರ್ಲಿಮೆಂಟ್ ಅನುಮೋದನೆ ನಂತರ ಜಾರಿಗೆ ಬರುತ್ತದೆ.

ಕೀಟನಾಶಕಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಕೀಟನಾಶಕ ಕಾಯ್ದೆ ಮತ್ತು ಕಾನೂನಿಗೆ ತಿದ್ದುಪಡಿ ತರುವ ಅಧಿಕಾರ ಇಲ್ಲವಾದರೆ ಕೇಂದ್ರ ಸರ್ಕಾರ ತಿದ್ದುಪಡಿ ತರುವ ಸಂದರ್ಭಗಳಲ್ಲಿ ರಜ್ಯ ಸರ್ಕಾರದ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಹಾಗೂ ಈಗಾಗಲೇ ಕೆಲವು ತಿದ್ದುಪಡಿಗಳನ್ನು ತರಲಾಗಿದೆ.

ರಸಗೊಬ್ಬರಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರ ರೂಪಿಸಿರುವ ರಸಗೋಬ್ಬರ ನಿಯಂತ್ರಣ ಆಜ್ಞೆ 1985ನ್ನು ಜಾರಿಗೊಳಿಸುತ್ತದೆ. ಆದ್ದರಿಂದ ತಿದ್ದುಪಡಿ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇರುತ್ತದೆ. ಈಗಾಗಲೇ ಜನವರಿ 2003ರಲ್ಲಿ ಕೇಂದ್ರ ಸರ್ಕಾರವು ತಿದ್ದುಪಡಿ ಮಾಡಿರುತ್ತದೆ.

ಇ) ಕೇಂದ್ರೀಯ ಕೀಟನಾಶಕ ಮಂಡಳಿಯಿಂದ ನೋಂದಣಿ ಪಡೆದ ಕೀಟನಾಶಕಗಳನ್ನು ಮಾತ್ರ ದೇಶದಲ್ಲಿ ಮಾರಾಟ ಮಾಡಬಹುದಾಗಿರುತ್ತದೆ. ಕೇಂದ್ರ ಸರ್ಕಾರದಿಂದ ನಿಷೇಧಿಸಿರುವ ಕೀಟನಾಶಕಗಳ ಮಾರಾಟವನ್ನು ರಾಜ್ಯದಲ್ಲಿಯೂ ನಿಷೇಧಿಸಲಾಗಿರುತ್ತದೆ. ಅನುಬಂಧ-3 (ಆ)ರಲ್ಲಿ ವಿವರ ನೀಡಿದೆ.

ಅನುಬಂಧ–1 (ಅ)
ಕಳೆದ ಮೂರು ವರ್ಷಗಳಲ್ಲಿ ಕಡಿಮೆ ಗುಣಮಟ್ಟದ ಬೀಜಮಾದರಿಗಳಿಗೆ ಜಿಲ್ಲೆಗಳಲ್ಲಿ ತೆಗೆದುಕೊಂಡ ಕಾನೂನು ರೀತ್ಯಾ ಕ್ರಮದ ವಿವರ

ಕ್ರ.ಸ.	ಜಿಲ್ಲೆಗಳ ಹೆಸರು	2001–02		2002–03		2003–04	
		ಕ.ಗು.ಮ ಮಾದರಿ	ಕಾನೂನು ಕ್ರಮ	ಕ.ಗು.ಮ ಮಾದರಿ	ಕಾನೂನು ಕ್ರಮ	ಕ.ಗು.ಮ ಮಾದರಿ	ಕಾನೂನು ಕ್ರಮ
1.	ಬೆಂಗಳೂರು (ನ)	2	1	3	3	2	0
2.	ಬೆಂಗಳೂರು (ಗ್ರಾ)	2	1	1	1	1	0
3.	ಮೈಸೂರು	5	0	4		4	3
4.	ಚಾಮರಾಜನಗರ	6	0	0		2	2
5.	ಕೊಡಗು	3	0	0		1	0
6.	ದಕ್ಷಿಣ ಕನ್ನಡ	15	5	1		0	0
7.	ಉಡುಪಿ	6	0	0		0	0
8.	ಹಾಸನ	7	3	4	1	11	0
9.	ಕೋಲಾರ	1	0	5		4	2
10.	ಮಂಡ್ಯ	8	6	2	2	8	4
11.	ಧಾರವಾಡ	0	0	2		1	0
12.	ಹಾವೇರಿ	2	2	2	2	0	0
13.	ಗದಗ್	5	2	5	2	1	1
14.	ಉತ್ತರ ಕನ್ನಡ	3	2	0		0	0
15.	ಬೆಳಗಾಂ	5	2	4		6	0
16.	ಬಿಜಾಪುರ	8	0	3	1	3	0
17.	ಬಾಗಲಕೋಟೆ	1	0	5	2	1	0
18.	ದಾವಣಗೆರೆ	9	0	4		4	1
19.	ಚಿತ್ರದುರ್ಗ	5	3	6	1	0	0
20.	ತುಮಕೂರು	4	3	18	6	4	1
21.	ಚಿಕ್ಕಮಗಳೂರು	2	0	5		2	0
22.	ಶಿವಮೊಗ್ಗ	6	4	5	4	1	1
23.	ಕೊಪ್ಪಳ	6	4	4		2	1
24.	ರಾಯಚೂರು	0	0	3		0	0
25.	ಗುಲ್ಬರ್ಗಾ	1	0	3		2	0
26.	ಬಳ್ಳಾರಿ	5	3	6	1	1	1
27.	ಬೀದರ್	1	0	1		0	0

Annexure-1-ಅ

Districtwise and misbranded pesticides during last 3 years.

Sl. No.	Taluk	Product	Name of the Company
	2001-02		
	Bangalore (Urban)		
1.	Bangalore North	Fenvelrate 0.4% DP	Agrochemical Industries, Erode
	Bangalore (Rural)		
1.	Nelamangala	Monocrotophos 36% SL	Sri Ramicides (P) Limited, Chennai
2.	Channapatna	Monocrotophos 36% SL	Makkam Agrochem, Bangalore
	Tumkur		
1.	Kunigal	Dimethoate 30% EC	Agro Chem Industries, Bangalore
2.	Tumkur	Carbandize+ Mancozeb	UPL Mumbai
	Chamarajanagar		
1.	Chamarajanagar	Azadirachtin 0.03%F.C.	Oceam Agro Limited, Baroda
2.	Chamarajanagar	Monocrotophos 36% SL	Devidayal Sales, Limited, Mumbai
	Shimoga		
1.	Sorab	Quinolphos 25% EC	Agro Chemical Industries, Chennai
2.	Shimoga	Metalaxy 1 + Mancozeb 64% WP	Novartis India, Mumbai
	Hassan		
1.	Belur	Endosulfan 35% EC	Agrochem Industries, Bangalore
2.	Holenarasipura	Methyl Parathion 50% EC	Northern Minerals Gurgaon

1	2	3	4
3.	Belur	Monocrotophos 36% SL	Agrochem Indus. Bangalore
4.	Belur	Methyl parathion 50% EC	Northern Minerals, New Delhi
	Chickmagalur		
1.	Tarikere	Dimethoate 30% EC	Madhusudan Industries T.N.
	Dakshina Kannada		
1.	Buntwala	Dimethoate 30% EC	Rallis India Limited, Mumbai
2.	Buntwala	Dimethoate 30% EC	Madhusudan Industries, TN
3.	Puttur	Monocrotophos 36% SL	
4.	Belthangadi	Monocrotophos 36% SL	Sri Ramicides Chem (P Limited, Chennai
5.	Sulya	Methyl Parathion 2%	Kaiser Agrochem, Salem
	Dharwad		
	Kalaghatagi	Dimethoate 30% EC	Jyothi Pesticides
	Gadag		
1.	Mundargi	Endosulfan 35% EC	Jyothi Pesticides
	Haveri		
1.	Hangal	Monocrotophos 36% SL	Dhara Chem Industries Haryana
2.	Hirekerur	Dimethoate 30% EC	Sri Ramicides Chem (P) Ltd, Chennai

1	2	3	4
	Belgaum		
1.	Belgaum	Monocrotophos 36% SL	Central Insecticides and Fertilisers Limited
2.	Ramdurga	Dimethoate 30% EC	Safex India Limited, Haryana
3.	Ramdurga	Monocrotophos 36% SL	- " -
4.	Chikkodi	Metalaxy 13% + Mane ozcb 64% WP	Novartis (I) Ltd, Mumbai
5.	Belgaum	Methyl parathion 50% EC	Goel Pesticides MP
	Chitradurga		
1.	Hiriyur	Monocrotophos 36% SL	Anu Products Haryana
2.	Chitradurga	Monocrotophos 36% SL	Devi Pesticides TN
	Davangere		
1.	Davangere	Monocrotophs 36% SL	KSCMF Bangalore
2.	Harihara	Endosulfan 35% EC	Agro Chem Industries, Bangalore
3.	Davangere	Endosulfan 35% EC	- " -
	Bellary		
1.	Bellary	Monocrotophos 36% SL	Devidayal Sales, Mumbai
2.	Bellary	Azadirachtin	Karakar Agro Goa
3.	Siruguppa	Zineb 75% WP	Indofil C0, Mumbai
4.	Hadagali	Monocrotophos 36% SL	Excel Industries, Mumbai

1	2	3	4
5.	Siruguppa	Azadirachtin 15% EC	Sunny Nccm Extractions, AP
6.	Siruguppa	Monocrotophos 36% SL	Paramount Pesticides
7.	Siruguppa	Cypermethrin 10% F.C.	- " -
8.	Bellary	Phorate 10%	Safex Chemicas New Delhi
9.	Siruguppa	Endosulfan 35% EC	JKK Agro Corpn.
	Raichur		
1.	Sindhanoor	Zineb 75% WP	Indofil, Mumbai
2.	Raichur	Chloropyriphos 20% EC	Madhusudan Industries, Chennai
3.	Manvi	Dichlorovas 76% EC	Agroaid Pesticides, MP
	Koppal		
1.	Koppal	Quinophos 25% EC	Kovei Pesticides (P) Ltd.
2.	Gangavathi	Acephate 75% SP	Meerut Agro Chem
3.	Gangavathi	Endosulfan 35% EC	JKK Agro Corpn, Chennai
4.	Gangavathi	Endosulfan 35% EC	Agro Chem Industries, B'lore
	Gulbarga		
1.	Shahapur	Quinolphos 255 EC	Madhusudhan Industries, Channai
2.	Gulbarga	Chloropyriphis 20% EC	Swastik Pesticides, UP
3.	Jevargi	Dimethoate 30% EC	Phytochem (I) Ltd Hyderabad

1	2	3	4
4.	Surapur	Monocrotophos 36% SL	JKK Agro Corpn, Chennai
5.	Surapur	Monocrotophos 36% SL	Madhusudhan Industries Chennai
6.	Aland	Endosulfan 35% FC	Universal Agro chem Kolkata
7.	Shahapur	Cypermethrin 10% FC	Shippon Chem (P) Ltd. MP
8.	Shahapur	Cypermethrin 10% FC	Shippon Chem (P) Ltd MP
9.	Afzalpur	Chlorpyriphos 20% FC	Swastik Chem, Ahmedabad
10.	Chittapur	Endosulfan 35% FC	Kandal Chemicals
	Bidar		
1.	Bidar	Endosulfan 35% EC	Tuticorn Agrochem Chennai
2.	Bidar	Chloropyriphos 20% EC	Maharastra Pesticides, Mumbai
3.	Aurad	Endosulfan 35% EC	Agroaids Pesticides, MP
4.	Bhalki	Endosulfan 35% EC	Hindustan Pulversing Mills Rajasthan
	Bijapur		
1.	Sindagi	Endosulfan 35% FC	Jyothi Pesticides
2.	Sindagi	Dimethoate 30% EC	Agro Chem Industries, B'lore
3.	B. Bagewadi	Monocrotophos 36% SI	Safex chemicals new Delhi
4.	B. Bagewadi	Endosulfan 35% EC	- " -

1	2	3	4
5.	Indi	Dimethoate 30% SI	- " -
	Bagalkote		
1.	Jamakhandi	Endosulfan 35% EC	Agrochem Industries B'lore
2.	Mudhol	Dimethoate 30%	Parul Chemicals Ltd, Gujarat
3.	Jamakhandi	Dimethoate 30% EC	Agro chem Industires, B'lore
4.	Jamakhandi	Monocrotophos 36% SI	- " -
5.	Mudhol	Monocrotophos 36% SL	- " -
	2002-03		
	Bagalkote		
1.	Badami	Monocrotophos 36% SL	Hindustan Pulverising Kerur
2.	Biligi	Tridemphos 25% DP	Bayer India Ltd, B'lore
3.	Mudhol	Dimethoat 30% EC	Agrochemi Industries B'lore
4.	Chittapur	Quinophos 25% EC	Devidayal Sales, Mumbai
5.	Hungund	Chloropyriphos 20% FC	Industries Chem & Fert Chennai
	Bangalore (R)		
1.	Kanakapura	Quinolphos 25% EC	AG Grow products, Chennai
2.	Nelamangala	Endosulfan 36% EC	Agrochem Indus Bangalore

1	2	3	4
	Belgaum		
1.	Raibag	Monocrotophos 36% SL	Anu Products/ Faridabad
2.	Ramadurga	Endosulfan 35% EC	Agro chem Indus B'lore
3.	Athani	Dimethoate 30% EC	Agro Chemicals Ltd. Chennai
4.	Raibag	Dimethoate 30% EC	Insecticides (I) Ltd Rajastan
5.	Ramdurga	Endosulfan 35%, EC	Delta Insecticides, Haryana
	Bellary		
1.	Hospet	Azadirachtin 0.15% EC	Sri Bio Multitech, B'lore
2.	Hospet	Azadirachtin 0.15% EC	Sri Bio Multitech, B'lore
3.	Hospet	Azadirachtin 0.15% EC	Malnad Extraction Indus, Shimoga
4.	Hospet	Azadiractin 0.15% EC	Sri Bio Multitech, B'lore
5.	H.B. Halli	Azadirachtin 0.15% EC	Malnad Extraction Indus, Shimoga
6.	Hospet	Azadirachtin 0.15% EC	Sri Bio Multitech, B'lore
7.	Siruguppa	Phorate	Insecticides (I) Ltd Rajastan
8.	Siruguppa	Monocrotophos 36% SL	Insecticides (I) Ltd Rajastan
9.	Siruguppa	Monocrotophos 36% SL	Parul Chemicals Gujarat
10.	Hospet	Phorate 10% CG	Hindustan Pulverising Mills Rajastan

1	2	3	4
	Bidar		
1.	Bidar	Dimethoate 30% EC	- " -
2.	Aurad	Dimethoate 30% EC	Universal Pestochem
3.	Humnabad	Endosulfan 30% EC	A.G. Agro Products, Chennai
4.	Humnabad	Endosulfan 35% EC	Arpan tech Associates Rajastan
5.	Bidar	Chloropyriphis 20% EC	Hindustan Pulverising Mills Rajastan
6.	Bidar	Chloropyriphis 20% EC	Ramachandra Pesticides B'lore
7.	Bidar	Endosulfan 35% EC	Pestchem and Allieds Mumbai
8.	Bidar	Endosulfan 35% EC	Maharashtra Pesticides Mumbai
9.	Bhalki	Endosulfan 35% EC	Agrochem Industries, B'lore
	Bijapur		
1.	Indi	Dimethoate 30% EC	Agro chem Indus B'lore
2.	Bijapur	Lamba Cylothrin 5% EC	Syngenta India Mumbai
3.	Sindagi	Acephate 75% SP	Vantech Chemicals Medak
4.	Muddebihal	Dimethoate 30% EC	Agro Chem Industries, B'lore
5.	Muddebihal	Methyl Parathion 50% EC	- " -
6.	Muddebihal	Acephate 75% SP	- " -

1	2	3	4
	Chitradurga		
1.	Chitradurga	Fenvelrate 20% EC	Anu Products, Haryana
	D. Kannada		
1.	Puttur	Endosulfan 35% EC	Sulfag Products, Ltd, Chennai
	Davangere		
1.	Davangere	Mancozeb 75% WP	Northern Minerals, Haryana
	Dharwad		
1.	Kalghatgi	Phosphomidon 40%	Hyderabad Chem Supplies Ltd
	Gulbarga		
1.	Gulbarga	Dimethoate 30% EC	Hyderabad Chem Supplies Ltd.
2.	Sedam	Endosulfan 35% EC	- " -
3.	Shahapur	Endosulfan 35% EC	- " -
4.	Chincholi	Dimethoate 30% EC	A.G. Grow Products Chennai
5.	Yadgir	Chlorpyriphos 20% EC	Arfantech Associates, Mumbai
6.	Chincholi	Chlorpyriphos 20% EC	Rahul Organics, Mumbai
7.	Chittapur	Quinolphos 25% EC	Sulphur Mills
8.	Sedam	Quinolphos 25% EC	Devidayal Sales, Mumbai
	Haveri		
1.	Hangal	Dimethoate 30% EC	Agro Chem Indus, B'lore

1	2	3	4
2.	Haveri	Dimethoate 30% EC	- " -
3.	Ranebennur	Endosulfan 35% EC	Anu Products, Haryana
	Kolar		
1.	Chintamani	Chlorpyriphos 55% EC	Meerut Agro Chem India
	Koppal		
1.	Gangavathi	Monocrotphos 36% SL	UPI, Mumbai
2.	Kushtagi	Dimethoate 30% EC	Agro Chem Indus, B'lore
3.	Kushtagi	Butachlor 50% EC	KSCMF B'lore
4.	Kushtagi	Dimethoate 30% EC	Agro Chem Indus, B'lore
5.	Kushtagi	Endosulfan 35% EC	Arfantech Associates MP
	Mandya		
1.	Maddur	Dimethoate 30% EC	Agroaids Pesticides, MP
2.	Koppa	Monocrotophos 36% SL	Safex Chemicals, New Delhi
	Raichur		
1.	Deodurga	Monocrotophos 36% SL	Sulphur Mills Gujarat,
2.	Raichur	Chlorpyriphos 20% EC	JKK Agro Corpn, Chennai
	Shimoga		
1.	Balehonnur	Dimethoate 30% EC	Goyal Pesticides, MP

1	2	3	4
2.	Soraba	Dimethoate 30% EC	Agro Chem Indus, B'lore
3.	Shikaripura	Endosulfan 35% EC	- " -
4.	Shimoga	Dimethoate 30% EC	Anu Products, Faridabad
	Tumkur		
1.	Korategere	Methyl Parathion	Bayer India Ltd, Mumbai
	U.Kannada		
1.	Yellapura	Phorate 10% EC	Delco Lab, New Delhi
2.	Karwar	Dimethoate 30% EC	Agrochem Indus, B'lore
3.	Karwar	Dimethoate 30% EC	Devidayal Sales, Mumbai
	2003-04		
	Bagalkote		
1.	Mudhol	Endosulfan 35% EC	Agro Chem Indus, B'lore
2.	Bilgi	Dimethoate 30% EC	- " -
3.	Bilgi	Endosulfan 35% EC	- " -
4.	Ilkal	Endosulfan 35% EC	Safex Chemicals, Haryana
5.	Bagalkote	Acephate 75% SP	T. Stanes and Co. Coimbatore

1	2	3	4
6.	Badami	Quinolphos 25% EC	JKK Agro Corpn, Madras
7.	Badami	Endosulfan 35% EC	- " -
	Bangalore (R)		
1.	Devanahalli	Monocrotophos 36% SL	Safex Chemicals, Haryana
	Belgaum		
1.	Ramdurga	Methyl Parathion 50% EC	Goyal Pesticides MP
2.	Hukkeri	Monocrotophos 36% WL	Safex Chemicals Delhi
3.	Ramadurga	Monocrotophos 36% SL	MAM Agro Chem Hyderabad
4.	Belgaum	Cypermethrin 10% EC	Hyderaad chem Supplies
5.	Belgaum	Cypermethrin 10% EC	- " -
6.	Bailhongal	Cypermethrin 10%	Hyderabad Chem Supplies
7.	Raibag	Cypermethrin 10% EC	Agstya Agro Ltd, Hyderabad
8.	Hukkeri	Dimethoate 30% EC	Agro Chem Indus, B'lore
9.	Saundatti	Manocrotophos 30% EC	Maharashtra Pesticides Ltd, Aurangabad

1	2	3	4
10.	Ramdurga	Monocrotophos 36% SL	Dhruv Pesticides, Mumbai
11.	Khanapur	Endosulfan 35% EC	Safex Chemicals Indus, New Delhi
12.	Belgaum	Cypermethrin 25% EC	Syngenta India Ltd, Mumbai
	Bellary		
1.	Hospet	Monocrotophos 36% SL	Dhruv Pesticides, Mumbai
	Bidar		
1.	Bidar	Chloropyriphos 20% EC	Agstya Agro, Ltd, Hyderabad
2.	Bidar	Chlorpyriphos 20% EC	Hindustan Pulverising Mills Rajstan
3.	Bidar	Endosulfan	Dhruva Pesticides & Fertilisers Mumbai
4.	Humnabad	Endosulfan 35% EC	Agro Chem Indus, B'lore
5.	Humnabad	Chloropyriphos 20% EC	Vatech Chemi Medak
6.	Humnabad	Chlorpyriphos 20% EC	Excel Indus Ltd, Mumbai
7.	Bidar	Acephate 75% SP	Universal Pesticides Medak
8.	Bidar	Acephate 75% SP	EID Parry India Chennai

1	2	3	4
	Chickmagalur		
1.	Kadur	Trizophos 40% EC	Aventis Crop Science Mumbai
2.	Kadur	Trizophos 40% EC	- " -
	D. Kannada		
1.	Mangalore	Methyl Parathion 50% EC	Northern Minerals Ltd
	Dharwad		
1.	Dharwad	Endosulfan 35% EC	Safex Chemicals India Bahadurnagar
2.	Kalghatgi	Endosulfan 35% EC	- " -
3.	Dharwad	Chlorpyriphos 20% EC	- " -
4.	Dharwad	Dimethoate	Agro Chem Indus B'lore
	Gadag		
1.	Naragund	Endosulfan 35% EC	Dhruva Pesticides MP
2.	Ron	Dimethoate 30% EC	Parul Chemi Gujarat
	Gulbarga		
1.	Yadgir	Chlorpyriphos 20% EC	Agrochem Indus B'lore
2.	Sedam	Chloropyriphos 20% EC	Veema Chemi, Gujarat
3.	Afzalpur	Quinolphos 25% EC	Entomic Chemi, Mumbai
4.	Sedam	Quinolphos 1.5% DP	ACT Chemicals Bharuch

1	2	3	4
5.	Yadgir	Fenvelrate 0.4% DP	Aditya Mineral, Kodopuram
6.	Afzalpur	Chlorpyriphos 20% EC	Universal Agro Chem
	Hassan		
1.	Arkalgudu	Monocrotophos 36% SL	Sri Ramicides Chem Chennai
2.	Channarayapatna	Triazophos 40% EC	Aventis Crop Science Gujarat
3.	Belur	Monocrotophos 36% SL	Agrochem Indus, B'lore
4.	Channarayapatna	Methyl Parathion 50% EC	- " -
5.	Hassan	Carbendazine 50% WP	KSCMF B'lore
6.	Arsikere	Methyl Parathion 50% EC	Punjab Pesticides Indl Co-op Society
	Haveri		
1.	Savanur	Dimethoate 30% EC	Agro Chem Indus, B'lore
2.	Haveri	Malathion 5% dust	- " -
3.	Haveri	Endosulfan 35% EC	Hyderabad Chemi Supplies
4.	Byadagi	Dimethoate 30% EC	Devidayal Sales, Mumbai
5.	Haveri	Cypermethrin 10% EC	Sentron Agro Ayurvedic Products, Hubli
	Kolar		
1.	Gowribidanur	Acephate 75% SP	Madhusudan Sulfag Products, Chennai

1	2	3	4
2.	Gowribidanur	Dichlorovas 76% EC	Hikal Ltd, Gujarat
	Koppal		
1.	Koppal	Endosulfan 35% EC	Safex Chemicals New Delhi
2.	Yelburga	Monocrotophos 36% SL	Goyal Pesticides, Mumbai
3.	Yelburga	Monocrotophos 36% SL	Safex Chemicals New Delhi
4.	Koppal	Endosulfan 35% EC	Goyal Pesticides MP
	Mandya		
1.	S.R. Patna	Methyl Parathion 50% EC	Safex Chemicals New Delhi
2.	Maddur	Azadirachtin	EID Parry (I) Ltd Chennai
	Mysore		
1.	Saragur	Dimethoate 30% EC	Jyothi Pesticides
	Raichur		
1.	Sindhanur	Fenvelrate 20% EC	Hindustan Pulversing Mills Rajastan
2.	Sindhanur	Fenvelrate 20% EC	JKK Agro Corpn. Chennai
3.	Devadurga	Endosulfan 35% EC	- " -
4.	Sindhanur	Monocrotophos 36% SL	Ratna Agro Chem AP
	Shimoga		
		ನವಲಗುಂದ	410	18.55	13.30
17.	ಮೈಸೂರು	ಟಿ. ನರಸೀಪುರ	745	30.95	132.20
		ಹುಣಸೂರು	651	30.20	89.62
		ಹೆಚ್.ಡಿ. ಕೋಟೆ	356	17.25	62.02
		ಮೈಸೂರು ಗ್ರಾ	550	20.55	135.74
		ನಂಜನಗೂಡು	1184	42.60	99.69
		ಪಿರಿಯಾಪಟ್ಟಣ	497	20.70	61.56
		ಕೆ.ಆರ್. ನಗರ	750	30.25	113.64

1	2	3	4	5	6
18.	ಬಾಗಲಕೋಟೆ	ಬಾಗಲಕೋಟೆ	442	21.50	18.25
		ಬೀಳಗಿ	308	15.25	25.41
		ಹುನಗುಂದ	408	20.05	40.44
		ಬಾದಾಮಿ	574	28.50	42.48
		ಜಮಖಂಡಿ	755	36.35	144.65
		ಮುಧೋಳ	469	23.00	111.04
19.	ಚಿಕ್ಕಮಗಳೂರು	ಚಿಕ್ಕಮಗಳೂರು	619	24.55	25.05
		ಕಡೂರು	523	16.05	10.99
		ತರೀಕೆರೆ	464	26.45	11.00
		ಕೊಪ್ಪ	181	9.80	11.53
		ಶೃಂಗೇರಿ	143	11.45	3.30
		ನರಸಿಂಹರಾಜಪುರ	200	9.85	5.50
		ಮೂಡಿಗೆರೆ	255	14.15	2.70
20.	ಕೋಲಾರ	ಬಾಗೇಪಲ್ಲಿ	425	21.40	10.85
		ಬಂಗಾರಪೇಟೆ	796	24.30	28.92
		ಚಿಕ್ಕಬಳ್ಳಾಪುರ	341	17.35	17.31
		ಚಿಂತಾಮಣಿ	819	33.80	19.45
		ಗೌರಿಬಿದನೂರು	923	48.00	61.48

1	2	3	4	5	6
		ಗುಡಿಬಂಡೆ	180	10.35	8.10
		ಕೋಲಾರ	875	27.01	24.87
		ಮಾಲೂರು	522	20.05	15.87
		ಮುಳಬಾಗಿಲು	431	19.65	20.01
		ಶಿಡ್ಲಘಟ್ಟ	588	28.40	13.44
		ಶ್ರೀನಿವಾಸಪುರ	600	9.00	17.65
21.	ಹಾಸನ	ಹಾಸನ	669	3.14	258.00
		ಚನ್ನರಾಯಪಟ್ಟಣ	802	36.25	130.00
		ಹೊಳೆನರಸೀಪುರ	135	18.90	138.00
		ಬೇಲೂರು	523	23.15	178.00
		ಸಕಲೇಶಪುರ	327	13.30	43.00
		ಹಾಲೂರು	260	10.45	84.00
		ಅರಸೀಕೆರೆ	980	44.15	209.00
		ಅರಕಲಗೂಡು	475	21.31	110.00
22.	ಮಡಿಕೇರಿ	ಸೋಮವಾರಪೇಟೆ	233	14.35	92.41
		ಮಡಿಕೇರಿ	190	11.70	50.66
		ಪೊನ್ನಂಪೇಟೆ	225	6.35	94.83
23.	ಬಿಜಾಪುರ	ಬಿಜಾಪುರ	622	27.65	37.72

1	2	3	4	5	6
		ಬಸವನಬಾಗೇವಾಡಿ	572	27.25	49.14
		ಸಿಂಧಗಿ	457	23.60	31.69
		ಮುದ್ದೇಬಿಹಾಳ	681	26.35	38.16
		ಇಂಡಿ	651	29.35	31.72
24.	ಗದಗ್	ಶಿರಹಟ್ಟಿ	467	16.35	29.14
		ಮುಂಡರಗಿ	393	12.65	58.72
		ಗದಗ್	500	17.50	25.00
		ರೋಣ	625	24.25	23.70
		ನರಗುಂದ	241	5.55	1.26
25.	ಗುಲ್ಬರ್ಗಾ	ಅಫ್ಜಲಪುರ	450	16.90	22.19
		ಅಳಂದ	850	30.25	65.20
		ಚಿಂಚೋಳಿ	580	17.60	36.25
		ಚಿತ್ತಾಪುರ	770	17.00	26.00
		ಗುಲ್ಬರ್ಗಾ	700	18.35	34.00
		ಜೇವರ್ಗಿ	620	21.05	38.12
		ಸೇಡಂ	430	18.50	12.00
		ಶಹಾಪುರ	700	28.35	23.25
		ಸುರಪುರ	700	25.00	24.12
		ಯಾದಗಿರಿ	700	26.05	47.72

1	2	3	4	5	6
26.	ದ. ಕನ್ನಡ	ಮಂಗಳೂರು ಗ್ರಾಮ	819	40.95	412.33
		ಬಂಟ್ವಾಳ	1171	58.55	303.83
		ಪುತ್ತೂರು	733	36.65	259.47
		ಬೆಳ್ತಂಗಡಿ	388	24.75	196.58
		ಸುಳ್ಯ	241	6.70	88.41
		ತುಮಕೂರು ಗ್ರಾ	1040	52.00	224.65
		ತುಮಕೂರು (ನ)	90	4.50	21.84
		ತುರುವೇಕರೆ	548	27.40	127.02
		ತಿಪಟೂರು	714	35.50	118.88
27.	ತುಮಕೂರು	ಚಿಕ್ಕನಾಯಕನಹಳ್ಳಿ	800	40.00	184.56
		ಗುಬ್ಬಿ	900	43.25	264.67
		ಕುಣಿಗಲ್	535	26.75	162.07
		ಕೊರಟಗೆರೆ	460	23.00	199.42
		ಪಾವಗಡ	700	35.00	150.3
		ಶಿರಾ	740	37.00	316.47
		ಮಧುಗಿರಿ	703	39.80	236.78
		ಒಟ್ಟು	**100000**	**4005.85**	**14554.83**

523(46) ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಒಟ್ಟು ಎಷ್ಟು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ:

ಆ) 2004 ಜನವರಿಯಿಂದ ಇಲ್ಲಿಯವರೆಗೆ ತನ್ನ ಸಾಲ ತೀರಿಸಲಾಗದೆ ಆತ್ಮಹತ್ಯೆ ರೈತರೆಷ್ಟು (ಜಿಲ್ಲಾವಾರು, ತಿಂಗಳುಗಳವಾರು ವಿವರಗಳನ್ನು ನೀಡುವುದು);

ಇ) ಇವರಿಗೆ ಪರಿಹಾರ ನೀಡಬೇಕಾದ ಮೊತ್ತವೆಷ್ಟು ಮತ್ತು ಈ ಮೊತ್ತವನ್ನು ನೀಡಲಾಗಿದೆಯೇ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) 2003ರವರೆಗೆ ಕೃಷಿ ಇಲಾಖೆಯಲ್ಲಿ ರೈತರ ಆತ್ಮಹತ್ಯೆ ಬಗ್ಗೆ ಯಾವುದೇ ಅಂಕಿ ಅಂಶಗಳನ್ನು ಇಟ್ಟಿರುವುದಿಲ್ಲ. ಜುಲೈ 2003ರಲ್ಲಿ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಸೂಕ್ತ ಪರಿಹಾರ ನೀಡುವ ಸಲುವಾಗಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ತದನಂತರ, ರೈತರ ಆತ್ಮಹತ್ಯೆ ಬಗ್ಗೆ ಅಂಕಿ ಅಂಶಗಳನ್ನು ಕೃಷಿ ಇಲಾಖೆಯಲ್ಲಿ ಕ್ರೋಢೀಕರಿಸಲಾಗಿದೆ. ಅದರಂತೆ 2003-04ರಲ್ಲಿ 708 ಪ್ರಕರಣಗಳು ದಾಖಲಾಗಿವೆ. ಏಪ್ರಿಲ್ 2004ರಿಂದ ಡಿಸೆಂಬರ್ ಅಂತ್ಯದವರೆಗೆ 219 ಪ್ರಕರಣಗಳು ದಾಖಲಾಗಿವೆ.

ಆ) 2004 ಜನವರಿಯಿಂದ 19-1-2005 ರವರೆಗೆ ಒಟ್ಟು 330 ಆತ್ಮಹತ್ಯೆ ಪ್ರಕರಣಗಳು ವರದಿಯಾಗಿದ್ದು, ಈ ಪೈಕಿ 138 ಪ್ರಕರಣಗಳಲ್ಲಿ ಸಾಲ ತೀರಿಸಲಾಗದೆ ಸಾಲದ ಬಾಧೆಯಿಂದ ರೈತರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಜಿಲ್ಲಾವಾರು ತಿಂಗಳುಗಳವಾರ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಸಾಲದ ಬಾಧೆಯಿಂದ ಆತ್ಮಹತ್ಯೆಗೊಂಡ 138 ಅರ್ಹ ಪ್ರಕರಣಗಳ ಪೈಕಿ ಇಲ್ಲಿಯವರೆಗೆ 109 ಪ್ರಕರಣಗಳಿಗೆ ತಲಾ ರೂ. 1.00 ಲಕ್ಷದಂತೆ ರೂ. 100.00 ಲಕ್ಷ ಪರಿಹಾರ ಧನವನ್ನು ನೀಡಲಾಗಿದೆ. ಉಳಿದ 29 ಪ್ರಕರಣಗಳಿಗೆ ಶೀಘ್ರದಲ್ಲಿ ತಲಾ ರೂ. 1.00 ಲಕ್ಷದಂತೆ ಪರಿಹಾರವನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಜನವರಿ 2004 ರಿಂದ 19.1.2005 ರವರೆಗೆ ಜಿಲ್ಲಾವಾರು ಮತ್ತು ಮಾಸವಾರು ರೈತರ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ ಹಾಗೂ ಅರ್ಹ ಪ್ರಕರಣಗಳಿಗೆ ಪರಿಹಾರ ವಿತರಿಸಿರುವ ವಿವರ

ಕ್ರ	ಜಿಲ್ಲೆ	ಜನವರಿ		ಫೆಬ್ರವರಿ		ಮಾರ್ಚ್		ಏಪ್ರಿಲ್		ಮೇ		ಜೂನ್		ಜುಲೈ		ಆಗಸ್ಟ್		ಸೆಪ್ಟೆಂಬರ್		ಅಕ್ಟೋಬರ್		ನವೆಂಬರ್		ಡಿಸೆಂಬರ್		20.1.05		ಒಟ್ಟು	
ಸಂ.		ಆ.ರೈ.ಸ	ಅ.ಪ್ರ	ಆ.ರೈ.ಸ	ಅ.ಪ್ರ	ಆ.ರೈ.ಸ	ಅ.ಪ್ರ	ಆ.ರೈ.ಸ	ಅ.ಪ್ರ	ಆ.ರೈ.ಸ	ಅ.ಪ್ರ	ಆ.ರೈ.ಸ	ಅ.ಪ್ರ	ಆ.ರೈ.ಸ	ಅ.ಪ್ರ	ಆ.ರೈ.ಸ	ಅ.ಪ್ರ	ಆ.ರೈ.ಸ	ಅ.ಪ್ರ	ಆ.ರೈ.ಸ	ಅ.ಪ್ರ	ಆ.ರೈ.ಸ	ಅ.ಪ್ರ	ಆ.ರೈ.ಸ	ಅ.ಪ್ರ	ಆ.ರೈ.ಸ	ಅ.ಪ್ರ	ಆ.ರೈ.ಸ	ಅ.ಪ್ರ
1	ಬಾಗಲಕೋಟೆ	1	0	1	2	2	0	0	0	2	0	0	0	0	0	1	0	0	1	1	0	0	0	0	0	0	0	[illegible]	[illegible]
2	ಬೆಂಗಳೂರು(ಗ್ರಾ)	1	0	0	0	3	4	0	0	0	0	1	1	0	0	0	0	0	0	0	0	0	0	0	0	5	5	10	10
3	ಬೆಂಗಳೂರು (ನ)	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0
4	ಬೀದರ್	0	0	3	2	0	0	0	0	0	0	2	0	0	0	0	0	0	0	0	0	0	0	4	3	0	0	9	6
5	ಹಾಸನ	0	0	3	2	0	1	0	0	0	0	2	2	2	0	2	0	4	0	7	0	2	0	4	2	0	0	26	7
6	ಚಾಮರಾಜನಗರ	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0
7	ಹಾವೇರಿ	5	1	1	0	0	0	0	0	0	0	2	0	5	2	0	0	0	0	0	0	0	0	0	0	0	0	13	3
8	ಉತ್ತರ ಕನ್ನಡ	0	3	2	1	0	0	0	0	0	0	0	0	0	0	0	0	0	0	0	0	0	0	0	0	0	0	2	4
9	ಧಾರವಾಡ	0	0	3	0	7	0	0	0	0	0	0	0	0	0	0	0	0	0	0	0	7	0	0	0	0	0	17	0
10	ಕೊಪ್ಪಳ	3	0	0	0	0	0	0	0	1	0	2	1	0	0	2	0	3	2	0	0	0	0	0	0	5	2	16	6
11	ಮಂಡ್ಯ	0	0	5	0	0	0	0	0	0	0	0	0	0	0	0	0	0	0	0	0	0	0	0	0	9	1	14	1
12	ಚಿಕ್ಕಮಗಳೂರು	0	0	2	1	2	1	0	0	0	0	0	0	4	1	0	0	7	5	0	0	3	0	0	0	0	0	18	8
13	ರಾಯಚೂರು	0	0	0	0	0	0	0	0	0	0	0	0	0	0	0	0	0	0	0	0	0	0	0	0	3	1	3	1
14	ತುಮಕೂರು	3	2	4	1	3	5	0	0	0	1	0	0	2	1	0	0	1	0	1	0	0	0	4	1	1	1	19	12
15	ಶಿವಮೊಗ್ಗ	6	2	0	0	5	1	0	0	0	0	0	1	3	1	2	0	2	2	2	0	0	0	1	1	0	0	21	8
16	ಕೋಲಾರ	0	0	0	0	2	0	0	0	0	0	0	0	3	2	0	0	1	0	1	0	1	1	0	0	2	1	10	4
17	ಮೈಸೂರು	0	0	0	0	4	0	0	0	0	0	0	0	0	0	0	0	0	0	0	0	0	0	0	0	0	0	4	0
18	ಉಡುಪಿ	0	0	0	0	1	0	0	0	0	0	0	0	0	0	0	0	0	0	0	0	0	0	0	0	1	0	2	0
19	ಕೊಡಗು	0	0	3	2	3	0	0	0	2	0	1	2	0	0	6	3	0	1	1	0	0	0	2	0	0	0	18	8
20	ಬೆಳಗಾಂ	0	0	1	0	1	1	0	0	6	2	1	0	7	1	7	1	4	7	0	3	1	0	2	0	2	1	32	16
21	ದಾವಣಗೆರೆ	0	0	5	0	0	0	0	0	0	0	0	0	5	2	6	2	1	0	0	0	0	0	0	0	1	1	17	5
22	ಬಳ್ಳಾರಿ	0	0	0	0	1	2	0	0	0	0	0	0	4	2	0	0	0	0	0	0	3	1	1	1	0	0	9	6
23	ಚಿತ್ರದುರ್ಗ	4	5	4	0	9	1	0	0	10	1	1	0	1	0	3	1	2	1	0	0	0	0	2	2	0	0	36	11
24	ಗುಲ್ಬರ್ಗ	3	3	2	2	0	0	0	0	0	0	0	0	3	2	1	1	2	3	0	0	0	0	0	0	0	0	11	11
25	ಬಿಜಾಪುರ	1	0	0	0	1	0	0	0	0	0	2	2	2	2	2	1	0	0	0	0	0	0	0	0	0	0	8	5
26	ದ.ಕನ್ನಡ	0	0	0	0	0	0	0	0	0	0	0	0	0	0	1	1	1		0	0	0	0	0	0	2	2	4	3
27	ಗದಗ್	1	1	0	0	0	0	0	0	0	0	0	0	0	0	2	0	0	0	0	1	0	0	0	0	0	0	3	2
	ಒಟ್ಟು	28	17	39	13	44	16	0	0	21	4	14	9	41	16	34	10	28	22	13	4	17	2	20	10	31	16	330	138

ಸೂಚನೆ: ಆ.ರೈ.ಸ = ವರದಿಯಾದ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ.

ಅ.ಪ್ರ = ಸಮಿತಿಯು ಅರ್ಹ ಪ್ರಕರಣವೆಂದು ತೀರ್ಮಾನಿಸಿದ ರೈತರ ಸಂಖ್ಯೆ.

ಜನವರಿ 2004 ರಿಂದ 19.1.2005 ರವರೆಗೆ ಒಟ್ಟು 330 ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿರುತ್ತವೆ. ಈ 330 ಪ್ರಕರಣದಲ್ಲಿ 138 ಪ್ರಕರಣಗಳನ್ನು ಸಮಿತಿ ಪರಿಹಾರ ನೀಡಲು ಅರ್ಹ ಪ್ರಕರಣಗಳೆಂದು ತೀರ್ಮಾನಿಸಿದೆ. 138 ಪ್ರಕರಣಗಳಲ್ಲಿ ಇಲ್ಲಿಯವರೆಗೆ 109 ಪ್ರಕರಣಗಳಿಗೆ ತಲಾ ರೂ.1.00 ಲಕ್ಷದಂತೆ ಪರಿಹಾರ ನೀಡಲಾಗಿದೆ. ಉಳಿದ 29 ಪ್ರಕರಣಗಳಿಗೆ ಸದ್ಯದಲ್ಲಿ ಪರಿಹಾರ ನೀಡಲಾಗುವುದು.

524(1077) ಶ್ರೀ ಹೆಚ್.ಡಿ. ಬಸವರಾಜು ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕಿನ ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ಯಾವುದೇ ಕೆಲಸಗಳು ನಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇಲ್ಲದಿದ್ದಲ್ಲಿ ಯಾವ ಯಾವ ಕೆಲಸ ಕಾರ್ಯಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ. (ವಿವರ ಒದಗಿಸಿರಿ).

ಇ) ಇದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗಿರುತ್ತದೆ. (ಪೂರ್ಣ ವಿವರ ನೀಡುವುದು)?

ಈ) ಇದರಲ್ಲಿ ಬಹಳಷ್ಟು ಕಳಪೆ ಕಾಮಗಾರಿ ನಡೆದಿರುವುದು ನಿಜವೇ;

ಉ) ಹಾಗಿದ್ದಲ್ಲಿ ಆ ಬಗೆಗಿನ ಕ್ರಮಗಳ ಕುರಿತು ತನಿಖೆ ಕೈಗೊಳ್ಳಲಾಗಿದೆಯೇ;

ಊ) ಇದಕ್ಕೆ ತಪ್ಪಿತಸ್ಥರೆಂದು ಯಾರನ್ನು ಗುರುತಿಸಲಾಗಿದೆ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಇಲ್ಲಾ.

ಆ,ಇ) ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೈಗೊಳ್ಳಲಾದ ಜಲಾನಯನ ಅಭಿವೃದ್ಧಿ ಕಾಮಗಾರಿಗಳ ವಿವರ ಹಾಗೂ ಇದಕ್ಕಾಗಿ ಮಾಡಲಾದ ವೆಚ್ಚ ವಿವರಗಳನ್ನು ಕ್ರಮವಾಗಿ ಅನುಬಂಧ (1) ಹಾಗೂ (2) ರಲ್ಲಿ ನೀಡಲಾಗಿದೆ.

ಈ) ಕಳಪೆ ಕಾಮಗಾರಿಗಳು ನಡೆದಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಅನುಬಂಧ – 1

ಕೊಡಗು ಜಿಲ್ಲೆಯ ವೀರಾಜಪೇಟೆ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ಯೋಜನೆಗಳಡಿ ತೆಗೆದುಕೊಂಡ ಅಭಿವೃದ್ಧಿ ಕಾಮಗಾರಿಗಳ ವಿವರ

ಕ್ರ. ಸಂ.	ಯೋಜನೆ	ಸಾಲು	ಕಾಮಗಾರಿ ವಿವರ								ಷರಾ
			ಕೃಷಿ ಘಟಕ (ಸಂಖ್ಯೆ)					ಅರಣ್ಯ (ಹೆ.)		ತೋಟಗಾರಿಕೆ (ಹೆ)	
			ಕೃಷಿ ಹೊಂಡ	ಕೆರೆ ಹೂಳು ಎತ್ತುವುದು	ಕಿಂಡಿ ಅಣೆ	ತಿರುವು ಗಾಲುವೆ	ಮಳೆ ನೀರು ಸಂಗ್ರಹಣ ವಿನ್ಯಾಸ	ಕೃಷಿ ಅರಣ್ಯ	ಮುಂಗಡ ಕಾಮಗಾರಿ	ರೈತರ ಜಮೀನಿನಲ್ಲಿ ತೋಟಗಾರಿಕೆ	
1	2	3	4	5	6	7	8	9	10	11	12
1.	ರಾಷ್ಟ್ರೀಯ ಜಲಾನಯನ ಅಭಿವೃದ್ಧಿ 2001-02 ಯೋಜನೆ		21	–	–	–	–	38	–	34	
	ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ		45	–	2	–	–	69	–	30	
	ಎಸ್.ಜಿ.ಆರ್.ವೈ. (ಜಿ.ಪಂ)		23	–	1	–	–	–	–	–	
	ಎಸ್.ಜಿ.ಆರ್.ವೈ. (ತಾ.ಪಂ)		72	–	5	5	–	–	–	–	
	ಒಟ್ಟು		**161**	–	**8**	**5**	–	**107**	–	**64**	
2.	ರಾಷ್ಟ್ರೀಯ ಜಲಾನಯನ ಅಭಿವೃದ್ಧಿ 2002-03 ಯೋಜನೆ		–	–	–	–	–	14	–	–	
	ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ		31	3	3	–	1	42	25	57	
	ಎಸ್.ಜಿ.ಆರ್.ವೈ. (ಜಿ.ಪಂ)		46	–	–	–	–	–	–	–	
	ಎಸ್.ಜಿ.ಆರ್.ವೈ. (ತಾ.ಪಂ)		36	–	–	–	–	–	–	–	
	ಒಟ್ಟು		**113**	**3**	**3**	–	**1**	**56**	**25**	**57**	
3.	ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ2003-04		37	–	–	–	–	–	–	–	
	ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ		79	–	4	–	–	150	20	96	
	ಎಸ್.ಜಿ.ಆರ್.ವೈ. (ಜಿ.ಪಂ)		27	–	–	–	–	–	–	–	
	ಎಸ್.ಜಿ.ಆರ್.ವೈ. (ತಾ.ಪಂ)		60	–	–	–	–	–	–	–	
	ಒಟ್ಟು		**203**	–	**4**	–	–	**150**	**20**	**96**	
	ಮಹಾ ಮೊತ್ತ		**477**	**3**	**15**	**5**	**1**	**313**	**45**	**217**	

ಅನುಬಂಧ-2

ಕೊಡಗು ಜಿಲ್ಲೆಯ ವೀರಾಜಪೇಟೆ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ಯೋಜನೆಗಳಡಿ ತೆಗೆದುಕೊಂಡ ಅಭಿವೃದ್ಧಿ ಕಾಮಗಾರಿಗಳಿಗೆ ತಗುಲಿದ ವೆಚ್ಚ ವಿವರ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆ	ಘಟಕ	2001-02	2002-03	2003-04	ಮೊತ್ತ	ಷರಾ
1	2	3	4	5	6	7	8
1.	ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ	ಕೃಷಿ	6.240	–	11.03	17.27	
		ಅರಣ್ಯ	4.049	0.75	–	4.799	
		ತೋಟಗಾರಿಕೆ	1.246	–	–	1.246	
		ಒಟ್ಟು	**11.535**	**0.75**	**11.03**	**23.315**	
2.	ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ	ಕೃಷಿ	17.20	15.50	28.600	61.30	
		ಅರಣ್ಯ	2.648	3.794	10.416	16.858	
		ತೋಟಗಾರಿಕೆ	1.400	3.000	4.840	9.240	
		ಒಟ್ಟು	**21.248**	**22.294**	**43.856**	**87.398**	
3.	ಎಸ್.ಜಿ.ಆರ್.ವೈ (ಜಿ.ಪಂ)	ಕೃಷಿ	7.60	8.34	6.750	22.69	
		ಅರಣ್ಯ	–	–	–	–	
		ತೋಟಗಾರಿಕೆ	–	–	–	–	
		ಒಟ್ಟು	**7.60**	**8.34**	**6.750**	**22.69**	
4.	ಎಸ್.ಜಿ.ಆರ್.ವೈ ತಾ.ಪಂ)	ಕೃಷಿ	16.24	12.74	5.825	34.805	
		ಅರಣ್ಯ	–	–	–	–	
		ತೋಟಗಾರಿಕೆ	–	–	–	–	
		ಒಟ್ಟು	**16.24**	**12.74**	**5.825**	**34.805**	
		ಮಹಾ ಮೊತ್ತ	**56.623**	**44.124**	**67.461**	**168.208**	

525(1078) ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕ್ ವ್ಯಾಪ್ತಿಯಲ್ಲಿ ಹಾಗೂ ಗೋಣಿ ಕೊಪ್ಪದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ ಕಳೆದ 3 ವರ್ಷಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ಮಾಡಲಾಗಿರುತ್ತದೆ;

ಆ) ಇದಕ್ಕಾಗಿ ಎಷ್ಟು ಹಣ ವೆಚ್ಚ ಮಾಡಲಾಗಿದೆ (ವಿವರ ನೀಡುವುದು);

ಇ) ಈ ಕಾಮಗಾರಿಗಳಲ್ಲಿ ಹಲವು ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ;

ಉ) 2004-05ನೇ ಸಾಲಿನಲ್ಲಿ ಸರ್ಕಾರ ಯಾವ ಕಾಮಗಾರಿಗಳನ್ನು ಕೈಗೊಳ್ಳಲಿದೆ (ವಿವರ ನೀಡಿ); ಶಾಸಕರ ನಿಧಿಯಿಂದ ಪಡೆದಿರುವ ರೂ. 50 ಸಾವಿರ ಹಣದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತದೆಯೇ; ಹಾಗಿದ್ದಲ್ಲಿ, ಅವು ಯಾವುವು ಮತ್ತು ಎಂದು ಪ್ರಾರಂಭವಾಗುತ್ತವೆ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) 2002-03ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಒಟ್ಟು ರೂ.70.35 ಲಕ್ಷಗಳ ಮೊತ್ತದ 12 ಕಾಮಗಾರಿಗಳು ಅನುಮೋದನೆಯಾಗಿದ್ದು, ಈ ಕಾಮಗಾರಿಗಳ ಪೈಕಿ ರೂ. 5735 ಲಕ್ಷಗಳಲ್ಲಿ 9 ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ಜರುಗಿಸಿದ್ದು, ಇವುಗಳಲ್ಲಿ ರೂ. 3.37 ಲಕ್ಷಗಳ ಮೊತ್ತದ 2 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ.

2002-03ನೇ ಸಾಲಿನ ನಿಯಮ 60ಸಿ ಅಡಿಯಲ್ಲಿ ಒಟ್ಟು ರೂ. 10.00 ಲಕ್ಷಗಳ ಮೊತ್ತದ 15 ರಸ್ತೆ ಸುಧಾರಣೆ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆಯಾಗಿದ್ದು, ಈ ರಸ್ತೆ ಸುಧಾರಣೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಆ) ರೂ. 16.98 ಲಕ್ಷಗಳು (ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ).

ಇ) ಇಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) 2004-05ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಒಟ್ಟು 17 ಕಾಮಗಾರಿಗಳನ್ನು ಮೊತ್ತ ರೂ. 57.00 ಲಕ್ಷಗಳಲ್ಲಿ ಕೈಗೊಳ್ಳಲು ಅನುಮೋದನೆಯನ್ನು ನೀಡಲಾಗಿದೆ. ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ ಹಾಗೂ ಆರ್.ಐ.ಡಿ.ಎಫ್- ಯೋಜನೆಯಡಿಯಲ್ಲಿ ಒಂದು ಗ್ರಾಮೀಣ ಕಾಮಗಾರಿಯನ್ನು ಅಭಿವೃದ್ಧಿಪಡಿಸಲು ಅನುಮೋದನೆ ನೀಡಲಾಗಿದೆ.

ಅನುಬಂಧ–1

ಕೊಡಗು ಜಿಲ್ಲೆ ವಿರಾಜಪೇಟೆ ವ್ಯಾಪ್ತಿಯಲ್ಲಿ ಹಾಗೂ ಗೋಣಿ ಕೊಪ್ಪದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡಿರುವ ಕಾಮಗಾರಿಗಳು

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಷರಾ
	2002–03ನೇ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಕೈಗೊಂಡ ಕಾಮಗಾರಿಗಳು		
1.	ಅತಿಥಿ ಗೃಹದ ಮೊದಲ ಅಂತಸ್ತಿನ ನಿರ್ಮಾಣ	13.00	ಕಾರ್ಯಾದೇಶ ನೀಡಬೇಕು.
2.	ಪ್ರಾಂಗಣದಲ್ಲಿ ತೂಕದ ಯಂತ್ರ ಅಳವಡಿಸುವ ಕಾಮಗಾರಿ	11.00	ಕಾರ್ಯಾದೇಶ ನೀಡಿದೆ
3.	ಪ್ರಾಂಗಣದಲ್ಲಿ ನೀರು ವಿತರಣಾ ನಿರ್ಮಾಣ ಹಾಗೂ ಯುಜಿಡಿ ವ್ಯವಸ್ಥೆ	12.00	ಪ್ರಗತಿಯಲ್ಲಿದೆ
4.	ನೌಕರರ ವಸತಿ ಗೃಹಗಳ ದುರಸ್ತಿ	2.00	ಕೆಲಸ ಮುಗಿದಿದೆ
5.	ಮುಖ್ಯ ಪ್ರಾಂಗಣದಲ್ಲಿ 2 ದ್ವಾರಗಳಲ್ಲಿ ಕ್ಯಾಟಲ್ ಟ್ರಾಪ್ ಅಳವಡಿಸುವ ಕಾಮಗಾರಿ	1.00	ಕಾರ್ಯಾದೇಶ ನೀಡಿದೆ
6.	ಪ್ರಾಂಗಣದಲ್ಲಿರುವ ಕಟ್ಟಡಗಳಿಗೆ ವಿದ್ಯುತ್ ಸರಬರಾಜು ಮಾಡಲು ಟ್ರಾನ್ಸ್‌ಫಾರ್ಮರ್ ಭೂಗತ ಕೇಬಲ್ ಹಾಗೂ ಪ್ಯಾನಲ್ ಬೋರ್ಡ್ ಅಳವಡಿಸುವುದು	10.00	ಅಂದಾಜು ಪಟ್ಟಿ ತಯಾರಿಸಬೇಕು
7.	ಹರಾಜು ಪಟ್ಟಿ ಸಂಖ್ಯೆ 3 ಮತ್ತು 4ಗಳನ್ನು 24 ಸಂಖ್ಯೆ ಅಂಗಡಿ ಮಳಿಗೆಗಳನ್ನಾಗಿ ಪರಿವರ್ತಿಸುವ ಕಾಮಗಾರಿಗೆ ವಿದ್ಯುತ್ ಅಳವಡಿಕೆ	1.35	ಟೆಂಡರ್ ಕರೆಯಬೇಕು
8.	ಪ್ರಾಂಗಣದಲ್ಲಿ ಕೊರೆದಿರುವ ಕೊಳವೆ ಬಾವಿಗೆ ಪಂಪ್ ಅಳವಡಿಕೆ ಮತ್ತು ಪಂಪ್‌ಹೌಸ್ ನಿರ್ಮಾಣ	2.00	ಅಂದಾಜುಪಟ್ಟಿ ತಯಾರಿಸಬೇಕು
9.	ಮುಖ್ಯರಸ್ತೆಯಿಂದ ಬ್ಯಾಂಕ್ ಮತ್ತು ಅಂಚೆ ಕಛೇರಿ ಕಟ್ಟಡಕ್ಕೆ ರಸ್ತೆ ನಿರ್ಮಾಣ	1.60	ಕೆಲಸ ಮುಗಿದಿದೆ
10.	8 ಸಂಖ್ಯೆ ಸಣ್ಣ ಅಂಗಡಿ ಮಳಿಗೆ ಎ ಬ್ಲಾಕ್ ಪಕ್ಕದಲ್ಲಿ ನೀರು ಹರಿಯಲು ಮೋರಿ ನಿರ್ಮಾಣ	0.50	ಕಾರ್ಯಾದೇಶ ನೀಡಿದೆ

1	2	3	4
11.	ಮುಖ್ಯ ಪ್ರಾಂಗಣ ಒಳ ಮತ್ತು ಹೊರ ದ್ವಾರಗಳ ನಾಮಫಲಕ ದುರಸ್ತಿ	1.00	ಕೈಬಿಡಲಾಗಿದೆ
12.	ಪ್ರಾಂಗಣದಲ್ಲಿ 12 ಸಂಖ್ಯೆ ಸಂಡ್ರಿಶಾಪ್‌ಗಳ ನಿರ್ಮಾಣ ಕಾಮಗಾರಿ	15.00	ಪ್ರಗತಿಯಲ್ಲಿದೆ
	ಒಟ್ಟು ಮೊತ್ತ ರೂ.	**70.35 ಲಕ್ಷ**	

2002–03ನೇ ಸಾಲಿನಲ್ಲಿ ನಿಯಮ 60(ಸಿ) ಅಡಿಯಲ್ಲಿ ರಸ್ತೆ ಕಾಮಗಾರಿಗಳು

1.	ಅರವತೋಕ್ಲು ಗ್ರಾಮದ ಹಾರ್ಟಿಕಲ್‌ಚರ್ ಮಾರ್ಗವಾಗಿ ಆಯ್ಯಣ್ಣನವರ ಮನೆ ರಸ್ತೆಯ ಅಭಿವೃದ್ಧಿ	0.76	ಕಾರ್ಯಾದೇಶ ನೀಡಬೇಕು
2.	ಬ್ಯಾಡಗ ಗ್ರಾಮ ಬಿ. ಚೂರಕಾಡು ಶಾಲಾ ರಸ್ತೆ ಗ್ರಾ.ಪಂ. ವ್ಯಾಪ್ತಿಯಿಂದ ಶಾಲೆಗೆ ಬರುವ ಮುಖ್ಯ ರಸ್ತೆಯವರೆಗೆ	0.33	ಕೆಲಸ ಮುಗಿದಿದೆ
3.	ಬಾಡಗ ಗ್ರಾಮದ ಅಯ್ಯಪ್ಪ ದೇವರ ದೇವಸ್ಥಾನಕ್ಕೆ ಹೋಗುವ ರಸ್ತೆ ಡಾಂಬರೀಕರಣ ಮುಖ್ಯ ರಸ್ತೆಯಿಂದ 0.300 ಮೀಟರ್	0.33	ಕೆಲಸ ಮುಗಿದಿದೆ
4.	ಬಾಳುಗೋಡು ಗ್ರಾಮದ ಚೇಮಿರ ಕುಟುಂಬಸ್ತರ ಮನೆಗೆ ಹೋಗುವ ರಸ್ತೆ 130 ಮೀಟರ್‌ನಿಂದ 250 ಮೀಟರ್‌ವರೆಗೆ	0.66	ಕೆಲಸ ಮುಗಿದಿದೆ
5.	ಬಿಳೂರು ಗ್ರಾಮದ ಈಶ್ವರ ದೇವಸ್ಥಾನದ ರಸ್ತೆಯ ಕೊನೆ ಭಾಗದಿಂದ ಗದ್ದೆಗೆ ಹೊಗಳು ತೋಡಿನ ಪಕ್ಕಕ್ಕಾಗಿ ರಸ್ತೆ 0.25 ನಿಂದ 1.00 ಕಿಮೀ	1.32	ಕಾರ್ಯಾದೇಶ ನೀಡಬೇಕು
6.	ಅಮ್ಮತ್ತಿಕಾರ್ಮಾಡು ಗ್ರಾಮದ ಕಡಿಕೆ ಕೊಟ್ಟಂಡ ಕುಟುಂಬಸ್ತರ ಐನ್ ಮನೆಗಾಗಿ ಹಾದು ಹೋಗುವ ರಸ್ತೆ 0.13 ನಿಂದ 0.60 ಕಿಮೀ	0.66	ಕೆಲಸ ಮುಗಿದಿದೆ
7.	ಪಾಲಿಬೆಟ್ಟದಿಂದ ಬಸವೇಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆ	0.66	ಕೆಲಸ ಮುಗಿದಿದೆ

1	2	3	4
8.	ಪರಟಗೇರಿ ಮುಖ್ಯ ರಸ್ತೆಯಿಂದ ಕಡಮ ಕೊಲಿಗೆ ಹೋಗುವ ರಸ್ತೆ ಕಡಮ ಕೊಲಿಗೆ 2001-02ನೇ ಸಾಲಿನಲ್ಲಿ ಅಳವಡಿಸಿದ ಮೋರಿನಿಂದ ಮುಖ್ಯ ರಸ್ತೆ ಕಡೆಗೆ 0.030 ಕಿಮೀ	0.66	ಕೆಲಸ ಮುಗಿದಿದೆ
9.	ವೆಸ್ಟ್ ನೆಮ್ಮಲೆ ಗ್ರಾಮದ ಈಶ್ವರ ದೇವಸ್ಥಾನದ ರಸ್ತೆಯಿಂದ ಮರಿಯಂಡ ಬೈಲು ಮೂಲಕ ಮತ್ತೋಡಿ ರಸ್ತೆ ಈಶ್ವರ ದೇವಸ್ಥಾನದ 0.20 ನಿಂದ ಗದ್ದೆಬೈಲಿಗಾಗಿ 0.50 ಕಿಮೀ	0.66	ಕೆಲಸ ಮುಗಿದಿದೆ
10.	ಅಮ್ಮತ್ತಿ ಕರ್ಮಾಡು ಕಾಪಾಡಿಯಿಂದ ಬಿಳುಗುಂದ ಗ್ರಾಮಕ್ಕೆ ಹಾದು ಹೋಗುವ ಸಾರ್ವಜನಿಕ ರಸ್ತೆಯಿಂದ ಕುಟ್ಟಂಡ ಮತ್ತು ಬಡುವಮಂಡ ಬಿನ್ ಮನೆಗಳಿಗೆ ಹೋಗುವ ರಸ್ತೆ	0.66	ಕೆಲಸ ಮುಗಿದಿದೆ
11.	ಬೇಗೂರು ಚೇನಿಕಾಡು ಗ್ರಾಮದ ಹುದಿಕೇರಿ ಅರ್ಜಿಗುಂಡಿ ರಸ್ತೆ ಯಿಂದ ಎಡಕ್ಕೆ ಕಾಯಪಂಡ ಕುಟುಂಬ ಪಾನಂ ಮಾಡು ಅಯ್ಯಪ್ಪ ದೇವರ ದೇವಸ್ಥಾನಕ್ಕೆ ಹೋಗುವ ರಸ್ತೆ ಅಯ್ಯಪ್ಪ ಸ್ವಾಮಿ ರಸ್ತೆಗೆ ತಿರುವಿನಿಂದ ಪ್ರಾರಂಭಿಸಿ 0.65 ನಿಂದ 0.45 ಕಿಮೀ ಬೇಗೂರು ಮುಖ್ಯ ರಸ್ತೆಗೆ ಹೋಗುವ ದಾರಿಗೆ ಡಾಂಬರೀಕರಣ.	0.66	ಕೆಲಸ ಮುಗಿದಿದೆ
12.	ಕುಕ್ಲೂರು ಗ್ರಾಮದ ಪಂದ್ಯಂದ ಕಳದಿಂದ ದೇವಸ್ಥಾನಕ್ಕೆ ಬರುವ ರಸ್ತೆ 0.13 ನಿಂದ 0.60 ಕಿಮೀ	0.66	ಕೆಲಸ ಮುಗಿದಿದೆ
13.	ಪಾಲಂಗಾಲ ಗ್ರಾಮದ ಬೊಳ್ಳಚ್ಚಿಮಟ್ಟಿ ರಸ್ತೆ ಪಾಲಂಗಾಲ ಗ್ರಾಮದ ಬೆಳ್ಳಚ್ಚು ತಿರುವುನಿಂದ 0.13 ನಿಂದ 0.50 ಕಿಮೀವರೆಗೆ	0.66	ಅಂದಾಜುಪಟ್ಟಿ ತಯಾರಿಸಬೇಕು

1	2	3	4
14.	ಹೈನೊಡ್ಲೂರು ಗ್ರಾಮದ ಮುಖ್ಯ ರಸ್ತೆಯಿಂದ ಕೇಚಮಾಡ ಅಶ್ವಿನಿ ಅವರ ರಸ್ತೆ	0.66	ಅಂದಾಜುಪಟ್ಟಿ ತಯಾರಿಸಬೇಕು
15.	ಹೆಬ್ಬಾಲೆ ಗ್ರಾಮದ ಪಾಲಿಬೆಟ್ಟ ತಿತಿಮತಿ ರಸ್ತೆಯಲ್ಲಿ ವಿ.ಸಿ. ಗಣೇಶರವರ ಮನೆಯ ಪಕ್ಕದಿಂದ ಹರಿಜನಕೇರಿ ರಸ್ತೆ	0.66	ಕೆಲಸ ಮುಗಿದಿದೆ
	ಒಟ್ಟು ರೂ.	**10.00 ಲಕ್ಷ**	

ಅನುಬಂಧ-2

ಕೊಡಗು ಜಿಲ್ಲೆ ವಿರಾಜಪೇಟೆ ವ್ಯಾಪ್ತಿಯಲ್ಲಿ ಹಾಗೂ ಗೋಣಿ ಕೊಪ್ಪದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ 2004-05ನೇ ಸಾಲಿನಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳು

ಕ್ರ. ಸಂ.	ಕಾಮಗಾರಿಯ ಹೆಸರು	ಮಂಜೂರಾದ ಮೊತ್ತ (ರೂ. ಲಕ್ಷಗಳಲ್ಲಿ)	ಷರಾ
1.	ಪ್ರಾಂಗಣದಲ್ಲಿ ದ್ವಾರ (1) ರಿಂದ ಡಿ ಮಾದರಿ ವಸತಿ ಗೃಹಗಳವರೆಗೆ ರಸ್ತೆಯ ಮರು ಡಾಂಬರೀಕರಣ ಒಳಗೊಂಡಂತೆ ಅಭಿವೃದ್ಧಿ ಕಾಮಗಾರಿ	4.50	ಟೆಂಡರ್ ಕರೆದಿದೆ
2.	ಪ್ರಾಂಗಣದಲ್ಲಿ ದ್ವಾರ (2) ರಿಂದ ನೌಕರರ ವಸತಿ ಗೃಹದ ಕಡೆಯಿಂದ ಡಿ ಮಾದರಿ ವಸತಿ ಗೃಹಗಳವರೆಗೆ ರಸ್ತೆಗೆ ಮರು ಡಾಂಬರೀಕರಣ ಒಳಗೊಂಡಂತೆ ಅಭಿವೃದ್ಧಿ ಕಾಮಗಾರಿ	4.50	ಟೆಂಡರ್ ಕರೆದಿದೆ
3.	ಪ್ರಾಂಗಣದಲ್ಲಿ ಯುಜಿಡಿ ವ್ಯವಸ್ಥೆಯ ಸೆಪ್ಟಿಕ್ ಟ್ಯಾಂಕ್ ಬೋರ್‌ವೆಲ್ ಮತ್ತು ಪಂಪ್‌ಹೌಸ್‌ಗೆ ಸಂಪರ್ಕ ರಸ್ತೆ ಮತ್ತು	3.00	ಟೆಂಡರ್ ಕರೆದಿದೆ
	ನಿವೇಶನ ಪ್ರತ್ಯೇಕತೆಗೆ ಫೆನ್ಸಿಂಗ್ ಅಳವಡಿಕೆ ಹಾಗೂ ಸೆಪ್ಟಿಂಗ್ ಟ್ಯಾಂಕ್‌ನಿಂದ ವೇಸ್ಟ್ ಡಿಸ್ಪೋಸಲ್ ವ್ಯವಸ್ಥೆ	3.00	ಟೆಂಡರ್ ಕರೆದಿದೆ
4.	ಪ್ರಾಂಗಣದಲ್ಲಿ ಅತಿಥಿ ಗೃಹದ ಹಿಂಭಾಗ ವಾಹನ ನಿಲುಗಡೆ ತಾಣ	3.00	ಟೆಂಡರ್ ಕರೆದಿದೆ

1	2	3	4
5.	ಪ್ರಾಂಗಣದಲ್ಲಿ ಗೋದಾಮುಗಳ ಮೇಲೆ ಮತ್ತು ಅಂಗಡಿ ಮಳಿಗೆಗಳ ಮುಂದೆ ವಾಹನ ನಿಲುಗಡೆ ತಾಣ	1.00	ಟೆಂಡರ್ ಕರೆದಿದೆ
6.	ಕ್ಯಾಂಟೀನ್ ಎದುರುಗಡೆ ಮುಖ್ಯ ರಸ್ತೆಯಿಂದ ಸಂಪರ್ಕಕ್ಕಾಗಿ ಮೋರಿಗೆ ಡೆಕ್ ಸ್ಲ್ಯಾಬ್ ಅಳವಡಿಕೆ ಮತ್ತು ಕಟ್ಟಡದ ಮುಂಭಾಗ ಬೇಸ್‌ಮೆಂಟ್ ಒದಗಿಸುವುದು	1.00	ಕಾರ್ಯಾದೇಶ ನೀಡಬೇಕು
7.	ಅತಿಥಿಗೃಹ ಕಟ್ಟಡದ ಶೌಚಾಲಯಗಳಿಗೆ ಟೈಲ್ಸ್ ಅಳವಡಿಕೆ, ಗೋಡೆಗಳಿಗೆ, ಚಟ್ಟಾಗಳಿಗೆ ದುರಸ್ತಿ ಕಾಮಗಾರಿ ಕಟ್ಟಡಕ್ಕೆ ಪ್ರೈಮರ್ ಕೋಟ್ ಲೇಪನದೊಂದಿಗೆ ಬಣ್ಣ ಲೇಪನ ಮತ್ತು ಕೊಠಡಿ ಸಂಖ್ಯೆ 1 ಮತ್ತು2 ಕ್ಕೆ ದಾಲ್ ಪ್ಯಾನ್‌ಲಿಂಗ್ ಒಳಗೊಂಡಂತೆ ಅಭಿವೃದ್ಧಿ ಕಾಮಗಾರಿ ಸೋಲಾರ್ ವಾಟರ್ ಹೀಟರ್ ಒಳಗೊಂಡಂತೆ	4.00	ಟೆಂಡರ್ ಕರೆದಿದೆ
8.	ಡಿ ಮಾದರಿಯ ವಸತಿ ಗೃಹಕ್ಕೆ ಕಾಂಪೌಂಡ್ ಮತ್ತು ಗೇಟ್ ಅಳವಡಿಕೆ	1.00	ಕಾರ್ಯಾದೇಶ ನೀಡಬೇಕು
9.	10 ಸಂಖ್ಯೆ ಶಾಪ್–ಕಂ–ಗೋದಾಮುಗಳಿಗೆ ಮುಖ್ಯ ರಸ್ತೆಯಿಂದ ಕಾಂಕ್ರೀಟ್ ರಸ್ತೆ ನಿರ್ಮಾಣ	1.00	ಕಾರ್ಯಾದೇಶ ನೀಡಬೇಕು
10.	4 ಸಂಖ್ಯೆ, 100 ಎಂ.ಟಿ. ಗೋದಾಮುಗಳಿಗೆ ಮುಖ್ಯರಸ್ತೆಯಿಂದ ಸಂಪರ್ಕ ರಸ್ತೆ ನಿರ್ಮಾಣ	1.00	ಕಾರ್ಯಾದೇಶ ನೀಡಬೇಕು
11.	3 ಸಂಖ್ಯೆ ಅಂಗಡಿ ಮಳಿಗೆಗಳಿಗೆ ಎ ಬ್ಲಾಕ್ ಗೋಡೆಗಳಿಗೆ ಪ್ರಥಮ ಲೇಪನ ಒಳಗೊಂಡಂತೆ ಬಣ್ಣ ಲೇಪನ ಮತ್ತು ರೋಲಿಂಗ್ ಶೆಟರ್ ಮತ್ತು ಕಿಟಕಿಗಳಿಗೆ ದುರಸ್ತೆ	1.00	ಕಾರ್ಯಾದೇಶ ೀಡಬೇಕು
12.	200 ಎಂ.ಟಿ. ಗೋದಾಮು 1 ಮತ್ತು 2 (ಎನ್‌ಜಿಆರ್‌ಜಿ)ಗೆ ದುರಸ್ತೆ ಕಾಮಗಾರಿ ರೋಲಿಂಗ್ ಶೆಟರ್ ಕಿಟಕಿ ದುರಸ್ತೆ ಮತ್ತು ವಿದ್ಯುತ್ ಉಪಕರಣಗಳ ದುರಸ್ತಿ	1.00	ಅಂದಾಜುಪಟ್ಟಿ ಸಲ್ಲಿಸಬೇಕು

1	2	3	4
13.	8 ಸಂಖ್ಯೆ ಅಂಗಡಿ ಮಳಿಗೆ ಬಿ ಬ್ಲಾಕ್‌ಗೆ ವಾರ್ಷಿಕ ದುರಸ್ತಿ ಕಾಮಗಾರಿ	1.00	ಅಂದಾಜುಪಟ್ಟಿ ಸಲ್ಲಿಸಬೇಕು
14.	ಪ್ರಾಂಗಣದಲ್ಲಿ ರೈತರ ಅಡಮಾನ ಸಾಲ ಉಪಯೋಗಕ್ಕೆ ವೈಜ್ಞಾನಿಕ ಮಾದರಿ 100 ಎಂ.ಟಿ. 2 ಸಂಖ್ಯೆ ಗೋದಾಮುಗಳ ನಿರ್ಮಾಣ	26.00	ಅಂದಾಜುಪಟ್ಟಿ ಪರಿಶೀಲನೆ ಯಲ್ಲಿದೆ
15.	ಪ್ರಾಂಗಣದಲ್ಲಿ ಸಾರ್ವಜನಿಕ ಉಪಯುಕ್ತತೆಗೆ ಕುಡಿಯುವ ನೀರಿನ ವ್ಯವಸ್ಥೆಯ ಪ್ಲಾಟ್ ಫಾರಂಗಳು ಗೋದಾಮುಗಳ ಮುಂದೆ	1.00	ಕಾರ್ಯಾದೇಶ ನೀಡಬೇಕು
16.	ಪ್ರಾಂಗಣದಲ್ಲಿ ಸಾರ್ವಜನಿಕ ಉಪಯುಕ್ತತೆಗೆ ಕುಡಿಯುವ ನೀರಿನ ಪ್ಲಾಟ್ ಫಾರಂಗಳು ಅಂಗಡಿ ಮಳಿಗೆಗಳ ಮುಂದೆ ಹಾಗೂ ಸಂಡ್ರಿಶಾಪ್ ಬಳಿ	1.00	ಕಾರ್ಯಾದೇಶ ನೀಡಬೇಕು
17.	ಪ್ರಾಂಗಣದಲ್ಲಿ ಆಡಳಿತ ಕಛೇರಿ ವಾರ್ಷಿಕ ದುರಸ್ತಿ (1998-99ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಿಂದ ಕೈಬಿಟ್ಟು ಈ 2004-05ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಸೇರಿದೆ)	2.00	ಪ್ರಗತಿಯಲ್ಲಿದೆ
	ಒಟ್ಟು ಮೊತ್ತ	ರೂ. 57.00 ಲಕ್ಷ	

ಮುಂದುವರೆದು, ಆರ್‌ಐಡಿಎಫ್-IXರ ಯೋಜನೆಯಡಿಯಲ್ಲಿ ಗೋಣಿಕೊಪ್ಪಲು ಗ್ರಾಮೀಣ ಸಂತೆಯನ್ನು ಅಂದಾಜು ಮೊತ್ತ ರೂ. 15.00 ಲಕ್ಷಗಳಲ್ಲಿ ಅಭಿವೃದ್ಧಿಪಡಿಸಲು ಅನುಮೋದನೆಯನ್ನು ನೀಡಲಾಗಿದೆ. ಟೆಂಡರ್ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

526(1079) ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ಅಧಿಕಾರಿ ಸಿಬ್ಬಂದಿ ನೌಕರರುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಯಾವ ಯಾವ ಹುದ್ದೆಗಳು ಖಾಲಿ ಇವೆ? (ತಾಲ್ಲೂಕುವಾರು ವಿವರ ನೀಡಿ);

ಇ) ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಈ) ಇದರಿಂದ ಇಲಾಖೆಯ ದಿನಂಪ್ರತಿ ಕಾರ್ಯ ಚಟುವಟಿಕೆಗಳಿಗೆ ಹಾಗೂ ಅಭಿವೃದ್ಧಿ ಕೆಲಸಕ್ಕೆ ಕುಂಠಿತವಾಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಯಾವ ಬದಲಿ ವ್ಯವಸ್ಥೆ ಮಾಡಲಿದೆ?

ಶ್ರೀ ಕೆ. ಶ್ರೀನಿವಾಸಗೌಡ (ತೋಟಗಾರಿಕೆ ಸಚಿವರು)

ಅ) ಹೌದು.

ಆ) ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಗಿನಂತಿದೆ. (ವೃಂದವಾರು, ತಾಲ್ಲೂಕುವಾರು)

ವೃಂದ	ಮಡಿಕೇರಿ	ವೀರಾಜಪೇಟೆ	ಸೋಮವಾರಪೇಟೆ	ಒಟ್ಟು
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು	–	1	–	1
ಸಹಾಯಕ ತೋಟಗಾರಿಕೆ ನಿರ್ದೇಶಕರು	–	–	1	1
ಸಹಾಯಕ ತೋಟಗಾರಿಕೆ ಅಧಿಕಾರಿ	–	–	3	3
ತೋಟಗಾರಿಕೆ ಸಹಾಯಕರು	1	1	2	4
ತೋಟಗಾರರು	–	1	2	3
ಪ್ರಥಮ ದರ್ಜೆ	–	–	–	–

1	2	3	4	5
ಸಹಾಯಕರು				
ದ್ವಿತೀಯ ದರ್ಜೆ ಸಹಾಯಕರು	–	–	–	–
ಸೇವಕರು / ಅಟೆಂಡರ್	–	–	–	–
ಒಟ್ಟು	**1**	**3**	**8**	**12**

ಇ) ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ನೇರ ನೇಮಕಾತಿ ಮಾಡಲು (ಕೊಡಗು ಜಿಲ್ಲೆ ಸೇರಿದಂತೆ) ಈಗಾಗಲೇ KPSCಗೆ ಪ್ರಸ್ತಾವನೆ ಸಲ್ಲಿಸಿದ್ದು ಹುದ್ದೆಗಳ ನೇರನೇಮಕಾತಿಯಾದ ತಕ್ಷಣ ಕೊಡಗು ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಈ) ಬಂದಿದೆ.

ಉ) ಜಿಲ್ಲೆಯಲ್ಲಿ ಹಾಲಿ ಲಭ್ಯವಿರುವ ಅಧಿಕಾರಿ/ನೌಕರರನ್ನೇ ಖಾಲಿ ಇರುವ ಹುದ್ದೆಗಳಿಗೆ ಪ್ರಭಾರೆ ಮೇಲೆ ನೇಮಿಸಿ ಇಲಾಖೆಯ ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ.

527(1103) ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) ಮಾನ್ಯ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿರುವ ಅಂಗವಿಕಲರ ಸಂಖ್ಯೆ ಎಷ್ಟು;

ಆ) ಇಂತಹವರುಗಳನ್ನು ಗುರುತಿಸಲಾಗಿದೆಯೇ;

ಇ) ಹಾಗಿದ್ದಲ್ಲಿ, ಇವರಿಗೆ ಸರ್ಕಾರಿ ನೀಡಿರುವ ವಿಶೇಷ ಯೋಜನೆಗಳು ಏನು;

ಈ) ಭತ್ಯೆಗಳು ಸೇರಿದಂತೆ ಮಾಸಿಕ ವೇತನ ಎಷ್ಟು;

ಉ) ಅವರಿಗೆ ಸರ್ಕಾರದ ಸೌಲಭ್ಯಗಳು ಸಮರ್ಪಕವಾಗಿ ದೊರೆಯದೆ ಇರುವುದು ನಿಜವೇ;

ಊ) ಹಾಗಿದ್ದಲ್ಲಿ ಇದರ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವರು)

ಅ) 1218

ಆ) ಹೌದು

ಇ) ಸರ್ಕಾರವು ಅಂಗವಿಕಲರಿಗೆ ನೀಡುತ್ತಿರುವ ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ, ಪುನರ್ವಸತಿ ಮತ್ತು ಸಾಮಾಜಿಕ ಭದ್ರತೆಗಳ ಯೋಜನೆಗಳನ್ನು ಇವರಿಗೂ ನೀಡಲಾಗಿದೆ.

ಈ) ತಿಂಗಳಿಗೆ ರೂ. 125ಗಳ ಪೋಷಣಾ ಭತ್ಯೆಯನ್ನು ನೀಡಲಾಗುತ್ತಿದೆ.

ಉ) ಇಲ್ಲ

ಊ) ಉದ್ಭವಿಸುವುದಿಲ್ಲ.

528(1104) ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕಿನ ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ ಎಷ್ಟು, ಇವರುಗಳನ್ನು ಗುರುತಿಸಿ ಹಳದಿ ಕಾರ್ಡ್ ವಿತರಿಸಲು ಫಲಾನುಭವಿಗಳ ಆಯ್ಕೆ ನಡೆದಿದೆಯೇ ಹಾಗೂ ಇಂತಹವರ ಸಂಖ್ಯೆ ಎಷ್ಟು;

ಆ) ಈಗಾಗಲೇ ವಿತರಿಸಿದ ಕಾರ್ಡ್‌ಗಳನ್ನು ರದ್ದುಪಡಿಸಿರುವ ಸಂಖ್ಯೆ ಎಷ್ಟು;

ಇ) ಹಾಗಿದ್ದಲ್ಲಿ, ರದ್ದುಪಡಿಸಿರುವ ಈ ಕಾರ್ಡುದಾರರಿಗೆ ಬದಲಿ ಕಾರ್ಡು ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆಯೇ;

ಈ) ಹಾಗಿಲ್ಲದಿದ್ದಲ್ಲಿ, ರದ್ದುಪಡಿಸಲು ಕಾರಣಗಳೇನು; ಯಾವಾಗ ಇವರಿಗೆ ಪುನ: ಕಾರ್ಡು ವಿತರಿಸಲಾಗುವುದು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕಿನ ಬಡತನ ರೇಖೆಗಿಂತ ಕೆಳಗಿರುವವರನ್ನು ಗುರುತಿಸಿ ಈ ಕೆಳಕಂಡಂತೆ ಪಡಿತರ ಚೀಟಿಯನ್ನು ವಿತರಿಸಲಾಗಿದೆ:

ಅಂ. ಅನ್ನ	ಹಳದಿ ಯೋಜನೆ	ಒಟ್ಟು ಪಡಿತರ ಚೀಟಿ
1616	30305	31921

ಜನವರಿ 2005ನೇ ಮಾಹೆಯಿಂದ ಪುನರ್ ಸಮೀಕ್ಷಾ ಕಾರ್ಯ ಪ್ರಾರಂಭಿಸಲಾಗಿದೆ.

ಆ) 1235 ಬಿ.ಪಿ.ಎಲ್. ಕಾರ್ಡುಗಳನ್ನು ರದ್ದುಪಡಿಸಲಾಗಿದೆ.

ಇ) ರದ್ದುಪಡಿಸಿದ ಬಿಪಿಎಲ್ ಕಾರ್ಡುದಾರರಿಗೆ ಎ.ಪಿ.ಎಲ್., ಪಡಿತರ ಚೀಟಿ ನೀಡಲಾಗುತ್ತಿದೆ.

ಈ) ಹಳದಿ ಪಡಿತರ ಚೀಟಿಯನ್ನು ಪಡೆಯಲು ಅನರ್ಹರಾಗಿರುವ ಕಾರಣದಿಂದ ರದ್ದು ಪಡಿಸಲಾಗಿರುತ್ತದೆ.

ಪುನರ್ ಸಮೀಕ್ಷಾ ಕಾರ್ಯ ಕೈಗೊಂಡಿದ್ದು ಈ ಕಾರ್ಯ ಪೂರ್ಣಗೊಂಡ ನಂತರ ಅರ್ಹ ಕುಟುಂಬಗಳಿಗೆ ಕಾರ್ಡು ವಿತರಿಸಲಾಗುವುದು.

529(13) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮಡಿಕೇರಿ ವಿಧಾನ ಸಭಾ ಕ್ಷೇತ್ರಗಳಲ್ಲಿರುವ ಪಡಿತರ ಚೀಟಿಗಳ ಸಂಖ್ಯೆ ಎಷ್ಟು;

ಆ) ಈಗ ಇರುವ ಪಡಿತರ ಚೀಟಿಗಳ ಸಂಖ್ಯೆ ಎಷ್ಟು;

ಇ) ಇನ್ನು ಎಷ್ಟು ಪಡಿತರ ಚೀಟಿಗಳ ಅವಶ್ಯಕತೆ ಇದೆ;

ಈ) ಹೊಸದಾಗಿ ಪಡಿತರ ಚೀಟಿಯ ಪಟ್ಟಿ ತಯಾರಿಸುವಾಗ ಯಾವ ನಿಯಮಗಳನ್ನು ಅನುಸರಿಸಲಾಗಿದೆ;

ಉ) ಕೂಲಿಗಾಗಿ ಕಾಳು ಯೋಜನೆಯಡಿ ಅಕ್ಕಿ ವಿತರಿಸಲು ಸರ್ಕಾರದ ನಿಯಮವೇನು;

ಊ) ಈ ನಿಯಮದಡಿ ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯವರು ಗ್ರಾಮ ಪಂಚಾಯ್ತಿಯವರಿಗೆ ಕಿರುಕುಳ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಇದನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಅ) ಮಡಿಕೇರಿ ವಿಧಾನ ಸಭಾ ಕ್ಷೇತ್ರಗಳಲ್ಲಿ 31-12-2004ರ ಅಖ್ಯೆರಿನಂತೆ ಈ ಕೆಳಕಂಡಂತೆ ಪಡಿತರ ಚೀಟಿಗಳನ್ನು ವಿತರಸಿಲಾಗಿದೆ:

1) ಅಂತ್ಯೋದಯ ಅನ್ನ ಯೋಜನೆ	1001
2) ಹಳದಿ ಪಡಿತರ ಚೀಟಿ	12069
3) ಕೇಸರಿ ಪಡಿತರ ಚೀಟಿ	20915
ಒಟ್ಟು	**33985**

ಆ) 33985

ಇ) ಮನೆ ಮನೆ ಪುನರ್ ಸಮೀಕ್ಷೆ ಈಗಾಗಲೇ ಪ್ರಾರಂಭಿಸಲಾಗಿದ್ದು ಸದರಿ ಸಮೀಕ್ಷೆಯು ಏಪ್ರಿಲ್ 2005ಕ್ಕೆ ಮುಗಿಸುವ ನಿರೀಕ್ಷೆ ಮಾಡಿದ್ದು, ನಂತರವೇ ಎಷ್ಟು ಅರ್ಹ ಕುಟುಂಬಗಳು ಸೇರ್ಪಡೆಯಾಗುತ್ತವೆ ಎಂದು ತಿಳಿಯಬಹುದು.

ಈ) ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸುವಾಗ ಗ್ರಾಮಾಂತರ ಪ್ರದೇಶದಲ್ಲಿ ವಾರ್ಷಿಕ ಆದಾಯ ರೂ. 12000-00 ಹಾಗೂ ಪಟ್ಟಣ ಪ್ರದೇಶದಲ್ಲಿ ರೂ.17000-00ಕ್ಕಿಂತ ಕಡಿಮೆ ಆದಾಯ ಹೊಂದಿದ್ದು, ಈ ಕೆಳಕಂಡ ಮಾನದಂಡಗಳಿಗೆ ಒಳಪಡುವವರನ್ನು ಬಿ.ಪಿ.ಎಲ್. ಪಡಿತರ ಚೀಟಿಗಳ ಪಟ್ಟಿಯಲ್ಲಿ ಸೇರಿಸಲಾಗುವುದು. ಉಳಿದವರಿಗೆ ಎ.ಪಿ.ಎಲ್. ಪಡಿತರ ಚೀಟಗಳನ್ನು ನೀಡಲಾಗುವುದು;

ಮಾನದಂಡಗಳು:

1. 5.00 ಎಕರೆಗಿಂತ ಕಡಿಮೆ ಖುಷ್ಕಿ ಜಮೀನು ಅಥವಾ ತತ್ಸಮಾನ ತರೀ ಅಥವಾ ಭಾಗಾಯ್ತು ಜಮೀನು ಹೊಂದಿರುವ ಕುಟುಂಬಗಳು.
2. ಒಂದು ಲಕ್ಷ ರೂ.ಗಳವರೆಗೆ ಯಾವುದೇ ಸಹಕಾರಿ ಅಥವಾ ರಾಷ್ಟ್ರೀಕೃತ / ಗ್ರಾಮೀಣ ಬ್ಯಾಂಕುಗಳಲ್ಲಿ ಸಾಲ ಪಡೆಯದವರು.
3. ಯಾವುದೇ ಕಾರ್ಯ ನಿರ್ವಹಿಸದ ಕೊಳವೆ ಬಾವಿಗಳನ್ನು ಹೊಂದಿರುವ ಕುಟುಂಬಗಳು.
4. ಗ್ರಾಮೀಣ ಪ್ರದೇಶದಲ್ಲಿ ವಾರ್ಷಿಕ ರೂ. 12000–00 ಹಾಗೂ ಪಟ್ಟಣ ಪ್ರದೇಶದಲ್ಲಿ ವಾರ್ಷಿಕ ರೂ.17000–00 ಎಲ್ಲಾ ಮೂಲಗಳಿಂದ ಆದಾಯದ ಮಿತಿಗೆ ಒಳಪಟ್ಟ ಕುಟುಂಬಗಳು.
5. ಕುಟುಂಬದ ಸದಸ್ಯರು ಸರ್ಕಾರಿ / ಅರೆ ಸರ್ಕಾರಿ ಮತ್ತು ಸಾರ್ವಜನಿಕ ಉದ್ದಿಮೆಗಳ ನೌಕರರು ಇಲ್ಲದ ಕುಟುಂಬಗಳು ಮತ್ತು ಮಾಸಿಕ ಒಂದು ಸಾವಿರಕ್ಕಿಂತ ಕಡಿಮೆ ಆದಾಯವಿರುವ ಕುಟುಂಬಗಳು.
6. ಪೆಟ್ರೋಲ್ ಅಥವಾ ಡೀಸೆಲ್ ಚಾಲಿತ ವಾಹನಗಳನ್ನು ಹೊಂದಿಲ್ಲದ ಕುಟುಂಬಗಳು.
7. ದೂರವಾಣಿ ಅಥವಾ ಮೊಬೈಲ್ ಹೊಂದಿಲ್ಲದ ಕುಟುಂಬಗಳು.
8. ನೋಂದಾಯಿತ ಗುತ್ತಿಗೆದಾರರು / ಎ.ಪಿ.ಎಂ.ಸಿ. ವ್ಯಾಪಾರಸ್ಥರು / ಕಮಿಷನ್ ಏಜೆಂಟರುಗಳು, ಬಿತ್ತನೆ ಬೀಜ ಗೊಬ್ಬರಗಳ ವಿತರಕರು ಇತರೆ ವ್ಯಾಪಾರಿಗಳು ಇಲ್ಲದ ಕುಟುಂಬಳು.

ಉ) ಎಸ್.ಜಿ.ಆರ್.ವೈ. ವಿಶೇಷ ಘಟಕದಡಿಯಲ್ಲಿ ಜಿಲ್ಲಾಧಿಕಾರಿಗಳು / ರೆಗ್ಯುಲರ್ ಎಸ್.ಜಿ.ಅರ್.ವೈ ಘಟಕದಡಿಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಬಿಡುಗಡೆ ಮಾಡುವ ಅಕ್ಕಿಯನ್ನು ಜಿಲ್ಲೆಯ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ಕಾರ್ಯಯೋಜನೆ ಪ್ರಕಾರ ಅಕ್ಕಿಯನ್ನು ಬಿಡುಗಡೆ ಮಾಡುವರು, ಅಂತಹ ಅಧಿಕಾರಿಗಳು ಪ್ರತಿ ಕೂಲಿಗಾರನಿಗೆ ದಿನಕ್ಕೆ ರೂ. 25.00 ನಗದು ಮತ್ತು 6 ಕೆ.ಜಿ. ಅಕ್ಕಿ ನೀಡುವರು.

ಊ) ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಗಮನಕ್ಕೆ ಬಂದಿಲ್ಲ.

ಋ) ಉದ್ಭವಿಸುವುದಿಲ್ಲ.

530(1224) ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲಘಟಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯ ಕಲಘಟಗಿಯಲ್ಲಿರುವ ಮಾರ್ಕೆಟಿಂಗ್ ಸೂಸೈಟಿಗಳ ಸಂಖ್ಯೆ ಎಷ್ಟು;

ಆ) ಈ ಮಾರ್ಕೆಟಿಂಗ್ ಸೊಸೈಟಿಯ ಜಾಗದ ವಿಸ್ತೀರ್ಣ ಎಷ್ಟು;

ಇ) ಇದನ್ನು ಅತಿಕ್ರಮಿಸಿ ಒತ್ತುವರಿ ಮಾಡಿರುವವರು ಯಾರು;

ಈ) ಅಂತಹವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಉ) ಈ ಅತಿಕ್ರಮದ ಜಾಗವನ್ನು ವಶಪಡಿಸಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು;

ಊ) ಸದರಿ ಮಾರ್ಕೆಟಿಂಗ್ ಸೊಸೈಟಿಯ ಅಭಿವೃದ್ಧಿಗೆ ಸರ್ಕಾರ ಯಾವ ವಿಶೇಷ ಯೋಜನೆ ಹಮ್ಮಿಕೊಂಡು ಅನುಷ್ಠಾನಗೊಳಿಸಿದೆ (ವಿವರ ಒದಗಿಸುವುದು)?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘ ನಿಯಮಿತ ಎಂಬ ಒಂದು ಮಾರಾಟ ಸಹಕಾರ ಸಂಘ ಇರುತ್ತದೆ.

ಆ) 2 ಎಕರೆ 20 ಗುಂಟೆ.

ಇ) ಈ ಜಾಗವನ್ನು ಯಾರೂ ಅತಿಕ್ರಮಿಸಿ ಒತ್ತುವರಿ ಮಾಡಿರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಸಂಘದ ಅಭಿವೃದ್ಧಿಗಾಗಿ ಸರ್ಕಾರ ಇದುವರೆವಿಗೂ ರೂ. 6,78,000–00 ಷೇರು ಬಂಡವಾಳ ತೊಡಗಿಸಿರುತ್ತದೆ.

531(1059) ಶ್ರೀ ದೇಸಾಯಿ ಶಿವಪುತ್ರಪ್ಪ ಮಡಿದಾಳಪ್ಪ (ಹೂವಿನ ಹಿಪ್ಪರಗಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) 2003–04ನೇ ಸಾಲಿನ ಬೆಳೆ ವಿಮೆ ಹಣವನ್ನು ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಬಿಡುಗಡೆ ಮಾಡಲಾಗಿದೆ;

ಆ) ಇದರಲ್ಲಿ ವಿಜಾಪುರ ಜಿಲ್ಲೆಗೆ ಬಿಡುಗಡೆ ಮಾಡಿದ ಹಾಗೂ ಬಿಡುಗಡೆಯಾಗಬೇಕಾಗಿರುವ ಹಣವೆಷ್ಟು;

ಇ) ಇಲ್ಲಿಯವರೆಗೆ ಹಣ ಬಿಡುಗಡೆಯಾಗದಿದ್ದಲ್ಲಿ ಬಿಜಾಪುರ ಜಿಲ್ಲೆಗೆ ಹಣವನ್ನು ತಕ್ಷಣವೇ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳವುದೇ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) 2003ನೇ ಮುಂಗಾರು ಹಂಗಾಮಿನಲ್ಲಿ ಒಟ್ಟು ರೂ. 272.32 ಕೋಟಿಗಳನ್ನು ರೈತರಿಗೆ ಇತ್ಯರ್ಥಪಡಿಸಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇದರಲ್ಲಿ ಬಿಜಾಪುರದಲ್ಲಿ ಜಿಲ್ಲೆಗೆ ಬಿಡುಗಡೆ ಮಾಡಲಾದ ಬೆಳೆ ವಿಮಾ ನಷ್ಟ ಪರಿಹಾರ ಮೊತ್ತವು ರೂ. 48.02 ಲಕ್ಷಗಳು. 2003–04ನೇ ಹಿಂಗಾರು

ಬೇಸಿಗೆ ಹಂಗಾಮಿನಲ್ಲಿ ಬಿಜಾಪುರ ಜಿಲ್ಲೆಗೆ ಒಟ್ಟು ರೂ. 3671.39 ಲಕ್ಷಗಳನ್ನು ಬಿಡುಗಡೆ ಮಾಡಬೇಕಾಗಿದೆ.

ಇ) ಹೌದು. 2003-04ನೇ ಸಾಲಿನ ಹಿಂಗಾರು ಬೇಸಿಗೆ ಹಂಗಾಮಿನ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ದಿನಾಂಕ 3-1-2005ರಂದು ಭಾರತೀಯ ಕೃಷಿ ವಿಮಾ ಕಂಪನಿ ನಿಯಮಿತ ಸಂಸ್ಥೆಯು ರಾಜ್ಯ ಸರ್ಕಾರದ ಪಾಲಿನ ಹಣವನ್ನು ಬಿಡುಗಡೆ ಮಾಡಲು ಕೋರಿದ್ದು ಈ ಹಣವನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲು ಈಗಾಗಲೇ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

2003ರ ಮುಂಗಾರು ಹಂಗಾಮಿನಲ್ಲಿ ಇತ್ಯರ್ಥಪಡಿಸಲಾದ ಬೆಳೆ ವಿಮಾ ನಷ್ಟ ಪರಿಹಾರದ ಜಿಲ್ಲಾವಾರು ವಿವರ

ಕ್ರಮ ಸಂಖ್ಯೆ	ಜಿಲ್ಲೆ	ಬೆಳೆ ವಿಮಾ ನಷ್ಟ ಪರಿಹಾರ (ಲಕ್ಷ ರೂ.ಗಳಲ್ಲಿ)
1.	ಬೆಂಗಳೂರು	1.74
2.	ಬೆಳಗಾವಿ	589.99
3.	ಬಳ್ಳಾರಿ	49.63
4.	ಬೀದರ್	212.17
5.	ಬಿಜಾಪುರ	48.02
6.	ಚಿಕ್ಕಮಗಳೂರು	326.32
7.	ಚಿತ್ರದುರ್ಗ	463.46
8.	ದಕ್ಷಿಣ ಕನ್ನಡ	0.00
9.	ಧಾರವಾಡ	10415.58
10.	ಗುಲ್ಬರ್ಗಾ	3202.69
11.	ಹಾಸನ	943.05
12.	ಕೋಲಾರ	47.06
13.	ಮಂಡ್ಯ	1.44
14.	ಮೈಸೂರು	44.47
15.	ರಾಯಚೂರು	435.42
16.	ಶಿವಮೊಗ್ಗ	208.97
17.	ತುಮಕೂರು	1907.94
18.	ಉತ್ತರ ಕನ್ನಡ	580.13
19.	ಕೊಡಗು	0.00
20.	ಕೊಪ್ಪಳ	63.15
21.	ಚಾಮರಾಜನಗರ	542.46

1	2	3
22.	ದಾವಣಗೆರೆ	948.63
23.	ಬಾಗಲಕೋಟೆ	96.89
24.	ಗದಗ	1025.90
25.	ಹಾವೇರಿ	5076.64
26.	ಉಡುಪಿ	0.00
	ಒಟ್ಟು	**27231.75**

532(954) ಶ್ರೀಧ್ರುವನಾರಾಯಣ ಆರ್. (ಸಂತೇಮರಳ್ಳಿ) ಮಾನ್ಯ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದ ಕೃಷಿ ಮಾರುಕಟ್ಟೆಗಳಲ್ಲಿ ಮಧ್ಯವರ್ತಿಗಳು ರೈತರಿಂದ ಶೇ.2 ರಿಂದ 10 ರಷ್ಟು ಕಮೀಷನ್ ಪಡೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಎ.ಪಿ.ಎಂ.ಸಿ. ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಾಗುವುದು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ (ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಸಚಿವರು)

ಅ) ಹೌದು. ಕೆಲವೊಂದು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಅ) ಮಾರುಕಟ್ಟೆ ಸಮಿತಿಗಳು ಇಂತಹ ಪ್ರಕರಣಗಳು ಗಮನಕ್ಕೆ ಬಂದಾಗ ಸಂಬಂಧಪಟ್ಟ ಪೇಟೆ ಕಾರ್ಯಕರ್ತರ ಲೈಸನ್ಸ್‌ನ್ನು ಅಮಾನತ್ತು ಮಾಡುವಂತಹ ತೀವ್ರ ಕ್ರಮಗಳನ್ನು ಕೈಗೊಂಡಿರುತ್ತವೆ.

ಆ) ರೈತರು ಕಮಿಷನ್ ನೀಡದಂತೆ ತಡೆಗಟ್ಟು ಸಲುವಾಗಿ ಕೆಳಕಂಡಂತೆ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಕರಪತ್ರಗಳ ಮೂಲಕ ಕಮೀಷನ್ ನೀಡದಿರುವಂತೆ ರೈತರಿಗೆ ತಿಳುವಳಿಕೆ ನೀಡುತ್ತಿವೆ.

ಧ್ವನಿ ವರ್ಧಕದ ಮೂಲಕ ಈ ಬಗ್ಗೆ ಪ್ರಚಾರ ನೀಡಲಾಗುತ್ತಿದೆ.

ಇ. ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ:

ಜಾತ್ರೆಗಳಲ್ಲಿ ವಸ್ತು ಪ್ರದರ್ಶನಗಳಲ್ಲಿ ಕರಪತ್ರ ಹಂಚುವ ಮೂಲಕ ರೈತರಿಗೆ ತಿಳುವಳಿಕೆ ನೀಡಲಾಗುತ್ತಿದೆ.

ಇದಲ್ಲದೆ, ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಲ್ಲಿ ಭಾಗವಹಿಸುವ ರೈತರಿಗೆ ತಿಳುವಳಿಕೆಯನ್ನು ನೀಡಲಾಗುತ್ತಿದೆ.

ಹುಬ್ಬಳ್ಳಿ ಮತ್ತು ಮೈಸೂರು ಘಟಕಗಳಲ್ಲಿರುವ ತರಬೇತಿ ಕೇಂದ್ರಗಳ ಮುಖಾಂತರ ರೈತರ ತರಬೇತಿ ಕಾರ್ಯಕ್ರಮವನ್ನು ನಿರಂತರವಾಗಿ ಹಮ್ಮಿಕೊಂಡಿದ್ದು, ದಲ್ಲಾಲಿ ನೀಡದಂತೆ ಹಾಗೂ ಸ್ವಚ್ಛ ಮತ್ತು ಒಣಗಿದ ಕೃಷಿ ಹುಟ್ಟುವಳಿಗಳನ್ನು ಮಾರಾಟಕ್ಕೆ ತರಲು ತಿಳುವಳಿಕೆ ನೀಡಲಾಗುತ್ತಿದೆ.

ಇ) ಹೌದು, ಪ್ರಸ್ತುತ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗುತ್ತಿದೆ.

533(955) ಶ್ರೀ ಹಾಲಾಡಿ ಶ್ರೀನಿವಾಸ್ ಶೆಟ್ಟಿ (ಕುಂದಾಪುರ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಪೌಷ್ಠಿಕ ಆಹಾರ ತಯಾರಿಸಲು ತಿಂಗಳೊಂದರ ಪರವಾನಗಿ ಮೂಲಕ ಪಡಿತರ ಅಂಗಡಿಗಳಲ್ಲಿ ಕೊಡುತ್ತಿದ್ದ 10 ಲೀಟರ್ ಸೀಮೆ ಎಣ್ಣೆಯನ್ನು ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸೀಮೆ ಎಣ್ಣೆ ಕೊಡುವುದನ್ನು ನಿಲ್ಲಿಸಿರುವುದರಿಂದ ಅಂಗನವಾಡಿ ಕೇಂದ್ರಗಳಲ್ಲಿ ಪೌಷ್ಠಿಕ ಆಹಾರ ತಯಾರಿಸಲು ಸಮಸ್ಯೆ ಉಂಟಾಗಿರುವುದರಿಂದ ಹಿಂದಿನಂತೆ ಸೀಮೆ ಎಣ್ಣೆ ಕೊಡುವ ವ್ಯವಸ್ಥೆಯನ್ನು ಮುಂದುವರೆಸಲಾಗುವುದೇ;

ಇ) ಪೌಷ್ಠಿಕ ಆಹಾರ ತಯಾರಿಸಲು ಅಂಗನವಾಡಿ ಕೇಂದ್ರಗಳಿಗೆ ಸೀಮೆ ಎಣ್ಣೆಯ ಬದಲು ಗ್ಯಾಸ್ ಮತ್ತು ಗ್ಯಾಸ್ ಸ್ಟೌವ್ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೆ;

ಈ) ಹೌದಾದಲ್ಲಿ ಯಾವಾಗ ನೀಡಲಾಗುವುದು?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಕಳೆದ ಒಂದು ವರ್ಷದಿಂದ ಪಡಿತರ ವ್ಯವಸ್ಥೆಯಡಿ ಅಂಗನವಾಡಿ ಕೇಂದ್ರಗಳಿಗೆ ಸೀಮೆ ಎಣ್ಣೆ ಕೊಡುವುದನ್ನು ನಿಲ್ಲಿಸಿರುತ್ತಾರೆ.

ಆ) ಈ ವ್ಯವಸ್ಥೆಯನ್ನು ಮುಂದುವರೆಸಲು ಆಹಾರ ಸರಬರಾಜು ಮತ್ತು ನಾಗರೀಕ ಪೂರೈಕೆ ಇಲಾಖೆಯನ್ನು ಕೋರಲಾಗಿರುತ್ತದೆ.

ಇ) ಪರಿಶೀಲನೆಯಲ್ಲಿಲ್ಲ.

ಈ) ಅನ್ವಯಿಸುವುದಿಲ್ಲ.

534(957) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಬಿಪಿಎಲ್ ಅಡಿಯಲ್ಲಿ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ;

ಆ) ಕುಂದಾಪುರ ವಿಧಾನ ಸಭಾ ವ್ಯಾಪ್ತಿಯಲ್ಲಿ ಗುರುತಿಸಲಾದ ಫಲಾನುಭವಿಗಳೆಷ್ಟು;

ಇ) ಗುರುತಿಸಲಾದ ಫಲಾನುಭವಿಗಳಿಗೆ ಪಡಿತರ ಚೀಟಿಗಳನ್ನು ನೀಡಲಾಗಿದೆಯೇ;

ಈ) ನೀಡಿದ್ದಲ್ಲಿ, ಕುಂದಾಪುರ ಕ್ಷೇತ್ರದಲ್ಲಿ ಎಷ್ಟು ಮಂದಿಗೆ ನೀಡಲಾಗಿದೆ;

ಉ) ಉಳಿದವರಿಗೆ ಯಾವಾಗ ನೀಡಲಾಗುವುದು;

ಊ) ಬಿಪಿಎಲ್ ಪಟ್ಟಿಯಲ್ಲಿ, ಗುರುತಿಸಲು ಬಿಟ್ಟು ಹೋದವರನ್ನು ಗುರುತಿಸಿ, ಅವರಿಗೆ ಪಡಿತರ ಚೀಟಿ ಕೊಡಲು ಕ್ರಮ ಕೈಗೊಳ್ಳಲಾಗುವುದೇ;

ಋ) ಹಾಗಿದ್ದಲ್ಲಿ, ಎಂದಿನಿಂದ ಈ ಕ್ರಮವನ್ನು ಅನುಸರಿಸಲಾಗುವುದು;

ೠ) ಪಡಿತರ ಚೀಟಿ ವಿತರಿಸಿದ ಫಲಾನುಭವಿಗಳಿಗೆ ಯಾವಾಗಿನಿಂದ ಪಡಿತರ ಧಾನ್ಯಗಳನ್ನು ನೀಡಲಾಗುವುದು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಸಚಿವರು)

ಅ) ಕುಂದಾಪುರ ತಾಲ್ಲೂಕಿನಲ್ಲಿ ದಿನಾಂಕ 11-1-2005ಕ್ಕೆ ಬಿಪಿಎಲ್ ಅಡಿಯಲ್ಲಿ 37138 ಫಲಾನುಭವಿಗಳನ್ನು ಗುರುತಿಸಲಾಗಿದೆ.

ಆ) ಕುಂದಾಪುರ ವಿಧಾನ ಸಭಾ ವ್ಯಾಪ್ತಿಯಲ್ಲಿ 17150 ಫಲಾನುಭವಿಗಳನ್ನು ಗುರುತಿಸಲಾಗಿದೆ.

ಇ) ವಿತರಿಸಲಾಗಿದೆ.

ಈ) ಕುಂದಾಪುರ ಕ್ಷೇತ್ರದಲ್ಲಿ 17150 ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಮನೆ-ಮನೆ ಪುನರ್ ಸಮೀಕ್ಷೆ ಕಾರ್ಯವು ಜನವರಿ, 2005ರಿಂದ ಪ್ರಾರಂಭವಾಗಿದ್ದು, ಏಪ್ರಿಲ್, 2005ಕ್ಕೆ ಮುಗಿಯಲಿದೆ. ಸಮೀಕ್ಷೆಯ ನಂತರ ಎಲ್ಲಾ ಅರ್ಹ ಬಿಪಿಎಲ್ ಕುಟುಂಬಗಳಿಗೂ ಪಡಿತರ ಚೀಟಿಗಳನ್ನು ನೀಡಲಾಗುವುದು.

ಋ) ಜನವರಿ, 2005ರಿಂದ ಸಮೀಕ್ಷೆ ಕಾರ್ಯ ಪ್ರಾರಂಭಗೊಂಡಿರುತ್ತದೆ. ಏಪ್ರಿಲ್, 2005ರ ನಂತರ ಅರ್ಹ ಕುಟುಂಬಗಳಿಗೆ ಹಳದಿ ಕಾರ್ಡುಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ೠ) ಪಡಿತರ ಚೀಟಿ ವಿತರಿಸಿದ ಮಾಹೆಯಿಂದಲೇ ಆಹಾರ ಧಾನ್ಯಗಳನ್ನು ವಿತರಿಸಲಾಗುವುದು.

535(349) ಶ್ರೀ ಹೇ ಹಾಲಪ್ಪ (ಹೊಸನಗರ) ಮಾನ್ಯ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಹೊಸನಗರ ಮತ್ತು ಶಿವಮೊಗ್ಗ ತಾಲ್ಲೂಕಿನಲ್ಲಿರುವ ಜನರಿಗೆ ಒದಗಿಸಿರುವ ಪಡಿತರ ಚೀಟಿ ಎಷ್ಟು ಹಾಗೂ ಬೇಡಿಕೆ ಎಷ್ಟು;

ಆ) ಇದರಲ್ಲಿ, ಎಷ್ಟು ಜನರಿಗೆ ವಿತರಿಸಲಾಗಿದೆ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಸಚಿವರು)

ಅ) ಶಿವಮೊಗ್ಗ ಹಾಗೂ ಹೊಸನಗರ ತಾಲ್ಲೂಕುಗಳಿಗೆ ಒದಗಿಸಿರುವ ಪಡಿತರ ಚೀಟಿಗಳ ವಿವರಗಳು ಈ ಕೆಳಕಂಡಂತಿದೆ.

ಕ್ರ. ಸಂ.	ವಿವಿಧ ತರದ ವ.ಚೀ.	ತಾಲ್ಲೂಕಿನ ಹೆಸರು ಶಿವಮೊಗ್ಗ	ಹೊಸನಗರ
1.	ಹಳದಿ ಪಡಿತರ ಚೀಟಿಗಳು	33336	15047
2.	ಅಂತ್ಯೋದಯ ಪ.ಚೀ.ಗಳು	3126	2224
3.	ಎಪಿಎಲ್ ಪ.ಚೀ. (ಕೇಸರಿ)	22204	8599
	ಒಟ್ಟು	**48666**	**25870**

ಅರ್ಹ ಫಲಾನುಭವಿಗಳು ಕೈಬಿಟ್ಟು ಹೋಗಿವೆ. ಅನರ್ಹ ಕುಟುಂಬಗಳ ಪಟ್ಟಿ ಸೇರ್ಪಟ್ಟಿವೆ ಎಂದು ಸರ್ಕಾರದ ಗಮನಕ್ಕೆ ಬಂದಿದ್ದರ ಕಾರಣ ವಿವಿಧ ಇಲಾಖೆಯ ಅಧಿಕಾರಿಗಳು / ನೌಕರರನ್ನು ಒಳಗೂಡಿಸಿ, ಜನಪ್ರತಿನಿಧಿಗಳು ಸ್ತ್ರೀಶಕ್ತಿ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೂಡಿಸಿಕೊಂಡು ಮನೆ ಮನೆ ಪುನರ್ ಸಮೀಕ್ಷೆ ಕಾರ್ಯ ಮಾಡಲ ಸರ್ಕಾರದ ಸಂ. ಅನಾಸ 114 ಡಿಆರ್‌ಎ 04 ದಿನಾಂಕ 10–1–05ರಂದು ಆದೇಶ ಹೊರಡಿಸಿದೆ. ಈ ಆದೇಶದಂತೆ ಪುನರ್ ಸಮೀಕ್ಷೆ ಪ್ರಾರಂಭವಾಗಿದ್ದು ಸಮೀಕ್ಷೆಯ ಫಲಿತಾಂಶವನ್ನು ಗ್ರಾಮಸಭೆಗಳಲ್ಲಿ / ವಾರ್ಡ್ ಸಭೆಗಳಲ್ಲಿಟ್ಟು ಅನುಮೋದನೆ ಪಡೆಯುವ ನಿರೀಕ್ಷೆ ಏಪ್ರಿಲ್ 2005ರಲ್ಲಿರುತ್ತದೆ. ಬೇಡಿಕೆ ಎಷ್ಟು ಎಂಬುದನ್ನು ನಿರ್ಧರಿಸಿದ ಮೇಲೆ ಅರ್ಹರಿಗೆ ಹಳದಿ ಪಡಿತರ ಚೀಟಿ ವಿತರಿಸಲಾಗುವುದು.

ಆ) ಶಿವಮೊಗ್ಗ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ವಿತರಿಸಲಾಗಿರುವ ಪಡಿತರ ಚೀಟಿಗಳ ಸಂಖ್ಯೆ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವಿವಿಧ ತರದ ವ.ಚೀ.	ತಾಲ್ಲೂಕಿನ ಹೆಸರು ಶಿವಮೊಗ್ಗ	ಹೊಸನಗರ
1.	ಹಳದಿ ಪಡಿತರ ಚೀಟಿಗಳು	33336	15047
2.	ಅಂತ್ಯೋದಯ ಪ.ಚೀ.ಗಳು	3126	2224
3.	ಎಪಿಎಲ್ ಪ.ಚೀ. (ಕೇಸರಿ)	22204	8599
	ಒಟ್ಟು	**48666**	**25870**

536(351) ಶ್ರೀ ಹಾಲಪ್ಪ ಹೆಚ್. (ಹೊಸನಗರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಕೃಷಿ ವಿಮೇ ಪರಿಹಾರ ನೀಡಲಾಗಿದೆಯೇ (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಹೌದು. 2003ರ ಮುಂಗಾರು ಹಂಗಾಮಿನಲ್ಲಿ ಶಿವಮೊಗ್ಗ ಜಿಲ್ಲೆಗೆ ರೂ. 208, 97 ಲಕ್ಷಗಳನ್ನು ಬೆಳೆ ವಿಮಾ ನಷ್ಟ ಪರಿಹಾರವಾಗಿ ಇತ್ಯರ್ಥಪಡಿಸಲಾಗಿದೆ. ತಾಲ್ಲೂಕುವಾರು ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸಿದ ವಿವರಗಳು ಈ ಕೆಳಕಂಡಂತಿದೆ.

ಕ್ರ. ಸಂ.	ತಾಲ್ಲೂಕು	ಬೆಳೆ ವಿಮಾ ನಷ್ಟ ಪರಿಹಾರ (ಲಕ್ಷ ರೂ.ಗಳಲ್ಲಿ)
1.	ಶಿವಮೊಗ್ಗ	12.39
2.	ಶಿಕಾರಿಪುರ	46.76
3.	ಸೊರಬ	149.82
4.	ಭದ್ರಾವತಿ	0.00
5.	ಹೊಸನಗರ	0.00
6.	ಸಾಗರ	0.00
7.	ತೀರ್ಥಹಳ್ಳಿ	0.00
	ಒಟ್ಟು	**208.97**

537(1107) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದ ರೈತರಿಗೆ 2003-04ನೇ ಸಾಲಿನ ಹಿಂಗಾರು ಮತ್ತು ಮುಂಗಾರು ಬೆಳೆ ನಾಶವಾದ ಕಾರಣ ಬೆಳೆ ವಿಮೆ ಹಣ ಬಿಡುಗಡೆ ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಬಿಡುಗಡೆಯಾದ ಹಣ ಎಷ್ಟು;

ಇ) ಬಿಡುಗಡೆಗೆ ತಡವಾಗಲು ಕಾರಣವೇನು;

ಈ) ಬೆಳೆ ವಿಮೆ ಹಣ ವಿತರಣೆಯಲ್ಲಿ ತಾರತಮ್ಯ ಆಗಿರುವುದು ಹಾಗೂ ಬೆಳೆ ನಾಶದ ಸಮೀಕ್ಷೆಯಲ್ಲಿ ಲೋಪ ದೋಷಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ, ಅದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) 2003-04ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ವಿಮಾ ನಷ್ಟ ಪರಿಹಾರವನ್ನು ಈಗಾಗಲೇ ಬಿಡುಗಡೆ ಮಾಡಿ ರೈತರಿಗೆ ನೀಡಲಾಗಿದೆ. 2003-04ನೇ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆ ವಿಮಾ ನಷ್ಟ ಪರಿಹಾರವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಆ) 2003ರ ಮುಂಗಾರು ಹಂಗಾಮಿನಲ್ಲಿ ರಾಜ್ಯದಾದ್ಯಂತ ಜಿಲ್ಲಾವಾರು ರೂ. 272.32 ಕೋಟಿಗಳನ್ನು ರೈತರಿಗೆ ಇತ್ಯರ್ಥಪಡಿಸಲಾಗಿದೆ.

ಇ) ಹಣ ಬಿಡುಗಡೆಗೆ ತಡವಾಗಲು ಕೇಂದ್ರ ಸರ್ಕಾರವು ರೂಪಿಸಿರುವ ಮಾರ್ಗಸೂಚಿಯಲ್ಲಿ ಅನುಸರಿಸಿರುವ ವಿಧಿ ವಿಧಾನಗಳು. ಪ್ರತಿ ಹಂಗಾಮಿನಲ್ಲಿ ನಿಗದಿತ ದಿನಾಂಕದೊಳಗೆ ರೈತರು ಯೋಜನೆಯಡಿಯಲ್ಲಿ ಭಾಗವಹಿಸಿದ ನಂತರ, ಬೆಳೆ ಕಟಾವಿಗೆ ಬಂದ ನಂತರ, ಬೆಳೆ ಕಟಾವು ಪ್ರಯೋಗಗಳನ್ನು ನಡಿಸುವುದು. ಬೆಳೆ ಕಟಾವು ಪ್ರಯೋಗಗಳಿಂದ ಬಂದ ಇಳುವರಿ ಮಾಹಿತಿಯನ್ನು ಜಿಲ್ಲಾ ಮಟ್ಟದಲ್ಲಿ ಕ್ರೋಢೀಕರಿಸುವುದು. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಗೆ ಕಳುಹಿಸಿಕೊಡುವುದು. ನಂತರ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ಮಾಹಿತಿಯನ್ನು ಪರಿಶೀಲಿಸಿ ಕ್ರೋಢೀಕರಿಸುವುದು ಮತ್ತು ವಿಮಾ ಸಂಸ್ಥೆಗೆ ಕಳುಹಿಸಿ ಕೊಡುವುದು ನಷ್ಟ ಪರಿಹಾರವನ್ನು ಲೆಕ್ಕ ಹಾಕಿ ಅಂತಿಮಗೊಳಿಸುವುದು. ನಂತರ ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆಯುವುದು. ಇದಲ್ಲದೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲಿನ ಹಣವನ್ನು ಪಡೆದು ನೋಡಲ್ ಬ್ಯಾಂಕ್‌ಗಳ ಮೂಲಕ ಸ್ಥಳೀಯ ಬ್ಯಾಂಕಿನ ಶಾಖೆಗಳಿಗೆ ಕಳುಹಿಸಿಕೊಡುವುದು. ಆದ್ದರಿಂದ ರೈತರು ವಿಮೆಗೆ ಒಳಪಟ್ಟ ನಂತರ ಸುಮಾರು ಒಂದು ವರ್ಷ ಕಾಲ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥ ಪಡಿಸಲು ಕಾಲಾವಕಾಶ ಬೇಕಾಗಿರುತ್ತದೆ.

ಈ) ಯೋಜನೆಯಡಿಯಲ್ಲಿ ಬೆಳೆ ಕಟಾವು ಪ್ರಯೋಗಗಳನ್ನು ನಡೆಸುವಲ್ಲಿ ಯಾವ ಲೋಪದೋಷಗಳು ಆಗಿರುವುದಿಲ್ಲ. ಒಂದು ಪ್ರದೇಶದಲ್ಲಿ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಬೇಕಾದರೆ ಆ ಪ್ರದೇಶದಲ್ಲಿ ಬೆಳೆ ಕಟಾವು ಪ್ರಯೋಗಗಳಿಂದ ಕಂಡುಹಿಡಿಯಲಾಗುವ ವಾಸ್ತವಿಕ ಇಳುವರಿ ಮಾಹಿತಿಯು ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇರಬೇಕು. ಇಳುವರಿಯ ಕೊರತಿಗನುಗುಣವಾಗಿ ವಿಮೆ ಮಾಡಿಸಿದ ಎಲ್ಲಾ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆ. 2003-04ನೇ ಸಾಲಿನಲ್ಲಿ ಬೆಳೆಗಳನ್ನು ತಾಲ್ಲೂಕು ಮತ್ತು ಹೋಬಳಿ ಮಟ್ಟಕ್ಕೆ ಅಧಿಸೂಚಿಸಿರುವ ಪ್ರಯುಕ್ತ ಈ ಘಟಕಗಳಲ್ಲಿನ ಪ್ರಾರಂಭಿಕ ಇಳುವರಿ, ವಾಸ್ತವಿಕ ಇಳುವರಿ ಹಾಗೂ ಇಳುವರಿಯು ಕೊರತೆಯಲ್ಲಿ ವ್ಯತ್ಯಾಸವಿರುವುದರಿಂದ, ತಾಲ್ಲೂಕಿನಿಂದ ತಾಲ್ಲೂಕಿಗೆ ಮತ್ತು ಹೋಬಳಿಯಿಂದ ಹೋಬಳಿಗೆ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥ ಪಡಿಸುವಲ್ಲಿ ವ್ಯತ್ಯಾಸವಿರುತ್ತದೆ.

ಉ) ಉದ್ಭವಿಸುವುದಿಲ್ಲ.

538(1229) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಈವರೆಗೆ ಎಷ್ಟು ಹಳದಿ ಕಾರ್ಡ್ ವಿತರಣೆ ಮಾಡಲಾಗಿದೆಯೇ ಹಾಗೂ ಎಷ್ಟು ಹಳದಿ ಕಾರ್ಡ್ ವಾಪಸ್ಸು ಪಡೆಯಲಾಗಿದೆ;

ಆ) ಬಡತನ ರೇಖೆಯ ಕೆಳಗಿನವರೆಗೆ ಹಳದಿ ಕಾರ್ಡ್ ಸಿಗದೆ ಅವರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಈ ರೀತಿ ಹಳದಿ ಕಾರ್ಡ್ ಸಿಗದ ಬಡವರಿಗೆ ಯಾವಾಗ ಕಾರ್ಡುಗಳನ್ನು ವಿತರಿಸಲಾಗುವುದು, ಇದಕ್ಕೇನಾದರೂ ಕಾಲಮಿತಿ ಕಾರ್ಯಕ್ರಮವನ್ನೇನಾದರೂ ಹಾಕಿಕೊಳ್ಳಲಾಗಿದೆಯೇ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) 2004ನೇ ಡಿಸೆಂಬರ್ ಮಾಹೆಯ ಅಂತ್ಯಕ್ಕೆ 63,38,990 ಹಳದಿ ಹಾಗೂ 719700 ಎಎವೈ ಕಾರ್ಡುಗಳನ್ನು ವಿತರಣೆ ಮಾಡಲಾಗಿದೆ. ಹಾಗೂ 8,54,583 ಬಿಪಿಎಲ್, ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆ.

ಆ) ಹೌದು.

ಇ) ಪುನರ್ ಪರಿಶೀಲನಾ ಕಾರ್ಯಕ್ರಮವು 2005ನೇ ಜನವರಿಯಿಂದ ಪ್ರಾರಂಭಿಸಿ ಏಪ್ರಿಲ್ ಮಾಹೆಯ ಅಂತ್ಯಕ್ಕೆ ಮುಗಿದ ನಂತರ ಅರ್ಹರಿಗೆ ಬಿ.ಪಿ.ಎಲ್. ಪಡಿತರ ಚೀಟಿ ವಿತರಿಸಲಾಗುವುದು. ಈ ಸಂಬಂಧ ಸರ್ಕಾರಿ ಆದೇಶ ಸಂ: ಅನಾಸ 114 ಡಿಆರ್ಎ 04, ದಿನಾಂಕ 10-1-2005ರಂದು ಹೊರಡಿಸಿದ್ದು ಪುನರ್ ಸಮೀಕ್ಷೆ ಕಾರ್ಯ ರಾಜ್ಯಾದ್ಯಂತ ಪ್ರಾರಂಭವಾಗಿದೆ.

539(3) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿಯು ಹೊಸ ಜಿಲ್ಲೆಯಾದ ನಂತರ ಜಿಲ್ಲೆಯಲ್ಲಿ ಸ್ಥಾಪಿಸಲಾದ ಸಹಕಾರ ಬ್ಯಾಂಕುಗಳು ಎಷ್ಟು;

ಆ) ಉಡುಪಿಯಲ್ಲಿ ಕೇಂದ್ರ ಸಹಕಾರಿ ಬ್ಯಾಂಕನ್ನು ಎಂದಿನಿಂದ ಸ್ಥಾಪಿಸಲಾಗುವುದು;

ಇ) ಈ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳಾವುವು ಪ್ರಗತಿಯ ವಿವರ ನೀಡುವುದು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಉಡುಪಿಯು ಹೊಸ ಜಿಲ್ಲೆಯಾದ ನಂತರ ಜಿಲ್ಲೆಯಲ್ಲಿ ಮೂರು ಪ್ರಾಥಮಿಕ ಕೃಷಿ ಸಹಕಾರ ಬ್ಯಾಂಕುಗಳು ಸ್ಥಾಪನೆಯಾಗಿವೆ.

ಆ) ಉಡುಪಿ ಜಿಲ್ಲೆಯಲ್ಲಿ ಹೊಸ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು ಸ್ಥಾಪನೆ ಮಾಡಬೇಕಾದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಮಹಾಸಭೆಯಲ್ಲಿ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 14(1) ರೀತ್ಯಾ 2/3ನೇ ಬಹುಮತದಿಂದ ಎರಡು ಬಾರಿ ಬ್ಯಾಂಕಿನ ಮಹಾ ಸಭೆಯಲ್ಲಿ ಮಹಾಸಭೆಯಲ್ಲಿ ದಿನಾಂಕ 14.3.2001 ಹಾಗೂ ದಿನಾಂಕ 25-9-2004 ರಂದು ವಿಷಯ ಮಂಡಿಸಿದ್ದು ಈ ಬಗ್ಗೆ ಮೇಲಿನ ಕಾಯ್ದೆಯಂತೆ ಮಹಾ ಸಭೆಯಲ್ಲಿ ಒಪ್ಪಿಗೆಯಾಗಿರುವುದಿಲ್ಲ ಅದುದರಿಂದ ಹೊಸ ಬ್ಯಾಂಕ್ ಸ್ಥಾಪನೆಯಾಗಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

540(1065) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಬಡವರಿಗೆ ಇದುವರೆಗೆ ವಿತರಿಸಿರುವ ಬಿಪಿಎಲ್ ಕಾರ್ಡಿನ ಸಂಖ್ಯೆ ಎಷ್ಟು? (ಜಿಲ್ಲಾವಾರು, ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು);

ಆ) ಅನೇಕ ಅರ್ಹ ಫಲಾನುಭವಿಗಳಿಗೆ ಪಡಿತರ ಕಾರ್ಡು ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಈ) ಬಡತನ ರೇಖೆಗಿಂತ ಮೇಲಿರು ಅನೇಕ ವ್ಯಕ್ತಿಗಳು ಕಾರ್ಡನ್ನು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ ಇವುಗಳನ್ನು ರದ್ದುಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಊ) ಇದುವರೆಗೆ ರದ್ದುಪಡಿಸಿರುವ ಕಾರ್ಡಿನ ಸಂಖ್ಯೆ ಎಷ್ಟು?

ಶ್ರೀ ಹೆಚ್.ಕೆ. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಡಿಸೆಂಬರ್ 2004ರ ಅಂತ್ಯಕ್ಕೆ ವಿತರಿಸಿರುವ ಹಳದಿ ಪಡಿತರ ಚೀಟಿಗಳ ಸಂಖ್ಯೆ 6338990. ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿಗಳ ಸಂಖ್ಯೆ: 719700. ಜಿಲ್ಲಾವಾರು ಹಾಗೂ ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕುವಾರು ವಿವರ ಅನುಬಂಧ-1 ಮತ್ತು 2ರಲ್ಲಿ ಲಗತ್ತಿಸಿದೆ.

ಆ) ಹೌದು.

ಇ) ಅರ್ಹರು ಬಿಪಿಎಲ್ ಪಡಿತರ ಚೀಟಿಯಿಂದ ವಂಚಿತರಾಗಿರುವುದನ್ನು ಪತ್ತೆ ಹಚ್ಚಿ ಪಡಿತರ ಚೀಟಿ ವಿತರಿಸಲು ಜನವರಿ 2005 ರಿಂದ ಪುನರ್ ಸಮೀಕ್ಷಾಕಾರ್ಯ ಆರಂಭಿಸಲಾಗಿದೆ.

ಈ) ಹೌದು.

ಉ) ಬಡತನ ರೇಖೆಗಿಂತ ಮೇಲಿರುವ ವ್ಯಕ್ತಿಗಳು ಬಿಪಿಎಲ್ ಪಡಿತರ ಚೀಟಿ ಹೊಂದಿರುವುದನ್ನು ರದ್ದುಗೊಳಿಸಲು ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಊ) ಜುಲೈ 2004 ರಿಂದ ಡಿಸೆಂಬರ್ 2004ರವರೆಗೆ ರಾಜ್ಯಾದ್ಯಂತ ಒಟ್ಟು 854583 ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಿಸಲಾಗಿದೆ.

Annexure - 1

Districtwise Cards Information as on 31/12/2004

Sl. No.	Name of the District	AAY Cards	BPL Cards
1.	Bagalkot	29166	194847
2.	Bangalore I.R.	14620	203010
3.	Bangalore Rural	20334	312868
4.	Bangalore Urban	4653	253261
5.	Belgaum	57325	527364
6.	Bellary	40479	244500
7.	Bidar	28471	186101
8.	Bijapur	36149	211180
9.	Chamarajanagar	21833	135808
10.	Chikmagalur	14185	176295
11.	Chitradurga	26388	217742
12.	D. Kannada	10815	115861
13.	Davangere	32094	224387
14.	Dharwad	20450	191042
15.	Gadag	19859	116028
16.	Gulbarga	64104	384893
17.	Hassan	13632	272906
18.	Haveri	31228	190162
19.	Kodagu	3975	74786
20.	Kolar	36441	356658
21.	Koppal	26148	131754
22.	Mandya	22364	280894

1	2	3	4
23.	Mysore	30477	344538
24.	Raichur	36788	157021
25.	Shimoga	25137	200964
26.	Tumkur	30339	375690
27.	Udupi	11521	77417
28.	U. Kannada	10725	181525
	Total	**719700**	**6338990**

Annexure - II

Taluk wise Card Figure of Chikkamagalur District as on 10-1-05

Sl. No.	Name of the Taluk	AAY Cards	CYC	TYC	TIC	Total BPL	APL	Total Cards
1.	Kadur	4490	24826	10629	14231	49686	13759	67935
2.	Tarikere	2876	19137	7981	7343	34461	9621	46958
3.	Chikkamagalur	2146	17057	7134	9814	34005	7748	43899
4.	Koppal	907	7874	1727	2411	12012	6271	19190
5.	N.R. Pura	795	4778	1894	2388	9060	4766	14621
6.	Shringeri	445	3092	590	462	4144	4338	8927
7.	Mudigere	1533	10675	4268	4313	19256	11022	31811
8.	Chikkamagalur I.R.	993	4097	3524	1215	8836	16440	26269
	Total	**14185**	**91536**	**37747**	**42177**	**171460**	**73965**	**259610**

541(1066) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವೆನಿಲ್ಲಾ ಬೆಳೆಯ ಬೆಲೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬೆಳೆಗೆ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಇರುವುದು ನಿಜವೇ;

ಇ) ವೆನಿಲ್ಲಾವನ್ನು ರಫ್ತು ಮಾಡಲು ಸರ್ಕಾರ ತನ್ನ ಹಾಲಿ ಇರುವ ಯಾವುದಾದರೂ ಸಂಸ್ಥೆಯಿಂದ ಅಥವಾ ಹೊಸದಾಗಿ ಸಂಸ್ಥೆಯನ್ನು ರಚಿಸಲು ಕ್ರಮ ಕೈಗೊಳ್ಳುವುದೇ;

ಈ) ಈ ತಕ್ಷಣದಲ್ಲಿ ವೆನಿಲ್ಲಾ ಬೆಳೆಗೆ ಬೆಂಬಲ ಬೆಲೆ ಘೋಷಣೆ ಮಾಡಿ ಸರ್ಕಾರ ಖರೀದಿ ಮಾಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು)

ಅ) ಬಂದಿದೆ.

ಆ) ಹೌದು.

ಇ) ಅಂತಹ ಪ್ರಸ್ತಾವನೆ ಪರಿಶೀಲನೆಯಲ್ಲಿಲ್ಲ.

ಈ) ಇಲ್ಲ.

542(1067) ಶ್ರೀ ಜೀವರಾಜ ಡಿ.ಎನ್. (ಶೃಂಗೇರಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು);

ಆ) ಬಹಳಷ್ಟು ಗ್ರಾಮಗಳಲ್ಲಿ ಅಂಗನವಾಡಿ ಕೇಂದ್ರಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಗ್ರಾಮಗಳಲ್ಲಿ ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ಕಾಲಮಿತಿಯೊಳಗೆ ತೆರೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ 1226 ಅಂಗನವಾಡಿ ಕೇಂದ್ರಗಳು ಇವೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

ಚಿಕ್ಕಮಗಳೂರು	298
ಕಡೂರು	259
ಕೊಪ್ಪ	100
ಮೂಡಿಗೆರೆ	161
ಎನ್.ಆರ್. ಪುರ	68
ಶೃಂಗೇರಿ	100
ತರೀಕೆರೆ	240

ಆ) ಹೌದು.

ಇ) ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗುತ್ತಿದೆ. ಕೇಂದ್ರ ಸರ್ಕಾರದ ವತಿಯಿಂದ ಮಂಜೂರಾತಿ ದೊರೆತ ನಂತರ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗುತ್ತದೆ.

543(1068) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಪ್ಪ, ಶೃಂಗೇರಿ ಹಾಗೂ ನರಸಿಂಹರಾಜಪುರ ತಾಲ್ಲೂಕುಗಳಲ್ಲಿರುವ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಹಣ ಎಷ್ಟು; (ತಾಲ್ಲೂಕುವಾರು, ಸಂಘಗಳವಾರು ವಿವರ ನೀಡುವುದು);

ಆ) ಸಹಾಯಧನ ಕೋರಿ ಬಂದ ಅರ್ಜಿಗಳಲ್ಲಿ ಸಹಾಯಧನ ಬಿಡುಗಡೆ ಆಗಬೇಕಿರುವ ಸಂಘಗಳ ಸಂಖ್ಯೆ ಎಷ್ಟು;

ಇ) ಹಣ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಕೊಪ್ಪ, ಶೃಂಗೇರಿ ಹಾಗೂ ನರಸಿಂಹರಾಜಪುರ ತಾಲ್ಲೂಕುಗಳಲ್ಲಿರುವ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಹಣ ರೂ. 26.20 ಲಕ್ಷಗಳು (ತಾಲ್ಲೂಕುವಾರು ವಿವರವನ್ನು ಅನುಬಂಧ-1ರಲ್ಲಿ ನೀಡಿದೆ).

ಆ) ಎಲ್ಲಾ ಗುಂಪುಗಳಿಗೆ ಸುತ್ತು ನಿಧಿ ಬಿಡುಗಡೆ ಮಾಡಿದೆ.

ಇ) ಹಣವನ್ನು ಈಗಾಗಲೇ ಜಿಲ್ಲಾ ಉಪ ನಿರ್ದೇಶಕರ ಮೂಲಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಬಿಡುಗಡೆ ಮಾಡಿದೆ.

ಅನುಬಂಧ-1

ಕ್ರ. ಸಂ.	ತಾಲ್ಲೂಕು	ವರ್ಷ	ರಚನೆಯಾದ ಗುಂಪುಗಳ ಸಂಖ್ಯೆ	ತರಬೇತಿ	ಸುತ್ತುನಿಧಿ	ಕಿಟ್ ಮೆಟೀರಿಯಲ್ಸ್	ಅಂ. ಕಾರ್ಯಕರ್ತೆಯರಿಗೆ ಪ್ರೋತ್ಸಾಹಧನ	ಒಟ್ಟು ಬಿಡುಗಡೆಯಾದ ಹಣ
1	2	3	4	5	6	7	8	9
1.	ಕೊಪ್ಪ	2001-02	100	10800	140000	54073	40800	245673
		2002-03					61800	61800
		2003-04	81	104880	325000	11000	112200	553080
2.	ಶೃಂಗೇರಿ	2001-02	92	118950	55000	73320	47100	294370
		2002-03			355000		66600	421600
		2003-04	51	68650	130000		97800	296450
3.	ನರಸಿಂಹರಾಜಪುರ	2001-02	78	57400	180000	29623	16900	283923
		2002-03					48300	48300
		2003-04	122	187670	75000	36000	106800	415470
		ಒಟ್ಟು	524	558350	1260000	204016	598300	2620666

544(1069) ಶ್ರೀ ಜೀವರಾಜ ಡಿ.ಎನ್. (ಶೃಂಗೇರಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಪೂರ್ವ ಪ್ರಾಥಮಿಕ ಕೇಂದ್ರಗಳ (ಪಿಪಿಸಿ) ಸಂಖ್ಯೆ ಎಷ್ಟು; ತಾಲ್ಲೂಕುವಾರು ವಿವರ ನೀಡುವುದು;

ಆ) ಕೊಪ್ಪ, ಶೃಂಗೇರಿ ಹಾಗೂ ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ಕೆಲವು ಪಿಪಿಸಿಗಳನ್ನು ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಮುಚ್ಚಲು ಕಾರಣಗಳೇನು

ಈ) ಈ ಕೇಂದ್ರಗಳನ್ನು ಯಾವಾಗ ಪುನರ್ ಆರಂಭಿಸಲಾಗುವುದು?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ 122 ಪೂರ್ವ ಪ್ರಾಥಮಿಕ ಕೇಂದ್ರಗಳು ಇವೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

ಚಿಕ್ಕಮಗಳೂರು	36
ಕಡೂರು	16
ಕೊಪ್ಪ	15
ಮೂಡಿಗೆರೆ	12
ಎನ್.ಆರ್. ಪುರ	20
ಶೃಂಗೇರಿ	5
ತರೀಕೆರೆ	18

ಆ) ಯಾವುದೇ ಕೇಂದ್ರಗಳನ್ನು ಮುಚ್ಚಲಾಗಿಲ್ಲ.

ಇ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

545(951) ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ (ರೋಣ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಸಿ.ಸಿ. ಬ್ಯಾಂಕ್ ಧಾರವಾಡ ಯಾರ ಆಡಳಿತದಲ್ಲಿದೆ;

ಆ) ಈ ಬ್ಯಾಂಕಿನಲ್ಲಿ ಖಾಸಗಿಯವರ, ಅರ್ಬನ್ ಬ್ಯಾಂಕುಗಳ, ಸಹಕಾರಿ ಸಂಘಗಳ ಠೇವಣಿ ಹಣ 31-3-2004ಕ್ಕೆ ಎಷ್ಟಿದೆ;

ಇ) ಠೇವಣಿ ಹಣ ವಾಪಸ್ಸು ಕೋರಿ ಬಹಳಷ್ಟು ಠೇವಣಿದಾರರು ಅರ್ಜಿ ಸಲ್ಲಿಸಿಲ್ಲವೆ;

ಈ) ಈ ಬ್ಯಾಂಕು 31-3-2004ಕ್ಕೆ ಅನುಭವಿಸಿದ ಹಾನಿ ಎಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಕೆ.ಸಿ.ಸಿ. ಬ್ಯಾಂಕ್ ನಿ, ಧಾರವಾಡ ಈ ಬ್ಯಾಂಕು ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 30(1)ರನ್ವಯ ನೇಮಿಸಲ್ಪಟ್ಟ ಆಡಳಿತಗಾರರ ಆಡಳಿತದಲ್ಲಿದೆ.

ಆ) ದಿನಾಂಕ 31–3–2004ಕ್ಕೆ ರೂ. 89.05 ಕೋಟಿ (ವ್ಯಕ್ತಿಗತ) ಖಾಸಗಿಯವರ ಠೇವು, ರೂ. 184.00 ಕೋಟಿ ಅರ್ಬನ್ ಬ್ಯಾಂಕುಗಳ ಠೇವು ಹಾಗೂ ರೂ.47.67 ಕೋಟಿ ಸಹಕಾರ ಸಂಘಗಳ ಠೇವಣಾತಿ ಸೇರಿ ರೂ. 320.72 ಕೋಟಿ ಠೇವಣಾತಿ ಹೊಂದಿರುತ್ತದೆ.

ಇ) ಠೇವಣಿ ಹಣ ವಾಪಸ್ಸು ಕೋರಿ ಬಹಳಷ್ಟು ಅರ್ಜಿಗಳು ಸ್ವೀಕೃತಿ ಯಾಗುತ್ತಿದ್ದು, ಸಾಲ ವಸೂಲಿ, ಹಾಗೂ ಇತರ ಮೂಲಗಳಿಂದ ಲಭ್ಯವಾಗುತ್ತಿರುವ ಆರ್ಥಿಕ ಸಂಪನ್ಮೂಲಗಳಿಂದ ವ್ಯಕ್ತಿಗಳ ಠೇವುದಾರರಿಗೆ ವಾರಕ್ಕೆ ಒಂದು ಸಾರಿ ರೂ. 500/– ರಂತೆ ಪಾವತಿಸಲಾಗುತ್ತದ್ದು. ತುರ್ತು ಸಂದರ್ಭಗಳಾದ ವೈದ್ಯಕೀಯ ಚಿಕಿತ್ಸೆ, ಮದುವೆ ಕಾರ್ಯಗಳಿಗೆ ಮತ್ತು ಶಿಕ್ಷಣ ವೆಚ್ಚಕ್ಕಾಗಿ ಠೇವು ಮರು ಪಾವತಿ ಕೋರಿ ಬಂದಿರುವ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ ನಿಗಧಿತ ಪ್ರಮಾಣದಲ್ಲಿ ಹಂತ ಹಂತವಾಗಿ ಹಣ ಪಾವತಿಸಲಾಗುತ್ತದೆ.

ಈ) ದಿನಾಂಕ 31–3–2004ಕ್ಕೆ ರೂ. 148.00 ಕೋಟಿ ಹಾನಿ ಅನುಭವಿಸಿದೆ.

546(952) ಶ್ರೀ ಕಳಕಪ್ಪ, ಗುರುಶಾಂತಪ್ಪ, ಬಂಡಿ (ರೋಣ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಜಿಲ್ಲಾವಾರು ನೇಕಾರರ ಸಹಕಾರ ಸಂಘಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿ ಲಾಭದಲ್ಲಿರುವ ಹಾಗೂ ನಷ್ಟದಲ್ಲಿರುವ ಸಹಕಾರ ಸಂಘಗಳು ಎಷ್ಟು;

ಇ) ನಷ್ಟದಲ್ಲಿರುವ ಸಂಘಗಳ ಒಟ್ಟು ಹಾನಿ
31–3–2003ಕ್ಕೆ
31–3–2004ಕ್ಕೆ

ಈ) ಈ ಸಂಘಗಳಿಗೆ ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಕೊಟ್ಟಿರುವ ಸಬ್ಸಿಡಿ ಇತ್ಯಾದಿ ಆರ್ಥಿಕ ಸಹಾಯದ ಮೊತ್ತವೆಷ್ಟು;

ಉ) ಈ ಸಹಕಾರ ಸಂಘಗಳಿಗೆ ಸರ್ಕಾರ ಕೊಡಬೇಕಾಗಿರುವ ಸಹಾಯಧನ ಸಬ್ಸಿಡಿ ಬಾಕಿ ಎಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಒಟ್ಟು 643. ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ.

ಆ) 1) ಲಾಭದಲ್ಲಿರುವ ಸಹಕಾರ ಸಂಘಗಳು 199
2) ನಷ್ಟದಲ್ಲಿರುವ ಸಹಕಾರ ಸಂಘಗಳು 444

ಇ) 31–3–2003ಕ್ಕೆ ರೂ. 246.61 ಲಕ್ಷಗಳು.

2003–04ನೇ ಸಾಲಿನಲ್ಲಿ ಅನೇಕ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಇನ್ನೂ ಪೂರ್ಣಗೊಂಡಿಲ್ಲದಿರುವುದರಿಂದ ವಿವರ ಲಭ್ಯವಿರುವುದಿಲ್ಲ.

ಈ) ರೂ. 937.21 ಲಕ್ಷಗಳು

ಉ) ರೂ. 119.47 ಲಕ್ಷಗಳು.

ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ (ರೋಣ) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 952ಕ್ಕೆ ಅನುಬಂಧ

ಕ್ರ.ಸಂ.	ಜಿಲ್ಲೆಗಳು	ಸಂಘಗಳು
1.	ಬೆಂಗಳೂರು ನಗರ ಜಿಲ್ಲೆ	37
2.	ಬೆಂಗಳೂರು ಗ್ರಾಮಾಂತರ	23
3.	ತುಮಕೂರು	18
4.	ಕೋಲಾರ	37
5.	ಶಿವಮೊಗ್ಗ	11
6.	ಚಿತ್ರದುರ್ಗ	54
7.	ದಾವಣಗೆರೆ	11
8.	ಮೈಸೂರು	04
9.	ಚಾಮರಾಜನಗರ	02
10.	ಮಂಡ್ಯ	14
11.	ದಕ್ಷಿಣ ಕನ್ನಡ	04
12.	ಉಡುಪಿ	04
13.	ಚಿಕ್ಕಮಗಳೂರು	07
14.	ಹಾಸನ	08
15.	ಕೊಡಗು	–
16.	ಬೆಳಗಾವಿ	139
17.	ಧಾರವಾಡ	19
18.	ಹಾವೇರಿ	44
19.	ಗದಗ್	44
20.	ಉತ್ತರ ಕನ್ನಡ	02
21.	ಬಿಜಾಪುರ	20
22.	ಬಾಗಲಕೋಟೆ	73
23.	ಗುಲ್ಬರ್ಗಾ	24
24.	ರಾಯಚೂರು	06
25.	ಕೊಪ್ಪಳ	06
26.	ಬಳ್ಳಾರಿ	13
27.	ಬೀದರ್	19
	ಒಟ್ಟು	643

548(73) ಶ್ರೀ ಕಾರಜೋಳ್ ಗೋವಿಂದ್ ಮಕಟಪ್ಪ (ಮುಧೋಳ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಂತ್ಯೋದಯ, ಹಳದಿ ಕಂಪ್ಯೂಟರ್ ಹಳದಿ ಕಾರ್ಡುಗಳನ್ನು ಪಡೆದಿರುವ ಕುಟುಂಬಗಳ ಸಂಖ್ಯೆ ಎಷ್ಟು (31-12-2003 ರವರೆಗೆ ವಿವರ ನೀಡುವುದು);

ಆ) ರಾಜ್ಯದಲ್ಲಿ ಬಡವರಿಗೆ ವಿತರಿಸಲಾಗಿರುವ ಪಡಿತರ ಚೀಟಿಗಳನ್ನು ರದ್ದುಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದರೆ, ರದ್ದುಪಡಿಸಿರುವ ಕಾರ್ಡುಗಳ ಸಂಖ್ಯೆ ಎಷ್ಟು;

ಈ) ಪಡಿತರ ಚೀಟಿಗಳನ್ನು ಪಡೆಯಲು ಅರ್ಹರಿದ್ದ ಬಡ ಕುಟುಂಬಗಳ ಸಂಖ್ಯೆ ಎಷ್ಟು ಮತ್ತು ಅರ್ಹ ಕುಟುಂಬಗಳಿಗೆ ಎಷ್ಟು ದಿನಗಳಲ್ಲಿ ಪಡಿತರ ಚೀಟಿಗಳನ್ನು ವಿತರಿಸಲಾಗುವುದು?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ದಿನಾಂಕ 31-12-2004ರವರೆಗೆ ಅಂತ್ಯೋದಯ ಅನ್ನ ಯೋಜನೆಯ ಪಡಿತರ ಚೀಟಿಗಳನ್ನು ಪಡೆದ ಕುಟುಂಬಗಳ ಸಂಖ್ಯೆ: 719700 ಬಿ.ಪಿ.ಎಲ್. ಪಡಿತರ ಚೀಟಿ ಪಡೆದ ಕುಟುಂಬಗಳ ಸಂಖ್ಯೆ 6338990.

ಆ) ಅನರ್ಹರಿಗೆ ನೀಡಲಾಗಿರುವ ಬಿಪಿಎಲ್ ಪಡಿತರ ಚೀಟಿಗಳನ್ನು ಮಾತ್ರ ರದ್ದುಪಡಿಸಲಾಗಿರುತ್ತದೆ.

ಇ) 31-12-2003ರವರೆಗೆ ಯಾವುದೇ ಕಾರ್ಡುಗಳನ್ನು ರದ್ದು ಮಾಡಿರುವುದಿಲ್ಲ. ಆಗಸ್ಟ್ 1, 2004ರಿಂದ ಡಿಸೆಂಬರ್ 2004ರವರೆಗೆ ಅನರ್ಹ ಕುಟುಂಬಗಳನ್ನು ಪತ್ತೆ ಹಚ್ಚಿ ರದ್ದುಪಡಿಸಿರುವ ಒಟ್ಟು ಪಡಿತರ ಚೀಟಿಗಳ ಸಂಖ್ಯೆ: 854583.

ಈ) ಪಡಿತರ ವ್ಯವಸ್ಥೆಯಿಂಧ ಬಿಟ್ಟು ಹೋದ ಅರ್ಹ ಬಿಪಿಎಲ್ ಕುಟುಂಬಗಳನ್ನು ಹಾಗೂ ಅನರ್ಹರನ್ನು ಗುರುತಿಸಲು ದಿನಾಂಕ 1-1-2005 ರಿಂದ ಏಪ್ರಿಲ್ 2005ರವರೆಗೆ ಮನೆ ಮನೆ ಪುನರ್ ಸಮೀಕ್ಷೆ ಕಾರ್ಯ ಕೈಗೊಳ್ಳಲಾಗಿದ್ದು ಸಮೀಕ್ಷೆಯಲ್ಲಿ ಗುರ್ತಿಸಿದ ಅರ್ಹ ಮತ್ತು ಅನರ್ಹ ಕುಟುಂಬಗಳ ಪಟ್ಟಿಯನ್ನು ಗ್ರಾಮ ಸಭೆಗಳಲ್ಲಿಟ್ಟು ಅನುಮೋದನೆ ಪಡೆದು ನಂತರ ಅರ್ಹ ಫಲಾನುಭವಿಗಳಿಗೆ ಹಳದಿ ಪಡಿತರ ಚೀಟಿ ನೀಡುವ ಕಾರ್ಯ ಕೈಗೊಳ್ಳಲಾಗುವುದು.

549(127) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಇಲ್ಲಿಯವರೆಗೆ ವಿತರಿಸಿರುವ ಹಳದಿ ಕಾರ್ಡ್‌ಗಳ ಸಂಖ್ಯೆ ಎಷ್ಟು;

ಆ) ಇವುಗಳ ಪೈಕಿ ಬೆಂಗಳೂರು ನಗರದಲ್ಲಿ ವಿತರಿಸಿರುವ ಕಾರ್ಡ್‌ಗಳ ಸಂಖ್ಯೆ ಎಷ್ಟು;

ಇ) ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ ಎಷ್ಟು;

ಈ) ಅರ್ಹ ಫಲಾನುಭವಿಗಳಿಗೆ ಹಳದಿ ಕಾರ್ಡ್‌ಗಳನ್ನು ವಿತರಿಸದೆ ಅನರ್ಹ ಫಲಾನುಭವಿಗಳಿಗೆ ಈ ಕಾರ್ಡ್‌ಗಳನ್ನು ವಿತರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಸರ್ಕಾರ ಈ ಲೋಪದೋಷಗಳನ್ನು ತಡೆಗಟ್ಟಲು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜ ಸಚಿವರು)

ಅ) 2004ನೇ ಡಿಸೆಂಬರ್ ಅಂತ್ಯದವರೆಗೆ ವಿತರಿಸಿರುವ ಹಳದಿ ಕಾರ್ಡ್‌ಗಳ ಸಂಖ್ಯೆ: 6338990.

ಆ) ಬೆಂಗಳೂರು ಐಆರ್‌ಎ ವಿತರಿಸಿರುವ ಕಾರ್ಡ್ ಸಂಖ್ಯೆ: 205134 ಡಿಸೆಂಬರ್ 2004ರ ಅಂತ್ಯಕ್ಕೆ.

ಇ) 2004ನೇ ಡಿಸೆಂಬರ್ ಅಂತ್ಯಕ್ಕೆ ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳ ಸಂಖ್ಯೆ: 6338990.

ಈ) ಹೌದು.

ಉ) ಬಿ.ಪಿ.ಎಲ್. ಪಟ್ಟಿಯಲ್ಲಿ ಕೈಬಿಟ್ಟು ಹೋದ ಅರ್ಹ ಕುಟುಂಬಗಳನ್ನು ಸೇರ್ಪಡೆ ಮಾಡಲು, ಅನರ್ಹ ಕುಟುಂಬದವರು ಪಟ್ಟಿಯಲ್ಲಿ ಸೇರ್ಪಟ್ಟಿದ್ದನ್ನು ಕೈಬಿಡಲು, ಮನೆ-ಮನೆ ಪುನರ್ ಸಮೀಕ್ಷೆ ಕಾರ್ಯಕೈಗೊಳ್ಳಲು ಸರ್ಕಾರ, ಆದೇಶ ಸಂಖ್ಯೆ: ಅನಾಸ 114 ಡಿಆರ್ 2004, ದಿನಾಂಕ 10-1-2005ರಲ್ಲಿ ಹೊರಡಿಸಿದೆ. ಅದರಂತೆ, ಪುನರ್ ಸಮೀಕ್ಷೆ ಕಾರ್ಯ ಪ್ರಾರಂಭವಾಗಿದ್ದು, 2005ರ ಏಪ್ರಿಲ್ ಮಾಹೆಗೆ ಮುಕ್ತಾಯಗೊಳ್ಳಲಿದೆ, ಲೋಪದೋಷಗಳನ್ನು ತಡೆಗಟ್ಟಲು, ಮನೆ-ಮನೆ ಪುನರ್ ಸಮೀಕ್ಷೆ ಕಾರ್ಯದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಜನ ಪ್ರತಿನಿಧಿಗಳು, ಸ್ತ್ರೀಶಕ್ತಿ ಸಂಘದವರು ಮತ್ತು ಸ್ವಸಹಾಯ ಸಂಘದ ಪ್ರತಿನಿಧಿಗಳನ್ನು ಸಮೀಕ್ಷಾ ತಂಡದಲ್ಲಿ ಸೇರಿಸಿಕೊಂಡಿದ್ದು, ಸಮೀಕ್ಷೆಯಲ್ಲಿ ಹೊರಬರುವ ಅರ್ಹರ, ಅನರ್ಹರ ಪಟ್ಟಿಯನ್ನು ಗ್ರಾಮ ಸಭೆ ಮತ್ತು ವಾರ್ಡ್‌ಸಭೆಗಳಲ್ಲಿಟ್ಟು ಅನುಮೋದಿಸಿ, ಅರ್ಹ ಕುಟುಂಬದವರಿಗೆ ಹಳದಿ ಪಡಿತರ ಚೀಟಿಗಳನ್ನು ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗಿದೆ.

550(130) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ಲಾಲ್‌ಬಾಗ್‌ಗೆ ಪ್ರತಿದಿನ ಬರತಕ್ಕ ಪ್ರವಾಸಿಗರು ಹಾಗೂ ವಾಯು ವಿಹಾರಕ್ಕೆ ಬೆಳಿಗ್ಗೆ ಮತ್ತು ಸಂಜೆ ವೇಳೆ ಬರತಕ್ಕ ಜನರ ಸಂಖ್ಯೆ ಎಷ್ಟು;

ಆ) ಲಾಲ್‌ಬಾಗ್‌ನ ಕುಡಿಯುವ ನೀರು, ಶೌಚಾಲಯ ಹಾಗೂ ಇತರ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಈ ಉದ್ಯಾನವನದಲ್ಲಿ ಮಕ್ಕಳಿಗಾಗಿ ಪ್ರತ್ಯೇಕ, ಸಂಗೀತಕಾರಂಜಿ, ಕೆರೆಯಲ್ಲಿ ದೋಣಿ ಸೌಲಭ್ಯ ಇತ್ಯಾದಿ ವ್ಯವಸ್ಥೆಯನ್ನು ಮಾಡಲು ಸರ್ಕಾರ ಆಲೋಚಿಸಿದೆಯೇ;

ಈ) ಲಾಲ್‌ಬಾಗ್ ಬರತಕ್ಕ ಪ್ರವಾಸಿಗರಿಗೆ ವಿಧಿಸುತ್ತಿರುವ ಪ್ರವೇಶ ಶುಲ್ಕವೆಷ್ಟು ಹಾಗೂ ಇದರಿಂದ ಪ್ರತಿವರ್ಷ ಬರತಕ್ಕ ಸರಾಸರಿ ಹಣವೆಷ್ಟು;

ಉ) ಈ ಲಾಲ್‌ಬಾಗ್‌ಗೆ ವಾಯು ವಿಹಾರಕ್ಕಾಗಿ ಬರತಕ್ಕವರಿಗೂ ಸಹ ಪ್ರವೇಶ ಶುಲ್ಕ ವಿಧಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಊ) ಲಾಲ್‌ಬಾಗ್‌ನಲ್ಲಿ ನಾಯಿಗಳ ಕಾಟ ಜಾಸ್ತಿಯಾಗಿದ್ದು ಅದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುವುದೇ/

ಶ್ರೀ ಆರ್. ಶ್ರೀನಿವಾಸ (ತೋಟಗಾರಿಕೆ ಸಚಿವರು)

ಅ) ಲಾಲ್‌ಬಾಗ್ ಸಸ್ಯತೋಟಕ್ಕೆ ಪ್ರತಿದಿನ ಸರಾಸರಿ 6,000 ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ ಮತ್ತು ಅಂದಾಜು 4,000 ದಿಂದ 5,000 ಜನರು ವಾಯು ವಿಹಾರಕ್ಕೆ ಪ್ರತಿದಿನ ಬರುತ್ತಿರುತ್ತಾರೆ.

ಆ) ಲಾಲ್‌ಬಾಗ್ ಸಸ್ಯ ತೋಟದಲ್ಲಿ 6 ಸ್ಥಳಗಳಲ್ಲಿ ಕುಡಿಯುವ ನೀರು ಸ್ಥಾವರಗಳ ಸೌಕರ್ಯ ಇರುತ್ತದೆ ಇದರ ಜೊತೆಗೆ, ಬಿ.ಡಿ.ಎ. ವತಿಯಿಂದ ಉನ್ನತ ತಾಂತ್ರಿಕತೆಯ Zero B (ಶುದ್ಧೀಕರಿಸಿದ) ಕುಡಿಯುವ ನೀರಿನ 5 ಸ್ಥಾವರಗಳನ್ನು ನಿರ್ಮಾಣ ಮಾಡಿದ್ದು ಇವುಗಳಿಂದ ಸಹ ಸಾರ್ವಜನಿಕರಿಗಾಗಿ ಕುಡಿಯುವ ನೀರಿನ ಸೌಕರ್ಯ ಕಲ್ಪಿಸಲಾಗಿರುತ್ತದೆ.

ಲಾಲ್‌ಬಾಗ್ ಸಸ್ಯತೋಟದಲ್ಲಿ ಈಗಾಗಲೇ ಎರಡು ಸಾರ್ವಜನಿಕ ಶೌಚಾಲಯಗಳು ಇರುತ್ತದೆ. ಇನ್ನೂ ನಾಲ್ಕು ಶೌಚಾಲಯಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯಿಂದ ನಿರ್ಮಿಸಲು ಉದ್ದೇಶಿಸಿದೆ.

ಇ) ಇಲ್ಲ

ಈ) ಲಾಲ್‌ಬಾಗ್‌ಗೆ ಬರತಕ್ಕ ಪ್ರವಾಸಿಗರಿಗೆ ರೂ. 5/- ಪ್ರವೇಶ ಶುಲ್ಕವನ್ನು ವಿಧಿಸಲಾಗುತ್ತಿದೆ. ಹಾಗೂ ಕಳೆದ ಮೂರು ವರ್ಷಗಳಿಂದ ಸರಾಸರಿ ಒಂದು ವರ್ಷಕ್ಕೆ ರೂ. 64.00 ಲಕ್ಷಗಳು (ರೂ. ಅರವತ್ನಾಲ್ಕು ಲಕ್ಷಗಳು ಮಾತ್ರ) ಆದಾಯವಿರುತ್ತದೆ.

ಉ) ಸದ್ಯಕ್ಕೆ ಇಲ್ಲ.

ಊ) ಹೌದು, ಲಾಲ್‌ಬಾಗ್‌ನೊಳಗೆ ನುಸುಳಿ ಬರುವ ಬೀದಿ ನಾಯಿಗಳನ್ನು ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಹಿಡಿದು ನಿರ್ವಹಿಸಲಾಗುತ್ತಿದೆ.

551(134) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಸ್ತ್ರೀಶಕ್ತಿ ಯೋಜನೆಯಡಿಯಲ್ಲಿ ರಚಿಸಲಾದ ಸ್ವಸಹಾಯ ಗುಂಪುಗಳೆಷ್ಟು ಹಾಗೂ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಈ ಸ್ವಸಹಾಯ ಗುಂಪುಗಳಿಗೆ ನೀಡಿದ ಧನ ಸಹಾಯವೆಷ್ಟು;

ಆ) ಈ ಗುಂಪುಗಳು ಇಲ್ಲಿಯವರೆಗೆ ಮಾಡಿರುವ ಉಳಿತಾಯದ ಹಣವೆಷ್ಟು;

ಇ) 2004-05ನೇ ಸಾಲಿನಲ್ಲಿ ಹೊಸದಾಗಿ ಎಷ್ಟು ಸ್ವಸಹಾಯ ಗುಂಪುಗಳನ್ನು ರಚಿಸಲಾಯಿತು ಹಾಗೂ ಸರ್ಕಾರ ಇಲ್ಲಿಯವರಿಗೆ 2004-05ರಲ್ಲಿ ನೀಡಿದ ಧನ ಸಹಾಯವೆಷ್ಟು;

ಈ) ಸ್ತ್ರೀಶಕ್ತಿ ಗ್ರಾಮೀಣ ಬ್ಯಾಂಕ್ ಪ್ರಾರಂಭಿಸದೆ ಇರಲು ಕಾರಣಗಳೇನು?

ಉ) ಸ್ತ್ರೀಶಕ್ತಿ ಯೋಜನೆಗೆ 2004-05ರಲ್ಲಿ ಹೆಚ್ಚಿನ ಹಣ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ;

ಊ) ಈ ಗುಂಪುಗಳು ತಯಾರಿಸುವ ವಸ್ತುಗಳಿಗೆ ಮಾರುಕಟ್ಟೆ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ಸ್ತ್ರೀಶಕ್ತಿ ಯೋಜನೆಯಡಿ 1.00 ಲಕ್ಷ ಸ್ವಸಹಾಯ ಗುಂಪುಗಳನ್ನು ರಚಿಸಲಾಗಿದೆ. ಹಾಗೂ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಪ್ರತಿ ಗುಂಪಿಗೆ ರೂ. 5000/- ದಂತೆ ಸುತ್ತು ನಿಧಿಯ ರೂಪದಲ್ಲಿ ನೀಡಿದ ಸಹಾಯ ಧನ ರೂ. 3300.60 ಲಕ್ಷಗಳಾಗಿವೆ.

ಆ) ಈ ಗುಂಪುಗಳು ಇಲ್ಲಿಯವರೆಗೆ ರೂ. 240.73 ಕೋಟಿ ಉಳಿತಾಯ ಮಾಡಿರುತ್ತದೆ.

ಇ) 2004-05ನೇ ಸಾಲಿನಲ್ಲಿ ಹೊಸದಾಗಿ ಸ್ವಸಹಾಯ ಗುಂಪುಗಳನ್ನು ರಚಿಸಿರುವುದಿಲ್ಲ. 2004-05ನೇ ಸಾಲಿನಲ್ಲಿ ಇಲ್ಲಿಯವರೆಗೆ 22053 ಗುಂಪುಗಳಿಗೆ ರೂ. 1102.65 ಲಕ್ಷ ಸುತ್ತು ನಿಧಿಯನ್ನು ಸಹಾಯಧನದ ರೂಪದಲ್ಲಿ ನೀಡಲಾಗಿದೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಡಿಸೆಂಬರ್ 2004ರ ಅಂತ್ಯಕ್ಕೆ ಒಟ್ಟು 4235 ನಗರ ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಿದ್ದು ಈ ಕಾರ್ಯಕ್ರಮಕ್ಕೆ ರೂ. 65.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.

ಈ) ಸರ್ಕಾರದ ವತಿಯಿಂದ ಬ್ಯಾಂಕ್ ಸ್ಥಾಪನೆಗೆ ಪ್ರಸ್ತಾವನೆಯನ್ನು ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾಗೆ ಸಲ್ಲಿಸಲಾಗಿತ್ತು. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ

ಪ್ರಸ್ತಾವನೆಯನ್ನು ತಿರಸ್ಕರಿಸಿದ್ದರಿಂದ ಸ್ತ್ರೀಶಕ್ತಿ ಗ್ರಾಮೀಣ ಬ್ಯಾಂಕ್‌ನ್ನು ಪ್ರಾರಂಭಿಸಿರುವುದಿಲ್ಲ.

ಉ) 2004-05ನೇ ಸಾಲಿನಲ್ಲಿ ಸ್ತ್ರೀಶಕ್ತಿ ಯೋಜನೆಗೆ ರೂ. 16.00 ಕೋಟಿ ನಿಗದಪಡಿಸಿದೆ.

ಊ) 1) ಸ್ತ್ರೀಶಕ್ತಿ ಗುಂಪುಗಳು ತಯಾರಿಸುವ 8 ಉತ್ಪನ್ನಗಳ ಬ್ರಾಂಡ್ ಬಿಡುಗಡೆ ಮಾಡಲಾಗಿದೆ.

2) ಜನತಾ ಬಜಾರ್ ಹಾಗೂ ನ್ಯಾಯಬೆಲೆ ಅಂಗಡಿಗಳ ಮೂಲಕ ಸ್ತ್ರೀಶಕ್ತಿ ಗುಂಪುಗಳ ಉತ್ಪನ್ನಗಳನ್ನು ಮಾರಾಟ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

3) ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಏರ್ಪಡಿಸಲು ಪ್ರತಿ ಜಿಲ್ಲೆಗೆ ರೂ. 75000/- ಬಿಡುಗಡೆಗೊಳಿಸಲಾಗಿದೆ.

552(140) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಎಷ್ಟು ಪಡಿತರ ಕಾರ್ಡುಗಳಿಗೆ ಪ್ರತಿ ತಿಂಗಳು ಸೀಮೆಎಣ್ಣೆ ವಿತರಿಸಲಾಗುತ್ತಿದೆ;

ಆ) ಸೀಮೆಎಣ್ಣೆ ವಿತರಣೆಯಲ್ಲಿ ಅಂದರೆ 8 ಲೀ.ಗೆ ಬದಲಿಗೆ ಪ್ರತಿ ಕಾರ್ಡಿಗೆ 7 ಲೀ. ವಿತರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಬಡವರಿಗೆ ವಿತರಿಸುತ್ತಿರುವ ಸೀಮೆಎಣ್ಣೆಯಲ್ಲಿ ಆಗುತ್ತಿರುವ ವಂಚನೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜ ಸಚಿವರು)

ಅ) ಬೆಂಗಳೂರು ನಗರದಲ್ಲಿ ಹಳದಿ, ಅಂತ್ಯೋದಯ ಎಪಿಎಲ್ ನಾನ್ ಗ್ಯಾಸ್‌ಗಳ ಒಟ್ಟು 681190 ಪಡಿತರ ಚೀಟಿಗಳಿಗೆ ಸೀಮೆಎಣ್ಣೆಯನ್ನು ವಿತರಿಸಲಾಗುತ್ತಿದೆ.

ಆ) 2004ರ ಮೇ, ಜೂನ್, ಆಗಸ್ಟ್ ತಿಂಗಳಲ್ಲಿ (ಅ.ಪ.) ಪ್ರದೇಶದ ಪ್ರತಿ ಪಡಿತರ ಚೀಟಿದಾರರಿಗೆ ತಲಾ 7 ಲೀ.ನಂತೆ ಸೀಮೆಎಣ್ಣೆ ವಿತರಣಾ ಪ್ರಮಾಣ ನಿಗದಿಪಡಿಸಿ ವಿತರಿಸಲಾಗಿದೆ. ಸೆಪ್ಟೆಂಬರ್ 2004ರ ಮಾಹೆಯಿಂದ ಎಲ್ಲಾ ವಿಧದ ಪಡಿತರ ಚೀಟಿಗಳಿಗೂ ತಲಾ 8 ಲೀ.ನಂತೆ ಸೀಮೆಎಣ್ಣೆ ವಿತರಿಸಲಾಗುತ್ತಿದೆ. ಸೀಮೆಎಣ್ಣೆಯ ಪ್ರಮಾಣವು ಕಾರ್ಡುಗಳ ಸಂಖ್ಯೆಗೆ ಅನುಗುಣವಾಗಿರುತ್ತದೆ.

ಇ) ಸೀಮೆಎಣ್ಣೆ ವಿತರಣೆಯಲ್ಲಿ ಲೋಪದೋಷಗಳನ್ನು ತಡೆಗಟ್ಟಲು ಇಲಾಖೆಯ ಅಧಿಕಾರಿಗಳು ತಪಾಸಣೆ ಕಾರ್ಯವನ್ನು ಕೈಗೊಂಡು ತಪ್ಪಿತಸ್ಥರ ವಿರುದ್ಧ ಕಾನೂನು ರೀತ್ಯ ಕ್ರಮವಹಿಸಿ, ಅಂತವರ ಪ್ರಾಧಿಕರಣವನ್ನು ರದ್ದು/ಅಮಾನತ್ತು ಪಡಿಸಲಾಗಿರುತ್ತದೆ.

553(697) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಪಡಿತರ ಚೀಟಿ ಒದಗಿಸಿಕೊಡುವ ವ್ಯವಸ್ಥೆಯನ್ನು ಪ್ರಾರಂಭಿಸಲಾಗಿದೆಯೇ;

ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಫಲಾನುಭವಿಗಳಿಗೆ ಪಡಿತರ ಚೀಟಿ ಒದಗಿಸದೇ ಇರುವುದರಿಂದ ಬಹಳ ಅನಾನುಕೂಲವಾಗಿದೆ ಎಂಬುದನ್ನು ಸರಕಾರ ಗಮನಿಸಿದೆಯೇ;

ಇ) ಗಮನಿಸಿದ್ದಲ್ಲಿ, ಅರ್ಹ ಫಲಾನುಭವಿಗಳಿಗೆ ಯಾವಾಗ ಪಡಿತರ ಚೀಟಿ ವಿತರಿಸಲಾಗುವುದು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜ ಸಚಿವರು

ಅ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮನೆ-ಮನೆ ಪುನರ್ ಸಮೀಕ್ಷೆ ಕಾರ್ಯ ಪ್ರಾರಂಭಿಸಲಾಗಿದ್ದು, ಸಮೀಕ್ಷ ಕಾರ್ಯ ಪೂರ್ಣಗೊಂಡ ನಂತರ ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿ ವಿತರಿಸಲಾಗುವುದು.

ಆ) ಸರ್ಕಾರದ ಗಮನಕ್ಕೆ ಬಂದಿದೆ. ಈ ಕಾರಣದಿಂದಲೇ, ಈಗಾಗಲೇ ಮನೆ-ಮನೆ ಪುನರ್ ಸಮೀಕ್ಷೆ ಕಾರ್ಯ ಪ್ರಾರಂಭಿಸಲಾಗಿದೆ.

ಇ) ಸರ್ಕಾರದ ಆದೇಶ ಸಂಖ್ಯೆ: ಅನಾಸ 114 ಡಿಆರ್ಎ 2004, ದಿನಾಂಕ 10-1-2005ರಂತೆ ಪುನರ್ ಸಮೀಕ್ಷೆ ಕಾರ್ಯ ಏಪ್ರಿಲ್ 2005ರಲ್ಲಿ ಮುಗಿಯಲಿದ್ದು, ಗ್ರಾಮ ಸಭೆ / ವಾರ್ಡ್ ಸಭೆಗಳ ಅನುಮೋದನೆ ಆಧಾರ, ಅರ್ಹ ಕುಟುಂಬದವರಿಗೆ ಬಿ.ಪಿ.ಎಲ್. ಹಳದಿ ಕಾರ್ಡು ವಿತರಿಸಲಾಗುವುದು.

554(700) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳಪೆ ಬಿತ್ತನೆ ಬೀಜಗಳ ಮಾರಾಟದ ಎಷ್ಟು ಪ್ರಕರಣಗಳು ದಾಖಲಾಗಿವೆ; ಆ ಕುರಿತು ಜರುಗಿಸಿದ ಕ್ರಮಗಳೇನು;

ಆ) ಕಳಪೆ ಬೀಜಗಳ ಬಳಕೆಯಿಂದಾಗುವ ದುಷ್ಪರಿಣಾಮಗಳಿಂದ ನಷ್ಟ ಅನುಭವಿಸುತ್ತಿರುವ ರೈತ ಸಮುದಾಯಕ್ಕೆ ಸರಕಾರದ ಪರಿಹಾರ ಕ್ರಮಗಳೇನು;

ಇ) ಇಂಥ ಅವ್ಯವಹಾರಗಳನ್ನು ತಡೆಗಟ್ಟುವಲ್ಲಿ ಸರಕಾರದ ಮುನ್ನೇಚರಿಕೆ ಕಾರ್ಯಗಳೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ರಾಜ್ಯದಲ್ಲಿ ಕಳಪೆ ಬಿತ್ತನೆ ಬೀಜಗಳ ಮಾರಾಟದ 13 ಪ್ರಕರಣಗಳು 2004-05ನೇ ಸಾಲಿನಲ್ಲಿ ವರದಿಯಾಗಿರುತ್ತದೆ. ಆದರೆ ತನಿಖೆಯಲ್ಲಿ ಇವು ಬೀಜ ದೋಷದಿಂದಲ್ಲವೆಂದು ತಿಳಿದು ಬಂದಿದೆ. ಆದ್ದರಿಂದ ಕ್ರಮ ಜರುಗಿರುವುದಿಲ್ಲ.

ಆ) ಬೆಳೆ ಹಾನಿಯು ಬೀಜದ ದೋಷದಿಂದ ಅಲ್ಲವಾದ್ದರಿಂದ ಕ್ರಮ ಜರುಗಿಸಿರುವುದಿಲ್ಲ. ಅಲ್ಲದೆ ಬೀಜ ಕಾಯ್ದೆ 1966ರನ್ವಯ ಪರಿಹಾರ ನೀಡಲು ಅವಕಾಶವಿರುವುದಿಲ್ಲ. ಆದರೆ ಕಳಪೆ ಬೀಜದಿಂದ ಬೆಳೆ ನಷ್ಟವಾಗಿರುವ ಪ್ರಕರಣಗಳಲ್ಲಿ ರೈತರಿಗೆ ಗ್ರಾಹಕರ ವೇದಿಕೆ ಮೂಲಕ ಪರಿಹಾರ ಪಡೆಯಲು ಅವಕಾಶವಿದೆ. ಈ ಬಗ್ಗೆ ಇಲಾಖೆಯಿಂದ ಎಲ್ಲಾ ನೆರವು ನೀಡಲಾಗುವುದು.

ಆ) ರೈತರಿಗೆ ಗುಣಮಟ್ಟ ಬೀಜ ಒದಗಿಸಲು ಕೇಂದ್ರ ಸರ್ಕಾರ ರೂಪಿಸಿರುವ ಬೀಜ ಕಾಯ್ದೆಗಳಡಿಯಲ್ಲಿ 1232 ಬೀಜ ಪರಿವೀಕ್ಷಕರುಗಳನ್ನು ಪ್ರಕಟಗೊಳಿಸಲಾಗಿದೆ. ಇವರುಗಳು ಹಂಗಾಮು ಪ್ರಾರಂಭಕ್ಕೆ ಮುಂಚಿತವಾಗಿ ಹಾಗೂ ನಂತರ ಬಿತ್ತನೆ ಬೀಜಗಳ ಮಾದರಿಗಳನ್ನು ಸಂಗ್ರಹಿಸಿ ಬೀಜ ಪರೀಕ್ಷಾ ಪ್ರಯೋಗಾಲಯಗಳಿಗೆ ವಿಶ್ಲೇಷಣೆಗಾಗಿ ಕಳುಹಿಸಲಾಗುತ್ತದೆ. ವಿಶ್ಲೇಷಣೆಯಲ್ಲಿ ಬೀಜ ಮೊಳೆಯುವಿಕೆ ಪ್ರಮಾಣ ಕಡಿಮೆ ಎಂದು ಕಂಡು ಬಂದಲ್ಲಿ ತಪ್ಪಿತಸ್ಥರ ವಿರುದ್ಧ ಕಾನೂನು ಹಾಗೂ ಆಡಳಿತಾತ್ಮಕ ಕ್ರಮ ಜರುಗಿಸಲಾಗುತ್ತದೆ.

555(703) ಶ್ರೀ ಕೃಷ್ಣಪಾಲೇಮಾರ್ ಕೆ. (ಸುರತ್ಕಲ್) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುರತ್ಕಲ್ ಕ್ಷೇತ್ರದ ಸುರತ್ಕಲ್, ಕಾವೂರ್, ಪಡೀಲ್, ಕೊಳೂರು, ಬಜ್ಪೆ ಮತ್ತು ಬೈಕಂಪಾಡಿಗಳಲ್ಲಿ ಸುಸಜ್ಜಿತ ಮಾರ್ಕೆಟ್ ನಿರ್ಮಾಣದ ಕುರಿತು ಸರ್ಕಾರ ಯೋಜನೆ ರೂಪಿಸಿದೆಯೇ;

ಆ) ಹೌದಾದಲ್ಲಿ, ಅದರ ವಿವರಗಳೇನು;

ಇ) ಈ ಮಾರ್ಕೆಟ್‌ಗಳನ್ನು ಯಾವಾಗ ನಿರ್ಮಿಸಿಕೊಡಲಾಗುವುದು?

ಶ್ರೀ ಪ್ರಕಾಶ್ ಬಾ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಆರ್.ಐ.ಡಿ.ಎಫ್– Xರ ಯೋಜನೆಯಡಿಯಲ್ಲಿ ಸುರತ್ಕಲ್ ವ್ಯಾಪ್ತಿಯಲ್ಲಿನ ಸುರತ್ಕಲ್‌ನಲ್ಲಿ ಗ್ರಾಮೀಣ ಸಂತೆಯನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಸುರತ್ಕಲ್ ಕ್ಷೇತ್ರದ ವ್ಯಾಪ್ತಿಯಲ್ಲಿ ಬೈಕಂಪಾಡಿಯಲ್ಲಿ ಈಗಾಗಲೇ ಮಾರುಕಟ್ಟೆ ಪ್ರಾಂಗಣವನ್ನು ಅಭಿವೃದ್ಧಿ ಪಡಿಸಲಾಗಿದೆ.

ಆ, ಇ) ಈ ಸದರಿ ಗ್ರಾಮೀಣ ಸಂತೆಯನ್ನು ಆರ್.ಐ.ಡಿ.ಎಫ್–Xರ ಯೋಜನೆಯ ಕಾಲಮಿತಿಯೊಳಗಾಗಿ ಅಭಿವೃದ್ಧಿ ಪಡಿಸಲಾಗುವುದು.

556(704) ಶ್ರೀ ಕೃಷ್ಣಪಾಲೇಮಾರ್ ಕೆ. (ಸುರತ್ಕಲ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ ಕ್ಷೇತ್ರದಲ್ಲಿ ಬೀಜ ತಂತ್ರಜ್ಞಾನ ಅಭಿವೃದ್ಧಿಗಾಗಿ ಸರಕಾರ ಹಮ್ಮಿಕೊಂಡ ಕ್ರಮಗಳೇನು;

ಆ) ಕೃಷಿಯಲ್ಲಿ ಮೂಲಭೂತವಾಗಿ ಬೇಕಾಗಿರುವ ಬೀಜಗಳಿಂದ ಕೃಷಿ ಉತ್ಪಾದನೆ ಹೆಚ್ಚಾಗುವುದರಿಂದ ಆ ಕುರಿತು ನಿರ್ಧಾರಿತ ಕಾರ್ಯಕ್ರಮಗಳು ಅವಶ್ಯಕವಲ್ಲವೆ;

ಇ) ಈ ನಿಟ್ಟಿನಲ್ಲಿ ಕೃಷಿ ವಿಶ್ವವಿದ್ಯಾಲಯಗಳ ಕಾರ್ಯಕ್ರಮಗಳೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ರಾಜ್ಯದಲ್ಲಿರುವ ಎರಡು ಕೃಷಿ ವಿಶ್ವವಿದ್ಯಾನಿಲಯಗಳ ಮೂಲಕ ರಾಜ್ಯಕ್ಕೆ ಬೇಕಾಗಿರುವ ಪ್ರಮುಖ ಬೆಳೆಗಳ ತಳಿಗಳನ್ನು ಅಭಿವೃದ್ಧಿಪಡಿಸಿ ಬಿಡುಗಡೆ ಮಾಡುವುದು, ಬೀಜ ತಂತ್ರಜ್ಞಾನದ ಬಗ್ಗೆ ಸಂಶೋಧನೆ ಹಾಗೂ ತರಬೇತಿ, ಬಿಡುಗಡೆ ಮಾಡಿದ ತಳಿಗಸ ತಳಿವರ್ಧಕ / ಮೂಲ / ಪ್ರಮಾಣಿತ ಬೀಜಗಳನ್ನು ಉತ್ಪಾದಿಸಿ ಸರಬರಾಜು ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಆ) ಹೌದು.

ಇ) ರಾಜ್ಯದಲ್ಲಿರುವ ಎರಡು ಕೃಷಿ ವಿಶ್ವವಿದ್ಯಾನಿಲಯಗಳು ತಳಿಗಳನ್ನು ಅಭಿವೃದ್ಧಿಪಡಿಸಿ ಬಿಡುಗಡೆ ಮಾಡುವುದು ತಳಿಗಳ ವರ್ಧಕ ಬೀಜಗಳನ್ನು ಉತ್ಪಾದಿಸುವುದು. ಬೀಜೋತ್ಪಾದನೆ ಬಗ್ಗೆ ಅನುಸರಿಸಬೇಕಾದ ಹೊಸ ತಂತ್ರಜ್ಞಾನಗಳು ಮತ್ತು ಬೀಜ ಸಂಸ್ಕರಣೆ, ದಾಸ್ತಾನು ಮಾಡುವ ಬಗ್ಗೆ ಸಂಶೋಧನೆ ಹಾಗೂ ತಳಿಗಳನ್ನು ಗುರುತಿಸಲು ಹೊಸ ತಂತ್ರಜ್ಞಾನವಾದ ಅನುವಂಶಿಕತೆಯ ಮೂಲವಾದ DNA ಫಿಂಗರ್ ಪ್ರಿಂಟಿಂಗ್ ಬಗ್ಗೆ ಸಂಶೋಧನೆ, ಕೃಷಿ ಇಲಾಖೆಯ ಅಧಿಕಾರಿಗಳು ಹಾಗೂ ರೈತರಿಗೆ ಬೀಜ ತಂತ್ರಜ್ಞಾನದ ಬಗ್ಗೆ ತರಬೇತಿ, ಬೀಜ ತಂತ್ರಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಮೂಲ / ಪ್ರಮಾಣಿತ / ಗುಣಮಟ್ಟದ ಬೀಜೋತ್ಪಾದನೆ ಕೈಗೊಳ್ಳುವುದು ಇತ್ಯಾದಿ ಬೀಜ ತಂತ್ರಜ್ಞಾನದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಕೃಷಿ ವಿಶ್ವವಿದ್ಯಾನಿಲಯಗಳು ನಿರ್ವಹಿಸುತ್ತಿವೆ.

557(705) ಶ್ರೀ ಕೃಷ್ಣಪಾಲೇಮಾರ್ ಜೆ. (ಸುರತ್ಕಲ್) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಮಹಿಳಾ ಅಭಿವೃದ್ಧಿಗಾಗಿ ಯಾವ ಯಾವ ಯೋಜನೆಗಳನ್ನು ಜಾರಿಗೆ ತರಲಾಗಿದೆ? ಯೋಜನಾವಾರು ವಿವರಗಳನ್ನು ನೀಡುವುದು);

ಆ) ರಾಜ್ಯದ ಯಾವ್ಯಾವ ಜಿಲ್ಲೆಗಳಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗಿರುವುದು ಕಂಡು ಬಂದಿದೆ? ಕಂಡುಬಂದಿರುವ ಜಿಲ್ಲೆಗಳಾವುವು?

ಇ) ಈ ಸಂಖ್ಯಾ ಕ್ಷೀಣತೆಗೆ ಕಾರಣವೇನು?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಸಚಿವರು)

ಅ) **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**

ರಾಜ್ಯದಲ್ಲಿ ಈ ಕೆಳಕಂಡ ಯೋಜನೆಗಳನ್ನು ಮಹಿಳಾ ಅಭಿವೃದ್ಧಿಗಾಗಿ ಜಾರಿಗೊಳಿಸಲಾಗುತ್ತಿದೆ;

1) ಸ್ತ್ರೀಶಕ್ತಿ, 2) ಸಾಂತ್ವನ 3) ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳಿಗಾಗಿ ಹಾಜರಾತಿ ಶಿಷ್ಯವೇತನ, 4. ಹೆಣ್ಣು ಮಕ್ಕಳ ವಸತಿ ನಿಲಯ, 5) ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ, 6) ಉದ್ಯೋಗಸ್ಥ ಮಹಿಳೆಯರಿಗೆ ವಸತಿ ಕಟ್ಟಡ ನಿರ್ಮಾಣ, 7) ವಿಧವಾ ವೇತನ 8) ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆಯಡಿ ರಾಜ್ಯದ 25 ಇಲಾಖೆಗಳಲ್ಲಿ ಮೂರನೆ ಒಂದು ಭಾಗದಷ್ಟು ಫಲಾನುಭವಿ ಆಧಾರಿತ ಕಾರ್ಯಕ್ರಮಗಳನ್ನು ಮಹಿಳೆಯರಿಗೆ ಒದಗಿಸುವುದು.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ:

1) **ಉದ್ಯೋಗಿನಿ:** ಆರ್ಥಿಕವಾಗಿ ಹಿಂದುಳಿದ ಮಹಿಳೆಯರು ವ್ಯಾಪಾರ / ಕಿರು ಉದ್ದಿಮೆಯ ಚಟುವಟಿಕೆಗಳಲ್ಲಿ ತೊಡಗಲು ನಿಗಮದ ಸಹಾಯಧನದೊಂದಿಗೆ ಬ್ಯಾಂಕುಗಳ ಮೂಲಕ ಸಾಲ ಒದಗಿಸುವ ಯೋಜನೆ.

2) **ಮಾರುಕಟ್ಟೆ ಯೋಜನೆ:** ಮಹಿಳಾ ಉದ್ದಿಮೆದಾರರು ತಯಾರಿಸಿದ ವಸ್ತುಗಳಿಗೆ ಮಾರುಕಟ್ಟೆ ಒದಗಿಸಲು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಗಳನ್ನು ಏರ್ಪಡಿಸುವ ಯೋಜನೆ.

3) **ರಾಜ್ಯ ಸಂಪನ್ಮೂಲ ಕೇಂದ್ರ ಯೋಜನೆ:**

ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಉಚಿತ ಸಲಹೆ ಮತ್ತು ಮಾರ್ಗದರ್ಶನ ನೀಡುವುದು, ಬೆಂಗಳೂರಿನ ನಿಗಮದ ಕಛೇರಿಯಲ್ಲಿ, ಬೆಳಗಾವಿ ಮತ್ತು ಮಂಗಳೂರಿನಲ್ಲಿ ಲಿಂಗ ತಾರತಮ್ಯದ ಬಗ್ಗೆ ಕಾರ್ಯಾಗಾರ/ ಬೀದಿ ನಾಟಕ ಏರ್ಪಡಿಸುವುದು.

4) **ಮಹಿಳಾ ತರಬೇತಿ ಯೋಜನೆ :** ವಿವಿಧ ಕೌಶಲ್ಯ ಅಭಿವೃದ್ಧಿ / ವೃತ್ತಿಪರ ತರಬೇತಿಗಳನ್ನು ಉಚಿತವಾಗಿ ಮಹಿಳೆಯರಿಗೆ ನೀಡಿ, ಉದ್ಯೋಗ / ಸ್ವಯಂ ಉದ್ಯೋಗಗಳಲ್ಲಿ ತೊಡಗಿಸಿ ಸ್ವಾವಲಂಬಿಗಳನ್ನಾಗಿಸುವ ಯೋಜನೆ.

5) **ನಗರ ಸ್ತ್ರೀಶಕ್ತಿ ಯೋಜನೆ :** ಸಣ್ಣ ವ್ಯಾಪಾರ ಮಾಡುತ್ತಿರುವ / ವ್ಯಾಪಾರ ಮಾಡಲು ಇಚ್ಛಿಸುವ ರಾಜ್ಯದ ನಗರ ಮತ್ತು ಪಟ್ಟಣ ಪ್ರದೇಶದ ಮಹಿಳೆಯರು/ ಅಂಗವಿಕಲ ಮಹಿಳೆಯರನ್ನೊಳಗೊಂಡಂತೆ ಸ್ವಸಹಾಯ ಗುಂಪುಗಳನ್ನು ರಚಿಸಿ, ನಂತರ ಅವುಗಳಿಗೆ ನಿಗಮದಿಂದ ಸುತ್ತುನಿಧಿ ನೀಡಿ, ಸದರಿ ಹಣವನ್ನು ಗುಂಪುಗಳ ಸದಸ್ಯರು ಗುಂಪಿನಿಂದ ಸಾಲ ಪಡೆದು ಸಣ್ಣ ವ್ಯಾಪಾರ ಮಾಡುವ ಯೋಜನೆ.

6) **ದೇವದಾಸಿ ಪುನರ್ವಸತಿ ಯೋಜನೆ :** ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಕಾಯ್ದೆ 1982ರನ್ವಯ ದೇವದಾಸಿ ಪದ್ಧತಿಯಂತಹ ಸಾಮಜಿಕ ಕಳಂಕವನ್ನು ನಿರ್ಮೂಲನೆ ಮಾಡಲು ದೇವದಾಸಿ ಮಹಿಳೆಯರಿಗೆ ಅರಿವು ಜಾಗೃತಿ ಶಿಬಿರ, ಜಾತ್ರಾ ಜಾಗೃತಿ ಶಿಬಿರ, ಆರೋಗ್ಯ ಶಿಬಿರ ಮತ್ತು ಸ್ವಸಹಾಯ ಗುಂಪು ರಚನೆ ಕಾರ್ಯಕ್ರಮಗಳನ್ನು ಏರ್ಪಡಿಸಿ, ಆದಾಯ ಉತ್ಪನ್ನಕರ

ಚಟುವಟಿಕೆಗಳಿಗಾಗಿ ನಿಗಮದಿಂದ 60% ಸಹಾಯಧನ ಹಾಗೂ ಬ್ಯಾಂಕುಗಳಿಂದ 40% ಸಾಲ ಒದಗಿಸಿ ಪುನವಸತಿ ಕಲ್ಪಿಸುವ ಯೋಜನೆ.

ಕೇಂದ್ರ ಸರ್ಕಾರದ ಯೋಜನೆಗಳು:

7) **ನೋರಾಡ್ ಯೋಜನೆ :** ಈ ಯೋಜನೆಯಡಿ ಕೇಂದ್ರ ಸರ್ಕಾರ ಗುರುತಿಸಿರುವ ಚಟುವಟಿಕೆಗಳಲ್ಲಿ ಅರ್ಹ ಮಹಿಳೆಯರಿಗೆ ಸರ್ಕಾರಿ ಸರ್ಕಾರೇತರ ಸಂಸ್ಥೆಗಳ ಮೂಲಕ ವಿವಿಧ ಚಟುವಟಿಕೆಗಳಲ್ಲಿ ತರಬೇತಿ ನೀಡಲು ಅನುದಾನ ನೀಡುವ ಯೋಜನೆ.

8) **ಸ್ಟೆಪ್ ಯೋಜನೆ:** ಕೃಷಿ ಹೈನುಗಾರಿಕೆ, ಮೀನುಗಾರಿಕೆ, ಸಾಮಾಜಿಕ ಅರಣ್ಯ, ಕೈಮಗ್ಗ, ಕರಕುಶಲ ಕ್ಷೇತ್ರಗಳಲ್ಲಿ ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ತರಬೇತಿ ಮತ್ತು ಉತ್ಪದನಾ ಘಟಕ ಸ್ಥಾಪಿಸುವುದು, ಸರ್ಕಾರಿ / ಸರ್ಕಾರೇತರ ಸಂಸ್ಥೆಗಳ, ಸಾರ್ವಜನಿಕ ಉದ್ದಿಮೆಗಳ ಮೂಲಕ ಯೋಜನೆಯನ್ನು ಅನುಷ್ಠಾನ ಮಾಡಲಾಗುವುದು.

9) **ಸ್ವಶಕ್ತಿ ಯೋಜನೆ :** ಇದು ವಿಶ್ವ ಬ್ಯಾಂಕ್ ಆರ್ಥಿಕ ನೆರವಿನ ಯೋಜನೆ. ರಾಜ್ಯದ ಏಳು ಜಿಲ್ಲೆಗಳಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಅತಿ ಬಡತನದಲ್ಲಿರುವ ಮಹಿಳೆಯರನ್ನು ಸ್ವಶಕ್ತರನ್ನಾಗಿಸುವ ಯೋಜನೆ.

2. ರಾಜ್ಯದಲ್ಲಿ 6 ವರ್ಷದೊಳಗಿನ ಹೆಣ್ಣುಮಕ್ಕಳ ಜನನದ ಅನುಪಾತ 1991ರಲ್ಲಿ 960 ಇದ್ದು, 2001ರ ಜನ ಗಣತಿಯಂತೆ ಜನನದ ಅನುಪಾತ 949ಕ್ಕೆ ಇಳಿದಿರುತ್ತದೆ. ಇದರಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಿರುವ ಜಿಲ್ಲೆಗಳ ವಿವರ ಕೆಳಕಂಡಂತೆ ಇದೆ.

1.	ಬೆಳಗಾಂ	924
2.	ಬಾಗಲಕೋಟೆ	939
3.	ಗುಲ್ಬರ್ಗಾ	937
4.	ಕೊಪ್ಪಳ	938
5.	ಧಾರವಾಡ	944
6.	ಉತ್ತರ ಕನ್ನಡ	956
7.	ಚಿತ್ರದುರ್ಗ	946
8.	ಬೆಂಗಳೂರು ನಗರ	940
9.	ಬೆಂಗಳೂರು (ಗ್ರಾ)	941
10.	ಮಂಡ್ಯ	937

3. ಗಂಡುಮಕ್ಕಳ ಜನನಕ್ಕೆ ಹೆಚ್ಚು ಆದ್ಯತೆ ನೀಡುತ್ತಿರುವುದು ಹಾಗೂ ಹೆಣ್ಣು ಭ್ರೂಣಹತ್ಯೆ ಹೆಣ್ಣುಮಕ್ಕಳ ಸಂಖ್ಯಾ ಕ್ಷೀಣತೆಗೆ ಕಾರಣವೆಂದು ಊಹಿಸಲಾಗಿದೆ.

ಆದರೆ, ಈ ಬಗ್ಗೆ ಯಾವುದೇ ಸಮೀಕ್ಷೆ ಆಗಿರುವುದಿಲ್ಲ. ಆದಾಗ್ಯೂ ಇದನ್ನು ತಡೆಗಟ್ಟಲು PNDT ಕಾಯ್ದೆಯನ್ನು ಜಾರಿಗೊಳಿಸಲಾಗಿದೆ ಹಾಗೂ ಸ್ವಯಂಸೇವಾ ಸಂಸ್ಥೆಗಳ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

558(715) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ಕೇಂದ್ರದಲ್ಲಿ ಎ.ಪಿ.ಎಂ.ಸಿ. ಗೋದಾಮನ್ನು ಇದುವರೆಗೂ ನಿರ್ಮಿಸದಿರಲು ಕಾರಣಗಳೇನು;

ಆ) ಗೋದಾಮು ನಿರ್ಮಾಣಕ್ಕೆ ಮನವಿಗಳೇನಾದರೂ ಸಂಬಂಧಪಟ್ಟವರು ಪಡೆದಿದ್ದಾರೆಯೇ;

ಇ) ಹಾಗಿದ್ದಲ್ಲಿ ಅ ಮನವಿಯ ಮೇಲೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಕೃಷಿ ಸಚಿವರು)

ಅ) ತುರುವೇಕೆರೆ ಮಾರುಕಟ್ಟೆ ಪ್ರಾಂಗಣದಲ್ಲಿ 24 ಗೋದಮುಗಳನ್ನು ನಿರ್ಮಿಸಿದ್ದು, ಅವುಗಳಲ್ಲಿ 22 ಗೋದಾಮುಗಳನ್ನು ಪೇಟೆ ಕಾರ್ಯಕರ್ತರಿಗೆ ಹಂಚಿಕೆ ಮಾಡಲಾಗಿದೆ. ಒಂದು ಗೋದಾಮು ಮಾರುಕಟ್ಟೆ ಸಮಿತಿಯ ವಶದಲ್ಲಿದ್ದು ಉಳಿದ ಇನ್ನೊಂದು ಗೋದಾಮು ಕರ್ನಾಟಕ ಆಹಾರ ನಾಗರೀಕ ಸರಬರಾಜು ಇಲಾಖೆ, ತುಮಕೂರು ಇವರಿಗೆ ಲೀವ್ ಅಂಡ್ ಲೈಸೆನ್ಸ್ ಆಧಾರದ ಮೇಲೆ ನೀಡಲಾಗಿದೆ..

ಆ) ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

559(718) ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಬೇಲೂರು) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿಗೆ ಸರ್ಕಾರ ಸುತ್ತುನಿಧಿ ಸವಲತ್ತು ನೀಡುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ ನವ ಸಾಕ್ಷರತ ಸ್ವಸಹಾಯ ಸ್ತ್ರೀ ಸಂಘಗಳಿಗೆ ಈ ಸೌಲಭ್ಯವನ್ನು ಸರ್ಕಾರ ನೀಡುವುದೇ;

ಇ) ಸ್ತ್ರೀ ಸ್ವ ಸಹಾಯ ಸಂಘಗಳ ಚಟುವಟಿಕೆಗಳನ್ನು ನಡೆಸಲು ಸಂಘದ ಮನೆ ನಿರ್ಮಾಣ ಮಾಡುವ ಇರಾದೆ ಸರ್ಕಾರಕ್ಕೆ ಇದೆಯೇ?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ರಚಿಸಲಾಗಿರುವ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಗೆ ತಲಾ ರೂ. 5.000 ರೂ. ಮತ್ತು ಸಿಡಿಯನ್ನು ಸರ್ಕಾರದಿಂದ ನೀಡಲಾಗುತ್ತಿದೆ.

ಆ) ಇಲ್ಲ

ಇ) ಸಧ್ಯಕ್ಕೆ ಇಲ್ಲ.

560(720) ಶ್ರೀ ಹೆಚ್.ಡಿ. ಕುಮಾರಸ್ವಾಮಿ (ರಾಮನಗರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವೈಯಾಲಿಕಾವಲ್ ಗೃಹ ನಿರ್ಮಾಣ ಸಹಕಾರ ಸಂಘ ಎಷ್ಟು ವರ್ಷದಿಂದ ಕೆಲಸ ನಿರ್ವಹಿಸುತ್ತಿದೆ. ಇದರ ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರು ಯಾರು ಯಾರು (ವಿವರ ನೀಡುವುದು);

ಆ) ಸಂಘವು ಸ್ವಾಧೀನಪಡಿಸಿಕೊಂಡಿರುವ ಜಮೀನು ಎಷ್ಟು (ಬಡಾವಣೆವಾರು ವಿವರ ಒದಗಿಸುವುದು);

ಇ) ಬೆಂಗಳೂರು ಜಿಲ್ಲಾ ಕೇಂದ್ರ ಬ್ಯಾಂಕ್‌ನಿಂದ ಪಡೆದಿರುವ ಸಂಘದ ಸಾಲ ಎಷ್ಟು;

ಈ) ದಿನಾಂಕ 31-12-2004ರವರೆಗೆ ಇರುವ ಅಸಲು ಮತ್ತು ಬಡ್ಡಿಗಳ ಬಾಕಿ ಎಷ್ಟು;

ಉ) ನಿವೇಶನಕ್ಕಾಗಿ ಠೇವಣಿ ತುಂಬಿ ಕಾಯುತ್ತಿರುವ ಸದಸ್ಯರ ಸಂಖ್ಯೆ ಎಷ್ಟು;

ಊ) ದಿನಾಂಕ 30-12-2004ರವರೆಗೆ ಇವರಿಂದ ಸಂಗ್ರಹವಾಗಿರುವ ಠೇವಣಿ ಮೊತ್ತ ಎಷ್ಟು;

ಋ) ಎಷ್ಟು ಜನರಿಗೆ ಇಲ್ಲಿಯವರೆಗೆ ನಿವೇಶನ ಹಂಚಿಕೆ ಮಾಡಲಾಗಿದೆ (ವಿವರ ಒದಗಿಸುವುದು)

ೠ) ಕೇಂದ್ರ ಬ್ಯಾಂಕಿನಿಂದ ಪಡೆದಿರುವ ಸಾಲ ತೀರುವಳಿ ಮಾಡಲು ಬ್ಯಾಂಕಿನೊಂದಿಗೆ ಎಂ.ಓ.ಯು ಒಪ್ಪಂದವಾಗಿದೆಯೇ (ಒಪ್ಪಂದ ಪರತಿ ನೀಡುವುದು);

ಎ) ಈ ಒಪ್ಪಂದದಲ್ಲಿ ಮಧ್ಯವರ್ತಿ (ಡೆವಲಪರ್) ಯಾರು;

ಏ) ಅವರಿಗೆ ನಿವೇಶನ ನೀಡಲಾಗಿದೆಯೇ ಹಾಗೂ ಅವರು ಯಾರು ಯಾರಿಗೆ ನಿವೇಶನ ಮಾರಾಟ ಮಾಡಿದ್ದಾರೆ ವಿವರ ನೀಡುವುದು;

ಐ) ಸಾಲ ತೀರುವಳಿ ತೆಗೆದಿದ್ದರೆ ಕಾರಣಗಳೇನು;

ಒ) ಸಂಘವು ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ತನ್ನ ಹಿರಿಯ ಠೇವಣಿ ತುಂಬಿರುವ ಸದಸ್ಯರನ್ನು ಕಡೆಗಾಣಿಸಿ ಖಾಸಗಿ ಪಕ್ಷಗಳಿಗೆ ಅಥವಾ ಕಿರಿಯ ಸದಸ್ಯರಿಗೆ ನಿವೇದನೆ ಹಂಚಿಕೆ ಮಾಡಿದ್ದಾರೆಯೇ;

ಓ) 20 ವರ್ಷಗಳಷ್ಟು ಮೀರಿ ನಿವೇಶನ ಠೇವಣಿ ತುಂಬಿರುವ ಸದಸ್ಯರಿಗೆ ಯಾವಾಗ ನಿವೇಶನ ನೀಡಲಾಗುವುದು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ರಾಮನಗರ) (ಸಹಕಾರ ಸಚಿವರು)

ಅ) ಸಂಘವು 1964 ರಿಂದ (40ವರ್ಷ ಕಾರ್ಯನಿರ್ವಹಿಸುತ್ತಿದೆ).

ಆಡಳಿತ ಮಂಡಳಿ ಸದಸ್ಯರುಗಳು:

ಶ್ರೀ ಎನ್.ಕೆ. ರಾಮಸ್ವಾಮಿ ಐಯ್ಯಂಗಾರ್ ಅಧ್ಯಕ್ಷರು

ಶ್ರೀ ಟಿ.ಬಿ. ಮಾರುತೀಶ ಉಪಾಧ್ಯಕ್ಷರು

ನಿರ್ವಾಹಕರುಗಳು

ಶ್ರೀ ಹೆಚ್.ಎನ್. ಗೋಪಿನಾಥ್

ಶ್ರೀ ಜಿ.ಎ.ಎಸ್. ಪಣಿರಾಜ್

ಶ್ರೀ ಎಂ.ಕೆ. ರಂಗಸ್ವಾಮಿ

ಶ್ರೀಮತಿ ಎಂ.ಎ. ಶಕುಂತಲ

ಶ್ರೀಮತಿ ಎ. ಪಂಕಜ

ಶ್ರೀಮತಿ ಎಂ.ಎ. ನೀತ

ಆ) ಕರ್ನಾಟಕ ಸರ್ಕಾರದ ಭೂ ಸ್ವಾಧೀನ ಕಾಯ್ದೆ ಪ್ರಕಾರ ಈ ಕೆಳಕಂಡ ಜಮೀನುಗಳನ್ನು ಸರ್ಕಾರದ ಮೂಲಕ ಸಂಘವು ಸ್ವಾಧೀನಪಡಿಸಿಕೊಂಡಿರುತ್ತದೆ.

	ಬಡಾವಣೆ	ಎಕರೆ	ಗುಂಟೆ
1.	ನಾಗವಾರ	164	24
2.	ವಿಶ್ವನಾಥನಾಗನಹಳ್ಳಿ	101	28
3.	ಚೋಳನಾಯಕನಹಳ್ಳಿ		
4.	ಕೊಡಿಗೆ ಹಳ್ಳಿ	106	12
5.	ದೇವರ ಚಿಕ್ಕನಹಳ್ಳಿ		
	ಕೋಡಿಚಿಕ್ಕನಹಳ್ಳಿ	247	23
	ಹೊಂಗಸಂದ್ರ		
	ಅರೆಕೆರೆ		
6.	ಬಿಲೇಕಹಳ್ಳಿ	230	24
	ಕೂಡಿಚಿಕ್ಕನಹಳ್ಳಿ		
7.	ದೇವರ ಚಿಕ್ಕನಹಳ್ಳಿ	177	33

ಇ) ರೂ. 15.30 ಕೋಟಿಗಳು

ಈ) ಅಸಲು ರೂ. 15.50 ಕೋಟಿ ಪಾವತಿಸಲು ಬಾಕಿ ಇರುತ್ತದೆ. ಜಿಲ್ಲಾ ಬ್ಯಾಂಕು ಮತ್ತು ಸಂಘದ ನಡುವಿನ ಪರಸ್ಪರ ಒಪ್ಪಂದದಂತೆ ಬಡ್ಡಿ ರೂ.15.30 ಕೋಟಿ ಬಾಕಿ ಇರುತ್ತದೆ. ಈ ಪೈಕಿ ರೂ. 14.11 ಕೋಟಿ ಬ್ಯಾಂಕಿಗೆ ಮರು ಪಾವತಿಸಲಾಗಿದೆ.

ಉ) 5320 ಸದಸ್ಯರು

ಊ) ರೂ. 18,83,44,108.00

ಋ) 266 ಜನರಿಗೆ ನಿವೇಶನ ಹಂಚಿಕೆ ಮಾಡಲಾಗಿದೆ.

ೠ) ಹೌದು ಒಪ್ಪಂದ ಆಗಿದೆ.

ಎ) ಶ್ರೀ ಶಕ್ತಿ ಪ್ರೊಮೋಟರ್ಸ್ ಮತ್ತು ಡೆವಲಪರ್ಸ್ ಬೆಂಗಳೂರು.

ಏ) ಇವರಿಗೆ 325 ನಿವೇಶನಗಳನ್ನು ನೀಡಲಾಗಿದೆ. ಅವರು ಮಧ್ಯವರ್ತಿ ಸಂಸ್ಥೆಯವರಿಗೆ ಮತ್ತು ಸಾರ್ವಜನಿಕರಿಗೆ ಮಾರಾಟ ಮಾಡಿರುತ್ತಾರೆ.

ಐ) ಇಲ್ಲ ಎಂಬುದಾಗಿ ಸಂಘವು ಉತ್ತರ ಸಲ್ಲಿಸಿದ್ದು, ಇದನ್ನು ಸಿಖರವಾಗಿ ಖಾತರಿ ಪಡಿಸಿಕೊಳ್ಳಬೇಕಾಗಿರುತ್ತದೆ.

ಒ) ಸಂಘವು ವಿವಿಧ ನ್ಯಾಯಾಲಯಗಳ ಆದೇಶದಂತೆ ಭೂ ಮಾಲೀಕರಿಗೆ ಜಮೀನನ್ನು ಹಿಂತಿರುಗಿಸಿರುತ್ತದೆ ಮತ್ತು ಸದಸ್ಯರಿಗೆ ವಿತರಣೆ ಮಾಡಲು ಅನುಕೂಲವಾಗುವಂತೆ ಸರ್ಕಾರದಿಂದ ಜಮೀನನ್ನು ಬದಲಿಯಾಗಿ ಮಂಜೂರು ಮಾಡುವಂತೆ ಕೋರಿರುತ್ತದೆ. ಈ ಜಮೀನು ದೊರಕಿದ ನಂತರ ಬಡಾವಣೆ ನಿರ್ಮಿಸಿ ಉಳಿದ ಸದಸ್ಯರಿಗೆ ನಿಯಮಾನುಸಾರ ನಿವೇಶನ ಹಂಚಿಕೆ ಮಾಡುವುದಾಗಿ ಸಂಘವು ವರದಿ ಮಾಡಿದೆ.

561(1226) ಶ್ರೀ ಕ್ಯಾತ್‌ಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ನುಸಿರೋಗದಿಂದ ಹಾಳಾಗಿರುವ ತೆಂಗಿನ ಮರಗಳೆಷ್ಟು;

ಆ) ನುಸಿರೋಗದಿಂದ ಹಾಳಾದ ತೆಂಗಿನ ಮರಗಳ ಮಾಲೀಕರಿಗೆ ಸರ್ಕಾರ ಪರಿಹಾರ ಧನವನ್ನು ನೀಡಿದೆಯೇ;

ಇ) ಹಾಗಿದ್ದಲ್ಲಿ, ಎಷ್ಟು ನೀಡಲಾಗಿದೆ;

ಈ) ಈ ಸುಸಿರೋಗವನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು)

ಅ) ನುಸಿ ರೋಗದಿಂದ 122 ಲಕ್ಷ ತೆಂಗಿನ ಮರಗಳು ಭಾದಿತವಾಗಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಭಾರತ ಸರ್ಕಾರದ ಸ್ಟೀರಿಂಗ್ ಸಮಿತಿ ಮತ್ತು ರಾಜ್ಯಮಟ್ಟದ ತಾಂತ್ರಿಕ ಸಮಿತಿಯ ಶಿಫಾರಸ್ಸಿನಂತೆ ಪರಿಸರ ಪೂರಕವಾದ ಸಮಗ್ರ ನಿರ್ವಹಣಾ ಪದ್ಧತಿಯನ್ನು ಅಳವಡಿಸಲು ವಿವಿಧ ಜಿಲ್ಲೆಗಳಲ್ಲಿ ಬ್ಲಾಕ್ ಪ್ರಾತ್ಯಕ್ಷತೆಗಳು ಮತ್ತು ನುಸಿ ನಿರ್ವಹಣೆ ಬಗ್ಗೆ ರೈತರಲ್ಲಿ ಅರಿವು ಮೂಡಿಸಲು ಜಾಗೃತಿ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ತುಮಕೂರು ಜಿಲ್ಲೆಯಲ್ಲಿ 10 ಬ್ಲಾಕ್ ಪ್ರಾತ್ಯಕ್ಷತೆಗಳನ್ನು ಮತ್ತು 60 ಜಾಗೃತಿ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

562(1227) ಶ್ರೀ ಕ್ಯಾತ್‌ಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹನಿನೀರಾವರಿ ಯೋಜನೆಯುನ್ನು ಉತ್ತೇಜಿಸಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು;

ಆ) ಮಧುಗಿರಿ ಉಪ ವಿಭಾಗದಲ್ಲಿ ನೂರಕ್ಕೆ ನೂರರಷ್ಟು ಸಬ್ಸಿಡಿ ನೀಡಲು ಉದ್ದೇಶಿಸಲಾಗಿದೆಯೇ;

ಇ) ಹಾಗಿದ್ದಲ್ಲಿ ಹನಿ ನೀರಾವರಿ ಸಹಾಯಧನವಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು)

ಅ) ಹನಿ ನೀರಾವರಿಯನ್ನು ಪ್ರೋತ್ಸಾಹಿಸಲು ಸರ್ಕಾರವು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಶೇ. 50 ಸಹಾಯಧನ ಹಾಗೂ ಗಂಗಾ ಕಲ್ಯಾಣ ಯೋಜನೆ ಫಲಾನುಭವಿಗಳಿಗೆ ಶೇ. 100 ಸಹಾಯಧನ ಮತ್ತು ಬಿಜಾಪುರ, ಕೋಲಾರ ಜಿಲ್ಲೆಗಳಿಗೆ ಶೇ. 100 ಸಹಾಯಧನ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ. ಆದರೆ ಶೇಕಡ 50ರ ಸಹಾಯಧನ ಒದಗಿಸಲು ಮಧುಗಿರಿ ಉಪ ವಿಭಾಗಕ್ಕೆ 2004-05ನೇ ಸಾಲಿಗೆ ರೂ. 14.10 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

563(1228) ಶ್ರೀ ಕ್ಯಾತ್‌ಸಂದ್ರ ರಾಜಣ್ಣ (ಬೆಳ್ಳಾವಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸ್ತ್ರೀಶಕ್ತಿ ಗುಂಪುಗಳ ರಚನೆಗೆ ಗುರಿಯನ್ನು (ಸಂಖ್ಯೆಯನ್ನು) ನಿಗದಿಪಡಿಸಲಾಗಿದೆಯೇ; ಎಷ್ಟು ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಲು ಸರ್ಕಾರ ಕ್ರಮ ಕೈಗೊಂಡಿದೆ;

ಆ) ಸ್ತ್ರೀಶಕ್ತಿ ಗುಂಪುಗಳು ತಯಾರಿಸುವ ವಸ್ತುಗಳನ್ನು ಮಾರಾಟ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಇ) ಸ್ತ್ರೀಶಕ್ತಿ ಗುಂಪುಗಳ ಅನುಕೂಲಕ್ಕಾಗಿ ಪ್ರತ್ಯೇಕ ಬ್ಯಾಂಕ್‌ನ್ನು ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಸಕಾರವು ರಾಜ್ಯದಲ್ಲಿ ಒಂದು ಲಕ್ಷ ಸ್ತ್ರೀಶಕ್ತಿ ಸ್ವಸಹಾಯ ಸಂಘ ರಚಿಸಲು ಗುರಿ ನಿಗದಿಪಡಿಸಿದೆ ಹಾಗೂ ಒಂದು ಲಕ್ಷ ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಲಾಗಿದೆ.

ಆ) ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು ಉತ್ಪಾದಿಸಲು ವಸ್ತುಗಳನ್ನು ಮಾರಾಟ ಮಾಡಲು ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಏರ್ಪಡಿಸಲು ರೂ.75,000/-ಗಳನ್ನು ಪ್ರತಿ ಜಿಲ್ಲೆಗೆ ಬಿಡುಗಡೆ ಮಾಡಲಾಗಿದೆ. ಸ್ತ್ರೀಶಕ್ತಿ ಗುಂಪುಗಳು ಉತ್ಪಾದಿಸುವ ಕೆಲವೊಂದು ವಸ್ತುಗಳಿಗೆ ಬ್ರಾಂಡ್ ಬಿಡುಗಡೆಗೊಳಿಸಿದೆ ಹಾಗೂ ಸದರಿ ವಸ್ತುಗಳನ್ನು

143-83

ಜನತಾ ಬಜಾರ್ ಹಾಗೂ ನ್ಯಾಯಬೆಲೆ ಅಂಗಡಿ ಮುಖೇನ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗುವುದು.

ಇ) ಸರ್ಕಾರವು ಸ್ತ್ರೀಶಕ್ತಿ ಬ್ಯಾಂಕ್ ಸ್ಥಾಪಿಸಲು 2003-04ನೆ ಸಾಲಿನಲ್ಲಿ ಪ್ರಸ್ತಾಪಿಸಿದ್ದು ಬ್ಯಾಂಕ್ ಸ್ಥಾಪಿಸಲು ರಿಸರ್ವ್ ಬ್ಯಾಂಕ್‌ನಿಂದ ಅನುಮತಿ ದೊರೆತಿರುವುದಿಲ್ಲ.

564(518) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಾಸಗಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ವಿಶೇಷ ಉದ್ಯೋಗ ಗುಂಪಿನ ಕುಶಲಕರ್ಮಿಗಳಿಗೆ (ಹಮಾಲರಿಗೆ) ವಸತಿ ನಿರ್ಮಿಸಲು ಸಾಲ ಮತ್ತು ಅನುಧಾನ ನೀಡುವ ಯೋಜನೆ ಜಾರಿಯಲ್ಲಿದ್ದರೂ ಮಾರುಕಟ್ಟೆ ಸಮಿತಿ ನಿವೇಶನ ಒದಗಿಸದೆ ಇದ್ದ ಕಾರಣ ಈ ಯೋಜನೆ ಸ್ಥಗಿತಗೊಂಡಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸವದತ್ತಿ ಕೃಷಿ ಉತ್ಪನ್ನ ಮಾರುಕಟ್ಟೆಯ ಹಮಾಲರಿಗೆ ಮನೆ ನಿರ್ಮಿಸಲು ನಿವೇಶನ ಒದಗಿಸುವ ಕ್ರಮವನ್ನು ಸರ್ಕಾರ ಕೈಗೊಳ್ಳುವುದೇ?

ಶ್ರೀ ಪ್ರಕಾಶ ಭ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಇಲ್ಲ ಮಾರುಕಟ್ಟೆ ಸಮಿತಿಗಳ ವ್ಯಾಪ್ತಿಯಲ್ಲಿ ಪ್ರಾಂಗಣದ ಒಳಗಡೆ ಹಾಗೂ ಹೊರಗಡೆ ಲಭ್ಯವಿರುವ ನಿವೇಶನಗಳಲ್ಲಿ ಈ ಯೋಜನೆ ಕಾರ್ಯಗತಗೊಳಿಸ ಲಾಗುತ್ತಿದೆ. ನಿವೇಶನಗಳಿಗಾಗಿ ಸೂಕ್ತ ಜಾಗದ ಲಭ್ಯತೆ ಇಲ್ಲದೇ ಇರುವ ಕಡೆ ಈ ಯೋಜನೆ ಕುಂಠಿತಗೊಂಡಿದೆ.

ಆ) ಈ ಯೋಜನೆಗಾಗಿ ಸೂಕ್ತ ಜಾಗವನ್ನು ಮಾರುಕಟ್ಟೆ ಸಮಿತಿ ಗುರುತಿಸಿ ವಶಕ್ಕೆ ಪಡೆದು ಕಾರ್ಯಗತಗೊಳಿಸುವುದು.

565(1080) ಶ್ರೀ ಮರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಹಕಾರ ಸಂಘಗಳಲ್ಲಿ ಹಾಗೂ ಸಹಕಾರಿ ಬ್ಯಾಂಕ್‌ಗಳಲ್ಲಿ ಪಡೆದಂತಹ ರೈತರ ಕೃಷಿ ಸಾಲದ ಮೇಲಿನ ಬಡ್ಡಿಯನ್ನು 1-3-2002 ರಿಂದ 30-9-2002ರವರೆಗೆ ಪಡೆದ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಈ ಅವಧಿಗೂ ಮೊದಲು ಸಾಲ ಮರುಪಾವತಿ ಮಾಡಿ ಹೊಸ ಸಾಲ ಪಡೆದ ರೈತರಿಗೆ ಬಡ್ಡಿ ಮನ್ನಾ ಸಿಗದಿರುವ ಬಗ್ಗೆ ಯಾವ ಕ್ರಮ ಕೈಗೊಳ್ಳುವುದು;

ಇ) 2001 ರಿಂದ 1-3-2002ರವರೆಗೆ ಸಾಲ ಮರು ಪಾವತಿ ಮಾಡಿ ಹೊಸ ಸಾಲ ಪಡೆದವರಿಗೂ ಕೂಡ ಬಡ್ಡಿ ಮನ್ನಾ ಆಗಬೇಕಾಗಿದ್ದರಿಂದ, ಈ ಮೊದಲು ಪಾವತಿಸಿದಂತಹವರಿಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು;

ಈ) ಇದಕ್ಕಾಗಿ ಸರ್ಕಾರದ ಕಾರ್ಯ ಯೋಜನೆಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ,ಆ) ಹೌದು. ದಿನಾಂಕ 1-3-2002 ರಿಂದ 30-9-2002ರ ಅವಧಿಯಲ್ಲಿ ಸಹಕಾರಿ ಪತ್ತಿನ ಸಂಸ್ಥೆಗಳು ರೈತರಿಗೆ ನೀಡಿದ ಅಲ್ಪಾವಧಿ ಬೆಳೆಗಳ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲಾಗಿದೆ.

ಇ, ಈ) ದಿನಾಂಕ 1-3-2002ರ ಪೂರ್ವದ ಅವಧಿಯಲ್ಲಿ ರೈತರಿಗೆ ನೀಡಿದ ಬೆಳೆ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿರುವುದಿಲ್ಲ. 2002ನೇ ಹಿಂಗಾರಿನ ಅವಧಿಯಲ್ಲಿ ರಾಜ್ಯದಲ್ಲಿನ ಪಿ.ಎ.ಸಿ.ಎಸ್., ಡಿ.ಸಿ.ಸಿ. ಬ್ಯಾಂಕ್‌ಗಳಿಗೆ ಮತ್ತು ವಾಣಿಜ್ಯ ಬ್ಯಾಂಕುಗಳಿಗೆ ಹೊಂದಾಣಿಕೆಯಗಿರುವ ಪಿಎಸಿಎಸ್ ಮತ್ತು ಪಿಕಾರ್ಡ್ ಬ್ಯಾಂಕುಗಳು ರೈತರಿಗೆ ನೀಡಿರುವ ಎಲ್ಲಾ ಆಲ್ಪಾವಧಿ ಬೆಳೆ ಸಾಲಗಳ ಮೇಲಿನ ಪೂರ್ಣ ಬಡ್ಡಿಯನ್ನು ಮನ್ನಾ ಮಾಡಲಗಿದೆ.

566(1081) ಶ್ರೀ ಮರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಕಿತ್ತೂರಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಭಿವೃದ್ಧಿ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು;

ಆ) ಇದಕ್ಕಾಗಿ ಸರ್ಕಾರ ಯಾವ ಯೋಜನೆ ಹಮ್ಮಿಕೊಂಡಿದೆ;

ಇ) ಎ.ಪಿ.ಎಂ.ಸಿ. ಗಳ ಮೂಲಕ ಅಭಿವೃದ್ಧಿಪಡಿಸುವಂತಹ ರಸ್ತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸದಿರಲು ಕಾರಣಗಳೇನು;

ಈ) ಯಾವಾಗ ಈ ಯೋಜನೆ ಕೈಗೊಳ್ಳಲಾಗುವುದು;

ಉ) ವಿಧಾನ ಸಭಾವಾರು ತಲಾ ಶಾಸಕರುಗಳಿಗೆ ಒದಗಿಸಿರುವ ಅನುದಾನವೆಷ್ಟು;

ಊ) ಬೆಳಗಾವಿ ಜಿಲ್ಲೆಗೆ ಇದರಿಂದ ಪ್ರಯೋಜನವಾಗುವ ಕಾಮಗಾರಿಗಳ ಮೊತ್ತವೆಷ್ಟು;

ಋ) ಕಿತ್ತೂರು ಕ್ಷೇತ್ರದ ಯಾವ ರಸ್ತೆ ಸುಧಾರಣೆ ಕಾಮಗಾರಿಗಳನ್ನು ಇದರಡಿ ಗುರ್ತಿಸಲಾಗಿದೆ?

ಶ್ರೀ ಪ್ರಕಾಶ್ ಬಾ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಬೈಲಹೊಂಗಲ ಸಮಿತಿಯ ಕಿತ್ತೂರು ಉಪ ಮಾರುಕಟ್ಟೆಗೆ ಭೂ ಸ್ವಾಧೀನದನ್ವಯ 11 ಎಕರೆ 31 ಗುಂಟೆ ಜಮೀನನ್ನು ದಿನಾಂಕ 29-12-2004 ರಂದು ಪಡೆಯಲಾಗಿದೆ. ಸದರಿ ಜಮೀನಿನ ಲೇಔಟ್ ನಕ್ಷೆಯನ್ನು ತಯಾರಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅಭಿವೃದ್ಧಿ ಕಾಮಗಾರಿಗಳನ್ನು ಶೀಘ್ರವಾಗಿ ಪ್ರಾರಂಭಿಸಲಾಗುವುದು.

ಆ) ಉಪ ಮಾರುಕಟ್ಟೆ ಅಭಿವೃದ್ಧಿಯನ್ನು ಹಂತ ಹಂತವಾಗಿ ಕೈಗೊಳ್ಳಲಾಗುವುದು.

ಇ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಪ್ರಾಂಗಣದ ಒಳಗಡೆ ರಸ್ತೆ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿ ಕೈಗೊಳ್ಳಲಾಗುತ್ತದೆ. ಪ್ರಾಂಗಣದ ಹೊರಗಡೆ ಇರುವ ಗ್ರಾಮೀಣ ಸಂಪರ್ಕ ರಸ್ತೆಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರಾಟ ನಿಯಂತ್ರಣ ನಿಯಮಾವಳಿ 1968ರ ನಿಯಮ 60 ಗಳನ್ವಯ ಹಾಗೂ ಸಮಿತಿಯ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಕೈಗೊಳ್ಳಲಾಗುತ್ತಿದೆ.

ಈ) ಹಣಕಾಸಿನ ಲಭ್ಯತೆಯ ಮೇರೆಗೆ ಅವಶ್ಯಕತೆ ಮತ್ತು ಆದ್ಯತೆ ಮೇರೆಗೆ ರಸ್ತೆಗಳನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಕೈಗೊಳ್ಳಲಾಗುವುದು.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಎ.ಪಿ.ಎಂ.ಸಿ. ಗಳವಾರು ಆಧಾರದ ಗುರಿಯ ಮೊತ್ತದ ಮೇಲೆ ನಿಯಮ 60ಸಿ ಯಂತೆ ನಿಗದಿಪಡಿಸಿರುವ ಮೊತ್ತಕ್ಕೆ ಅನುಗುಣವಾಗಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಋ) ಪ್ರಸ್ತುತ ಸಾಲಿನಲ್ಲಿ ಕಿತ್ತೂರು ಉಪ ಮಾರುಕಟ್ಟೆ ಕ್ಷೇತ್ರದಲ್ಲಿ ರಸ್ತೆ ಸುಧಾರಣೆ ಕಾಮಗಾರಿಗಳನ್ನು ಸಮಿತಿಯು ಇದುವರೆವಿಗೂ ಕೈಗೆತ್ತಿಕೊಳ್ಳಲು ನಿರ್ಣಯ ಕೈಗೊಂಡಿರುವುದಿಲ್ಲ.

ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.

Annxeure-1

Sl. No.	Name of the Works	Amount in Lakhs Rs.
1.	Belgaum	30.00
2.	Bailahongal	5.00
3.	Gokak	5.00
4.	Athani	5.00
5.	Kudchi	5.00
6.	Nadagada	5.00
7.	Nippani	5.00
8.	Ramadurga	5.00
9.	Sankeshwara	5.00
10.	Saundatti	5.00
	Total	**75.00**

Annexure -II

Sl. No.	Name of the Works
1.	Improvements of road from Hoolikote to Bekawada Belowadi (Near Khadrahalli (3.00 K.M.)
2.	Formation of Road goes to Shivanoor Melyala village road
3.	Formation of Road goes to Destikoppa village Road
4.	Improvement to Neginahala Malyanokoppa road (0.00 K.M. to 1.20 K.M.)
5.	Improvement to Dindalakoppa - Siddapura Road (1.50 K.M.)
6.	Improvement to Katridaddi Sagar Comeesing
7.	Improvement to Road to Bavihal - Yaraguddi vilalge road
8.	Formation of M.K. Hubli Deveated Road (1.50 K.M.)
9.	Formation of Mohare village road through burial ground road (1.00 K.M.)
10.	Formation of Margeri Shivanur Village Road
11.	Formation of Kadarhalli - Hoolikatte Road
12.	Improvement to Sampagav-Yadla Road

567(1082) ಶ್ರೀ ಮರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳೆ ವಿಮೆ ಯೋಜನೆಯನ್ನು ಯಾವ ಯಾವ ಬೆಳೆಗಳಿಗೆ ಅನ್ವಯಿಸಲಾಗಿರುತ್ತದೆ (ಜಿಲ್ಲಾವಾರು ಮಾಹಿತಿ ಒದಗಿಸುವುದು);

ಆ) ಸದರಿ ಬೆಳೆಗಳ ಜೊತೆಗೆ ಉಳಿದ ಬೇರೆ ಬೆಳೆಗಳನ್ನೂ ಪರಿಗಣಿಸಲು (ಬೆಳೆ ವಿಮೆಗಾಗಿ) ಕಾನೂನು ರೂಪಿಸಲು ಕರ್ನಾಟಕ ಸರ್ಕಾರ ಉದ್ದೇಶಿಸಿದೆಯೇ;

ಇ) ಹಾಗಿದ್ದಲ್ಲಿ, ಯಾವ ಯಾವ ಬೆಳೆಗಳಿಗೆ ಉದ್ದೇಶಿಸಲಾಗಿದೆ;

ಈ) ಈಗಾಗಲೇ ನಿಗದಿಪಡಿಸಿರುವಂತೆ ಬೆಳೆ ವಿಮೆಯು ಸರಿಯಾಗಿ ರೈತರಿಗೆ ವಿತರಣೆಯಾಗುತ್ತಿಲ್ಲವೆಂಬ ದೂರಿನ ಬಗ್ಗೆ ಸರ್ಕಾರದ ನಿಲುವೇನು;

ಉ) ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಬೆಳೆ ವಿಮಾ ಯೋಜನೆಯಡಿ ಆಹಾರ, ಎಣ್ಣೆ ಕಾಳು ಮತ್ತು ವಾಣಿಜ್ಯ ಮತ್ತು ತೋಟಗಾರಿಕೆ ಬೆಳೆಗಳನ್ನು ಅಳವಡಿಸಬಹುದಾಗಿದೆ. 2005-06ನೇ ಸಾಲಿನ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಅಧಿಸೂಚಿಸಲಾದ ಬೆಳೆಗಳ ವಿವರಗಳನ್ನು ಅನುಬಂಧ-1ರಲ್ಲಿ ಹಾಗೂ ಅಧಿಸೂಚಿಸಲಾದ ಬೆಳೆಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಆ) ಧೀರ್ಘಕಾಲಿಕ ತೋಟಗಾರಿಕಾ ಬೆಳೆಗಳನ್ನು ಸಹ ಬೆಳೆ ವಿಮಾ ಯೋಜನೆಯಡಿ ಸೇರ್ಪಡಿಸಿ ಪರಿಗಣಿಸಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ.

ಇ) ದೀರ್ಘಕಾಲಿಕ ತೋಟಗಾರಿಕಾ ಬೆಳೆಗಳಾದ ದ್ರಾಕ್ಷಿ, ಮಾವು, ಸೀಬೆ, ಸಪೋಟ, ತೆಂಗು ಮತ್ತು ಅಡಿಕೆ ಇತ್ಯಾದಿ ಬೆಳೆಗಳನ್ನು ಕೇಂದ್ರ ಸರ್ಕಾರವು ಅನುಮತಿ ನೀಡಿದಲ್ಲಿ ಮುಂದಿನ ಹಂಗಾಮುಗಳಲ್ಲಿ ಬೆಳೆ ವಿಮಾ ಯೋಜನೆಯ ವ್ಯಾಪ್ತಿಗೆ ತರಲಾಗುವುದು.

ಈ) ಬೆಳೆ ವಿಮಾ ಯೋಜನೆಯಡಿಯಲ್ಲಿ ರೈತರಿಗೆ ಬೆಳೆ ವಿಮಾ ನಷ್ಟ ಪರಿಹಾರವು ವಿತರಣೆಯಾಗುತ್ತಿದೆ. ಕೆಲವು ಜಿಲ್ಲೆಗಳಲ್ಲಿ ಬ್ಯಾಂಕಿನ ಅಧಿಕಾರಿಗಳು 2003ನೇ ಮುಂಗಾರು ಹಂಗಾಮಿನಲ್ಲಿ ದಾಖಲಾತಿಗಳನ್ನು ತನಿಖೆಯ ಸಮಯದಲ್ಲಿ ಒದಗಿಸದ ಕಾರಣ ಸುಮಾರು 9154 ರೈತರುಗಳ ಬೆಳೆ ವಿಮಾ ನಷ್ಟ ಪರಿಹಾರ ತಡೆಹಿಡಿಯಲಾಗಿದೆ.

ಉ) ತಡೆಹಿಡಿಯಲಾದ ಪ್ರಕರಣಗಳಲ್ಲಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಶೀಘ್ರದಲ್ಲೇ ತನಿಖೆ ಪೂರ್ಣಗೊಳಿಸಿ ಬಿಡುಗಡೆ ಮಡಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಅನುಬಂಧ – 1

2004ರ ಮುಂಗಾರು ಹಂಗಾಮಿನಲ್ಲಿ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿ ರಾಜ್ಯದಾದ್ಯಂತ ಅನುಷ್ಠಾನಗೊಳಿಸಲಾದ ಬೆಳೆಗಳ ವಿವರ

ಕ್ರ.ಸಂ.	ಬೆಳೆಗಳು	ಕ್ರ.ಸಂ.	ಬೆಳೆಗಳು
1.	ಭತ್ತ (ನೀರಾವರಿ)	18.	ಸೋಯಾ ಅವರೆ (ನೀರಾವರಿ)
2.	ಭತ್ತ (ಮಳೆ ಆಶ್ರಿತ)	19.	ಸೋಯಾ ಅವರೆ (ಮಳೆ ಆಶ್ರಿತ)
3.	ಮುಸುಕಿನ ಜೋಳ (ನೀರಾವರಿ)	20.	ಸೂರ್ಯಕಾಂತಿ (ನೀರಾವರಿ)
4.	ಮುಸುಕಿನ ಜೋಳ (ಮಳೆ ಆಶ್ರಿತ)	21.	ಸೂರ್ಯಕಾಂತಿ (ಮಳೆ ಆಶ್ರಿತ)
5.	ಜೋಳ (ನೀರಾವರಿ)	22.	ಎಳ್ಳು (ಮಳೆ ಆಶ್ರಿತ)
6.	ಜೋಳ (ಮಳೆ ಆಶ್ರಿತ)	23.	ಹರಳು (ಮಳೆ ಆಶ್ರಿತ)
7.	ರಾಗಿ (ನೀರಾವರಿ)	24.	ನೆಲಗಡಲೆ (ಶೇಂಗಾ) (ನೀರಾವರಿ)
8.	ರಾಗಿ (ಮಳೆ ಆಶ್ರಿತ)	25.	ನೆಲಗಡಲೆ (ಶೇಂಗಾ) (ಮಳೆ ಆಶ್ರಿತ)
9.	ಸಜ್ಜೆ (ನೀರಾಪರಿ)	26.	ಹತ್ತಿ (ನೀರಾವರಿ)
10.	ಸಜ್ಜೆ (ಮಳೆ ಆಶ್ರಿತ)	27.	ಹತ್ತಿ (ಮಳೆ ಆಶ್ರಿತ)
11.	ನವಣೆ (ಮಳೆ ಆಶ್ರಿತ)	28.	ಆಲೂಗಡ್ಡೆ (ನೀರಾವರಿ)
12.	ಸಾವೆ (ಮಳೆ ಆಶ್ರಿತ)	29.	ಆಲೂಗಡ್ಡೆ (ಮಳೆ ಆಶ್ರಿತ)
13.	ಉದ್ದು (ಮಳೆ ಆಶ್ರಿತ)	30.	ಈರುಳ್ಳಿ (ನೀರಾವರಿ)
14.	ತೊಗರಿ (ನೀರಾವರಿ)	31.	ಈರುಳ್ಳಿ (ಮಳೆ ಆಶ್ರಿತ)
15.	ತೊಗರಿ (ಮಳೆ ಆಶ್ರಿತ)	32.	ಮೆಣಸಿನಕಾಯಿ (ನೀರಾವರಿ)
16.	ಹೆಸರು (ಮಳೆ ಆಶ್ರಿತ)	33.	ಮೆಣಸಿನಕಾಯಿ (ಮಳೆ ಆಶ್ರಿತ)
17.	ಹುರುಳಿ (ಮಳೆ ಆಶ್ರಿತ)		

2004–05ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿ ರಾಜ್ಯದಾದ್ಯಂತ ಅನುಷ್ಠಾನಗೊಳಿಸಲಾದ ಬೆಳೆಗಳ ವಿವರ

ಕ್ರ.ಸಂ.	ಬೆಳೆಗಳು	ಕ್ರ.ಸಂ.	ಬೆಳೆಗಳು
	2004–05ರ ಹಿಂಗಾರು		
1.	ಭತ್ತ (ನೀರಾವರಿ)	13.	ಹುರುಳಿ (ಮಳೆ ಆಶ್ರಿತ)
2.	ಜೋಳ (ನೀರಾವರಿ)	14.	ಹೆಸರು (ಮಳೆ ಆಶ್ರಿತ)
3.	ಜೋಳ (ಮಳೆ ಆಶ್ರಿತ)	15.	ಅಗಸೆ (ಮಳೆ ಆಶ್ರಿತ)
4.	ರಾಗಿ (ನೀರಾವರಿ)	16.	ಸೂರ್ಯಕಾಂತಿ (ನೀರಾವರಿ)
5.	ರಾಗಿ (ಮಳೆ ಆಶ್ರಿತ)	17.	ಸೂರ್ಯಕಾಂತಿ (ಮಳೆ ಆಶ್ರಿತ)
6.	ಮುಸುಕಿನ ಜೋಳ (ನೀರಾವರಿ)	18.	ಕುಸುಮೆ (ಮಳೆ ಆಶ್ರಿತ)
7.	ಮುಸುಕಿನ ಜೋಳ (ಮಳೆ ಆಶ್ರಿತ)	19.	ಆಲೂಗಡ್ಡೆ (ನೀರಾವರಿ)
8.	ಗೋಧಿ (ನೀರಾವರಿ)		2004–05ರ ಬೇಸಿಗೆ
9.	ಗೋಧಿ (ಮಳೆ ಆಶ್ರಿತ)	1.	ಭತ್ತ (ನೀರಾವರಿ)
10.	ಕಡಲೆ (ನೀರಾವರಿ)	2.	ರಾಗಿ (ನೀರಾವರಿ)
11.	ಕಡಲೆ (ಮಳೆ ಆಶ್ರಿತ)	3.	ನೆಲಗಡಲೆ (ಶೇಂಗಾ) (ನೀರಾವರಿ)
		4.	ಸೂರ್ಯಕಾಂತಿ (ನೀರಾವರಿ)

ಅನುಬಂಧ–2

2004ರ ಮುಂಗಾರು ಹಂಗಾಮಿನಲ್ಲಿ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿಯಲ್ಲಿ ಜಿಲ್ಲಾವಾರು ಅಧಿಸೂಚಿತ ಬೆಳೆಗಳ ವಿವರ

ಕ್ರ. ಸಂ.	ಜಿಲ್ಲೆಯ ಹೆಸರು	ಬೆಳೆಗಳ ಹೆಸರು
1.	ಬೆಂಗಳೂರು (ನಗರ)	ಭತ್ತ (ನೀ), ರಾಗಿ (ಮ.ಆ.)
2.	ಬೆಂಗಳೂರು (ಗ್ರಾ)	ಭತ್ತ (ನೀ. ಮತ್ತು ಮ.ಆ.), ಮುಸುಕಿನ ಜೋಳ (ನೀ. ಮತ್ತು ಮ.ಆ.), ರಾಗಿ (ನೀ. ಮತ್ತು ಮ.ಆ.), ತೊಗರಿ (ಮ.ಆ.), ಹುರುಳಿ (ಮ.ಆ.), ಹರಳು (ಮ.ಆ.), ನೆಲಗಡಲೆ (ಮ.ಆ.),
3.	ಬಾಗಲಕೋಟೆ	ಮುಸುಕಿನ ಜೋಳ (ನೀ), ಜೋಳ (ನೀ), ಸಜ್ಜೆ (ನೀ ಮತ್ತು ಮ.ಆ.), ತೊಗರಿ (ನೀ. ಮತ್ತು ಮ.ಆ.), ಹೆಸರು (ಮ.ಆ.), ಹುರುಳಿ (ಮ.ಆ.), ಸೋಯಾ ಅವರೆ (ನೀ),

1	2	3
		ಸೂರ್ಯಕಾಂತಿ (ನೀ. ಮತ್ತು ಮ.ಆ.), ನೆಲಗಡಲೆ (ನೀ. ಮತ್ತು ಮ.ಆ.), ಹತ್ತಿ (ನೀ. ಮತ್ತು ಮ.ಆ.), ಈರುಳ್ಳಿ (ನೀ. ಮತ್ತು ಮ.ಆ.),
4.	ಬೆಳಗಾವಿ	ಭತ್ತ (ನೀ. ಮತ್ತು ಮ.ಆ.), ಮುಸುಕಿನ ಜೋಳ (ನೀ. ಮತ್ತು ಮ.ಆ.), ಜೋಳ (ನೀ. ಮತ್ತು ಮ.ಆ.), ರಾಗಿ (ನೀ) ಸಜ್ಜೆ (ಮ.ಆ.), ನವಣೆ (ಮ.ಆ.), ಸಾವೆ (ಮ.ಆ.), ಉದ್ದು (ಮು.ಆ.), ತೊಗರಿ (ನೀ ಮತ್ತು ಮ.ಆ.), ಹೆಸರು (ಮ.ಆ.), ಹುರುಳಿ (ಮ.ಆ.), ಸೋಯಾ ಅವರೆ (ನೀ.), ಸೂರ್ಯಕಾಂತಿ (ನೀ ಮತ್ತು ಮ.ಆ.), ನೆಲಗಡಲೆ (ನೀ ಮತ್ತು ಮ.ಆ.), ಹತ್ತಿ (ನೀ ಮತ್ತು ಮ.ಆ.), ಈರುಳ್ಳಿ (ನೀ ಮತ್ತು ಮ.ಆ.),
5.	ಬಳ್ಳಾರಿ	ಭತ್ತ (ನೀ.), ಮುಸುಕಿನ ಜೋಳ (ನೀ ಮತ್ತು ಮ.ಆ.), ಜೋಳ (ನೀ ಮತ್ತು ಮ.ಆ.), ರಾಗಿ (ನೀ ಮತ್ತು ಮಳೆ (ಆಶ್ರಿತ), ಸಜ್ಜೆ (ನೀ ಮತ್ತು ಮ.ಆ.), ನವಣೆ (ಮ.ಆ.), ತೊಗರಿ (ನೀ ಮತ್ತು ಮ.ಆ.), ಹೆಸರು (ಮ.ಆ.), ಹುರುಳಿ (ಮ.ಆ.), ಎಳ್ಳು (ಮ.ಆ.), ಸೂರ್ಯಕಾಂತಿ (ನೀ ಮತ್ತು ಮ.ಆ.); ನೆಲಗಡಲೆ (ನೀ ಮತ್ತು ಮ.ಆ.), ಹತ್ತಿ (ನೀ ಮತ್ತು ಮ.ಆ.), ಈರುಳ್ಳಿ (ನೀ ಮತ್ತು ಮ.ಆ.), ಮೆಣಸಿನಕಾಯಿ (ನೀ.)
6.	ಬೀದರ್	ಭತ್ತ (ನೀ ಮತ್ತು ಮ.ಆ.), ಜೋಳ (ಮ.ಆ.), ಸಜ್ಜೆ (ಮ.ಆ.), ಉದ್ದು (ಮ.ಆ.), ತೊಗರಿ (ಮ.ಆ.), ಹೆಸರು (ಮ.ಆ.), ಸೋಯಾ ಅವರೆ (ಮ.ಆ.), ಎಳ್ಳು (ಮ.ಆ.), ಸೂರ್ಯಕಾಂತಿ (ಮ.ಆ.), ನೆಲಗಡಲೆ (ಮ.ಆ.), ಹತ್ತಿ (ಮ.ಆ.),

1	2	3
7.	ಬಿಜಾಪುರ	ಮುಸುಕಿನ ಜೋಳ (ನೀ ಮತ್ತು ಮ.ಆ.), ಜೋಳ (ನೀ.) ಸಜ್ಜೆ (ನೀ ಮತ್ತು ಮ.ಆ.), ತೊಗರಿ (ನೀ ಮತ್ತು ಮ.ಆ.), ಹೆಸರು (ಮ.ಆ.), ಹುರುಳಿ (ಮ.ಆ.), ಸೂರ್ಯಕಾಂತಿ (ನೀ ಮತ್ತು ಮ.ಆ.), ನೆಲಗಡಲೆ (ನೀ ಮತ್ತು ಮ.ಆ.), ಹತ್ತಿ (ನೀ.), ಈರುಳ್ಳಿ (ನೀ ಮತ್ತು ಮ.ಆ.), ಮೆಣಸಿನಕಾಯಿ (ನೀ.)
8.	ಚಾಮರಾಜನಗರ	ಭತ್ತ (ನೀ.), ಮುಸುಕಿನ ಜೋಳ (ನೀ ಮತ್ತು ಮ.ಆ.), ರಾಗಿ (ನೀ ಮತ್ತು ಮ.ಆ.), ಜೋಳ (ಮ.ಆ.), ಉದ್ದು (ಮ.ಆ.), ಹೆಸರು (ಮ.ಆ.), ಹುರುಳಿ (ಮ.ಆ.), ಎಳ್ಳು (ಮ.ಆ.), ಸೂರ್ಯಕಾಂತಿ (ಮ.ಆ.,) ನೆಲಗಡಲೆ (ಮ.ಆ.), ಹತ್ತಿ (ಮ.ಆ.)
9.	ಚಿಕ್ಕಮಗಳೂರು	ಭತ್ತ (ನೀ ಮತ್ತು ಮ.ಆ.), ಜೋಳ (ಮ.ಆ.), ರಾಗಿ (ಮ.ಆ.), ಹೆಸರು (ಮ.ಆ.), ಹುರುಳಿ (ಮ.ಆ.) ಎಳ್ಳು (ಮ.ಆ.), ಸೂರ್ಯಕಾಂತಿ (ಮ.ಆ.), ನೆಲಗಡಲೆ (ಮ.ಆ.), ಆಲೂಗಡ್ಡೆ (ಮ.ಆ.), ಈರುಳ್ಳಿ (ಮ.ಆ.), ಮೆಣಸಿನಕಾಯಿ (ಮ.ಆ.),
10.	ಚಿತ್ರದುರ್ಗ	ಭತ್ತ (ನೀ,), ಮುಸುಕಿನ ಜೋಳ (ನೀ ಮತ್ತು ಮ.ಆ.), ಜೋಳ (ನೀ ಮತ್ತು ಮ.ಆ.), ರಾಗಿ (ನೀ ಮತ್ತು ಮ.ಆ.), (ಸಜ್ಜೆ) (ಮ.ಆ.), ನವಣೆ (ಮ.ಆ.), ಸಾವೆ (ಮ.ಆ.), ತೊಗರಿ (ಮ.ಆ.) ಹೆಸರು (ಮ.ಆ.), ಹುರುಳಿ (ಮ.ಆ.), ಸೂರ್ಯಕಾಂತಿ (ನೀ ಮತ್ತು ಮ.ಆ.), ನೆಲಗಡಲೆ (ನೀ ಮತ್ತು ಮ.ಆ.), ಹತ್ತಿ (ನೀ.), ಈರುಳ್ಳಿ (ನೀ ಮತ್ತು ಮ.ಆ.), ಮೆಣಸಿನಕಾಯಿ (ನೀ ಮತ್ತು ಮ.ಆ.)
11.	ದಕ್ಷಿಣ ಕನ್ನಡ	ಭತ್ತ (ಮ.ಆ.)

1	2	3
12.	ದಾವಣಗೆರೆ	ಭತ್ತ (ನೀ), ಮುಸುಕಿನ ಜೋಳ (ನೀ ಮತ್ತು ಮ.ಆ.), ಜೋಳ (ನೀ ಮತ್ತು ಮ.ಆ.), ರಾಗಿ (ನೀ ಮತ್ತು ಮ.ಆ.), ಸಜ್ಜೆ (ಮ.ಆ.), ನವಣೆ (ಮ.ಆ.), ಸಾವೆ (ಮ.ಆ.), ತೊಗರಿ (ಮ.ಆ.), ಹೆಸರು (ಮ.ಆ.), ಹುರುಳಿ (ಮ.ಆ), ಎಳ್ಳು (ಮ.ಆ.), ಸೂರ್ಯಕಾಂತಿ (ನೀ ಮತ್ತು ಮ.ಆ.), ನೆಲಗಡಲೆ (ಮ.ಆ.), ಹತ್ತಿ (ಮ.ಆ), ಈರುಳ್ಳಿ (ನೀ ಮತ್ತು ಮ.ಆ.), ಮೆಣಸಿನಕಾಯಿ (ಮ.ಆ.)
13.	ಧಾರವಾಡ	ಭತ್ತ (ನೀ ಮತ್ತು ಮ.ಆ.), ಮುಸುಕಿನ ಜೋಳ (ನೀ ಮತ್ತು ಮ.ಆ.), ಜೋಳ (ಮ.ಆ.), ಸಾವೆ (ಮ.ಆ.), ತೊಗರಿ (ಮ.ಆ.), ಹೆಸರು (ಮ.ಆ.), ಹುರುಳಿ (ಮ.ಆ.), ಸೋಯಾಅವರೆ (ಮ.ಆ.), ನೆಲಗಡಲೆ (ಮ.ಆ., ಹತ್ತಿ (ಮ.ಆ), ಆಲೂಗಡ್ಡೆ (ಮ.ಆ.), ಈರುಳ್ಳಿ (ಮ.ಆ.), ಮೆಣಸಿನಕಾಯಿ (ಮ.ಆ.),
14.	ಗದಗ	ಭತ್ತ (ನೀ.), ಮುಸುಕಿನ ಜೋಳ (ನೀ ಮತ್ತು ಮ.ಆ.), ಜೋಳ (ನೀ ಮತ್ತು ಮ.ಆ.), ಸಜ್ಜೆ (ಮ.ಆ.), ನವಣೆ (ಮ.ಆ.), ತೊಗರಿ (ಮ.ಆ), ಹೆಸರು (ಮ.ಆ), ಹುರುಳಿ (ಮ.ಆ.), ಎಳ್ಳು (ಮ.ಆ), ಸೂರ್ಯಕಾಂತಿ (ನೀ ಮತ್ತು ಮ.ಆ.), ನೆಲಗಡಲೆ (ನೀ ಮತ್ತು ಮ.ಆ.), ಹತ್ತಿ (ನೀ ಮತ್ತು ಮ.ಆ.), ಈರುಳ್ಳಿ (ನೀ ಮತ್ತು ಮ.ಆ.), ಮೆಣಸಿನಕಾಯಿ (ಮ.ಆ),
15.	ಗುಲ್ಬರ್ಗಾ	ಭತ್ತ (ನೀ ಮತ್ತು ಮ.ಆ.), ಜೋಳ (ಮ.ಆ.), ಸಜ್ಜೆ (ನೀ ಮತ್ತು ಮ.ಆ.), ಸಾವೆ (ಮ.ಆ.), ಉದ್ದು (ಮ.ಆ), ತೊಗರಿ (ನೀ ಮತ್ತು ಮ.ಆ.), ಹೆಸರು (ಮ.ಆ), ಎಳ್ಳು (ಮ.ಆ.), ಸೂರ್ಯಕಾಂತಿ(ನೀ ಮತ್ತು ಮ.ಆ.), ನೆಲಗಡಲೆ (ನೀ ಮತ್ತು ಮ.ಆ.), ಹತ್ತಿ (ನೀ ಮತ್ತು ಮ.ಆ.), ಮೆಣಸಿನಕಾಯಿ (ನೀ.)

1	2	3
16.	ಹಾಸನ	ಭತ್ತ (ನೀ ಮತ್ತು ಮ.ಆ.), ಮುಸುಕಿನ ಜೋಳ (ಮ.ಆ.), ಜೋಳ (ಮ.ಆ.), ರಾಗಿ (ಮ.ಆ.), ತೊಗರಿ (ಮ.ಆ.), ಹೆಸರು (ಮ.ಆ.), ಹುರುಳಿ (ಮ.ಆ), ಎಳ್ಳು (ಮ.ಆ), ಸೂರ್ಯಕಾಂತಿ (ಮ.ಆ.), ಹರಳು (ಮ.ಆ), ಹತ್ತಿ (ಮ.ಆ), ಆಲೂಗಡ್ಡೆ (ನೀ ಮತ್ತು ಮ.ಆ.),
17.	ಹಾವೇರಿ	ಭತ್ತ (ನೀ ಮತ್ತು ಮ.ಆ.), ಮುಸುಕಿನ ಜೋಳ (ನೀ ಮತ್ತು ಮ.ಆ.), ಜೋಳ (ನೀ ಮತ್ತು ಮ.ಆ.), ರಾಗಿ (ಮ.ಆ.), ನವಣೆ (ಮ.ಆ), ಸಾವೆ (ಮ.ಆ), ತೊಗರಿ (ಮ.ಆ), ಹೆಸರು (ಮ.ಆ.), ಸೋಯಾಅವರೆ (ಮ.ಆ), ಎಳ್ಳು (ಮ.ಆ.), ಸೂರ್ಯಕಾಂತಿ (ನೀ ಮತ್ತು ಮ.ಆ.), ನೆಲಗಡಲೆ (ಮ.ಆ), ಹತ್ತಿ (ನೀ ಮತ್ತು ಮ.ಆ.), ಈರುಳ್ಳಿ (ನೀ ಮತ್ತು ಮ.ಆ.), ಮೆಣಸಿನಕಾಯಿ (ಮ.ಆ).
18.	ಕೊಡಗು	ಭತ್ತ (ನೀ ಮತ್ತು ಮ.ಆ.), ಮುಸುಕಿನ ಜೋಳ (ಮ.ಆ.)
19.	ಕೋಲಾರ	ಭತ್ತ (ನೀ ಮತ್ತು ಮ.ಆ.), ಮುಸುಕಿನ ಜೋಳ (ನೀ ಮತ್ತು ಮ.ಆ.), ರಾಗಿ (ನೀ ಮತ್ತು ಮ.ಆ.), ಸಾವೆ (ಮ.ಆ.), ತೊಗರಿ (ಮ.ಆ), ಹುರುಳಿ (ಮ.ಆ.), ನೆಲಗಡಲೆ (ಮ.ಆ.), ಈರುಳ್ಳಿ (ನೀ.)
20.	ಕೊಪ್ಪಳ	ಭತ್ತ (ನೀ.), ಮುಸುಕಿನ ಜೋಳ (ನೀ ಮತ್ತು ಮ.ಆ.), ಜೋಳ (ನೀ ಮತ್ತು ಮ.ಆ.), ಸಜ್ಜೆ (ನೀ ಮತ್ತು ಮ.ಆ.), ನವಣೆ (ಮ.ಆ.), ತೊಗರಿ (ಮ.ಆ.), ಹೆಸರು (ಮ.ಆ.), ಹುರುಳಿ (ಮ.ಆ.), ಎಳ್ಳು (ಮ.ಆ.), ಸೂರ್ಯಕಾಂತಿ (ನೀ ಮತ್ತು ಮ.ಆ.), ಹರಳು (ಮ.ಆ.), ನೆಲಗಡಲೆ (ನೀ ಮತ್ತು ಮ.ಆ.), ಹತ್ತಿ (ಮ.ಆ.)

1	2	3
21.	ಮಂಡ್ಯ	ಭತ್ತ (ನೀ.), ಮುಸುಕಿನ ಜೋಳ (ನೀ ಮತ್ತು ಮ.ಆ.), ರಾಗಿ (ನೀ ಮತ್ತು ಮ.ಆ.), ಎಳ್ಳು (ಮ.ಆ.), ಹುರುಳಿ (ಮ.ಆ.), ನೆಲಗಡಲೆ (ಮ.ಆ.)
22.	ಮೈಸೂರು	ಭತ್ತ (ನೀ.) ಮುಸುಕಿನ ಜೋಳ (ಮ.ಆ.), ಜೋಳ (ಮ.ಆ.), ರಾಗಿ (ನೀ ಮತ್ತು ಮ.ಆ.), ಉದ್ದು (ಮ.ಆ.), ತೊಗರಿ (ಮ.ಆ.), ಹೆಸರು(ಮ.ಆ.), ಹುರುಳಿ (ಮ.ಆ.), ಎಳ್ಳು (ಮ.ಆ.), ಸೂರ್ಯಕಾಂತಿ (ಮ.ಆ.), ಹರಳು (ಮ.ಆ.), ನೆಲಗಡಲೆ (ಮ.ಆ.), ಹತ್ತಿ (ಮ.ಆ.)
23.	ರಾಯಚೂರು	ಭತ್ತ (ನೀ ಮತ್ತು ಮ.ಆ.), ಜೋಳ (ನೀ ಮತ್ತು ಮ.ಆ.), ಸಜ್ಜೆ (ನೀ ಮತ್ತು ಮ.ಆ.), ತೊಗರಿ (ಮ.ಆ.), ಹಸರು (ಮ.ಆ.), ಹುರುಳಿ (ಮ.ಆ.), ಎಳ್ಳು (ಮ.ಆ.), ಸೂರ್ಯಕಾಂತಿ (ನೀ ಮತ್ತು ಮ.ಆ.), ನೆಲಗಡಲೆ (ನೀ ಮತ್ತು ಮ.ಆ.), ಹತ್ತಿ (ನೀ ಮತ್ತು ಮ.ಆ.), ಮೆಣಸಿನಕಾಯಿ (ನೀ ಮತ್ತು ಮ.ಆ.),
24.	ಶಿವಮೊಗ್ಗ	ಭತ್ತ (ನೀ ಮತ್ತು ಮ.ಆ.), ಮುಸುಕಿನ ಜೋಳ (ನೀ ಮತ್ತು ಮ.ಆ.), ಜೋಳ (ಮು.ಆ.), ರಾಗಿ (ಮ.ಆ.), ನೆಲಗಡಲೆ (ಮ.ಆ.), ಹತ್ತಿ (ಮ.ಆ.)
25.	ತುಮಕೂರು	ಭತ್ತ (ನೀ ಮತ್ತು ಮ.ಆ.), ಮುಸುಕಿನ ಜೋಳ (ನೀ ಮತ್ತು ಮ.ಆ.), ಜೋಳ (ಮ.ಆ.), ರಾಗಿ (ನೀ ಮತ್ತು ಮ.ಆ.), ಸಜ್ಜೆ (ಮ.ಆ.), ನವಣೆ (ಮ.ಆ.), ಸಾವೆ (ಮ.ಆ.), ತೊಗರಿ (ಮ.ಆ.), ಹೆಸರು (ಮ.ಆ.), ಹುರುಳಿ (ಮ.ಅ.), ಸೂರ್ಯಕಾಂತಿ (ನೀ ಮತ್ತು ಮ.ಆ.), ಹರಳು (ಮ.ಆ.), ನೆಲಗಡಲೆ (ಮ.ಆ.), ಮೆಣಸಿನಕಾಯಿ (ನೀ ಮತ್ತು ಮ.ಆ.),
26.	ಉಡುಪಿ	ಭತ್ತ (ಮ.ಆ.)
27.	ಉತ್ತರ ಕನ್ನಡ	ಭತ್ತ (ನೀ ಮತ್ತು ಮ.ಆ.), ಹತ್ತಿ (ಮ.ಆ.)

2004ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿಯಲ್ಲಿ ಜಿಲ್ಲಾವಾರು ಅಧಿಸೂಚಿತ ಬೆಳೆಗಳ ವಿವರ

ಕ್ರ. ಸಂ.	ಜಿಲ್ಲೆಯ ಹೆಸರು	ಹಿಂಗಾರು ಬೆಳೆಗಳು	ಬೇಸಿಗೆ ಬೆಳೆಗಳು
1.	ಬೆಂಗಳೂರು (ನಗರ)	ಹುರುಳಿ (ಮ.ಆ.)	–
2.	ಬೆಂಗಳೂರು (ಗ್ರಾ)	ಹುರುಳಿ (ಮ.ಆ.) ಆಲೂಗಡ್ಡೆ (ನೀ)	–
3.	ಬಾಗಲಕೋಟೆ	ಜೋಳ (ನೀ ಮತ್ತು ಮ.ಆ.) ಮುಸುಕಿನ ಜೋಳ (ನೀ.) ಗೋಧಿ (ನೀ ಮತ್ತು ಮ.ಆ.), ಕಡಲೆ (ನೀ ಮತ್ತು ಮ.ಆ.), ಹುರುಳಿ (ಮ.ಆ.), ಅಗಸೆ (ಮ.ಆ.), ಸೂರ್ಯಕಾಂತಿ (ನೀ ಮತ್ತು ಮ.ಆ.), ಕುಸುಮೆ (ಮ.ಆ.)	ನೆಲಗಡಲೆ (ನೀ) ಸೂರ್ಯಕಾಂತಿ (ನೀ.)
4.	ಬೆಳಗಾವಿ	ಜೋಳ (ನೀ ಮತ್ತು ಮ.ಆ.) ಮುಸುಕಿನ ಜೋಳ (ನೀ ಮತ್ತು ಮ.ಆ.), ಗೋಧಿ (ನೀ ಮತ್ತು ಮ.ಆ.), ಕಡಲೆ (ನೀ ಮತ್ತು ಮ.ಆ.) ಹುರುಳಿ (ಮ.ಆ.), ಅಗಸೆ (ಮ.ಆ.), ಸೂರ್ಯಕಾಂತಿ (ನೀ ಮತ್ತು ಮ.ಆ.) ಕುಸುಮೆ (ಮ.ಆ.)	ನೆಲಗಡಲೆ (ನೀ.) ಸೂರ್ಯಕಾಂತಿ (ನೀ.)
5.	ಬಳ್ಳಾರಿ	ಜೋಳ (ನೀ ಮತ್ತು ಮ.ಆ.) ಮುಸುಕಿನ ಜೋಳ (ನೀ. ಮತ್ತು ಮ.ಆ.) ಕಡಲೆ (ನೀ ಮತ್ತು ಮ.ಆ.) ಹುರುಳಿ (ಮ.ಆ.), ಸೂರ್ಯಕಾಂತಿ (ನೀ ಮತ್ತು ಮ.ಆ.) ಕುಸುಮೆ (ಮ.ಆ.)	ಭತ್ತ (ನೀ.) ನೆಲಗಡಲೆ (ನೀ.) ಸೂರ್ಯಕಾಂತಿ (ನೀ.)

1	2	3	4
6.	ಬೀದರ್	ಜೋಳ (ಮ.ಆ.), ಗೋದಿ (ನೀ. ಮತ್ತು ಮ.ಆ.) ಕಡಲೆ (ನೀ. ಮತ್ತು ಮ.ಆ.) ಸೂರ್ಯಕಾಂತಿ (ಮ.ಆ.), ಕುಸುಮೆ (ಮ.ಆ.)	
7.	ಬಿಜಾಪುರ	ಜೋಳ (ನೀ. ಮತ್ತು ಮ.ಆ.), ಮುಸುಕಿನ ಜೋಳ (ನೀ.) ಗೋಧಿ (ನೀ. ಮತ್ತು ಮ.ಆ.) ಕಡಲೆ (ನೀ. ಮತ್ತು ಮ.ಆ.) ಹುರುಳಿ (ಮ.ಆ.), ಆಗಸೆ (ಮ.ಆ.) ಸೂರ್ಯಕಾಂತಿ (ನೀ. ಮತ್ತು ಮ.ಆ.) ಕುಸುಮೆ (ಮ.ಆ.)	ನೆಲಗಡಲೆ (ನೀ.), ಸೂರ್ಯಕಾಂತಿ (ನೀ.)
8.	ಚಾಮರಾಜನಗರ	ಭತ್ತ (ನೀ.), ರಾಗಿ (ನೀ.), ಕಡಲೆ (ಮ.ಆ.), ಹುರುಳಿ (ಮ.ಆ.)	ಭತ್ತ (ನೀ.), ರಾಗಿ (ನೀ.)
9.	ಚಿಕ್ಕಮಗಳೂರು	ಜೋಳ (ಮ.ಆ.), ಕಡಲೆ (ಮ.ಆ.), ಹುರುಳಿ (ಮ.ಆ.)	ಭತ್ತ (ನೀ.), ನೆಲಗಡಲೆ (ನೀ.)
10.	ಚಿತ್ರದುರ್ಗ	ಜೋಳ (ಮ.ಆ.), ಮುಸುಕಿನ ಜೋಳ (ನೀ. ಮತ್ತು ಮ.ಆ.) ಕಡಲೆ (ಮ.ಆ.), ಹುರುಳಿ (ಮ.ಆ.), ಸೂರ್ಯಕಾಂತಿ (ನೀ. ಮತ್ತು ಮ.ಆ.) ಕುಸುಮೆ (ಮ.ಆ.)	ಭತ್ತ (ನೀ), ರಾಗಿ (ನೀ.) ನೆಲಗಡಲೆ (ನೀ.) ಸೂರ್ಯಕಾಂತಿ (ನೀ.)
11.	ದಕ್ಷಿಣ ಕನ್ನಡ	ಭತ್ತ (ನೀ.) ಉದ್ದು (ಮ.ಆ.)	ಭತ್ತ (ನೀ.)
12.	ದಾವಣಗೆರೆ	ಜೋಳ (ನೀ. ಮತ್ತು ಮ.ಆ.) ಹುರುಳಿ (ಮ.ಆ.), ಸೂರ್ಯಕಾಂತಿ (ನೀ. ಮತ್ತು ಮ.ಆ.)	ಭತ್ತ (ನೀ.) ನೆಲಗಡಲೆ (ನೀ.)

1	2	3	4
13.	ಧಾರವಾಡ	ಜೋಳ (ನೀ. ಮತ್ತು ಮ.ಆ.) ಗೋಧಿ (ನೀ. ಮತ್ತು ಮ.ಆ.) ಕಡಲೆ (ನೀ. ಮತ್ತು ಮ.ಆ.) ಹುರುಳಿ (ಮ.ಆ.), ಹೆಸರು (ಮ.ಆ.), ಸೂರ್ಯಕಾಂತಿ (ನೀ. ಮತ್ತು ಮ.ಆ.) ಕುಸುಮೆ (ಮ.ಆ.)	ನೆಲಗಡಲೆ (ನೀ.)
14.	ಗದಗ	ಜೋಳ (ನೀ. ಮತ್ತು ಮ.ಆ.) ಮುಸುಕಿನ ಜೋಳ (ನೀ. ಮತ್ತು ಮ.ಆ.) ಗೋಧಿ (ನೀ. ಮತ್ತು ಮ.ಆ.) ಕಡಲೆ (ನೀ. ಮತ್ತು ಮ.ಆ.) ಹುರುಳಿ (ಮ.ಆ.) ಅಗಸೆ (ಮ.ಆ.) ಸೂರ್ಯಕಾಂತಿ (ನೀ. ಮತ್ತು ಮ.ಆ.) ಕುಸಮೆ (ಮ.ಆ.)	ನೆಲಗಡಲೆ (ನೀ.) ಸೂರ್ಯಕಾಂತಿ (ನೀ.)
15.	ಗುಲ್ಬರ್ಗಾ	ಭತ್ತ (ನೀ.) ಜೋಳ (ನೀ. ಮತ್ತು ಮ.ಆ.) ಗೋಧಿ (ನೀ. ಮತ್ತು ಮ.ಆ.) ಕಡಲೆ (ನೀ. ಮತ್ತು ಮ.ಆ.) ಹುರುಳಿ (ಮ.ಆ.), ಸೂರ್ಯಕಾಂತಿ (ನೀ. ಮತ್ತು ಮ.ಆ.) ಕುಸುಮೆ (ಮ.ಆ.)	ಭತ್ತ (ನೀ.) ನೆಲಗಡಲೆ (ನೀ.) ಸೂರ್ಯಕಾಂತಿ (ನೀ.)
16.	ಹಾಸನ	ಭತ್ತ (ನೀ.) ಜೋಳ (ಮ.ಆ.) ರಾಗಿ (ಮ.ಆ), ಹುರುಳಿ (ಮ.ಆ.)	ಭತ್ತ (ನೀ.) ನೆಲಗಡಲೆ (ನೀ.)
17.	ಹಾವೇರಿ	ಜೋಳ (ಮ.ಆ.), ಮುಸುಕಿನ ಜೋಳ (ನೀ. ಮತ್ತು ಮ.ಆ.) ಗೋಧಿ (ಮ.ಆ) ಕಡಲೆ (ಮ.ಆ.) ಹುರುಳಿ (ಮ.ಆ.), ಹೆಸರು (ಮ.ಆ)ಸೂರ್ಯಕಾಂತಿ (ನೀ. ಮತ್ತು ಮ.ಆ.) ಕುಸುಮೆ (ಮ.ಆ.)	ಭತ್ತ (ನೀ), ನೆಲಗಡಲೆ (ನೀ.) ಸೂರ್ಯಕಾಂತಿ (ನೀ.)

1	2	3	4
18.	ಕೊಡಗು		
19.	ಕೋಲಾರ	ಹುರುಳಿ (ಮ.ಆ.), ಸೂರ್ಯ ಕಾಂತಿ (ನೀ.) ಅಲೂಗಡ್ಡೆ (ನೀ.)	ಭತ್ತ (ನೀ.) ನೆಲಗಡಲೆ (ನೀ.)
20.	ಕೊಪ್ಪಳ	ಜೋಳ (ನೀ. ಮತ್ತು ಮ.ಆ.) ಗೋಧಿ (ನೀ. ಮತ್ತು ಮ.ಆ.) ಕಡಲೆ (ನೀ. ಮತ್ತು ಮ.ಆ.) ಅಗಸೆ (ಮ.ಆ.), ಸೂರ್ಯಕಾಂತಿ (ನೀ. ಮತ್ತು ಮ.ಆ.) ಕುಸುಮೆ (ಮ.ಆ)	ಭತ್ತ (ನೀ.) ನೆಲಗಡಲೆ (ನೀ.) ಸೂರ್ಯಕಾಂತಿ (ನೀ.)
21.	ಮಂಡ್ಯ	ಭತ್ತ (ನೀ), ರಾಗಿ (ನೀ), ಹುರುಳಿ (ನೀ.)	ಭತ್ತ (ನೀ.) ರಾಗಿ (ನೀ.)
22.	ಮೈಸೂರು	ಭತ್ತ (ನೀ), ಜೋಳ (ಮ.ಆ.), ರಾಗಿ (ಮ.ಅ.) ಮುಸುಕಿನ ಜೋಳ (ಮ.ಆ.) ಹುರುಳಿ (ಮ.ಆ.), ಸೂರ್ಯಕಾಂತಿ (ಮ.ಆ.)	ಭತ್ತ (ನೀ)
23.	ರಾಯಚೂರು	ಭತ್ತ (ನೀ), ಜೋಳ (ನೀ. ಮತ್ತು ಮ.ಆ.) ಗೋಧಿ (ಮ.ಅ.), ಕಡಲೆ (ನೀ. ಮತ್ತು ಮ.ಆ.) ಸೂರ್ಯಕಾಂತಿ (ನೀ. ಮತ್ತು ಮ.ಆ.) ಕುಸುಮೆ (ಮ.ಆ.)	ಭತ್ತ (ನೀ.) ನೆಲಗಡಲೆ (ನೀ.) ಸೂರ್ಯಕಾಂತಿ (ನೀ.)
24.	ಶಿವಮೊಗ್ಗ	ಹೆಸರು (ಮ.ಆ.) ಸೂರ್ಯಕಾಂತಿ (ನೀ. ಮತ್ತು ಮ.ಆ.)	ಭತ್ತ (ನೀ.) ನೆಲಗಡಲೆ (ನೀ.) ಸೂರ್ಯಕಾಂತಿ (ನೀ.)

1	2	3	4
25.	ತುಮಕೂರು	–	ಭತ್ತ (ನೀ), ನೆಲಗಡಲೆ (ನೀ.) ಸೂರ್ಯಕಾಂತಿ (ನೀ.)
26.	ಉಡುಪಿ	ಭತ್ತ (ನೀ.) ಉದ್ದು (ಮ.ಅ.) ಹುರುಳಿ (ಮ.ಆ.)	ಭತ್ತ (ನೀ.)
27.	ಉತ್ತರ ಕನ್ನಡ	ಭತ್ತ (ನೀ)	ಭತ್ತ (ನೀ) ನೆಲಗಡಲೆ (ನೀ.)

568(1258) ಶ್ರೀ ಮರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನಲ್ಲಿ 2003–04ರ ಸಾಲಿನ ಭತ್ತದ ಬೆಳೆ ವಿಮೆಯನ್ನು ಇದುವರೆಗೆ ವಿತರಿಸದೇ ಇರುವುದಕ್ಕೆ ಕಾರಣಗಳೇನು;

ಆ) ಭತ್ತದ ಬೆಳೆ ವಿಮೆ ದೊರೆಯದೆ ರೈತರು ಸಂಕಷ್ಟಕ್ಕೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ರೈತರಿಗೆ ವಿಮೆ ದೊರಯದೇ ಇರುವುದಕ್ಕೆ ಕಾರಣಗಳೇನು?

ಶ್ರೀ ಶ್ರೀನಿವಾಸಗೌಡ ಕೆ. (ಕೃಷಿ ಸಚಿವರು)

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿ ಭತ್ತ (ಮಳೆ ಆಶ್ರಿತ) ಬೆಳೆಯನ್ನು ಕಿತ್ತೂರು ಹೋಬಳಿಯಲ್ಲಿ ಮಾತ್ರ 2003ರ ಮುಂಗಾರು ಹಂಗಾಮಿನಲ್ಲಿ ಅಧಿಸೂಚಿಸಲಾಗಿತ್ತು. ಈ ಬೆಳೆಯ ವಾಸ್ತವಿಕ ಇಳುವರಿಯು ಪ್ರತಿ ಹೆಕ್ಟೇರಿಗೆ 274 ಕೆ.ಜಿ. ಗಳಾಗಿದ್ದು, ಪ್ರಾರಂಭಿಕ ಇಳುವರಿಗಿಂತ (ಪ್ರತಿ ಹೆಕ್ಟೇರಿಗೆ 215 ಕೆ.ಜಿ) ಹೆಚ್ಚಾಗಿದ್ದುದರಿಂದ ಈ ಬೆಳೆಗೆ ವಿಮೆ ಮಾಡಿದಿದ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಅರ್ಹರಿರುವುದಿಲ್ಲ.

ಆ) ಹೌದು.

ಇ) ಭತ್ತ (ಮಳೆ ಆಶ್ರಿತ) ಬೆಳೆಯ ವಾಸ್ತವಿಕ ಇಳುವರಿಯು ಪ್ರಾರಂಭಿಕ ಒಳುವರಿಗಿಂತ ಹೆಚ್ಚಾಗಿರುವುದರಿಂದ ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಕಿತ್ತೂರು ಹೋಬಳಿಯಲ್ಲಿ ಈ ಬೆಳೆ ವಿಮೆ ಮಾಡಿಸಿದ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಅರ್ಹರಿರುವುದಿಲ್ಲ.

569(536) ಶ್ರೀಮತಿ ನಾಗಮಣಿ ಎಂ.ಕೆ. (ಕಿರುಗಾವಲು) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸ್ತ್ರೀಶಕ್ತಿ ಹಾಗೂ ಸ್ವಸಹಾಯ ಸಂಘಗಳಿಗೆ ಸರ್ಕಾರದಿಂದ ಬಿಡುಗಡೆ ಯಾಗಿರುವ ಅನುದಾನ ಎಷ್ಟು (ಕಿರುಗಾವಲು ಕ್ಷೇತ್ರದಲ್ಲಿ);

ಆ) ಸ್ತ್ರೀಶಕ್ತಿ ಗ್ರಾಮೀಣ ಬ್ಯಾಂಕ್ ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ;

ಇ) ಹಾಗಿದ್ದಲ್ಲಿ ಯಾವಾಗ ಸ್ಥಾಪನೆ ಮಾಡಲಾಗುವುದು;

ಈ) ಮಹಿಳೆಯರಿಗಾಗಿ ಸರ್ಕಾರದ ವತಿಯಿಂದ ರೂಪಿಸಲಾದ ಕಾರ್ಯಕ್ರಮಗಳು ಯಾವುದು (ವಿವರ ನೀಡುವುದು)?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಕಿರುಗಾವಲು ವಿಧಾನ ಸಭಾ ಕ್ಷೇತ್ರದಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಗೆ ಸರ್ಕಾರದಿಂದ ಇದುವರೆಗೆ ಬಿಡುಗಡೆಯಾಗಿರುವ ಅನುದಾನ ರೂ.47.42 ಲಕ್ಷಗಳು.

ಆ) ಸ್ತ್ರೀಶಕ್ತಿ ಗ್ರಾಮೀಣ ಬ್ಯಾಂಕ್ ಸ್ಥಾಪನೆ ಬಗ್ಗೆ ಸರ್ಕಾರವು 2003-04ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಲಾಗಿತ್ತು.

ಇ) ಭಾರತೀಯ ರಿಜರ್ವ್ ಬ್ಯಾಂಕ್‌ನಿಂದ ಸ್ತ್ರೀಶಕ್ತಿ ಗ್ರಾಮೀಣ ಬ್ಯಾಂಕ್ ಸ್ಥಾಪಿಸಲು ಅನುಮತಿ ದೊರೆತಿರುವುದಿಲ್ಲ.

ಈ) ಸರ್ಕಾರದ ವತಿಯಿಂದ ಇಲಾಖೆಯಲ್ಲಿ ಈ ಕೆಳಕಂಡ ಕಾರ್ಯಕ್ರಮವನ್ನು ಮಹಿಳೆಯರಿಗಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

1. ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕಾಗಿ ಅನುಷ್ಠಾನಗೊಳಿಸಿರುವ ಸ್ತ್ರೀಶಕ್ತಿ ಯೋಜನೆ.
2. ಸಾಂತ್ವನ
3. ಮಹಿಳಾ ಕಾನೂನು ಪದವೀಧರರಿಗಾಗಿ ಆರ್ಥಿಕ ಸಹಾಯ
4. ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳಿಗೆ ಹಾಜರಾಗಿ ಶಿಷ್ಯವೇತನ.
5. ವೃತ್ತಿ ತರಬೇತಿ ಪಡೆದ ಮಹಿಳೆಯರಿಗೆ ಸಹಾಯಧನ.
6. ಹೆಣ್ಣುಮಕ್ಕಳ ವಸತಿ ನಿಲಯ
7. ಉದ್ಯೋಗಸ್ಥ ಮಹಿಳೆಯರಿಗೆ ವಸತಿ ಕಟ್ಟಡ ನಿರ್ಮಾಣ
8. ಶಿಶು ಪಾಲನ ಗೃಹ
9. ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆಯಡಿ 26 ಇಲಾಖೆಗಳಲ್ಲಿ 1/3 ಭಾಗ ಫಲಾನುಭವಿ ಆಧಾರಿತ ಕಾರ್ಯಕ್ರಮಗಳಲ್ಲಿ ಸೌಲಭ್ಯಗಳನ್ನು ಒದಗಿಸುವುದು.
10. ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗಾಗಿ ಉದ್ಯೋಗಿನಿ ಯೋಜನೆ
11. ದೇವದಾಸಿಯರ ಪುನರ್ವಸತಿಗಾಗಿ ದೇವದಾಸಿ ಪುನರ್ವಸತಿ ಯೋಜನೆ

12. ಕೌಶಲ್ಯ ಅಭಿವೃದ್ಧಿ ತರಬೇತಿಗಾಗಿ ಮಹಿಳಾ ತರಬೇತಿ ಯೋಜನೆ

13. ಮಹಿಳಾ ಉದ್ದಿಮೆದಾರರು ತಯಾರಿಸುವ ವಸ್ತುಗಳಿಗೆ ಮಾರುಕಟ್ಟೆ ಒದಗಿಸುವ ಮಾರುಕಟ್ಟೆ ಯೋಜನೆ

14. ನಗರ ಸ್ತ್ರೀಶಕ್ತಿ ಯೋಜನೆ.

570(538) ಶ್ರೀಮತಿ ನಾಗಮಣಿ ಎಂ.ಕೆ. (ಕಿರುಗಾವಲು) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಳವಳ್ಳಿ ಹಾಗೂ ಮದ್ದೂರ ತಾಲ್ಲೂಕಿನ ಕಿರುಗಾವಲು ಹೋಬಳಿಯ ಗ್ರಾಮಗಳ ವ್ಯಾಪ್ತಿಯಲ್ಲಿ ಪಡಿತರ ಚೀಟಿಗಳನ್ನು ಅರ್ಹರಿಗೆ ಸಮರ್ಪಕವಾಗಿ ಹಂಚದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಪ್ರದೇಶಗಳಲ್ಲಿ ಕೆಲವರಿಗೆ ಪಡಿತರ ಚೀಟಿಗಳನ್ನು ನೀಡದೆ ಬದಲಿಯಾಗಿ ತಾತ್ಕಾಲಿಕ ಗುರುತಿನ ಚೀಟಿಗಳನ್ನು ಕೊಟ್ಟಿರುವುದು ನಿಜವೇ;

ಇ) ಹಾಗಿದ್ದರೆ, ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುವುದು?

ಶ್ರೀಮತಿ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜುಸಚಿವರು)

ಅ) ಹೌದು

ಆ) ಹೌದು.

ಇ) ರಾಜ್ಯಾದ್ಯಂತ ಕೈಬಿಟ್ಟು ಹೋದ ಅರ್ಹ ಕುಟುಂಬಗಳನ್ನು ಪಟ್ಟಿಯಲ್ಲಿ ಸೇರ್ಪಡೆಗಾಗಿ, ಈಗಾಗಲೇ ಸೇರ್ಪಡೆಯಾಗಿರುವ ಅನರ್ಹ ಕುಟುಂಬಗಳನ್ನು ಕೈಬಿಡುವ ಸಲುವಾಗಿ ರಾಜ್ಯಾದ್ಯಂತ ಮನೆ–ಮನೆ ಪುನರ್ ಸಮೀಕ್ಷೆ ಮಾಡಲು ಸರ್ಕಾರಿ ಆದೇಶ ಸಂಖ್ಯೆ: ಆನಾಸ 114 ಡಿಆರ್ಎ 2004, ದಿನಾಂಕ 10–1–2005ರಂದು ಆದೇಶ ಹೊರಡಿಸಿದೆ. ಆದೇಶದಂತೆ ಪುನರ್ ಸಮೀಕ್ಷೆ ಕಾರ್ಯ ಪ್ರಾರಂಭಗೊಂಡಿದ್ದು, ಏಪ್ರಿಲ್, 2005ಕ್ಕೆ ಮುಕ್ತಾಯಗೊಳಿಸಲಾಗುವುದು. ಸಮೀಕ್ಷೆಯಲ್ಲಿ, ಕೈಬಿಟ್ಟು ಹೋದ ಅರ್ಹ ಕುಟುಂಬದವರ ಪಟ್ಟಿ, ಅನರ್ಹ ಕುಟುಂಬಗಳ ಪಟ್ಟಿ ಎರಡನ್ನೂ ಗ್ರಾಮಸಭೆ/ವಾರ್ಡ್ ಸಭೆಗಳ ಮುಂದಿಟ್ಟು ಅನುಮತಿ ಪಡೆದು, ಅರ್ಹ ಕುಟುಂಬದವರಿಗೆ ಹಳದಿ ಪಡಿತರ ಚೀಟಿ ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

571(499) ಶ್ರೀ ನರಸಿಂಹಸ್ವಾಮಿ ಜೆ. (ದೊಡ್ಡಬಳ್ಳಾಪುರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳು ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ಸಾಗಾಣಿಕೆ ಬಗ್ಗೆ ಸರ್ಕಾರದ ವ್ಯವಸ್ಥೆ ಏನು;

ಆ) ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳ ಆಹಾರಧಾನ್ಯ ಸಾಮಗ್ರಿಗಳ ಮೇಲೆ ರಿಯಾಯಿತಿ ನೀಡುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಸರ್ಕಾರಕ್ಕೆ ಅಗತ್ಯವಿರುವ ಸಾಮಗ್ರಿ ಮತ್ತು ಸೇವೆಗಳ ಸಂಗ್ರಹಣೆ ಸಂಬಂಧದಲ್ಲಿ ಸರ್ಕಾರವು ಕರ್ನಾಟಕ ಪಾರದರ್ಶಕತಾ ಅಧಿನಿಯಮ 1999ನ್ನು ಜಾರಿಗೆ ತಂದಿರುವುದರ ಹಿನ್ನೆಲೆಯಲ್ಲಿ ಆಹಾರ ಪದಾರ್ಥಗಳ ಸಾಗಾಣಿಕೆಗಾಗಿ ಅಧಿನಿಯಮದಡಿ ಟೆಂಡರ್ ಪ್ರಕ್ರಿಯೆ ಕೈಗೊಂಡು ಸಾಗಣಿಕೆದಾರರನ್ನು ನೇಮಕ ಮಾಡಬೇಕಾಗಿರುತ್ತದೆ. ಇದಕ್ಕಾಗಿ ಸರ್ಕಾರದಿಂದ ಆದೇಶ ಸಂಖ್ಯೆ: ಆನಾಸ 41 ಆರ್‌ಪಿಆರ್ 2003, ದಿನಾಂಕ 27-1-2004ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಿದ್ದು ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಟೆಂಡರ್ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಪಾರದರ್ಶಕತಾ ಅಧಿನಿಯಮದ ಅನುಸಾರ ಟೆಂಡರ್ ಪ್ರಕ್ರಿಯೆ ಕೈಗೊಂಡು ಸಾಗಾಣಿಕೆದಾರರನ್ನು ನೇಮಿಸಲಾಗುತ್ತದೆ. ಇದರಲ್ಲಿ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳೂ ಭಾಗವಹಿಸ ಬಹುದಾಗಿರುತ್ತೆ. ನೇಮಕವಾದ ಸಾಗಾಣಿಕೆದಾರರು ಜಿಲ್ಲಾಧಿಕಾರಿಗಳು ಮತ್ತು ತಾಲ್ಲೂಕು ತಹಸೀಲ್ದಾರರು ನೀಡುವ ಮಾರ್ಗನಕ್ಷೆಯಂತೆ ಆಹಾರ ಧಾನ್ಯಗಳ ಸಾಗಾಣಿಕೆ ಮಾಡುತ್ತಾರೆ.

ಆ) ಕರ್ನಾಟಕ ಆಹಾರ ನಾಗರೀಕ ಸರಬರಾಜು ನಿಗಮ ನಿ. (ಕೆ.ಎಫ್.ಸಿ.ಎಸ್.ಸಿ) ಮತ್ತು ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ (ಟಿ.ಎ.ಪಿ.ಸಿ.ಎಂ.ಎಸ್) ಗಳು ರಾಜ್ಯದ ಒಟ್ಟು ಸಗಟು ನಾಮಿನಿ ದಾರರುಗಳಾಗಿದ್ದು ಭಾರತ ಆಹಾರ ನಿಗಮದ ಗೋದಾಮುಗಳಿಂದ ಸರ್ಕಾರದ ಪರವಾಗಿ ಆಹಾರಧಾನ್ಯ ಎತ್ತುವಳಿ ಮಾಡುತ್ತಿದ್ದು ಇವರ ಮೂಲಕ ಆಹಾರ ಧಾನ್ಯಗಳನ್ನು ಪಡಿತರ ಅಂಗಡಿಗಳಿಗೆ ವಿತರಿಸಲಾಗುತ್ತಿದೆ. ಇದರಲಿ ಟಿ.ಎ.ಪಿ.ಸಿ. ಎಂ.ಎಸ್. ಗಳಿಗೆ ಪ್ರತ್ಯೇಕವಾಗಿ ರಿಯಾಯಿತಿ ನೀಡುವುದು ಸಾಧ್ಯವಿರುವುದಿಲ್ಲ. ಎಲ್ಲಾ ಸಗಟು ನಾಮಿನಿದಾರರಿಗೆ ಪ್ರತಿ ಕ್ವಿಂ. ಅಕ್ಕಿ ಮತ್ತು ಗೋಧಿಗೆ ರೂ. 20.00 ರಂತೆ ಲಾಭಾಂಶವನ್ನು costing sheet ಪ್ರಕಾರ ನೀಡಲಾಗುತ್ತಿದೆ ಹಾಗೂ ಸಾಗಾಣಿಕೆ ವೆಚ್ಚವನ್ನು ಪ್ರತ್ಯೇಕವಾಗಿ ಸರ್ಕಾರ ಭರಿಸುತ್ತಿದೆ.

572(502) ಶ್ರೀ ನರಸಿಂಹಸ್ವಾಮಿ ಜೆ. (ದೊಡ್ಡಬಳ್ಳಾಪುರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳೆಗಳಿಗೆ ಆಕಸ್ಮಿಕ ಬೆಂಕಿ ದುರಂತ ಸಂಭವಿಸಿದಾಗ ಎಷ್ಟು ಪರಿಹಾರ ನೀಡಲಾಗುತ್ತಿದೆ;

ಆ) ಯಾವ ಆಧಾರದ ಮೇಲೆ ಅವರಿಗೆ ಪರಿಹಾರ ನೀಡಲಾಗುತ್ತಿದೆ?

ಶ್ರೀ ಕೆ. ಶ್ರೀನಿವಾಸ ಗೌಡ (ಕೃಷಿ ಸಚಿವರು)

ಅ) ಭಾರತ ಸರ್ಕಾರದ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯ ಮಾರ್ಗಸೂಚಿಯ ಪ್ರಕಾರ ಪರಿಹಾರ ನೀಡಲು ಅವಕಾಶಗಳಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

573(329) ಶ್ರೀ ಒಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 12ನೇ ವಿಧಾನ ಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿರುವಂತೆ ಸಹಕಾರ ಸಂಘಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು ರೈತರಿಗೆ ನೀಡಿದ ಸಾಲದ ಮೇಲಿನ ಬಡ್ಡಿ ಹಣವನ್ನು ಮನ್ನಾ ಮಾಡಿದೆಯೇ;

ಆ) ಇಲ್ಲವಾದಲ್ಲಿ, ಕಾರಣಗಳೇನು? (ವಿವರ ನೀಡುವುದು);

ಇ) ನಿರುದ್ಯೋಗಿ ಯುವಕರಿಗೆ 500 ರೂ.ಗಳ ಮಾಸಿಕ ಭತ್ಯೆ ಕರುರಾದ ಘೋಷಣೆಯೂ ಜಾರಿಗೆ ಬಂದಿದೆಯೇ;

ಈ) ಇಲ್ಲವಾದಲ್ಲಿ ಕಾರಣಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಸಹಕಾರ ಸಂಸ್ಥೆಗಳ ಮೂಲಯ ರೈತರಿಗೆ ನೀಡಿದ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿರುವುದಿಲ್ಲ. ಆದಾಗ್ಯೂ ದಿನಾಂಕ 1-4-2004ರಿಂದ ಸಹಕಾರ ಸಂಸ್ಥೆಗಳಿಂದ ರೈತರಿಗೆ ಶೇಕಡ 6ರ ಬಡ್ಡಿ ದರದಲ್ಲಿ ಕೃಷಿ ಸಾಲ ನೀಡಲು ಸರ್ಕಾರವು ಆದೇಶ ಹೊರಡಿಸಿರುತ್ತದೆ.

ಇ) ಸಹಕಾರ ಇಲಾಖೆಗೆ ಸಂಬಂಧಪಟ್ಟಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

574(332) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಾದ್ಯಂತ ರೈತರ ಸಾಲದ ಮೇಲಿನ ಬಡ್ಡಿ ಎಷ್ಟು ಮನ್ನಾ ಮಾಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು);

ಆ) ಮನ್ನಾ ಮಾಡಿದ ಬಡ್ಡಿ ಬಾಬ್ತು ಜಿಲ್ಲಾವಾರು ಪ್ರಾಥಮಿಕ ಪತ್ತಿನ ಗ್ರಾಮ ವ್ಯವಸಾಯ ಸಹಕಾರ ಬ್ಯಾಂಕುಗಳಿಗೆ ಸರ್ಕಾರ ಕೊಡಬೇಕಾದ ಮೊತ್ತ 31-3-2004ಕ್ಕೆ ಅನ್ವಯಿಸುವಂತೆ ಎಷ್ಟು ಆ ಮೊತ್ತದಲ್ಲಿ ಇನ್ನೂ ಕೊಡಬೇಕಾದ ಬಾಕಿ ಮೊತ್ತ ಎಷ್ಟು;

ಇ) ರೈತರ ಸಾಲದ ಬಡ್ಡಿ ಮನ್ನಾ ಮಾಡಲು ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು (31-3-2004ಕ್ಕೆ ಅನ್ವಯಿಸುವಂತೆ ವಿವರ ನೀಡುವುದು);

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಕರ್ನಾಟಕ ರಾಜ್ಯ ಸರ್ಕಾರವು 2002ರ ಖಾರಿಫ್ ಮತ್ತು ರಬಿ ಅವಧಿಯಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ರೂ. 115.70 ಕೋಟಿ ಹಾಗೂ ಅಲ್ಪಾವಧಿ ಕೃಷಿ ಸಾಲಗಳ ಮೇಲಿನ ಬಡ್ಡಿಯನ್ನು ಅನುಕ್ರಮವಾಗಿ ಮನ್ನಾ ಮಾಡಿರುತ್ತದೆ. ಅಂತೆಯೇ ತೋಟಗಾರಿಕೆ ಬೆಳೆಗಳಿಗೆ 2002–03ರ ಅವಧಿಯಲ್ಲಿ ನೀಡಿದ ದೀರ್ಘಾವಧಿ ಸಾಲದ ಮೇಲಿನ ಸಂಪೂರ್ಣ ಬಡ್ಡಿ ರೂ. 16.00 ಕೋಟಿ ಮನ್ನಾ ಮಾಡಿದೆ ಮತ್ತು ಇತರೆ ಬೆಳೆಗಳಿಗೆ ನೀಡಿದ ದೀರ್ಘಾವಧಿ ಸಾಲಗಳ ಮೇಲಿನ ಬಡ್ಡಿಯ ಪೈಕಿ ಶೇ. 09ಕ್ಕಿಂತ ಅಧಿಕವಾದ ಬಡ್ಡಿಯ ದರದ ವ್ಯತ್ಯಾಸದ ಮೊತ್ತ ರೂ.20.00 ಕೋಟಿಯನ್ನು ಮನ್ನಾ ಮಾಡಿದೆ 2002ನೇ ಖಾರಿಫ್ ಮತ್ತು ರಬಿ ಬೇಳೆಗಳಿಗೆ ಸಂಬಂಧಿಸಿದಂತೆ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1, 2, 3ರಲ್ಲಿ ಮತ್ತು ದೀರ್ಘಾವಧಿ ಸಾಲಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಅನುಬಂಧ–3ರಲ್ಲಿ ನೀಡಲಾಗಿದೆ.

ಆ) ಖಾರಿಫ್ 2002ರ ಅವಧಿಯಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೈತರು ಪಡೆದಂತಹ ಬೆಳೆ ಸಾಲದ ಮೇಲಿನ ಬಡ್ಡಿ ಒಟ್ಟು ರೂ.136.37 ಕೋಟಿಗಳಷ್ಟಾಗಿದ್ದು. ಸರ್ಕಾರವು ಈ ಪೈಕಿ ರೂ.. 115.70 ಕೋಟಿಗಳನ್ನು ಮಂಜೂರು ಮಾಡಿದ್ದು, ದಿನಾಂಕ 31–3–2004ಕ್ಕೆ ರೂ. 78.00 ಕೋಟಿಗಳನ್ನು ಬಿಡುಗಡೆ ಮಾಡಿರುತ್ತದೆ. ರೂ. 37.00 ಕೋಟಿಗಳನ್ನು ಏಪ್ರಿಲ್ 2004ರ ನಂತರ ಬಿಡುಗಡೆ ಮಾಡಿದ್ದು ಉಳಿದ ರೂ. 21.37 ಕೋಟಿ ಬಾಕಿ ಇರುತ್ತದೆ.

ಅದೇ ರೀತಿ ರಬಿ 2002ರ ಬೆಳೆಗೆ ಸಂಬಂಧಿಸಿದಂತೆ ರೂ. 12.68 ಕೊಟಿಗಳ ಪೈಕಿ ರೂ. 10.00 ಕೋಟಿಗಳು ಬಿಡುಗಡೆ ಮಾಡಿರುತ್ತದೆ. ಹಾಗೂ ಉಳಿದ ರೂ. 02.68 ಕೋಟಿಗಳು ಬಾಕಿ ಇರುತ್ತದೆ.

ಇ) ಇಲ್ಲ.

Annexure -1

Interest Waiver Scheme - Khariff 2002 Crop Loans

(Rupees in Lakhs)

Sl. No.	Name of the DCC Bank	Total interest claims made by DCCBs	Total interest amount sanctioned by GOK Rs. 11570/- lakhs	Total amount released so far Rs. 1150/- lakhs	Balance of interest amount to be released by GOK against sanctd. limit of Rs. 11570/- lakhs	Balance of interest amount to be sanctioned by GOK against claims made by DCCBs Rs. 13637.22 lakhs
1.	Bangalore	313.17	257.80	257.80	0.00	55.37
2.	Belgaum	1796.73	1363.09	1354.62	8.47	442.11
3.	Bellary	488.32	416.32	413.27	3.05	75.05
[illegible]	[illegible]	849.61	[illegible]	[illegible]	[illegible]	[illegible]

1	2	3	4	5	6	7
5.	Bijapur	2012.86	1574.57	1562.41	12.16	450.45
6.	C' Maglur	260.75	231.54	231.54	0.00	29.21
7.	C'durga	140.08	132.96	131.95	1.01	8.13
8.	Davanagere	770.18	626.28	623.00	3.28	147.18
9.	Dharwad	325.62	309.34	309.34	0.00	16.28
10.	Gulbarga	196.66	196.66	196.66	0.00	0.00
11.	Hassan	604.89	550.70	546.33	4.37	58.56
12.	Kodagu	1156.74	1065.26	1053.09	12.17	103.65
13.	Kolar	543.76	454.19	454.19	0.00	89.57
14.	Mandya	462.00	337.78	335.37	2.41	126.23
15.	Mysore	507.22	487.43	484.55	2.88	22.67
16.	N. Kanara	387.49	387.49	387.49	0.00	0.00
17.	Raichur	506.38	398.70	395.78	2.92	110.60
18.	S.Canara	914.35	914.35	914.35	0.00	0.00
19.	Shimoga	977.83	842.85	832.64	10.21	145.19
20.	Tumkur	246.90	234.09	234.09	0.00	12.81
	Total	13461.54	11460.71	11393.26	67.45	2068.28
21.	Ceded to Commi. Banks	175.68	109.29	106.74	2.55	68.94
	G. Total	**13637.22**	**11570.00**	**11500.00**	**70.00**	**2137.22**

Annexure -2
Interest Waiver Rabi 2002

(Rupees in Lakhs)

Sl.No.	Name of the DCCB	Claims Rabi 2002 Rabi 2002	Rs. 500-00 Released
1.	Bangalore	6.35	6.35
2.	Belgaum	19.80	0.00
3.	Bellary	6.71	0.00
4.	Bidar	192.26	0.00
5.	Bijapur	46.25	0.00
6.	C' Maglur	0.75	0.75
7.	C'durga	21.26	0.00
8.	Davanagere	10.54	0.00
9.	Dharwad	8.17	8.17
10.	Gulbarga	52.11	52.11
11.	Hassan	97.16	0.00
12.	Kodagu	1.56	0.00
13.	Kolar	330.28	271.12
14.	Mandya	36.52	0.00
15.	Mysore	54.74	0.00
16.	N. Kanara	3.87	0.00
17.	Raichur	14.67	0.00

1	2	3	4
18.	S.Canara	57.28	0.00
19.	Shimoga	2.53	0.00
20.	Bagalkot	113.71	0.00
	Tumkur	161.50	161.50
	Total	1238.02	500.00
21.	Ceded to Comml. Banks	30.16	0.00
	G. Total	**1268.18**	**500.00**

ಅನುಬಂಧ-3

ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ ಶಾಸಕರು ಬ್ಯಾಡಗಿ ಕ್ಷೇತ್ರ ಇವರ ಪ್ರಶ್ನೆ ಸಂಖ್ಯೆ: 332ರ ಪ್ರಶ್ನೆ "ಅ"ಗೆ ಅನುಬಂಧ (ದೀರ್ಘಾವಧಿ ಸಾಲ)

(ರೂ. ಲಕ್ಷಗಳಲ್ಲಿ)

ಜಿಲ್ಲೆ	ಶೇಕಡ 9ಕ್ಕಿಂತ ಹೆಚ್ಚಿನ ಬಡ್ಡಿ ರಿಯಾಯಿತಿ	ತೋಟಗಾರಿಕೆ ಯೋಜನೆಯಲ್ಲಿ ಬಡ್ಡಿ ರಿಯಾಯಿತಿ	ಒಟ್ಟು
ಬೆಂಗಳೂರು (ನ)	46.06	53.16	99.22
ಬೆಂಗಳೂರು (ಗ್ರಾ)	85.52	72.44	157.96
ಕೋಲಾರ	27.27	66.31	93.58
ತುಮಕೂರು	71.29	91.19	163.48
ಚಿತ್ರದುರ್ಗ	43.20	91.11	134.31
ಶಿವಮೊಗ್ಗ	189.02	148.55	337.57
ದಾವಣಗೆರೆ	207.71	159.70	367.41
ಮೈಸೂರು	71.00	35.14	106.14
ಚಾಮರಾಜನಗರ	25.13	25.89	51.02
ಮಡಿಕೇರಿ	29.89	56.92	86.81
ಮಂಡ್ಯ	70.06	17.59	87.65
ಹಾಸನ	72.29	173.36	245.65
ಚಿಕ್ಕಮಗಳೂರು	181.36	261.20	442.56
ಮಂಗಳೂರು	119.21	50.25	169.46
ಉಡುಪಿ	57.98	13.18	71.16

1	2	3	4
ಬೆಳಗಾಂ	111.25	47.36	158.61
ಬಿಜಾಪುರ	40.65	54.36	95.01
ಬಾಗಲಕೋಟೆ	89.10	40.69	129.79
ಧಾರವಾಡ	53.79	6.23	60.02
ಗದಗ	18.63	0.91	189.54
ಉತ್ತರ ಕನ್ನಡ	115.27	78.61	193.88
ಗುಲ್ಬರ್ಗಾ	54.32	1.82	56.14
ರಾಯಚೂರು	18.56	0.18	18.74
ಕೊಪ್ಪಳ	10.50	1.30	11.80
ಬೀದರ್	23.89	0.36	24.25
ಬಳ್ಳಾರಿ	113.51	45.00	158.51
ರಾಜ್ಯದ ಒಟ್ಟು	**2000.00**	**1600.00**	**3600.00**

575(334) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಅಂಗನವಾಡಿ ಕೇಂದ್ರಗಳೆಷ್ಟು ಅವುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕಿಯರು ಹಾಗೂ ಆಯಾಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ವಿವರ ನೀಡುವುದು;

ಆ) ಅಂಗನವಾಡಿ ನೌಕರರನ್ನು ಖಾಯಂಗೊಳಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಯಾವಾಗ ಖಾಯಂಗೊಳಿಸಲಾಗುವುದು ; ವಿವರ ನೀಡುವುದು;

ಇ) ಈ ನೌಕರರಿಗೆ ಗೌರವಧನ ಹೆಚ್ಚಿಸುವ ಪ್ರಸ್ತಾಪನೆ ಸರ್ಕಾರದ ಮುಂದಿದೆಯೇ?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ರಾಜ್ಯದಲ್ಲಿರುವ ಒಟ್ಟು ಅಂಗನವಾಡಿ ಕೇಂದ್ರಗಳು 40301
ಕಾರ್ಯಕರ್ತೆಯರ ಸಂಖ್ಯೆ 39795
ಸಹಾಯಕಿಯರ ಸಂಖ್ಯೆ 40185
ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಇಲ್ಲ. ಅನ್ವಯಿಸುವುದಿಲ್ಲ.

ಇ) ಸಧ್ಯಕ್ಕೆ ಇರುವುದಿಲ್ಲ.

ಅನುಬಂಧ-1

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಅಂಗನವಾಡಿ ಕಾರ್ಯಕರ್ತೆಯರು		ಅಂಗನವಾಡಿ ಸಹಾಯಕಿಯರು	
		ಮಂಜೂರಾತಿ	ಕಾರ್ಯನಿರತ	ಮಂಜೂರಾತಿ	ಕಾರ್ಯನಿರತ
1.	ಬಾಗಲಕೋಟೆ	1366	1330	1366	1365
2.	ಬೆಂಗಳೂರು (ಗ್ರಾ)	1192	1191	1192	1188
3.	ಬೆಂಗಳೂರು (ನ)	1891	1887	1891	1890
4.	ಬೆಳಗಾಂ	3773	3696	3773	3693
5.	ಬಳ್ಳಾರಿ	1372	1361	1372	1368
6.	ಬೀದರ್	1151	1141	1151	1151
7.	ಬಿಜಾಪುರ	1301	1254	1301	1299
8.	ಚಾಮರಾಜನಗರ	1085	1084	1085	1084
9.	ಚಿಕ್ಕಮಗಳೂರು	1226	1216	1226	1226
10.	ಚಿತ್ರದುರ್ಗ	1336	1308	1336	1336
11.	ದಕ್ಷಿಣ ಕನ್ನಡ	1775	1729	1775	1773
12.	ದಾವಣಗೆರೆ	1262	1250	1262	1260
13.	ಧಾರವಾಡ	806	796	806	805
14.	ಗದಗ	835	826	835	835
15.	ಗುಲ್ಬರ್ಗಾ	2350	2314	2350	2349
16.	ಹಾಸನ	1603	1591	1603	1601
17.	ಹಾವೇರಿ	1249	1233	1249	1248
18.	ಕೋಲಾರ	2361	2341	2361	2360
19.	ಕೊಡಗು	692	689	692	689
20.	ಕೊಪ್ಪಳ	893	889	893	893
21.	ಮಂಡ್ಯ	1655	1632	1655	1650
22.	ಮೈಸೂರು	1930	1920	1930	1929
23.	ರಾಯಚೂರು	1308	1302	1308	1306
24.	ಶಿವಮೊಗ್ಗ	1323	1315	1323	1322
25.	ತುಮಕೂರು	2337	2317	2337	2337
26.	ಉಡುಪಿ	1027	997	1027	1026
27.	ಉತ್ತರ ಕನ್ನಡ	1202	1186	1202	1202
28.	ರಾಜ್ಯದ ಒಟ್ಟು	40301	39795	40301	40185

576(336) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಎಷ್ಟು ಫಾರ್ಮ್‌ಗಳಿವೆ (ಜಿಲ್ಲಾವಾರು ವಿವರ ನೀಡುವುದು);

ಆ) ಈ ಫಾರ್ಮ್‌ಗಳು ಕಳೆದ ಮೂರು ವರ್ಷಗಳಲ್ಲಿ ರೈತರಿಗೆ ಅಥವಾ ಸಾರ್ವಜನಿಕರಿಗೆ ವಿತರಿಸಿದ ವಿವಿಧ ಬೀಜ, ಸಸಿ ಮತ್ತು ಗಿಡಗಳು ಯಾವುವು ಹಾಗೂ ವಿತರಿಸಿದ ಪ್ರಮಾಣ ಎಷ್ಟು;

ಇ) ನಷ್ಟದಲ್ಲಿರುವ ಫಾರ್ಮ್‌ಗಳು ಎಷ್ಟು? (ವಿವರ ನೀಡುವುದು)

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು)

ಅ) ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 415 ತೋಟಗಾರಿಕೆ ಕ್ಷೇತ್ರ / ಸಸ್ಯಾಗಾರಗಳಿವೆ. (ಜಿಲ್ಲಾವಾರು ಕ್ಷೇತ್ರ / ಸಸ್ಯಾಗಾರಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ)

ಆ) ಈ ಫಾರಂಗಳು ಕಳೆದ ಮೂರು ವರ್ಷಗಳಲ್ಲಿ ಅಂದರೆ, 2001–02 ರಿಂದ 2003–04ರವರೆಗೆ ರೈತರಿಗೆ / ಸಾರ್ವಜನಿಕರಿಗೆ ಮಾವು, ಸಪೋಟ, ದಾಳಿಂಬೆ, ಗೋಡಂಬಿ, ಸೀಬೆ, ನಿಂಬೆ, ತೆಂಗು, ಕಾಳು ಮೆಣಸು, ಔಷಧಿ ಮತ್ತು ಸುಗಂಧ ದ್ರವ್ಯ ಗಿಡಗಳು, ಅಲಂಕಾರಿಕ ಗಿಡಗಳು, ಅಲಂಕಾರಿಕ ಗಿಡಗಳ ಬೀಜ ಮತ್ತು ತರಕಾರಿಗಳನ್ನು ವಿತರಿಸಲಾಗಿದೆ. ಒಟ್ಟು 159.31 ಲಕ್ಷ ಸಂಖ್ಯೆಯ ಕಸಿ / ಸಸಿಗಳು, 111 ಕೆ.ಜಿ. ಅಲಂಕಾರಿಕ ಸಸಿಗಳ ಬೀಜಗಳು ಹಾಗೂ 4542 ಕೆ.ಜಿ. ತರಕಾರಿ ಬೀಜಗಳನ್ನು ವಿತರಿಸಲಾಗಿದೆ.

ಇ) 192 ತೋಟಗಾರಿಕೆ ಫಾರಂಗಳು ನಷ್ಟದಲ್ಲಿರುತ್ತವೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಅನುಬಂಧ

ಕ್ರ.ಸಂ.	ಜಿಲ್ಲೆ	ಕ್ಷೇತ್ರಗಳ ಸಂಖ್ಯೆ	ನಷ್ಟದಲ್ಲಿರುವ ಕ್ಷೇತ್ರಗಳ ಸಂಖ್ಯೆ
1.	ಬೆಂಗಳೂರು ನಗರ	3	
2.	ಬೆಂಗಳೂರು ಗ್ರಾ	20	6
3.	ಕೋಲಾರ	33	14
4.	ತುಮಕೂರು	20	14
5.	ಚಿತ್ರದುರ್ಗ	16	7
6.	ದಾವಣಗೆರೆ	10	1
7.	ಶಿವಮೊಗ್ಗ	13	3

1	2	3	4
10.	ಮಂಡ್ಯ	27	18
11.	ಕೊಡಗು	10	6
12.	ಹಾಸನ	17	7
13.	ಚಿಕ್ಕಮಗಳೂರು	15	6
14.	ದಕ್ಷಿಣ ಕನ್ನಡ	15	6
15.	ಉಡುಪಿ	9	4
16.	ಬೆಳಗಾವಿ	28	15
17.	ಬಿಜಾಪುರ	9	3
18.	ಬಾಗಲಕೋಟೆ	7	1
19.	ಧಾರವಾಡ	8	2
20.	ಗದಗ	9	3
21.	ಹಾವೇರಿ	10	6
22.	ಉತ್ತರ ಕನ್ನಡ	17	10
23.	ಗುಲ್ಬರ್ಗಾ	18	8
24.	ಬೀದರ್	13	5
25.	ರಾಯಚೂರು	13	7
26.	ಬಳ್ಳಾರಿ	21	9
27.	ಕೊಪ್ಪಳ	13	7
	ಒಟ್ಟು	415	192

577(338) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕು ಸರಹದ್ದಿನಲ್ಲಿರುವ ಗಿರಿವಿನ ಕೊಪ್ಪ-ತಡನಕತ್ರಿ ಪ್ರದೇಶದಲ್ಲಿರುವ ಮಹಿಳಾ ಸಂಘದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೆಣಸಿನಕಾಯಿ ಸಹಕಾರ ಸಂಘದ ವಿವರಗಳೇನು;

ಆ) ಈ ಸಹಕಾರ ಸಂಘಕ್ಕೆ ಸರ್ಕಾರ ನೀಡಿರುವ ಸಹಾಯ ಧನದ ಷೇರು ಮೊಬಲಗು ಎಷ್ಟು (ಈ ಸಂಘದ ಕಾರ್ಯವ್ಯಾಪ್ತಿಯು ವಿವರ ನೀಡುವುದು);

ಇ) ಈ ಸಂಘದ ವರ್ಷದ ಆದಾಯವೆಷ್ಟು (ಕಳೆದ ಮೂರು ವರ್ಷಗಳಲ್ಲಿ ಸಂಘವು ಗಳಿಸಿದ ಲಾಭ-ನಷ್ಟದ ವಿವರ ನೀಡುವುದು)?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕು ಸರಹದ್ದಿನ ಗಿರವಿನ ಕೊಪ್ಪದಲ್ಲಿ ಮೆಣಸಿನಕಾಯಿ ಸಹಕಾರ ಸಂಘವಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

578(207) ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಒಟ್ಟು ಭೂಮಿ ವಿಸ್ತೀರ್ಣ ಎಷ್ಟು;

ಆ) ಇದರಲ್ಲಿ ಕೃಷಿ ಯೋಗ್ಯವಾದ ಭೂಮಿ ಎಷ್ಟು

ಇ) ಪ್ರಸ್ತುತ ಕೃಷಿ ಸಾಗುವಳಿ ಮಾಡುತ್ತಿರುವ ಭೂಮಿ ಎಷ್ಟು;

ಈ) ಇತರೆ ಮೂಲಗಳಿಂದ ನೀರಾವರಿ ಸೌಲಭ್ಯ ಪಡೆದಿರುವ ಕೃಷಿ ಸಾಗುವಳಿ ಭೂಮಿ ಎಷ್ಟು;

ಉ) ಮಳೆ ಆಧಾರಿತ ಭೂಮಿ ಎಷ್ಟು;

ಊ) ಕೃಷಿ ಜಮೀನನ್ನು ಮುಂದಿನ 3 ವರ್ಷಗಳಲ್ಲಿ ಜಲಾನಯನ ಅಭಿವೃದ್ಧಿ ಯೋಜನೆಯಡಿ ಅಳವಡಿಸಲು ಸರ್ಕಾರದ ಮುಂದಿರುವ ಕಾರ್ಯಕ್ರಮವೇನು; ಇದಕ್ಕಾಗಿ ತುಲಬಹುದಾದ ಒಟ್ಟು ವೆಚ್ಚ ಎಷ್ಟು;

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣ 190.50 ಲಕ್ಷ ಹೇಕ್ಟರ್.

ಆ) 2000-01ರ ಕೃಷಿ ಗಣತಿ ಪ್ರಕಾರ ರಾಜ್ಯದಲ್ಲಿ 123.07 ಲಕ್ಷ ಹೇಕ್ಟರ್ ಭೂಮಿ ಕೃಷಿಗೆ ಯೋಗ್ಯವಿದೆ.

ಇ) ಪ್ರತಿ ವರ್ಷದ ಒಟ್ಟು ಸಾಗುವಳಿ ವಿಸ್ತೀರ್ಣ ಮಳೆ, ನೀರಾವರಿ ಸೌಲಭ್ಯ ಮುಂತಾದವುಗಳ ಮೇಲೆ ಅವಲಂಭಿಸಿರುತ್ತದೆ. 2000-01, 2001-02 ಹಾಗೂ 2002-03ರಲ್ಲಿ ಇದು ಕ್ರಮವಾಗಿ 122,84,116.70 ಹಾಗೂ 115.32 ಲಕ್ಷ ಹೆಕ್ಟೇರ್ ರಷ್ಟು ಇರುತ್ತದೆ.

ಈ) ವಿವಿಧ ನೀರಾವರಿ ಮೂಲಗಳಿಂದ ನೀರಾವರಿ ಸೌಲಭ್ಯ ಪಡೆದು ಕೃಷಿ ಸಾಗುವಳಿ ಭೂಮಿಯ ಒಟ್ಟು ವಿಸ್ತೀರ್ಣ 2000-01, 2001-02 ಹಾಗೂ 2002-03ರಲ್ಲಿ ಇದು ಕ್ರಮವಾಗಿ 32.71,30.89 ಹಾಗೂ 28.4 ಲಕ್ಷ ಹೆಕ್ಟೇರ್ ರಷ್ಟು ಇರುತ್ತದೆ.

ಉ) ಒಟ್ಟು ಸಾಗುವಳಿಯಾದ ವಿಸ್ತೀರ್ಣದಲ್ಲಿ ನೀರಾವರಿ ಪಡೆದಿರುವ ವಿಸ್ತೀರ್ಣವನ್ನು ಹೊರತುಪಡಿಸಿ ಉಳಿದ ವಿಸ್ತೀರ್ಣ ಮಳೆ ಆಧಾರಿತ ಭೂಮಿಯಾಗಿರುತ್ತದೆ ಇದು 2000-01, 2001-02 ಹಾಗೂ 2002-03ರಲ್ಲಿ ಇದು ಕ್ರಮವಾಗಿ 90.13, 85.81 ಹಾಗೂ 86.91 ಲಕ್ಷ ಹೆಕ್ಟೇರ್‌ರಷ್ಟು ಇರುತ್ತದೆ.

ಊ) ಮುಂದಿನ ಮೂರು ವರ್ಷಗಳಲ್ಲಿ ಸರ್ಕಾರವು ಅಂದಾಜು 786.05 ಕೋಟಿಗಳನ್ನು ಖರ್ಚು ಮಾಡಿ ಸುಮಾರು 978230 ಹೆಕ್ಟೇರ್ ಪ್ರದೇಶವನ್ನು ಉಪಚರಿಸಲು ಯೋಜನೆಯನ್ನು ಸಿದ್ಧಪಡಿಸಿದೆ. ಮುಂದುವರಿದ ಯೋಜನೆಗಳನ್ನು ಹೊರತುಪಡಿಸಿ ಬಾಕಿ ಇರುವ ಪ್ರದೇಶವನ್ನು ಅಭಿವೃದ್ಧಿಪಡಿಸಲು ಪ್ರತಿ ಹೆಕ್ಟೇರ್‌ಗೆ ರೂ. 6900 ಗಳಂತೆ ರೂ. 4544.34 ಕೋಟಿಗಳು ಬೇಕಾಗುತ್ತದೆ.

579(723) ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಅಡಿಕೆ ಕೃಷಿಯನ್ನು ಅವಲಂಬಿಸಿರುವ ರೈತರು ಇದ್ದಾರೆ;

ಆ) ಅಡಿಕೆ ಬೆಲೆ ಕುಸಿತದ ಸಮಸ್ಯೆಯನ್ನು ಎದುರಿಸಲು ಸರಕಾರ ಕೈಗೊಂಡ ಕ್ರಮಗಳೇನು;

ಇ) ಅಡಿಕೆಗೆ ಬೆಂಬಲ ಬೆಲೆಯನ್ನು ಕೊಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;

ಈ) ಇದ್ದಲ್ಲಿ ಅದರ ವಿವರಗಳೇನು;

ಉ) ಬೆಂಬಲ ಬೆಲೆಯನ್ನು ಕೊಟ್ಟು ಅಡಿಕೆ ಕೃಷಿಕರನ್ನು ಉಳಿಸುವ ಪ್ರಯತ್ನವನ್ನು ಸರಕಾರ ಮಾಡುವರೆ?

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು)

ಅ) 17 ಜಿಲ್ಲೆಗಳಲ್ಲಿ.

ಆ) 1. ಬೆಲೆ ಕುಸಿತದ ಸಂದರ್ಭಗಳಲ್ಲಿ ಸರ್ಕಾರವು ಮಾರುಕಟ್ಟೆ ಮಧ್ಯ ಪ್ರವೇಶ / ಬೆಂಬಲ ಬೆಲೆ ಯೋಜನೆಗಳಡಿಯಲ್ಲಿ ಅಡಿಕೆಯನ್ನು ರೈತರಿಂದ ಖರೀದಿಸಲಾಗಿದೆ.

2. ಅಡಿಕೆ ಬೆಳೆಗಾರ ಆದಾಯ ಹೆಚ್ಚಿಸುವ ದೃಷ್ಟಿಯಿಂದ ಅಂತರ ಬೆಳೆಗಳಾಗಿ ಕಾಳು ಮೆಣಸು, ವೆನಿಲ್ಲಾ, ಕೋಕೋ ಮತ್ತು ಇತರೇ ಬೆಳೆಗಳನ್ನು ಬೆಳೆಸಲು ವಿವಿಧ ಕಾರ್ಯಕ್ರಮಗಳ ಮೂಲಕ ಪ್ರೋತ್ಸಾಹ ನೀಡಲಾಗುತ್ತಿದೆ.

3. ಆಮದು ನಿಯಂತ್ರಣಾ ಕ್ರಮಗಳ ಬಗ್ಗೆ ಭಾರತ ಸರ್ಕಾರವನ್ನು ಒತ್ತಾಯಿಸಲಾಗಿದೆ.

4. ಇಲಾಖೆಯ ನರ್ಸರಿಗಳಲ್ಲಿ ಅಡಿಕೆ ಸಸಿ ಉತ್ಪಾದನೆ ಮತ್ತು ವಿತರಣೆಯನ್ನು ಸ್ಥಗಿತಗೊಳಿಸಲಾಗಿದೆ.

5. ಅಡಿಕೆಯ ಸಮಗ್ರ ಅಭಿವೃದ್ಧಿಗಾಗಿ ಅಡಿಕೆ ಕಾರ್ಯಪಡೆಯನ್ನು ರಚಿಸಲಾಗಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಪ್ರಸ್ತುತ ಅಡಿಕೆ ಬೆಲೆಯು ಸುಧಾರಿತ ಹಂತದಲ್ಲಿರುವ ಕಾರಣ ಬೆಂಬಲ ಬೆಲೆ ಯೋಜನೆ ಅವಶ್ಯಕತೆ ಇರುವುದಿಲ್ಲ.

580(520) ಶ್ರೀ ಪಾಟೀಲ್ ಬಿ.ಸಿ. (ಹಿರೇಕೆರೂರು) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ಪಡಿತರ ವ್ಯವಸ್ಥೆಯನ್ನು ಟಿ.ಎ.ಪಿ.ಸಿ.ಎಂ.ಎಸ್. ನಿಂದ ಕೆ.ಎಫ್.ಸಿ. ಗೆ ವರ್ಗಾಯಿಸುವಲ್ಲಿ ಸರ್ಕಾರಕ್ಕೆ ಇರುವ ತೊಂದರೆಯೇನು;

ಆ) ಅಕ್ರಮ ಹಾಗೂ ಏಕಸ್ವಾಮ್ಯದಿಂದ ತಾಲ್ಲೂಕಿನಲ್ಲಿ ಪಡಿತರ ವಿತರಣೆ ಸರಿಯಾಗಿ ಆಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಗ್ರಾಮೀಣ ಪ್ರದೇಶದಲ್ಲಿ ಸೀಮೆಎಣ್ಣೆ ವಿತರಣೆ 9.40 ರೂ. ಪಟ್ಟಣದಲ್ಲಿ 9.70 ರೂ. ಪ್ರತಿ ಲೀಟರಿಗೆ ಇದ್ದರೂ ವ್ಯಾಪಾರಸ್ಥರು 10.50 ಪೈಸೆಗಳಿಗೆ ಮಾರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಪಡಿತರ ವ್ಯವಸ್ಥೆಯಲ್ಲಿ ಆಗುತ್ತಿರುವ ಈ ಮೋಸದ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಟಿ.ಎ.ಪಿ.ಸಿ.ಎಂ.ಎಸ್., ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ, ಬಹಳ ದಿನಗಳಿಂದ ಸಗಟು ನಾಮಿನಿದಾರರಾಗಿರುತ್ತಾರೆ. ಸಗಟು ನಾಮಿನಿ ಪರವಾನಗಿ ನೀಡುವ ಅಧಿಕಾರ ಜಿಲ್ಲಾಧಿಕಾರಿಗಳ ಅಧಿಕಾರ ವ್ಯಾಪ್ತಿಯಲ್ಲಿರುತ್ತದೆ. ಈ ಸಗಟು ನಾಮಿನಿ ಬದಲಾವಣೆಗೆ ಇದುವರೆಗೆ ಯಾವುದೇ ದೂರು ಟಿ.ಎ.ಪಿ.ಸಿ.ಎಂ.ಎಸ್. ವಿರುದ್ಧ ಬಂದಿರುವುದಿಲ್ಲ. ಆದಕಾರಣ, ಕೆ.ಎಫ್.ಸಿ.ಎಸ್.ಸಿ. ಗೆ ವರ್ಗಾಯಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಟಿ.ಎ.ಪಿ.ಸಿ.ಎಂ.ಎಸ್., ಹಿರೇಕೆರೂರು ತಾಲ್ಲೂಕಿಗೆ ಸಗಟು ನಾಮಿನಿದಾರರು, ಈ ಸಗಟು ನಾಮಿನಿಯ ವ್ಯಾಪ್ತಿಯಲ್ಲಿ 58 ನ್ಯಾಯಬೆಲೆ ಅಂಗಡಿಗಳು ಸೇರ್ಪಟ್ಟಿವೆ. ಈ ಪೈಕಿ, 7 ನ್ಯಾಯ ಬೆಲೆ ಅಂಗಡಿಗಳನ್ನು ಪರ್ಯಾಯ ವ್ಯವಸ್ಥೆಯಡಿಯಲ್ಲಿ ಟಿ.ಎ.ಪಿ.ಸಿ.ಎಂ.ಎಸ್. ಸಂಸ್ಥೆಯವರೇ ನಡೆಸುತ್ತಿದ್ದಾರೆ. ಆಹಾರಧಾನ್ಯ, ಸಗಟು ನಾಮಿನಿದಾರರಿಂದ ಪಡಿತರ ಅಂಗಡಿಗಳಿಗೂ, ಪಡಿತರ ಅಂಗಡಿಗಳಿಂದ ಪಡಿತರ ಚೀಟಿದಾರರಿಗೂ ಸಮರ್ಪಕ ವಿತರಣೆಯಾಗುತ್ತಿದೆ. ಯಾವುದೇ ಅಕ್ರಮ ವ್ಯವಹಾರದ ಬಗ್ಗೆ ದೂರುಗಳು ಬಂದಿರುವುದಿಲ್ಲ.

ಇ) ಸೀಮೆಎಣ್ಣೆ ವಿತರಣೆಯನ್ನು ಗ್ರಾಮೀಣ ಪ್ರದೇಶದಲ್ಲಿ ರೂ.9.70 ಹಾಗೂ ಪಟ್ಟಣದಲ್ಲಿ ರೂ.9.40 ದರದಂತೆ ಮಾರಾಟ ಮಾಡುತ್ತಿದ್ದಾರೆ. ರೂ.10.50ರ ದರದಲ್ಲಿ ಮಾರಾಟ ಮಾಡುವ ಬಗ್ಗೆ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ.

ತಹಶೀಲ್ದಾರರು ಸರ್ಕಾರ ನಿಗದಿಪಡಿಸಿದ ದರಕ್ಕೆ ಮಾರಾಟ ಮಾಡಿಸಲು ಕ್ರಮ ಕೈಗೊಂಡಿದ್ದಾರೆ.

ಈ) ಪಡಿತರ ವ್ಯವಸ್ಥೆಯಲ್ಲಿ ಮೋಸ ಆಗುತ್ತಿರುವ ಬಗ್ಗೆ ದೂರುಗಳು ಇರುವುದಿಲ್ಲ ಹಾಗೂ ಪ್ರಕರಣಗಳು ದಾಖಲು ಆಗಿರುವುದಿಲ್ಲ.

581(523) ಶ್ರೀ ಬಿ.ಎಸ್. ಪಾಟೀಲ್ (ಹಿರೇಕೆರೂರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ಹೊಸದಾಗಿ ಬಸವೇಶ್ವರ ಸಕ್ಕರೆ ಕಾರ್ಖಾನೆಗೆ ಸರ್ಕಾರದ ಎನ್.ಸಿ.ಡಿ.ಸಿ. ಅನುಮತಿ ದೊರಕಿದೆಯೇ;

ಆ) ರೈತರಿಂದ ಕೊಟ್ಟಿಯಾಗಿ ಶೇರು ಹಣವನ್ನು ವ್ಯವಸಾಯ ಬ್ಯಾಂಕುಗಳಿಂದ ಸಾಲ ಮಾಡಿಸಿ ಇಲ್ಲಿಯವರೆವಿಗೂ ಶೇರು ಪತ್ರ ವಿತರಿಸದೇ ಇದ್ದುದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ಇ) ಶೇರು ಪತ್ರವನ್ನು ವಿತರಿಸದೇ ಇದ್ದ ರೈತರ ಹಣವನ್ನು ಹಿಂದಿರುಗಿಸಲಾಗುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಇದು ಎನ್.ಸಿ.ಡಿ.ಸಿ. ಯ ಪರಿಶೀಲನೆಯಲ್ಲಿದೆ.

ಆ, ಇ) ಕಾರ್ಖಾನೆಯ ಉಪನಿಯಮದಂತೆ ಸದಸ್ಯರುಗಳ ವರ್ಗೀಕರಣ ಮಾಡಿಕೊಂಡು ಬಾಕಿ ಇರುವ ಎಲ್ಲ ಸದಸ್ಯರಿಗೆ ಶೇರು ಪ್ರಮಾಣ ಪತ್ರ ವಿತರಿಸುವಂತೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆ ನೀಡಲಾಗಿದೆ.

582(961) ಶ್ರೀ ಪಾಟೀಲ್ ಬಿ.ಆರ್. (ಆಳಂದ್) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಎಷ್ಟು ಬೆಳೆಗಳಿಗೆ ಕೇಂದ್ರ ಸರ್ಕಾರ ಬೆಂಬಲ ಬೆಲೆ ನಿರ್ಧಾರ ಮಾಡಿದೆ;

ಆ) ರಾಜ್ಯ ಸರ್ಕಾರ ಎಷ್ಟು ಬೆಳೆಗಳ ಬಗ್ಗೆ ಈ ಕ್ರಮವನ್ನು ಆಚರಣೆಗೆ ತಂದಿದೆ;

ಇ) ಎಷ್ಟು ಕಡೆ ಬೆಂಬಲ ಬೆಲೆ ಖರೀದಿ ಕೇಂದ್ರ ಪ್ರಾರಂಭಿಸಲಾಗಿದೆ;

ಈ) ಪ್ರಾರಂಭಿಸಿದ್ದರೆ, ಯಾವ ಯಾವ ಬೆಳೆ ಎಷ್ಟು ಖರೀದಿ ಮಾಡಿದೆ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಕೇಂದ್ರ ಸರ್ಕಾರವು 14 ಬೆಳೆಗಳಿಗೆ ಬೆಂಬಲ ಬೆಲೆ ನಿರ್ಧಾರ ಮಾಡಿದೆ.

ಆ) ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಮುಖಾಂತರ 4 ಬೆಳೆಗಳು : ಮೆಕ್ಕೆ ಜೋಳ, ಭತ್ತ, ರಾಗಿ ಮತ್ತು ಜೋಳ.

ಇ) ರಾಜ್ಯದ 19 ಜಿಲ್ಲೆಗಳಲ್ಲಿ ಒಟ್ಟು 82 ಖರೀದಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.

ಈ) ಈ ಕೆಳಕಂಡಂತೆ ಬೆಳೆಗಳನ್ನು ಖರೀದಿ ಮಾಡಲಾಗಿದೆ:-

ಮೆಕ್ಕೆ ಜೋಳ	:	244010.49 ಮೆ.ಟನ್ಸ್
ಭತ್ತ	:	6208.587 ಮೆ.ಟನ್ಸ್
ರಾಗಿ	:	1278.943 ಮೆ.ಟನ್ಸ್
ಜೋಳ	:	ಇನ್ನು ಮಾರುಕಟ್ಟೆಗೆ ಬಂದಿರುವುದಿಲ್ಲ

583(962) ಶ್ರೀ ಪಾಟೀಲ್ ಬಿ.ಆರ್. (ಆಳಂದ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ಸ್ಥಾಪಿಸಿರುವ ತೊಗರಿ ಮೋರ್ಡ್‌ನ ಕಾರ್ಯವ್ಯಾಪ್ತಿಯೇನು, ಇದರ ಕಾರ್ಯಕ್ಷೇತ್ರವೆಷ್ಟು;

ಆ) ಭಾರಿ ತೊಗರಿ ಬೆಳೆಗೆ ಸೀಮಿತವಾಗಿದೆಯೇ;

ಇ) ಇತರ ಬೇಳೆ ಕಾಳುಗಳಿಗೆ ಅನ್ವಯಾಗುತ್ತದೆಯೇ;

ಈ) ಈ ವರ್ಷದ ಕಾರ್ಯಯೋಜನೆ ಮತ್ತು ಇದಕ್ಕೆ ಒದಗಿಸಲಾದ ಹಣವೆಷ್ಟು;

ಉ) ರೈತರಿಗೆ ತೊಗರಿ ಕಾಳು ಇಟ್ಟುಕೊಳ್ಳಲು ಕೃಷಿ ಇಲಾಖೆ ಅಥವಾ ಕೃಷಿ ವಿಶ್ವವಿದ್ಯಾಲಯ ಯಾವ ತಂತ್ರಜ್ಞಾನ ಒದಗಿಸಿದೆ?

ಶ್ರೀ ಕೆ. ಶ್ರೀನಿವಾಸ್‌ಗೌಡ (ಕೃಷಿ ಸಚಿವರು)

ಅ) ರಾಜ್ಯ ಸರ್ಕಾರ ಸ್ಥಾಪಿಸಿರುವ ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿಯಮಿತ ಇದರ ಕಾರ್ಯವ್ಯಾಪ್ತಿ ಕರ್ನಾಟಕ ರಾಜ್ಯವಾಗಿದ್ದು, ಕಾರ್ಯಕ್ಷೇತ್ರ ಕೂಡ ಕರ್ನಾಟಕ ರಾಜ್ಯವಾಗಿರುತ್ತದೆ.

ಆ) ಇಲ್ಲ.

ಇ) ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿಯಮಿತ ಇದು ಬರೀ ತೊಗರಿ ಬೆಳೆಗೆ ಸೀಮಿತವಾಗಿರದೇ ಕೃಷಿ, ತೋಟಗಾರಿಕೆ ಮತ್ತು ಅರಣ್ಯ ಬೆಳೆಗಳು ಸೇರಿದಂತೆ ಎಲ್ಲಾ ಬೇಳೆ-ಕಾಳು ಬೆಳೆಗಳಿಗೆ ಸೀಮಿತವಾಗಿದೆ.

ಈ) ಈ ವರ್ಷದ ಅಂದರೆ 2004-05 ಸಾಲಿನಲ್ಲಿ 50.000 ಕ್ವಿಂಟಾಲ್ ತೊಗರಿ ಖರೀದಿಸುವುದು ಮಂಡಳಿಯ ಕಾರ್ಯ ಯೋಜನೆಯಾಗಿದೆ. ಈ ಕುರಿತು ಮಂಡಳಿಯಲ್ಲಿ ಇರುವ ರೂ. 5 ಕೋಟಿ ಹಣವಿದೆ.

ಉ) ತೊಗರಿಕಾಳು ಸಂಗ್ರಹಣೆ ಕುರಿತಂತೆ ರೈತರಿಗೆ ಕೃಷಿ ಇಲಾಖೆಯು ನೀಡಿರುವ ತಾಂತ್ರಿಕ ಮಾಹಿತಿ ಇಂತಿದೆ.

1. ಕಾಳಿನ ತೇವಾಂಶವನ್ನು ಶೇ. 10ಕ್ಕಿಂತ ಕಡಿಮೆ ಮಟ್ಟದಲ್ಲಿ ಇರಿಸುವುದು.
2. ಔಡಲ (ಹರಳು) ಎಣ್ಣೆಯನ್ನು ತೊಗರಿ ಕಾಳುಗಳಿಗೆ ಲೇಪಿಸುವುದು.
3. ತೊಗರಿಕಾಳಿನೊಂದಿಗೆ ಬೇವಿನ ಎಲೆಗಳನ್ನು ಬೆರೆಸುವುದು.
4. ಕಾಳುಗಳನ್ನು ಪಕ್ಕಾ ಕೋಠಿಯಲ್ಲಿ ಸಂಗ್ರಹಿಸಿಡುವುದು.

584(1058) ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರಕಾರ ಸಹಕಾರಿ ಚಳುವಳಿಯ ಶತಮಾನೋತ್ಸವವನ್ನು ಆಚರಿಸಲು ಇಲ್ಲಿಯವರೆಗೆ ಕೈಗೊಂಡ ಕ್ರಮಗಳೇನು;

ಆ) ಯಾವಾಗ ಎಲ್ಲೆಲ್ಲಿ ಆಚರಿಸಲಾಗುವುದು;

ಇ) ಗದಗ ತಾಲ್ಲೂಕು ಕಣಗಿನಹಾಳ ಗ್ರಾಮದಲ್ಲಿ ರಾಷ್ಟ್ರದಲ್ಲಿಯೇ ಪ್ರಥಮ ಸಹಕಾರಿ ಸಂಸ್ಥೆ ಪ್ರಾರಂಭವಾಗಿದ್ದು. ಅದರ ಯೋಜನೆಗಾಗಿ ಈ ತಾಲ್ಲೂಕು ಹಾಗೂ ಕಣಗಿನಹಾಳ ಗ್ರಾಮದ ಸಂಪೂರ್ಣ ಅಭಿವೃದ್ಧಿಗಾಗಿ ಸರಕಾರ ಕ್ರಮ ಕೈಗೊಳ್ಳುವುದೇ;

ಈ) ಗದಗ ಬೆಟಗೇರಿ ನಗರ ಹಾಗೂ ಕಣಗಿನಹಾಳ ಗ್ರಾಮಗಳಲ್ಲಿ ಶತಮಾನೋತ್ಸವ ಸಮಾರಂಭ ಏರ್ಪಡಿಸಲಾಗುವುದೇ;

ಉ) ಈ ಪ್ರಮಾಣದಿಂದಾರೂ ಸಮಾಜದಲ್ಲಿರುವ ಎಲ್ಲಾ ಸಂಘದ ಸದಸ್ಯರಿಗೆ ಶೇ. 6 ಬಡ್ಡಿ ದರದಲ್ಲಿ ಸಹಕಾರಿ ಸಂಘಗಳ ಮುಖಾಂತರ ವಿತರಣೆಯಾಗುವ ಹಾಗೆ ಸಹಕಾರ ಕ್ರಮಗಳೇನು ಕೈಗೊಳ್ಳುವುದೇ;

ಊ) ಕನಿಷ್ಟ ಈಗಿರುವ ರೈತ ಸದಸ್ಯರ ಮೂರು ಪಟ್ಟು ರೈತರಿಗೆ ಬೆಳೆ ಸಾಲ ಸಹಕಾರ ಸಂಘಗಳ ಮುಖಾಂತರ ಸಿಗಲು ಮುಂದಿನ ಎರಡು ವರ್ಷಗಳಲ್ಲಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಸರ್ಕಾರವು ಸಹಕಾರ ಚಳುವಳಿಯ ಶತಮಾನ್ಯೋತ್ಸವ ವರ್ಷವನ್ನು ಆಚರಿಸಲು ಕರ್ನಾಟಕ ಸಹಕಾರ ಮಹಾಮಂಡಳದ ಮೂಲಕ ಇಲ್ಲಿಯವರೆಗೆ ಕೈಗೊಂಡ ಕ್ರಮಗಳ ವಿವರಗಳು ಕೆಳಕಂಡಂತಿವೆ.

1. ವಿಚಾರಗೋಷ್ಠಿಗಳು / ಉಪನ್ಯಾಸಮಾಲಿಕೆಗಳನ್ನು ಏರ್ಪಡಿಸಿದ ವಿವರಗಳು

	ವಿಷಯ	ಸ್ಥಳ	ದಿನಾಂಕ
1.	20ನೇ ಶತಮಾನದಲ್ಲಿ ಸಹಕಾರಿ ಚಳುವಳಿ ಎದುರಿಸಬೇಕಾದ ಸಮಸ್ಯೆಗಳು	ಬೆಂಗಳೂರು	25-3-04
2.	ಸಹಕಾರಿ ಪಿತಾಮಹಾ ಶ್ರೀ ಸಿದ್ಧನಗೌಡ ಸಣ್ಣರಾಮನಗೌಡ ಪಾಟೀಲ್ ಇವರ ಜ್ಞಾಪನಾರ್ಥಕವಾಗಿ ಪ್ರಾದೇಶಿಕ ಅಸಮಾನತೆ ನಿವಾರಣೆಯಲ್ಲಿ ಸಹಕಾರ ಸಂಘಗಳ ಪಾತ್ರ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು	ಬೆಂಗಳೂರು	29-3-04
3.	ಸಹಕಾರಿ ಡಾಂಬರೀಕರಣದ ಹೆಗಡೆ	ಶಿರಸಿ	10-7-2004

4.	ಸಹಕಾರಿ ಧುರೀಣರಾದ ದಿ. ಎಂ. ವಿರೂಪಾಕ್ಷಪ್ಪ ಪಾಟೀಲ್ ಅವರ ಜ್ಞಾಪಕಾರ್ಥವಾಗಿ ಸಹಕಾರ ಚಳುವಳಿಯ ಸಾಧನೆ ವೈಫಲ್ಯಗಳು ಹಾಗೂ ಪರಿಹಾರೋಪಾಯಗಳು" ಉಪನ್ಯಾಸನವನು ಏರ್ಪಡಿಸಲಾಗಿತ್ತು	ರಾಯಚೂರು14-7-2004
5.	ಕಾರ್ಪೋರೇಟ್ ಗೌರ್ನೆನ್ಸ್ ಇವರ ಕೋ-ಅಪರೇಟಿವ್ ಸೊಸೈಟಿ	ಬೆಂಗಳೂರು 20-8-2004

ವಿಚಾರಗೋಷ್ಠಿ

II. ಸಮಾಲೋಚನೆ ಹಾಗೂ ಚಿಂತಾನಮಂಥನ ಕಾರ್ಯಕ್ರಮ

–	ಮಹಿಳಾ ಸಹಕಾರ ಸಂಘಗಳ ಸದಸ್ಯರಿಗೆ ಉದ್ಯಮಗಳನ್ನು ಪ್ರಾರಂಭಿಸುವ ಬಗ್ಗೆ ಮಾಹಿತಿ ನೀಡಲು	ಬೆಂಗಳೂರು 9-9-2004
–	ಆಧಾಯೋತ್ಪನ್ನ ತರಬೇತಿ ಕಾರ್ಯಕ್ರಮವನ್ನು ಆರ್ಥಿಕವಾಗಿ ಹಿಂದುಳಿದಿರುವ ಮಹಿಳಾ ಸಹಕಾರ ಸಂಘಗಳ ಸದಸ್ಯರ ಆರ್ಥಿಕ ಅಭಿವೃದ್ಧಿ ವೃದ್ಧಿಗೊಳ್ಳಲು-ಎಲ್ಲಾ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಏರ್ಪಡಿಸಲು ನಿರ್ಧರಿಸಿ ಈಗಾಗಲೇ 04 ಜಿಲ್ಲೆಗಳ ಕೇಂದ್ರಸ್ಥಾನದಲ್ಲಿ ಆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.	ಮೈಸೂರು 4-9-2004

ಆ) ಶತಮಾನೋತ್ಸವ ವರ್ಷವನ್ನು ಆಚರಿಸುವ ಅಂಗವಾಗಿ ಕೆಳಕಂಡಂತೆ ಕಾರ್ಯಕ್ರಮಗಳನ್ನು ಆಚರಿಸಲಾಗುವುದು.

-ಆದಾಯೋತ್ಪನ್ನ ತರಬೇತಿ ಕಾರ್ಯಕ್ರಮವನ್ನು ಉಳಿದ 12 ಜಿಲ್ಲೆಗಳಲ್ಲಿ 2005ರ ಜನವರಿ ಮತ್ತು ಫೆಬ್ರವರಿ ಮಾಹೆಯಲ್ಲಿ ಏರ್ಪಡಿಸಲಾಗುತ್ತದೆ.

1. ಬೆಂಗಳೂರು ಮತ್ತು ಮೈಸೂರು ವಿಭಾಗಗಲ್ಲಿ ಹಿರಿಯ ಸಹಕಾರಿಗಳಾದ ದಿವಂಗತ ಬಿ.ಎಸ್. ರಂಗಪ್ಪ ತೀರ್ಥಹಲ್ಲಿ ಮತ್ತು ದಿವಂಗತ ಜಿ.ವಿ. ಶಂಕರೇಗೌಡ ರವರ ಜ್ಞಾಪಕಾರ್ಥವಾಗಿ ಉಪನ್ಯಾಸ ಮಾಲಿಕೆಗಳನ್ನು 2005ರ ಫೆಬ್ರವರಿ ಹಾಗೂ ಮಾರ್ಚ್ ಮಾಹೆಯಲ್ಲಿ ನಡೆಸಲಾಗುವುದು.

2. "ಸಹಕಾರ ಕ್ಷೇತ್ರದ ದೃಷ್ಟಿ 2020" ವಿಚಾರ ಸಂಕೀರಣವನ್ನು ಬೆಂಗಳೂರಿನಲ್ಲಿ ಫೆಬ್ರವರಿ 2005ರಲ್ಲಿ ಏರ್ಪಡಿಸಲಾಗುತ್ತದೆ.

3. "ಪ್ರಸ್ತುತ ಸಹಕಾರ ಕಾಯಿದೆ ಸಹಕಾರ ಚಳುವಳಿಗೆ ಪೂರೆತವಾಗಿದೆಯೇ" ಎನ್ನುವ ಚಿಂತನೆಯ ರಾಜ್ಯಮಟ್ಟದ ಕಾರ್ಯಕ್ರಮವನ್ನು ಗದಗ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ 2005ನೇ ಮೇ ಮಾಹೆಯಲ್ಲಿ ಏರ್ಪಡಿಸಲಾಗುವುದು.

ಸಮಕಾಲೀನ ಶ್ರೇಷ್ಠ ಸಹಕಾರಿಗಳ ಬಗ್ಗೆ 000 ಪುಸ್ತಕಗಳನ್ನು ಹಾಗೂ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಕನಿಷ್ಟ 50 ಸಹಕಾರ ಸಂಘಗಳ ಬಗ್ಗೆ ಲೇಖನಗಳನ್ನು 2005ನೇ ಸಾಲಿನಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಹೌದು. ಕಣಗಿನಹಾಳ ಗ್ರಾಮವನ್ನು ದತ್ತು ಪಡೆದು ಇದನ್ನು ಮಾದರಿ ಗ್ರಾಮವಾಗಿ ಅಭಿವೃದ್ಧಿಪಡಿಸಲು ತೀರ್ಮಾನಿಸಲಾಗಿದೆ. ಜೊತೆಗೆ ದಿವಂಗತ ಸಿದ್ಧನಗೌಡ ಸಣ್ಣರಾಮನಗೌಡ ಪಾಟೀಲರು ಸಹಕಾರ ಕ್ಷೇತ್ರಕ್ಕೆ ಸಲ್ಲಿಸಿದ ಅನುಪಮ ಸೇವೆಗಾಗಿ ಇವರ ಪುತ್ಥಳಿಯನ್ನು ಅನಾವರಣಗೊಳಿಸಲಾಗುವುದು. ಶ್ರೇಷ್ಠ ಸಹಕಾರಿಗಳಾದ ದಿವಂಗತ ಕೆ.ಹೆಚ್. ಪಾಟೀಲ್‌ರವರ ಹೆಸರಿನಲ್ಲಿ ಧಾರವಾಡದಲ್ಲಿ ಒಂದು ಸಹಕಾರ ತರಬೇತಿ ಕಾಲೇಜನ್ನು ಪ್ರಾರಂಭಿಸಲು ಪ್ರಸ್ತಾಪಿಸಲಾಗಿದೆ.

ಈ) ಹೌದು.

ಉ) ಸರಕಾರವು ರಾಜ್ಯದ ರೈತರಿಗೆ ಕೃಷಿ ಪತ್ತಿನ ಸಂಸ್ಥೆಗಳು ಶೇ. 6ರ ಬಡ್ಡಿ ದರದಲ್ಲಿ ಅಲ್ಪ ಕಾಲಾವಧಿ ಮಧ್ಯಮಾವಧಿ ಮತ್ತು ದೀರ್ಘಾವಧಿಸಾಲ ನೀಡುವ ಬಗ್ಗೆ ದಿನಾಂಕ 10-12-2004ರಂದು ಆದೇಶ ಹೊರಡಿಸಿದೆ. ಈ ಯೋಜನೆಯನ್ನು ಈಗಾಗಲೇ ಕಾರ್ಯಗತಗೊಳಿಸಲಾಗಿದೆ. ಈ ಯೋಜನೆಗೆ ಸರಕಾರವು 2004-05ನೇ ಸಾಲಿಗೆ ರೂ. 60.00 ಕೋಟಿ ಅವಕಾಶ ಮಾಡಿದ್ದ ಈಗಾಗಲೇ ರೂ. 15.00 ಕೋಟಿ ಮಂಜೂರು ಮಾಡಿರುತ್ತದೆ.

ಊ) ನಬಾರ್ಡ್ ಆರ್.ಬಿ.ಐ. ಸಂಸ್ಥೆಗಳು ಸಾಲ ನೀಡುವಿಕೆಯಲ್ಲಿ ಅನುಸರಿಸುವ ಮಾನದಂಡ ಹಾಗೂ ಮಾದರಿಯಂತೆ ಅವಶ್ಯಕ ಪ್ರಯತ್ನ ಮಾಡಲಾಗುವುದು.

585(1072) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಯಾವ ಯಾವ ತೋಟಗಾರಿಕೆ ಬೆಳೆಗಳನ್ನು ಗುರುತಿಸಿ, ಪ್ರೋತ್ಸಾಹಿಸಲಾಗಿದೆ;

ಆ) ತೋಟದ ಬೆಳೆಗಳ ಅಭಿವೃದ್ದಿಗಾಗಿ ಸರ್ಕಾರ ಹಮ್ಮಿಕೊಂಡ ಕ್ರಮಗಳೇನು;

ಇ) ತೋಟಗಾರಿಕೆ ಬೆಳೆಗಳಿಗೆ ವಿಮೆ ಸೌಲಭ್ಯವನ್ನು ವಿಸ್ತರಿಸಲಾಗಿದೆಯೇ?

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು)

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಭೂ-ಹವಾಮಾನಕ್ಕನು ಗುಣವಾಗಿ ಬೆಳೆಯತಕ್ಕಂತಹ ಎಲ್ಲಾ ವಿವಿಧ ತೋಟಗಾರಿಕೆ ಬೆಳೆಗಳನ್ನು ಅಂದರೆ ಅಡಿಕೆ,

ತೆಂಗು, ಗೋಡಂಬಿ, ಕೋಕೋ ಇತ್ಯಾದಿ ತೋಟದ ಬೆಳೆಗಳನ್ನು ಹಾಗೂ ಕರಿಮೆಣಸು, ಏಲಕ್ಕಿ, ಶುಂಠಿ, ಅರಿಶಿನ, ಮೆಣಸಿನಕಾಯಿ, ಲವಂಗ, ಜಾಯಿಕಾಯಿ, ವೆನಿಲ್ಲಾ ಮುಂತಾದ ಸಾಂಬಾರು ಬೆಳೆಗಳನ್ನು ಮತ್ತು ವಾಣಿಜ್ಯ ಪುಷ್ಪ ಬೆಳೆಗಳು (ಉಡುಪಿ ಮಲ್ಲಿಗೆ), ಹಣ್ಣು, ತರಕಾರಿ, ಔಷಧಿಯ ಮತ್ತು ಸುಗಂಧಿತ ಬೆಳೆಗಳನ್ನು ಸಹ ಪ್ರೋತ್ಸಾಹಿಸಲಾಗುತ್ತಿದೆ.

ಆ) ತೋಟಗಾರಿಕೆ ಬೆಳೆಗಳ ಅಭಿವೃದ್ಧಿಗಾಗಿ ಹಮ್ಮಿಕೊಳ್ಳಲಾದ ಪ್ರಮುಖವಾದ ಕಾರ್ಯಕ್ರಮಗಳೆಂದರೆ;

1) ವಿವಿಧ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಕಾರ್ಯಕ್ರಮ

2) ಉತ್ಕೃಷ್ಟ ಗುಣಮಟ್ಟದ ಸಸಿ/ಕಸಿಗಳ ಉತ್ಪಾದನೆ ಮತ್ತು ವಿತರಣೆ

3) ತರಬೇತಿ ಮತ್ತು ವಿಚಾರಸಂಕೀರಣಗಳ ಮೂಲಕ ಆಧುನಿಕ ತೋಟಗಾರಿಕೆ ಬೇಸಾಯದ ಬಗ್ಗೆ ತಾಂತ್ರಿಕ ಮಾಹಿತಿ ಒದಗಿಸುವುದು.

4) ನಬಾರ್ಡ್ ಮತ್ತು ರಾಷ್ಟ್ರೀಯ ತೋಟಗಾರಿಕೆ ಮಂಡಳಿವತಿಯಿಂದ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಸಾಲ-ಸೌಲಭ್ಯ ಕಲ್ಪಿಸುವುದು.

5) ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಪದ್ಧತಿ ಅಳವಡಿಕೆಗೆ ಉತ್ತೇಜನ

6) ಕೃಷಿ ರಫ್ತು ವಲಯಗಳ ಸ್ಥಾಪನೆ

7) ತೋಟಗಾರಿಕೆ ಉತ್ಪನ್ನಗಳ ಕೊಯ್ಲೋತ್ತರ ನಿರ್ವಹಣೆ, ಸಂಸ್ಕರಣೆ, ಶೇಖರಣೆ ಬಗ್ಗೆ ಸಹ ಸೂಕ್ತ ತರಬೇತಿ ಏರ್ಪಡಿಸುವುದು ಮತ್ತು ಮಾಹಿತಿ ಒದಗಿಸುವುದು.

ಇ) ಹೌದು. ಆಲೂಗಡ್ಡೆ, ಈರುಳ್ಳಿ ಹಾಗೂ ಮೆಣಸಿನಕಾಯಿ ಬೆಳೆಗಳು ಬೆಳೆವಿಮೆ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿದ್ದು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಿಗೆ ಯಾವುದೇ ತೋಟಗಾರಿಕೆ ಬೆಳೆಗಳ ವಿಮಾ ಸೌಲಭ್ಯವನ್ನು ವಿಸ್ತರಿಸಲಾಗಿರುವುದಿಲ್ಲ.

586(1073) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳಿಗೆ ಪ್ರಸ್ತುತ ಒದಗಿ[illegible] ಕೊಡಲಾಗುತ್ತಿರುವ ಸೌಲಭ್ಯಗಳೇನು;

ಆ) ರಾಜ್ಯದಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳು ಬಾಡಿಕೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ;

ಇ) ಅಂಗನವಾಡಿ ಶಿಕ್ಷಕರಿಗೆ ಸೇವಾ ಭದ್ರತೆ ಮತ್ತಿತರ ಸವಲತ್ತುಗಳ ಕುರಿತು ಸರ್ಕಾರದ ಕ್ರಮಗಳೇನು?

ಶ್ರೀ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಸಮಗ್ರ ಶಿಶು ಅಭಿವೃದ್ಧಿ ಯೋಜನೆಗಳಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಈ ಕೆಳಕಂಡ ಸೇವಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

1. ಪೂರಕ ಪೌಷ್ಠಿಕ ಆಹಾರ
2 ಮಹಿಳೆಯರಿಗೆ ಪೌಷ್ಠಿಕತೆ ಮತ್ತು ಆರೋಗ್ಯ ಶಿಕ್ಷಣ
3. ಚುಚ್ಚುಮದ್ದು.
4. ಆರೋಗ್ಯ ತಪಾಸಣೆ
5. ಮಾಹಿತಿ ಸೇವೆ
6. ಅನೌಪಚಾರಿಕ ಶಾಲಾಪೂರ್ವ ಶಿಕ್ಷಣ

ಆ) 2297

ಇ) ಅಂಗನವಾಡಿ ಕಾರ್ಯಕರ್ತೆಯರು ಗೌರವ ಕಾರ್ಯಕರ್ತೆಯಾಗಿರುವುದರಿಂದ ಗೌರವ ಧನವನ್ನು ಮಾತ್ರ ನೀಡಲಾಗುತ್ತಿದೆ. ಇವರ ಸೇವಾ ವಿಷಯವು ಸುಪ್ರಿಂ ಕೋರ್ಟಿನ ಮುಂದಿರುವುದರಿಂದ ತೀರ್ಪು ಹೊರಬಿದ್ದ ನಂತರ ಈ ಬಗ್ಗೆ ಮುಂದಿನ ಕ್ರಮ ವಹಿಸಲಾಗುವುದು.

588(533) ಶ್ರೀ ಪ್ರಕಾಶ ಖಂಡ್ರೆ (ಭಾಲ್ಕಿ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಹಳದಿ ಪಡಿತರ ಚೀಟಿದಾರರಿಗೆ ನಕಲು (Xerox) ಕೊಟ್ಟು ಮೂಲ ಹಳದಿ ಪಡಿತರ ಚೀಟಿ ವಾಪಸ್ಸು ತೆಗದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ಇದಕ್ಕೆ ಕಾರಣವೇನು;

ಆ) ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಎಷ್ಟು ಜನರ ಮೂಲ ಹಳದಿ ಪಡಿತರ ಚೀಟಿ ಹಿಂಪಡೆದು ನಕಲು ಕೊಡಲಾಗಿದೆ;

ಇ) ನಕಲು ಪಡಿತರ ಚೀಟಿ ಇರುವವರಿಗೂ ಪಡಿತರ ಕೊಡಲಾಗುತ್ತಿದೆಯೇ, ಯಾವ ಪ್ರಮಾಣದಲ್ಲಿ ಕೊಡಲಾಗುತ್ತಿದೆ (ವಿವರ ನೀಡುವುದು)?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಇಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

589(646) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿರುವ ಮಹಾತ್ಮಾಗಾಂಧಿ ಸಹಕಾರ

ಸಕ್ಕರೆ ಕಾರ್ಖಾನೆಯಲ್ಲಿ ಎಷ್ಟು ಜನ ರೈತರು ಶೇರುಗಳನ್ನು ಖರೀದಿ ಮಾಡಿದ್ದಾರೆ, ಇವರಲ್ಲಿ ಎಷ್ಟು ಜನರಿಗೆ ಶೇರು ಸರ್ಟಿಫೀಕೇಟ್‌ಗಳನ್ನು ಕೊಡಲಾಗಿದೆ;

ಆ) ಇನ್ನೂ ಬಹಳಷ್ಟು ಜನರಿಗೆ ಶೇರು ಸರ್ಟಿಫಿಕೇಟ್ ಕೊಡದೆ ಇರುವುದು ನಿಜವೇ ಇದಕ್ಕೆ ಕಾರಣವೇನು;

ಇ) ರೈತರಿಗೆ ಕೂಡಲೇ ಶೇರು ಸರ್ಟಿಫಿಕೇಟ್ ದೊರಕಿಸಿಕೊಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಮಹಾತ್ಮಾಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಬಾಲ್ಕಿ ಇದರಲ್ಲಿ ಒಟ್ಟು 12313 ಜನ ಶೇರು ದಾರ ಸದಸ್ಯರಿದ್ದು, ಇವರಲ್ಲಿ ಇಲ್ಲಿಯವರೆಗೆ 7236 ಜನ ಶೇರುದಾರ ಸದಸ್ಯರಿಗೆ ಶೇರು ಸರ್ಟಿಫಿಕೇಟ್ ನೀಡಲಾಗಿರುತ್ತದೆ.

ಆ, ಇ) ಸಕ್ಕರೆ ನಿರ್ದೇಶಕರಿಂದ ಸೂಕ್ತ ನಿರ್ದೇಶನವನ್ನು ನೀಡಲಾಗುವುದು.

590(739) ಶ್ರೀ ರಘುಪತಿ ಭಟ್ ಕೆ. (ಉಡುಪಿ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ವಿತರಿಸಿರುವ ಹಸಿರು ಕಾರ್ಡುಗಳೆಷ್ಟು;

ಆ) ಪ್ರಸ್ತುತ ನೀಡಲಾಗಿರುವ ತಾತ್ಕಾಲಿಕ ಹಸಿರು ಕಾರ್ಡುಗಳನ್ನು ಬದಲಾಯಿಸಿ ಯಾವಾಗ ಶಾಶ್ವತ ಕಾರ್ಡು ಕೊಡಲಾಗುವುದು;

ಇ) ಹಸಿರು ಕಾರ್ಡು ಹೊಂದಿರದ ಅರ್ಹ ಗ್ರಾಮಾಂತರ ಬಡವರಿಗೆ ಯೋಜನೆಯ ಸೌಲಭ್ಯವನ್ನು ವಿಸ್ತರಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಈ) ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಗರ ಪ್ರಾಧಿಕಾರ ಪ್ರದೇಶದ 7 ಗ್ರಾಮ ಪಂಚಾಯತುಗಳಿಗೆ ಹಸಿರು ಕಾರ್ಡುಗಳನ್ನು ಯಾವಾಗ ನೀಡಲಾಗುವುದು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಹಸಿರು ಕಾರ್ಡುಗಳು 1–11–2003ರಿಂದ ಚಾಲ್ತಿಯಲ್ಲಿಲ್ಲ. ಹಳದಿ ಕಾರ್ಡು ಚಾಲ್ತಿಯಲ್ಲಿದ್ದು ಉಡುಪಿ ಜಿಲ್ಲೆಯಲ್ಲಿ ಒಟ್ಟು 77,258 ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

ಆ) ತಾತ್ಕಾಲಿಕ ಹಳದಿ ಪಡಿತರ ಚೀಟಿ, ತಾತ್ಕಾಲಿಕ ಗುರುತಿನ ಚೀಟಿ ಚಾಲ್ತಿಯಲ್ಲಿವೆ. ಸಂಖ್ಯೆ: ಆನಾಸ 114 ಡಿಆರ್‌ಎ 04 ದಿನಾಂಕ 10–1–2005ರ ಆದೇಶದಂತೆ 1–1–2005 ರಿಂದ ಮನೆ ಮನೆ ಪುನರ್ ಸಮೀಕ್ಷೆ ಕಾರ್ಯ

ಪ್ರಾರಂಭವಾಗಿದೆ. ಏಪ್ರಿಲ್ 2005ಕ್ಕೆ ಸಮೀಕ್ಷೆ ಮುಗಿಯಲಿದ್ದು, ಸಮೀಕ್ಷೆಯಲ್ಲಿ ಕಂಡ ಎಲ್ಲ ಅರ್ಹ ಕುಟುಂಬಗಳಿಗೆ ಶಾಶ್ವತ ಹಳದಿ ಪಡಿತರ ಚೀಟಿ ವಿತರಿಸಲಾಗುವುದು. ಈ ಸಮೀಕ್ಷೆಯಲ್ಲಿ ತಾತ್ಕಾಲಿಕ ಚೀಟಿಗಳೆಲ್ಲವೂ ಒಳಗೂಡುತ್ತವೆ.

ಇ) ಕೈಬಿಟ್ಟು ಹೋದ ಅರ್ಹ ಕುಟುಂಬಗಳ ಸೇರ್ಪಡೆಗೆ, ಪಟ್ಟಿಯಲ್ಲಿ ಸೇರ್ಪಡೆಗೊಂಡ ಅನರ್ಹ ಕುಟುಂಬಗಳನ್ನು ಕೈಬಿಡುವ ಉದ್ದೇಶದಿಂದಲೇ ಮನೆ ಮನೆ ಪುನರ್ ಸಮೀಕ್ಷೆ ಕೈಗೊಳ್ಳಲಾಗಿದೆ. ಸಮೀಕ್ಷೆಯಲ್ಲಿ ಕಂಡ ಅರ್ಹ ಕುಟುಂಬದವರೆಲ್ಲರಿಗೂ ಯೋಜನೆಯ ಸೌಲಭ್ಯ ವಿಸ್ತರಿಸಲಾಗುವುದು.

ಈ) ಮನೆ ಮನೆ ಪುನರ್ ಸಮೀಕ್ಷಾ ಕಾರ್ಯವು ಪೂರ್ಣಗೊಂಡ ನಂತರ ಉಡುಪಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯೊಳಗೆ ಬರುವ ಎಲ್ಲಾ ಗ್ರಾಮ ಪಂಚಾಯ್ತಿಯ ಅರ್ಹ ಕುಟುಂಬಗಳಿಗೂ ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗುವುದು.

591(1259) ಶ್ರೀ ರಘುಪತಿ ಭಟ್ ಕೆ. (ಉಡುಪಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ ಎಷ್ಟು;

ಆ) ಸದರಿ ಕಾರ್ಯಕರ್ತೆಯರಿಗೆ ಹಾಲಿ ಪಾವತಿಸುತ್ತಿರುವ ಮಾಸಿಕ ವೇತನ ಎಷ್ಟು;

ಇ) ಇವರ ವೇತನ ಪರಿಷ್ಕರಣೆ ಬಗ್ಗೆ ಸರಕಾರವು ಏನಾದರೂ ಕ್ರಮ ಕೈಗೊಂಡಿದೆಯೇ;

ಈ) ಅಂಗನವಾಡಿಯಲ್ಲಿ ಮಕ್ಕಳ ಉಪಹಾರ ತಯಾರಿಸಲು ಉರುವಲು ಮತ್ತು ಸೀಮೆಎಣ್ಣೆಯನ್ನು ಪೂರೈಸಲು ಸರ್ಕಾರವು ಕ್ರಮ ಕೈಗೊಂಡಿದೆಯೇ;

ಉ) ಸದರಿ ಕಾರ್ಯಕರ್ತೆಯರಿಗೆ ನಿರ್ವಹಣಾ ವೆಚ್ಚ ಮಾಸಿಕ ರೂ.100/- ರಿಂದ ಹೆಚ್ಚು ಮಾಡಲು ಸರ್ಕಾರವು ಇಚ್ಛಿಸಿದೆಯೇ?

ಶ್ರೀಮತಿ ಭಾಗೀರತಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) 40301

ಆ) ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ

ಇ) ಈಗಾಗಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಗೌರವಧನ ಪರಿಷ್ಕರಣೆ ಮಾಡಿರುತ್ತವೆ.

ಈ) ಪ್ರತಿ ತಿಂಗಳು ಪ್ರತೀ ಅಂಗನವಾಡಿ ಕೇಂದ್ರಕ್ಕೆ ರೂ.100 ಉರುವಲು ವೆಚ್ಚವನ್ನು ನೀಡಲಾಗುತ್ತಿದೆ.

ಉ) ಇಲ್ಲ.

ಅನುಬಂಧ

ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ನೀಡುತ್ತಿರುವ ಗೌರವಧನದ ವಿವರ:

ಕ್ರ. ಸಂ.	ವಿದ್ಯಾರ್ಹತೆಯ ವಿವರ	ಭಾರತ ಸರ್ಕಾರ ದಿಂದ ನೀಡುತ್ತಿರುವ ಗೌರವಧನ	ರಾಜ್ಯ ಸರ್ಕಾರ ದಿಂದ ನೀಡುತ್ತಿರುವ ಹೆಚ್ಚುವರಿ ಗೌರವಧನ	ಒಟ್ಟು
1.	ಎಸ್‌ಎಸ್‌ಎಲ್‌ಸಿ ಫೇಲ್	ರೂ. 938	ರೂ. 450	ರೂ. 1388
2.	ಎಸ್‌ಎಸ್‌ಎಲ್‌ಸಿ ಫೇಲ್ ಜೊತೆಗೆ 5 ವರ್ಷದ ಅನುಭವ	ರೂ. 969	ರೂ. 450	ರೂ. 1419
3.	ಎಸ್‌ಎಸ್‌ಎಲ್‌ಸಿ ಫೇಲ್ ಜೊತೆಗೆ 10 ವರ್ಷದ ಅನುಭವ	ರೂ. 1000	ರೂ. 450	ರೂ. 1450
4.	ಎಸ್‌ಎಸ್‌ಎಲ್‌ಸಿ ಉತ್ತೀರ್ಣ	ರೂ. 1000	ರೂ. 450	ರೂ. 1450
5.	ಎಸ್‌ಎಸ್‌ಎಲ್‌ಸಿ ಉತ್ತೀರ್ಣ ಜೊತೆಗೆ 5 ವರ್ಷದ ಅನುಭವ	ರೂ. 1031	ರೂ. 450	ರೂ. 1481
6.	ಎಸ್‌ಎಸ್‌ಎಲ್‌ಸಿ ಉತ್ತೀರ್ಣ ಜೊತೆಗೆ 10 ವರ್ಷದ ಅನುಭವ	ರೂ. 1063	ರೂ. 450	ರೂ. 1513
7.	ಅಂಗನವಾಡಿ ಸಹಾಯಕಿಯರು	ರೂ. 500	ರೂ. 225	ರೂ. 725

592(1260) ಶ್ರೀ ರಘುಪತಿ ಭಟ್ ಕೆ. (ಉಡುಪಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಕೇಂದ್ರ ಸಹಕಾರಿ ಬ್ಯಾಂಕ್ ಅಸ್ತಿತ್ವದಲ್ಲಿ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಯಾವಾಗ ಸ್ಥಾಪಿಸಲಾಗುವುದು;

ಇ) ಸ್ಥಾಪನೆಗಾಗಿ ಸ್ಥಳವನ್ನು ಗುರುತಿಸಲಾಗಿದೆಯೇ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಹೌದು.

ಆ) ಉಡುಪಿ ಜಿಲ್ಲೆಯಲ್ಲಿ ಹೊಸ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಸ್ಥಾಪನೆ ಮಾಡಬೇಕಾದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಮಹಾಸಭೆಯಲ್ಲಿ ಸಹಕಾರ ಸಂಘಗಳ ಕಾಯ್ದೆ ಕಲಂ 14(1) ರೀತ್ಯಾ 2/3ನೇ ಬಹುಮತದಿಂದ ತೀರ್ಮಾನಿಸಬೇಕಾಗಿದೆ. ಅದರಂತೆ ಎರಡು ಬಾರಿ ಬ್ಯಾಂಕಿನ ಮಹಾಸಭೆಯಲ್ಲಿ ದಿನಾಂಕ 14-3-2001 ಹಾಗೂ 25-9-2004ರಂದು ವಿಷಯ ಮಂಡಿಸಿದ್ದು, ಈ ಬಗ್ಗೆ ಮೇಲಿನ ಕಾಯ್ದೆಯಂತೆ ಮಹಾಸಭೆಯ ಒಪ್ಪಿಗೆಯಾಗಿಲ್ಲ. ಆದುದರಿಂದ ಹೊಸ ಬ್ಯಾಂಕ್ ಸ್ಥಾಪನೆಯಾಗಿಲ್ಲ.

ಇ) ಉದ್ಭವಿಸುವುದಿಲ್ಲ.

593(1261) ಶ್ರೀ ರಘುಪತಿ ಭಟ್ ಕೆ. (ಉಡುಪಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಜಿಲ್ಲೆಯ ಸಹಕಾರಿ ಸಂಘಗಳು ಎಷ್ಟು ಠೇವಣಿ ಇಟ್ಟಿವೆ;

ಆ) ಇದನ್ನು ಹಿಂದಿರುಗಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಇ) ಕಾರ್ಖಾನೆಯ ಪುನಶ್ಚೇತನಕ್ಕೆ ಸರ್ಕಾರದ ಯೋಜನೆಯೇನಾದರೂ ಇದೆಯೇ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ದಕ್ಷಿಣ ಕನ್ನಡ ಸಹಕಾರ ಸಕ್ಕರೆ ಕಾರ್ಖಾನೆ (ನಿ) ಬ್ರಹ್ಮಾವರ. ಉಡುಪಿ ಜಿಲ್ಲೆ ಇದರ 82 ಸಹಕಾರಿ ಸಂಘಗಳು ರೂ. 5.88 ಕೋಟಿಗಳಷ್ಟು ಠೇವಣಿಯನ್ನಿಟ್ಟಿರುತ್ತವೆ.

ಆ) ಇಲ್ಲ.

ಇ) ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ಬ್ರಹ್ಮಾವರ, ಉಡುಪಿ ಜಿಲ್ಲೆ ಇದನ್ನು ಪುನಶ್ಚೇತನಗೊಳಿಸುವ ಕುರಿತು ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ಮಾಡಲು ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ಸರ್ಕಾರವು ದಿನಾಂಕ 10-11-2004ರಲ್ಲಿ ರಚಿಸಿದ್ದು, ಈ ಸಮಿತಿಯು ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

594(1262) ಶ್ರೀ ರಘುಪತಿ ಭಟ್ ಕೆ. (ಉಡುಪಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರವು ಹೊಸದಾಗಿ ಸರ್ವೀಸ್ ಟ್ಯಾಂಕ್ ನಿಯಮವನ್ನು ಜಾರಿಗೊಳಿಸಿರುವುದರಿಂದ ಸಹಕಾರಿ ರಂಗಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ನಿಯಮವನ್ನು ರದ್ದುಗೊಳಿಸಲು ಸರ್ಕಾರವು ಇಚ್ಛಿಸಿರುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಕೇಂದ್ರ ಸರ್ಕಾರವು ದಿನಾಂಕ 10-9-2004ರಿಂದ ಜಾರಿಗೆ ಬರುವಂತೆ ಸರ್ವೀಸ್ ಟ್ಯಾಕ್ಸ್ ನಿಯಮ ಜಾರಿಗೆ ತಂದಿದ್ದು, ಆಯ್ದ ಕೆಲವು ವಹಿವಾಟು/ಸೇವೆಗಳಿಗೆ (ಪಟ್ಟಿ ಲಗತ್ತಿಸಿದೆ) ಸಂಬಂಧಿಸಿದಂತೆ ಶೇಕಡಾ 10 ಸರ್ವೀಸ್ ಟ್ಯಾಕ್ಸ್ ಮತ್ತು 2 ಶಿಕ್ಷಣ ಸೆಸ್ ಪಾವತಿಸಬೇಕಾಗುತ್ತದೆ. ಇಂತಹ ಸೇವೆ ನೀಡುವಂತಹ ಸಹಕಾರ ಸಂಸ್ಥೆಗಳಿಗೆ ಶೇಕಡ 10 + ಶೇಡಕ 2 ಹೆಚ್ಚಿನ ಹೊರೆಯಾಗುತ್ತಿವೆ.

ಆ) ಇದು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವುದಿಲ್ಲ.

Annexure

Service Tax @ 10% plus 2% Education Cess is leviable on following 71 Services

1. Advertising
2. Air Travel Agents
3. Architects
4. Authorised Service Stations
5. Auxiliary insurance Services
6. Auxiliary Services Relating to Life Insurance
7. Banking and Other Financial Services
8. Beauty Parlours
9. Broadcasting Services
10. Business Auxiliary Services
11. Clearing and Forwarding Agents
12. Cable Operators
13. Cargo Handling Services
14. Commercial Coaching and Training Services
15. Consulting Engineers
16. Convention Services
17. Courier Services
18. Credit Rating Agencies
19. Custom House Agents
20. Drycleaning Services
21. Erection, Commissioning or Installation Services
22. Event Management
23. Facsimile (Fax) Services
24. Fashion Designers
25. Franchise Services

26. Health Clubs and Fitness Centres
27. Insurance
28. Interior Decorators
29. Internet Cafe
30. Leased Circuit Services
31. Maintenance or Repair Services
32. Management Consultants
33. Manpower Recruitment Agencies
34. Mandap Keepers
35. Market Research Agencies
36. On-line Services
37. Pager Services
38. Photography Services
39. Port Services
40. Practicing Chartered Accountants
41. Practicing Company Secretaries
42. Practicing cost Accountants
43. Private Security Agencies
44. Rail Travel Agents
45. Real Estate Agents Consultants
46. Rent-A-Cab Operators
47. Scientific Testing and Consultancy Services
49. Steamer Agents
50. Stock Brokers
51. Storage and Warehouse Services
52. Technical Testing and Analysis and Inspection and Certificate
53. Telegraph Services
54. Telephone Service
55. Telex Services
56. Tour Operators
57. Underwriter Agencies
58. Video Tape Production Services
59. Business Exhibition Services
60. Airport Services
61. Transport Services
62. Survey and Exploration of Mineral
63. Intellectual Property Services other than copyright

64. Intellectual property services
65. Forward Contract Services
66. Pandal of Shamiana Services
67. Outdoor Catering Services
68. TV or Radio Programme Production Services
69. Construction Services in respect of Commercial or Industrial Buildings and Civil Structures.
70. Travel Agents (other than Air Rail Travel Agents)
71. Transport of Goods by Road (by a Goods Transport Agency which issues Consignment. Note, by whatever name called)

595(708) ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿ ಅದರಲ್ಲೂ ಮುಖ್ಯವಾಗಿ ಕೆ.ಜಿ.ಎಫ್. ನಲ್ಲಿ ತೋಟಗಾರಿಕೆ ವೃತ್ತಿಯನ್ನು ಅಭಿವೃದ್ಧಿಪಡಿಸುವುದರ ಮೂಲಕ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲು ಸರ್ಕಾರ ಕೈಗೊಂಡಿರುವ ಅಥವಾ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಆರ್. ಶ್ರೀನಿವಾಸ (ತೋಟಗಾರಿಕೆ ಸಚಿವರು)

ಅ) ಗ್ರಾಮೀಣ ಪ್ರದೇಶದ ಯುವಕರಿಗೆ / ರೈತಮಕ್ಕಳಿಗೆ ವಿವಿಧ ರೀತಿಯ ತೋಟಗಾರಿಕೆ ತರಬೇತಿ ಕಾರ್ಯಕ್ರಮಗಳನ್ನು ಪ್ರತಿ ವರ್ಷ ಆಯೋಜಿಸಲಾಗುತ್ತಿದೆ. ಇದು ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವಲ್ಲಿ ಪರೋಕ್ಷವಾಗಿ ಸಹಕಾರಿಯಾಗಿರುತ್ತದೆ.

ವಿವರ ಇಂತಿದೆ:

1. ಕೋಲಾರ ಜಿಲ್ಲೆಯ ರೈತಮಕ್ಕಳಿಗೆ 10 ತಿಂಗಳ ಅವಧಿಯ ತೋಟಗಾರಿಕೆ ತರಬೇತಿ ಕಾರ್ಯಕ್ರಮವನ್ನು ಬೆಂಗಳೂರಿನ ಲಾಲ್‌ಬಾಗ್‌ನಲ್ಲಿರುವ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ ಆಯೋಜಿಸಲಾಗುತ್ತಿದೆ. ಈ ಕಾರ್ಯಕ್ರಮದಡಿ ಹೊಸದಾಗಿ ಸ್ವ ನಿಯೋಜನಾ ತರಬೇತಿ ಕಾರ್ಯಕ್ರಮವನ್ನು ಸಹ ಅಳವಡಿಸಲಾಗಿದೆ. ಇದರಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳನ್ನು ಹೆಸರಾಂತ ಸಂಸ್ಥೆಗಳು / ಕಂಪನಿಗಳು / ಪ್ರಗತಿಪರ ರೈತರ ತೋಟಗಳಿಗೆ ಪ್ರಾಯೋಗಿಕ ತರಬೇತಿಗಾಗಿ ನಿಯೋಜಿಸಲಾಗುವುದು, ಇದರಿಂದಾಗಿ, ತರಬೇತಿ ವಿದ್ಯಾರ್ಥಿಗಳ ಕೆಲಸದಲ್ಲಿ ವಿಶ್ವಾಸ ಹಾಗೂ ಸ್ವಯಂ ಪೂರ್ಣತೆ ಮೂಡಿಸಲು ಸಹಕಾರಿಯಾಗಿದೆ.

2. ಇದಲ್ಲದೆ, ಜಿಲ್ಲಾ ಮಟ್ಟದಲ್ಲಿ ಆಸಕ್ತ ರೈತರಿಗೆ / ರೈತ ಮಹಿಳೆಯರಿಗೆ ಅಲ್ಪಾವಧಿ ಕಾರ್ಯಕ್ರಮಗಳನ್ನು ಸಹ ಆಯೋಜಿಸಲಾಗುತ್ತಿದೆ. ಗ್ರಾಮ ತೋಟಗಾರಿಕೆ ಬಗ್ಗೆ, ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ / ಶೇಖರಣಾ ತಾಂತ್ರಿಕತೆ, ಅಣಬೆ

ಕೃಷಿ ಇತ್ಯಾದಿ ವಿಷಯಗಳ ಬಗ್ಗೆ ಅರಿವು ಮೂಡಿಸುವ ಮೂಲಕ ಸಹ, ತೋಟಗಾರಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ಉತ್ತೇಜಿಸಲಾಗುತ್ತಿದೆ.

3. ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಉತ್ತೇಜಿಸುವ ದೃಷ್ಟಿಯಿಂದ, ಇಲಾಖೆಯು, ನಬಾರ್ಡ್ ಮೂಲಕ ಸಾಲ-ಸೌಲಭ್ಯಗಳನ್ನು ಕಲ್ಪಿಸುತ್ತಿದೆ. ಅಲ್ಲದೇ, ತೋಟಗಾರಿಕೆಯ ವಿವಿಧ ಚಟುವಟಿಕೆಗಳ ಖಾಸಗಿ ವಲಯದ ಯೋಜನೆಗಳಿಗೂ ಸಹ ನಬಾರ್ಡ್ ಮತ್ತು ರಾಷ್ಟ್ರೀಯ ತೋಟಗಾರಿಕೆ ಮಂಡಳಿವತಿಯಿಂದ ಸಾಲ-ಸೌಲಭ್ಯ ಒದಗಿಸಲಾಗುತ್ತಿದೆ.

ಮೇಲ್ಕಂಡ ಕಾರ್ಯಕ್ರಮಗಳಿಂದಾಗಿ, ಆಯಾ ಪ್ರದೇಶದ ಆಸಕ್ತ ರೈತರು, ರೈತ ಯುವಕರು ಹಾಗೂ ರೈತ ಮಹಿಳೆಯರು ತೋಟಗಾರಿಕೆ ವೃತ್ತಿಯಲ್ಲಿ ಸ್ವತ: ತೊಡಗಿಸಿಕೊಳ್ಳಬಹುದಾಗಿರುತ್ತದೆ, ಮತ್ತು ನರ್ಸರಿ, ಮತ್ತಿತರೆ ಖಾಸಗಿ ಕ್ಷೇತ್ರದ ತೋಟಗಾರಿಕೆ ಉದ್ಯಮಗಳಲ್ಲಿ ಸಹ ತೊಡಗಿಸಿಕೊಳ್ಳಬಹುದಾಗಿರುತ್ತದೆ.

596(709) ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಜಿ.ಎಫ್. ನಲ್ಲಿರುವ ರಾಬರ್ಟ್‌ಸನ್ ಪೇಟೆಯ ಗೃಹ ನಿರ್ಮಾಣ ಸಹಕಾರ ಸಂಘದ ಕಟ್ಟಡವನ್ನು ಖಾಸಗಿ ವ್ಯಕ್ತಿಯೊಬ್ಬರ ಹೆಸರಿಗೆ ಖಾತೆ ಆಗಿರುವುದು ಕಾನೂನು ಬಾಹಿರವಲ್ಲವೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಅಥವಾ ಕೈಗೊಳ್ಳುವ ಕ್ರಮವೇನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಕೆ.ಜಿ.ಎಫ್. ನಗರದಲ್ಲಿ ರಾಬರ್ಟ್‌ಸನ್ ಪೇಟೆ ಗೃಹ ನಿರ್ಮಾಣ ಸಹಕಾರ ಸಂಘವು ಸಮಾಪನೆಯಾಗಿದ್ದು, ಈ ಸಂಘದ ಹೆಸರಿನಲ್ಲಿ ಯಾವುದೇ ಕಟ್ಟಡ ಇರುವುದಿಲ್ಲ. ಆದುದರಿಂದ ಖಾಸಗಿ ವ್ಯಕ್ತಿಯೊಬ್ಬರ ಹೆಸರಿಗೆ ಕಟ್ಟಡದ ಖಾತೆ ಆಗುವ ಪ್ರಶ್ನೆಯುದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

599(151) ಶ್ರೀ ರಾಮಸ್ವಾಮಿ ಎ.ಟಿ. (ಅರಕಲಗೂಡು) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಎಷ್ಟು ಸಹಕಾರಿ ಸಕ್ಕರೆ ಕಾರ್ಖಾನೆಗಳು ಲಾಭ ಮತ್ತು ನಷ್ಟದಲ್ಲಿರುತ್ತವೆ (ವಿವರ ಒದಗಿಸುವುದು);

ಆ) ನಷ್ಟ ಅನುಭವಿಸಲು ಕಾರಣಗಳೇನು;

ಇ) ಸರ್ಕಾರ ಸಕ್ಕರೆ ಕಾರ್ಖಾನೆಗಳನ್ನು ಸದೃಢಪಡಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 28 ಸಹಕಾರಿ ಸಕ್ಕರೆ ಕಾರ್ಖಾನೆಗಳಿದ್ದು. ಈ ಪೈಕಿ 3

ಕಾರ್ಖಾನೆಗಳು ಲಾಭದಲ್ಲಿದ್ದು, 7 ಕಾರ್ಖಾನೆಗಳು ಪ್ರಾಥಮಿಕ ಹಂತದಲ್ಲಿ, 2 ಕಾರ್ಖಾನೆಗಳು ಸಮಾಪನಾ ಆದೇಶದಲ್ಲಿ ಮತ್ತು 16 ಕಾರ್ಖಾನೆಗಳು ನಷ್ಟದಲ್ಲಿರುತ್ತವೆ.

ಆ)1) ಸಂಪೂರ್ಣ ಸಾಮರ್ಥ್ಯ ಉಪಯೋಗ ಮಾಡದೇ ಇರುವುದು.

2) ಮಂಜೂರಾತಿಗಿಂತ ಹೆಚ್ಚುವರಿ ಸಿಬ್ಬಂದಿ ನೇಮಕ

3) ಆಡಳಿತದಲ್ಲಿ ಲೋಪದೋಷಗಳು

4) ತರಬೇತಿ ಇಲ್ಲದ ತಾಂತ್ರಿಕ ಸಿಬ್ಬಂದಿ

5) ಖರೀದಿ ಮತ್ತು ಮಾರಾಟದಲ್ಲಿ ವೃತ್ತಿಪರತೆ ಇಲ್ಲದಿರುವುದು

6) ಮೆಷಿನರಿಗಳನ್ನು ಕಾಲಕ್ಕೆ ತಕ್ಕಂತೆ ನವೀಕರಣ ಮಾಡದಿರುವುದು

7) ಕಡಿಮೆ ಕಬ್ಬು ನುರಿಸುವ ಪ್ರಮಾಣದ ಸಾಮರ್ಥ್ಯ ಹೊಂದಿರುವುದು

8) ಬಂಡವಾಳದ ಕೊರತೆ ಹಾಗೂ ಹೆಚ್ಚಿನ ಬಡ್ಡಿ ದರಗಳು

9) ಮಳೆಗಾಲ ಸರಿ ಇಲ್ಲದೆ ಸಕ್ಕರೆ ಇಳುವರಿಯಲ್ಲಿ ಕಡಿಮೆಯಾಗಿರುವುದು

ಇ) ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1) ಸಂಪೂರ್ಣ ಸಾಮರ್ಥ್ಯ ಉಪಯೋಗಕ್ಕಾಗಿ ಹಳೆ ಯಂತ್ರೋಪಕರಣಗಳನ್ನು ನವೀಕರಿಸಲು ಸೂಚಿಸಲಾಗಿದೆ.

2) ಆಡಳಿತದಲ್ಲಿ ಲೋಪದೋಷಗಳನ್ನು ಸರಿಪಡಿಸಲು ಕಾಲಕಾಲಕ್ಕೆ ಸೂಕ್ತ ನಿರ್ದೇಶನ ನೀಡುವ ಕ್ರಮ ಕೈಕೊಳ್ಳಲಾಗುತ್ತಿದೆ.

3) ತಾಂತ್ರಿಕ ಸಿಬ್ಬಂದಿಗೆ ತರಬೇತಿ ನೀಡಲು ಸೂಚಿಸಿದೆ.

4) ಹೆಚ್ಚುವರಿ ಸಿಬ್ಬಂದಿಯನ್ನು ಕಡಿತಗೊಳಿಸಿ, ಸ್ವಯಂ ನಿವೃತ್ತಿ ಯೋಜನೆಗೆ ಪ್ರೋತ್ಸಾಹಿಸಲಾಗುತ್ತಿದೆ.

5) ಖರೀದಿ ಮತ್ತು ಮಾರಾಟದಲ್ಲಿ ಪಾರದರ್ಶಕತೆ ತರಲು ಆದೇಶ ನೀಡಲಾಗಿದೆ.

6) ಹೆಚ್ಚಿನ ಸಾಮಗ್ರಿಗಳನ್ನು ಅನಾವಶ್ಯಕವಾಗಿ ಖರೀದಿ ಮಾಡಿ ದಾಸ್ತಾನು ಮಾಡುವುದನ್ನು ನಿಷೇದಿಸಲು ಕ್ರಮ ಕೈಗೊಳ್ಳಲಾಗಿದೆ.

7) ಕಡಿಮೆ ಸಾಮರ್ಥ್ಯದ ಸಕ್ಕರೆ ಕಾರ್ಖಾನೆಗಳನ್ನು ಕನಿಷ್ಟ 2500 ಟಿಸಿಡಿ ಸಾಮರ್ಥ್ಯಕ್ಕೆ ಪರಿವರ್ತಿಸಲು ಪ್ರೋತ್ಸಾಹ ನೀಡಲಾಗುತ್ತಿದೆ.

8) ಆಧುನಿಕ ತಂತ್ರಜ್ಞಾನವನ್ನು ಅಳವಡಿಸಲು ಸೂಚಿಸಲಾಗಿದೆ.

600(1449) ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಎಷ್ಟು ನಷ್ಟದಲ್ಲಿದೆ;

ಆ) ಹೊರಗಡೆಯವರಿಗೆ ಕೊಡಬೇಕಾದ ಹಣ ಎಷ್ಟು;

ಇ) ಕಾರ್ಪೋರೇಷನ್‌ನಲ್ಲಿ ಇರುವ ವಿವಿಧ ವಾಹನಗಳು ಎಷ್ಟು;

ಈ) ಅವುಗಳು ಎಷ್ಟು ದಿವಸಗಳಿಂದ ಕಾರ್ಯನಿರ್ವಹಿಸದೆ ಸ್ಥಗಿತಗೊಂಡಿವೆ;

ಉ) ಅವುಗಳನ್ನು ವಿಲೇ ಮಾಡಲು ಇರುವ ತೊಡಕುಗಳನ್ನು ನಿವಾರಣೆ ಮಾಡಲು ಸರ್ಕಾರಕ್ಕೆ ಇರುವ ತೊಂದರೆಯಾದರೂ ಏನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಸಂಚಿತ ನಷ್ಟ ರೂ. 162.66 ಕೋಟಿ (ಮಾರ್ಚ್ 2004ರ ಅಂತ್ಯಕ್ಕೆ).

ಆ) ರೂ. 24.20 ಕೋಟಿಗಳು

ಇ) 85 ವಾಹನಗಳು, 86 ಬುಲ್ಡೋಜರ್‌ಗಳು

ಈ) ಕಳೆದ 1 ವರ್ಷದಿಂದ

ಉ) ಕಂಪನಿಗೆ ಲಿಕ್ವಿಡೇಟರ್ (ಸಮಾಪನಕಾರರು)ನ್ನು ನೇಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ತದನಂತರ ಸಮಾಪನಕಾರರು ಕಂಪನಿಯ ಕಾಯ್ದೆ ಪ್ರಕಾರ ಇವುಗಳನ್ನು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳುವುದು.

ಸರ್ಕಾರ ಸ್ಥಾಪನೆ ಮಾಡಿರುವ ಆವರ್ತ ನಿಧಿ ವಿವರ

602(58) ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಆವರ್ತ ನಿಧಿ ಸ್ಥಾಪಿಸಿದ್ದು ಯಾವಾಗ ಹಾಗೂ ಈ ನಿಧಿಗೆ ನೀಡಿರುವ ಮೊತ್ತವೆಷ್ಟು;

ಆ) ಇದರಲ್ಲಿ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಪಾಲೆಷ್ಟು; (ವಿವರ ಕೊಡುವುದು);

ಇ) ಆವರ್ತ ನಿಧಿ ವ್ಯಾಪ್ತಿಗೆ ಒಳಪಡುವ ಹಾಗೂ ಒಳಪಡದ ಕೃಷಿ ಉತ್ಪನ್ನಗಳು ಯಾವುವು;

ಈ) ಈ ಒಳಪಡದ ಕೃಷಿ ಉತ್ಪನ್ನಗಳನ್ನು ಆವರ್ತ ನಿಧಿ ವ್ಯಾಪ್ತಿಗೆ ಸೇರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ) ಆವರ್ತ ನಿಧಿಯಿಂದ ಈವರೆಗೂ ನಡೆದಿರುವ ವಹಿವಾಟು ಎಷ್ಟು (ಪೂರ್ಣ ಮಾಹಿತಿ ನೀಡುವುದು);

ಊ) ಆವರ್ತ ನಿಧಿ ಹೆಚ್ಚಳ ಮಾಡುವ ಬಗ್ಗೆ ಸರ್ಕಾರದ ನಿಲುವೇನಾದರೂ ಇದೆಯೇ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಸಿಎಂಡಬ್ಲ್ಯೂ 239 ಎಂಆರ್‌ಇ 97, ದಿನಾಂಕ 24-11-1999ರನ್ವಯ ಆವರ್ತ ನಿಧಿಯನ್ನು ಸ್ಥಾಪಿಸಿದೆ. ದಿನಾಂಕ 19-1-2005ರವರೆಗೆ ಆವರ್ತ ನಿಧಿಯಲ್ಲಿ ರೂ. 156.72 ಕೋಟಿಗಳು ಕ್ರೋಢೀಕೃತವಾಗಿರುತ್ತವೆ.

ಆ) ಇದುವರೆಗೂ ರಾಜ್ಯ ಸರ್ಕಾರವು ಆವರ್ತ ನಿಧಿಗೆ ರೂ. 47.40 ಕೋಟಿಗಳನ್ನು ಒದಗಿಸಿರುತ್ತದೆ. ಕೇಂದ್ರ ಸರ್ಕಾರಕ್ಕೆ ಆವರ್ತ ನಿಧಿಗೆ ರೂ.200.00 ಕೋಟಿಗಳನ್ನು ಮಂಜೂರು ಮಾಡುವಂತೆ ಪ್ರಸ್ತಾಪನೆಯನ್ನು ಕಳಿಸಲಾಗಿದೆ. ಕೇಂದ್ರ ಸರ್ಕಾರದಿಂದ ಮಂಜೂರಾತಿ ನಿರೀಕ್ಷಿಸಲಾಗಿದೆ.

ಇ) ಪ್ರತಿ ವರ್ಷವೂ ಭಾರತ ಸರ್ಕಾರವು ಕನಿಷ್ಠ ಬೆಂಬಲ ಬೆಲೆಯನ್ನು ಘೋಷಿಸುವ ಕೃಷಿ ಉತ್ಪನ್ನಗಳಾದ ಭತ್ತ, (ಸಾಮಾನ್ಯ ಹಾಗೂ ಗ್ರೇಡ್-ಎ), ಜೋಳ, ಸಜ್ಜೆ, ರಾಗಿ, ಮೆಕ್ಕೆಜೋಳ, ಗೋಧಿ, ಬಾರ್ಲಿ, ಕಡಲೆ, ತೊಗರಿ, ಹೆಸರು ಮತ್ತು ಉದ್ದು, ಚನ್ನಂಗಿ (ಮಸೂರ್), ಕಬ್ಬು, ಹತ್ತಿ (ಎಫ್-414, ಹೆಚ್-777/ ಜೆ-34, ಹೆಚ್-4), ನೆಲಗಡಲೆ (ಸಿಪ್ಪೆ ಸಹಿತ), ನಾರು (ಜೂಟ್), ಸಾಸಿವೆ, ಸೂರ್ಯಕಾಂತಿ, ಸೋಯಾ ಅವರೆ (ಕಪ್ಪು ಹಾಗೂ ಹಳದಿ), ಕುಸುಬೆ, ತೋರಿಯಾ, ತಂಬಾಕು; ಕೊಬ್ಬರಿ (ಮಿಲ್ಲಿಂಗ್ ಹಾಗೂ ಉಂಡೆ), ಎಳ್ಳು, ಹುಚ್ಚೆಳ್ಳು ಹಾಗೂ ತೋಟಗಾರಿಕಾ ಉತ್ಪನ್ನಗಳಾದ ಈರುಳ್ಳಿ, ಆಲೂಗಡ್ಡೆ, ಟೊಮ್ಯಾಟೋ ಮತ್ತು ಹಸಿಮೆಣಸಿನಕಾಯಿ ಆವರ್ತ ನಿಧಿ ಯೋಜನೆಯ ವ್ಯಾಪ್ತಿಗೆ ಒಳಪಡುತ್ತವೆ. ಇವುಗಳನ್ನು ಬಿಟ್ಟು ಉಳಿದ ಎಲ್ಲಾ ಕೃಷಿ ಹಾಗೂ ತೋಟಗಾರಿಕಾ ಉತ್ಪನ್ನಗಳು ಆವರ್ತ ನಿಧಿ ಯೋಜನೆಗೆ ಒಳಪಡುವುದಿಲ್ಲ.

ಈ) ಈ ವಿಷಯವನ್ನು ರಾಜ್ಯ ಸರ್ಕಾರ ಪರಿಶೀಲಿಸುತ್ತಿದೆ.

ಉ) ಆವರ್ತ ನಿಧಿಯಿಂದ ಈವರೆಗೂ ರೂ. 291.14 ಕೋಟಿ ಮೌಲ್ಯದ ವಿವಿಧ ಕೃಷಿ ಹಾಗೂ ತೋಟಗಾರಿಕಾ ಉತ್ಪನ್ನಗಳನ್ನು ಖರೀದಿಸಿದ್ದು, ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಊ) ಈಗಿರುವ ಆವರ್ತ ನಿಧಿಯ ಮೊತ್ತವನ್ನು ರೂ.400.00 ಕೋಟಿಗಳವರೆಗೂ ಹೆಚ್ಚಿಸುವ ಉದ್ದೇಶವಿದೆ. ಇದರಲ್ಲಿ ಕೇಂದ್ರ ಸರ್ಕಾರಕ್ಕೆ ರೂ. 200.00 ಕೋಟಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

KARNATAKA STATE AGRICULTURAL MARKETING BOARD, BANGALORE

Details of the Quantity procured under Market Intervention Scheme (MIS)

(As on 24-1-2005)

Sl. No.	Name of the Commodity	Name of the Procuring Agency	Quantity Procured in Quintals 1999-2000	2000-01	2001-02	2002-03	2003-04	2004-05	Number of Beneficiaris
1.	Onion	KSCMF	32,041	-	-	-	-		1558
2.	Onion	KSCMF	-	-	-	-	2,62,915		6428
3.	Potato	KSCMF	-	1,15,182	-	-	-	-	3899
4.	Toor	KSCMF	-	17,005	-	-	-	-	1185
5.	Maize	KFCSC	-	26,20,274	1,77,830	-	-	-	52470
6.	Maize	KFCSC, KSWC KSCMF	-	-	-	-	-	24,48,652 (21-1-05)	38497
7.	Ragi	KFCSC	-	1,81,630	7,75,582	-	-	-	31857
8.	Ragi	KFCSC	-	-	-	-	-	13,338 (21-1-05)	525
9.	Copra	KSCMF	-	-	3,43,520	-			18920
10.	Arecanut (Chali)	CAMPCO	-	-	-	30.976			8781

1	2	3	4	5	6	7	8	9	10
11.	Blackgram & greengram	KSCMF	-	-	-	-	1,86,787	-	9969
12.	Coffee	COMARK	-	-	-	-	8,420	-	150
13.	Arecanut (Red)	CAMPCO	-	-	-	-	-	6,709	2162
14.	Tomato	KSCMF	-	-	-	-	-	5,434	652
15.	Jowar	KFCSC	-	-	-	-	-	-	-
	Total								**177053**

Note: Quantity procured under MIS Scheme includes funds of Revolving Fund and also the funds of Procurring Agencies

KARNATAKA STATE AGRICULTURAL MARKETING BOARD, BANGALORE

Details of the Revolving Fund Operation

(As on 24-1-2005)

Sl. No.	Name of the Commodity	Name of the Procuring Agency	Quantity Procured in Quintals						Total Amount in Crores
			1999-2000	2000-01	2001-02	2002-03	2003-04	2004-05	
1.	Onion	KSCMF	1.06	-	-	-	-	-	1.06
2.	Onion	DC, Dharwad	-	-	-	-	-	3.23	
		DC, Chitradurga	-	-	-	-	-	0.50	
		DC, Gadag	-	-	-	-	-	2.85	
		DC, Bijapur	-	-	-	-	-	0.50	
		DC, Bagalkote	-	-	-	-	-	0.50	
		DC, Bijapur	-	-	-	-	-	0.50	
		DC, Raichur	-	-	-	-	-	0.50	8.58
3.	Potato	KSCMF	-	5.90	-	-	-	-	5.90
4.	Toor	KSCMF	-	3.00	-	-	-	-	3.00
5.	Maize	KFCSC	-	5.50	70.80	-	-	-	76.30
6.	Maize	KFCSC	-	-	-	-	-	14.00	
		KSWC	-	-	-	-	-	15.00	
		KSCMF						67.00	96.00

1	2	3	4	5	6	7	8	9	10
7.	Ragi	KFCSC	-	-	22.52	22.58	-	-	45.10
8.	Ragi	KFCSC	-	-	-	-	-	1.00	1.00
9.	Copra	KSCMF	-	-	25.00	15.00	-	-	40.00
10.	Arecanut (Chali)	CAMPCO	-	-	-	6.00	-	-	6.00
11.	Blackgram & greengram	KSCMF	-	-	-	-	0.10	-	0.10
12.	Coffee	COMARK	-	-	-	-	1.00	-	1.00
13.	Arecanur (Red)	CAMPCO	-	-	-	-	-	6.00	6.00
14.	Tomato	KSCMF	-	-	-	-	-	0.10	0.10
15.	Jowar	KFCSC	-	-	-	-	-	1.00	1.00
	Total		**1.06**	**14.40**	**118.3**	**43.6**	**1.10**	**112.7**	**291.14**

603(62) ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾಫಿ ಬೆಳೆಯುತ್ತಿರುವ ಪ್ರದೇಶಗಳ ಒಟ್ಟು ವಿಸ್ತೀರ್ಣವೆಷ್ಟು;

ಆ) ಕಾಫಿ ನಿಗದಿಪಡಿಸಿರುವ ದರವೆಷ್ಟು;

ಇ) ಕಾಫಿ ಉದ್ದಿಮೆ ಮತ್ತು ಬೆಳೆಗಾರರ ಪ್ರಮುಖ ಬೇಡಿಕೆಗಳು ಯಾವುವು;

ಈ) ಕಾಫಿ ಉದ್ದಿಮೆ ಹಾಗೂ ಬೆಳೆಗಾರರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ರಾಜ್ಯದಲ್ಲಿ ಕಾಫಿ ಬೆಳೆಯುತ್ತಿರುವ ಪ್ರದೇಶಗಳ ಒಟ್ಟು ವಿಸ್ತೀರ್ಣ 2,04,278 ಹೆಕ್ಟೇರುಗಳು.

ಆ) ಕಾಫಿ ದರಗಳು ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡಂತಿದೆ (ಪ್ರತಿ ಕೆ.ಜಿ.ಗೆ):

(ರೂ. ಲಕ್ಷಗಳಲ್ಲಿ)

ವರ್ಷ	ಅರೆಬಿಕ	ರುಬೆಸ್ಟ್	ಪ್ಲಾಂಟೇಷನ್	ರುಬೆಸ್ಟ್ ಚೆರಿ
2002	52.00	28.00	56.80	27.90
2003	54.00	33.00	56.10	33.50
2004	87.50	31.60	93.30	38.50

ಇ) ಇನ್ನಿತರೆ ಬೇಡಿಕೆಗಳ ಜೊತೆಗೆ ಈ ಕೆಳಕಂಡ ಪ್ರಮುಖ ಬೇಡಿಕೆಗಳನ್ನು ಉದ್ದಿಮೆ ಮತ್ತು ಬೆಳೆಗಾರರು ಸಲ್ಲಿಸಿರುತ್ತಾರೆ.

1. ಬೆಳೆಗಾರರು ಪಡೆದಿರುವ ಸಾಲದ ಮೇಲಿನ ಇತ್ತೀಚಿನವರೆಗಿನ ಬಡ್ಡಿಯನ್ನು ಮನ್ನಾ ಮಾಡುವುದು.
2. ಉಳಿದ ಅವಧಿಗೆ ಬಡ್ಡಿ ದರವನ್ನು ಶೇ. 6ಕ್ಕೆ ನಿಗದಿಪಡಿಸುವುದು.
3. ಶೇಕಡಾ 6ರಷ್ಟು ಬಡ್ಡಿ ,ದರವನ್ನು ಹೊಸ ಸಾಲವನ್ನು ಮಂಜೂರು ಮಾಡುವುದು.
4. ಕಾಫಿ ಬೆಳೆಗಾರರಿಗೆ ವಿಧಿಸಿರುವ ಕೃಷಿ ಆದಾಯ ತೆರಿಗೆಯನ್ನು ಸಂಪೂರ್ಣವಾಗಿ ರದ್ದುಗೊಳಿಸುವುದು.
5. ಪಡಿತರ ಚೀಟಿಯ ಸೌಲಭ್ಯವನ್ನು ಪಡೆಯುವ ಸಲುವಾಗಿ ಗುತ್ತಿಗೆ ಪ್ಲಾಂಟೇಷನ್ ನೌಕರರಿಗೆ ಅಂತ್ಯೋದಯ ದರ್ಜೆ ನೀಡುವುದು.

ಈ) ಕಾಫಿ ಬೆಳೆಯು ಭಾರತ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ವಾಣಿಜ್ಯ ಬೆಳೆಯಾಗಿದ್ದು, ಕಾಫಿ ಬೆಳೆಗಾರರ ಪ್ರಮುಖ ಬೇಡಿಕೆಗಳನ್ನು ಕಾಫಿ ಮಂಡಳಿಯು

ಪರಿಶೀಲಿಸಿ, ಕೇಂದ್ರ ಸರ್ಕಾರದೊಡನೆ ವ್ಯವಹರಿಸಿ, ಸೂಕ್ತ ಪರಿಹಾರ ನೀಡಲು ಕ್ರಮ ಕೈಗೊಳ್ಳುತ್ತಿದೆ.

1. ವಿಶ್ವದಾದ್ಯಂತ ಕಾಫಿ ಬೆಲೆಯು ಕುಸಿದಿರುವುದರಿಂದ ಭಾರತದಲ್ಲಿ ಕಾಫಿ ಬೆಳೆಗಾರರ ಮೇಲೆ ಇದು ಭಾರೀ ಪರಿಣಾಮವನ್ನು ಬೀರುತ್ತಿದೆ. ಇದರಿಂದಾಗಿ ಕಾಫಿ ಬೆಳೆಗಾರರು ಪಡೆದಿರುವ ಸಾಲದ ಮರುಪಾವತಿಯಲ್ಲಿ ಮೂರು ವರ್ಷಗಳ ವಿನಾಯಿತಿಯನ್ನು 2002–03 ರಿಂದ ನೀಡಲಾಗಿದೆ.

2. ವಿನಾಯಿತಿ ಅವಧಿಯಲ್ಲಿ ಬ್ಯಾಂಕುಗಳು ಶೇಕಡಾ 11ರಷ್ಟು ಬಡ್ಡಿಯನ್ನು ವಿಧಿಸಬೇಕೆಂದು ಸೂಚಿಸಲಾಗಿದೆ.

3. ಶೇಕಡಾ 9ರ ಬಡ್ಡಿ ದರದಲ್ಲಿ ಹೊಸ ಸಾಲ ಮಂಜೂರು ಮಾಡಲು ಬ್ಯಾಂಕುಗಳು ಒಪ್ಪಿಕೊಂಡಿರುತ್ತವೆ.

4. ಸಣ್ಣ ಬೆಳೆಗಾರರು ಪಡೆದಿರುವ ಸಾಲದ ಮೇಲೆ ಶೇಕಡಾ 5 ರಷ್ಟು ಸಬ್ಸಿಡಿ ಹಾಗೂ ದೊಡ್ಡ ಬೆಳೆಗಾರರಿಗೆ ಶೇಕಡಾ 3ರಷ್ಟು ಸಬ್ಸಿಡಿಯನ್ನು ನೀಡಲಾಗಿದೆ.

604(966) ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ ವಲಯಕ್ಕೆ ನೀಡಿರುವ ರಿಯಾಯಿಗಳನ್ನು ಕಾಫಿ ಉದ್ಯಮದವರಿಗೂ ನೀಡಲು ಸರ್ಕಾರ ಮುಂದಾಗಿದೆಯೇ;

ಆ) ಹಾಗಿದ್ದಲ್ಲಿ ಎಷ್ಟು ಎಕರೆ ಹೊಂದಿದವರಿಗೆ ತೆರಿಗೆ ರಿಯಾಯ್ತಿ ನೀಡಲಾಗಿದೆ;

ಇ) ಇದನ್ನು ಎಷ್ಟು ಪ್ರದೇಶಕ್ಕೆ ವಿಸ್ತರಿಸಲು ನಿರ್ಧರಿಸಿದೆ;

ಈ) ಟೀ ಪುಡಿ ಮೇಲೆ ವಿಧಿಸುತ್ತಿರುವ ಮಾರಾಟ ತೆರಿಗೆಯನ್ನು ಕಾಫಿಗೂ ಅನ್ವಯಿಸುವುದೇ;

ಉ) ಈ ಮಾರಾಟ ತೆರಿಗೆ ಕಡಿಮೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಜಾರಿಯಲ್ಲಿರುವ ನೀತಿಯನ್ವಯ ನೀಡಲಾಗುತ್ತದೆ.

ಆ) 50 ಎಕರೆಗಿಂತ ಕಡಿಮೆ ಇರುವ ತೋಟದ ಬೆಳೆಗಾರರಿಗೆ ಕೃಷಿ ವರಮಾನ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ.

ಇ) ಮೇಲಿನ ತೆರಿಗೆ ವಿನಾಯಿತಿಯನ್ನು ವಿಸ್ತರಿಸಲು ಯಾವುದೇ ಪ್ರಸ್ತಾವನೆ ಬಾಕಿ ಇರುವುದಿಲ್ಲ.

ಈ) ಸಧ್ಯದಲ್ಲಿ ಪ್ರಸ್ತಾವನೆ ಇಲ್ಲ.

ಉ) ಕಾಫಿ ಮೇಲೆ ವಿಧಿಸುತ್ತಿರುವ ಮಾರಾಟ ತೆರಿಗೆ ಟೀ ಮೇಲೆ ವಿಧಿಸುತ್ತಿರುವ ತೆರಿಗೆಗಿಂತ ಕಡಿಮೆ ಇರುತ್ತದೆ.

605(495) ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಹಕಾರಿ ಸಕ್ಕರೆ ಕಾರ್ಖಾನೆಗಳ ಕಾರ್ಮಿಕರನ್ನು ಲೇ ಆಫ್ ಮಾಡಲು ಅನುಮತಿ ಕೊಡುವ ಅಧಿಕಾರ ಇರುವುದು ಯಾರಿಗೆ;

ಆ) ಕಬ್ಬು ಅಭಿವೃದ್ಧಿ ಆಯುಕ್ತರು ಹಾಗೂ ಸಕ್ಕರೆ ನಿರ್ದೇಶಕರಿಗೆ ಈ ಅಧಿಕಾರ ಇರದೆ ಅವರು ಲೇ-ಆಫ್‌ಗೆ ಅನುಮತಿ ಕೊಟ್ಟಿರುವುದೇ ಆದಲ್ಲಿ ಅದು ಕಾನೂನು ಬಾಹಿರವಾಗುವುದಿಲ್ಲವೆ;

ಇ) ಹೌದಾದಲ್ಲಿ ಇಂತಹ ಕಾನೂನು ಬಾಹಿರ ಅನುಮತಿ ಆದೇಶಗಳನ್ನು ಲೇ-ಆಫ್ ಮಾಡಿದ ದಿನದಿಂದಲೇ ಜಾರಿಗೆ ಬರುವಂತೆವಾಪಸ್ ಪಡೆಯಲಾಗುವುದೇ;

ಈ) ಹೌದಾದಲ್ಲಿ ಯಾವಾಗ ವಾಪಸ್ ಪಡೆಯಲಾಗುವುದು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಸಹಕಾರ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ ಸಕ್ಕರೆ ನಿರ್ದೇಶಕರು.

ಆ) ಕಾರ್ಖಾನೆಯ ಒಟ್ಟಾರೆ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹಾಗೂ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70 ಮತ್ತು 118 ರನ್ವಯ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರವರು ಲೇ-ಆಫ್ ಆದೇಶ ಹೊರಡಿಸಿರುತ್ತಾರೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

606(498) ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ದೊಡ್ಡ ಬಾತಿ ಇವರು ಹಾಕಿರುವ ಎಸ್.ಎಲ್.ಪಿ. 9643/2003ನಲ್ಲಿ ದಿನಾಂಕ 26-7-2004ರ ಸಂಬಂಧದಲ್ಲಿ ಘನ ಸರ್ವೋಚ್ಛ ನ್ಯಾಯಾಲಯ ಕೊಟ್ಟಿರುವ ಮಧ್ಯಂತರ ಆದೇಶದ ಪ್ರಕಾರದ 4-5-1998ರಂದು ಸರ್ಕಾರದ ಸಮ್ಮುಖದಲ್ಲಿ ಆದಂತಹ ಒಪ್ಪಂದದಂತೆ ಪುನರ್ ನೇಮಕಗೊಂಡ ಕಾರ್ಮಿಕರಿಗೆ ಕೊಡಬೇಕಾಗಿರುವ ಶೇ. 40ರಷ್ಟು ಬಾಕಿ ವೇತನವನ್ನು ಇದುವರೆಗೂ ನೀಡದಿರಲು ಕಾರಣವೇನು;

ಆ) ಯಾವಾಗ ಈ ವೇತನ ಬಾಕಿಯನ್ನು ಪಾವತಿಸಲಾಗುವುದು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಗೌರವ ಕರ್ನಾಟಕ ಉಚ್ಚ ನ್ಯಾಯಾಲಯವು ರಿ.ಅ. ಸಂ. 13524/99ರಲ್ಲಿ ದಿನಾಂಕ 25-2-2003ರಲ್ಲಿ ನೀಡಿರುವ ಆದೇಶದ ವಿರುದ್ಧ ಕಾರ್ಖಾನೆಯು

ಗೌರವ ಸರ್ವೋಚ್ಚ ನ್ಯಾಯಾಲಯದಲ್ಲಿ (ಎಸ್.ಎಲ್.ಪಿ.) (ಸಿವಿಲ್) ಸಂ. 9643/2003ನ್ನು ದಾಖಲಿಸಿರುತ್ತದೆ. ಎಸ್.ಎಲ್.ಪಿ.ಯು. ದಿನಾಂಕ 26-7-2004ರಲ್ಲಿ ವಿಚಾರಣೆಗೆ ಬಂದಿದ್ದು ಗೌರವ ಸರ್ವೋಚ್ಚ ನ್ಯಾಯಾಲಯವು ಈ ಮಾಲ್ಯನವಿಯನ್ನು ದಾಖಲಿಸಿಕೊಂಡು ಸಿವಿಲ್ ಅಪೀಲ್ ಎಂಬುದಾಗಿ ಪರಿಗಣಿಸಿದೆ. ಈ ಮೇಲ್ಮನವಿಯ ಮೇಲೆ ತೀರ್ಪು ನಿರೀಕ್ಷಿಸಲಾಗುತ್ತಿದೆ.

ಆ) ಸರ್ವೋಚ್ಚ ನ್ಯಾಯಾಲಯದ ಅಂತಿಮ ಆದೇಶದ ನಂತರ ಅದರಂತೆ ಕಾರ್ಖಾನೆಯು ಕ್ರಮ ಕೈಗೊಳ್ಳಬೇಕಾಗಿರುತ್ತದೆ.

607(710) ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ, ಸಹಕಾರಿ ಸಕ್ಕರೆ ಕಾರ್ಖಾನೆ ನಿ. ದೊಡ್ಡಬಾತಿ ಇದರ ಮುಖ್ಯ ಟರ್ಬೈನ್ ಹಂಗಾಮು ನಡೆಯುವಾಗ ಪದೇ ಪದೇ ದುರಸ್ಥಿಗೆ ಬರುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಪುನ: ಪುನ: ಕೆಡುತ್ತಿರುವವರ ಬಗ್ಗೆ ಸರ್ಕಾರ ತೆಗೆದುಕೊಂಡ ಹಾಗೂ ತೆಗೆದುಕೊಳ್ಳಲಿರುವ ಕ್ರಮಗಳೇನು;

ಇ) ಪದೇ ಪದೇ ದುರಸ್ತಿಗೊಳಗಾಗಲು ಕಾರಣಗಳೇನು;

ಈ) ಈ ಬಗ್ಗೆ ತನಿಖೆ ಮಾಡಲಾಗಿದೆಯೇ;

ಉ) ಕಾರ್ಖಾನೆ ಪ್ರಾರಂಭವಾದಾಗಿನಿಂದ ಇದುವರೆಗೂ ಎಷ್ಟು ಬಾರಿ ಕೆಟ್ಟಿದೆ;

ಊ) ಪ್ರತಿ ಬಾರಿಗೂ ದುರಸ್ಥಿಗೆಂದು ಖರ್ಚಾದ ಹಣ ಎಷ್ಟು (ದುರಸ್ಥಿ ಬಿಲ್‌ಗಳ ದೃಢೀಕೃತ ಪ್ರತಿ ಒದಗಿಸುವುದು);

ಋ) ಈ ರೀತಿ ಕೆಡುವುದರಿಂದ ಇದುವರೆಗೂ ಕಾರ್ಖಾನೆಗೆ ನಷ್ಟ ಉಂಟಾಗಿರುವುದೆಷ್ಟು;

ೠ) ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ;

ಎ) ಅಂತಹವರುಗಳ ಮೇಲೆ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಹೌದು.

ಆ) ಕಾರ್ಖಾನೆಯ ಹಳೆಯ ಟರ್ಬೈನ್‌ನ್ನು ಬದಲಾಯಿಸಿ ಹೊಸ ಟರ್ಬೈನ್ ಅಳವಡಿಸಲು ಸರ್ಕಾರವು ಪತ್ರಕ್ರ ಸಮಾಸು 030 ಸಸಕಾ 2002, ದಿನಾಂಕ 29-8-2002 ಪತ್ರದನ್ವಯ ಅನುಮತಿ ನೀಡಿತ್ತು. ಆದರೆ ಕಾರ್ಖಾನೆಯು ಕ್ಲಿಷ್ಟಕರ ಆರ್ಥಿಕ ಪರಿಸ್ಥಿತಿಯಿಂದಾಗಿ ಹೊಸ ಟರ್ಬೈಸ್ ಅಳವಡಿಸಿರುವುದಿಲ್ಲ. ಕಾರ್ಖಾನೆಯು ಹೊಸ ಟರ್ಬೈಸ್ ಅಳವಡಿಸಿಕೊಳ್ಳುವಲ್ಲಿ ವಿಫಲವಾಗಿದ್ದರಿಂದ

Blank

Blank

7. 2002-03ನೇ ಸಾಲಿನಲ್ಲಿ ಕಳಪೆ ಮಟ್ಟದ ಇಂಜೆಕ್ಷನ್ ಪೈಪ್ ಲೈನ್ ಅಳವಡಿಸಿ ರೂ. 7.26 ಲಕ್ಷ ಖರ್ಚು ಮಾಡಿರುವುದು.

ಆ) ಮೇಲೆ ಶೇಕಡ 7 ಪ್ರಕರಣಗಳಲ್ಲಿ ಆರೋಪಗಳು ಸಾಬೀತಾಗಿರುತ್ತದೆ.

ಇ) ವಿಚಾರಣಾ ವರದಿಯನುಸಾರ ಸಾಬೀತಾಗಿರುವ ಆರೋಪಗಳನ್ನು ಸರಿಪಡಿಸಿ ಅನುಪಾಲನಾ ವರದಿ ಸಲ್ಲಿಸಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1969ರ ಕಲಂ 68ರಡಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಬೆಂಗಳೂರುವರು ದಿನಾಂಕ 7-12-2004ರನ್ವಯ ಕಾರ್ಖಾನೆಗೆ ನಿರ್ದೇಶನ ನೀಡಲಾಗಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 30ರಡಿ ಆಡಳಿತ ಮಂಡಳಿ ರದ್ದುಪಡಿಸಿ ಆಡಳಿತಾಧಿಕಾರಿಯನ್ನು ಏಕೆ ನೇಮಿಸಬಾರದು ಎಂಬುದಕ್ಕೆ ಕಾರಣ ಕೇಳುವ ನೋಟೀಸನ್ನು ದಿನಾಂಕ 7-12-2004ರಲ್ಲಿ ಆಡಳಿತ ಮಂಡಳಿ ಸದಸ್ಯರುಗಳಿಗೆ ನೋಟೀಸು ಜಾರಿ ಮಾಡಿದರು. ಇವರ ಮಧ್ಯೆ ಗೌರವ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ. ಡಬ್ಲ್ಯೂಪಿ 36263 2004 ಸಿಎಸ್ ದಿನಾಂಕ 10-11-2004ರ ಆದೇಶದಂತೆ ಕಾರ್ಖಾನೆಯ ಆಡಳಿತ ಮಂಡಳಿಗೆ 2004-05 ರಿಂದ 2008-09ನೇ ಸಾಲುಗಳಿಗೆ ದಿನಾಂಕ 23-12-2004ರಂದು ಚುನಾವಣೆ ಜರುಗಿರುತ್ತದೆ. ಹೊಸ ಆಡಳಿತ ಮಂಡಳಿ ಆಸ್ತಿತ್ವದಲ್ಲಿರುತ್ತದೆ.

609(974) ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ದೊಡ್ಡಬಾತಿ ಇದರ ಆಡಳಿತ ಮಂಡಳಿಗೆ ದಿನಾಂಕ 23-2-2004ರಂದು ಚುನಾವಣೆ ನಿಗದಿಗೊಳಿಸಿ, ಮತದಾನದ ದಿನಾಂಕದ ಬಗ್ಗೆ ಎಲ್ಲಾ ಮತದಾರರಿಗೆ ತಿಳಿಯುವ ಹಾಗೆ ವೈಯುಕ್ತಿಕ ನೋಟೀಸ್‌ಗಳನ್ನು ಕಳುಹಿಸದೆ ಚುನಾವಣೆ ನಡೆಸಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಇದು ಬಹುತೇಕ ಮತದಾರರ ಸದಸ್ಯರಿಗೆ ಮತದಾನದ ಹಕ್ಕಿನಿಂದ ವಂಚಿತರನ್ನಾಗಿ ಮಾಡಿದಂತಾಗಿರುವುದಲ್ಲದೆ ಮತ್ತು ಸಹಕಾರ ನೀತಿ ಹಾಗೂ ತತ್ವಗಳಿಗೆ ವಿರುದ್ಧವಾಗಿರುವುದಲ್ಲವೇ;

ಇ) ಹೌದಾದಲ್ಲಿ ದಿನಾಂಕ 23-1-2004ರಂದು ನಡೆದಿರುವ ಚುನಾವಣೆಯನ್ನು ಸರ್ಕಾರ ಅಸಿಂಧು ಎಂದು ಸಾರುವುದೇ?

ಶ್ರೀ ಆರ್.ವಿ. ದೇಶಪಾಂಡೆ(ಸಹಕಾರ ಸಚಿವರು)

ಅ) ಕಾರ್ಖಾನೆಯ 2004-05 ರಿಂದ 2008-09 ಸಾಲಿನ ಅವಧಿಯ ಆಡಳಿತ ಮಂಡಳಿ ಚುನಾವಣೆಯು ದಿನಾಂಕ 10-9-2004. ರಂದು ಈ ಹಿಂದೆ ನಿಗದಿಯಾಗಿತ್ತು. ಅದರನುಸಾರ ಚುನಾವಣೆ ಸಂಬಂಧಿಸಿದಂತೆ ಕಾರ್ಖಾನೆಯು

ಎಲ್ಲಾ ಸದಸ್ಯರುಗಳಿಗೆ ವೈಯಕ್ತಿಕವಾಗಿ ನೋಟೀಸ್ ಕಳುಹಿಸಿತ್ತು. ಸರ್ಕಾರವು ಆದೇಶ ಕ್ರಮಾಂಕ ಸಿಎಂಡಬ್ಲ್ಯೂ 37 ಸಿಎಲ್‌ಎಂ 2004 (ಪಿ) ದಿನಾಂಕ 1-9. 2004ರ ಆದೇಶದನ್ವಯ ದಿನಾಂಕ 30–9–2004ರೊಳಗೆ ಜರುಗಬೇಕಾದ ಸಹಕಾರ ಸಂಘಗಳ ಆಡಳಿತ ಮಂಡಳಿ ಚುನಾವಣೆಗಳನ್ನು (ಹಾಲು ಉತ್ಪಾದಕ ಕ್ಷೇತ್ರದ ಸಂಘಗಳನ್ನು ಹೊರತುಪಡಿಸಿ) ಮುಂದೂಡಿ ದಿನಾಂಕ 31–3–2005ರ ಒಳಗಾಗಿ ಚುನಾವಣೆ ನಡೆಸಲು ಆದೇಶಿಸಿರುವುದರಿಂದ ದಿನಾಂಕ 10–9–2004 ರಂದು ಜರುಗಬೇಕಾಗಿದ್ದ ಚುನಾವಣೆಯ ಪ್ರಕ್ರಿಯೆ ಮುಂದುವರೆಸದೆ ಚುನಾವಣಾಧಿಕಾರಿಗಳು ರದ್ದುಪಡಿಸಿದ್ದರು. ತದನಂತರ ಗೌರವ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 36273/2004 ಸಿಎಸ್ ದಿನಾಂಕ 10–10–2004ರಲ್ಲಿ ಈ ಹಿಂದೆ ಪ್ರಕಟವಾಗಿದ್ದ ಚುನಾವಣೆ ಪ್ರಕ್ರಿಯೆಯಾದ ಹಂತದಲ್ಲಿ ನಿಲ್ಲಿಸಲಾಗಿತ್ತೋ ಆ ಹಂತದಿಂದ ಮುಂದುವರೆಸಲು ಆದೇಶವಾಗಿದ್ದು, ಅದರನುಸಾರ ದಿನಾಂಕ 23–2–2004ರಂದು ಚುನಾವಣೇ ನಡೆದು ಚುನಾವಣೆ ಪ್ರಕ್ರಿಯೆಯನ್ನು ಚುನಾವಣಾಧಿಕಾರಿಗಳು ಪೂರ್ಣಗೊಳಿಸಿ ಆಯ್ಕೆಯಾಗಿರುವ ಆಡಳಿತ ಮಂಡಳಿ ಸದಸ್ಯರುಗಳ ಪಟ್ಟಿಯನ್ನು ಪ್ರಕಟಣೆ ಮಾಡಿರುತ್ತಾರೆ. ಈ ಚುನಾವಣೆ ಪ್ರಕ್ರಿಯೆ ಮುಂದುವರೆಸಿರುವ ಬಗ್ಗೆ ಕಾರ್ಖಾನೆಯು ದಿನಾಂಕ 14–2–2004ರಂದು ಪ್ರಕಟಣೆ ಮಾಡಿ ಈ ಪ್ರಕಟಣೆಯನ್ನು ಸ್ಥಳೀಯ ಹಾಗೂ ರಾಜ್ಯ ಮಟ್ಟದ ಪತ್ರಿಕೆಗಳ ಮೂಲಕ ಪತ್ರಿಕಾ ಪ್ರಕಟಣೆಯನ್ನು ನೀಡುವ ಮೂಲಕ ಎಲ್ಲಾ ಮತದಾರರ ಸದಸ್ಯರುಗಳ ಹಾಗೂ ಅಭ್ಯರ್ಥಿಗಳ ಗಮನಕ್ಕೆ ಕಾರ್ಖಾನೆಯು ತಂದಿರುತ್ತದೆ.

ಆ) ಮುಂದುವರೆಸಿರುವ ಚುನಾವಣೆ ಪ್ರಕ್ರಿಯೆಯ ಬಗ್ಗೆ ದಿನಾಂಕ 14–2–2004ರಂದು ನೀಡಲಾಗಿರುವ ಪ್ರಕಟಣೆಯನ್ನು ಸ್ಥಳೀಯ ಹಾಗೂ ರಾಜ್ಯಮಟ್ಟದ ಪತ್ರಿಕೆಗಳ ಮೂಲಕ ಎಲ್ಲಾ ಮತದಾರ ಸದಸ್ಯರುಗಳ ಹಾಗೂ ಅಭ್ಯರ್ಥಿಗಳ ಗಮನಕ್ಕೆ ತಂದಿರುವುದರಿಂದ ಹಾಗೂ ಮತದಾನದ ದಿನಾಂಕದಂದು ಮತದಾರ ಸದಸ್ಯರು ಬಂದು ಮತ ಚಲಾಯಿಸಿ ನಿಯಮಾನುಸಾರ ಆಡಳಿತ ಮಂಡಳಿಗೆ ಸದಸ್ಯರನ್ನು ಆಯ್ಕೆ ಮಾಡಿ ಚುನಾವಣಾಧಿಕಾರಿಗಳು ಪ್ರಕಟಣೆ ಹೊರಡಿಸಿರುವುದಿಂದ ಇದು ನಿಯಮ ಬದ್ಧವಾಗಿರುತ್ತದೆ.

ಇ) ಉದ್ಭವಿಸುವುದಿಲ್ಲ.

610(1105) ಶ್ರೀ ರೇಣುಕಾಚಾರ್ಯ ಎಂ.ಪಿ. (ಹೊನ್ನಾಳಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕಿನಲ್ಲಿ ರೈತರಿಗೆ ಬಿಡುಗಡೆ ಮಾಡಿರುವ ಬೆಳೆ ವಿಮೆ ಹಣ ಎಷ್ಟು;

ಆ) ಹೊನ್ನಾಳಿ ತಾಲ್ಲೂಕಿನ ಬೆಳಗುತ್ತಿ ಹೋಬಳಿಯಲ್ಲಿ ಬೆಳೆ ವಿಮೆ ಪಾವತಿಸಿರುವ ರೈತರ ಸಂಖ್ಯೆ ಎಷ್ಟು;

Blank

Blank

ಆ) ಸರ್ಕಾರದ ಮಾನದಂಡಗಳಿಗೆ ವ್ಯತಿರಿಕ್ತವಾಗಿ ಬಿ.ಪಿ.ಎಲ್. ಪಡಿತರ ಚೀಟಿ ಹೊಂದಿರುವವರ ಪಡಿತರ ಚೀಟಿಗಳು ಮಾತ್ರ ರದ್ದುಪಡಿಸಲಾಗಿರುತ್ತದೆ.

ಇ) ಹೊನ್ನಾಳಿ ತಾಲ್ಲೂಕಿನಲ್ಲಿ ಅರ್ಹ ಫಲಾನುಭವಿಗಳು, ಬಡತನ ರೇಖೆಗಿಂತ ಕೆಳಮಟ್ಟದಲ್ಲಿ ಇರುವವರ ಪಡಿತರ ಚೀಟಿ ರದ್ದು ಪಡಿಸಲಾಗಿರುವುದಿಲ್ಲ.

ಈ) ಅರ್ಹ ಕುಟುಂಬಗಳು ಕೈಬಿಟ್ಟು ಹೋಗಿವೆ, ಅನರ್ಹ ಕುಟುಂಬಗಳು ಪಟ್ಟಿಯಲ್ಲಿ ಸೇರ್ಪಡೆಯಾಗಿವೆ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದ್ದು, ಈ ಕಾರಣ ಜನವರಿ, 2005 ರಿಂದ ಮನೆ ಮನೆ ಪುನರ್ ಸಮೀಕ್ಷೆ ಕಾರ್ಯವನ್ನು ಕೈಗೊಂಡಿದ್ದು, ಏಪ್ರಿಲ್, 2005ರೊಳಗೆ ಸಮೀಕ್ಷೆ ಮುಗಿಸಿ, ಅರ್ಹ ಕುಟುಂಬದವರ ಪಟ್ಟಿ, ಅನರ್ಹ ಕುಟುಂಬಗಳ ಪಟ್ಟಿಗಳೆರಡನ್ನು ಗ್ರಾಮಸಭೆ/ವಾರ್ಡ್ ಸಭೆಗಳ ಮುಂದೆ ಮಂಡಿಸಿ, ಅನುಮೋದನೆ ಪಡೆದು, ಅರ್ಹ ಕುಟುಂಬದವರಿಗೆ ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗುತ್ತದೆ.

ಉ) ಸಮೀಕ್ಷೆ ಕಾರ್ಯವು ಏಪ್ರಿಲ್ ತಿಂಗಳೊಳಗೆ ಮುಗಿಸಿ ಗ್ರಾಮ / ವಾರ್ಡ್ ಸಭೆಗಳಲ್ಲಿ ಫಲಾನುಭವಿಗಳ ಪಟ್ಟಿಯ ಅನುಮೋದನೆ ಪಡೆದು, ಅರ್ಹ ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ವಿತರಿಸಲಾಗುವುದು.

ಊ) ತಾಲ್ಲೂಕಿನಲ್ಲಿ ಅವೈಜ್ಞಾನಿಕವಾಗಿ ವರದಿ ತಯಾರಿಸಿ, ಅರ್ಹ ಫಲಾನುಭವಿಗಳ ಪಡಿತರ ಚೀಟಿಗಳನ್ನು ರದ್ದುಪಡಿಸಿರುವುದಿಲ್ಲ. ಅನರ್ಹ ಫಲಾನುಭವಿಗಳ ಪಡಿತರ ಚೀಟಿಗಳನ್ನು ಮಾತ್ರ ರದ್ದುಪಡಿಸಲಾಗಿದೆ.

ಋ) ಅರ್ಹರ ಪಡಿತರ ಚೀಟಿಗಳನ್ನು ರದ್ದುಪಡಿಸಿದಂತಹ ಪ್ರಕರಣಗಳು ಕಂಡು ಬಂದಿರುವುದಿಲ್ಲ, ಮಾಡಿದ್ದೇ ಆದಲ್ಲಿ ಅಂತಹ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗುವುದು.

612(1252) ಶ್ರೀ ರೇವುನಾಯಕ್ ಬೆಳಮಗಿ (ಕಮಲಪೂರ್) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಫಲ ಬಾವಿಗಳ ಸಾಲವನ್ನು ಆಳಂದ ಮತ್ತು ಗುಲ್ಬರ್ಗಾ ತಾಲ್ಲೂಕಿನಲ್ಲಿ ಎಷ್ಟು ಜನರಿಗೆ ಮನ್ನಾ ಮಾಡಲಾಗಿದೆ;

ಆ) 10 ವರ್ಷದವರೆಗೆ ಸಾಲ ಮನ್ನಾ ಮಾಡಿ 12–14 ವರ್ಷದವರೆಗೆ ಸಾಲ ಮನ್ನಾ ಮಾಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಎಲ್ಲರಿಗೂ ಸಾಲ ಮನ್ನಾ ಮಾಡುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಆಳಂದ ತಾಲ್ಲೂಕಿನಲ್ಲಿ ಒಟ್ಟು 112 ಪ್ರಕರಣಗಳು ಹಾಗೂ ಗುಲ್ಬರ್ಗಾ ತಾಲ್ಲೂಕಿನಲ್ಲಿ ಒಟ್ಟು 72 ಪ್ರಕರಣಗಳು ಫಲಾನುಭವಿಗಳಿಗೆ ಇಲ್ಲಿಯವರೆಗೆ ವಿಫಲ ತೋಡು ಬಾವಿ ಸಾಲ ಮನ್ನಾ ಮಾಡಲಾಗಿದೆ.

ಆ) ಸಾಲ ಮರು ಪಾವತಿಯ ಅವಧಿ ನಂತರ ಬಂದಿರುವ ಪ್ರಕರಣಗಳನ್ನು ಪರಿಗಣಿಸಲಾಗುವುದಿಲ್ಲ.

ಇ) ನಿಗದಿಪಡಿಸಿದ ಅವಧಿಯೊಳಗೆ ಬಂದ ಎಲ್ಲಾ ಅರ್ಜಿದಾರರಿಗೂ ಪರಿಹಾರ ಕೊಡಬಹುದು ಎಂಬುದಾಗಿ ಜಿಲ್ಲಾಧಿಕಾರಿಗಳಿಗೆ ತಿಳಿಸಿದೆ.

613(740) ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಸಹಕಾರಿ ಸಂಘಗಳು ಎಷ್ಟು;

ಆ) ಇದರಲ್ಲಿ ಪುತ್ತೂರು ಉಪ ವಿಭಾಗದಲ್ಲಿರುವ ಒಟ್ಟು ಸಹಕಾರ ಸಂಸ್ಥೆಗಳು ಎಷ್ಟು;

ಇ) ಈ ಉಪ ವಿಭಾಗದ ಸಹಕಾರ ಸಂಘ ಹಾಗೂ ಬ್ಯಾಂಕುಗಳ ಒಟ್ಟು ವಾರ್ಷಿಕ ವಹಿವಾಟು ಎಷ್ಟು;

ಈ) ಇವುಗಳಲ್ಲಿ ಎಷ್ಟು ಬ್ಯಾಂಕುಗಳು ಲಾಭದಲ್ಲಿವೆ ಹಾಗೂ ಎಷ್ಟು ಬ್ಯಾಂಕುಗಳು ನಷ್ಟದಲ್ಲಿವೆ ವಿವರ ನೀಡುವುದು;

ಉ) ನಷ್ಟದಲ್ಲಿರುವ ಸಹಕಾರಿ ಸಂಘ / ಸಂಸ್ಥೆಗಳು ಪುನಶ್ಚೇತನಕ್ಕಾಗಿ ಸಹಾಯಧನವನ್ನು ನೀಡಲಾಗುವುದೇ;

ಊ) ಹಾಗಿದ್ದಲ್ಲಿ, ಯಾವಾಗ ನೀಡಲಾಗುವುದು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ 31-3-2004ಕ್ಕೆ ಒಟ್ಟು 32804 ಸಹಕಾರ ಸಂಘಗಳು ಇರುತ್ತವೆ.

ಆ) ಪುತ್ತೂರು ಉಪ ವಿಭಾಗದಲ್ಲಿ ಒಟ್ಟು 290 ಸಹಕಾರ ಸಂಸ್ಥೆಗಳಿರುತ್ತವೆ.

ಇ) ಈ ಉಪ ವಿಭಾಗದ ಸಹಕಾರಿ ಸಂಘ ಹಾಗೂ ಬ್ಯಾಂಕುಗಳ 2003-04ನೇ ಸಾಲಿನ ಒಟ್ಟು ವಾರ್ಷಿಕ ವಹಿವಾಟು ರೂ. 986.17 ಕೋಟಿಗಳಾಗಿರುತ್ತವೆ.

ಈ) 2003-04ನೆ ಸಾಲಿನಲ್ಲಿ 55 ಬ್ಯಾಂಕುಗಳು ಲಾಭದಲ್ಲಿವೆ 12 ಬ್ಯಾಂಕುಗಳು ನಷ್ಟದಲ್ಲಿರುತ್ತವೆ. ವಿವರ ಕೆಳಕಂಡಂತಿರುತ್ತದೆ.

ವಿವರ	ಒಟ್ಟು	ಲಾಭ	ನಷ್ಟ
ಪ್ರಾಥಮಿಕ ಕೃಷಿ ಪತ್ತಿ ಸಹಕಾರ ಬ್ಯಾಂಕು	68	51	12
ಪಿಕಾರ್ಡ್ ಬ್ಯಾಂಕು	03	03	–
ಪಟ್ಟಣ ಸಹಕಾರ ಬ್ಯಾಂಕು	01	01	–

ಉ) ಇಲ್ಲ.

ಊ) ಅನ್ವಯಿಸುವುದಿಲ್ಲ.

614(964) ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಹಳದಿ ಮತ್ತು ಅಂತ್ಯೋದಯ (ಬಿ.ಪಿ.ಎಲ್) ಪಡಿತರ ಚೀಟಿಗಳನ್ನು ವಿತರಿಸಲಾಗಿದೆ (ತಾಲ್ಲೂಕುವಾರು ವಿವರ ನೀಡಿ);

ಆ) ಈ ತಾತ್ಕಾಲಿಕ ಕಾರ್ಡುಗಳನ್ನು ರದ್ದುಪಡಿಸಲು ಕಾರಣವೇನು; ರದ್ದುಪಡಿಸಿದವುಗಳ ಬದಲಿಗೆ ಯಾವ ವ್ಯವಸ್ಥೆ ಕಲ್ಪಿಸಲಾಗಿದೆ ಕಾರ್ಡು ವಿತರಿಸಲು ಮಾನದಂಡಗಳೇನು;

ಇ) ಸದರಿ ಫಲಾನುಭವಿಗಳಿಗೆ ವಿತರಿಸುವ ಆಹಾತ ಸಾಮಗ್ರಿ ಪ್ರಮಾಣ ಎಷ್ಟು; ಪಡಿತರ ಚೀಟಿಗಳು ಸಿಗದೇ ಇರುವವರ ಸಂಖ್ಯೆ ಎಷ್ಟು; ಇವರುಗಳಿಗೆ ಪಡಿತರ ಚೀಟಿ ನೀಡಲು ಯಾವ ಕ್ರಮ ಕೈಗೊಳ್ಳಲಾಗುವುದು;

ಈ) ಪುತ್ತೂರು ತಾಲ್ಲೂಕಿನ ಗ್ರಾಹಕರಿಗೆ ತಿಂಗಳಿಗೆ ಬೇಕಾದ ಅಡುಗೆ ಅನಿಲ ಸಿಲಿಂಡರುಗಳ ಬೇಡಿಕೆ ಎಷ್ಟು; ಹಾಲಿ ಪೂರೈಕೆಯಾಗುತ್ತಿರುವುದು ಎಷ್ಟು; ಕಡಿಮೆ ಸರಬರಾಜಾಗುತ್ತಿದ್ದಲ್ಲಿ ಇದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಬೇಡಿಕೆಗೆ ಅನುಗುಣವಾಗಿ ಪೂರೈಕೆಯಾಗಲು ಕ್ರಮ ಕೈಗೊಳ್ಳಲಾಗುತ್ತದೆಯೇ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1,15,589 ಹಳದಿ ಪಡಿತರ ಚೀಟಿ, 10,689 ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿಗಳನ್ನು ವಿತರಿಸಲಾಗಿರುತ್ತದೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತೆ ನೀಡಿದೆ:.

ಕ್ರ. ಸಂ.	ತಾಲ್ಲೂಕಿನ ಹೆಸರು	ಅಂತ್ಯೋದಯ	ಹಳದಿ	ಒಟ್ಟು
1.	ಮಂಗಳೂರು (ಅ.ಪ)	39	5897	5936
2.	ಮಂಗಳೂರು	3453	31429	34882
3.	ಬಂಟ್ವಾಳ	2251	26057	28308
4.	ಪುತ್ತೂರು	1733	18883	20616
5.	ಬೆಳ್ತಂಗಡಿ	2038	20970	23008
6.	ಸುಳ್ಯ	1175	12353	13528
	ಒಟ್ಟು	10689	115589	126278

ಆ) ವಿತರಿಸಿರುವ ಎಲ್ಲಾ ತಾತ್ಕಾಲಿಕ ಕಾರ್ಡುಗಳನ್ನು ರದ್ದುಪಡಿಸಿರುವುದಿಲ್ಲ. ಅನರ್ಹ ಕುಟುಂಬಗಳು ಹೊಂದಿರುವ ತಾತ್ಕಾಲಿಕ ಹಳದಿ / ಗುರುತಿನ ಪಡಿತರ

ಚೀಟಿಗಳನ್ನು ಮಾತ್ರ ಪತ್ತೆ ಹಚ್ಚಿ ಒಟ್ಟು 15389 ಕಾರ್ಡುಗಳನ್ನು ರದ್ದುಪಡಿಸಲಾಗಿದೆ. ಹಾಗೆ ರದ್ದುಪಡಿಸಲಾದ ಪಡಿತರ ಚೀಟಿಗಳನ್ನು ಹೊಂದಿದ ಕುಟುಂಬಗಳಿಗೆ ಯಾವುದೇ ಬೇರೆ ಕಾರ್ಡು ಇಲ್ಲದಿದ್ದಲ್ಲಿ ಮಾತ್ರ ಹಳದಿ ಪಡಿತರ ಚೀಟಿ / ಎ.ಪಿ.ಎಲ್. ಪಡಿತರ ಚೀಟಿಗಳನ್ನು ನೀಡಲಾಗುವುದು. ಬಿ.ಪಿ.ಎಲ್. ಪಡಿತರ ಚೀಟಿಗಳನ್ನು ನೀಡಲು ನಿಗದಿಪಡಿಸಿದ ಮಾನದಂಡಗಳು:

1. ಎರಡು ಹೆಕ್ಟೇರ್ ಅಥವಾ ಅದಕ್ಕಿಂತ ಹೆಚ್ಚು ಭೂಮಿ ಹೊಂದಿರುವವರು.
2. ದೂರವಾಣಿ ಅಥವಾ ಸೆಲ್‌ಫೋನ್ ಹೊಂದಿರುವವರು;
3. ಸ್ವಂತವಾಗಿ ಯಾರೇ ಡೀಸೆಲ್ / ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು;
4. ಬ್ಯಾಂಕ್ / ಸಹಕಾರಿ ಸಂಘಗಳಲ್ಲಿ ರೂ. 1.00 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು;
5. ಒಂದು ಬೋರ್‌ವೆಲ್ ಹೊಂದಿ, ನೀರಾವರಿ ಸೌಕರ್ಯ ಪಡೆಯುತ್ತಿರುವವರು;
6. ತಿಂಗಳಿಗೆ ರೂ. 1,000/-ಕ್ಕೆ ಕಡಿಮೆ ಇಲ್ಲದ ವೇತನ ಪಡೆಯುವ ಸರ್ಕಾರಿ/ ಸರ್ಕಾರೇತರ/ಖಾಸಗಿ ಸಿಬ್ಬಂದಿಗಳು;
7. ಆದಾಯ ತೆರಿಗೆ ಪಾವತಿಸುವವರು;
8. Registered contractors, APMC Traders/Commission Agents/ Dealers in Seeds/Fertilizers, etc.
9. ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನೂ ಕೂಡ ಸಮೀಕ್ಷೆ ಮಾಡಿ ನಿರ್ಣಯಿಸುವುದು.

ಇ) ಹಳದಿ ಪಡಿತರ ಚೀಟಿ ಯೋಜನೆ ಅಡಿಯಲ್ಲಿ ಆಹಾರ ಧಾನ್ಯಗಳನ್ನು ನೀಡುವ ಪ್ರಮಾಣ ಈ ಕೆಳಕಂಡಂತೆ ಇದೆ:

ಪಡಿತರ ಚೀಟಿಯ ವಿಧ	ಅಕ್ಕಿ ಕೆ.ಜಿ.	ದರ	ಗೋಧಿ ಕೆ.ಜಿ.	ದರ	ಸಕ್ಕರೆ ಕೆ.ಜಿ.	ದರ
ಅಂತ್ಯೋದಯ	28	3.00	7	2.00	3	13.50
ಹಳದಿ ಪಡಿತರ ಚೀಟಿ	20	3.00	5	3.00	3	13.50

ಸೀಮೆ ಎಣ್ಣೆಯನ್ನು ಈ ಕೆಳಕಂಡ ಪ್ರಮಾಣದಲ್ಲಿ:

1. ಅ.ಪ. ಪ್ರದೇಶದಲ್ಲಿ 8 ಲೀಟರ್
2. ಪಟ್ಟಣ ಪ್ರದೇಶದಲ್ಲಿ 6 ಲೀಟರ್
3. ಗ್ರಾಮೀಣ ಪ್ರದೇಶದಲ್ಲಿ 4 ಲೀಟರ್

ಬಿ.ಪಿ.ಎಲ್. ಪಟ್ಟಿಯಲ್ಲಿ ಕೈಬಿಟ್ಟು ಹೋದ ಅರ್ಹ ಕುಟುಂಬಗಳನ್ನು ಸೇರ್ಪಡೆ ಮಾಡಲು, ಅನರ್ಹ ಕುಟುಂಬದವರು ಪಟ್ಟಿಯಲ್ಲಿ ಸೇರ್ಪಟ್ಟಿದ್ದನ್ನು ಕೈಬಿಡಲು, ಮನೆ-ಮನೆ ಪುನರ್ ಸಮೀಕ್ಷೆ ಕಾರ್ಯ ಕೈಗೊಳ್ಳಲು ಸರ್ಕಾರ, ಆದೇಶ ಸಂಖ್ಯೆ: ಅನಾಸ 114 ಡಿಆರ್ 2004, ದಿನಾಂಕ 10-1-2005ರಲ್ಲಿ ಹೊರಡಿಸಿದೆ. ಅದರಂತೆ, ಪುನರ್ ಸಮೀಕ್ಷೆ ಕಾರ್ಯ ಪ್ರಾರಂಭವಾಗಿದ್ದು, 2005ರ ಏಪ್ರಿಲ್ ಮಾಹೆಗೆ ಮುಕ್ತಾಯಗೊಳ್ಳಲಿದೆ ಲೋಪದೋಷಗಳನ್ನು ತಡೆಗಟ್ಟಲು, ಮನೆ-ಮನೆ ಪುನರ್ ಸಮೀಕ್ಷೆ ಕಾರ್ಯದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಜನ ಪ್ರತಿನಿಧಿಗಳು, ಸ್ತ್ರೀಶಕ್ತಿ ಸಂಘದವರು ಮತ್ತು ಸ್ವಸಹಾಯ ಸಂಘದ ಪ್ರತಿನಿಧಿಗಳನ್ನು ಸಮೀಕ್ಷಾ ತಂಡದಲ್ಲಿ ಸೇರಿಸಿಕೊಂಡಿದ್ದು, ಸಮೀಕ್ಷೆಯಲ್ಲಿ ಹೊರಬರುವ ಅರ್ಹರ, ಅನರ್ಹರ ಪಟ್ಟಿಯನ್ನು ಗ್ರಾಮಸಭೆ ಮತ್ತು ವಾರ್ಡ್ ಸಭೆಗಳಲ್ಲಿಟ್ಟು ಅನುಮೋದಿಸಿ, ಅರ್ಹ ಕುಟುಂಬದವರಿಗೆ ಹಳದಿ ಪಡಿತರ ಚೀಟಿಗಳನ್ನು ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗಿದೆ.

ಈ) ಪುತ್ತೂರು ತಾಲ್ಲೂಕಿನಲ್ಲಿ 33,300 ಎಲ್.ಪಿ.ಜಿ. ಸಿಲಿಂಡರುಗಳ ಬೇಡಿಕೆಯಿದ್ದು, ಪ್ರಸ್ತುತ 22,950 ಸಿಲಿಂಡರ್‌ಗಳನ್ನು ಗ್ರಾಹಕರಿಗೆ ಪೂರೈಸಲಾಗುತ್ತಿದೆ. ಇದು ಶೇ. 30ರಷ್ಟು ಕೊರತೆಯಿದ್ದು ಹೆಚ್ಚುವರಿ ಬೇಡಿಕೆಯನ್ನು ಪಡೆಯಲು ಪ್ರಯತ್ನಿಸಲಾಗುತ್ತಿದೆ.

615(1075) ಶ್ರೀ ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಯಾವ ಯಾವ ನ್ಯಾಯಬೆಲೆ ಅಂಗಡಿ ವ್ಯಾಪ್ತಿಯಲ್ಲಿ ಎಷ್ಟೆಷ್ಟು ಬಿಪಿಎಲ್ ಪಡಿತರ ಚೀಟಿಗಳನ್ನು ನೀಡಲಾಗಿದೆ;

ಆ) ಬಿಪಿಎಲ್ ಪಡಿತರ ಚೀಟಿ ಕೋರಿ ಹಾಲಿ ಬಂದಿರುವ ಅರ್ಜಿಗಳೆಷ್ಟು;

ಇ) ಬಿಪಿಎಲ್ ಪಡಿತರ ಚೀಟಿ ಕೋರಿ ಅರ್ಜಿ ಸಲ್ಲಿಸಿರುವವರಿಗೆ, ಮತ್ತು ಮುಂದೆ ಅರ್ಜಿ ಸಲ್ಲಿಸುವವರಿಗೆ ಬಿಪಿಎಲ್ ಪಡಿತರ ಚೀಟಿ ಒದಗಿಸುವ ಬಗ್ಗೆ ಸರ್ಕಾರ ಯಾವ ಯಾವ ಕ್ರಮ ವಹಿಸುವುದು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸಬರಾಜು ಸಚಿವರು)

ಅ) ಮೈಸೂರು ನಗರದಲ್ಲಿ ವಿತರಿಸಿರುವ ಅಂತ್ಯೋದಯ ಹಾಗೂ ಹಳದಿ ಪಡಿತರ ಚೀಟಿಗಳ ಮಾಹಿತಿಯ ನ್ಯಾಯ ಬೆಲೆ ಅಂಗಡಿವಾರು ವಿವರವನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.

ಆ) ಬಿಪಿಎಲ್ ಪಡಿತರ ಚೀಟಿ ಕೋರಿ ಬಂದ ಅರ್ಜಿಗಳು 1572

ಇ) ಸರ್ಕಾರವು, ಸಂಖ್ಯೆ: ಅನಾಸ 114 ಡಿಆರ್ಎ 2004, ದಿನಾಂಕ 10-1-2005ರಂದು ಆದೇಶವನ್ನು ಹೊರಡಿಸಿದ್ದು, ಅದರಂತೆ, 2005ನೇ ಜನವರಿ ಮಾಹೆಯಿಂದ ಏಪ್ರಿಲ್ 2005ನೇ ಮಾಹೆಯವರೆಗೆ ರಾಜ್ಯದಾದ್ಯಂತ ಮನೆ ಮನೆ ಸಮೀಕ್ಷೆ ಕಾರ್ಯಕೈಗೊಳ್ಳಲಗಿದ್ದು ಸಮೀಕ್ಷಾ ಮಾಹಿತಿಯನ್ನು ಗ್ರಾಮ ಮತ್ತು ವಾರ್ಡ್‌ಸಭೆಗಳಲ್ಲಿ ಇಟ್ಟು ಪಟ್ಟಿಗಳ ಅನುಮೋದನೆ ಪಡೆದು ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿ ನೀಡಲಾಗುವುದು. ಆ ವೇಳೆಯಲ್ಲಿ ಈಗಾಗಲೇ ಬಂದಿರುವ ಅರ್ಜಿಗಳನ್ನು ಸಹಾ ಗಣನೆಗೆ ತೆಗೆದುಕೊಳ್ಳಲಾಗುವುದು.

ಅನುಬಂಧ-1

ಮೈಸೂರು ನಗರದ ಬಿಪಿಎಲ್ ಪಡಿತರ ಚೀಟಿಗಳ ನ್ಯಾಯಬೆಲೆ ಅಂಗಡಿವಾರು ವಿವರ

ಕ್ರ. ಸಂ.	ಚಿಲ್ಲರೆ ವಿತರಣಾ ಕೇಂದ್ರಗಳ ಹೆಸರು ಮತ್ತು ಮೊಹಲ್ಲಾ	ಅಂತ್ಯೋದಯ	ಹಳದಿ ಪಡಿತರ ಚೀಟಿ	ಒಟ್ಟು
1.	ಮಲ್ಲಿಕಾರ್ಜುನ FPSVV	14	287	301
2.	ಯಾದವಗಿರಿ CCS	10	65	75
3.	ಬೃಂದಾವನ FPS	14	62	76
4.	ಮಹೇಶ್ವರ ಸಿಸಿಎಸ್	46	68	114
5.	ಮಂಜುನಾಥೇಶ್ವರ ಎಫ್‌ಪಿಎಸ್	71	103	174
6.	ಸುಮರಾಜ್ ಎಫ್ ಪಿಎಸ್	76	210	286
7.	ಪಂಚಾಕ್ಷರಿ ಎಫ್ ಪಿಎಸ್	22	215	237
8.	ಕುಮಾರ್ ಎಫ್ ಪಿಎಸ್	208	23	231
9.	TAPCMS (ಚಿ)	14	155	169
10.	ಗುರುರಾಘವೇಂದ್ರ ಎಫ್‌ಪಿಎಸ್	7	227	234
11.	ಚಾಮುಂಡೇಶ್ವರಿ ಸಿಸಿಎಸ್	96	347	443
12.	ಪಲ್ಲವಿ ಎಫ್ ಪಿಎಸ್	10	185	195
13.	ಮ. ಮಹದೇಶ್ವರ, ಎಫ್‌ಪಿಎಸ್	4	129	133
14.	ಶಾರದಾ ಎಫ್ ಪಿಎಸ್	36	167	203
15.	ಎಂ.ಸಿ. ಬಕ್ಷಿಗೌಡ, ಎಫ್‌ಪಿಎಸ್	0	243	243
16.	ಕೆ. ಲೇಡೀಸ್ ಎಫ್‌ಪಿಎಸ್	1	94	95
17.	ಮಹದೇಶ್ವರ ಎಫ್‌ಪಿಎಸ್	0	129	129
18.	ಕಾರ್ತಿಕ್ ಎಫ್ ಪಿಎಸ್	6	330	336

1	2	3	4	5
19.	ವಿನಾಯಕ ಎಫ್‌ಪಿಎಸ್	0	389	389
20.	ಮೆಟ್ಟೀಗಳ್ಳಿ ಸಿಸಿಎಸ್	64	108	172
21.	ಲಕ್ಷ್ಮೀಕಾಂತ ಸಿಸಿಎಸ್	0	140	140
22.	ಬೃಂದಾವನ, ಮ ಎಫ್‌ಪಿಎಸ್	0	60	60
23.	ಟಿ. ಜಯರಾಮ್, ಎಫ್‌ಪಿಎಸ್	0	120	120
24.	ಕುಂಬಾರಕೊಪ್ಪಲು, ಸಿಸಿಎಸ್	0	120	120
25.	ರಂಗನಾಥ ಎಫ್ ಪಿಎಸ್	0	40	40
26.	ಪ. ಶ್ರೀನಿವಾಸ್ ಸಿಸಿಎಸ್	0	40	40
27.	ಜಯಲಕ್ಷ್ಮೀಪುರ ಸಿಎಸ್	0	33	33
28.	ಎನ್. ಶಂಕರ ಎಫ್ ಪಿಎಸ್	0	20	20
29.	ಗೋಕುಲಂ ಸಿಸಿಎಸ್	0	100	100
30.	ವಿಶ್ವೇಶ್ವರ ಎಫ್‌ಪಿಎಸ್	0	100	100
31.	ಜನಹಿತ ಸಿಸಿಎಸ್		30	30
32.	ನರಸಿಂಹಸ್ವಾಮಿ ಎಫ್ ಪಿಎಸ್		250	250
33.	ಚನ್ನರಾಯಸ್ವಾಮಿ ಎಫ್‌ಪಿಎಸ್		250	250
34.	ಕುಸುಮ ಎಫ್ ಪಿಎಸ್		103	103
35.	ಪ್ರತಿಮಾ ಎಫ್ ಪಿಎಸ್		110	110
36.	ಮುಸ್ಲಿಂ ಸಿಸಿಎಸ್		20	20
37.	ಅಶ್ವಿನಿ ಎಫ್ ಪಿಎಸ್		200	200
38.	ರೇಕ್ಸ್ ಸಿಸಿಎಸ್ ಡಿಎಂ		28	28
39.	ದೇ ಮೋ ಸಿಸಿಎಸ್		94	94
40.	ಎಲ್. ವಿಶಾಲಾಕ್ಷಮ್ಮ, ಎಫ್‌ಪಿಎಸ್		70	70
41.	ಕೋ. ರಾಮಯ್ಯ ಸಿಸಿಎಸ್		50	50
42.	ಎನ್. ಗಂಗಾರಾಮಾ ಎಫ್‌ಪಿಎಸ್		14	14
43.	ಕೆ.ಆರ್.ಹೆಚ್.ಕೆ. ಸಿಸಿಎಸ್		40	40
44.	ಮಾ. ದಸ್ತಗೀರ್ ಎಫ್‌ಪಿಎಸ್		36	36
45.	ರಾ. ಚೌಡೇಶ್ವರಿ ಸಿಸಿಎಸ್		27	27
46.	ಧನಲಕ್ಷ್ಮಿ ಎಫ್‌ಪಿಎಸ್		39	39
47.	ಎಂ. ಕುಳ್ಳಯ್ಯ ಎಫ್ ಪಿಎಸ್		66	66
48.	ಸಂದೀಪ್ ಎಫ್ ಪಿಎಸ್		43	43
49.	ಕ್ರಜೆಂಟ್ಲ ಸಿಸಿಎಸ್		54	54

1	2	3	4	5
50.	ಜಿ.ಆರ್.ಕೆ. ಲಕ್ಷ್ಮಮ್ಮ ಎಫ್‌ಪಿಎಸ್		40	40
51.	ವಿ. ಗಣಪತಿ ಸಿಸಿಎಸ್		50	50
52.	ನ್ಯಾಷನಲ್ ಪಿಪಿಎಸ್ ಕೆ.ಆರ್.		32	32
53.	ಸೆಂಟ್ರಲ್ ಸಿಸಿಎಸ್	8	149	157
54.	ಶನಿ ಎಫ್ ಪಿಎಸ್		40	40
55.	ಸುಣ್ಣದ .ಕೇರಿ ಸಿಸಿಎಸ್		90	90
56.	ಸಿದ್ದರಾಮೇಶ್ವರ ಸಿಸಿಎಸ್		23	23
57.	ಸಂಪತ್ತುಕುಮಾರ್ ಎಫ್‌ಪಿಎಸ್		38	38
58.	ಲಕ್ಷ್ಮೀನರಸಿಂಹಸ್ವಾಮಿ, ಎಫ್‌ಪಿಎಸ್		20	20
59.	ಎನ್.ಎನ್. ಶೀನಿವಾಸ		50	50
60.	ಎಂ.ಸಿ.ಎಂ. ಕುಮಾರ್, ಎಫ್‌ಪಿಎಸ್		35	35
61.	ಸಾಗರ್ ಎಫ್ ಪಿಎಸ್		37	37
62.	ಬಸವೇಶ್ವರ ಎಫ್ ಪಿಎಸ್		60	60
63.	ಜೆ.ಎಸ್.ಎಸ್. ಮುಖ್ಯ ಸಿಸಿಎಸ್		68	68
64.	ಎಂ.ವಿ. ತಮ್ಮಯ್ಯ, ಸಿಸಿಎಸ್		30	30
65.	ರಾಮಚಂದ್ರ ಎಫ್‌ಪಿಎಸ್		55	55
66.	ವಿ.ಎಸ್. ನಾಗೇಂದ್ರ, ಎಫ್‌ಪಿಎಸ್		40	40
67.	ಎಂ. ಮಹದೇವ ಎಫ್‌ಪಿಎಸ್		53	53
68.	ತೊಗರಿಬೀದಿ CCS		36	36
69.	ಹುಚ್ಚಯ್ಯ FPS		35	35
70.	ನೇತಾಜಿ CCS ಮು. LM		35	35
71.	ನೇತಾಜಿ CCS	20	225	245
72.	ಆದಿಶಕ್ತಿ CCS	12	155	167
73.	SC/ST CCS	23	240	263
74.	ಕೋಹಿನೂರು CCS		95	95
75.	ಮಂತ್ರಾಲಯ FPS	31	151	182
76.	ಗಾಂಧೀನಗರ CCS		125	125
77.	ಗಾಂಧೀನಗರ ಮಹಿಳಾ CCS		74	74

1	2	3	4	5
78.	ಡಾ: ಅಂಬೇಡ್ಕರ್ ಮು. CCS		48	48
79.	ಡಾ: ಅಂಬೇಡ್ಕರ್ ಶಾ. CCS		43	43
80.	ಡಾ: ಅಂಬೇಡ್ಕರ್ ಶಾ.2 CCS	10	116	126
81.	ಮಹದೇಶ್ವರ FPS	67	238	305
82.	ಎ.ಜಿ. ಬ್ಲಾಕ್ ಮು. CCS		75	75
83.	ಎ.ಜಿ. ಬ್ಲಾಕ್ ಶಾ. CCS		70	70
84.	ಈರನಗೆರೆ CCS		65	65
85.	ರೀ ಪೀಪಲ್ಸ್ CCS		59	59
86.	ಕನಕ CCS		50	50
87.	ಪ್ರಿನ್ಸ್ FPS		75	75
88.	ಮ. ಇಬ್ರಾಹಿಂ FPS		75	75
89.	ರೀಜೆಂಟ್ಸ್ CCS		56	56
90.	ಎಸ್.ಕೆ. ಘೋರಿ CCS		75	75
91.	ನ್ಯೂ ಭಾರತ FPS		54	54
92.	ವೆಂಕಟೇಶ್ವರ FPS		98	98
93.	ತಾಜ್ಲ FPS		75	75
94.	ಅಬ್ದುಲ್ ವಾಹಬರ FPS		65	65
95.	ಸಮತ CCS		30	30
96.	ಲೋಕಮಾನ್ಯ ತಿಲಕ್ MM		68	68
97.	ಕಾವೇರಿ CCS		24	24
98.	ಶಫಿ ನ. ಅಹ್ಮದ್ FPS		54	54
99.	ಶ್ರೀರಾಮ FM FPS	61	610	671
100.	ನ್ಯಾಷನಲ್ NB FPS		48	48
101.	ಕ. ಲೇಡೀಸ್ CCS		82	82
102.	ಮಾಡ್ರನ್ ಮು CCS		53	53
103.	ಮಾಡ್ರನ್ CCS		240	240
104.	ಸಾವಿತ್ರಮ್ಮ FPS	7	137	144
105.	ಜನನಾಯಕ CCS		91	91

1	2	3	4	5
106.	ವೀರಭದ್ರೇಶ್ವರ FPS		10	101
107.	ವಿನಾಯಕ FPS		93	93
108.	ಭಾರತ CCS		140	140
109.	ಗಾಯತ್ರಿಪುರಂ CCS	2	74	76
110.	ಪಿ. ಸತ್ಯನಾರಾಯಣ FPS	4	58	62
111.	ಚಿಕ್ಕಮ್ಮದೇವಿ FPS		61	61
112.	ಸುಮ CCS		52	52
113.	ಪೀಪಲ್ಸ್ FPS		57	57
114.	ಕುರುಬರಹಳ್ಳಿ CCS	5	176	181
115.	ರಷ್ಮಿ FPS		34	34
116.	ಸಿದ್ದಾರ್ಥನಗರ CCS		40	40
117.	ಮೂರ್ತಿ FPS		75	75
118.	ಹಾಬಲದ್ರಿ CCS		41	41
119.	ಬೀಡಿ ಮಜ್ದೂರ್ CCS ಶಾ	2	314	316
120.	ಸಿದ್ದೇಶ್ವರ FPS		149	149
121.	ವೆಂಕಟೇಶ್ವರಯ್ಯ FPS		110	110
122.	ಗೌಸಿಯಾ FPS	13	320	333
123.	ದೇವನೂರು ಮ. CCS	2	234	236
124.	ಶೋಭಾದೇವಿ FPS	6	178	184
125.	ಶ್ರೀನಿಧಿ FPS		151	151
126.	ಭಾರತಿನಗರ ಮ. CCS	3	182	185
127.	ಭಾರತ FPS		226	226
128.	ಕರ್ನಾಟಕ FPS	5	199	204
129.	ರಾಘವೇಂದ್ರ FPS		156	156
130.	ವೆಂಕಟೇಶ್ವರ FPS	8	275	283
131.	ಮೂಸಾ MM CCS		40	40
132.	ಇಂದಿರಾ		58	58
133.	ಬೀಡಿ ಮಜ್ದೂರ್ CCS		43	43
134.	ಕೈಲಾಸಪುರಂ CCS	26	292	318
135.	ಪುಲಿಕೇಶಿ	25	451	476

1	2	3	4	5
136.	ಅನ್ವರ್ ಪಾಶ FPS	21	421	442
137.	ಡಾನ್ CCS		36	36
138.	ವಾಯಿ CCS		48	48
139.	ಮುನಿಸಿಪಲ್ CCS	36	211	247
140.	ಕೆ.ಆರ್. ಮಿಲ್ CCS		38	38
141.	ಹನುಮಂತನಗರ CCS		270	270
142.	ಬಡಾಮಕಾನ್ CCS		132	132
143.	ಮಂಜುನಾಥ ಮ. CCS	198	174	372
144.	ರಂಗನಾಥ FPS	13	104	117
145.	ಆರ್.ಎಸ್. ನಾಯ್ಡು		50	50
146.	ಆದಿ ದ್ರಾವಿಡ CCS	87	456	543
147.	ಎ.ಎ.ಕೆ. ಸುರಾನ		50	50
148.	ಸ್ಕೈಲಾರಕ್ CCS		53	53
149.	ಸಿದ್ಧರಾಮೇಶ್ವರ FPS		90	90
150.	ಈಡಿಗ CCS ಮುಖ್ಯ		52	52
151.	ಉದಯಗಿರಿ CCS	2	130	132
152.	ಜೈಹಿಂದ್ ಮು CCS		95	95
153.	ಜೈಹಿಂದ್ ಶಾ CCS		56	56
154.	ಮುರುಗಾದೇವಿ CCS		37	37
155.	ಆರ್. ರಮೇಶ್ FPS		76	76
156.	KFCSC-14 DM		76	76
157.	ಭಾರತ್ CHM CCS	4	178	182
158.	ಮ. ವಿವಿದ್ದೋಶ CCS	84	273	357
159.	ಜಯನಗರ CCS ಬ.ಚಾ		49	49
160.	ಸಿದ್ಧಾರ್ಥ CCS		24	24
161.	ತಾ. ಮಹಿಳಾ CCS		80	80
162.	ಗುರುಮಲ್ಲೇಶ್ವರ CCS		65	65
163.	ರಾ.ಕೃ. ನಗರ CCS		60	60
164.	ಕಲ್ಪತರು CCS		70	70
165.	ಕೃಷ್ಣವಿಲಾಸ್ CCS ಭ SL 157		29	29

1	2	3	4	5
166.	ಗಂಗೋತ್ರಿ CCS ಭ SL 163		50	50
167.	CCS		121	121
168.	ರಾಘವೇಂದ್ರ FPS	64	310	374
169.	ಶ್ರೀಲಕ್ಷ್ಮೀ (ಹೋ) FPS	27	156	183
170.	ಬ್ರಹ್ಮಲಿಂಗೇಶ್ವರ FPS		200	200
171.	ಶ್ರೀಕಂಠೇಶ್ವರ FPS		60	60
172.	ನಂದಿ FPS		76	76
173.	ತಿರುಮಲ FPS		70	70
174.	ಮಂಜುನಾಥ ಮ. FPS		100	100
175.	ಗಿರಿಜಾಂಬ FPS		200	200
176.	ತನುಮನ FPS		50	50
177.	ಚೇತನ FPS		50	50
178.	ಗೌತಮ್ FPS		1001	100
179.	ಅಶೋಕ ಪುರಂ FM CCS	2	143	145
180.	ಡಾ: ಭೀಮರಾವ್ CCS	4	84	88
181.	ಮಹದೇಶ್ವರ CCS	11	78	89
182.	ಸಿದ್ದವಾಜಿ CCS	4	85	89
183.	ಚ.ನ. ಸ್ವಾಮಿ CCS	5	84	89
184.	ಮುನಿಶ್ವರ ನಗರ CCS		112	112
185.	ಬೆಸ್ತರ ಬ್ಲಾಕ್ ಶಾ CCS		27	27
186.	ಬೆಸ್ತರ ಬ್ಲಾಕ್ ಶಾ CCS		27	27
187.	ವಿ. ಪುರಂ. ಮು. CCS		27	27
188.	ವಿ.ಪುರಂ. ಮು. 1 CCS		27	27
189.	ವಿ.ಪುರಂ. ಮು. 2 CCS		27	27
190.	ಚಾಮುಂಡೇಶ್ವರಿ ಮ. CCS		27	27
191.	ಚಾಮುಂಡೇಶ್ವರಿ ಮು. CCS		27	27
192.	ಇಂ. ಸಬರ್ಬ ಮು. CCS		27	27
193.	ಇಂ. ಸಬರ್ಬ ಶಾ. CCS		27	27
194.	ಸಾರ್ವಜನಿಕ CCS		27	27
195.	ನವಜೀವನ CCS		27	27

1	2	3	4	5
196.	ವಿಶ್ವೇಶ್ವರ ನಗರ CCS		26	26
197.	ಮಹದೇಶ್ವರ ನಾ FPS	67	95	162
198.	ರಾಘವೇಂದ್ರ FPS	41	367	408
199.	ಲಕ್ಷ್ಮೀ FPS	46	163	209
200.	ಶಿವಶಂಕರಮೂರ್ತಿ FPS	62	123	185
201.	ಶರತ್ FPS	1	88	89
202.	ಲೋಕೇಶ್ ಮೂರ್ತಿ FPS	3	86	89
203.	ಲಕ್ಷ್ಮೀವೆಂಕಟೇಶ್ವರ FPS		88	88
204.	ಗಣೇಶ್ FPS		132	132
205.	ಗುರುರಾಘವೇಂದ್ರ FPS		97	98
206.	ಎ.ಕೆ.ಜೆ. ಮೊದಲಿಯರ್		103	103
207.	ಚಾಮುಂಡೇಶ್ವರ ಗುಂ FPS		102	102
208.	ಎಲ್. ಮಹಾದೇವ್ FPS		27	27
209.	ಎಲ್. ಶ್ರೀನಿವಾಸ FPS		27	27
210.	ಗುರುಮಣಿಕಂಠ FPS		27	27
211.	ಐದಾನಂದ		26	26
212.	ಮಹಾದೇಶ್ವರ FPS		27	27
213.	ಅರಮನೆ ಕೆ.ಆರ್.ಎಂ.CCS		18	18
214.	ಚಾಮರಾಜಪುರಂ CCS		20	20
215.	ಭೀರೇಶ್ವರ CCS		102	102
216.	ಲಕ್ಷ್ಮೀಪುರಂ ಮು. CCS		95	95
217.	ಜೆ.ಎಸ್.ಎಸ್. ಶಾಖೆ CCS		18	18
218.	ಪೌರಹಿತ CCS		26	26
219.	ಪಾರ್ವತಿ FPS		80	80
220.	ಶ್ರೀನಿಧಿ FPS		41	41
221.	ಭ್ರಮರಾಂಭ FPS		40	40
222.	ಜನತಾ CCS		15	15
	ಒಟ್ಟು	**1822**	**23008**	**24830**

617(1108) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯಾದ್ಯಂತ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಸಂಖ್ಯೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರಿದ್ದಾರೆ;

ಆ) ಇವರುಗಳಲ್ಲಿ ಯಾರು ಯಾರು ಎಷ್ಟೆಷ್ಟು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದಾರೆ;

ಇ) ಇವರುಗಳು ಸರ್ಕಾರದ ಮುಂದೆ ಇಟ್ಟಿರುವ ಬೇಡಿಕೆಗಳ ವಿವರಗಳೇನು;

ಈ) ಈ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಸರ್ಕಾರದ ನಿಲುವೇನು;

ಉ) ಈ ವಿಚಾರದಲ್ಲಿ ಯಾವ ಯಾವ ಪ್ರಯತ್ನ ಮಾಡಲಾಗುತ್ತಿದೆ?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ವಿವರವನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.

ಆ) ಆಯಾ ತಾಲ್ಲೂಕುಗಳಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಪ್ರಾರಂಭವಾದಾಗಿನಿಂದ ಕೆಲಸ ನಿರ್ವಹಿಸುತ್ತಿದ್ದಾರೆ. ಯೋಜನೆಗಳು ಪ್ರಾರಂಭವಾದ ವರ್ಷದ ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ.

ಇ) ಇವರ ಪ್ರಮುಖವಾದ ಬೇಡಿಕೆ ಕನಿಷ್ಟ ವೇತನ ನೀಡಿ ಖಾಯಂಗೊಳಿಸುವುದು.

ಈ) ಇವರ ಸೇವಾ ಪ್ರಕರಣವು ಸುಪ್ರೀಂ ಕೋರ್ಟಿನಲ್ಲಿ ಇರುವುದರಿಂದ ಅಲ್ಲಿಂದ ಆದೇಶ ಬಂದ ನಂತರ ಈ ಬಗ್ಗೆ ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಳ್ಳುವುದು.

ಉ) ಅನ್ವಯಿಸುವುದಿಲ್ಲ.

Taluk Name	Date of Sanction of the ICDS Project
Bagalkote	
Bagalkot	28-2-94
Bilgi	6-10-90
Hunagund	29-9-94
Badami	19-6-82
Jamakhandi	2-8-77
Mudhol	19-1-83
Bangalore Rural	
Channapatna	4-11-93
Devanahalli	6-10-90
Doddaballapura	29-9-94

1	2
Hosakote	6-10-90
Magadi	4-11-93
Ramanagara	29-9-94
Kanakapura	29-4-78
Nelamangala	26-4-85
Bangalore Urban	
Bangalore North	25-4-89
Bangalore South	6-10-90
Sumangali Seva Ashram	1-2-95
Anekal	19-6-82
Bangalore Central	9-9-80
Bangalore State	2-5-79
Belgaum	
Bailahongal	16-3-95
Belgaum (R)	29-9-94
Chikkodi	4-11-93
Khanapur	29-9-94
Ramadurga	29-9-94
Athani	19-6-82
Belgaum (U)	6-10-90
Gokak	6-10-90
Hukkeri	6-10-90
Raibag	29-4-78
Soundatti	19-1-83
Bellary	
Bellary (R)	27-1-93
Bellary (U)	6-10-90
Hagribommanahalli	27-1-93
Hoovina Hadagali	25-4-89
Siraguppa	27-12-91
Hospet	3-12-86
Kudligi	19-6-82
Sandur	2-8-77

1	2
Bidar	
Basavakalyan	29-4-78
Bhakki	4-12-81
Bidar	19-6-82
Humnabad	19-6-82
Santhapur	31-3-82
Bijapura	
Basavana Bagewadi	4-11-93
Bijapur	6-10-90
Muddebihal	25-4-89
Indi	19-1-83
Sindgi	4-7-81
Chamarajanagara	
Chamarajanagar	6-10-90
Gundlapet	3-12-86
Kollegal	19-1-83
Yelandur	3-12-86
Chikkamagalore	
Chickmangalore	6-10-90
N.R. Pura	27-1-93
Sringeri	25-4-89
Tarikere	27-12-91
Kadur	14-12-78
Koppa	19-6-82
Mudigere	19-6-82
Chitradurga	
Chitradurga	25-4-89
Molakalmur	2-8-77
Challakere	26-4-85
Hiriyur	19-6-82
Holalkere	4-7-81
Hosadurga	19-1-83
Dakshina Kannada	
Buntwal	6-10-90
Mangalore (R)	4-11-93

1	2
Puttur	25-4-89
Belthangady	19-6-82
Mangalore (U)	4--81
Sullia	19-1-83
Davangere	
Davangere	6-10-90
Harihara	29-9-94
Jagalur	25-4-89
Channagiri	9-9-80
Harapanahalli	19-1-83
Honnali	19-1-83
Dharwad	
Dharwad	18-8-76
Hubli-Dharwad	6-10-90
Kalaghatagi	27-12-91
Kundgol	4-11-93
Navalagund	4-11-93
Hubli	3-12-86
Nargund	4-11-93
Gadag	
Naragund	4-11-93
Gadag	19-1-83
Mundargi	19-1-83
Ron	26-4-85
Shirahatti	19-6-82
Gulbarga	
Aland	25-4-89
Gulbarga (R)	6-10-90
Shahapur	25-4-89
Afzalpur	4-12-81
Chincholi	19-1-83
Chitrapur	2-8-77
Gulbarga (U)	3-12-86
Jewargi	19-6-82
Sedam	26-4-85

1	2
Shorapur	19-6-82
Yadgir	19-6-82
Hassan	
Alur	6-10-90
Arakalgod	4-11-93
Aasikere	4-11-93
Sakaleshpur	6-10-90
Belur	26-4-85
Channarayapatna	19-6-82
Hassan	14-12-78
Holenarasipur	19-1-83
Haveri	
Byadagi	4-11-93
Haveri	4-11-93
Savanur	6-10-90
Shiggaon	27-1-93
Hanagal	19-6-82
Hirekerur	19-6-82
Ranebennur	4-12-81
Kodagu	
Madakeri	25-4-89
Ponnampet	29-4-78
Somavarpet	19-6-82
Kolar	
Chintamani	25-4-89
Gowribidanur	6-10-90
Gudibande	27-12-91
Kolar	6-10-90
Sidlaghatta	6-10-90
Srinivasapura	25-4-89
Bagepalli	3-12-86
Bangarpet	4-12-81
Chickaballapur	2-8-77
Malur	19-6-82
Mulbagal	26-4-85

1	2
Koppal	
Gangavathi	4-11-93
Koppal	4-11-93
Kushtagi	4-12-81
Yelburga	14-12-78
Mandya	
K.R. Pet	29-9-94
Maddur	6-10-90
Mandya	29-9-94
Malavalli	26-4-85
Nagamangal	19-1-83
Pandavapura	19-6-82
Srirangapattana	2-8-77
Mysore	
K.R. Nagar	29-9-94
Mysore	29-9-94
Nanjagud	6-10-90
Periapatna	4-11-93
H.D. Kote	19-6-82
Hunsur	9-9-80
Mysore (U)	19-1-83
T. Narasipura	30-9-75
Raichur	
Manvi	6-10-90
Raichur	27-12-91
Sindhanur	27-1-93
Deodurga	3-12-86
Lingasugur	19-1-83
Shimoga	
Hosnagar	27-1-93
Shikaripura	27-12-91
Shimoga	6-10-90
Thirthahalli	4-11-93
Sagar	19-6-82
Soraba	14-12-78

1	2
Tumkur	
C.N. Halli	25-4-89
Gubbi	4-11-93
Tiptur	6-10-90
Tumkur (R)	6-10-90
Turuvekere	29-9-94
Koratagere	19-6-82
Kunigal	19-6-82
Madhugiri	26-4-85
Pavagada	14-12-78
Sira	3-12-86
Tumkur (U)	19-6-82
Udupi	
Karkal	19-6-82
Kundapur	19-6-82
Udupi	18-8-76
Uttara Kannada	
Bhatkal	6-10-90
Haliyal	29-9-94
Honnavar	29-9-94
Karawar	25-4-89
Mundagod	29-9-94
Siddapur	29-9-94
Sirsi	29-9-94
Ankola	2-8-77
Kumta	19-6-82
Supa	19-6-82
Yellapura	19-1-83

619(1110) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯಾದ್ಯಂತ ಯಾವ ಯಾವ ಸ್ಥಳಗಳಲ್ಲಿ ಹಾಪ್‌ಕಾಮ್ಸ್ ವ್ಯಾಪಾರ ಮಳಿಗೆಗಳಿವೆ;

ಆ) ಅಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಎಷ್ಟು (ಹುದ್ದೆವಾರು ವಿವರ ನೀಡುವುದು);

ಇ) ಅವರುಗಳು ಎಷ್ಟೆಷ್ಟು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವರು;

ಈ) ಹಾಪ್‌ಕಾಮ್ಸ್ ಪ್ರಾರಂಭಿಸಿದ್ದು ಯಾವಾಗ;

ಉ) ಲಾಭ ಮತ್ತು ನಷ್ಟಗಳೇನು (ವಿವರ ನೀಡುವುದು)

ಊ) ಈ ಲಾಭ ನಷ್ಟಗಳ ಏರಿಳಿತ ಕುರಿತು ಸರಿಪಡಿಸಲು ಯಾವ ಯಾವ ಕ್ರಮ ವಹಿಸಲಾಯಿತು;

ಋ) ನಷ್ಟಕ್ಕೆ ಕಾರಣಗಳೇನು;

ೠ) ಅಲ್ಲಿನ ಸಿಬ್ಬಂದಿಗಳ ಖಾಯಂಯಾತಿ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ರಾಜ್ಯದಾದ್ಯಂತ ಈ ಕೆಳಕಂಡ ಜಿಲ್ಲೆಗಳಲ್ಲಿ ಹಾಪ್‌ಕಾಮ್ಸ್ ಮಳಿಗೆಗಳು ಇರುತ್ತವೆ.

ಜಿಲ್ಲೆಯ ಹೆಸರು	ಮಳಿಗೆಗಳ ಸಂಖ್ಯೆ
1. ಬೆಂಗಳೂರು ನಗರ	236
2. ಬೆಂಗಳೂರು ಗ್ರಾಮಾಂತರ	10
3. ಕೋಲಾರ	31
4. ತುಮಕೂರು	12
5. ಚಿತ್ರದುರ್ಗ	9
6. ಶಿವಮೊಗ್ಗ	15
7. ಮೈಸೂರು	46
8. ಮಂಡ್ಯ	35
9. ಹಾಸನ	07
10. ಕೊಡಗು	01
11. ದಕ್ಷಿಣ ಕನ್ನಡ ಮತ್ತು ಉಡುಪಿ	20
12. ಗುಲ್ಬರ್ಗಾ	11
13. ಬೀದರ್	1
14. ಬಿಜಾಪುರ	3
15. ಕಾರವಾರ	8
ಒಟ್ಟು	**445**

ಆ) ರಾಜ್ಯದಾದ್ಯಂತ ಇರುವ ಎಲ್ಲಾ ಹಾಪ್‌ಕಾಮ್ಸ್‌ಗಳಲ್ಲಿ ಒಟ್ಟು 1251 ನೌಕರರಿದ್ದು ಈ ಪೈಕಿ 806 ಖಾಯಂ ನೌಕರರು ಹಾಗೂ 445 ಹಂಗಾಮಿ ನೌಕರರಾಗಿರುತ್ತಾರೆ. (ವಿವರ ಅನುಬಂಧದಲ್ಲಿ ನೀಡಲಾಗಿದೆ).

ಇ) ಈ ನೌಕರರು ಸುಮಾರು ಕನಿಷ್ಟ ಒಂದು ವರ್ಷದಿಂದ ಮೂವತ್ತು ವರ್ಷದ ಅವಧಿವರೆಗೆ ಕೆಲಸ ನಿರ್ವಹಿಸುತ್ತಿರುತ್ತಾರೆ.

ಈ)

ಕ್ರ.ಸಂ.		ಪ್ರಾರಂಭಿಸಿದ ವರ್ಷ
1.	ಬೆಂಗಳೂರು ಹಾಪ್‌ಕಾಮ್ಸ್ (1959ರಲ್ಲಿ ಬೆಂಗಳೂರು ದ್ರಾಕ್ಷಿ ಬೆಳೆಗಾರರ ಮಾರಾಟ ಸಂಸ್ಕರಣ ಸಹಕಾರ ಸಂಘವೆಂದೂ ನಂತರ 1987ರಲ್ಲಿ ಹಾಪ್‌ಕಾಮ್ಸ್ ಎಂಬುದಾಗಿ ನೋಂದಾಯಿಸಲ್ಪಟ್ಟಿರುತ್ತದೆ).	1959/1987
2.	ತುಮಕೂರು ಹಾಪ್‌ಕಾಮ್ಸ್	1982
3.	ಚಿತ್ರದುರ್ಗ ಹಾಪ್‌ಕಾಮ್ಸ್	1987
4.	ಶಿವಮೊಗ್ಗ ಹಾಪ್‌ಕಾಮ್ಸ್	1987
5.	ಮೈಸೂರು ಹಾಪ್‌ಕಾಮ್ಸ್	1969
6.	ಮಂಡ್ಯ ಹಾಪ್‌ಕಾಮ್ಸ್	1985
7.	ಹಾಸನ ಹಾಪ್‌ಕಾಮ್ಸ್	1998
8.	ಕೊಡಗು ಹಾಪ್‌ಕಾಮ್ಸ್	1967
9.	ದಕ್ಷಿಣ ಕನ್ನಡ ಹಾಪ್‌ಕಾಮ್ಸ್	1965
10.	ರಾಯಚೂರು ಹಾಪ್‌ಕಾಮ್ಸ್	1982
11.	ಕೊಪ್ಪಳ ಹಾಪ್‌ಕಾಮ್ಸ್	1995
12.	ಕುಷ್ಟಗಿ ಹಾಪ್‌ಕಾಮ್ಸ್	1994
13.	ಯಲಬುರ್ಗಾ ಹಾಪ್‌ಕಾಮ್ಸ್	1995
14.	ಗಂಗಾವತಿ ಹಾಪ್‌ಕಾಮ್ಸ್	2003
15.	ಬಳ್ಳಾರಿ ಹಾಪ್‌ಕಾಮ್ಸ್	1965
16.	ಗುಲ್ಬರ್ಗಾ ಹಾಪ್‌ಕಾಮ್ಸ್	1999–2000
17.	ಬೀದರ್ ಹಾಪ್‌ಕಾಮ್ಸ್	1980
18.	ಧಾರವಾಡ ಹಾಪ್‌ಕಾಮ್ಸ್	1984
19.	ಬಿಜಾಪುರ ಹಾಪ್‌ಕಾಮ್ಸ್	1981–82
20.	ಕಾರವಾರ ಹಾಪ್‌ಕಾಮ್ಸ್	1981–82

ಉ) ಹಾಪ್‌ಕಾಮ್ಸ್‌ಗಳ ಇತ್ತೀಚಿನ ಸಾಲಿನ ಲಾಭ-ನಷ್ಟದ ವಿವರ ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ಹೆಸರು	ಲಾಭ	ನಷ್ಟ	ಕ್ರೋಢೀಕೃತ ನಷ್ಟ
1.	ಬೆಂಗಳೂರು	6.13 (2003-04)	–	26.57 (2003-04)
2.	ತುಮಕೂರು	0.78 (2002-03)	–	–
3.	ಚಿತ್ರದುರ್ಗ	0.33 (2003-04)	–	–
4.	ಶಿವಮೊಗ್ಗ	–	5.74 (2003-04)	14.01 (2003-04)
5.	ಮೈಸೂರು	– (2001-02)	–	16.99
6.	ಮಂಡ್ಯ	13.43 (2003-04)	–	–
7.	ಹಾಸನ	–	1.68 (2003-04)	–
8.	ಕೊಡಗು	0.04 (2002-03)	–	3.88 (2002-03)
9.	ದಕ್ಷಿಣ ಕನ್ನಡ	1.75 (2003-04)	–	–
10.	ರಾಯಚೂರು	0.07 (2003-04)	– –	0.91 2003-04)
11.	ಕೊಪ್ಪಳ	0.01 (2002-03)	–	–
13.	ಕುಷ್ಟಗಿ	–	0.006 (2003-04)	–
14.	ಗಂಗಾವತಿ	ಇತ್ತೀಚೆಗೆ ನೋಂದಣಿಯಾಗಿರುತ್ತದೆ		
15.	ಬಳ್ಳಾರಿ	2.40	–	–
16.	ಗುಲ್ಬರ್ಗಾ	0.40 (2003-04)	–	4.38 (2003-04)

1	2	3	4	5
17.	ಬೀದರ್	– (2003–04)	0.10	0.29 (2003–04)
18.	ಧಾರವಾಡ	–	0.80 (2003–04)	90.51 (2003–04)
19.	ಬಿಜಾಪುರ	0.61 (2003–04)	–	–
20.	ಕಾರವಾರ	0.65 (2003–04)	–	–

ಊ) ಸಂಘಗಳಿಗೆ ವ್ಯಾಪಾರ ವಹಿವಾಟು ಹೆಚ್ಚಿಸಿ ಸ್ವಂತ ಬಂಡವಾಳ ರೂಪಿಸಿಕೊಂಡು ಸಿಬ್ಬಂದಿ ಮತ್ತು ಇತರೆ ಆಡಳಿತಾತ್ಮಕ ವೆಚ್ಚವನ್ನು ಕಡಿಮೆಗೊಳಿಸಿ ಕೊಳ್ಳಲು ಸಲಹೆ ನೀಡಲಾಗುತ್ತಿದೆ.

ಋ) ವ್ಯಾಪಾರ ವಹಿವಾಟು ಗರಿಷ್ಟ ಮಟ್ಟ ಮುಟ್ಟದಿರುವುದು ಮಾರುಕಟ್ಟೆಯಲ್ಲಿನ ಬೆಲೆಗಳ ಏರಿಳಿತ, ಸಂಘದಲ್ಲಿನ ಸಿಬ್ಬಂದಿ ವೆಚ್ಚ ಅಗತ್ಯಕ್ಕಿಂತ ಹೆಚ್ಚುವರಿ ಸಿಬ್ಬಂದಿ ನೇಮಕಾತಿ ಮುಂತಾದವುಗಳಿಂದ ಸಂಘಗಳು ನಷ್ಟ ಅನುಭಿಸುತ್ತಿವೆ.

ೠ) ಸಂಘಗಳು ವ್ಯಾಪಾರ ವಹಿವಾಟನ್ನು ಹೆಚ್ಚಿಸಿಕೊಂಡು ಲಾಭದಾಯಕವಾಗಿ ಕೆಲಸ ನಿರ್ವಹಿಸಿ ಹೆಚ್ಚುವರಿ ಸಿಬ್ಬಂದಿ ವೆಚ್ಚವನ್ನು ಭರಿಸಲು ಸಾಮರ್ಥ್ಯ ಹೊಂದಿದಲ್ಲಿ ಖಾಯಂಯಾತಿಗೆ ಕ್ರಮವಿಡಲಾಗುವುದು.

ಅನುಬಂಧ

ಕ್ರ. ಸಂ.	ಜಿಲ್ಲೆ ಹೆಸರು	ವ್ಯವಸ್ಥಾಪಕ ನಿರ್ದೇಶಕರು/ ಜನರಲ್ ಮ್ಯಾನೇಜರ್/ ಕಾರ್ಯದರ್ಶಿ/ ಅಕೌಂಟೆಂಟ್	ಮಾರಾಟ ಸಹಾಯಕರು	ಜವಾನ	ವಾಹನ ಚಾಲಕ	ಮಾರಾಟ ಗಾರರು	ಸಹಾಯಕ ಅಭಿ ಯಂತ ರರು	ಪ್ರಥಮ ದರ್ಜೆ ಸಹಾಯಕ	ದ್ವಿತೀಯ ದರ್ಜೆ ಸಹಾಯಕ	ಬೆರಳಚ್ಚು ಗಾರರು	ಕಾರ್ಯ ನಿರ್ವಾ ಹಕರು ಸಹಾಯಕರ ಕಾರ್ಯ ನಿರ್ವಾ ಹಕರು	ಅಧೀಕ್ಷಕ ರು	ದಿನಗೂಲಿ ನೌಕರರು
1	2	3	4	5	6	7	8	9	10	11	12	13	14
1.	ಬೆಂಗಳೂರು ಹಾಪ್‌ಕಾಮ್ಸ್	ವ್ಯ.ನಿ. 1 ಜ.ಮ್ಯಾ 1	–	394	–	–	1	20	167	–	ಕಾ.ನಿ. 33 ಸ.ನಿ. 02	1	353
2.	ತುಮಕೂರು	1	8	1	1	–	–	–	–	–	–	–	–
3.	ಶಿವಮೊಗ್ಗ	1	1	–	–	–	–	–	–	–	–	–	–
4.	ಚಿತ್ರದುರ್ಗ	1	–	–	–	–	–	–	–	–	–	–	–
5.	ಮೈಸೂರು	–	58	–	2	–	1	2	31	1	–	–	–
6.	ಮಂಡ್ಯ	–	–	–	–	–	–	–	–	–	–	–	–
7.	ಹಾಸನ	–	5	–	–	–	–	–	–	–	–	–	74
8.	ಕೊಡಗು	1	–	–	–	1	–	–	–	–	–	–	18
9.	ದ. ಕನ್ನಡ	–	–	–	–	15	–	–	4	–	–	–	–

143-04

1	2	3	4	5	6	7	8	9	10	11	12	13	14
10.	ಧಾರವಾಡ	1	–	–	–	–	–	–	–	–	–	–	–
11.	ಬಿಜಾಪುರ	2	3	–	8	–	–	–	–	–	–	–	–
12.	ಕಾರವಾರ	2	13	1	3	2	–	–	–	–	–	–	–
13.	ರಾಯಚೂರು	1	1	1	–	–	–	–	–	–	–	–	–
14.	ಗುಲ್ಬರ್ಗಾ	1	2	1	1	–	–	–	–	–	–	–	–
15.	ಬೀದರ್	1	–	–	–	–	–	–	–	–	–	–	–
	ಒಟ್ಟು	14	97	398	15	18	2	22	202	1	35	1	445

620(508) ಶ್ರೀ ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2001-02, 2002-03 ಮತ್ತು 2003-04ನೇ ವರ್ಷದಲ್ಲಿ ಕೃಷಿ ವಿಮೆಗೆ ಜಮಾ ಆಗಿರುವ ಪ್ರಿಮಿಯಂ ಮೊತ್ತ ಎಷ್ಟು (ವರ್ಷಾವಾರು ವಿವರ ನೀಡುವುದು);

ಆ) ಮೇಲ್ಕಂಡ ವರ್ಷಗಳಿಗೆ ಮಂಜೂರಾದ ವರ್ಷಾವಾರು ವಿಮೆ ಮೊತ್ತ ಎಷ್ಟು;

ಇ) ಪ್ರತ್ಯೇಕ ಬೆಳೆಯ ಪ್ರಕಾರ ಮಂಜೂರಾದ ಮೊತ್ತದಲ್ಲಿ ರಾಜ್ಯದ ಹಣವೆಷ್ಟು (ವರ್ಷಾವಾರು ವಿವರ ನೀಡುವುದು):

ಶ್ರೀ ಕೆ. ಶ್ರೀನಿವಾಸ ಗೌಡ (ಕೃಷಿ ಸಚಿವರು)

ಅ) ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿಯಲ್ಲಿ ರೈತರು ವಿಮಾ ಕುರಿತು ಪಾವತಿಸಿ ಪಾಲ್ಗೊಂಡ ರೈತರಿಂದ ಸಂಗ್ರಹಿಸಲಾದ ವಿಮಾ ಕಂತಿನ ಮೊತ್ತ ವಾರ್ಷಿಕವಾರು ಈ ಕೆಳಕಂಡಂತೆ ಇದೆ:

ವರ್ಷ	ವಿಮಾ ಕಂತಿನ ಮೊತ್ತ (ರೂ. ಲಕ್ಷಗಳಲ್ಲಿ)
2001-02	1575.72
2002-03	4192.00
2003-04	4392.64
ಒಟ್ಟು	10160.36

ಆ) ವಾರ್ಷಿಕವಾರು ಯೋಜನೆಯಡಿ ರೈತರಿಗೆ ಇತ್ಯರ್ಥಪಡಿಸಲಾಗದ ಬೆಳೆ ವಿಮಾ ನಷ್ಟ ಪರಿಹಾರ ಮೊತ್ತ ಈ ಕೆಳಕಂಡಂತೆ ಇದೆ.

ವರ್ಷ	ಬೆಳೆ ವಿಮಾ ನಷ್ಟ ಪರಿಹಾರ (ಲಕ್ಷ ರೂ. ಗಳಲ್ಲಿ)
2001-02	13612.29
2002-03	29499.91
2003-04 *(ಮುಂಗಾರು 2003)	27231.75
ಒಟ್ಟು	70343.95

*2003ರ ಮುಂಗಾರು ಹಂಗಾಮಿನ ಹತ್ತಿ ಬೆಳೆಯ ಹಾಗೂ 2003-04ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ವಿವಿಧ ಬೆಳೆಗಳ ಬೆಳೆ ವಿಮಾ ನಷ್ಟ ಪರಿಹಾರ ಒಟ್ಟು ಮೊತ್ತದಲ್ಲಿ ರಾಜ್ಯ ಸರ್ಕಾರದ ಪಾಲನ್ನು ಬಿಡುಗಡೆ ಮಾಡಲು ದಿನಾಂಕ 3-1-2005 ಭಾರತೀಯ ಕೃಷಿ ವಿಮಾ ಕಂಪನಿ ಸಂಸ್ಥೆಯು ರಾಜ್ಯ

ಸರ್ಕಾರವನ್ನು ಕೋರುತ್ತದೆ. ರಾಜ್ಯ ಸರ್ಕಾರದ ಪಾಲು ಬಿಡುಗಡೆ ಮಾಡಲು ದಿನಾಂಕ 3-1-2005 ಭಾರತೀಯ ಕೃಷಿ ವಿಮಾ ಕಂಪನಿ ಸಂಸ್ಥೆಯು ರಾಜ್ಯ ಸರ್ಕಾರವನ್ನು ಕೋರುತ್ತದೆ. ರಾಜ್ಯ ಸರ್ಕಾರದ ಪಾಲು ಬಿಡುಗಡೆ ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ವಿಮಾ ಹಣ ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು.

ಇ) ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸಲು ರಾಜ್ಯ ಸರ್ಕಾರದಿಂದ 2001–02ನೇ ಸಾಲಿನಿಂದ 2003ರ ಮುಂಗಾರು ಹಂಗಾಮಿನವರೆಗೆ ಬಿಡುಗಡೆ ಮಾಡಿರುವ ರಾಜ್ಯ ಸರ್ಕಾರದ ಪಾಲು ರೂ. 30773.00 ಲಕ್ಷಗಳು ವಿವರ ಈ ಕೆಳಕಂಡಂತೆ ಇದೆ.

ವರ್ಷ.	ಬೆಳೆ ವಿಮೆ ನಷ್ಟ ಪರಿಹಾರ ರಾಜ್ಯ ಸರ್ಕಾರದ ಪಾಲು (ಲಕ್ಷ ರೂ. ಗಳಲ್ಲಿ)
2001–02	6018.00
2002–03	12654.00
2003–04	12101.00
ಒಟ್ಟು	**30773.00**

621(214) ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ (ಹುಕ್ಕೇರಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಬ್ಬಿನ ಬೆಳೆಗೆ ಉಣ್ಣೆ ರೋಗ ತಗಲಿ ರೈತ ಅನುಭವಿಸಿದ ಹಾನಿ ಎಷ್ಟು;

ಆ) ಉಣ್ಣೆ ರೋಗ ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಉಣ್ಣೆ ರೋಗದಿಂದ ಕಬ್ಬಿನ ಇಳುವರಿ ಕಡಿಮೆಯಾಗಿ ಸಕ್ಕರೆ ಕಾರ್ಖಾನೆಗಳಿಂದ ಸರ್ಕಾರಕ್ಕೆ ಆದಾಯ ಎಷ್ಟು ಕಡಿಮೆ ಆಗಿದೆ?

ಶ್ರೀ ಶ್ರೀನಿವಾಸಗೌಡ ಕೆ. (ಕೃಷಿ ಸಚಿವರು)

ಅ) 2004–05ನೇ ಸಾಲಿನಲ್ಲಿ ರಾಜ್ಯದಲ್ಲಿ ಅಂದಾಜು 28195 ಹೆ. ಪ್ರದೇಶದಲ್ಲಿ ಕಬ್ಬಿನ ಬೆಳೆಗೆ ಬಿಳಿ ಉಣ್ಣೆ ತಗುಲಿ ಅಂದಾಜು ಶೇ. 15–20 ರಷ್ಟು ಭಾಗದಷ್ಟು ಕಬ್ಬಿನ ಬೆಳೆಯಲ್ಲಿ ಇಳುವರಿ ಕುಂಠಿತವಾಗಿರುವ ಸಂಭವವಿದೆ.

ಆ) ಕಬ್ಬಿನ ಬೆಳೆಯನ್ನು ಬಾಧಿಸುವ ಬಿಳಿ ಕೀಟದ ಬಾಧೆಯನ್ನು ಜೈವಿಕ ಹತೋಟಿ ಕ್ರಮದ ಮೂಲಕ ಅಂದರೆ ಪರಭಕ್ಷಕ ಕೀಟಗಳ ಮೂಲಕ ಯಶಸ್ವಿಯಾಗಿ ಹತೋಟಿ ಮಾಡಲು ಸಾಧ್ಯವೆನ್ನುವುದು ಸಂಶೋಧನೆಗಳಿಂದ ತಿಳಿದು ಬಂದಿರುತ್ತದೆ. ಆದುದರಿಂದ ಬಿಳಿ ಉಣ್ಣೆ ಹೇನಿನ ಹತೋಟಿಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ರೈತರಿಗೆ ಶಿಫಾರಸ್ಸು ಮಾಡಲಾಗುತ್ತಿದೆ.

1. ಹೆಚ್ಚು ಅಂತರದ ಜೋಡಿ ಸಾಲುಗಳಲ್ಲಿ ಕಬ್ಬನ್ನು ಬೆಳೆಸುವುದು.

2. ಅನಾವಶ್ಯಕವಾಗಿ ಬೆಳೆಗೆ ಹೆಚ್ಚು ಸಾರಜನಕ ಗೊಬ್ಬರವನ್ನು ಉಪಯೋಗಿಸದಿರುವುದು. ಮತ್ತು ಸಮತೋಲನ ರಸಗೊಬ್ಬರ ಬಳಸುವುದು.

3. ಕಬ್ಬಿನ ಗಿಡದ ಸುತ್ತುಲೂ ಗರಿಗಳನ್ನು ಸುತ್ತುವುದು.

4. ಬಿಳಿ ಉಣ್ಣೆ ಹೇನನ್ನು ಭಕ್ಷಿಸುವ ಪರಭಕ್ಷ ಕೀಟಗಳಾದ ಡೈಪಾ ಎಫಿಡಿವೋರಾ ಹಾಗೂ ಮೈಕ್ರೋಮಸ್ ಮೊದಲಾದ ಕೀಟಗಳನ್ನು ಸಂರಕ್ಷಿಸಿ ಬಳಕೆ ಮಾಡುವುದು.

5. ಪರಭಕ್ಷಕ ಕೀಟಗಳನ್ನು ರಿಯಾಯಿತಿ ದರದಲ್ಲಿ ವಿತರಿಸುವುದು.

6. ಸಮರ್ಪಕವಾಗಿ ನೀರಿನ ನಿರ್ವಹಣೆ ಮಾಡುವುದು.

ಈ ಕ್ರಮಗಳನ್ನು ರೈತರಿಗೆ ಮನವರಿಕೆ ಮಾಡಲು ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕ ಏರ್ಪಡಿಸಲಾಗುತ್ತಿದೆ. ಹಾಗೂ ರಿಯಾಯಿತಿ ದರದಲ್ಲಿ ಪರಭಕ್ಷಕ ಕೀಟಗಳನ್ನು ವಿತರಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದಲ್ಲದೆ, ಈ ಕುರಿತು 2004-05ನೇ ಸಾಲಿನಲ್ಲಿ ಹೆಚ್ಚಿನ ಸಂಶೋಧನೆ ಕೈಗೊಳ್ಳಲು ಕೃಷಿ ವಿಶ್ವವಿದ್ಯಾನಿಲಯ, ಧಾರವಾಡಕ್ಕೆ 26:55 ಲಕ್ಷ ಹಾಗೂ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇಲ್ಲಿಗೆ 9.60 ಲಕ್ಷ ರೂ.ಗಳ ಅನುದಾನ ಬಿಡುಗಡೆ ಮಾಡಲಾಗಿದೆ.

ಇ) ಉಣ್ಣೆ ರೋಗದಿಂದ ಕಬ್ಬಿನ ಇಳುವರಿ ಕಡಿಮೆಯಾಗಿ ಸಕ್ಕರೆ ಕಾರ್ಖಾನೆಗಳಿಂದ ಸರ್ಕಾರಕ್ಕೆ ಆದಾಯ ಕಡಿಮೆ ಆಗಿರುವುದನ್ನು ನಿರ್ಣಯಿಸಲು ಸಾಧ್ಯವಿಲ್ಲ.

622(118) ಶ್ರೀ ಶಿವಾನಂದ ನಾಯಕ್ (ಭಟ್ಕಳ ಕ್ಷೇತ್ರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕಿನಲ್ಲಿ ಖಾಲಿ ಇರುವ ಕೃಷಿ ಅಧಿಕಾರಿ, ಕೃಷಿ ಸಹಾಯಕರು, ಫಾರೆಸ್ಟರ್ ಮತ್ತು ತೋಟಗಾರಿಕೆ ಸಹಾಯಕರ ಹುದ್ದೆಗಳನ್ನು ಸರ್ಕಾರ ಯಾವಾಗ ಭರ್ತಿ ಮಾಡುತ್ತದೆ;

ಆ) ಅಭಿವೃದ್ಧಿ ಕೆಲಸಗಳು ಕುಂಠಿತವಾಗಿರುವುದು ನಿಜವೇ;

ಇ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗುವುದು;

ಈ) ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಮಾತ್ರ ರೈತರ ಮಣ್ಣು ಪರೀಕ್ಷಾ ಕೇಂದ್ರವಿರುವುದು ಸರಿಯೇ? ಇದರಿಂದ ಇನ್ನುಳಿದ ಭಾಗದ ರೈತರಿಗೆ ಅನಾನುಕೂಲವಾಗುತ್ತಿಲ್ಲವೆ? ಇನ್ನೊಂದು ಮಣ್ಣು ಪರೀಕ್ಷಾ ಕೇಂದ್ರವನ್ನು ಹೊನ್ನಾವರದಲ್ಲಿ ಪ್ರಾರಂಭಿಸುವ ಬಗ್ಗೆ ಸರ್ಕಾರ ಆಲೋಚಿಸಿದೆಯೇ;

ಉ) ಹಾಗಿದ್ದಲ್ಲಿ, ಸರ್ಕಾರ ಯಾವಾಗ ಮಂಜೂರಾತಿ ಮಾಡಲಾಗುವುದು (ವಿವರ ನೀಡುವುದು)?

ಶ್ರೀ ಶ್ರೀನಿವಾಸಗೌಡ ಕೆ. (ಕೃಷಿ ಸಚಿವರು)

ಅ) ಕೃಷಿ ಇಲಾಖೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಅಧಿಕಾರಿಗಳ ಹುದ್ದೆಗಳು ಖಾಲಿ ಇದ್ದು, ಸದರಿ ಕೃಷಿ ಹುದ್ದೆಗಳನ್ನು ಬಡ್ತಿಯಿಂದ ಹಾಗೂ ನೇರ ನೇಮಕಾತಿಯಿಂದ ತುಂಬಲು ಕ್ರಮ ಕೈಗೊಂಡ ನಂತರ ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕಿನ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಖಾಲಿ ಇರುವ ಕೃಷಿ ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು, ಈ ಎರಡೂ ತಾಲ್ಲೂಕುಗಳಲ್ಲಿ ಕೃಷಿ ಸಹಾಯಕರ ಹುದ್ದೆಗಳು ಭರ್ತಿ ಮಾಡಲಾಗಿದ್ದು, ಹುದ್ದೆಗಳು ಖಾಲಿ ಇರುವುದಿಲ್ಲ.

ಅರಣ್ಯ ಇಲಾಖೆಯಲ್ಲಿ ಫಾರೆಸ್ಟರ್ ಹುದ್ದೆಗಳು ಮತ್ತು ತೋಟಗಾರಿಕೆ ಇಲಾಖೆಯಲ್ಲಿ ತೋಟಗಾರಿಕೆ ಸಹಾಯಕರ ಹುದ್ದೆಗಳು ಖಾಲಿ ಇರುವುದರಿಂದ ಸದರಿ ಹುದ್ದೆಗಳನ್ನು ಈ ಎರಡೂ ತಾಲ್ಲೂಕುಗಳ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಭರ್ತಿ ಮಾಡಲು ಸಾಧ್ಯವಾಗಿರುವುದಿಲ್ಲ. ಅರಣ್ಯ ಹಾಗೂ ತೋಟಗಾರಿಕೆ ಇಲಾಖೆಗಳು ಫಾರೆಸ್ಟರ್ ಹಾಗೂ ತೋಟಗಾರಿಕೆ ಸಹಾಯಕರ ಹುದ್ದೆಗಳನ್ನು ನೇಮಕಾತಿ ಮಾಡಿಕೊಂಡು ಜಲಾನಯನ ಅಭಿವೃದ್ಧಿ ಇಲಾಖೆಗೆ ನಿಯೋಜಿಸಿದ ನಂತರ ಈ ಎರಡೂ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಆ) ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಹಾಯದಿಂದ ಯಾವುದೇ ರೀತಿಯಲ್ಲಿ ಕುಂಠಿತವಾಗದಂತೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ.

ಇ) ಅವಶ್ಯಕತೆಗೆ ಅನುಗುಣವಾಗಿ ಖಾಲಿ ಹುದ್ದೆಗಳನ್ನು ಕಾಲಕಾಲಕ್ಕೆ ಭರ್ತಿ ಮಾಡಲಾಗುವುದು.

ಈ) ಹೌದು. ಇಲ್ಲ. ಇಲ್ಲ.

ಉ) ಹೊಸದಾಗಿ ರಚಿತವಾದ ಜಿಲ್ಲೆಗಳನ್ನು ಹೊರತುಪಡಿಸಿ, ಪ್ರತಿ ಜಿಲ್ಲೆಯಲ್ಲೂ ಒಂದು ಮಣ್ಣು ಪರೀಕ್ಷಾ ಕೇಂದ್ರ ಮಂಜೂರಾಗಿದ್ದು, ಹೊನ್ನಾವರದಲ್ಲಿ ಪ್ರಾರಂಭಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

623(122) ಶ್ರೀ ಶಿವಾನಂದ ನಾಯಕ್ (ಭಟ್ಕಳ ಕ್ಷೇತ್ರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಗ್ಯಾಸ್ (ಎಲ್.ಪಿ.ಜಿ.) ಸೌಲಭ್ಯ ಹೊಂದಿರುವವರಿಗೆ ಸರ್ಕಾರ ಪಡಿತರ ಕಾರ್ಡ್ ಮೂಲಕ ಸೀಮೆ ಎಣ್ಣೆ ಒದಗಿಸಲಾಗುತ್ತಿದೆಯೇ;

ಆ) ಒದಗಿಸುವುದಾದಲ್ಲಿ ಪ್ರತಿ ಕಾರ್ಡ್‌ದಾರರಿಗೆ ಎಷ್ಟು ಪ್ರಮಾಣದ [illegible]ಎಣ್ಣೆ [illegible]ತರಿಸಲಾಗುತ್ತಿದೆ;

ಇ) ಇಲ್ಲದಿದ್ದಲ್ಲಿ ಕಾರಣಗಳೇನು;

ಈ) ಸಮರ್ಪಕವಾಗಿ ಎಲ್ಲಾ ಫಲಾನುಭವಿಗಳಿಗೂ ಸೀಮೆಎಣ್ಣೆ ಸಿಗುತ್ತಿದೆಯೇ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಇಲ್ಲ.

ಆ) ಅನ್ವಯಿಸುವುದಿಲ್ಲ

ಇ) ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾಗುತ್ತಿರುವ ಸೀಮೆಎಣ್ಣೆ ಪ್ರಮಾಣವು ಅನಿಲ ರಹಿತ ಪಡಿತರ ಚೀಟಿದಾರರಿಗೆ ಸಾಕಾಗುತ್ತಿಲ್ಲವಾದುದರಿಂದ ಅನಿಲ ಸೌಲಭ್ಯ ಹೊಂದಿರುವವರಿಗೆ ಸೀಮೆಎಣ್ಣೆ ಹಂಚಿಕೆ ನೀಡುತ್ತಿರುವುದಿಲ್ಲ.

ಈ) ಎಲ್ಲಾ ಅರ್ಹ ಫಲಾನುಭವಿಗಳಿಗೆ ದೊರೆಯುತ್ತಿದೆ.

624(1223) ಶ್ರೀ ಶಿವಾನಂದ ನಾಯಕ್ (ಭಟ್ಕಳ ಕ್ಷೇತ್ರ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ ಅಮಾಲ್ಗಮೇಷನ್ ಆದೇಶದಿಂದ ಶೇ. 60ರಷ್ಟು ಬೆರಳಚ್ಚುಗಾರರು, ಶೇ. 50ರಷ್ಟು ಮಾರುಕಟ್ಟೆ ಸಮಿತಿಯ ದ್ವಿತೀಯ ದರ್ಜೆ ಸಹಾಯಕರು ಬಡ್ತಿ ಪಡೆದ ಕಾರಣ ಇಲಾಖಾ ದ್ವಿತೀಯ ದರ್ಜೆ ಸಹಾಯಕರು ಶೇ. 100ರಷ್ಟು ಬಡ್ತಿ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಅಮಾಲ್ಗಮೇಷನ್ ಅಧಿಸೂಚನೆ ಸಂ: ಎಫ್‌ಡಿ ಎಸ್‌ಆರ್‌ಪಿ 94, ದಿನಾಂಕ 28–3–94ರ ಅನ್ವಯ ಬಡ್ತಿ ವಂಚಿತ ಇಲಾಖಾ ದ್ವಿತೀಯ ದರ್ಜೆ ಸಹಾಯಕರಿಗೆ ನ್ಯಾಯ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಇ) ವೃಂದ ಮತ್ತು ನೇಮಕಾತಿ ನಿಯಮ ಅಳವಡಿಸಿಕೊಳ್ಳದೆ ಬಡ್ತಿ ನೀಡಲು ಇಲಾಖೆ ಕ್ರಮ ಕೈಗೊಳ್ಳುತ್ತಿರುವುದು ನಿಜವೇ;

ಇ) ಇದು ನಿಯಮಬಾಹಿರವಲ್ಲವೇ;

ಉ) ಈ ಬಗ್ಗೆ ಸರ್ಕಾರದ ಕ್ರಮಗಳೇನು; ಮಾಹಿತಿ ಒದಗಿಸುವುದು?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಸರ್ಕಾರದ ಅಧಿಸೂಚನೆ ಸಂ: ಸಿಎಂಡಬ್ಲ್ಯೂ 171 ಇಎಂಡಿ 95, ದಿನಾಂಕ 4–6–96ರಂತೆ ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಇಲಾಖೆ ಸೇವೆ (ಸಂಯೋಜನೆ) ನಿಯಮಾವಳಿ 1996ನ್ನು ರಚಿಸಲಾಗಿದ್ದು, ದಿನಾಂಕ 27–6–95 ರಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಇಲಾಖೆ ಸೇವೆ (ಸಂಯೋಜನೆ) ನಿಯಮಾವಳಿ 1966ರ ನಿಯಮ 4ರನ್ವಯ ಒಂದುಗೂಡಿಸಿ 2 ಸೇವೆಗಳ ಸಂಯಜಿತ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ 14–9–97ರಲ್ಲಿ ಪ್ರಕಟಿಸಲಾಗಿರುತ್ತದೆ. ಈ ರೀತಿ ಪ್ರಕಟಗೊಂಡ ಸೇವಾ ಹಿರಿತನದ ಆಧಾರದ ಮೇಲೆ ಪ್ರಸ್ತುತ ಜಾರಿಯಲ್ಲಿರುವ ಸರ್ಕಾರದ ಕಾರ್ಯಕಾರಿ ಆದೇಶದನ್ವಯ ಶೇ. 1:1ರ ಅನುಪಾತದಲ್ಲಿ ದ್ವಿತೀಯ

ದರ್ಜೆ ಸಹಾಯಕರು / ಬೆರಳಚ್ಚುಗಾರರಿಗೆ ಪ್ರಥಮ ದರ್ಜೆ ಸಹಾಯಕರ ಪದವೃಂದಕ್ಕೆ ಪದೋನ್ನತಿ ನೀಡಲಾಗಿರುತ್ತದೆ. ಮಾರುಕಟ್ಟೆ ಸಮಿತಿಯ ಸೇವೆಗಳು ಹಾಗೂ ಇಲಾಖೆ ಸೇವೆಗಳನ್ನು ಒಟ್ಟುಗೂಡಿಸಿ ಒಂದೇ ಸೇವೆಯನ್ನು ರೂಪಿಸಿರುವುದರಿಂದ ಇಲಾಖಾ ದ್ವಿತೀಯ ದರ್ಜೆ ಸಹಾಯಕರು ಬಡ್ತಿ ವಂಚಿತರಗಿರುತ್ತಾರೆಂಬ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸಹಕಾರ ಸಂಘಗಳ ಇಲಾಖೆಯಿಂದ ಕೃಷಿ ಮಾರಾಟ ಇಲಾಖೆಯಿಂದ 1973ರಲ್ಲಿ ಪ್ರತ್ಯೇಕಗೊಳಿಸಿ ರಚಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿಸಿ 100 ಸಿಎಂಡಿ 74, ದಿನಾಂಕ 30-10-75ರಲ್ಲಿ ಕೃಷಿ ಮಾರಾಟ ಇಲಾಖೆಗೆ ಕಾರ್ಯಕಾರಿ ಆದೇಶವನ್ನು ಹೊರಡಿಸಿದ್ದು, ಪ್ರಸ್ತುತ ಇದರನ್ವಯ ನೇಮಕಾತಿ ಮತ್ತು ಬಡ್ತಿಗಳನ್ನು ಜಾರಿಗೊಳಿಸಲಾಗುತ್ತಿದೆ. ಕೃಷಿ ಮಾರಾಟ ಇಲಾಖೆಗೆ ವೃಂದ ಮತ್ತು ನೇಮಕಾತಿ ನಿಯಮಗಳ ಕರಡನ್ನು ರಚಿಸಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಮೇಲ್ಕಂಡ ಉತ್ತರಗಳಿಂದಾಗಿ ಪ್ರಶ್ನೆ ಉದ್ಭವಿಸುವುದಿಲ್ಲ.

625(734) ಶ್ರೀ ಶಿವಾರಾಜ ಸಜ್ಜನರ್ (ಹಾವೇರಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾವೇರಿ ಜಿಲ್ಲೆಯಲ್ಲಿ ಮಹಿಕೋ ಕಂಪನಿಯ ಚಮತ್ಕಾರ ಹತ್ತಿಯನ್ನು ಎಷ್ಟು ಎಕರೆಯಲ್ಲಿ ಬೆಳೆಯುತ್ತಾರೆ;

ಆ) ಚಮತ್ಕಾರ ಹತ್ತಿಯನ್ನು ಬೆಳೆದ ರೈತರು ಸಂಪೂರ್ಣ ಹಾಳಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದರೆ, ಮುಂದಿನ ಕ್ರಮವೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಪ್ರಾಥಮಿಕ ವರದಿಯ ಪ್ರಕಾರ ಹಾವೇರಿ ಜಿಲ್ಲೆಯಲ್ಲಿ ಮಹಿಕೋ ಕಂಪನಿಯು ವಿತರಿಸಿರುವ ಚಮತ್ಕಾರ ಹತ್ತಿಯನ್ನು ಸುಮಾರು 17649 ಎಕರೆಗಳಲ್ಲಿ ಬೆಳೆಯಲಾಗಿದೆ.

ಆ) ಮಹಿಕೋ ಸಂಸ್ಥೆಯವರು ಹಾವೇರಿ ಜಿಲ್ಲೆಯಲ್ಲಿ ರೈತರಿಗೆ ಮಾರಾಟ ಮಾಡಿದ್ದ ಚಮತ್ಕಾರ ಹತ್ತಿ ತಳಿಯು ಅಂದಾಜು ಶೇ. 85-90 ಭಾಗದಷ್ಟು ಇಳುವರಿಯಲ್ಲಿ ನಷ್ಟವಾಗಿರುವುದು ಗಮನಕ್ಕೆ ಬಂದಿರುತ್ತದೆ.

ಇ) ಮಹಿಕೋ ಸಂಸ್ಥೆಯವರು ಹಾವೇರಿ ಜಿಲ್ಲೆಯಲ್ಲಿ ರೈತರಿಗೆ ಮಾರಾಟ ಮಾಡಿದ್ದ ಚಮತ್ಕಾರ ಹತ್ತಿ ಬೆಳೆಯಲ್ಲಿ ಫಸಲು ಬಾರದೇ ಹಾನಿಯಾಗಿರುವುದು ಕೃಷಿ ಇಲಾಖೆಯ ಗಮನಕ್ಕೆ ಬಂದ ತಕ್ಷಣ ಜಂಟಿ ಕೃಷಿ ನಿರ್ದೇಶಕರು, ಹಾವೇರಿ

ಇವರು ಕೃಷಿ ವಿಶ್ವವಿದ್ಯಾನಿಲಯ, ಧಾರವಾಡದ ವಿಜ್ಞಾನಿಗಳಿಗೆ ಪತ್ರ ಬರೆದು ಈ ಸಮಸ್ಯೆಯನ್ನು ಅಧ್ಯಯನ ಮಾಡಿ ವರದಿ ನೀಡುವಂತೆ ಕೋರಿದರು. ಆ ಪ್ರಕಾರ ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಹಾವೇರಿ ಹಾಗೂ ರಾಣೆಬೆನ್ನೂರು ತಾಲ್ಲೂಕಿನ ಕೆಲವು ಗ್ರಾಮಗಳಿಗೆ ದಿನಾಂಕ 24-12-2004ರಂದು ಕ್ಷೇತ್ರ ಭೇಟಿ ನಡೆಸಿ. ರೈತರ ಜೊತೆ ಚರ್ಚಿಸಿ ಹಾಗೂ ಸಮಸ್ಯೆಯನ್ನು ವಿಶ್ಲೇಷಿಸಿ ವರದಿ ಸಲ್ಲಿಸಿರುತ್ತಾರೆ.

ವಿಜ್ಞಾನಿಗಳು ಚಮತ್ಕಾರ ಹತ್ತಿ ಫಸಲಿನ ವಿಫಲೆಗೆ ಬೆಳೆಯನ್ನು ತಡವಾಗಿ ಅಂದರೆ ಆಗಸ್ಟ್ ಮಾಹೆಯಲ್ಲಿ ಬಿತ್ತನೆ ಮಾಡಿರುವುದರಿಂದ ಗಿಡಗಳ ಬೆಳವಣಿಗೆ ಹೆಚ್ಚಾಗಿ ಹೂ, ಮೊಗ್ಗು ಹಾಗೂ ಕಾಯಿ ಬಿಡುವ ಸಾಮರ್ಥ್ಯ ಕಡಿಮೆಯಾಗಿದೆ ಎಂದು ಅಭಿಪ್ರಾಯ ನೀಡಿರುತ್ತಾರೆ. ಈ ತಳಿಗಳು ಮೇ ಹಾಗೂ ಜೂನ್ ಮೊದಲನೆ ವಾರದಲ್ಲಿ ಬಿತ್ತನೆ ಮಾಡಲು ಸೂಕ್ತವಾದ ತಳಿಗಳಾಗಿರುತ್ತವೆ. ಅಲ್ಲದೇ ಈ ತಳಿಗಳು ಮಣ್ಣಿನಲ್ಲಿನ ತೇವಾಂಶದ ಕೊರತೆಗೆ ತೀವ್ರವಾಗಿ ಸ್ಪಂದಿಸುವುದರಿಂದ ತೇವಾಂಶ ಕೊರತೆಯಾದಾಗ ಗಿಡಗಳಲ್ಲಿ ಬಿಟ್ಟಂತಹ ಹೂ, ಮೊಗ್ಗು ಹಾಗೂ ಕಾಯಿಗಳು ಉದುರುತ್ತವೆ ಎಂದು ತಿಳಿಸಿರುತ್ತಾರೆ. ಈ ಕಾರಣದಿಂದ ಮಹಿಕೋ ಸಂಸ್ಥೆಯವರು ಮುಂಗಾರು ಬೆಳೆಗೆ ಜೂನ್, ಜುಲೈ ಹಿಂಗಾರು ಬೆಳೆಗೆ ಆಗಸ್ಟ್, ಸೆಪ್ಟೆಂಬರ್ ಹಾಗೂ ಬೇಸಿಗೆ ಬೆಳೆಗೆ ಜನವರಿ, ಮಾರ್ಚ್ ಎಂದು ಶಿಫಾರಸ್ಸು ಮಾಡಿರುವುದಕ್ಕೆ ಸಂಶೋಧನಾ ಆಧಾರಗಳ ವರದಿಯನ್ನು ನೀಡುವಂತೆ ತಿಳಿಸಿದ ಸದರಿ ಸಂಸ್ಥೆಯಿಂದ ವಿವರಣೆ ನಿರೀಕ್ಷಿಸಲಾಗಿದೆ.

626(1243) ಶ್ರೀ ಶಿವಾರಾಜ ಸಜ್ಜನರ್ (ಹಾವೇರಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2003-04ರ ಮುಂಗಾರು ಬೆಳೆ ವಿಮೆ ವಿತರಣೆಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದನ್ನು ಯಾವಾಗ ಸರಿಪಡಿಸಲಾಗುವುದು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಹೌದು. ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿಯಲ್ಲಿ ಒಂದು ಪ್ರದೇಶದಲ್ಲಿ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಬೇಕಾದರೆ ಅ ಪ್ರದೇಶದಲ್ಲಿ ಬೆಳೆ ಕಟಾವು ಪ್ರಯೋಗಗಳಿಂದ ಕಂಡು ಹಿಡಿಯಲಾಗುವ ವಾಸ್ತವಿಕ ಇಳುವರಿಯು ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇರಬೇಕು. ಇಳುವರಿ ಕೊರತೆಗನುಗುಣವಾಗಿ ವಿಮೆ ಮಾಡಿಸಿದ ರೈತರೆಲ್ಲರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಅರ್ಹರು. 2003-04ನೇ ಸಾಲಿನಲ್ಲಿ ಬೆಳೆಗಳನ್ನು ತಾಲ್ಲೂಕು ಮತ್ತು ಹೋಬಳಿ ಮಟ್ಟಕ್ಕೆ ಅಧಿಸೂಚಿಸಿ ಸೂಚಿಸಿರುವ ಪ್ರಯುಕ್ತ, ಈ ಘಟಕಗಳಲ್ಲಿನ ಪ್ರಾರಂಭಿಕ ಇಳುವರಿ,

ವಾಸ್ತವಿಕ ಇಳುವರಿ ಹಾಗೂ ಇಳುವರಿಯ ಕೊರತೆಯಲ್ಲಿ ವ್ಯತ್ಯಾಸವಿರುವುದರಿಂದ, ತಾಲ್ಲೂಕಿನಿಂದ ತಾಲ್ಲೂಕಿಗೆ ಮತ್ತು ಹೋಬಳಿಯಿಂದ ಹೋಬಳಿಗೆ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥ ಪಡಿಸುವಲ್ಲಿ ವ್ಯತ್ಯಾಸವಿರುತ್ತದೆ.

ಆ) ಉದ್ಭವಿಸುವುದಿಲ್ಲ.

627(1244) ಶ್ರೀ ಶಿವರಾಜ ಸಜ್ಜನರ್ (ಹಾವೇರಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2003-04ರ ಹಿಂಗಾರು ಬೆಳೆವಿಮೆ ರೈತರಿಗೆ ಕೊಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಹೌದು.

ಆ) 2003-04 ಹಿಂಗಾರು ಬೇಸಿಗೆ ಹಂಗಾಮಿನ ಒಟ್ಟು ಬೆಳೆ ವಿಮಾ ನಷ್ಟ ಪರಿಹಾರದ ಮೊತ್ತವಾದ ರೂ. 221.34 ಕೋಟಿಗಳನ್ನು ಇತ್ಯರ್ಥಪಡಿಸಲು ರಾಜ್ಯ ಸರ್ಕಾರದ ಪಾಲಿನ ಹಣವನ್ನು ಬಿಡುಗಡೆ ಮಾಡಲು ದಿನಾಂಕ 3-1-2005ರಂದು ಭಾರತೀಯ ಕೃಷಿ ವಿಮಾ ಕಂಪನಿ ನಿಯಮಿತ ಸಂಸ್ಥೆಯು ಕೋರಿದ್ದು, ರಾಜ್ಯ ಸರ್ಕಾರದ ಪಾಲಾದ ರೂ. 102.46 ಕೋಟಿಗಳನ್ನು ಬಿಡುಗಡೆ ಮಾಡಲು ಸರ್ಕಾರವು ಕ್ರಮ ಕೈಗೊಂಡಿದ್ದು, ರೈತರಿಗೆ ಬೆಳೆ ವಿಮಾ ನಷ್ಟ ಪರಿಹಾರ ವಿತರಿಸಲಾಗುವುದು.

628(1245) ಶ್ರೀ ಶಿವರಾಜ್ ಸಜ್ಜನರ್ (ಹಾವೇರಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡದ ಕೆ.ಸಿ.ಸಿ. ಬ್ಯಾಂಕ್ ಪುನಶ್ಚೇತನಗೊಳಿಸುವ ವಿಚಾರ ಸಕಾರಕ್ಕಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಇದೆ.

ಆ) ಪುನಃಶ್ಚೇತನಕ್ಕಾಗಿ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿವೆ:

1. ಧಾರವಾಡ ಕೆ.ಸಿ.ಸಿ. ಬ್ಯಾಂಕಿನ ಪುನಶ್ಚೇತನ ಸರ್ಕಾರವು ಆದೇಶ ಸಂಖ್ಯೆ: ಸಿಎಂಡಬ್ಲ್ಯೂ 293 ಸಿಸಿಬಿ 2003, ದಿನಾಂಕ 15-9-2003ರ ರೀತ್ಯಾ 25 ಕೋಟಿ ರೂ.ಗಳನ್ನು ದಿನಾಂಕ 30-6-2003ಕ್ಕೆ ಬಾಕಿಯಿರುವ ಎಲ್ಲಾ ಸುಸ್ತಿ ಬೆಳೆ ಮತ್ತು ಮಧ್ಯಮಾವಧಿ ಸಾಲಗಳ ಮೇಲಿನ ಪೂರ್ತಿ ಬಡ್ಡಿಯನ್ನು ಮನ್ನಾ ಮಾಡಲು ಮಂಜೂರಾತಿ ನೀಡಿದೆ. ಈ ಸಂಬಂಧ ನಷ್ಟವನ್ನು ಸರ್ಕಾರ ಅಪೆಕ್ಸ್ ಬ್ಯಾಂಕ್

ಮತ್ತು ಕೆ.ಸಿ.ಸಿ. ಬ್ಯಾಂಕ್ ಅನುಕ್ರಮವಾಗಿ ಶೇ. 50:25:25 ಅನುಪಾತದಲ್ಲಿ ಭರಿಸತಕ್ಕದ್ದೆಂದು ಆದೇಶಿಸಲಾಗಿರುತ್ತದೆ.

2) 1999-2000ನೇ ಸಾಲಿನ ಅಲ್ಪಾವಧಿ ಸಾಲದ ಪರಿವರ್ತನೆಯ ಬಾಬ್ತು ನಬಾರ್ಡಿನಿಂದ ಪುನರ್ ಧನ ರೂ. 19.10 ಕೋಟಿಯನ್ನು ಪಡೆಯಲು ರೂ.6.84 ಕೋಟಿಯನ್ನು ಸರ್ಕಾರ ದಿನಾಂಕ 11-4-2002ರಂದು ಮಂಜೂರು ಮಾಡಿದ್ದು ಈಗಾಗಲೇ ಈ ಹಣವನ್ನು ಅಪೆಕ್ಸ್ ಬ್ಯಾಂಕಿಗೆ ಬಿಡುಗಡೆ ಮಾಡಲಾಗಿದೆ.

3) ಬ್ಯಾಂಕಿನ ಸಾಲ ವಸೂಲಾತಿಯು ಬಹಳ ಕಡಿಮೆಯಾಗಿದ್ದು ಠೇವಣಿದಾರರಿಗೆ ಠೇವಣಿ ವಾಪಸ್ಸು ಮಾಡಲು ಹಣದ ಕೊರತೆ ಉಂಟಾಗಿದ್ದು, ಸರ್ಕಾರ ಹಾಗೂ ಅಪೆಕ್ಸ್ ಬ್ಯಾಂಕಿನ ಪ್ರಯತ್ನದ ಫಲವಾಗಿ ಬ್ಯಾಂಕು ರೂ.41.37 ಕೋಟಿ ಸಂಪನ್ಮೂಲಗಳನ್ನು ಸಂಗ್ರಹಿಸಿದೆ.

4) ಸಾಲದ ಅಂತರ ಯೋಜನೆಯಡಿಯಲ್ಲಿ ದಿನಾಂಕ 31-3-2002ರ ವರೆಗೆ ಸರ್ಕಾರ ಒಟ್ಟು ರೂ.519.07 ಲಕ್ಷಗಳನ್ನು ತನ್ನ ಪಾಲಾಗಿ ನೀಡಿದೆ. ಇದರಲ್ಲಿ ಧಾರವಾಡ ಕೆ.ಸಿ.ಸಿ. ಬ್ಯಾಂಕಿಗೆ ರೂ. 103.79 ಲಕ್ಷ ನೀಡಲಾಗಿದೆ.

5) ಅಪೆಕ್ಸ್ ಬ್ಯಾಂಕಿನಿಂದ ಅಲ್ಪಾವಧಿ ಪತ್ತಿನ ಮಿತಿ ರೂ. 73.00 ಕೋಟಿಯನ್ನು ಮಂಜೂರು ಮಾಡಲಾಗಿದೆ.

6) ಪಟ್ಟಣ ಬ್ಯಾಂಕುಗಳು ರೂ. 161.46 ಕೋಟಿ ಠೇವಣಿಯನ್ನು ಹೊಂದಿದ್ದು, ಅರ್.ಬಿ.ಐ. ಸೂಚನೆ ಪ್ರಕಾರ ನೆಟ್ ಡಿಮ್ಯಾಂಡ್ ಅಂಡ್ ಟೈಮ್ ಲಯಾಬಿಲಿಟಿಯ ಶೇ. 10 ರಿಂದ 15ರಷ್ಟನ್ನು ಸರ್ಕಾರದ ಭದ್ರತೆಯಲ್ಲಿ ತೊಡಗಿಸಬೇಕಾಗಿದ್ದು ಇದಕ್ಕೆ ಕೆ.ಸಿ.ಸಿ. ಬ್ಯಾಂಕಿನಿಂದ ಠೇವಣಿಯನ್ನು ವಾಪಸ್ಸು ಪಡೆದಲ್ಲಿ ಅದಕ್ಕೆ ಇನ್ನೂ ಹೆಚ್ಚಿನ ಆರ್ಥಿಕ ಮುಗ್ಗಟ್ಟು ಆಗುತ್ತದೆಂಬ ಕಾರಣದಿಂದ ಒಂದು ವರ್ಷದ ಅವಧಿಗೆ ವಿನಾಯ್ತಿ ಕೋರಲಾಗಿದೆ.

7) ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಗಾರರನ್ನು ನೇಮಕಾತಿ ಮಾಡಲಾಗಿದೆ.

8) ನಬಾರ್ಡ್ ಏಕಕಾಲಿಕ ಸಾಲ ತೀರುವಳಿ ಯೋಜನೆಯನ್ನು ಅನುಷ್ಠಾನಗೊಳಿಸಲು ಬ್ಯಾಂಕಿಗೆ ಅನುಮತಿಯನ್ನು ನೀಡಲಾಗಿದೆ.

9) ಬ್ಯಾಂಕ್ ಬಿ.ಆರ್. ಆಕ್ಟ್ 1959 ಕಲಂ 11(1)ರಿಂದ ಹೊರಬರಲು ವ್ಯವಹಾರವನ್ನು ಮುಂದುವರಿಸಿಕೊಂಡು ಹೋಗಲು ಅನುಕೂಲವಾಗುವಂತೆ ವಿನಾಯ್ತಿ ನೀಡಲು ಆರ್.ಬಿ.ಐ. ಗೆ ಸರ್ಕಾರ ಶಿಫಾರಸ್ಸು ಮಾಡಿದೆ.

10) ಲಾಭ ಗಳಿಸಿದ ಆಸ್ತಿಗಳನ್ನು ನಬಾರ್ಡಿನ ಓ.ಟಿ.ಎಸ್. ಯೋಜನೆ ಯಡಿಯಲ್ಲಿ ಶೇಕಡಾ 160 ಬಡ್ಡಿ ದರದಲ್ಲಿ ವಸೂಲಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ.

11) ಪುನ:ಶ್ಚೇತನ ಕೆಲಸಗಳನ್ನು ತ್ವರಿತಗೊಳಿಸಲು ಹಾಗ್ಗೂ ಸೂಕ್ತ ಸಲಹೆ ನೀಡಲು ಸಲಹಾ ಸಮಿತಿಯನ್ನು ರಚಿಸಲಾಗಿದೆ.

12) ಎಲ್ಲಾ ಸುಸ್ತಿ ಸಾಲಗಳನ್ನು ವಸೂಲಿ ಮಾಡಿಕೊಳ್ಳಲು ಕಾನೂನು ರೀತ್ಯಾ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

13) ಬ್ಯಾಂಕಿನ ಪುನ:ಶ್ವೇತನಕ್ಕಾಗಿ ಇಲಾಖಾ ಹಾಗೂ ಸರ್ಕಾರದ ಹಂತದಲ್ಲಿ ಸರ್ವ ರೀತಿಯ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

14) ದಾವಾ ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಸರ್ಕಾರ ಕಾಯ್ದೆ ಕಲಂ 69ರಡಿಯಲ್ಲಿನ ಅಧಿಕಾರವನ್ನು ಧಾರವಾಡ ಉಪನಿಬಂಧಕರಿಗೆ ಪ್ರತ್ಯಾಯೋಜಿಸಿದೆ.

15) 2003-04ನೇ ಸಾಲಿಗೆ ಬ್ಯಾಂಕು 90.50 ಕೋಟಿ ಬೆಳೆ ಸಾಲ ವಿತರಣೆ ಮಾಡಿರುತ್ತದೆ ಹಾಗು ಈ ತನಕ ಒಟ್ಟಾರೆ 51.15 ಕೋಟಿಗಳಷ್ಟು ಅರ್ಬನ್ ಬ್ಯಾಂಕುಗಳ; ಸದಸ್ಯರುಗಳ ಹಾಗೂ ಗ್ರಾಹಕರುಗಳ ಠೇವಣಿಯನ್ನು ವಾಪಸ್ಸು ಮಾಡಿದ್ದು ರೂ. 0.72 ಕೋಟಿ ಹೊಸ ಠೇವಣಿಯನ್ನು ಸಹ ಸಂಗ್ರಹಿಸಿರುತ್ತದೆ.

16) ಮುಂಗಾರು 2002ರ ಸಂಪೂರ್ಣ ಬಡ್ಡಿ ಮನ್ನಾ ಯೋಜನೆಯಡಿ ಬ್ಯಾಂಕಿಗೆ ಇದುವರೆಗೆ ರೂ. 3.18 ಕೋಟಿ ಹಣ ಬಿಡುಗೊಳಿಸಲಾಗಿದೆ.

630(203) ವಿ. ಸೋಮಣ್ಣ (ಬಿನ್ನಿಪೇಟೆ) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಎಷ್ಟು ಜನ ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ;

ಆ) ಅರ್ಹರಲ್ಲದವರಿಗೂ ಈ ಪಡಿತರ ಚೀಟಿ ನೀಡಿರುವ ದೂರುಗಳು ಬಂದಿದೆಯೇ;

ಇ) ಹಲವಾರು ಬಡವರು ಈ ಹಳದಿ ಪಡಿತರ ಚೀಟಿಯಿಂದ ವಂಚಿತರಾಗಿರುವುದು ನಿಜವಲ್ಲವೇ;

ಈ) ಹಾಗಿದ್ದಲ್ಲಿ ಅನರ್ಹರನ್ನು ಪತ್ತೆ ಹಚ್ಚಿ ಎಲ್ಲಾ ಅರ್ಹ ಫಲಾನುಭವಿಗಳಿಗೆ ಈ ಪಡಿತರ ಚೀಟಿ / ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಹಳದಿ ಎಎವೈ ಒಟ್ಟು

205134 14692 219726

ಒಟ್ಟು 2,19,726 ಕುಟುಂಬಗಳಿಗೆ ಹಳದಿ ಪಡಿತರ ಚೀಟಿ ನೀಡಲಾಗಿರುತ್ತದೆ.

ಆ) ಈ ಬಗ್ಗೆ ದೂರು ಬಂದಿದೆ. ಅನರ್ಹರನ್ನು ಪತ್ತೆ ಹಚ್ಚಿ, ಅಂತಹ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗುತ್ತಿದೆ.

ಇ) ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶದಲ್ಲಿ ಘೋಷಿತ ಹಾಗೂ ಅಘೋಷಿತ ಕೊಳಚೆ ಪ್ರದೇಶಗಳಲ್ಲಿ ಸಮೀಕ್ಷೆ ನಡೆಸಿ ಅರ್ಹ ಬಡತನ ರೇಖೆಗಿಂದ ಕೆಳಗಿನ ಕುಟುಂಬಗಳಿಗೆ ಹಳದಿ ಪಡಿತರ ಚೀಟಿಗಳನ್ನು ನೀಡಲಾಗಿತ್ತು. ನಂತರ ಕೊಳಚೆ ಪ್ರದೇಶದ ಹೊರಗಿನ ಬಡತನ ರೇಖೆಗಿಂತ ಕೆಳಗಿನ ಅರ್ಹ ಕುಟುಂಬಗಳನ್ನು ಸಹ ಗುರುತಿಸಿ ಹಳದಿ ಪಡಿತರ ಚೀಟಿ ನೀಡಲಾಗಿರುತ್ತದೆ.

ಈ) ಮನೆ-ಮನೆ ಪುನರ್ ಸಮೀಕ್ಷೆ ಕಾರ್ಯವನ್ನು ಜನವರಿ 2005ರಿಂದ ಏಪ್ರಿಲ್ 2005ರವರೆಗೆ ಕೈಗೊಂಡಿದ್ದು, ಸಮೀಕ್ಷೆ ಮುಕ್ತಾಯವಾದ ನಂತರ ಎಲ್ಲಾ ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿ ವಿತರಿಸಲಾಗುವುದು.

631(1070) ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ಲಾಲ್‌ಬಾಗ್ ಉದ್ಯಾನವನದ ಪಶ್ಚಿಮ ದ್ವಾರದ ಬಳಿ ಹಾಪ್‌ಕಾಮ್ಸ್ ಮಳಿಗೆ ಪ್ರಾರಂಭಿಸಲು ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

632(1071) ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೋಲಾರದಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲು ಸರ್ಕಾರ ನಿರ್ಧರಿಸಿದೆಯೇ;

ಆ) ಹಾಗಿದ್ದಲ್ಲಿ ಇದಕ್ಕಾಗಿ ಕೈಗೊಂಡ ಪೂರ್ವ ಸಿದ್ಧತೆ ಕಾರ್ಯಕ್ರಮಗಳೇನು;

ಇ) ಈ ಉದ್ದೇಶಿತ ವಿಶ್ವವಿದ್ಯಾಲಯದ ಕಾರ್ಯ ವ್ಯಾಪ್ತಿ ಏನು;

ಈ) ಇದರಿಂದ ಆಗತಕ್ಕ ಪ್ರಯೋಜನಗಳೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

633(925) ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳೆ ವಿಮೆ ಯೋಜನೆಯಡಿ ಪ್ರಾಥಮಿಕ ಇಳುವರಿಯಲ್ಲಿ ಸಾಲ ಪಡೆದ ರೈತರಿಗೆ ಮತ್ತು ಸಾಲ ಪಡೆಯದ ರೈತರಿಗೆ ವ್ಯತ್ಯಾಸವೇನು;

ಆ) ಇದ್ದಲ್ಲಿ, ಸರ್ಕಾರ ಈ ಕ್ರಮ ಅನುಸರಿಸಲು ಕಾರಣವೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಏನು ಇಲ್ಲ. ಆದರೆ ಭಾರತೀಯ ಕೃಷಿ ವಿಮಾ ಕಂಪನಿ ನಿಯಮಿತ ಸಂಸ್ಥೆಯು ತನಿಖೆ ಒಳಪಡಿಸುವ ಜಿಲ್ಲೆಗಳಲ್ಲಿ ತನಿಖೆಯನ್ವಯ ಬೇರೆ ಬೇರೆ ಕಡಿತದ (Reduction factor) ಪ್ರಮಾಣ ಜಾರಿಗೊಳಿಸುತ್ತದೆ.

ಆ) ಅನ್ವಯಿಸುವುದಿಲ್ಲ.

634(928) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಂತರ್ಜಲ ಮಟ್ಟ ಕ್ಷೀಣಿಸುತ್ತಿರುವ ಈ ಸಂದರ್ಭದಲ್ಲಿ ಕಡಿಮೆ ನೀರು ಬಳಕೆಯಾಗುವ ತೋಟಗಾರಿಕಾ ಬೆಳೆಗಳನ್ನು ಬೆಳೆಯುವಂತೆ ರೈತರನ್ನು ಪ್ರೋತ್ಸಾಹಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ಆರ್. ಶ್ರೀನಿವಾಸ (ತೋಟಗಾರಿಕೆ ಸಚಿವರು)

ಅ) ಹೌದು.

ಆ) ಅಂತರ್ಜಲ ಮಟ್ಟವು ಕ್ಷೀಣಿಸುತ್ತಿರುವ ಅಂಶವನ್ನು ತೋಟಗಾರಿಕೆ ಇಲಾಖೆಯು ಗಮನಿಸಿ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಹಾಗೂ ವಿಶೇಷವಾಗಿ ಮಳೆ ಕಡಿಮೆ ಬೀಳುವ ಪ್ರದೇಶದಲ್ಲಿ ಒಣ ತೋಟಗಾರಿಕೆಯನ್ನು ಪ್ರಚಾರಪಡಿಸಲಾಗುತ್ತಿದೆ. ಮಳೆ ಆಶ್ರಯದಲ್ಲಿ ಬೆಳೆಯಬಹುದಾದಂತಹ ಮಾವು, ಗೋಡಂಬಿ, ಹಲಸು, ಹುಣಸೆ, ಸಪೋಟ, ಸೀಬೆ, ನೇರಳೆ, ಪನ್ನೇರಳೆ, ಬೆಲ, ಇತ್ಯಾದಿ ತೋಟಗಾರಿಕೆ ಬೆಳೆಗಳ ಕಸಿ / ಸಸಿಗಳನ್ನು ರೈತರಿಗೆ ಉಚಿತವಾಗಿ ವಿತರಿಸಲಾಗುತ್ತಿದೆ.

2. ಲಭ್ಯವಿರುವ ನೀರನ್ನು ಮಿತವ್ಯಯವಾಗಿ ಬಳಸಲು ರೈತರಿಗೆ ಹನಿ ನೀರಾವರಿ ಅಳವಡಿಸುವಂತೆ ತಿಳಿಸಲಾಗುತ್ತಿದೆ. ಇದಕ್ಕಾಗಿ ರೈತರು ಅಳವಡಿಸುವ ಹನಿ ನೀರಾವರಿ ಉಪಕರಣದ ಮೇಲೆ ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಶೇ.100ರಷ್ಟು ಸಬ್ಸಿಡಿಯನ್ನು ಮತ್ತು ಇತರೆ ಜಿಲ್ಲೆಗಳಲ್ಲಿ ಶೇ. 50ರಷ್ಟು ಸಬ್ಸಿಡಿಯನ್ನು ರೈತರಿಗೆ ನೀಡಲಾಗುತ್ತಿದೆ. ಗಂಗಾಕಲ್ಯಾನ ಯೋಜನೆ ಫಲಾನುಭವಿಗಳಿಗೆ ಎಲ್ಲಾ ಜಿಲ್ಲೆಗಳಲ್ಲಿ ಶೇ. 100 ರಷ್ಟು ಸಹಾಯಧನ ನೀಡಲಾಗುತ್ತಿದೆ.
3. ಭೂಮಿಯಲ್ಲಿರುವ ನೀರಿನ ಅಂಶವನ್ನು ಹೆಚ್ಚು ದಿನಗಳವರೆಗೆ ಇರುವಂತೆ ಮಾಡಲು ಮಣ್ಣಿಗೆ Water absorbent gel ಅನ್ನು ಮಿಶ್ರಣ ಮಾಡಲು ರೈತರಿಗೆ ತಿಳುವಳಿಕೆ ನೀಡಲಾಗಿರುತ್ತದೆ. ತೀವ್ರ ಬರಪೀಡಿತ ಜಿಲ್ಲೆಗಳಾದ ಬಿಜಾಪುರ, ಭಾಗಲಕೋಟೆ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಪ್ರತಿ ರೈತರಿಗೆ ಉಚಿತವಾಗಿ ನೀಡಲಾಗುತ್ತಿದೆ.
4. ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಬುಡದ ಮಣ್ಣಿನಲ್ಲಿರುವ ನೀರಿನ ಅಂಶವನ್ನು ಆವಿಯಾಗಿ ಹಾಳಾಗದಂತೆ ತಡೆಗಟ್ಟಲು ಕಪ್ಪು ಪ್ಲಾಸ್ಟಿಕ್ ಹಾಳೆಗಳನ್ನು ಶೇ. 25ರ ಸಬ್ಸಿಡಿಯಲ್ಲಿ ರೈತರಿಗೆ ನೀಡಲಾಗುತ್ತಿದೆ.
5. ಜಲಾನಯನ ಅಭಿವೃದ್ಧಿ ಯೋಜನೆ ಅಡಿಯಲ್ಲಿ ತೊರೆಗಳು, ಹಳ್ಳಗಳು, ಝರಿಗಳಿಗೆ (check dam)ಗಳನ್ನು ನಿರ್ಮಿಸಿ ಅಲ್ಲಿ ನೀರು ಸಂಗ್ರಹವಾಗುಂತೆ ಮಾಡಿ ತನ್ಮೂಲಕ ಅಂತರ್ಜಲ ಮರುಪೂರಣ ಆಗಲು ಕ್ರಮ ಏರ್ಪಡಿಸಲಾಗಿದೆ.
6. ಇದೇ ಯೋಜನೆ ಅಡಿಯಲ್ಲಿ ರೈತರ ಹೊಲಗಳಲ್ಲಿ ಸಮಪಾತಳಿ ಬದುಗಳು, ಸೆಕ್ಷನ್ ಬದುಗಳು, ಕ್ಯಾಚ್ ಪಿಟ್ಟುಗಳು, ಇತ್ಯಾದಿಗಳನ್ನು ರಚಿಸಿ ಮಳೆ ನೀರು ಅಲ್ಲೆ ಇಂಗುವಂತೆ ಮಾಡಿ ಅಂತರ್ಜಲ ಮರು ಪೂರಣಕ್ಕೆ ಅನುವು ಮಾಡಿ ಕೊಡಲಾಗುತ್ತಿದೆ.
7. ಬರಗಾಲ ಪೀಡಿತ ಪ್ರದೇಶಗಳಲ್ಲಿ ಬೀಳುವ ಮಳೆಯ ಪ್ರತಿ ಹನಿ ನೀರನ್ನು ಸಂಗ್ರಹ ಮಾಡಿಟ್ಟುಕೊಂಡು ನಂತರದಲ್ಲಿ ಉಪಯೋಗಿಸಿಕೊಳ್ಳಲು ರೈತರು ಅವರ ತೋಟಗಳಲ್ಲಿ ತೆಗೆಯುವ ಕೃಷಿ ಹೊಂಡಗಳಿಗೆ ಶೇ. 50 ಸಬ್ಸಿಡಿಯನ್ನು ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ನೀಡಲಾಗುತ್ತಿದೆ.

635(948) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಅಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಇತ್ತೀಚೆಗೆ ಅನರ್ಹರಿಗೆ ನೀಡಿರುವ ಪಡಿತರ ಚೀಟಿಗಳನ್ನು ರದ್ದುಗೊಳಿಸುವ ನೆಪದಲ್ಲಿ ಅರ್ಹ ಬಡವರ ಪಡಿತರ ಚೀಟಿಗಳನ್ನು ವಜಾಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಲೋಪ ದೋಷಗಳನ್ನು ಸರಿಪಡಿಸಲು ಸರ್ಕಾರವು ಏನು ಕ್ರಮ ಕೈಗೊಂಡಿದೆ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಇಲ್ಲ. ಅನರ್ಹರು ಬಿಪಿಎಲ್ ಕಾರ್ಡ್ ಹೊಂದಿರುವುದನ್ನು ಗುರುತಿಸಿ ಅಂತಹವರ ಕಾರ್ಡುಗಳನ್ನು ಮಾತ್ರ ರದ್ದುಪಡಿಸಲಾಗಿದೆ. ಅರ್ಹ ಫಲಾನುಭವಿಗಳು ಕೈಬಿಟ್ಟು ಹೋಗಿವೆ. ಅನರ್ಹ ಕುಟುಂಬಗಳ ಪಟ್ಟಿ ಸೇರ್ಪಟ್ಟಿವೆಂದು ಸರ್ಕಾರದ ಗಮನಕ್ಕೆ ಬಂದಿದ್ದರ ಕಾರಣ, ರಾಜ್ಯ ಮಟ್ಟದಲ್ಲಿ ಕಂದಾಯ / ನಗರಾಭಿವೃದ್ಧಿ/ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಸನ್ಮಾನ್ಯ ಸಚಿವರುಗಳನ್ನು ಒಳಗೊಂಡ ಉನ್ನತ ಮಟ್ಟದ ಅಧಿಕಾರಿಗಳೊಂದಿಗೆ ಸಮಾಲೋಚಿಸಿ, ಕಂದಾಯ ವಿಭಾಗ ಮಟ್ಟದಲ್ಲಿ ಅಧಿಕಾರಿಗಳ ಸಭೆಯನ್ನು ಜರುಗಿಸಿ, ತಿಳುವಳಿಕೆ ಕೊಡುವುದರೊಂದಿಗೆ ಮನೆ ಮನೆ ಪುನರ್ ಸಮೀಕ್ಷೆ ಕಾರ್ಯ ಮಾಡಲು ಸರ್ಕಾರಿ ಆದೇಶ ಸಂಖ್ಯೆ: ಅನಾಸ 114 ಡಿಆರ್ಎ 2004, ದಿನಾಂಕ 10-1-2005ರಂದು ಆದೇಶ ಹೊರಡಿಸಿದೆ. ಈ ಆದೇಶದಂತೆ ಪುನರ್ ಸಮೀಕ್ಷೆ ಕಾರ್ಯ ಪ್ರಾರಂಭವಾಗಿದ್ದು, ಸಮೀಕ್ಷೆ ಫಲಿತಾಂಶವನ್ನು ಗ್ರಾಮ / ವಾರ್ಡ್ ಸಭೆಗಳಲ್ಲಿಟ್ಟು ಅನುಮೋದನೆ ಪಡೆಯುವ ನಿರೀಕ್ಷೆ ಏಪ್ರಿಲ್, 2005ನಲ್ಲಿರುತ್ತದೆ. ಬೇಡಿಕೆ ಎಷ್ಟು ಎಂದು ನಿರ್ಧರಿಸಿದ ಮೇಲೆ ಅರ್ಹರಿಗೆ ಹಳದಿ ಪಡಿತರ ಚೀಟಿ ವಿತರಿಸಲಾಗುವುದು.

636(949) ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸತತ 3 ವರ್ಷಗಳ ಬರಗಾಲದ ಹಿನ್ನೆಲೆಯಲ್ಲಿ ರೈತರ ಸಹಕಾರಿ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ರಾಜ್ಯದಲ್ಲಿನ ರೈತರ ಸಹಕಾರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವ ಪ್ರಸ್ತಾವ ಸರ್ಕಾರದ ಮುಂದೆ ಪರಿಶೀಲನೆಯಲ್ಲಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

637(154) ಶ್ರೀ ಸುನೀಲ್ ಕುಮಾರ್ (ಕಾರ್ಕಳ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಂಗವಿಕಲರಿಗೆ ಹಾಗೂ ಅರ್ಹ ವಿಧವೆಯರಿಗೆ ನೀಡುತ್ತಿರುವ ಮಾಸಿಕ ಭತ್ಯೆ ಎಷ್ಟು; (ಜಿಲ್ಲಾವಾರು ಫಲಾನುಭವಿಗಳ ವಿವರ ನೀಡುವುದು)

ಆ) ಉಡುಪಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ (ವಿಧಾನಸಭಾ ಕ್ಷೇತ್ರಾವಾರು) ಇದಕ್ಕಾಗಿ ಗುರುತಿಸಿರುವ ಫಲಾನುಭವಿಗಳ ವಿವರಗಳನ್ನು ಒದಗಿಸುವುದು;

ಇ) ಸದರಿಯವರುಗಳಿಗೆ ನೀಡುತ್ತಿರುವ ಮಾಸಿಕ ವೇತನ (ಭತ್ಯೆ)ವನ್ನು ಹೆಚ್ಚು ಮಾಡಲು ಸರ್ಕಾರ ಉದ್ದೇಶಿಸಿದೆಯೇ;

ಈ) ಹಾಗಿದ್ದಲ್ಲಿ, ಎಷ್ಟು ಹೆಚ್ಚಿಗೆ ಮಾಡಲಾಗುವುದು;

ಉ) ಇದರಿಂದ ಸರ್ಕಾರದ ಬೊಕ್ಕಸಕ್ಕೆ ತಗಲುವ ವೆಚ್ಚವೆಷ್ಟು ಹಾಗೂ ಇದಕ್ಕಾಗಿ ನಿಗದಿಪಡಿಸಿರುವ ಹಣ ಎಷ್ಟು (ವಿವರ ಒದಗಿಸುವುದು)?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಅಂಗವಿಕಲರಿಗೆ ರೂ. 125/- ಮಾಸಿಕ ಭತ್ಯೆಯನ್ನು ಮತ್ತು ಅರ್ಹ ವಿಧವೆಯರಿಗೆ ರೂ. 100/- ಮಾಸಿಕ ಭತ್ಯೆಯನ್ನು ನೀಡಲಾಗುತ್ತಿದೆ ಜಿಲ್ಲಾವಾರು ಫಲಾನುಭವಿಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ)

	ಅಂಗವಿಕಲ ಮಾಸಾಶನ ಪಡೆಯುತ್ತಿರುವ ಫಲಾನುಭವಿಗಳು	ವಿಧವಾ ವೇತನ ಪಡೆಯುತ್ತಿರುವ ಫಲಾನುಭವಿಗಳು
ಉಡುಪಿ	2289	6392
ಕುಂದಾಪುರ	2104	5183
ಕಾರ್ಕಳ	1751	3297
ಒಟ್ಟು	**6144**	**14872**

ಇ) ಸದ್ಯಕ್ಕೆ ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 154ಕ್ಕೆ ಅನುಬಂಧ

ಕ್ರ. ಸಂ.	ಜಿಲ್ಲೆಯ ಹೆಸರು	ಮಾಸಾಶನ ಪಡೆಯುತ್ತಿರುವ ಅಂಗವಿಕಲರ ಸಂಖ್ಯೆ	ವಿಧವಾ ವೇತನ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ
1.	ಬೆಂಗಳೂರು ನಗರ	10978	25130
2.	ಬೆಂಗಳೂರು (ಗ್ರಾ)	14362	37566
3.	ಬಳ್ಳಾರಿ	13669	27386
4.	ಚಿತ್ರದುರ್ಗ	11777	13869
5.	ಕೋಲಾರ	19731	38158

1	2	3	4
6.	ತುಮಕೂರು	19495	27762
7.	ಮೈಸೂರು	17368	34866
8.	ಚಾಮರಾಜನಗರ	9799	24583
9.	ಮಂಡ್ಯ	18942	48133
10.	ಹಾಸನ	15346	36117
11.	ಶಿವಮೊಗ್ಗ	11332	15890
12.	ಚಿಕ್ಕಮಗಳೂರು	6088	10503
13.	ದಕ್ಷಿಣ ಕನ್ನಡ	9679	20819
14.	ಉಡುಪಿ	6144	14872
15.	ಕೊಡಗು	2648	7611
16.	ಬೆಳಗಾಂ	25827	32403
17.	ಬಿಜಾಪುರ	15896	20075
18.	ಬಾಗಲಕೋಟೆ	14200	12754
19.	ಧಾರವಾಡ	15280	6681
20.	ಹಾವೇರಿ	13444	21081
21.	ಗುಲ್ಬರ್ಗಾ	30426	45025
22.	ಕೊಪ್ಪಳ	8628	10752
23.	ಬೀದರ್	11735	12196
24.	ಕಾರವಾರ	9356	13818
25.	ದಾವಣಗೆರೆ	12995	19023
26.	ರಾಯಚೂರು	7967	18339
27.	ಗದಗ್	2798	10308
	ಒಟ್ಟು	355910	613671

638(158) ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಂಗನವಾಡಿಗಳಿಗೆ ಕನಿಷ್ಟ ಅಗತ್ಯವಿರುವ ಸೀಮೆ ಎಣ್ಣೆ ಪೂರೈಸುವ ಆದೇಶವನ್ನು ರದ್ದುಗೊಳಿಸಿರುವುದು ಔಚಿತ್ಯವೇನು;

ಆ) ಅಂಗನವಾಡಿ ಮಕ್ಕಳಿಗೆ ಆಹಾರ ಬೇಯಿಸಲು ಬೇರೆ ಯಾವ ವ್ಯವಸ್ಥೆ ಮಾಡುವ ಇರಾದೆ ಸರ್ಕಾರಕ್ಕೆ ಇದೆ;

ಇ) ಅಂಗನವಾಡಿ ಕೇಂದ್ರದಲ್ಲಿ 20 ವರ್ಷಕ್ಕಿಂತ ಹೆಚ್ಚಿಗೆ ಸೇವೆ ಮಾಡುತ್ತಿರುವ-ವರಿಗೂ ಹಾಗೂ ಪ್ರಸಕ್ತ ಸೇವೆಗೆ ಸೇರುವ ಸಹಾಯಕಿಯರಿಗೂ ಒಂದೇ ರೀತಿಯ ಸಂಭಾವನೆ ಇದ್ದು ಈ ತಾರತಮ್ಯ ಹೋಗಲಾಡಿಸಲು ಯಾವ ಕ್ರಮ ಕೈಗೊಂಡಿದೆ;

ಈ) ಅಂಗನವಾಡಿ ಕೇಂದ್ರದ ಸಹಾಯಕಿಯರಿಗೆ ಸಂಭಾವನೆಯು ಪ್ರತೀ ತಿಂಗಳೂ ತಪ್ಪದೆ ಪಾವತಿಯಾಗುತ್ತಿಲ್ಲದಿರುವುದುರಿಂದ ಬಾಕಿ ಇರುವ ಹಲವು ತಿಂಗಳ ಸಂಭಾವನೆಯ ಪಾವತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀಮತಿ ಭಾಗೀರಥಿ ಮರಳ ಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಆದೇಶವನ್ನು ರದ್ದುಗೊಳಿಸಿರುವುದಿಲ್ಲ. ಕಳೆದ ಒಂದು ವರ್ಷದಿಂದ ಪಡಿತರ ವ್ಯವಸ್ಥೆಯಡಿ ಅಂಗನವಾಡಿ ಕೇಂದ್ರಗಳಿಗೆ ಸೀಮೆ ಎಣ್ಣೆ ಕೊಡುವುದನ್ನು ನಿಲ್ಲಿಸಿರುತ್ತಾರೆ.

ಆ) ಪ್ರತೀ ತಿಂಗಳು ಪ್ರತಿ ಅಂಗನವಾಡಿ ಕೇಂದ್ರಕ್ಕೆ ರೂ.100-00 ಉರುವಲು ವೆಚ್ಚವಾಗಿ ನೀಡಲಾಗುತ್ತಿದೆ.

ಇ) ಅಂಗನವಾಡಿ ಕಾರ್ಯಕರ್ತೆಯರಾಗಿ 5 ವರ್ಷ ಸೇವೆ ಸಲ್ಲಿಸಿರುವವರಿಗೆ ರೂ. 31ಗಳನ್ನು ಹೆಚ್ಚುವರಿಯಾಗಿ ನೀಡಲಾಗುತ್ತಿದೆ. 10 ವರ್ಷ ಸೇವೆ ಸಲ್ಲಿಸಿದವರಿಗೆ ಇನ್ನೂ ರೂ. 31 ಗಳನ್ನು ಹೆಚ್ಚುವರಿಯಾಗಿ ನೀಡಲಾಗುತ್ತಿದೆ.

ಈ) ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಲ್ಲಿ ತಡವಾದ ಸಂದರ್ಭಗಳಲ್ಲಿ ಮಾತ್ರ ಅಂಗನವಡಿ ಕಾರ್ಯಕರ್ತೆಯರಿಗೆ ಗೌರವಧನ ಪಾವತಿ ಮಾಡುವಲ್ಲಿ ವಿಳಂಬವಾಗಿದೆ. ಕೇಂದ್ರ ಸರ್ಕಾರದ ಹಣ ಸ್ವೀಕೃತವಾದ ನಂತರ ಬಾಕಿ ಇರುವ ಗೌರವಧನವನ್ನು ಪಾವತಿ ಮಾಡಲಾಗಿದೆ.

639(166) ಶ್ರೀ ಸುನೀಲ್ ಕುಮಾರ್ (ಕಾರ್ಕಳ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ 31-3-2004ಕ್ಕೆ ಇರುವ ಸಂಘಗಳ ಸಂಖ್ಯೆ ಎಷ್ಟು;

ಆ) ರಾಜ್ಯದಲ್ಲಿ 31-3-2004ಕ್ಕೆ ಸಹಕಾರ ಚಳುವಳಿಯ ಪ್ರಾರಂಭದಿಂದ ಸಮಾಪನ (ಲಿಕ್ವಿಡೇಶನ್) ಆದ ಸಹಕಾರ ಸಂಘಗಳ ಸಂಖ್ಯೆ ಎಷ್ಟು;

ಇ) ಕಳೆದ ಮೂರು ವರ್ಷಗಳಲ್ಲಿ ಲಾಭ ಹಾಗೂ ಹಾನಿಯಲ್ಲಿದ್ದ ಸಂಘಗಳ ಸಂಖ್ಯೆ ಎಷ್ಟು;

ಈ) ಕಳೆದ ಮೂರು ವರ್ಷಗಳಲ್ಲಿ ಅಡಿಟ್ ಆಗಿರುವ ಹಾಗೂ ಆಡಿಟ್ ಆಗದೇ ಇರುವ ಸಂಘಗಳ ಸಂಖ್ಯೆ ಎಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ 31-3-2004ಕ್ಕೆ ಒಟ್ಟು 32804 ಸಹಕಾರ ಸಂಘಗಳು ಇರುತ್ತವೆ.

ಆ) ರಾಜ್ಯದಲ್ಲಿ 31-3-2004ಕ್ಕೆ 3029 ಸಹಕಾರ ಸಂಘಗಳು ಸಮಾಪನೆಯಾಗಿರುತ್ತವೆ.

ಇ) ಕಳೆದ 3 ವರ್ಷಗಳಲ್ಲಿ ಲಾಭ ಹಾಗೂ ಹಾನಿಯಲ್ಲಿದ್ದ ಸಂಘಗಳ ಸಂಖ್ಯೆ ಕೆಳಗಿನಂತಿವೆ:

ವರ್ಷ	ಸಂಘಗಳ ಸಂಖ್ಯೆ	
	ಲಾಭ	ನಷ್ಟ
2001-02	17734	13128
2002-03	18646	13262
2003-04	19142	13662

ಈ) ಕಳೆದ 3 ವರ್ಷಗಳಲ್ಲಿ ಅಡಿಟ್ ಆಗಿರುವ ಹಾಗೂ ಅಗದೇ ಇರುವ ಸಹಕಾರ ಸಂಘಗಳ ವಿವರ ಈ ಕೆಳಕಂಡಂತೆ ಇರುತ್ತವೆ.

ವರ್ಷ	ಅಡಿಟ್ ಆಗಿರುವ ಸಂಘಗಳ ಸಂ.	ಅಡಿಟ್ ಆಗದೇ ಇರುವ ಸಂಘಗಳ ಸಂ
2001-02	17993	12433
2002-03	20115	11091
2003-04	22411	9466

640(171) ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯಾದ್ಯಂತ ತಾಲ್ಲೂಕುವಾರು ಇರುವ ವಿವಿಧ ಉದ್ದೇಶಗಳ ಕಸಬುದಾರ ಸಹಕಾರ ಸಂಘಗಳು ಎಷ್ಟು;

ಆ) ಈ ತಾಲ್ಲೂಕು ಮಟ್ಟದ ಸಹಕಾರ ಕಸಬುದಾರ ಸಂಘಗಳಿಗೆ ಸರಕಾರ ನೀಡಿರುವ ಶೇರು ಹಣವೆಷ್ಟು;

ಇ) ಈ ಸಂಘಗಳಿಗೆ ರಾಜ್ಯ ಖಾದಿ ಮಂಡಳಿಯವರು ನೀಡಿರುವ ಧನ ಸಹಾಯವೆಷ್ಟು;

ಈ) ಈ ಸಂಘಗಳ ಪೈಕಿ ಎಷ್ಟು ಸಂಘಗಳು ಚಾಲ್ತಿಯಲ್ಲಿವೆ ಹಾಗೂ ಎಷ್ಟು ಸಂಘಗಳು ಸ್ಥಗಿತಗೊಂಡಿವೆ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) 176.

ಆ) ರೂ. 13.51 ಲಕ್ಷಗಳು

ಇ) ರೂ. 133.08 ಲಕ್ಷಗಳು

ಈ) ರಾಜ್ಯದ ಒಟ್ಟು 176 ಸಂಘಗಳ ಪೈಕಿ

ಚಾಲ್ತಿಯಲ್ಲಿರುವ ಸಹಕಾರ ಸಂಘಗಳು	80
ಸ್ಥಗಿತಗೊಂಡಿರುವ ಸಹಕಾರ ಸಂಘಗಳು	66
ಸಮಾಪನೆಗೊಂಡ ಸಹಕಾರ ಸಂಘಗಳು	30
ಒಟ್ಟು	**176**

641(1263) ಶ್ರೀ ಉದಾಸಿ ಸಿ.ಎಂ. (ಹಾನಗಲ್) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾವೇರಿ ಜಿಲ್ಲೆಯಲ್ಲಿ ಕಡು ಬಡವರ ಹಳದಿ ಪಡಿತರ ಚೀಟಿಗಳನ್ನು ರದ್ದುಪಡಿಸಿದ್ದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಈ ರದ್ದತಿಯನ್ನು ತೆಗೆಯಲು ಕ್ರಮ ಕೈಗೊಳ್ಳಲಾಗಿದೆಯೇ;

ಇ) ತಾಲ್ಲೂಕುವಾರು ಹಳದಿ ಪಡಿತರ ಚೀಟಿಗಳ ವಿವರ ನೀಡುವುದು;

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).

ಅ) ಹಾವೇರಿ ಜಿಲ್ಲೆಯಲ್ಲಿ ಅನರ್ಹ ಕುಟುಂಬಗಳು ಹೊಂದಿರುವ ಬಿ.ಪಿ.ಎಲ್. ಪಡಿತರ ಚೀಟಿಗಳನ್ನು ಮಾತ್ರ ರದ್ದುಪಡಿಸಲಾಗಿರುತ್ತದೆ. ಅರ್ಹ ಕುಟುಂಬಗಳು ಬಿ.ಪಿ.ಎಲ್. ಪಟ್ಟಿಯಲ್ಲಿ ಕೈಬಿಟ್ಟಿವೆ. ಅನರ್ಹರು ಪಟ್ಟಿಯಲ್ಲಿ ಸೇರಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ). ಸರ್ಕಾರದ ಗಮನಕ್ಕೆ ಬಂದಿದ್ದರ ಆಧಾರ ಮನೆ ಮನೆ ಪುನರ್ ಸಮೀಕ್ಷೆ ಕಾರ್ಯ ಮಾಡಲು ಸರ್ಕಾರ ಆದೇಶ ಸಂಖ್ಯೆ: ಅನಾಸ 114 ಡಿಆರ್ಎ 2004 ದಿನಾಂಕ 10–1–2005ರಲ್ಲಿ ಆದೇಶ ಹೊರಡಿಸಿದ್ದು, ಆದೇಶಾನುಸಾರ ಪುನರ್ ಸಮೀಕ್ಷೆ ಈಗಾಗಲೇ ಪ್ರಾರಂಭಗೊಂಡಿದ್ದು, ಏಪ್ರಿಲ್ 2005ರಲ್ಲಿ ಮುಕ್ತಾಯಗೊಳಿಸಿ, ಸಮೀಕ್ಷಾ ವರದಿಯನ್ನು ಗ್ರಾಮಸಭೆ / ವಾರ್ಡ್ ಸಭೆಗಳಲ್ಲಿಟ್ಟು ಅನುಮೋದನೆ ಪಡೆದು ಅರ್ಹರಿಗೆ ಹಳದಿ ಪಡಿತರ ಚೀಟಿಗಳನ್ನು ಕೊಡಲಾಗುವುದು. (ಸಮೀಕ್ಷಾ ತಂಡ ಬರುವಾಗ ಎಲ್ಲಾ ಕುಟುಂಬಸ್ಥರು ಮಾಹಿತಿ ಕೊಡುವುದು).

ಇ). ತಾಲ್ಲೂಕುವಾರು ಹಳದಿ ಪಡಿತರ ಚೀಟಿಗಳ ವಿವರ ಈ ಕೆಳಕಂಡಂತಿರುತ್ತದೆ:

ಕ್ರ. ಸಂ.	ತಾಲ್ಲೂಕಿನ ಹೆಸರು	ಹಳದಿ ಪಡಿತರ ಚೀಟಿ ಹೊಂದಿದ ಸಂಖ್ಯೆ	ರದ್ದುಪಡಿಸಿದ ಅನರ್ಹ ಪಡಿತರ ಚೀಟಿಗಳ ಸಂಖ್ಯೆ
1.	ಹಾವೇರಿ	38079	4096
2.	ರಾಣಿಬೆನ್ನೂರ	49722	8391
3.	ಹಾನಗಲ್	43893	4894
4.	ಸವಣೂರ	17635	2191
5.	ಬ್ಯಾಡಗಿ	1[illegible]346	1974
6.	ಹಿರೇಕೆರೂರ	4[illegible]340	6761
7.	ಶಿಗ್ಗಾಂವ	21001	1209
	ಒಟ್ಟು	228016	29516

642(1264) ಶ್ರೀ ಉದಾಸಿ ಸಿ.ಎಂ. (ಹಾನಗಲ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002-03ನೇ ಸಾಲಿನಲ್ಲಿ ಹಾನಗಲ್ಲ ತಾಲ್ಲೂಕು ಅಕ್ಕಿ ಆಲೂರು ಮತ್ತು ಹಾನಗಲ್ಲ ಹೋಬಳಿಯ ರೈತರಿಗೆ ತಡೆಹಿಡಿದಿರುವ ವಿಮೆ ಪರಿಹಾರವನ್ನು ಮಂಜೂರು ಮಾಡಲಾಗುತ್ತದೆಯೇ;

ಆ) ಹಾಗಿದ್ದಲ್ಲಿ, ಮಂಜೂರು ಮಾಡಿ ಎಂದಿನಿಂದ ಬಿಡುಗಡೆ ಮಾಡಲಾಗುವುದು;

ಇ) ಹಾವೇರಿ ಜಿಲ್ಲೆಯ ರೈತರು ಬೆಳೆ ವಿಮೆಯಿಲ್ಲ ವಂಚಿತರಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಈ) 2004-05ನೇ ಸಾಲಿನಲ್ಲಿ ಹಾನಗಲ್ಲ ಮತ್ತು ಅಕ್ಕಿಆಲೂರು ಹೋಬಳಿಯನ್ನು ಭೀಕರ ಬರಗಾಲ ಪ್ರದೇಶ ಎಂದು ಘೋಷಣೆ ಮಾಡಿದ್ದರೂ ನೀರಾವರಿ ಭತ್ತಕ್ಕೆ ಬೆಳೆ ವಿಮೆ ಪರಿಹಾರ ನೀಡದೆ ಇರುವುದಕ್ಕೆ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) 2002-03ನೇ ಸಾಲಿನಲ್ಲಿ ಹಾನಗಲ್ಲ ತಾಲ್ಲೂಕು ಅಕ್ಕಿ ಆಲೂರು ಮತ್ತು ಹಾನಗಲ್ಲ ಹೋಬಳಿಯ ರೈತರಿಗೆ ಬೆಳೆ ವಿಮಾ ನಷ್ಟ ಪರಿಹಾರ ವಿತರಿಸುವಲ್ಲಿ ಯಾವುದೇ ಬಾಕಿ ಇಲ್ಲವೆಂದು ಭಾರತೀಯ ಕೃಷಿ ವಿಮಾ ಕಂಪನಿ ನಿಯಮಿತ ಸಂಸ್ಥೆಯು ತಿಳಿಸಿರುತ್ತದೆ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) 2004-05ನೇ ಸಾಲಿನಲ್ಲಿ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ವಿವಿಧ ಬೆಳೆಗಳನ್ನು ಅಧಿಸೂಚಿಸಿದ್ದು, ಬೆಳೆ ಕಟಾವು ಪ್ರಯೋಗಗಳ

ಪ್ರಕ್ರಿಯೆ ವಿವಿಧ ಹಂತಗಳಲ್ಲಿ ನಡೆಯುತ್ತಿದೆ. ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಇಳುವರಿ ಮಾಹಿತಿ ವಿಮಾ ಸಂಸ್ಥೆಗೆ ಒದಗಿಸಿದೆ. ನಂತರ ಬೆಳೆ ವಿಮಾ ನಷ್ಟ ಪರಿಹಾರ ಲೆಕ್ಕ ಹಾಕಿ ಅಂತಿಮಗೊಳಿಸುತ್ತದೆ.

643(965) ಶ್ರೀ ವೈಜ್ಯನಾಥ ಪಾಟೀಲ್ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಚಿಂಚೋಳಿ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿದ ಎಷ್ಟು ಹಣ ಬಿಡುಗಡೆಯಾಗಿದೆ;

ಆ) ಯಾವ ಕೆಲಸಕ್ಕಾಗಿ ಎಷ್ಟು ಹಣ ಖರ್ಚಾಗಿದೆ?

ಶ್ರೀಮತಿ ಭಾಗೀರಥಿ ಮರಳ ಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಕಳೆದ ಮೂರು ವರ್ಷಗಳಿಂದ ಬಿಡುಗಡೆಯಾದ ಹಣ

(ರೂ. ಲಕ್ಷಗಳಲ್ಲಿ)

2001-02	2002-03	2003-04
108.51	107.26	162.12

ಖರ್ಚಾಗಿರುವ ಹಣ (ರೂ. ಲಕ್ಷಗಳಲ್ಲಿ)

2001-02	2002-03	2003-04
108.51	107.26	162.11

ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಅನುಬಂಧ

ಚಿಂಚೋಳಿ ತಾಲ್ಲೂಕಿನ 2001-02, 2002-03 ಮತ್ತು 2003-04ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ವಿವಿಧ ಯೋಜನೆಗಳಿಗೆ ಖರ್ಚು ಮಾಡಿರುವ ವಿವರ

ಕ್ರ ಸಂ.	ವಿವಿಧ ಯೋಜನೆಗಳು	2001-02 (ಲಕ್ಷಗಳಲ್ಲಿ)	2002-03 (ಲಕ್ಷಗಳಲ್ಲಿ)	2003-04 (ಲಕ್ಷಗಳಲ್ಲಿ)
1.	ಸ್ತ್ರೀ ಶಕ್ತಿ ಗುಂಪುಗಳ ಸದಸ್ಯರ ತರಬೇತಿಗಾಗಿ	–	0.78	3.70
2.	ಸುತ್ತು ನಿಧಿ ಒಂದು ಗುಂಪಿಗೆ ರೂ. 5000-00 ಗಳಂತೆ	12.50	1.25	5.35
3.	ಐಸಿಡಿಎಸ್ ಸಿಬ್ಬಂದಿ ವೇತನ	27.93	36.81	50.62
4.	ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಹೆಚ್ಚುವರಿ ಗೌರವಧನ	7.66	7.60	7.81

1	2	3	4	5
5.	ಶಾಲಾ ಪೂರ್ವ ಮಕ್ಕಳ ಪೌಷ್ಠಿಕ ಆಹಾರಕ್ಕಾಗಿ ವೆಚ್ಚ	53.93	46.30	53.21
6.	ಶಾಲಾ ಪೂರ್ವ ಮಕ್ಕಳಿಗೆ (ಪಿಎಂಜಿವೈ) ಅಡಿ ಪೌಷ್ಠಿಕ ಆಹಾರದ ವೆಚ್ಚ	–	2.08	8.09
7.	ನ್ಯಾಷನಲ್ ನ್ಯೂಟ್ರಿಷನ್ ಮಿಷನ್ ಅಡಿ ವೆಚ್ಚ	–	–	20.70
8.	ಬಾಲಿಕಾ ಸಮೃದ್ಧಿ ಯೋಜನೆ	1.20	0.34	–
9.	ಜಾಗೃತಿ	–	5.15	–
10.	ಸ್ವಯಂ ಸಿದ್ದ ಯೋಜನೆ : ತರಬೇತಿ	–	–	1.35
11.	ಸ್ವಯಂ ಸಿದ್ಧ : ಕಟ್ಟಡ ನಿರ್ಮಾಣ	–	–	–
12.	ಸಾಂತ್ವನ	0.05	–	1.50
13.	ಹೆರಿಗೆ ಭತ್ಯೆ	1.50	1.99	2.07
14.	ಪ್ರೋತ್ಸಾಹ ಧನ ಅಂಗನವಾಡಿ ಕಾರ್ಯಕರ್ತೆಯರಿಗಾಗಿ	1.46	1.71	4.32
15.	ಗ್ರಾಮೀಣ ಬಾಲಕಿಯರಿಗೆ ಹಾಜರಾತಿ ಶಿಷ್ಯವೇತನ	2.28	3.25	3.39
	ಒಟ್ಟು	**108.51**	**107.26**	**162.11**

644(1106) ಶ್ರೀ ವೈಜ್ಯನಾಥ ಪಾಟೀಲ್ (ಚಿಂಚೋಳಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಂಗವಿಕಲರಿಗಾಗಿ ಸರ್ಕಾರದಿಂದ ಏನಾದರೂ ಸೌಲಭ್ಯಗಳು ದೊರಕುತ್ತಿವೆಯೇ;

ಆ) ದೊರಕುತ್ತಿದ್ದರೆ, ಆ ಸೌಲಭ್ಯಗಳು ಯಾವುವು (ವಿವರ ನೀಡುವುದು)?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಹೌದು.

ಆ) ಈ ಸೌಲಭ್ಯಗಳ ವಿವರ ಅನುಬಂಧ 1ರಲ್ಲಿ ಲಗತ್ತಿಸಿದೆ.

ಅನುಬಂಧ-1

ಅಂಗವಿಕಲರಿಗೆ ಸರ್ಕಾರವು ಒದಗಿಸುತ್ತಿರುವ ಸೌಲಭ್ಯಗಳ ಮಾಹಿತಿಯು ಈ ಕೆಳಕಂಡಂತಿದೆ.

1. ರಾಜ್ಯ ಸರ್ಕಾರವು ಅಂಗವಿಕಲ ಮಕ್ಕಳಿಗಾಗಿ (ನಾಲ್ಕು ಅಂದ ಮಕ್ಕಳು +ನಾಲ್ಕು ಕಿವುಡು ಮತ್ತು ಮೂಕ ಮಕ್ಕಳ ಶಾಲೆ) 8 ವಿಶೇಷ ಶಾಲೆಗಳನ್ನು ನಡೆಸುತ್ತಿದ್ದು ಅಲ್ಲಿ ಓದುತ್ತಿರುವ ಅಂಧ ಮತ್ತು ಕಿವುಡು ಮಕ್ಕಳಿಗೆ ಉಚಿತವಾಗಿ ಊಟ, ವಸತಿ ಬಟ್ಟೆ ಬರೆ ಮತ್ತು ಪುಸ್ತಕಗಳನ್ನು ಒದಗಿಸಲಾಗುತ್ತಿದೆ.

2. 34 ಸ್ವಯಂ ಸೇವಾ ಸಂಸ್ಥೆಯವರು ನಡೆಸುತ್ತಿರುವ ವಿಶೇಷ ಶಾಲೆಗಳಿಗೆ ಹಾಗೂ ತರಬೇತಿ ಕೇಂದ್ರಗಳಿಗೆ ರಾಜ್ಯ ಸರ್ಕಾರವು ಅನುದಾನ ನೀಡುತ್ತಿದೆ.

3. ಒಂದನೆ ತರಗತಿಯಿಂದ ವಿಶ್ವವಿದ್ಯಾನಿಲಯದ ಶಿಕ್ಷಣ ಮಟ್ಟದಲ್ಲಿ ಓದುತ್ತಿರುವ ಅರ್ಹ ಅಂಗವಿಕಲ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ.

4. ಪ್ರತಿಭಾವಂತ ಅಂಗವಿಕಲ ಮಕ್ಕಳಿಗೆ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.

5. ರಾಜ್ಯದಲ್ಲಿರುವ ಎಲ್ಲಾ ಅಂಧ ಮಕ್ಕಳಿಗೆ ಬೇಕಾಗಿರುವ ಬ್ರೈಲ್ ಪುಸ್ತಕಗಳನ್ನು ಮುದ್ರಿಸಿ ಉಚಿತವಾಗಿ ನೀಡಲಾಗುತ್ತಿದೆ

6. ಪಿಯುಸಿ ಮತ್ತು ಬಿ.ಎ. ತರಗತಿಗಳಲ್ಲಿ ಓದುತ್ತಿರುವ ಅಂಧ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳನ್ನು ಆಡಿಯೋ ಕ್ಯಾಸೆಟ್‌ಗಳಲ್ಲಿ ಮುದ್ರಿಸಿ ಟೆಪ್ ರೆಕಾರ್ಡರ್ ಸಹಿತ ಪ್ರಾಂಶುಪಾಲರ ಮೂಲಕ ನೀಡಲಾಗುತ್ತಿದೆ.

7. ರಾಜ್ಯ ಸರ್ಕಾರವು ಸಿ ಮತ್ತು ಡಿ ಹುದ್ದೆಗಳಲ್ಲಿ ಅಂಗವಿಕಲರಿಗೆ ಶೇ. 5ರಷ್ಟು ಮೀಸಲಾಗಿ ಕಲ್ಪಿಸಲಾಗಿದೆ.

8. ಸ್ವಯಂ ಉದ್ಯೋಗಕ್ಕಾಗಿ ಆಧಾರ ಯೋಜನೆಯಡಿ ಧನಸಹಾಯ.

9. ದೂರವಾಣಿ ಭೂತುಗಳನ್ನು ಅಂಗವಿಕಲರಿಗೆ ಸ್ವಯಂ ಉದ್ಯೋಗ ಕಲ್ಪಿಸಿ ಕೊಡಲು ನೀಡಲಾಗುತ್ತಿದೆ.

10. ಎನ್.ಹೆಚ್.ಎಫ್.ಡಿ.ಸಿ. ಸಂಸ್ಥೆಯಿಂದ ಸಾಲ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

11. ಬೆಂಗಳೂರಿನಲ್ಲಿ ಅಂಗವಿಕಲ ನೌಕರರ ಮತ್ತು ತರಬೇತಿದಾರರಿಗೆ ಮಹಿಳೆಯರಿಗೆ ಹಾಗೂ ಪುರುಷರಿಗೆ ಪ್ರತ್ಯೇಕವಾಗಿ ವಸತಿ ನಿಲಯವನ್ನು ನಡೆಸಲಾಗುತ್ತಿದೆ.

12. ಅಂಗವಿಕಲರಿಗೆ ಸಾಧನ ಸಲಕರಣೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

13. ಅಂಗವಿಕಲತೆಯನ್ನು ಶಸ್ತ್ರ ಚಿಕಿತ್ಸೆಯಿಂದ ನಿವಾರಿಸಲು ವೈದ್ಯಕೀಯ ಶಸ್ತ್ರ ಚಿಕಿತ್ಸೆಗಾಗಿ ಧನಸಹಾಯ ನೀಡಲಾಗುತ್ತಿದೆ.

14. ಅಂಗವಿಕಲರಿಗೆ ರೂ. 125 ಗಳ ಮಾಸಿಕ ಪೋಷಣಾ ಭತ್ಯೆ ನೀಡಲಾಗುತ್ತದೆ.

15. ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ, ತಾಯಿ ಹಾಗೂ ಪೋಷಕರಿಗೆ ಸಾಮೂಹಿಕ ವಿಮೆ ಯೋಜನೆ ಸೌಲಭ್ಯವಿರುತ್ತದೆ.

16. ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಅಂಗವಿಕಲ ವ್ಯಕ್ತಿಗಳಿಗೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ.

17. ರಾಜ್ಯದಲ್ಲಿರುವ ಎಲ್ಲಾ ಅಂಧರಿಗೆ ಉಚಿತ ಬಸ್‌ಪಾಸ್ ಸೌಲಭ್ಯವನ್ನು ನೀಡಲಾಗಿರುತ್ತದೆ.

18. 50000 ವಿವಿಧ ಅಂಗವಿಕಲರಿಗೂ ರಿಯಾಯಿತಿ ದರದಲ್ಲಿ ಬಸ್‌ಪಾಸ್ ಸೌಲಭ್ಯವನ್ನು ನೀಡಲಾಗಿರುತ್ತದೆ.

19. ಅಂಗವಿಕಲರಿಗೆ ಗುರುತಿನ ಚೀಟಿಯನ್ನು ನೀಡಲಾಗುತ್ತಿದೆ.

20. ರಾಜ್ಯ ಸರ್ಕಾರದಿಂದ ಅಂಗವಿಕಲರ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸುತ್ತಿರುವ ಒಂದು ಸಂಸ್ಥೆ ಮತ್ತು 5 ವ್ಯಕ್ತಿಗಳನ್ನು ಪ್ರತಿ ವರ್ಷವು ಗುರುತಿಸಿ ರಾಜ್ಯ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

21. ಅಂಗವಿಕಲ ಮಕ್ಕಳ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ವಿಶೇಷ ಶಿಕ್ಷಕರಿಗೆ ರಾಜ್ಯ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

22. ನಿರ್ಗತಿಕ ವೃದ್ಧರಿಗೆ ಹಾಗೂ ಅಂಗವಿಕಲರಿಗೆ ಉಚಿತವಾಗಿ ಊಟ, ವಸತಿ ಹಾಗೂ ವೈದ್ಯಕೀಯ ಸೌಲಭ್ಯ ಮತ್ತು ರಕ್ಷಣೆ ಒದಗಿಸುವ ಉದ್ದೇಶದಿಂದ ಸಮಾಜ ಸೇವಾ ಸಂಕೀರ್ಣವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ.

23. ಅಂಗವಿಕಲರಿಗೆ ಲಭ್ಯವಿರುವ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳ ಮಾಹಿತಿಯನ್ನು ಒದಗಿಸಲು ಸಲಹಾ ಮತ್ತು ಮಾಹಿತಿ ಕೇಂದ್ರವನ್ನು ಸ್ಥಾಪಿಸಲಾಗಿದೆ.

24. ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ಸಹಯೋಗದಿಂದ ವಿಶೇಷ ಶಿಕ್ಷಕರ ತರಬೇತಿಗಾಗಿ ಮೈಸೂರಿನಲ್ಲಿ ಕಿವುಡು ಮತ್ತು ಅಂಧರ ಶಿಕ್ಷಕರ ತರಬೇತಿ ಶಾಲೆಗಳನ್ನು ನಡೆಸಲಾಗುತ್ತಿದೆ.

25. ವಿವಿಧ ರೀತಿಯ ಅಂಗವಿಕಲರಿಗೆ ಸಹಾಯ ನೀಡಲು ಬೆಂಗಳೂರಿನ ಸಂಜಯಗಾಂಧಿ ಅಪಘಾತ ಆಸ್ಪತ್ರೆಯಲ್ಲಿ ರಾಜ್ಯ ಸಲಹಾ ಮತ್ತು ಮಾಹಿತಿ ಕೇಂದ್ರವನ್ನು ನಡೆಸಲಾಗುತ್ತಿದೆ. ಇಲ್ಲಿ ತಜ್ಞ ವೈದ್ಯರು ಉಚಿತ ವೈದ್ಯಕೀಯ ಸಲಹೆಯನ್ನು ನೀಡುತ್ತಾರೆ.

646(1266) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ತೆಂಗಿನ ನುಸಿರೋಗಕ್ಕೆ ತುತ್ತಾಗಿರುವ ಮರಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ಒದಗಿಸುವುದು);

ಆ) ಈ ರೋಗವನ್ನು ತಡೆಗಟ್ಟಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ; ಇದಕ್ಕೆ ತಗಲಿರುವ ಮೊತ್ತವೆಷ್ಟು;

ಇ) ತೆಂಗಿನ ಮರಗಳು ರೋಗಕ್ಕೆ ತುತ್ತಾದ ಹಿನ್ನೆಲೆಯಲ್ಲಿ ತೆಂಗು ಬೆಳೆಗಾರರಿಗೆ ಸರ್ಕಾರವು ಯಾವುದಾದರೂ ಪರಿಹಾರವನ್ನು ನೀಡಿದೆಯೇ (ವಿವರ ಒದಗಿಸುವುದು)?

ಶ್ರೀ ಆರ್. ಶ್ರೀನಿವಾಸ (ತೋಟಗಾರಿಕೆ ಸಚಿವರು)

ಅ) 432.68 ಲಕ್ಷ ಮರಗಳು.

ಜಿಲ್ಲಾವಾರು ವಿವರಗಳು ಈ ಕೆಳಗಿನಂತಿವೆ.

ಕ್ರಮ ಸಂಖ್ಯೆ	ಜಿಲ್ಲೆ	ಭಾದಿತ ಮರಗಳ ಸಂಖ್ಯೆ (ಲಕ್ಷ ಸಂಖ್ಯೆಗಳಲ್ಲಿ)
1.	ಬೆಂಗಳೂರು (ನಗರ)	8.60
2.	ಬೆಂಗಳೂರು ಗ್ರಾಮಾಂತರ	42.48
3.	ಚಿತ್ರದುರ್ಗ	28.00
4.	ದಾವಣಗೆರೆ	12.60
5.	ಕೋಲಾರ	18.26
6.	ತುಮಕೂರು	122.20
7.	ಶಿವಮೊಗ್ಗ	5.53
8.	ಮೈಸೂರು	24.02
9.	ಮಂಡ್ಯ	43.67
10.	ಚಾಮರಾಜನಗರ	15.45
11.	ಚಿಕ್ಕಮಗಳೂರು	42.00
12.	ಹಾಸನ	69.86
	ಒಟ್ಟು	**432.68**

ಆ) ಭಾರತ ಸರ್ಕಾರದ ಸ್ಟೀರಿಂಗ್ ಸಮಿತಿ ಮತ್ತು ರಾಜ್ಯಮಟ್ಟದ ತಾಂತ್ರಿಕ ಸಮಿತಿಯ ಶಿಫಾರಸ್ಸಿನಂತೆ ಪರಿಸರ ಪೂರಕವಾದ ಸಮಗ್ರ ನಿರ್ವಹಣಾ ಪದ್ಧತಿಯನ್ನು ಅಳವಡಿಸಲು ವಿವಿಧ ಜಿಲ್ಲೆಗಳಲ್ಲಿ ಬ್ಲಾಕ್ ಪ್ರಾತ್ಯಕ್ಷತೆಗಳು ಮತ್ತು ನುಸಿ ನಿರ್ವಹಣೆ ಬಗ್ಗೆ ರೈತರಲ್ಲಿ ಅರಿವು ಮೂಡಿಸಲು ಜಾಗೃತಿ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈ ಉದ್ದೇಶಕ್ಕಾಗಿ 295.882 ಲಕ್ಷ ರೂ.ಗಳನ್ನು ಬಳಸಲಾಗಿದೆ.

ಇ) ಇಲ್ಲ.

647(1267) ಶ್ರೀ ವಾಟಾಳ್ ನಾಗರಾಜ್ ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಳೆದ ಮೂರು ವರ್ಷಗಳಿಂದ ಬೆಳೆ ಪರಿಹಾರ ಅಂಗವಾಗಿ ರಾಜ್ಯದ ರೈತರಿಗೆ ನೀಡಬೇಕಾಗಿರುವ ಪರಿಹಾರದ ಮೊತ್ತವೆಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಈ ಮೊತ್ತಕ್ಕೆ ಅರ್ಹರಾಗಿರುವ ರೈತರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು);

ಇ) ಈ ಮೊತ್ತವನ್ನು ಪೂರ್ಣವಾಗಿ ಸರ್ಕಾರವು ಪಾವತಿಸಿದೆಯೇ; ಹಾಗಿದ್ದಲ್ಲಿ ಪಾವತಿಸುವುದು ಎಂದಿನಿಂದ;

ಈ) ಸದರಿ ಮೊತ್ತವನ್ನು ಪಾವತಿಸಲು ಸರ್ಕಾರವು ಕ್ರಮ ಕೈಗೊಂಡಿರುವುದೇ; ಹಾಗಿದ್ದಲ್ಲಿ ಪಾವತಿಸುವುದು ಎಂದಿನಿಂದ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಕಳೆದ ಮೂರು ವರ್ಷಗಳಿಂದ ಬೆಳೆ ವಿಮಾ ಯೋಜನೆಯಡಿಯಲ್ಲಿ ರೈತರಿಗೆ ನೀಡಬೇಕಗಿರುವ ಒಟ್ಟು ಬೆಳೆ ವಿಮಾ ನಷ್ಟ ಪರಿಹಾರ ರೂ. 92478.62 ಲಕ್ಷಗಳು. ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ಕಳೆದ ಮೂರು ವರ್ಷಗಳಿಂದ ಬೆಳೆ ವಿಮಾ ಯೋಜನೆಯಡಿಯಲ್ಲಿ ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲಿರುವ ಫಲಾನುಭವಿಗಳ ಸಂಖ್ಯೆ. 2127696ಗಳು. ಜಿಲ್ಲಾವಾರು ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಇ) ಈ ಮೊತ್ತದಲ್ಲಿ 2001-02ನೇ ಸಾಲಿನಿಂದ 2003ರ ಮುಂಗಾರು ಹಂಗಾಮಿನವರಿವಿಗೂ 70344 ಲಕ್ಷಗಳನ್ನು ರೈತರಿಗೆ ಪಾವತಿಸಲಾಗಿದೆ. 2003-04ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿಗೆ ಒಟ್ಟು ಬೆಳೆ ವಿಮಾ ನಷ್ಟ ಪರಿಹಾರವಾದ ರೂ. 22134.68 ಲಕ್ಷಗಳನ್ನು ಪಾವತಿಸಬೇಕಾಗಿದೆ.

ಈ) ದಿನಾಂಕ 3-1-2005ರಂದು ಭಾರತೀಯ ಕೃಷಿ ವಿಮಾ ಕಂಪನಿ ನಿಯಮಿತ ಸಂಸ್ಥೆಯು 2003-04ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆ ನಷ್ಟ ಪರಿಹಾರ ಇತ್ಯರ್ಥಪಡಿಸಲು ರಾಜ್ಯ ಸರ್ಕಾರದ ಪಾಲಿನ ಹಣವನ್ನು ಬಿಡುಗಡೆ ಮಾಡಲು ಕೋರಿದ್ದು, ಈ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಂಡಿದ್ದು, ಶೀಘ್ರದಲ್ಲಿ ರೈತರಿಗೆ ಪಾವತಿಸಲಾಗುವುದು.

648(1268) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಹಳದಿ ಪಡಿತರ ಚೀಟಿ ಹಂಚಿಕೆಯಲ್ಲಿ ತೀವ್ರ ತಾರತಮ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಲಕ್ಷಾಂತರ ಬಡ ಅರ್ಹ ಕುಟುಂಬಗಳಿಗೆ ಹಳದಿ ಪಡಿತರ ಚೀಟಿ ವಿತರಿಸಲು ಸರ್ಕಾರವು ಕೈಗೊಳ್ಳುವ ಕ್ರಮಗಳಾವುವು;

ಇ) ಹಳದಿ ಪಡಿತರ ಚೀಟಿ ಹೊಂದಿದವರಿಗೆ ನ್ಯಾಯ ಬೆಲೆ ಅಂಗಡಿಗಳಲ್ಲಿ ವಿತರಿಸಲಾಗುವ ಆಹಾರ ಸಾಮಗ್ರಿಗಳು ಯಾವುವು;

ಈ) ಹಳದಿ ಪಡಿತರ ಚೀಟಿ ಹೊಂದಿದವರಿಗೆ ಯಾವ ದರದಲ್ಲಿ ಎಷ್ಟು ಪ್ರಮಾಣದ ಆಹಾರ ಧಾನ್ಯಗಳನ್ನು ನಿಗದಿಪಡಿಸಲಾಗಿದೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಹೌದು.

ಆ) ಬಡ ಅರ್ಹ ಕುಟುಂಬಗಳಿಗೆ ಹಳದಿ ಪಡಿತರ ಚೀಟಿ ವಿತರಿಸಲು ದಿನಾಂಕ 1-1-2005 ರಿಂದ ಪುನರ್ ಸಮೀಕ್ಷೆ ಕಾರ್ಯ ಪ್ರಾರಂಭಿಸಲಾಗಿದೆ.

ಇ) ನ್ಯಾಯಬೆಲೆ ಅಂಗಡಿಯಲ್ಲಿ ಹಳದಿ ಪಡಿತರ ಚೀಟಿದಾರರಿಗೆ ಅಕ್ಕಿ, ಗೋಧಿ, ಸೀಮೆಎಣ್ಣೆ, ಸಕ್ಕರೆ, ಅಯೋಡಿನ್ ಯುಕ್ತ ಉಪ್ಪು ವಿತರಿಸಲಾಗುತ್ತಿದೆ.

ಈ) ಈ ಕೆಳಕಂಡ ದರ ಮತ್ತು ಪ್ರಮಾಣದಲ್ಲಿ ಹಳದಿ ಪಡಿತರ ಚೀಟಿದಾರರಿಗೆ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದೆ.

ಆಹಾರ ಧಾನ್ಯ	ಪ್ರಮಾಣ	ದರ (ಪ್ರತಿ ಕೆ.ಜಿ.ಗೆ/ಲೀ) ರೂ.ಗಳಲ್ಲಿ
ಅಕ್ಕಿ	20 ಕೆ.ಜಿ.	3-00
ಗೋಧಿ	5 ಕೆ.ಜಿ.	3-00
ಸಕ್ಕರೆ	3 ಕೆ.ಜಿ.	13-50
ಸೀಮೆಎಣ್ಣೆ		
ಅನೌಪಚಾರಿಕ	8 ಲೀಟರ್	
ಪಡಿತರ ಪ್ರದೇಶ		9-30 ರಿಂದ
ಪಟ್ಟಣ ಪ್ರದೇಶ	6 ಲೀಟರ್	10-00
ಗ್ರಾಮಾಂತರ ಪ್ರದೇಶ	4 ಲೀಟರ್	

649(1254) ಶ್ರೀ ವೆಂಕಟಮುನಿಯಪ್ಪ ಬಿ.ಪಿ. (ಬೇತಮಂಗಲ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯ ಮಹಿಳಾ ಆಯೋಗಕ್ಕೆ ಎಷ್ಟು ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿದೆ;

ಆ) ಈ ವರದಿಗಳಲ್ಲಿನ ಶಿಫಾರಸ್ಸುಗಳು ಯಾವುವು;

ಇ) ಈ ಶಿಫಾರಸ್ಸುಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಆಯೋಗವು ಕಳೆದ 3 ವರ್ಷಗಳಿಂದ ಸ್ವೀಕರಿಸಿರುವ ದೂರುಗಳು ಯಾವುವು?

ಉ) ಈ ದೂರುಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧಿನಿಯಮ 1995ರ ಕಲಂ 14ರ ಮೇರೆಗೆ ಆಯೋಗವು ಸಾರ್ವಜನಿಕ ಮಹತ್ವವುಳ್ಳ ವಿಷಯದ ಬಗ್ಗೆ ಕಾಲ ಕಾಲಕ್ಕೆ ಸರ್ಕಾರಕ್ಕೆ ವಿಶೇಷ ವರದಿಗಳನ್ನು ಸಲ್ಲಿಸಬಹುದಾಗಿದ್ದು, ಅದರಂತೆ ಈ ಕೆಳಕಂಡ ಮೂರು ವಿಶೇಷ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿದೆ.

1. ಪುನರ್ವಸತಿ ದೇವದಾಸಿಯರ ಸಮಾವೇಶದ ಒಂದು ವರದಿ. (1997–98)
2. ಗೋವಾದಲ್ಲಿ ಬೈನಾಬೀಚ್‌ನ ಕರ್ನಾಟಕದ ಲೈಂಗಿಕ ಕಾರ್ಮಿಕರನ್ನು ಹೊರ ಹಾಕಿರುವ ಬಗ್ಗೆ ಅಧ್ಯಯನ–ಬೈನಾ ಬೀಜ್ ಅಧ್ಯಯನದ ವರದಿ (1997–98)
3. ಅಸಂಘಟಿತ ವಲಯದ ಮಹಿಳಾ ಕಾರ್ಮಿಕರನ್ನು ಕುರಿತು ರಾಜ್ಯಮಟ್ಟದ ವಿಚಾರ ಸಂಕೀರ್ಣದ ವರದಿ (1997–98).

ಆ) 1) ದೇವದಾಸಿಯರ ಪುನರ್ವಸತಿಗೆ ಸಂಬಂಧಿಸಿದ ಶಿಫಾರಸ್ಸುಗಳನ್ನು ಅನುಬಂಧ 1ರಲ್ಲಿ ನೀಡಲಾಗಿದೆ.

2) ಗೋವಾದಲ್ಲಿ ರೆಡ್ ಲೈಟ್ ಏರಿಯಾ ನಿವಾಸಿಗಳನ್ನು ಹೊರಹಾಕಿರುವ ಬಗ್ಗೆ ಗೋವಾದ ಬೈನಾಬೀಚ್‌ನ ಅಧ್ಯಯನದ ವರದಿಯ ಶಿಫಾರಸ್ಸುಗಳನ್ನು ಅನುಬಂಧ 2ರಲ್ಲಿ ನೀಡಲಾಗಿದೆ.

3) ಅಸಂಘಟಿತ ವಲಯದ ಮಹಿಳಾ ಕಾರ್ಮಿಕರನ್ನು ಕುರಿತು ರಾಜ್ಯಮಟ್ಟದ ಸಂಕೀರ್ಣದ ಶಿಫಾರಸ್ಸುಗಳನ್ನು ಅನುಬಂಧ 3ರಲ್ಲಿ ನೀಡಲಾಗಿದೆ.

ಇ) 1) ಕರ್ನಾಟಕ ರಾಜ್ಯ ಮಹಿಳಾ ಆಯೋಗದ ವತಿಯಿಂದ ಪುನರ್ ವಸತಿ ದೇವದಾಸಿಯರ ಸಮಾವೇಶಕ್ಕೆ ಸಂಬಂಧಿಸಿದಂತೆ ಶಿಫಾರಸ್ಸುಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ.

2) ಗೋವಾದಲ್ಲಿ ಬೈನಾಬೀಚ್‌ನಲ್ಲಿ ಕರ್ನಾಟಕದ ಲೈಂಗಿಕ ಕಾರ್ಮಿಕರನ್ನು ಹೊರಹಾಕಿರುವ ಕುರಿತು ಅಧ್ಯಯನ : ಇದಕ್ಕೆ ಸಂಬಂಧಿಸಿದಂತೆ ಕೆಲವೊಂದು ನಿರ್ದಿಷ್ಟ ಶಿಫಾರಸ್ಸುಗಳನ್ನು 5–12–98ರಂದು ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರದಿಂದ ಗೋವಾ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ. ಇದಾದ ನಂತರ ಮುಂಬೈ ಉಚ್ಚ ನ್ಯಾಯಾಲಯದ ಪಣಜಿ ಬೆಂಚಿನ–2003ರ ಆದೇಶದಲ್ಲಿ ತಿಳಿಸಿರುವಂತೆ ಗೋವಾದ ಬೈನಾ ಬೀಚ್‌ನಲ್ಲಿ ನೆಲೆಸಿರುವ ಕರ್ನಾಟಕದ ಲೈಂಗಿಕ ಕಾರ್ಮಿಕರನ್ನು ಕರ್ನಾಟಕದಲ್ಲಿ ಪುನರ್ವಸತಿಗೊಳಿಸಬೇಕಾಗಿರುವುದು ಕರ್ನಾಟಕ ಸರ್ಕಾರದ ಜವಾಬ್ದಾರಿಯಾಗಿದುತ್ತದೆ. ಕರ್ನಾಟಕ ರಾಜ್ಯ ಮಹಿಳಾ [illegible] ನವರಿ

2004ರಲ್ಲಿ ಗೋವಾದ ಬೈನಾ ಬೀಚ್‌ಗೆ ಭೇಟಿ ನೀಡಿ ಲೈಂಗಿಕ ಕಾರ್ಮಿಕರ ಸಮಸ್ಯೆ ಬಗ್ಗೆ ವಿಚಾರಣೆ ನಡೆಸಿದೆ. ಮಾನ್ಯ ಶ್ರೀ ಹೆಚ್.ಕೆ. ಪಾಟೀಲ್‌ರವರ ನೇತೃತ್ವದಲ್ಲಿ ರಚಿಸಿರುವ ಉನ್ನತ ಸಮಿತಿಯ ಸದಸ್ಯರಾಗಿರುವ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು ಇತರೇ ಸದಸ್ಯರುಗಳೊಂದಿಗೆ ಜೂನ್ 2004ರಲ್ಲಿ ಗೋವಾಕ್ಕೆ ಭೇಟಿ ನೀಡಿ ಅಲ್ಲಿನ ಕರ್ನಾಟಕದ ಲೈಂಗಿಕ ಕಾರ್ಮಿಕರೊಂದಿಗೆ ಅವರ ಸಮಸ್ಯೆಗಳ ಕುರಿತು ಸಮಾಲೋಚನೆ ನಡೆಸಿರುತ್ತಾರೆ. ಕರ್ನಾಟಕಕ್ಕೆ ಮರಳಿ ಬರಲು ಇಚ್ಛಿಸಿರುವ ಲೈಂಗಿಕ ಕಾರ್ಮಿಕರ ಪುನರ್ವಸತಿ ಬಗ್ಗೆ ಸರ್ಕಾರದಿಂದ ಕ್ರಮ ವಹಿಸಲಾಗುತ್ತಿದೆ.

3) ಅಸಂಘಟಿತ ವಲಯದ ಮಹಿಳಾ ಕಾರ್ಮಿಕರನ್ನು ಕುರಿತು ರಾಜ್ಯಮಟ್ಟದ ವಿಚಾರ ಸಂಕೀರ್ಣದ ಶಿಫಾರಸ್ಸುಗಳನ್ನು ದಿನಾಂಕ 4–7–2000ರಂದು ಕಾರ್ಮಿಕ ಇಲಾಖೆಗೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಕಳುಹಿಸಿಕೊಡಲಾಗಿದೆ. ಕಾರ್ಮಿಕರ ಇಲಾಖೆಯು ಸದರಿ ಶಿಫಾರಸ್ಸುಗಳ ಮೇಲೆ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದು ಈ ದಿಸೆಯಲ್ಲಿ ಕರ್ನಾಟಕ ಅಸಂಘಟಿತ ವರ್ಕರ್ಸ್ (ರೆಗ್ಯುಲೇಷನ್ ಆಫ್ ವರ್ಕ್ಸ್) ಬಿಲ್ 2001ರ ಕರಡನ್ನು ತಯಾರಿಸಿ ಸರ್ಕಾರದ ಅನುಮೋದನೆಗಾಗಿ ಕಳುಹಿಸಿಕೊಟ್ಟಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಈ) ಕರ್ನಾಟಕ ರಾಜ್ಯ ಮಹಿಳಾ ಆಯೋಗದಲ್ಲಿ 2002–03ರಲ್ಲಿ 335 ಅರ್ಜಿಗಳು 2003–04 ಸಾಲಿನಲ್ಲಿ 401 ಅರ್ಜಿಗಳು ಮತ್ತು 2004–05ನೇ ಸಾಲಿನಲ್ಲಿ 413 ಅರ್ಜಿಗಳು (ನವೆಂಬರ್ ಅಂತ್ಯದವರೆಗೆ) ಒಟ್ಟು 1148 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಸದರಿ ದೂರರ್ಜಿಗಳು ಮಹಿಳೆಯರ ಮೇಲಿನ ದೌರ್ಜನ್ಯ, ವರದಕ್ಷಿಣೆ ಕಿರುಕುಳ, ವರದಕ್ಷಿಣೆ ಸಾವು, ಅತ್ಯಾಚಾರ, ಎರಡನೇ ಮದುವೆ, ಆಸ್ತಿ ವಿವಾದ, ವಿವಾಹ ವಿಚ್ಛೇದನ, ಹಣ ವಂಚನೆ, ಕಛೇರಿಯಲ್ಲಿ ಲೈಂಗಿಕ ಕಿರುಕುಳ ಸಾವಿನ ತನಿಖೆ, ಜೀವನಾಂಶ, ಕಾನೂನು ನೆರವು, ಕೆಲಸ ಕೊಡಿಸುವ ಬಗ್ಗೆ, ಅಪಹರಣ ಹಾಗೂ ಇತರೆ ವಿಷಯಗಳ ಬಗ್ಗೆ ಸಂಬಂಧಿಸಿದ್ದಾಗಿರುತ್ತದೆ. ಅರ್ಜಿಯ ವಿವರಗಳು (ಅನುಬಂಧ–4)ರಲ್ಲಿ ಲಗತ್ತಿಸಲಾಗಿದೆ.

ಉ) ಆಯಾಯ ಜಿಲ್ಲೆ 3 ಅರ್ಜಿಗಳಿಗೆ ಸಂಬಂಧಿಸಿದಂತೆ ಆಯೋಗದಿಂದ ಪೊಲೀಸ್ ಇಲಾಖೆ, ಜಿಲ್ಲಾಧಿಕಾರಿಗಳ ಕಛೇರಿ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಕಛೇರಿ, ಕಾನೂನು ಸೇವೆಗಳ ಪ್ರಾಧಿಕಾರ , ನಿರ್ದೇಶಕರು ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಸರ್ಕಾರದ ಇತರೆ ಇಲಾಖೆಗಳ ಜೊತೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ. ಅದರಂತೆ 2002–03ರ ಸಾಲಿನಲ್ಲಿ 257 ಅರ್ಜಿಗಳು, 2003–04ರ ಸಾಲಿನಲ್ಲಿ 256 ಅರ್ಜಿಗಳು ಹಾಗೂ ಪ್ರಸಕ್ತ ಸಾಲಿನಲ್ಲಿ 126 ಅರ್ಜಿಗಳನ್ನು ಈ ಮೇಲ್ಕಂಡ ಇಲಾಖೆಗಳಲ್ಲಿ ಕೈಗೊಂಡ ಕ್ರಮದ ಮೇರೆಗೆ ಅರ್ಜಿದಾರರಿಗೆ ಹಿಂಬರಹ ನೀಡಿ ಮುಕ್ತಾಯಗೊಳಿಸಲಾಗಿದೆ. (ಅನುಬಂಧ–5) ಇತ್ಯರ್ಥಕ್ಕೆ ಬಾಕಿ ಉಳಿದಿರುವ ಅರ್ಜಿಗಳ ಬಗ್ಗೆ ಸಂಬಂಧಪಟ್ಟ

ಇಲಾಖೆಗಳೊಂದಿಗೆ ಪತ್ರ ವ್ಯವಹಾರ ನಡೆಸಲಾಗುತ್ತಿದೆ. (ವಿವರ ಅನುಬಂಧ–6ರಲ್ಲಿ ಲಗತ್ತಿಸಿದೆ).

ಅನುಬಂಧ–1

ಪುನರ್ವಸತಿ ದೇವದಾಸಿಯರ ಸಮಾವೇಶದ ವರದಿ, 1997–98ರ ಶಿಫಾರಸ್ಸುಗಳು:

1. ರಾಜ್ಯಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ದೇವದಾಸಿಯರ ಪುನರ್ವಸತಿ ಕಾರ್ಯದಲ್ಲಿ ತೊಡಗಿಕೊಂಡ ಸಂಸ್ಥೆಗಳ "ಸಮನ್ವಯ ಸಮಿತಿ" ರಚನೆಗೊಳ್ಳಬೇಕು.
2. ಯಲ್ಲಮ್ಮ ದೇವಿ ದೇವಸ್ಥಾನದ ವಿಶಿಷ್ಟ ಮಂಡಳಿಗಳಲ್ಲಿ ಈ ಕೆಳಕಂಡಂವರಿಗೆ ಕಡ್ಡಾಯವಾಗಿ ಸದಸ್ಯತ್ವ ನೀಡಬೇಕು.
   ಅ) ಪುನರ್ವಸತಿ ಯೋಜನೆಯಲ್ಲಿ ತೊಡಗಿಕೊಂಡ ಸರ್ಕಾರಿ : ಸ್ವಯಂ ಸೇವಾ ಸಂಸ್ಥೆಗಳು
   ಆ) ಪುನರ್ವಸತಿಗೊಂಡ ದೇವದಾಸಿ ಮಹಿಳೆಯರ ಪ್ರತಿನಿಧಿಗಳಿಗೆ
3. ಯಲ್ಲಮ್ಮದೇವಿ ದೇವಸ್ಥಾನದ ವಿಶಿಷ್ಟ ಮಂಡಳಿಗಳು ದೇವದಾಸಿ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ತಮ್ಮ ಆದಾಯದಿಂದಲೂ ಕೂಡಾ ಹಣ ಖರ್ಚು ಮಾಡಬೇಕು.
4. ಎಲ್ಲೆಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಶೇ. 40ರಷ್ಟು ಸಾಲದ ಭಾಗವನ್ನು ಭರಿಸಲು ಮುಂದಾಗುವಲ್ಲಿ ಅಂತಹ ಸಂಸ್ಥೆಗಳಿಗೆ ಸಹಾಯ ಧನವನ್ನು ನೀಡಬೇಕು.
5. ಪುನರ್ವಸತಿಗೊಂಡ ವಸತಿರಹಿತ ದೇವದಾಸಿ ಮಹಿಳೆಯರಿಗೆ ವಸತಿ ಕಲ್ಪಿಸಲು ವಿಶೇಷ ಬಂಡವಾಳ ನೀಡಬೇಕು ಹಾಗೂ ಸರ್ಕಾರದ ವಸತಿ ಯೋಜನೆಗಳಲ್ಲಿ ಮನೆಗಳನ್ನು ಈ ಮಹಿಳೆಯರಿಗಾಗಿ ಕಾದಿರಿಸಬೇಕು.
6. ದೇವದಾಸಿ ಮಹಿಳೆಯರ ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸದಲ್ಲಿ ಹಾಗೂ ಉಚಿತ ವಸತಿ ನಿಲಯಗಳಲ್ಲಿ ಪ್ರವೇಶ ದೊರಕಿಸುವಲ್ಲಿ ಮೀಸಲಾತಿ ನೀಡಬೇಕು.
7. ಪ್ರಸ್ತುತ ಕೆಲವು ಕಲಾವಿದ ದೇವದಾಸಿ ಮಹಿಳೆಯರು ದೇವದಾಸಿ ಪರಂಪರೆಯ "ಚೌಡಿಕೆ ಪದ" ಕಲೆಯನ್ನು ಬಿಟ್ಟಿರುತ್ತಾರೆ. ಕಾರಣ ಈ ಕಲೆಯು ಪರೋಕ್ಷವಾಗಿ ದೇವದಾಸಿ ಪದ್ಧತಿಯನ್ನು ಎತ್ತಿ ಹಿಡಿಯುತ್ತದೆ. ಆದ್ದರಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಕಲಾವಿದರನ್ನು ಗುರುತಿಸಿ, "ಚೌಡಿಕೆ ಪದ" ಸಾಮಾಜಿಕ ಬದಲಾವಣೆ ಮಾಡಿಸುವತ್ತ ಚಾಲನೆಗೊಳಿಸಲು ಸಹಾಯ ಮಾಡುವುದು ಮತ್ತು ಕಲಾವಿದರಿಗೆ ಗೌರವಧನ ನೀಡಬೇಕು.

8. ಕೆಲವು ಜಿಲ್ಲೆಗಳಲ್ಲಿ ಪುನರ್ವಸತಿ ಮಾಡುವುದಕ್ಕಾಗಿ ಈಗಾಗಲೇ ನೀಡಿರುವ ವ್ಯವಸಾಯ ಭೂಮಿಯು, ವ್ಯವಸಾಯ ಮಾಡಲು ಉತ್ತಮ ಮಟ್ಟದ್ದಾಗಿರುವುದಿಲ್ಲ. ಆದ್ದರಿಂದ ಇನ್ನು ಮುಂದೆ ಭೂರಹಿತ ದೇವದಾಸಿ ಮಹಿಳೆಯರೆಲ್ಲರಿಗೂ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು ನೀಡುವುದು.
9. ಎಲ್ಲಾ ವೃಂದ ದೇವದಾಸಿ ಮಹಿಳೆಯರಿಗೆ "ವೃದ್ಧಾಪ್ಯ ವೇತನ" ವನ್ನು ನೀಡಬೇಕು ಹೀಗೆ ನೀಡುವಾಗ ಆ ಯೋಜನೆಯಲ್ಲಿರುವ "ಗಂಡು ಮಕ್ಕಳು ಇರಬಾರದು'' ಎಂಬ ನಿಯಮವನ್ನು ಗಣನೆಗೆ ತೆಗೆದುಕೊಳ್ಳಬಾರದು.
10. ಮಹಿಳಾ ಮೀಸಲಾತಿ ಇರುವೆಡೆಗಳಲ್ಲಿ ಪುನರ್ವಸತಿಗೊಂಡ ದೇವದಾಸಿ ಮಹಿಳೆಯರಿಗೆ ಆದ್ಯತೆ ಮೇರೆಗೆ ಸ್ಥಳ ಕಾದಿರಿಸುವುದು.
11. ರಾಜ್ಯ ಮತ್ತು ರಾಷ್ಟ್ರೀಯ ಮಹಿಳಾ ಆಯೋಗಗಳಿಗೆ ದೇವದಾಸಿ ಮಹಿಳೆಯರ ವಿರುದ್ಧ ನಡೆಯುವ ಅನ್ಯಾಯಗಳನ್ನು ಪ್ರತಿಭಟಿಸಲು ಮತ್ತು ಅದರ ವಿರುದ್ಧ ಕ್ರಮ ಜರುಗಿಸಲು ಆದೇಶ ನೀಡುವ ಅಧಿಕಾರ ನೀಡಬೇಕು.
12. ದೇವದಾಸಿ ಮಹಿಳೆಯರಿಗೆ ಸಾಲ ಮೇಳಗಳಲ್ಲಿ ನೀಡಲಾದ ಹಳೆ ಸಾಲವನ್ನು ಮನ್ನಾ ಮಾಡಬೇಕು.
13. ಉಚಿತ ಆರೋಗ್ಯ ತಪಾಸಣೆ ಹಾಗೂ ಔಷಧಿಗಳನ್ನು ಒದಗಿಸಲು ಪುನರ್ವಸತಿ ದೇವದಾಸಿಯರಿಗೆ ಗುರುತಿನ ಚೀಟಿ ಕೊಡುವುದು.
14. ಶಿಕ್ಷಿತ ಪುನರ್ವಸತಿ ದೇವದಾಸಿಯರು ಹಾಗೂ ಅವರ ಮಕ್ಕಳಿಗೆ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ ಉದ್ಯೋಗ ಒದಗಿಸುವಲ್ಲಿ ಮೀಸಲಾತಿ ನೀಡುವುದು.

ಅನುಂಧ – 2

ಬೈನಾ ಬೀಚ್ ವರದಿಯ ಶಿಫಾರಸ್ಸುಗಳು: (1997–98)

ಬೈನಾ ಬೀಚಿನಲ್ಲಿ ಹೊರದೂಡುವ ಕೃತ್ಯಕ್ಕೆ ಸಂಬಂಧಪಟ್ಟಂತೆ ನಾವು ಕೆಲವೊಂದು ನಿರ್ದಿಷ್ಟ ಶಿಫಾರಸ್ಸುಗಳನ್ನು ಮಂಡಿಸಬಯಸುತ್ತೇವೆ.

1. ವೇಶ್ಯಯರನ್ನು ಹೆದರಿಸುತ್ತಿರುವುದನ್ನು, ಬಂಧಿಸುತ್ತಿರುವುದನ್ನು ಮತ್ತು ಸ್ಥಳೀಯ ನಿವಾಸಿಗಳ ಜೀವನ ಮಾರ್ಗಗಳನ್ನು ತಡೆಗಟ್ಟಲು ರಾಜ್ಯ ಸರ್ಕಾರವು ಪೋಲೀಸ್ ಗಸ್ತು ಬಳಸುತ್ತಿರುವುದನ್ನು ಕೂಡಲೇ ನಿಲ್ಲಿಸಬೇಕು ಹಾಗೂ ಪೋಲೀಸ್ ದಳವನ್ನು ಅಲ್ಲಿಂದ ಹಿಂತೆಗೆದುಕೊಳ್ಳಬೇಕು.
2. ಮರ್ಮಗೋವಾ ಪೋರ್ಟ್ ಟ್ರಸ್ಟ್ ವಿಸ್ತರಣೆ ಯೋಜನೆಯನ್ನು ಕೈಗೆತ್ತಿಕೊಂಡಿರುವುದರಿಂದ ಬಂದರು ವಿಸ್ತರಣೆಯಿಂದಾಗಿ ಮನೆ

ಕಳೆದುಕೊಳ್ಳುವ ಜನರಿಗೆ ಪುನರ್ವಸತಿ ಕಲ್ಪಿಸುವ ಜವಾಬ್ದಾರಿ ತೆಗೆದುಕೊಳ್ಳಬೇಕು.

3. ಭೂಮಿ ಬಳಕೆ ಬಗ್ಗೆ ಸರ್ಕಾರ ಪಾರದರ್ಶಕವಾಗಿರಬೇಕು. ಭೂಮಿ ಬಗ್ಗೆ ಸರ್ಕಾರದ ಯೋಜನೆ, ನಗರ ಬಡವರಿಗೆ ವಸತಿ ವ್ಯವಸ್ಥೆ ಮತ್ತು ಕೊಳಗೇರಿ ನಿವಾಸಿಗಳಿಗೆ ರಕ್ಷಣೆ ಕೊಡುವ ಕಾನೂನು ಕುರಿತಂತೆ ಸವಿವರ ಇರುವ ನೀತಿ ನಿರೂಪಣೆ ಸರ್ಕಾರದ ಬಳಿ ಇರಬೇಕು.

4. ನೋಟೀಸು ಕೊಡದೆಯೇ ಅವರ ಮನೆಗಳನ್ನು ಹಾಗೂ ಇತರ ಕಟ್ಟಡಗಳನ್ನು ಕೆಡವಿ ಹಾಕುವುದು ಭಾರತ ಸಂವಿಧಾನದ 14ನೇ ಮತ್ತು 21ನೇ ಅನುಚ್ಛೇದದ ಉಲ್ಲಂಘನೆಯಾಗುವುದರಿಂದ, ಅಂತಹ ಅಧಿಕಾರವನ್ನು ಸರ್ಕಾರಕ್ಕೆ ಕೊಟ್ಟಿರುವ ಗೋವಾ ಭೂ ಕಾಯ್ದೆ 1995ನ್ನು ಕೂಡಲೇ ರದ್ದು ಮಾಡಬೇಕು.

ಅನುಬಂಧ-3

ಅಸಂಘಟಿತ ವಲಯದ ಮಹಿಳಾ ಕಾರ್ಮಿಕರನ್ನು ಕುರಿತು 2 ದಿನಗಳ ರಾಜ್ಯ ಮಟ್ಟದ ವಿಚಾರ ಸಂಕೀರ್ಣದ ಪ್ರಮುಖ ಶಿಫಾರಸ್ಸುಗಳು (1997-98)

1. ತ್ರಿ ಸದಸ್ಯ ಮಂಡಳಿಯ ರಚನೆ:

ಉದ್ಯೋಗದ ನಿಯಂತ್ರಣ, ಕಾರ್ಮಿಕ ನೋಂದಾಣಿ, ವೇತನದ ಪರಿಸ್ಕರಣೆ, ಕಾರ್ಮಿಕರ ಸ್ಥಿತಿಗಳ ಸುಧಾರಣೆ ಮುಂತಾದವುಗಳಿಗಾಗಿ ಸರ್ಕಾರ, ಕಾರ್ಮಿಕರು ಮತ್ತು ಮಾಲೀಕರ ಪ್ರತಿನಿಧಿಗಳನ್ನು ಒಳಗೊಂಡ ತ್ರಿ ಸದಸ್ಯ ಮಂಡಳಿಯನ್ನು ಎಲ್ಲಾ ಜಿಲ್ಲೆಗಳಲ್ಲಿ ರಚಿಸುವುದು. ಕಟ್ಟಡ ನಿರ್ಮಾಣ ವಲಯ, ಬಿಡಿ, ಅಗರಬತ್ತಿ ಹೀಗೆ ಮಂಡಳಿಗಳನ್ನು ವಲಯಾಧಾರಿತವಾಗಿ ರಚಿಸಬೇಕು. ಮತ್ತು ಮಂಡಳಿಯು ಎಲ್ಲಾ ಕಾರ್ಮಿಕರನ್ನು ನೋಂದಾಯಿಸಿಕೊಂಡು ಅವರೆಲ್ಲರಿಗೆ ಗುರುತಿನ ಚೀಟಿಯನ್ನು ನೀಡುವಂತೆ ಆಗಬೇಕು. ಕಾರ್ಮಿಕ ಪ್ರತಿನಿಧಿಗಳಿಗೆ ಈ ಮಂಡಳಿಯಲ್ಲಿ ಕನಿಷ್ಟ ಶೇ. 50ರಷ್ಟು ಪ್ರತಿನಿಧಿತ್ವವನ್ನು ನೀಡಬೇಕು. ಪ್ರತಿನಿಧಿಗಳ ನೇಮಕ ಕಾರ್ಮಿಕರಿಂದಲೇ ಆಗಬೇಕು. ಈ ಮಂಡಳಿಯ ನಿರ್ವಹಣೆಗಾಗಿ ಮಾಲೀಕರ, ಸರ್ಕಾರದ, ಕಾರ್ಮಿಕರ ಕೊಡುಗೆಗಳನ್ನು ಸಂಗ್ರಹಿಸಬೇಕು.

2. ದ್ವಿಸದಸ್ಯ ಮಂಡಳಿ ರಚನೆ:

ಪ್ರತಿ ಜಿಲ್ಲೆಯಲ್ಲೂ ದ್ವಿ ಸದಸ್ಯ ಮಂಡಳಿ ರಚಿಸುವ ಮೂಲಕ ಸ್ವಂತ ಉದ್ಯೋಗಿಗಳು ಅದರಲ್ಲೂ ಮಹಿಳೆಯರಿಗೆ ಸಾಲದ ವ್ಯವಸ್ಥೆ ಸಾಮಾಜಿಕ ಸುರಕ್ಷತೆ ಮತ್ತು ಇತರೆ ಸೇವೆಗಳು ಲಭಿಸುವಂತೆ ಮಾಡುವುದು.

3. ಸಣ್ಣ ಮಾರಾಟಗಾರರ ಸಂರಕ್ಷಣೆ:

ಬೀದಿ ಬದಿಯ ಮಾರಾಟಗಾರರು, ಸಣ್ಣ ವ್ಯಾಪಾರಸ್ಥರು, ಮಹಿಳಾ ವ್ಯಾಪಾರಸ್ತರ ಮೇಲಿನ ಪೊಲೀಸರ ಕಿರುಕುಳ ಮತ್ತು ದೌರ್ಜನ್ಯದ ನಿಯಂತ್ರಣಕ್ಕೆ

ಮತ್ತು ಅವರೆಲ್ಲರ ವ್ಯಾಪಾರ ಚಟುವಟಿಕೆಗಳ ನಿಯಂತ್ರಣಕ್ಕೆ ಅನುಕೂಲವಾಗಲು ಇವರಿಗೆ ಪುರಸಭೆಯಂತಹ ಆಡಳಿತ ಅಂಗಗಳು ಪರವಾನಗಿಯನ್ನು ನೀಡಬೇಕು. ಎಲ್ಲಾ ಪ್ರದೇಶಗಳಲ್ಲಿ, ನಗರ-ಪಟ್ಟಣಗಳಲ್ಲಿ ಈ ಚಟುವಟಿಕೆಗಳಿಗಾಗಿ ನಿರ್ದಿಷ್ಟ ಪ್ರದೇಶಗಳನ್ನು ಮೀಸಲಿಡಬೇಕು. ಈ ಸ್ಥಳಗಳಲ್ಲಿ ಅಗತ್ಯ ಸೇವೆಗಳಾದ ಶೌಚಾಲಯ, ಶಿಶು ಪಾಲನಾ ಕೇಂದ್ರ ಮುಂತಾದವುಗಳನ್ನು ಪೂರೈಸಬೇಕು.

4. ಕಟ್ಟಡ ನಿರ್ಮಾಣ:

1. ಕೇಂದ್ರ ಸರ್ಕಾರ ಈಗಾಗಲೇ ಅನುಮೋದಿಸಿರುವ "ನಿರ್ಮಾಣ ಮತ್ತು ಇತರೆ ಕಟ್ಟಡ ಕಾರ್ಮಿಕ ಉದ್ಯೋಗ ಸೇವಾ ಸ್ಥಿತಿಗತಿಗಳ ನಿಯಂತ್ರಣ ಕಾಯ್ದೆ 1996"ನ್ನು ಪರಿಷ್ಕರಿಸಿ, ರಾಜ್ಯದಲ್ಲಿ ಅನುಷ್ಠಾನಕ್ಕೆ ತರುವುದು.

2. ಕೆಲಸದ ಸ್ಥಳದ ಸುಧಾರಣೆ, ಮುಂಜಾಗರೂಕತೆಗಳ ಪೂರೈಕೆಯ ಮೂಲಕ ಅವಘಡಗಳನ್ನು ನಿಯಂತ್ರಿಸುವುದು.

5. ಕೃಷಿ ಕಾರ್ಮಿಕರು:

1. ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ಭೂ ವಿತರಣೆಯನ್ನು ಮಾಡುವುದು.
2. ಭೂ ದಾಖಲೆಗಳು ಮತ್ತು ಸ್ಥಿರ-ಚರ ಆಸ್ತಿಗಳು ಸಂಯುಕ್ತವಾಗಿ ನೋಂದಾಯಿತವಾಗಬೇಕು.
3. ಕೃಷಿ ವಿಸ್ತರಣಾ ಕಾರ್ಯಕ್ರಮಗಳು, ತಂತ್ರಜ್ಞಾನ ವಿಕಾಸ ಕಾರ್ಯಕ್ರಮಗಳಲ್ಲಿ ಮಹಿಳಾ ಕಾರ್ಮಿಕರನ್ನು ಅಳವಡಿಸಬೇಕು.
4. ಗುಡಿ ಕೈಗಾರಿಕೆಗಳಲ್ಲಿನ ಮಹಿಳಾ ಕಾರ್ಮಿಕ ಹಿತಾಸಕ್ತಿಯನ್ನು ಸರ್ಕಾರವು ಕಾಪಾಡಬೇಕು.

6. ಆರೋಗ್ಯ ಸುಧಾರಣೆಗಳು:

1. ಬೀಡಿ, ಅಗರ ಬತ್ತಿ ಉದ್ದಿಮೆಗಳು ಇತರೇ ಎಲ್ಲಾ ವಲಯಗಳಲ್ಲಿನ ವೃತ್ತಿ ಪರ ಅವಘಡಗಳನ್ನು ತಡೆಯುವುದು ಮತ್ತು ಅದರ ವಿರುದ್ಧ ಕಾರ್ಮಿಕರನ್ನು ಸಂರಕ್ಷಿಸುವುದು ಮಾಲೀಕರ ಪ್ರಮುಖ ಕರ್ತವ್ಯವಾಗಬೇಕು.
2. ಈ ವಲಯಗಳಲ್ಲಿನ ಲೋಪಗಳನ್ನು ಪತ್ತೆ ಹಚ್ಚಲು ಸ್ವಯಂ ಸೇವಾ ಸಂಸ್ಥೆಗಳು ಕಾರ್ಮಿಕ ಮುಖಂಡರುಗಳನ್ನು ಒಳಗೊಂಡ ಕಾವಲು ಸಮಿತಿಯನ್ನು ರಚಿಸುವುದು.

7. ಅಗತ್ಯಾಧಾರಿತ ಕನಿಷ್ಟ ವೇತನ:

1948ರ ಕನಿಷ್ಟ ವೇತನ ಕಾಯ್ದೆಯ ಪ್ರಕಾರ ಕನಿಷ್ಟ ವೇತನವನ್ನು ನಿಗದಿಪಡಿಸುವಾಗ ಭಾರತದ 15ನೇ ಕಾರ್ಮಿಕ ಅಧಿವೇಶನದ ಪ್ರಮುಖ ನಿರ್ಧಾರಗಳನ್ನು ಸರ್ವೋಚ್ಚ ನ್ಯಾಯಾಲಯ ರೆಪ್ಟಾ ಕೋರ್ಸ್ ಬ್ರೆಟ್ ಕಂಪನಿಯ

ವಿಚಾರದಲ್ಲಿ ಪರಿಷ್ಕರಿಸಿ ಮಂಡಿಸಿದ ಈ ಕೆಳಕಂಡ ಅಂಶಗಳನ್ನು ಕನಿಷ್ಟ ವೇತನವನ್ನು ನಿಗದಿಪಡಿಸುವ ನಿರ್ಧಾರಿತ ಅಂಶಗಳನ್ನಾಗಿ ಪರಿಗಣಿಸಬೇಕು. ಮತ್ತು 1997ರ ಬೆಲೆ ಸೂಚ್ಯಾಂಕದ ಪ್ರಕಾರ ದಿನವೊಂದಕ್ಕೆ ಕನಿಷ್ಟ ವೇತನ 125 ರೂ.ಗಳು ನಿಗದಿಯಾಗಬೇಕು.

ನಿರ್ಧಾರಿತ ಅಂಶಗಳು:

1. ಒಬ್ಬ ದುಡಿಯುವವನಿಗೆ ಮೂವರು ಅವಲಂಭಿತರು (1+2 ಘಟಕಗಳು)
2. ಭಾರತದ ಸಾಮಾನ್ಯ ವ್ಯಕ್ತಿಗೆ ಸರಾಸರಿ 2.700 ಕ್ಯಾಲರಿ ಆಹಾರ
3. ಪ್ರತಿ ಕುಟುಂಬಕ್ಕೆ ವಾರ್ಷಿಕ ಸರಾಸರಿ 72 ಗಜ ಬಟ್ಟೆ
4. ಸರ್ಕಾರಿ ಕೈಗಾರಿಕಾ ನೀತಿಯನ್ವಯ ಬಾಡಿಗೆ ಧರ.
5. ಇಂಧನ, ಕಟ್ಟಿಗೆ ಇತ್ಯಾದಿಗಳಿಗೆ ಮೂಲ ವೇತನದಲ್ಲಿ ಶೇ. 25ರಷ್ಟು ಮೀಸಲು (ಈ ಅಂಶಗಳು ಭಾರತ 15ನೇ ಕಾರ್ಮಿಕ ಅಧಿವೇಶನದ ಶಿಫಾರಸ್ಸುಗಳು)
6. ಮಕ್ಕಳ ವಿದ್ಯಾಭ್ಯಾಸ, ವೈದ್ಯಕೀಯ ಸವಲತ್ತು, ಕನಿಷ್ಟ ಮನರಂಜನೆಗಳಾದ ಹಬ್ಬ-ಆಚರಣೆ ಮತ್ತು ನಿವೃತ್ತಿ ಜೀವನಕ್ಕಾಗಿ ಶೆ. 20ರಷ್ಟು ಮೂಲ ವೇತನ ಪ್ರಮಾಣ (ಈ ಅಂಶ ರೆಪ್ಟಾ ಕೋರ್ಸ ಬ್ರಟ್ ಕಂಪನಿಯ ವಿಚಾರದಲ್ಲಿ ಸರ್ವೋಚ್ಛ ನ್ಯಾಯಾಲಯ ನೀಡಿದ ಪರಿಷ್ಕೃತ ಅಂಶ)

8. ಈ ಕನಿಷ್ಟ ವೇತನದ ಕಾರ್ಯಾನುಷ್ಠಾನಕ್ಕಾಗಿ ಸಾಕ್ಷರತೆ ಅಥವಾ ಪಲ್ಸ್ ಪೋಲಿಯೋ ಲಸಿಕೆ ಕಾರ್ಯಕ್ರಮಗಳಂತೆ ರಾಷ್ಟ್ರ ವ್ಯಾಪ್ತಿ ಆಂದೋನಗಳನ್ನು ಕಾರ್ಮಿಕ ಇಲಾಖೆಗಳು ಸಂಘಟಿಸಬೇಕು.
9. ಕನಿಷ್ಟ ವೇತನದ ಅನುಷ್ಟಾನಕ್ಕಾಗಿ ಕಾರ್ಮಿಕರು, ಮಾಲೀಕರು, ಸರ್ಕಾರಿ ಪ್ರತಿನಿಧಿಗಳ ತ್ರೀ ಸದಸ್ಯ ಮಂಡಳಿಯನ್ನು ಎಲ್ಲಾ ಹಂತಗಳಲ್ಲೂ ರಚಿಸುವುದು.
10. ಕನಿಷ್ಟ ವೇತನವನ್ನು ನೀಡದ ವಂಚನೆಯ ಪ್ರಕರಣಗಳ ವಿರುದ್ಧ ದಾವೆ ಹೂಡಲು ಅಧಿಕಾರವನ್ನು ಕಾರ್ಮಿಕರು ಮತ್ತು ಕಾರ್ಮಿಕರ ಸಂಘಟನೆಗಳಿಗೆ ನೀಡಬೇಕು.
11. ಗುತ್ತಿಗೆ ಕಾರ್ಮಿಕರು, ತಾತ್ಕಾಲಿಕ ಕಾರ್ಮಿಕರು ಮುಂತಾದ ಎಲ್ಲಾ ವರ್ಗದ ಅಸಂಘಟಿತರಿಗೆ ಸರ್ಕಾರದ ಕಾರ್ಯಕ್ರಮಗಳಲ್ಲೂ ಕೂಡ ತಾರತಮ್ಯವಿಲ್ಲದೆ ಕನಿಷ್ಟ ವೇತನವನ್ನು ಕಡ್ಡಾಯವಾಗಿ ನೀಡಬೇಕು.
12. ವರ್ಷದಲ್ಲಿ ಕನಿಷ್ಟ 250 ದಿನಗಳ ಕೆಲಸವನ್ನು ಎಲ್ಲಾ ಕಾರ್ಮಿಕರಿಗೂ ಕಡ್ಡಾಯವಾಗಿ ನೀಡಬೇಕು. ಕೆಲಸವಿಲ್ಲದ ದಿನಗಳಲ್ಲಿ ನಿರುದ್ಯೋಗ ಪರಿಹಾರವನ್ನು ನೀಡಬೇಕು 250 ದಿನಗಳ ಉದ್ಯೋಗ ಸಾಧ್ಯತೆಯನ್ನು ಹೀಗೆ ಸಾಧಿಸಬಹುದು.

    1. ಸಂಯುಕ್ತ ಅರಣ್ಯೀಕರಣದಲ್ಲಿ, ಸಮುದಾಯದ ಮೂಲಭೂತ ಅವಶ್ಯಕತೆಗಳಾದ ಕಟ್ಟಿಗೆ, ಪಶು ಆಹಾರ ಮತ್ತು ಔಷಧಿಯ ಸಸ್ಯಗಳನ್ನು ಬೆಳೆಸುವ ಸಾಮಾಜಿಕ ಅರಣ್ಯ ಚಟುವಟಿಕೆಗಳಲ್ಲಿ ಮಹಿಳೆಯರಿಗೆ [illegible]

2. ಗುಡಿ ಕೈಗಾರಿಕೆಗಳು, ಕುಶಲ ಕಲೆಗಳಿಗೆ ಸಾಲ ವ್ಯವಸ್ಥೆ, ಖಚ್ಚಾ ವಸ್ತುಗಳ ಪೂರೈಕೆಯನ್ನು ಮಾಡುವುದು ಮತ್ತು ಮಧ್ಯವರ್ತಿಗಳಿಂದ ಮುಕ್ತವಾದ ಮಾರುಕಟ್ಟೆಯನ್ನು ಒದಗಿಸುವುದು.

3. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸಂಪೂರ್ಣವಾಗಿ ಮಹಿಳಾ ಸ್ವಾಮ್ಯದ ಕೃಷಿ ಪೂರಕವಾದ ಮತ್ತು ಆಹಾರ ಪರಿಷ್ಕರಣಗಳ ಕೇಂದ್ರದ ಸ್ಥಾಪನೆ.

13. ಕನಿಷ್ಠ ವೇತನವು ಬೆಲೆ ಸೂಚ್ಯಂಕಕ್ಕೆ 100ಕ್ಕೆ 100 ಪಾಲು ಹೊಂದಾಣಿಕೆಯಾಗುವಂತೆ ಇರಬೇಕು.

14. ಸಂಘಟನೆಯ ಹಕ್ಕು, ಸಾಮೂಹಿಕ ಪ್ರತಿಭಟನೆಯ ಹಕ್ಕು, ಕೊರತೆಗಳ ವಿರುದ್ಧ ಧ್ವನಿ ಎರಿಸುವ ನ್ಯಾಯಯುತವಾದ ವಾತಾವರಣ ನಿರ್ಮಾಣವಾಗಬೇಕು.

8. ಕಲ್ಯಾಣ ನಿಧಿಯ ಸ್ಥಾಪನೆ:

ಅಸಂಘಟಿತ ವಲಯದ ಮಹಿಳೆಗೆ ಸಾಮಾಜಿಕ ಸುರಕ್ಷತೆಯನ್ನು ಒದಗಿಸಲು ಅನುಕೂಲವಾಗುವಂತೆ ಸರ್ಕಾರವು ಕಲ್ಯಾಣ ನಿಧಿಯನ್ನು ಸ್ಥಾಪಿಸಬೇಕು. ಈ ನಿಧಿಯ ನಿಯಂತ್ರಣ ತ್ರಿ ಸದಸ್ಯ ಮಂಡಳಿಯ ಮೂಲಕ ನಡೆಯಬೇಕು. ಈ ಕಾರ್ಮಿಕರ ವೇತನದ ಶೇ. 30ರಷ್ಟು, ಅಷ್ಟೇ ಪ್ರಮಾಣ ಸರ್ಕಾರದಿಂದ ಈ ನಿಧಿಗೆ ಹರಿದು ಬರಬೇಕು. ಈ ನಿಧಿಯಿಂದ ವೈದ್ಯಕೀಯ ಸೌಲಭ್ಯಗಳು, ನಿರುದ್ಯೋಗ ಪರಿಹಾರ, ಶಿಶುಪಾಲನಾ ಕೇಂದ್ರ ಮುಂತಾದ ಸವಲತ್ತುಗಳನ್ನು ಒದಗಿಸಬೇಕು.

9. ಸಾಮಾಜಿಕ ಸುರಕ್ಷತೆ:

ಆರೋಗ್ಯ ಸೇವೆಗಳು, ಹೆರಿಗೆ ಭತ್ಯೆ, ಪ್ರಾವಿಡೆಂಟ್ ಫಂಡ್, ನಿವೃತ್ತಿ ವೇತನ ಮುಂತಾದ ಸಾಮಾಜಿಕ ಸುರಕ್ಷತಾ ಸವಲತ್ತುಗಳನ್ನು ಪೂರೈಕೆಗಾಗಿ ಸಾಮಾಜಿಕ ಸುರಕ್ಷತಾ ನಿಧಿಯನ್ನು ಸ್ಥಾಪಿಸುವುದು. ಕೇಂದ್ರ ಮತ್ತು ರಾಜ್ಯಗಳಲ್ಲಿ ರಚಿಸಬೇಕಾದ ಈ ನಿಧಿಗೆ ಕಾರ್ಮಿಕರು ಮತ್ತು ಮಾಲೀಕರಿಂದ ವಂತಿಗೆಗಳನ್ನು ಸಂಗ್ರಹಿಸುವುದು.

10. ಇತರೆ ಶಿಫಾರಸ್ಸುಗಳು:

1) ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಭರವಸೆಗೆ ಬದಲು ಉದ್ಯೋಗ ಖಚಿತ ಯೋಜನೆಗಳನ್ನು ಜಾರಿಗೆ ತರುವುದು.

2. ಮಾನವ ಶಕ್ತಿಯನ್ನು ಕಡಿತಗೊಳಿಸುವ ಉದ್ದಿಮೆಗಳಿಗೆ, ಕಾರ್ಮಿಕ ಶಕ್ತಿ ವಿರೋಧಿ ನೀತಿಯ ಉದ್ದಿಮೆಗಳಿಗೆ ಧನ ಸಹಾಯವನ್ನು, ಪರವಾನಿಗೆಯನ್ನು ರದ್ದುಗೊಳಿಸುವುದು.

3. ಕನಿಷ್ಟ 20 ಮಹಿಳಾ ಕಾರ್ಮಿಕರು ದುಡಿಯುವ ಸ್ಥಳಗಳಲ್ಲಿ ಕಡ್ಡಾಯವಾಗಿ ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸುವುದು.

4. ಕಾರ್ಮಿಕ ಸಂಘಟನೆಗಳನ್ನು ರಚಿಸಲು ಮುಂದಾಗುವ ಕಾರ್ಮಿಕರಿಗೆ ಕಿರುಕುಳವನ್ನು ನೀಡುವ ಮಾಲೀಕರನ್ನು ಶಿಕ್ಷಿಸಲು, ಕಾರ್ಮಿಕ ಸಂಘಟನೆ ಕಾಯ್ದೆಯಲ್ಲಿ ತಿದ್ದುಪಡಿಯನ್ನು ಮಾಡುವುದು.

5. ಕಾರ್ಮಿಕ ಇಲಾಖೆಯಲ್ಲಿ ಅಸಂಘಟಿತ ಮಹಿಳೆಯರಿಗಾಗಿ ಪ್ರತ್ಯೇಕ ವಿಭಾಗವನ್ನು ರಚಿಸುವುದು.

6. ಕಾರ್ಮಿಕ ಕಾಯ್ದೆಗಳ ಉಲ್ಲಂಘನೆ ಮಾಡುವ ಅಥವಾ ಕಾರ್ಮಿಕ ಕಾಯ್ದೆಗಳ ಅನುಷ್ಠಾನವನ್ನು ಮಾಡದ ಮಾಲೀಕರು, ಉದ್ದಿಮೆಗಳ ಸೇವೆಯನ್ನು ದಂಡಿಸುವುದು ಮತ್ತು ರದ್ದುಪಡಿಸುವುದು, ಅದಕ್ಕಾಗಿ ಕಾವಲು ಸಮಿತಿಯನ್ನು ರಚಿಸುವುದು.

7. ಅಸಂಘಟಿತ ಕಾರ್ಮಿಕರಿಗೆ ಮೂಹಿಕ ವಿಮೆಯನ್ನು ಜಾರಿಗೆ ತರುವುದು.

8. ಮೃತ ಕಾರ್ಮಿಕನ ಕುಟುಂಬಕ್ಕೆ ರೂ. 10,000/- ಪರಿಹಾರವನ್ನು ನೀಡುವುದು.

11. ಯೋಜನೆಗಳ ಸಲಹೆಗಳು:

1. ನಗರದಲ್ಲಿನ ಸ್ವಯಂ ಉದ್ಯೋಗಿಗಳಿಗೆ ಸಾಲ ಸೌಲಭ್ಯ, ಸ್ಥಳಾವಕಾಶ, ತರಬೇತಿ ಮತ್ತು ಇತರೆ ಸೇವಾ ಸೌಲಭ್ಯಗಳ ಕಲ್ಪನೆಗಾಗಿ ಸಮಗ್ರ ಯೋಜನೆಯನ್ನು ಸರ್ಕಾರವು ರಚಿಸುವುದು.

2. ಗ್ರಾಮೀಣ ಪ್ರದೇಶದ ಕೃಷಿ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಬೀಡಿ ಮತ್ತು ಇತರೆ ಗೃಹ ಉದ್ದಿಮೆಗಳ ಮಹಿಳಾ ಕಾರ್ಮಿಕರಿಗಾಗಿ ಸರ್ಕಾರವು ವಿಶೇಷ ಯೋಜನೆಯನ್ನು ರೂಪಿಸಬೇಕು. ಅದನ್ನು ಸ್ವಯಂ ಸೇವಾ ಸಂಸ್ಥೆಗಳು, ಕಾರ್ಮಿಕ ಸಂಘಟನೆಗಳು ಅನುಷ್ಠಾನಗೊಳಿಸಬೇಕು.

ಅನುಬಂಧ - 4

ಕ್ರ.ಸಂ.	ಪ್ರಕರಣಗಳು	02-03	03-04	04-05
1.	ವರದಕ್ಷಿಣೆ ಸಾವು	16	25	19
2.	ವರದಕ್ಷಿಣೆ ಕಿರುಕುಳ	30	56	75
3.	ಹಣ ವಂಚನೆ	17	14	06
4.	ದೌರ್ಜನ್ಯ	90	16	105
5.	ಅತ್ಯಾಚಾರ (ರೇಪ್)	23	03	19
6.	2ನೇ ಮದುವೆ	11	18	6
7.	ಜೀವನಾಂಶ	18	15	21
8.	ವಿವಾಹ ವಿಚ್ಛೇದನೆ	05	05	4
9.	ಲೈಂಗಿಕ ಕಿರುಕುಳ	22	14	27
10.	ಸಾವಿನ ತನಿಖೆ	3	02	3
11.	ಕಾನೂನು ನೆರವು	13	08	5

1	2	3	4	5
12.	ಕೆಲಸ ಕೊಡಿಸುವ ಬಗ್ಗೆ	06	25	3
13.	ದಂಪತಿಗಳಲ್ಲಿ ಅತ್ತೆ ಮಾವಂದಿರಲ್ಲಿ ಭಿನ್ನಾಭಿಪ್ರಾಯ	–	24	–
14.	ಮದುವೆ ಆಚೆಗಿನ ಸಂಬಂಧಗಳು	–	06	–
15.	ಮಧ್ಯ ಸೇವನೆ / ಮಾದಕ ದ್ರವ್ಯ ಸೇವನೆ	–	05	–
16.	ಆಸ್ತಿ ವಿವಾದ	52	06	31
17.	ಇತರೆ	29	119	89
	ಒಟ್ಟು	335	401	413*

*ನವೆಂಬರ್ 2004ರ ಅಂತ್ಯದವರೆಗೆ

ಅನುಬಂಧ – 5

ಕರ್ನಾಟಕ ರಾಜ್ಯ ಮಹಿಳಾ ಆಯೋಗದಲ್ಲಿ ಕಳೆದ 3 ವರ್ಷಗಳಲ್ಲಿ ಸ್ವೀಕರಿಸಲಾದ ಅರ್ಜಿಗಳ ವಿವರ

ಕ್ರ. ಸಂ.	ಸಾಲು	ಸ್ವೀಕರಸಿಲಾದ ಅರ್ಜಿಗಳ ಸಂಖ್ಯೆ	ಮುಕ್ತಾಯಗೊಳಿಸಲಾದ ಅರ್ಜಿಗಳ ಸಂಖ್ಯೆ	ಬಾಕಿ ಇರುವ ಅರ್ಜಿಗಳ ಸಂಖ್ಯೆ
1.	2002–03	335	257	78
2.	2003–04	401	256	145
3.	2004–05	413	126	287
	ಒಟ್ಟು	1149	639	510

ಅನುಬಂಧ – 6

ಕರ್ನಾಟಕ ರಾಜ್ಯ ಮಹಿಳಾ ಆಯೋಗದಲ್ಲಿ ಬಾಕಿ ಇರುವ ಅರ್ಜಿಗಳ ವಿವರ

ವರ್ಷ	ಬಾಕಿ ಇರುವ ಅರ್ಜಿಗಳು	ವಿಲೇವಾರಿಗೆ ಬಾಕಿ ಇರುವ ಕಛೇರಿಗಳಲ್ಲಿನ ಅರ್ಜಿಗಳ ವಿವರ					
		SP	DC	CEO	Govt.	Other Govt. Agencies	Private Organisations
2002–03	78	36	04	02	08	14	14
2003–04	145	74	12	03	08	36	12
2004–05	287	151	19	11	10	84	12
	ಒಟ್ಟು	261	35	16	26	134	38

650(1255) ಶ್ರೀ ವೆಂಕಟಮುನಿಯಪ್ಪ ಬಿ.ಪಿ. (ಬೇತಮಂಗಲ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕೃಷಿ ಇಲಾಖೆಯಲ್ಲಿ ಇರುವ ಯೋಜನೆಗಳು ಯಾವುವು;

ಆ) ಯೋಜನೆಗಳಿಗೆ ಸರ್ಕಾರ ನಿಗದಿಗೊಳಿಸಿರುವ ಮೊಬಲಗಳೆಷ್ಟು;

ಇ) ಈ ಮೊಬಲಗು ಎಲ್ಲಾ ಯೋಜನೆಗಳಿಗೆ ಸಾಕಾಗುವುದೇ;

ಈ) ಹಾಗಿದ್ದಲ್ಲಿ, ಸರ್ಕಾರ ಅಗತ್ಯ ಅನುದಾನಗಳನ್ನು ಒದಗಿಸುವುದೇ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಕೃಷಿ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಾವುವೆಂದರೆ, ಬೀಜ, ರಸಗೊಬ್ಬರ, ಕೀಟನಾಶಕ, ಕೃಷಿ ಯಾಂತ್ರೀಕರಣ, ತರಬೇತಿ ಮತ್ತು ವಿಸ್ತರಣೆ, ಸಾವಯವ ಕೃಷಿ, ಹನಿ ಮತ್ತು ತುಂತುರು ನೀರಾವರಿ ಬೇಳೆಕಾಳು, ಎಣ್ಣೆಕಾಳು, ಮುಸುಕಿನ ಜೋಳ, ಹತ್ತಿ ಬೆಳೆಗಳ ಉತ್ಪಾದನಾ ಯೋಜನೆ, ಬೆಳೆ ವಿಮೆ ಇವೇ ಮೊದಲಾದ ಕೃಷಿ ವಿಷಯಗಳನ್ನೊಳಗೊಂಡಿರುತ್ತದೆ.

ಆ) ಈ ಯೋಜನೆಗಳ ಅನುಷ್ಠಾನಕ್ಕಾಗಿ 2004–05ನೇ ಸಾಲಿನಲ್ಲಿ ಒಟ್ಟು 32248.99 ಲಕ್ಷ ರೂ.ಗಳನ್ನು ನಿಗದಿಪಡಿಸಲಾಗಿರುತ್ತದೆ.

ಇ) ಹೌದು.

ಈ) ಉದ್ಭವಿಸುವುದಿಲ್ಲ.

651(1256) ಶ್ರೀ ವೆಂಕಟಮುನಿಯಪ್ಪ ಬಿ.ಪಿ. (ಬೇತಮಂಗಲ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ತೋಟಗಾರಿಕೆ ಇಲಾಖೆಯ ವ್ಯಾಪ್ತಿಗೆ ಬರುವ ಲಾಲ್‌ಬಾಗ್‌ನಲ್ಲಿರುವ ಗಾಜಿನ ಮನೆ ಆಧುನೀಕರಣಕ್ಕೆ ಎಷ್ಟು ವೆಚ್ಚವಾಗಿರುತ್ತದೆ; ವಿವರಗಳನ್ನು ಒದಗಿಸುವುದು;

ಆ) ಈ ಆಧುನೀಕರಣ ಕಾಮಗಾರಿಗಳನ್ನು ತೋಟಗಾರಿಕೆ ಇಲಾಖೆಯಿಂದ ಮಾಡಿಸದಿರಲು ಕಾರಣಗಳೇನು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಗಾಜಿನ ಮನೆ ಆಧುನೀಕರಣಕ್ಕೆ ತಗುಲಿದ ವೆಚ್ಚ ರೂ. 2,57,11,767–00 (ಎರಡು ಕೋಟಿ ಐವತ್ತೇಳು ಲಕ್ಷದ ಹನ್ನೊಂದು ಸಾವಿರದ ಏಳು ನೂರ ಅರವತ್ತೇಳು ರೂಪಾಯಿಗಳು).

ಆ) ಸರ್ಕಾರದ ಆದೇಶ ಸಂಖ್ಯೆ: ನಅಇ/190/ಬೆಂಅಸೇ/2003, ಬೆಂಗಳೂರು, ದಿನಾಂಕ 19–6–2003ರಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ತನ್ನಲ್ಲಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಭೌತಿಕವಾಗಿ ಹಾಗೂ ಸ್ಥಾನಿಕವಾಗಿ ಈ ಆಧುನೀಕರಣ ಹಾಗೂ ಲಾಲ್‌ಬಾಗ್‌ನ ಅಭಿವೃದ್ಧಿ ಕಾರ್ಯನಿರ್ವಹಿಸಲು ಆದೇಶಿಸಲಾಗಿದೆ. ಲಾಲ್‌ಬಾಗ್‌ನಲ್ಲಿ ಗಿಡನೆಡುವ ಕಾರ್ಯಕ್ರಮವನ್ನು ತೋಟಗಾರಿಕೆ ಇಲಾಖೆಯೇ ನಿರ್ವಹಿಸುತ್ತಿದೆ.

653(15) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರಿ ಮಾರಾಟ ಸಂಘಗಳು ಎಷ್ಟು ಹಾಗೂ ಅವು ಯಾವುವು;

ಆ) ಈ ಮಾರಾಟ ಸಹಕಾರ ಸಂಘಗಳು ಕಳೆದ ಮೂರು ವರ್ಷಗಳಲ್ಲಿ ಮಾರಾಟ ಮಾಡಿಸಿದ ಒಕ್ಕಲುತನ ಫಸಲು ಯಾವುವು ಹಾಗೂ ಮಾರಾಟದ ಮೊತ್ತವೆಷ್ಟು; ಕೃಷಿಯೇತರ ವ್ಯವಹಾರ ಮಾರಾಟದ ಮೊತ್ತವೆಷ್ಟು;

ಇ) ಕಳೆದ ಮೂರು ವರ್ಷಗಳಲ್ಲಿ ಈ ಮಾರಾಟ ಸಂಘಗಳುಗಳಿಸಿದ ನಿವ್ವಳ ಲಾಭ ಹಾನಿ ಎಷ್ಟು;

ಈ) 31-3-2004ರ ಅಂತ್ಯಕ್ಕೆ ಈ ಸಂಘಗಳ ಒಟ್ಟು ಲಾಭ ಅಥವಾ ಹಾನಿ ಎಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) 181. ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹತ್ತಿ, ಅಡಿಕೆ, ಯಾಲಕ್ಕಿ, ಮೆಣಸು, ಭತ್ತ, ಮೆಕ್ಕೆ ಜೋಳ, ಶೇಂಗಾ, ಹುರುಳಿ, ಸಜ್ಜೆ, ಗೋಧಿ, ತೊಗರಿ, ಮೆಣಸಿನಕಾಯಿ, ರಾಗಿ, ಹುಚ್ಚೆಳ್ಳು, ಈರುಳ್ಳಿ, ಆಲೂಗಡ್ಡೆ, ವೆನಿಲ ಇತ್ಯಾದಿ ಫಸಲುಗಳು.

ಮಾರಾಟ ಮೊತ್ತ	(ರೂ. ಲಕ್ಷಗಳಲ್ಲಿ)
2001-02	12,435.25
2002-03	12,916.43
2003-04	13,075.94

ಕೃಷಿಯೇತರ ವ್ಯವಹಾರದ ಮೊತ್ತ	(ರೂ. ಲಕ್ಷಗಳಲ್ಲಿ)
2001-02	41,323.57
2002-03	48,868.26
2003-04	52,766.12

ಇ)

(ರೂ. ಲಕ್ಷಗಳಲ್ಲಿ)

ವರ್ಷ	ಲಾಭ	ಹಾನಿ
2001-02	647.40	226.40
2002-03	675.00	235.06
2003-04	964.65	753.49

ಈ)

ಲಾಭ	ಹಾನಿ
ರೂ. 964.65	753.49

ವಿಧಾನಸಭಾ ಸದಸ್ಯರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 15ಕ್ಕೆ ಅನುಬಂಧ

ಬೆಂಗಳೂರು ಪ್ರಾಂತ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು		ಟಿ.ಎ.ಇ.ಸಿ.ಎಂ.ಎಸ್/ ಎ.ಪಿ.ಸಿ.ಎಂ.ಎಸ್. ಹೆಸರು
1.	ಬೆಂಗಳೂರು ನಗರ ಜಿಲ್ಲೆ	1.	ಬೆಂಗಳೂರು ಉತ್ತರ
		2.	ಬೆಂಗಳೂರು ದಕ್ಷಿಣ
		3.	ಬೆಂಗಳೂರು ಪೂರ್ವ
		4.	ಆನೆಕಲ್
2.	ಬೆಂಗಳೂರು ಗ್ರಾಮಾಂತರ ಜಿಲ್ಲೆ	1.	ಹೊಸಕೋಟೆ
		2.	ದೇವನಹಳ್ಳಿ
		3.	ದೊಡ್ಡಬಳ್ಳಾಪುರ
		4.	ನೆಲಮಂಗಲ
		5.	ಮಾಗಡಿ
		6.	ರಾಮನಗರ
		7.	ಚನ್ನಪಟ್ಟಣ
		8.	ಕನಕಪುರ
3.	ಕೋಲಾರ	1.	ಕೋಲಾರ
		2.	ಮಾಲೂರು
		3.	ಬಂಗಾರಪೇಟೆ
		4.	ಮುಳಬಾಗಿಲು
		5.	ಶ್ರೀನಿವಾಸಪುರ
		6.	ಚಿಕ್ಕಬಳ್ಳಾಪುರ
		7.	ಚಿಂತಾಮಣಿ
		8.	ಗುಡಿಬಂಡೆ
		9.	ಗೌರಿಬಿದನೂರು
		10.	ಬಾಗೇಪಲ್ಲಿ
		11.	ಶಿಡ್ಲಘಟ್ಟ
4.	ತುಮಕೂರು	1.	ತುಮಕೂರು
		2.	ಗುಬ್ಬಿ
		3	ಕುಣಿಗಲ್

1	2	3
		6. ತಿಪಟೂರು
		7. ಮಧುಗಿರಿ
		8. ಶಿರಾ
		9. ಪಾವಗಡ
		10. ಕೊರಟಗೆರೆ
5. ಚಿತ್ರದುರ್ಗ		1. ಚಿತ್ರದುರ್ಗ
		2. ಚಳ್ಳಕೆರೆ
		3. ಹಿರಿಯೂರು
		4. ಹೊಳಲ್ಕೆರೆ
		5. ಮೊಳಕಾಲ್ಮೂರು
		6. ಹೊಸದುರ್ಗ
6. ದಾವಣಗೆರೆ		1. ದಾವಣಗೆರೆ
		2. ಹರಿಹರ
		3. ಹೊನ್ನಾಳಿ
		4. ಚನ್ನಗಿರಿ
		5. ಹರಪನಹಳ್ಳಿ
		6. ಜಗಳೂರು
7. ಶಿವಮೊಗ್ಗ		1. ಶಿವಮೊಗ್ಗ
		2. ಭದ್ರಾವತಿ
		3. ತೀರ್ಥಹಳ್ಳಿ
		4. ಸಾಗರ
		5. ಶಿಕಾರಿಪುರ
		6. ಸೊರಬ
	ಬೆಳಗಾವಿ ಪ್ರಾಂತ	
1. ಬೆಳಗಾಂ		1. ಬೆಳಗಾಂ
		2. ಖಾನಾಪುರ
		3. ಬೈಲಹೊಂಗಲ
		4. ಸವದತ್ತಿ
		5. ಗೋಕಾಕ್
		6. ಹುಕ್ಕೇರಿ
		7. ಚಿಕ್ಕೋಡಿ
		8. ರಾಮದುರ್ಗ

1	2	3
2.	ಧಾರವಾಡ	1. ಧಾರವಾಡ
		2. ಹುಬ್ಬಳ್ಳಿ
		3. ಅಣ್ಣಿಗೇರಿ
		4. ಕುಂದಗೋಳ
3.	ಬಾಗಲಕೋಟೆ	1. ಹುನಗುಂದ
		2. ಜಮಖಂಡಿ
		3. ಬಿಳಿಗಿ
		4. ಮುಧೋಳ
		5. ಬಾಗಲಕೋಟೆ
		6. ಬಾದಾಮಿ
4.	ಬಿಜಾಪುರ	1. ಬಿಜಾಪುರ
		2. ಬಸವನಬಾಗೇವಾಡಿ
		3. ಮುದ್ದೇಬಿಹಾಳ
		4. ಇಂಡಿ
		5. ಸಿಂಧಗಿ
5.	ಗದಗ	1. ಗದಗ
		2. ರೋಣ
		3. ನರೇಗಲ್
		4. ಮುಂಡರಗಿ
		5. ಸಿರಹಟ್ಟಿ
		6. ನರಗುಂದ
6.	ಹಾವೇರಿ	1. ಹಾವೇರಿ
		2. ರಾಣೆಬೆನ್ನೂರು
		3. ಬ್ಯಾಡಗಿ
		4. ಹಿರೇಕೆರೂರ
		5. ಹಾನಗಲ್
		6. ಸವಣೂರು
		7. ಶಿಗ್ಗಾಂವ
7.	ಕಾರವಾರ	1. ಸೂಪ
		2. ಹಳ್ಳಿಹಾಳ

1	2	3
		3. ಶಿರಸಿ
		4. ಸಿದ್ದಾಪುರ
		5. ಯಲ್ಲಾಪುರ
		6. ಮುಂಡಗೋಡು
		7. ಕುಮುಟ
		8. ಅಂಕೋಲ
		9. ಹೊನ್ನಾವರ
	ಮೈಸೂರು ಪ್ರಾಂತ	
1. ಮೈಸೂರು		1. ಮೈಸೂರು
		2. ಟಿ.ಎನ್. ಪುರ
		3. ನಂಜನಗೂಡು
		4. ಹೆಚ್.ಡಿ. ಕೋಟೆ
		5. ಪಿರಿಯಾಪಟ್ಟಣ
		6. ಕೆ.ಆರ್. ನಗರ
		7. ಹುಣಸೂರು
2. ಚಾಮರಾಜನಗರ		1. ಕೊಳ್ಳೇಗಾಲ
		2. ಗುಂಡ್ಲುಪೇಟೆ
		3. ಯಳಂದೂರು
		4. ಚಾಮರಾಜನಗರ
3. ಮಂಡ್ಯ		1. ಮಂಡ್ಯ
		2. ಮದ್ದೂರು
		3. ಮಳವಳ್ಳಿ
		4. ಪಾಂಡವಪುರ
		5. ಶ್ರೀರಂಗಪಟ್ಟಣ
		6. ಕೆ.ಆರ್. ಪೇಟೆ
		7. ನಾಗಮಂಗಲ
4. ಹಾಸನ		1. ಹಾಸನ
		2. ಸಕಲೇಶಪುರ

1	2	3
		3. ಹೊಳೆನರಸೀಪುರ
		4. ಬೇಲೂರು
		5. ಆಲೂರು
		6. ಅರಸೀಕೆರೆ
		7. ಚನ್ನರಾಯಪಟ್ಟಣ
		8. ಅರಕಲಗೂಡು
5.	ಚಿಕ್ಕಮಗಳೂರು	1. ತರೀಕೆರೆ
		2. ಕಡೂರು
		3. ನರಸಿಂಹರಾಜಪುರ
		4. ಚಿಕ್ಕಮಗಳೂರು
		5. ಮೂಡಿಗೆರೆ
		6. ಕೊಪ್ಪ
		7. ಶೃಂಗೇರಿ
6.	ಉಡುಪಿ	1. ಉಡುಪಿ
		2. ಕುಂದಾಪುರ
		3. ಕಾರ್ಕಳ
7.	ದಕ್ಷಿಣ ಕನ್ನಡ	1. ಮಂಗಳೂರು
		2. ಬಂಟ್ವಾಳ
		3. ಪುತ್ತೂರು
		4. ಸುಳ್ಯ
		5. ಬೆಳ್ತಂಗಡಿ
8.	ಕೊಡಗು	1. ಮೂರ್ನಾಡು
		2. ಕುಶಾಲನಗರ
		3. ಕೊಡ್ಲಿಪೇಟೆ
		4. ಹುದಿಲೇರಿ
		5. ಬಾಳೆಲೆ
		6. ಗೋಣಿಕೊಪ್ಪ
		7. ಪೊನ್ನಂಪೇಟೆ
		8. ವಿರಾಜಪೇಟೆ
		9. ಶನಿವಾರಸಂತೆ

1	2	3
		10. ಶ್ರೀಮಂಗಲ
		11. ಅಮ್ಮತ್ತಿ
		12. ಸೋಮವಾರಪೇಟೆ
		13. ಬೆಂಗುನಾಡು
	ಗುಲ್ಬರ್ಗಾ ಪ್ರಾಂತ್ಯ	
1.	ರಾಯಚೂರು	1. ರಾಯಚೂರು
		2. ಮಾನವಿ
		3. ದೇವದುರ್ಗ
		4. ಸಿಂಧನೂರು
		5. ಲಿಂಗಸುಗೂರು
2.	ಕೊಪ್ಪಳ	1. ಕೊಪ್ಪಳ
		2. ಗಂಗಾವತಿ
		3. ಕುಷ್ಟಗಿ
		4. ಯಲ್ಬುರ್ಗಾ
3.	ಬಳ್ಳಾರಿ	1. ಬಳ್ಳಾರಿ
		2. ಸಿರಗುಪ್ಪ
		3. ಹೊಸಪೇಟೆ
		4. ಹಡಗಲಿ
		5. ಕೂಡ್ಲಗಿ
		6. ಹೆಚ್.ಬಿ. ಹಳ್ಳಿ
		7. ಕಂಪ್ಲಿ
4.	ಗುಲ್ಬರ್ಗಾ	1. ಗುಲ್ಬರ್ಗಾ
		2. ಜೇವರ್ಗಿ
		3. ಅಪಜಲಪುರ
		4. ಅಳಂದ್
		5. ಯಾದಗಿರಿ
		6. ಶಹಾಪುರ
		7. ಸುರಪುರ
		8. ಸೇಡಂ
		9. ಚಿತ್ತಾಪುರ
		10. ಚಿಂಚೋಳ್ಳಿ

1	2	3
	ಗೋಷ್ವಾರೆ	
1.	ಬೆಂಗಳೂರು ಪ್ರಾಂತ	51
2.	ಬೆಳಗಾಂ ಪ್ರಾಂತ	45
3.	ಮೈಸೂರು ಪ್ರಾಂತ	54
4.	ಗುಲ್ಬರ್ಗಾ ಪ್ರಾಂತ	31
	ಒಟ್ಟು	181

654(16) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ತಾಲ್ಲೂಕು ಕೃಷಿ ಅಭಿವೃದ್ಧಿ ಗ್ರಾಮೀಣ ಬ್ಯಾಂಕುಗಳು ಎಷ್ಟು ಹಾಗೂ ಯಾವುವು;

ಆ) ಈ ಪಿಕಾರ್ಡ್ ಬ್ಯಾಂಕುಗಳು ಕಳೆದ ಮೂರು ವರ್ಷಗಳಲ್ಲಿ ಗಳಿಸಿದ ಲಾಭ ಹಾಗೂ ಹಾನಿ ಎಷ್ಟು;

ಇ) ಈ ಬ್ಯಾಂಕುಗಳು 31–3–2004ಕ್ಕೆ ಗಳಿಸಿದ ಒಟ್ಟು ಲಾಭ ಅಥವಾ ಹಾನಿ ಎಷ್ಟು;

ಈ) ಈ ಬ್ಯಾಂಕುಗಳಿಗೆ 31–3–2004ಕ್ಕೆ ಸಾಲಗಾರರಿಂದ ಬರಬೇಕಾದ ಸಾಲ ಹಾಗೂ ಬಡ್ಡಿಯ ಮೊತ್ತವೆಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 177 ಸಹಕಾರಿ ಕೃಷಿ ಅಭಿವೃದ್ಧಿ ಗ್ರಾಮೀಣ ಬ್ಯಾಂಕುಗಳು ಇರುತ್ತವೆ.

ಆ)

ವರ್ಷ	ಲಾಭಗಳಿಸಿದ ಪಿಕಾರ್ಡ್ ಬ್ಯಾಂಕುಗಳು	ಒಟ್ಟು ಲಾಭದ ಮೊತ್ತ	ನಷ್ಟ ಹೊಂದಿದ ಒಟ್ಟು ಪಿಕಾರ್ಡ್ ಬ್ಯಾಂಕುಗಳು	ಒಟ್ಟು ನಷ್ಟದ ಮೊತ್ತ
2001–02	18	246.52	159	7586.70
2002–03	21	175.67	156	7206.15
2003–04	22	344.76	155	10356.60

ಇ) 31–3–2004ಕ್ಕೆ 10 ಬ್ಯಾಂಕುಗಳು ರೂ. 200.11 ಲಕ್ಷಗಳ ಲಾಭಗಳಿಸಿವೆ. ಉಳಿದ 167 ಬ್ಯಾಂಕುಗಳು ಒಟ್ಟು ರೂ. 58600.00 ಲಕ್ಷಗಳ ಹಾನಿ ಅನುಭವಿಸಿದೆ.

ಈ) 31–3–2004ಕ್ಕೆ ಸಾಲಗಾರರಿಂದ ಬರಬೇಕಾದ ಒಟ್ಟು ಸಾಲ ರೂ. 117246.00 ಲಕ್ಷ ಹಾಗೂ ಬಡ್ಡಿಯ ಮೊತ್ತ ರೂ. 25498.00 ಲಕ್ಷಗಳು.

655(19) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ರಾಜ್ಯಮಟ್ಟದ ಸಹಕಾರಿ ಸಂಘಗಳು ಯಾವುವು;

ಆ) ಈ ಸಂಘಗಳು ಕಳೆದ ಮೂರು ವರ್ಷಗಳಲ್ಲಿ ಗಳಿಸಿದ ಲಾಭ ಅಥವಾ ಹಾನಿ ಎಷ್ಟು;

ಇ) ಈ ಸಂಘಗಳು 31-3-2004ಕ್ಕೆ ಗಳಿಸಿದ ಒಟ್ಟು ಲಾಭ ಅಥವಾ ಹಾನಿ ಎಷ್ಟು;

ಈ) ಈ ಸಂಘಗಳಿಗೆ ಸರ್ಕಾರ ಕೊಟ್ಟಿರುವ ಧನ ಸಹಾಯ 31-3-2004ಕ್ಕೆ ಎಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ 81 ರಾಜ್ಯಮಟ್ಟದ ಸಹಕಾರಿ ಸಂಘಗಳು ಇರುತ್ತದೆ. ಪಟ್ಟಿಯನ್ನು ಲಗತ್ತಿಸಿದೆ.

ಆ) ಈ ಸಂಘಗಳು ಕಳೆದ ಮೂರು ವರ್ಷಗಳಲ್ಲಿ ಗಳಿಸಿದ ಲಾಭ ಅಥವಾ ಹಾನಿ ಈ ಕೆಳಕಂಡಂತೆ ಇರುತ್ತದೆ.

(ರೂ. ಲಕ್ಷಗಳಲ್ಲಿ)

ವರ್ಷ	ಲಾಭ	ಹಾನಿ
2001–02	3974.61	2866.26
2002–03	820.31	7300.05
2003–04	1936.49	2320.03

ಇ) ಈ ಸಂಘಗಳು ದಿನಾಂಕ 31-3-2004ಕ್ಕೆ ಒಟ್ಟು ರೂ. 9759.51ಲಕ್ಷ ಲಾಭಗಳಿಸಿವೆ ಮತ್ತು ರೂ.679.73 ಲಕ್ಷಗಳ ಹಾನಿ ಅನುಭವಿಸಿದೆ.

ಈ) ಈ ಸಂಘಗಳಿಗೆ ಸರ್ಕಾರವು ದಿನಾಂಕ 31-3-2004ಕ್ಕೆ ರೂ. 3274.57 ಲಕ್ಷಗಳ ಧನಸಹಾಯ ನೀಡಿದೆ.

656(21) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಜಿಲ್ಲಾವಾರು ಸ್ವಶಕ್ತಿ ಮಹಿಳಾ ಗುಂಪುಗಳ ಸಂಖ್ಯೆ ಎಷ್ಟು;

ಆ) ಪ್ರತಿ ಗುಂಪುಗಳಿಗೆ ಸರ್ಕಾರ ಕೊಟ್ಟಿರುವ ಸುತ್ತು ನಿಧಿ ಧನ ಸಹಾಯವೆಷ್ಟು;

ಇ) ಜಿಲ್ಲಾವಾರು ಈ ಸಂಘಗಳಲ್ಲಿ ಸಂಗ್ರಹಿಸಿರುವ ಮೊತ್ತವೆಷ್ಟು;

ಈ) ಜಿಲ್ಲಾವಾರು ಈ ಸಂಘಗಳ ಸದಸ್ಯರಿಗೆ ಹಾಗೂ ಇತರರಿಗೆ ಕೊಟ್ಟಿರುವ ಸಾಲದ ಮೊತ್ತವೆಷ್ಟು?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಸ್ವಶಕ್ತಿ ಯೋಜನೆಯಡಿ ರಚಿಸಲಾದ ಒಟ್ಟು ಗುಂಪುಗಳ ಸಂಖ್ಯೆ 2114 ಜಿಲ್ಲಾವಾರು ಗುಂಪುಗಳ ಸಂಖ್ಯೆ ಈ ಕೆಳಗಿನಂತಿದೆ.

1.	ಕೋಲಾರ	349
2.	ಚಿತ್ರದುರ್ಗ	331
3.	ತುಮಕೂರು	349
4.	ಬಳ್ಳಾರಿ	299
5.	ಕೊಪ್ಪಳ	298
6.	ರಾಯಚೂರು	142
7.	ಗುಲ್ಬರ್ಗಾ	346
	ಒಟ್ಟು	2114

ಆ) ಕೇಂದ್ರ ಸರ್ಕಾರದ ಈ ಯೋಜನೆಯಡಿ ಸುತ್ತುನಿಧಿ ನೀಡುವ ಅವಕಾಶವಿರುವುದಿಲ್ಲ.

ಇ) ಡಿಸೆಂಬರ್ 2004ರಲ್ಲಿದ್ದಂತೆ ಸ್ವಸಹಾಯ ಗುಂಪುಗಳು ಮಾಡಿರುವ ಉಳಿತಾಯದ ಮೊತ್ತ ಮತ್ತು ಸಾಮಾನ್ಯ ನಿಧಿ (ಜಿಲ್ಲಾವಾರು)

1.	ಕೋಲಾರ	104.14	ಲಕ್ಷಗಳು
2.	ಚಿತ್ರದುರ್ಗ	111.75	ಲಕ್ಷಗಳು
3.	ತುಮಕೂರು	123.86	ಲಕ್ಷಗಳು
4.	ಬಳ್ಳಾರಿ	100.78	ಲಕ್ಷಗಳು
5.	ಕೊಪ್ಪಳ	69.80	ಲಕ್ಷಗಳು
6.	ರಾಯಚೂರು	17.54	ಲಕ್ಷಗಳು
7.	ಗುಲ್ಬರ್ಗಾ	100.88	ಲಕ್ಷಗಳು
	ಒಟ್ಟು	**628.75**	**ಲಕ್ಷಗಳು**

ಈ) ಆಂತರಿಕ ಸಾಲ ಬ್ಯಾಂಕ್ ಸಂಪರ್ಕ

(ರೂ. ಲಕ್ಷಗಳಲ್ಲಿ)

1.	ಕೋಲಾರ	349	264
2.	ಚಿತ್ರದುರ್ಗ	331	283
3.	ತುಮಕೂರು	349	343
4.	ಬಳ್ಳಾರಿ	299	258
5.	ಕೊಪ್ಪಳ	298	221
6.	ರಾಯಚೂರು	137	78
7.	ಗುಲ್ಬರ್ಗಾ	346	269
	ಒಟ್ಟು	**2109**	**1716**

658(1247) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಸಹಕಾರಿ ವಲಯದಲ್ಲಿನ ಕೃಷಿ ತೋಟಗಾರಿಕೆ ಉತ್ಪನ್ನ ಸಂಸ್ಕರಣ ಘಟಕಗಳು ಎಷ್ಟು ಇವೆ;

ಆ) ಯಾವ ಯಾವ ಉತ್ಪನ್ನಗಳಿಗೆ ಎಲ್ಲೆಲ್ಲಿ ಇಂಥ ಸಂಸ್ಕರಣ ಘಟಕಗಳನ್ನು ಪ್ರಾರಂಭಿಸಲಾಗಿದೆ;

ಇ) ಹೊಸದಾಗಿ ಇಂಥ ಸಂಸ್ಕರಣ ಘಟಕಗಳನ್ನು ಪ್ರಾರಂಭಿಸಿ ಬೆಳೆಗಾರರಿಗೆ ಅನುಕೂಲ ಮಾಡಿಕೊಡುವ ಯೋಜನೆ ಸರ್ಕಾರದ ಮುಂದಿದೆಯೇ;

ಈ) ಇದ್ದಲ್ಲಿ, ಅದರ ವಿವರಗಳೇನು;

ಉ) ರಾಜ್ಯದಲ್ಲಿ ಸಹಕಾರಿ ಕ್ಷೇತ್ರದಲ್ಲಿನ ಆರೋಗ್ಯ ವಿಮೆಯನ್ನು ವಿಶಾಲ ವ್ಯಾಪ್ತಿಯಲ್ಲಿ ಯಶಸ್ವಿಯಾಗಿ ಅಳವಡಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) 40.

ಆ) ಬೆಂಗಳೂರು ಪ್ರಾಂತ್ಯ

1.	ಹಾಪ್‌ಕಾಮ್ಸ್ ಬೆಂಗಳೂರು	ಹಣ್ಣು ಮತ್ತು ತರಕಾರಿ ಘಟಕ
2.	ರೈತರ ಫಸಲುಗಳ ಪರಿವರ್ತನಾ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘ ನಿ. ದಾವಣಗೆರೆ	ರೈತರ ಫಸಲು ಘಟಕ (ಭತ್ತ ಇತ್ಯಾದಿ)
3.	ವ್ಯವಸಾಯಗಾರರ ಪರಿವರ್ತನಾ ಮತ್ತು ಕೈಗಾರಿಕಾ ವ್ಯಾಪಾರೋದ್ಯಮ ಸಹಕಾರ ಸಂಘ ನಿ, ದಾವಣಗೆರೆ	ವ್ಯವಸಾಯ ಫಸಲು ಘಟಕ ಭತ್ತ ಇತ್ಯಾದಿ
4.	ಟಿ.ಎ.ಪಿ.ಸಿ.ಎಂ.ಎಸ್. ದಾವಣಗೆರೆ	ಅಕ್ಕಿ ಗಿರಣಿ ಘಟಕ
5.	ಟಿ.ಎ.ಪಿ.ಸಿ.ಎಂ.ಎಸ್. ಹರಿಹರ	ಅಕ್ಕಿ ಗಿರಣಿ ಘಟಕ
6.	ಟಿ.ಎ.ಪಿ.ಸಿ.ಎಂ.ಎಸ್. ಹೊನ್ನಾಳಿ	ಅಕ್ಕಿ ಗಿರಣಿ ಘಟಕ
7.	ಭತ್ತ ಸಂಸ್ಕರಣ ಘಟಕ ಹೊಳಲೂರು ಶಿವಮೊಗ್ಗ	ಭತ್ತ ಸಂಸ್ಕರಣ
8.	ಭತ್ತ ಸಂಸ್ಕರಣ ಘಟಕ ಭದ್ರಾವತಿ	ಭತ್ತ ಸಂಸ್ಕರಣ ಘಟಕ
9.	ಭತ್ತ ಸಂಸ್ಕರಣ ಘಟಕ ತೀರ್ಥಹಳ್ಳಿ	ಭತ್ತ ಸಂಸ್ಕರಣ ಘಟಕ
10.	ಭತ್ತ ಸಂಸ್ಕರಣ ಘಟಕ ಸೊರಬ	ಭತ್ತ ಸಂಸ್ಕರಣ ಘಟಕ
11.	ಕಾಫಿ ಸಂಸ್ಕರಣ ಘಟಕ ಸಾಗರ	ಕಾಫಿ ಸಂಸ್ಕರಣ
	ಬೆಳಗಾಂ ಪ್ರಾಂತ್ಯ	
12.	ವಿಜಾಪುರ ದ್ರಾಕ್ಷಿ ಸಂಸ್ಕರಣ ಘಟಕ	ಒಣ ದ್ರಾಕ್ಷಿ

13.	ಒಣಸಗಿ ದ್ರಾಕ್ಷಿ ಸಂಸ್ಕರಣ ಘಟಕ, ವಿಜಾಪುರ ಜಿಲ್ಲೆ	ಒಣ ದ್ರಾಕ್ಷಿ
14.	ಅಕ್ಕಿ ಸಂಸ್ಕರಣ ಘಟಕ ಯಲ್ಲಾಪುರ	ಅಕ್ಕಿ ಸಂಸ್ಕರಣ ಘಟಕ
15.	ಅಕ್ಕಿ ಸಂಸ್ಕರಣ ಘಟಕ ಶಿರ್ಶಿ	ಅಕ್ಕಿ ಸಂಸ್ಕರಣ ಘಟಕ
16.	ಅಕ್ಕಿ ಸಂಸ್ಕರಣ ಘಟಕ ಸಿದ್ಧಾಪುರ	ಅಕ್ಕಿ ಸಂಸ್ಕರಣ ಘಟಕ
17.	ಅನಾನಸ್ ಸಂಸ್ಕರಣ ಘಟಕ ಗೋಳಿಕಟ್ಟೆ ಶಿರ್ಶಿ	ಅನಾನಸ್ ಸಂಸ್ಕರಣ ಘಟಕ

ರಾಯಚೂರು ಪ್ರಾಂತ್ಯ

18.	ಆರ್.ಎ.ಪಿ.ಎಂ. ಅಂಡ್ ಪಿ.ಸಿ.ಎಸ್. ನಿ. ರಾಯಚೂರು	ಅಕ್ಕಿ ಗಿರಣಿ
19.	ಟಿ.ಎ.ಪಿ.ಸಿ.ಎಂ.ಎಸ್. ನಿ. ಮಾನವಿ	ಅಕ್ಕಿ ಗಿರಣಿ
20.	ಟಿ.ಎ.ಪಿ.ಸಿ.ಎಂ.ಎಸ್. ನಿ. ಸಿಂಧನೂರು	ಅಕ್ಕಿ ಗಿರಣಿ
21.	ಪ್ರಾ.ಎ.ಬಿ.ಬ.ಸ.ಸಂ. ಒಕ್ಕೂಟ ನಿ. ರಾಯಚೂರು	ಎಣ್ಣೆ ಘಟಕ
22.	ಸಹಕಾರಿ ನೂಲಿನ ಗಿರಣಿ ನಿ. ರಾಯಚೂರು	ನೂಲಿನ ಗಿರಣಿ
23.	ಟಿ.ಎ.ಪಿ.ಸಿ.ಎಂ.ಎಸ್. ನಿ. ಕೊಪ್ಪಳ	ಅಕ್ಕಿ ಗಿರಣಿ
24.	ಟಿ.ಎ.ಪಿ.ಸಿ.ಎಂ.ಎಸ್. ನಿ. ಗಂಗಾವತಿ	ಅಕ್ಕಿ ಗಿರಣಿ
25.	ಟಿ.ಎ.ಪಿ.ಸಿ.ಎಂ.ಎಸ್. ನಿ. ಗುಲ್ಬರ್ಗಾ	ತೊಗರಿ ಬೇಳೆ ಘಟಕ
26.	ಟಿ.ಎ.ಪಿ.ಸಿ.ಎಂ.ಎಸ್. ನಿ. ಚಿಂಚೋಳ್ಳಿ	ತೊಗರಿ ಬೇಳೆ ಘಟಕ
27.	ಟಿ.ಎ.ಪಿ.ಸಿ.ಎಂ.ಎಸ್. ನಿ. ಯಾದಗಿರಿ	ಅಕ್ಕಿ ಗಿರಣಿ
28.	ಜಾಗರಿ ಪ್ರೊಡ್ಯೂಸರ್ಸ್ ಸ.ಸಂ.ನಿ. ಹನುಮಂತವಾಡಿ	ಜಾಗರಿ ಘಟಕ
29.	ಟಿ.ಎ.ಪಿ.ಸಿ.ಎಂ.ಎಸ್. ಬಳ್ಳಾರಿ	ಅಕ್ಕಿ ಗಿರಣಿ
30.	ಟಿ.ಎ.ಪಿ.ಸಿ.ಎಂ.ಎಸ್. ಕಂಪ್ಲಿ	ಅಕ್ಕಿ ಗಿರಣಿ

ಮೈಸೂರು ಪ್ರಾಂತ್ಯ

31.	ಮೈಸೂರು ತೋಟಗಾರಿಕೆ ಉತ್ಪನ್ನ ಮತ್ತು ಮಾರಾಟ ಸಂಸ್ಕರಣ ಸಹಕಾರ ಸಂಘ ನಿ, ಮೈಸೂರು	ಹಣ್ಣು ಮತ್ತು ತರಕಾರಿ ಸಂಸ್ಕರಣ ಘಟಕ
32.	ಮಂಡ್ಯ ಜಿಲ್ಲಾ ತೋಟಗಾರಿಕೆ ಉತ್ಪನ್ನ ಮತ್ತು ಮಾರಾಟ ಸಂಸ್ಕರಣ ಸಹಕಾರ ಸಂಘ ನಿ. ಮಂಡ್ಯ	ಹಣ್ಣು ಮತ್ತು ತರಕಾರಿ ಸಂಸ್ಕರಣ ಘಟಕ

33.	ಟಿ.ಎ.ಪಿ.ಸಿ.ಎಂ.ಎಸ್. ಮೂಡಿಗೆರೆ	ಅಕ್ಕಿ ಗಿರಣಿ
34.	ಟಿ.ಎ.ಪಿ.ಸಿ.ಎಂ.ಎಸ್. ಕೊಪ್ಪ	ಅಕ್ಕಿ ಗಿರಣಿ
35.	ಟಿ.ಎ.ಪಿ.ಸಿ.ಎಂ.ಎಸ್. ನರಸಿಂಹ ರಾಜಪುರ	ಅಕ್ಕಿ ಗಿರಣಿ ಘಟಕ
36.	ಮೂಡಿಗೆರೆ ಲ್ಯಾಂಪ್ಸ್ ಸ.ಸಂ. ನಿ	ಸೀಗೆಪುಡಿ ಸಂಸ್ಕರಣ ಘಟಕ
37.	ಕೊಪ್ಪ ಲ್ಯಾಂಪ್ಸ್ ಸ.ಸಂ. ನಿ.	ಜೇನು ಸಂಸ್ಕರಣ ಘಟಕ
38.	ಗೋಣಿ ಕೊಪ್ಪಳ ಕಿತ್ತಳೆ ಬೆಳೆಗಾರರ ಸ.ಸಂ. ನಿ	ಕಿತ್ತಳೆ ಸಂಸ್ಕರಣ ಘಟಕ
39.	ಮಡಿಕೇರಿ ಜಿಲ್ಲಾ ತೋಟಗಾರಿಕೆ ಉತ್ಪನ್ನ ಮತ್ತು ಮಾರಾಟ ಸ.ಸಂ. ನಿ	ಹಣ್ಣು ಮತ್ತು ಸಂಸ್ಕರಣ ಘಟಕ
40.	ಕ್ಯಾಂಪ್ಕೊ ಮಂಗಳೂರು	ಚಾಕಲೇಟ್ ಘಟಕ ಪುತ್ತೂರು

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಕರ್ನಾಟಕವು ರಾಷ್ಟ್ರದಲ್ಲಿಯೇ ಪ್ರಪ್ರಥಮ ಬಾರಿಗೆ ಸಹಕಾರಿ ವಲಯದಲ್ಲಿ ಯಶಸ್ವಿನಿ ಸಹಕಾರ ರೈತ ಆರೋಗ್ಯ ಯೋಜನೆಯನ್ನು ಪ್ರಾರಂಭಿಸಿ ಈ ನಿಟ್ಟಿನಲ್ಲಿ ದಾರಿ ತೋರಿದ ಮೊದಲ ರಾಜ್ಯವಾಗಿದೆ.

ಕರ್ನಾಟಕ ವಿಧಾನಸಭೆ
ಸೋಮವಾರ 31ನೇ ಜನವರಿ 2005 ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 53 ನಿಮಿಷಕ್ಕೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1) ಸಂತಾಪ ಸೂಚನೆ

ಅಧ್ಯಕ್ಷರು : ಈಗ ಸಂತಾಪ ಸೂಚನೆ. ಶಿಕ್ಷಣ ತಜ್ಞ ಡಾ: ಹೆಚ್. ನರಸಿಂಹಯ್ಯ ಹಾಗೂ ಕರ್ನಾಟಕ ಕ್ರಿಕೆಟ್ ಸಂಸ್ಥೆಯ ಮಾಜಿ ಕಾರ್ಯದರ್ಶಿ ಶ್ರೀ ಸಿ. ನಾಗರಾಜ್‌ರವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರು, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಡಾ: ಹೆಚ್. ನರಸಿಂಹಯ್ಯ ಅವರು ದಿನಾಂಕ 6ನೇ ಜೂನ್ 1920ರಂದು ಗೌರಿಬಿದನೂರು ತಾಲ್ಲೂಕು, ಹೊಸೂರಿನಲ್ಲಿ ಜನಿಸಿದರು. ಶಿಕ್ಷಣ ತಜ್ಞರಾಗಿದ್ದ ಶ್ರೀಯುತರು ನ್ಯಾಷನಲ್ ಕಾಲೇಜಿನ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿದ್ದು, ಬೆಂಗಳೂರು ವಿಶ್ವವಿದ್ಯಾನಿಲಯದ ಉಪ ಕುಲಪತಿಗಳಾಗಿದ್ದರು. ಅಮೇರಿಕಾದ ಓಹಿಯೋ ಸ್ಟೇಟ್ ವಿಶ್ವವಿದ್ಯಾನಿಲಯದಿಂದ ಅಣುಭೌತ ವಿಜ್ಞಾನದಲ್ಲಿ ಪಿ.ಹೆಚ್.ಡಿ. ಪದವಿಯನ್ನು ಪಡೆದಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಅವರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ, ಸೆರೆಮನೆವಾಸ ಅನುಭವಿಸಿದ್ದರು. ಕರ್ನಾಟಕ ರಾಜ್ಯದ ವಿಜ್ಞಾನ ಪರಿಷತ್ತಿನ ಅಧ್ಯಕ್ಷರಾಗಿ, ನ್ಯಾಷನಲ್ ವಿದ್ಯಾ ಸಂಸ್ಥೆಯ ಅಧ್ಯಕ್ಷರಾಗಿ, ಬೆಂಗಳೂರು ವಿಜ್ಞಾನ ವೇದಿಕೆಯ ಅಧ್ಯಕ್ಷರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದ ಶ್ರೀಯುತರು ಶಿಕ್ಷಣ ತಜ್ಞರಾಗಿ ರಾಜ್ಯದ ಅಭಿವೃದ್ಧಿಗೆ ಅಪಾರವಾಗಿ ದುಡಿದಿದ್ದರು. ಇವರು ನಾಡಿಗೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಭಾರತ ಸರ್ಕಾರವು 1984ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. 1980ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿ ನಾಮಕರಣ ಹೊಂದಿ ಅಪಾರ ಸೇವೆ ಸಲ್ಲಿಸಿರುತ್ತಾರೆ.

ಡಾ: ಹೆಚ್. ನರಸಿಂಹಯ್ಯ ಅವರು ದಿನಾಂಕ 31-1-2005ರಂದು ನಿಧನ ಹೊಂದಿದರು. ಇನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಮಾಜಿ ಕಾರ್ಯದರ್ಶಿಗಳಾಗಿದ್ದ ಸಿ. ನಾಗರಾಜ್‌ರವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕಾರ್ಯದರ್ಶಿಯಾಗಿ 1992ರಿಂದ 1996ರವರೆಗೆ ಸೇವೆ ಸಲ್ಲಿಸಿ, 1978ರಲ್ಲಿ ಕೆ.ಎಸ್.ಸಿ.ಎ. ದ ಕಾರ್ಯದರ್ಶಿಯಾಗಿದ್ದ ಅವರು 1998ರವರೆಗೆ ಅದೇ ಹುದ್ದೆಯಲ್ಲಿದ್ದು, ಕ್ರಿಕೆಟ್ ಮಂಡಳಿಗೆ ಅಪಾರ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ದಿನಾಂಕ 28-1-2005ರಂದು ನಿಧನ ಹೊಂದಿದರು.

ಮೃತರ ಆತ್ಮಕ್ಕೆ ಭಗವಂತ ಶಾಂತಿಯನ್ನು ಕೊಡಲಿ ಎಂದು ಕೋರುತ್ತೇನೆ. ಈಗ ಮಾನ್ಯ ಸಭಾನಾಯಕರು ಮಾತನಾಡುತ್ತಾರೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೇ, ಡಾ: ಹೆಚ್. ನರಸಿಂಹಯ್ಯನವರ ನಿಧನದಿಂದ ಇವತ್ತು ಕರ್ನಾಟಕ ರಾಜ್ಯ ಒಬ್ಬರು ಹಿರಿಯರು, ಶಿಕ್ಷಣ ತಜ್ಞರು, ಪ್ರಗತಿಪರ ವಿಚಾರಧಾರೆಯ ಒಬ್ಬ ಧೀಮಂತ ಹಿರಿಯರನ್ನು ಕಳೆದುಕೊಂಡಂತಾಗಿದೆ. ದಿವಂಗತರ ಬಗ್ಗೆ ನಾವೇನೂ ಹೆಚ್ಚು ಹೇಳಬೇಕಾಗಿಲ್ಲ. ಅವರು ಶಿಕ್ಷಣ ಕ್ಷೇತ್ರದಲ್ಲಿ ಬಹಳಷ್ಟು ಕೆಲಸ ಮಾಡಿರತಕ್ಕಂಥ ವ್ಯಕ್ತಿಗಳಾಗಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ, ಶಿಕ್ಷಣ ಕ್ಷೇತ್ರಕ್ಕೆ, ಅದರಲ್ಲೂ ವಿಶೇಷವಾಗಿ ಬಡ ವಿದ್ಯಾರ್ಥಿಗಳಿಗೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ನ್ಯಾಷನಲ್ ಕಾಲೇಜಿನ ಪ್ರಿನ್ಸಿಪಾಲರಾಗಿ, ಇತರ ಶಿಕ್ಷಣ ಸಂಸ್ಥೆಗಳಲ್ಲಿ ಕೂಡ ಸಲಹೆಗಾರರಾಗಿ ಅವರು ಕೆಲಸ ಮಾಡಿದ್ದಾರೆ. ಅವರ ಒಂದು ದೃಷ್ಟಿಕೋನ ಏನಿತ್ತು ಎಂದರೆ, ಸಮಾಜದಲ್ಲಿರತಕ್ಕಂಥ ಬಡವರ, ಸಾಮಾನ್ಯ ಜನರ ಸಮಸ್ಯೆಗಳ ಬಗ್ಗೆ ಒಂದು ಹೆಚ್ಚಿನ ಕಾಳಜಿಯನ್ನು ಇಟ್ಟುಕೊಂಡಿದ್ದರು. ಅವರು ತಮ್ಮ ಸಾಕಷ್ಟು ಕ್ರಾಂತಿಕಾರಕವಾದಂಥ ವಿಚಾರಧಾರೆ ಮತ್ತು ಪ್ರಗತಿಪರವಾದಂಥ ವಿಚಾರಧಾರೆಗಳ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ಬದಲಾವಣೆಯಾಗಬೇಕು ಎನ್ನತಕ್ಕಂಥ ರೀತಿಯಲ್ಲಿ ರಾಷ್ಟ್ರಕ್ಕೆ, ರಾಜ್ಯಕ್ಕೆ ಒಂದು ಹೆಚ್ಚಿನ ರೀತಿಯಲ್ಲಿ ಸಲಹೆ ಕೊಡತಕ್ಕಂಥ ರೀತಿಯಲ್ಲಿ ಇದ್ದ ಒಬ್ಬ ಶಿಕ್ಷಣ ತಜ್ಞರನ್ನು ಕಳೆದುಕೊಂಡಂತಾಗಿದೆ. ಇತ್ತೀಚಿನ ದಿವಸಗಳಲ್ಲಿ ನಾವು ನಿಟ್ಟೂರು ಶ್ರೀನಿವಾಸರಾವ್‌ರವರನ್ನು ಕಳೆದುಕೊಂಡಿದ್ದೇವೆ. ಕೊಲ್ಲೂರು ಮಲ್ಲಪ್ಪನವರು ನಮ್ಮನ್ನು ಅಗಲಿ ಹೋಗಿದ್ದಾರೆ. ಇಂಥ ಒಂದು ಸಂದರ್ಭದಲ್ಲಿ ಇವತ್ತು ನಾವು ನರಸಿಂಹಯ್ಯನವರನ್ನು ಕಳೆದುಕೊಂಡಿದ್ದೇವೆ. ಇದರಿಂದ ರಾಜ್ಯದ ಜನತೆಗೆ ಅಪಾರವಾದಂಥ ಒಂದು ದು:ಖವಾಗಿದೆ. ಅವರಿಗೆ ಯಾರೂ ಇರಲಿಲ್ಲ. ಅವರು ಒಬ್ಬರೇ ಇದ್ದರು, ಅವರನ್ನು ನೋಡಿಕೊಳ್ಳತಕ್ಕಂಥವರು ಯಾರೂ ಇರಲಿಲ್ಲ. ಅವರು ಅದೇ ಕಾಲೇಜಿನಲ್ಲಿ ಒಂದು ಕೋಣೆಯಲ್ಲಿ ತಮ್ಮ ಪೂರ್ಣ ತುಂಬು ಜೀವನವನ್ನು ಮಾಡಿದ್ದಾರೆ. ಅವರು, ಯಾವ ರೀತಿ ಹೇಳಿದ್ದರೋ, ಅದೇ ರೀತಿ ನಡೆದುಕೊಂಡು ಹೋಗಿದ್ದಾರೆ. ಈ ದೇಶದಲ್ಲಿ, ಹೇಳತಕ್ಕಂಥಾದ್ದಕ್ಕೂ, ನಡೆದುಕೊಳ್ಳತಕ್ಕಂಥಾದ್ದಕ್ಕೂ ಬಹಳಷ್ಟು ವ್ಯತ್ಯಾಸಗಳಿರುವುದನ್ನು ನಾವು ನೋಡುತ್ತಿದ್ದೇವೆ. ಆದರೆ ಹೇಳಿದಂತೆ ನಡೆದುಕೊಂಡಂಥವರು ಅವರು. ಆ ರೀತಿಯಾಗಿ, ಒಬ್ಬ ನಿಷ್ಠಾವಂತ, ಒಬ್ಬ ಮಾರ್ಗದರ್ಶಕರನ್ನು ನಾವು ಕಳೆದುಕೊಂಡಂತಾಗಿದೆ. ಅವರು ತಮ್ಮ ವಿಚಾರಗಳ ಮೂಲಕ ಒಂದು ಹೊಸ ತಿರುವನ್ನೇ ಕೊಟ್ಟಿದ್ದಾರೆ. ಮಠಾಧಿಪತಿಗಳ ಬಗ್ಗೆಯಾಗಲೀ ಅಥವಾ ದೇಶದ ಧಾರ್ಮಿಕ ವಿಚಾರಗಳ ಬಗ್ಗೆಯಾಗಲೀ, ಇವೆಲ್ಲಾ ಮೂಢನಂಬಿಕೆಗಳ ಬಗ್ಗೆ ಅವರು ತಮ್ಮದೇ ಆದಂಥ ವಿಚಾರಧಾರೆಯನ್ನು ಮೂಡಿಸತಕ್ಕಂಥ ದಿಕ್ಕಿನಲ್ಲಿ ಅವರು ಯಶಸ್ವಿಯಾಗಿದ್ದಾರೆ. ಅವರು ವಿಧಾನ ಪರಿಷತ್ತಿನ ಸದಸ್ಯರಾಗಿ ಕೂಡ ಕೆಲಸ ಮಾಡಿದ್ದಾರೆ. ವಿಧಾನ ಪರಿಷತ್ತಿನಲ್ಲೂ ಕೂಡ ಅವರು ರಾಜಕೀಯ, ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟ ಸಾಕಷ್ಟು ಸಮಸ್ಯೆಗಳ ಬಗ್ಗೆ ಬಹಳಷ್ಟು ಪ್ರಸ್ತಾಪವನ್ನೂ ಕೂಡ ಮಾಡಿದ್ದಾರೆ. ಇವತ್ತು ಅವರು ನಮ್ಮ ಜೊತೆಗಿಲ್ಲ. 1980ರಲ್ಲಿ, ದಿವಂಗತ

ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ ನಾನು ನಗರಾಭಿವೃದ್ಧಿ ಸಚಿವನಾಗಿದ್ದೆ. ಅವರಿಂದ ನನಗೆ ಒಂದು ದಿನ ಫೋನ್ ಬಂತು. ಗುಡಿಬಂಡೆಯಲ್ಲಿ ನಮ್ಮದೊಂದು ಜ್ಯೂನಿಯರ್ ಕಾಲೇಜ್ ಇದೆ, ಅಲ್ಲಿಗೆ ಒಂದು ಬೋರ್‌ವೆಲ್ ಹಾಕಿಸಿ ಕೊಡಬೇಕು ಎಂದು ಅವರು ನನಗೆ ಹೇಳಿದರು. ನಾನು ಅಲ್ಲಿಗೆ ಬೋರ್‌ವೆಲ್ ಹಾಕಿಸಿ ಕೊಟ್ಟಾದ ಮೇಲೆ, ಅಲ್ಲಿ ನೀರು ಚೆನ್ನಾಗಿ ಬಂತು ಎಂದು ಅವರು ನನಗೆ ಮತ್ತು ಬೇರೆ ಕೆಲವರಿಗೆ ಹೇಳಿ, ಆ ಕಾಲೇಜಿಗೆ ನನ್ನನ್ನು ಕರೆದುಕೊಂಡು ಹೋಗಿದ್ದರು. ಆ ಕಾಲೇಜಿನಲ್ಲಿ ಯಾವ ರೀತಿಯಾಗಿ ಶಿಕ್ಷಣದ ಬಗ್ಗೆ, ವಿಶೇಷವಾಗಿ ಹಳ್ಳಿ ಪ್ರದೇಶದಲ್ಲಿರತಕ್ಕಂಥ ಜನರ ಬಗ್ಗೆ ಮಾಡತಕ್ಕಂಥ ಕೆಲಸವನ್ನೂ ಕೂಡ ಅವರ ಜೊತೆಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಸಾಕಷ್ಟು ಸಲ ಬಂದಿದ್ದಾರೆ, ಭೇಟಿಯಾಗಿದ್ದಾರೆ, ಅವರು ಇವತ್ತು ನಮ್ಮಲ್ಲಿ ಇಲ್ಲ. ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ಹಾಗೂ floor leaders ಜೊತೆಗೆ ನಾನು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಮಾತನಾಡಿದ್ದೇವೆ. ಇಂಥ ಒಬ್ಬ ಚಿಂತಕ ಮತ್ತು ಕರ್ನಾಟಕಕ್ಕೆ ಏನು ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ ಅವರು ನಮ್ಮನ್ನು ಅಗಲಿ ಹೋಗಿದ್ದಾರೆ. ಅದಕ್ಕೆ ವಿಶೇಷವಾಗಿ ಸದನದಲ್ಲಿ ಇವತ್ತಿನ ದಿವಸ ಬೇರೆ ಚರ್ಚೆಗೆ ಅವಕಾಶ ಕೊಡಲಾರದೆ ಅವರ ಸಂತಾಪ ಸೂಚನೆಯನ್ನು ಕೊಟ್ಟು ಇವತ್ತು ಬಿಡುವು ಮಾಡಿಕೊಡಬೇಕೆನ್ನುವ ಪ್ರಸ್ತಾಪ ಇದೆ. ಅದಕ್ಕೆ ಎಲ್ಲರೂ ಕೂಡ ಒಪ್ಪಿದ್ದಾರೆ. ಇದು ಅವರ ಗೌರವಾರ್ಥವಾಗಿ ಮಾಡುತ್ತಿದ್ದೇವೆ, ಇದಕ್ಕಿಂತ ಹೆಚ್ಚಿಗೆ ಏನು ಮಾಡಲಿಕ್ಕಾಗುವುದಿಲ್ಲ. ಅವರ selfless service ಏನಿದೆ ಆ ಸೇವೆಗಾಗಿ, ಅವರ ನೆನಪಿಗಾಗಿ ಇವತ್ತಿನ ದಿವಸ ನಾವು ಸಭೆಯನ್ನು ಮುಂದಕ್ಕೆ ಹಾಕಬೇಕೆಂದಿದ್ದೇವೆ. ಅದೇ ರೀತಿಯಾಗಿ 1978ರಿಂದ ಕ್ರಿಕೆಟ್‌ನಲ್ಲಿ ಶ್ರೀ ಸಿ. ನಾಗರಾಜ್‌ರವರು ಬಹಳ ಸೇವೆ ಸಲ್ಲಿಸಿದ್ದಾರೆ, ಬೆಂಗಳೂರಿನಲ್ಲಿ ಕ್ರಿಕೆಟ್ ಟೆಸ್ಟ್ ಪಂದ್ಯ ನಡೆಯುವಂತಾಗಲು ಅವರೇ ಕಾರಣಕರ್ತರು. 1978 ರಿಂದ 1998ರವರೆಗೆ ಅವರು ಈ ಕ್ರಿಕೆಟ್ ಬಗ್ಗೆ ಹೆಚ್ಚಿನ ಆಸಕ್ತಿವಹಿಸಿ, ಸ್ಟೇಡಿಯಂ ಆಗಬೇಕಾದರೆ ಅವರೇ ಕಾರಣಕರ್ತರು. ಅವರೂ ಕೂಡ ನಮ್ಮನ್ನು ಆಗಲಿ ಹೋಗಿದ್ದಾರೆ. ಜೀವನದಲ್ಲಿ ಒಳ್ಳೆಯ ಕೆಲಸ ಮಾಡುತ್ತಾರೋ ಅವರಿಗೆ ಜೀವನದಲ್ಲಿ ಕೂಡ ತೊಂದರೆ ಬರುತ್ತದೆ. ಅದರಂತೆ ಅವರಿಗೆ ಏನು ತೊಂದರೆ ಎಂದರೆ ಅವರನ್ನೇ ಆ ಸಂಸ್ಥೆಯಿಂದ ಹೊರಗೆ ಹಾಕತಕ್ಕಂಥ ಪ್ರಯತ್ನವಾಯಿತು. ಆವಾಗ ಶ್ರೀ ವಾಟಾಳ್ ನಾಗರಾಜ್‌ರವರು, ನಮ್ಮ ಶ್ರೀ ರಮೇಶ್‌ಕುಮಾರ್‌ರವರು ಬಂದರು. ಏನ್ರೀ, ಯಾರು ಅಪಾರ ಸೇವೆ ಸಲ್ಲಿಸಿದ್ದಾರೆ ಅವರಿಗೆ ಈ ತರಹ ಆಗಿದೆ ಎಂದು ಹೇಳಿದಾಗ, ನಾನು ಮತ್ತು ಶ್ರೀ ಎಂ.ಪಿ. ಪ್ರಕಾಶ್‌ರವರು ಸೇರಿ ಅಲ್ಲಿಯ ಶ್ರೀ ಬ್ರಿಜೇಶ್ ಪಾಟೀಲರನ್ನು ಕರೆದೆವು. ಆಗ ನಮ್ಮ ಶ್ರೀ ಸಿಂಧ್ಯಾರವರೂ ಸಹ ಇದ್ದರು, ಅವರು ಅವರ ಊರಿನವರು. ನಾವೆಲ್ಲಾ ಅವರನ್ನು ಕರೆಸಿ ಮಾತನಾಡಿ, 'ಈ ತರಹ ಅಪಮಾನ ಅವರಿಗೆ ಮಾಡಬಾರದು, ಬೇರೆ ರೀತಿಯಲ್ಲಿ ಅವರಿಗೆ

ಸೇವೆ ಸಿಗಲಿಲ್ಲವೆಂದು ಈ ರೀತಿಯಾಗಿ ಅನ್ಯಾಯವಾಗಬಾರದು, ವಾದವಿವಾದಕ್ಕೆ ಅವಕಾಶವಿಲ್ಲ, ಇವತ್ತು ಅವರು ಸೇವೆ ಸಲ್ಲಿಸಿದ್ದಾರೆ, ಈ ಕ್ರಿಕೆಟ್ ಸ್ಟೇಡಿಯಂ ಬರತಕ್ಕಂಥದ್ದರಲ್ಲಿ ಹೆಚ್ಚಿನ ಅವರ ಸೇವೆ ಇದೆ. ಅಂಥವರಿಗೆ ಇಂಥ ಒಂದು ಅಪಮಾನವಾಗಬಾರದು, ಅವರಿಗೆ ಮರ್ಯಾದೆ ಕೊಡಬೇಕೆಂದು ನಾನು ನನ್ನ ಚೇಂಬರ್‌ನಲ್ಲಿ ಕರೆಸಿ ಮಾತನಾಡಿದ್ದೇವೆ. ಆ ಕ್ಷಣ ಅವರಿಗೆ ಜೀವನದಲ್ಲಿ ತೃಪ್ತಿ ಕೊಟ್ಟಿದೆ. ನಾವು ಮಾನ್ಯ ಸಿಂಧ್ಯಾರವರು, ಪ್ರಕಾಶ್‌ರವರು, ರಮೇಶ್‌ಕುಮಾರ್‌ರವರು ಮಾತನಾಡಿ ಅವರಿಗೆ ಏನು ಒಂದು ತರಹ ಮುಜುಗರ, ತೊಂದರೆಯಾಗಿದೆ ಅದು ಆಗಬಾರದೆನ್ನತಕ್ಕಂಥ ಸರ್ಕಾರದ ಅಭಿಪ್ರಾಯ ತಿಳಿಸಿದ್ದೆವು. ಅವರೂ ಕೂಡ ಇಂದು ನಮ್ಮನ್ನು ಅಗಲಿ ಹೋಗಿದ್ದಾರೆ. ಅದಕ್ಕೆ ಅವರಿಗೂ ಕೂಡ ತಾವೇನು ಸಂತಾಪ ಸೂಚನೆ ಮಂಡಿಸಿದ್ದೀರಿ, ಅದರ ಬಗ್ಗೆ ನಾನು ಅನುಮೋದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ. ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇವತ್ತು ಸನ್ಮಾನ್ಯ ಸಭಾಧ್ಯಕ್ಷರು, ಸಭಾನಾಯಕರು ಯಾವ ಸಂತಾಪ ಸೂಚನೆಯನ್ನು ತಂದು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ನಾನು ಧ್ವನಿಗೂಡಿಸುತ್ತಾ, ಸರಳ ಸಜ್ಜನಿಕೆಯ ವ್ಯಕ್ತಿತ್ವವನ್ನು ಹೊಂದಿದ್ದಂಥ, ಪದ್ಮಭೂಷಣ ಪ್ರಶಸ್ತಿಯನ್ನು ಪಡೆದರೆಂದರೆ ಆ ಪದ್ಮಭೂಷಣ ಪ್ರಶಸ್ತಿಗೆ ಒಂದು ಗೌರವ ತಂದುಕೊಟ್ಟ ವ್ಯಕ್ತಿಯಾದಂಥ ಡಾ: ಹೆಚ್. ನರಸಿಂಹಯ್ಯನವರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಶಿಕ್ಷಣ ಕ್ಷೇತ್ರದಲ್ಲಿ ಅವರ ಸಾಧನೆ ಅಪರೂಪವಾದದ್ದು. ಬಹುಶ: ನಿಜವಾದಂಥ ಒಬ್ಬ ಗಾಂಧಿವಾದಿಯನ್ನು ಕಳೆದುಕೊಂಡಿದ್ದೇವೆಂದು ಹೇಳಬಹುದು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಅವರ ಪಾತ್ರ ಇವತ್ತಿನ ಯುವ ಪೀಳಿಗೆಗೆ ಒಂದು ಮಾರ್ಗದರ್ಶನ ಆಗುವ ರೀತಿಯಲ್ಲಿ ಅವರು ಅವತ್ತು ಆ ಹೋರಾಟದಲ್ಲಿ ಪಾಲ್ಗೊಂಡಿದ್ದರು. ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಅವರು ಮಾಡಿದಂಥ ಕೆಲಸಗಳನ್ನು ಮಾತ್ಯಾರೂ ಮಾಡುವುದಕ್ಕೆ ಆಗದಿರುವ ರೀತಿಯಲ್ಲಿ ದೊಡ್ಡ ಸಾಧನೆಯನ್ನು ಮಾಡಿ ತೋರಿಸಿದ್ದಾರೆ. ವಿಧಾನ ಪರಿಷತ್ತಿನ ಸದಸ್ಯರಾಗಿ ಅಲ್ಲಿರುವಂಥ ಶಾಸಕರಿಗೆ ಸದನದಲ್ಲಿ ಒಂದು ಮಾರ್ಗದರ್ಶನ ಮಾಡುವಂಥ ಕೆಲಸವನ್ನೂ ಸಹ ಅವರು ಮಾಡಿದ್ದಾರೆ. ಈ ಕನ್ನಡಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕನ್ನಡಕ್ಕೆ ಹೆಚ್ಚು ಹಿರಿಮೆಯನ್ನು, ಹೆಚ್ಚು ಒತ್ತನ್ನು ಕೊಡುವುದಕ್ಕೆ ಅವರು ತಮ್ಮದೇ ಆದಂಥ ಪಾತ್ರವನ್ನು ವಹಿಸಿದ್ದಾರೆ. ಇಂತಹ ಹಿರಿಯ ವ್ಯಕ್ತಿಗಳನ್ನು ಕಳೆದುಕೊಂಡು ಕನ್ನಡ ನಾಡಿನ ಜನತೆ ನಾವು ಬಡವಾಗಿದ್ದೇವೆಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಅದೇ ರೀತಿ ಶ್ರೀ ನಾಗರಾಜ್‌ರವರು ಇಲ್ಲಿ ಭಾರತ ಕ್ರಿಕೆಟ್ ಮಂಡಳಿಯ ಕಾರ್ಯದರ್ಶಿಯಾಗಿ, ಕರ್ನಾಟಕ ಕ್ರಿಕೆಟ್ ಮಂಡಳಿಯ ಅಧ್ಯಕ್ಷರಾಗಿ ಮತ್ತು ಅವರ ಸಾಕ್ಷಿ ಎಂದರೆ ಚಿನ್ನಸ್ವಾಮಿ ಕ್ರೀಡಾಂಗಣ. ಬಹುಶ: ಅವರ ದೂರದೃಷ್ಟಿಯಿಂದ, ಬಹುಶ: ಇಡೀ ದೇಶದಲ್ಲಿಯೇ ಮಾದರಿಯಾದಂಥ ಒಂದು ಕ್ರೀಡಾಂಗಣವನ್ನು ಕಟ್ಟಿಸುವುದರಲ್ಲಿ

ಯಶಸ್ವಿಯಾಗಿದ್ದಾರೆ. ಈ ಒಂದು ದಿವಸದ ಕ್ರಿಕೆಟ್ ಮ್ಯಾಚ್ ಪ್ರಾರಂಭವಾದದ್ದು ಅವರ ಕಾಲದಲ್ಲಿ. ಅಂಥ ಇಬ್ಬರು ಹಿರಿಯ ವ್ಯಕ್ತಿಗಳನ್ನು ನಾವು ಕಳೆದುಕೊಂಡು, ವಿಶೇಷವಾಗಿ ಡಾ: ನರಸಿಂಹಯ್ಯ ನವರನ್ನು ಕಳೆದುಕೊಂಡು ಕನ್ನಡನಾಡಿನಲ್ಲಿರುವ ನಾವು ತಬ್ಬಲಿಯಾಗಿದ್ದೇವೆಂದು ನಾನು ಭಾವಿಸಿದ್ದೇನೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ನನ್ನ ಪಕ್ಷದ ಪರವಾಗಿ ನನ್ನ ಶ್ರದ್ಧಾಂಜಲಿಯನ್ನು ನಾನು ಅವರಿಗೆ ಅರ್ಪಿಸುತ್ತೇನೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ) : ಮಾನ್ಯ ಸಭಾಧ್ಯಕ್ಷರೆ, ಡಾ: ಹೆಚ್. ನರಸಿಂಹಯ್ಯ ನವರು ಕರ್ನಾಟಕ ರಾಜ್ಯಕ್ಕೆ ಶಿಕ್ಷಣ ಕ್ಷೇತ್ರದಲ್ಲಿ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಅಪಾರವಾದಂಥ ಕೊಡುಗೆಯನ್ನು ಕೊಟ್ಟಿರತಕ್ಕಂಥ ಒಬ್ಬ ಮಹಾನ್ ವ್ಯಕ್ತಿ ಎಂದು ನಾನು ಇವತ್ತು ನೆನೆದುಕೊಳ್ಳುತ್ತಿದ್ದೇನೆ. ಅವರು ಸ್ವಾತಂತ್ರ್ಯ ಹೋರಾಟಗಾರರಾಗಿ, ಕ್ವಿಟ್ ಇಂಡಿಯಾ ಮೂವ್‌ಮೆಂಟ್‌ನಲ್ಲಿ ಭಾಗಿಯಾಗಿ ಈ ದೇಶದ ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡಿದಂಥವರು. ಎಲ್ಲಕ್ಕಿಂತ ಮುಖ್ಯವಾಗಿ ಇಡೀ ಅವರ ಬದುಕಿನ ಉದ್ದಕ್ಕೆ ಸಾಮಾಜಿಕ ಕಳಕಳಿಯನ್ನಿಟ್ಟುಕೊಂಡು ಅದಕ್ಕೆ ಬದ್ಧರಾಗಿ ಸಮಾಜದಲ್ಲಿರತಕ್ಕಂಥ ಮೌಢ್ಯಗಳ ವಿರುದ್ಧ ಹೋರಾಟವನ್ನು ಮಾಡಿದಂಥ ಒಬ್ಬ ವೈಚಾರಿಕತೆಯನ್ನು ರೂಢಿಸಿಕೊಂಡು ಬಂದಂಥ ವ್ಯಕ್ತಿಯೆಂದು ಇವತ್ತು ನೆನಪು ಮಾಡಿಕೊಳ್ಳಬೇಕಾಗುತ್ತದೆ. ವೈಚಾರಿಕತೆಯ ಬಗ್ಗೆ ಮತ್ತು ಮೌಢ್ಯಗಳ ವಿರುದ್ಧ ಅನೇಕ ಜನರು ಮಾತನಾಡುತ್ತಾರೆ, ಆದರೆ ನಿಜವಾಗಿ ವೈಚಾರಿಕತೆಯನ್ನು ತಮ್ಮ ಬದುಕಿನಲ್ಲಿ ರೂಢಿಸಿಕೊಂಡು ಅದರಂತೆ ತಮ್ಮ ಬದುಕಿನಲ್ಲೂ ನಡೆದುಕೊಂಡಿರತಕ್ಕಂಥ ವ್ಯಕ್ತಿ ಎಂದು ನಾವೆಲ್ಲಾ ಅರಿತುಕೊಂಡಿದ್ದೇವೆ. 'ನೀವು ಬಂದು ಉದ್ಘಾಟನೆ ಮಾಡಬೇಕೆಂದು' ಕಳೆದ ದಸರಾ ಮಹೋತ್ಸವಕ್ಕೆ ಅವರನ್ನು ಆಹ್ವಾನ ಮಾಡಿದ್ದೆ. ವೈಚಾರಿಕತೆ ಬಗ್ಗೆ ಬಹಳ ಮಾತನಾಡುತ್ತಾರೆ, ಮೌಢ್ಯಗಳ ಬಗ್ಗೆ ಮಾತನಾಡುತ್ತಾರೆ, ಆದರೆ ದಸರಾ ಮಹೋತ್ಸವವನ್ನು ಉದ್ಘಾಟನೆ ಮಾಡುವುದಕ್ಕೆ ಡಾ: ನರಸಿಂಹಯ್ಯನವರು ಹೇಗೆ ಒಪ್ಪಿಕೊಳ್ಳುತ್ತಾರೆಂದು ಸಾರ್ವಜನಿಕವಾಗಿ ಸ್ವಲ್ಪ ಚರ್ಚೆಗಳೂ ಸಹ ಆದವು. ಪೂಜೆಗೆ ಹೇಗೆ ಒಪ್ಪಿಕೊಂಡಿದ್ದಾರೆಂದು ಕೆಲವು ವಿಚಾರವಾದಿಗಳು ಬಹಳ ಟೀಕೆಗಳನ್ನು ಮಾಡಿದರು. ಆ ಸಂದರ್ಭದಲ್ಲಿ ಅವರು ಆ ವಿಚಾರವಾದಿಗಳಿಗೆಲ್ಲಾ ತಕ್ಕ ಉತ್ತರವನ್ನು ಕೊಟ್ಟಿದ್ದರು. ಒಂದು ಪಾರಂಪರಿಕ ಕಾರ್ಯಕ್ರಮಕ್ಕೆ ಒಂದು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ನಾನು ಭಾಗಿಯಾಗುತ್ತಿದ್ದೇನೆಂದೂ, ದಸರಾ ಮಹೋತ್ಸವವು ಒಂದು ಪಾರಂಪರಿಕ ಕಾರ್ಯಕ್ರಮ, ಒಂದು ಐತಿಹಾಸಿಕವಾದಂಥ ಕಾರ್ಯಕ್ರಮ ಮತ್ತು ಅಲ್ಲಿ ಒಂದು ಸಾಂಸ್ಕೃತಿಕ ಕಾರ್ಯಕ್ರಮವಿರುವುದರಿಂದ ನಾನು ಭಾಗಿಯಾಗುತ್ತಿದ್ದೇನೆ, ನಾನು ಬದುಕಿನಲ್ಲಿ ಯಾವತ್ತೂ ಕೂಡ ವಿಚಾರವಾಹಿನಿಯಲ್ಲಿ ಎಲ್ಲೂ ಕೂಡ ನಾನು ದಾರಿತಪ್ಪಿಲ್ಲ ಎನ್ನುವ ಮಾತನ್ನು ಹೇಳಿ ಬೇರೆಯವರಿಗೆಲ್ಲ ಬಾಯಿ ಮುಚ್ಚಿಸತಕ್ಕಂಥ ಕೆಲಸವನ್ನು ಮಾಡಿದರು. ಹಾಗಾಗಿ ಈ ಸಲ ದಸರಾ ಮಹೋತ್ಸವಕ್ಕೆ 'ನಾನು ಬರುತ್ತೇನೆ, ನನಗೆ ಈ ತರಹ ಟೀಕೆ ಬರಬಹುದು, ಆದರೂ ಕೂಡ ನಾನು

ಬಂದೇ ಬರುತ್ತೇನೆ, ಇದೊಂದು ಒಳ್ಳೆಯ ಕೆಲಸವೆಂದು' ಒಂದು ಉದ್ಘಾಟನೆ ಮಾಡತಕ್ಕಂಥ ಕೆಲಸವನ್ನು ಮಾಡಿದರು. ಬಹುಶ: ಈ ಉದ್ಘಾಟನೆಯನ್ನು 4 ತಿಂಗಳ ಹಿಂದೆ ಮಾಡಿದ್ದರು. ಈ 4 ತಿಂಗಳಲ್ಲಿ ಅವರು ನಿಧನರಾಗಿ ನಮ್ಮಿಂದ ದೂರವಾದರಲ್ಲಾ ಎನ್ನುವುದು ಬಹಳ ನೋವಿನ ಸಂಗತಿ. ಇವರ ಬಗ್ಗೆ ಅಪಾರವಾದ ಗೌರವವನ್ನು ನಾನು ಇಟ್ಟುಕೊಂಡಿದ್ದೇನೆ. ಒಬ್ಬ ಶಿಕ್ಷಣ ತಜ್ಞ, ಶಿಕ್ಷಣ ಕ್ಷೇತ್ರಕ್ಕೆ ಅಪಾರವಾದಂಥ ಕೊಡುಗೆಯನ್ನು ಕೊಟ್ಟಿದ್ದಾರೆ ಮತ್ತು ಎಲ್ಲಾ ಹಿಂದುಳಿದವರ ಬಗ್ಗೆ, ದಲಿತರ ಬಗ್ಗೆ, ಶೋಷಣೆಗೆ ಒಳಪಟ್ಟಿರುವವರ ಬಗ್ಗೆ ಅವರಿಗೆ ಸಾಮಾಜಿಕ ನ್ಯಾಯ ಸಿಗಬೇಕೆನ್ನತಕ್ಕಂಥ ವಿಚಾರವನ್ನು ಯಾವತ್ತೂ ಕೂಡ ಇಟ್ಟುಕೊಂಡು ಆ ದಿಕ್ಕಿನಲ್ಲಿ ಕೆಲಸವನ್ನು ಮಾಡಿದಂಥವರು. ಅನೇಕ ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿರುವ ಹಾಗೆ, ಮೌಢ್ಯಗಳನ್ನು ಯಾರು ಪ್ರತಿಪಾದನೆ ಮಾಡುತ್ತಿದ್ದರು, ಪವಾಡಗಳನ್ನು ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದವರಿಗೆ ಬಹಿರಂಗವಾಗಿ ಸವಾಲು ಹಾಕಿ, ಬಹುಶ: ಸಾರ್ವಜನಿಕ ದೃಷ್ಟಿಯಲ್ಲಿ ಅನೇಕ ಜನ ಟೀಕೆ ಮಾಡಿರಬಹುದು. ಯಾರು ಮೌಢ್ಯಗಳನ್ನು ಒಪ್ಪಿಕೊಂಡಿರುವವರು, ಮೌಢ್ಯಗಳನ್ನು ಪಾಲನೆ ಮಾಡುತ್ತಿರುವ ಬಹಳ ಜನ ವಿಜ್ಞಾನಿಗಳು ಇದ್ದಾರೆ, ವಿಜ್ಞಾನ ಓದಿದವರು ಇದ್ದಾರೆ, ಭೌತಶಾಸ್ತ್ರ ವಿಜ್ಞಾನಿಗಳು ಇರಬಹುದು, ಆದರೆ ವಿಜ್ಞಾನ ಹೇಳುತ್ತಾ ಹೇಳುತ್ತಾ ಜೊತೆ ಜೊತೆಯಲ್ಲೆ ಬದುಕಿನಲ್ಲಿ ಮೌಢ್ಯಗಳನ್ನೂ ಕೂಡ ಆಚರಣೆ ಮಾಡುತ್ತಿರುತ್ತಾರೆ. ಆದರೆ ಯಾವತ್ತೂ ಕೂಡ ವೈಜ್ಞಾನಿಕ ದೃಷ್ಟಿಕೋನ, ವೈಚಾರಿಕ ಮನೋಭಾವಕ್ಕೆ ಬದ್ಧರಾಗಿ ನಡೆದುಕೊಂಡಿರುವವರು, ಆ ಒಂದು ಬದ್ಧತೆ ಇದ್ದದ್ದರಿಂದಲೇ ಪವಾಡಗಳನ್ನು ಮಾಡುವ ಅನೇಕ ಜನರಿಗೆ ಸವಾಲುಗಳನ್ನು ಎಸೆದು, ನನಗೆ ಅದನ್ನು convince ಮಾಡಿ ಎಂದು ಹೇಳುವ ಎದೆಗಾರಿಕೆಯನ್ನು ತೋರಿಸುತ್ತಿದ್ದರು. ಅದರಲ್ಲಿ ಅವರಿಗೆ ಬಹಳ ಸ್ಪಷ್ಟವಾದ ನಂಬಿಕೆ ಇತ್ತು, ಈ ಪವಾಡಗಳಲ್ಲಿ, ಮೌಢ್ಯಗಳಲ್ಲಿ, ಕಂದಾಚಾರಗಳಲ್ಲಿ ಏನೂ ಸತ್ಯವಿಲ್ಲ, ಅದರಲ್ಲಿ ಯಾವುದೇ ಮಾನವೀಯ ಮೌಲ್ಯಗಳಿಲ್ಲ, ಅದು ಜನರನ್ನು ದಾರಿ ತಪ್ಪಿಸತಕ್ಕಂಥ ಕೆಲಸ, ಸಮಾಜವನ್ನು ದಾರಿ ತಪ್ಪಿಸತಕ್ಕಂಥ ಕೆಲಸ ಎಂಬುದರಲ್ಲಿ ಬಹಳ ಸ್ಪಷ್ಟವಾಗಿ ನಂಬಿಕೆಯನ್ನು ಇಟ್ಟುಕೊಂಡಿದ್ದರು. ಅವರು ಜೀವನದುದ್ದಕ್ಕೂ ಅದೇ ರೀತಿ ಬದುಕಿದರು. ಆ ಕಾರಣದಿಂದ ಇಡೀ ಸಮಾಜಕ್ಕೆ ಅವರ ವಿಚಾರಗಳು ಮಾರ್ಗದರ್ಶನವಾಗುತ್ತವೆ, ಎಲ್ಲರಿಗೂ ಕೂಡ ಅವರು ಮಾರ್ಗದರ್ಶಕರಾಗಿದ್ದರು ಎನ್ನುವುದನ್ನು ನಾವು ನೆನಸಿಕೊಳ್ಳಬೇಕಾಗುತ್ತದೆ. ಅಂತಹ ಒಬ್ಬ ತುಂಬು ಜೀವನವನ್ನು ಮಾಡಿದಂತಹ ಒಬ್ಬ ವ್ಯಕ್ತಿ ಇವತ್ತು ನಮ್ಮನ್ನು ಅಗಲಿದ್ದಾರೆ. ಈ ರಾಜ್ಯಕ್ಕೆ, ನಮ್ಮ ಸಮಾಜಕ್ಕೆ ಬಹಳಷ್ಟು ತುಂಬಲಾರದ ನಷ್ಟವಾಗಿದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ, ಇವರು ಮದುವೆಯನ್ನೇ ಆಗಿರಲಿಲ್ಲ. ಯಾವತ್ತೂ ಸ್ವಂತ ಆಸೆಯನ್ನು ಇಟ್ಟುಕೊಂಡವರೇ ಅಲ್ಲ. ಅವರ ಮನೆ, ಮಕ್ಕಳು, ಮರಿ ಯಾವುದಕ್ಕೂ ಬದುಕಿನಲ್ಲಿ ಇಟ್ಟುಕೊಂಡವರಲ್ಲ. ನಿಸ್ವಾರ್ಥ ಜೀವನವನ್ನು ಮಾಡಿ ಇಡೀ ಸಮಾಜಕ್ಕೆ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಂತಹವರು. ಆ ಕಾರಣಕ್ಕೋಸ್ಕರವೇ ಇವತ್ತು ಅವರಿಗೆ ಗೌರವ ತೋರಿಸಲಿಕ್ಕೋಸ್ಕರವಾಗಿ ಈ

ಸದನವನ್ನು ಇವತ್ತು ಒಂದು ದಿನ ಮುಂದಕ್ಕೆ ಹಾಕಬೇಕೆನ್ನುವ ನಿರ್ಣಯ ಮಾಡಲಾಗಿದೆ. ಬಹುಶ: ಅದೊಂದು ಈ ಸದನ ತೋರಿಸತಕ್ಕಂಥ ದೊಡ್ಡ ಗೌರವ ಎಂದು ಹೇಳಿ ಭಾವಿಸಿಕೊಳ್ಳುತ್ತೇನೆ. ಆದುದರಿಂದ ವಿಶೇಷ ಸಂದರ್ಭವೆಂದು ತಿಳಿದು, ಅವರ ಆತ್ಮಕ್ಕೆ ಶಾಂತಿ ದೊರಕಲಿ, ಅವರ ಕುಟುಂಬ ವರ್ಗದವರಿಗೆ ಅವರ ಸಾವಿರ ದು:ಖ ಭರಿಸತಕ್ಕಂಥ ಶಕ್ತಿಯನ್ನು ಯಾರೇ ಇರಲಿ, ಯಾರಾದರೂ ಇರಬಹುದು, ನಾವೇ ಇಡೀ ಸಮಾಜವೇ ಅವರ ಕುಟುಂಬವರ್ಗವೆಂದು ಭಾವಿಸಿಕೊಂಡು, ಇಡೀ ಸಮುದಾಯವೇ ಅವರ ಕುಟುಂಬವರ್ಗ ಎಂದು ಹೇಳಿ, ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಹೇಳಿ, ಅವರ ನಿಧನದಿಂದ ಆಗಿರುವ ನಷ್ಟವನ್ನು ಭರಿಸುವ ಶಕ್ತಿ ಅವರ ಕುಟುಂಬವರ್ಗದವರಿಗೆ ಬರಲಿ ಎಂದು ಆಶಿಸಿ, ನಿಮ್ಮ ಜೊತೆಯಲ್ಲಿ ಸಂತಾಪ ಸೂಚನೆಯನ್ನು ಅನುಮೋದನೆ ಮಾಡುತ್ತಿದ್ದೇನೆ. ಜೊತೆಗೆ ಸಿ. ನಾಗರಾಜ್ ಅವರು ಕರ್ನಾಟಕದಲ್ಲಿ ಕ್ರಿಕೆಟ್ ಬೆಳವಣಿಗೆಗಾಗಿ ಅಪಾರವಾದ ಕೆಲಸ ಮಾಡಿದಂತಹವರು. 20 ವರ್ಷಗಳ ಕಾಲ ಕರ್ನಾಟಕ ಕ್ರಿಕೆಟ್ ಸಂಸ್ಥೆಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರು. ಅನೇಕ ಅಧ್ಯಕ್ಷರ ಕೈಕೆಳಗೆ ಅವರು ಕೆಲಸ ಮಾಡಿದ್ದರು. ಆದರೆ ನೇರವಾಗಿ ಅಲ್ಲಿಯ ಎಲ್ಲಾ ಕೆಲಸಗಳನ್ನು ಮಾಡಿಸಿದವರಾಗಿದ್ದಾರೆ. ರಾಜ್ಯ ಸರ್ಕಾರದಿಂದ ಆ ಜಾಗವನ್ನು ಪಡೆದುಕೊಂಡು, ಇವತ್ತೇನು ಆ ಸ್ಟೇಡಿಯಂ ಇದೆಯಲ್ಲಾ, ಆ ಸ್ಟೇಡಿಯಂ ಬರಲಿಕ್ಕೆ, ಅದೊಂದು ಟೆಸ್ಟ್ ಕೇಂದ್ರವಾಗಲಿಕ್ಕೆ, ಒನ್‌ಡೇ ಮ್ಯಾಚ್ ನಡೆಯಲಿಕ್ಕೆ ನಾಗರಾಜ್‌ರವರು ಕಾರಣಕರ್ತರೆಂದು ಹೇಳಿದರೆ ಅದು ಅತಿಶಯೋಕ್ತಿ ಯಾಗಲಾರದು ಎಂಬುದು ನನ್ನ ಭಾವನೆ. ಬರೀ ಕರ್ನಾಟಕ ಕ್ರಿಕೆಟ್ ಅಷ್ಟೇ ಅಲ್ಲ, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯಲ್ಲೂ ಕೂಡ ಎರಡು ವರ್ಷಗಳ ಕಾಲ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರು. ಕೊನೆಗೆ ಅಲ್ಲಿ ಸರ್ಕಾರ ಜಮೀನನ್ನೆಲ್ಲಾ ಕ್ರಿಕೆಟ್ ಸ್ಟೇಡಿಯಂಗೆ ಕೊಡಬೇಕಾದರೆ, ಇನ್ನೊಂದು ಸ್ವಲ್ಪ ಸ್ವಿಮ್ಮಿಂಗ್ ಪೂಲ್ ಇತ್ಯಾದಿ ಜಾಗವೆಲ್ಲಾ ಉಳಿದಿತ್ತು. ಅವರು ಆ ಬಗ್ಗೆ ಸರ್ಕಾರದ ಜೊತೆಗೆ ಮಾತನಾಡಿ, ಆ ಜಾಗವನ್ನು ಪಡೆದುಕೊಳ್ಳಲು ಆಜ್ಞೆಯಾಗುವವರೆಗೆ ನಿರಂತರ ಪ್ರಯತ್ನ ಮಾಡಿ ಯಶಸ್ವಿಯಾದರು. ಕರ್ನಾಟಕ ಕ್ರಿಕೆಟ್‌ಗೆ ಅವರು ಅಪಾರವಾದ ಕೊಡುಗೆಯನ್ನು ಸಲ್ಲಿಸಿದ್ದಾರೆ. ಹಾಗಾಗಿ ಕ್ರಿಕೆಟ್ ಕ್ಷೇತ್ರಕ್ಕೆ ಮತ್ತು ರಾಜ್ಯಕ್ಕೆ ಅವರ ಸಾವಿನಿಂದ ನಷ್ಟವಾಗಿದೆ ಎಂದು ಹೇಳಿ, ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ, ಅವರ ಕುಟುಂಬ ವರ್ಗದವರಿಗೆ ಅವರ ಸಾವಿನ ದು:ಖವನ್ನು ಭರಿಸುವ ಶಕ್ತಿ ದೊರಕಲೆಂದು ನಾನು ಪ್ರಾರ್ಥಿಸಿ, ಈ ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ. **ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ)** : ಮಾನ್ಯ ಅಧ್ಯಕ್ಷರೇ, ಮಾನ್ಯ ನರಸಿಂಹಯ್ಯನವರು ಇವತ್ತೇನೆ ಕಣ್ಮರೆಯಾಗಿದ್ದಾರೆ, ಅವರಿಗೆ ನಾನೂ ಕೂಡ ನನ್ನ ಪರವಾಗಿ ಮತ್ತು ನನ್ನ ಪಕ್ಷದ ಪರವಾಗಿ ಶ್ರದ್ಧಾಂಜಲಿಗಳನ್ನು ಅರ್ಪಿಸುತ್ತೇನೆ. ಅವರ ಸೇವೆಯನ್ನು ನಾವ್ಯಾರೂ ಯಾವತ್ತೂ ಮರೆಯಲಿಕ್ಕಾಗುವುದಿಲ್ಲ. ಅದರಲ್ಲೂ

ನ್ಯಾಷನಲ್ ಹೈಸ್ಕೂಲ್, ನ್ಯಾಷನಲ್ ಕಾಲೇಜುಗಳನ್ನು ಅವರು ಕಟ್ಟಬೇಕಾದರೆ ಪಟ್ಟ ಶ್ರಮ ಮತ್ತು ವಿದ್ಯಾರ್ಥಿಗಳನ್ನು ಅವರೇ ಸ್ವಂತ ಇಟ್ಟುಕೊಂಡು, ಓದಿಸುತ್ತಿದ್ದಂತಹ ಜೀವನವನ್ನು ಯೋಚನೆ ಮಾಡಿದರೆ, ಬಹುಶ: ಇಡೀ ನಾಡೇ ನನ್ನದು, ಕರ್ನಾಟಕ ರಾಜ್ಯವೇ ನನ್ನದು ಎಂದು ಹೇಳಿ ಬದುಕಿದ್ದಂತಹವರು. ಅಂತಹವರು ಇವತ್ತು ನಮ್ಮ ಮಧ್ಯೆ ಇಲ್ಲ. ಈ ನಾಡು ಬರಿದಾಯಿತು ಎಂದು ಹೇಳುತ್ತಾ, ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ ಹಾಗೆ, ದೇವರು, ಸಂಪ್ರದಾಯ, ಮೂಢನಂಬಿಕೆ ಬಗ್ಗೆ ನರಸಿಂಹಯ್ಯನವರು ಮತ್ತು ಕೋವೂರ್‌ರವರನ್ನು ಯಾರೂ ಮರೆಯಲಿಕ್ಕೆ ಆಗುವುದೇ ಇಲ್ಲ. ಯಾರಾದರೂ ಏನಾದರೂ ನಾನು ಮಾಂತ್ರಿಕ ಶಕ್ತಿಯಿಂದ ಅಥವಾ ದೈವತ್ವದಿಂದ ಮಾಡುತ್ತೇನೆ ಎಂದು ಹೇಳಿದರೆ, ಎದಿರೇಟು ಹಾಕುತ್ತಿದ್ದಂಥವರಲ್ಲಿ ಈ ಭಾಗದಲ್ಲಿ ಡಾ: ನರಸಿಂಹಯ್ಯ ಮತ್ತು ಡಾ: ಕೋವೂರ್ ಇವರಿಬ್ಬರೇ ಇಬ್ಬರು. ನರಸಿಂಹಯ್ಯನವರಿಗೆ ಇದಕ್ಕೆ ತಕ್ಷಣ ಉತ್ತರ ಹೇಳುವಂತಹ ಸ್ಥಿತಿ ಹೇಗೆ ಬರುತ್ತದೆಂದು ನಮಗೆಲ್ಲಾ ಆಗ ಬಹಳ ಆಶ್ಚರ್ಯವಾಗುತ್ತಿತ್ತು. ಅಷ್ಟೊಂದು ವೈಜ್ಞಾನಿಕವಾಗಿ ತಿಳಿದುಕೊಂಡು, ವಿಚಾರವಂತರಾಗಿದ್ದರು ಇವತ್ತು ಅವರ ಕಳೇಬರ ಬೆಂಗಳೂರಿನಲ್ಲೇ ಇದೆ. ಹಾಗಾಗಿ ಸನ್ಮಾನ್ಯ ಮುಖ್ಯಮಂತ್ರಿಗಳೇನು ಇವತ್ತು ಸಭೆಯನ್ನು ಮುಂದಕ್ಕೆ ಹಾಕಬಹುದು ಎಂಬ ತೀರ್ಮಾನವನ್ನೇನು ತೆಗೆದುಕೊಂಡಿದ್ದಾರೋ, ಅದನ್ನು ನಾವೂ ಅನುಮೋದಿಸಿ, ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಕುಟುಂಬ ಇಲ್ಲದಿದ್ದರೂ ಪರವಾಗಿಲ್ಲ, ನಾವೆಲ್ಲಾ ಅವರು ಬೆಳೆಸಿದವರು ಎಂದು ಅಂದುಕೊಳ್ಳುತ್ತೇವೆಂದು ಹೇಳಿ ಇನ್ನು ಸಿ. ನಾಗರಾಜ್‌ರವರು, ನಾನು ಮತ್ತು ವಾಟಾಳ್ ನಾಗರಾಜ್ ರವರು ಸಭೆಯಲ್ಲಿ ಕಳೆದ ಬಾರಿ ಪ್ರಸ್ತಾಪ ಮಾಡಿದ್ದೆವು, ನಾವು ಅವರನ್ನು ಜೀವಂತವಾಗಿದ್ದಾಗಲೇ ಕೊಂದು ಬಿಟ್ಟಿದ್ದೇವೆನೋ ಎಂಬ ಭಾವನೆ ನಮಗೆ ಬರುತ್ತದೆ. ಅಂತಹ ಒಂದು ದೊಡ್ಡ ಸಂಸ್ಥೆಯನ್ನು ಕಟ್ಟಿ ಇಡೀ ಕ್ರಿಕೆಟ್ ಕ್ಷೇತ್ರಕ್ಕೆ ಕರ್ನಾಟಕದಲ್ಲಿ ಮತ್ತು ಭಾರತದ ಮಟ್ಟದಲ್ಲಿ ಹೆಸರನ್ನು ತಂದು ಕೊಟ್ಟು, ಯಾರ್ಯಾರನ್ನು ಅವರು ಬೆಳೆಸಿದ್ದರೋ, ಅವರೇ ಅವರ ಕಾಲು ಹಿಡಿದು ಕಳೆಯುವಂತಹ ಸ್ಥಿತಿಗೆ ತಂದು, ಸಾಯುವ ಕಾಲದಲ್ಲಿ ಅವರು ಬಹಳ ಕೊರಗಿ ಸತ್ತರು ಎಂಬುದು ನಮಗೆಲ್ಲಾ ನೋವು ತರುವಂತಹ ವಿಷಯವಾಗಿದೆ. ನಾವು ಅವರ ಬಗ್ಗೆ ಸಿ.ಓ.ಡಿ. ಎನ್‌ಕ್ವೈರಿ ಆಗಬೇಕು ಎಂದು ಒಂದು ಸಲ ಮಾತನಾಡಿದ್ದೆವು. ನಾಗರಾಜ್‌ರಂತಹವರ ಮೇಲೆ, ತಿಮ್ಮಪ್ಪಯ್ಯನಂತಹವರ ಮೇಲೆ ಸರ್ಕಾರ ಎನ್‌ಕ್ವೈರಿಗೆ ಆರ್ಡರ್ ಮಾಡುತ್ತಾ ಹೋದರೆ, ನಾಳೆ ಈ ಕ್ಷೇತ್ರಗಳಲ್ಲಿ ಕೆಲಸ ಮಾಡಲಿಕ್ಕೆ ಯಾರೂ ಬರುವುದೇ ಇಲ್ಲ. ರಾಜಕಾರಣಿಗಳು ಬಂದು ಹೋಗಬಹುದು, ಸಂಘ ಸಂಸ್ಥೆಗಳನ್ನು ಕಟ್ಟುವವರು, ಅದರಲ್ಲೂ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್‌ನಂತಹ ಒಂದು ಬೃಹತ್ ಸಂಸ್ಥೆ ಕಟ್ಟುವವರನ್ನು ನಾವು ಈ ಇಕ್ಕಟ್ಟಿನಲ್ಲಿ ನಾವು ಸಿಕ್ಕಿಸಬಹುದೇ? ಸಾಯಬೇಕಾದರೆ ಅವರೇನು ಯಾತನೆ ಪಟ್ಟರು, ಬಹುಶ: ಅದಕ್ಕೆ ಪರೋಕ್ಷವಾಗಿ ನಾವೆಲ್ಲಾ ಯಾವುದೇ ರೀತಿಯಲ್ಲಿ

ಕಾರಣ ಇರಬಹುದೇನೋ ಎಂಬ ಅಳುಕು ನಮ್ಮೆಲ್ಲರ ಮನಸ್ಸಿನಲ್ಲಿ ಉಳಿದಿದೆ. ಆದರೂ ಈ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್‌ಗೆ ಮತ್ತು ಇಡೀ ಕ್ರೀಡಾ ಕ್ಷೇತ್ರಕ್ಕೆ ಅವರು ಮಾಡಿರುವ ಸೇವೆಯನ್ನು ನಾವೆಲ್ಲಾ ಮನಗಾಣಬೇಕಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಕ್ಕಲಿ, ಅವರ ಕುಟುಂಬದವರಿಗೆ ಆ ದು:ಖ ಭರಿಸುವಂತಹ ಶಕ್ತಿಯನ್ನು ಭಗವಂತ ಕೊಡಲೆಂದು ಹೇಳಿ ನನ್ನ ಪಕ್ಷದ ಪರವಾಗಿ ಪ್ರಾರ್ಥಿಸಿ, ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ತಾವು ತಂದಿರುವ ಈ ಇಬ್ಬರು ಗಣ್ಯ ವ್ಯಕ್ತಿಗಳ ನಿಧನದ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಸಂಪೂರ್ಣವಾದ ಬೆಂಬಲವನ್ನು ನೀಡುತ್ತಾ, ಡಾ: ಹೆಚ್. ನರಸಿಂಹಯ್ಯನವರು ಕರ್ನಾಟಕದ ಒಂದು ದೊಡ್ಡ ಧ್ರುವತಾರೆ. ಕರ್ನಾಟಕದ ಇತಿಹಾಸದಲ್ಲಿ ನರಸಿಂಹಯ್ಯನವರ ಯುಗ ಅಂತ್ಯವಾಯಿತು. ಅವರನ್ನು ನಾನು ಇವತ್ತಿನ ದಿವಸ ಯುಗ ಪುರುಷ ಎಂದು ಕರೆಯುತ್ತೇನೆ. ಬಹುಶ: ಶಿಕ್ಷಣ ಕ್ಷೇತ್ರದಲ್ಲಿ ಗಾಂಧಿ, ಮೂಢ ನಂಬಿಕೆಗಳ ವಿರುದ್ಧ ವಿಚಾರವಂತರಲ್ಲಿ ಕರ್ನಾಟಕದ ಪೆರಿಯಾರ್, ತಮಿಳುನಾಡಿನಲ್ಲಿ ಪೆರಿಯಾರ್ ಏನೊಂದು ದೊಡ್ಡ ಕ್ರಾಂತಿಯನ್ನು ಮಾಡಿದ್ದರೋ, ಅದನ್ನು ನರಸಿಂಹಯ್ಯನವರು ಕರ್ನಾಟಕದಲ್ಲಿ ಮಾಡಿದರು. ಮಾನ್ಯ ನರಸಿಂಹಯ್ಯನವರು ನನಗೆ ಬಹಳ ಅತ್ಯಂತ ನಿಕಟವಾದಂತಹ ಸಂಬಂಧ ಇದ್ದವರು. ಕನ್ನಡದ ಬಗ್ಗೆ, ಕನ್ನಡ ಭಾಷೆಯ ಬಗ್ಗೆ, ಕನ್ನಡ ಭಾಷಾ ಬೆಳವಣಿಗೆಯ ಬಗ್ಗೆ ಅಪಾರವಾದ ಅಭಿಮಾನ, ಪ್ರೀತಿ, ವಿಶ್ವಾಸಗಳನ್ನು ಇಟ್ಟುಕೊಂಡಿದ್ದವರು ಆಗಿದ್ದರು. ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ. ವಿಧಾನ ಪರಿಷತ್ತಿಗೆ, ಗುಂಡುರಾಯರು ಮುಖ್ಯಮಂತ್ರಿಯಾಗಿದ್ದಾಗ ಅವರನ್ನು ನಾಮಕರಣ ಮಾಡಿದಾಗ ಅವರು ಒಂದು ಷರತ್ತು ಹಾಕಿದ್ದರು. ನನ್ನನ್ನು ನೀವು ನಾಮಕರಣ ಮಾಡುತ್ತಿದ್ದೀರಿ ಆದರೆ ನಾನು ಸರ್ಕಾರದ ಪರವಾಗಿ ಮಾತನಾಡುವುದಿಲ್ಲ, ನಾನು ಇಲ್ಲಿ ಸರ್ಕಾರದ ವಿರುದ್ಧ ಮಾತನಾಡಬೇಕಾಗಿ ಬರಬಹುದು, ಆದರೆ ವಿನಾಕಾರಣ ಮಾತನಾಡುವುದಿಲ್ಲ, ಆ ಷರತ್ತಿನ ಮೇಲೆ ಇರುವುದಾದರೆ ನನ್ನನ್ನು ನಾಮಕರಣ ಮಾಡಿ, ಇಲ್ಲದೇ ಹೋದರೆ ನಾನು ಖಂಡಿತವಾಗಿ ನೀವು ನಾಮಕರಣ ಮಾಡಿದ್ದೀರಿ ಎಂದು ಸರ್ಕಾರವನ್ನು ಹೊಗಳಿಕೊಂಡು ಹೋಗತಕ್ಕಂಥ ವ್ಯಕ್ತಿ ನಾನು ಅಲ್ಲ, ಎಂದು ನೇರವಾಗಿ ಹೇಳಿದ್ದರು. ಅಷ್ಟೇ ಸ್ಪಷ್ಟವಾಗಿ ಗುಂಡೂರಾಯರು ಹೇಳಿದರು, ನೀವು ಏನು ಬೇಕಾದರೂ ಮಾತನಾಡಬಹುದು ನಿಮಗೆ ಸ್ವಾತಂತ್ರ್ಯ ಇದೆ, ನಾವು ನಿಮ್ಮನ್ನೆ ನಾಮಕರಣ ಮಾಡುತ್ತೇವೆಂದು ಹೇಳಿದರು. ಉದಾತ್ತವಾದಂಥ ಅಪಾರವಾದಂಥ ಶಕ್ತಿ ಇಟ್ಟುಕೊಂಡಿದ್ದರು. ಬಹುಶ: ಅವರು ದೇವಸ್ಥಾನಗಳಿಗೆ ಹೋಗುತ್ತಿರಲಿಲ್ಲ. ತೀರ್ಥ ಪ್ರಸಾದ ಅವರು ಸ್ವೀಕರಿಸುತ್ತಿರಲಿಲ್ಲ, ಅವರಿಗೂ ಸಾಯಿ ಬಾಬರವರಿಗೆ ಬಾರಿ ದೊಡ್ಡ ಇತಿಹಾಸ ನಡೆಯಿತು. ಸಾಯಿಬಾಬರವರು ಬೂದಿ ಕೊಟ್ಟರೆ ಇವರು

ಕುಂಬಳಕಾಯಿ ಏಕೆ ಕೊಡಬಾರದು ಅನ್ನುವರು. ಕುಂಬಳ ಕಾಯಿ ಕೊಡಲಿ, ಇಷ್ಟು ದಪ್ಪ ಕುಂಬಳಕಾಯಿ ಕೊಡಲಿ ಎಂದು ಹೇಳುತ್ತಿದ್ದರು. ಈ ರೀತಿ ಅನೇಕ ವಿಚಾರಗಳ ಬಗ್ಗೆ ಒಂದು ಸಮಗ್ರ ಕ್ರಾಂತಿಯನ್ನೇ ಕರ್ನಾಟಕದಲ್ಲಿ ನಡೆಸಿದರು. ಆದರೆ ಕೊನೆಯಲ್ಲಿ ದಸರಾ ವಸ್ತು ಪ್ರದರ್ಶನಕ್ಕೆ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋದರು. ಕೊನೆಗೆ ಎಲ್ಲೋ ಒಂದು ರೀತಿಯಲ್ಲಿ ಸಣ್ಣ ಹೊಂದಾಣಿಕೆಯನ್ನು ಅವರು ಮಾಡಿಕೊಂಡರು ಎಂದು ಕಾಣುತ್ತದೆ ಇದರ ಬಗ್ಗೆ ಅವರನ್ನು ಕೆಲವರು ಪ್ರಶ್ನೆ ಕೇಳಿದಾಗ ಅವರ ಸ್ಪಷ್ಟತೆ ಇರಲಿಲ್ಲ. ಅದರ ಬಗ್ಗೆ ಸರಿಯಾದ ಸ್ಪಷ್ಟವಾದಂಥ ಉತ್ತರ ಕೊಡಲಿಲ್ಲ, ನೀವು ಅಲ್ಲಿ ಚಾಮುಂಡೇಶ್ವರಿ ದಸರಾ ಉತ್ಸವಕ್ಕೆ ಚಾಮುಂಡೇಶ್ವರಿ ಪೂಜೆ ಮಾಡಿ ಅಲ್ಲಿಂದ ಚಾಲನೆ ಕೊಡುವುದಕ್ಕೆ ನೀವು ಹೋಗುತ್ತಿದ್ದೀರಿ, ಇದುವರೆವಿಗೂ ನೀವು ದೇವರ ಹತ್ತಿರಕ್ಕೆ ಹೋಗಲಿಲ್ಲ, ತೀರ್ಥ ತೆಗೆದುಕೊಳ್ಳಲಿಲ್ಲ, ಇಷ್ಟೆಲ್ಲಾ ಇದ್ದಂಥವರು ನೀವು ಏತಕ್ಕೆ ಹೋದಿರಿ ಎಂದು ಕೇಳಿದರೆ. ಪರಿಸ್ಥಿತಿ, ಅಂತೂ, ಅವರ ಮಾತಿನಲ್ಲಿ ಸ್ಪಷ್ಟತೆ ಇರಲಿಲ್ಲ, ಮಾನ್ಯ ಪ್ರಕಾಶ್‌ರವರೇ, ಅವರ ಕೊನೆಯ ಮಾತಿನಲ್ಲಿ ಸ್ಪಷ್ಟತೆ ಇರಲಿಲ್ಲ ಅಲ್ಲವೆ? ಅವರು ತೀರಾ ಶಕ್ತಿಹೀನರಾಗಿ, ತಮ್ಮ ಚಿಂತನೆಯನ್ನು ಧಾಟಿ ಹೋದಾಗ ಈ ಒಂದು ನಿರ್ಧಾರಕ್ಕೆ ಅವರು ಬಂಧರು ಎಂದು ನನಗೆ ಅನ್ನಿಸುತ್ತದೆ. ಆದರೆ ಇಡೀ ಜೀವನದ ಉದ್ದಕ್ಕೂ ಇಂಥ ವಿಚಾರ, ನಮ್ಮ ಕರ್ನಾಟಕದಲ್ಲಿಯೇ ವಿಚಾರವಂತರ ಪೈಕಿನಲ್ಲಿ ಬಹಳ ಎತ್ತರವಾದಂಥ, ಉನ್ನತವಾದಂಥ ವ್ಯಕ್ತಿ. ಈಗ ನಾವು ಅವರಿಗೆ ಮಾಡಬೇಕಾದಂಥ ಅತ್ಯಂತ ಒಂದು ಉತ್ತಮವಾದಂಥ ಕೆಲಸ ಎಂದು ಹೇಳಿದರೆ, ಒಂದು ಸಮಿತಿಯನ್ನು ರಚನೆ ಮಾಡಿ, ಅವರಿಗೆ ಉನ್ನತವಾದಂಥ ಒಂದು ಸ್ಮಾರಕವನ್ನು ಕರ್ನಾಟಕದಲ್ಲಿ ನಿರ್ಮಾಣ ಮಾಡಬೇಕಾಗಿದೆ. ಉನ್ನತವಾದಂಥ ಒಂದು ಸ್ಮಾರಕ, ಈ ಸ್ಮಾರಕ ಹೇಗಿರಬೇಕು ಎನ್ನುವ ಬಗ್ಗೆ ಒಂದು ಸದನದ ಸಮಿತಿಯನ್ನು ಮಾಡಿ ಅದರಲ್ಲಿ ಎರಡೂ ಸದನದ ಸದಸ್ಯರನ್ನು ಬೇಕಾದರೆ ಸೇರಿಸಬಹುದು. ಹಾಗೆ ಒಂದು ಸಮಿತಿಯನ್ನು ರಚನೆ ಮಾಡಿ, ಅವರು ಶಿಕ್ಷಣ ಕ್ಷೇತ್ರಕ್ಕೆ ಮಾಡಿರತಕ್ಕಂಥ ಕೆಲಸ, ಕನ್ನಡಕ್ಕೆ ಮಾಡಿರತಕ್ಕಂಥ ಕೆಲಸ, ವಿಚಾರವಂಥರಾಗಿ ಮಾಡಿರತಕ್ಕಂಥ ಕೆಲಸ, ಮೂಢ ನಂಬಿಕೆಗಳ ವಿರುದ್ಧ ಮಾಡಿರತಕ್ಕಂಥ ಕೆಲಸ, ಇಂಥ ಅನೇಕ ವಿಚಾರಗಳ ಬಗ್ಗೆ ನಾವು ಸಮಗ್ರವಾದಂಥ ಚಿಂತನೆಯನ್ನು ಮಾಡಿ, ಸೂಕ್ತವಾದಂಥ ಸ್ಮಾರಕ ಇಡೀ ದೇಶ, ಪ್ರಪಂಚ ನೋಡತಕ್ಕಂಥ ಒಂದು ಸ್ಮಾರಕ ಆಗಬೇಕಾಗಿದೆ, ಅವರು ಬ್ರಹ್ಮಚಾರಿ ಆಗಿದ್ದರು, ಯಾವುದೇ ಆಶೋತ್ತರುಗಳು ಇರಲಿಲ್ಲ, ಆದುದರಿಂದ ಎಲ್ಲವನ್ನೂ ಬಿಟ್ಟು ನಿಂಥಂಥ ಒಬ್ಬ ಮೇರು ವ್ಯಕ್ತಿ, ಮಹಾನ್ ವ್ಯಕ್ತಿ, ಅವರ ನಿಧನ ನನಗೆ ತುಂಬಾ ನೋವಾಗಿದೆ. ಅಂಥ ವಿಚಾರವಂಥವರಿಗೆ ಎಲ್ಲೋ ಒಂದು ಕಡೆ ಈ ಮೂಢ ನಂಬಿಕೆಗಳು ಇಷ್ಟೊಂದು ಭಯಬೀತಿ ಇಲ್ಲದೆ ಸಾರ್ರೋದ್ಧಾರವಾಗಿ ನಡೆಯುತಕ್ಕಂಥ ಈ ಸಂದರ್ಭದಲ್ಲಿ ನರಸಿಂಹಯ್ಯನವರ ನಿಧನ ನಿಜಕ್ಕೂ ಅತ್ಯಂತ

ನೋವಿನ ಪ್ರಸಂಗ. ಮತ್ತೊಬ್ಬ ನರಸಿಂಹಯ್ಯ ಇಲ್ಲ, ಇನ್ನೊಬ್ಬ ನರಸಿಂಹಯ್ಯನವರನ್ನು ಹೋಲಿಕೆ ಮಾಡತಕ್ಕಂಥ ವ್ಯಕ್ತಿ ಇಲ್ಲ. ಆದುದರಿಂದ, ನಾನು ನರಸಿಂಹಯ್ಯನವರನ್ನು ಬಹಳ ಮೆಚ್ಚಿದ್ದೇನೆ, ಅವರ ಆದರ್ಶಗಳು ಉಳಿಯಬೇಕಾಗಿದೆ, ಅವರ ಆದರ್ಶಗಳು ಉಳಿಸುವುದಕ್ಕೋಸ್ಕರವಾಗಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆ ಮಾಡಿ, ಆ ಸಮಿತಿಯನ್ನು ತಾವು ಈ ಸದನದಲ್ಲಿ ರಚನೆ ಮಾಡಿ, ಅದನ್ನು ಪ್ರಕಟಣೆ ಮಾಡಿ, ಸಮಿತಿಯ ಮೂಲಕ ಯಾವ ಸ್ಮಾರಕ ಮಾಡಬೇಕು ಎಂಬುದನ್ನು ನಿರ್ಧರಿಸೋಣ. ಬಹುಶ: ಇಡೀ ದೇಶದ ಯಾರೇ ಬಂದರೂ ನರಸಿಂಹಯ್ಯನವರ ಒಂದು ಸ್ಮಾರಕಕ್ಕೆ ಹೋಗಬೇಕು, ನೋಡಬೇಕು, ಭೇಟಿ ಮಾಡಬೇಕು ಎನ್ನುವ ಹಾಗೆ ಮಾಡಬೇಕಾಗುತ್ತದೆ, ಆ ದೃಷ್ಟಿಯಿಂದ ನಾವು ಅವರ ಆತ್ಮಕ್ಕೆ ಶಾಂತಿಯನ್ನು ಕೋರುವುದರ ಜೊತೆಗೆ ನಿರಂತರವಾಗಿ ಅವರ ಇತಿಹಾಸ, ಅವರು ಮಾಡಿದಂಥ ಕೆಲಸಗಳು, ಅವರು ತೋರಿದಂಥ ದಾರಿಗಳು, ಅವರು ನಡೆದಂಥ ಹೋರಾಟ ಇವೆಲ್ಲಕ್ಕೂ ಒಂದು ದಾರಿ ದೀಪವಾಗಿ ಒಂದು ಹೊಸ ಶಕ್ತಿ ಬರುತ್ತದೆ, ಅದಕ್ಕೆ ತಾವು ಅನುವು ಮಾಡಿಕೊಡಬೇಕೆಂದು ಕೇಳಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಶ್ರೀಮಾನ್ ಸಿ. ನಾಗರಾಜ್ ರವರೂ ಕೂಡ ಅಷ್ಟೇ ಎತ್ತರವಾಗಿ ಅವರು ಆ ಕ್ಷೇತ್ರದಲ್ಲಿ ಬೆಳೆದಂಥವರು. ಕ್ರೀಡಾರಂಗದಲ್ಲಿ ಬಹುಶ: ಭಾರತದ ಪ್ರಪಂಚದ ಭೂಪಟದಲ್ಲಿ, ಬೆಂಗಳೂರು ನಗರವನ್ನು ತೋರಿಸಿದಂಥ ಒಬ್ಬ ವ್ಯಕ್ತಿ. ಪ್ರಪಂಚದ ಭೂಪಟದಲ್ಲಿ ಇಡೀ ಪ್ರಪಂಚದ ಎಲ್ಲರೂ, ಪ್ರಪಂಚದ ಯಾವ್ಯಾವ ದೇಶಗಳಿವೆ, ಅವರು ಪ್ರಧಾನಿಯಾಗಿರಬಹುದು, ಅಧ್ಯಕ್ಷರು ಆಗಿರಬಹುದು, ಯಾವುದೇ ವರ್ಗ ಆಗಿರಬಹುದು, ಯಾವುದೇ ಗುಂಪು ಆಗಿರಬಹುದು, ಒಂದು ದಿವಸ ಟೆಸ್ಟ್ ಮ್ಯಾಚ್ ಅದು ಇಡೀ ಪ್ರಪಂಚದ ಎಲ್ಲಾ ಕಡೆ ಟೆಸ್ಟ್ ಮ್ಯಾಚ್ ಆದಂತೆ ಬೆಂಗಳೂರಿನಲ್ಲಿ ಆಗಬೇಕಾಗಿದ್ದರೆ ಅದಕ್ಕೆ ಕಾರಣ ಸಿ. ನಾಗರಾಜ್. ನಾವು ಬಹಳ ಜನ ಸಿ. ನಾಗರಾಜ್ ಅವರಿಂದ ಪಾಸ್ ತೆಗೆದುಕೊಳ್ಳುವಾಗ ಮಾತ್ರ ಗೊತ್ತು. ಬಾರಿ ಜನ ಮಂತ್ರಿಗಳು, ಶಾಸಕರು, ಮಾನ್ಯ ಎಸ್. ನಿಜಲಿಂಗಪ್ಪನವರ ಕಾಲದಿಂದ, ಮಾನ್ಯ ಕೆಂಗಲ್ ಹನುಮಂತಯ್ಯನವರ ಕಾಲದಿಂದ, ಮಾನ್ಯ ಕೆ.ಸಿ. ರೆಡ್ಡಿಯವರ ಕಾಲದಿಂದ, ಮೊದಲು ಕ್ರಿಕೆಟ್ ಮೈದಾನ ಎಲ್ಲಿತ್ತು ಎಂದರೆ, ಸೆಂಟ್ರಲ್ ಕಾಲೇಜ್ ಪಕ್ಕದಲ್ಲಿ... ಅದೇ ಸೆಂಟ್ರಲ್ ಕಾಲೇಜ್ ಕ್ರಿಕೆಟ್ ಮೈದಾನ. ಆಗ ಜಿ.ಬಿ. ಮಲ್ಲಾರಾಧ್ಯ, ಶ್ರೀನಿವಾಸನ್, ಚಿನ್ನಸ್ವಾಮಿ, ಇನ್ನು ಅನೇಕರು, ಶ್ರೀನಿವಾಸನ್, ವಿಜಯ ಪಾರ್ಥಸಾರಥಿ ಕ್ಯಾಪ್ಟನ್, ಇನ್ನು ಅನೇಕರು, ಆದರೆ ಜಿ.ಬಿ. ಮಲ್ಲಾರಾಧ್ಯ ಬಹಳ ಎತ್ತರವಾಗಿ ಕೆಲಸ ಮಾಡಿದಂಥವರು, ಚಿನ್ನಸ್ವಾಮಿ ಬಹಳ ಎತ್ತರವಾಗಿ ಕೆಲಸ ಮಾಡಿದಂಥವರು. ಈ ಚಿನ್ನಸ್ವಾಮಿ ಕ್ರೀಡಾಂಗಣ ಬರಬೇಕಾದರೆ ಸಿ. ನಾಗರಾಜ್, ಸಿ. ನಾಗರಾಜ್ ಇಲ್ಲ ಎಂದರೆ ಸ್ಟೇಡಿಯಂ ಇಲ್ಲ. ಸಿ. ನಾಗರಾಜ್ ಚಿನ್ನಸ್ವಾಮಿ ಇಬ್ಬರೂ ತಂದೆ-ಮಕ್ಕಳು ಇದ್ದ ಹಾಗೆ. ಆ ಮೈದಾನ ದಂಡಿನ

ಪ್ರದೇಶ. ಆಗ ದಂಡಿನ ಮಂತ್ರಿ ಕೃಷ್ಣ ಮೆನನ್, ಆ ದಿನದ ಪರಿಸ್ಥಿತಿಯಲ್ಲಿ ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿ, ನಿಜಲಿಂಗಪ್ಪನವರು ದಂಡಿನ ಮಂತ್ರಿಗಳ ಹತ್ತಿರ ಹೋಗಿ ಆ ಜಾಗ ಬಿಡಿಸಬೇಕಾದರೆ, ಇವರಿಗೋಸ್ಕರ ಚಿನ್ನಸ್ವಾಮಿ, ನಾಗರಾಜ್, ನಿಮ್ಮಿಬ್ಬರ ಶ್ರಮಕ್ಕೋಸ್ಕರ ನಾನು ಜಾಗ ಕೊಡಿಸುತ್ತೇನೆಂದು ಹೇಳಿದರು. ಜಾಗ ಕೊಟ್ಟು ಎಲ್ಲಾ ಅಯಿತು. ನಿಜಲಿಂಗಪ್ಪನವರು ಎಷ್ಟು ದೊಡ್ಡವರು ಎಂದು ನಾವು ಇವತ್ತು ಹೇಳಬೇಕಾದರೆ, ನಿಜಲಿಂಗಪ್ಪನವರ ಹತ್ತಿರ ಹೋಗಿ ಈ ಆಟದ ಮೈದಾನಕ್ಕೆ ಈ ಸ್ಟೇಡಿಯಂಗೆ ತಮ್ಮ ಹೆಸರು ಇಡಬೇಕೆಂದು ಚಿನ್ನಸ್ವಾಮಿ ಹಾಗೂ ನಾಗರಾಜ್‌ರವರು ಹೇಳಿದರು. ಇಲ್ಲ ನನ್ನ ಹೆಸರು ಇಡಕೂಡದು ಅಲ್ಲಿ ಚಿನ್ನಸ್ವಾಮಿ ಹೆಸರು ಇಡಬೇಕೆಂದು ಮಾನ್ಯ ನಿಜಲಿಂಗಪ್ಪನವರು ಹೇಳಿದರು. ಎಷ್ಟು ದೊಡ್ಡ ವ್ಯಕ್ತಿ ಮಾನ್ಯ ನಿಜಲಿಂಗಪ್ಪನವರು. ನನ್ನ ಹೆಸರು ಬೇಡ, ಚಿನ್ನಸ್ವಾಮಿಯವರ ಹೆಸರನ್ನು ಇಡಿ ಎಂದು ಹೇಳಿದರು, ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಹಗಲು ರಾತ್ರಿ ಇಟ್ಟಿಗೆ ಹೊತ್ತಿದ್ದಾರೆ, ಗಾರೆ ಹೊತ್ತಿದ್ದಾರೆ, ಹಗಲು ಕಸ ಹೊಡೆದಿದ್ದಾರೆ, ಹಗಲು ರಾತ್ರಿ ದುಡಿದು, ಕರ್ನಾಟಕದ ಸುಮಾರು 6 ಜನ ಟೆಸ್ಟ್ ಪ್ಲೇಯರ್ಸ್ ಬರಬೇಕಾದರೆ ಸಿ. ನಾಗರಾಜ್‌ರವರೇ ಕಾರಣ ಬೇರೆ ಯಾರೂ ಅದನ್ನು ತಳ್ಳಿಹಾಕುವಂತಿಲ್ಲ, ವಿಶ್ವನಾಥ ಇರಬಹುದು, ಪ್ರಸನ್ನ ಇರಬಹುದು, ಚಂದ್ರಶೇಖರ್ ಇರಬಹುದು, ಕುಂಬ್ಳೆ ಇರಬಹುದು, ಹೀಗೆ ಅನೇಕರನ್ನು ಬೆಳೆಸಿದಂಥ ಶಕ್ತಿ ಸಿ. ನಾಗರಾಜ್, ಸಿ. ನಾಗರಾಜ್ ಸಾವಿನ ಕೊನೆಯ ಕ್ಷಣ, ಕೊನೆಯ ದಿನಗಳು, ಯಾವ ಸಂಸ್ಥೆಯನ್ನು ಕಟ್ಟಿದರು, ಆ ಸಂಸ್ಥೆಯನ್ನು ಕಟ್ಟಿದಂಥವರು ಯಾರನ್ನ ಆ ಸಂಸ್ಥೆಗೆ ತಂದರು, ಯಾವ ಜನರನ್ನು ಬೆಳೆಸಿದರು, ಯಾವ ಜನರನ್ನು ಸೇರಿಸಿದರು, ಯಾವ ಜನರನ್ನು ಸಂಸ್ಥೆಗೆ ನೋಂದಾವಣಿ ಮಾಡಿಸಿದರು, ಅದೇ ಜನ ಅವರನ್ನು ಏಕಾಏಕಿ ಇಡೀ ಜೀವನ ಪರ್ಯಂತ ಅವರನ್ನು ಸದಸ್ಯತ್ವದಿಂದ ಕಿತ್ತು ಹೊರಗೆ ಹಾಕಿದರು. ಅದು ಗುಜರಾತ್ ಸ್ಟೇಡಿಯಂ ಆಗಿದೆ, ಮಾರ್ವಾಡಿಗಳ ಸ್ಟೇಡಿಯಂ ಆಗಿದೆ, ದರೋಡೆಕೋರರ ಸ್ಟೇಡಿಯಂ ಆಗಿದೆ, ಕಳ್ಳಕಾಕರ ಸ್ಟೇಡಿಯಂ ಆಗಿದೆ. ಕುಡುಕರ ಸ್ಟೇಡಿಯಂ ಆಗಿದೆ, ಅಲ್ಲಿ ಬಾರ್ ನಡೆಯುತ್ತಿದೆ, ಇನ್ನೇನು ಅಲ್ಲಿ ನಡೆಯುತ್ತಿಲ್ಲ? ಈ ಬಗ್ಗೆ ಈ ಸದನದಲ್ಲಿ ನಾನು ಮಾನ್ಯ ಮಾಧುಸ್ವಾಮಿ ಹಾಗೂ ಮಾನ್ಯ ರಮೇಶ್ ಕುಮಾರ್‌ರವರು ನಾವು ಎಲ್ಲರೂ ಪ್ರಸ್ತಾಪ ಮಾಡಿದೆವು. ಪ್ರಸ್ತಾಪ ಮಾಡಿದ್ದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಒಂದು ಸಭೆಯನ್ನು ಸಹ ಕರೆದರು. ಆ ಸಭೆಗೆ ಬ್ರಿಜೇಶ್ ಪಟೇಲ್ ಮತ್ತು ಅಲ್ಲಿಯ ಅಧ್ಯಕ್ಷರು ಬಂದಿದ್ದರು, ಮಾನ್ಯ ಪ್ರಕಾಶ್‌ರವರು ಇದ್ದರು, ಎಲ್ಲರೂ ಅವರಿಗೆ ಕೈ ಮುಗಿಯುವುದು ಒಂದು ಬಾಕಿ, ಕನಿಷ್ಠ ಅವರಿಗೆ ಒಂದು ಸದಸ್ಯತ್ವ ಕೊಟ್ಟು ಬಿಡಿ, ಪಾಪ ಅವರಿಗೆ ತೊಂದರೆ ಕೊಡುವುದು ಬೇಡವೆಂದು ನಾವೆಲ್ಲ ಹೇಳಿದೆವು, ಸರ್ಕಾರ ತಕ್ಷಣವೇ ಅಲ್ಲಿಗೆ ಆಡಳಿತಾಧಿಕಾರಿಯನ್ನು ನೇಮಿಸಿ ಇವರೆಲ್ಲರನ್ನೂ ಹೊರ ಹಾಕಬಹುದಾಗಿತ್ತು. ಅದು ಯಾವುದೂ ಮಾಡದೇ, ಅಷ್ಟು ಮುಂದಕ್ಕೆ ಹೋಗಬಾರದು ಎಂದು,

ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು, ಮಾನ್ಯ ಪ್ರಕಾಶ್‌ರವರು ಇದ್ದರು, ಕೈ ಕೈ ಮುಗಿದು ಒಂದು ಸದಸ್ಯತ್ವ ಕೊಟ್ಟು ಬಿಡಿ ಎಂದು ಕೇಳಿದರು. ಇಷ್ಟು ಕೆಲಸ ಮಾಡಿದಂಥವರನ್ನು ಹೊರಗೆ ಹಾಕಿ ಕೊನೆಗೂ ಅವರಿಗೆ ಸದಸ್ಯತ್ವ ಕೊಡಲಿಲ್ಲ. ಜೈಲಿಗೆ ಕಳುಹಿಸಬೇಕು ಎಂದು ಅವರ ಮೇಲೆ ಪಿತೂರಿ ಮಾಡಿ, ಸುಳ್ಳು ಕೇಸ್‌ಗಳನ್ನು ಹಾಕಿದರು, ಕೊನೆಗೆ ಸದಸ್ಯತ್ವ ಸಿಗಲಿಲ್ಲವೆಂದು ಹೇಳಿ, ನೋವಿನಿಂದ ನರಳಿ ಹಾಸಿಗೆ ಹಿಡಿದು ಕೊನೆಯ ಉಸಿರೆಳೆದರು. ಅವರ ಸಾವಿಗೆ ಈಗ ಇರತಕ್ಕಂಥ ಆಡಳಿತ ವರ್ಗವೇ ಕಾರಣವಾಗಿದೆ. ಇದರಲ್ಲಿ ಬೇರೆ ಮಾತಿಲ್ಲ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ನಿಜವಾಗಿಯೂ ಕೂಡ ಅವರ ಆತ್ಮಕ್ಕೆ ಶಾಂತಿ ದೊರೆಯಬೇಕಾದರೆ ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ಮಾನ್ಯ ಪಿ.ಜಿ.ಆರ್. ಸಿಂಧ್ಯರವರು, ಮಾನ್ಯ ಉಪ ಮುಖ್ಯಮಂತ್ರಿಯವರು ಹಾಗೂ ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೂ ನಾನು ಹೇಳುವುದೇನೆಂದರೆ, ಮಾನ್ಯ ಸಿ. ನಾಗರಾಜ್‌ರವರ ಮೇಲೆ ನಿಮಗೆ ಹತ್ತಾರು ವರ್ಷಗಳಿಂದ ಬಾಂಧವ್ಯ ಇತ್ತೆಂದರೆ ಈ ಕೂಡಲೇ ಅಲ್ಲಿಗೆ ಒಬ್ಬ ಆಡಳಿತಾಧಿಕಾರಿಯನ್ನು ನೇಮಕ ಮಾಡಿ ಅಲ್ಲಿ ನಡೆಯುತ್ತಿರುವ ಸಮಗ್ರ ಅಕ್ರಮಗಳನ್ನು ಬೀದಿಗೆ ಎಳೆದರೆ ಮಾತ್ರ ಅವರ ಆತ್ಮಕ್ಕೆ ನಿಜವಾಗಿಯೂ ಕೂಡ ಶಾಂತಿ ತಂದುಕೊಟ್ಟಂತಾಗುತ್ತದೆ. ಈ ಒಂದು ಕೆಲಸವನ್ನು ತಾವು ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ತಪ್ಪು ಮಾಡಿರತಕ್ಕಂಥದವರನ್ನು ಯಾವುದೇ ಕಾರಣಕ್ಕೂ ಬಿಡಬಾರದು. ಅವರು ಸಾಯುವುದಕ್ಕಿಂಥ ಮುಂಚೆ ಅಂದರೆ ಸುಮಾರು ಮೂರು ದಿವಸಗಳ ಹಿಂದೆ ಮಾನ್ಯ ರಮೇಶ್‌ಕುಮಾರ್ ಮತ್ತು ಮಾನ್ಯ ಜೆ.ಸಿ. ಮಾಧುಸ್ವಾಮಿಯವರ ಜೊತೆ ನಾನು ಮಾತನಾಡುತ್ತಾ ಇದರ ಬಗ್ಗೆ ಸಮಗ್ರ ಚರ್ಚೆಯಾಗಬೇಕೆಂದು ನಾನು ಹೇಳಿದೆ. ಇದರ ಬಗ್ಗೆ ನಾವು ಕೂಡ ಮಾತನಾಡುತ್ತೇವೆಂದು ಹೇಳಿದ್ದರು. ಆದರೆ, ಆ ದಿನ ಬೆಳಿಗ್ಗೆ 2 ಗಂಟೆಗೆ ನನ್ನ ಕೊಠಡಿಯಲ್ಲಿ ನಾನು ಕುಳಿತುಕೊಂಡಿದ್ದಾಗ ಮಾನ್ಯ ಸಿ. ನಾಗರಾಜ್‌ರವರು ತೀರಿಕೊಂಡರು ಎಂಬ ಸುದ್ದಿ ಬಂತು. ಮಾನ್ಯ ಪಿ.ಜಿ.ಆರ್. ಸಿಂಧ್ಯ ರವರೆ, ನಾನು ಈ ಸಂದರ್ಭದಲ್ಲಿ ಭಗವಂತನ ಮೇಲೆ ಪ್ರಮಾಣ ಮಾಡಿ ಹೇಳುವುದೇನೆಂದರೆ, ಶ್ರೀಯುತರ ಸಾವಿನಿಂದ ನನಗೆ ಬಹಳಷ್ಟು ನೋವಾಯಿತು. ಆ ದಿನ ನನ್ನ ಕೊಠಡಿಯಲ್ಲಿ 5 ನಿಮಿಷ ಲೈಟ್ ಹಾಕಿಕೊಳ್ಳದೆ ಕತ್ತಲಲ್ಲಿ ಕುಳಿತುಕೊಂಡೆ. ಬಹಳಷ್ಟು ಕೆಲಸ ಮಾಡಿದಂಥ ವ್ಯಕ್ತಿಗೆ ಕೊನೆಗಾಲದಲ್ಲಿ ಸಂತೋಷಪಡಿಸುವುದಕ್ಕೆ ನಮ್ಮ ಕೈಯಲ್ಲಿ ಆಗಲಿಲ್ಲವೆಂಬ ವ್ಯಥೆ ನನ್ನಗಾಗಿದೆ. ಆಲ್ ಇಂಡಿಯಾ ಲೆವಲ್‌ನಲ್ಲಿ ಮಾನ್ಯ ಮಾಧವರಾವ್ ಸಿಂಧ್ಯಾರವರು ಅಧ್ಯಕ್ಷರಾಗಿದ್ದಾಗ ಇವರು ಅದಕ್ಕೆ ಕಾರ್ಯದರ್ಶಿಯಾಗಿದ್ದರು. ಮಾನ್ಯ ಮಾಧವರಾವ್ ಸಿಂಧ್ಯಾರವರ ಜೊತೆ ಹಾಗೂ ಮಾನ್ಯ ಕೆಂಗಲ್ ಹನುಮಂತಯ್ಯನವರು, ಮಾನ್ಯ ಜೆ.ಎಚ್. ಪಟೇಲ್ ಹಾಗೂ ಮಾನ್ಯ ಧರ್ಮಸಿಂಗ್‌ರವರ ಸ್ನೇಹಿತರಾಗಿದ್ದರು. ಆದರೆ, ಅವತ್ತಿನದಿವಸ ಅವರು ನರಳಿ

ಸತ್ತಾಗ ನಾನು ಮಾನ್ಯ ರಮೇಶ್‌ಕುಮಾರ್ ಮತ್ತು ಮಾನ್ಯ ಡಿ.ಕೆ. ಶಿವಕುಮಾರ್‌ರವರು, ಅಂದರೆ, ನಾವು ಮೂರು ಜನ ಮಾತ್ರ ಅಲ್ಲಿದ್ದೆವು. ಆ ಸಂದರ್ಭದಲ್ಲಿ ಒಬ್ಬ ಮಂತ್ರಿಯಾಗಲಿ ಅಥವಾ ಒಬ್ಬ ಶಾಸಕರಾಗಲಿ ಅಥವಾ ಸರ್ಕಾರದ ಪರವಾಗಿ ಯಾರೂ ಇರಲಿಲ್ಲ. ಕೊನೇ ಪಕ್ಷ ಅವರಿಗೆ ಹೂವು ಹಾಕುವಂಥ ಪ್ರಯತ್ನ ಕೂಡ ಮಾಡಲಿಲ್ಲ. ಸ್ಮಶಾನದಲ್ಲಿ ಅವರ ಹೆಣ ಭೂಮಿಗೆ ಇಳಿಯುವವರೆಗೂ ನಾವು ಅಲ್ಲಿಯೇ ಕುಳಿತುಕೊಂಡು ನಮ್ಮಗಳ ಕಣ್ಣೀರನ್ನು ಒರೆಸಿಕೊಂಡು ಅಲ್ಲಿಂದ ಹೊರಕ್ಕೆ ಬಂದೆವು. ಈ ಸಂದರ್ಭದಲ್ಲಿ ಸಂತಾಪ ಸೂಚಕ ನಿರ್ಣಯವನ್ನು ಮಾಡತಕ್ಕಂಥದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ಅವರ ಹೆಣವನ್ನು ಎತ್ತಿಕೊಂಡು ಹೋಗುವಾಗ ನನಗೆ ಬಹಳಷ್ಟು ನೋವಾಯಿತು. ಏಕೆಂದರೆ, ಇಂಥ ಒಬ್ಬ ವ್ಯಕ್ತಿಗೆ ಕೊನೆಗಳಿಗೆಯಲ್ಲಿಯೂ ಕೂಡ ಅಲ್ಲಿಗೆ ಸದಸ್ಯರನ್ನಾಗಿ ಮಾಡಿ ಅಲ್ಲಿ ಕೂರಿಸುವುದಕ್ಕೆ ನಮ್ಮ ಕೈಯಲ್ಲಿ ಆಗಲಿಲ್ಲ. ಏನಾದರೂ ಮಾಡಿ ಅವರನ್ನು ಸದಸ್ಯರನ್ನಾಗಿ ಮಾಡಿ ಅಲ್ಲಿ ಕೂರಿಸಬೇಕೆಂದು ನಾನು ಮತ್ತು ಮಾನ್ಯ ರಮೇಶ್‌ಕುಮಾರ್‌ರವರು ಬಹಳ ಪ್ರಯತ್ನವನ್ನು ಮಾಡಿದ್ದೆವು. ಆದರೆ ನಮ್ಮ ಕೈಯಲ್ಲಿ ಇದನ್ನು ಮಾಡುವುದಕ್ಕೆ ಆಗಲಿಲ್ಲ. ಅತ್ಯುನ್ನತ್ತವಾಗಿ ಬೆಳೆದಂಥ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿ ಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಡಾ: ಹೆಚ್. ನರಸಿಂಹಯ್ಯನವರನ್ನು ಕಳೆದುಕೊಂಡಿರತಕ್ಕಂಥದ್ದು ನಿಜವಾಗಿಯೂ ಕೂಡ ಕರ್ನಾಟಕ ರಾಜ್ಯಕ್ಕೆ ಒಂದು ದುರಾದೃಷ್ಟಕರವಾದಂಥ ಸಂಗತಿಯಾಗಿದೆ. ಡಾ: ಹೆಚ್. ನರಸಿಂಹಯ್ಯನವರು ಒಬ್ಬ ವ್ಯಕ್ತಿಯಾಗಿರಲಿಲ್ಲ. ಅವರೊಂದು ಅಪಾರವಾದಂಥ ಜ್ಞಾನಭಂಡಾರ ಅದು ಎಂಥ ಜ್ಞಾನವೆಂದರೆ, ಅವರು ಹುಟ್ಟಿದಾಗಿನಿಂದ ಸಾಯುವವರೆಗೂ ಜನಪರವಾದಂಥ ಮತ್ತು ಸಮಾಜದಲ್ಲಿ ತುಳಿತಕ್ಕೆ, ಶೋಷಣೆಗೆ ಒಳಗಾದಂಥ ಜನರ ಪರವಾದಂಥ ಒಂದು ಜ್ಞಾನಭಂಡಾರವನ್ನು ನರಸಿಂಹಯ್ಯನವರು ಹೊಂದಿದ್ದರು. ಹಾಗೆಯೇ ಇದರ ಜೊತೆಗೆ ಸಮಾಜದಲ್ಲಿದ್ದಂಥ ಒಂದು ಮೂಢನಂಬಿಕೆಗಳ ವಿರುದ್ಧ ಕರ್ನಾಟಕದಂಥ ರಾಜ್ಯದಲ್ಲಿ ಒಂದು ದೊಡ್ಡ ಹೋರಾಟವನ್ನು ನಡೆಸಿದಂಥ ವ್ಯಕ್ತಿ ಆಗಿದ್ದರು. ಮತ್ತೆ ಸಾಯಿಬಾಬರವರ ಹೆಸರು ಹೇಳಿದರೆ ಅವರು ಒಂದು ರೀತಿಯಲ್ಲಿ ಭಾವುಕರಾಗುತ್ತಿದ್ದರು. ಮತ್ತೆ ಮೌಢ್ಯದ ವಿರುದ್ಧ ಹೋರಾಟವನ್ನೂ ಕೂಡ ಮಾಡಿದ್ದರು. ಆವತ್ತಿನ ಪರಿಸ್ಥಿತಿಯಲ್ಲಿ ಈ ರೀತಿ ಮಾಡತಕ್ಕಂಥದ್ದು ಅಷ್ಟೊಂದು ಸುಲಭದ ಕೆಲಸವಾಗಿರಲಿಲ್ಲ. ಆದರೆ, ಇವರು ಮಾತ್ರ ಎಂದಿಗೂ ಕೂಡ ಎದೆಗುಂದಿರಲಿಲ್ಲ. ಅಥವಾ ಯಾರನ್ನೂ ಗುಂಪುಕಟ್ಟಿಕೊಂಡು ವ್ಯವಹಾರ ಮಾಡಿದಂಥ ವ್ಯಕ್ತಿಯಲ್ಲ. ಆ ರೀತಿಯಲ್ಲಿ ವೈಚಾರಿಕತೆಗೆ ನರಸಿಂಹಯ್ಯನವರು ನರಸಿಂಹಯ್ಯನವರಿಗೆ ಸಾಟಿಯಾಗಿದ್ದರು. ಬೇರೆ ಯಾರೂ ಕೂಡ ಇದಕ್ಕೆ ಸಾಟಿಯಾಗುವುದಕ್ಕೆ ಸಾಧ್ಯವಿಲ್ಲ. ಮತ್ತೆ ಅವರೇನು ನಂಬಿದ್ದರು ಅದರ ಪ್ರಕಾರ

ಬದುಕುವಂಥ ವ್ಯಕ್ತಿಯಾಗಿದ್ದರು. ಮತ್ತೆ ಅಷ್ಟು ಸರಳವಾದಂಥ ಜೀವನ ನಡೆಸಿದಂಥ ವ್ಯಕ್ತಿ. ಈ ರೀತಿಯಾದ ವ್ಯಕ್ತಿಯನ್ನು ಇನ್ನು ಮುಂದೆ ನೋಡುವುದಿಲ್ಲ ಮತ್ತೆ ಈ ಹಿಂದೆ ಕೂಡ ನೋಡಲಿಕ್ಕೆ ಸಾಧ್ಯವಿಲ್ಲ. ನಾನು ವಿದ್ಯಾರ್ಥಿ ಆದಾಗಿನಿಂದಲೂ ಅಂದರೆ ಸುಮಾರು 20 ರಿಂದ 25 ವರ್ಷಗಳಿಂದ ಅವರ ಜೊತೆಯಲ್ಲಿ ನಾನು ಸಂಪರ್ಕ ಇಟ್ಟುಕೊಂಡಿದ್ದೆ. ಶ್ರೀಯುತರು ಚಾಪೆಯ ಮೇಲೆ ಮಲಗುತ್ತಿದ್ದರು. ಆದರೆ, 2–3 ವರ್ಷಗಳ ಹಿಂದೆ ಡಾಕ್ಟರ್‌ರವರು ಭಾರಿ ಗಂಭೀರವಾಗಿ ಅವರಿಗೆ ಎಚ್ಚರಿಕೆ ಕೊಟ್ಟ ಮೇಲೆ ಇವರು ಬೆಡ್ ಮೇಲೆ ಮಲಗಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದರು. ಅದಕ್ಕೂ ಮೊದಲು ಅವರು ಒಂದು ಚಾಪೆ ಮತ್ತು ದಿಂಬಿನ ಮೇಲೆ ಮಲಗಿಕೊಳ್ಳುತ್ತಿದ್ದರು. ಅವರ ರೂಮ್‌ಗೆ ಯಾರು ಹೋದರೂ ಕೂಡ ಚಾಪೆಯ ಮೇಲೆ ಕುಳಿತುಕೊಳ್ಳಬೇಕಾಗಿತ್ತು. ಏಕೆಂದರೆ, ಅವರ ರೂಮ್‌ನಲ್ಲಿ ಒಂದು ಚೇರ್ ಕೂಡ ಹಾಕಿರಲಿಲ್ಲ. ಈ ರೀತಿಯಾದ ಸರಳ ಜೀವನ ನಡೆಸುವುದಕ್ಕೆ ಖಂಡಿತವಾಗಿ ಯಾರಿಗೂ ಸಾಧ್ಯವಾಗುವುದಿಲ್ಲ. ಆ ರೀತಿ ಈ ರೀತಿ ನಡೆದುಕೊಳ್ಳುತ್ತೇವೆಂದು ಬಾಯಿಯಲ್ಲಿ ಹೇಳಬಹುದು. ಆದರೆ, ಈ ರೀತಿಯಾಗಿ ನಡೆದುಕೊಂಡಂಥ ಒಬ್ಬ ಗೌರವಾನ್ವಿತ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಶ್ರೀಯುತರು ವೈಸ್ ಚಾನ್ಸಲರ್ ಆಗಿದ್ದರು. ಇವರು ಮನಸ್ಸು ಮಾಡಿದ್ದರೆ ಏನು ಬೇಕಾದರೂ ಮಾಡಬಹುದಾಗಿತ್ತು. ಆದರೆ, ಅಂಥ ಒಬ್ಬ ಮನುಷ್ಯ ಚಾಪೆಯ ಮೇಲೆ ಮಲಗಿಕೊಳ್ಳುತ್ತಿದ್ದರು. ಇದನ್ನು ಯಾರೂ ಕೂಡ ಊಹೆ ಮಾಡುವುದಕ್ಕೆ ಸಾಧ್ಯವಿಲ್ಲ. ಮತ್ತೆ ಇದರ ಜೊತೆಗೆ ಅವರು ಶಿಕ್ಷಣದ ಬಗ್ಗೆ ನಿರಂತರವಾದ ಕಾಳಜಿಯನ್ನು ಇಟ್ಟುಕೊಂಡಿದ್ದರು. ನಮ್ಮ ಜೊತೆ ಮಾತನಾಡುವಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದರು. ಅದೇನೆಂದರೆ, ಶಿಕ್ಷಣ ಎನ್ನತಕ್ಕಂಥದ್ದು ನಮ್ಮ ದೇಶದ ಮೆದುಳು ಇದ್ದ ಹಾಗೆ. ಈ ಮೆದುಳು ಆರೋಗ್ಯಕರವಾಗಿ ಕೆಲಸ ಮಾಡಿದರೆ ಮಾತ್ರ ನಮ್ಮ ದೇಶ ಸಾಮಾಜಿಕವಾಗಿ ಆರೋಗ್ಯಕರವಾಗಿರುವುದಕ್ಕೆ ಸಾಧ್ಯವಾಗುತ್ತದೆ. ಈ ಶಿಕ್ಷಣವೇನಾದರೂ ಅನಾರೋಗ್ಯವಾದರೆ ಇಡೀ ಸಮಾಜ ಮತ್ತು ದೇಶ ಅನಾರೋಗ್ಯಕರಕ್ಕೆ ಗುರಿಯಾಗುತ್ತದೆ ಎಂದು ಹೇಳಿದ್ದರು. ಈ ಒಂದು ಉದ್ದೇಶಕ್ಕೋಸ್ಕರವೇ ಅವರ ಜೀವನದ ಉದ್ದಕ್ಕೂ ಶಿಕ್ಷಣದಲ್ಲಿ ಬದಲಾವಣೆ ತರಬೇಕೆಂದು ಹೋರಾಟ ನಡೆಸಿದ್ದರು. ಮತ್ತೆ ಈ ಶಿಕ್ಷಣ ಪ್ರತಿಯೊಬ್ಬರಿಗೂ ಸಿಗಬೇಕೆಂದು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿರುವುದರ ಜೊತೆಗೆ ಈ ಶಿಕ್ಷಣ ಸಮಾಜದ ಕಟ್ಟಕಡೆಯ ಮನುಷ್ಯನವರೆಗೂ ಸಿಗಬೇಕೆಂದು ಪ್ರಾಮಾಣಿಕ ಪ್ರಯತ್ನ ಕೂಡ ಮಾಡಿದ್ದರು. ಶ್ರೀಯುತರು ನನ್ನ ಸ್ವಂತ ಜಿಲ್ಲೆಯವರಾಗಿದ್ದರು. ಅವರ ವೈಯಕ್ತಿಕ ಜೀವನ ಎಷ್ಟು ದುರಂತ ಅಂತ ಹೇಳಿದರೆ, ಅವರ ತಂದೆ ಯಾರೆಂಬುದೇ ಅವರಿಗೆ ಗೊತ್ತಿಲ್ಲ. ಅವರಿಗೆ ಅವರ ತಾಯಿ ಮಾತ್ರ ಗೊತ್ತಿತ್ತು. ಅವರ ತಾಯಿ ಕೂಲಿ ಕೆಲಸ ಮಾಡುತ್ತಿದ್ದರು. ಮತ್ತೆ ಅವರ ತಾಯಿಗೆ ಒಂದು ಮನೆ ಕೂಡ ಇರಲಿಲ್ಲ. ಇವರು ಪ್ರೊಫೆಸರ್ ಆದ ಮೇಲೆ ಒಂದು ಸಣ್ಣ ಮನೆ ಮಾಡಿಕೊಂಡಿದ್ದರು.

ಈ ರೀತಿಯಾದಂಥ ಒಂದು ದುರಂತಮಯವಾದ ವೈಯಕ್ತಿಕ ಜೀವನ ಅವರದಾಗಿತ್ತು. ಮತ್ತೆ ಇವರು ವ್ಯಕ್ತಿಗತವಾಗಿ, ಸ್ವಂತಕ್ಕಾಗಿ ಎಂದೂ ಏನನ್ನೂ ಕೂಡ ಬಯಸಿದಂಥ ವ್ಯಕ್ತಿಯಾಗಿರಲಿಲ್ಲ. ಅವರ ಊರಾದ ಹೊಸೂರಿಗೆ ನನ್ನ ಬಾಡಿಯನ್ನು ತೆಗೆದುಕೊಂಡು ಹೋಗಬೇಕೆಂಬುದು ಅವರು ಸಾಯುವಾಗ ಅವರ ಕೊನೆಯ ಆಸೆಯಾಗಿತ್ತು. ಅವರ ಹುಟ್ಟಿದ ಊರಿನಲ್ಲಿ ಯಾರ ಸಹಾಯ ತೆಗೆದುಕೊಳ್ಳದೆ ಅವರ ಸ್ವಂತ ಶ್ರಮದಿಂದ ಹೈಸ್ಕೂಲ್, ಜ್ಯೂನಿಯರ್ ಕಾಲೇಜು, ಹಾಸ್ಟೆಲ್, ಕಂಪ್ಯೂಟರ್ ಸೆಕ್ಷನ್ ಮತ್ತು ವಿಜ್ಞಾನ ಕೇಂದ್ರವನ್ನು ಪ್ರಾರಂಭ ಮಾಡಿದ್ದಾರೆ. ಇದಕ್ಕೆ ಯಾರ ಸಹಾಯವನ್ನೂ ಅವರು ಪಡೆದುಕೊಂಡಿರಲಿಲ್ಲ. ಅವರ ಸ್ನೇಹಿತರೂ ಅವರ ವೆಲ್ ವಿಷರ್ಸ್‌ಗಳಿಂದ ಅವೆಲ್ಲವನ್ನೂ ಅವರು ಮಾಡಿದ್ದಾರೆ. ನಾನು ಸತ್ತ ನಂತರ ಇಲ್ಲಿಯೇ ಮಣ್ಣು ಮಾಡಬೇಕೆಂದು ಅವರು ಮೊದಲೇ ಜಾಗ ತೆಗೆದುಕೊಂಡಿದ್ದರು. ಈ ಜಾಗವನ್ನು ಅವರು ಯಾರ ಹತ್ತಿರವೂ ಉಚಿತವಾಗಿ ಪಡೆದುಕೊಳ್ಳಲಿಲ್ಲ. ಇದಕ್ಕೆ ಹಣ ಕೊಟ್ಟು ಪಡೆದುಕೊಂಡಿದ್ದರು. ಮತ್ತೆ ವಿಜ್ಞಾನ ಕ್ಷೇತ್ರಕ್ಕೆ ಅವರ ಕೊಡುಗೆ ಅಪಾರವಾದಂಥದ್ದು. ಶ್ರೀಯುತರು ಮೂಲತ: ಭೌತಶಾಸ್ತ್ರದ ವಿಜ್ಞಾನಿಯಾಗಿದ್ದರು. ಆದರೆ, ಅವರನ್ನು ಮೇಲ್ನೋಟಕ್ಕೆ ಭೌತಶಾಸ್ತ್ರದ ವಿಜ್ಞಾನಿ ಎಂದು ಅಂದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಒಬ್ಬ ಗಾಂಧಿವಾದಿ ಅಥವಾ ಯಾರೊ ಒಬ್ಬ ಸಮಾಜ ಸೇವಕ ಅನ್ನುವ ರೀತಿಯಲ್ಲಿ ಕಾಣುತ್ತಿದ್ದರು. ಆದರೆ, ಶ್ರೀಯುತರು ಭೌತಶಾಸ್ತ್ರದ ವಿಜ್ಞಾನದ ಬಗ್ಗೆ ಅತ್ಯುನ್ನತವಾದ ಪಾಂಡಿತ್ಯವನ್ನು ಹೊಂದಿದ್ದಂಥವರು, ನಾನು ಒಂದು ಸಲ ಅವರ ರೂಮ್‌ಗೆ ಅಕಸ್ಮಾತ್ ಹೋದಾಗ ಅಲ್ಲಿ ಮಾನ್ಯ ರಾಜಣ್ಣನವರೂ ಕೂಡ ಅಲ್ಲಿಗೆ ಬಂದು ಅವರ ಜೊತೆಯಲ್ಲಿ ಚರ್ಚೆ ಮಾಡುತ್ತಾ ಇದ್ದರು. ಇವರಿಬ್ಬರೂ ಅಲ್ಲಿ ಚಾಪೆಯ ಮೇಲೆ ಕುಳಿತುಕೊಂಡು ಯಾವ ವಿಚಾರದ ಮೇಲೆ ಮಾತನಾಡುತ್ತಿದ್ದರೆಂದರೆ, ಅಣು ವಿಕೇಂದ್ರೀಕರಣದ ಬಗ್ಗೆ ಏನೊಂದು ಸಮಸ್ಯೆ ಇತ್ತು, ಮೇಸ್ಟ್ರೇ, ಅದಕ್ಕೋಸ್ಕರ ತಮ್ಮ ಜೊತೆಯಲ್ಲಿ ಮಾತನಾಡುವುದಕ್ಕೆ ಬಂದಿದ್ದೇನೆಂದು ಹೇಳುತ್ತಾ ಅವರ ಜೊತೆಯಲ್ಲಿ ಮಾತನಾಡುತ್ತಿದ್ದರು. ಆ ರೀತಿಯಾದ ಜ್ಞಾನವನ್ನು ಹೊಂದಿದಂಥ ಒಬ್ಬ ಅಣು ವಿಜ್ಞಾನಿ ಮತ್ತು ವಿಚಾರವಾದಿ ಹಾಗೂ ಮೌಢ್ಯತೆ ವಿರುದ್ಧ ನಿರಂತರವಾಗಿ ಹೋರಾಟ ಮಾಡಿಕೊಂಡು ಬಂದಂಥ ವ್ಯಕ್ತಿ ನಮ್ಮೆಲ್ಲರನ್ನೂ ಬಿಟ್ಟು ಅಗಲಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ದಯವಿಟ್ಟು ಡಾ: ಹೆಚ್. ನರಸಿಂಹಯ್ಯನವರ ಸ್ಮಾರಕ ಮಾಡಬೇಕು ಮತ್ತೆ ಅವರ ಹೆಸರಿನಲ್ಲಿ ಒಂದು ಅಧ್ಯಯನ ಕೇಂದ್ರವನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ವೈಜ್ಞಾನಿಕ ಮತ್ತು ವೈಚಾರಿಕತೆ ವಿಚಾರಗಳನ್ನು ಸಂಶೋಧನೆ ಮಾಡತಕ್ಕಂಥ ಒಂದು ಸಂಶೋಧನಾ ಅಧ್ಯಯನ ಕೇಂದ್ರವನ್ನು ಕರ್ನಾಟಕ ರಾಜ್ಯ ಸರ್ಕಾರ ಅವರ ಹೆಸರಿನಲ್ಲಿ ತಕ್ಷಣವೇ ಸ್ಥಾಪನೆ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕು. ಅವರಿಗೆ ಸ್ಮಾರಕಗಳ ಮೇಲೆ ನಂಬಿಕೆ ಇರಲಿಲ್ಲ. ಅಧ್ಯಯನ

ಮಾಡುವುದರ ಬಗ್ಗೆ ಅವರಿಗೆ ಬಹಳ ಆಸಕ್ತಿ ಇತ್ತು. ಮಾನ್ಯ ಪಿ.ಜಿ.ಆರ್. ಸಿಂಧ್ಯರವರೂ ಕೂಡ ಅವರ ಸ್ಟೂಡೆಂಟ್ ಆಗಿದ್ದರು. ಮತ್ತೆ ಅವರ ಹತ್ತಿರ ಪಾಠ ಹೇಳಿಸಿಕೊಂಡಿರತಕ್ಕಂಥ ಅನೇಕ ಜನರು ಇವತ್ತಿನ ದಿವಸ ಇಲ್ಲಿದ್ದಾರೆ. ನಮ್ಮೆಲ್ಲರ ಕಳಕಳಿಯ ಒತ್ತಾಯವೇನೆಂದರೆ, ಸರ್ಕಾರ ಅವರ ಹೆಸರಿನಲ್ಲಿ ಒಂದು ಅಧ್ಯಯನ ಕೇಂದ್ರವನ್ನು ಸ್ಥಾಪನೆ ಮಾಡಿ, ಅದೊಂದು ಸ್ವಾಯತ್ತ ಸಂಸ್ಥೆಯನ್ನಾಗಿ ಮಾಡಿ ಯಾರ ಹಸ್ತಕ್ಷೇಪವಿಲ್ಲದಂತೆ ಒಂದು ಅಧ್ಯಯನ ಕೇಂದ್ರವನ್ನು ಡಾ: ಹೆಚ್ ನರಸಿಂಹಯ್ಯನವರ ಹೆಸರಿನಲ್ಲಿ ಮಾಡಬೇಕೆಂದು ಹೇಳಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಅವರು ಶಿಕ್ಷಣದ ಬಗ್ಗೆ ಇಟ್ಟಿದ್ದಂಥ ಒಂದು ಅಪಾರವಾದ ಅಭಿಮಾನಕ್ಕೋಸ್ಕರ ಯಾವುದಾದರೊಂದು ವಿಶ್ವವಿದ್ಯಾನಿಲಯಕ್ಕೆ ಅವರ ಹೆಸರನ್ನು ಕರ್ನಾಟಕ ರಾಜ್ಯದಲ್ಲಿಟ್ಟರೆ ಅದು ಬಹುಶ: ಒಳ್ಳೆಯದಾಗುತ್ತದೆಂಬುದು ನನ್ನ ಅಭಿಪ್ರಾಯವಿದೆ. ಅದಕ್ಕಾಗಿ ಯಾವುದಾದರೊಂದು ವಿಶ್ವವಿದ್ಯಾನಿಲಯಕ್ಕೆ ಅವರ ಹೆಸರನ್ನು ಇಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ. ಹೊಸೂರಿನಲ್ಲಿ ಒಂದು ನ್ಯಾಷನಲ್ ಕಾಲೇಜನ್ನು ಪ್ರಾರಂಭ ಮಾಡಿದ್ದಾರೆ ಅದಕ್ಕೆ ಏನು ವ್ಯವಸ್ಥೆ ಇದೆ ಎನ್ನತಕ್ಕಂಥದ್ದು ನನಗೆ ಗೊತ್ತಿಲ್ಲ. ಅವರ ನಂತರ ಅದನ್ನು ಯಾರು ನೋಡಿಕೊಳ್ಳುತ್ತಾರೆ, ಎಂಬುದು ಗೊತ್ತಿಲ್ಲ. ಅದನ್ನು ಸರ್ಕಾರ ಪರಿಶೀಲನೆ ಮಾಡಿ ಅದನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲಿಕ್ಕೆ ಬೇಕಾದ ಒಂದು ವ್ಯವಸ್ಥೆಯನ್ನು ದಯವಿಟ್ಟು ಮಾಡಬೇಕು. ಅವರು ಹುಟ್ಟಿದ ಊರು ಹೊಸೂರು ಗ್ರಾಮವನ್ನು ಸರ್ಕಾರ ದತ್ತು ಗ್ರಾಮವನ್ನಾಗಿ ಮಾಡಿಕೊಂಡು ಆ ಗ್ರಾಮವನ್ನು ಅವರ ವಿಚಾರಧಾರೆಗೆ ಹೊಂದತಕ್ಕಂತ ರೀತಿಯಲ್ಲಿ ಅಭಿವೃದ್ಧಿ ಮಾಡಬೇಕೆಂದು ಹೇಳುತ್ತಾ, ನಾನು ಈ ಮೂರು ವಿಚಾರಗಳನ್ನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಇನ್ನು ಸಿ. ನಾಗರಾಜ್‌ರವರ ಸಾಕಷ್ಟು ವಿಚಾರಗಳನ್ನು ಶ್ರೀ ಮಾಧುಸ್ವಾಮಿ ಮತ್ತು ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ. ನಾಗರಾಜುರವರ ನೋವು ವಾಟಾಳ್ ನಾಗರಾಜ್‌ರವರು ಹೇಳಿದಂತೆ ನಾನೂ ಕೂಡ ಕಂಡಿದ್ದೇನೆ. ಈ ದೇಶದ ರಾಜ್ಯದ ಕ್ರೀಡಾ ಸಂಸ್ಥೆಯನ್ನು ಬೆಳಸಲಿಕ್ಕೆ ಅವರು ಪಟ್ಟಂಥ ಶ್ರಮ ಬಹಳ ಕಷ್ಟ. ಅಲ್ಲಿ ಇವತ್ತು ಯಾರ್ಯಾರೋ ಸೇರಿಕೊಂಡು ಅವರಿಗೆ ನೋವನ್ನುಂಟು ಮಾಡಿ ಅವರಿಗೆ ಮಾನಸಿಕವಾಗಿ ಒಂದು ರೀತಿಯಲ್ಲಿ ಹಿಂಸೆಯನ್ನು ಮಾಡಿದ್ದಾರೆ. ಆ ಹಿಂಸೆಯಿಂದಲೇ ಅವರು ಬಹುಶ: ತೀರಿಕೊಂಡರು. ಇಲ್ಲದಿದ್ದರೆ ಇನ್ನೊಂದಿಷ್ಟು ದಿವಸ ಬದುಕುತ್ತಿದ್ದರು. ಹಾಗಾಗಿ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಇದರ ಬಗ್ಗೆ ತನಿಖೆಯನ್ನು ನಡೆಸಬೇಕೆಂದು ಹೇಳಿ ಒತ್ತಾಯವನ್ನು ಮಾಡುತ್ತಾ, ನನ್ನ ಮಾತನ್ನು ಮುಗಿಸುತ್ತಿದ್ದೇನೆ.

†ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಡಾ: ಹೆಚ್.ಎನ್. ರವರ ನಿಧನ ನಮ್ಮ ರಾಜ್ಯಕ್ಕೆ ಅಷ್ಟೇ ಅಲ್ಲ ರಾಷ್ಟ್ರಕ್ಕೆ ಆಗಿರತಕ್ಕಂಥ ಒಂದು ದೊಡ್ಡ ನಷ್ಟವೆಂದು ಹೇಳಿ ನಾನು ಭಾವಿಸಿಕೊಂಡಿರುತ್ತೇನೆ. 1965–66ನೇ ಸಾಲಿನಲ್ಲಿ ನಾನು ಕನ್ನಡ ಮೀಡಿಯಂನಲ್ಲಿ ಎಸ್‌ಎಸ್‌ಎಲ್‌ಸಿ ಯನ್ನು ಓದಿ ನಮ್ಮ ತಾಲ್ಲೂಕಿನ ಹಿರಿಯ ನಾಯಕರು ಸ್ವಾತಂತ್ರ್ಯ ಹೋರಾಟಗಾರರು ಆಗಿದ್ದಂಥ ಕರಿಯಪ್ಪನವರು ನನ್ನನ್ನು ಕರೆದುಕೊಂಡು ಬಂದು ಬೆಂಗಳೂರಿನಲ್ಲಿ ನನಗೆ ಪ್ರಿ–ಯುನಿವರ್ಸಿಟಿಗೆ ಸೇರಿಸಬೇಕು ಎಂದು ಹೇಳಿದಾಗ ಡಾ: ಹೆಚ್. ನರಸಿಂಹಯ್ಯನವರ ಕಾಲೇಜಿನಲ್ಲಿ ನನಗೆ ಸೀಟು ಸಿಕ್ಕಿತು. ಆದರೆ ನನಗೆ ಹಾಸ್ಟೆಲ್ ಸೀಟು ಸಿಗಲಿಲ್ಲ. ಆ ಸಂದರ್ಭದಲ್ಲಿ ಡಾ: ಹೆಚ್. ನರಸಿಂಹಯ್ಯನವರು ಅವರ ಕೊಠಡಿಯಲ್ಲಿಯೇ ನನ್ನನ್ನು ಇರಿಸಿಕೊಂಡರು. ಆ ಕೊಠಡಿ ಸಂಖ್ಯೆ: 13, ಅದು ನನಗೆ ಬಹಳ ಚೆನ್ನಾಗಿ ನೆನಪಿದೆ. 37–38 ವರ್ಷಗಳಿಂದ ಹೆಚ್.ಎನ್. ರವರ ವಿದ್ಯಾರ್ಥಿಯಾಗಿ ನಾನು ಅವರಲ್ಲಿ ಪರಿಣತಿಯನ್ನು ಪಡೆದಿದ್ದೆ. ಅವರು ನನ್ನ ಬಗ್ಗೆ ಅಪಾರವಾದ ಅಭಿಮಾನವನ್ನು ಇಟ್ಟುಕೊಂಡಿದ್ದರು. ನಮ್ಮ ತಂದೆ–ತಾಯಿಗಳು ತಮ್ಮ ಮಕ್ಕಳ ಬಗ್ಗೆ ಎಷ್ಟೊಂದು ಪ್ರೀತಿ ವಿಶ್ವಾಸವನ್ನು ತೋರಿಸುತ್ತಾರೊ ಅಷ್ಟೇ ವಿಶ್ವಾಸವನ್ನು ಅವರ ವಿದ್ಯಾರ್ಥಿಗಳಿಗೆ ಅವರು ತೋರಿಸುತ್ತಿದ್ದರು. ಅವರ ಅನೇಕ ವಿದ್ಯಾರ್ಥಿಗಳು ಇವತ್ತು ಮೇಲ್ಮನೆ ಮತ್ತು ಕೆಳಮನೆ ಸದಸ್ಯರುಗಳು ಆಗಿದ್ದಾರೆ. ಶ್ರೀ ಡಿ.ಟಿ. ಜಯಕುಮಾರ್ ಮತ್ತು ಸಭಾಪತಿಗಳಾದ ಶ್ರೀ ಸುದರ್ಶನ್‌ರವರು ಅವರ ವಿದ್ಯಾರ್ಥಿಗಳು ಆಗಿದ್ದವರು. ಪ್ರಪಂಚದ ಅನೇಕ ದೊಡ್ಡ ದೊಡ್ಡ ವಿಜ್ಞಾನಿಗಳು ಕ್ರೀಡಾಪಟುಗಳು ಇವರನ್ನೆಲ್ಲಾ ಕೊಟ್ಟಂಥ ಕೀರ್ತಿ ನಮ್ಮ ನ್ಯಾಷನಲ್ ಎಜ್ಯುಕೇಶನ್ ಸೊಸೈಟಿಗೆ ಸೇರತಕ್ಕಂಥದ್ದು. ಅದರ ಅಧ್ಯಕ್ಷರಾಗಿ ಡಾ: ಹೆಚ್.ಎನ್. ರವರು ಮಾಡಿರತಕ್ಕಂಥ ಸೇವೆ ಅತ್ಯಂಥ ಅಮೂಲ್ಯವಾದಂಥದ್ದು ಎಂದು ನಾನು ತಿಳಿದಿದ್ದೇನೆ. ಇವತ್ತು ಬೆಂಗಳೂರು ನಗರ ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಪಂಚದಲ್ಲಿಯೇ ಒಂದು ದೊಡ್ಡ ಜ್ಞಾನದ ಒಂದು ಕೇಂದ್ರವಾಗಿ ಬೆಳೆದಿರಬೇಕಾದರೆ 4–5 ಜನರು ಮಾಡಿರತಕ್ಕಂಥ ಕೊಡುಗೆಯನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಅದರಲ್ಲಿ ಎಪಿಎಸ್ ಕಾಲೇಜಿನ ಶ್ರೀ ಕೆ. ಸಂಪತ್‌ಗಿರಿ ರಾಯರು, ಎಂಇಎಸ್ ಕಾಲೇಜಿನ ಮಾನ್ಯ ಎಂ.ಪಿ.ಎಲ್. ಶಾಸ್ತ್ರಿಯವರು ಸೇಂಟ್ ಜೊಸೆಫ್ ಸಂಸ್ಥೆಯವರು ಮತ್ತು ಡಾ: ಹೆಚ್. ನರಸಿಂಹಯ್ಯನವರು. ಈ ಎಲ್ಲಾ ಸಂಸ್ಥೆಗಳನ್ನು ಪ್ರಾರಂಭ ಮಾಡಿದವರು ಡಾ: ಹೆಚ್. ನರಸಿಂಹಯ್ಯನವರು ಅವರ ಜೊತೆಯಲ್ಲಿ ನಾನು ಸುಮಾರು 13 ತಿಂಗಳುಗಳ ಕಾಲ ಹಾಸ್ಟೆಲ್‌ದಲ್ಲಿದ್ದಾಗ, ಅವರು ದೇವರಲ್ಲಿ ಅಪಾರವಾದ

† ಈ ಭಾಷಣವನ್ನು ಮಾನ್ಯ ಸಚಿವರಿಂದ ಪರಿಷ್ಕರಿಸಲ್ಪಟ್ಟಿದೆ.

ನಂಬಿಕೆಯನ್ನು ಇಟ್ಟುಕೊಂಡಿದ್ದವರು, ಅವರಿಗೆ ದೇವರಲ್ಲಿ ನಂಬಿಕೆ ಇರಲಿಲ್ಲವೆಂದು ಏನೂ ಇಲ್ಲ. ಆದರೆ ಮೌಢ್ಯ ನಂಬಿಕೆಗಳಲ್ಲಿ ಅವರಿಗೆ ನಂಬಿಕೆ ಇರಲಿಲ್ಲ. ರಾಮಕೃಷ್ಣ ಪರಮಹಂಸರು, ಶಾರದಾದೇವಿ, ಸ್ವಾಮಿ ವಿವೇಕಾನಂದರು ಎಂದು ಹೇಳಿದರೆ ಅವರ ಬಗ್ಗೆ ಅಪಾರವಾದ ಒಂದು ಗೌರವವನ್ನು ಇಟ್ಟುಕೊಂಡಿದ್ದರು. ನಾನು ಪಿಯುಸಿಯನ್ನು ಪಾಸು ಮಾಡಿಕೊಂಡು ಇಂಜಿನಿಯರಿಂಗ್ ಸೇರಿಕೊಂಡಾಗ ಅವರು ನನಗೆ ಕೊಟ್ಟಿರುವ ಒಂದು ಸ್ವಾಮಿ ವಿವೇಕಾನಂದ, ರಾಮಕೃಷ್ಣ ಪರಮಹಂಸರು, ಶಾರದಾದೇವಿಯವರ ಒಂದು ಫೋಟೋವನ್ನು ಅವರ ಜ್ಞಾಪಕಾರ್ಥವಾಗಿ ಇವತ್ತಿಗೂ ಕೂಡ ಉಳಿಸಿಕೊಂಡಿರುತ್ತೇನೆ. ಅವರು ಬಹಳ ಹೆಚ್ಚಾಗಿ ತಮ್ಮ ಜೀವನದಲ್ಲಿ ಕೆಲವು ಮೌಲ್ಯಗಳನ್ನು ನಂಬಿಕೊಂಡಿದ್ದರು. ಹಿಂದುಳಿದ ವರ್ಗಗಳ ಬಗ್ಗೆ ಮತ್ತು ಜಾತ್ಯಾತೀತವಾದದ ಬಗ್ಗೆ ಅವರಿಗೆ ಇದ್ದಂಥ ಅಪಾರವಾದಂಥ ಶ್ರದ್ಧೆ, ಅವರನ್ನು ಇವತ್ತು ದೇಶದ ಒಬ್ಬ ಬಹುದೊಡ್ಡ ನಾಯಕರನ್ನಾಗಿ ನಾವು ಅವರನ್ನು ನೋಡಬಹುದು. ಅಂತಹ ಒಬ್ಬ ವ್ಯಕ್ತಿ ಇವತ್ತು ಮತ್ತೊಬ್ಬರು ದೇಶದಲ್ಲಿ ಸಿಗುವುದಿಲ್ಲವೆಂದು ಹೇಳಿದರೂ ಸಹಿತ ಅತಿಶಯೋಕ್ತಿ ಯಾಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಶ್ರೀರಾಮರೆಡ್ಡಿಯವರು ಅನೇಕ ಸಲಹೆಗಳನ್ನು ಡಾ: ಹೆಚ್.ಎನ್. ರವರ ಜ್ಞಾಪಕಾರ್ಥವಾಗಿ ಮಾಡಬೇಕು, ವಿಶ್ವವಿದ್ಯಾನಿಲಯಕ್ಕೆ ಅವರ ಹೆಸರನ್ನು ಇಡತಕ್ಕಂಥ ವಿಚಾರ ಅವರಿಗೆ ಬಹಳ ನಂಬಿಕೆ ಇದ್ದಂಥದ್ದು ಶಿಕ್ಷಣ ಕ್ಷೇತ್ರದಲ್ಲಿ, ಶಿಕ್ಷಣ ಎನ್ನತಕ್ಕಂಥದ್ದು ದೇಶದ ಬೆಳವಣಿಗೆಗೆ ನಿಜವಾಗಿಯೂ ಬೇಕಾಗಿರತಕ್ಕಂಥ ಮೆದುಳು. ಅದು ಸರಿಹೋಗಬೇಕೆನ್ನುವ ವಿಚಾರದ ಬಗ್ಗೆ ಅವರು ಪದೇ ಪದೇ ಹೇಳುತ್ತಿದ್ದರು. ಅವರ ಬಾಯಿಯಲ್ಲಿಯೇ ಬರುತ್ತಿದೆಯೇನೋ ಎನ್ನುವ ರೀತಿಯಲ್ಲಿ ಶ್ರೀರಾಮರೆಡ್ಡಿಯವರು ಮಾತನಾಡಿದಾಗ ನನಗಾದರೂ ಅನಿಸುತ್ತಿದೆ. ಅವರು ಒಬ್ಬ ಆದರ್ಶ ಉಪಕುಲಪತಿಗಳಾಗಿ ಮತ್ತು ಆದರ್ಶ ಒಬ್ಬ ವಿಧಾನಪರಿಷತ್ ಸದಸ್ಯರಾಗಿದ್ದರು. ಅವರು ಒಬ್ಬ ಭೌತವಿಜ್ಞಾನಿಯಾಗಿ ಅವರು ನಿಜಜೀವನದಲ್ಲಿ ಒಬ್ಬ ವಿಜ್ಞಾನಿ ಯಾವ ರೀತಿಯಾಗಿ ನಡೆದುಕೊಳ್ಳುತ್ತಾನೊ ಹಾಗೆ ನಡೆದುಕೊಳ್ಳುತ್ತಿದ್ದರು. ಅವರನ್ನು ಯಾರೇ ರಾಜಕಾರಣಿಗಳು ಭೇಟಿ ಮಾಡಿದರೂ ಕೂಡ ಅವರಿಗೆ ಯಾರು ಸಜ್ಜನರು ಅನ್ನಿಸುತ್ತಿತ್ತು ಅವರೆಲ್ಲರಿಗೂ ಅವರು ಕೇಳುತ್ತಿದ್ದರು ನಿಮ್ಮ ಆರೋಗ್ಯ ಹೇಗೆ ಇದೆ, ವಾಕಿಂಗ್ ಮಾಡುತ್ತೀರಾ? ಟೆನಿಸ್ ಆಡುತ್ತೀರಾ ಎಂದು ಪ್ರತಿಸಲ ಅವರು ಕೇಳುತ್ತಿದ್ದರು. ಇವತ್ತು ಈ ಎ.ಎಸ್. ಪ್ರಸನ್ ಇರಬಹುದು, ಬಿ.ಎಸ್. ಚಂದ್ರಶೇಖರ್‌ರವರು ಇರಬಹುದು ಅಂತಾರಾಷ್ಟ್ರೀಯ ಮಟ್ಟದ ಅನೇಕ ಕ್ರೀಡಾಪಟುಗಳು, ಅಂತಾರಾಷ್ಟ್ರೀಯ ಮಟ್ಟದ ಅನೇಕ ಪತ್ರಿಕಾಕರ್ತರನ್ನು ಕೇಳುತ್ತಿದ್ದರು. ಕಲೆಯ ಬಗ್ಗೆ ಅವರಿಗೆ ಇದ್ದಂಥ ಒಂದು ಆಸಕ್ತಿ, ಅವರಿಗೆ ನಾಟಕದ ಬಗ್ಗೆ

ಇದ್ದಂಥ ಆಸಕ್ತಿ ಅನೇಕ ವೇದಿಕೆಗಳನ್ನು ಕರ್ನಾಟಕದಲ್ಲಿ, ಬೆಂಗಳೂರಿನಲ್ಲಿ ನಿರ್ಮಾಣ ಮಾಡಿದ್ದಾರೆ, ಅದಕ್ಕೋಸ್ಕರವಾಗಿಯೇ ಅವರ ಕಲಾಭಿಮಾನಿಗಳೆಲ್ಲಾ ಸೇರಿ ಡಾ: ಹೆಚ್.ಎನ್. ರವರ ಹೆಸರಿನಲ್ಲಿ ಒಂದು ಕಲಾಕ್ಷೇತ್ರವೆಂದು ಕಟ್ಟಿಸಿರತಕ್ಕಂಥದ್ದು ಸಹಿತ ತಮಗೆ ಗೊತ್ತಿದೆ. ಬಸವನಗುಡಿ, ನ್ಯಾಷನಲ್ ಕಾಲೇಜ್, ಸ್ವಾತಂತ್ರ್ಯ ಹೋರಾಟ, ಎಂಇಎಸ್ ಸಂಸ್ಥೆ ಡಾ: ಹೆಚ್.ಎನ್. ಖಾದಿ ಇವು ಮರೆಯಲಿಕ್ಕೆ ಆಗದಿರತಕ್ಕಂಥ ವಿಚಾರಗಳು. ಇವತ್ತು ನಿಜವಾಗಲೂ ಒಂದು ಅಮೂಲ್ಯವಾದ ರತ್ನವನ್ನು ಕರ್ನಾಟಕ ಮತ್ತು ಭಾರತದೇಶ ಕಳೆದುಕೊಂಡಿದೆ ಎಂದು ಇವತ್ತು ನಾನು ಭಾವಿಸಿಕೊಂಡಿದ್ದೇನೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ, ಖಂಡಿತವಾಗಿಯೂ ಮಾನ್ಯ ವಾಟಾಳ್ ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು ಮತ್ತು ಮಾನ್ಯ ಇನ್ನಿತರ ಗೌರವಾನ್ವಿತ ಶಾಸಕರುಗಳು ಕೊಟ್ಟಂಥ ಸಲಹೆಯನ್ನು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಾನು ಸಚಿವ ಸಂಪುಟದ ಸಭೆಯಲ್ಲಿ ಚರ್ಚೆ ಮಾಡಿ ಚಿರಾಯುವಾಗಿ ಅವರ ವಿಚಾರಗಳು ಇರುವ ಹಾಗೆ ಒಂದು ಕೆಲಸವನ್ನು ನಾವು ಕರ್ನಾಟಕದಲ್ಲಿ ಮಾಡೋಣ. ಅದು ಕರ್ನಾಟಕದ ಒಂದು ಹೆಮ್ಮೆಯ ಕೇಂದ್ರವಾಗುತ್ತದೆ ಎನ್ನುವುದನ್ನು ಹೇಳುವುದಕ್ಕೆ ನಾನು ಈ ಸಂದರ್ಭದಲ್ಲಿ ಬಯಸುತ್ತೇನೆ.

ಇನ್ನು ಮಾನ್ಯ ನಾಗರಾಜ್‌ರವರ ಬಗ್ಗೆ ಮಾನ್ಯ ಸಿದ್ದರಾಮಯ್ಯನವರು ಬಹಳ ಚೆನ್ನಾಗಿ ಹೇಳಿದರು. ಅಂತಾರಾಷ್ಟ್ರೀಯ ಕ್ರಿಕೆಟ್ ಕರ್ನಾಟಕದಲ್ಲಿ ಅದರಲ್ಲಿಯೂ ವಿಶೇಷವಾಗಿ ಬೆಂಗಳೂರಿನಲ್ಲಿ ಒಂದು ದಿನದ ಹಾಗೂ ಟೆಸ್ಟ್‌ಗಳು ನಡೆಯಬೇಕಾದರೆ, ಇವತ್ತು ಕ್ರಿಕೆಟ್ ಸ್ಟೇಡಿಯಂ ಬರಬೇಕಾದರೆ ನಾಗರಾಜ್‌ರವರು ಮಾಡಿರತಕ್ಕಂಥ ಸೇವೆ ಅತ್ಯಂತ ಅಮೂಲ್ಯವಾದದ್ದು ಎಂದು ನಾನು ತಿಳಿದುಕೊಂಡಿದ್ದೇನೆ. ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಅಷ್ಟೇ ಅಲ್ಲ, ಅವರು ಬಿಸಿಸಿಗೆ ಪ್ರಧಾನ ಕಾರ್ಯದರ್ಶಿಗಳಾಗಿದ್ದರು. ಬಿಸಿಸಿಗೆ ಅತ್ಯಂತ ಚಟುವಟಿಕೆಯನ್ನು ಕೊಟ್ಟಂಥವರೆಂದರೆ ಮಾನ್ಯ ಮಾಧವ್‌ರಾವ್ ಸಿಂಧ್ಯಾರವರು; ಯಾವಾಗಲೂ ಮಾಧವ್‌ರಾವ್ ಸಿಂಧ್ಯರವರು ಚುನಾಯಿತ ಸದಸ್ಯರಾದವರೂ ಸಹಿತ ಇವರನ್ನೇ ಪ್ರಧಾನ ಕಾರ್ಯದರ್ಶಿಗಳಾಗಿ ಮಾಡುತ್ತಿದ್ದರು. ಏಕೆಂದರೆ ಇವರು ಅತ್ಯಂತ ಪ್ರಾಮಾಣಿಕವಾಗಿ ಇರುತ್ತಿದ್ದರು. ಕ್ರಿಕೆಟ್ ಅಂದರೆ ನಾಗರಾಜ್‌ರವರು, ಆ ಕ್ರಿಕೆಟ್‌ನ್ನು ಭಾರತದ ಮಟ್ಟದಲ್ಲಿ ಅಂತಾರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗಿರುವಂಥವರಲ್ಲಿ ಸೇವೆ ಮಾಡಿದವರಲ್ಲಿ ನಾಗರಾಜ್‌ರವರು ಮೊದಲಿಗರು ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ನಾಗರಾಜ್‌ರವರ ನೋವು ನನಗೆ ಅರ್ಥವಾಗುತ್ತದೆ, ಅವರೊಂದಿಗೆ ಕೊನೆಯಲ್ಲಿ ನನಗೆ ಮಾತನಾಡುವುದಕ್ಕೆ ಆಗಲಿಲ್ಲ, ಅವರ ಕಂಠ ಗದ್ಗದಿತವಾಗಿತ್ತು. ಏಕೆಂದರೆ ಅವರು ಎಮೋಷನಲ್ಲಾಗಿ ಅಷ್ಟೊಂದು ಇಂಟಿಗ್ರೇಟ್ ಆಗಿದ್ದರು. ನಮ್ಮ ಗೌರವಾನ್ವಿತ ಸದಸ್ಯರ ಬಗ್ಗೆ ಅವರಿಗೆ ಎಷ್ಟೊಂದು

ಅಭಿಮಾನ ಇತ್ತು ಎಂದರೆ, ಯಾವುದಾದರೊಂದು ಕ್ರಿಕೆಟ್ ಮ್ಯಾಚ್ ಆದರೆ, ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರಿಗೆ ಕೊನೆಯ ಪಕ್ಷ ಎರಡು ಪಾಸ್ ಹೋಗಿದೆಯೋ ಇಲ್ಲವೋ ಎಂದು ಅವರು ವೆರಿಫೈ ಮಾಡುತ್ತಿದ್ದರು. ಮಾನ್ಯ ಹೆಗಡೆಯವರು ಮುಖ್ಯಮಂತ್ರಿಗಳು ಆಗಿದ್ದಂಥ ಸಂದರ್ಭದಲ್ಲಿ ಅವರು ಬಂದು, ಯಾವುದಾದರೂ ಕ್ರಿಕೆಟ್ ಮ್ಯಾಚ್ ಆಗುತ್ತಿದ್ದರೆ ಅವರ ಮಗಳ ಮದುವೆಯ ಆಮಂತ್ರಣದ ರೀತಿಯಲ್ಲಿ ಬಂದು ನಮ್ಮನ್ನು ಅವರು ಕರೆಯುತ್ತಿದ್ದರು. ಆ ಕಾಲ ಇವತ್ತು ಹೊರಟು ಹೋಗಿದೆ. ಆ ಬಾಂಧವ್ಯ ಆ ಸಂಬಂಧಗಳು ಹೊರಟು ಹೋಗಿವೆ. ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರುಗಳೆಂದರೆ ಯಾರು? ಅವರು ನಮ್ಮ ಮೂಲಾಜಿನಲ್ಲಿರುವವರು ಎನ್ನುವ ಪರಿಸ್ಥಿತಿ ಇವತ್ತು ಬಂದುಬಿಟ್ಟಿದೆ. ಅದು ಬಹಳ ನೋವಿನ ವಿಚಾರವಾಗಿದೆ. ಮಾನ್ಯ ನಾಗರಾಜ್‌ರವರು ಹಾಗೂ ಶ್ರೀರಾಮರೆಡ್ಡಿಯವರು ಹೇಳಿರತಕ್ಕಂತಹ ವಿಚಾರಮನಗಂಡಿದ್ದೇವೆ. ಸಮಯ ಬಂದಾಗ ಅವಕಾಶ ಬಂದಾಗ ಖಂಡಿತವಾಗಿಯೂ ಅದನ್ನು ಸರಿಪಡಿಸಬೇಕಾಗುತ್ತದೆ. ಶ್ರೀ ನಾಗರಾಜ್‌ರವರ ಹೆಸರು ಕ್ರಿಕೆಟ್ ರಂಗದಲ್ಲಿ ಚಿರಾಯುವಾಗಿ ಉಳಿಯುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ನಮ್ಮ ಊರಿನವರು ಎಂದು ಹೇಳಿಕೊಳ್ಳುವುದಕ್ಕೆ ಬಹಳ ಹೆಮ್ಮೆಯಾಗುತ್ತದೆ. ಅವರ ಹೆಸರಿನಲ್ಲಿ ನಾವು ಏನಾದರೊಂದು ಅವಿಸ್ಮರಣೀಯವಾಗಿರತಕ್ಕಂತಹ ಒಂದು ಸ್ಮಾರಕವನ್ನು ಮಾಡಬೇಕಾಗುತ್ತದೆ. ಅದರ ಬಗ್ಗೆ ಸರ್ಕಾರದಿಂದ ಖಂಡಿತವಾಗಿಯೂ ಅದನ್ನು ಮಾಡೋಣವೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಕ್ರಿಕೆಟ್ ಅಸೋಸಿಯೇಷನ್ ವ್ಯವಹಾರದ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಚಾರ ಬಂದಿದೆ; ಅದು ಸರ್ಕಾರದ ಗಮನಕ್ಕೂ ಸಹಿತ ಬಂದಿದೆ. ಅದನ್ನು ಸರಿಪಡಿಸುವ ಬಗ್ಗೆ ನಾವು ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ, ಈ ಸಂದರ್ಭದಲ್ಲಿ ಅದರ ಬಗ್ಗೆ ಹೇಳುವುದಕ್ಕೆ ಉಚಿತವಲ್ಲ ಎಂದು ತಿಳಿದು ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ನಾನು ಈ ಸಂದರ್ಭದಲ್ಲಿ ಕೋರುತ್ತೇನೆ. ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ; ಸಾಮಾನ್ಯವಾಗಿ ಸಭಾನಾಯಕರು, ಉಪನಾಯಕರಿಗೆ ಕೊಡುವಂತಹದ್ದು ಆದರೂ ಸಹಿತ ತಾವು ನಾನು ಹೆಚ್.ಎನ್. ರವರ ವಿದ್ಯಾರ್ಥಿಯಾಗಿ ಇಲ್ಲಿ ಅನೇಕ ಜನ ವಿದ್ಯಾರ್ಥಿಗಳಿದ್ದಾರೆ. ಅವರ ಪರವಾಗಿ ನಾಡಿನ ಅತ್ಯುನ್ನತ ಒಂದು ವೇದಿಕೆ ಯಾಗಿರುವಂತಹ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡುವುದರ ಬಗ್ಗೆ ತಾವು ನನಗೆ ದೊಡ್ಡ ಮನಸ್ಸು ಮಾಡಿ ಅವಕಾಶವನ್ನು ಮಾಡಿಕೊಟ್ಟಿದ್ದೀರಿ; ಶ್ರೀ ಹೆಚ್. ನರಸಿಂಹಯ್ಯನವರ ಆತ್ಮ ಚಿರಶಾಂತಿಯಾಗಿರಲಿ ಎಂದು ಹೇಳಿ ಅವರ ಲಕ್ಷಾಂತರ ಜನ ವಿದ್ಯಾರ್ಥಿಗಳನ್ನು ಅನಾಥರನ್ನಾಗಿ ಮಾಡಿ ಹೋಗಿದ್ದಾರೆ. ನಮಗೆಲ್ಲರಿಗೂ ಬಹಳ ಮನಸ್ಸಿಗೆ ನೋವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಎಲ್ಲಾ ಮಾನ್ಯ ಸಭಾನಾಯಕರು, ವಿರೋಧಪಕ್ಷದ ನಾಯಕರು, ಎಲ್ಲಾ ಹಿರಿಯ ಸದಸ್ಯರುಗಳು ಅಗಲಿದ ಈ ಒಂದು ಹಿರಿಯ ಜೀವಕ್ಕೆ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದಾರೆ, ಇದರಲ್ಲಿ ಹೆಚ್ಚಿನ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕಿಂತ ಹೆಚ್ಚಾಗಿ ಶ್ರೀ ಹೆಚ್.ಎನ್. ರವರ ಬದುಕು ತೆರೆದ ಪುಸ್ತಕವಾಗಿದೆ. ಆ ತರಹದ ಖಾಸಗಿ ಬದುಕನ್ನು ಸಾರ್ವಜನಿಕಗೊಳಿಸುವಂತಹದ್ದು, ಬಹಳ ಪಾರದರ್ಶಕ ವ್ಯಕ್ತಿತ್ವವನ್ನು ಇಟ್ಟುಕೊಂಡವರಿಗೆ ಮಾತ್ರ ಅದು ಸಾಧ್ಯವಾಗುತ್ತದೆ. ಅನೇಕರು ನಾವೆಲ್ಲರೂ ಖಾಸಗಿ ಬದುಕನ್ನು ಪ್ರತ್ಯೇಕವಾಗಿಟ್ಟುಕೊಂಡಿರುತ್ತೇವೆ. ಪ್ರಾಯಶ: ಮಹಾತ್ಮ ಗಾಂಧೀಜಿಯವರನ್ನು ಬಿಟ್ಟರೆ ಖಾಸಗಿ ಬದುಕು ಮತ್ತು ಸಾರ್ವಜನಿಕ ಬದುಕು ಇವು ಭಿನ್ನವಾಗಿರುವಂತಹದ್ದು ಇರಲಿಕ್ಕಿಲ್ಲ. ಆದರೆ ಇವರು ಕೊನೆಗಳಿಗೆವರೆಗೂ ಕೂಡ ತಮ್ಮ ನ್ಯಾಷನಲ್ ಕಾಲೇಜು ಹಾಸ್ಟಲ್‌ನಲ್ಲಿ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದಂತೆ ಒಂದು ಚಾಪೆಯನ್ನು ಹಾಸಿಕೊಂಡು ಆ ಕೋಣೆಯಲ್ಲಿರುತ್ತಿದ್ದರು. ಅವರಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಮಾತನಾಡತಕ್ಕಂತಹ ಯಾವುದೇ ಸಂದರ್ಭವಿರುತ್ತಿರಲಿಲ್ಲ. ನಾನು ಅವರ ವಿದ್ಯಾರ್ಥಿ ಅಲ್ಲ. ನಾನು ಅವರನ್ನು ಬಹಳ ವರ್ಷಗಳಿಂದ ಹತ್ತಿರದಿಂದ ಬಲ್ಲವನಾಗಿದ್ದೇನೆ. ಮತ್ತು ಅಲ್ಲಿರುವಂತಹ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಅದು ವಿನೋಬಾಜಿಯವರ ವಿಚಾರಕ್ರಾಂತಿಯ ಸಂದರ್ಭ ವಾಗಿರಬಹುದು. ಅಥವಾ ಗಾಂಧೀಜಿ ಸಮೂಹದಲ್ಲಿ ನಡೆಯತಕ್ಕಂತಹ ಅನೇಕ ಚಟುವಟಿಕೆಗಳಾಗಿರಬಹುದು. ಅಥವಾ ಕಲಾ ಕ್ಷೇತ್ರದಲ್ಲಿ ನಡೆಯತಕ್ಕಂತಹ ರಂಗಚಟುವಟಿಕೆಗಳಾಗಿರ ಬಹುದು. ಅಲ್ಲಿ ಮಾನ್ಯ ನರಸಿಂಹಯ್ಯನವರು ಉಪಸ್ಥಿತಿ, ಮಾರ್ಗದರ್ಶನ ಮತ್ತು ಹೋರಾಟ ಎಲ್ಲಾ ಕಾಲದಲ್ಲಿಯೂ ಕಂಡಂತವರಾಗಿದ್ದೇವೆ. ನಾನು 1978ರಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಸೋತಾಗ ನಾನು ನನ್ನ ಮಗನನ್ನು ಎಲ್ಲಿಗೆ ಸೇರಿಸಬೇಕೆಂಬ ಬಗ್ಗೆ ವಿಚಾರ ಬಂದಾಗ ಅವರು ಇಲ್ಲಿಯೇ ಕಳುಹಿಸಿಕೊಟ್ಟುಬಿಡು ಎಂದು ಹೇಳಿದರು. ಅವರು ನನ್ನ ಮಗನನ್ನು ತಮ್ಮ ಕೋಣೆಯಲ್ಲಿಯೇ ಸುಮಾರು 4 ವರ್ಷಗಳ ಕಾಲ ಇಟ್ಟುಕೊಂಡು ಆತನು ಹೈಸ್ಕೂಲ್ ಓದಲು ಅನುಕೂಲ ಮಾಡಿಕೊಟ್ಟರು. ಅದು ದೊಡ್ಡವರಿಗಾಗಿ ಮೀಸಲಾಗಿರುವಂತಹ ಹಾಸ್ಟಲ್, ಅಲ್ಲಿ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಕೊಡುತ್ತಿರಲಿಲ್ಲ. ಆದರೆ ಅದಕ್ಕೊಂದು ವ್ಯತ್ಯಾಸವನ್ನು ಮಾಡಿ ಅಪವಾದವನ್ನಾಗಿ ಮಾಡಿ ತಮ್ಮ ಕೋಣೆಯಲ್ಲಿಯೇ ಇಟ್ಟುಕೊಂಡು ಅವರು ನನಗೆ ದೊಡ್ಡ ಉಪಕಾರವನ್ನು ಮಾಡಿದ್ದಾರೆ. ಇವತ್ತು ನಾವು ಜೀವನದೃಷ್ಟಿಯನ್ನು, ವೈಜ್ಞಾನಿಕವಾಗಿ, ವೈಚಾರಿಕವಾಗಿ ವಿಮರ್ಶೆ ಮಾಡುವುದಕ್ಕೆ ಸಾಧ್ಯತೆ ಇದ್ದರೆ ಅಂತಹವರ ಒಡನಾಟ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಅದಕ್ಕಿಂತಲೂ ವೈಚಾರಿಕನಾಗಿರುವಂತಹ ಒಬ್ಬ ವ್ಯಕ್ತಿ ಭಾವುಕನಾಗಿರುವುದಿಲ್ಲ. ಭಾವುಕನಾಗಿರುವಂತಹ ವ್ಯಕ್ತಿ ಅನೇಕ ಬಾರಿ ಮೂಢನಂಬಿಕೆಗಳಿಗೆ ಒಳಗಾಗುತ್ತಾನೆ.

ಅವನು ತನ್ನ ವೈಚಾರಿಕತೆಯನ್ನು ಕಳೆದುಕೊಳ್ಳುತ್ತಾನೆ. ಆದರೆ ಇಲ್ಲಿ ವೈಚಾರಿಕತೆ ಮತ್ತು ಭಾವುಕತೆ ಜೊತೆ ಜೊತೆಗೆ ಹೋಗಿರತಕ್ಕಂಥ ಒಬ್ಬ ಅಪರೂಪದ ವ್ಯಕ್ತಿ ಇವರಾಗಿದ್ದಾರೆ. ಬಡವರ ಬಗ್ಗೆ ಸದಾ ಕನಿಕರವಿರುವಂತಹವರು, ಹಿಂದುಳಿದ ಜನಾಂಗದ ಬಗ್ಗೆ ಏನಾದರೂ ಮಾಡಬೇಕೆನ್ನುವಂತಹ ವಿಚಾರದಲ್ಲಿ, ಅದು ಮೀಸಲಾತಿಯ ವಿಚಾರವಾಗಿರಬಹುದು, ಮತ್ತೊಂದಾಗಿರಬಹುದು, ಅವರು ಬದುಕುತ್ತಿದ್ದಂತಹ ವಾತಾವರಣ ಎಲ್ಲವೂ ಕೂಡ ಮೇಲ್ಜಾತಿಯವರಿಗೆ ಸಂಬಂಧಪಟ್ಟವರ ಜೊತೆಗೆ ಇದೆ. ಅವರ ವಿದ್ಯಾಸಂಸ್ಥೆಗಳಾಗಿರಬಹುದು, ಅವರ ಒಡನಾಟವೇ ಇರಬಹುದು, ಕಲಾಸಂಸ್ಥೆಯನ್ನು ಕಟ್ಟಿರುವಂತಹ ಸನ್ನಿವೇಶದಲ್ಲಿ ವ್ಯಕ್ತಿಗತವಾದಂತಹ ಹೋರಾಟವನ್ನು ಅವರು ಎಂದೂ ಕೂಡ ಮಾಡಲಿಲ್ಲ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇತ್ತೀಚಿನ ದಿನಮಾನಗಳಲ್ಲಿ ಹೆಸರು ಮಾಡಿದಂತಹ ಎರಡೇ ಎರಡು ಉಪ ಕುಲಪತಿಗಳು ಎಂದರೆ, ಡಾ: ನಂಜುಂಡಪ್ಪನವರು ಹಾಗೂ ಮಾನ್ಯ ಹೆಚ್. ನರಸಿಂಹಯ್ಯನವರು. ಅವರಿಬ್ಬರನ್ನು ಬಿಟ್ಟರೆ ಪ್ರಾಯಶ: ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಶಿಸ್ತಿಗೆ ಒಳಪಡುವಂತಹ ರೀತಿಯಲ್ಲಿ ಅದು ಆಗಿರಲಿಲ್ಲ. ಆ ರೀತಿಯ ಶಿಸ್ತನ್ನು ಶೈಕ್ಷಣಿಕ ಸಂಯಮವನ್ನು ಅದಕ್ಕೆ ಬೇಕಾಗಿರುವಂತಹ ಉನ್ನತ ಸ್ಥಾನಮಾನವನ್ನು ತಂದುಕೊಟ್ಟರು. ಅದು ಯಾವುದೇ ಸರ್ಕಾರವಾಗಿದ್ದರೂ ಕೂಡ ಈ ತರಹದ ನಿರ್ಧಾರಗಳನ್ನು ಮಾಡಬೇಕಾದರೆ ಅಥವಾ ಪ್ರಶಸ್ತಿ ಪ್ರಧಾನ ಮಾಡಬೇಕಾದಂತಹ ಸಂದರ್ಭ ಸನ್ನಿವೇಶಗಳು ಇದ್ದರೆ ಆಗ ಹೆಚ್. ನರಸಿಂಹಯ್ಯನವರನ್ನು ಅಧ್ಯಕ್ಷರನ್ನಾಗಿ ಮಾಡುವಂತಹದ್ದು ಒಂದು ಸಂಪ್ರದಾಯವಾಗಿಯೇ ಬೆಳೆದಿತ್ತು. ಅಂದರೆ ಅವರು ಯಾವುದೇ ಪಕ್ಷ ಅನ್ನುವುದಕ್ಕಿಂತಲೂ ಹೆಚ್ಚಾಗಿ ಒಬ್ಬ ಗೌರವಾನ್ವಿತವಾಗಿರುವಂತಹ ಕನ್ನಡನಾಡಿನ ಒಬ್ಬ ವ್ಯಕ್ತಿಯಾಗಿದ್ದರು. ಈಗಾಗಲೇ ಶ್ರೀರಾಮರೆಡ್ಡಿಯವರು ಹೇಳಿದಂತೆ ಅವರ ಊರಿನಲ್ಲಿ ಅವರು ಕಟ್ಟಿರುವಂತಹ ಶಾಲೆಗೆ ಅಲ್ಲಿ ಮಾಡಿರುವಂತಹ ಕೆಲಸ ಕಾರ್ಯಗಳನ್ನು ತೋರಿಸುವುದಕ್ಕಾಗಿ ಅವರಿಗೆ ಬಹಳ ಹಿಗ್ಗಾಗುತ್ತಿತ್ತು. ನಮ್ಮನ್ನು ಅನೇಕಬಾರಿ ಅಲ್ಲಿಗೆಲ್ಲಾ ಕರೆದುಕೊಂಡು ಹೋಗುತ್ತಿದ್ದರು. ಬಹಳ ಸರಳವಾಗಿರುವಂತಹ ಜೀವನ. ಅವರು ಗಾಂಧಿವಾದಿಗಳನ್ನು ಎನ್ನುವುದಕ್ಕಿಂತ ಹೆಚ್ಚಾಗಿ ಒಬ್ಬ ಹಳ್ಳಿಗನಾಗಿದ್ದ. ಒಬ್ಬ ಭೌತವಿಜ್ಞಾನಿ ಹಳ್ಳಿಗನಾಗಿ ಬದುಕಬೇಕು ಎನ್ನುವಂತಹ ರೀತಿಯಲ್ಲಿ ಅವರು ತಮ್ಮ ಜೀವನವನ್ನು ನಡೆಸಿಕೊಂಡು ಹೋದಾಗ ಸರಳತೆ, ಅವರ ಮನುಷ್ಯನ ವೈಚಾರಿಕತೆಗೆ ಒಂದು ಕಿರೀಟವಾಗಿ ಇರುವುದು ಕಂಡುಬರುತ್ತಿತ್ತು. ಯಾರು ಸರಳವಾಗಿ ಇರುವುದಿಲ್ಲ? ಅವರು ಸಂಕೀರ್ಣವಾಗಿಯೂ ಕೂಡ ಇರುವುದಿಲ್ಲ. ಅವರಲ್ಲಿ ಯಾವುದೇ ತರವಾಗಿರತಕ್ಕಂತಹ ಮೂಲ ಕ್ರಿಯಾ ಚಟುವಟಿಕೆಗಳಿಗಾಗಲಿ, ಅಥವಾ ಸ್ವಜನಾತ್ಮಕವಾದಂತಹ ಯೋಜನೆಗಳಿಗಾಗಲಿ, ಯಾವುದೇ ಒಂದು ಭದ್ರ ಬುನಾದಿ ಎನ್ನುವುದು ಇರುವುದಿಲ್ಲ. ಆದರೆ ಸರಳವಾದಂತಹ ವ್ಯಕ್ತಿಗೆ ಉನ್ನತ ವಿಚಾರಗಳು ತನ್ನಷ್ಟಕ್ಕೆ ತಾನೇ ಹೊಳೆಯುತ್ತದೆ.

ಅನೇಕರು ಸರಳರಾಗಿರುತ್ತಾರೆ. ಆದರೆ ಬೋಳೆಯಾಗಿರುತ್ತಾರೆ, ಈ ಬೋಳೆ ಗಾಂಧಿಗಳ ವಿರೋಧವಾಗಿ ಇವರು ಎಷ್ಟು ದಿವಸ ಹೋರಾಟ ಮಾಡಿದರು ಅಂದರೆ ಕನ್ನಡನಾಡಿನ ಉದ್ದಗಲಕ್ಕೂ ಕೂಡ ಡಾ: ಕೋವೂರ್‌ರವರನ್ನು ಕರೆಸಿ ಅವರು ಅವತ್ತು ಸತ್ಯಸಾಯಿಬಾಬಾರವರ ವಿರುದ್ಧ ಮಾತನಾಡತಕ್ಕಂಥದ್ದು ಅಂದರೆ ಇವತ್ತಿಗೂ ಕೂಡ ಬಹಳ ವಿರೋಧವಾಗಿರುವಂಥದ್ದು. ಅಂತಹ ಸನ್ನಿವೇಶಗಳಲ್ಲಿ ಈ ರೀತಿಯ ಚಮತ್ಕಾರಗಳ ಮೂಲಕವಾಗಿ ಸಂಮೋಹನವನ್ನು ಮಾಡುವುದರ ಮೂಲಕವಾಗಿ ಈ ಮೂಢನಂಬಿಕೆಯನ್ನು ದೇಶದಲ್ಲಿ ಯಾವ ರೀತಿಯಾಗಿ ಬೆಳೆಸಬಹುದು ಎನ್ನುವುದಕ್ಕಾಗಿಯೇ ಅವರು ಬೀದಿನಾಟಕಗಳ ಪರಂಪರೆಯನ್ನು ಬೆಳೆಸಲಿಕ್ಕೆ ಅವರು ನ್ಯಾಷನಲ್ ಕಾಲೇಜನ್ನು ಮೊದಲು ಬಿಟ್ಟುಕೊಟ್ಟರು. ಆ ಬೀದಿನಾಟಕಗಳು ಅಲ್ಲಿಂದ ಪ್ರಾರಂಭವಾಯಿತು, ಡಾ: ಕೋವೂರ್‌ರವರನ್ನು ಶ್ರೀಲಂಕಾದಿಂದ ಕರೆಸಿ ಇದೇ ಬೆಂಗಳೂರಿನಲ್ಲಿ ಒಂದು ಲಕ್ಷ ರೂಪಾಯಿಗಳ ಬಹುಮಾನವನ್ನು ಕೊಡಿಸುತ್ತೇನೆಂದು ಘೋಷಣೆಯನ್ನು ಕೂಡ ಮಾಡಿಸಿದರು. ಯಾರಾದರೂ ಈ ತರಹ ಬೂದಿ ಕೊಡುವಂತಹದ್ದು, ಉಂಗುರವನ್ನು ಕೊಡುವಂಥದ್ದು, ಸರ ಕೊಡುವಂಥದ್ದು ಇದ್ದರೆ ಒಂದು ವಸ್ತುವನ್ನು ಮತ್ತೊಂದು ವಸ್ತುವಿನ ನಂತರ ಸ್ಥಳಾಂತರಿಸಬಹುದು ಎಂಬ ವಿಚಾರಗಳಲ್ಲಿ ಬಹಳ ವೈಜ್ಞಾನಿಕವಾದಂತಹ ಉತ್ತರವನ್ನು ಕಂಡುಹಿಡಿದರು. ಅದೇ ರೀತಿಯಾಗಿ ಮಾನ್ಯ ದಿವಂಗತ ಜಿ.ಹೆಚ್. ಪಟೇಲ್‌ರವರೂ ಕೂಡ ಇದ್ದರು. ಅವರಿಗೊಮ್ಮೆ ಸತ್ಯಸಾಯಿಬಾಬಾರವರು ಈ ರೀತಿಯಾಗಿ ಮಂತ್ರಿಸಿ ಉಂಗುರವನ್ನು ಮತ್ತು ಸರವನ್ನು ಕೊಟ್ಟರು. ಅವರ ಜೊತೆ ಬೇರೆ ಬೇರೆ ಅಧಿಕಾರಿಗಳಿದ್ದರು. ಅವರೆಲ್ಲರೂ ಬಹಳ ಭಾವುಕರಾಗಿದ್ದರು. ನೋಡಿ ಈ ತರಹ ಆಗಿದೆ ನಿಮಗೆಲ್ಲಾ ಕೊಟ್ಟರಲ್ಲಾ ಸಾರ್ ಈ ತರಹ. ಬಹಳ ಪುನೀತರಾದಿರಿ ಎಂದರು. ಆಗ ಜೆ.ಹೆಚ್. ಪಟೇಲ್‌ರವರು ಯಾವುದನ್ನು ಮುಷ್ಟಿಯಲ್ಲಿ ಹಿಡಿಯಬಹುದೋ ಅದನ್ನು ಸ್ಥಳಾಂತರಿಸಬಹುದು, ಯಾವುದನ್ನು ಮುಷ್ಟಿಯಲ್ಲಿ ಹಿಡಿಯುವುದಕ್ಕಾಗುವುದಿಲ್ಲ ಅದು ಆಗುವುದಿಲ್ಲ, ಆದ್ದರಿಂದ ನನಗೆ ಒಂದು ಟ್ರ್ಯಾಕ್ಟರ್ ಕೊಡಪ್ಪಾ ಎಂದು ಅವರಿಗೆ ಹೇಳಪ್ಪಾ ಎಂದರು. ಆ ತರಹ ಪಟೇಲ್‌ರವರು ತಮಾಷೆಯಾಗಿ ಹೇಳುತ್ತಿದ್ದರು. ಆದರೆ ಇವರು ಎಲ್ಲೂ ಕೂಡ ತಮಾಷೆಯಾಗಿ ಮಾತನಾಡತಕ್ಕಂತಹವರು ಅಲ್ಲ. ಆದರೆ ಅವರ ಆತ್ಮಕಥೆಯಲ್ಲಿ ಅನೇಕ ಘಟನೆಗಳನ್ನೂ ಕೂಡ ಬರೆದಿದ್ದಾರೆ. ಅವರು ಎಷ್ಟು ನೋವನ್ನು ಉಂಡಿದ್ದಾರೆ, ಬಡತನದಿಂದ ಮೇಲೆ ಬಂದಿರುವಂತಹದ್ದು, ಆ ವಿದ್ಯೆಗೆ ಸಂಬಂಧಪಟ್ಟಿರುವಂತಹ ವಿಚಾರಗಳ ಬಗ್ಗೆ ಬಹಳ ದೊಡ್ಡ ಕಳಕಳಿಯನ್ನು ಇಟ್ಟುಕೊಂಡಿದ್ದರು. ಅವರು ಸುಂದರ್‌ರಾಜ್, ವಿಷ್ಣುವರ್ಧನ್‌ರಂತಹ ಒಳ್ಳೆಯ ಚಲನಚಿತ್ರನಟರಿಂದ ಹಿಡಿದು ನಾಟಕ ರಂಗಭೂಮಿಯಲ್ಲಿರುವಂತಹ ಸಿಂಹರವರಿಂದ ಹಿಡಿದು ನಿಜಲಿಂಗಪ್ಪನವರ ಜೊತೆಗೆ ಸಂಪರ್ಕ ಇಟ್ಟುಕೊಂಡಿದ್ದರೂ ಕೂಡ ತಮ್ಮ

ಸರಳ ಜೀವನವನ್ನು ಮರೆತಂಥವರು ಅಲ್ಲ. ಅವರು ಕೊನೆಗಳಿಗೆಯಲ್ಲಿ ಮೈಸೂರಿಗೆ ಬಂದು ಚಾಮುಂಡೇಶ್ವರಿ ಪೂಜೆಯನ್ನು ಮಾನ್ಯ ಸಿದ್ದರಾಮಯ್ಯನವರು ಆಹ್ವಾನ ಕೊಟ್ಟರು ಎಂದು ಹೇಳಿದ್ದರು. ಆಗ ನಾನು ಮುಖ್ಯ ಅತಿಥಿಗಳಾಗಿ ಅವರ ಜೊತೆಗಿದ್ದೆ. ಮಾನ್ಯ ನಾಗರಾಜ್‌ರವರು ಹೇಳಿದಂತೆ ಸ್ಪಷ್ಟತೆ ಇರಲಿಲ್ಲವೆನ್ನುವುದಕ್ಕಿಂತ ಹೆಚ್ಚಾಗಿ ಪ್ರಾಯಶ: ಬದುಕಿನ ಇಳಿವಯಸ್ಸಿನಲ್ಲಿ ಇಂತಹ ಅನೇಕ ಸಮಸ್ಯೆಗಳು ಮತ್ತು ಗೊಂದಲಗಳು ಏಕತಾನಗಳು ಬರುತ್ತವೆ. ಎಂ.ಸಿ. ಚಾಗ್ಲಾರವರು ತಮಗೆ ಗೊತ್ತಿದ್ದಂತೆ ಮಾನ್ಯ ಸುಪ್ರೀಂಕೋರ್ಟಿನ ದೊಡ್ಡ ಜಡ್ಜ್ ಆಗಿದ್ದರು. ನಮ್ಮ ದೇಶದ ಶಿಕ್ಷಣ ಮಂತ್ರಿಗಳಾಗಿದ್ದರು. ಅವರು ಎಂದೂ ಕೂಡ ಮಸೀದಿಗೆ ಹೋಗಿ ಪ್ರಾರ್ಥನೆ ಮಾಡಿದವರಲ್ಲ. ಪ್ರವಾದಿಗಳಲ್ಲಿ ನಂಬಿಕೆಯನ್ನು ಇಟ್ಟುಕೊಂಡಥವರೂ ಅಲ್ಲ. "ರೋಸಸ್ ಇನ್ ಡಿಸೆಂಬರ್" ಎಂದು ಹೇಳಿ ಒಂದು ಉತ್ತಮವಾದಂತಹ ಆತ್ಮಕಥೆಯನ್ನು ಬರೆದಿದ್ದರು. ಆ ಬದುಕಿನ ಇಳಿವಯಸ್ಸಿನಲ್ಲಿ ತಮ್ಮ ಹೆಂಡತಿ ಸತ್ತನಂತರ ಮಕ್ಕಳು ಬೇರೆ ಬೇರೆ ಕಡೆಗೆ ಕೆಲಸಕ್ಕೆ ಹೋದಾಗ ಅವರಿಗೆ ಒಂಟಿತನ ಆವರಿಸುತ್ತದೆ. ಆ ಒಂಟಿತನ ಆವರಿಸಿಕೊಂಡಾಗ ಒಂದು ಮಾತನ್ನು ಬರೆಯುತ್ತಾರೆ. 'If I had the faith, I would have clinged on to it' ಎಂದು ಯಾವುದಾದರೂ ಒಂದು ನಂಬಿಕೆ ಒಂದು ದೊಡ್ಡ ಅದ್ಭುತವಾದಂತಹ ಶಕ್ತಿ ಇದೆ ಎಂದು ಹೇಳಿ ನಾನು ಭಾವಿಸಿಕೊಂಡು ಆ ಪ್ರಾರ್ಥನೆಗೆ ನನ್ನನ್ನು ನಾನು ತೊಡಗಿಸಿಕೊಂಡಿದ್ದರೆ ಆ ನಂಬಿಕೆಯಲ್ಲಿಯೇ ನಾನು ಕಾಲವನ್ನು ಕಳೆಯಬಹುದಾಗಿತ್ತು. ಆದರೆ ಈ ಏಕತನ ಏನಿದೆ, ಏಕಾಕಿತನ ಎನ್ನುವುದು ನನ್ನನ್ನು ಕಾಡುತ್ತಿದೆ ಎನ್ನುವ ಮಾತನ್ನು ಬರೆದರು. ಹಾಗೆಯೇ ಡಾ: ಹೆಚ್. ನರಸಿಂಹಯ್ಯ ನವರು ಪ್ರಾಯಶ: ಇಳಿವಯಸ್ಸಿನಲ್ಲಿ ಅವರ ಆರೋಗ್ಯ ಇತ್ತೀಚಿನ ದಿನಮಾನಗಳಲ್ಲಿ ಚೆನ್ನಾಗಿರಲಿಲ್ಲ. ಆ ಕಾರಣಕ್ಕಾಗಿಯೇ ಅವರು ಪ್ರಾಯಶ: ಆ ತರಹದ ಒಂದು ನಿರಾಕರಿಸುವಂತಹದ್ದು ಏನಿದೆ ದೈವದ ನಿರಾಕರಣೆ ಅವರಲ್ಲಿ ಇರಲಿಲ್ಲ. ಆದರೆ ಮೂಢನಂಬಿಕೆಗಳ ನಿರಾಕರಣೆ, ದೇವಾಲಯಗಳ ನಿರಾಕರಣೆ ಇತ್ತು. ಅದನ್ನು ಅಂಬೇಡ್ಕರ್ ಅವರೂ ಕೂಡ ಪ್ರತಿಪಾದಿಸಿದರು. ಬಸವಣ್ಣನವರೂ ಕೂಡ ಪ್ರತಿಪಾದಿಸಿದ್ದರು. ಹಾಗೆ ಯಾವುದೋ ಒಂದು ದೊಡ್ಡ ಶಕ್ತಿ, ಇಡೀ ಪ್ರಕೃತಿಯನ್ನು ದೊಡ್ಡ ಶಕ್ತಿಯಾಗಿ ಆಡಿಸುತ್ತಿದೆ ಎನ್ನತಕ್ಕಂಥಾದ್ದರ ಬಗ್ಗೆ ವಿಶ್ವಾಸ ಇಟ್ಟುಕೊಂಡಿದ್ದಂಥವರು. ನಮ್ಮಂಥ ಎಲ್ಲಾ ಜನಗಳಿಗೂ ಕೂಡ ದೊಡ್ಡ ಮಾರ್ಗದರ್ಶನ ಮಾಡಿದಂಥವರು. ಅವರ ಕೊನೆಯಾಸೆ ಒಂದಿತ್ತು. ಅದನ್ನು ಹೇಳುವಂಥಾದ್ದು ಏನಿಲ್ಲ. ಪದ್ಮಭೂಷಣ ಪದವಿಯನ್ನು ಅವರಿಗೆ ನಾವು ಕೊಡಿಸಬೇಕಿತ್ತು. ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೂಡ ಈ ವಿಚಾರವನ್ನು ಬಿನ್ನಹ ಮಾಡಿದ್ದೇವೆ. ಕೊನೆಯ ಪಕ್ಷ ಮರಣೋತ್ತರವಾಗಿ ಅಂತಹ ಒಂದು ಪದವಿಯನ್ನು ಕೊಡಿಸಲಿಕ್ಕೆ ತಾವು ತಮ್ಮ ಪ್ರಭಾವವನ್ನು ಬೀರಬೇಕು ಎನ್ನುವಂಥಾದ್ದು ಮತ್ತು ಅನೇಕ ವಿಚಾರಗಳು, ಸಲಹೆಗಳು ಏನಿವೆ ಅವುಗಳ

ಪ್ರಕಾರ ನಡೆದುಕೊಳ್ಳಲಿಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು ಹೇಳುತ್ತಾ ಮಾನ್ಯ ನಾಗರಾಜ್ ಅವರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಆಸಕ್ತಿಯನ್ನು ತಾಳಿದ್ದರು ಮತ್ತು ಮಾನ್ಯ ರಮೇಶ್‌ಕುಮಾರ್ ಮತ್ತು ಮಾನ್ಯ ವಾಟಾಳ್ ನಾಗರಾಜ್ ಅವರು ಅದರ ಬಗ್ಗೆ ನಿರಂತಹ ಹೋರಾಟ ಮಾಡಿದ್ದರು. ಒಮೊಮ್ಮೆ ಅಧಿಕಾರ ಇದ್ದರೂ ಕೂಡ ಕೆಲವು ವಿಚಾರಗಳನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ದಿವಂಗತ ನಾಗರಾಜ್‌ರವರ ಆತ್ಮಕ್ಕೂ ಕೂಡ ಈ ಸಂದರ್ಭದಲ್ಲಿ ಶಾಂತಿಯನ್ನು ಕೋರಿ ನನಗೆ ಮಾತನಾಡಲು ಅವಕಾಶ ಕೊಟ್ಟಂಥ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಶಿಕ್ಷಣ ತಜ್ಞ ಡಾ: ಹೆಚ್. ನರಸಿಂಹಯ್ಯ ಅವರ ನಿಧನದಿಂದ ನಮ್ಮ ರಾಜ್ಯಕ್ಕೆ ಬಹಳ ನಷ್ಟವಾಗಿದೆ. ನಾನು ಬೆಳಿಗ್ಗೆ ಹತ್ತು ಗಂಟೆಗೆ ಹೋಗಿ ಅವರ ಅಂತಿಮ ದರ್ಶನ ಮಾಡಿಕೊಂಡು ಬಂದೆ. ಅಲ್ಲಿ ಬಹಳ ಜನಸ್ತೋಮ; ವಿಪರೀತ ಜನರು ಇದ್ದರು. ನನಗೂ ಮತ್ತು ಅವರಿಗೂ ಬಹಳ ಸ್ನೇಹ, ಏಕೆಂದರೆ ಅನೇಕ ಸಾರಿ ಅವರು ಸಲಹೆಗಳನ್ನು ಕೊಡುತ್ತಿದ್ದರು. 'ಮಂಜುನಾಥ್‌ರವರೇ, ನೀವು ವಿದ್ಯಾಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೀರಿ, ವಿದ್ಯಾ ಮಂತ್ರಿಗಳಾಗಿದ್ದೀರಿ' ಒಳ್ಳೆಯ ಕೆಲಸ ಮಾಡಿ ಎಂದು ಸಲಹೆಗಳನ್ನು ಕೊಡುತ್ತಿದ್ದರು. ಅದರ ಜತೆಗೆ ಈಗ ಬೆಂಗಳೂರು ವಿಶ್ವವಿದ್ಯಾಲಯ ಅಂತ ಇವತ್ತಿನ ದಿವಸ ಏನಿದೆ, ಅದಕ್ಕೆ ಅವರು ವೈಸ್ ಚಾನ್ಸಲರ್ ಆಗಿದ್ದಾಗ 'ಜ್ಞಾನಭಾರತಿ' ಎಂದು ಹೆಸರನ್ನು ಇಟ್ಟವರು ಅವರೇ. ನಾನು ಈಗ ಒಂದು ತಿಂಗಳ ಕೆಳಗೆ ಅವರು ಕಾಯಿಲೆ ಬಿದ್ದಿದ್ದಾಗ ಅವರನ್ನು ನೋಡುವುದಕ್ಕೆ ಹೋಗಿದ್ದೆ. ಜ್ಞಾನಭಾರತಿ ಎಂದು ಹೆಸರು ಇಟ್ಟವರು ಅವರು. ಅದಕ್ಕೋಸ್ಕರ ಅವರದೊಂದು ನಾಮಫಲಕವನ್ನು ಹಾಕಬೇಕೆಂದು ಹೇಳಿ ಅದನ್ನು ಕೆತ್ತಿಸಿ ಅಲ್ಲಿ ಅದನ್ನು ಅನಾವರಣ ಮಾಡಿ ಬಂದೆ. ಆ ದಿವಸ ಒಂದು ಹಾರ ಮತ್ತು ಶಾಲನ್ನು ತೆಗೆದುಕೊಂಡು ಆಸ್ಪತ್ರೆಗೆ ಹೋದರೆ ಶಾಲು ಬೇಡವೆಂದರೆ. ನಂತರ ಅವರಿಗೆ ಹಾರ ಹಾಕಿ ಬಂದೆವು. ಅಂತಹ ಒಬ್ಬ ಸರಳ ಜೀವಿ ಅವರಾಗಿದ್ದರು. ಇವತ್ತು ಬೆಳಿಗ್ಗೆ ನೋಡಿದಾಗ ನನಗಂತೂ ಬಹಳ ದು:ಖವಾಯಿತು. ಬಹಳ ದೊಡ್ಡ ಜನಸ್ತೋಮ ಅಲ್ಲಿ ಸೇರಿತ್ತು ಮತ್ತು ನನಗೆ ಒಳಗಡೆಗೆ ಹೋಗಲಿಕ್ಕೇ ಕಷ್ಟವಾಯಿತು. ಇವತ್ತು ಮಾನ್ಯ ಶ್ರೀರಾಮರೆಡ್ಡಿಯವರು ಅವರದ್ದೊಂದು ಅಧ್ಯಯನ ಕೇಂದ್ರ ಮಾಡಬೇಕೆಂದು ಹೇಳಿದರು. ನಾನು ಅದನ್ನು ಮೊನ್ನೆಯೇ ಹೇಳಿದ್ದೆ. ಅವರ ನಾಮಫಲಕವನ್ನು ಅನಾವರಣ ಮಾಡಿದ ದಿವಸ ಅವರ ಜ್ಞಾಪಕಾರ್ಥವಾಗಿ ಏನನ್ನಾದರೂ ಮಾಡಬೇಕೆಂದು ವೈಸ್ ಚಾನ್ಸಲರ್ ಅವರ ಹತ್ತಿರ ಮಾತನಾಡಿದಾಗ ಹೇಳಿದೆ. ಅದಕ್ಕೆ ಅವರು ಇಲ್ಲ ಸರ್ ಇದರ ಬಗ್ಗೆ ಚರ್ಚೆ ಮಾಡೋಣ ಎಂದು

† ಈ ಭಾಷಣವನ್ನು ಮಾನ್ಯ ಸಚಿವರಿಂದ ಪರಿಷ್ಕರಿಸಲ್ಪಟ್ಟಿದೆ.

ಅವರು ಹೇಳಿದರು. ಈ ರೀತಿ ಇವತ್ತಿನ ದಿವಸ ಅಮೋಘವಾದ ಸೇವೆಯನ್ನು ಸಲ್ಲಿಸಿದ ಅವರು ಇಲ್ಲಿ ಮಾತ್ರವಲ್ಲ ಗ್ರಾಮಾಂತರ ಪ್ರದೇಶಗಳಲ್ಲೂ ಸೇವೆ ಮಾಡಿದ್ದಾರೆ. ನಾನು ಬಾಗೇಪಲ್ಲಿಯ ಅವರದೇ ಆದ ಕಾಲೇಜಿಗೆ ಹೋಗಿದ್ದೆ. ಅಲ್ಲಿ ಒಂದು ಲೈಬ್ರರಿಯನ್ನು ತಮ್ಮ ಸ್ವಂತ ಖರ್ಚಿನಿಂದ ಅವರು ಮಾಡಿದ್ದಾರೆ. ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೋಸ್ಕರ ಅದನ್ನು ಅವರು ಮಾಡಿದ್ದರು ಇದೇ ರೀತಿ ದೊಡ್ಡಬಳ್ಳಾಪುರ ಕಾಲೇಜಿನಲ್ಲೂ ಅವರ ಒಂದು ಲೈಬ್ರರಿ ಇದೆ. ಈ ರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಬೇಕೆಂದು ಅವರು ಬಹಳವಾಗಿ ಹೇಳುತ್ತಿದ್ದರು. ಅವರು ಅದೇ ರೀತಿಯಲ್ಲಿ ಕೆಲಸವನ್ನು ಕೂಡ ಮಾಡಿದರು. ಅಂತಹ ಒಬ್ಬ ಮಹಾನ್ ವ್ಯಕ್ತಿ ಇವತ್ತಿನ ದಿವಸ ಕಣ್ಮರೆಯಾಗಿದ್ದಾರೆ. ನನಗಂತೂ ಬಹಳ ದು:ಖವಾಗಿದೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಮಾನ್ಯ ಶ್ರೀರಾಮರೆಡ್ಡಿಯವರು ಏನು ಅವರ ಹೆಸರಿನಲ್ಲಿ ಒಂದು ಅಧ್ಯಯನ ಸಂಸ್ಥೆಯನ್ನು ಮಾಡಬೇಕೆಂದು ಹೇಳಿದ್ದಾರೋ, ನಾನಂತೂ ಈಗಾಗಲೇ ಅದರ ಬಗ್ಗೆ ಚರ್ಚೆ ಮಾಡಿದ್ದೇನೆ. ಅದನ್ನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮಾಡಬೇಕು. ಏಕೆಂದರೆ ಅವರು ಅಲ್ಲೇ ಅಮೋಘವಾದ ಸೇವೆ ಸಲ್ಲಿಸಿದ್ದಾರೆ. ಜ್ಞಾನಭಾರತಿ ಅಂತ ಹೆಸರನ್ನು ಇಟ್ಟವರೂ ಅವರೇ ಅಂತಹ ಒಬ್ಬ ಸರಳ ಜೀವಿ. ಈಗ ಮಾನ್ಯ ಎಂ.ಪಿ. ಪ್ರಕಾಶ್ ಅವರು ಹೇಳಿದ ಹಾಗೆ ನನ್ನ ಮಗನನ್ನು ಅಲ್ಲಿ ಬಿಟ್ಟಿದ್ದೆ. ಅವರ ಜತೆಯಲ್ಲಿ ಇಟ್ಟುಕೊಂಡು ಬಿ.ಎ. ವರೆಗೂ ಓದಿಸಿದರು. ಅಲ್ಲಿ ಬಹಳ ಜನ ಬಡವರ ಮಕ್ಕಳು ಇದ್ದರು. ಬಡವರ ಮಕ್ಕಳಿಗೂ ನೀವು ಆಶ್ರಯ ಕೊಡಬೇಕೆಂದು ನಾನು ಅವರಿಗೆ ಹೇಳುತ್ತಿದ್ದೆ. ನೀವು ಬರೇ ಮೆರಿಟ್ ಅಂತ ಹೇಳಿ ಸೀಟು ಕೊಡಬೇಡಿ, ಬಡವರಿಗೂ ಕೊಡಿ ಎಂದು ನಾನು ಹೇಳುತ್ತಿದ್ದೆ. ಅದೇ ರೀತಿ ಅವರು ಬಡವರ ಮಕ್ಕಳಿಗೂ, ಹಾಗೂ ಅನೇಕಾನೇಕ ಜನರಿಗೂ ಸಹಾಯ ಮಾಡಿದ್ದಾರೆ. ಅಂತಹ ಒಬ್ಬ ಮಹನೀಯರು ಇವತ್ತಿನ ದಿವಸ ಕಣ್ಮರೆಯಾಗಿದ್ದಾರೆ. ಇದರಿಂದ ರಾಜ್ಯಕ್ಕೆ ತುಂಬಲಾರದಷ್ಟು ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ತಾವು ನನಗೆ ಈ ಒಂದು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಡಾ: ಹೆಚ್. ನರಸಿಂಹಯ್ಯ ಅವರು ಇವತ್ತು ನಮ್ಮ ಮಧ್ಯದಲ್ಲಿ ಇಲ್ಲ. ಆದರೆ ಅವರ ವಿಚಾರಗಳು ಇವತ್ತು ನಮ್ಮ ಜತೆಗಿದ್ದಾವೆ. ಅವರು ಒಬ್ಬ ವಿಚಾರವಾದಿ ಮತ್ತು ವೈಚಾರಿಕತೆ ವಿಷಯದಲ್ಲಿ ವೈಯಕ್ತಿಕವಾಗಿ ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದಿಲ್ಲ, ಇಡೀ ಜಗತ್ತಿಗೆ, ಇಡೀ ಸಮಾಜಕ್ಕೆ ತೋರಿಸುವಂತಹ

ಕ್ರಿಯಾಶೀಲ ವ್ಯಕ್ತಿ ಡಾ: ಹೆಚ್. ನರಸಿಂಹಯ್ಯ ಆಗಿದ್ದರು. ಇಂದು ಬಹುಮುಖ್ಯವಾಗಿ ಅವರ ಬಗ್ಗೆ ಹೇಳುವುದಾದರೆ ಅವರು ಗಾಂಧೀವಾದಿಯಾಗಿದ್ದರು. ಇವತ್ತು ಬಹಳಷ್ಟು ಗಾಂಧಿವಾದಿಗಳನ್ನು ನಾವು ನೋಡುತ್ತಿದ್ದೇವೆ. ಗಾಂಧಿ ವಿಚಾರಗಳ ಬಗ್ಗೆ ಮಾತನಾಡುವುದನ್ನು ನಾವು ಕೇಳುತ್ತೇವೆ. ಆದರೆ ನಿಜವಾಗಿ ಗಾಂಧೀಜಿಯವರು ಏನೊಂದು ಹಾಕಿಕೊಟ್ಟಂಥ ಮಾರ್ಗಗಳು ಇವೆ, ವಿಚಾರಗಳು ಇವೆ ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಂಥ ವ್ಯಕ್ತಿ ಡಾ: ಹೆಚ್. ನರಸಿಂಹಯ್ಯನವರು ಆಗಿದ್ದರು. ಅವರು ಸರಳತೆಯಿಂದ ಕೊನೆಯವರೆಗೂ ಬದುಕಿದರು. ಈಗಾಗಲೇ ಕೆಲವು ನಾಯಕರು ಹೇಳಿದ ಪ್ರಕಾರ ಅವರು ಕೊನೆಯ ದಿವಸದವರೆಗೂ ನ್ಯಾಷನಲ್ ಹೈಸ್ಕೂಲ್‌ನ ಹಾಸ್ಟೆಲ್‌ನ ಒಂದು ಕೋಣೆಯಲ್ಲಿ ಅವರು ಚಾಪೆಯ ಮೇಲೆ ಮಲಗುತ್ತಿದ್ದರು. ಅಲ್ಲಿ ಕುರ್ಚಿ ವಗೈರೆ ಏನೂ ಇರಲಿಲ್ಲ. ಬೇರೆ ಯಾರಾದರೂ ಬಂದರೆ ಆ ಚಾಪೆಯ ಮೇಲೆಯೇ ಕುಳಿತುಕೊಳ್ಳಬೇಕಿತ್ತು. ಅಷ್ಟೊಂದು ಉನ್ನತ ಮಟ್ಟದ ಹೆಸರು ಪಡೆದುಕೊಂಡಂಥ, ಉನ್ನತ ವಿಚಾರಗಳು ಇರುವಂಥ ವ್ಯಕ್ತಿ ಬೇಕಾದಷ್ಟು ವೈಭವ ಪೂರ್ಣವಾಗಿ ಇರಬಹುದಾಗಿತ್ತು. ಅವರು ವೈಸ್ ಚಾನ್ಸಲರ್ ಆಗಿ ಕೆಲಸ ಮಾಡಿದಂಥವರು, ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದಂಥವರು. ಆದರೆ ಯಾವುದೇ ಒಂದು ಸಾಮಾಜಿಕವಾದಂಥ ಈ ಒಂದು ಸಂದರ್ಭದಲ್ಲಿ ಸಾಮಾಜಿಕ ವಿಚಾರಗಳ ಬಗ್ಗೆ, ಗಾಂಧಿವಾದಿ ವಿಚಾರಗಳ ಬಗ್ಗೆ ತಮ್ಮ ಜೀವನದಲ್ಲಿ ಅನುಷ್ಠಾನ ಮಾಡಿದಂಥ ವ್ಯಕ್ತಿ ಡಾ: ಹೆಚ್. ನರಸಿಂಹಯ್ಯನವರು. ಅವರ ಬಗ್ಗೆ ಬಹಳ ಮುಖ್ಯವಾಗಿ ಹೇಳುವಂಥಾದ್ದು ಎಂದರೆ ಇವತ್ತು ಮೂಢನಂಬಿಕೆಗಳು, ಮೌಢ್ಯದ ಬಗ್ಗೆ, ಈ ಪವಾಡಗಳ ಬಗ್ಗೆ ಕೇವಲ ವಿರೋಧಿಸುವುದು ಅಷ್ಟೇ ಅಲ್ಲ, ಅವುಗಳ ಬಗ್ಗೆ ಜನಜಾಗೃತಿ ಮಾಡುವಂಥ ಕೆಲಸವನ್ನು ಅವರು ಮಾಡಿದ್ದಾರೆ. ಶ್ರೀಲಂಕಾದಿಂದ ಡಾ: ಕೋವೂರ್ ಅವರನ್ನು ಕರೆಸಿದ್ದರು. ಆಗ ಆ ಸಂದರ್ಭದಲ್ಲಿ ನಾವು ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೆವು. ಆಗ ಡಾ: ನರಸಿಂಹಯ್ಯನವರ ಹೋರಾಟ, ಡಾ: ಕೋವೂರ್ ಅವರ ಹೋರಾಟ ಎಲ್ಲಾ ಯುವಕರಲ್ಲಿ ಆಕರ್ಷಣೆಯನ್ನು ಉಂಟು ಮಾಡಿತ್ತು. ಇವರುಗಳು ಏನೋ ಒಂದು ಜಾಗೃತಿಯನ್ನು ಉಂಟುಮಾಡುತ್ತಿದ್ದಾರೆ ಎನ್ನುವಂಥ ಭಾವನೆ ಜತೆಗೆ ಅವರ ಕಡೆ ಹೆಚ್ಚು ಲಕ್ಷ್ಯ ನಮಗೆಲ್ಲರಿಗೂ ಇತ್ತು. ಮತ್ತು ಇದರ ಮುಖಾಂತರ ಎಷ್ಟೋ ಒಂದು ಜಾಗೃತಿ ಆಗಿದ್ದನ್ನು ಆ ಸಂದರ್ಭದಲ್ಲಿ ನಾವು ನೋಡುತ್ತಿದ್ದೆವು. ಹೀಗಾಗಿ ಬಹುಶ: ನನಗನ್ನಿಸುತ್ತದೆ ಮಾನ್ಯ ನರಸಿಂಹಯ್ಯನವರು ಆರೋಗ್ಯವಂತರಾಗಿದ್ದಾರೆ ಮೊನ್ನೆ ನಡೆದಂಥ ಬೆನ್ನಿಹಿನ್ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳು ಹೋಗುವುದನ್ನು ಅವರು ವಿರೋಧ ಮಾಡುತ್ತಿದ್ದರೋ ಏನೋ. ಅಂದರೆ ಆ ರೀತಿ ಒಂದು ಈ ಪವಾಡಗಳ ಬಗ್ಗೆ, ಮೂಢನಂಬಿಕೆಗಳ ಬಗ್ಗೆ ಸತತವಾಗಿ ಹೋರಾಟ ಮಾಡಿದಂಥ ವ್ಯಕ್ತಿ ನರಸಿಂಹಯ್ಯನವರು. ಅಂತಹವರು ಇವತ್ತು ನಮ್ಮ ಮಧ್ಯದಲ್ಲಿ ಇಲ್ಲ. ಇವತ್ತು ಗಾಂಧಿ ವಿಚಾರಗಳನ್ನು ನಾವು ಅಳವಡಿಸಿಕೊಳ್ಳುವಂಥಾದ್ದು, ಈ ಮೂಢನಂಬಿಕೆ,

ಪವಾಡಗಳ ವಿರುದ್ಧ ಹೋರಾಟ ಮಾಡುವಂಥಾದ್ದು ಆ ಒಂದು ಮನೋಸ್ಥಿತಿಯನ್ನು ತೆಗೆದುಕೊಂಡು ಹೋಗುವಂಥ ಕಾರ್ಯಚಟುವಟಿಕೆಯನ್ನು ಮಾಡಿದರೆ ಮಾತ್ರ ನಾವು ಅವರ ಆತ್ಮಕ್ಕೆ ನಿಜವಾಗಿ ಶಾಂತಿಯನ್ನು ಕೋರಿದಂತಾಗುತ್ತದೆ. ಮತ್ತು ಅವರು ಏನು ವಿಚಾರಗಳನ್ನು ಬಿತ್ತಿ ಹೋಗಿದ್ದಾರೆ. ಹಲವಾರು ಪುಸ್ತಕಗಳನ್ನು ಅವರು ಬರೆದಿದ್ದಾರೆ. ಶಿಕ್ಷಣ ವ್ಯವಸ್ಥೆ ಬಗ್ಗೆ, ವೈಚಾರಿಕತೆ ಬಗ್ಗೆ ಹಲವಾರು ಪುಸ್ತಕಗಳನ್ನು ಏನು ಬರೆದಿದ್ದಾರೆ ಅದರ ಬಗ್ಗೆ ಈಗಾಗಲೇ ಕೆಲವು ನಾಯಕರು ಹೇಳಿದ ಪ್ರಕಾರ ಅವರ ಹೆಸರಿನಲ್ಲಿ ಒಂದು ಅಧ್ಯಯನ ಸಂಸ್ಥೆಯನ್ನು ಮಾಡಬೇಕಾಗಿದೆ. ಕೇವಲ ಇಲ್ಲಿ ಒಂದು ಸಂತಾಪ ಸೂಚನೆ ಮುಖಾಂತರ ನಾವು ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದರೆ ಅದು ಅಷ್ಟೇ ಸಾಲದು. ಆ ಅಧ್ಯಯನ ಸಂಸ್ಥೆ ಮುಖಾಂತರ ಇಡೀ ರಾಜ್ಯಕ್ಕೆ, ಇಡೀ ಸಮಾಜಕ್ಕೆ ಅವರ ವಿಚಾರಗಳು ನಿರಂತರವಾಗಿ ಅದರ ಬಗ್ಗೆ ಚಿಂತನೆ ನಡೆಯುವಂಥ ವ್ಯವಸ್ಥೆಯಾದಾಗ ಮಾತ್ರ ನಿಜವಾಗಿಯೂ ನಾವು ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದ ಹಾಗೆ ಆಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಬ್ಬ ಮಹನೀಯರಾದಂಥ ನಾಗರಾಜ್ ಅವರ ಬಗ್ಗೆ ಈಗಾಗಲೇ ಸಾಕಷ್ಟು ವಿಚಾರಗಳು ಇಲ್ಲಿ ಬಂದಿವೆ. ಕ್ರಿಕೆಟ್ ಸಂಸ್ಥೆಯನ್ನು ಬೆಳೆಸಲಿಕ್ಕೆ, ಕ್ರಿಕೆಟ್ ಆಟದ ಬಗ್ಗೆ ಉತ್ಸುಕತೆಯನ್ನು ಮೂಡಿಸಲಿಕ್ಕೆ ಕಾರಣಕರ್ತರಾದಂಥ ಮಾನ್ಯ ನಾಗರಾಜ್‌ರವರು ತಮ್ಮ ಕೊನೆಯ ದಿವಸಗಳಲ್ಲಿ ಮಾನಸಿಕ ವ್ಯಥೆಯಿಂದ ನೊಂದು ತೀರಿಕೊಂಡರು ಎನ್ನುವಂಥಾದ್ದು. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಮತ್ತು ಅವರ ಕುಟುಂಬ ವರ್ಗಕ್ಕೆ ದು:ಖವನ್ನು ಸಹಿಸುವ ಶಕ್ತಿಯನ್ನು ದೇವರು ಕೊಡಲಿ ಎಂದು ಹೇಳಿ ನಾಗರಾಜ್ ಅವರ ಆತ್ಮಕ್ಕೂ ಶಾಂತಿಯನ್ನು ಕೋರುತ್ತೇನೆ. ಈ ಇಬ್ಬರೂ ಮಹನೀಯರುಗಳು ಇಂದು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರುಗಳ ಆತ್ಮಕ್ಕೆ ಶಾಂತಿ ಕೋರಿ ನಮ್ಮ ಪಕ್ಷದ ಪರವಾಗಿ ಅವರಿಗೆ ಗೌರವವನ್ನು ಸೂಚಿಸುವಂತಹ ಕೆಲಸವನ್ನು ನಾನು ಮಾಡುತ್ತಿದ್ದೇನೆ ಮತ್ತು ತಾವೇನು ಈ ಸಂತಾಪ ಸೂಚಕ ನಿರ್ಣಯವನ್ನು ತಂದಿದ್ದೀರಿ, ಅದಕ್ಕೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಡಾ: ನರಸಿಂಹಯ್ಯನವರ ವಿಷಯದಲ್ಲಿ ನಮ್ಮ ನಾಯಕರು ಮತ್ತು ಉಪ ಮುಖ್ಯಮಂತ್ರಿಗಳು ಮತ್ತು ಅನೇಕ ಗಣ್ಯರು, ವಿರೋಧ ಪಕ್ಷದ ನಾಯಕರು ಎಲ್ಲರೂ ಮಾತನಾಡಿದ್ದಾರೆ. ನಮ್ಮ ಜಿಲ್ಲೆಯಿಂದ ಇಬ್ಬರು ಮಹಾನ್ ನಾಯಕರುಗಳಾದ ಸರ್. ಎಂ. ವಿಶ್ವೇಶ್ವರಯ್ಯನವರು ಮತ್ತು ಆ ಪಂಕ್ತಿಗೆ ಸೇರಿದಂಥ ಡಾ: ಹೆಚ್. ನರಸಿಂಹಯ್ಯನವರು, ಇವತ್ತು ಇವರಿಬ್ಬರನ್ನೂ ಕೂಡ ನಮ್ಮ ಜಿಲ್ಲೆ ಕಳೆದುಕೊಂಡಿದೆ ಅಲ್ಲದೆ ಇಡೀ ರಾಷ್ಟ್ರ ಮತ್ತು ರಾಜ್ಯಕ್ಕೆ ನಷ್ಟವಾಗಿದೆ ಎನ್ನುವಂಥಾದ್ದನ್ನು ನಾನು ಮೊದಲನೆಯದಾಗಿ ಹೇಳುತ್ತೇನೆ. ಇವತ್ತು ನರಸಿಂಹಯ್ಯನವರು ಒಬ್ಬ ದೊಡ್ಡ ಶಿಕ್ಷಣ ತಜ್ಞರು, ಸಮಾಜದ ಸುಧಾರಕರು,

ಮೂಢನಂಬಿಕೆಗಳ ಬಗ್ಗೆ ವಿರೋಧವನ್ನು ಮಾಡಿದಂಥ ಮಹಾನ್ ವ್ಯಕ್ತಿ. ಯಾವ ರೀತಿ ಹಿಂದೆ ರಾಜಾರಾಮ ಮೋಹನರಾಯ್ ಅವರು ಸತಿಸಹಗಮನ ಪದ್ಧತಿಯನ್ನು ವಿರೋಧ ಮಾಡಿದ್ದಕ್ಕೆ ಇವತ್ತೂ ಕೂಡ ನಾವು ಅವರನ್ನು ನೆನೆಸಿಕೊಳ್ಳುತ್ತೇವೆ. ಈ ತರಹ ಮೂಢನಂಬಿಕೆಗಳು ಈ ದೇಶದಲ್ಲಿ ಬಹಳ ತಳವನ್ನು ಮುಟ್ಟಿದ್ದಾವೆ.

ಇಂತಹ ಮೂಢನಂಬಿಕೆಗಳನ್ನು ಬೇರು ಸಮೇತ ಕಿತ್ತು ಹಾಕುವಂಥ ಕೆಲಸ ನಾವು 21ನೇ ಶತಮಾನಕ್ಕೆ ಕಾಲಿಟ್ಟರೂ ಕೂಡ ಇವತ್ತಿಗೂ ನಮ್ಮಿಂದ ಆಗುತ್ತಾ ಇಲ್ಲವೆನ್ನುವುದು ದುರಾದೃಷ್ಟಕರ ಸಂಗತಿ. ಇವತ್ತು ನಮ್ಮಲ್ಲಿ ಅನೇಕ ವಿಚಾರಗಳು, ಅಂದರೆ ಇವತ್ತಿಗೂ ವಿಡೋ ಮ್ಯಾರೇಜಸ್ ಒಂದು ಜಾತಿಯಲ್ಲಿ ಮಾಡಿಕೊಳ್ಳುತ್ತಾರೆ, ಉಳಿದ ಜಾತಿಗಳಲ್ಲಿ ಇಲ್ಲ. ಉತ್ತರ ಭಾಗದಲ್ಲಿ, ಜಾಟ್ಸ್ ಕಮ್ಯುನಿಟಿಯಲ್ಲಿ ವಿಡೋ ಆದಂಥ ಸಣ್ಣ ವಯಸ್ಸಿನ ಹೆಣ್ಣು ಮಕ್ಕಳಿಗೆ ಮತ್ತೆ ಮರು ಮದುವೆ ಇದೆ. ಆದರೆ, ನಮ್ಮ ಅನೇಕ ಸ್ವಾಮಿಗಳು ಈ ದಿಕ್ಕಿನಲ್ಲಿ ಚಿಂತನೆ ಮಾಡುತ್ತಾ ಇಲ್ಲವೆಂದು ನೊಂದು ಹೇಳಬೇಕಾಗುತ್ತದೆ. ಮಾನ್ಯ ನರಸಿಂಹಯ್ಯನವರು ಬಹಳ ತೀಕ್ಷ್ಣವಾಗಿ ಈ ಮೂಢ ನಂಬಿಕೆಗಳನ್ನು ತೆಗೆಯಲೇಬೇಕು ಎನ್ನುವಂಥಾದ್ದನ್ನು ಹೇಳುತ್ತಿದ್ದರು. ಆಗಲೇ ಎಂ.ಪಿ. ಪ್ರಕಾಶ್‌ರವರು ಹೇಳಿದ ಹಾಗೆ, 1972ರಲ್ಲಿ ಕೋವೂರ್‌ರವರನ್ನು ಕರೆದುಕೊಂಡು ನಮ್ಮ ರಾಜ್ಯದಾದ್ಯಂತ ಓಡಾಡಿಸಿದರು. ಅದಕ್ಕೆ, ಅವತ್ತೇ ನಾವೆಲ್ಲಾ ಸಹಮತ ತೋರಿಸಿದ್ದೆವು. ನಾವೆಲ್ಲಾ ಹುಡುಗರಾಗಿದ್ದರೂ ಕೂಡ ಅದಕ್ಕೆ ಹೆಚ್ಚಿಗೆ ಒತ್ತನ್ನು ಕೊಟ್ಟಿದ್ದೆವು. ಇದೇ ಮನೆಯಲ್ಲಿ 1995-96ರಲ್ಲಿ ಗಣೇಶ ಹಾಲು ಕುಡಿದ ಎಂದು ಕೆಲವು ಮಂತ್ರಿಗಳೇ ಒಪ್ಪಿಕೊಂಡರು. ನಾವು ಯಾವ ಪರಿಸ್ಥಿತಿಗೆ ತಲುಪಿದ್ದೇವೆಂದರೆ, ಈ ಮೂಢನಂಬಿಕೆಯಿಂದ ಗಣೇಶ ಹಾಲು ಕುಡಿದ ಎಂದು ಮಂತ್ರಿಗಳಿಬ್ಬರೂ ಇಲ್ಲಿಯೇ ಹೇಳಿದರು. ನಾನು ಈ ಮನೆಯಲ್ಲಿ ನೊಂದು ಹೇಳಿದೆ. ಗಣೇಶನಿಗೆ ನೀವೇಕೆ ಹಾಲು ಕುಡಿಸುತ್ತೀರಿ, ಇನ್ನೇನಾದರೂ ಕುಡಿಸುವಂಥ ಚಿಂತನೆ ಮಾಡಿ ಎಂದು ಹೇಳಿದ್ದೆವು. ಮೂಲತ: ನಮ್ಮನ್ನು ತಪ್ಪುದಾರಿಗೆ ಎಳೆಯುವಂಥ ಈ ಪದ್ಧತಿಗಳನ್ನು, ಮೂಢ ನಂಬಿಕೆಗಳನ್ನು ನಾವು ನಿಲ್ಲಿಸದೇ ಹೋದರೆ, ಮುಂದಿನ ದಿನಗಳಲ್ಲಿ ಕಷ್ಟ ಎನ್ನುವುದನ್ನು ನಾವು ಚಿಂತನೆ ಮಾಡಬೇಕು. ಅದನ್ನು ಚಿಂತನೆ ಮಾಡಿದಂಥವರು ಹೆಚ್. ನರಸಿಂಹಯ್ಯನವರು. ಅವರು ಬಹಳಷ್ಟು ಮುಂದೆ ಹೋಗಿ ಇದನ್ನು ತೆಗೆಯಬೇಕೆಂದಿದ್ದರು. ಅವರ ಹೆಸರಲ್ಲಿ ಒಂದು ಯೂನಿವರ್ಸಿಟಿ ಮಾಡಿ ಎಂದು. ಆಗಲೇ ಮಾನ್ಯ ಶ್ರೀರಾಮರೆಡ್ಡಿಯವರು ಹೇಳುತ್ತಿದ್ದರು. ಇದಕ್ಕಿಂತಲೂ ಹೆಚ್ಚಾಗಿ ಒಂದು ಕಮಿಟಿ ಮಾಡಿ, ಈ ಮೂಢನಂಬಿಕೆಗಳನ್ನು ವಿರೋಧ ಮಾಡುವಂಥ ಸ್ವಾಮಿಗಳು ಬರಬೇಕು. ನಿಡುಮಾಮಿಡಿ ಸ್ವಾಮಿಗಳು ಆಗಾಗ ಈ ಮೂಢನಂಬಿಕೆಗಳ ವಿರುದ್ಧವಾಗಿ ಮಾತನಾಡುತ್ತಾರೆ. ನನಗನ್ನಿಸುತ್ತದೆ ಇಲ್ಲಿಯೇ ಒಂದು ಸಮಿತಿ ಮಾಡಿ, ಇದನ್ನು ತೆಗೆಯುವಂಥ ಕೆಲಸವನ್ನು ಮಾಡದೇ ಇದ್ದರೆ ಮುಂದೆ ಕಷ್ಟವಾಗುತ್ತದೆ. ಅನೇಕ

ಜಾತಿಯ ಸ್ವಾಮಿಗಳು ಇದ್ದಾರೆ, ಇವರೆಲ್ಲರೂ ಸೇರಿ ಮಾಡಬಹುದು ಎಂದು ನಾನೇನೋ, ಅಂದುಕೊಂಡಿದ್ದೆ. ಆದರೆ, ಆ ಸ್ವಾಮಿಗಳು ಬೇರೆ ದಿಕ್ಕಿಗೆ ಹೋಗುತ್ತಾ ಇದ್ದಾರೆ. ಈ ದಿಕ್ಕಿನಲ್ಲಿ ಸಮಾಜವನ್ನು ಸೃಷ್ಟಿ ಮಾಡಿ, ಸರಿಯಾದ ದಾರಿಯಲ್ಲಿ ನಡೆಸಿಕೊಂಡು ಹೋಗುವಂಥ ಕೆಲಸ ಮಾಡುತ್ತಾ ಇಲ್ಲ. ಅದಕ್ಕೆ ಹೆಚ್. ನರಸಿಂಹಯ್ಯನವರ ಹೆಸರಿನಲ್ಲಿ, ಆ ತರಹ ಒಂದು ಸಮಿತಿ ಮಾಡಿ ಅಥವಾ ಏನು ವಾಟಾಳ್ ನಾಗರಾಜರು ಹೇಳಿದ ಹಾಗೆ ಸದನದ ಸಮಿತಿಯನ್ನೇ ಮಾಡಿ ವೈಚಾರಿಕವಾಗಿ ಚಿಂತನೆ ಮಾಡಿ, ಇದರ ಮೇಲೆ ಬೆಳಕನ್ನು ಚೆಲ್ಲುವಂಥ ಕೆಲಸವನ್ನು ಮಾಡಬೇಕೆನ್ನುವ ಮಾತನ್ನು ಈ ಸಮಯದಲ್ಲಿ ಹೇಳುತ್ತೇನೆ. ಇವತ್ತು, ಅವರು ಸಾಯುವುದಕ್ಕೆ ಮೊದಲು ಒಂದು ವಿಲ್ ಬರೆದು ಹೋಗಿದ್ದಾರೆ. ನಾನು ಸತ್ತು ಹೋದ ಮೇಲೆ ಎರಡು ಸಾವಿರ ರೂಪಾಯಿಗಳನ್ನು ನ್ಯಾಷನಲ್ ಕಾಲೇಜಿನಲ್ಲಿ ಇದಕ್ಕಾಗಿ ಕಟ್ಟಿದ್ದೇನೆ. ನನ್ನ ಹೆಣವನ್ನು ತೆಗೆದುಕೊಂಡು ಹೋಗಿ ಹೊಸೂರಿನಲ್ಲಿಯೇ ಸುಡಬೇಕು, ಈ ರೀತಿ ಸುಟ್ಟಿದ್ದ ಬೂದಿಯನ್ನು ಯಾವುದಾದರೂ ಮರಕ್ಕೆ ಹಾಕಬೇಕು. ಯಾರಾದರೂ ನದಿಗಳಿಗೆ ಅಥವಾ ಬೇರೆ ಕಡೆಗಳಿಗೆ ಹೊತ್ತುಕೊಂಡು ಹೋದರು ಎಂದು ಹೇಳಿ, ಅದನ್ನೂ ಕೂಡ ಬರೆದಿಟ್ಟಿದ್ದಾರೆ. ಆಮೇಲೆ, ಅದನ್ನು ಬರೆಯುವಾಗ ನನ್ನ ಬೂದಿಯನ್ನು ಈಚಲ ಮರಕ್ಕೆ ಮಾತ್ರ ಹಾಕಬೇಡಿ ಎಂದು ಹೇಳಿದರಂತೆ ಅವರ ವೈಚಾರಿಕ ಚಿಂತನೆ ಎಷ್ಟು ಎಂಬುದನ್ನು ನಾವು ಹೇಳುವುದಕ್ಕೆ ಸಾಧ್ಯವಿಲ್ಲ. ಅಂತಹ ಮನುಷ್ಯ, ಅಂತಹ ಇಳಿ ವಯಸ್ಸಿನಲ್ಲೂ ಕೂಡ ಈ ರೀತಿ ಹೇಳಿದ್ದಾರೆ. ಒಂದು ಒಂದೂವರೆ ತಿಂಗಳ ಹಿಂದೆ, ಏನು ಕುವೆಂಪುರವರ ಜನ್ಮ ಶತಾಬ್ದಿ ಗೌರಿಬಿದನೂರಿನಲ್ಲಿ ಆದಾಗ ಅವರು ಹೇಳಿದರು. ಕುವೆಂಪುರವರನ್ನು ನಾನು ವೈಸ್ ಚಾನ್ಸಲರ್ ಆಗಿದ್ದಾಗ ಕರೆದುಕೊಂಡು ಬಂದಿದ್ದು. ಸಾಮಾನ್ಯವಾಗಿ ಕುವೆಂಪುರವರು ಯಾವುದೇ ಸಭೆಗಳಿಗೆ ಹೋಗುತ್ತಿದ್ದವರಲ್ಲ. ಇವರು ಹೋಗಿ, ಕೂತುಕೊಂಡು ಅವರಿಗೆ ಎಷ್ಟು ಹೇಳಿದರೂ ಒಪ್ಪುತ್ತಲೇ ಇರಲಿಲ್ಲವಂತೆ. ಇವರೂ ಎದ್ದು ಬರಲಿಲ್ಲವಂತೆ. ಕಡೆಗೇ ನಾನೇ ಮಂಡಿ ಎಂದು ಕೊಂಡಿದ್ದೆ ನರಸಿಂಹಯ್ಯನವರೇ ನನಗಿಂತ ಮಂಡಿ ಇದ್ದೀರಿ ನೀವು ಎಂದು ಆ ಸಭೆಯಲ್ಲಿ ಕುವೆಂಪುರವರೇ ಹೇಳಿದ್ದು. ಈ ರೀತಿ ಕುವೆಂಪುರವರು ಆ ಸಭೆಗೆ ಬಂದು, ಘಟಿಕೋತ್ಸವದಲ್ಲಿ ಕುವೆಂಪುರವರು ಭಾಗವಹಿಸಿದ್ದರು ಎನ್ನುವ ಮಾತನ್ನು ಅವರು ಹೇಳಿದ್ದರು. ಈ ರೀತಿ ಹೇಳಿದಾಗ, ಅವರಲ್ಲಿದ್ದಂತಹ ಧೀಮಂತತನವನ್ನೂ ನಾವು ನೆನೆಯಬೇಕು, ಇಂತಹವರನ್ನು ಈವತ್ತು ನಾವು ಕಳೆದುಕೊಂಡಿದ್ದೇವೆ. ಇವತ್ತು ಅವರ ಹೆಸರನ್ನು ಯೂನಿವರ್ಸಿಟಿಗೆ ಇಡುವುದರ ಜೊತೆಗೆ, ಈ ಮೂಢನಂಬಿಕೆಗಳನ್ನು ತೆಗೆಯುವಂಥ ಒಂದು ಸಮಿತಿ ಇವತ್ತು ಅಗತ್ಯ ಇದೆ ಈ ತರಹ ಚಿಂತನೆ ಮಾಡುವುದನ್ನು ನಾವೆಲ್ಲರೂ ಕಲಿಯಬೇಕೆನ್ನುವ ಮಾತನ್ನು ಈ ಸಮಯದಲ್ಲಿ ಹೇಳುತ್ತೇನೆ. ಇದರ ಜೊತೆಗೆ ನಾಗರಾಜರವರೂ ಕೂಡ ನಮ್ಮನ್ನು ಅಗಲಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಆ ಸಭೆಯಲ್ಲಿ

ನಾನೂ ಇದ್ದೆ. ಅವತ್ತು ಮಾನ್ಯ ವಾಟಾಳ್ ನಾಗರಾಜರವರು ಮಾನ್ಯ ರಮೇಶ್‌ಕುಮಾರ್‌ರವರು ಆ ನಾಗರಾಜರವರ ವಿಷಯದಲ್ಲಿ ಬಹಳಷ್ಟು ಚರ್ಚೆ ಮಾಡಿದರು. ಮುಖ್ಯಮಂತ್ರಿಗಳ ಜೊತೆಯಲ್ಲಿ ಆವತ್ತು ನಾನು ಕುಳಿತಿದ್ದೆ. ಅವತ್ತು ನಿಜವಾಗಿಯೂ ಕೂಡ ಅವರನ್ನು ಒಬ್ಬ ಮೆಂಬರ್ ಆಗಿ ಮಾಡುವುದಕ್ಕಾಗಲಿಲ್ಲ ಎನ್ನುವಂಥ ನೋವನ್ನು ಮಾನ್ಯ ವಾಟಾಳ್ ನಾಗರಾಜರು ವ್ಯಕ್ತಪಡಿಸಿದಾಗ, ನನಗೂ ಕೂಡ ನೋವಾಯಿತು. ಆ ಸ್ಟೇಡಿಯಂ ಕಟ್ಟಿದಂಥ ಮನುಷ್ಯನಿಗೇ ಅಲ್ಲಿ ಇಲ್ಲದ ಹಾಗೆ ಆಯಿತೇನೋ ಎನ್ನುವಂಥ ನೋವನ್ನು ವ್ಯಕ್ತಪಡಿಸಿ, ಇವತ್ತು ಈ ಸಂತಾಪದಲ್ಲಿ ನರಸಿಂಹಯ್ಯನವರ ಮತ್ತು ನಾಗರಾಜರ, ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳಿ ನನಗೆ ನಾಲ್ಕು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) : ಸನ್ಮಾನ್ಯ ಅಧ್ಯಕ್ಷರೇ, ಡಾ: ಹೆಚ್. ನರಸಿಂಹಯ್ಯನವರು ನಮ್ಮನ್ನು ಅಗಲಿ ಹೋಗಿದ್ದಾರೆ. ಸಾಂಪ್ರದಾಯ ಬದ್ಧವಾಗಿ ಈ ಸದನ ಇಂತಹ ಸನ್ನಿವೇಶಗಳಲ್ಲಿ, ಅವರನ್ನು ಕುರಿತು ಮಾತನಾಡತಕ್ಕಂಥಾದ್ದು ಅಭ್ಯಾಸ. ಅನೇಕ ವೇಳೆ ನಾವು ಈ ಸಂತಾಪ ಸೂಚಕ ನಿರ್ಣಯದ ಮೇಲೆ ಮಾತನಾಡುವಾಗ ಬದ್ಧತೆಗಿಂತಲೂ ಕೂಡ ಸಾಂಪ್ರದಾಯಕ್ಕೆ ಕಟ್ಟುಬೀಳುತ್ತೇವೆ. ನರಸಿಂಹಯ್ಯನವರ ವಿಚಾರದಲ್ಲಿ ನಾವು ನೆನೆಪಿಸಿಕೊಳ್ಳ ಬೇಕಾಗಿರತಕ್ಕಂಥಾದ್ದು, ಅವರ ಬಾಲ್ಯ ಆ ಬಡತನ ಎಷ್ಟು ಕೆಟ್ಟದ್ದು ಎಂದರೆ, ತನ್ನ ತಾಯಿ ವೆಂಕಟಮ್ಮ, ಊರಿನಲ್ಲಿ ಒಬ್ಬರು ಶ್ರೀಮಂತರ ಮನೆಯಲ್ಲಿ ಕೆಲಸಕ್ಕೆ ಇದ್ದರು. ಅವರ ಮನೆಯಲ್ಲಿ ಕೆಲಸ ಮಾಡಿ, ಅವರು ಕೊಟ್ಟ ತಂಗಳನ್ನು ತೆಗೆದುಕೊಂಡು ಬಂದುದ್ದನ್ನು ತಿಂದು ಇವರು ಶಾಲೆಗೆ ಹೋಗುತ್ತಿದ್ದರು. ಅವರ ಆತ್ಮ ಬದುಕಿನಲ್ಲಿ ಇದನ್ನು ಬರೆಯುತ್ತಾರೆ. ಹೊಸೂರಿನಿಂದ ಅವರು ಬೆಂಗಳೂರಿಗೆ ಬರಬೇಕಾಗಿದ್ದರೆ ಕಾಲ್ನಡಿಗೆಯಲ್ಲೇ ಬರುತ್ತಾ ಇದ್ದರು. ರೈಲೂ ಇಲ್ಲ, ಬಸ್ಸೂ ಇಲ್ಲ. ಬಾಲ್ಯದಲ್ಲೇನೋ ಬಡತನ ಇತ್ತು. ಬಡತನವನ್ನು ಮರೆಯತಕ್ಕ ಅವಕಾಶಗಳು ಅವರಿಗೆ ಬಂದಾಗಲೂ ಕೂಡ, ಮರೆಯತಕ್ಕ ಪ್ರಯತ್ನವನ್ನು ಅವರು ಎಂದೂ ಮಾಡಲೇ ಇಲ್ಲ. ತನ್ನ ಬಾಲ್ಯದ ಬಡತನದ ಬಗ್ಗೆ ಕಡೇ ಕ್ಷಣದವರೆಗೂ ಹೆಮ್ಮೆಯಿಂದ ಬದುಕಿದರು. ಅದನ್ನೇ ಅವರು ಹೆಮ್ಮೆ ಎಂದು ನಿರ್ಣಯ ಮಾಡಿಕೊಂಡಿದ್ದರು. ಬದುಕಿನ ಶೈಲಿ ಅವತ್ತಿಗೂ, ಇವತ್ತಿಗೂ ಎಷ್ಟು ವ್ಯತ್ಯಾಸವಿದೆಯೆಂದರೆ, ಆಕಸ್ಮಿಕವಾಗಿ ಯಾವುದೋ ಒಂದು ಅಧಿಕಾರ ಸಿಕ್ಕಿದರೆ, ಸಾರ್ವಜನಿಕವಾಗಿ ಅಪಾರವಾದ ಹಣವನ್ನು ಲೂಟಿ ಮಾಡಿ ವಾಲಂಟರಿ ಡಿಸ್ ಕ್ಲೋಷರ್ ಸ್ಕೀಮ್ ಎಂದು ಬಂದಾಗ, ಅದರಲ್ಲಿ ನುಸುಳಿಕೊಂಡು ಆಸ್ತಿಯನ್ನೆಲ್ಲಾ ಸಕ್ರಮ ಮಾಡಿಕೊಳ್ಳತಕ್ಕ ಜನ ಇವತ್ತು ಇರುವಾಗ, ಆ ಬಾಲ್ಯದ ಬಡತನದ ಬಗ್ಗೆ ಹೆಮ್ಮೆಯಿಂದ ಬದುಕತಕ್ಕ ನರಸಿಂಹಯ್ಯನವರು ಎಷ್ಟೊಂದು ಆದರ್ಶ ಎಂದು ನಾವು ನೆನೆಪಿಸಿಕೊಳ್ಳಬೇಕು. ಕೇಂದ್ರ ಸರ್ಕಾರದವರು ಅನೇಕ ಪ್ರಶಸ್ತಿಗಳನ್ನು

ಇಟ್ಟಿದ್ದಾರೆ. ಪದ್ಮಭೂಷಣ, ವಿಭೂಷಣ, ಪದ್ಮಶ್ರೀ ಹೀಗೆ ಇನ್ನೂ ಏನೇನೋ ಪ್ರಶಸ್ತಿಗಳನ್ನಿಟ್ಟಿದ್ದಾರೆ. ಇವು ಯಾವುದಕ್ಕೂ ಚಿಕ್ಕಕಾಸಿನ ಬೆಲೆ ಇಲ್ಲ. ನರಸಿಂಹಯ್ಯನವರಂಥ ವ್ಯಕ್ತಿಗಳು ಜೀವಂತ ಇದ್ದಾಗ ಅವರಿಗೆ ಯಾವುದಾದರೊಂದು ತಗಲಿ ಹಾಕಿದರೆ, ಆ ತಕ್ಷಣಕ್ಕೆ ಆ ಪ್ರಶಸ್ತಿಗೊಂದು ಮರ್ಯಾದೆ ಬರುತ್ತಿತ್ತು. ನರಸಿಂಹಯ್ಯನವರಂಥ ವ್ಯಕ್ತಿಗಳೆಲ್ಲಾ ಮಾಯ ಆಗಿ ಬಿಟ್ಟರೆ ಮುಂದಕ್ಕೆ ಈ ಪ್ರಶಸ್ತಿಗಳಿಗೆ ಯಾವ ಬೆಲೆಯೂ ಇರುವುದಿಲ್ಲ. ಇವುಗಳನ್ನೆಲ್ಲಾ ತೆಗೆದು ಹಾಕಬೇಕಾಗುತ್ತದೆ. ನಾನು ಇವತ್ತು ನ್ಯಾಷನಲ್ ಹೈಸ್ಕೂಲ್ ಹತ್ತಿರ ಹೋಗಿ, ಇಲ್ಲಿಗೆ ಬಂದೆ. ಆ ಮಕ್ಕಳು, ಅಧ್ಯಾಪಕರುಗಳು, ಪೋಷಕರು, ನಾಗರೀಕರು ಎಷ್ಟೊಂದು ಜನ ತೃಪ್ತಿದಾಯಕವಾಗಿ ಯಾವುದೇ ಸಾಂಸಾರಿಕ ಬಂಧನ ಇಲ್ಲದೇ ಇರತಕ್ಕ ಒಬ್ಬ ಮನುಷ್ಯನಿಗೆ ಬ್ರಹ್ಮಚಾರಿಯಾಗಿ ಬದುಕಿದಂಥವರಿಗೆ, ಯಾವ ಅಧಿಕಾರ ಇಲ್ಲದೇ ಇರತಕ್ಕಂಥ ಮನುಷ್ಯನ ಪಾರ್ಥಿವ ಶರೀರಕ್ಕೆ ಬೀಳ್ಕೊಡುವುದಕ್ಕೆ ಬಂದಿದ್ದಾರೆ. ಅವರಲ್ಲಿರತಕ್ಕಂಥ ದು:ಖ, ಆ ಒಂದು ಭಾವನಾತ್ಮಕವಾದ ಸಂಬಂಧ ಎಂಥವರನ್ನೂ ಕೂಡ ಕರಗಿಸುತ್ತದೆ. ಯಾವ ದೊಡ್ಡ ಶ್ರೀಮಂತರಿಗೂ ಈ ಗೌರವ ಸಿಗುವುದಿಲ್ಲ. ಅತ್ಯಂತ ವೈಭವವಾದಂಥ ಬೀಳ್ಕೊಡುಗೆಗೆ ಇಡೀ ಸಮಾಜ ತಯಾರಾಗಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುತ್ತಾರೆ. ನಂತರದ ದಿನಗಳಲ್ಲಿ ಸಾಕಷ್ಟು ಅವಕಾಶಗಳಿದ್ದರೂ ಕೂಡ ರಾಜಕೀಯದ ಅಧಿಕಾರವನ್ನು ಹಿಡಿಯತಕ್ಕಂಥ ಆಸೆ, ಆ ಮೋಳಕೆ ಅವರ ಮನಸ್ಸಿನಲ್ಲಿ ಹೊಳೆಯುವುದೇ ಇಲ್ಲ. ಶಿಕ್ಷಣ ಕ್ಷೇತ್ರಕ್ಕೆ ತಮ್ಮನ್ನು ಅರ್ಪಣೆ ಮಾಡಿಕೊಳ್ಳುತ್ತಾರೆ. ಒಂದು ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡುತ್ತಾರೆ. ಯಾವುದೇ ಸಾಮಾನ್ಯ ಕುಟುಂಬ ವರ್ಗದವರು ತಮ್ಮ ಮಕ್ಕಳನ್ನು ಆ ಖಾಸಗಿ ಶಿಕ್ಷಣ ಸಂಸ್ಥೆಗೆ ಸೇರಿಸುವುದಕ್ಕೆ ಕಷ್ಟವೇ ಇರುವುದಿಲ್ಲ. ಸರ್ಕಾರಿ ಕಾಲೇಜಿನಲ್ಲಿ ಸೇರಿಸಿ ವಿದ್ಯಾಭ್ಯಾಸ ನಡೆಸುವುದು ಎಷ್ಟು ಸುಲಭವೋ, ಫೀಜುಗಳ ದೃಷ್ಟಿಯಿಂದ ನ್ಯಾಷನಲ್ ಕಾಲೇಜಿನಲ್ಲಿ ಓದಿಸುವುದು, ನ್ಯಾಷನಲ್ ಹೈಸ್ಕೂಲ್‌ನಲ್ಲಿ ಓದಿಸುವುದೂ ಕೂಡ ಅಷ್ಟೇ ಸುಲಭ. ಇವತ್ತಿನ ಖಾಸಗಿ ಶಿಕ್ಷಣ ಸಂಸ್ಥೆಗಳ ವೈಖರಿ ಇದು ಸಾಮಾನ್ಯ ಮನುಷ್ಯನ ಒಂದು ವ್ಯಾಪ್ತಿಗೆ ಮೀರಿ ದೂರದಲ್ಲಿರತಕ್ಕಂಥ ಸನ್ನಿವೇಶದಲ್ಲಿ ಅವರು ಮಾಡಿರತಕ್ಕ ಪ್ರಯೋಗ ಎಷ್ಟು ದೊಡ್ಡದು ಎಂದು ನಾವು ನೆನಪು ಮಾಡಿಕೊಂಡರೆ ಇವತ್ತಿನ ಖಾಸಗಿ ಶಿಕ್ಷಣ ಸಂಸ್ಥೆಗಳ ದೌರ್ಜನ್ಯ, ಅಂದಿನ ಅವರ ಉದಾತ್ತ ಜೀವನ. ಈ ಆದರ್ಶಗಳಿಗೆ ರೆಡ್ಡಿಯವರು ಹೇಳಿದರು ಅಂತ ಅಲ್ಲ. ಅವರು ಹೇಳಿದ ಮೇಲೆ ನನಗೆ ಗೊತ್ತಾಯಿತು ಅಧ್ಯಯನ ಕೇಂದ್ರ ಮಾಡಬೇಕು ಅಂತ. ಕೇಂದ್ರಗಳನ್ನು ನಾವು ಪ್ರಾರಂಭ ಮಾಡಬಹುದು, ಆದರೆ ಅದು ಎಲ್ಲಿಗೆ ತೆಗೆದುಕೊಂಡು ಹೋಗಿ ಪರಿಸಮಾಪ್ತಿ ಯಾಗುತ್ತದೆಯೋ ನಮಗೆ ಗೊತ್ತಿಲ್ಲ. ಡಾ: ನರಸಿಂಹಯ್ಯನವರು ಭೌತಿಕ ಶರೀರವನ್ನು ಬಿಟ್ಟು ಹೋಗಿದ್ದಾರೆ. ಸಾವು ಅವರಿಗೆ ಬರುವುದೇ ಇಲ್ಲ ಅಧ್ಯಕ್ಷರೇ, ಸಾವು ತೀರ ಸಣ್ಣದಾಗಿ ಯೋಚನೆ ಮಾಡತಕ್ಕಂಥವರು ಎಷ್ಟೇ ದೊಡ್ಡ ಸ್ಥಾನಗಳಿಗೆ ಹೋದರೂ ಕೂಡ ಶಾಸ್ತ್ರ, ಜಿದ್ದು,

ಮತ್ಸರ ಇವನ್ನೆಲ್ಲಾ ಬಿಡದೇ ಇರತಕ್ಕಂಥವರು, ಸಮಾಜಕ್ಕಾಗಿ ತಮ್ಮ ನೆನಪು ಇರತಕ್ಕಂಥ ಕೆಲಸವನ್ನು ಮಾಡದೇ ಇರತಕ್ಕಂಥವರು ಸಾಯುತ್ತಾರೆ. ನರಸಿಂಹಯ್ಯನಂತಹವರಿಗೆ ಸಾವೇ ಇಲ್ಲ. ಅವರು ಅಮರರು, ಶಾಶ್ವತ, ಉಳಿದೆಲ್ಲಾ ವಿಚಾರಗಳನ್ನು ಎಲ್ಲರೂ ಹೇಳಿದ್ದಾರೆ ಅದನ್ನು ಪುನರಾವರ್ತನೆ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ನನಗೆ ಅವರ ಕಾಲೇಜಿನಲ್ಲಿ ಓದಬೇಕು ಅಂತ ಆಸೆ ಇತ್ತು. ಸೆಕೆಂಡ್ ಇಯರ್ ಬಿ.ಎಸ್ಸಿಗೆ ಸೀಟು ಕೊಡಿ ಅಂತ ನಾನು ಹೋಗಿ ಕೇಳಿದ್ದೆ. ಇಲ್ಲಪ್ಪ ಹೋಗು ನಮ್ಮ ಹುಡುಗರೇ ಜಾಸ್ತಿ ಇದ್ದಾರೆ, ಅಂತ ಅಂದರು. ಆಮೇಲೆ ಬಿಎಸ್ಸಿ ಫೇಲ್ ಆದ ಮೇಲೆ ಅವರ ಟುಟೋರಿಯಲ್ಸ್‌ಗೆ ಸೇರಿಕೊಂಡು ಅಲ್ಲಿಂದ ನಾನು ಡಿಗ್ರಿ ಮಾಡಿದೆ. ಯಾವಾಗಲಾದರೂ ನಾನು ಅದನ್ನು ನೆನಪಿಸಿದರೆ ನಗುತ್ತಿದ್ದರು. ಅವರಿಗೆ ಒಂದು ಸನ್ಮಾನ ಮಾಡಿ ಆ ಸಭೆಯಲ್ಲಿ ನಾನು ಮಾತನಾಡಬೇಕು ಅಂದರು, ಆಗ ಸಭಿಕರಲ್ಲಿ ಒಬ್ಬರು ಮಾತನಾಡುವಾಗ ಹೇಳಿದರು ಅವರ ನೂರು ವರ್ಷ ಬದುಕಬೇಕು ಅಂತ. ಆಗ ನಾನು ಹೇಳಿದೆ ದಯಮಾಡಿ ಅದೊಂದು ತಪ್ಪು ಮಾಡಬೇಡಿ, ಅವರ ಆಯಸ್ಸು ಎಷ್ಟು ದಿವಸ ಇದೆಯೋ ಅಷ್ಟು ದಿವಸ ಬದುಕಲಿ. ನೀವು ನೂರು, ನೂರಿಪ್ಪತ್ತು ವರ್ಷ ಅಂತ ಗ್ರಾಂಟ್ ಮಾಡಿದರೆ ಅವರು ಖಾಯಿಲೆ ಬಿದ್ದರೆ ನೋಡಿಕೊಳ್ಳುವವರು ಯಾರೂ ಇಲ್ಲ. ಅವರು ಯಾರ ಕೈಗೂ ಸಿಗದೇ ನರಳದೇ ನೆಮ್ಮದಿಯಿಂದ ಪ್ರಾಣ ಬಿಡುವಂತೆ ನೀವೆಲ್ಲಾ ಆಶಿಸಿ. ನಾವು ಸ್ವಲ್ಪ ಪ್ರಾಕ್ಟಿಕಲ್ ಆಗಿರಬೇಕು. ಯಾವಾಗಲೂ ಪಾಪ ನಾನು ಸಿಕ್ಕರೆ ಎಷ್ಟು ದೊಡ್ಡ ಮಾತು ಹೇಳಿದೆಯಪ್ಪ ನನಗೆ ಅಷ್ಟು ಆದರೆ ಸಾಕು ಅಂತ ಹೇಳುತ್ತಿದ್ದರು. ಆದರೂ ಕಡೆಯಲ್ಲಿ ಅವರು ಸ್ವಲ್ಪ ನರಳಬೇಕಾಯಿತು. ಅವರ ಆದರ್ಶಗಳು, ನಮಗೆ ಶಾಶ್ವತವಾಗಿ ಲಭಿಸಲಿ, ಈ ಮೌಲ್ಯಗಳ ಪೂರ್ಣ ಬಡತನ ಬಂದು ಬರಗಾಲದಿಂದ ಸಾಯುತ್ತಿದ್ದಾರೆ, ಯಂಗರ್ ಜನರೇಶನ್, ಅವರಿಗೆ ಈ ಆದರ್ಶಗಳು ಲಭ್ಯವಾಗಲಿ ಅಂತ ಹೇಳಿ, ಇನ್ನು ನಾಗರಾಜ್‌ರವರ ವಿಚಾರ, ನಮಗೆ ನಾಗರಾಜ್‌ರವರ ನಿಧನದ ವಾರ್ತೆ ಗೊತ್ತಾದ ತಕ್ಷಣ ಬಹಳ ಮನಸ್ಸಿಗೆ ನೋವಾಯಿತು. ವ್ಯಕ್ತಿಗತವಾಗಿ ನಾನು ವಾಟಾಳ್‌ರು ಸೋಲೊಪ್ಪಿಕೊಂಡೆವು.

ಡಾ: ಹೆಚ್. ನರಸಿಂಹಯ್ಯನವರ ಪಾರ್ಥೀವ ಶರೀರವನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಗೌರವವಾಗಿ ಇಟ್ಟು ಸಾವಿರಾರು ಜನ ಇವತ್ತು ಬೀಳ್ಕೊಡುತ್ತಿದ್ದಾರೆ. ಆದರೆ ಸಿ. ನಾಗರಾಜ್‌ರವರಿಗೆ ಅವರ ಬದುಕೆಲ್ಲಾ ಶ್ರಮಿಸಿ ಯಾವ ಭವ್ಯವಾದಂತಹ ಕೆ.ಎಸ್.ಸಿ.ಎ. ಯನ್ನು ಕಟ್ಟುವುದಕ್ಕೆ ತ್ಯಾಗ ಮಾಡಿದರು ಅಂಥವರಿಗೆ ಅವರ ಪಾರ್ಥೀವ ಶರೀರವನ್ನೂ ಕೂಡ ಅಲ್ಲಿಗೆ ತೆಗೆದುಕೊಂಡು ಹೋಗುವುದಕ್ಕೆ ಸೌಜನ್ಯವಿಲ್ಲ ಆ ಜನಗಳಿಗೆ. ಇದು ಎಂತಹ ವಿಪರ್ಯಾಸ ನೋಡಿ. ಇವರಿಗೆ ಈ ಗೌರವವಾದರೂ ಲಭ್ಯವಾಯಿತು, ನಾಗರಾಜ್‌ರವರಿಗೆ ಕಡೆಯ ಪಕ್ಷ ಆ ಗೌರವ ಕೂಡ ಇಲ್ಲ. ಮತ್ತು ಎಂತಹ ಸ್ಥಿತಿ ನಾಗರಾಜ್‌ರವರದ್ದು! ಯಾವ ಕರ್ನಾಟಕ ಕ್ರಿಕೆಟ್ ಸ್ಟೇಡಿಯಂ ಅನ್ನು ಅವರು ಕಟ್ಟಿದ್ದಾರೆ ಚಿನ್ನಸ್ವಾಮಿಯವರ

ಜೊತೆಗೂಡಿ, ಡಾಕ್ಟರ್ ತಿಮ್ಮಪ್ಪಯ್ಯನವರ ಜೊತೆಗೂಡಿ, ದಿವಂಗತ ನಿಜಲಿಂಗಪ್ಪನವರ ಸಹಾಯದಿಂದ, ದಿವಂಗತ ಕೃಷ್ಣ ಮೆನನ್‌ರವರ ಸಹಾಯದಿಂದ ಏನು ಕಟ್ಟಿದ್ದರು, ಆಗ ಅಲ್ಲಿ ತೀರ್ಮಾನವಾಗುತ್ತೆ, ಅಜೀವಪರ್ಯಂತ ನಾಗರಾಜ್‌ರವರು ಈ ಕ್ರಿಕೆಟ್ ಸ್ಟೇಡಿಯಂಗೆ ಬರಕೂಡದು, ಅವರು ಇಲ್ಲಿ ಮೆಂಬರ್ ಆಗುವುದಕ್ಕೆ ಸಾಧ್ಯವಿಲ್ಲ ಅವರ ಮೆಂಬರ್‌ಗಿರಿಯನ್ನು ತೆಗೆದಿದ್ದೇವೆ ಎಂದು ಬಹುಶ: ಉಗಾಂಡದಲ್ಲಿ ಇದಿ ಅಮಿನ್ ಇದ್ದಿದ್ದರೂ ಕೂಡ ಇಷ್ಟು ಕ್ರೂರಿಯಾಗಿ ನಡೆದುಕೊಳ್ಳುತ್ತಿರಲಿಲ್ಲ. ಯಾವ ದೊಡ್ಡ ತಪ್ಪಿಗಾಗಿ ಅವರಿಗೆ ಈ ಶಿಕ್ಷೆ ಕೊಟ್ಟರು ನಮಗೆ ಗೊತ್ತಿಲ್ಲ. ಕ್ರಿಕೆಟ್ ಇವತ್ತು ಬರು ಬರುತ್ತಾ ವಂಶಪಾರಂಪರ್ಯವಾಗುತ್ತಿದೆ ಅದೂ ಕೂಡ ರಾಜಕೀಯ ಇದ್ದಂತೆ. ಶ್ರೀಮಂತರ ಸ್ವತ್ತಾಗುತ್ತಿದೆ. ಅತ್ಯಂತ ಸಾಮಾನ್ಯ ಕುಟುಂಬಗಳಿಂದ ಬಂದಂತಹ ಚಂದ್ರಶೇಖರ್, ವಿಶ್ವನಾಥ್, ಮತ್ತೊಬ್ಬರು ಮತ್ತೊಬ್ಬರು ಇವರನ್ನೆಲ್ಲಾ ಕರೆದುಕೊಂಡು ಬಂದು ಅಂತರ ರಾಷ್ಟ್ರೀಯ ಮಟ್ಟಕ್ಕೆ ಇವರನ್ನೆಲ್ಲಾ ಏರಿಸಿದರು, ಒಂದು ಕಾಲದಲ್ಲಿ ಭಾರತದ ಟೆಸ್ಟ್ ಟೀಮ್‌ನಲ್ಲಿ 6 ಜನ 7 ಜನ ಕರ್ನಾಟಕದ ಹುಡುಗರು ಆಡುತ್ತಿದ್ದರು. ಒನ್ ಡೇ ಮ್ಯಾಚ್‌ಗೆ ಹೋದಾಗ 5 ಜನ 6 ಜನ ಹೋಗುತ್ತಿದ್ದರು. ನಾಗರಾಜ್‌ರವರು ತಮ್ಮ ಮಕ್ಕಳನ್ನು ಟ್ರೈನ್ ಮಾಡಲಿಲ್ಲ. ತಮ್ಮ ಸಂಬಂಧಿಕರನ್ನು ಆಟಗಾರರನ್ನಾಗಿ ಟ್ರೈನ್ ಮಾಡಲಿಲ್ಲ. ಅದಕ್ಕಾಗಿಯೇ ಇರಬಹುದು ಬಹುಶ: ಈ ಶಿಕ್ಷೆ ವಿಧಿಸಿದ್ದರು. ಒಂದು ದಿವಸ ಮಾನ್ಯ ಮುಖ್ಯಮಂತ್ರಿಗಳ ಮನೆಗೆ ಸಂಧಾನಕ್ಕೆ ಅಂತ ಕರೆದಿದ್ದರು. ಅಧ್ಯಕ್ಷರು ಈ ಸದನದಲ್ಲಿ ಇಲ್ಲ. ಅವರ ವಿಚಾರ ಈ ಸದನದಲ್ಲಿ ಮಾತನಾಡುವುದು ಗೌರವಯುತವಲ್ಲ. ಆದರೆ ನಾಗರಾಜ್‌ರವರ ಬಗ್ಗೆ ಅವರು ಆಡಿದ ಮಾತುಗಳು, ಅವರು ನಡೆದುಕೊಂಡಂತಹ ರೀತಿ ನೋಡಿದರೆ ನಮಗೆ ಎದೆ ಡಗ್ ಅಂತ ಅನ್ನಿಸುತ್ತದೆ. ಈ ತರಹದ ಅನ್ಯಾಯ, ಈ ದ್ರೋಹ, ಯಾರಿಗೂ ಆಗಬಾರದು. ನಮ್ಮ ಪರಮ ಶತ್ರುಗೂ ಆಗಬಾರದು, ಆ ಕೊರಗಿನಲ್ಲೇ ನಾಗರಾಜ್‌ರವರು ತಮ್ಮ ಕಡೆ ಉಸಿರನ್ನು ಎಳೆದರು. ಇವತ್ತು ಆ ಕ್ರಿಕೆಟ್ ಸಂಸ್ಥೆ ಕೇವಲ ಬಂಡವಾಳ ಶಾಹಿಗಳ ಶ್ರೀಮಂತರ, ವ್ಯಾಪಾರಸ್ಥರ ವಿನೋದಕ್ಕೆ, ಉಲ್ಲಾಸಕ್ಕೆ ಅಥವಾ ತಮ್ಮ ಬೇರೆ ದಂಧೆ ಮಾಡಿಕೊಳ್ಳುವುದಕ್ಕೆ ಕೇಂದ್ರವಾಗಿ ಪರಿವರ್ತನೆಯಾಗಿದೆ. ನಾಗರಾಜ್‌ರವರ ಆತ್ಮಕ್ಕೆ ನಾವು ಶಾಂತಿ ಕೋರತಕ್ಕಂಥಾದ್ದು ಬಹಳ ಸುಲಭ, ಶಾಂತಿ ಖಂಡಿತ ಸಿಗುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೈ ಜೋಡಿಸಿ ಅತ್ಯಂತ ನಮ್ರತೆಯಿಂದ, ಕಳಕಳಿಯಿಂದ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಅವರಿಗೆ ಆಗಿರತಕ್ಕಂಥ ಅನ್ಯಾಯವನ್ನು ಮರಣೋತ್ತರ ವಾಗಿಯಾದರೂ ಕೂಡ ಸರಿದೂಗಿಸತಕ್ಕಂಥ ಒಂದು ಕ್ರಮವನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಳ್ಳಲಿ, ಯಾರು ಈ ದೇಶದ, ರಾಜ್ಯದ ಎಲ್ಲಾ ಕಾನೂನುಗಳಿಗೆ ಮೀರಿ ನಾವು ಸರ್ವಾಧಿಕಾರಿಗಳಾಗಿದ್ದೇವೆಂದು ಹೇಳಿ ಮೆರೆಯುತ್ತಿದ್ದಾರೆ ಅವರ ಸರ್ವಾಧಿಕಾರಕ್ಕೆ ಅಂಕುಶವನ್ನು ಹಾಕಿ, ಇದೊಂದು ಅಪರೂಪದ ಸಂದರ್ಭ ಮುಖ್ಯಮಂತ್ರಿಗಳಿಗೂ ಕೂಡ ನಾಗರಾಜ್‌ರವರ ಬಗ್ಗೆ

ವಿಶೇಷವಾದಂತಹ ಅಭಿಮಾನ ಇತ್ತು, ಇವತ್ತು ನಾವು ನಾಗರಾಜ್‌ರವರಿಗೆ ಸಲ್ಲಿಸಬಹುದಾದಂತಹ ಗೌರವ ಅದು ಆಗುತ್ತೆ, ಅನಂತರ ಅವರಿಗೆ ಶಾಂತಿ ಸಿಗಬಹುದೇ ಹೊರತು ಔಪಚಾರಿಕವಾಗಿ ನಾವು ಇಲ್ಲಿ ಶಾಂತಿ ಸಿಗಬೇಕು ಅಂತ ಕೋರಿದರೆ ಶಾಂತಿ ಸಿಗತಕ್ಕಂಥಾದ್ದರಲ್ಲಿ ನನಗೆ ಅನುಮಾನ ಇದೆ ಎನ್ನತಕ್ಕಂಥ ಮಾತನ್ನು ಹೇಳಿ ದಿವಂಗತ ನರಸಿಂಹಯ್ಯನವರ ಆದರ್ಶಗಳು, ಕ್ರೀಡಾ ಕ್ಷೇತ್ರದಲ್ಲಿ ನಾಗರಾಜ್‌ರವರು ಮಾಡಿದಂತಹ ಸೇವೆ, ಅಪರೂಪವಾದುದು ಅಂತ ಹೇಳಿ ನನಗೆ ನನ್ನ ಅಭಿಪ್ರಾಯಗಳನ್ನು ವ್ಯಕ್ತ ಮಾಡುವುದಕ್ಕೆ ಈ ಸಂದರ್ಭದಲ್ಲಿ ಅವಕಾಶ ಮಾಡಿಕೊಟ್ಟಂತಹ ತಮಗೆ ನನ್ನ ಅನಂತ ಅನಂತ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್ : (ಪ್ರವಾಸೋದ್ಯಮ ಸಚಿವರು) : ಮಾನ್ಯ ಅಧ್ಯಕ್ಷರೇ, ಇದುವರೆಗೂ ನಮ್ಮೊಂದಿಗೆ ಬಾಳಿ ಬದುಕಿ, ತಮ್ಮ ಜೀವನವನ್ನು ಸಾರ್ಥಕ ಮಾಡಿಕೊಂಡಂತಹ ನಮ್ಮ ಪೂಜ್ಯ ಗುರು ಡಾ: ಹೆಚ್. ನರಸಿಂಹಯ್ಯನವರ ಅಗಲಿಕೆ ತುಂಬಲಾರದ ನಷ್ಟವಾಗಿದೆ. ನಾನು ಅವರ ಶಿಷ್ಯನಾಗಿ ಬಹುಶ: ನಾನು ಇಲ್ಲಿ ಮಂತ್ರಿಯಾಗಿ ಇರಲಿಕ್ಕೆ ಪರೋಕ್ಷವಾಗಿ ಅವರೂ ಕೂಡ ಕಾರಣ ಅಂತ ನಾನು ಭಾವಿಸಿಕೊಂಡಿದ್ದೇನೆ. ನಾನೊಬ್ಬ ಪೊಲೀಸ್ ಅಧಿಕಾರಿಯಾಗಿ, ರಾಜೀನಾಮೆಯನ್ನು ನೀಡಿ ಆಕಸ್ಮಿಕವಾಗಿ ರಾಜಕಾರಣಕ್ಕೆ ಬಂದರೂ ಕೂಡ ನನ್ನ ಜೀವನದಲ್ಲಿ ಧೈರ್ಯಸ್ಥೈರ್ಯ ವಿಚಾರವಂತಿಕೆಯ ಪಡಿಯಚ್ಚನ್ನು ತುಂಬಿದವರು ಡಾ: ಹೆಚ್. ನರಸಿಂಹಯ್ಯನವರು. ಏಕೆಂದರೆ ನಾನು ನ್ಯಾಷನಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದೆ, ಅಲ್ಲಿ ವಿದ್ಯಾರ್ಥಿನಿಲಯದ ಹುಡುಗನಾಗಿ ನಾನು ಅವರ ಜೀವನದಲ್ಲಿ ಹತ್ತಿರವಾಗಿ ನೋಡತಕ್ಕಂಥ ಒಂದು ಸೌಭಾಗ್ಯ ನನ್ನದಾಗಿತ್ತು. ಇತ್ತೀಚೆಗೆ ಅವರು ಆಶೋಕಪಿಲರ್‌ನ ಮಯ್ಯ ಆಸ್ಪತ್ರೆಯಲ್ಲಿ ಇದ್ದಂತಹ ಸಂದರ್ಭದಲ್ಲಿ ನಾನು ಮಂತ್ರಿಯಾದ ತಕ್ಷಣ ಅವರು ನನಗೆ ಶುಭವನ್ನು ಕೋರಿ ಫೋನ್ ಮಾಡಿದ್ದರು. ಯಾವುದೋ ಕಾರಣದಿಂದ ನಾನು ಹೋಗಲಿಕ್ಕೆ ಆಗಲಿಲ್ಲ. ಆದರೆ ಮೊನ್ನೆ ಒಂದು 10 ದಿವಸಗಳ ಹಿಂದೆ ಅವರು ಹೇಳಿದಂತೆ ಸಿಂಧ್ಯಾರವರ ಹತ್ತಿರ ಮಾತನಾಡಬೇಕು, ಜಯಕುಮಾರ್ ಹತ್ತಿರ ಮಾತನಾಡಬೇಕು ಸ್ವಲ್ಪ ಕರೆಸಿ ಅಂತ ಹೇಳಿ ಅಲ್ಲಿ ವಾರ್ಡನ್ ನಾಗರಾಜಪ್ಪ ಅಂತ ಇದ್ದಾರೆ ಅವರಿಗೆ ಹೇಳಿದರಂತೆ. ನಾಗರಾಜಪ್ಪನವರು ಫೋನ್ ಮಾಡಿ ನಿಮ್ಮನ್ನು ಮತ್ತು ಸಿಂಧ್ಯಾರವರನ್ನು ಹೆಚ್.ಎನ್. ರವರು ನೋಡಬೇಕಂತೆ ಅಂತ ಹೇಳಿದರು. ನಾವೆಲ್ಲರೂ ಕೂಡ ನರಸಿಂಹಯ್ಯನವರು ಅಂತ ಹೇಳುವುದಿಲ್ಲ. ಅವರು ಯಾವಾಗಲೂ ಕೂಡ ಡಾ: ಹೆಚ್.ಎನ್, ಹೆಚ್.ಎನ್. ಎಂದು ಚಿರಪರಿಚಿತರಾಗಿದ್ದಾರೆ. ಕರ್ನಾಟಕ ರಾಜ್ಯಕ್ಕೆ ಅವರು ಹೇಳಿದಂತಹ ಸಂದರ್ಭದಲ್ಲಿ ನಾವು ಕಳೆದ ಸಲ ಆಸ್ಪತ್ರೆಯಲ್ಲಿದ್ದಾಗ ಸಹ ಹೋಗಿ ನೋಡಿದ್ದೆವು, ಮೊನ್ನೆ ಕೂಡ ಹೋಗಿ ನೋಡಿದ್ದೆವು. ಅವರು ಹೇಳಿದರು ನನ್ನ ಯಾವ ಜನ್ಮದ ಪುಣ್ಯವೋ ಏನೋ ಗೊತ್ತಿಲ್ಲ, ಯಾವ ಶಕ್ತಿ ಇದೆಯೋ ಗೊತ್ತಿಲ್ಲ.

ತಂದೆತಾಯಿಗಳನ್ನು ತಮ್ಮ ಮಕ್ಕಳು ಯಾವ ರೀತಿಯಲ್ಲಿ ನೋಡಿಕೊಳ್ಳುತ್ತಾರೋ ಹಾಗೆ ಈ ನಾಗರಾಜಪ್ಪ ನನ್ನನ್ನು ನೋಡಿಕೊಳ್ಳುತ್ತಿದ್ದಾರೆ ಎಂದು ಹೇಳುತ್ತಿದ್ದರು. ಎ.ಹೆಚ್.ಆರ್ ಅಂದರೆ ರಾಮರಾವ್ ಅಂತ ಇನ್ನೊಬ್ಬ ವಾರ್ಡನ್ ಇದ್ದರು. ಅವರಿಬ್ಬರು ಬಂದು ನನ್ನನ್ನು ನನ್ನ ಮಕ್ಕಳಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದಾರೆ, ನನಗೆ ಮದುವೆಯಾಗಿಲ್ಲ ಮಕ್ಕಳಾಗಲಿಲ್ಲ ಎನ್ನುವ ಕೊರತೆ ಇಲ್ಲ, ಅದಕ್ಕಿಂತ ಹೆಚ್ಚಾಗಿ ಇವರು ನನ್ನನ್ನು ನೋಡಿಕೊಳ್ಳುತ್ತಿದ್ದಾರೆ. ನನ್ನ ಬದುಕು ಸಾರ್ಥಕವಾಗುತ್ತದೆ. ನಾನು ಬದುಕಿ ಬರುತ್ತೇನೆಯೋ ಇಲ್ಲವೋ ಗೊತ್ತಿಲ್ಲ ಎಂದರು. ಅವರಿಗೆ ಅಂತ ಖಾಯಿಲೆ ಏನೂ ಬಂದಿರಲಿಲ್ಲ. ಆಪರೇಷನ್ ಕೂಡ ಯಶಸ್ವಿಯಾಗಿ, ಆರೋಗ್ಯವಂತರಾಗಿದ್ದರು. ಬೆಳಿಗ್ಗೆ ಎದ್ದು ಯಾವತ್ತೂ ಕೂಡ ಈ ಲಾಲ್‌ಬಾಗ್‌ನಲ್ಲಿ ವಾಕ್ ಮಾಡುವಂತಹ ಪ್ರವೃತ್ತಿಯನ್ನು ತಪ್ಪಿಸಿದವರಲ್ಲ. ಅವರು ಬೆಂಗಳೂರಿನಲ್ಲಿದ್ದರೆ, ಪ್ರತಿದಿನ ಬೆಳಿಗ್ಗೆ ನೂರಾರು, ಸಾವಿರಾರು ಜನ ಅವರ ದರ್ಶನವನ್ನು ಪಡೆಯಬಹುದಾಗಿತ್ತು. ಈ ಆಪರೇಷನ್ ಆದ ಮೇಲೆ ಅವರು ಅಲ್ಲಿಗೆ ಹೋಗಬಾರದಿತ್ತು, ಅವರಿಗೆ ನ್ಯುಮೋನಿಯಾ ಎಫೆಕ್ಟ್ ಆಗಿದ್ದು. ತಾವು ಚಿಕಿತ್ಸೆ ಪಡೆದುಕೊಳ್ಳಿ ಎಂದು ವೈದ್ಯರು ಹೇಳಿದ್ದರಂತೆ, ಇಲ್ಲ ಇಲ್ಲ ಅದು ವಾಸಿಯಾಗಿ ಬಿಡುತ್ತದೆ ಎಂದರಂತೆ. ಅವರು ಇಡೀ ಜೀವನಪೂರ್ತಿ ವಾಕ್ ಹೋಗಿದ್ದರೂ ಕೂಡ, ಆಪರೇಷನ್ ಆದ ಮೇಲೆ ಒಂದು ತಿಂಗಳಿನಿಂದ ವಾಕ್ ಹೋಗಿದ್ದೇ ದೊಡ್ಡ ತಪ್ಪಾಯಿತೇನೋ, ಅವರು ಅದಕ್ಕೆ ಕೇರ್ ಮಾಡಲಿಲ್ಲ. ನ್ಯುಮೋನಿಯಾ ಬಂದು ಅವರ ಹೃದಯದಲ್ಲಿ ನೀರು ಹೆಪ್ಪುಗಟ್ಟಿ ಅದನ್ನು ತೆಗೆಯುವ ಪ್ರಾಮಾಣಿಕ ಪ್ರಯತ್ನವನ್ನು ಮಯ್ಯ ಆಸ್ಪತ್ರೆಯವರು ಮಾಡಿದ್ದಾರೆ. ಅವರು ಮಯ್ಯ ಆಸ್ಪತ್ರೆ ಬಿಟ್ಟರೆ ಬೇರೆ ಆಸ್ಪತ್ರೆಗೆ ಯಾವತ್ತೂ ಹೋದವರಲ್ಲ. ಮೊನ್ನೆ ಅವರು ಆಸ್ಪತ್ರೆಗೆ ಹೋದ ಮೇಲೆ ನಾನು ಸಾಯುತ್ತೇನೆಂಬ ಸಣ್ಣ ಅನುಮಾನ ಅವರಿಗೆ ಬಂತೆಂದು ಕಾಣುತ್ತದೆ. ಅದಕ್ಕೋಸ್ಕರ ಅವರು ನನ್ನ ಜೀವನ ಸಾರ್ಥಕವಾಯಿತು ಮುಂದೆ ನೀವೆಲ್ಲರೂ ಕೂಡ ಒಳ್ಳೆಯ ಕೆಲಸಗಳನ್ನು ಮಾಡಬೇಕು, ಪ್ರಾಮಾಣಿಕ ಕೆಲಸ ಮಾಡಬೇಕು, ಇನ್ನು ಚಿಕ್ಕ ಹುಡುಗನಿದ್ದೀಯ ಎನ್ನುವ ಮಾತನ್ನು ಕೂಡ ಪರಂಗಿ ಹಣ್ಣನ್ನು ತಿನ್ನುತ್ತಾ ತಿನ್ನುತ್ತಾ ಹೇಳಿದರು. ನಿನ್ನೆ ಹೋಗಬೇಕಾಗಿತ್ತು ನನಗೆ ಬೇರೆ ಕೆಲಸವಿತ್ತು ಹೋಗಲಾಗಲಿಲ್ಲ, ಇವತ್ತು ಬೆಳಿಗ್ಗೆ ಸಾವಿನ ಸುದ್ಧಿಯನ್ನು ಕೇಳಿ ನಮಗೆ ದಿಗ್ಭ್ರಮೆಯಾಯಿತು. ಹುಟ್ಟು ಆಕಸ್ಮಿಕ ಸಾವು ನಿಶ್ಚಿತ; ಆದರೆ ಈ ಮಧ್ಯೆ ಇರತಕ್ಕಂಥ ಜೀವನ, ನಿಜವಾಗಿಯೂ ಇವತ್ತು ಯಾರಾದರೂ ಆದರ್ಶಪ್ರಾಯರು ಬದುಕಿದ್ದರೆ, ಅದು ಡಾ: ಹೆಚ್. ನರಸಿಂಹಯ್ಯನವರು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅವರೊಬ್ಬ ಶಿಕ್ಷಕರಾಗಿ, ಶಿಕ್ಷಣ ತಜ್ಞರಾಗಿ, ಉಪಕುಲಪತಿಯಾಗಿ, ವಿಚಾರವಾದಿಯಾಗಿ ಮತ್ತು ವಿಧಾನಪರಿಷತ್ತಿನ ಹಿರಿಯ ಸದಸ್ಯರಾಗಿ ಅವರು ಸೇವೆ ಸಲ್ಲಿಸಿ ಹೋಗಿದ್ದಾರೆ. ಯಾವತ್ತೂ ಕೂಡ ತಮ್ಮ ಸರಳ ಜೀವನಕ್ಕೆ ಮತ್ತು ಸರಳ ವಿಚಾರಗಳಿಗೆ, ಸುಳ್ಳು ಹೇಳುವುದಾಗಲಿ,

ಮೋಸ ಮಾಡುವುದಾಗಲಿ, ಅನ್ಯಾಯ ಮಾಡುವುದಾಗಲಿ ಅವರಿಗೆ ಗೊತ್ತಿರಲಿಲ್ಲ, ಸುಳ್ಳು ಹೇಗೆ ಹೇಳುವುದೇ ಗೊತ್ತಿರಲಿಲ್ಲ. ನಾನು ಅವರನ್ನು ಬಹಳ ಹತ್ತಿರದಿಂದ ನೋಡಿದ್ದೇನೆ, 13ನೇ ಕೊಠಡಿಯಲ್ಲಿ ಅವರಿದ್ದರೆ, ನನಗೆ 14ನೇ ಕೊಠಡಿಯಲ್ಲಿ ವ್ಯವಸ್ಥೆಯಾಗಿತ್ತು. ಮೊದಲು ಮೊದಲನೆ ಮಹಡಿಯಲ್ಲಿದ್ದರು ಸ್ವಲ್ಪ ಆರೋಗ್ಯ ಕೆಟ್ಟ ಮೇಲೆ ಗ್ರೌಂಡ್ ಫ್ಲೋರ್‌ಗೆ ಬಂದರಷ್ಟೆ; ಅದು ಬಿಟ್ಟರೆ ಅದೇ ಚಾಪೆ, ಅದೇ ದಿಂಬು, ಅದೇ ಮೇಜು, ಒಂದು ಕುರ್ಚಿ ಕೂಡ ಇರಲಿಲ್ಲ. ಅವರ ಆಸ್ತಿ ಏನೆಂದರೆ, ಮಹಾತ್ಮ ಗಾಂಧಿಯವರೊಡನೆ ಅವರು ಚಿಕ್ಕ ವಯಸ್ಸಿನಲ್ಲಿದ್ದಾಗ ಗೌರಿಬಿದನೂರಿಗೆ ಮಹಾತ್ಮ ಗಾಂಧೀಜಿಯವರು ಬಂದಿದ್ದಾಗ ಅವರೊಡನೆ ಒಂದು ಫೋಟೋವನ್ನು ತೆಗೆಸಿಕೊಂಡಿದ್ದಾರೆ. ಅವರು ಶಾಲಾ ಬಾಲಕನಾಗಿದ್ದಾಗ ಅವರ ಮೈಯನ್ನು ಮುಟ್ಟಿದ ಮಹಾತ್ಮಗಾಂಧೀಜಿಯವರು ಅವರಿಗೆ ಸ್ಫೂರ್ತಿಯಾಗಿದ್ದರು; ಮಹಾತ್ಮಗಾಂಧೀಜಿಯವರು ಸ್ಫೂರ್ತಿಯಾಗಿದ್ದರಿಂದ ಅದೊಂದೇ ಒಂದು ಫೋಟೋ ಅವರ ಆಸ್ತಿಯಾಗಿತ್ತು. ಯಾರಾದರೂ ಬಂದರೆ, ನನ್ನ ಆಸ್ತಿ ಏನಪ್ಪ ಎಂದರೆ ಇದೊಂದು ಫೋಟೋ ಎಂದು ಹೇಳುತ್ತಿದ್ದರು; ಆ ಮಾತನ್ನು ಅವರು ಬಹಳ ಹೆಮ್ಮೆಯಿಂದ ಹೇಳುತ್ತಿದ್ದರು ಬಹಳ ಅಭಿಮಾನದಿಂದ ಆ ಮಾತನ್ನು ಹೇಳುತ್ತಿದ್ದರು. ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದಂತೆ, ಡಾ: ಹೆಚ್.ಎನ್. ಅವರಿಗೆ ಸರಿಸಾಟಿಯಾದ ವ್ಯಕ್ತಿ ಮತ್ತೊಬ್ಬರು ಸಿಗಲಾರರು; ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನೂ ಕೂಡ ಅವರ ಆದರ್ಶ, ಸ್ಫೂರ್ತಿಗೆ ಒಳಗಾಗಿ ನನ್ನ ವಿವಾಹಕ್ಕೆ ಅವರೇ ಪುರೋಹಿತಿಕೆ ವಹಿಸಿದ್ದರು. ಕುವೆಂಪುರವರ ಮಾಂತ್ರಮಾಂಗಲ್ಯವನ್ನು ಡಾ: ಹೆಚ್. ನರಸಿಂಹಯ್ಯನವರು ಜನವರಿ 1, 1981ರಂದು ಅಮಾವಾಸೆ ದಿವಸ ನಾನು ವಿವಾಹವಾದೆ, ಯಾವುದೇ ಪುರೋಹಿತರಿಲ್ಲ, ಯಾವುದೇ ವಾದ್ಯವಿಲ್ಲ, ಗೋಷ್ಠಿ ಇಲ್ಲ, ಊಟವಿಲ್ಲ, ತಿಂಡಿ ಇಲ್ಲ, ಸರಳವಾದಂತಹ ವಿವಾಹ. ಅದಕ್ಕೆ ಡಾ: ಹೆಚ್. ನರಸಿಂಹಯ್ಯನವರೇ ಸ್ಫೂರ್ತಿ; ಯಾವುದೇ ವರದಕ್ಷಿಣೆ ಇಲ್ಲ, ಸರಳ ರೀತಿಯಲ್ಲಿ ಮದುವೆಯಾದೆ, ಅದಕ್ಕೆ ಸ್ಫೂರ್ತಿ ಅವರೇ, ಅವರೇ ಬಂದು ಪುರೋಹಿತಿಕೆ ವಹಿಸಿ ನನಗೆ ವಿವಾಹವನ್ನು ಮಾಡಿಸಿದರು. ಅವರ ರೀತಿಯಲ್ಲಿ ನಾವು ಬದುಕುವುದಕ್ಕೆ ಸಾಧ್ಯವೇ ಆಗುವುದಿಲ್ಲ. ವ್ಯವಸ್ಥೆ ಆ ರೀತಿಯಾಗಿ ಕೆಟ್ಟು ಹೋಗಿದೆ. ಆದರೆ ಅವರ ದಾರಿಯಲ್ಲಿ ನಾವು ಹೋಗಬೇಕಾದರೆ ನಾವು ಅನೇಕ ವಿಚಾರಗಳಲ್ಲಿ ಅವರೊಡನೆ ಸೇರಿ ಮಾಡಿದ್ದೇವೆ, ಕೆಲವು ಸಂಘ ಸಂಸ್ಥೆಗಳನ್ನು ಕಟ್ಟಲೇಬೇಕೆಂದು ಕೆಲಸ ಮಾಡಿದ್ದೇವೆ. ಒಂದು ವಿಚಾರವನ್ನು ಹೇಳಿ ನನ್ನ ಕಂಡೊಲೆನ್ಸ್ ಅನ್ನು ಮುಗಿಸುತ್ತಿದ್ದೇನೆ. ಅವರಿಗೆ ಎಷ್ಟು ವೈಚಾರಿಕತೆ ಇತ್ತೆಂದರೆ, ಪುಟ್ಟಪರ್ತಿ ಸಾಯಿಬಾಬರವರು ಯಾವುದೇ ವಿಚಾರದಲ್ಲಿ ಅವರು ಪವಾಡ ಮಾಡುತ್ತೇನೆಂದಾಗಲೆಲ್ಲಾ ಅದರ ವಿರುದ್ಧವಾಗಿರುತ್ತಿದ್ದರು, ನಾವು ಐದಾರು ಜನ ಹುಡುಗರು ಅವರೊಡನೆ ಹೋಗುತ್ತಿದ್ದೆವು. ಒಂದು ಸಾರಿ ವೈಟ್‌ಫೀಲ್ಡ್‌ಗೆ ಹೋಗಿ ಸಾಯಿಬಾಬನಿಗೆ ಅಟ್ಯಾಕ್

ಮಾಡಬೇಕು, ಅವರ ನಿಜವಾದ ಬಣ್ಣವನ್ನು ಬಯಲು ಮಾಡಬೇಕು ಎಂದು ನಮ್ಮ ಹುಡುಗರನ್ನೆಲ್ಲಾ ಕರೆದುಕೊಂಡು ಹೋಗಿದ್ದರು. ಹುಡುಗರನ್ನು ಕರೆದುಕೊಂಡು ಹೋಗಿದ್ದರು. ಹುಡುಗರನ್ನು ಕರೆದುಕೊಂಡು ಹೋಗಿಬಿಟ್ಟು ಅವರು ಸುಮ್ಮನೆ ಕುಳಿತಿರಲಿಲ್ಲ, ಮೊದಲು ಅವರೇ ಹೋಗಿ ಬಾಗಿಲು ತಟ್ಟಿದರು, ಬಾಬರವರು ಒಳಗಡೆ ಇದ್ದುಕೊಂಡು ಇಲ್ಲವೆನಿಸಿಕೊಂಡರು. ಆಗ ಹೇಳಿದರು, ಇದು ಹೇಡಿತನ, ಇದೊಂದರಲ್ಲೇ ಗೊತ್ತಾಗುತ್ತದೆ, ಬಾಬರವರ ಬಣ್ಣವನ್ನು ಬಯಲು ಮಾಡಿದಂತಾಗಿದೆ ಎಂದು ಸಂತೋಷಪಟ್ಟರು. ನಾನು ಬಿಎಸ್ಸಿ ಓದುತ್ತಿದ್ದೆ. ಡಾ: ಹೆಚ್. ನರಸಿಂಹಯ್ಯನವರೊಡನೆ ಸತ್ಯಶೋಧನ ಸಮಿತಿಯೊಡನೆ ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ, ಪುಟ್ಟಪರ್ತಿ ಬಾಬರವರು ಒಳಗಡೆ ಇದ್ದುಕೊಂಡು ಹೊರಗಡೆಗೆ ಬರಲಿಲ್ಲ, ಇವರ ಬಣ್ಣವನ್ನು ಒಳಗಡೆ ಹೋಗಿ ಬಯಲು ಮಾಡಬೇಕೆಂದಿದ್ದೆ, ಅವರು ಒಳಗಡೆ ಇದ್ದುಕೊಂಡು ಹೊರಗಡೆ ಬರದೆ ಇರುವ ವಿಚಾರದಲ್ಲಿ ಅವರ ಬಣ್ಣ ಬಯಲಾಗಿದೆ ಎನ್ನುವ ಒಂದು ತೃಪ್ತಿಯನ್ನು ಡಾ: ಹೆಚ್. ನರಸಿಂಹಯ್ಯನವರು ಹೇಳಿದ್ದು ಇವತ್ತು ನನ್ನ ಕಿವಿಯ ಗುಂಗಿನಲ್ಲಿದೆ. ಅಂದರೆ ರಾಮಸ್ವಾಮಿ ಪೆರಿಯಾರ್‌ರವರ ಒಂದು ವಿಚಾರವನ್ನು ತಿಳಿದುಕೊಂಡು, ಇಲ್ಲಿರುವ ಮೌಢ್ಯತೆಯನ್ನು ಯಾರಿಗೂ ನೋವಾಗದ ರೀತಿಯಲ್ಲಿ, ಇಂತಹ ವಿಚಾರಗಳು ಬಂದಾಗ ನಾವು ಹೆಚ್ಚು ವಿರೋಧಿಗಳನ್ನು ಕಟ್ಟಿಕೊಳ್ಳುವ ಸಂದರ್ಭಗಳು ಹೆಚ್ಚು ಇದ್ದರೂ ಕೂಡ ಡಾ: ಹೆಚ್. ನರಸಿಂಹಯ್ಯನವರು, ವಿರೋಧಿಗಳನ್ನು ಯಾವತ್ತೂ ಕಟ್ಟುಕೊಳ್ಳುತ್ತಿರಲಿಲ್ಲ. ಯಾವುದೇ ವಿಚಾರವಿದ್ದರೂ ಅವರು ವಿಮರ್ಶೆ ಮಾಡಿ, ಅವರು ಹೇಳುತ್ತಿದ್ದರು, ದೇವರುಕೊಟ್ಟ ಬುದ್ಧಿ ಇದೆ, let it come from the President of India, ಭಾರತ ದೇಶದ ಯಾವುದೇ ದೊಡ್ಡ ವ್ಯಕ್ತಿಯಿಂದ ಬಂದರೂ ಕೂಡ, ನಿಮಗೆ ದೇವರು ಕೊಟ್ಟ ಬುದ್ಧಿ ಶಕ್ತಿ ಇದೆ ಅದನ್ನು ನೀವು ಮಾಡಿ, ನೀವು ಹತ್ತು ಜನರಾದರೂ ಸರಿ ಹೋದರೆ ಈ ದೇಶಕ್ಕೆ ಒಳ್ಳೆಯದಾಗುತ್ತದೆ. ಮಾನ್ಯ ಸಿಂಧ್ಯಾರವರು ಹೇಳಿದಂತೆ, ರಾಮಕೃಷ್ಣಪರಮಹಂಸ, ವಿವೇಕಾನಂದ, ಶಾರದಾದೇವಿ, ಯಾವುದೋ ಒಂದು ಶಕ್ತಿ ಇದೆ, ಪ್ರಕೃತಿಯನ್ನೇ ದೇವರು ಎನ್ನುತ್ತಿದ್ದರು, ಸೂರ್ಯ, ಚಂದ್ರ, ನೀರು, ಗಾಳಿ, ಭೂಮಿ ಇವೆಲ್ಲವೂ ಕೂಡ ಒಂದು ಶಕ್ತಿ ಇದನ್ನು ಯಾರೂ ಯಾವುದೇ ವಿಜ್ಞಾನಿ, ಅವರು, ಫಿಜಿಕ್ಸ್ ಮೇಸ್ಟರಾಗಿದ್ದರೂ ಕೂಡ ಇದನ್ನು ನಾವು ರಿಪ್ಲೇಸ್ ಮಾಡುವುದಕ್ಕಾಗುವುದಿಲ್ಲ, ಎನ್ನುತ್ತಿದ್ದರು. ಇವತ್ತು ಅವರು ನಮ್ಮೊಡನೆ ಇಲ್ಲ ನಮ್ಮನ್ನು ಅಗಲಿದ್ದಾರೆ, ನಾನು ಅತ್ಯಂತ ಅಭಿಮಾನದಿಂದ, ಸಂತೋಷದಿಂದ ನಾನು ಅವರ ಶಿಷ್ಯನಾಗಿದ್ದೆ ಎನ್ನುವುದನ್ನು ಹೇಳುತ್ತೇನೆ. ಮಾನ್ಯ ಶ್ರೀರಾಮ ರೆಡ್ಡಿಯವರು ಹೇಳಿದಂತೆ ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದಂತೆ, ಅವರ ಹೆಸರು ಯಾವತ್ತೂ ಕೂಡ ಅವರ ನಮ್ಮ ಜೊತೆಯಲ್ಲಿ ಇಲ್ಲದೇ ಇದ್ದರೂ ಶಾಶ್ವತವಾಗಿರುತ್ತದೆ. ಆದರೆ ಮುಂದಿನ ಪೀಳಿಗೆ ನೆನಪಿಸಿಕೊಳ್ಳಬೇಕೆನ್ನುವ ಕಾರಣದಿಂದ ಅವರ ಪ್ರತಿಮೆ ಮಾಡುವುದರ ಜೊತೆಗೆ, ಯಾವುದಾದರೂ

ಬೆಂಗಳೂರಿನ ಭಾಗಕ್ಕೆ ಅವರ ಹೆಸರನ್ನಿಡುವುದು ಮತ್ತು ಅವರು ಹೆಸರು ಚಿರಾಯುವಾಗಿರುವಂತೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳಬೇಕು. ಮಾನ್ಯ ಶ್ರೀನಿವಾಸಗೌಡರು ಹೇಳಿದಂತೆ ವಿಚಾರವಾದಿಯಾಗಿ ವೈಚಾರಿಕತೆಗೆ ಮೂಢನಂಬಿಕೆಯನ್ನು ತೊಡೆದು ಹಾಕುವುದಕ್ಕೆ ವಿಶ್ವವಿದ್ಯಾಲಯದಲ್ಲಿ ಅವರ ಹೆಸರಿನಲ್ಲಿ ಒಂದು ಪೀಠವನ್ನು ಸ್ಥಾಪನೆ ಮಾಡಿ, ತನ್ಮೂಲಕ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಬಹುದು ಎನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ನಾಗರಾಜ್‌ರವರ ಬಗ್ಗೆ ನನಗೆ ಹೆಚ್ಚು ವಿಚಾರ ಗೊತ್ತಿಲ್ಲ, ಅವರ ಬಗ್ಗೆ ಮಾನ್ಯ ರಮೇಶ್‌ಕುಮಾರ್‌ರವರಿಂದ ಕೇಳಿದ್ದೇವೆ, ಚಿನ್ನಸ್ವಾಮಿ ಕ್ರೀಡಾಂಗಣ ಬರುವುದಕ್ಕೆ ಕಾರಣರಾದ ವ್ಯಕ್ತಿಗೆ ಸರಿಯಾದ ಗೌರವ ಸಿಗಲಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ, ಆ ಬಗ್ಗೆಯೂ ಕೂಡ ಸರ್ಕಾರ, ಮಾನ್ಯ ಮುಖ್ಯಮಂತ್ರಿಯವರು ಗಮನ ಹರಿಸಬೇಕೆಂದು ಕೇಳಿಕೊಂಡು ಅವರಿಗೂ ಕೂಡ ನನ್ನ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತಾ ಈ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಸದನವು ಒಂದು ನಿಮಿಷ ಮೌನವನ್ನಾಚರಿಸಿತು).

ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು; ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 38 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ: ನಾಳೆ ದಿನಾಂಕ 1-2-2005ರ ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು).

(B)025245

*****

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಜಿಮುತು. ಕಾಸೂ. 143, 350 ಪುಸ್ತಕಗಳು, ದಿ: 31-12-2005